ಮನುಷ್ಯ ಜಾತಿ
ತಾನೊಂದೆ ವಲಂ

ದುರ್ಗಸಿಂಹ ಕವಿಯ

ಕರ್ನಾಟಕ ಪಂಚತಂತ್ರಂ

ಗದ್ಯಾನುವಾದ
ಗುಂಡ್ಮಿ ಚಂದ್ರಶೇಖರ ಐತಾಳ



ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ದುರ್ಗಸಿಂಹ ಕವಿಯ

ಕರ್ಣಾಟಕ ಪಂಚತಂತ್ರಂ

ಗದ್ಯಾನುವಾದ

ಗುಂಡ್ಮಿ ಚಂದ್ರಶೇಖರ ಐತಾಳ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

DURGASIMHA KAVIYA - KARNATAKA PANCHATANTRAM - original with prose rendering by **Gundmi Chandrashekara Aithal** Published by : **Kannada Sahitya Parishattu**, Pampa Mahakavi Road, Chamarajapet, Bangaluru - 560018, Pages : x + 352 Price : **Rs. 180=00 ; 2014**

ಮರುಮುದ್ರಣದ ವರ್ಷ : ೨೦೧೪
ಪ್ರತಿಗಳು : ೧೦೦೦
ಬೆಲೆ : ಒಂದು ನೂರ ಎಂಬತ್ತು ರೂಪಾಯಿ
ಮುಖಪುಟ ವಿನ್ಯಾಸ : ಯು.ಟಿ. ಸುರೇಶ್

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ಅಧ್ಯಕ್ಷರು – ಶ್ರೀ ಪುಂಡಲೀಕ ಹಾಲಂಬಿ
ಸಮ್ಮೇಳನಾಧ್ಯಕ್ಷರು – ನಾ. ಡಿಸೋಜ
೮೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸದಸ್ಯರು

ಶ್ರೀ ಬಿ.ಎಂ. ಸದಾಶಿವಪ್ಪ ಶ್ಯಾಗಲೆ
ಶ್ರೀ ನೀಲಾವರ ಸುರೇಂದ್ರ ಅಡಿಗ
ಡಾ. ಸೋ.ಮು. ಭಾಸ್ಕರಾಚಾರ್
ಶ್ರೀ ಎಸ್.ಜಿ. ಕೋಟಿ
ಡಾ. ಮಳಲಿ ವಸಂತಕುಮಾರ್
ಡಾ. ಮಾನಸ
ಡಾ. ಎ.ವಿ. ನಾವಡ
ಶ್ರೀಮತಿ ಬಿ. ನಾರಾಯಣಮ್ಮ
ಶ್ರೀ ಬಿ.ಎನ್. ರಾಮಸ್ವಾಮಿ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಎನ್. ನಾರಾಯಣ
ಡಾ. ವಸುಂಧರಾ ಭೂಪತಿ
ಡಾ. ರಾಜೇಂದ್ರ ಎಸ್. ಗಡಾದ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್
ಡಾ. ಸುಜಾತಾ ಜಂಗಮಶೆಟ್ಟಿ
ಶ್ರೀ ಸಿ.ಕೆ. ರಾಮೇಗೌಡ
ಡಾ. ರಾಜಶೇಖರ ಹತಗುಂದಿ
ಶ್ರೀ ಪಿ. ಮಲ್ಲಿಕಾರ್ಜುನಪ್ಪ
ಶ್ರೀ ಜೆ.ಎನ್. ಶಾಮರಾವ್
ಸಂಚಾಲಕ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದೇ ಜೀವಂತಿಕೆಯ ಲಕ್ಷಣ.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ, ಕೈಯಿಂದ ಎತ್ತಿ ನೋಡುತ್ತಾರೆ. ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನವ ಸಾಧ್ಯತೆಗಳನ್ನು ಸಮರ್ಪಕವಾಗಿ ಬಳಪಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡುತ್ತಾ ಸಾಗಿದೆ. ಲಾಭಕೋರತನವಿಲ್ಲದ, ಸದಭಿರುಚಿಯನ್ನು

ಬಿತ್ತಿ ಬೆಳೆಸುವ ಸತ್ವವನ್ನು ತಮ್ಮ ಒಡಲಲ್ಲಿ ತುಂಬಿಕೊಂಡಿರುವ ಪರಿಷತ್ತಿನ ಕೃತಿಗಳಿಂದ ಲಕ್ಷಗಟ್ಟಲೆ ಕನ್ನಡಿಗರು ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

ಸಮಗ್ರ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿರುವ, ೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು, ಶತಮಾನೋತ್ಸವದ ಹೊಸ್ತಿಲಲ್ಲಿದೆ. ಕಳೆದ ೯೯ ವರ್ಷಗಳಿಂದಲೂ ಕನ್ನಡ ಗ್ರಂಥಗಳ ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಪರಿಷತ್ತು ಸುಮಾರು ಒಂದು ಸಾವಿರದ ನಾಲ್ಕುನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುತ್ತದೆ. ಸರಿಸುಮಾರು ಒಂದು ಶತಮಾನದಷ್ಟು ಕಾಲಾವಧಿಯ ನಿರಂತರತೆ ಹಾಗೂ ಕೃತಿಗಳ ಮೌಲಿಕತೆಯ ದೃಷ್ಟಿಯಿಂದ ಇದೊಂದು ಅಪೂರ್ವ ದಾಖಲೆಯಾಗಿದೆ. ಕನ್ನಡ ಪ್ರಕಟಣಾ ಚರಿತ್ರೆಯಲ್ಲಂತೂ ಅನನ್ಯವೇ ಸರಿ.

ವಿಶ್ವ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಜನಪ್ರಿಯವಾದ ಗ್ರಂಥಗಳ ಸಾಲಿಗೆ ಸೇರುವ 'ಪಂಚತಂತ್ರ'ದ ಕನ್ನಡ ಆವೃತ್ತಿ ದುರ್ಗಸಿಂಹನ ಈ ಕೃತಿ – ಕನ್ನಡದ ಏಕಮೇವಾಕೃತಿ ಎಂದು ಪ್ರಸಿದ್ಧವಾಗಿದೆ. 'ಪಂಚತಂತ್ರ' ಯಾವುದೇ ಭಾಷೆಯಲ್ಲಿದ್ದರೂ ಅದೊಂದು ಅಮರ ಕೃತಿ. ಕನ್ನಡ ಓದುಗರು ಈ ಕಾವ್ಯವನ್ನು ಮತ್ತೆ ಮತ್ತೆ ಓದಿ ಆನಂದಿಸಲಿ ಎಂದು ಹಾರೈಸುತ್ತೇನೆ.

ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಓದುವ ಮೊದಲು

ಹಳಗನ್ನಡದಲ್ಲಿರುವ ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಎಂಬ ಕೃತಿಯನ್ನು ಹೊಸಗನ್ನಡದಲ್ಲಿ ಹೇಳುವ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಯೋಜನೆಯ ಅನುಸಾರವಾಗಿ ನನಗೆ ಒಪ್ಪಿಸಿತು.

ಈ ಗ್ರಂಥವನ್ನು ನಾನು ಬಿ.ಎ. ಆನರ್ಸ್ ತರಗತಿಯಲ್ಲಿದ್ದಾಗ ಆಳವಾಗಿ ಅಧ್ಯಯನ ಮಾಡುವ ಅವಕಾಶ ದೊರೆಯಿತು. ಆಗ ಇದರ ಮೊದಲನೆಯ ಪ್ರಕರಣವನ್ನು ನನಗೆ ಪಾಠ ಹೇಳಿದವರು ನನ್ನ ವಿದ್ಯಾಗುರುಗಳಾದ ಪ್ರೊ.ಕೆ. ವೆಂಕಟರಾಮಪ್ಪ, ಎಂ.ಎ., ಅವರು ಇದನ್ನು ಅನನ್ಯ ರೀತಿಯಲ್ಲಿ ಪಾಠ ಹೇಳಿದರು. ಅಂದಿನಿಂದಲೇ ನನಗೆ ಇದನ್ನು ಹೊಸಗನ್ನಡಕ್ಕೆ ಮಾಡಬೇಕೆಂಬ ಆಸೆಹುಟ್ಟಿತು. ಹಾಗೆಯೇ ಆ ಕಾರ್ಯವನ್ನು ನಾನು ೧೯೬೮ರ ಹೊತ್ತಿಗೇ ಮುಗಿಸಿದ್ದೆ. ಆದರೆ ಅದು ಸಂಗ್ರಹವೂ ಸ್ವತಂತ್ರವೂ ಆದ ಅನುವಾದವಾಗಿತ್ತು. ಇಲ್ಲಿ ಪರಿಷತ್ತು ಹಾಕಿದ ನಿಯಮಾವಳಿಗೆ ಬದ್ಧನಾಗಿ ಅನುವಾದಮಾಡಬೇಕಾಗಿತ್ತು. ಏನು ಯೋಗಾಯೋಗವೋ ಏನೋ, ಇಲ್ಲಿಯೂ ಈ ಯೋಜನೆಯ ಪ್ರಧಾನ ಸಂಪಾದಕರಾಗಿ ಪ್ರೊ.ಕೆ. ವೆಂಕಟರಾಮಪ್ಪನವರೇ ದೊರಕಿದರು.

ಹಳಗನ್ನಡ ಗ್ರಂಥಗಳನ್ನು ಮೂಲಸಹಿತ ಹೊಸಗನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಮಹಾಯೋಜನೆಯೊಂದನ್ನು ಕೈಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ನಾಡಿನ ಜನತೆಗೂ ಕನ್ನಡಕ್ಕೂ ಮಹದುಪಕಾರ ಮಾಡುತ್ತಿದ್ದಾರೆ. ಅವರ ಮಹಾಯೋಜನೆಯಲ್ಲಿ ನನ್ನದೂ ಒಂದು ಅಳಿಲುಸೇವೆ ಮಾಡಲು ಅವಕಾಶಮಾಡಿಕೊಟ್ಟ ಆ ಮಹಾನುಭಾವರಿಗೆ ನಾನು ಕೃತಜ್ಞ.

ಈ ಅನುವಾದವನ್ನು ಕೈಕೊಳ್ಳುವ ವೇಳೆಗೆ ಪ್ರೊ. ಎನ್. ಅನಂತರಂಗಾಚಾರ್ ಅವರು ಸಂಪಾದಿಸಿದ ದುರ್ಗಸಿಂಹನ ಪಂಚತಂತ್ರವು ಪ್ರಕಟವಾಯಿತು. ನಾನು ಕರ್ನಾಟಕ ಕಾವ್ಯಮಂಜರಿಯಿಂದ ಪ್ರಕಟವಾದ ೧೮೯೮ರ ಆವೃತ್ತಿಯನ್ನು ಮುಖ್ಯ ಆಧಾರವಾಗಿಟ್ಟುಕೊಂಡು ವಿಶೇಷ ಪಾಠಾಂತರಗಳನ್ನು ಗಮನದಲ್ಲಿಟ್ಟು ಕವಿಪಾಠವನ್ನು ಕೊಟ್ಟಿದ್ದೇನೆ. ಎಲ್ಲ ಪ್ರತಿಗಳಲ್ಲಿರುವ ಪಾಠಾಂತರಗಳನ್ನೆಲ್ಲ ಗುರುತಿಸುವ ಗೋಜಿಗೆ ಹೋಗಿಲ್ಲ. ೧೮೯೮ರ ಪಂಚತಂತ್ರದ ಆವೃತ್ತಿಯನ್ನು ನನಗಿತ್ತು ಉಪಕರಿಸಿದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿರುವ ಶ್ರೀ ಎಸ್. ಶಿವಣ್ಣ ಎಂ.ಎ., ಅವರಿಗೆ ನಾನು ಋಣಿ. ಪ್ರೊ.ಎನ್. ಅನಂತರಂಗಾಚಾರ್ ಅವರ ಗ್ರಂಥದ ಪೀಠಿಕೆಯಿಂದ ನಾನು ಉಪಕೃತನಾಗಿದ್ದೇನೆ. ಅದಕ್ಕಾಗಿ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಮಂಗಳ ಗಂಗೋತ್ರಿ ದ.ಕ.
೧೫-೭-೧೯೭೫

ಗುಂಡ್ಮಿ ಚಂದ್ರಶೇಖರ ಐತಾಳ

೬

ವಿಷಯ ಸೂಚಿ

೧.	ಅಧ್ಯಕ್ಷರ ನುಡಿ	iii
೨.	ಓದುವ ಮೊದಲು	v
೩.	ಉಪೋದ್ಘಾತ	೧
೪.	ಪೀಠಿಕಾ ಪ್ರಕರಣಂ	೨೧
೫.	ಪ್ರಥಮಾಶ್ವಾಸಂ : ಭೇದಪ್ರಕರಣಂ	೪೫
೬.	ದ್ವಿತೀಯಾಶ್ವಾಸಂ : ಪರೀಕ್ಷಾ ವ್ಯಾವರ್ಣನಂ	೨೦೨
೭.	ತೃತೀಯಾಶ್ವಾಸಂ : ವಿಶ್ವಾಸ ಪ್ರಕರಣಂ	೨೨೦
೮.	ಚತುರ್ಥಾಶ್ವಾಸಂ : ವಂಚನಾ ಪ್ರಕರಣಂ	೨೯೮
೯.	ಪಂಚಮಾಶ್ವಾಸಂ : ಮಿತ್ರಕಾರ್ಯ ಪ್ರಕರಣಂ	೩೦೯
೧೦.	ಶಬ್ದಕೋಶ	೩೩೯

ಉಪೋದ್ಘಾತ

೧. ಕಥಾಪ್ರಪಂಚ

ಮನುಷ್ಯನು ಮಾತು ಕಲಿತಂದಿನಿಂದ ಕಥೆ ಹೇಳಲು, ಕೇಳಲು ತೊಡಗಿದ. ಅಂದಿನಿಂದ ಇಂದಿನವರೆಗೆ ಕಥೆಯ ಸ್ರೋತ ಅದರ ನಾನಾ ರೂಪಗಳಲ್ಲಿ, ನಾನಾ ಭಾಷೆಗಳಲ್ಲಿ ಅನುಸ್ಯೂತವಾಗಿ ಹರಿದುಬಂತು. ಕಥೆಯೆಂದರೆ ದೊಡ್ಡವರು ಚಿಕ್ಕವರೆನ್ನದೆ, ಮಕ್ಕಳು ಮರಿಯೆನ್ನದೆ ಮೈಯೆಲ್ಲ ಕಿವಿಯಾಗಿ ಕೇಳುವರು. ಕೇಳುವವರ ಸಂಖ್ಯೆ ಹಿರಿದಾದುದರಿಂದ ಕಥೆಗಳ ರಾಶಿಯೂ ಕಾಲಕಾಲಕ್ಕೆ ಬೆಳೆಯಿತು. ಪ್ರಪಂಚದ ಸಾಹಿತ್ಯದಲ್ಲಿ ಕಥಾಪ್ರಪಂಚ ಬೆಳೆದ ಹಾಗೆಯೇ ಭರತಖಂಡದಲ್ಲಿಯೂ ಬೃಹತ್ಕಥೆ, ಪಂಚತಂತ್ರ, ಹಿತೋಪದೇಶ , ಕಥಾಸರಿತ್ಸಾಗರ, ಮೊದಲಾದ ಕಥಾಸಮುದ್ರಗಳು ಸೃಷ್ಟಿಯಾದುವು. ಇವುಗಳಲ್ಲಿ ಪೈಶಾಚಿಭಾಷೆಯಲ್ಲಿರುವ ಗುಣಾಢ್ಯನ ಬೃಹತ್ಕಥೆ ಪ್ರಾಚೀನವಾದುದು. ಆದರೆ ಈಗ ಇದು ಉಪಲಬ್ಧವಾಗಿಲ್ಲ. ಇದನ್ನು ಮೂಲವಾಗಿಟ್ಟುಕೊಂಡು ಅನೇಕ ಸಂಗ್ರಹಗಳು ಬಂದುವು . ಅವುಗಳ ಅಧಾರದಿಂದ ಮೂಲದಲ್ಲಿ ಅದು ಹೇಗಿದ್ದಿರಬಹುದು ಎಂಬ ಕಲ್ಪನೆಯನ್ನು ಮಾಡಿಕೊಳ್ಳ ಬೇಕಾಗಿದೆ. ಗುಣಾಢ್ಯನ ವಿಚಾರವೂ ಏನೂ ತಿಳಿದುಬಂದಿಲ್ಲ. ಬೃಹತ್ಕಥೆಯ ಸಂಗ್ರಹಗಳಲ್ಲಿ ನೇಪಾಳದ ಬುದ್ಧಸ್ವಾಮಿಯಿಂದ ಕ್ರಿ.ಶ.೮-೯ನೆಯ ಶತಮಾನಗಳಲ್ಲಿ ರಚಿತವಾದ 'ಬೃಹತ್ಕಥಾಶ್ಲೋಕಸಂಗ್ರಹ'ವು ಅತ್ಯಂತ ಪ್ರಾಚೀನವಾದುದು. ಅನಂತರ ೧೧ನೆಯ ಶತಮಾನದಲ್ಲಿ ಕಾಶ್ಮೀರದ ಸೋಮದೇವನು ಬರೆದ 'ಬೃಹತ್ಕಥಾ ಸರಿತ್ಸಾಗರ' ಮುಖ್ಯವಾದುದು. ಈ ಕಥೆಗಳಲ್ಲೆಲ್ಲ ಮಾನವನ ಆಚಾರ ವಿಚಾರ, ನಡೆನುಡಿಗಳನ್ನು ಮೃಗಪಕ್ಷಿಗಳಿಗೆ ಆರೋಪಿಸಿ ಕಥೆಗಳ ನಿರೂಪಣೆ ಮಾಡುವುದು ವಿಶೇಷವಾದ ಅಂಶ.

ಈ ಕಥಾಸಾಗರದಲ್ಲಿ 'ಪಂಚತಂತ್ರ' ಮತ್ತು 'ಹಿತೋಪದೇಶ' ಎಂಬ ಕೃತಿಗಳು ವಿಶೇಷ ಜನಪ್ರಿಯವಾದುವು. ಇವೆರಡೂ ಕೃತಿಗಳು ಅಲ್ಪಸ್ವಲ್ಪ ವ್ಯತ್ಯಾಸವನ್ನು ಹೊಂದಿ ಪ್ರಪಂಚದ ನಾನಾ ದೇಶಗಳ ನಾನಾ ಭಾಷೆಗಳಲ್ಲಿ ಅವತರಿಸಿದುವು. 'ಬೈಬಲ್' ಗ್ರಂಥವನ್ನು ಬಿಟ್ಟರೆ ಪ್ರಪಂಚದಲ್ಲಿ 'ಪಂಚತಂತ್ರ'ದಷ್ಟು ಹೆಚ್ಚು ಭಾಷೆಗಳಿಗೆ ಅನುವಾದವಾದ ಗ್ರಂಥ ಇನ್ನೊಂದಿಲ್ಲ. ಅರ್ಥಶಾಸ್ತ್ರದ ಐದು ತಂತ್ರಗಳನ್ನು ಕಥೆಗಳ ಮೂಲಕ ಅದು ಪ್ರತಿಪಾದಿಸುವುದರಿಂದ ಅದಕ್ಕೆ ' ಪಂಚತಂತ್ರ' ಎಂಬ ಹೆಸರು ಬಂತು. ಪ್ರಪಂಚದ ನೂರಾರು ವಿದ್ವಾಂಸರು ಇದನ್ನು ತಮ್ಮ ತಮ್ಮ ಭಾಷೆಗಳಿಗೆ ಅನುವಾದಿಸಿಕೊಂಡಿದ್ದಾರೆ; ಅಧ್ಯಯನ ಮಾಡಿದ್ದಾರೆ. ಶಾಸ್ತ್ರೀಯ ಸಂಸ್ಕರಣಗಳನ್ನು ತರಲು ಭಗೀರಥಪ್ರಯತ್ನ ಮಾಡಿದ್ದಾರೆ. 'ಪಂಚತಂತ್ರ' ದ ಪ್ರಪಂಚವೇ ಒಂದು ಪ್ರಪಂಚದಷ್ಟು ವಿಶಾಲವೆಂಬಷ್ಟು ಅದನ್ನು ಕುರಿತು ಕೆಲಸಗಳಾಗಿವೆ. ' ಪಂಚತಂತ್ರ' ದ ಕರ್ತೃ ವಿಷ್ಣುಶರ್ಮನೆಂಬ ಬ್ರಾಹ್ಮಣ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ

ಅವನು ಯಾರು, ಎಲ್ಲಿದ್ದ, ಯಾವಾಗ ಇದ್ದ, ಏನಾಗಿದ್ದ ಎಂಬ ವಿವರವೆಲ್ಲವೂ ಕಾಲಗರ್ಭದಲ್ಲಿ ಅಡಗಿಹೋಗಿವೆ.

೨. ಪಂಚತಂತ್ರದ ಪ್ರಪಂಚ

'ಪಂಚತಂತ್ರ' ವು ಪ್ರಪಂಚಪ್ರವಾಸ ಮಾಡಿದ ಭಾಗ್ಯಶಾಲಿಯಾದ ಗ್ರಂಥ. ಇದರ ಇತಿಹಾಸವನ್ನು ಕೂಲಂಕಷವಾಗಿ ಕಂಡುಹಿಡಿದ ಮಹನೀಯ ಜರ್ಮನಿಯ ಪ್ರಾಚ್ಯತಜ್ಞನಾಗಿದ್ದ ಜೋನ್ಸ್ ಹರ್ಟೆಲ್ (Johnnes Hertel). ಪ್ರಪಂಚದಲ್ಲಿ ದೊರೆಯುವ ಸುಮಾರು ೫೦-೬೦ ಭಾಷಾಂತರಗಳಲ್ಲಿ ಸುಮಾರು ಇನ್ನೂರಕ್ಕಿಂತ ಅಧಿಕ ರೂಪಾಂತರಗಳು ಸಿಗುತ್ತವೆ ಎಂಬ ಅದ್ಭುತವನ್ನು ಈತ ೧೯೧೪ರಲ್ಲಿ ಜಗತ್ತಿಗೆ ಸಾರಿದನು. ವಿಷ್ಣುಶರ್ಮನ ಪಂಚತಂತ್ರವು ವಿಶ್ವರೂಪ ತಾಳಿ ಹೇಗೆ ಪ್ರಪಂಚದ ಪಶ್ಚಿಮೋತ್ತರ ದೇಶಗಳಿಗೆ ಪ್ರಸಾರವಾಯಿತು ಎಂಬುದನ್ನು ಈತ ಗುರುತಿಸಿದ್ದಾನೆ. ಇತ್ತೀಚೆಗೆ ಫ್ರಾಂಕ್ಲಿನ್ ಎಡ್ಗರ್‌ಟನ್ (Franklin Edgarton) ಎಂಬ ವಿದ್ವಾಂಸ Panchatantra Reconstructed (ಪಂಚತಂತ್ರ ಪುನರ್ರಚಿತ) ಎಂಬ ಗ್ರಂಥದಲ್ಲಿ ಪಂಚತಂತ್ರದ ಇನ್ನೊಂದು ಪಾಠಸಂಪ್ರದಾಯವು ಭಾರತದಿಂದ ಪೂರ್ವದಕ್ಷಿಣ ದೇಶಗಳಿಗೆ ಹೋಯಿತು ಎಂಬುದನ್ನು ಸಾರಿದ್ದಾನೆ.

ಮೂಲ ಪಂಚತಂತ್ರವು ಕ್ರಿ.ಶ.ದ ಆರಂಭದ ಶತಮಾನದಲ್ಲಿ ರಚಿತವಾಗಿದ್ದಿರಬೇಕು ಎಂದು ವಿದ್ವಾಂಸರು ಊಹಿಸಿರುತ್ತಾರೆ. ವಿಷ್ಣುಶರ್ಮನ ಪಂಚತಂತ್ರ ಪಶ್ಚಿಮದೇಶಗಳಿಗೆ ಹೋದ ಕತೆ ಸ್ವಾರಸ್ಯವಾಗಿದೆ. ಕ್ರಿ.ಶ. ೫೩೧ ರಿಂದ ೫೭೯ರವರೆಗೆ ಪರ್ಷಿಯಾದೇಶವನ್ನು ಆಳಿದ ದೊರೆ ಖುಸ್ರು ನೌ ಷೇರ್ವಾನ್ ಎಂಬುವನು ಸತ್ತವರನ್ನು ಬದುಕಿಸುವ ಮೂಲಿಕೆಯೊಂದು ಭಾರತದಲ್ಲಿದೆ ಎಂಬುದನ್ನು ಕೇಳಿದನು. ತನ್ನ ಆಸ್ಥಾನವೈದ್ಯನಾದ ಬುರ್ಜೆ Buorze ಎಂಬವನೊಡನೆ ಆ ಮೂಲಿಕೆಯನ್ನು ತನಗೆ ತಂದುಕೊಡಬೇಕೆಂದು ಹೇಳಿ ಅವನನ್ನು ಭಾರತಕ್ಕೆ ಕಳುಹಿಸಿದನು. ಅವನು ಅದನ್ನು ಭಾರತದಲ್ಲೆಲ್ಲ ಹುಡುಕಿ ಅದು ಎಲ್ಲಿಯೂ ಸಿಕ್ಕದಿರಲು ಅನುಭವಿಯಾದ ವೃದ್ಧನೊಬ್ಬನು ಅವನೊಡನೆ ಹೀಗೆ ಹೇಳಿದನು. 'ಅಂಥ ಮೂಲಿಕೆ ಯಾವುದೂ ಇರಲು ಸಾಧ್ಯವಿಲ್ಲ. ಮೂಢರನ್ನು ಬುದ್ಧಿವಂತರನ್ನಾಗಿ ಮಾಡಬಲ್ಲ 'ಪಂಚತಂತ್ರ'ವೇ ಆ ಮೂಲಿಕೆ!' ಅದನ್ನು ಕೇಳಿದ ಬುರ್ಜೆ 'ಪಂಚತಂತ್ರ' ದ ಪ್ರತಿಯೊಂದನ್ನು ಸಂಪಾದಿಸಿಕೊಂಡು ತನ್ನ ರಾಜಭಾಷೆಯಾದ ಪಹಲ್ವಿಗೆ ಅನುವಾದಿಸಿ ತನ್ನ ದೊರೆಗೆ 'ಇದು ಸತ್ತವರನ್ನೂ ಎತ್ತಬಲ್ಲ ಭಾರತದ ಮೂಲಿಕೆ' ಎಂದು ಅರ್ಪಿಸಿದನು. ರಾಜನು ಅದನ್ನು ತನ್ನ ಪಹಲ್ವಿಭಾಷೆಯಲ್ಲಿ 'ಕರಟಕ-ದಮನಕ' ಎಂಬ ಹೆಸರಿನಿಂದ ಪ್ರಕಟಿಸಿದನಂತೆ. ಅದು ಈಗ ದೊರೆಯುವುದಿಲ್ಲ. ಅದನ್ನು ಆಧರಿಸಿದ ಅನುವಾದಗಳಿಂದ ನಮಗೆ ಈ ವಿಚಾರ ತಿಳಿದುಬರುತ್ತದೆ.

ಈ ಕೃತಿ ಪಾಶ್ಚಾತ್ಯ ಜಗತ್ತಿನಲ್ಲಿ ಕ್ರಿ.ಶ. ೬ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಅನೇಕ ಅನುವಾದಗಳಾಗಲು ಪ್ರೇರೇಪಿಸಿತು; ತುಂಬ ಪ್ರಭಾವವನ್ನು

ಬೀರಿತು. ಇವುಗಳಲ್ಲಿ ಪರ್ಷಿಯಾದೇಶದ ದೊರೆಯ ಆಸ್ಥಾನದಲ್ಲಿದ್ದ ಬಡ್ (Bud) ಎಂಬವನು 'ಕರಟಕ-ದಮನಕ'ವನ್ನು ಕಾಲಿಲಾಗ್ ಮತ್ತು ದಮ್ನಾಗ್ (kalilag And Damnag) ಎಂಬ ಹೆಸರಿನಲ್ಲಿ ಸಿರಿಯಾಭಾಷೆಗೆ ಅನುವಾದಿಸಿದನು. ಇದರ ಭಾಷಾಂತರಗಳು ಜರ್ಮನ್ ಭಾಷೆಯಲ್ಲಿವೆ. ಇದು ಅನಂತರ ಎಂಟನೆಯ ಶತಮಾನದಲ್ಲಿ ಅರಬ್ಬೀ ಭಾಷೆಗೆ ಅನುವಾದವಾಯಿತು. ಅವುಗಳಲ್ಲಿ ಅಬ್ದುಲ್ಲ ಇಬನ್ ಅಲ್ ಮೊಖಾಫೆ (Abdullah Ibn Al Moqaaff) ಎಂಬವನ ಅನುವಾದವು ಮುಖ್ಯವಾದುದು. ಈತನ ಕೃತಿ ಪಾಶ್ಚಾತ್ಯ ಪ್ರಪಂಚದಲ್ಲೆಲ್ಲ ಪ್ರಸಾರವಾಯಿತು. ಇದು ಕ್ರಿ.ಶ. ೧೮೮೧ ರಿಂದ ಇಂಗ್ಲಿಷ್, ಜರ್ಮನ್, ಫ್ರೆಂಚ್, ಡೇನಿಷ್, ರಷ್ಯನ್, ಇಟ್ಯಾಲಿಯನ್, ಸ್ಪ್ಯಾನಿಷ್, ಜೆಕ್ ಮೊದಲಾದ ಭಾಷೆಗಳಿಗೆ ಅನುವಾದಗೊಂಡಿತು. ಇದು ಹನ್ನೊಂದನೆಯ ಶತಮಾನದಲ್ಲೇ ಗ್ರೀಕ್ ಭಾಷೆಯಲ್ಲಿ ಬಂದು ಅದರಿಂದ ಲ್ಯಾಟಿನ್, ಸ್ಲಾವೋನಿಕ್, ಹೀಬ್ರೂ ಭಾಷೆಗಳಿಗೆ ಅನುವಾದಗೊಂಡಿತು. ಕ್ರಿ.ಶ. ೧೫೭೦ರಲ್ಲಿ ಸರ್ ಥಾಮಸ್ ನಾಥ್ (Sir Thomas Nath) ಎಂಬುವನು 'ಮೊರೇಲ್ ಫಿಲಾಸೋಫಿಯಾ ಆಫ್ ಡೋಣಿ' (Morale Philosophia of Doni) ಎಂಬುದಾಗಿ ಇಂಗ್ಲಿಷ್ ಭಾಷೆಯಲ್ಲಿ ಮೊತ್ತ ಮೊದಲು ಪಂಚತಂತ್ರವನ್ನು ಅನುವಾದಿಸಿದನು.

ಪಂಚತಂತ್ರದ ಇನ್ನೊಂದು ಶಾಖೆಯು ಪರ್ಷಿಯನ್ ಭಾಷೆಯಲ್ಲಿ 'ಅನ್ವಾರೆ ಸುಹೈಲಿ' ಎಂಬ ಹೆಸರಿನಿಂದ ಹದಿನೈದನೆಯ ಶತಮಾನದಲ್ಲಿ ಪ್ರಪಂಚ ಪ್ರಸಿದ್ಧವಾಯಿತು. ತಮಾಷೆಯೆಂದರೆ ಇದು ಮಧ್ಯಏಷ್ಯದ ನೂರಾರು ಭಾಷೆಗಳಲ್ಲಿ ಅನುವಾದವಾಗಿ ಪಂಚತಂತ್ರದ ಮಾತೃಭೂಮಿಯಾದ ಭಾರತಕ್ಕೇ ಬಂದಿದೆ. 'ಅನ್ವಾರೆ ಸುಹೈಲಿ' ಹದಿನಾರನೆಯ ಶತಮಾನದಲ್ಲಿ ಟರ್ಕಿಷ್ ಭಾಷೆಯಲ್ಲಿ 'ಹುಮಾಯೂನ್ ನಾಮಾ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಇದೂ ಮತ್ತೆ ಯೂರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿತು. ಅವುಗಳಲ್ಲಿ ಫ್ರೆಂಚ್ ಅನುವಾದ ಮುಖ್ಯವಾದುದು. 'ಅನ್ವಾರೆ ಸುಹೈಲಿ'ಯ ಇನ್ನೊಂದು ಶಾಖೆ ಮಂಗೋಲಿಯನ್ ಭಾಷೆಗಳಿಗೆ ಹರಿದುಬಂತು. "ಹೀಗೆ ಪಂಚತಂತ್ರ ಪಹಲ್ವಿಯ ಭಾಷಾಂತರದಿಂದ ಸುಮಾರು ಹದಿಮೂರು ಶತಮಾನಗಳಲ್ಲಿ ದೇಶದೇಶಾಂತರಗಳಲ್ಲೆಲ್ಲ ಭಾಷಾಂತರ, ಮರುಭಾಷಾಂತರ, ಪ್ರತಿಭಾಷಾಂತರ ಗದ್ಯದಿಂದ ಪದ್ಯ, ಪದ್ಯದಿಂದ ಗದ್ಯ ರೂಪಾಂತರವನ್ನು ಹೊಂದಿ ಏಷ್ಯ ಮತ್ತು ಯೂರೋಪ್ ಖಂಡದ ಬಹುಭಾಗವನ್ನಷ್ಟೇ ಅಲ್ಲದೆ ಆಫ್ರಿಕಾಖಂಡದ ಬಹುಭಾಗದಲ್ಲಿಯೂ ವಿವಿಧ ಹೆಸರುಗಳಿಂದಲೂ ರೂಪಗಳಿಂದಲೂ ಸಂಚಾರಮಾಡಿ ಪುನಃ ಭಾರತವನ್ನೇ ಪ್ರವೇಶಿಸಿರುವುದು ಬಹು ಸೋಜಿಗದ ಸಂಗತಿ". ಇವಿಷ್ಟು ವಿಷ್ಣುಶರ್ಮನ ಪಂಚತಂತ್ರದ ಪ್ರವಾಸದ ಒಂದು ಸ್ಥೂಲ ಪರಿಚಯ.

ಪಂಚತಂತ್ರದ ಇನ್ನೊಂದು ಸಂಪ್ರದಾಯ ವಸುಭಾಗಭಟ್ಟನಿಂದ ಆರಂಭವಾಯಿತೆಂದು ಆಗಲೇ ಪ್ರಸ್ತಾಪಿಸಲಾಗಿದೆ. ಇದು ಭಾರತದಿಂದ ದಕ್ಷಿಣ ಪೂರ್ವ

ದೇಶಗಳಿಗೆ ಪ್ರವಾಸಹೋಯಿತು. ಇದರ ಕನ್ನಡದ ಅವತಾರ ಕ್ರಿ.ಶ. ೧೦೩೧ರಲ್ಲಿ ದುರ್ಗಸಿಂಹನೆಂಬ ಬ್ರಾಹ್ಮಣನಿಂದ ಆಯಿತು. ಈ ವಸುಭಾಗಬಟ್ಟ ಯಾರು, ಏನು,ಎಲ್ಲಿದ್ದ, ಯಾವಾಗ ಇದ್ದ ಎಂಬ ವಿಚಾರವೂ ವಿಷ್ಣುಶರ್ಮನ ವಿಚಾರದ ಹಾಗೆಯೇ ಒಗಟಾಗಿದೆ. ವಸುಭಾಗಭಟ್ಟನು ಯಾವ ಭಾಷೆಯಲ್ಲಿ ಪಂಚತಂತ್ರವನ್ನು ಬರೆದ ಎಂಬುದೂ ಗೊತ್ತಿಲ್ಲ. ವಿಷ್ಣುಶರ್ಮನ ಹಾಗೆ ಇವನೂ ಸಂಸ್ಕೃತದಲ್ಲಿಯೇ ಬರೆದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ತಾನು ವಸುಭಾಗಭಟ್ಟನ ಪಂಚತಂತ್ರವನ್ನು ಆಧರಿಸಿ ಬರೆದೆನೆಂದು ದುರ್ಗಸಿಂಹನು ಹೀಗೆ ಹೇಳುತ್ತಾನೆ : ಪುಷ್ಪದಂತನೆಂಬ ಗಣಪ್ರಧಾನನು ಮಾನವಲೋಕದಲ್ಲಿ ಹುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿದ್ದು ಹರನು ಗಿರಿಸುತೆಗೆ ಹೇಳಿದ ಕತೆಗಳನ್ನು ಪೈಶಾಚಿಕ ಭಾಷೆಯಲ್ಲಿ ಬೃಹತ್ಕಥೆಗಳನ್ನಾಗಿ ಮಾಡಿ ಹೇಳಲು ಅವುಗಳನ್ನು ವಸುಭಾಗಭಟ್ಟನು ಕೇಳಿ ಆ ಕಥಾಸಮುದ್ರದಲ್ಲಿ ಪಂಚರತ್ನವಾಗಿರುವ ಐದು ಕಥೆಗಳನ್ನು ಆಯ್ದು 'ಪಂಚತಂತ್ರ' ಎಂದು ಹೆಸರಿಟ್ಟು ಸಮಸ್ತ ಜಗತ್ತಿನ ಜನೋಪಕಾರಕ್ಕಾಗಿ ಹೇಳಿದನು. ವಸುಧಾಧಿಪರಿಗೆ ಹಿತವೂ ಅಖಿಲ ವಿದ್ವಾಂಸರಿಂದ ಸ್ತುತ್ಯವೂ ಆದ ಅಂಥ ವಸುಭಾಗಭಟ್ಟನ ಕೃತಿಯನ್ನು ಹೊಸತಾಗಿ ಕನ್ನಡದಲ್ಲಿ ವಿರಚಿಸುತ್ತೇನೆ.

ದುರ್ಗಸಿಂಹನ ಕನ್ನಡ ಪಂಚತಂತ್ರವನ್ನು ೧೮೯೮ರಲ್ಲಿ ಮೊತ್ತ ಮೊದಲು ಸಂಪಾದಿಸಿ ಪ್ರಕಟಿಸಿದ ಶ್ರೀ ಎಸ್.ಜಿ. ನರಸಿಂಹಾಚಾರ್ಯರೂ ಶ್ರೀ ಮ. ಅ. ರಾಮಾನುಜಯ್ಯಂಗಾರರೂ ತಮ್ಮ ಗ್ರಂಥದ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ : "ಈ ಪಂಚತಂತ್ರಕ್ಕೂ ಪ್ರಕೃತದಲ್ಲಿ ಪ್ರಚಾರದಲ್ಲಿರುವ ವಿಷ್ಣುಶರ್ಮನ ಪಂಚತಂತ್ರಕ್ಕೂ ತಂತ್ರಗಳ ಹೆಸರುಗಳಲ್ಲಿಯೂ ಅಂತರಾಳಿಕ ಕಥಾಭಾಗಗಳಲ್ಲಿಯೂ ಉದ್ಧೃತವಾಗಿರುವ ಶ್ಲೋಕಗಳಲ್ಲಿಯೂ ಹಲವು ಭೇದಗಳಿವೆ. ಈ ಕವಿ ವಿಷ್ಣುಶರ್ಮನ ಪ್ರಸಿದ್ಧವಾದ ಪಂಚತಂತ್ರವನ್ನು ಬಿಟ್ಟು ವಸುಭಾಗನ ಪಂಚತಂತ್ರವನ್ನು ಕನ್ನಡಿಸುವುದಕ್ಕೆ ಕಾರಣವೇನೋ ತಿಳಿಯಲಿಲ್ಲ". ಆ ಕಾಲದಲ್ಲಿ ವಸುಭಾಗಭಟ್ಟನ ಪಂಚತಂತ್ರದ ವಿಚಾರವಾಗಿ ಏನೂ ತಿಳಿಯದಿರುವುದೇ ಹೀಗೆ ಬರೆಯಲು ಕಾರಣ. ಅಲ್ಲಿಂದೀಚೆಗೆ ವಿದ್ವಾಂಸರ ಸಂಶೋಧನೆಗಳ ಫಲವಾಗಿ ವಸುಭಾಗಭಟ್ಟನ ಪಂಚತಂತ್ರದ ಸಂಪ್ರದಾಯವೇ ಬೇರೆ ಎಂದೂ ಅದು ಪೂರ್ವ ದಕ್ಷಿಣ ಪ್ರಪಂಚಕ್ಕೆ ವ್ಯಾಪಿಸಿತೆಂದೂ ತಿಳಿದುಬಂತು.

ಜಾವಾದ್ವೀಪದಲ್ಲಿ ಇದು 'ತಂತ್ರೀ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಲೇಯಾಸ್ ದೇಶದ ಪಂಚತಂತ್ರವನ್ನು 'ತಂತೈ' ಎಂದು ಕರೆಯುತ್ತಾರೆ. ಥಾಯ್ ದೇಶದಲ್ಲಿ ಇದನ್ನು 'ತಂತೈ' ಎಂದು ಕರೆಯಲಾಗಿದೆ. ಇಲ್ಲೆಲ್ಲ ಕಂಡುಬರುವ 'ವಸುಫಖ' ಎಂಬ ಅರ್ಥವಾಗದ ಮಾತು ವಸುಭಾಗಭಟ್ಟನ ಹೆಸರೇ ಎಂಬುದನ್ನು ನಿರ್ಣಯಿಸಲಾಗಿದೆ. ಇವಲ್ಲದೆ ಜಪಾನೀ ಭಾಷೆಗೂ ಇದು ಅನುವಾದವಾಗಿ ಹೋಗಿದೆ. ಭಾರತದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುದು ವಿಷ್ಣುಶರ್ಮನ ಪಂಚತಂತ್ರ. ವಸುಭಾಗಭಟ್ಟನ ಪಂಚತಂತ್ರದ ರೂಪಾಂತರಗಳು ಭಾರತದ ಪೂರ್ವದಕ್ಷಿಣ

ದೇಶಗಳಲ್ಲಿ ಕಂಡುಬರುವುದರಿಂದ ಅವನು ದಾಕ್ಷಿಣಾತ್ಯನಾಗಿದ್ದಿರಬಹುದು ಎಂದು ಊಹಿಸುತ್ತಾರೆ.

ಕನ್ನಡ ನಾಡಿನಲ್ಲಿ ಪಂಚತಂತ್ರವನ್ನು ಕುರಿತು ಆಳವಾದ ಅಧ್ಯಯನದನ್ನು ಮಾಡಲು ತಮ್ಮ ಜೀವಮಾನವನ್ನೇ ಮುಡಿಪಿಟ್ಟವರು ಡಾ. ಎ. ವೆಂಕಟಸುಬ್ಬಯ್ಯನವರು. ಪಂಚತಂತ್ರದಲ್ಲಿರುವ ಕಥೆಗಳ ಸಂಖ್ಯೆಯನ್ನೂ ಅವುಗಳಲ್ಲಿರುವ ಪರಸ್ಪರ ಸಾಮ್ಯ ವೈಷಮ್ಯಗಳನ್ನೂ ಅಭ್ಯಾಸಿಸಿ ಅವರು ದುರ್ಗಸಿಂಹನ ಪಂಚತಂತ್ರದಲ್ಲಿ ಒಟ್ಟು ೬೫ ಕಥೆಗಳಿವೆ ಎಂದು ನಿರ್ಧರಿಸಿದ್ದಾರೆ. ಥಾಯ್ಲೆಂಡಿನ ಪಂಚತಂತ್ರದಲ್ಲಿ ೩೬೦ ಕಥೆಗಳಿವೆಯಂತೆ. ಜಾವಾದೇಶದ ಪಂಚತಂತ್ರದಲ್ಲಿಯೂ ೩೬೦ ಕಥೆಗಳಿವೆಯಂತೆ. ವಿಷ್ಣುಶರ್ಮ, ದುರ್ಗಸಿಂಹರ ಪಂಚತಂತ್ರಗಳಲ್ಲಿ ಸುಮಾರು ೬೫ ಕಥೆಗಳಿರುವುದರಿಂದ ಮೂಲಪಂಚತಂತ್ರದಲ್ಲಿ ೬೦ ಕಥೆಗಳಿದ್ದಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ. ದುರ್ಗಸಿಂಹನ ಪಂಚತಂತ್ರವು ವಸುಭಾಗಭಟ್ಟನ ಪಂಚತಂತ್ರದ ನೇರವಾದ ಅನುವಾದವಲ್ಲವೆಂಬುದು 'ಪೊಸತಾಗಿರೆ' ಎಂಬ ಅವನ ಮಾತಿನಿಂದ ತಿಳಿಯುವುದು.

೩. ದುರ್ಗಸಿಂಹನ ದೇಶ, ಕಾಲ, ವ್ಯಕ್ತಿವಿಚಾರ

ದುರ್ಗಸಿಂಹನು ತನ್ನ ವಿಚಾರವನ್ನು ತನ್ನ ಕೃತಿಯಲ್ಲಿ ಕನ್ನಡದ ಆದಿಕವಿ ಪಂಪನ ಹಾಗೆ ವಿವರವಾಗಿ ನಿವೇದಿಸಿಕೊಂಡಿರುವುದರಿಂದ ಕವಿಚರಿತೆಯನ್ನು ತಿಳಿದುಕೊಳ್ಳಲು ಕಷ್ಟವಾಗುವುದಿಲ್ಲ. ಅವನು ತನ್ನ ಊರು ಕರ್ಣಾಟಕದ ಸಯ್ಯಡಿಯ ಅಗ್ರಹಾರವೆಂದು ಹೇಳಿದ್ದಾನೆ. 'ಛಂದೋಂಬುಧಿ'ಯನ್ನು ಬರೆದ ನಾಗವರ್ಮನ ಊರೂ ಅದೇ ಆಗಿದೆ. ಅದು ಕಿಸುಕಾಡುನಾಡಿನಲ್ಲಿದೆ ಎಂದು ಅವನು ಹೇಳಿದ್ದಾನೆ. ಆ ಸಯ್ಯಡಿಯಲ್ಲಿ ತನ್ನ ಚಕ್ರವರ್ತಿಯ ಆಜ್ಞೆಯಂತೆ ಹರಿಹರಭವನಗಳನ್ನು ದುರ್ಗಸಿಂಹನು ಕಟ್ಟಿಸಿದನಂತೆ. ಸಯ್ಯಡಿ ಇಂದು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿದೆ.

ದುರ್ಗಸಿಂಹನ ಪದ್ಯಗಳು ಸೂಕ್ತಿ ಸುಧಾರ್ಣವದಲ್ಲಿ ದೊರಕುವುದರಿಂದ ದುರ್ಗಸಿಂಹನು ಕ್ರಿ.ಶ. ೧೧೩೯ರಿಂದ ಕ್ರಿ.ಶ. ೧೧೪೯ರ ವರೆಗೆ ಆಳಿದ ಚಾಲುಕ್ಯ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿಯಾಗಿದ್ದಿರಬೇಕೆಂದೂ ಆದರಿಂದ ಇವನ ಕಾಲವು ಕ್ರಿ.ಶ. ಸು. ೧೧೪೫ ಆಗಿದ್ದಿರಬೇಕೆಂದೂ ಕವಿಚರಿತೆಯ ಪ್ರಥಮ ಸಂಪುಟದಲ್ಲಿ ಶ್ರೀ ಆರ್. ನರಸಿಂಹಾಚಾರ್ಯರು ನಿರ್ಣಯಿಸಿದ್ದರು. ಈ ಅಭಿಪ್ರಾಯವನ್ನೇ ಶ್ರೀ ಎಸ್.ಜಿ. ನರಸಿಂಹಾಚಾರ್ಯರ ಆವೃತ್ತಿಯ ಪೀಠಿಕೆಯಲ್ಲಿ ಉಲ್ಲೇಖಿಸಲಾಗಿದೆ. ಶ್ರೀ ರಾಜಪುರೋಹಿತರು ಒಂದನೆಯ ಜಗದೇಕಮಲ್ಲ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಎಂದರೆ ಕ್ರಿ.ಶ. ೧೦೩೭-೧೦೪೨ರ ಅವಧಿಯಲ್ಲಿ ದುರ್ಗಸಿಂಹನು ತನ್ನ ಕೃತಿಯನ್ನು ರಚಿಸಿರಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ. ರಂ. ಶ್ರೀ. ಮುಗಳಿಯವರು ಸು. ಕ್ರಿ.ಶ. ೧೦೩೦ ಎನ್ನುತ್ತಾರೆ. ಕರ್ಣಾಟಕ ಕವಿಚರಿತೆಯ ೧೯೬೧ರ ಪರಿಶೋಧಿತ ಮುದ್ರಣದಲ್ಲಿ ದುರ್ಗಸಿಂಹನ ಕಾಲವನ್ನು ಕ್ರಿ.ಶ. ಸು. ೧೦೨೫ ಎಂದು ಹೇಳಿದೆ.

ಪಂಚತಂತ್ರದ ಆರಾ ಪ್ರತಿಯಲ್ಲಿ ದೊರಕಿದ ಒಂದು ಪದ್ಯ ದುರ್ಗಸಿಂಹನ ಕಾಲ ನಿರ್ಣಯ ಮಾಡಲು ಸಹಕಾರಿಯಾಯಿತು. ಪದ್ಯ ಹೀಗಿದೆ :

ಅತಿ ಸಂಪನ್ನತೆವೆತ್ತ ಸದ್ಗೃಹನಿವಾಸಸ್ಥಾನಮಾದ ಪ್ರಜಾ
ಪತಿ ಸಂವತ್ಸರ ಚೈತ್ರಮಾಸಸಿತಪಕ್ಷ ದ್ವಾದಶೀ ತಾರಕಾ
ಪತಿವಾರಂ ಬರೆ ಪಂಚತಂತ್ರಮೆಸೆದತ್ತೀ ಧಾತ್ರಿಯೊಳ್ ದುರ್ಗನಿ -
ರ್ಮಿತಮುದ್ಯತ್ ಕವಿಶೇಖರ ಪ್ರಮದ ಲೀಲಾಪುಷ್ಪಿತಾಮ್ರದ್ರುಮಂ ॥

ಈ ಪದ್ಯವನ್ನು ಆಧರಿಸಿ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಜಯಸಿಂಹ ಜಗದೇಕಮಲ್ಲನ ಕಾಲ ಕ್ರಿ.ಶ. ೧೦೧೫-೧೦೪೨ ಎಂದೂ ಅವನಲ್ಲಿಯೇ ದುರ್ಗಸಿಂಹನು ಸಂಧಿವಿಗ್ರಹಿಯಾಗಿರಬೇಕೆಂದೂ, ಮೇಲಿನ ಪದ್ಯದಲ್ಲಿ ಹೇಳಿದ ಶಕಸಂವತ್ಸರ ೯೫೩ನೆಯ ಪ್ರಜಾಪತಿ ಸಂವತ್ಸರ ಚೈತ್ರಶುದ್ಧ ೧೨ ಸೋಮವಾರವು ಕ್ರಿ.ಶ. ೧೦೩೧ನೆಯ ಮಾರ್ಚ್ ಎಂಟನೆಯ ತಾರೀಕು ಆಗುತ್ತದೆ ಎಂದೂ ನಿರ್ಣಯಿಸಿದ್ದಾರೆ. ಇದನ್ನು ದುರ್ಗಸಿಂಹನ ಕೃತಿರಚನೆಯ ಕಾಲ ಎಂದು ಒಪ್ಪಬಹುದು.

ದುರ್ಗಸಿಂಹನು ತನ್ನ ಗ್ರಂಥದ ಆದಿಭಾಗದಲ್ಲಿ ಸುಮಾರು ೬೨ ಪದ್ಯಗಳಲ್ಲಿ ತನ್ನ ವಿಚಾರವನ್ನು ವಿವರವಾಗಿ ತಿಳಿಸಿದ್ದಾನೆ. ಅದು ಹೀಗಿದೆ :

ಕರ್ಣಾಟಕದ ಕಿಸುಕಾಡುನಾಡಿನಲ್ಲಿ ಸಯ್ಯಡಿಯೆಂಬ ಅಗ್ರಹಾರದಲ್ಲಿ 'ಸಕಲ ಧರ್ಮಕ್ಕೆಲ್ಲಂ ಕಯ್ಯಾಲ್ ಮೂಡಿದಂತೆ' ದುರ್ಗಸಿಂಹನೆಂಬ ಬ್ರಾಹ್ಮಣನಿದ್ದನು. ಆತನ ಹೆಂಡತಿ ರೇವಕಬ್ಬೆ. ಇವರ ಮಗ 'ಮನ್ವಾದಿ ಪುರಾಣ ಮುನಿಗಣ ಪ್ರಣೂತ ಶ್ರುತಿವಿಹಿತ ವಿಶುದ್ಧಮಾರ್ಗನುಂ ನಿತ್ಯಹೋಮಾಧ್ಯಯನಾನೇಕ ಯಾಗಾವಭೃತಸ್ನಾನ ಪವಿತ್ರಗಾತ್ರನುಂ, ಭಗವನ್ನಾರಾಯಣ ಚರಣಾಂಬುಜ ಸ್ಮರಣ ಪರಿಣತಾಂತಃಕರಣನುಂ, ತರ್ಕವ್ಯಾಕರಣ ಕಾವ್ಯ ನಾಟಕ ಭರತ ವಾತ್ಸ್ಯಾಯನಾದ್ಯಶೇಷ ವಿದ್ಯಾಸಮುದ್ರತರಣಗುಣೈಕಪುಣ್ಯನುಂ, ಧರಾಮರಾಗ್ರಗಣ್ಯನುಂ' ಆದ ದುರ್ಗಮಯ್ಯನಿದ್ದನು. ಅವನ ಮಗನಾದ 'ದೇವದ್ವಿಜ ಗುರುಜನಪದಸೇವಾನಿರತ'ನಾದ ಈಶ್ವರಾರ್ಯನಿದ್ದನು. ಅವನ ಹೆಂಡತಿ ರೇವಾಂಬಿಕೆ, ಇವರಿಬ್ಬರ ಮಗ ಪ್ರಸ್ತುತ ಕವಿಯಾದ ದುರ್ಗಸಿಂಹ. ಈತನು ಬ್ರಾಹ್ಮಣ. ಕಮ್ಮೆಕುಲದವನು, ಗೌತಮಗೋತ್ರ ಸಂಭೂತನು. ಇವನ ಗುರು 'ಮಹಾಯೋಗಿ'ಯಾದ ಶಂಕರಭಟ್ಟ. ಚಾಳುಕ್ಯರಾಜರಲ್ಲಿ 'ಕಲಿಕಾಲಕರ್ಣಂ' 'ನೃಪ ಚಕ್ರವರ್ತಿತಿಲಕಂ' 'ಶ್ರೀಕೀರ್ತಿ ವಿದ್ಯಾಧರಂ' 'ಸತ್ಯಾಶ್ರಯ ಕುಲತಿಲಕಂ' 'ಚೋಳ ಕಾಲಾನಲಂ' ಎಂಬ ಬಿರುದುಗಳುಳ್ಳ ಜಗದೇಕಮಲ್ಲ ಜಯಸಿಂಹ ಎಂಬ ರಾಜನಲ್ಲಿ ಶ್ರೀ ಗಂಡಭೂರಿಶ್ರಯನೆಂಬ ಬಿರುದುಳ್ಳ ಸಿಂಹಸನ್ನಾಹ ನೆಂಬ ದಂಡನಾಯಕನಿದ್ದನು. ಅವನ ಪಾದಕಮಲಭೃಂಗನಾದ ಚಕ್ರವರ್ತಿದಂಡಾಧೀಶ, ಕೋದಂಡರಾಮಾಧಿಪ ಮೊದಲಾದ ಬಿರುದುಳ್ಳ ಕುಮಾರಸ್ವಾಮಿಯು ಕವಿಗೆ ಜಗದೇಕಮಲ್ಲನಲ್ಲಿ ಸಂಧಿವಿಗ್ರಹಿ ಪದವಿಯನ್ನು ಕೊಡಿಸಿದನು. ಇವನು ತನ್ನ ಚಕ್ರವರ್ತಿಯ ಆಜ್ಞೆಯಂತೆ ಸಯ್ಯಡಿಯಲ್ಲಿ 'ಹರಿಹರಭವನ'ಗಳನ್ನು ಮಾಡಿಸಿದನಂತೆ.

ಈತನು ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸರನ್ನೂ 'ನಾಭೇಯಂ ಸುರಾಮಾತ್ಯನಿಂಧ್ರನದೀನಂದನನುದ್ಧವಂ ಮನುವಿಶಾಲಕ್ಷೇಭದಂತಂ ಕುಬೇರನಜಾತ

ಪ್ರಿಯಪುತ್ರ' ಎಂಬ ನೀತಿಶಾಸ್ತ್ರ ಪ್ರವರ್ತಕರನ್ನೂ, ಚಂದ್ರಗುಪ್ತನಿಗೆ ರಾಜ್ಯವನ್ನು ಸಂಪಾದಿಸಿಕೊಟ್ಟ ನೀತಿವಿದನಾದ ವಿಷ್ಣುಗುಪ್ತನನ್ನೂ, ಗುಣಾಢ್ಯ, ವರರುಚಿ, ಕಾಳಿದಾಸ, ಬಾಣ, ಮಯೂರ, ಧನಂಜಯ, 'ವಾಮನಕುಮಾರನುದ್ಭಟ ಭೀಮಂ ಭವಭೂತಿ ಭಾರವೀ ಭಟ್ಟಿ ವಜಿತ್ರೀಮಾಘ ರಾಜಶೇಖರ ಕಾಮಂದಕರು', ದಂಡಿ ಮೊದಲಾದ ಸಂಸ್ಕೃತ ಕವಿಗಳನ್ನೂ ಸ್ಮರಿಸಿರುವನು. ಕನ್ನಡದ ಕವಿಗಳಲ್ಲಿ ಶ್ರೀವಿಜಯ, ಕನ್ನಮಯ್ಯ, ಅಸಗ, ಮನಸಿಜ, ಚಂದ್ರ, ಪಂಪ, ಗಜಾಂಕುಶ, ಕವಿತಾವಿಲಾಸರನ್ನು ಸ್ಮರಿಸಿದ್ದಾನೆ. ತನ್ನ ಗ್ರಂಥವನ್ನು 'ಕವಿ ಗಮಕಿ ವಾದಿ ವಾಗ್ಮಿಪ್ರವರ'ನಾದ ಶ್ರೀ ಮಾದಿರಾಜ ಮುನಿಪುಂಗವನು ತಿದ್ದಿದನೆಂದು ಹೇಳಿದ್ದಾನೆ.

ದುರ್ಗಸಿಂಹನು ತನ್ನ ಗುಣಾವಳಿಗಳನ್ನು ಹೀಗೆ ಹೇಳಿಕೊಂಡಿದ್ದಾನೆ : ನಿರ್ದುಷ್ಟ ವಾದ ನಡತೆಗೆ ಉದಾಹರಣನು, ಪ್ರಕಾಶಮಾನವಾದ ಕೀರ್ತಿಗೆ ಆಧಾರ, ಸ್ವಾಮಿ ಕಾರ್ಯಕ್ಕೆ ಹನುಮಂತ, ತನ್ನ ವಂಶಕ್ಕೆ ಅಲಂಕಾರರತ್ನ, ಸೈನ್ಯಸಮುದ್ರವನ್ನು ದಾಟುವುದರಲ್ಲಿ ಶೋಭಾಯಮಾನ, ಸಿದ್ಧ ಇಷ್ಟ ಶಿಷ್ಟರ ಸಮೂಹಕ್ಕೆ ದೋಣಿ ಎಂದು ದುರ್ಗಸಿಂಹನನ್ನು ವಿದ್ವಜ್ಜನರು ಹೊಗಳುವರು. ವಿನಯಕ್ಕೆ ಆಶ್ರಯನೂ ಉತ್ತಮನೂ ಸತ್ಕುಲಸಂಭವನೂ ಸ್ವಾಮಿಕಾರ್ಯಧುರೀಣನೂ ಮನುಧರ್ಮದ ಮಾರ್ಗದಲ್ಲಿರು ವವನೂ ಎಂದು ದುರ್ಗಸಿಂಹ ಪ್ರಸಿದ್ಧನಲ್ಲವೇ ! ಜ್ಞಾನಕ್ಕೆ ಆಶ್ರಯಸ್ಥಾನ, ಒಳ್ಳೆಯ ಗುಣಕ್ಕೆ ಕಣಿ, ಶುಚಿಗೆ ಆಧಾರ, ಜಾಣತನಕ್ಕೆ ದಿಣ್ಣೆ, ಒಳ್ಳೆಯ ಮಾತಿಗೆ ಒಡೆಯ, ಪರಾಕ್ರಮಕ್ಕೆ ಆಶ್ರಯ, ಸಾಮರ್ಥ್ಯಕ್ಕೆ ಆಟದ ಮನೆ, ಧರ್ಮಕ್ಕೆ ಗುರಿ, ವಿನಯಕ್ಕೆ ತವರುಮನೆ, ಸತ್ಯಕ್ಕೆ ಆಶ್ರಯಸ್ಥಾನ ಎಂದು ಬುದ್ಧಿಗೆ ಮೀರಿ ಪ್ರೀತಿಸಿ ದುರ್ಗಸಿಂಹನನ್ನು ಪ್ರಪಂಚವು ಹೊಗಳುವುದು. ಚಂಚಲಚಿತ್ತರನ್ನೂ ದುಷ್ಟರನ್ನೂ ಪಡೆದ ದೋಷಕ್ಕೆ ಪ್ರಾಯಶ್ಚಿತ್ತವೆಂಬಂತೆ ಸರ್ವವಿದ್ವಜ್ಜನಾಶ್ರಯನಾದ ದುರ್ಗಸಿಂಹನನ್ನು ವಿಧಿ ಪಡೆದನು! ವಿನಯಸಮುದ್ರ, ಶಿಷ್ಟಕಲ್ಪವೃಕ್ಷ, ಸತ್ಯವ್ರತ, ಬ್ರಾಹ್ಮಣವಂಶವೆಂಬ ಆಕಾಶಕ್ಕೆ ಸೂರ್ಯ, ವಾಗ್ವನಿತೆಯ ಮನೋರಮ, ಎಂದೆಷ್ಟೋ ರೀತಿಯಲ್ಲಿ ತನ್ನ ವಂಶದ ಕೀರ್ತಿಯೆಂಬ ಬಳ್ಳಿಗೆ ಮೋಡನೂ, ಶಿವಭಕ್ತನೂ, ವಿದ್ವಜ್ಜನ ಸಮೂಹಕ್ಕೆ ಆಶ್ರಯನೂ ಆದ ದುರ್ಗಸಿಂಹನನ್ನು ಪ್ರಪಂಚ ಬಣ್ಣಿಸುವುದಂತೆ. ಜಗತ್ತಿನಲ್ಲಿ ಸ್ವಾಮಿಹಿತದಲ್ಲಿ ಪ್ರಸಿದ್ಧನಾದ ಕರ್ಣನಿಗಿಂತ, ವಿಘ್ನೇಶ್ವರನಿಗಿಂತ, ಹನುಮಂತನಿಗಿಂತ, ಗರುಡನಿಗಿಂತ ದುರ್ಗಸಿಂಹನು ಇಮ್ಮಡಿ, ಮುಮ್ಮಡಿ, ನಾಲ್ಮಡಿ, ಐಮಮಡಿ ದೊಡ್ಡವನಂತೆ !

ಪರಮಾತ್ಮನು ಪರಮೇಶ್ವರ, ವಿಷ್ಣುವು ದೈವ, ಮಹಾಯೋಗಿಗಳಾದ ಶಂಕರಭಟ್ಟರು ಗುರುಗಳು,ಚೆನ್ನಾಗಿ ಪೋಷಿಸಿದವನು ಶ್ರೀ ಚೋಳಕಾಳಾನಲ ಎಂಬ ಬಿರುದುಳ್ಳ ರಾಜಶ್ರೇಷ್ಠನೂ, ಚಕ್ರವರ್ತಿತಿಲಕನೂ, ಚೆನ್ನಾಗಿ ಸೊಕ್ಕಿದ ವೈರಿಗಳೆಂಬ ಆನೆಗಳಿಗೆ ಸಿಂಹಸ್ವರೂಪನೂ ಆದ ಜಗದೇಕಮಲ್ಲ ಜಯಸಿಂಹನು ಒಡೆಯನು ಎಂದ ಮೇಲೆ ದುರ್ಗಸಿಂಹನ ದೊಡ್ಡತನವನ್ನು ಏನೆಂದು ವರ್ಣಿಸಲಿ !

ಮುಂದೆ ನೇರವಾಗಿ ತನ್ನ ಕೃತಿಯನ್ನು ಆರಂಭಿಸಲು ಪೀಠಿಕೆ ಹಾಕುತ್ತಾನೆ :

ವಸುಭಾಗಭಟ್ಟ ಕೃತಿಯಂ
ವಸುಧಾಧಿಪ ಹಿತಮನಖಿಲ ವಿಬುಧಸ್ತುತಮಂ
ಪೊಸತಾಗಿರೆ ವಿರಚಿಸುವೆಂ
ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ ॥

೪. ಪಂಚತಂತ್ರದ ಶೈಲಿ

ಪಂಚತಂತ್ರವು ಗದ್ಯಭೂಯಿಷ್ಠವಾದ ಚಂಪೂರೂಪವಾಗಿದೆ. ಇದರಲ್ಲಿ

೧. ಭೇದಪ್ರಕರಣ ವರ್ಣನಂ
೨. ಪರೀಕ್ಷಾ ಪ್ರ್ಯಾವರ್ಣನಂ
೩. ವಿಶ್ವಾಸ ಪ್ರಕರಣ ವರ್ಣನಂ
೪. ವಂಚನಾ ಪ್ರಕರಣ ವರ್ಣನಂ
೫. ಮಿತ್ರಕಾರ್ಯ ಪ್ರಕರಣಂ

ಎಂಬ ಹೆಸರಿನ ಐದು ತಂತ್ರಗಳಿವೆ. ಪಂಚತಂತ್ರದ ಕಥೆಗಳು ಹುಟ್ಟಿದ ವಿಚಾರವನ್ನು ಈ ರೀತಿಯಾಗಿ ಹೇಳಿದ್ದಾನೆ :

"ರಜತಗಿರಿಯಲ್ಲಿ ಪ್ರೀತಿಯಿಂದ ಗಿರಿಜಾಪತಿಯಾದ ಶಿವನೂ ಶಂಕರನೂ ಭಾಗೀರಥಿಯ ವಲ್ಲಭನೂ ದೇವದೇವನೂ ವರದನೂ ಸಮಸ್ತದೇವತೆಗಳ ರತ್ನಕಿರೀಟಗಳು ತಾಗಿದ ಪಾದಕಮಲವುಳ್ಳವನೂ ಆದ ಶಿವನು ಪ್ರಸಿದ್ಧವಾದ ಈ ಕಥೆಯನ್ನು ಹೇಳುವುದಕ್ಕಾಗಿ ಅರ್ಧನಾರೀಶ್ವರನಾಗಿದ್ದನು. ಒಂದ ದಿನ ಪರಮೇಶ್ವರನು ಮೇರುಪರ್ವತದ ಮೇಲೆ ಅತ್ಯಂತ ಸಂತೋಷದಿಂದ ಎಡದಲ್ಲಿ ಬ್ರಹ್ಮನೂ ಬಲದಲ್ಲಿ ವಿಷ್ಣುವೂ ಹಿಂದೆ ಮೂವತ್ತುಮೂರು ಕೋಟಿ ದೇವತೆಗಳೂ ಮುಂದೆ ನಂದೀಶ ವೀರಭದ್ರರೇ ಮೊದಲಾದ ಗಣಗಳ ಒಡೆಯರೂ ತೊಡೆಯ ಮೇಲೆ ಗೌರಿಯೂ ಜಡೆಯಲ್ಲಿ ಗಂಗೆಯೂ ಸಹಿತವಾಗಿ ಓಲಗಗೊಟ್ಟು ಕುಳಿತಿದ್ದನು. ಹಾಗಿದ್ದ ಪರಮೇಶ್ವರನಿಗೆ ಗೌರಿಯು ಕರಕಮಲಗಳನ್ನು ಮುಗಿದು ದೇವಾ, ನೀವು ನನಗೆ ಒಂದು ಅಪೂರ್ವವಾದ ಕಥೆಯನ್ನು ಹೇಳಬೇಕು ಎನ್ನಲು ಹರನು ಮುಗುಳ್ನಕ್ಕು ಪಾರ್ವತಿಗೆ ಅಪೂರ್ವವಾದ ಕಥೆಗಳನ್ನು ಹೇಳುತ್ತಿದ್ದನು. ಆಗ ಆ ಕಥಾಗೋಷ್ಠಿಯಲ್ಲಿ ಪುಷ್ಪದಂತನೆಂಬ ಗಣಪ್ರಧಾನನು ಇದ್ದು ಎಲ್ಲವನ್ನೂ ಕೇಳಿ ಆತನು ಏನೋ ಒಂದು ಕಾರಣದಿಂದ ಮನುಷ್ಯಲೋಕದಲ್ಲಿ ಹುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿದ್ದು ಹರನು ಗೌರಿಗೆ ಹೇಳಿದ ಕಥೆಗಳನ್ನು ಪೈಶಾಚಿಕ ಭಾಷೆಯಲ್ಲಿ ಬೃಹತ್ಕಥೆಗಳನ್ನಾಗಿ ಮಾಡಿ ಹೇಳಿದನು. ಅವುಗಳನ್ನು ವಸುಭಾಗಭಟ್ಟನು ಕೇಳಿ ಆ ಕಥಾಸಮುದ್ರದಲ್ಲಿ ಪಂಚರತ್ನವಾದ ಐದುಕಥೆಗಳನ್ನು ಆರಿಸಿ ಪಂಚತಂತ್ರ ಎಂದು ಹೆಸರಿಟ್ಟು ಸಮಸ್ತ ಜನರ ಉಪಕಾರಕ್ಕಾಗಿ ಹೇಳಿದನು. ಅದರಿಂದ, ರಾಜರಿಗೆ ಹಿತಕರವೂ ಸಮಸ್ತ ಪಂಡಿತರಿಂದ ಪ್ರಶಂಸಿತವೂ ಆದ ವಸುಭಾಗಭಟ್ಟನ ಕೃತಿಯನ್ನು ಪ್ರಪಂಚದಲ್ಲಿ ಹೊಸತಾಗುವಂತೆ ಪಂಚತಂತ್ರವನ್ನು ಕನ್ನಡದಲ್ಲಿ ವಿರಚಿಸುವೆನು."

ಗ್ರಂಥದ ಆದಿಯಲ್ಲಿ ವಿಷ್ಣುವನ್ನು ಮೊತ್ತಮೊದಲು ಸ್ತುತಿಸಿ ಬಳಿಕ ಈಶ್ವರ, ಬ್ರಹ್ಮ, ಸರಸ್ವತಿ, ಚಂದ್ರ, ಮನ್ಮಥ, ಸೂರ್ಯ, ಗಣಪತಿ, ದುರ್ಗೆ ಇವರನ್ನು ಅನುಕ್ರಮವಾಗಿ ಸ್ತುತಿಸಿದ್ದಾನೆ. ಪ್ರತಿಯೊಂದು ತಂತ್ರದ ಕೊನೆಯಲ್ಲೂ ಈ ಗದ್ಯಭಾಗವಿದೆ :

"ಇದು ವಿನಮದಮರರಾಜಮೌಳಿಮಾಣಿಕ್ಯಮರೀಚಿಮಂಜರೀ ಪುಂಜರಂಜಿತ ಭಗವದ್ಭವಾನೀವಲ್ಲಭಚರಣಸರಸಿರುಹಷಟ್ಚರಣಂ ಶ್ರೀಮನ್ಮಹಾ ಸಂಧಿವಿಗ್ರಹಿ ದುರ್ಗಸಿಂಹ ವಿರಚಿತಮಪ್ಪ ಪಂಚತಂತ್ರದೊಳ್ .... ಪ್ರಕರಣಂ ..... ತಂತ್ರಂ ಸಮಾಪ್ತಂ."

ಗ್ರಂಥದ ಅಂತ್ಯದಲ್ಲಿ ಎರಡು ವೃತ್ತಗಳಲ್ಲಿ ತನ್ನ ಕಾವ್ಯದ ಫಲಶ್ರುತಿಯನ್ನು ಹೀಗೆ ಹೇಳಿದ್ದಾನೆ :

> ಜದವಟ್ ಕೊಳ್ಗೆ ಧಾತ್ರಿ ಪಿರಿದುಂ ಬೆಳಗುರ್ವರೆಯುಂ ಧರಾಧಿಪರ್
> ಮುದದೆ ಸಧರ್ಮದಿಂದೆ ಪರಿಪಾಲಿಸುತಿರ್ಕೆ ಸಮಸ್ತವೇದ ಶಾ-
> ಸ್ತ್ರದ ವಿಧಿಯಿಂದಿಳಾಮರಜನಂ ಸುರಪೂಜೆಯನೊಲ್ದು ಮಾಳ್ಕೆ ಸಂ-
> ಪದದೊಳನೂನರಕ್ಕೆ ಪರದರ್ ಸಲೆ ಧಾರ್ಮಿಕರಕ್ಕೆ ಜಾದಜರ್ ॥
>
> ವಿಪುಳಶ್ರೀಸುಖಮಕ್ಕೆ ಜೀವನಿವಹಕ್ಕೆಲ್ಲಂ ಕುಲಸ್ತ್ರೀಜನ -
> ಕ್ಕುಪಮಾತೀತಪತಿವ್ರತಾಗುಣದಿಂದೊಪ್ಪಕ್ಕೆ ವಾಗ್ದೇವಿ ಕೊ -
> ರ್ತು ಪಯೋಜಾಸನನಂತೆ ಮಾಳ್ಕೆ ಕಳೆಯೊಳ್ ವಿದ್ವಜ್ಜನಾನೀಕಮಂ
> ನೃಪಗೋಬ್ರಾಹ್ಮಣಶಾಂತಿಯಕ್ಕೆ ನೆಗಳ್ಗೀ ಕಾವ್ಯಂ ಧರಾಚಕ್ರದೊಳ್ ॥

ಪಂಚತಂತ್ರದ ಕಥಾಮುಖವಾದ ನರಿಯ ಕಥೆಯೇ ಎಂಥವರ ಕುತೂಹಲವನ್ನೂ ಕೆರಳಿಸುವಂತಿದೆ. ಅದರಿಂದಲೇ ಆ ಮೂವರು ಮೂರ್ಖರಾಜಕುಮಾರರ ಮನಸ್ಸನ್ನು ಸೆರೆಹಿಡಿದು ವಸುಭಾಗಭಟ್ಟನು ಅವರನ್ನು ಪಳಗಿಸುವಂತಾದುದು. ಕತೆಗಳನ್ನು ಅಡಕಲು ಪಾತ್ರೆಗಳಂತೆ ಒಂದರೊಳಗೆ ಒಂದನ್ನಿಟ್ಟು ನಮ್ಮ ಕುತೂಹಲದ ರಸ ಎಂದೂ ಬತ್ತಿಹೋಗದಂತೆ ನೋಡಿಕೊಂಡಿರುವುದು ದುರ್ಗಸಿಂಹನ ಜಾಣ್ಮೆಗೆ ಸಾಕ್ಷಿಯಾಗಿದೆ.

ದುರ್ಗಸಿಂಹನ ಕೃತಿ ಚಂಪೂ ರೀತಿಯದಾದರೂ ಇಲ್ಲಿ ಗದ್ಯವೇ ಪ್ರಧಾನವಾದುದು. ಅವನ ಪದ್ಯಗಳಿಗಿಂತ ಗದ್ಯಭಾಗವೇ ಹೃದ್ಯವಾದುದು. ಆದರಿಂದ ಅವನ ಶೈಲಿಯನ್ನು ನಾವು ವಿವೇಚಿಸಬೇಕಾದಲ್ಲಿ ಅವನ ಗದ್ಯದ ಕಡೆಗೆ ವಿಶೇಷವಾಗಿ ದೃಷ್ಟಿ ಹರಿಸಬೇಕು. ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆಗಳಿಂದ ಅವನು ತನ್ನ ಕಥೆಗಳಲ್ಲಿ ಬರುವ ಪಾತ್ರಗಳು ಹೇಳುವ ಮಾತಿನ ಸಮರ್ಥನೆಗೆ ಶ್ಲೋಕಗಳನ್ನು ಮಂಡಿಸುತ್ತಾನೆ. ಎಂಥ ಮೋಸ ಮಾಡುವ ಕರಟಕ ದವನಕಗಳೇ ಈ ರೀತಿ ಶ್ಲೋಕಗಳನ್ನು ಉದ್ಧರಿಸಿ ಮಾತನಾಡುವುದು ಹೆಚ್ಚು. ಇದು ಒಂದು ರೀತಿಯ ಆಷಾಢಭೂತಿತನದ ವಿಡಂಬನೆಯೂ ಇರಬಹುದು ಎಂಬಂತೆ ಅವುಗಳನ್ನು ಓದುವಾಗ ಅನ್ನಿಸುವುದುಂಟು. ಈ ಶ್ಲೋಕಗಳು ಸಾರ್ವಕಾಲಿಕ ಸತ್ಯಧರ್ಮಗಳ ದೀಪಸ್ತಂಭಗಳಂತೆ ಈ ಗ್ರಂಥದಲ್ಲಿ ವಿರಾಜಿಸಿ ನಿಂತಿವೆ. ಬಹುಶಃ ಈ ಶ್ಲೋಕಗಳನ್ನು ತೆಗೆದುಹಾಕಿದರೆ ಪಂಚತಂತ್ರ ಕಾವ್ಯ ಶೋಭಿಸದು ; ಮಹತ್ತ್ವ ಬಾರದು. ಉದಾ :

೧. ಸ್ವಭಾವಮನುವರ್ತಂತೇ ಪಾಂಡಿತ್ಯಂ ಕಿಂ ಕರಿಷ್ಯತಿ ॥

೨. ಪ್ರಾಣಾಘಾತಾನ್ನಿವೃತ್ತಿಃ ಪರಧನಹರಣೇ ಸಂಯಮಃ ಸತ್ಯವಾಕ್ಯಂ
ಕಾಲೇ ಶಕ್ತ್ಯಾಪ್ರದಾನಂ ಯುವತಿಜನಕಥಾ ಮೂಕಭಾವಃ ಪರೇಷಾಂ
ತೃಷ್ಣಾ ಸ್ರೋತೋ ವಿಭಂಗೋ ಚ ಗುರುಷು ವಿನಯಃ ಸರ್ವಭೂತಾನುಕಂಪಾ
ಸಾಮಾನ್ಯಂ ಸರ್ವಶಾಸ್ತ್ರೇಷ್ವನುಪಹತವಿಧಿಶ್ರೇಯಸಾಮೇಷಪಂಥಾಃ ॥

೩. ಅಸ್ಮಿನ್ಮಹತ್ಯಂಡಕಟಾಹ ಮಧ್ಯೇ ಸೂರ್ಯಾಗ್ನಿ ನಾ ರಾತ್ರಿ ದಿನೇಂಧನೇನ
ಮಾಸರ್ತು ದರ್ವೀ ಪರಿಘಟ್ಟನೇನ ಭೂತಾನಿ ಕಾಲಃ ಪಚತೀತಿ ವಾರ್ತಾ ॥

೪. ಪಂಚಮೇಹನಿ ಷಷ್ಠೇರಾ ಶಾಕಂ ಪಚತಿ ಯೋ ಗೃಹೇ
ಅನೃಣೋಹ್ಯಪರಪ್ರೇಷ್ಯಃ ಸ ರಾತ್ರಿಂಚರ ಮೋದತೇ ॥

೫. ಏಕಾ ಭಾರ್ಯಾಃ ತ್ರಯಃ ಪುತ್ರಾಃ ದ್ವೌ ಹಲೌ ದಶಧೇನವಃ
ಮಧ್ಯರಾಷ್ಟ್ರಂತು ಸುಕ್ಷೇತ್ರಂ ಅಸ್ತಿ ಚೇದತಿ ಸೇವ್ಯತೇ ॥

೬. ಶ್ರೂಯತಾಂ ಧರ್ಮ ಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥

೭. ಬ್ರಾಹ್ಮಣಾನ್ನವಮನ್ಯೇತ ನಾವಮನ್ಯೇತ ದೇವತಾಃ
ಸರ್ವದೇವಮಯೋ ವಿಪ್ರೋ ನ ತದ್ವಚನಮನ್ಯಥಾ ॥

೮. ಆಶಾಃ ಪೂರಯಿತುಂ ಗುಣಾನ್ ಪ್ರಕಟಿತುಂ ಮಾನೋನ್ನತಿಂ ರಕ್ಷಿತುಂ
ಕಾರ್ಯಂ ಸಾಧಯಿತುಂ ಖಲಾನ್ ಸ್ಖಲಯಿತುಂ ಲಕ್ಷ್ಮೀಂ ಸಮಾಸೇವಿತುಂ
ಸ್ವಪ್ರಾಣೈಃ ಪರಿಕಲ್ಪಿತಾಂಜಲಿ ವಿಕ್ರೀಯ ದೇಹಸ್ಥಿತಿಂ ಸಂತೋ ಭೂಪತಿಮಾಶ್ರಯಂತಿ
ನ ಪುನರ್ದೈನ್ಯಾಯ ದುಃಖಾಯ ಚ ॥

೯. ಉದ್ಯೋಗೀ ಪ್ರಾಪ್ನುಯಾದರ್ಥಂ ಯಶೋ ವಾ ಮೃತ್ಯುಮೇವ ವಾ
ಮೃತ್ಯುಮೇವ ನಿರುದ್ಯೋಗೀ ನ ಯಶೋ ನಾರ್ಥಸಂಪದಃ ॥

೧೦. ವರಮಗ್ನೌ ಪ್ರದೀಪ್ತೇತು ಪ್ರಾಣಾನಾಂ ಪರಿವರ್ಜನಂ ನ ಚಾರಿಜನಸಂಸರ್ಗೇ
ಮುಹೂರ್ತಾಮಪಿ ಸೇವನಂ ॥

೧೧. ಧರ್ಮಾರ್ಥಂ ಕ್ಷೀಣಕೋಶಸ್ಯ ಕೃಶತ್ವಮತಿಶೋಭತೇ ಸುರೈಃ ಪೀತಾವಶೇಷಸ್ಯ ರೇಖಾ
ಹಿಮರುಚೇರಿವ ॥

೧೨. ಉದಯೇ ಸವಿತಾ ರಕ್ತೋರಕ್ತಾಶ್ಚಾಸ್ತಮಯೇ ತಥಾ
ಸಂಪತ್ತೌಚ ವಿಪತ್ತೌಚ ಮಹತಾಮೇಕರೂಪತಾ ॥

೧೩. ಪೌಲಸ್ತ್ಯಃ ಕಥಮನ್ಯದಾರಹರಣೇ ದೋಷಂ ನ ವಿಜ್ಞಾತವಾನ್
ಕಾಕುತ್ಸ್ಥೇನ ಹೇಮಕಾಂತಿ ಹರಿಣಸ್ಯಾ ಸಂಭವೋ ಲಕ್ಷಿತಃ
ಅಕ್ಷಾಣಾಂ ನ ಯುಧಿಷ್ಠಿರೇಣ ವಿಷಣೋಮೋ ದೃಷ್ಟೋ ವಿಪಾಕಃ ಕಥಂ
ಪ್ರತ್ಯಾಸನ್ನವಿಪತ್ತಿಮೂಢಮನಸಾಂ ಪ್ರಾಯೋ ಮತಿಃ ಕ್ಷೀಯತೇ ॥

೧೪. ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥

ಈ ಶ್ಲೋಕಗಳನ್ನು ದುರ್ಗಸಿಂಹನು ಎಲ್ಲಿಂದ ತೆಗೆದುಕೊಂಡನು ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟ. ಸುಮಾರು ಅರ್ಧಾಂಶದಷ್ಟಕ್ಕೆ ಆಕರಗಳು ಸಿಗುತ್ತವೆ. ಉಳಿದವನ್ನು ಎಲ್ಲಿಂದ ಎತ್ತಿಕೊಂಡನೆಂಬುದಕ್ಕೆ ಸಂಶೋಧನೆಯ ಅವಶ್ಯಕತೆ ಇದೆ. ಇವನ್ನು ನೋಡುವಾಗ ಒಂದು ವಿಚಾರ ನೆನಪಿಗೆ ಬರುತ್ತದೆ. ನವ್ಯಪಂಥದ ಕಾವ್ಯ ಎಂದು ಹೇಳಲಾದ ಕಾವ್ಯರೀತಿಯಲ್ಲಿ ಉದ್ಧೃತಗಳನ್ನು ಬಳಸುವುದಿದೆ. ಟಿ.ಎಸ್. ಎಲಿಯಟ್ ತನ್ನ ವೇಸ್ಟ್‌ಲ್ಯಾಂಡ್ ಕವನದಲ್ಲಿ 'Datta Dayadhvam Damyata Shantih Shantih Shantih' ಎಂಬ ಸಾಲುಗಳನ್ನು ಪರಿಣಾಮಕಾರಿಯಾಗಿ ಬೃಹದಾರಣ್ಯಕ ಉಪನಿಷತ್ತಿನಿಂದ ತೆಗೆದು ಉದ್ಧರಿಸಿದ್ದಾನೆ. ಈ ಉದ್ಧರಿಸುವ ಕ್ರಮ ನಮ್ಮ ಕವಿಗಳಿಗೇನೂ ಹೊಸತಲ್ಲ ಎಂಬುದನ್ನು ದುರ್ಗಸಿಂಹ, ಬಸವಣ್ಣ, ಶಿವಶರಣರು, ದಾಸರು, ಸರ್ವಜ್ಞರಂಥ ಕವಿಗಳ ಕೃತಿಗಳನ್ನು ಕಂಡರೆ ತಿಳಿಯುವುದು. ದುರ್ಗಸಿಂಹನು ತನ್ನ ಗ್ರಂಥದ ಉದ್ದಕ್ಕೂ ಇಂಥ ಉದ್ಧೃತಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ.

ದುರ್ಗಸಿಂಹನು ತನ್ನ ಗ್ರಂಥದಲ್ಲಿ ಒಮ್ಮೆ ಬಳಸಿದ ಮಾತನ್ನು ಮತ್ತೊಮ್ಮೆ ಬಳಸುವ ಹಾಗೆ ಪ್ರಯೋಗಿಸಲಿಕ್ಕಿಲ್ಲ. ಶಿವಭೂತಿ ಕಥೆ, ನರಿಯ ಕಥೆ, ಕಪಿಯ ಕಥೆಗಳಲ್ಲಿ ಮುಖ್ಯವಾಗಿ ಈ ಅಂಶವನ್ನು ಓದುಗರು ಗಮನಿಸಬಹುದು. ಶಿವಭೂತಿಯ ಕಥೆಯಲ್ಲಿ ಹುಲಿ ಎಂಬುದಕ್ಕೆ ಶಾರ್ದೂಲ, ಪುಂಡರೀಕ, ವ್ಯಾಘ್ರ, ಚಮೂರ ಎಂಬ ಮಾತುಗಳನ್ನೂ, ನರಿಯ ಕಥೆಯಲ್ಲಿ ನರಿ ಎಂಬುದಕ್ಕೆ ಜಂಬುಕ, ಕ್ರೋಷ್ಟು, ಸೃಗಾಲ, ಬಳ್ಳು - ಎಂಬ ಮಾತುಗಳನ್ನೂ, ಕಪಿಯ ಕಥೆಯಲ್ಲಿ ಕಪಿ ಎಂಬುದಕ್ಕೆ, ಕೋಡಗ, ಮರ್ಕಟ, ಗೋಲಾಂಗೂಲ, ಬಲೀಮುಖ - ಎಂಬ ಮಾತುಗಳನ್ನು ಬಳಸಿರುವುದನ್ನೂ ನೋಡಬಹುದು. ಇದರಿಂದ ಕವಿಯ ಶಬ್ದಸಂಪತ್ತು ಅರ್ಥವಾಗುತ್ತದೆ. ಇದು ಪರೋಕ್ಷವಾಗಿ ಓದುಗರನ್ನು ಪಂಡಿತರನ್ನಾಗಿ ಮಾಡುತ್ತದೆ. ಇದೇ ರೀತಿ ಎಲ್ಲ ಕಥೆಗಳಲ್ಲೂ ಬರುವ ಮನುಷ್ಯ, ಪ್ರಾಣಿ, ಪಕ್ಷಿ, ಕೀಟಗಳಿಗೆ ಅವುಗಳ ಪರ್ಯಾಯ ನಾಮಗಳನ್ನು ಬಳಸುವುದನ್ನು ಓದುಗರು ಗಮನಿಸಬೇಕು.

ದುರ್ಗಸಿಂಹನ ಶೈಲಿಯ ಪ್ರಧಾನಗುಣ ವಿಡಂಬನ ವೀರತೆ (mock heroism). ಸಣ್ಣಮಾತಿನಲ್ಲಿ ಹೇಳಬಹುದಾದುದನ್ನು ದೊಡ್ಡ ಮಾತಿನಲ್ಲಿ ಸಂಸ್ಕೃತ ಭೂಯಿಷ್ಠ ಸಮಾಸ ಪುಂಜ ಪಿಂಜರಿತ ರೀತಿಯಲ್ಲಿ ಹೇಳಿ ಲೇವಡಿ ಮಾಡುತ್ತಾನೆ. ಸಣ್ಣ ಯಃಕಶ್ಚಿತ್ ಪ್ರಾಣಿಯೋ ಕೀಟವೋ ಪಕ್ಷಿಯೋ ಆ ಮಾತಿನ ಭಾರವನ್ನು ಹೊರಲಾರದಂತೆ ಗುಣವಿಶೇಷವನ್ನು ಅಡಕುತ್ತಾನೆ. ಪರೋಕ್ಷವಾಗಿ ಪ್ರಾಣಿ ಪಕ್ಷಿ ಕೀಟಗಳ ನೆಪದಿಂದ ಮನುಷ್ಯನ ಸಣ್ಣತನವನ್ನೋ, ನೀಚತನವನ್ನೋ, ಮೋಸ, ಸುಳ್ಳು, ಅನ್ಯಾಯವನ್ನೋ ಮನಸ್ಸು ಮುಟ್ಟುವಂತೆ ಎತ್ತಿ ಅಣಕುಮಾಡುತ್ತಾನೆ. ಇದು ಎಲ್ಲ ಪಂಚತಂತ್ರದ ಕಥೆಗಳಿಗೆ ಅನ್ವಯಿಸುತ್ತದಾದರೂ ದುರ್ಗಸಿಂಹನ ಶೈಲಿಯಲ್ಲಿ ಒಂದು ಪಟ್ಟು ಹೆಚ್ಚಾಗಿಯೇ ಇದೆ. 'ಬ್ರಾಹ್ಮಣೋತ್ತಮನಪ್ಪ ನಾವೊಂದು ಪಾಪ ನಿವಾರಣಾರ್ಥವಾಗಿ ಗೋವಿನ ಜಠರಮಂ ಪೊಕ್ಕಿರ್ದೆವು' ಎಂದು

ಸತ್ತ ಎತ್ತಿನ ಹೊಟ್ಟೆಯೊಳಗಿಂದ ಹೊರಬರಲಾರದೆ ಒದ್ದಾಡುವ ನರಿ ಈ ಮಾತನ್ನು ಹೇಳುವಾಗ ನಾವು ನಗದಿರಲಾರೆವು. ಸಂಜೀವಕನೆಂಬ ಎತ್ತು 'ಕಾಳಿಂದೀನದೀ ಕಚ್ಛದೊಳಾತ್ಮೇಚ್ಛೆಯಿಂ ನಲಿನಲಿದು ರುಚಿರಮರಕತಶ್ಯಾಮದೂರ್ವಾಂಕುರ ಗ್ರಾಸದೊಳಂ ಅತಿಸ್ವಚ್ಛಸ್ವಾದುಸಲಿಲಪಾನದೊಳಂ ಮೆಲ್ಲಮೆಲ್ಲನೆ ಪಥಪರಿಶ್ರಮಮನಾಜಿಸಿಕೊಂಡು ಕೆಲವು ದಿವಸಕ್ಕೆ ಬಾಲೇಂದುಶೇಖರ ಶಕ್ವರಾಕಾರಮಂ ತಾಳ್ದಿ' ಭಯಂಕರವಾಗಿ ತೋರಿತು ಎಂಬಾಗ ಮುಂದ ಸಿಂಹವು ಅದರ ಗುಟುರನ್ನು ಕೇಳಿ ಗಾಬರಿಗೊಂಡುದೂ, ದವನಕನು ಅದರ ಹೆದರಿಕೆಯನ್ನು ದುರುಪಯೋಗ ಪಡಿಸಿಕೊಂಡುದೂ ಸಹಜವೆನ್ನಿಸುತ್ತದೆ. 'ಪಿಂಗಳಕನತಿವಿಸ್ಮಯಂಬಟ್ಟು ಧಾತು ರಕ್ತಾಶೋಕಕಿಸಲಯವಿಭಾಸಿಭಾಸುರಸಟಾಕಲಾಪ ಮಲ್ಲಾಡೆ ತಲೆಯಂ ತೂಗಿ' ಎಂಬಲ್ಲಿ ಸಿಂಹದ ಮೂರ್ತಿ ಚಿತ್ರವತ್ತಾಗಿ ಕಣ್ಣೆದುರು ನಿಲ್ಲುತ್ತದೆ.

'ನರಿಯೂ ಬಿಲವೂ' ಎಂಬ ಕಥೆಯಲ್ಲಿ ಹುಲಿ ಒಳಗಿರಬಹುದೆಂಬುದನ್ನು ಗೊತ್ತುಮಾಡಿಕೊಳ್ಳಲು ನರಿ ಮಾಡುವ ಉಪಾಯವೂ ವರ್ತಿಸುವ ರೀತಿಯೂ ಹೃದಯಂಗಮವಾಗಿದೆ : "ಬಿಲನೆ, ನೀನಿನಿತು ಕಾಲಂ ನಾಂ ಬರ್ಪಾಗಳಿದಿರ್ವಂದು ಸೇವೆಯಂ ಮಾಡುತಿರ್ದಯ್; ಈಗಳದುಗೆಟ್ಟು ಕರೆದೊಡಂ ಮೊದಲಾಗಿ ಸರಂದೋಱದಪೆಯಿಲ್ಲ; ಪೆಱನೊರ್ವಂಗೆ ಕೂರ್ತೆಯಕ್ಕುಂ ಮೇಣ್ ಬಲ್ಲಿದನಿರ್ದ ನಕ್ಕುಮಲ್ಲದೊಡೀಗಳೇಕುಸಿರದಿರ್ದಪೆ? ಆದೊಡಮೇಂ, ನಿನ್ನ ಗುಣಕ್ಕಿನ್ನೊರ್ಮೆ ಕರೆವೆಂ, ಇನ್ನುಮುಸಿರದಿರ್ದೊಡೆ ಪೆಱತೊಂದು ಬಿಲನನಱಸಿಕೊಳ್ವೆಂ ..." ಆಹಾರವಿಲ್ಲದ ನರಿಯನ್ನು ಕಾಗೆಯು "ಎಲೆ ಭಾವ! ಏಂ ಬಡವಾದಿರಿ?" ಎಂದು ಕೇಳುವುದು ತಮಾಷೆಯಾಗಿದೆ. ದವನಕನು ಸಂಜೀವಕನ ಹತ್ತಿರಕ್ಕೆ ಬಂದು ನಿಶ್ಚಯವಾಗಿಯೂ ಅದು ಎತ್ತಾಗಿರುವುದನ್ನು ಕಂಡಾಗ ಕವಿ ಹೀಗೆ ವರ್ಣಿಸಿದ್ದಾನೆ. "ನರಿ ಹರಿಯ ಮರುಳ್ತನಕ್ಕೆ ನಕ್ಕು ನಾನೀಯೆಟ್ಟನೆಟ್ಟಂ ಕಂಡೆನೆಂದು ನಿಷ್ಕಪಟವೃತ್ತಿಯಂ ಕೂರ್ತು ನಮ್ಮರಸಂಗೆ ಪೇೞ್ದನಿಪ್ಪೊಡಿತಿ ನಾನೇತರ್ಕಂ ಬಾರ್ತೆಯಾಗಲಱಿಯೆಂ." ಕವಿಯು ಇಲ್ಲಿ ರಾಜರಿಗೆ ಮಂಡೆ ಇಲ್ಲವೆಂದೂ, ಅವರ ಮೂರ್ಖತನವನ್ನು ದುರ್ಜನರು ದುರುಪಯೋಗಪಡಿಸಿಕೊಳ್ಳುವರೆಂದೂ ಎಷ್ಟು ಚೆನ್ನಾಗಿ ಗೇಲಿ ಮಾಡಿದ್ದಾನೆ ! ಆ ಮೃಗಧೂರ್ತನು ಅಲ್ಲಿಂದ ಹೊರಟು ಪಿಂಗಳಕನ ಆಸ್ಥಾನಕ್ಕೆ ಬಂದು "ವಿನಯವಿನಮಿತೋತ್ತಮಾಂಗನಾಗಿ ದವನಕಂ ಸಮುಚಿತಾಸನದೊಳ್ ಕುಳ್ಳಿರ್ದಿಂತೆಂದಂ" ಎಂಬಲ್ಲಿ ವಿನೀತವಾದ ಆ ಉತ್ತಮಾಂಗದಲ್ಲಿರುವ ಕಪಟವನ್ನು ಚೆನ್ನಾಗಿ ಧ್ವನಿಸಿದ್ದಾನೆ. ಹೀಗೆ ದವನಕನು ಇಲಿಯನ್ನು ಹುಲಿಯೆಂಬಂತೆ ಆ ಎತ್ತನ್ನು ವರ್ಣಿಸಿದಾಗ ಆ ಸಿಂಹಕ್ಕೆ ಆದ ಗಾಬರಿಯನ್ನು ಬಹಳ ಚೆನ್ನಾಗಿ ಮೂಡಿಸಿದ್ದಾನೆ : "ಪಿಂಗಳಕಂ ಭಗ್ನಮನನಾಗಿ ಕಿಱಿದು ಬೇಗಂ ಪಂದೆಯಂ ಪಾವಡರ್ದಂತೆ ಮೇಗುಸಿರ್ವಿಟ್ಟು ಹಮ್ಮೈದಂಬೋಗಿ ಮುಮ್ಮನೆ ಬೆಮರ್ತು ತನ್ನಿಂ ತಾಂ ಚೇತರಿಸಿ ಕಾತರತೆಯಂ ಮಾಣ್ದು ದವನಕಂಗೆ ಪಿಂಗಳಕನಿಂತೆಂದಂ". ದವನಕನು ಪಿಂಗಳಕನಿಗೆ ಹೆದರುವ ಕಾರಣವಿಲ್ಲವೆಂದು ಧೈರ್ಯವನ್ನು ತುಂಬಿದಾಗ ಅವನಿಗಾದ ಹರ್ಷ, ಅಭಯ, ಉತ್ಸಾಹಗಳ ಮಿಶ್ರಭಾವವನ್ನು ಇನ್ನಿಲ್ಲದ ರೀತಿಯಲ್ಲಿ ಕವಿ ಹೇಳಿದ್ದಾನೆ :

ಚಳದಳಕಂ ಹರ್ಷೋದ್ಧತ
ಪುಳಕಂ ನಖಮುಖವಿದಾರಿತೋಗ್ರೇಭಶಿರಃ
ಫಳಕಂ ಮೃಗತಿಳಕಂ ಪಿಂ
ಗಳಕಂ ಪೋಗೆಂದು ಕಳುಪಿದಂ ದವನಕನಂ ॥

ದೇವಶರ್ಮನ ಕಥೆಯಲ್ಲಿ ಬರುವ ತಂತುವಾಯಿಕೆಯ ವೃತ್ತಾಂತದಲ್ಲಿ ತಂತುವಾಯನು ಬಯ್ಯುವ, 'ನಿನ್ನ ಬೇಟದ ಮಿಂಡನಾವನವನಂ ಪೇೞ್' ಎಂಬ ಮಾತಿನಲ್ಲಿ ದೇಸಿಯ ಒಗರಿದೆ. ತಂತುವಾಯಿಕೆಯ ಕಪಟ ಪ್ರತಿಜ್ಞೆಯಲ್ಲೂ ಅದೇ ರುಚಿಯಿದೆ : "ಅನಂತಪ್ಪ ಒರ್ಬ ತಾಯ್ಗಂ ತಂದೆಗಂ ಪುಟ್ಟಿದೆನಾದೊಡೆ ನಾಂ ಪತಿವ್ರತೆಯಾದೊಡೆ, ಮನೆದೈವಂಗಳೆನಗೆ ಸನ್ನಿದಮಾದೊಡೆನ್ನ ಮೂಗು ಮುನ್ನಿನಂತಾಗಲೀ ಕಟ್ಟಿರ್ದ ಕಟ್ಟೆಲ್ಲಂ ಬಿಟ್ಟು ಪೋಗಲೆವೇೞ್ಕುಂ...." ಮುಂದೆ ಆ ತಂತುವಾಯನು ಹೆಣ್ಣಿನ ಮನಸ್ಸನ್ನು ತಿಳಿಯದೆ ಶರಣಾಗತನಾದನಂತೆ. ಇದರ ಈ ಕತೆಯ ಪರಾಕಾಷ್ಠೆ :

ವನಜಾಕ್ಷಿ ! ದೋಷಿಯಲ್ಲದ
ನಿನಗೆ ಕರಂ ಪೊಲ್ಲಗೆಯ್ದನೆಂದಿರದಾತ್ಮಾ -
ಗನೆಯ ಪದಕ್ಕೆಱಗಿದನೆ -
ನ್ನನುಮಱೆಗುಮೆ ಧೂರ್ತೆಯಪ್ಪ ಕಾಂತೆಯ ಮನಮಂ !

ಶಿವಭೂತಿಯ ಕಥೆಯಲ್ಲಿ ಪುರಾಣಕೂಪದಲ್ಲಿ ಬಿದ್ದ ನಾಲ್ಕು ಪ್ರಾಣಿಗಳನ್ನು ಹೇಳುವಾಗ ಕಪಿಯನ್ನು ಕುರಿತು ಅದರ ಸ್ವಭಾವಕ್ಕನುಗುಣವಾಗಿ ರಸವತ್ತಾಗಿ ಬರೆದಿದ್ದಾನೆ:

"ಅನ್ನೆಗಮೊಂದು ಚಪಲಕನೆಂಬ ಕಪಿ ನೀರ್ಗುಡಿಯಲೆಂದು ಬಾವಿಯಂ ಪುಗುತಂದು ತತ್ಕೂಪ ಸಮೀಪದೊಳ್ ನಿಂದು ಪೋಗಲಿಂಬಿಲ್ಲದೆ ತಡಿವಿಡಿದೆಳಲುತ್ತಿರ್ದ ಸರ್ಪನ ಬಾಲಮಂ ಬಳ್ಳಿಯೆಂದು ಬಗೆದು ಪಿಡಿದಿೞಿಯುತ್ತುಮಹಿಸಹಿತಂ ಬಿರ್ದುದು."

ಎರಡು ಗಿಣಿಗಳ ಕಥೆಯಲ್ಲಿ ಬರುವ ಮುನಿಯ ಆಶ್ರಮವನ್ನು ವರ್ಣಿಸುತ್ತ ವೃದ್ಧ ತಾಪಸರ ಕಯ್ಯನ್ನು ಹಿಡಿದುಕೊಂಡು ಗೋಲಾಂಗೂಲಗಳು ನಡೆಯಿಸುತ್ತಿದ್ದವು ಎನ್ನುತ್ತಾನೆ. ಇಲ್ಲಿ ಮನುಷ್ಯ ಮುದುಕನಾದಾಗ ಮಂಗನಿಗೆ ಸಮಾನ ಎಂಬುದನ್ನು ಒಳದನಿಯಿಂದ ಹೇಳಿ ನಕ್ಕಂತಿದೆ ! 'ಕೃಷ್ಣೋರಗನನೊಳಕೊಂಡ ಒಳ್ಳೆಗಳ ಕಥೆ' ಯಲ್ಲಿ "ಪ್ರಜಾಪಾಲನೆಂಬರಸು ಲೀಲೋದ್ಯಾನವನದೊಳ್ ಜಲಕೇಳಿನಿಮಿತ್ತಂ ಕ್ರೀಡಾಸರೋವರವಂ ಮಾಡಿಸಿ ನೀರಂ ತೀವಿ ಮತ್ತಲ್ಲಿ ಜಲಕೇಳಿಯಾಡುವ ಗಾಡಿಕಾರ್ತಿಯರಂ ಕಾದಲೆಂದೊಳ್ಳೆಗಳಂ ತಂದು ಬಿಡಿಸಿಯವರ್ಕೆ ಪಾಲನೆರೆದು ನಡೆಪುತ್ತಿರ್ಪನ್ನೆಗಂ...." ಎಂಬಲ್ಲಿ ಅತೃಪ್ತ ಕಾಮದ ಕಾಮಿನಿಯರ ಚಿತ್ರವನ್ನು ಕೊಟ್ಟು ಹಾವನ್ನು ಲಿಂಗಸಂಕೇತಮಾಡಿ ಕವಿ ಅತ್ಯಂತ ಆಧುನಿಕ ಮನೋಭಾವದವನಾಗಿದ್ದಾನೆ.

'ಒಟ್ಟೆಯುಂ ಕಾಗೆಯುಂ' ಎಂಬ ಕಥೆಯಲ್ಲಿ ಬರುವ ಒಂಟೆಯನ್ನು ಒಂದು ಕಾಗೆಯು ಸಿಂಹದ ಆಸ್ಥಾನಕ್ಕೆ ಕರೆದುತರುತ್ತದೆ. ಆಗ ಅದನ್ನು ನೋಡಿ ಸಿಂಹಕ್ಕೆ ಹೀಗೆನ್ನಿಸಿತಂತೆ: "ಅದಱ ವಿಕಟರೂಪಮಂ ಕಂಡು ಮದೋತ್ಕಟನುತ್ಕಟಹರ್ಷನಾಗಿ ನಮಗೊಂದು ವಿನೋದಪಾತ್ರಮಿದೊಂದಾದುದೆಂದು ಸಂತೋಷಂಬಟ್ಟು...". ನಾಲ್ವರು ಧೂರ್ತರೂ ಬ್ರಾಹ್ಮಣನು ಎತ್ತಿಕೊಂಡು ಹೋಗುತ್ತಿದ್ದ ಆಡನ್ನು ನಾಯಿಯೆಂದಾಗ ಆತ

ಒಮ್ಮೆ ಭ್ರಮೆಗೊಳ್ಳುವಂತಾದ ಸಂದರ್ಭವನ್ನು ಸೊಗಸಾಗಿ ಕವಿಯು ಹೇಳಿದ್ದಾನೆ : "ಭಟ್ಟಂಗೆ ಭ್ರಾಂತಿ ಪುಟ್ಟಿ ನಿಂದು ಪೆಗಲೊಳಿರ್ದ ಭಾಗಲಮಂ ಭೂಭಾಗದೊಳಿಟಿಪಿ,

ಶ್ರವಣ ಶಿರಃ ಪುಚ್ಛಾಸ್ಯಾ -
ದ್ಯವಯವಮಂ ಮುಟ್ಟಿ ನೋಡಿ ನಾಯಲ್ಲಿದು ಭೂ -
ಭುವನ ಪ್ರಸಿದ್ಧಮಜಮೆಂ -
ದವಧಾರಿಸಿ ಹೊತ್ತುಕೊಂಡು ಪೋದಂ ಪಾರ್ವಂ ॥"

'ಟಿಟ್ಟಿಭ ಮಿಥುನಗಳ ಕಥೆ'ಯಲ್ಲಿ ಬರುವ "ಎನ್ನ ಮಾತಂ ಕೇಳದೆ ಕಲಹಕ್ಕೆ ಕಚ್ಚೆಯಂ ಕಟ್ಟುವ ನಿನಗೆ ಕಚ್ಛಪ ಕಥೆಯಾಗದೆ ಪೋಗದು" ಎಂಬ ಮಾತಿನ ರೀತಿ ಸೊಗಸಾಗಿದೆ. 'ಸೊಸೆಯ ಮಾತಂ ಕೇಳದತ್ತೆಯ ಕಥೆ'ಯಲ್ಲಿ ಅತಿಯಾಸೆಯಿಂದ ಬಂದ ಜೀವಂತ ಅತ್ತೆಯನ್ನು ಕಂಡು ರಕ್ಕಸಿಯರು, "ಸಗ್ಗಮಿದಿರಂ ಬಂದುದು .... ಬಿಲದೊಳಗಿರ್ದ ಇಲಿಯಂ ತೆಗೆವಂತೆ ಪೊಟಿಲೊಳಗಿರ್ದ ಕುಮತಿಯಂ ಕಾಲಂ ಪಿಡಿದು ತೆಗೆದು ಇರ್ಬಗಿ ಮಾಡಿ ಕೊಂದು ತಿಂದರ್" ಎಂಬುದನ್ನು ಓದುವಾಗ ಕೆಟ್ಟ ಅತ್ತೆಯರ ಕಾಟವನ್ನನುಭವಿಸಿದ ಸಾಧುಸೊಸೆಯರಿಗೆ 'ಹಾಗೇ ಆಗಬೇಕು' ಎಂಬಂತೆ ಬರೆದಿದ್ದಾನೆ. 'ಯದ್ಭವಿಷ್ಯನೆಂಬ ಮತ್ಸ್ಯದ ಕಥೆ'ಯಲ್ಲಿ ಪ್ರಾಣ ಉಳಿಸಿಕೊಳ್ಳಲು ಉಪಾಯ ಮಾಡಿದ ಮೀನಿನ ಚಿತ್ರ ಯಥಾವತ್ತಾಗಿದೆ. "ಮೀಂಗುಲಿಗರ್ ಬಲೆಯಂ ತೆಗೆದು ನೋಡಿ ಮುನ್ನಮೆ ಸತ್ತಂತಿರ್ದುತ್ಪನ್ನಮತಿಯಂ ಕಂಡು ಬಲೆಯಿಂ ತೆಗೆದು ನೆಲದೊಳಿರಿಸುವುದುಮದುಮೊಳೆದು ಜಳದೊಳ್ ಮುಟುಂಗಿ ಪೋದುದು." ಇಲ್ಲಿ ದುರ್ಗಸಿಂಹನು ಬ್ರಾಹ್ಮಣನಾದರೂ ಮೀನು ವರ್ತಿಸುವುದನ್ನು ಕಣ್ಣಾರೆ ಕಂಡು ಬರೆದಿದ್ದಾನೆ ಎನಿಸುತ್ತದೆ. 'ಬಕನ ತತ್ತಿಯುಂ ಮುಂಗುರಿಯುಂ' ಎಂಬ ಕಥೆಯಲ್ಲಿ ಬರುವ ಬಕ ಕರ್ಕಟಕಗಳ ಸಂಭಾಷಣೆಯನ್ನು ಕೇಳಿರಿ: "ಬಕಂ ಕಲುಷಿತ ಚಿತ್ತನಾಗಿಯೇಗೆಯ್ವೆಲುಮಱಿಯದೊಂದು ದಿವಸಂ ಸಮುದ್ರತೀರದೊಳ್ ನಿಂದು ಜಾನಿಸುತಿರ್ಪುದನೊಂದು ಕರ್ಕಟಕಂ ಕಂಡೇಂ ಭಾವಾ ! ನೀನಿಂದಾಹಾರ ಚಿಂತೆಯ ಮಾಣ್ದು ವೇಹಾರಂಗೆಯ್ವರಂತೆ ಕಣ್ಣಂ ತಿಣ್ಣಂ ಮುಚ್ಚಿಕೊಂಡಿರ್ಪ ಕಾರಣಮಾವುದು...."

'ಸೋಮಶರ್ಮನ ತಂದೆಯ ಕಥೆ'ಯಲ್ಲಿ ಮುಂಗುಸಿಯು ಮಗುವನ್ನು ಸರ್ಪದ ಬಾಯಿಯಿಂದ ರಕ್ಷಿಸಿದ ವೃತ್ತಾಂತವನ್ನು ಹೇಳುವಾಗ ದುರ್ಗಸಿಂಹನ ಕಥನಕಲೆ ಉನ್ನತಿಯನ್ನು ಮುಟ್ಟುವುದು ಕಾಣಬಹುದು. ಇಲ್ಲಿ ಸರ್ಪದ ಭೀಕರತೆಯನ್ನೂ, ಮುಂಗುಸಿಯ ಧೈರ್ಯವನ್ನೂ, ಮಗುವಿನ ಮುಗ್ಧತೆಯನ್ನೂ, ಬ್ರಾಹ್ಮಣನ ಅವಿವೇಕವನ್ನೂ ಒಟ್ಟೊಟ್ಟಿಗೆ ಚಿತ್ರಿಸಿ ಓದುಗರ ಹೃದಯ ಕರಗುವಂತೆ ಬರೆದಿದ್ದಾನೆ :

ಸ್ಫುರಿತ ವಿಷಾವಿಲ ದಂಷ್ಟ್ರಾಂ
ಕುರ ಸಂಕುಳ ಭೀಕರಾನನಂ ಸಾರ್ದತ್ತೊಂ
ದುರಗಂ ಮೆಲ್ಲನೆ ಬಾಲಾ
ಸ್ತರಣಾಂಕಿತಮಂ ಕೃತಾಂತ ಪಾಶಪ್ರತಿಮಂ ॥

ಅಂತು ಸಾರ್ತರ್ಪ ಭುಜಂಗನನಾ ಮುಂಗುರಿ ಕಂಡು ನಿಸರ್ಗವೈರಮಂ ನೆನೆದಿರದೆ ಸರ್ಪನಂ ಶತಖಂಡಂ ಮಾಡಿ ಕೊಂದು ತಿನುತ್ತಿರ್ಪುದುಂ ಕಿಜೆದಾನುಂ ಬೇಗಕ್ಕೆ ಪಾರ್ವಂ ಬರ್ಪುದುಂ, ತನ್ನ ಸಾಹಸಮಂ ತನ್ನಾಳ್ದಂಗೆ ತೋಱಲೆಂದು ರುಧಿರಾರುಣಿತಮಾದ ನಖಮುಖಮುಂ ಪಲ್ಗಳೊಳ್ ಪತ್ತಿರ್ಪ ಖಂಡಂಗಳ್ವೆರಸು ಪರಿತಂದು ಕಾಲ ಮೇಲೆ ಪೊರಳ್ದು ಚಾಟುಕಾರಂಗೆಯ್ವುದುಂ, ಪಾರ್ವಂ ಕಂಡೀ ಕಾವಲ್ ಕೂಸಂ ಕೊಂದುದಾಗಲೆವೇಟ್ಕುಮೆಂದು ವಿಚಾರವಿಕಳಂ ನಕುಲನ ಶಿರಮಂ ಬಿರಿಯೆ ಪೊಯ್ದು ಮಾಣದೆ ಪರಿತಂದು ನೋಡಿ ತೊಟ್ಟಿಲೊಳ್ ಸುಖನಿದ್ರಿತನುಮಕ್ಷತ ಶರೀರನುಮಾಗಿದ್ದ ಮಗನುಮನಾ ಕೆಲದೊಳ್ ಶತಖಂಡಮಾಗಿರ್ದ ಪಾವುಮಂ ಕಂಡು ಬಚಿಕ್ಕೆ ಪಾರ್ವಂ ಮುಂಗುರಿಯ ಮೇಲೆ ನೀರಂ ತಳಿದು ಬೀಸೆ ನಿರ್ಜೀವಮಾದುದಂ ಕಂಡು ಬಚಿಕ್ಕೆ ಪಾಪಕರ್ಮಂ ತಾಂ ಕೋಪವಶದಿಂ ಕೂಸಿನಂತೆ ನಡಪಿದ ನಕುಲನಂ ಪರೀಕ್ಷಿಸದೆ ಕೊಂದೆನೆಂದು ಶೋಕಂಗೆಯ್ಯುತ್ತುಮಿರ್ಪಿನಂ....”

ಕಾಗೆಗಳ ರಾಜ ಮೇಘವರ್ಣನ ವರ್ಣನೆಯಲ್ಲಿ ಆಡಂಬರವಿದೆ, ಅಣಕವಿದೆ, ರಾಜರನ್ನು ನೋಡಿದ ವಿಡಂಬನ ದೃಷ್ಟಿಯಿದೆ :

> **ಶಮಿತಾರಾತಿಪ್ರಭಾವಂ ಪರಿಜನಸಹಿತಂ ರಾಗದಿಂದಿರ್ಪನತ್ಯು**
> **ತ್ತಮಶುದ್ಧಾಮಾತ್ಯವರ್ಗಂ ಪರಚರನಿಚಯಂ ಗುಪ್ತಮಂತ್ರಂ ಸುಮಿತ್ರೋ**
> **ದ್ಯಮನುದ್ಯತ್ಸಾಕವೃಂದಾರಕಪತಿ ಪಸರಿಂ ಮೇಘವರ್ಣಂ ಪಯೋದಾ –**
> **ಗಮಶುಂಭನ್ಮೇಘವರ್ಣಂ ಖಗಗಣಿಕಾವ್ರಾತ ಸಂಗೀತವರ್ಣಂ ॥**

‘ನಾರಾಯಣಭಟ್ಟನ ಕಥೆ’ಯಲ್ಲಿ ಪತಿವ್ರತೆಯಂತೆ ತೋರಿಸುತ್ತಿದ್ದ ಹೆಂಡತಿಯೊಬ್ಬಳು ಹೇಗೆ ಪತಿತೆಯಾಗಿದ್ದಳು ಎಂಬುದನ್ನು ಸುಂದರವಾಗಿ ನಿರೂಪಿಸಿದ್ದಾನೆ. “ಎನ್ನ ಪೆಂಡತಿ ಪತಿವ್ರತೆ, ಪರಪುರುಷನ ಮುಖಾವಲೋಕನಂಗೆಯ್ಯಳದು ಕಾರಣದಿಂದೀ ಶಿಶು ಗಂಡುಗೂಸಪ್ಪುದಱಿಂ ನೋಡಿದೊಡೆ ದೋಷಮೆಂದು ತನ್ನ ಮುಖಮಂ ಮುಚ್ಚಿಕೊಂಡು ಮೊಲೆಯೂಡಿದಪಳೆಂದು ಪೇೞ್ವುದುಂ.....” ಅಂಥ ಪರಮ ಪತಿವ್ರತೆಯೆಂಬವಳು ‘ತನ್ನ ಮನೆಯ ಪಸುಗಾವ ಗೋವನಂ ಪಿಡಿದು ಸುರತ ಕ್ರೀಡೆ’ಯಾಡುವುದನ್ನು ತೋರಿಸಿ ಪತಿವ್ರತಾಗುಣದ ಆಷಾಢಭೂತಿತನವನ್ನು ಎತ್ತಿ ತೋರಿಸಿದಂತಿದೆ.

‘ಮೊಸಳೆಯಂ ಕಪಿ ವಂಚಿಸಿದ ಕಥೆ’ಯಲ್ಲಿ ಮೊಸಳೆಯ ಮೇಲೆ ಸವಾರಿ ಮಾಡಿದ ಕಪಿಯ ಸುಂದರ ಚಿತ್ರವನ್ನು ಕವಿ ಕೊಡುತ್ತಾನೆ :

“ಅಂತಾ ವಾನರಂ ಕೇದಗೆಯನೇಱಿದ ಕೋಡಗದಂತೆ ಗೂಡುಗೊಂಡು ಪಲ್ಲಂ ಗಿಡಿಗಿಱಿದು ಮೆಲ್ಲನೆ ಮೊಸಳೆಗಂತರೀಪಮಿಲ್ಲಿಗಮಿನ್ನೆನಿತು ದೂರಮುಂಟೆಂಬುದುಂ...” ‘ನರಿಯ ಮಾತಂ ನಂಬಿ ಸತ್ತ ಬೆಳ್ಗತ್ತೆಯ ಕಥೆ’ಯಲ್ಲಿ ಕಾಮಪರವಶವಾದವರನ್ನು ಕತ್ತೆಗೆ ಹೋಲಿಸಿ ಅಣಕಿಸಿದ ಹಾಗೆ ಕಾಣುತ್ತದೆ. “ರಾಸಭೀವಿಲಾಸಿನಿಯರ್ ತಮಗೊಪ್ಪ ಪುರುಷನಂ ತರವೇಟ್ಕುಮೆಂದೆನ್ನಂ ತುತಿಸುತ್ತಿರ್ದಪರ್; ನಿನಗಂ ಮನೋರಥ ಸಿದ್ಧಿಯಕ್ಕುಂ ಬೇಗಂ ಬಾಯೆನಲೊಡಂ”

ರಾಗಿಸಿ ರಾಸಭನಿರದತಿ
ವೇಗದಿನಾ ನರಿಯ ಪಿಂದು ಪಿಂದನೆ ಬಂದಂ
ಮೇಗಪ್ಪಪಾಯಮುಮಂ ಕಡು
ರಾಗಿಗಳೇಂ ಕಂಡರೊಳರೆ ಭೂಮಂಡಲದೊಳ್ ॥

ಅಂತು ಪೋಪುದುಮಾ ನರಿ ಪರಿಯಿರ್ದ ಗುಹಾದ್ವಾರಮಂ ಗರ್ದಭೆಯರೊಳಗಿರ್ದರ್ ಪುಗೆನಲೊಡಂ ಪುಗುವ ಕಟ್ಟೆಯಂ ಕಂಡು ಸಿಂಹಂ ಜವಂಗುಂದಿದ ಕಾರಣದಿಂ ಲಂಘನಾಸಕ್ತನಾಗಿ ಲಂಘಿಸಲಾಱದೆ ರಭಸಂಗೆಯ್ದಿಯ್ತುರ್ಪುದುಮಂ ಕಟ್ಟೆ ಬೆರ್ಚುತೋಡುತಿರ್ಪುದಂ ಕಂಡು ಸೃಗಾಲಂ ಕರಂ ಮುಳಿದು ಸಿಂಹನಲ್ಲಿಗೆ ಬಂದೇಂ ಗಡ ಕಟ್ಟೆಯಂ ಮೊದಲಾಗಿ ಪಿಡಿಯಲಾರ್ತಯಿಲ್ಲ, ನೀನೆಂತು ಬರ್ದಪೆಯೆಂದು ನುಡಿಯೆ ಹರಿ ಕರಮೆ ಸಿದ್ದಿಗಾಗಿ ಗುಹೆಯಂ ಪೊಕ್ಕುದಂ ಕೊಲ್ವುದಾವ ಗಹನಮೆಂದನವಧಾನದಿಂ ಪಾಯ್ದ ಕಾರಣದಿಂ ತಪ್ಪಿದುದು, ಇನ್ನದಂ ಕೊಂಡು ಬಾ ಕೊಂಡಾಗಲೆ ಬಿಡಾಲನಿಲಿಯಂ ಕೊಲ್ವಂತಶ್ರಮದೊಳೆ ಕೊಂದಪೆನೆಂದೊಡೆ ಮತ್ತೆ ನರಿ ಪಂದಾ ಕಟ್ಟೆಯಂ ಕಂಡೇಂ ಭಾವಾ ! ನೀಂ ಕಳ್ಳರಂ ಕಂಡ ಬೆಳ್ಳಾಳಂತೆ ಬೆದಱೆಯೆನಗಂ ಪೇೞದೆ ಪೆಱಗಂ ನೋಡದೋಡಿ ಬಂದೆಯದೇಂ ಕಾರಣಮೆನೆ ರಾಸಭನಿಂತೆಂದಂ. ಆ ಗುಹೆಯನಾಂ ಪುಗಲೊದನೊಂದು ರೂಪು ದೊಱೆದು ಪರಿತಂದು ಮೇಲ್ವಾಯಲೊದಂ ಭಯಂಬಟ್ಟು ಬಂದೆನೆನೆ ಸೃಗಾಲನೆಂದಂ: ಗಾಳುಗಳಪ್ಪ ಗರ್ದಭೆಯರ್ ವಿರೋಧಿಕಾಮಿಗಳಪ್ಪುದಱಿಂ ಕಾತರಿಸಿ ಮೇಲೆ ಮೇಲೆ ಬೀೞಲೊಡಂ ಬಂದೆ, ನಿನ್ನ ಗಂಡುತನದ ಪುರುಳಂ ಕಂಡೆನ್ನ ತಂಗಿಯರ್ ಕರುಳಂ ಪಿಡಿದು ನಗೆಯೊಳ್ ಪೊರಳುತ್ತಮಿರ್ದರ್, ನೀನಂಜಲ್ವೇಡ ಬಂದವಱೊಳ್ ಸುರತ ಸುಖವನನುಭವಿಸುತ್ತಿಮಿರ್ದಪೆ, ಬಾಯೆಂಬುದುಮಾ ಕಟ್ಟೆ ಮಿಟ್ಟುವಿನ ಬೆನ್ನೊಳ್ ಪೋಪಂತೆ ನರಿಯ ಬೆನ್ನೊಳ್ ಪೋಗಿ,

ಸುರತಸುಖಕಾಂಕ್ಷೆಯಿಂ ರಾ -
ಗರಸಾಂಧಂ ರಾಸಭಂ ಮಹಾದ್ರಿಗುಹಾಭ್ಯಂ -
ತರಮಂ ಪೊಕ್ಕುದು ಮನ್ಮಥ
ಶರಪರವಶನಪ್ಪ ದೇಹಿ ಪುಗದೆಡೆಯುಂಟೇ !"

ಈ ಭಾಗದಲ್ಲಿ ವಿಕೃತಕಾಮದ ಸಂಕೇತವಿದೆ. ಗುಹಾದ್ವಾರವು ಸ್ತ್ರೀಲಿಂಗ ಸಂಕೇತ. ಅದು ವಿಕಾರಗೊಂಡಾಗ ಅದನ್ನು ಹೊಕ್ಕವನಿಗೆ ಮೃತ್ಯು ತಪ್ಪಿದ್ದಲ್ಲ ಎಂಬುದನ್ನು ಕವಿ ಇಲ್ಲಿ ಧ್ವನಿಸಿದ್ದಾನೆ. ಕಾಮಿಗಳಿಗೂ ಕತ್ತೆಗಳಿಗೂ ಏನೂ ವ್ಯತ್ಯಾಸವಿಲ್ಲ ಎಂಬುದನ್ನು ಕಲಾತ್ಮಕವಾಗಿ ಕವಿ ನಿರೂಪಿಸಿದ್ದಾನೆ. ವಿಡಂಬನ ವೀರಶೈಲಿ (mock - heroic style)ಯ ಸ್ಪಷ್ಟ ರೂಪವನ್ನು 'ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟ ಕಥೆ'ಯಲ್ಲಿ ಉದ್ದಕ್ಕೂ ಪರಿಭಾವಿಸಬಹುದು. ಕಾಗೆಗಳಿಗೂ ಗೂಗೆಗಳಿಗೂ ಮಸೆದ ಬದ್ಧವೈರವನ್ನು ನೆಪಮಾಡಿಕೊಂಡು ಸಮಸ್ತ ರಾಜತಂತ್ರವನ್ನು ಬೋಧಿಸಿದ ರೀತಿ ಅನುಪಮವಾದುದು. ಇಲ್ಲಿ ಕಥೆಯ ಹೂವಿನಲ್ಲಿ ಕವಿ ಶಿಕ್ಷಣದ ಪರಿಮಳವನ್ನಿಟ್ಟು

ನೀತಿಯ ಮಕರಂದವನ್ನು ಬಚ್ಚಿಟ್ಟಿದ್ದಾನೆ. ಹೀಗೆ ಕಥೆ, ಶಿಕ್ಷಣ, ನೀತಿಯ ತ್ರಿವೇಣಿ ಸಂಗಮದನ್ನು ಸಾಧಿಸಿದುದು ಪಂಚತಂತ್ರಕಾರನ ಅಗ್ಗಳಿಕೆ :

> "ಅಂತಾ ವಾಯಸಬಲಂ ಮೂಮುಸಕಂ ಮುಸಗಿ ಬಂದು ಕಾಳನೀಳಜಳಧರಂಗಳ್ ಕುಳಗಿರಿಯಂ ಮುತ್ತುವಂತರಿಮರ್ದನನ ಪುರವಾಗಿರ್ದಂಬನಗಿರಿಯಂ ಸುತ್ತಿಮುತ್ತಿ ತಂತಮ್ಮ ತಂದ ಪುಲ್ಲುಂ ಪುಳ್ಳಿಯುಂ ಮೊದಲಾದ ಕಸಂಗಳೆಲ್ಲಮಂ ಚಿರಂಜೀವಿ ತೋಱಿದ ಗಿರಿಗುಹಾದ್ವಾರಂಗಳೊಳಂ ತರುಕೋಟರಕುಟೀರಂಗಳೊಳಮಿಡಿದಿಡಿದು ತೀವಿ ಬಚಿಕ್ಕೆ ಕೊಳ್ಳಿಗಳನಲ್ಲಿಗಲ್ಲಿಗೆ ತಗುಳ್ಚುವುದುಂ ಶತಪತ್ರಮಿತ್ರಪುತ್ರಪತತ್ರಿಗೋತ್ರ ಪ್ರಧಾನಂಗೆ ಹುತವಹಸಖಂ ಸಹಾಯಮಾಗಿ ಸುಟಿಸುಟಿದು ತಗಳೆ ಬೀಸಲೊಡಂ..."

ಹೀಗೆ ಗ್ರಂಥದ ಉದ್ದಕ್ಕೂ ದುರ್ಗಸಿಂಹನ ಅನ್ಯಾದೃಶ ಅಣಕುಶೈಲಿಯನ್ನು ಸಹೃದಯರು ಮನಗಾಣಬಹುದು. ತನ್ನ ಪಾತ್ರಗಳಿಗೆ ಹೆಸರಿಡುವಾಗಲೂ ಧ್ವನಿ ರಮ್ಯತೆಯನ್ನೂ, ಅನ್ವರ್ಥತೆಯನ್ನೂ ಮೆರೆದಿದ್ದಾನೆ : ಅನಾಗತಮತಿ, ಯದ್ಭವಿಷ್ಯ, ಉತ್ಪನ್ನಮತಿ ಎಂಬ ಮೀನುಗಳು, ಅರಿಮರ್ದನನೆಂಬ ಗೂಬೆಗಳ ರಾಜ, ಅತಿ ಲೌಲ್ಯ, ಕರಟಕ, ದವನಕ, ಜಾಂಬವಂತ, ಮಹಾಭೀರು, ಮೃಗಧೂರ್ತ, ಲಂಬಕರ್ಣ, ಉಪಾಯ ನಿಪುಣ ಎಂಬ ನರಿಗಳು, ಜಿಂಹಾಕ್ಷ, ಕ್ರೂರಾಕ್ಷ, ರಕ್ತಾಕ್ಷ ಎಂಬ ಗೂಬೆಗಳು, ಆದೀಪಿ, ಉದ್ದೀಪಿ, ಪ್ರದೀಪಿ, ಚಿರಂಜೀವಿ, ಲಘುಪತನಕ, ಸಂದೀಪಿ, ಮೇಘವರ್ಣ - ಎಂಬ ಕಾಗೆಗಳು, ಕಕುದ್ಬಲ, ಕೃಷ್ಣವದನ, ನಾಳೀಜಂಘ, ಚಪಲಕ - ಎಂಬ ಕಪಿಗಳು, ಪಿಂಗಳಕ, ಮದೋತ್ಕಟ - ಎಂಬ ಸಿಂಹಗಳು, ಬಲುದಲೆಯ, ಹಿರಣ್ಯರೋಮ - ಎಂಬ ಇಲಿಗಳು, ಕ್ರಕಚ ಎಂಬ ಮೊಸಳೆ, ಜಲಪಾಲ ಎಂಬ ಕಪ್ಪೆ, ಮಂಧಕ ಎಂಬ ಆಮೆ, ಚಂಡಪರಾಕ್ರಮ, ಮಧುರಾಲಾಪೆ ಎಂಬ ಟಿಟ್ಟಿಭ ಮಿಥುನ, ಧವಲಪಕ್ಷ, ಸುಮಿತ್ರ, ಸಕಟ, ವಿಕಟ- ಎಂಬ ಹಂಸಗಳು, ಸೂಚೀಮುಖಿ ಎಂಬ ಹಕ್ಕಿ - ಮೊದಲಾದವುಗಳು ದುರ್ಗಸಿಂಹನ ಪಂಚತಂತ್ರದ ಮರೆಯಲಾಗದ ಪಾತ್ರಗಳು. ಇವು ಮನುಷ್ಯನ ಸುಗುಣ ದುರ್ಗುಣಗಳನ್ನು ಹೊತ್ತು ಮನುಷ್ಯನನ್ನೇ ಅಣಕಿಸುತ್ತವೆ.

ದುರ್ಗಸಿಂಹನು ಗ್ರಂಥದ ಉದ್ದಕ್ಕೂ ಕೆಲವು ಸಾರ್ವಕಾಲಿಕ ಸತ್ಯಗಳನ್ನು ಘೋಷಿಸಿದ್ದಾನೆ. ವಸುಭಾಗಭಟ್ಟನೆಂಬ ಬ್ರಾಹ್ಮಣನ ಬಾಯಿಯಿಂದ ತನ್ನನ್ನು ತಿರಸ್ಕರಿಸಿದ ಬ್ರಾಹ್ಮಣನನ್ನು ಜರೆಯಿಸಿದ್ದಾನೆ :

> ಎನಿತೋದನೋದಿಯುಂ ಮನ
> ದನಿತೆ ವಲಂ ಬುದ್ಧಿಯಕ್ಕುಮೆಂದು ಸಮುಸ್ತಾ -
> ವನಿಯ ಜನಮೊನಕೆಪಾಡ -
> ಪ್ಪಿನೆಗಂ ಸಲೆ ನುಡಿದ ನುಡಿ ಯಥಾರ್ಥಂ ನಿನ್ನೊಳ್ ॥

ಸಂಜೀವಕನು ಪಿಂಗಳಕನಿಗೆ ಸಂಸಾರದ ಅನಿತ್ಯತೆಯನ್ನು ಸಾರಿದ ಈ ಪದ್ಯ ವೈರಾಗ್ಯದ ಉತ್ತಮ ಭಾವಗೀತದಂತಿದೆ :

ಅನಿಮಿಷಚಾಪದಂತೆ ಸಿರಿ ಶಾರದನೀರದ ಕಾಂತಿಯಂತೆ ಯೌ -
ವನದೆಸಕಂ ತೃಣಾಗ್ರಗತ ವಾಃಕಣಿಕಾಗಣದಂತೆ ಸಂದ ಜೀ -
ವನಮುದಜೀಂ ಭವಪ್ರಭವ ಜೀವಿಗೆ ನಿರ್ಮಲಧರ್ಮಮಾರ್ಗದೊಳ್
ಮನಮೊಸೆದಾಗಳುಂ ನಡೆಯುವೇಳ್ಪುದು ವಿಕ್ರಮಗೇಂದ್ರವಲ್ಲಭಾ ॥

ತಂತುವಾಯನ ಕಥೆಯನ್ನೆಲ್ಲ ಕಣ್ಣಾರೆ ಕಂಡು ವೃದ್ಧ ತಾಪಸನು ಈ ತೀರ್ಮಾನಕ್ಕೆ ಬರುತ್ತಾನೆ ; ಅವನ ತೀರ್ಮಾನ ತಪ್ಪಲ್ಲ ಎಂದೆನ್ನಿಸುವುದು :

ನಂಬಿಪರೆನ್ನರಪ್ಪರುಮನೇತೆಱದಿಂ ಸಲೆ ನಂಬೆ ಪಾಣ್ಬೆಯರ್
ಡಂಬಿಪರಿಂತನೇಕವಿಧದಿಂದೆ ವಿಚಾರಿಸಿ ನೋಡೆ ಪೆಂಡಿರಂ
ನಂಬಲೆಯೋಗ ನಂಬದಿರಲಾಗವರಿಲ್ಲದೆ ಬಾಬಲಾಗದೇ -
ನೆಂಬುದಿದರ್ಕೆ ತಕ್ಕುದನೆ ಬಲ್ಲವನುಳ್ಳೊಡೆ ದೇವನಲ್ಲವೇ ॥

೫. ಉಪಸಂಹಾರ

ದುರ್ಗಸಿಂಹನು ತನ್ನ ಕಥೆಯನ್ನು ಹೇಳುವ ರೀತಿಯಿಂದ ಓದುಗರ ಮನಸ್ಸನ್ನು ಒಲಿಸುತ್ತಾನೆ. ಅವನ ಶೈಲಿ ಅವನದೇ ; ಯಾರ ಅನುಕರಣೆಯೂ ಅಲ್ಲ. ಅವನಿಗಿಂತ ಹಿಂದೆ 'ವಡ್ಡಾರಾಧನೆ' ಎಂಬ ಕಥಾ ಸಾಹಿತ್ಯ ಆಗಿ ಹೋಗಿದ್ದರೂ ಅದರ ಛಾಯೆಯೂ ಅವನ ಶೈಲಿಯ ಮೇಲೆ ಬಿದ್ದಿಲ್ಲ. ಅವನ ಅನಂತರ ನಯಸೇನ ಕತೆಗಾರನಾಗಿ ಬರುತ್ತಾನೆ. ಪಂಚತಂತ್ರವನ್ನಂತು ಅವನಷ್ಟು ಚೆನ್ನಾಗಿ ಹೇಳಿದ ಕನ್ನಡದ ಕವಿ ಬೇರೆಯಿಲ್ಲ. ಅದರಿಂದ ದುರ್ಗಸಿಂಹನು ಈ ದೃಷ್ಟಿಯಿಂದ ಏಕಮೇವಾದ್ವಿತೀಯ ನಾಗಿದ್ದಾನೆ.

ದುರ್ಗಸಿಂಹನ ಬಗೆಗೆ ಇಷ್ಟು ವಿಚಾರವನ್ನು ಖಚಿತವಾಗಿ ಹೇಳಬಹುದು.

೧. ಅವನು ಪಂಚತಂತ್ರವನ್ನು ಕನ್ನಡದಲ್ಲಿ ಹೇಳಿದ ಏಕಮೇವಾದ್ವಿತೀಯ ಕವಿ.
೨. ಅವನು ಅದನ್ನು ಹೊಸತಾಗಿ ಹೇಳಿದ್ದಾನೆ.
೩. ಕನ್ನಡದಲ್ಲಿ ನಾಗವರ್ಮನ ಕನ್ನಡ ಕಾದಂಬರಿಗೆ ಯಾವ ಸ್ಥಾನವಿದೆಯೋ ದುರ್ಗಸಿಂಹನ ಕನ್ನಡ ಪಂಚತಂತ್ರಕ್ಕೆ ಅದೇ ಸ್ಥಾನವಿದೆ.
೪. ಅವನಿಗೆ ತನ್ನದೇ ಆದ ಶೈಲಿಯಿದೆ.
೫. ಅವನ ಕಥಾಮಾರ್ಗವನ್ನು ನಯಸೇನನು ಮುಂದೆ ಅನುಸರಿಸುವಂತಾಯಿತು.

ದುರ್ಗಸಿಂಹನಲ್ಲಿ ಕನ್ನಡದ ಜನಕ್ಕೆ ಸಂಸ್ಕೃತದ ಈ ಜನಪ್ರಿಯ ಕಥಾಸಾಹಿತ್ಯ ವನ್ನು ಸರಳವಾಗಿ ಪ್ರಿಯವಾಗಿ ಕನ್ನಡದ ಉಸಿರಿನಲ್ಲಿ ಹೇಳಬೇಕೆಂಬ ತೀವ್ರ ಉತ್ಸಾಹ ಕಾಣುತ್ತದೆ. ಅಲ್ಲಲ್ಲಿ ಬರುವ ಕನ್ನಡದ ನುಡಿಗಟ್ಟುಗಳೂ, ಗಾದೆಗಳೂ, ಕನ್ನಡ ಭಾಷೆಯ ಒಗರು ರುಚಿಯೂ ಇದನ್ನು ಸಾರುತ್ತವೆ. ಇದನ್ನು ಓದುವಾಗ ನಮಗೆ ಇದು ಬೇರೆ ಭಾಷೆಯ ಕೃತಿ ಎಂದೆನ್ನಿಸುವುದಿಲ್ಲ. ಇದು ಕನ್ನಡ ಭಾಷೆಯ ಪಂಚತಂತ್ರ, ಇಲ್ಲಿ ಬರುವ ಪ್ರಾಣಿ ಪಾತ್ರಗಳೂ, ಪಕ್ಷಿಗಳೂ ಇದೇ ಮಣ್ಣಿನವು ಎಂಬಂತೆ ವರ್ತಿಸುತ್ತವೆ, ಮಾತನಾಡುತ್ತವೆ.

ದುರ್ಗಸಿಂಹನು ಒಂದೇ ಒಂದು ಕೃತಿಯನ್ನು ಬರೆದೂ ಹತ್ತಿರ ಹತ್ತಿರ ಸಾವಿರ ವರ್ಷಕಾಲ ಬದುಕಿ ಉಳಿದಿದ್ದಾನೆ - ತನ್ನ ಕೃತಿಯ ಮೂಲಕ. ಅನೇಕ ಕವಿಗಳು ಅನೇಕ ಕೃತಿಗಳನ್ನು ರಚಿಸಿಯೂ ಹೇಳಹೆಸರಿಲ್ಲದಂತಾಗಿದ್ದಾರೆ. ದುರ್ಗಸಿಂಹನ ಕೃತಿಯನ್ನು ಜನರೂ ಮೆಚ್ಚಿ ಪಂಡಿತರೂ ಮನ್ನಿಸಿದುದರಿಂದ ಇಷ್ಟು ಕಾಲ ಬದುಕಿ ಉಳಿಯಿತು. ಸಾವಿರ ಕಾಲ ಬಾಳಿದುದಕ್ಕೆ ಸಾವಿಲ್ಲ. 'ನೆಗೞ್ಗೇ ಕಾವ್ಯಂ ಧರಾಚಕ್ರದೊಳ್' ಎಂಬ ಕವಿಯ ಆಸೆ ಫಲಿಸಿದೆ. ಅವನ ಕೃತಿ ಬೇರೆ ಬೇರೆ ಲೇಖಕರ ಮೂಲಕ ಸಂಗ್ರಹವಾಗಿ, ಕತೆಗಳ ಗೊಂಚಲಾಗಿ ಮರುಹುಟ್ಟು ಪಡೆದು ಕನ್ನಡದ ಕಥಾಪ್ರೇಮಿಗಳಲ್ಲಿ ನಿರಂತರವಾಗಿ ನೆಲಸುತ್ತ ಬಂದಿದೆ. ಈ ದೃಷ್ಟಿಯಿಂದಲೂ ಅದೊಂದು ಅಪೂರ್ವಗ್ರಂಥ. ಸಂಸ್ಕೃತ ಪಂಚತಂತ್ರದ ಒಂದು ಪರಂಪರೆಯನ್ನು ಕನ್ನಡಕ್ಕೆ ಮೊತ್ತಮೊದಲು ಸರಳ ಸುಂದರವಾಗಿ ಪರಿಚಯ ಮಾಡಿಕೊಟ್ಟ ಕೀರ್ತಿ ದುರ್ಗಸಿಂಹನಿಗೆ ಸಲ್ಲುತ್ತದೆ.

ಕರ್ಣಾಟಕ ಪಂಚತಂತ್ರಂ

ಪೀಠಿಕಾ ಪ್ರಕರಣಂ

ಶ್ರೀವಧು ರಾಗದಿಂದಗಲದಾವನ ವಕ್ಷದೊಳಿರ್ಪಳಾವಗಂ
ದೇವನಿಕಾಯಮೋಲಗಿಪ್ಪುದಾವನ ನಾಭಿಸರೋಜದೊಳ್ ಪಚ-
ಶ್ರೀವರನುತ್ಸವಂಬೆರಸು ಪುಟ್ಟಿದನಾವನಶೇಷ ದೈತ್ಯವಿ-
ದ್ರಾವಣನೀಗೆ ದುರ್ಗವಿಭುಗಚ್ಯುತನಚ್ಯುತಸೌಖ್ಯಕೋಟಿಯಂ ೧

ಅವತಂಸೀಕೃತಬಾಲಕೈತಕಶಿಖಾಸಂದಿಗ್ಧಮುಗ್ಧಾಮೃತಾಂ-
ಶುವಿಹಾಯಸರಿದಂಬುಚುಂಬಿತ ಜಟಾಜೂಟಾಂತರಂ ಮಾಡುಗು-
ತ್ಸವಮಂ ಭಾಳವಿಲೋಚನಪ್ರಭವಭಾಸ್ವಜ್ಜಾತ ವೇದಶ್ಶಿಖಾ-
ನಿವಹಪ್ಲುಷ್ಟರತೀಶನಿಷ್ಟಸುಖಮಂ ದುರ್ಗಂಗೆ ದೀರ್ಘಾಯುಮಂ ೨

ತೋಯಜಗರ್ಭನಾದಿಮುನಿಮುಖ್ಯಮುತಪ್ರಕಟೀಕೃತಾಖಿಳಾ-
ಮ್ನಾಯ ಪರಂಪರಾಯುತನಶೇಷ ಜಗಜ್ಜನಕಂ ಸರಸ್ವತೀ
ವ್ಯಾಯತಲೋಲಲೋಚನ ಮದಾಳಿನಿಪೀತಮುಖಾಬ್ಜನೊಲ್ದು ದೀ-
ರ್ಘಾಯುಮನೀಗೆ ಶಿಷ್ಟನಿಧಿಗಭ್ಯುದಿತಾರ್ಕಮಹಂ ಪಿತಾಮಹಂ ೩

ಮಾನಿತಪುಂಡರೀಕರುಚಿರಂ ವಿಲಸದ್ವರಗಂಡಮಂಡಳಂ
ಶ್ರೀನಿಲಯಂ ಮಹಾಶ್ರುತಿಯುತಂ ದ್ವಿಜಸಂಕುಲಭಾಸಿತಾನನಂ
ಕಾನನವಂತಸೇವ್ಯಗುಣಸಂಗತಮಾಗಿರದೆಂದು ದುರ್ಗಸಿಂ
ಹಾನನಪದ್ಮದೊಳ್ ನೆಲಸಿ ನಿಲ್ಗೆ ಸರಸ್ವತಿ ಬಂದು ರಾಗದಿಂ ೪

೧. ಯಾರ ವಕ್ಷಃಸ್ಥಳದಲ್ಲಿ ಅಗಲದೆ ಲಕ್ಷ್ಮಿಯು ನೆಲಸಿರುವಳೋ ಸದಾ ದೇವತೆಗಳ ಸಮೂಹವು ಯಾರನ್ನು ಓಲೈಸುತ್ತಮೋ ಯಾರ ನಾಭೀಕಮಲದಲ್ಲಿ ಬ್ರಹ್ಮನು ಸಂತೋಷದಿಂದ ಹುಟ್ಟಿದನೋ ಯಾರು ಸಮಸ್ತ ದೈತ್ಯರನ್ನು ನಾಶಪಡಿಸಿದನೋ ಆ ಅಚ್ಯುತನು ದುರ್ಗವಿಭುವಿಗೆ ಅಕ್ಷಯ ಸುಖಕೋಟಿಯನ್ನು ಕೊಡಲಿ. ೨. ಎಳೆಯ ಕೇದಗೆಯನ್ನು ಆಭರಣವಾಗಿ ಮಾಡಿಕೊಂಡ ಶಿಖೆಯಿಂದ ಮುಚ್ಚಿದ ಮುಗ್ಧ ಚಂದ್ರನನ್ನುಳ್ಳ ಆಕಾಶಗಂಗೆಯ ನೀರಿನಿಂದ ಚುಂಬಿತವಾದ ಜಟಾಜೂಟವನ್ನುಳ್ಳ ಶಿವನು ಸುಖವನ್ನು ಮಾಡಲಿ. ಹಣೆಗಣ್ಣಿನಿಂದ ಹುಟ್ಟಿದ ಉಜ್ವಲವಾದ ಅಗ್ನಿಯ ಜ್ವಾಲೆಗಳಿಂದ ಕಾಮನನ್ನು ಸುಟ್ಟ ಆ ಈಶ್ವರನು ದುರ್ಗಸಿಂಹನಿಗೆ ಇಷ್ಟ ಸುಖವನ್ನೂ, ದೀರ್ಘಾಯುಸ್ಸನ್ನೂ ಉಂಟುಮಾಡಲಿ. ೩. ಪೂರ್ವಮುನಿಶ್ರೇಷ್ಠರಿಂದ ಪ್ರಕಟವಾದ ಸಮಸ್ತ ವೇದಪರಂಪರೆಯಿಂದ ಕೂಡಿದವನೂ ಸಮಸ್ತ ಲೋಕಗಳ ತಂದೆಯೂ ಸರಸ್ವತಿಯ ವಿಶಾಲವೂ ಚಂಚಲವೂ ಆದ ಕಣ್ಣೆಂಬ ಹೆಣ್ದುಂಬಿಯಿಂದ ಆಸ್ವಾದಿಸಿದ ಮುಖಕಮಲವುಳ್ಳವನೂ ಶಿಷ್ಟರಿಗೆ ಹಬ್ಬವನ್ನುಂಟುಮಾಡುವವನೂ ಪಿತಾಮಹನೂ ಆದ ಬ್ರಹ್ಮನು ಪ್ರೀತಿಯಿಂದ ದೀರ್ಘಾಯಸ್ಸನ್ನು ನೀಡಲಿ. ೪. ಸುಂದರವಾದ ಕಮಲದಿಂದ ಮನೋಹರವಾಗಿಯೂ ಕಾಂತಿಯುತವಾದ ಕಪೋಲಮಂಡಲದಿಂದ ಕೂಡಿ

ಅತನುಶ್ರೀ ಜನ್ಮಗೇಹಂ ಕುಮುದವನಸಖಂ ತಾರಕಾನೀಕ ಲಕ್ಷ್ಮೀ-
ಪತಿಸದ್ವ್ಯೋಮಂ ದ್ವಿ [ಪೇ]*ಂದ್ರಾಮಲದಶನನಿಭಚ್ಛಾಯನದ್ರೀಂದ್ರಪುತ್ರೀ-
ಪತಿಚೂಡಾರತ್ನನೀಗಾಗಳುಮತಿಮುದಮಂ ರೋಹಿಣೀಜೀವಿತೇಶಂ
ಶತಪತ್ರಾರಾತಿ ವಿಪ್ರಾನ್ವಯಗಗನಶರಚ್ಚಾರುಚಂದ್ರಂಗೆ ಚಂದ್ರಂ ೫

ನನೆಯಂಬಿಂ ಹಿಮವನ್ಮಹೀಧರತನೂಜಾಧೀಶನಂ ಗೆಲ್ದ ವೀ-
ರನಜೇಯಂ ಮಧುರೋಹಿಣೀ ಪ್ರಿಯಸಖಂ ಮೀನಧ್ವಜಂ ಕಾಮಿನೀ-
ಜನಕೇಳೀಗುರು ಚಿತ್ತಜಂ ಸುರತಲೀಲಾನಾ [ಟ] †ಕಾ ಸೂತ್ರಧಾ-
ರನುದಾರಂ ರತಿವಲ್ಲಭಂ ಕುಡುಗೆ ಮತ್ಕಾವ್ಯಕ್ಕೆ ಸೌಭಾಗ್ಯಮಂ ೬

ಕಮಲಾನಂದಕರಂ ಸುರಪ್ರಕರ ಚೂಡಾಪೀಡ ಮಾಣಿಕ್ಯ ಜಾ-
ಳ ಮರೀಚಿಪ್ರಚಯಾಂಚಿತಾಂಘ್ರಿಕಮಳಂ ತ್ರೈಲೋಕ್ಯನೇತ್ರಂ ತ್ರಿವೇ-
ದಮಯಂ ಧ್ವಸ್ತತಮಸ್ತಮಂ ಹೃತನಿಶಾಟೋಪನೊಲ್ದೀಗೆ ಗೌ-
ತಮಗೋತ್ರಾಂಬುಜಷಂಡ ಚಂಡಕಿರಣಂಗಾದಿತ್ಯನುತ್ಸಾಹಮಂ ೭

ತೇಜಸ್ವಿಯಾಗಿಯೂ ವೇದಸಂಪನ್ನನಾಗಿಯೂ ಬ್ರಾಹ್ಮಣಸಮೂಹದಿದ ಹೊಳೆಯುವ ದುರ್ಗಸಿಂಹನ ಮುಖಕಮಲವು ಕಾನನದಂತೆ ಅನುಸರಿಸಬಾರದ ಗುಣಗಳಿಂದ ಕೂಡಿರದೆ ಇದೆ ; ಅಂತಹ ಅವನ ಮುಖಕಮಲದಲ್ಲಿ ಸರಸ್ವತಿ ಪ್ರೀತಿಯಿಂದ ಬಂದು ನೆಲಸಿರಲಿ. ೫. ರತಿಗೆ ಜನ್ಮಸ್ಥಳವಾಗಿರುವವನೂ ಕನ್ನೈದಿಲೆಗಳ ವನಕ್ಕೆ ಸಖನಾಗಿರುವವನೂ ನಕ್ಷತ್ರ ಸಮೂಹಕ್ಕೆ ಪತಿಯಾಗಿ ಬೆಳಗುವ ಆಕಾಶಮಂಡಲವುಳ್ಳವನೂ ಐರಾವತದ ದಂತದಂತೆ ಹೊಳೆಯುವವನೂ ಈಶ್ವರನ ಶಿರೋಭೂಷಣನೂ ರೋಹಿಣೀಪ್ರಿಯನೂ ಕಮಲಗಳ ವೈರಿಯೂ ಆಗಿರುವ ಚಂದ್ರನು ಬ್ರಾಹ್ಮಣವಂಶವೆಂಬ ಆಕಾಶಕ್ಕೆ ಶರಚ್ಚಂದ್ರನಂತೆ ಮನೋಹರನಾದ ದುರ್ಗಸಿಂಹನಿಗೆ ಅತಿಶಯವಾದ ಆನಂದವನ್ನು ನೀಡಲಿ. ೬. ಪುಷ್ಪ ಬಾಣಗಳಿಂದ ಪಾರ್ವತೀಪತಿಯನ್ನು ಗೆದ್ದ ವೀರನೂ, ಅಜೇಯನೂ ವಸಂತ ಚಂದ್ರರ ಪ್ರಿಯಸಖನೂ ಮೀನಕೇತನನೂ ಕಾಮಿನಿಯರ ಕಾಮಕೇಳಿಗೆ ಗುರುವೂ ಮನಸ್ಸಿನಲ್ಲಿ ಹುಟ್ಟಿದವನೂ ಸಂಭೋಗಕೇಳಿಯೆಂಬ ನಾಟಿಕೆಯ ಸೂತ್ರಧಾರಿಯೂ ಉದಾರನೂ ಆದ ಕಾಮನು ನನ್ನ ಕಾವ್ಯಕ್ಕೆ ಸೌಭಾಗ್ಯವನ್ನು ನೀಡಲಿ. ೭. ಕಮಲಗಳಿಗೆ ಆನಂದವನ್ನುಂಟುಮಾಡುವವನೂ ದೇವತೆಗಳ ಸಮೂಹದ ಶಿರೋಭೂಷಣಗಳ ಮಾಣಿಕ್ಯ ಸಂದೋಹದ ಕಾಂತಿಯಿಂದ ಕೂಡಿದ ಪಾದಕಮಲವುಳ್ಳವನೂ ಮೂರು ಲೋಕಗಳಿಗೂ ಕಣ್ಣಾದವನೂ ಮೂರುವೇದಗಳಿಂದ ಕೂಡಿದವನೂ ಕತ್ತಲೆಯನ್ನು ನಾಶಪಡಿಸಿದವನೂ ರಾತ್ರಿಯ ಆಟೋಪವನ್ನು ಪರಿಹರಿಸಿದವನೂ ಆದ ಸೂರ್ಯನು ಗೌತಮಗೋತ್ರವೆಂಬ ಕಮಲ ಸಮೂಹಕ್ಕೆ ಸೂರ್ಯನಂತಿರುವ ದುರ್ಗಸಿಂಹನಿಗೆ ಉತ್ಸಾಹವನ್ನುಂಟುಮಾಡಲಿ.

---

* ಎಲ್ಲ ಪ್ರತಿಗಳಲ್ಲೂ 'ದ್ವಿಜೇಂದ್ರ' ಎಂದಿದೆ. 'ದ್ವಿಜ' ಎಂದರೆ ಆನೆ ಎಂಬ ಅರ್ಥವಿಲ್ಲ.

† 'ನಾಟಕ' ಎಂದು ಎಲ್ಲ ಪ್ರತಿಗಳಲ್ಲಿದೆ. 'ನಾಟಕಾ' ಎಂಬ ಶಬ್ದ ಸಂಸ್ಕೃತದಲ್ಲಿ ಇಲ್ಲದಿರುವುದರಿಂದ ಇದು 'ನಾಟಿಕಾ' ಎಂದಿರಬೇಕು ಹೋಲಿಸಿರಿ : ಜಗನ್ನಾಟಕ ಸೂತ್ರಧಾರಿ.

ಉಗ್ರಭುಜಂಗಭೂಷಣನಶೇಷ ಸುರಾಸುರಭಾಸುರೋರು ಚೂ-
ಡಾಗ್ರಮಣಿ ಪ್ರಭಾಪಟಲ ಪಾಟಲಿತೋತ್ತಮ ಪಾದಪೀಠನ-
ವ್ಯಗ್ರಮನಂ ವಿನಾಯಕನಿಭಾನನನುಗ್ರತನೂಭವಂ ಗಣೈ-
ಕಾಗ್ರಣಿ ಸಂಧಿವಿಗ್ರಹಿಗಣಾಗ್ರಣಿಗೀಗೆ ವಿಶುದ್ಧ ಬುದ್ಧಿಯಂ ೮

ಎನಗನುರಕ್ತೆಯಾಗೆ ದಿಗಧೀಶ್ವರರಾನತರಾಗೆ ಮಾಡುವೆಂ
ಮನವೊಸೆದೀವೆನಗ್ರಮಹಿಷೀಪದಮಂ ನಿನಗೆಂದ ಪಾಣ್ಬನಂ
ದನುಜನನುಗ್ರಖಡ್ಗಮುಖದಿಂದಿಱಿದೊತ್ತಿದ ದುರ್ಗೆ ದುರ್ಗಸಿಂ-
ಹನನತುಳಪ್ರತಾಪಪರನಂ ಪರಿರಕ್ಷಿಸುತಿರ್ಕನಾರತಂ ೯

ಲೋಕಾಗಮಜ್ಞರಖಿಳ ಕ-
ಳಾಕುಶಲರುಪೇತವಿದ್ಯರನವದ್ಯಯಶ-
ಶ್ಶ್ರೀಕಾಂತಾದಯಿತರ್ ವಾ-
ಲ್ಮೀಕಿ ವ್ಯಾಸಾದಿ ಕವಿಗಳೀಗೆಮಗಱಿವಂ ೧೦*

ನೆಗಟ್ದ ಗುಣಾಢ್ಯನ ಮೃದುಮಧು-
ರ ಗಭೀರತರ ಪ್ರಸನ್ನ ಕವಿತಾಗುಣಮಂ
ಪೊಗಟಲ್ಕಜನುಂ ನೆಱೆಯಂ
ಜಗದೊಳಗಿನ್ನುಳಿದ ಜಡರದೇಂ ನೆಱೆದಪರೊ ೧೧

೮. ಭಯಂಕರವಾದ ಸರ್ಪಗಳನ್ನು ಆಭರಣ ಮಾಡಿಕೊಂಡವನೂ ಸಮಸ್ತದೇವದಾನವರ ಪ್ರಕಾಶಮಾನವಾದ ಶ್ರೇಷ್ಠ ಶಿರೋಭೂಷಣಗಳ ಕಾಂತಿಸಮೂಹದಿಂದ ಕೆಂಪಾದ ಉತ್ತಮ ಪಾದಪೀಠವುಳ್ಳವನೂ ಸ್ಥಿರಚಿತ್ತನೂ ಗಜಮುಖನೂ ಶಿವನ ಮಗನೂ ಗಣಗಳ ಅಧಿಪತಿಯೂ ಆದ ವಿನಾಯಕನು ಸಂಧಿವಿಗ್ರಹಿಗಳ ಸಮೂಹಕ್ಕೆ ಅಧಿಪತಿಯಾದ ದುರ್ಗಸಿಂಹನಿಗೆ ನಿರ್ಮಲ ಜ್ಞಾನವನ್ನು ನೀಡಲಿ. ೯. ನನಗೆ ಅನುರಕ್ತೆಯಾದರೆ ದಿಕ್ಪತಿಗಳನ್ನು ಶರಣಾಗತರನ್ನಾಗಿ ಮಾಡುವೆನು, ಮನಃಪೂರ್ವಕವಾಗಿ ರಾಣಿಪಟ್ಟವನ್ನು ಕಟ್ಟುವೆನು ಎಂದು ಹೇಳಿದ ದುಷ್ಟನಾದ ರಾಕ್ಷಸನನ್ನು ತನ್ನ ಖಡ್ಗಧಾರೆಯಿಂದ ಚುಚ್ಚಿ ಸಾಯಿಸಿದ ದುರ್ಗೆಯು ಅತುಲ ಪರಾಕ್ರಮಿಯಾದ ದುರ್ಗಸಿಂಹನನ್ನು ಸದಾ ರಕ್ಷಿಸುತ್ತಿರಲಿ. ೧೦. ಲೋಕದ ಶಾಸ್ತ್ರಜ್ಞರೂ, ಅಖಿಲ ಕಲಾಕುಶಲರೂ, ವಿದ್ಯಾವಂತರೂ ನಿರ್ದೋಷವಾದ ಯಶಸ್ಸೆಂಬ ಲಕ್ಷ್ಮಿಗೆ ಪ್ರಿಯರಾದವರೂ ಆದ ವಾಲ್ಮೀಕಿ ವ್ಯಾಸಾದಿ ಕವಿಗಳು ನಮಗೆ ಅರಿವನ್ನು ನೀಡಲಿ.* ೧೧. ಪ್ರಸಿದ್ಧನಾದ ಗುಣಾಢ್ಯನೆಂಬ ಕವಿಯ ಮೃದುಮಧುರತರ ಪ್ರಸನ್ನ ಕವಿತಾಗುಣವನ್ನು ಹೊಗಳಲು ಬ್ರಹ್ಮನೂ ಸಮರ್ಥನಾಗನು ; ಜಗತ್ತಿನಲ್ಲಿ ಇನ್ನು ಬೇರೆ ಜಡರು ಅದೇನು

* ಮುಂದಿನ ಎರಡು ಪೂರ್ಣವಾಗದ ಪದ್ಯಗಳನ್ನು ಪ್ರಕ್ಷಿಪ್ತವೆಂದು ಬಿಡಲಾಗಿದೆ.

ವರವಾಗ್ವಿಲಾಸದಿಂದಂ
ಸುರವಂದಿತೆಯೆನಿಪ ಗಂಗೆಯಂ ಮೆಚ್ಚಿಸಿ ಸೌಂ-
ದರ ರತ್ನಕಟಕಮಂ ತಂ-
ದರಾರೊ ವರರುಚಿವೊಲಾದಿಕವಿವರರಾರುಂ ೧೨

ಪರಮಕವೀಂದ್ರವೃಂದ ವಿನುತೋತ್ತಮವಾಣಿ ಸರಸ್ವತೀಸ್ವಯಂ-
ವರವರನಬ್ಜಜೋಪಮನಪಾಸ್ತರಜಂ ನಿಜವಾಗ್ವಿಲಾಸಭಾ-
ಸುರತರಚಂದ್ರಿಕಾದ್ಯುತಿನಿರಸ್ತ ಸಮಸ್ತಜಗತ್ತಮಂ ಕಳಾ
ಪರಿಣತನೆಂದೊಡೇವೊಗಳ್ವೆನುನ್ನತಿಯಂ ಕವಿ ಕಾಳಿದಾಸನಾ ೧೩

ಕವಿರಾಜಶಿರಶ್ಶೇಖರ-
ನವನೀಶ್ವರ ಚಕ್ರವರ್ತಿ ಹರ್ಷ ನರೇಂದ್ರ
ಪ್ರವರಂ ಕುಡೆ ಪಡೆದಂ ವ-
ಶ್ಯವಾಣಿ ಕವಿಚಕ್ರವರ್ತಿಪೆಸರಂ ಬಾಣಂ ೧೪

ಸಕಲಸುರಾಧೀಶ್ವರ ಮ
ಸ್ತಕಸ್ಥಿತಕ್ರಮನಸರ್ಕನಂ ಮೆಚ್ಚಿಸಿದಂ
ಸುಕವಿತ್ವವಿಳಾಸದಿನೇಂ
ಸುಕವಿಯೊ ಕವಿಮುಖ್ಯರೊಳ್ ಮಯೂರ ಕವೀಂದ್ರಂ ೧೫

ಸೂರಿಕವಿರಾಜದರ್ಪ ವಿ-
ದಾರಣಚತುರಂ ವಿನೀತನೆಂಬ ಗುಣದಿಂ
ನಾರಾಯಣನಂತೆಸೆದಂ
ನಾರಾಯಣನಖಿಳಭುವನವಂದಿತಚರಣಂ ೧೬

ಸಮರ್ಥರಾಗುವರೋ? ೧೨. ಶ್ರೇಷ್ಠವಾದ ವಾಗ್ವಿಲಾಸದಿಂದ ದೇವತೆಗಳಿಂದ ವಂದಿತೆಯಾದ ಗಂಗೆಯನ್ನು ಮೆಚ್ಚಿಸಿ ಸುಂದರ ರತ್ನಕಂಕಣವನ್ನು ವರರುಚಿಯಂತೆ ತಂದವರು ಆದಿಕವಿಗಳಲ್ಲಿ ಯಾರಿದ್ದಾರೆ ? ೧೩. ಪರಮಕವೀಂದ್ರವೃಂದದಿಂದ ಪ್ರಶಂಸಿತವಾದ ಉತ್ತಮ ವಾಗ್ವೈಭವವುಳ್ಳವನೂ ಸರಸ್ವತೀ ಸ್ವಯಂವರದಲ್ಲಿ ವರನಾದವನೂ, ಬ್ರಹ್ಮಸಮಾನನೂ, ದೋಷರಹಿತನೂ ತನ್ನ ವಾಗ್ವಿಲಾಸವೆಂಬ ಪ್ರಕಾಶಮಾನವಾದ ಬೆಳದಿಂಗಳಿಂದ ಸಮಸ್ತ ಜಗತ್ತಿನ ಕತ್ತಲೆಯನ್ನು ಕಳೆದವನೂ ಕಳಾಪರಿಣತನೂ ಆದ ಕವಿ ಕಾಳಿದಾಸನ ಮಹತ್ತ್ವವನ್ನು ಏನೆಂದು ಹೊಗಳುವೆನು. ೧೪. ಕವಿರಾಜ ಶಿರಶ್ಶೇಖರನೂ, ಅವನೀಶ್ವರರಿಗೆ ಚಕ್ರವರ್ತಿಯೂ ಆದ ಹರ್ಷನರೇಂದ್ರನು ಕೊಡಲು ಕವಿಚಕ್ರವರ್ತಿ ಎಂಬ ಹೆಸರನ್ನು ವಾಣಿಯನ್ನು ವಶಪಡಿಸಿಕೊಂಡ ಬಾಣನು ಪಡೆದನು. ೧೫. ಸಮಸ್ತ ದೇವತೆಗಳ ಅಧಿಪತಿಯಾದ ಇಂದ್ರನ ಮಸ್ತಕದ ಮೇಲೆ ಪಾದವಿಟ್ಟ ಸೂರ್ಯನನ್ನು ಮೆಚ್ಚಿಸಿದ ಮಯೂರನೆಂಬ ಕವೀಂದ್ರನು ಸುಕವಿತ್ವ ವೈಭವದಲ್ಲಿ ಕವಿಮುಖ್ಯರಲ್ಲಿ ಸುಕವಿಯೆನಿಸಿದನು. ೧೬. ಪಂಡಿತರ ಹಾಗೂ ಕವಿರಾಜರ ದರ್ಪವನ್ನು ಸೀಳುವುದರಲ್ಲಿ ಚತುರನೂ ಗುಣದಲ್ಲಿ ವಿನೀತನೂ ಸಾಕ್ಷಾತ್ ಶ್ರೀಮನ್ನಾರಾಯಣನಂತೆ ಶೋಭಿಸುವವನೂ ಆದ ನಾರಾಯಣನೆಂಬ ಕವಿ ಸಮಸ್ತ ಜಗತ್ತಿನ ಜನರಿಂದ

ಅನುಪಮ ಕವಿವ್ರಜಂ ಜೇ-
ಯೆನೆ ರಾಘವ ಪಾಂಡವೀಯಮಂ ಪೇಳ್ದು ಯಶೋ-
ವನಿತಾಧೀಶ್ವರನಾದಂ
ಧನಂಜಯಂ ವಾಗ್ವಧೂಪ್ರಿಯಂ ಕೇವಳನೇ ೧೭

ವಾಮನ ಭಲ್ಲಟ ಭಾಮಹ
ಭೀಮಂ ಭವಭೂತಿ ಭಾಸ ಭಾರವಿ ಭಟ್ಟಿ
ಶ್ರೀಮಾಘ ರಾಜಶೇಖರ
ಕಾಮಂದಕರೆಸೆವ ಸೂಕ್ತಿಯಂ ಪೊಗಳದರಾರ್ ೧೮

ವಿಪುಲ ಕವಿತಾಗುಣಾಪ್ತಾ-
ಸ್ತ ಪುರಾಣಕವೀಂದ್ರನೆನಿಪ ಮಹಿಮೆಯನಿಂದ್ರ
ದ್ವಿಪದುಗ್ಧವಾರ್ಧಿ ಡಿಂಡೀ-
ರ ಪಿಂಡಪಾಂಡುರಯಶಕ್ಕೆ ದಂಡಿಯೆ ನೋಂತಂ ೧೯

ಶ್ರೀವಿಜಯರ ಕವಿಮಾರ್ಗಂ
ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈ-
ಯ್ದೀವಿಗೆಯುಮಾದುದದಱಿಂ
ಶ್ರೀ ವಿಜಯರ್ ದೇವರವರನೇವಣ್ಣಿಪುದೋ ೨೦

ಪರಮಕವೀಶ್ವರ ಚೇತೋ-
ಹರಮೆಂಬಿನಮೆಸೆವ ಮಾಳವೀ ಮಾಧವಮಂ
ವಿರಚಿಸಿದ ಕನ್ನಮಯ್ಯಂ-
ಬರಮಾಗಂ ಸುಕವಿ ಬಗೆವೊಡಿನ್ನುಂ ಮುನ್ನಂ ೨೧

ವಂದಿತನಾದವನು. ೧೭. ಅಸಾಧಾರಣರಾದ ಕವಿಗಳ ಸಮೂಹವು ಹೊಗಳುತ್ತಿರಲು ರಾಘವಪಾಂಡವೀಯ ಎಂಬ ಕಾವ್ಯವನ್ನು ಹೇಳಿ ಯಶೋಲಕ್ಷ್ಮಿಯನ್ನು ವರಿಸಿದವನೂ ವಾಗ್ವಧೂಪ್ರಿಯನೂ ಆದ ಧನಂಜಯಕವಿಯು ಸಾಮಾನ್ಯನೇ ! ೧೮. ವಾಮನ, ಭಲ್ಲಟ, ಭಾಮಹ, ಭೀಮ, ಭವಭೂತಿ, ಭಾಸ, ಭಾರವಿ, ಭಟ್ಟಿ, ಮಾಘ, ರಾಜಶೇಖರ, ಕಾಮಂದಕ - ಮೊದಲಾದ ಕವಿಗಳ ಶೋಭಿಸುವ ಸೂಕ್ತಿಗಳನ್ನು ಹೊಗಳದವರು ಯಾರು? ೧೯. ವಿಪುಲವಾದ ಕವಿತಾಗುಣಗಳಿಂದ ಕೂಡಿದ ಪುರಾಣ ಕವಿಯೆನ್ನಿಸಿದ ಮಹಿಮೆಯನ್ನೂ ಐರಾವತ, ಕ್ಷೀರಸಾಗರದ ನೊರೆಯ ಹಿಂಡಿನ ಹಾಗೆ ಇರುವ ಧವಲ ಕೀರ್ತಿಯನ್ನೂ ದಂಡಿಯೇ ಸಾಧಿಸಿದನು. ೨೦. ಶ್ರೀವಿಜಯ ಎಂಬ ಕವಿಯ ಕವಿರಾಜಮಾರ್ಗ ಎಂಬ ಕೃತಿಯು ಪ್ರಸಿದ್ಧರಾದ ಕವಿಗಳ ಮನಸ್ಸಿಗೆ ಕನ್ನಡಿಯೂ ಕಯ್ದೀವಿಗೆಯೂ ಆದುದು. ಆದರಿಂದ ಶ್ರೀವಿಜಯದೇವರನ್ನು ಏನೆಂದು ಬಣ್ಣಿಸಲಿ. ೨೧. ಪರಮ ಕವೀಶ್ವರರಿಗೂ ಚೇತೋಹಾರಿ ಎಂಬಂತೆ ಶೋಭಿಸುವ ಮಾಳವೀಮಾಧವ ಎಂಬ ಕೃತಿಯನ್ನು ರಚಿಸಿದ ಕನ್ನಮಯ್ಯನವರೆಗೆ

ಪೊಸತೆನಿಪ ದೇಸಿಯಿಂ ನವ-
ರಸವೊಸರಲ್ಕೊಳ್ಪುವೆತ್ತ ಮಾರ್ಗದಿನಿಳೆಗೇ-
ನೆಸೆದುವೊ ಸುಕವಿಗಳೆನೆ ನೆಗ-
ೞ್ದಸಗನ ಮನಸಿಜನ ಚಂದ್ರಭಟ್ಟನ ಕೃತಿಗಳ್ ೨೨*

ಮಾರ್ಗದ್ವಯ ಪರಿಣತ ಕವಿ-
ಮಾರ್ಗಮನೋಹಾರಿಯಾದುದೆಂದಖಿಳ ಬುಧರ್
ನಿರ್ಗರ್ವರಾಗಿ ಪಂಪನ
ಗೀರ್ಗುಂಫದ ಪೆಂಪನಾಗಳುಂ ಬಣ್ಣಿಸುವರ್ ೨೩

ತ್ರಿಜಗನ್ನುತ ವಾಗ್ವಿಭವದಿ-
ನಜಂಗೆ ನೂರ್ಮಡಿಯೆನಿಪ್ಪ ಪೆಂಪಂ ತಳೆದಂ
ವಿಜಿತಾರಿ ದಂಡನಾಯಕ
ಗಜಾಂಕುಶಂ ಕುಶಲವಾಂಛಿತಪ್ರಿಯಶೌರ್ಯಂ ೨೪

ಅನತಿಶಯ ನೀತಿಮಾರ್ಗನ-
ನನೂನ ಕವಿತಾವಿಲಾಸನಂ ಭೂತಳದೊಳ್
ಮನುಗಂ ವ್ಯಾಸಂಗಂ ಮಿಗಿ-
ಲೆನಿಸಿದ ಕವಿತಾವಿಳಾಸನಂ ಪೊಗಳದವರಾರ್ ೨೫

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ್ ಶ್ರೀಮಾದಿರಾಜ ಮುನಿಪುಂಗವರು-
ತ್ಸವದಿಂ ತಿರ್ದಿದರೆನೆ ಭೂ-
ಭುವನದೊಳಿದನೆಟ್ಟು ಕೊಂಡುಕೊನೆಯದರೊಳರೇ ೨೬

ಸುಕವಿ ಇಂದೂ ಇಲ್ಲ, ಮುಂದೂ ಆಗಲಾರನು. ೨೨. ಹೊಸದಾದ ದೇಸಿಯಿಂದಲೂ ನವರಸಗಳು ಒಸರುವಂತೆ ಒಳಿತನ್ನು ಹೊಂದಿದ ಮಾರ್ಗದಿಂದ ಇಳೆಯಲ್ಲಿ ಸುಕವಿಗಳಾದ ಅಸಗ, ಮನಸಿಜ, ಚಂದ್ರಭಟ್ಟನ ಕೃತಿಗಳು ಶೋಭಿಸಿದವು.* ೨೩. ಕಾವ್ಯಮಾರ್ಗಗಳೆರಡರಲ್ಲೂ ಪರಿಣತನಾದವನು, ಕವಿ ಮಾರ್ಗ ಮನೋಹಾರಿಯಾದುದು ಎಂದು ಸಮಸ್ತ ಪಂಡಿತರು ತಮ್ಮ ಗರ್ವವನ್ನು ತೊರೆದು ಪಂಪನ ವಾಗ್ವೈಭವದ ಹಿರಿಮೆಯನ್ನು ಯಾವಾಗಲೂ ವರ್ಣಿಸುವರು. ೨೪. ಮೂರು ಲೋಕಗಳಿದ ಹೊಗಳಿಸಿಕೊಂಡವನೂ ವಾಗ್ವೈಭವದಲ್ಲಿ ಬ್ರಹ್ಮನಿಗೆ ನೂರುಮಡಿ ಹಿರಿಮೆಯನ್ನು ಪಡೆದವನೂ ಶತ್ರುಗಳನ್ನು ಗೆದ್ದವನೂ ಆದ ದಂಡನಾಯಕ ಗಜಾಂಕುಶ ಎಂಬ ಕವಿ ಕುಶಲ ವಾಂಛಿತಪ್ರಿಯ ಶೌರ್ಯನಾಗಿದ್ದನು. ೨೫. ಶ್ರೇಷ್ಠವಾದ ನೀತಿಮಾರ್ಗನಿರತನೂ ಶ್ರೇಷ್ಠ ಕವಿತಾ ವೈಭವವುಳ್ಳವನೂ ಭೂಮಿಯಲ್ಲಿ ಮನುವಿಗೂ ವ್ಯಾಸನಿಗೂ ಮಿಗಿಲು ಎನ್ನಿಸಿದವನೂ ಆದ ಕವಿತಾವಿಳಾಸ ಎಂಬ ಕವಿಯನ್ನು ಹೊಗಳದವರು ಯಾರಿದ್ದಾರೆ? ೨೬. ಕವಿ ಗಮಕಿ ವಾದಿ ವಾಗ್ಮಿಗಳಲ್ಲಿ ಶ್ರೇಷ್ಠರಾದ ಶ್ರೀ ಮಾದಿರಾಜ ಮುನಿಪೋತ್ತಮರು ಇದನ್ನು ಸಂತೋಷದಿಂದ ತಿದ್ದಿದವರು ಎನ್ನುವಾಗ ಪ್ರಪಂಚದಲ್ಲಿ ಈ ಕೃತಿಯನ್ನು ಎತ್ತಿಕೊಂಡು

* ಮುಂದಿನ ಒಂದು ಕಂದಪದ್ಯ ಅಪೂರ್ಣವಾದುದರಿಂದ ಇಲ್ಲಿ ಬಿಡಲಾಗಿದೆ.

ಚತುರಂತಾಶೇಷಧಾತ್ರೀತಳ ಜನವಿನುತಂ ನೀತಿಶಾಸ್ತ್ರಾನುವಿದ್ಧಂ
ಕತೆ ಪೇಳ್ದಂ ಶಿಷ್ಟ ಚಿಂತಾಮಣಿ ಮನುಚರಿತಂ ದುರ್ಗನುದ್ದಾಮ ವಾಕ್ಶ್ರೀ-
ಪತಿ ಕಯ್ಕೊಂಡಕ್ಕರೆಯಿಂ ಶೋಧಿಸಿ ಬರೆಸಿದಂ ಸಂದ ಗೋವಿಂದನೆಂದಂ-
ದತಿಸೂಕ್ತಂ ಭಾವಿಪಂಗೀ ಕೃತಿ ಮಧುಮಧುರಳಾಪ ಸಂಪ್ರೀತಿಯಿಂದಂ ೨೭

ಧರೆಯಂ ದ್ವಾಪರದೊಳ್ ವದಾನ್ಯತಿಲಕಂ ಲೋಕೋತ್ತರಂ ಮುನ್ನೆ ಭಾ-
ಸ್ಕರಪುತ್ರಂ ನಿಜದಾನದಿಂ ತಣಿಪದಂತೀರೇಳ್ಕಿಂಬಾಗಮಂ
ದೊರೆವೆತ್ತುತ್ತಮಭೋಗದೊಳ್ ತಣಿಪಿದಂ ಭೂಪೋತ್ತಮಂ ಸಂದ ಭಾ-
ಸ್ಕರಪುತ್ರಂ ಕಲಿಕಾಲಕರ್ಣನೆಸರಂ ಭೂವಿಶ್ರುತಂ ಮಾಡಿದಂ ೨೮*

ಸ್ವಸ್ತಿಶ್ರೀ ವನಿತಾ ಸ್ವಯಂವರವರಂ ಚಾಳುಕ್ಯ ರಾಜಾನ್ವಯ
ಪ್ರಸ್ತುತ್ಯೋದಯ ಶೈಲಭಾನು ವಿನತಾಶೇಷದ್ವಿಷನ್ಮಸ್ತಕ
ನ್ಯಸ್ತಾಂಘ್ರಿದ್ವಯನಬ್ಧಿವೇಷ್ಟಿತ ಮಹೀರಕ್ಷಾಕ್ಷಮೋತ್ತುಂಗ ಬಾ
ಹುಸ್ತಂಭಂ ನೃಪಚಕ್ರವರ್ತಿತಿಲಕಂ ಶ್ರೀಕೀರ್ತಿ ವಿದ್ಯಾಧರಂ ೨೯

ಅಭಿನವ ಭಗದತ್ತಂ ನಿಖಿ
ಳ ಭುವನ ಸಂಸ್ತೂಯಮಾನ ಚಾಳುಕ್ಯಕುಲ
ಪ್ರಭವಂ ದಿಳೀಪನಾಭಾ
ಗ ಭರತ ನಹುಷಾಂಬರೀಷ ನಿರ್ಮಲ ಚರಿತಂ ೩೦

ಹೊಗಳದವರುಂಟೇ ? ೨೭. ಸಮಸ್ತ ಧಾತ್ರಿತಳಜನವಿನುತವೂ ನೀತಿಶಾಸ್ತ್ರದಿಂದ ಕೂಡಿದುದೂ ಆದ ಕತೆಯನ್ನು ಶಿಷ್ಟ ಚಿಂತಾಮಣಿಯೂ ಮನುಚರಿತನೂ ಆದ ದುರ್ಗಸಿಂಹನು ಹೇಳಿದನು. ಉದ್ದಾಮವಾಕ್ಶ್ರೀಪತಿಯೆನಿಸಿದ ಪ್ರಸಿದ್ಧ ಗೋವಿಂದನೆಂಬವನು ಇದನ್ನು ಪ್ರೀತಿಯಿಂದ ತೆಗೆದುಕೊಂಡು ಶೋಧಿಸಿ ಬರೆದನು ಎಂದ ಮೇಲೆ ಈ ಕೃತಿ ಪ್ರೀತಿಯಿಂದ ಭಾವಿಸುವವನಿಗೆ ಅತಿ ಸೂಕ್ತವೂ ಜೇನಿನಂತೆ ಮಧುರಾಲಾಪವೂ ಆಗಿದೆ. ೨೮. ಭೂಮಿಯನ್ನು ದ್ವಾಪರಯುಗದಲ್ಲಿ ಮಾನ್ಯಶ್ರೇಷ್ಠನೂ ಭಾಸ್ಕರಪುತ್ರನೂ ಆದ ಕರ್ಣನು ಲೋಕೋತ್ತರವಾಗಿ ಮೊದಲು ತನ್ನ ದಾನಗಳಿಂದ ತೃಪ್ತಿಪಡಿಸಿದಂತೆ ಭೂಪೋತ್ತಮನಾದ ಜಗದೇಕಮಲ್ಲ ಜಯಸಿಂಹನು ಶ್ರೇಷ್ಠ ಭಾಸ್ಕರ ಪುತ್ರನಾಗಿ ಹದಿನಾಲ್ಕು ಲೋಕಗಳನ್ನು ಆಳುತ್ತ ಉತ್ತಮ ಭೋಗದಿಂದ ತಣಿಸುತ್ತ ತನ್ನ ಕಲಿಕಾಲ ಕರ್ಣ ಎಂಬ ಹೆಸರನ್ನು ಜಗತ್ಪ್ರಸಿದ್ಧವನ್ನಾಗಿ ಮಾಡಿದನು.* ೨೯. ಲಕ್ಷ್ಮಿಯು ತಾನಾಗಿಯೇ ಸ್ವಯಂವರದಲ್ಲಿ ವರಿಸಿಕೊಂಡ ಪತಿಯೂ, ಚಾಳುಕ್ಯವಂಶವೆಂಬ ಪ್ರಸಿದ್ಧವಾದ ಉದಯಪರ್ವತಕ್ಕೆ ಸೂರ್ಯನಂತಿರುವವನೂ, ಅಧೀನರಾದ ಶತ್ರುರಾಜರ ತಲೆಯ ಮೇಲೆ ಕಾಲಿಟ್ಟವನೂ ಸಮುದ್ರದಿಂದ ಆವೃತವಾದ ಭೂಮಂಡಲವನ್ನು ರಕ್ಷಿಸಲು ಸಮರ್ಥವಾದ ಉತ್ತುಂಗ ಬಾಹುಸ್ತಂಭವನ್ನುಳ್ಳವನೂ ಆದ ಚಕ್ರವರ್ತಿತಿಲಕನು ಶ್ರೀ ಕೀರ್ತಿ ವಿದ್ಯಾಧರನೆನಿಸಿದನು. ೩೦. ಅಭಿನವ ಭಗದತ್ತನೂ ಸಮಸ್ತಲೋಕದಿಂದ ಪ್ರಶಂಸಿತವಾದ ಚಾಳುಕ್ಯಕುಲ ಸಂಭೂತನೂ ದಿಲೀಪ ನಾಭಾಗ ಭರತ ನಹುಷ ಅಂಬರೀಷ ಮೊದಲಾದವರ ನಿರ್ಮಲ

* ಮುಂದಿನ ಪದ್ಯ ಅಪೂರ್ಣವಾಗಿದೆ ; ಆದ್ದರಿಂದ ಇಲ್ಲಿ ಬಿಡಲಾಗಿದೆ.

ಜಯಲಕ್ಷ್ಮೀಪತಿ ಸತ್ಯಾ
ಶ್ರಯನಪ್ರತಿಮಪ್ರತಾಪನಂಗಜರೂಪಂ
ಜಯಸಿಂಹನೃಪಂ ಸತ್ಯಾ
ಶ್ರಯಕುಲತಿಲಕಂ ಸಮಸ್ತಭುವನಾಧಾರಂ ೩೧

ದಿಗಿಭವ್ರಾತದೊಳಿಂದ್ರದಂತಿ ಸುರರೊಳ್ ಚಕ್ರಾಯುಧಂ ಚಕ್ರವ
ರ್ತಿಗಳೊಳ್ ಶ್ರೀ ಜಗದೇಕಮಲ್ಲ ಮಹಿಪಂ ಶೈಲಂಗಳೊಳ್ ಮೇರು ಪ
ನ್ನಗರೊಳ್ ವಾಸುಕಿ ದಂಡನಾಯಕರೊಳಂ ಶ್ರೀಗಂಡಭೂರಿಶ್ರವಂ
ಮಿಗಿಲೆಂದಾರ್ ಪೊಗಳರ್ ಪಯೋನಿಧಿ ಪರಿತಾಶೇಷ ಭೂಭಾಗದೊಳ್ ೩೨

ಸಕಲೋರ್ವೀಶ್ವರ ದಂಡನಾಯಕ ವಿನೂತಾಂಘ್ರಿದ್ವಯಂ ದಂಡನಾ
ಯಕವೀರಾಗ್ರಣಿ ದಂಡನಾಯಕ ಚಮೂ ಚಕ್ರಾಯುಧಂ ದಂಡನಾ
ಯಕ ತೇಜೋನಿಧಿ ದಂಡನಾಯಕ ನಿಕಾಯಾಧೀಶ್ವರಂ ದಂಡನಾ
ಯಕ ಚೂಡಾಮಣಿಯೆಂದು ಬಣ್ಣಿಸದರಾರ್ ಶ್ರೀ ಸಿಂಹಸನ್ನಾಹನಂ ೩೩

ತಚ್ಚರಣ ಕಮಳ ಭೃಂಗಂ
ಸಚ್ಚರಿತಂ ಶೌರ್ಯವಾರ್ಧಿ ವಿಪ್ರಕುಲೋದ-
ನ್ವಚ್ಚಂದ್ರನಪಗತಾರಿ ಕು
ಭೃಚ್ಚಕ್ರಂ ಚಕ್ರವರ್ತಿ ದಂಡಾಧೀಶಂ ೩೪

ಧರಣೀಚಕ್ರದೊಳುಳ್ಳ ಪಾರ್ಥಿವರನಿರ್ಪತ್ತೊಂದು ಸೂಳ್ ಕೊಂದು ಭೀ
ಕರಕೋಪಾನಳನಂ ತದೀಯ ಯುವತೀನೇತ್ರಾಂಬುಧಾರಾಪರಂ
ಪರೆಯಿಂ ಮುಳ್ಗಿಸಿ ಗೆಲ್ದಮಂ ತಳೆದ ರಾಮುಂಗಗ್ಗಳಂ ವಿಕ್ರಮಾ
ಭರಣಂ ವಿಕ್ರಮದಿಂ ತ್ರಿವಿಕ್ರಮನಿಭಂ ಕೋದಂಡರಾಮಾಧಿಪಂ ೩೫

ಚರಿತವುಳ್ಳವನೂ ಆಗಿರುವನು. ೩೧. ಜಯಶ್ರೀಗೆ ಪತಿಯೂ, ಸತ್ಯಕ್ಕೆ ಆಶ್ರಯನೂ, ಅಸಾಧಾರಣ ಪ್ರತಾಪವುಳ್ಳವನೂ, ಮನ್ಮಥರೂಪನೂ, ಸತ್ಯಾಶ್ರಯ ಕುಲಕ್ಕೆ ಶ್ರೇಷ್ಠನೂ, ಸಮಸ್ತ ಜಗತ್ತಿನ ಆಧಾರ ಸ್ವರೂಪನೂ ಎಂದು ಜಯಸಿಂಹನೃಪನು ಪ್ರಸಿದ್ಧನಾಗಿದ್ದನು. ೩೨. ದಿಗ್ದಂತಿಗಳಲ್ಲಿ ಐರಾವತ, ದೇವತೆಗಳಲ್ಲಿ ವಿಷ್ಣು, ಚಕ್ರವರ್ತಿಗಳಲ್ಲಿ ಶ್ರೀ ಜಗದೇಕಮಲ್ಲ, ಶೈಲಗಳಲ್ಲಿ ಮೇರು, ಸರ್ಪಗಳಲ್ಲಿ ವಾಸುಕಿ, ದಂಡನಾಯಕರಲ್ಲಿ ಶ್ರೀಗಂಡ ಭೂರಿಶ್ರವರಿಗೆ ಮಿಗಿಲು ಎಂದು ಸಮುದ್ರಾಂಚಿತ ಭೂಭಾಗದಲ್ಲಿ ಅವನನ್ನು ಹೊಗಳದವರಾರು? ೩೩. ಸಮಸ್ತ ಚಕ್ರವರ್ತಿಗಳ ದಂಡನಾಯಕರಿಂದ ವಿನುತವಾದ ಪಾದಗಳಿರುವವನೂ, ದಂಡನಾಯಕ ವೀರಾಗ್ರಣಿಯೂ, ದಂಡನಾಯಕ ಸೈನ್ಯಕ್ಕೆ ವಿಷ್ಣುವಿನಂತಿರುವವನೂ, ದಂಡನಾಯಕರಲ್ಲಿ ತೇಜಸ್ವಿಯೂ, ದಂಡನಾಯಕ ಸಮೂಹಕ್ಕೆ ಅಧಿಪತಿಯೂ, ದಂಡನಾಯಕರಲ್ಲಿ ಶ್ರೇಷ್ಠನೂ ಎಂದು ಜಯಸಿಂಹನೃಪನನ್ನು ವರ್ಣಿಸದವರಾರು? ೩೪. ಆ ಕ[ದಂ]ಬ ವಂಶಾಧೀಶನಾಗಿರುವ ಚಾಳುಕ್ಯರಾಜನು ಜಯಂತೀಪುರದಲ್ಲಿ ಪೃಥ್ವೀ ಸಾಮ್ರಾಜ್ಯವನ್ನು ಮಾಡುತ್ತಿರಲು ಸಚ್ಚರಿತನೂ ಶೌರ್ಯಸಮುದ್ರನೂ ವಿಪ್ರಕುಲಸಮುದ್ರಕ್ಕೆ ಚಂದ್ರನೂ ಶತ್ರುಗಳೆಂಬ ಪರ್ವತಗಳನ್ನು ನಿವಾರಿಸಿದವನೂ ಚಕ್ರವರ್ತಿಯ ದಂಡಾಧೀಶನೂ ಅವನ ಪಾದಕಮಲಗಳಲ್ಲಿ ಭೃಂಗನಾಗಿದ್ದನು. ೩೫. ಕೋದಂಡ ರಾಮಾಧಿಪನೆಂಬ ಹೆಸರುಳ್ಳ ಈ ಚಕ್ರವರ್ತಿಯು ಭೂಮಿಯಲ್ಲಿರುವ ಕ್ಷತ್ರಿಯರನ್ನೆಲ್ಲ ಇಪ್ಪತ್ತೊಂದು ಬಾರಿ ಕೊಂದು

ಚತುರಂಬುರಾಶಿವಲಯ
ಕ್ಷಿತಿರಕ್ಷಣದಕ್ಷ ತೀಕ್ಷ್ಣ ಕೌಕ್ಷೇಯಕಮುಂ
ದಿತಬಾಹುರಾಹು ಕಬಳೀ
ಕೃತ ಚೋಳೀ ಮಾಳಿಕಾ ಮುಖೇಂದುವಿಳಾಸಂ ೩೬

ಬುಧ ವೈತಾಳಿಕ ಗಾಯಕಾರ್ಥಿನಟ ವೀಣಾವಾದ ಭೂದೇವ ಮಾ
ಗಧವಂದಿಪ್ರಕರಾರ್ಥಿ ಕಲ್ಪಮಹಿಜಂ ದೋರ್ಗರ್ವದಿಂದಾಂತ ವೈ
ರಿಧರಾಧೀಶ ಬಲಕ್ಕೆ ಗಾಂಡಿವಧರಂ ಗಂಗಾಧರಂ ತುಂಗಶ
ಕ್ತಿಧರಂ ವಜ್ರಧರಂ ಧರಾಧರಧರಂ ಶ್ರೀಕೀರ್ತಿವಿದ್ಯಾಧರಂ ೩೭

ಎನೆ ನೆಗಳ್ದ ಕುಮಾರಸ್ವಾ
ಮಿ ನಚ್ಚಿ ಮುದದಿಂದಮೀಯೆ ಪಡೆದಂ ಚಕ್ರೇ
ಶನ ಸಂಧಿವಿಗ್ರಹಾಸ್ಪದ
ಮನಾತ್ಮ ಸಾತ್ಕೃತ ನೃಪತಿವರ್ಗಂ ದುರ್ಗಂ ೩೮

ಆತನ ವಿಶುದ್ಧ ಗುಣಸಂ
ಘಾತಾತ್ಮಜ ಜನ್ಮಭೂಮಿ ಕರ್ಣಾಟಕ ಧಾ
ತ್ರೀತಿಲಕಮಖಿಳಜಗತೀ
ಖ್ಯಾತಂ ಕಿಸುಕಾಡನಾಡು ಸೊಗಯಿಸಿ ತೋರ್ಕುಂ ೩೯

ಆ ನಾಡೊಳಗ್ರಹಾರಂ
ಭೂನಾರೀ ಕುಚತಟಾಗ್ರಹಾರಂ ವಿಪುಳ
ಶ್ರೀನಿಳಯಮೆನಿಸಿ ಸಯ್ದಿ
ನಾನಾವಸ್ತೂತ್ಕರಾಕರಂ ಕರಮೆಸೆಗುಂ ೪೦

ಉಂಟಾದ ಭಯಂಕರಕೋಪಾಗ್ನಿಯನ್ನು ಆ ಕ್ಷತ್ರಿಯ ಸ್ತ್ರೀಯರ ಕಣ್ಣೀರ ಕೋಡಿಯಿಂದ ಕುಗ್ಗಿಸಿ ಜಯಶಾಲಿಯಾದ ಪರಶುರಾಮನಿಗಿಂತ ಶ್ರೇಷ್ಠನಾಗಿರುವನು; ಅಂಥ ವಿಕ್ರಮಾಭರಣನು ಪರಾಕ್ರಮದಲ್ಲಿ ತ್ರಿವಿಕ್ರಮನಿಗೆ ಸಮಾನನಾದವನು. ೩೬. ನಾಲ್ಕು ಸಮುದ್ರಗಳಿಂದ ಆವೃತವಾದ ಭೂಮಿಯ ಸಂರಕ್ಷಣೆಯಲ್ಲಿ ದಕ್ಷವಾದ ತೀಕ್ಷ್ಣ ಖಡ್ಗದಿಂದ ಶೋಭಿಸುವ ಕೈಯೆಂಬ ರಾಹುವಿನಿಂದ ಗ್ರಸ್ತವಾದ ಚೋಳಸ್ತ್ರೀಯರ ಮುಖಚಂದ್ರ ವೈಭವವನ್ನು ಹೊಂದಿದೆ. ೩೭. ಶ್ರೀಕೀರ್ತಿ ವಿದ್ಯಾಧರನು ಪಂಡಿತ, ವೈತಾಳಿಕ, ಗಾಯಕ, ಅರ್ಥಿ, ನಟ, ವೀಣಾವಾದಕ, ಬ್ರಾಹ್ಮಣ, ಮಾಗಧ, ವಂದಿ - ಮೊದಲಾದವರ ಸಮೂಹಕ್ಕೆ ಕಲ್ಪವೃಕ್ಷವಾಗಿರುವವನು. ಬಾಹುಗಳ ದರ್ಪದಿಂದ ಮೇಲೆ ಬಿದ್ದ ವೈರಿರಾಜರ ಬಲಕ್ಕೆ ಅರ್ಜುನನೂ, ಶಿವನೂ, ಸ್ಕಂದನೂ, ಇಂದ್ರನೂ, ಶ್ರೀಕೃಷ್ಣನೂ ಆಗಿದ್ದನು. ೩೮. ಎಂಬಂತೆ ಪ್ರಸಿದ್ಧನಾದ ಕುಮಾರಸ್ವಾಮಿಯು ನಂಬಿ ಸಂತೋಷದಿಂದ ಕೊಡಲು ಚಕ್ರವರ್ತಿಯಿಂದ ಸಂಧಿವಿಗ್ರಹಿ ಪದವಿಯನ್ನು ನೃಪತಿವರ್ಗದಿಂದ ಸತ್ಕೃತನಾದ ದುರ್ಗಸಿಂಹನು ಪಡೆದನು. ೩೯. ಆತನ ಪವಿತ್ರವಾದ ಗುಣಸಮೂಹಗಳಿಂದ ಕೂಡಿದ ಜನ್ಮಭೂಮಿಯು ಕರ್ಣಾಟಕ ಭೂಮಿಯಲ್ಲಿ ಶ್ರೇಷ್ಠವೂ ಸಮಸ್ತ ಜಗತ್ತಿನಲ್ಲಿ ಪ್ರಸಿದ್ಧವೂ ಆದ ಕಿಸುಕಾಡನಾಡು ಶೋಭಿಸಿ ತೋರುತ್ತಿತ್ತು. ೪೦. ಆ ನಾಡಿದ ಅಗ್ರಹಾರವು ಭೂಕಾಂತೆಯ ಸ್ತನತಟದ ಹಾರದ ತುದಿಯೂ ವಿಪುಲವಾದ ಸಂಪತ್ತಿನ ನಿಲಯವೂ

ಪರಮಾನಂದಮನೀವ ದೇವಭವನ ಶ್ರೀಲೀಲೆಯಿಂದಂ ಧರಾ
ಮರರುತ್ಸಾಹದೆ ಮಾಡುತಿರ್ಪ ಮಖಸಂದೋಹಂಗಳಿಂದಂ ಮುನೀ
ಶ್ವರರಿಂದಂ ನುತಸತ್ಯವಿಪ್ರವರ ವಿದ್ವದ್ವೃಂದದಿಂದಂ ಮನೋ
ಹರ ಸೌಂದರ್ಯವಿಭಾಸಿ ಸಯ್ಯಡಿ ಕರಂ ರಮ್ಯಂ ಮಹೀಭಾಗದೊಳ್ ೪೧

ವ॥ ಅಂತು ಸೊಗಯಿಸುವಗ್ರಹಾರದೊಳ್ ತರ್ಕ ವ್ಯಾಕರಣ ವಾತ್ಸ್ಯಾಯನಾದ್ಯಶೇಷ ವಿದ್ಯಾಪ್ರಕರಣನುಂ ಸಕಲಧರ್ಮಕ್ಕೆಲ್ಲಂ ಕಯ್ಯಾಲ್ ಮೂಡಿದಂತೆ ದುರ್ಗಸಿಂಹ ಬ್ರಾಹ್ಮಣನುಂಟು. ಆತನ ಪತ್ನಿ ರೇವಕಬ್ಬೆ ಗೌರೀದೇವಿಯೋಪಾದಿಯೊಳ್ ತನ್ನ ಪತಿಭಕ್ತಿಯಿಂದಿರಲ್ ಆ ದಂಪತಿಗಳ್ಗೆ ತಮ್ಮ ಕುಲಕ್ಕೆ ಪ್ರದೀಪನುಮಾಗಿ ಗೌತಮಕುಲದೊಳ್ ಸಮುದ್ರದೊಳ್ ಚಂದ್ರಂ ಪುಟ್ಟುವಂತೆ ಪುಟ್ಟಿ ಆ ಬ್ರಹ್ಮೋದಯದೊಳ್ ಮನ್ವಾದಿಪುರಾಣ ಮುನಿಗಣ ಪ್ರಣೂತ ಶ್ರುತಿವಿಹಿತ ವಿಶುದ್ಧ ಮಾರ್ಗನುಂ, ಪ್ರಣೂತಾತ್ಮೀಯ ಬಂಧುವರ್ಗನುಂ ನಿತ್ಯಹೋಮಾಧ್ಯಯನಾನೇಕ ಯಾಗಾವಭೃತಸ್ನಾನ ಪವಿತ್ರಗಾತ್ರನುಂ, ಸುಜನೈಕಮಿತ್ರನುಂ, ಸಕಲವೇದಾಧ್ಯಯನ ಮುಖರ ಪವಿತ್ರಾನನನುಂ, ಸಂತರ್ಪಿತಾತಿಥಿ ಪಿತೃದೇವತಾದ್ವಿಜನ್ಮಾನನುಂ, ಭಗವನ್ನಾರಾಯಣ ಚರಣಾಂಬುಜಸ್ಮರಣ ಪರಿಣತಾಂತಃಕರಣನುಂ, ನಿಜಗೋತ್ರಶತಪತ್ರಸಹಸ್ರಕಿರಣನುಂ, ತರ್ಕವ್ಯಾಕರಣ ಕಾವ್ಯನಾಟಕ ಭರತ ವಾತ್ಸ್ಯಾಯನಾದ್ಯಶೇಷ ವಿದ್ಯಾಸಮುದ್ರತರಣಗುಣೈಕಪುಣ್ಯನುಂ, ಧರಾಮರಾಗ್ರಗಣ್ಯನುಮಾಗಿ

ಬಗೆಬಗೆಯ ವಸ್ತುಸಮೂಹಗಳಿಗೆ ಆಶ್ರಯಸ್ಥಾನವೂ ಆದ ಸಯ್ಯಡಿ ಅತಿಶಯವಾಗಿ ಶೋಭಿಸುತ್ತಿತ್ತು. ೪೧. ಪರಮಾನಂದವನ್ನುಂಟುಮಾಡುವ ದೇವಾಲಯಗಳ ವೈಭವದಿಂದಲೂ ಬ್ರಾಹ್ಮಣರು ಉತ್ಸಾಹದಿಂದ ಮಾಡುತ್ತಿದ್ದ ಯಜ್ಞಗಳಿಂದಲೂ ಮುನಿಶ್ರೇಷ್ಠರಿಂದಲೂ ಶ್ರೇಷ್ಠ ಸತ್ಯವಿಗಳಿಂದಲೂ ಶ್ರೇಷ್ಠ ವಿದ್ವದ್ವೃಂದದಿಂದಲೂ ಮನೋಹರವಾದ ಸೌಂದರ್ಯದಿಂದ ಶೋಭಿಸುವ ಸಯ್ಯಡಿ ಪ್ರಪಂಚದಲ್ಲಿ ರಮ್ಯವಾಗಿತ್ತು. ವ॥ ಹಾಗೆ ಸೊಗಯಿಸುವ ಅಗ್ರಹಾರದಲ್ಲಿ ತರ್ಕವ್ಯಾಕರಣ ವಾತ್ಸ್ಯಾಯನಾದಿ ಸಮಸ್ತ ವಿದ್ಯಾಪ್ರಕರಣನೂ ಸರ್ವಧರ್ಮಗಳಿಗೆ ಕಯ್ಯಾಲು ಮೂಡಿದಂತೆ ಇರುವವನೂ ಆದ ದುರ್ಗಸಿಂಹನೆಂಬ ಬ್ರಾಹ್ಮಣನಿದ್ದನು. ಆತನ ಪತ್ನಿ ರೇವಕಬ್ಬೆ ಗೌರೀದೇವಿಯಂತೆ ಪತಿಭಕ್ತಿಯಿಂದಿರುತ್ತಿರಲು ಆ ದಂಪತಿಗಳಿಗೆ ತಮ್ಮ ಕುಲಪ್ರದೀಪಕನಾಗಿ ಗೌತಮಕುಲದಲ್ಲಿ ಸಮುದ್ರದಲ್ಲಿ ಚಂದ್ರನು ಹುಟ್ಟುವಂತೆ ಹುಟ್ಟಿ, ಅವನು ಮನ್ವಾದಿ ಪುರಾಣ ಮುನಿಗಣಗಳಿಂದ ಪ್ರಶಂಸಿತನಾಗಿ ಶ್ರುತಿವಿಹಿತ ವಿಶುದ್ಧಮಾರ್ಗನೂ, ಆತ್ಮೀಯ ಬಂಧುವರ್ಗದಿಂದ ಪ್ರಶಂಸಿತನೂ ನಿತ್ಯವೂ ಹೋಮ ಅಧ್ಯಯನ ಅನೇಕ ಯಾಗಗಳನ್ನು ಮಾಡಿ ಅವಭೃತಸ್ನಾನದಿಂದ ಪವಿತ್ರಗಾತ್ರನಾದವನೂ, ಸಜ್ಜನ ಮಿತ್ರನೂ, ಸಕಲವೇದಾಧ್ಯಯನ ಶಬ್ದದಿಂದ ಪವಿತ್ರಾನನನಾದವನೂ, ಅತಿಥಿ ಪಿತೃ ದೇವತೆ ಬ್ರಾಹ್ಮಣರನ್ನು ಸಂತೃಪ್ತಿಪಡಿಸಿದವನೂ, ಭಗವನ್ನಾರಾಯಣನ ಭಕ್ತನೂ ತನ್ನ ಕುಲವೆಂಬ ಕಮಲಕ್ಕೆ ಸೂರ್ಯನೂ, ತರ್ಕ ವ್ಯಾಕರಣ ಕಾವ್ಯ ನಾಟಕ ಭರತ ವಾತ್ಸ್ಯಾಯನಾದಿ ಸಮಸ್ತ ವಿದ್ಯಾಸಮುದ್ರವನ್ನು ಉತ್ತರಿಸಿದವನೂ, ಗುಣಗಳಿಂದ ಪುಣ್ಯನೂ, ಬ್ರಾಹ್ಮಣಶ್ರೇಷ್ಠನೂ

ವಿನಯೈಕ ಜನ್ಮಗೃಹಮಾ
ಳ್ತನದಾಸ್ಪದಮೊಳ್ಪಿನಾಬಿಮಾರ್ಪಿನ ಕಣಿಯಿಂ
ದನುನಯದಿಂ ಕೂರ್ತು ಜಗ
ಜ್ಜನಜಾಲಂ ಪೊಗೞೆ ದುರ್ಗಮಯ್ಯಂ ನೆಗೞ್ದಂ ೪೨

ಆ ವಿಪ್ರೋತ್ತಮನ ಮಗಂ
ಭೂವಿಶ್ರುತನೀಶ್ವರಾರ್ಯನೆಂಬೊಳ್ಪೆಸರಿಂ
ದೇವದ್ವಿಜಗುರುಜನಪದ
ಸೇವಾನಿರತಂ ಪರೋಪಕಾರಾಭಿರತಂ ೪೩

ಶರಣಾಗತರಂ ರಕ್ಷಿಸೆ
ಪರೋಪಕಾರಾರ್ಥಮರ್ಥಮಂ ತವಿಸೆ ದಿಗಂ
ತರಮಂ ನಿಮಿರ್ಚೆ ಜಸದಿಂ
ಪುರುಷೋತ್ತಮನೀಶ್ವರಾರ್ಯನಂ ತೋಱಿಸಿದಂ ೪೪

ಆತನ ಸತಿ ವಿಶದಗುಣ
ವ್ರಾತಾನ್ವಿತೆ ಧರ್ಮಮೂರ್ತಿ ಪತಿಭಕ್ತಿಯೊಳಾ
ಸೀತೆಗರುಂಧತಿಗೆ ಕುಭೃ
ಜ್ಜಾತೆಗೆ ದೊರೆ ರೇವಕಬ್ಬೆಯೆಂಬಳ್ ಪೆಸರ್ ೪೫

ಆ ರೇವಾಂಬಿಕೆಗಂ ದ್ವಿಜೋತ್ತಮನೆನಲ್ ಸಂದೀಶ್ವರಾರ್ಯಂಗಮು
ರ್ವೀರಾಮಾಧಿಪವಲ್ಲಭಂ ಬುಧಜನಾನಂದಪ್ರದಂ ಸ್ವಾನ್ವಯ
ಕ್ಷೀರೋದಾಮೃತರೋಚಿ ಪುಟ್ಟಿ ನೆಗೞ್ದಂ ಶ್ರೀ ದುರ್ಗಸಿಂಹಂ ಗುಣಾ
ಧಾರಂ ಧೀರನುದಾರಚಾರುಚರಿತಂ ವಿದ್ವಜ್ಜನೈಕಾಶ್ರಯಂ ೪೬

ಆಗಿ, ೪೨. ವಿನಯಕ್ಕೆ ಏಕಮಾತ್ರ ಆಶ್ರಯನು, ಪರಾಕ್ರಮದ ಆಸ್ಪದನು, ಒಳ್ಳೆಯತನಕ್ಕೆ ಆಧಾರನು, ಸಾಮರ್ಥ್ಯದ ಕಣಿ ಎಂದು ಪ್ರೀತಿಯಿಂದ ಜಗತ್ತಿನ ಜನಸಮೂಹವು ಹೊಗಳಲು ದುರ್ಗಮಯ್ಯನು ಪ್ರಸಿದ್ಧನಾದನು. ೪೩. ಆ ಬ್ರಾಹ್ಮಣಶ್ರೇಷ್ಠನ ಮಗ ಪ್ರಸಿದ್ಧನಾದ ಈಶ್ವರಾರ್ಯನೆಂಬ ಒಳ್ಳೆಯ ಹೆಸರಿನಿಂದ ದೇವಬ್ರಾಹ್ಮಣ ಗುರು ಜನಪದ ಸೇವಾನಿರತನಾಗಿಯೂ ಪರೋಪಕಾರಿಯೂ ಆಗಿದ್ದನು. ೪೪. ಶರಣಾಗತರನ್ನು ರಕ್ಷಿಸಲೂ ಪರೋಪಕಾರಕ್ಕಾಗಿ ಧನವನ್ನು ವ್ಯಯಿಸಲೂ ಯಶಸ್ಸಿನಿಂದ ದಿಗಂತಗಳಲ್ಲಿ ವ್ಯಾಪಿಸಲೂ ಪುರುಷೋತ್ತಮನು ಈಶ್ವರಾರ್ಯನನ್ನು ನೇಮಿಸಿದನು. ೪೫. ಆತನ ಸತಿಯು ಪರಿಶುದ್ಧ ಗುಣಸಮೂಹದಿಂದ ಕೂಡಿದವಳೂ ಧರ್ಮಮೂರ್ತಿಯೂ ಪತಿಭಕ್ತಿಯಲ್ಲಿ ಸೀತೆಗೂ ಅರುಂಧತಿಗೂ ಪಾರ್ವತಿಗೂ ಸಮಾನಳೂ ಆದ ರೇವಕಬ್ಬೆ ಎಂಬ ಹೆಸರಿನವಳಾಗಿದ್ದಳು. ೪೬. ಆ ರೇವಾಂಬಿಕೆಗೂ ಬ್ರಾಹ್ಮಣೋತ್ತಮನಾಗಿ ಪ್ರಸಿದ್ಧನಾದ ಈಶ್ವರಾರ್ಯನಿಗೂ ಉರ್ವೀರಾಮಾಧಿಪವಲ್ಲಭನೂ ವಿದ್ವಜ್ಜನಆನಂದಪ್ರದನೂ ತನ್ನ ಕುಲವೆಂಬ ಕ್ಷೀರಸಾಗರಕ್ಕೆ ಚಂದ್ರನಾಗಿಯೂ ಗುಣಾಧಾರನೂ ಧೀರನೂ ಉದಾರನೂ ಸುಂದರಚರಿತನೂ

ಜನಕಂ ಕರ್ಮಕುಲಪ್ರದೀಪನವನೀದೇವಾನ್ವಯಾಂಭೋಜಿನೀ
ದಿನಪಂ ಗೌತಮಗೋತ್ರಮಂಡನನಿಳಾಲೋಕಸ್ತುತಂ ದಾನಿ ವಾ
ಗ್ವನಿತಾಧೀಶ್ವರನೂರ್ಜಿತಂ ಜನನಿ ಶುದ್ಧಾಚಾರೆ ಸದ್ಧರ್ಮಮೂ
ರ್ತಿನಿ ರೇವಾಂಬಿಕೆಯೆಂದೊಡಾರ್ ಪೊಗಟರೀ ದುರ್ಗಾನ್ವಯ ಖ್ಯಾತಿಯಂ ೪೭

ಅಲಘುತರ ಪ್ರಗುಣ ದಶಾ
ಕಲಿತಂ ಜ್ಯೋತಿರ್ವಿಶೇಷದಿಂ ಪರಹಿತಮಂ
ವಿಲಸತ್ಕಾಂತಿ ಸುಪುತ್ರಃ
ಕುಲದೀಪಕ (ಎನಿಸಿ ದುರ್ಗಸಿಂಹಂ) ನೆಗಟ್ದಂ ೪೮

ಧರೆ ಬಣ್ಣಿಸೆ ಸಯ್ಯಡಿಯೊಳ್
ಪೊರೆದಾಳ್ದನ ಸಕಲ ಚಕ್ರವರ್ತಿಯ ಬೆಸದಿಂ
ಹರಿಹರಭವನಂಗಳನ
ಚ್ಚರಿಯೆನೆ ಮಾಡಿಸಿದನೇಂ ಕೃತಾರ್ಥನೊ ಸಿಂಹಂ ೪೯

ಅನವದ್ಯಾಚರಣಕ್ಕುದಾಹರಣಮುದ್ಯತ್ಕೀರ್ತಿಗಾಧಾರಮಾ
ಳ್ದನ ಕಾರ್ಯಕ್ಕೆ ಮರುತ್ತನೂಜನೆನಿಸಿರ್ದಾತ್ಮೀಯವಂಶಕ್ಕೆ ಮಂ
ಡನರತ್ನಂ ಕಟಕಾರ್ಣವ ಪ್ರತರಣ ಪ್ರೋದ್ಭಾಸಿ ಸಿದ್ಧೇಷ್ಟ ಶಿ
ಷ್ಟನಿಕಾಯಕ್ಕೆ ಪವಿತ್ರಮೆಂದು ಪೊಗಟ್ಗುಂ ವಿದ್ವಜ್ಜನಂ ದುರ್ಗನಂ ೫೦

ವಿದ್ವಜ್ಜನರಿಂಗೆ ಏಕಾಶ್ರಯನೂ ಆದ ಶ್ರೀ ದುರ್ಗಸಿಂಹನು ಹುಟ್ಟಿ ಪ್ರಸಿದ್ಧನಾದನು. ೪೭. ತಂದೆಯು ಕರ್ಮಕುಲಪ್ರದೀಪನೂ ಬ್ರಾಹ್ಮಣವಂಶವೆಂಬ ಕಮಲಕ್ಕೆ ಸೂರ್ಯನೂ ಗೌತಮ ಗೋತ್ರಕ್ಕೆ ಅಲಂಕಾರನೂ ಪ್ರಪಂಚದ ಜನರಿಂದ ಸ್ತುತನೂ ದಾನಿಯೂ ವಾಕ್ಶ್ರೀಯುತನೂ ಪ್ರವರ್ಧಮಾನನೂ, ಜನನಿಯು ಶುದ್ಧಾಚಾರೆಯೂ ಸದ್ಧರ್ಮಗಳ ಸಾಕಾರೆಯೂ ಆದ ರೇವಾಂಬಿಕೆ ಆಗಿರಲು ದುರ್ಗಸಿಂಹನ ಕುಲಖ್ಯಾತಿಯನ್ನು ಹೊಗಳದವರು ಯಾರು ? ೪೮. ಗುರುತರವಾದ ಹತ್ತು ಗುಣಗಳಿಂದ ಕೂಡಿದವನೂ ತೇಜಸ್ಸಿನಿಂದ ಪರೋಪಕಾರ ದಿಂದ ಪ್ರಕಾಶಮಾನನನೂ ಒಳ್ಳೆಯ ಮಗನೂ ಕುಲಪ್ರಕಾಶಕನೆಂದು ದುರ್ಗಸಿಂಹನು ಪ್ರಸಿದ್ಧನಾದನು. ೪೯. ಪ್ರಪಂಚವೇ ಬಣ್ಣಿಸಲು ಸಯ್ಯಡಿಯಲ್ಲಿ ಕಾಪಾಡಿ ಆಳಿದ ಸಕಲ ಚಕ್ರವರ್ತಿಯ ಆಜ್ಞೆಯಂತೆ ಹರಿಹರ ದೇವಾಲಯಗಳನ್ನು ಮಾಡಿಸಿದನು ; ದುರ್ಗಸಿಂಹನು ಎಂಥ ಕೃತಾರ್ಥ ! ೫೦. ನಿರ್ದುಷ್ಟವಾದ ನಡತೆಗೆ ಉದಾಹರಣನು, ಪ್ರಕಾಶಮಾನವಾದ ಕೀರ್ತಿಗೆ ಆಧಾರ, ಸ್ವಾಮಿಕಾರ್ಯಕ್ಕೆ ಹನುಮಂತ, ತನ್ನ ವಂಶಕ್ಕೆ ಅಲಂಕಾರ ರತ್ನ, ಸೈನ್ಯ ಸಮುದ್ರವನ್ನು ದಾಟುವುದರಲ್ಲಿ ಶೋಭಾಯಮಾನ, ಸಿದ್ಧ ಇಷ್ಟ ಶಿಷ್ಟರ ಸಮೂಹಕ್ಕೆ

ವಿನಯಾಧೀನನಹೀನಂ
ವಿನುತಕುಲೀನಂ ನಿಜೇಶಕಾರ್ಯಧುರೀಣಂ
ಮನುವಿಹಿತ ಧರ್ಮಮಾರ್ಗಾ
ಧ್ವನೀನನಿವನೆಂದು (ದುರ್ಗನೆನಿಸಿ) ಬನಲ್ತೇ ೫೧

ಆಶೆವಿಂಗಾಗರವೊಳ್ಗುಣಕ್ಕೆ ಕಣಿ ಶೌಚಕ್ಕಾಸ್ಪದಂ ಜಾಣ್ಮನ
ಕ್ಕೆಱೆವಟ್ಟೊಳ್ನುಡಿಗಾಣ್ಮನಾಯತಿಗಡರ್ಪಾರ್ಪಿಂಗೆ ಲೀಲಾಗೃಹಂ
ಗುಱಿ ಧರ್ಮಕ್ಕೆ ವಿನೀತವೃತ್ತಿಗೆ ತವರ್ ಸತ್ಯಕ್ಕಧಿಷ್ಠಾನಮೆಂ
ದಱೆತಂ ಕೈಮಿಗೆ ಕೂರ್ತು ಕೀರ್ತಿಸುವುದುರ್ವೀಮಂಡಲಂ ದುರ್ಗನಂ ೫೨

ನಿಶ್ಚಿತಮನರಲ್ಲದರಂ
ದುಶ್ಚರಿತರನೆಯ್ದೆ ಪಡೆದ ದೋಷಕ್ಕಂ ಪ್ರಾ
ಯಶ್ಚಿತ್ತಮೆಂದು ಸಕಲ ವಿ
ಪಶ್ಚಿನ್ನಿಧಿಯೆನಿಪ ದುರ್ಗನಂ ಬಿದಿ ಪಡೆದಂ ೫೩

ವಿನಯಾಂಭೋನಿಧಿ ಶಿಷ್ಟಕಲ್ಪ ಮಹಿಜಂ ಸತ್ಯವ್ರತಂ ವಿಪ್ರವಂ
ಶ ನಭೋಮಂಡನ ಚಂಡಭಾನು ವಿಲಸದ್ವಾಕ್ಛ್ರೀ ಮನೋರಾಮನೆಂ-
ದೆನಸುಂ ಧಾರಿಣಿ ಬಣ್ಣಿಕುಂ ನಿಜಯಶೋವಲ್ಲೀವೃತಾಂಭೋದಮಾ-
ರ್ಗನನಾರಾಧಿತ ಭರ್ಗನಂ ಭೃತವಿಪಶ್ಚಿತ್ಸರ್ಗನಂ ದುರ್ಗನಂ ೫೪

ಜಗದೊಳ್ ಪತಿಹಿತದೆಡೆಯೊಳ್
ನೆಗಳ್ದಿನಜನಿನೇಕದಂತನಿಂ ಪವನಜನಿಂ
ಖಗರಾಜನಿನೀ ದುರ್ಗಂ
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ೫೫

ದ್ರೋಣಿ ಎಂದು ದುರ್ಗಸಿಂಹನನ್ನು ವಿದ್ವಜ್ಜನರು ಹೊಗಳುವರು. ೫೧. ವಿನಯಕ್ಕೆ ಆಶ್ರಯನೂ ಉತ್ತಮನೂ ಸತ್ಕುಲಸಂಭವನೂ ಸ್ವಾಮಿಕಾರ್ಯಧುರೀಣನೂ ಮನುಧರ್ಮದ ಮಾರ್ಗದಲ್ಲಿರುವವನೂ ಎಂದು ದುರ್ಗಸಿಂಹ ಪ್ರಸಿದ್ಧನಲ್ಲವೇ ? ೫೨. ಜ್ಞಾನಕ್ಕೆ ಆಶ್ರಯಸ್ಥಾನ, ಒಳ್ಳೆಯ ಗುಣಕ್ಕೆ ಕಣಿ, ಶುಚಿಗೆ ಆಧಾರ, ಜಾಣತನಕ್ಕೆ ದಿಣ್ಣೆ, ಒಳ್ಳೆಯ ಮಾತಿಗೆ ಒಡೆಯ, ಪರಾಕ್ರಮಕ್ಕೆ ಆಶ್ರಯೆ, ಸಾಮರ್ಥ್ಯಕ್ಕೆ ಆಟದ ಮನೆ, ಧರ್ಮಕ್ಕೆ ಗುರಿ, ವಿನಯಕ್ಕೆ ತವರುಮನೆ, ಸತ್ಯಕ್ಕೆ ಆಶ್ರಯಸ್ಥಾನ, ಎಂದು ಬುದ್ಧಿಗೆ ಮೀರಿ ಪ್ರೀತಿಸಿ ದುರ್ಗಸಿಂಹನನ್ನು ಪ್ರಪಂಚವು ಹೊಗಳುವುದು. ೫೩. ಚಂಚಲಚಿತ್ತರನ್ನೂ ದುಷ್ಟರನ್ನೂ ಪಡೆದ ದೋಷಕ್ಕೆ ಪ್ರಾಯಶ್ಚಿತ್ತವೆಂಬಂತೆ ಸರ್ವ ವಿದ್ವಜ್ಜನ ಆಶ್ರಯನಾದ ದುರ್ಗಸಿಂಹನನ್ನು ವಿಧಿ ಪಡೆದನು! ೫೪. ವಿನಯ ಸಮುದ್ರ, ಶಿಷ್ಟ ಕಲ್ಪವೃಕ್ಷ, ಸತ್ಯವ್ರತ, ಬ್ರಾಹ್ಮಣ ವಂಶವೆಂಬ ಆಕಾಶಕ್ಕೆ ಅಲಂಕಾರಪ್ರಾಯನಾದ ಸೂರ್ಯ, ಶೋಭಿಸುವ ವಾಗ್ವನಿತೆಯ ಮನೋರಮ, ಎಂದೆಷ್ಟೋ ರೀತಿಯಲ್ಲಿ ತನ್ನ ವಂಶದ ಕೀರ್ತಿಯೆಂಬ ಬಳ್ಳಿಗೆ ಮೋಡನೂ, ಶಿವಭಕ್ತನೂ, ವಿದ್ವಜ್ಜನ ಸಮೂಹಕ್ಕೆ ಆಶ್ರಯನೂ ಆದ ದುರ್ಗಸಿಂಹನನ್ನು ಪ್ರಪಂಚ ವರ್ಣಿಸುವುದು. ೫೫. ಜಗತ್ತಿನಲ್ಲಿ ಸ್ವಾಮಿಹಿತದಲ್ಲಿ ಪ್ರಸಿದ್ಧನಾದ ಕರ್ಣನಿಗಿಂತ, ವಿಘ್ನೇಶ್ವರನಿಗಿಂತ, ಹನುಮಂತನಿಗಿಂತ, ಗರುಡನಿಗಿಂತ ದುರ್ಗಸಿಂಹನು ಇಮ್ಮಡಿ, ಮುಮ್ಮಡಿ, ನಾಲ್ಮಡಿ,

ಪರಮಾತ್ಮಂ ಪರಮೇಶ್ವರಂ ಮುರಹರಂ ದೈವಂ ಮಹಾಯೋಗಿಗಳ್
ಗುರುಗಳ್ ಶಂಕರಭಟ್ಟರ್ಬೈದೆ ಪೊರೆದಂ ಶ್ರೀಚೋಳಕಾಳಾನಲಂ
ಧರಣೀಶಾಗ್ರಣಿ ಚಕ್ರವರ್ತಿತಿಲಕಂ ಪ್ರೋನ್ಮತ್ತವೈರೀಭಕೇ-
ಸರಿ ಸಿಂಗಂ ಪತಿಯೆಂದೊಡುನ್ನತಿಯನಿನ್ನೇವಣ್ಣಿಪಂ ದುರ್ಗನಾ ೫೬*

ಪರಮಶ್ರೀಮನ್ಮಹಾಸೌಂದರ ರಜತಗಿರೀಂದ್ರಾಗ್ರದೊಳ್ ರಾಗದಿಂದಂ
ಗಿರಿಜಾಧೀಶಂ ಶಿವಂ ಶಂಕರನಮರನದೀವಲ್ಲಭಂ ದೇವದೇವಂ
ವರದಂ ಸಂಸಿದ್ಧಮಾದೀ ಕಥೆಯನಱಿಪುವೊಂದಂದದಿಂದರ್ಧನಾರೀ-
ಶ್ವರನಾಗಿರ್ದಂ ಸಮಸ್ತಾಮರ ಮಣಿಮಕುಟೋದ್ಘೃಷ್ಟಪಾದಾರವಿಂದಂ ೫೭

ವ॥ ಒಂದು ದಿವಸಂ ಪರಮೇಶ್ವರನುಂ ಮೇರುಪರ್ವತದ ಮೇಲೆ ಪಿರಿದುಂ ಸಂತೋಷದಿಂ ಎಡದಲ್ಲಿ ಬ್ರಹ್ಮನುಂ ಬಲದಲ್ಲಿ ವಿಷ್ಣುವುಂ ಪಿಂದೆ ಮೂವತ್ತುಮೂಱುಕೋಟಿ ದೇವತೆಗಳುಂ ಮುಂದೆ ನಂದಿನಾಥ ವೀರಭದ್ರಾದಿಗಣನಾಥಮುಂ ತೊಡೆಯ ಮೇಲೆ ಗೌರಿಯುಂ ಜಡೆಯಲ್ಲಿ ಗಂಗೆಯುಂ ಸಹಿತಮಾಗಿಯೊಡ್ಡೋಲಗಂಗೊಟ್ಟು ಕುಳಿತಿರ್ದಂ ಅಂತಿರ್ದ ಪರಮೇಶ್ವರಂಗೆ ಗಿರಿರಾಜತನೂಜೆ ಕರಕಮಲಂಗಳಂ ಮುಗಿದು, ದೇವಾ, ನೀವೆನಗೊಂದಪೂರ್ವಮಪ್ಪ ಕಥೆಯಂ ಪೇಬಲ್ವೇಳ್ಬುದೆನೆ, ಹರಂ ದರಹಸಿತವದನಾರವಿಂದನಾಗಿ ಪಾರ್ವತಿಗಪೂರ್ವಮಪ್ಪ ಕಥೆಗಳಂ ಪೇಳುತ್ತಿರಲಾ

ಐದುಮಡಿ ದೊಡ್ಡವನಾಗಿದ್ದಾನೆ. ೫೬. ಪರಮಾತ್ಮನು ಪರಮೇಶ್ವರ, ವಿಷ್ಣು ದೈವ, ಮಹಾಯೋಗಿಗಳಾದ ಶಂಕರಭಟ್ಟರು ಗುರುಗಳು, ಚೆನ್ನಾಗಿ ಪೋಷಿಸಿದವನು ಶ್ರೀಚೋಳಕಾಳಾನಲ ಎಂಬ ಬಿರುದುಳ್ಳ ರಾಜಶ್ರೇಷ್ಠನೂ, ಚಕ್ರವರ್ತಿ ತಿಲಕನೂ, ಚೆನ್ನಾಗಿ ಸೊಕ್ಕಿದ ವೈರಿಗಳೆಂಬ ಆನೆಗಳಿಗೆ ಸಿಂಹಸ್ವರೂಪನೂ ಆದ ಜಗದೇಕಮಲ್ಲ ಜಯಸಿಂಹನು ಒಡೆಯನು ಎಂದ ಮೇಲೆ ದುರ್ಗಸಿಂಹನ ದೊಡ್ಡತನವನ್ನು ಏನೆಂದು ವರ್ಣಿಸುವೆನು.* ೫೭. ಮಹಾಸೌಂದರ್ಯದಿದ ಕೂಡಿದ ಬೆಳ್ಳಿಯ ಬೆಟ್ಟದ ಶಿಖರದಲ್ಲಿ ಪ್ರೀತಿಯಿಂದ ಗಿರಿಜಾಪತಿಯಾದ ಶಿವನೂ ಶಂಕರನೂ ಭಾಗೀರಥಿಯ ವಲ್ಲಭನೂ ದೇವದೇವನೂ ವರದನೂ ಸಮಸ್ತ ದೇವತೆಗಳ ರತ್ನಕಿರೀಟಗಳು ತಾಗಿದ ಪಾದಕಮಲವುಳ್ಳವನೂ ಆದ ಶಿವನು ಪ್ರಸಿದ್ಧವಾದ ಈ ಕಥೆಯನ್ನು ಹೇಳುವುದಕ್ಕಾಗಿ ಅರ್ಧನಾರೀಶ್ವರನಾಗಿದ್ದನು. ವ॥ ಒಂದು ದಿವಸ ಪರಮೇಶ್ವರನು ಮೇರುಪರ್ವತದ ಮೇಲೆ ಅತ್ಯಂತ ಸಂತೋಷದಿಂದ ಎಡದಲ್ಲಿ ಬ್ರಹ್ಮನೂ ಬಲದಲ್ಲಿ ವಿಷ್ಣುವೂ ಹಿಂದೆ ಮೂವತ್ತು ಮೂರು ಕೋಟಿ ದೇವತೆಗಳೂ ಮುಂದೆ ನಂದೀಶ ವೀರಭದ್ರರೇ ಮೊದಲಾದ ಗಣಗಳ ಒಡೆಯರೂ ತೊಡೆಯ ಮೇಲೆ ಗೌರಿಯೂ ಜಡೆಯಲ್ಲಿ ಗಂಗೆಯೂ ಸಹಿತವಾಗಿ ಓಲಗಗೊಟ್ಟು ಕುಳಿತಿದ್ದನು. ಹಾಗಿದ್ದ ಪರಮೇಶ್ವರನಿಗೆ ಗೌರಿಯು ಕರಕಮಲಗಳನ್ನು ಮುಗಿದು, ದೇವಾ, ನೀವು ನನಗೆ ಒಂದು ಅಪೂರ್ವವಾದ ಕಥೆಯನ್ನು ಹೇಳಬೇಕು ಎನ್ನಲು ಹರನು ಮುಗುಳ್ನಕ್ಕು ಪಾರ್ವತಿಗೆ ಅಪೂರ್ವವಾದ ಕಥೆಗಳನ್ನು ಹೇಳುತ್ತಿದ್ದನು. ಆಗ ಆ ಕಥಾಗೋಷ್ಠಿಯಲ್ಲಿ ಪುಷ್ಪದಂತನೆಂಬ

---

* ಮುಂದಿನ ಕಂದ ಪದ್ಯವು ಆದರ ಮುಂದಿನ ಪದ್ಯಕ್ಕೆ ಅನ್ವಯವಾಗುವಿರುವುದರಿಂದ ಪ್ರಕ್ಷಿಪ್ತವೆಂದು ತೋರುತ್ತದೆ ; ಇಲ್ಲಿ ಅದನ್ನು ಕೈ ಬಿಡಲಾಗಿದೆ.

ಕಥಾಗೋಷ್ಠಿಯೊಳ್ ಪುಷ್ಪದಂತನೆಂಬಂ ಗಣಪ್ರಧಾನನಿರ್ದೆಲ್ಲಮಂ ಕೇಳ್ದಾತನೇನಾನುಮೊಂದು ಕಾರಣದಿಂ ಮಾನವಲೋಕದೊಳ್ ಪುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿರ್ದು ಹರಂ ಗಿರಿಸುತೆಗೆ ಪೇೞ್ದ ಕಥೆಗಳಂ ಪೈಶಾಚಿಕ ಭಾಷೆಯೊಳ್ ಬೃಹತ್ಕಥೆಗಳಂ ಮಾಡಿ ಪೇೞ್ದೊಡದಂ ವಸುಭಾಗಭಟ್ಟಂ ಕೇಳ್ದು ಕಥಾಸಮುದ್ರದೊಳ್ ಪಂಚರತ್ನಮಪ್ಪೈದು ಕಥೆಗಳನಾಯ್ದುಕೊಂಡು ಪಂಚತಂತ್ರಮೆಂದು ಪೆಸರಿಟ್ಟು ಸಮಸ್ತಜಗಜ್ಜನೋಪಕಾರಾರ್ಥಂ ಪೇೞ್ದನದಱಿಂ

ವಸುಭಾಗಭಟ್ಟ ಕೃತಿಯಂ
ವಸುಧಾಧಿಪಹಿತಮನಖಿಲ ವಿಬುಧಸ್ತುತಮಂ
ಪೊಸತಾಗಿರೆ ವಿರಚಿಸುವೆಂ
ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ ೫೮

ವ|| ಆ ಕಥಾಪ್ರಪಂಚಮೆಂತೆಂದೊಡೆ, ಅನೇಕ ಕರಿಮಕರ ತಿಮಿತಿಮಿಂಗಿಲ ಕುಲಕ್ಷೋಭ ಜನಿತಭಂಗುರತರತ್ತರಂಗಸಂಘಾತಸಂಗತಮಪ್ಪ ಜಲನಿಧಿವಳಯದಿಂ ಪರಿಕ್ಷಿಪ್ತಮಾಗಿ ಸೊಗಯಿಸುವ ಜಂಬೂದ್ವೀಪದ ಭಾರತವರ್ಷದ ಸಕಲಜಗತೀಜನಸ್ತುತ್ಯ ದಾಕ್ಷಿಣಾತ್ಯವೆಂಬ ಜನಪದಮುಂಟು. ಅಲ್ಲಿ

ಮಹನೀಯಂ ಸುರಸದ್ಮಪದ್ಮವನಷಂಡಂ ರಮ್ಯಹರ್ಮ್ಯಾವಳೀ
ಗೃಹರತ್ನದ್ಯುತಿಭಾಸಿತಂ ಫಲಭರಾಕ್ರಾಂತೋನ್ನತೋದ್ಯಾನ ಭೂ-
ರುಹ ಸಂಕೀರ್ಣವಿರಾಜಿತಂ ಬಹುಳವಾಪೀಕೂಪ ಶೋಭಾವಹಂ
ಮಹದಾನಂದಕರಂ ಕರಂ ಸೊಗಯಿಕುಂ ಸೌರೂಪ್ಯಮೆಂಬಾ ಪುರಂ ೫೯

ಗಣಪ್ರಧಾನನು ಇದ್ದು ಎಲ್ಲವನ್ನೂ ಕೇಳಿ ಆತನು ಏನೋ ಒಂದು ಕಾರಣದಿಂದ ಮನುಷ್ಯಲೋಕದಲ್ಲಿ ಹುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿದ್ದು ಹರನು ಗೌರಿಗೆ ಹೇಳಿದ ಕಥೆಗಳನ್ನು ಪೈಶಾಚಿಕ ಭಾಷೆಯಲ್ಲಿ ಬೃಹತ್ಕಥೆಗಳನ್ನಾಗಿ ಮಾಡಿ ಹೇಳಿದನು. ಅವುಗಳನ್ನು ವಸುಭಾಗಭಟ್ಟನು ಕೇಳಿ ಆ ಕಥಾಸಮುದ್ರದಲ್ಲಿ ಪಂಚರತ್ನವಾದ ಐದು ಕಥೆಗಳನ್ನು ಆರಿಸಿ ಪಂಚತಂತ್ರ ಎಂದು ಹೆಸರಿಟ್ಟು ಸಮಸ್ತ ಜನರ ಉಪಕಾರಕ್ಕಾಗಿ ಹೇಳಿದನು. ಅದರಿಂದ, ೫೮. ರಾಜರಿಗೆ ಹಿತಕರವೂ, ಸಮಸ್ತಪಂಡಿತರಿಂದ ಪ್ರಶಂಸಿತವೂ ಆದ ವಸುಭಾಗಭಟ್ಟನ ಕೃತಿಯನ್ನು ಪ್ರಪಂಚದಲ್ಲಿ ಹೊಸದಾಗುವಂತೆ ಪಂಚತಂತ್ರವನ್ನು ಕನ್ನಡದಲ್ಲಿ ವಿರಚಿಸುವೆನು. ವ|| ಆ ಕಥಾಪ್ರಪಂಚ ಹೀಗಿದೆ : ಅನೇಕ ನೀರಾನೆ, ಮೊಸಳೆ, ತಿಮಿ, ತಿಮಿಂಗಿಲಗಳ ಸಮೂಹದ ಕ್ಷೋಭೆಯಿಂದ ಹುಟ್ಟಿದ ಮೇಲೆದ್ದು ಬೀಳುವ ತೆರೆಗಳ ಪರಂಪರೆಯಿಂದ ಕೂಡಿದ ಸಮುದ್ರಗಳಿಂದ ಆವೃತವಾಗಿ ಶೋಭಿಸುವ ಜಂಬೂದ್ವೀಪದ ಭಾರತವರ್ಷದ ಸರ್ವಜನರ ಪ್ರಶಂಸೆಗೆ ಗುರಿಯಾದ ದಾಕ್ಷಿಣಾತ್ಯ ಎಂಬ ಪ್ರದೇಶವಿದೆ. ಅಲ್ಲಿ, ೫೯. ದೊಡ್ಡ ದೊಡ್ಡ ದೇವಾಲಯಗಳಿಂದಲೂ ಸರೋವರಗಳಿಂದಲೂ ಮನೋಹರವಾದ ಸೌಧಸಮೂಹಗಳ ರತ್ನಕಾಂತಿಯ ಶೋಭೆಯಿಂದಲೂ ಫಲಭಾರದಿಂದ ಬಾಗಿರುವ ದೊಡ್ಡ ತೋಟಗಳಲ್ಲಿರುವ ವೃಕ್ಷರಾಜಿಗಳ ಸೊಬಗಿನಿಂದಲೂ, ಅನೇಕ ಕೆರೆಬಾವಿಗಳಿಂದ ಶೋಭಾಯಮಾನವೂ ಮಹಾನಂದಕರವೂ ಆದ ಸೌರೂಪ್ಯ ಎಂಬ ಪಟ್ಟಣವು ಅತಿಶಯವಾಗಿ ಶೋಭಿಸುತ್ತಿತ್ತು.

ಅದಱ ಮಣಿಭವನದೀಪ್ತಿಗ-
ಳೊದವಿ ದಿವಂಬರೆಗಮಿಂದ್ರಚಾಪಶ್ರೀಯಂ
ಪುದಿದೊಳಕೊಂಡಿರ್ಪುವಕಾ-
ಲದೊಳಂ ಸೌಂದರವಿಚಿತ್ರವರ್ಣಯುತಂಗಳ್ ೬೦

ಅನುಪಮಮಪ್ಪ ವಿಭ್ರಮದೊಳೊಂದಿದ ಪುರ್ಬುಗಳೆಂಬ ಬಿಲ್ಗಳಿಂ
ಘನಕುಚಮಂಡಳಾಗ್ರದಿನನೂನಲಸದ್ಭುಜಪಾಶದಿಂ ವಿಳೋ-
ಚನ ಶರಜಾಳದಿಂ ಜಘನ ಚಕ್ರದಿನಲ್ಲಿಯ ಸೌಂದರೀಜನಂ
ಮನಸಿಜಭೂಮಿಭೃಜ್ಜಯನಶಾಲೆಯ ಲೀಲೆಯಿನೊಪ್ಪಿ ತೋಱುಗುಂ ೬೧

ಎಸೆವ ಬಹುರತ್ನರಾಶಿಯ
ಪಸರಂಗಳಿನದಱ ಬೀದಿಗಳ್ ಪಲವುಂ ರಂ-
ಜಿಸಿ ತೋರ್ಕುಮಾವಗಂ ಕುಂ-
ಭಸಂಭವಂ ಕುಡಿದ ಲವಣವಾರ್ಧಿಯ ತೆಱದಿಂ ೬೨

ಅದನಾಳ್ವಂ ಸಕಳಾವನೀಶ್ವರ ಕಿರೀಟಾನರ್ಘ್ಯರತ್ನಸ್ಫುರ-
ತ್ಪದಪದ್ಮಂ ಗುಣಜನ್ಮಸದ್ಮನಹೃತ್ಸೇನಾನಲಂ ಕಾಮಿನೀ
ವದನಾಂಭೋಜ ದಿವಾಕರಂ ಪ್ರಕಟಿತಾಶೇಷಾರ್ಥ ಶಾಸ್ತ್ರಾಗಮಂ
ಮದನಾಕಾರನುದಾರನಚ್ಯುತನಿಭಂ ವಿಶ್ವಾವನೀವಲ್ಲಭಂ ೬೩

ವಿಶದ ಯಶೋಲತಿಕಾವೃತ
ದಶದಿಗ್ವಲಯಂ ಬುಧಾಶ್ರಯಂ ಸಕಳಕಳಾ-
ಕುಶಲಂ ಪ್ರಭುಮಂತ್ರೋತ್ಸಾ-
ಹಶಕ್ತಿಯುತನಮರಶಕ್ತಿಯೆಂಬಂ ಪೆಸರಿಂ ೬೪

೬೦. ಅದರ ರತ್ನಸೌಧಗಳ ಕಾಂತಿಗಳು ಹುಟ್ಟಿ ಸ್ವರ್ಗದವರೆಗೆ ಸುಂದರ ವಿಚಿತ್ರ ವರ್ಣಗಳಿಂದ ಕೂಡಿದ ಇಂದ್ರಚಾಪದ ಸೊಬಗನ್ನು ಅಕಾಲದಲ್ಲಿಯೂ ಹೊಂದಿದ್ದುವು. ೬೧. ಅಸಾಧಾರಣವಾದ ಭ್ರಮೆಯನ್ನು ಉಂಟುಮಾಡುವ ಹುಬ್ಬುಗಳೆಂಬ ಬಿಲ್ಲುಗಳಿಂದಲೂ ಘನವಾದ ಸ್ತನಗಳೆಂಬ ಖಡ್ಗಗಳಿಂದಲೂ ನಿರ್ದುಷ್ಟವಾಗಿ ಹೊಳೆಯುವ ಭುಜಗಳೆಂಬ ಪಾಶದಿಂದಲೂ ಕಣ್ಣುಗಳೆಂಬ ಬಾಣಾವಳಿಗಳಿಂದಲೂ ಜಘನವೆಂಬ ಚಕ್ರದಿಂದಲೂ ಸುಂದರಿಯರು ಮನ್ಮಥರಾಜನ ಆಯುಧಶಾಲೆಯ ಲೀಲೆಯಿಂದ ಸೊಗಯಿಸಿ ತೋರಿದರು. ೬೨. ಅಗಸ್ತ್ಯನು ಕುಡಿದ ಸಮುದ್ರದಂತೆ ಶೋಭಿಸುವ ಬಹುರತ್ನರಾಶಿಯ ಹಸರಗಳಿಂದ ಅದರ ಹಲವು ಬೀದಿಗಳು ಯಾವಾಗಲೂ ಶೋಭಿಸಿ ತೋರುತ್ತಿದ್ದುವು. ೬೩. ಅದನ್ನಾಳುವವನು ಸಕಲ ರಾಜರ ಕಿರೀಟಗಳ ಅನರ್ಘ್ಯ ರತ್ನಗಳಿಂದ ಹೊಳೆಯುವ ಪಾದಕಮಲವುಳ್ಳವನೂ, ಗುಣಗಳಿಗೆ ತವರುಮನೆಯೂ, ಶತ್ರುಸೇನೆಗೆ ಅಗ್ನಿಯಾಗಿರುವವನೂ, ಕಾಮಿನೀವದನ ಗಳೆಂಬ ಕಮಲಗಳಿಗೆ ಸೂರ್ಯನೂ, ಸಮಸ್ತ ರಾಜನೀತಿಯನ್ನು ತಿಳಿದವನೂ, ಮನ್ಮಥನಂತೆ ಮನೋಹರಾಕಾರನೂ, ಉದಾರನೂ, ವಿಷ್ಣುವಿಗೆ ಸಮಾನನೂ, ವಿಶ್ವದ ಭೂವಲ್ಲಭನೂ ಆಗಿದ್ದನು. ೬೪. ದಶದಿಕ್ಕುಗಳಲ್ಲಿಯೂ ಯಶಸ್ಸೆಂಬ ಬಳ್ಳಿಯು ಹಬ್ಬಿದವನೂ, ಪಂಡಿತರಿಗೆ ಆಶ್ರಯದಾತನೂ, ಸಕಲಕಲಾಕುಶಲನೂ, ರಾಜನೀತಿಸಾಮರ್ಥ್ಯವುಳ್ಳವನೂ ಆದ ಅಮರಶಕ್ತಿಯೆಂಬ

ವ॥ ಅಂತಾತನಜಾತಶತ್ರುವಿನಂತೆ ಧರ್ಮೋಪಾರ್ಜಿತವಿತ್ತನುಂ ಯಕ್ಷೇಶ್ವರನಂತೆ ಧನರಕ್ಷಾಪ್ರವೀಣನುಂ ವಿಕವಂತನಂತನವರತ ದಾನಶೂರನುಂ ಆಖಂಡಲನಂತೆ ಖಂಡಿತಾರಾತಿ ಭೂಭೃತ್ಪಕ್ಷನುಂ, ಮಂದರಮಹೀಧರನಂತೆ ಕ್ಷಮಾಧರನುಂ, ನಾರಾಯಣನಂತೆ ಲಕ್ಷ್ಮೀಸಮಾಲಿಂಗಿತ ವಕ್ಷಃಸ್ಥಳನುಂ, ಪದ್ಮಾಸನನಂತೆ ರಾಜಹಂಸೋಪಶೋಭಿತನುಂ, ವಾಸುಕಿಯಂತನೇಕಭೋಗಾನ್ವಿತನುಂ, ಚಂದ್ರಮನಂತೆ ಜನನಯನಾನಂದನನುಂ ಆದಿತ್ಯನಂತೆ ಅಧಿಕಪ್ರತಾಪನುಮೆನಿಸಿ, ಸಕಲಗುಣಕ್ಕಾಶ್ರಯನುಂ, ವಂದಿಜನಾಶ್ರಯನುಂ, ಅದ್ವಿತೀಯ ಮಹಿಮಾತಿಶಯನುಂ, ಅಧಿಗತಸಿದ್ಧಿತ್ರಯನುಂ, ಉಪಾಯಚತುಷ್ಟಯ ಪ್ರಯೋಗಪ್ರವೀಣನುಂ, ವಿನಿರ್ಜಿತ ಪಂಚೇಂದ್ರಿಯ ಪ್ರಭಾವಕನುಂ, ಅನುಗತ ಷಾಡ್ಗುಣ್ಯನಯನನುಂ, ದೂರೀಕೃತ ಸಪ್ತವ್ಯಸನನುಂ, ಮನುಚರಿತಾಷ್ಟಕ ವರ್ಗವಿಧಾನನುಂ, ನವನಿಧಿಸಂಪೂರ್ಣನುಂ, ಪಾಲಿತ ದಶದಿಶಾಚಕ್ರನುಂ, ಏಕಾದಶರುದ್ರಾವತಾರನುಂ, ದ್ವಾದಶರಾಜಾರ್ಕಪ್ರಯುಕ್ತಗುಪ್ತಚರನುಂ, ಅವನಿಪರಿಪೂರ್ಣನುಮಾಗಿ ಸಕಲವಸುಂಧರಾವಳಯಮುಮಂ ರತ್ನವಳಯಮುಮಂ ತಾಳ್ವಂತೆ ನಿಜಭುಜಾಗ್ರದೊಳ್ ತಾಳ್ದು ನಿಂದಾತಂಗೆ,

ಹೆಸರಿನಿಂದ ಇದ್ದನು. ವ॥ ಹಾಗೆ ಅವನು ಧರ್ಮರಾಯನಂತೆ ಧರ್ಮದಿಂದ ಸಂಪಾದಿಸಿದ ಐಶ್ವರ್ಯವುಳ್ಳವನೂ, ಕುಬೇರನಂತೆ ಧನರಕ್ಷಾ ಪ್ರವೀಣನೂ, ಗಣಪತಿಯಂತೆ ಸದಾ ದಾನಶೂರನೂ, ಇಂದ್ರನಂತೆ ಶತ್ರುಗಳಾದ ರಾಜರ (ಪರ್ವತಗಳ) ರೆಕ್ಕೆಗಳನ್ನು ಕತ್ತರಿಸಿದವನೂ, ಮಂದರ ಪರ್ವತದಂತೆ ಭೂಮಿಯನ್ನು ಧರಿಸಿದವನೂ, ನಾರಾಯಣನಂತೆ ಲಕ್ಷ್ಮಿಯಿಂದ ಆಲಿಂಗಿತವಾದ ವಕ್ಷಃಸ್ಥಳವುಳ್ಳವನೂ, ಬ್ರಹ್ಮನಂತೆ ರಾಜಹಂಸಗಳಿಂದ ಶೋಭಿತನೂ, ವಾಸುಕಿಯಂತೆ ಅನೇಕ ಸುಖಗಳನ್ನುಳ್ಳವನೂ, ಚಂದ್ರನಂತೆ ಜನರ ಕಣ್ಣುಗಳಿಗೆ ಆನಂದಕರನೂ, ಆದಿತ್ಯನಂತೆ ಮಹಾ ಪ್ರತಾಪಶಾಲಿಯೂ, ಸಕಲ ಗುಣಗಳಿಗೆ ಆಶ್ರಯಸ್ಥಾನನೂ, ಹೊಗಳುಭಟ್ಟರಿಗೆ ಆಶ್ರಯದಾತನೂ, ಅಸಾಧಾರಣ ಮಹಿಮೆಯಿಂದ ಕೂಡಿದವನೂ, ಅಣಿಮಾ, ಗರಿಮಾ, ಲಘಿಮಾ ಎಂಬ ಸಿದ್ಧಿತ್ರಯಗಳನ್ನು ಬಲ್ಲವನೂ, ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳನ್ನು ಪ್ರಯೋಗಿಸುವುದರಲ್ಲಿ ಪ್ರವೀಣನೂ, ಪಂಚೇಂದ್ರಿಯಗಳನ್ನು ಗೆದ್ದವನೂ, ಸಂಧಿ, ವಿಗ್ರಹ, ಯಾನ, ಆಸನ, ಸಮಾಶ್ರಯ, ದ್ವೈಧೀಭಾವ ಎಂಬ ಷಡ್ಗುಣಗಳನ್ನು ಹೊಂದಿದವನೂ, ಮೃಗಯಾ, ದ್ಯೂತ, ಹಗಲು ನಿದ್ರೆ, ಹಾದರ, ಸುರಾಪಾನ, ನೃತ್ಯಸಂಗೀತ, ಚಾಡಿ ಎಂಬ ಸಪ್ತವ್ಯಸನಗಳನ್ನು ದೂರ ಮಾಡಿದವನೂ, ಕೃಷಿ, ವ್ಯಾಪಾರಾಭಿವೃದ್ಧಿ, ದುರ್ಗರಚನೆ, ಸೇತು ನಿರ್ಮಾಣ, ಗ್ರಾಮಾರಣ್ಯ ರಕ್ಷಣೆ, ರತ್ನಶೋಧನೆ, ಗಜಾಶ್ವ ಶಾಲಾವ್ಯವಸ್ಥೆ, ಕಪ್ಪ ವಸೂಲಿ - ಎಂಬ ಮನು ಹೇಳಿದ ಅಷ್ಟಕ ವರ್ಗವಿಧಾನವನ್ನು ಬಲ್ಲವನೂ, ಹಯ, ಗಜ, ರಥ, ದುರ್ಗ, ಭಂಡಾರ, ಅಗ್ನಿ, ರತ್ನ, ಧ್ಯಾನ, ಪ್ರಮದಾ - ಎಂಬ ನವನಿಧಿಗಳಿಂದ ಸಂಪೂರ್ಣನೂ, ದಶದಿಕ್ಕುಗಳನ್ನು ಪಾಲಿಸುವವನೂ, ಏಕಾದಶ ರುದ್ರಾವತಾರನೂ, ದ್ವಾದಶಾರ್ಕರನ್ನು ಗುಪ್ತಚಾರರನ್ನಾಗಿ ಹೊಂದಿದವನೂ, ಸಂಪೂರ್ಣ ಭೂಮಿಯನ್ನು ಪಡೆದವನೂ, ಆಗಿ ಸಕಲ ಭೂವಲಯವನ್ನು ರತ್ನದ ಬಳೆಯನ್ನು ಧರಿಸುವಂತೆ ತನ್ನ

ಪ್ರಮಿತಗುಣರವಿನಯಕ-
ರ್ಕಶಚಿತ್ತೋನ್ಮತ್ತರಖಿಲವಿಷಯಕ್ರೀಡಾ-
ವಶಗತಸುತರಾದರನೇ-
ಕಶಕ್ತಿ ವಸುಶಕ್ತಿ ರುದ್ರಶಕ್ತಿಗಳೆಂಬರ್ ೭೫

ಒಂದು ದಿವಸಮಾ ಧರಾಧೀಶ್ವರನಾಸ್ಥಾನಭೂಮಿಯೊಳನಂತ ಸಾಮಂತ ಮಂತ್ರಿ ಪುರೋಹಿತಾಂತರ್ವಾಂಶಿಕ ಶ್ರೀಕರಣಸೇನಾನಾಯಕ ಸಂಧಿವಿಗ್ರಹಿ ಪ್ರಮುಖ ನಿಖಿಲ ಪರಿವಾರ ಪರಿವೃತನಾಗಿ, ಮಹಾವಿಭೂತಿಯಿಂದೊಡ್ಡೋಲಗಂಗೊಟ್ಟು ಮಹೀಪಾಲನಿರ್ಪುದುಮಾ ಪ್ರಸ್ತಾವದೊಳತ್ಯಂತ ಯೌವನಮದನವಿಕಾರವಿಕೃತವೇಷರುಂ, ನೀತಿಶಾಸ್ತ್ರ ಸದ್ಭಾವನಾ ಬಹಿರ್ಮುಖರುಂ, ವೃದ್ಧೋಪಸೇವಾಮೃತಾಸ್ವಾದನಾತಿದೂರರುಂ, ದುರ್ವಿನೀತ ಧೂರ್ತ ವಿಟ ವಿದೂಷಕ ಪ್ರಭೃತಿ ನಿಖಿಲಜನಗೋಷ್ಠೀನಿರತರುಂ, ವಿವೇಕವಿಕಳಮತಿಗಳುಮಪ್ಪ ನಿಜತನೂಭವರ್ ಮೂವರುಮೋಲಗಕ್ಕೆ ಬರ್ಪುದಂ ಕಂಡು, ಅರಸಂ-ಈ ಕುಮಾರರಂ ಬಾಲಕಾಲದೊಳ್ ತೊಟ್ಟು ವಿದ್ಯಾಭ್ಯಾಸಂಗೆಯಿಸದೆ ಸ್ವೇಚ್ಛಾವಿಹಾರಿಗಳಂ ಮಾಡಿ ಕಿಡಿಸಿದಂ. ಇನ್ನುಮಿವಂದಿರನೀಯಂದದೊಳಿರಿಸಿದೆನಪ್ಪೊಡೆ ಅವಿನೀತರಾಗಿ ಪಗೆವರ್ಗೆ ವಶಗತರಪ್ಪರದಱಿಂ. ಶ್ರುತವಿನಯಸಂಪನ್ನರಂ ಮಾಡಲ್ವೇಳ್ಪುದು ಎಂತುಂ ಸುಭಾಷಿತಮಿಂತೆಂಬುದಲ್ತೆ:

ಶ್ಲೋ॥ ಅವಿನಯಮಂತರಾಸಭಿಜ್ಞಂ ವಶಮವಶಂ ಹಿ ನಯಂತಿ ವಿದ್ವಿಷಃ ।
ಶ್ರುತವಿನಯನಿಧಿಂ ಸಮಾಶ್ರಿತಂ ತಂ ತನುಮಪಿ ನೈತಿ ಪರಾಭವಃ ಕ್ವಚಿತ್ ೧

ಭುಜಾಗ್ರದಲ್ಲಿ ಧರಿಸಿ ನಿಂತ ಅವನಿಗೆ, ೭೫. ಗುಣವಿಹೀನರೂ, ಅವಿನೀತರೂ, ಕರ್ಕಶಚಿತ್ತರೂ, ಉನ್ಮತ್ತರೂ, ಸಮಸ್ತ ಇಂದ್ರಿಯ ಕ್ರೀಡಾಸಕ್ತರೂ ಆದ ಅನೇಕಶಕ್ತಿ, ವಸುಶಕ್ತಿ, ರುದ್ರಶಕ್ತಿಗಳೆಂಬ ಗಂಡು ಮಕ್ಕಳಾದರು. ವ॥ ಒಂದು ದಿವಸ ಆ ಧರಾಧೀಶ್ವರನು ಆಸ್ಥಾನದಲ್ಲಿ ಅನೇಕ ಸಾಮಂತ ಮಂತ್ರಿ ಪುರೋಹಿತರಿಂದಲೂ, ವ್ಯಾಯಾಮ ಶಾಲಾಧ್ಯಕ್ಷರಿಂದಲೂ, ಗಣಕರಿಂದಲೂ, ಸೇನಾನಾಯಕರಿಂದಲೂ, ಸಂಧಿ ವಿಗ್ರಹಿಗಳಿಂದಲೂ ಕೂಡಿದ ಸಮಸ್ತ ಪರಿವಾರ ಸಮೇತನಾಗಿ ಮಹಾವೈಭವದಿಂದ ಒಡ್ಡೋಲಗಗೊಟ್ಟಿದ್ದನು. ಆ ಸಂದರ್ಭದಲ್ಲಿ ಅತ್ಯಂತ ಯೌವನ ಮದವಿಕಾರವಿಕೃತವೇಷರೂ, ನೀತಿಶಾಸ್ತ್ರ ಸದ್ಭಾವನೆಗಳಿಗೆ ಹೊರತಾದವರೂ, ವೃದ್ಧಸೇವೆಯೆಂಬ ಅಮೃತಾಸ್ವಾದನಕ್ಕೆ ದೂರವಾದವರೂ, ಅವಿನೀತರೂ, ಧೂರ್ತವಿಟ, ವಿದೂಷಕರೇ ಮೊದಲಾದ ಸಾಮಾನ್ಯ ಜನರ ಗೋಷ್ಠಿಯಲ್ಲಿ ನಿರತರೂ, ವಿವೇಕಶೂನ್ಯರೂ ಆದ ತನ್ನ ಮಕ್ಕಳು ಮೂವರೂ ಓಲಗಕ್ಕೆ ಬರುವುದನ್ನು ಅರಸನು ಕಂಡು ಹೀಗೆಂದುಕೊಂಡನು : ಈ ಕುಮಾರರನ್ನು ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ತೊಡಗಿಸದೆ ಸ್ವೇಚ್ಛಾವಿಹಾರಿಗಳನ್ನಾಗಿ ಮಾಡಿ ಕೆಡಿಸಿದೆನು. ಇನ್ನೂ ಇವರನ್ನು ಇದೇ ರೀತಿಯಲ್ಲಿ ಇರಿಸಿದಲ್ಲಿ ಅವಿನೀತರಾಗಿ ಶತ್ರುಗಳಿಗೆ ವಶರಾಗುವರು. ಅದರಿಂದ ಇವರನ್ನು ಶ್ರುತವಿನಯಸಂಪನ್ನರನ್ನಾಗಿ ಮಾಡಬೇಕು. ಹೇಗೂ

ಟೀ॥ ಅತ್ಯಂತ ದುರ್ವಿನೀತನಂ, ಅಂತರವಱಿಯದವನಂ, ಇಂದ್ರಿಯವಶನಪ್ಪಾತನಂ ಶತ್ರುಗಳ್ ಕಿಡಿಸುವರ್. ಶ್ರುತವಿನಯಸಂಪನ್ನನಪ್ಪಾತಂಗೆತ್ತಣಾನುಂ ಬಡತನಮಾದೊಡಂ ಪರಾಭವ ಮನೆಯ್ದುವಱಿಯಂ.

ನಯಶಾಸ್ತ್ರಕ್ರಮದಿಂ ವಿರೋಧಿನೃಪರಂ ಗೆಲ್ದಾಳ್ದನೇಕಾಕಿಯಾ-
ಗಿಯುಮುರ್ವೀತಳಮಂ ನರೇಂದ್ರತಿಲಕಂ ಶ್ರೀಚಂದ್ರಗುಪ್ತಂ ನಿಜಾ-
ನ್ವಯರಾಜ್ಯಕ್ರಮದೊಳ್ ಚತುರ್ಬಲಸಮೇತಂ ನಿಂದು ತನ್ನೊಂದು ದು-
ರ್ನಯದಿಂದಂ ನೆಗೞ್ದಿಯ್ದೆ ಕೆಟ್ಟನಧಿಕಂ ದುರ್ಬುದ್ಧಿ ದುರ್ಯೋಧನಂ ೬೬

ವ॥ ಅದಱಿನಿವರೊಳೊರ್ವನಂ ಮದೀಯ ಭುಜಬಳಾವಷ್ಟಂಭದಿಂದಂಭೋಧಿವರಂ ನಿವಿರ್ದ ಸಕಲ ವಸುಂಧರಾವಳಯಮುಮಂ ರಕ್ಷಿಸುವಂತು ಮಾಡಲ್ಕೊಡಿವರ್ ಶ್ರುತವಿಹೀನರ್, ಇವರಂ ಶ್ರುತವಿನಯಸಂಪನ್ನರಪ್ಪಂತು ಮಾಡಿಪ್ಪೆನೆಂಬವನುಳ್ಳೊಡಾತನೇನಂ ಬೇಡಿದೊಡಂ ಕುಡುವೆನೆಂದಾಸ್ಥಾನ ಸ್ಥಿತರಪ್ಪ ಪಂಡಿತರ್ಕಳಂ ನೋಡುತ್ತುಮಿರೆಯವರೊಳೊರ್ಬಂ ಮುಕ್ಕೋಷ್ಠನುಂ ನಿಕೃಷ್ಟನುಮಪ್ಪ ಭಟ್ಟನಿಂತೆಂದಂ: ನಿಮ್ಮೀ ಕುಮಾರರಪ್ಪೊಡೆ ಯೌವನಮದೋನ್ಮತ್ತರುಂ ದುರ್ಮುಖರುಂ ಚಂಚಳಚಿತ್ತರುಮಾಗಿರ್ದಪ್ಪರಿವರಂ ನೀತಿವಿದರಪ್ಪಂತು ತಿಳಿಪ್ಪುದುಂ ಮುದುಗುದುರೆಯಂ ತಿರ್ದುವಂತಕ್ಕುಮೆಂದು ಕಷ್ಟನಿಷ್ಠುರ ವಚನಂಗಳಂ ನುಡಿವುದುಮಾತನ ಮಾತಂ ಮಾರ್ಕೊಂಡು ಸಮಸ್ತಶಾಸ್ತ್ರವಿಚಾರಸಾರನುಂ ಚತುರುಪಧಾವಿಶುದ್ಧನುಂ, ಬುದ್ಧಿವೃದ್ಧನುಮನೇಕ ಶಿಷ್ಯವಿಖ್ಯಾತ ಕೀರ್ತಿಯುಂ ಭದ್ರಮೂರ್ತಿಯುಮಪ್ಪ ವಸುಭಾಗಭಟ್ಟನಿಂತೆಂದಂ:

ಸುಭಾಷಿತವು ಹೀಗೆ ಹೇಳುವುದಲ್ಲವೇ: ಶ್ಲೋ॥ ಅತ್ಯಂತ ದುರ್ವಿನೀತನನ್ನೂ, ಭೇದಭಾವವನ್ನು ತಿಳಿಯದವನನ್ನೂ, ಇಂದ್ರಿಯ ಲೋಲುಪನನ್ನೂ ಶತ್ರುಗಳು ಕೆಡಿಸುವರು. ಶ್ರುತವಿನಯ ಸಂಪನ್ನನಾದವನಿಗೆ ಎಲ್ಲಿಂದಲೂ ಬಡತನವಾದರೂ ಪರಾಭವ ಸಂಭವಿಸುವುದಿಲ್ಲ. ಎಂಬ ಈ ನೀತಿಶಾಸ್ತ್ರವುಂಟು. ಅಲ್ಲದೆ, ೬೬. ನೀತಿಶಾಸ್ತ್ರಕ್ಕೆ ಅನುಸಾರವಾಗಿ ಶತ್ರುರಾಜರನ್ನು ಏಕಾಕಿಯಾಗಿಯೂ ಗೆದ್ದು ಭೂತಳವನ್ನು ಶ್ರೀ ಚಂದ್ರಗುಪ್ತನೆಂಬ ಚಕ್ರವರ್ತಿ ಆಳಿದನು. ತನ್ನ ಕುಲದ ರಾಜ್ಯಭಾರದಲ್ಲಿ ಚತುರಂಗಬಲ ಸಮೇತನಾಗಿದ್ದೂ ತನ್ನ ಒಂದು ದುರ್ನೀತಿಯಿಂದ ನಡೆದು ದುರ್ಬುದ್ಧಿಯ ದುರ್ಯೋಧನನು ಅಧಿಕವಾಗಿ ಕೆಟ್ಟನು. ವ॥ ಆದರಿಂದ ಇವರಲ್ಲಿ ಒಬ್ಬನನ್ನು ನನ್ನ ಭುಜಬಲ ಸಾಮರ್ಥ್ಯದಿಂದ ಸಮುದ್ರದವರೆಗೆ ವ್ಯಾಪಿಸಿದ ಸಕಲ ಭೂಮಂಡಲವನ್ನು ರಕ್ಷಿಸುವಂತೆ ಮಾಡೋಣ ಎಂದರೆ ಇವರು ವಿದ್ಯಾವಿಹೀನರು. ಇವರನ್ನು ವಿದ್ಯಾವಿನಯ ಸಂಪನ್ನರಾಗುವಂತೆ ಮಾಡುವೆನೆಂಬವನು ಇರುವುದಾದರೆ ಅವನು ಏನನ್ನು ಬೇಡಿದರೂ ಕೊಡುವೆನು, ಎಂದು ಆಸ್ಥಾನಸ್ಥಿತರಾದ ಪಂಡಿತರನ್ನು ನೋಡಲು ಅವರಲ್ಲಿ ಹರಕು ಬಾಯಿಯವನೂ, ನಿಕೃಷ್ಟನೂ ಆದ ಭಟ್ಟನೊಬ್ಬನು, "ನಿಮ್ಮ ಈ ಕುಮಾರರು ಯೌವನ ಮದೋನ್ಮತ್ತರೂ, ದುರ್ಮುಖರೂ, ಚಂಚಲಚಿತ್ತರೂ ಆಗಿರುವರು. ಇವರನ್ನು ನೀತಿವಿದರನ್ನಾಗಿ ತಿದ್ದುವುದೂ ಮುದಿಗುದುರೆಯನ್ನು ತಿದ್ದುವುದೂ ಒಂದೇ" ಎಂದು ಕಷ್ಟನಿಷ್ಠುರವಾಗಿ ನುಡಿದನು. ಅವನನ್ನು ಎದುರಿಸಿ ಸಮಸ್ತಶಾಸ್ತ್ರ ವಿಚಾರಸಾರನೂ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರುಪಧಾವಿಶುದ್ಧನೂ, ಬುದ್ಧಿವೃದ್ಧನೂ, ಅನೇಕ ಶಿಷ್ಯ ವಿಖ್ಯಾತ ಕೀರ್ತಿಯುಳ್ಳವನೂ, ಶುಭಾಕಾರನೂ ಆದ ವಸುಭಾಗಭಟ್ಟನು ಹೀಗೆಂದನು:

ಎನಿತೋದನೋದಿಯುಂ ಮನ-
ದನಿತೆ ವಲಂ ಬುದ್ಧಿಯಕ್ಕುಮೆಂದು ಸಮಸ್ತಾ-
ವನಿಯ ಜನಮೊನಕೆವಾಡ-
ಪ್ಪಿನೆಗಂ ಸಲೆ ನುಡಿದ ನುಡಿ ಯಥಾರ್ಥಂ ನಿನ್ನೊಳ್ ೬೭

ಶ್ಲೋ॥ ಸ್ವಭಾವಮನುವರ್ತಂತೇ ಪಾಂಡಿತ್ಯಂ ಕಿಂ ಕರಿಷ್ಯತಿ ॥೨॥
ಟೀ॥ ತನ್ನ ಪ್ರಕೃತಿ ಬಿಡದಿರಲ್ ಅಱಿಕೆಯೇನಂ ಮಾಡುವುದು?
ಎಂಬ ಪುರಾಣವಾಕ್ಯಮೇಕೆ ಪುಸಿಯಕ್ಕುಮಲ್ಲದೆಯುಂ,

ಶುಕಶಾರಿಕಾದಿ ಪಕ್ಷಿ-
ಪ್ರಕರಂ ಮೊದಲಾಗಿ ಶಿಕ್ಷೆಯಂ ಕೈಕೊಳ್ಗುಂ
ಪ್ರಕಟಂ ತಾನೆನೆ ಮಾನವ-
ನಿಕರಂ ಕೈಕೊಳ್ಳದೆಂದು ನುಡಿವರೆ ಮರುಳೇ ೬೮

ವ॥ ಆದಱಿಂ ನಿನ್ನ ಪರಿಜ್ಞಾನದ ತೆಱನನಱಿಯಲಾದುದು ನೀಂ ಮಟ್ಟಮಿರೆಂದಾ ಭಟ್ಟನಂ ಮುಟ್ಟುಗಿಡೆ ನುಡಿದುಂ ಮಾಣದೆ ವಸುಭಾಗಭಟ್ಟಂ ವಿಭುಗಭಿಮುಖನಾಗಿ,

ದೇವ ಭವದೀಯಸುತರಂ
ಮೂವರುಮಂ ಜಡರನಾಱು ತಿಂಗಳ್ಗೆ ಜಯ-
ಶ್ರೀವರ ಸಮಸ್ತ ನೃಪವಿ-
ದ್ಯಾವರರಪ್ಪಂತು ಮಾಡುವೆಂ ಪರಮಾರ್ಥಂ ೬೯

ವ॥ ಅಂತು ಮಾಡಲಾಱದಂದು ತಪಂಬಡುವೆನೆಂದು ವಸುಭಾಗಭಟ್ಟಂ ಪ್ರತಿಜ್ಞಾಪೂರ್ವಕಂ ನುಡಿವುದುಮಮರಶಕ್ತಿ ಸಂತಸಂಬಟ್ಟು ಕುಮಾರರಂ ಸಮರ್ಪಿಸುವುದುಂ, ವಸುಭಾಗಭಟ್ಟನವರಂ ಕೈಕೊಂಡು ಶುಭದಿನ ಸುಮುಹೂರ್ತಮೊಳ್ ವಿದ್ಯಾಗಮೋದ್ಯುಕ್ತರಂ ಮಾಡುವುದುಂ, ಅವಂದಿರ್

೬೭. ಎಷ್ಟು ವಿದ್ಯೆಯನ್ನು ಕಲಿತರೂ ಮನಸ್ಸಿನಷ್ಟೇ ತಾನೇ ಬುದ್ಧಿಯ ಸಿದ್ಧಿ ! ಎಂದು ಸಮಸ್ತ ಪ್ರಪಂಚದ ಜನರು ಒನಕೆಹಾಡಾಗಿ ನುಡಿದ ಸೂಕ್ತಿ ನಿನ್ನಲ್ಲಿ ಯಥಾರ್ಥವಾಗಿದೆ. ಶ್ಲೋ॥ ಸ್ವಭಾವವನ್ನು ಬಿಡದಿರಲು ತಿಳಿವಳಿಕೆಯಿಂದ ಏನು ಪ್ರಯೋಜನ ಎಂಬ ಪುರಾಣವಾಕ್ಯ ಏಕೆ ಸುಳ್ಳಾಗುವುದು ? ಅಲ್ಲದೆ, ೬೮. ಶುಕಶಾರಿಕಾದಿ ಪಕ್ಷಿಗಳೂ ಶಿಕ್ಷಣವನ್ನು ಪಡೆಯುತ್ತವೆ ಎನ್ನುವಾಗ ಮನುಷ್ಯನು ಬುದ್ಧಿವಂತನಾಗಲಾರ ಎನ್ನುವುದು ಹುಚ್ಚುತನವಲ್ಲವೇ? ವ॥ ಅದರಿಂದ ನಿನ್ನ ಜ್ಞಾನದ ಮಟ್ಟವನ್ನು ತಿಳಿದಂತಾಯಿತು. ನೀನು ತೆಪ್ಪಗಿರು ಎಂದು ಆ ಭಟ್ಟನಿಗೆ ಗೌರವ ಕೆಡುವಂತೆ ಹೇಳಿಯೂ ಬಿಡದೆ ರಾಜನ ಕಡೆಗೆ ಮುಖಮಾಡಿ, ೬೯. ಸ್ವಾಮಿ, ನಿಮ್ಮ ಮೂವರೂ ಮಕ್ಕಳನ್ನು ಆರುತಿಂಗಳ ಕಾಲದಲ್ಲಿ ಜಯಶ್ರೀವರರನ್ನಾಗಿಯೂ ಸಮಸ್ತ ರಾಜವಿದ್ಯಾಪರಿಣತರನ್ನಾಗಿಯೂ ಮಾಡುವೆನು. ಇದು ಸತ್ಯ. ವ॥ ಹಾಗೆ ಮಾಡಲಾಗದಿದ್ದಲ್ಲಿ ತಪಸ್ಸಿಗೆ ಹೋಗುವೆ ಎಂದು ವಸುಭಾಗಭಟ್ಟನು ಪ್ರತಿಜ್ಞಾಪೂರ್ವಕವಾಗಿ ನುಡಿದನು. ಅಮರಶಕ್ತಿಯು ಸಂತೋಷಪಟ್ಟು ತನ್ನ ಕುಮಾರರನ್ನು ವಸುಭಾಗಭಟ್ಟನಿಗೆ ಸಮರ್ಪಿಸಿದನು, ವಸುಭಾಗಭಟ್ಟನು ಅವರನ್ನು ಸ್ವೀಕರಿಸಿ ಶುಭದಿನ ಶುಭಮುಹೂರ್ತದಲ್ಲಿ ವಿದ್ಯಾಶಾಸ್ತ್ರದಲ್ಲಿ ಉದ್ಯುಕ್ತರನ್ನಾಗಿ ಮಾಡಿದನು. ಅವರು ಮುನ್ನುಗ್ಗುವ

ಅತಿವರ್ತಿಯಪ್ಪ ಮತ್ತಗಜಮಂ ಕಂಬಕ್ಕೆ ತರ್ಪಂತೊತ್ತಂಬದಿಂ ಬಂದುಂ ಪಿಡಿವೆತ್ತ ಕಳ್ಳನಂತೆ ಪಿಡಿಮಿಡಿಗೊಳುತ್ತಿರ್ದುಂ, ಅಪಸ್ಮಾರಕಗ್ರಹಗ್ರಹೀತರಂತೆ ವಕ್ರಗ್ರೀವರಾಗಿಯಂ, ಉಗ್ರಗ್ರಹಂ ಸೋಂಕಿದಂತೆ ಮರುಳಾಗಿಯುಂ ನೆಱಿಗಿವುಡರಂತೆ ಕಿವುಂಡುಗೇಳ್ದುಂ, ಪಿಸುಣಂ ಕೇಳ್ದ ಸತ್ಪುರುಷನಂತೆ ಕೇಳ್ದುವನಲ್ಲಿಯೇ ಮಱೆದುಂ, ಸೂಕಳಾಶ್ವದಂತೆ ಶಿಕ್ಷೆಯನೆಂತುಂ ಕೈಕೊಳ್ಳದಿರೆ, ಚಿಂತಾಕ್ರಾಂತನಾಗಿ ಸ್ವಾಂತದೊಳ್ ವಿಚಾರಿಸಿಕೊಂಡು ಏನಂ ಮಾಳ್ಪೆನೆಂದು ಸಪ್ಪನೆ ಸುಗಿದು ಬೆಱಗಾಗಿರೆಯುಂ ಆ ಕುಮಾರರುಂ ತಮ್ಮೊಡನಾಡುವ ಧೂರ್ತ ಗೋವಳಕರಂ ಕೂಡಿಕೊಂಡು ಪಾಸದ ನಾಯ್ಗಳಂ ತರಿಸಿ ಬಲೆಗಳಂ ತಂದು ಬೇಂಟೆಗೆ ಪೋಗಲುದ್ಯುಕ್ತರಪ್ಪುದುಂ ಆ ವಸುಭಾಗಭಟ್ಟಂ ಆ ಕುಮಾರಕರ ಮನದಿಚ್ಛೆಯನಱಿದು ತಾನುಮವರೊಳೊರ್ವನಾಗಿ ನಾಯ್ಗಳಂ ಪಿಡಿದು ಪೊಱಮಡೆ ಆ ಕುಮಾರರ್ ಕಂಡು ಕರಮೊಳ್ಳಿತ್ತಾಯ್ತೆಂದು ಸಂತೋಷಂಬಟ್ಟು ಉಡಲ್ಕೊಟ್ಟು ವೀಳೆಯಮನಿತ್ತು ಸಂತುಷ್ಟಿಪಡಿಸಿ ಪೋಗುತ್ತಿರೆ ವಸುಭಾಗಭಟ್ಟಂ ತನ್ನ ಮನದೊಳಗೆ ಈ ಕುಮಾರರ್ಗೆ ಹಾಸ್ಯರಸಮೊಸರ್ವಂತುಪ್ಪೊಂದು ಕತೆಯಂ ಪೇಳ್ದಿಯವರ ಮನೋಧರ್ಮಮಂ ನೋಡುವೆನೆಂದುಯಿಂತೆಂದಂ: ಕುವರರ್ಕಳಿರಾ, ನಾಮೆಲ್ಲಂ ಮುಂದಣ ವನಾಂತರಕ್ಕೆ ಪೋಪನ್ನಮೊಂದು ನರಿಯ ಕಥೆಯಂ ಪೇಳ್ವೆನೆ? ಎಂದು ಬೆಸಗೊಳೆ ಆ ಕುವರರುಂ ಪೇಳೆಮೆಂಬುದುಂ ವಸುಭಾಗಭಟ್ಟನಿಂತೆಂದಂ:

೧. ನರಿಯ ಕತೆ

ಸಿರಿವಾಸಿಯೆಂಬ ಪುರದೊಳ್
ಸಿರಿವಂತನೆಂಬನೊರ್ವ ಪಾದಜನಧಿಕಂ
ಸ್ವರಚಾಪನೊಡನೆ ದೊರೆಯನೆ
ಧರೆಯೊಳ್ ತಾಂ ಕರ್ಪುವಿತ್ತಿ ಪಾಲಿಸುತಿರ್ದಂ ೭೦

ಮದ್ದಾನೆಯನ್ನು ಕಂಬಕ್ಕೆ ತರುವಂತೆ ಒತ್ತಾಯದಿಂದ ಬಂದೂ, ಕೋಳ ಹಾಕಿದ ಕಳ್ಳನಂತೆ ಸಿಡಿಮಿಡಿಗೊಳ್ಳುತ್ತಿದ್ದೂ, ಅಪಸ್ಮಾರ ಹಿಡಿದವರಂತೆ ಕುತ್ತಿಗೆ ಸೊಟ್ಟಗೆ ಮಾಡಿಕೊಂಡೂ, ಭಯಂಕರ ಭೂತ ಬಡಿದವರಂತೆ ಮರುಳರಾಗಿಯೂ, ಸಂಪೂರ್ಣ ಕಿವುಡರಂತೆ ಕೇಳದವರಂತೆ ಇದ್ದೂ, ಚಾಡಿಯನ್ನು ಕೇಳುವ ಸತ್ಪುರುಷನಂತೆ ಕೇಳಿದುದನ್ನು ಅಲ್ಲಿಯೇ ಮರೆತೂ, ಪಳಗಿಸದ ಕುದುರೆಯಂತೆ ಶಿಕ್ಷಣವನ್ನು ಏನು ಮಾಡಿದರೂ ಸ್ವೀಕರಿಸಲಿಲ್ಲ. ವಸುಭಾಗಭಟ್ಟನು ಚಿಂತಾಕ್ರಾಂತನಾಗಿ ಮನಸ್ಸಿನಲ್ಲಿ ವಿಚಾರಿಸಿಕೊಂಡು ಏನನ್ನು ಮಾಡುವೆನು ಎಂದು ತಟ್ಟನೆ ಹೆದರಿ ಬೆರಗಾದನು. ಆ ಕುಮಾರರೂ ತಮ್ಮೊಡನೆ ಆಡುವ ತುಂಟಗೋವಳರನ್ನು ಕೂಡಿಕೊಂಡು ಹಗ್ಗ ಕಟ್ಟಿದ ನಾಯಿಗಳನ್ನು ತರಿಸಿ ಬಲೆಗಳನ್ನು ತಂದು ಬೇಟೆಗೆ ಹೋಗಲು ಉದ್ಯುಕ್ತರಾದರು. ಆ ವಸುಭಾಗಭಟ್ಟನು ಆ ಕುಮಾರರ ಮನಸ್ಸಿನ ಇಂಗಿತವನ್ನು ತಿಳಿದು ತಾನೂ ಅವರಲ್ಲಿ ಒಬ್ಬನಾಗಿ ನಾಯಿಗಳನ್ನು ಹಿಡಿದು ಹೊರಡಲು ಆ ಕುಮಾರರು ಕಂಡು ಬಹಳ ಚೆನ್ನಾಯಿತು ಎಂದು ಸಂತೋಷಪಟ್ಟು ಉಡಲಿಕ್ಕೆ ಕೊಟ್ಟು ವೀಳ್ಯವನ್ನಿತ್ತು ಸಂತುಷ್ಟಿಪಡಿಸಿ ಹೋಗುತ್ತಿದ್ದರು. ವಸುಭಾಗಭಟ್ಟನು ತನ್ನ ಮನಸ್ಸಿನಲ್ಲಿ ಈ ಕುಮಾರರಿಗೆ ಹಾಸ್ಯರಸವು ಒಸರುವಂತೆ ಒಂದು ಕಥೆಯನ್ನು ಹೇಳಿ ಅವರ ಮನೋಧರ್ಮವನ್ನು ಪರೀಕ್ಷಿಸುವೆನು ಎಂದು ಹೀಗೆಂದನು : ಕುಮಾರರೇ, ನಾವೆಲ್ಲರೂ ಮುಂದಿನ ಬೇರೊಂದು ವನಕ್ಕೆ ಹೋಗುವಷ್ಟರಲ್ಲಿ ಒಂದ ನರಿಯ ಕಥೆಯನ್ನು ಹೇಳಲೇ ಎಂದು ಕೇಳಲು ಆ ಕುಮಾರರೂ ಹೇಳಿರಿ ಎನ್ನಲು ವಸುಭಾಗಭಟ್ಟನು ಹೀಗೆಂದನು: ೭೦. ಸಿರಿವಾಸಿಯೆಂಬ ಪುರದಲ್ಲಿ ಸಿರಿವಂತ ಎಂಬ ಮನುಷ್ಯನಿಗೆ

ವ॥ ಅಂತಾತಂ ಕರ್ವುವಿತ್ತಿ ಸುತ್ತಂ ಬೇಲಿಯಂ ಕಟ್ಟಿ ಪಾಲಿಸುತ್ತುಮಿರೆ ಕೆಲವಾನೊಂದು ದಿವಸಕ್ಕೆ ಕರ್ವು ನೆಱೆದು ಗಿಣ್ಣೇಱುವುದುಂ ಮೃಗಧೂರ್ತನೆಂಬುದೊಂದು ನರಿಯದಂ ಕಂಡು ಸಮೀಪಕ್ಕೆವಂದು ಬೇಲಿಯಂ ಸುತ್ತಿವಂದು ನೋಡಿಯೊಂದೆಡೆಯೊಳೊಂದು ಕಳ್ಳದಾರಿಯಂ ಕಂಡು ನಿಚ್ಚನಿಚ್ಚಂ ಬಂದು ಕರ್ವೆಲ್ಲಮಂ ತಿಂದು ಬೇಸಱಿಸುತ್ತಿರೆ ಆ ಶೂದ್ರಂ ನರಿಯ ಕಾಟಕ್ಕೆ ಬೇಸತ್ತುವೊಂದು ದಿವಸಮಾ ನರಿಯಂ ಕೊಲಲುಪಾಯಮಂ ಕಂಡುವೊಂದು ಮಾರಗಲದ ಬೇಲಿಯಂ ಕಿೞ್ತು ಪೆರ್ಬಟ್ಟೆಯಂ ಮಾಡಿ ತಾನುಮಾ ಬಟ್ಟೆಯೊಳ್ ಬಯ್ಗಿನ ಸಮಯದೊಳವೊಂದು ಕಯ್ಯೊಳ್ ಕೂೞ ಬುತ್ತಿಯಂ ಪಿಡಿದು ತಲೆಯಂ ಕೆದಱೆ ಕಣ್ಣಂ ಮುಚ್ಚಿ ಸತ್ತ ಪೆಣನಂತೆ ಬಿೞ್ದಿರ್ದುದುಂ ಆ ನರಿ ಬಂದು ಸಮೀಪದೊಳ್ ನಿಂದು ನೋಡಿ ತನ್ನ ಮನದೊಳ್ ಸಂಶಯಂ ಪುಟ್ಟಿ ಮತ್ತಂ ಕಿಱಿದಂತರಂ ತೊಲಗಿ ತನ್ನೊಳ್ಳೆಯಿಂತೆಂದುದು : ನಾಂ ಕಾಣದ ಸಂಗ್ರಾಮರಂಗಮಿಲ್ಲ, ತೊೞಲದ ವಿಷಯಮಿಲ್ಲ, ಪೋಗದ ಪೆರ್ಬಟ್ಟೆಯಿಲ್ಲ, ಆವೆಡೆಯೊಳಂ ಇಂತಪ್ಪ ಸಾವಂ ಕಂಡುದಿಲ್ಲ, ಇವನೇಂ ಕಾರಣಮಿಂತು ಬಿೞ್ದಪನೋ? ಎನ್ನಂ ಕೊಲಲ್ಕೆಂದು ಕಪಟಮರಣಮಂ ತಾಳ್ದಿರ್ದನೋ? ಮೇಣಿವಂ ಪೋಗುತ್ತುಂ ಬಟ್ಟೆಯೊಳ್ ಪಸಿದು ಬುತ್ತಿಯನುಣಲ್ಕೆಂದು ಕುಳ್ಳಿರ್ದುಣುತ್ತುಂ ಗಂಟಲ್‌ಸಿಲ್ಕಿ ಸತ್ತನೋ? ಇದಂ ನಂಬಲ್ ಬಾರದು, ಪೆಣನಂ ಮುಟ್ಟಲುಂ ಬಾರದು. ಕರ್ಬಿನ ತೋಟಮಂ ಪುಗಲುಂ ಬಾರದು. ಇವಂ ವಿಚಾರಿಸುವೊಡೆಯಿವಂ ಸತ್ತುದು ಪುಸಿ ದಿಟಮೆಂದು ಅಱಿವೊಡೆ

ಸಮಾನನಾಗಿದ್ದ ಒಬ್ಬ ಶೂದ್ರನು ಕಬ್ಬು ಬಿತ್ತಿ ಬೆಳೆಸುತ್ತಿದ್ದನು. ವ॥ ಹಾಗೆ ಅವನು ಕಬ್ಬು ಬಿತ್ತಿ ಬೇಲಿ ಕಟ್ಟಿ ಕಾಪಾಡುತ್ತಿರಲು ಕೆಲವು ದಿನ ಕಳೆಯಲು ಕಬ್ಬು ಬಲಿತು ಗಿಣ್ಣೇರಿಸುವು. ಆ ಸಮಯದಲ್ಲಿ ಮೃಗಧೂರ್ತ ಎಂಬ ನರಿಯೊಂದು ಅಲ್ಲಿಗೆ ಬಂದು ಬೇಲಿಯನ್ನು ಸುತ್ತು ಹಾಕಿ ನೋಡಿತು. ಒಂದು ಕಡೆ ಒಳಕ್ಕೆ ಹೋಗಲು ಕಳ್ಳದಾರಿಯಿದ್ದುದನ್ನು ಕಂಡು ದಿನವೂ ಅಲ್ಲಿಂದ ಒಳನುಗ್ಗಿ ಕಬ್ಬನ್ನು ತಿಂದುಹಾಕತೊಡಗಿತು. ನರಿಯ ಕಾಟಕ್ಕೆ ಬೇಸತ್ತ ಶೂದ್ರನು ಆ ನರಿಯನ್ನು ಕೊಲ್ಲಲು ಒಂದು ಉಪಾಯವನ್ನು ಹೂಡಿದನು. ಒಂದು ಮಾರಗಲ ಬೇಲಿಯನ್ನು ಕಿತ್ತು ದಾರಿಯಾಗುವಂತೆ ಮಾಡಿ ತಾನು ಸಂಜೆಹೊತ್ತು ಒಂದು ಕೈಯಲ್ಲಿ ಅನ್ನದ ಬುತ್ತಿಯನ್ನೂ ಇನ್ನೊಂದು ಕೈಯಲ್ಲಿ ದಪ್ಪ ದೊಣ್ಣೆಯನ್ನೂ ಹಿಡಿದುಕೊಂಡು, ತಲೆ ಕೆದರಿಕೊಂಡು, ಕಣ್ಣು ಮುಚ್ಚಿ ಸತ್ತುಹೋದಂತೆ ಬಿದ್ದುಕೊಂಡನು. ನರಿ ಬಂದಿತು. ಹತ್ತಿರಕ್ಕೆ ಬಂದು ನೋಡಿದಾಗ ಅದರ ಮನಸ್ಸಿನಲ್ಲಿ ಸಂಶಯವುಂಟಾಯಿತು. ಸ್ವಲ್ಪ ದೂರಕ್ಕೆ ಹೋಗಿ ತನ್ನಲ್ಲೇ ಹೇಳಿಕೊಂಡಿತು. 'ನಾನು ನೋಡದ ಯುದ್ಧಭೂಮಿಯಿಲ್ಲ, ಅಡ್ಡಾಡದ ದೇಶವಿಲ್ಲ. ಎಲ್ಲಿಯೂ ಈ ಬಗೆಯ ಸಾವನ್ನು ನಾನು ನೋಡಿಲಿಲ್ಲವಲ್ಲ ! ಇವನು ಯಾವ ಕಾರಣದಿಂದ ಹೀಗೆ ಬಿದ್ದಿರಬಹುದು ? ನನ್ನನ್ನು ಕೊಲ್ಲಲೆಂದು ಕಪಟ ಮರಣ ಹೊಂದಿರಬಹುದೇ ! ಅಥವಾ ಈ ದಾರಿಯಾಗಿ ಹೋಗುತ್ತಾ ಹಸಿದು ಬುತ್ತಿಯುಣ್ಣುತ್ತಿರುವಾಗ ಗಂಟಲಿಗೆ ಸಿಕ್ಕಿಕೊಂಡು ಸತ್ತಿರುವನೊ ? ಇದನ್ನು ಸುಮ್ಮನೆ ನಂಬಬಾರದು, ಹೆಣವನ್ನು ಮುಟ್ಟಬಾರದು, ಕಬ್ಬಿನ ತೋಟಕ್ಕೆ ಹೋಗುವಂತೆಯೂ ಇಲ್ಲ. ಇವನು ಸತ್ತಿರುವುದು ಹುಸಿಯೋ ದಿಟವೋ ಎಂದು ತಿಳಿಯಬೇಕಾದರೆ ಹೀಗೆ ಮಾಡುತ್ತೇನೆ. ಊರಿನ ಸಮೀಪಕ್ಕೆ ಹೋಗುವುದು, ನಿಜವಾಗಿಯೂ ಇವನು ಸತ್ತಿದ್ದರೆ ಅಲ್ಲಿ ಜನರು ಅಳುತ್ತಿರುತ್ತಾರೆ, ಇಲ್ಲವಾದರೆ ಸುಮ್ಮನಿರುತ್ತಾರೆ' ಎಂದು ನಿಶ್ಚಯಿಸಿಕೊಂಡು ಊರ

ಊರ ಸಮೀಪಕ್ಕೆ ಪೋದಂದು ಇವಂ ಸತ್ತ ಸಾವುಳ್ಳೊಡೆ ಊರೊಳಗೆ ಪಲುಬುತ್ತಮುಬುತಿರ್ಕುಂ. ಅಲ್ಲದಾಗಲ್ ಸುಮ್ಮನಿರ್ಕುಮೆಂದು ತನ್ನೊಳ್ ನಿಶ್ಚೈಸಿ ಊರ ಸಮೀಪಕ್ಕೆ ಪೋಗಿ ನಾಲ್ಕುಂ ಕಡೆಯನಾರೈದು ಆವ ಕಳಕಳಮುಂ ಕೇಳದೆ ಮಗುಳ್ದೆಪಂದು ಎನ್ನುಮಂ ಕೊಲಲ್ಕಿವಂ ಮಾಡಿದ ಮಾಯಮಿದೆಂದು ನಿಶ್ಚೈಸಿ ತನ್ನ ಬುದ್ಧಿಗೆ ತಾನೆ ಮೆಚ್ಚಿ ನಕ್ಕುಯಿಂತೆಂದುದು :

ಶ್ಲೋ ॥ ಆಶ್ಚರ್ಯಮರಣಂ ದೃಷ್ಟಂ ಹಸ್ತೇ ದಂಡಕಪಿಂಡಯೋಃ
ಗ್ರಾಮೇ ಕಳಕಳಂ ನಾಸ್ತಿ ಯಃ ಪಲಾಯನ್ ಸ ಸಜೀವತಿ ॥

ಟೀ॥ ಅಪೂರ್ವಮಪ್ಪ ಸಾವಂ ಕಂಡೆಂ. ಕಯ್ಯೊಳಿರಡರೊಳಂ ಕೂಟ ಬುತ್ತಿಯಂ ದಾಣೆಯುಂ ಪಿಡಿದುಕೊಂಡಿರ್ಪುದು. ಊರೊಳಗೆ ಆವ ಕಳಕಳಮುಮಿಲ್ಲ ಎಂದು ತನ್ನ ಬುದ್ಧಿಗೆ ತಾನೆ ಮೆಚ್ಚಿ ಓಡಿಪೋಗಿ ಬರ್ದುಂಕಿದತ್ತು.

ಎಂಬುದೊಂದು ಕಥೆಯಂ ವಸುಭಾಗಭಟ್ಟಂ ಪೇಳ್ವುದುಮದಂ ಕೇಳ್ದಾ ಕುಮಾರರಿಂ ತಪ್ಪ ಕಥೆಯನಿನ್ನೊಂದಂ ಪೇಳಿಮೆಂಬುದುಂ ; ಈ ಬಾಲಕರ್ ಕ್ರೀಡಾಶೀಲರಿವರನೀಯಂದದೊಳ್ ತಿಳುಪ್ಪುವೆನೆಂದು, ಅಂತಪ್ಪೊಡೆ, ನೀವೀ ಕಥೆಯಂ ಮಗುಳೆ ಪೇಳಲ್ ಬಲ್ಲಿರಪ್ಪೊಡಿಂತಪ್ಪ ಕಥೆಗಳನನಂತಂ ಪೇಳ್ವೆನೆಂಬುದುಂ, ಅವರ್ ಕರಮೊಳ್ಳಿತ್ತಂತೆಗೆಯ್ವೆಮೆಂದಾಗಳೆ ಪೋಗಿ ಮೂವರುಮಾ ಕಥೆಯನಿಂಬಾಗಿ ಸಂಭಾವಿಸಿ ಪೇಳ್ವುದುಂ ವಸುಭಾಗಭಟ್ಟನಭೀಷ್ಟಸಿದ್ಧಿಯಾದುದೆಂದತಿಸಂತೋಷಂಬಟ್ಟರ್ಥಶಾಸ್ತ್ರಾಭಿಪ್ರಾಯೋಪಾಯಂಗಳಪ್ಪುವೈದು ಕಥೆಗಳಂ ಪೇಳ್ದು ತಿಳಿಪಿ, ರಾಜಪುತ್ರರಂ ಸತ್ಪಾತ್ರರಂ ಮಾಡಿ, ತಾನುಂ ಸ್ವಾರ್ಥಸಿದ್ಧಿಯೊಳ್ ಕೂಡಿದಂ, ಅವಾವುವೆಂದೊಡೆ,

ಸಮೀಪಕ್ಕೆ ಹೋಗಿ ನಾಲ್ಕು ಕಡೆಯೂ ಚೆನ್ನಾಗಿ ಪರಿಶೀಲಿಸಿ ನೋಡಿತು. ಯಾರೂ ಅತ್ತು ಗಲಾಟೆ ಮಾಡುತ್ತಿರುವುದು ಕಾಣದೆ ಹಿಂದಕ್ಕೆ ಬಂದು ನನ್ನನ್ನು ಕೊಲ್ಲಲು ಇವನು ಮಾಡಿರುವ ಹೂಟ ಇದು ಎಂದು ತೀರ್ಮಾನಿಸಿಕೊಂಡು ತನ್ನ ಬುದ್ಧಿಶಕ್ತಿಗೆ ತಾನೇ ಮೆಚ್ಚಿ ಹೀಗೆಂದಿತು: ಶ್ಲೋ ॥ 'ಅಪೂರ್ವವಾದ ಸಾವನ್ನು ನೋಡಿದೆ, ಕೈಗಳಲ್ಲಿ ಕೂಳಿನ ಬುತ್ತಿ ಹಾಗೂ ದೊಣ್ಣೆಗಳನ್ನು ಹಿಡಿದುಕೊಂಡು ಸತ್ತ ಸಾವು ಕಂಡೆ, ಊರಲ್ಲಿ ಈ ಬಗೆಗೆ ಯಾವ ಕಳಕಳವೂ ಇಲ್ಲ' ಎಂದುಕೊಳ್ಳುತ್ತಾ ಓಡಿಹೋಗಿ ಬದುಕಿಕೊಂಡಿತು, ಎಂಬ ಒಂದು ಕಥೆಯನ್ನು ವಸುಭಾಗಭಟ್ಟನು ಹೇಳಲು ಅದನ್ನು ಕೇಳಿದ ಆ ಕುಮಾರರು ಇಂತಹ ಇನ್ನೊಂದು ಕಥೆಯನ್ನು ಹೇಳುವಂತೆ ವಸುಭಾಗಭಟ್ಟನನ್ನು ಒತ್ತಾಯಪಡಿಸಿದರು. ಈ ಬಾಲಕರು ಕ್ರೀಡಾಶೀಲರು, ಇವರಿಗೆ ಈ ರೀತಿಯಲ್ಲಿಯೇ ವಿದ್ಯಾಭ್ಯಾಸ ಮಾಡುತ್ತೇನೆ ಎಂದು ಬಗೆದು, ನೀವು ಈ ಕಥೆಯನ್ನು ಪುನಃ ಹೇಳಬಲ್ಲಿರಾದರೆ ಮಾತ್ರ ಇಂತಹ ಅನೇಕ ಕಥೆಗಳನ್ನು ಹೇಳುವೆ ಎಂದನು. ಒಳ್ಳೆಯದು ಎಂದು ಆ ಕುಮಾರರು ಆ ಕಥೆಯನ್ನು ಚೆನ್ನಾಗಿ ಸಂಭಾವಿಸಿ ಹೇಳಲು ವಸುಭಾಗಭಟ್ಟನು ತನ್ನ ಅಭೀಷ್ಟಸಿದ್ಧಿಯಾಯಿತು ಎಂದು ಸಂತೋಷಪಟ್ಟು ಅರ್ಥಶಾಸ್ತ್ರಾಭಿಪ್ರಾಯ ಉಪಾಯಗಳಾದ ಐದು ಕಥೆಗಳನ್ನು ತಿಳಿಸಿ ರಾಜಪುತ್ರರನ್ನು ಸತ್ಪಾತ್ರರನ್ನಾಗಿ ಮಾಡಿ ತಾನೂ ಸ್ವಾರ್ಥಸಿದ್ಧಿಯನ್ನು ಪಡೆದನು. ಅವು

ಶ್ಲೋ॥ ಭೇದಃ ಪರೀಕ್ಷಾ ವಿಶ್ವಾಸಃ ಚತುರ್ಥಂ ವಂಚನಂ ತಥಾ
ಮಿತ್ರಕಾರ್ಯಂ ಚ ಪಂಚೈತೇ ಕಥಾಸ್ತಂತ್ರಾರ್ಥ ಸಂಜ್ಞಕಾಃ ॥

ಎಂಬುದು. ಎಂತೆಂದೊಡೆ, ಅನೇಕಪ್ರಕಾರ ಕಪಟೋಪಾಯಂಗಳಿಂದತಿಸ್ನೇಹಿತರೊಳ್ ಪೃಥಗ್ಭಾವಮಂ ಮಾಳ್ಪುದೇ ಭೇದಮೆಂಬುದು. ಆವ ಕಾರ್ಯಮುಮಂ ವಿಚಾರಪೂರ್ವಕಮಲ್ಲದೆ ನೆಗಬಿಲಾಗದೆಂಬುದನಱಿಪುವುದು ಪರೀಕ್ಷೆಯೆಂಬುದು, ಎಂತುಂ ನಂಬದರಂ ನಂಬುವಂತೆ ನುಡಿದೊಡಂಬಡಿಸಿಯೊಳಪೊಕ್ಕು ನೆಗಳ್ವುದು ವಿಶ್ವಾಸಮೆಂಬುದು, ಪೆಱರ ಬಗೆಯಱಿದು ಸಂಧಾನಂಗೆಯ್ದು ವಂಚಿಸುವುದು ವಂಚನೆಯೆಂಬುದು, ಅನ್ಯರೆಲ್ಲರುಮನತಿಸ್ನೇಹದಿಂ ತನ್ನವರಂ ಮಾಡಿಕೊಳ್ವುದು ಮಿತ್ರಕಾರ್ಯಮೆಂಬುದು, ಇಂತು ಐದುತಂತ್ರಗಳ ಪ್ರಕಾರಂ, ಅದಱೊಳಂ ಮೊದಲ ತಂತ್ರಂ ಭೇದತಂತ್ರವೆಂಬುದು : ಅದೆಂತೆಂದೊಡೆ

ಯಾವುವೆಂದರೆ, ಶ್ಲೋ॥ ಭೇದ, ಪರೀಕ್ಷಾ, ವಿಶ್ವಾಸ, ವಂಚನೆ, ಮಿತ್ರಕಾರ್ಯ ಎಂಬ ಈ ಐದು ಕಥೆಗಳು ತಂತ್ರಾರ್ಥ ಸಂಜ್ಞಕಗಳಾಗಿವೆ. ಹೇಗೆಂದರೆ, ಅನೇಕ ರೀತಿಯ ಕಪಟೋಪಾಯಗಳಿಂದ ಅತಿಸ್ನೇಹಿತರಲ್ಲಿ ಒಡಕುಂಟಾಗುವಂತೆ ಮಾಡುವುದೇ ಭೇದವಾಗಿದೆ. ಯಾವ ಕಾರ್ಯವನ್ನಾದರೂ ವಿಚಾರಪೂರ್ವಕವಲ್ಲದೆ ಮಾಡಬಾರದು ಎಂಬುದನ್ನು ತಿಳಿಸುವುದು ಪರೀಕ್ಷೆಯಾಗಿದೆ. ಏನು ಮಾಡಿದರೂ ನಂಬದಿರುವವರನ್ನು ನಂಬುವಂತೆ ನುಡಿದು ಒಡಂಬಡಿಸಿ ಒಳಹೊಕ್ಕು ನಡೆಯುವುದು ವಿಶ್ವಾಸವಾಗಿದೆ. ಬೇರೆಯವರ ಹೃದಯವನ್ನು ತಿಳಿದು ಸಂಧಾನಮಾಡಿ ವಂಚಿಸುವುದು ವಂಚನೆಯಾಗಿದೆ. ಬೇರೆಯುವರೆಲ್ಲರನ್ನೂ ಅತಿಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಳ್ಳುವುದು ಮಿತ್ರಕಾರ್ಯವಾಗಿದೆ. ಹೀಗೆ ಐದೂ ತಂತ್ರಗಳ ಪ್ರಕಾರ. ಅವುಗಳಲ್ಲಿ ಮೊದಲನೆಯ ತಂತ್ರವೇ ಭೇದತಂತ್ರವಾಗಿದೆ. ಅದು ಹೇಗೆಂದರೆ -

ಭೇದ ಪ್ರಕರಣ*

ಶ್ಲೋ॥ ವರ್ಧಮಾನೋ ಮಹಾನ್‌ಸ್ನೇಹಃ ಪಂಚಾಸ್ಯವೃಷಯೋರ್ವನೇ
ಪಿಶುನೇನಾತಿಲುಬ್ಧೇನ ಜಂಬುಕೇನ ವಿನಾಶಿತಃ ॥೮॥

ಟೀ॥ ಹಿರಿದಪ್ಪ ಸ್ನೇಹಂ ಸಿಂಹಕ್ಕಂ ವೃಷಭಕ್ಕಂ ಕಾಂತಾರದೊಳಾಗಿರಲತ್ಯಂತ ಪಿಶುನನುಮತಿಲುಬ್ಧನುಮಪ್ಪ ನರಿಯಿಂದಂ ಕಿಡಿಸಲ್ಪಟ್ಟುದು.

ಆ ಕಥಾಪ್ರಪಂಚಮೆಂತೆಂದೊಡೆ.

ನಿರತಿಶಯ ವಸ್ತುಪೂರ್ಣಂ
ಧರಾಂಗನಾವದನ ಮಂಡನ ಶ್ರೀಕಾಂತಂ
ಮರುದಾಂದೋಳಿತ ನಂದನ
ಪರಿವೃತಮುಜ್ಜಯಿನಿಯೆಂಬ ಪೊಟಲುಂಟದಱೊಳ್ ೭೦(ಅ)

ಪರಮಾನಂದದೊಳಿರ್ಪಂ
ನಿರುಪಮ ನಿಜಗುಣರೂಪ ವಿಭವ ಜಿತ ಕಂದರ್ಪಂ
ಪರಿಹೃತ ಸಪ್ತವ್ಯಸನಂ
ನಿರಂತರೋಪಾಸ್ಯಮಾನಶಾಸ್ತ್ರವ್ಯಸನಂ ೭೧

ಮಾಲಿನಿ ॥ ಅನುಪಮ ನಯಯುಕ್ತಂ ಧರ್ಮಮಾರ್ಗಾನುರಕ್ತಂ
ಮನುನಿಭ ಸುಚರಿತ್ರಂ ಪೋಷಿತಾಶೇಷಮಿತ್ರಂ
ವಿನಯಗುಣನಿಧಾನಂ ವೈಶ್ಯವಂಶಪ್ರಧಾನಂ
ಧನದಸದಸಮಾನಂ ವರ್ಧಮಾನಾಭಿಧಾನಂ ೭೨

ಶ್ಲೋ ॥ ಕಾಡಿನಲ್ಲಿ ಸಿಂಹಕ್ಕೂ ವೃಷಭಕ್ಕೂ ಹಿರಿದಾದ ಸ್ನೇಹ ಸಂಭವಿಸಿರಲು ಅತ್ಯಂತ ಚಾಡಿಕೋರನೂ ಅತಿಲುಬ್ಧನೂ ಆದ ನರಿಯಿಂದ ಅದು ಕೆಟ್ಟುಹೋಯಿತು. ಆ ಕಥಾ ಪ್ರಪಂಚ ಹೀಗಿದೆ : ೭೦.(ಅ) ಶ್ರೇಷ್ಠವಾದ ವಸ್ತುಗಳಿಂದ ಸಮೃದ್ಧವೂ, ಭೂದೇವಿಯ ಮುಖಾಭರಣದ ಕಾಂತಿಯಿಂದ ಕೂಡಿದುದೂ, ಗಾಳಿಯಿಂದ ಆಂದೋಲಿತವಾದ ನಂದನವನಗಳಿಂದ ಆವರಿಸಿದುದೂ ಆದ ಉಜ್ಜಯನಿ ಎಂಬ ಪಟ್ಟಣ ಉಂಟು. ಅದರಲ್ಲಿ, ಅಸಾಧಾರಣ ಗುಣರೂಪ ವೈಭವಗಳಿಂದ ಕೂಡಿದವನೂ, ಮನ್ಮಥನನ್ನು ಗೆದ್ದವನೂ, ಸಪ್ತವ್ಯಸನಗಳನ್ನು ಪರಿಹರಿಸಿಕೊಂಡವನೂ, ಯಾವಾಗಲೂ ಶಾಸ್ತ್ರಗಳನ್ನು ಅಭ್ಯಾಸಮಾಡುವ ವ್ಯಸನವುಳ್ಳವನೂ, ಅಸಾಮಾನ್ಯ ನೀತಿಯಿಂದ ಕೂಡಿದವನೂ, ಧರ್ಮಮಾರ್ಗದಲ್ಲಿ ಆಸಕ್ತನೂ, ಮನುವಿಗೆ ಸದೃಶವಾದ ಒಳ್ಳೆಯ ಚರಿತೆಯುಳ್ಳವನೂ ಸಮಸ್ತಮಿತ್ರರನ್ನು ಪೋಷಿಸುವವನೂ, ವಿನಯಗುಣಕ್ಕೆ ಆಕರನೂ, ವೈಶ್ಯವಂಶಪ್ರಧಾನನೂ, ಐಶ್ವರ್ಯದಲ್ಲಿ ಕುಬೇರನಿಗೆ ಸಮಾನನೂ ಆದ ವರ್ಧಮಾನನೆಂಬ ಹೆಸರಿನವನು ಪರಮಾನಂದ

---

* ಕವಿಯು 'ಪೀಠಿಕಾಪ್ರಕರಣಂ' ಎಂದು ಪ್ರತ್ಯೇಕಿಸಿಲ್ಲ. ಇಲ್ಲಿ ಅರ್ಥನಯನಾನುಕೂಲಕ್ಕಾಗಿ ಹೀಗೆ ವಿಭಜಿಸಲಾಗಿದೆ.

ವ॥ ಅಂತಾತನತಿ ಪ್ರಬುದ್ಧಂ ಧನಕನಕಸಮೃದ್ಧಿಯೊಳ್ ನೆಱೆದಿಷ್ಟ ಕಾಮಭೋಗಂಗಳನನುಭವಿಸುತ್ತುಂ ನ್ಯಾಯೋಪಾರ್ಜಿತವಿತ್ತನುಂ ಧರ್ಮಾಪಾದಿತಚಿತ್ತನುಮಾಗಿ ಕೆಲವುಕಾಲಂ ಸುಖಸಂಕಥಾವಿನೋದದಿನಿರ್ದೊಂದು ದಿವಸಂ ಸುಕವಿಯಂತಪೂರ್ವಾರ್ಥಲಬ್ಧಿಗೆ ಚಿಂತೆಗೆಯ್ದು ತನ್ನೊಳಿಂತೆಂದು ಬಗೆದಂ:

ಅಕ್ಕರ ॥ ಪಡೆವೆನೆಂಬಂ ಪೊನ್ನನೆ ಪಡೆವುದು ಸರ್ವಪ್ರಕಾರದಿಂದಂ ಪಡೆಯೆ ಪೊನ್ನಂ
ಪಡೆಯಲಾದುದಂತೊಂದುಪಾಯಂ ಪೆಱವು ಮಾತೇಂ ಚದುರುಮಾರ್ತೀವ ಪೆಂಪುಂ
ಸುದಿಯ ಬಲ್ಮೆಯುಂ ಕಡುಗಲಿತನಮುಂ ಸೌಭಾಗ್ಯಮುಮೊಂದಿದೊಳ್ಪುಮಾದುನ್ನತಿಯು
ಮೊಡವೆಯಾದಂದು ತಮ್ಮಿಂ ತಾವಕ್ಕು ಕಿಡುವುವು ಧನಮಿಲ್ಲದಂದಿವೆಲ್ಲಂ ೭೩

ವ॥ ಅದಱಿನರ್ಥೋಪಾರ್ಜನಮೇ ಸಕಲಗುಣೋಪಾರ್ಜನಕ್ಕೆ ಮುಖ್ಯಮಾಗಿರ್ಕುಂ ; ಉಪಾರ್ಜಿಸಿದ ಧನಮುಮಪಾಯರಹಿತಮಾಗಿ ಬೀಯಮಪ್ಪಂದು ಕೆಲವು ದಿವಸದಿಂ ಕ್ರಮ ಕ್ರಮದಿಂ ನಿಚ್ಚಮೆಚ್ಚುವಂಜನದಂತೆ ತವಿಲನೆಯ್ದುಗುಂ. ಮನುಷ್ಯಂ ಪುರುಷಾರ್ಥಸಿದ್ಧಿಯಂ ಮಾಡದಂದು, ಅಲಬ್ಧಲಾಭಂ ಲಬ್ಧ ಪರಿರಕ್ಷಣಂ ರಕ್ಷಿತವಿವರ್ಧನಂ ವರ್ಧಿತ ತೀರ್ಥಪ್ರತಿಪಾದನಮೆಂಬ ಚತುರ್ವಿಧ ಪುರುಷಾರ್ಥವೃತ್ತಿಯಾ[೧](ಗ)ದೆಂದು ಪರದೇಶಂಬೋಗಲ್ ನಿಶ್ಚೈಸಿ ಮಧುರಾಪುರಕ್ಕಪೂರ್ವಮಪ್ಪ ಸಾರಭಾಂಡಂಗಳಂ ತೀವಿಕೊಂಡು, ಯಾತ್ರೋದ್ಯುಕ್ತನಾಗಿ,

ದಿಂದಿದ್ದನು. ಹೀಗೆ ಅವನು ಅತ್ಯಂತ ಪ್ರಬುದ್ಧನಾಗಿಯೂ, ಧನಕನಕಸಮೃದ್ಧಿಯಿಂದ ಕೂಡಿ ಸಮಸ್ತ ಸುಖಗಳನ್ನು ಅನುಭವಿಸುತ್ತಲೂ, ಧರ್ಮಾಸಕ್ತಚಿತ್ತನಾಗಿಯೂ ಕೆಲವು ಸಮಯ ಸುಖ ಸಂಕಥಾವಿನೋದದಿಂದ ಇದ್ದನು. ಒಂದು ದಿವಸ ಸುಕವಿಯಂತೆ ಅಪೂರ್ವ ಧನ ಸಂಪಾದನೆಗಾಗಿ ಚಿಂತಿಸಿ ತನ್ನಲ್ಲಿ ಹೀಗೆಂದು ಯೋಚಿಸಿದನು : ಪಡೆಯುವೆನೆಂಬವನು ಹೊನ್ನನ್ನೇ ಪಡೆಯಬೇಕು. ಸರ್ವಪ್ರಕಾರಗಳಿಂದಲೂ ಹೊನ್ನನ್ನು ಪಡೆಯಲಿಕ್ಕಾಗಿ ಅಷ್ಟೊಂದು ಉಪಾಯಗಳುಂಟಾದವು. ಹೆಚ್ಚು ಮಾತಿನಿಂದೇನು ? ಚಾತುರ್ಯವೂ, ಸಾಮರ್ಥ್ಯದಿಂದ ಕೊಡುವ ಹಿರಿಮೆಯೂ, ನುಡಿಯ ಬಲ್ಮೆಯೂ ಕಡುಗಲಿತನವೂ ಸೌಭಾಗ್ಯವೂ, ಒಳ್ಳೆಯತನವೂ, ಉನ್ನತಿಯೂ ಕೂಡಿದ್ದರೆ ಇವೆಲ್ಲವೂ ಸಂಭವಿಸುವುವು; ಧನವೊಂದಿಲ್ಲದಿದ್ದಲ್ಲಿ ಇವೆಲ್ಲವೂ ನಾಶವಾಗುವುವು. ಆದರಿಂದ ಧನಸಂಪಾದನೆಯೇ ಸಕಲ ಗುಣಸಂಪಾದನೆಗೂ ಮುಖ್ಯವಾಗಿರುವುದು. ಸಂಪಾದಿಸಿದ ಹಣವು ಅಪಾಯವಿಲ್ಲದಂತೆ ವ್ಯಯವಾದಲ್ಲಿ ಕೆಲವು ದಿವಸಗಳಲ್ಲಿ ಕ್ರಮಕ್ರಮವಾಗಿ ನಿತ್ಯವೂ ಹಚ್ಚಿಕೊಳ್ಳುವ ಕಾಡಿಗೆಯಂತೆ ಖರ್ಚಾಗುವುದು. ಮನುಷ್ಯನು ಪುರುಷಾರ್ಥಸಿದ್ಧಿಯನ್ನು ಮಾಡದಿದ್ದಲ್ಲಿ, ಪಡೆಯದುದನ್ನು ಪಡೆಯುವುದೂ, ಪಡೆದುದನ್ನು ರಕ್ಷಿಸಿಕೊಳ್ಳುವುದೂ, ರಕ್ಷಿಸಿದುದನ್ನು ವೃದ್ಧಿಪಡಿಸುವುದೂ, ವೃದ್ಧಿಪಡಿಸಿದುದನ್ನು ಸರಿಯಾಗಿ ವಿನಿಯೋಗಿಸುವುದೂ ಎಂಬ ಚತುರ್ವಿಧ ಪುರುಷಾರ್ಥವೃತ್ತಿಯಾಗದು ಎಂದು ಪರದೇಶಕ್ಕೆ ಹೋಗಲು ನಿಶ್ಚಯಿಸಿ ಮಧುರಾಪುರಕ್ಕೆ ಅಪೂರ್ವವಾದ ವಸ್ತುಸಮೂಹಗಳನ್ನು ತುಂಬಿಕೊಂಡು ಯಾತ್ರೋದ್ಯುಕ್ತನಾದನು.

---

೧. ಗಿರ್ಪ (ಎನ್. ಅ).

ಆ ವಿವಿಧ ಪ್ರಭೂತ ಭುವನಸ್ತುತ ಸಾರಸಮಸ್ತ ವಸ್ತುವಂ
ತೀವಿದ ಬಂಡಿಯೊಳ್ ವಿಪುಳ ಸತ್ತ್ವ ಜವಂಗಳಿನೊಳ್ಪುವೆತ್ತ ಸಂ-
ಜೀವಕ ನಂದಕಾಖ್ಯ ವೃಷಭಂಗಳನಿಂಪೆಸೆ ಪೂಡಿ ಕೂರ್ತು ಮಿ-
ತ್ರಾವಳಿ ತನ್ನೊಳೊಂದಿ ಬರೆ ತತ್ಪುರದಿಂ ತಳರ್ದಂ ವಣಿಗ್ವರಂ ೭೪

ವ॥ ಅಂತಾ ವಣಿಗ್ವರಂ ತನ್ನ ಮನಕ್ಕೆ ಶಕುನಮಿಂಬಿಡೆ, ಬಂಧುಜನಂಗಳೊಡಂಬಡೆ, ಶುಭಮುಹೂರ್ತದೊಳ್ ಪೊಱಲಂ ಪೊಱಮಟ್ಟು ಅನೇಕ ಜನಪದನದನದೀಪ್ರದೇಶಂಗಳಂ ಕಳಿದು, ನಾನಾದ್ರುಮಗುಲ್ಮಲತಾಪ್ರತಾನಸಂಛನ್ನಮುಂ ಬಹುಪ್ರಕಾರ ಕ್ರೂರಮೃಗಗಣವಿಸಂಕಟಮುಂ, ಅಭ್ರಂಕಷೋತ್ತುಂಗಶೃಂಗಸಂಗತಗಿರಿವರನಿತಂಬಸಂವಾಸಶಬರಶಿಬಿರಸಂಕೀರ್ಣಮುಮಪ್ಪದೊಂದು ಮಹಾಟವಿಯನೆಯ್ದಿವರ್ಪುದುಂ, ಅದಱೊಳತಿ ಕರ್ಕಶ ಶರ್ಕರಾಪ್ರಚುರಮುಂ ಅತಿಸ್ಥೂಲ ನಿಶಿತ ಪಾಷಾಣ ವಿಷಮಿತಮುಮತಿದುಸ್ತರ ಸ್ಥಾಣುನಿಚಯೋಪಸ್ಥಿತಮುಮಾಗಿರ್ಪುದೊಂದು ದುರ್ಗಮ ಮಾರ್ಗದೊಳತ್ಯಂತ ಶಕಟಭಾರಾಕ್ರಾಂತಿಯಿಂ ಮೂಡುಭಂಗಂಗೆಯ್ದು ನಿದಾಘಸಮಯ ಮಧ್ಯಂದಿನಪ್ರಾಪ್ತ ಸಪ್ತಸಪ್ತಿ ಪ್ರತಾಪ ವಿಹ್ವಲೀಭೂತ ಜೀವಕಂ ಸಂಜೀವಕಂ ನಿಲ್ವುದುಂ, ಅದಂ ಕಂಡು ವರ್ಧಮಾನಂ ಸ್ವಾರ್ಥಸಮೇತಂ ದಯಾಪರೀತಚೇತಂ ಮೂಱುದಿವಸಮಲ್ಲಿ ಉಪ್ಪಯಣಂಗೆಯ್ದು, ಎಂತುಂ ಸಂಜೀವಕಂ ಚೇತರಿಸುವುದಂ ಕಾಣದೆ, ನಾಲ್ವರ್ ಮನುಷ್ಯರನದರ್ಕೆ ಕಾಪುವೇೞ್ದು ಬಹುವಿಧಾಪಾಯಪ್ರಾಯಮಪ್ಪ ಮಹಾರಣ್ಯದಿಂ ತೊಲಗಿ ಪಯಣಂಬೋದಂ. ಇತ್ತಲಾ ಕಾಪಿನವರ್ ಅಲ್ಲಿಯ ವನಚರವ್ಯಾಘ್ರ

೭೪. ಆ ವಿವಿಧ ದೊಡ್ಡ ದೊಡ್ಡ ಪ್ರಪಂಚ ಪ್ರಖ್ಯಾತವಾದ ಶ್ರೇಷ್ಠವಾದ ಸಮಸ್ತ ವಸ್ತುಗಳನ್ನು ತುಂಬಿದ ಬಂಡಿಗೆ ಬಹಳ ಶಕ್ತಿವೇಗಗಳಿಂದ ಒಳ್ಳೆಯದಾಗಿರುವ ಸಂಜೀವಕ ನಂದಕ ಎಂಬ ಹೆಸರಿನ ಎತ್ತುಗಳನ್ನು ಮನೋಹರವಾಗುವಂತೆ ಹೂಡಿ ಪ್ರೀತಿಯಿಂದ ಮಿತ್ರರ ಗುಂಪು ತನ್ನೊಡನೆ ಸೇರಿ ಬರಲು ಆ ಶ್ರೇಷ್ಠವ್ಯಾಪಾರಿ ಆ ಪಟ್ಟಣದಿಂದ ಹೊರಟನು.
ವ॥ ಹಾಗೆ ಆ ಶ್ರೇಷ್ಠವ್ಯಾಪಾರಿ ತನ್ನ ಮನಸ್ಸಿಗೆ ಶಕುನ ಶುಭವೆಂದು ಕಾಣಲು ಬಂಧುಜನಗಳು ಒಡಂಬಡಿಸಲು ಶುಭಮುಹೂರ್ತದಲ್ಲಿ ನಗರದಿಂದ ಹೊರಟು ಅನೇಕ ಗ್ರಾಮ, ನದನದೀಪ್ರದೇಶಗಳನ್ನು ಕಳೆದನು. ಬಗೆಬಗೆಯ ಮರ ಪೊದೆ ಬಳ್ಳಿಗಳ ಗುಂಪಿನಿಂದ ಆವೃತವಾದುದೂ, ಬಹಳ ಬಗೆಯ ಕ್ರೂರಮೃಗಸಮೂಹದಿಂದ ಅಪಾಯಕಾರಿಯಾದುದೂ, ಮುಗಿಲುಮುಟ್ಟುವ ಎತ್ತರವಾದ ಶೃಂಗಗಳಿಂದ ಕೂಡಿದ ದೊಡ್ಡ ದೊಡ್ಡ ಬೆಟ್ಟಗಳ ತಪ್ಪಲುಗಳಲ್ಲಿ ವಾಸಮಾಡುವ ಶಬರರ ಶಿಬಿರಸಮೂಹಗಳಿಂದಲೂ ಕೂಡಿದ ಒಂದು ಮಹಾ ಅರಣ್ಯವನ್ನು ಸೇರಿದನು. ಅದರಲ್ಲಿ ಅತ್ಯಂತ ಮೊನಚಾದ ಮುಳ್ಳುಗಳಿಂದ ತುಂಬಿ, ದೊಡ್ಡ ದೊಡ್ಡ ಹರಿತವಾದ ಬಂಡೆಗಳಿಂದ ಕಷ್ಟವಾದುದೂ, ದಾಟಲು ಕಷ್ಟವಾದ ಮುಂಡುಮರಗಳಿಂದ ಕೂಡಿದುದೂ ಆದ ಒಂದು ದುರ್ಗಮಮಾರ್ಗದಲ್ಲಿ ಗಾಡಿಯ ಮಹಾಭಾರದಿಂದ ತೊಡೆಮುರಿದು, ಬೇಸಿಗೆಯ ಸಮಯದ ಮಧ್ಯಾಹ್ನದ ಸೂರ್ಯನ ತಾಪಕ್ಕೆ ಬಸವಳಿದು ಸಂಜೀವಕನು ನಿಂತುಬಿಟ್ಟನು. ಅದನ್ನು ಕಂಡು ವರ್ಧಮಾನನು ತನ್ನ ವಸ್ತುಗಳೊದನೆ ದಯೆಯಿಂದ ಕೂಡಿದ ಚೇತನವುಳ್ಳವನಾಗಿ ಮೂರುದಿನಗಳವರೆಗೆ ಅಲ್ಲಿ ನಿಂತು ಹೇಗೂ ಸಂಜೀವಕನು ಚೇತರಿಸುವುದನ್ನು ಕಾಣದೆ ನಾಲ್ವರು ಆಳುಗಳನ್ನು ಅದಕ್ಕೆ ರಕ್ಷಣೆಯಾಗಿಟ್ಟು ಬಹುವಿಧದ ಅಪಾಯಗಳಿಂದ ಕೂಡಿದ ಆ ಮಹಾರಣ್ಯದಿಂದ

ಮೃಗಗಣಜನಿತಭೀತಿಯಿಂ ನಿಲಲಣ್ಮದೆ ಸ್ವಾರ್ಥಪತಿಯನೆಯ್ದಿ ಬಂದು ಸಂಜೀವಕಂ ಸತ್ತುದೆಂದು ಪುಸಿದು ಪೇೞ್ದುದುಂ, ಸೆಟ್ಟಿ ಮನಃಕ್ಷತಂಬಟ್ಟು ವಿಷಾದವಿಧುರಂ ಮಥುರೆಗಭಿಮುಖನಾಗಿ ಪಯಣಂಬೋದಂ ಅನ್ನೆಗಮಿತ್ತಲ್.

ವಿಮಲಾಬ್ಜಾಕರಶೀಕರೋತ್ಕರಯುತಂ ಪಾನೀಯಗಂಧದ್ವಿಪೇಂ-
ದ್ರಮದಾಮೋದಿ ಕಿರಾತಯೋಷಿದಳಕಶ್ರೇಣೀನಟಂ ಮಾರುತಂ
ಶ್ರಮಮಂ ಪಿಂಗಿಸೆ ಮಂದಮಂದಗತಿಯಿಂ ಸಂಜೀವಕಂ ಸಾರ್ದುದಾ
ಯಮುನಾತೀರಮನುಜ್ಜ್ವಲಜ್ಜಲಕಣೌಘಾಸಾರವಿಸ್ತಾರಮಂ ೨೫

ಅಂತುಮೆತ್ತಾನುಮಾಪ್ಯಾಯಿತಶರೀರನಾಗಿ ಕಾಳಿಂದೀನದೀಕಚ್ಛದೊಳಾತ್ಮೇಚ್ಛೆಯಿಂ ನಲಿನಲಿದು ರುಚಿರಮರಕತ ಶ್ಯಾಮದೂರ್ವಾಂಕುರ ಗ್ರಾಸದೊಳು ಅತಿಸ್ವಚ್ಛ ಸ್ವಾದು ಸಲಿಲ ಪಾನದೊಳಂ ಮೆಲ್ಲಮೆಲ್ಲನೆ ಮೆಲ್ಕಾಡಿ ಪಥಪರಿಶ್ರಮಮನಾಜೆಸಿಕೊಂಡು ಕೆಲವು ದಿವಸಕ್ಕೆ ಬಾಲೇಂದುಶೇಖರ ಶಕ್ವರಾಕಾರಮಂ ತಾಳ್ದಿ

ಸ್ಫುರದಕ್ಷೂಣ ವಿಷಾಣಕೋಟಿ ದಳಿತ ಪ್ರೋತ್ತುಂಗವಲ್ಮೀಕನು
ದ್ಧುರ ಗಂಭೀರ ಪಯೋದನಾದನತಿಪುಷ್ಟಾಂಗಂ ಬೃಹತ್ಕಂಧರಾಂ
ತರನುದ್ದಾಮಬಳಂ ಮಹಾಗಹನದೊಳ್ ಸಂಜೀವಕಂ ಕೂಡೆ ಸಂ
ಚರಿಸುತ್ತಿರ್ದುದನೂನಪೀನಕಕುದಂ ತನ್ನಿಚ್ಛೆಯಿಂ ನಿಚ್ಚಲುಂ ೨೬

ಪ್ರಯಾಣಮಾಡಿದನು. ಇತ್ತ ಆ ಕಾಪಿನ ಆಳುಗಳು ಅಲ್ಲಿಯ ಮಂಗ, ವ್ಯಾಘ್ರ, ಮೃಗಸಮೂಹದಿಂದ ಭಯಭೀತರಾಗಿ ಅಲ್ಲಿ ನಿಲ್ಲಲಾರದೆ ತಮ್ಮ ಒಡೆಯನಲ್ಲಿಗೆ ಬಂದು ಸಂಜೀವಕ ಸತ್ತಿತು ಎಂದು ಸುಳ್ಳುಹೇಳಿದರು. ಸೆಟ್ಟಿಯು ಮನಸ್ಸಿನಲ್ಲಿ ನೊಂದು ವಿಷಾದದಿಂದ ವಿಧುರನಾಗಿ ಮಥುರೆಯ ಕಡೆಗೆ ಪ್ರಯಾಣ ಮಾಡಿದನು. ಅಷ್ಟರಲ್ಲಿ ಇತ್ತ ೨೫. ಪರಿಶುದ್ಧವಾದ ಸರೋವರದ ಶೈತ್ಯದಿಂದ ಕೂಡಿದುದೂ, ಕಾಡಿನ ಮದ್ದಾನೆಯ ಮದಗಂಧದಿಂದ ಆಮೋದವನ್ನುಂಟುಮಾಡುವುದೂ, ಕಿರಾತಯುವತಿಯರ ಮುಂಗುರುಳ ಮಾಲೆಯನ್ನು ಕುಣಿಸುವುದೂ ಆದ ಮಂದಮಾರುತವು ಶ್ರಮವನ್ನು ಪರಿಹರಿಸಲು ಮೆಲ್ಲಮೆಲ್ಲನೆ ಸಂಜೀವಕನು ಆ ಯಮುನಾತೀರದ ಪರಿಶುದ್ಧ ನೀರಿನ ವಿಸ್ತಾರದ ಕಡೆಗೆ ಸಮೀಪಿಸಿತು. ಹಾಗೆ ಹೇಗೋ ಶರೀರಸುಖವನ್ನು ಹೊಂದಿ ಯಮುನಾನದೀತೀರದಲ್ಲಿ ಸ್ವೇಚ್ಛೆಯಿಂದ ನಲಿನಲಿದು ಹೊಳೆ ಹೊಳೆಯುವ ಪಚ್ಚೆ ಬಣ್ಣದ ಹಸುರು ಎಳೆಗರಿಕೆಯ ಆಹಾರದಿಂದಲೂ ಸ್ವಚ್ಛವೂ ರುಚಿಕರವೂ ಆದ ನೀರನ್ನು ಕುಡಿದೂ ಮೆಲ್ಲಮೆಲ್ಲನೆ ಮೆಲುಕಾಡಿ ಮಾರ್ಗಾಯಾಸವನ್ನು ಪರಿಹರಿಸಿಕೊಂಡು ಕೆಲವು ದಿನಗಳಲ್ಲಿ ಚಂದ್ರಶೇಖರನ ನಂದಿಯ ಆಕಾರವನ್ನು ತಾಳಿ, ೨೬. ಪಳಪಳನೆ ಹೊಳೆಯುವುವೂ ಬಲಿಷ್ಠವೂ ಆದ ತನ್ನ ಕೊಂಬುಗಳಿಂದ ಎತ್ತರವಾದ ಹುತ್ತುಗಳನ್ನು ತಿವಿದು ಸೀಳುತ್ತಲೂ ಗಂಭೀರವಾದ ಗುಡುಗಿನ ಶಬ್ದವುಳ್ಳುದೂ ಚೆನ್ನಾಗಿ ಕೊಬ್ಬಿದ ಅಂಗವುಳ್ಳುದೂ, ದಪ್ಪವಾದ ಕುತ್ತಿಗೆಯುಳ್ಳುದೂ, ಉದ್ದಾಮ ಬಲಶಾಲಿಯೂ ಸುಂದರವಾದ ಎತ್ತರವಾದ ಹಿಣಿಲುಳ್ಳುದೂ ಆದ ಸಂಜೀವಕನು ಆ ಮಹಾರಣ್ಯದಲ್ಲಿ ಸ್ವೇಚ್ಛೆಯಾಗಿ ನಿತ್ಯವೂ ಸಂಚರಿಸುತ್ತಿತ್ತು.

ಅಂತಿರ್ಪುದುಮಾ ವನಾಂತರದೊಳಪ್ರತಿಮಮಪ್ಪ ವಿಕ್ರಮಗುಣಮೇ ತನಗೆ ಸ್ವಾಮಿಸಂಪದಮಾಗಿಯುಂ ಗೂಢಲಕ್ಷಣ ಭಿನ್ನಪ್ರತಿಸಂಧಾನ ಸಂಧಿದೂಷಣ ಪರಚಿತ್ತಪರೀಕ್ಷಾ ಲಕ್ಷಣಮೆಂಬ ಮಂತ್ರಿಗುಣಗಳಿಂ ನೆರೆದ ಜಂಬುಕಂಗಳೇ ಮಂತ್ರಿಗಳಾಗಿಯುಂ ಮೃಗಗಣ ನಿಚಿತಮಪ್ಪ ಗಹನಾಂತರಾಳಮೇ ತನಗೆ ಜನಪದಮಾಗಿಯುಂ ಅತಿನಿಶಿತನಖಕುಲಿಶಮುಖವಿದಾರಿತ ಮದಾಂಧಗಂಧಸಿಂಧುರಂಗಳ ಕಳೇಬರಂಗಳೇ ತನಗೆ ಭಂಡಾರಮಾಗಿಯುಂ ಅಖಿಲಶಾರ್ದೂಲಂಗಳೇ ಮಿತ್ರಬಲಮಾಗಿಯುಂ ನಿಸರ್ಗ ದುರ್ಗಗಿರಿ ಗುಹಾಗಹ್ವರಂಗಳೇ ದುರ್ಗಂಗಳಾಗಿಯುಂ ಅಖಿಳವೃಕ ವರಾಹ ಶ್ವಾಪದಂಗಳೇ ಬಲಂಗಳಾಗಿಯುಂ ವಿಶಾಲಶಿಲಾತಲಂಗಳೇ ಸಿಂಹಾಸನಂಗಳಾಗಿಯುಂ ಅತಿ ಸಂಛನ್ನ ಬಹಳ ತರುಶಾಖಾನಿಚಯಚ್ಛಾಯೆಯೇ ಧವಳಚ್ಛತ್ರಮಾಗಿಯುಂ, ಇಂತು ಮೃಗಾಧಿರಾಜ ಪದವಿಯೊಳಾಧಿಪತ್ಯಮನಾತ್ಮಸ್ವೀಕೃತಂ ಮಾಡಿ,

ಭಂಗುರ ಭೀಷಣ ಭ್ರುಕುಟಿ ದಂಷ್ಟ್ರನುದಗ್ರದವಾನಲ ಪ್ರಭಾ
ಭಂಗ ಪಿಶಂಗ ಕೇಸರಸಟಾವೃತ ರೌದ್ರಮುಖಂ ಮದಾಂಧಮಾ
ತಂಗಘಟಾವಿಘಟ್ಟನಪಟಿಷ್ಠಕಠೋರನಖಾಳಿ ನಾಮದಿಂ
ಪಿಂಗಳಕಂ ಮೃಗೇಂದ್ರನೊಪೆದಿರ್ಪುದತರ್ಕ್ಯ ಪರಾಕ್ರಮಕ್ರಮಂ ೭೭

ಅಂತಿರ್ದೊಂದು ದಿವಸಮಾ ಮೃಗಾಧಿರಾಜನಜೇಯ ಸಾಮಜಘಟೆಯಂ ಬೆದಱ[3] ಬೆಂಕೊಂಡು ನಿಜನಿಶಿತನಖಕುಲಿಶಮುಖದಿಂ ಸೀಳ್ದು ಸೀಱುಂಬುಳಾಡಿ ಪರಿಗತಪರಿಶ್ರಮನಾಗಿ ಜಲಗ್ರಹಣಾಭಿಲಾಷೆಯಿಂ ಯಮುನಾತೀರದೊಳ್ ಬರುತಿರ್ದು

ವ|| ಹಾಗಿರಲು ಆ ವನಾಂತರದಲ್ಲಿ ಅಪ್ರತಿಮನಾದ ವಿಕ್ರಮಗುಣವೇ ತನಗೆ ಸ್ವಾಮಿಸಂಪದವಾಗಿಯೂ, ಗೂಢಲಕ್ಷಣ, ಭಿನ್ನಪ್ರತಿಸಂಧಾನ, ಸಂಧಿದೂಷಣ, ಪರಚಿತ್ತ ಪರೀಕ್ಷಾಲಕ್ಷಣ ಎಂಬ ಮಂತ್ರಿಗಿರಬೇಕಾದ ಗುಣಗಳಿಂದ ಕೂಡಿದ ನರಿಗಳೇ ಮಂತ್ರಿಗಳಾಗಿಯೂ ಮೃಗಸಮೂಹದಿಂದ ಕೂಡಿದ ಕಾಡಿನ ಅಂತರಾಳವೇ ತನಗೆ ಜನಪದವಾಗಿಯೂ ಅತ್ಯಂತ ಹರಿತವಾದ ಉಗುರುಗಳೆಂಬ ವಜ್ರಾಯುಧದ ಮುಖದಿಂದ ಸೀಳಿದ ಮದ್ದಾನೆಗಳ ಕಳೇಬರಗಳೇ ತನಗೆ ಭಂಡಾರವಾಗಿಯೂ ಅಖಿಲ ಶಾರ್ದೂಲಗಳೇ ಮಿತ್ರಬಲವಾಗಿಯೂ ಸಹಜವಾದ ದುರ್ಗಗಿರಿಗುಹಾಕಂದರಗಳೇ ದುರ್ಗಗಳಾಗಿಯೂ ಸಮಸ್ತ ತೋಳ ಕಾಡುಹಂದಿ ಹುಲಿಗಳೇ ಸೈನ್ಯಗಳಾಗಿಯೂ ವಿಶಾಲ ಶಿಲಾತಳಗಳೇ ಸಿಂಹಾಸನಗಳಾಗಿಯೂ ಚೆನ್ನಾಗಿ ಆವರಿಸಿದ ದಟ್ಟವಾದ ಮರಗಳ ಕೊಂಬೆಗಳ ನೆರಳೇ ಬೆಳ್ಗೊಡೆಯಾಗಿಯೂ, ಹೀಗೆ ಮೃಗಾಧಿರಾಜಪದವಿಯಲ್ಲಿ ಆಧಿಪತ್ಯವನ್ನು ತಾನಾಗಿ ಸ್ವೀಕರಿಸಿ, ೭೭. ಕೋಪದಿಂದ ಬಾಗಿರುವ ಭಯಂಕರವಾದ ಹುಬ್ಬುಗಳಿಂದ ಕೂಡಿದ ದಾಡೆಯುಳ್ಳದ್ದೂ, ಅತಿಶಯವಾದ ಕಾಡುಗಿಚ್ಚಿನ ಕಾಂತಿಯನ್ನು ಮೀರಿಸುವ ಹಳದಿ ಕೆಂಪು ಮಿಶ್ರಿತವಾದ ಕೇಸರಗಳಿಂದ ಕೂಡಿದ ಭಯಂಕರ ಮುಖವುಳ್ಳದ್ದೂ, ಮದದಿಂದ ಕುರುಡಾದ ಆನೆಗಳ ಸಮೂಹವನ್ನು ಸೀಳುವ ಶಕ್ತಿಯುಳ್ಳ ಕಠೋರ ನಖಗಳನ್ನುಳ್ಳದ್ದೂ ಆದ ಪಿಂಗಳಕನೆಂಬ ಹೆಸರಿನ ಮೃಗೇಂದ್ರನು ಮಾತಿಗೆ ಮೀರಿದ ಪರಾಕ್ರಮದಿಂದ ಕೂಡಿದ್ದಿತು. ವ|| ಹಾಗೆ ಇದ್ದೊಂದು ದಿವಸ ಆ ಮೃಗಾಧಿರಾಜನು ಜಯಿಸಲಾರದ ಆನೆಯ ಸಮೂಹವನ್ನು ಬೆದರಿಸಿ ಬೆನ್ನಟ್ಟಿ ತನ್ನ ನಿಶಿತನಖ ಕುಲಿಶಮುಖದಿಂದ ಸೀಳಿ ಸೂಸಾಟವಾಡಿ ಪರಿಶ್ರಮವನ್ನು ಹೋಗಲಾಡಿಸಿಕೊಂಡು ನೀರು ಕುಡಿಯಬೇಕೆಂದು

ಘನನಿನದಕ್ಕನುರೂಪಮಿ
ದೆನೆ ಸಂಜೀವಕನಳುರ್ಕೆಯಿಂ ಕೆಲೆಯೆ ಮಹಾ
ಧ್ವನಿಯಂ ತೊಟ್ಟನೆ ಕೇಳ್ದೊಡೆ
ಮನದೊಳ್ ಪುದಿದೊಂದು ಶಂಕೆ ನಿಲೆ ಮೃಗರಾಜಂ ೭೮

ಇದು ನಿರ್ಘಾತಮೊ ಮೇಣ್ ನೆಲಂ ಮೊಳಗಿತೋ ಮೇಣ್ ಘೋರನಿರ್ಘೋಷಮು
ಣ್ಮಿದುದೆಂಬಂತೆ ಸಿಡಿಲ್ ಸಿಡಿಲ್ದೆಱಗಿತೋ ಪೇಳೆಂತಿದೇನೆಂದು ಚಿ
ತ್ತದೊಳಾವರ್ತಿಸಿ ನೋಡೆ ವಿಸ್ಮಯಮದೊಂದಾಗಿರ್ಪಿನಂ ನೀರ್ಗೆ ಪೋ
ಗದೆ ತೃಷ್ಣಾತುರನಾಗಿಯುಂ, ಮಗುಳ್ದುದಾ ಸಿಂಹಂ ಭಯಭ್ರಾಂತಿಯಿಂ ೭೯

ಅಂತತಿಕ್ಷುಭಿತಹೃದಯನಾಗಿ ತೊಟ್ಟನೆ ಮಗುೞ್ದೆಲ್ಲಿಯುಂ ನಿಲ್ಲದತಿ ವಿಸ್ತೀರ್ಣಶಾಖಾ ಸಂಕೀರ್ಣವಪ್ಪುದೊಂದು ವಟವಿಟಪಿಯ ಕೆಳಗೆ ತರುಣ ಹರಿಣ ವೃಕ ವರಾಹ ಋಕ್ಷತರಕ್ಷು ಪ್ರಮುಖ ನಿಖಿಲ ಮೃಗಗಣ ಪರಿವೃತನುಮಾಗಿಯಾಕಾರಸಂವರಣೆಯನುಂಟುಮಾಡಿಕೊಂಡಿರ್ಪುದುಮಂ,

ಆ ಪ್ರಸ್ತಾವದೊಳ್ ಕರಟಕನುಂ ದಮನಕನುಮೆಂಬೆರಡು ನರಿಗಳ್ ಆ ಸಿಂಹಕನ್ವಯಾಗತರುಂ ಹಿತರುಂ ಬುದ್ಧಿವೃದ್ಧರುಮಪ್ಪ ಮಂತ್ರಿಸೂನುಗಳಪ್ಪುದಱಿಂ ಪಿಂಗಳಕನಿರವಂ ಕಂಡು ದಮನಕಂ ಕರಟಕಂಗೆಂಗುಂ: ನಮ್ಮರಸನೀಗಳ್ ತೃಷಾರ್ತನಾಗಿ ಜಮುನೆಗೆ ಪೋಗುತ್ತುಮಾಕಸ್ಮಿಕಂ ಮಗುೞ್ದು ಬಂದು ಅಪಮಾನಂಬಟ್ಟು ಉಪಧಾವಿಶುದ್ಧನಪ್ಪ ಮಂತ್ರಿಯಂತಾಕಾರ ಸಂವರಣೆಯನುಂಟು ಮಾಡಿಕೊಂಡಿರ್ಪುದಾವ ಕಾರಣಮಾರಯ್ದುಂ ಬನ್ನಿಮೆಂಬುದುಂ.

ಯಮುನಾತೀರದಲ್ಲಿ ಬರುತ್ತಿದ್ದಿತು. ೭೮. ಗುಡುಗಿನ ಆರ್ಭಟಕ್ಕೆ ಸಮಾನವೆಂಬಂತೆ ಕೆಲೆದ ಸಂಜೀವಕನ ದನಿಯನ್ನು ಕೇಳಿ ಆ ಸಿಂಹಕ್ಕೆ ಮನಸ್ಸಿನಲ್ಲಿ ಒಂದು ಸಂದೇಹ ಸೇರಿಕೊಂಡಿತು. ೭೯. ಇದು ಸಿಡಿಲೆರಗಿದ ಶಬ್ದವೋ, ನೆಲವು ಮೊಳಗಿತೋ ಘೋರ ನಿರ್ಘೋಷವನ್ನು ಹೊಮ್ಮಿತ್ತೆಂಬಂತೆ ಸಿಡಿಲು ಸಿಡಿದು ಎರಗಿತೋ ಹೇಳು ಇದೇನು ಎಂದು ಮನಸ್ಸಿನಲ್ಲಿ ಪುನಃ ಪುನಃ ವಿಚಾರಿಸಲು ವಿಸ್ಮಯವೆಲ್ಲ ಒಂದಾಗಿರಲು ಬಾಯಾರಿಕೆಯಾಗಿದ್ದರೂ ನೀರಿಗೆ ಹೋಗದೆ ಆ ಸಿಂಹವು ಭಯಭ್ರಾಂತಿಯಿಂದ ಹಿಂದಿರುಗಿತು. ವ|| ಹಾಗೆ ಅತ್ಯಂತ ಹೃದಯಕ್ಷೋಭೆಯಿಂದ ಕೂಡಲೇ ಹಿಂದಿರುಗಿ ಎಲ್ಲಿಯೂ ನಿಲ್ಲದೆ ಅತಿವಿಸ್ತೀರ್ಣವಾದ ಕೊಂಬೆಗಳಿಂದ ದಟ್ಟವಾದ ಒಂದು ವಟವೃಕ್ಷದ ಕೆಳಗೆ ತರುಣ ಹರಿಣ, ತೋಳ, ಕಾಡುಹಂದಿ, ಕರಡಿ, ಹುಲಿ ಮೊದಲಾದ ನಿಖಿಲ ಮೃಗಸಮೂಹದಿಂದ ಪರಿವೃತನಾಗಿ ಆಕಾರವನ್ನು ಮರೆಮಾಡಿಕೊಂಡಿದ್ದಿತು. ಆ ಸಂದರ್ಭದಲ್ಲಿ ಕರಟಕ ದಮನಕ ಎಂಬ ಎರಡು ನರಿಗಳು ಆ ಸಿಂಹಕ್ಕೆ ಅನ್ವಯಾಗತರೂ, ಹಿತರೂ, ಬುದ್ಧಿವೃದ್ಧರೂ ಆದ ಮಂತ್ರಿಪುತ್ರರಾದುದರಿಂದ ಪಿಂಗಳಕನನ್ನು ನೋಡಿ ದಮನಕನು ಕರಟಕನಿಗೆ ಹೀಗೆ ಹೇಳಿತು : ನಮ್ಮ ಅರಸನು ಈಗ ತೃಷಾರ್ತನಾಗಿ ಯಮುನೆಗೆ ಹೋಗುತ್ತ ಆಕಸ್ಮಿಕವಾಗಿ ಹಿಂದಿರುಗಿ ಬಂದು ಅಪಮಾನಕ್ಕೀಡಾದ ಉಪಧಾವಿಶುದ್ಧನಾದ ಮಂತ್ರಿಯಂತೆ ಆಕಾರವನ್ನು ಮರೆಯಾಗಿಟ್ಟುಕೊಂಡಿರುವುದಕ್ಕೆ ಕಾರಣವೇನು ಎಂದು

ಕರಟಕನೆಂಗುಂ : ನಾವಪ್ಪೊಡೆ ಪೞೆಯರ ಮಕ್ಕಳುಮಾಪ್ತರುಮೆಂಬನಿತೆಯಲ್ಲದೆ ಆವ ಕಾರ್ಯಕ್ಕುಮಲ್ಲಂ. ನಮ್ಮರಸನೀಗಳ್ ಕರಂ ವಿರಸನುಮಪಮಾನಿತನುಮಾಗಿರ್ದಪಂ. ಈಯವಸರದೊಳ್ ನಾಂ ಸ್ವಾಮಿಹಿತಮಹತ್ತ್ವಮಂ ಕೈಕೊಂಡು ನುಡಿಸುವುದು ನಯಮಲ್ಲಂ. ಈತನೇ ತರ್ಕೈಸಿದನೆಂಬುದನಱಿಯಲ್ ಬಾರದು. ಈತನಿರವಂ ಕಂಡೀಯಭಿನವಪ್ರಧಾನರುಂ ಪೊಸಪಸಾಯ್ತರುಂ ತಾವೇನಂ ನುಡಿವರ್ ನಾವದಂ ಕೇಳುತ್ತಮಿರ್ಪುದ ಸಾಲ್ಗುಂ. ಈಗಳೇನಾನುಮೊಂದು ನುಡಿದೆವಪ್ಪೊಡೆ, ದುಷ್ಟಪರಿವಾರವೇಷ್ಟಿತನಪ್ಪರಸಂ ನಮಗೇನಂ ಬಗೆವನೆಂಬುದನೆಂತಱಿವೆವು. ಆದಱಿಂ ನಾಮುಸಿರದಿರ್ದಪುದೇ ಕಜ್ಜಂ. ಅದಲ್ಲದೆಯುಂ ನಮ್ಮಂತಾಪ್ತರಂ ಹಿತರಂ ಬುದ್ಧಿವಂತರುಮನ ವಿಶ್ವಾಸಂಗೆಯ್ಯದೆ ಅನಾಪ್ತರುಮನಹಿತರುಮನವಿನೀತರುಮಂ ವಿಶ್ವಾಸಂಗೆಯ್ದು ಪ್ರಧಾನರಂ ಮಾಡಿ ನಡಪಿದ ಮೂಢಸಿಂಹಕ್ಕೆ ಏಗೆಯ್ದುಂ ಕಾರ್ಯಹಾನಿಯಾಗದೆ ಪೋಗದು ಅದೆಂತೆನೆ :

ಶ್ಲೋ ॥ ಅಭ್ಯಂತರಗತಾ ಬಾಹ್ಯಾ ಬಾಹ್ಯಾಶ್ಚಾಭ್ಯಂತರಂ ಗತಾಃ
ಯೈರ್ನರಾ ನಿಧನಂ ಯಾಂತಿ ಯಥಾ ರಾಜಾ ಕಚದ್ರುಮಃ ॥೫॥

ಟೀ॥ ಅರಸುಗಳ್ ಒಳಗೆ ನಡೆವವರಂ ಹೊಱಗಿಕ್ಕಲಾಗದು ಹೊರಗೆ ನಡೆವವರನೊಳಗಿಕ್ಕಲಾಗದು. ಅಹಗೆ ಮಾಡಿದಪಂ ಕಿಡುವಂ. ಅದು ಎಹಗೆಂದೊಡೆ, ಕಚದ್ರುಮದೆಂಬರಸಿನಹಗೆ ಎನೆ, ದವನಕನದೆಂತೆನೆ, ಕರಟಕಂ ಪೇೞ್ಗುಂ

೨. ಕಚದ್ರುಮನ ಕಥೆ

ಮಹಾದ್ರುಮನೆಂಬರಸಂಗೆ ಕಚದ್ರುಮನೆಂಬ ಮಗಂ ಪುಟ್ಟಿ ಬಾಲಕಾಲದಿಂ ತೊಟ್ಟು ವೃದ್ಧೋಪಾಸ್ತಿಯಂ ಬಿಟ್ಟು, ಸಪ್ತವ್ಯಸನವಶಗತನಾಗಿಯುಂ, ಖಲಜನಸಂಗತನುಮಾಗಿಯುಂ

ವಿಚಾರಿಸೋಣ, ಬನ್ನಿರಿ ಎನ್ನಲು ಕರಟಕನೆಂದನು : ನಾವಾದರೋ ಹಳೆಯರ ಮಕ್ಕಳೂ ಆಪ್ತರೂ ಅಲ್ಲದೆ ಯಾವ ಕಾರ್ಯಕ್ಕೂ ಅಲ್ಲ. ನಮ್ಮ ಅರಸನು ಈಗ ಸ್ವಲ್ಪ ವಿರಸನೂ ಅಪಮಾನಿತನೂ ಆಗಿರುವನು. ಈ ಸಂದರ್ಭದಲ್ಲಿ ನಾವು ಸ್ವಾಮಿಹಿತಮಹತ್ತ್ವವನ್ನು ಕೈಕೊಂಡು ನುಡಿಯುವುದು ನೀತಿಯಲ್ಲ. ಈತನು ಏನನ್ನು ಇಚ್ಛಿಸುತ್ತಿದ್ದಾನೆಂಬುದನ್ನು ಅವನು ತಿಳಿಯುವುದು ಸರಿಯಲ್ಲ. ಈತನ ಅವಸ್ಥೆಯನ್ನು ಕಂಡು ಈ ಹೊಸ ಮಂತ್ರಿಗಳೂ, ಹೊಸ ಅಧಿಕಾರಿಗಳೂ ಏನು ಹೇಳುವರೋ ಅದನ್ನು ಕೇಳುತ್ತಿರುವುದೇ ಸಾಕು. ಈಗ ಏನಾದರೊಂದನ್ನು ನುಡಿದೆವೆಂದರೆ ದುಷ್ಟಪರಿವಾರಗಳಿಂದ ಆವೃತನಾದ ಅರಸನು ನಮ್ಮನ್ನು ಹೇಗೆ ತಿಳಿಯುವನೆಂದು ಅರಿಯುವುದು ಹೇಗೆ ? ಆದರಿಂದ ನಾವು ಮೌನವಾಗಿರುವುದೇ ಲೇಸು. ಅಲ್ಲದೆ ನಮ್ಮಂತಹ ಆಪ್ತರೂ, ಹಿತರೂ, ಬುದ್ಧಿವಂತರೂ ಆಗಿರುವವರನ್ನು ನಂಬದೆ, ಅನಾಪ್ತರೂ, ಅಹಿತರೂ, ಅವಿನೀತರೂ ಆದವರನ್ನು ನಂಬಿ ಪ್ರಧಾನರನ್ನಾಗಿ ಮಾಡಿ ನಡೆಯಿಸಿದ ಮೂಢ ಸಿಂಹಕ್ಕೆ ಏನು ಮಾಡಿದರೂ ಕಾರ್ಯಹಾನಿಯಾಗದೆ ಹೋಗದು. ಶ್ಲೋ ॥ ಹೇಗೆಂದರೆ, ಅರಸರು ಒಳಗಿರುವವರನ್ನು ಹೊರಗೆ ಹಾಕಬಾರದು. ಹೊರಗಿರುವವರನ್ನು ಒಳಕ್ಕೆ ಸೇರಿಸಕೂಡದು. ಹಾಗೆ ಮಾಡಿದವನು ಕಚದ್ರುಮನೆಂಬ ಅರಸನಂತೆ ಕೆಡುವನು, ಎಂದು ಹೇಳಲು ದವನಕನು ಅದು ಹೇಗೆ ಎನ್ನಲು ಕರಟಕನು ಹೇಳತೊಡಗಿದನು : ವ॥ ಮಹಾದ್ರುಮನೆಂಬ ಅರಸನಿಗೆ ಕಚದ್ರುಮನೆಂಬ ಮಗನು ಹುಟ್ಟಿ ಬಾಲ್ಯದಿಂದ ವೃದ್ಧೋಪಾಸ್ತಿಯನ್ನು ಬಿಟ್ಟು, ಸಪ್ತವ್ಯಸನವಶಗತನಾಗಿ, ಖಳಜನ

ನಡೆಯುತ್ತಮಿರೆ ಕೆಲವುಕಾಲದಿನಾತನ ತಂದೆ ಮಹಾದ್ರುಮಂ ದೀರ್ಘನಿದ್ರಿತನುಮಪ್ಪುದುಂ, ಕಚದ್ರುಮಂ ರಾಜ್ಯಪದವಿಯೊಳ್ ನಿಂದಂ ಆತಂ ನೀತಿಬಾಹ್ಯನಪ್ಪುದಜೆಂ ಪೂರ್ವಾಪರವಿಚಾರವಿಕಳನಾಗಿ, ಹಿತಪುರೋಹಿತಮಂತ್ರಿ ಮಹಾಸಾಮಂತಾಂತರ್ವಂಶಿಕ ಮಹಾಪ್ರಧಾನ ಶ್ರೀಕರಣ ಸೇನಾನಾಯಕಾದ್ಯನೇಕರ ವೃತ್ತಿಪ್ರಪತ್ತಿಗಳಂ ಕಳೆದುಕೊಂಡು, ತನ್ನೊಡನಾಡಿಗಳಪ್ಪ ಭಂದಮಂಡಲಿಯನೆ ಪ್ರಧಾನಸಾಮಂತಾದಿ ಶಿಷ್ಟರ್ಕಳಂ ಮಾಡಿ, ತಾಂ ಪಿತೃವಿತ್ತಮದೋನ್ಮತ್ತನಾಗಿ, ಧರ್ಮದೊಳ್ ಬಹಿರ್ಮುಖನುಂ ಅರ್ಥದೊಳನ್ಯಾಯೋಪಾರ್ಜಿತಾರ್ಥನುಂ, ಕಾಮದೊಳತಿಕಾಮಿಯುಂ, ಮೋಕ್ಷದೊಳ್ ನಿರಪೇಕ್ಷಕನುಮಾಗಿ, ರಾಮಾದ್ಯನೇಕ ರಾಜದತ್ತಿಗಳಪ್ಪನೇಕ ಭೂದೇವ ಭೋಗಾಗ್ರಹಾರಂಗಳನಾಗ್ರಹ ದಿಂದಟಿದು, ಕರಭರಕ್ಷಮಮಪ್ಪ ನಾಡಂ ಬೇಡರಂತೆ ಪರಿಪರಿದು ನಿರವಶೇಷದಿಂ ಕಿಡಿಸಿಯುಂ, ಶಿಷ್ಟರ್ಗನಿಷ್ಟಮಂ ಮಾಡಿಯುಂ, ದುಷ್ಟಕಷ್ಟರ್ಗಿಷ್ಟಮಂ ಮಾಡಿಯುಂ, ಕುಳವರ್ಗತಳವರ್ಗಮುಮಂ ಪಟಿಯ ನಿಯೋಗಿಗಳುಮಂ, ನಾನಾದೇಶಿಗಳುಮಪ್ಪ ವ್ಯವಹಾರಿಗಳುಮಂ ನೆವಮಿಟ್ಟು ಕವರ್ದುಕೊಂಡು ಸಮಸ್ತವಸ್ತುವಾಹನಂಗಳಂ ತನ್ನೊಡನಾಡಿಗಳಪ್ಪ ಭಂಡಮಂಡಲಿಗೆ ಸೂಱೆಗೊಟ್ಟು, ಇಂತು ಸಪ್ತಾಂಗದೊಳೇಕಾಂಗಮುಟಿಯೆ; ಕಚದ್ರುಮನ ರಾಜ್ಯಂ ಕಳಕುಳಮಾಗಿರ್ದುದನಾತನ ದಾಯಾದಂ ಸಿಂಹಬಳನಱಿದು ಮೇಲೆತ್ತಿ ಬರೆ; ಮೂಲಭೃತ್ಯ ಸುಹೃತ್ಸೇನಾಟವಿಕರೆಲ್ಲರುಂ ಮುನ್ನಮೇ ಭೀತರುಮಪಮಾನಿತರುಮಪ್ಪುದಱಿಂದುಪೇಕ್ಷಿತರುಂ ಆತನ ಭಂಡಮಂಡಲಿಯೊಳ್ ಕೆಲರೋಡಿಯುಂ ಕೆಲರಹಿತರೊಳ್ ಕೂಡಿಯುಂ ಇಂತೆಲ್ಲಂ ಯಥಾಯಥಮಾಗೆ; ಕಚದ್ರುಮಂ ನಿರ್ಬುದ್ಧಿಯೊರ್ವನೆ ಕರುವಾಡದೊಳ್ ಶ್ವೇತಕಪೋತನಂತಿರ್ದು ಶತ್ರುಸಂಗ್ರಹಣಕ್ಕೊಳಗಾದಂ. ಇಂತೀ ಪಿಂಗಳಕನೇಗೆಯ್ವುದುಮಾಗದಿರಂ ಏನೊಂದು ಕಾರ್ಯಮುಮಂ ನಾಂ ಪೋಗಿರ್ದು ನೋಡುತಿರ್ಪುದೆ

ಸಂಗತನಾಗಿರಲು ಕೆಲವು ಕಾಲದ ಮೇಲೆ ತಂದೆ ಮಹಾದ್ರುಮನು ತೀರಿಹೋದನು. ಆಗ ಕಚದ್ರುಮನು ರಾಜಪದವಿಯನ್ನು ಸ್ವೀಕರಿಸಿದನು. ಆತನು ನೀತಿಬಾಹಿರನಾದುದರಿಂದ ಪೂರ್ವಾಪರವಿಚಾರಹೀನನಾಗಿ ಹಿತಪುರೋಹಿತ ಮಂತ್ರಿ ಸಾಮಂತರನ್ನು ಕಳೆದುಕೊಂಡು ತನ್ನ ಒಡನಾಡಿಗಳಾಗಿದ್ದ ಭಂಡಮಂಡಲಿಯನ್ನೇ ಪ್ರಧಾನ ಸಾಮಂತಾದಿ ಶಿಷ್ಟರನ್ನಾಗಿ ಮಾಡಿ ತಾನು ಪಿತೃ ವಿತ್ತ ಮದೋನ್ಮತ್ತನಾಗಿ ಧರ್ಮದಲ್ಲಿ ಬಹಿರ್ಮುಖನೂ, ಅರ್ಥದಲ್ಲಿ ಅನ್ಯಾಯೋಪಾರ್ಜಿತನೂ, ಕಾಮದಲ್ಲಿ ಅತಿಕಾಮಿಯೂ, ಮೋಕ್ಷದಲ್ಲಿ ನಿರಪೇಕ್ಷನೂ ಆಗಿ ರಾಮಾದಿ ಅನೇಕ ರಾಜದತ್ತಿಗಳಾದ ಅನೇಕ ಬ್ರಾಹ್ಮಣರ ಭೋಗಾಗ್ರಹಾರಗಳನ್ನು ನಾಶಮಾಡಿ ಹೊರಲಾರದಷ್ಟು ತೆರಿಗೆಯನ್ನುಳ್ಳ ನಾಡನ್ನು ಬೇಡರಂತೆ ಹರಿಹರಿದು ಸಂಪೂರ್ಣವಾಗಿ ನಾಶಮಾಡಿಯೂ, ಶಿಷ್ಟರಿಗೆ ಅನಿಷ್ಟವನ್ನು ಮಾಡಿಯೂ ದುಷ್ಟರಿಗೂ, ಕೇಡಿಗರಿಗೂ ಒಳ್ಳೆಯದನ್ನು ಮಾಡಿಯೂ, ಕುಳವರ್ಗ ತಳವರ್ಗವನ್ನೂ, ಹಳೆಯ ನಿಯೋಗಿಗಳನ್ನೂ ನಾನಾದೇಶದಲ್ಲಿ ವ್ಯವಹಾರ ಮಾಡುವವರನ್ನೂ ನೆವ ಹೇಳಿ ಬಲಾತ್ಕಾರದಿಂದ ತೆಗೆದುಕೊಂಡು, ಸಮಸ್ತ ವಸ್ತುವಾಹನಗಳನ್ನು ತನ್ನ ಒಡನಾಡಿಗಳಾದ ಭಂಡಮಂಡಲಿಗೆ ಸೂರೆಗೊಟ್ಟು ಹೀಗೆ ಸಪ್ತಾಂಗಗಳಲ್ಲಿ ಏಕಾಂಗ ಉಳಿಯಿತು. ಕಚದ್ರುಮನ ರಾಜ್ಯವು ಅಸ್ತವ್ಯಸ್ತವಾಗಿರುವುದನ್ನು ಆತನ ದಾಯಾದಿಯಾದ ಸಿಂಹಬಲನು ತಿಳಿದು ಆಕ್ರಮಿಸಲು ಮೂಲ ಭೃತ್ಯ ಮಿತ್ರ ಸೇನಾಟವಿಕರೆಲ್ಲರೂ ಮೊದಲೇ ಭೀತರೂ ಅಪಮಾನಿತರೂ ಆದುದರಿಂದ ತಿರಸ್ಕೃತರೂ ಆತನ ಭಂಡಮಂಡಲಿಯಲ್ಲಿ ಕೆಲವರು ಓಡಿಯೂ, ಕೆಲವರು ಅಹಿತರೊಡನೆ ಕೂಡಿಯೂ ಹೀಗೆ ಎಲ್ಲರೂ ಅಲ್ಲಲ್ಲಿಯಾಗಲು ಕಚದ್ರುಮನು ಬುದ್ಧಿಹೀನನಾಗಿ ಏಕಾಂಗಿಯಾಗಿ ಉಪ್ಪರಿಗೆಯಲ್ಲಿ ಬೆಳ್ಳಕ್ಕಿಯಂತೆ ಶತ್ರುವಿಗೆ

ಸಾಲ್ಗುಂ, ನಾವೀ ರಾಜಕಾರ್ಯದೊಳ್ ತೊಡರ್ದು ಪರ್ಯಾಲೋಚನಾ ಪರಿವೃತ್ತಿಯೊಳೇನಪ್ಪುದು? ಎಂತುಂ ಅವ್ಯಾಪಾರವೃತ್ತಿ ಯಾವುದುಂ ಪೊಲ್ಲದು; ಎಂತೆನೆ,

ಶ್ಲೋ॥ ಅವ್ಯಾಪಾರೇಷು ವ್ಯಾಪಾರಂ ಯೋ ನರಃ ಕರ್ತುಮಿಚ್ಛತಿ
ಸ ಏವ ನಿಧನಂ ಯಾತಿ ಕೀಲೋತ್ಪಾಟೀವ ವಾನರಃ ॥೬॥

ಟೀ॥ ವ್ಯಾಪಾರಿಸುವುದಕ್ಕೆ ಯೋಗ್ಯವಲ್ಲದಂತಪ್ಪ ಠಾವಿನೊಳ್ ಆವನೊರ್ವಂ ವ್ಯವಹರಿಸಲಿಚ್ಛೈಸಿಹಂ, ಆತಂ ಕೀಲನುರ್ಚಿದ ಕೋಡಗನಂತೆ ಕೇಡನೈದುವಂ ಎಂಬ ಕಥೆಯಂತಕ್ಕು ಮೆನೆ, ದವನಕನಾ ಕಥೆಯೆಂತೆನೆ, ಕರಟಕಂ ಪೇಳ್ಗುಂ :

೩. ಕೀಲನುರ್ಚಿದ ಕೋಡಗನ ಕಥೆ

ಗಿರಿನಗರಮೆಂಬ ಪೊಟಿಲೊಳ್
ಧರೆಗಧಿನಾಥಂ ಸುಶರ್ಮನೆಂಬಂ ಲೋಕೋ-
ತ್ತರಮಾಗೆ ದೇವತಾಮಂ-
ದಿರಮಂ ಮಾಡಿಸುತುಮಿರ್ಪಿನಂ ಕೆಲವುದಿನಂ ೮೦

ವ॥ ಒಂದು ದಿವಸಂ ಮಧ್ಯಾಹ್ನಸಮಯಮಪ್ಪನ್ನೆಗಂ ಭರಂಬಟ್ಟು ಕೆಲಸಂಗೈದಲ್ಲಿಯ ಬಿನ್ನಣಿಗರುಂ ಕರ್ಮಕಾರರುಂ ತಮ್ಮ ತಮ್ಮ ಮನೆಗುಣಲ್ಪೋಪುದುಂ; ಅದಱ ಕೆಲದ ನಂದನ ವನದೊಳ್ ವರ್ತಿಸುತಿರ್ಪ ಮರ್ಕಟಯೂಥಂ ಯಥಾಸ್ವೇಚ್ಛೆಯಿಂದತ್ತಮಿತ್ತಮೆತ್ತಂ ಪರಿಪರಿದು, ದೇಗುಲದ ಶಿಖರಮನಡರ್ದೇಱಿ ಒಟ್ಟಿರ್ದಿಟ್ಟಿಗೆಯಂ ಕೆದಱಿಯುಂ, ಸೇರಿರ್ದ ತಿದಿಗಳಂ ಸೀಟ್ಟುಂ, ಇದ್ದಿಲ ರಾಶಿಯಂ ಸೂಸಿಯುಂ, ನಿಸರ್ಗಚಪಳಸ್ವಭಾವದಿಂದಾಡುತಿರ್ದು ಅವರೊಳಗತ್ಯಾಸನ್ನ ಕಾಲಮೃತ್ಯು

ವಶಗತನಾದನು. ಹೀಗೆಯೇ ಈ ಪಿಂಗಳಕನೂ ಏನುಮಾಡಿದರೂ ಆಗದಿರನು. ಯಾವ ಕಾರ್ಯವನ್ನೂ ನಾವು ಹೊರಗಿದ್ದು ನೋಡುತ್ತಿರುವುದೇ ಸಾಕು. ನಾವು ಈ ರಾಜಕಾರ್ಯದಲ್ಲಿ ಸಿಲುಕಿ ಪರ್ಯಾಲೋಚನೆ ಮಾಡುವ ಸ್ಥಿತಿಯಲ್ಲಿ ಏನಾಗುವುದು ? ಹೇಗೂ ವ್ಯವಹರಿಸುವುದಕ್ಕೆ ಅಯೋಗ್ಯವಾದ ಯಾವುದೂ ನೀಚವಾದುದು. ಶ್ಲೋ॥ ಹೇಗೆಂದರೆ ವ್ಯವಹಾರಕ್ಕೆ ಯೋಗ್ಯವಲ್ಲದಂತಹ ಸ್ಥಳದಲ್ಲಿ ಯಾರು ವ್ಯವಹರಿಸುವುದಕ್ಕೆ ಇಚ್ಛಿಸುವನೋ ಅವನು ಕೀಲನ್ನು ಎಳೆದ ಕೋಡಗನಂತೆ ಕಾಲವಶನಾಗುವನು ಎಂಬ ಕಥೆಯಂತೆ ಆಗುವುದು ಎನ್ನಲು ದವನಕನು ಆ ಕಥೆ ಏನು ಎನ್ನಲು ಕರಟಕನು ಹೇಳಿತು: ೮೦. ಗಿರಿನಗರ ಎಂಬ ಪಟ್ಟಣದಲ್ಲಿ ಸುಶರ್ಮನೆಂಬ ಅರಸನು ಲೋಕೋತ್ತರವಾದ ದೇವಾಲಯವನ್ನು ಕಟ್ಟಿಸುತ್ತಿರಲು ಒಂದು ದಿವಸ ಮಧ್ಯಾಹ್ನ ಸಮಯದಲ್ಲಿ ಅವಸರ ಅವಸರವಾಗಿ ಕೆಲಸವನ್ನು ಮಾಡಿ ಅಲ್ಲಿಯ ವಿಜ್ಞಾನಿಗಳೂ, ಕಮ್ಮಾರರೂ ತಮ್ಮ ತಮ್ಮ ಮನೆಗೆ ಉಣ್ಣಲು ಹೋದರು. ಅದರ ಸಮೀಪದ ನಂದನವನದಲ್ಲಿ ತಿರುಗಾಡುತ್ತಿದ್ದ ಮಂಗಗಳ ಗುಂಪೊಂದು ಸ್ವೇಚ್ಛೆಯಿಂದ ಅತ್ತಿತ್ತ ಎತ್ತಲೂ ಅಡ್ಡಾಡುತ್ತ ದೇಗುಲದ ಶಿಖರವನ್ನು ಏರಿ ರಾಶಿ ಹಾಕಿದ ಇಟ್ಟಿಗೆಯನ್ನು ಕೆದರಿ, ಸೇರಿಸಿದ್ದ ತಿದಿಗಳನ್ನು ಸೀಳಿಹಾಕಿ, ಇದ್ದಿಲ ರಾಶಿಯನ್ನು ಸೂಸಿ, ಸಹಜವಾದ ಚಪಲಸ್ವಭಾವದಿಂದ ಆಡುತ್ತಿದ್ದವು. ಅವುಗಳಲ್ಲಿ ಮೃತ್ಯುವಿಗೆ ತುತ್ತಾಗುವುದಕ್ಕೆ ಕಾಲ ಹತ್ತಿರವಾದ ಒಂದು ದೊಡ್ಡ ಬಾಲದ ಕಪಿ ಬಂದು

ವಶಗತನಪ್ಪುದೊಂದು ಗೋಲಾಂಗೂಲಂ ಬಂದು ಕರಗಸಿಗರೊಂದು ಭಾಗಂಬರಂ ಸೀಳ್ದು ನೂಲ ತಲೆಯೊಳ್ ಕೀಲಂ ನೆಟ್ಟಿರ್ದ ಮರನಂ ಕಂಡದಱ ಮೇಲೆ ಕುಳ್ಳಿರ್ದು, ಮುನ್ನಂ ಸೀಳುತಿರ್ದುಳಿದ ಪಲಗೆಗಳೆರಡುಮನೆಡಗಲಿಸಿರ್ದು ನೆಟ್ಟಿರ್ದ ಕತ್ತರಿಯದ ಕೀಲನಿರ್ಕೈಗಳಿಂದಂ ಪಿಡಿದು, ಆರ್ಪ ಭರದಿಂದಲ್ಲಾಡಿ ಕೀಳ್ವುದುಮಾ ಪಲಗೆಗಳೆರಡುಂ ನೊಟ್ಟನೆ ಮರ್ಮಪ್ರದೇಶವನೊತ್ತುವುದುಂ, ಆ ಬಲೀಮುಖಂ ಕಾಲಮುಖಮನೆಯ್ದಿತ್ತು.

ಅದು ಕಾರಣದಿಂದದಱಿಂದಮಪ್ಪುದು. ಉದರಭರಣಮಾತ್ರಮಪ್ಪಂತೆ ರಾಜಾನುಸೇವನಂ ಗೆಯ್ವುತಿರ್ಪೆವು ಎನೆ, ದವನಕನಿಂತೆಂದಂ :

ಶ್ಲೋ॥ ಸುಹೃದಾಮುಪಕಾರ ಕಾರಣಾತ್ ದ್ವಿಷತಾಮಪ್ಯಪಕಾರಕಾರಣಾತ್
ನೃಪಸಂಶ್ರಯ ಇಷ್ಯತೇ ಬುಧೈಃ ಜಠರಂ ಕೋ ನ ಬಿಭರ್ತಿ ಕೇವಲಮ್ ॥೭॥

ಟೀ॥ ಮಿತ್ರರ್ಗುಪಕಾರಮುಂ ಮಾಳ್ಪುದೇ ಕಾರಣಮಾಗಿ ನೃಪಸೇವೆಯಂ ಮಾಡಲ್ವೇಳ್ಕುಮೆಂದು ವಿದ್ವಾಂಸರ್ ಪೇಳ್ವರ್ ತನ್ನೊಡಲಂ ಪೊರೆಯಲಱಿಯದವನಾರುಮಿಲ್ಲಂ ಎಂಬೀ ಪುರಾತನವಾಕ್ಯಮುಂಟು ಅದಱಿಂ ನಾವಪ್ಪೊಡೆ, ಮೃಗಾಧಿರಾಜಂಗನ್ವಯಾಗತರುಂ ಹಿತರುಮಪ್ಪ ನಮಗಿನಿತು ಕುಡದಿರ್ದೊಡಂ,

ಶ್ಲೋ॥ ಪ್ರಭುರ್ಗುಣ ವಿಹೀನೋಽಪಿ ವಿಪತ್ತೌ ನ ಪರಿತ್ಯಜೇತ್ ॥೮॥

ಟೀ॥ ಗುಣಮಿಲ್ಲದವನಾದೊಡೆಯುಂ ಒಡೆಯನಂ ಆಪತ್ತಿನಲ್ಲಿ ಬಿಡಲಾಗದು ಎಂಬ ನೀತಿವಾಕ್ಯಮುಂಟದಱಿಂದಾಳ್ದಂ ಎಂತು ನಿರ್ಗುಣನಾದೊಡಂ ಗುಣವಂತನಪ್ಪ ಭೃತ್ಯನಾಳ್ದನೆದರಂ ಕಡೆಗಣಿಸಿರ್ಪುದೊಪ್ಪದು ಅಲ್ಲದೆಯುಂ ನಮ್ಮರಸನೀಗಳ್ ಭಯಾತುರನುಂ, ಕಾರ್ಯಾತುರನುಮಾಗಿರ್ದಪಂ;

ಕರಗಸಿಗರು ಒಂದು ಭಾಗದವರೆಗೆ ಸೀಳಿ ನೂಲಿನ ತಲೆಯಲ್ಲಿ ಕೀಲನ್ನು ನಾಟಿದ್ದ ಮರವನ್ನು ಕಂಡು ಅದರ ಮೇಲೆ ಕುಳಿತುಕೊಂಡು, ಮೊದಲೇ ಸೀಳುತ್ತಿದ್ದು ಉಳಿದ ಹಲಗೆಗಳೆರಡನ್ನು ಬೇರೆಬೇರೆಯಾಗಿ ಮಾಡಲು ಹೊಡೆದಿದ್ದ ಕತ್ತರಿಸದ ಕೀಲನ್ನು ಎರಡೂ ಕೈಗಳಿಂದಲೂ ಹಿಡಿದು ಸಾಧ್ಯವಾದಷ್ಟು ಬಲವಾಗಿ ಅಲ್ಲಾಡಿಸಿ ಕಿತ್ತಿತು. ಆ ಹಲಗೆಗಳೆರಡೂ ತಟಕ್ಕನೆ ಮರ್ಮಪ್ರದೇಶವನ್ನು ಒತ್ತಲು ಆ ಕಪಿಯು ಮೃತ್ಯುವಿಗೆ ತುತ್ತಾಯಿತು. ಆ ಕಾರಣದಿಂದ ಅದರಂತೆಯೇ ಆಗುತ್ತದೆ, ಹೊಟ್ಟೆಪಾಡಿಗೆಂಬಂತೆ ರಾಜನ ಸೇವೆಯನ್ನು ಮಾಡುತ್ತಿರೋಣ ಎನ್ನಲು, ದವನಕನು ಹೀಗೆಂದಿತು : ಶ್ಲೋ॥ ಮಿತ್ರರಿಗೆ ಉಪಕಾರವನ್ನೂ ಶತ್ರುಗಳಿಗೆ ಅಪಕಾರವನ್ನೂ ಮಾಡುವುದಕ್ಕಾಗಿ ನೃಪಸೇವೆಯನ್ನು ಮಾಡಬೇಕೆಂದು ವಿದ್ವಾಂಸರು ಹೇಳುವರು. ತನ್ನ ಹೊಟ್ಟೆಹೊರೆದುಕೊಳ್ಳಲು ತಿಳಿದವನು ಯಾರೂ ಇಲ್ಲ ಎಂಬ ಪುರಾತನವಾಕ್ಯವಿದೆ. ಅದರಿಂದ ಮೃಗಾಧಿರಾಜನಿಗೆ ಅನ್ವಯಾಗತರೂ, ಹಿತರೂ ಆದ ನಮಗೆ ಏನನ್ನೂ ಕೊಡದಿದ್ದರೂ, ಶ್ಲೋ॥ ಗುಣಹೀನನಾಗಿದ್ದರೂ ಒಡೆಯನನ್ನು ಆಪತ್ತಿನಲ್ಲಿ ಕೈಬಿಡಬಾರದು ಎಂಬ ನೀತಿವಾಕ್ಯವುಂಟು. ಅದರಿಂದ ನಮ್ಮೊಡೆಯ ಎಂಥ ನಿರ್ಗುಣನಾದವನಾದರೂ ಗುಣವಂತನಾದ ಭೃತ್ಯನು ಒಡೆಯನ ಎಡರನ್ನು ಕಡೆಗಣಿಸುವುದು ತರವಲ್ಲ, ಅಲ್ಲದೆ ನಮ್ಮ ಅರಸನು ಈಗ ಭಯಾತುರನೂ ಕಾರ್ಯಾತುರನೂ ಆಗಿರುತ್ತಾ ಗುಪ್ತಕಾರ್ಯವನ್ನು ಆಪ್ತ ವರ್ಗಕ್ಕಲ್ಲದೆ ಉಳಿದವರಿಗೆ ಹೇಳುವವನಲ್ಲ, ಅದರಿಂದ ಅರಸನ

ಗುಪ್ತಕಾರ್ಯಮನಾಪ್ತವರ್ಗಕ್ಕೆಲ್ಲದುಟಿದರ್ಗಱಿವುವನಲ್ಲಂ; ಅದಱಿಂದರಸನನೆಯ್ದಿ ಕಾರ್ಯದೊಳಗನಱಿವಮೆನೆ. ಕರಟಕನಿಂತೆಂದಂ : ಅರಸಂ ಭೀತನಾದುದನೇ ತೆಱದಿಂದಱಿವೆಯೆನೆ. ದವನಕನಿಂತೆಂದಂ :

ಶ್ಲೋ॥ ಉದೀರಿತೋರ್ಥಃ ಪಶುನಾಪಿಗೃಹ್ಯತೇ ಹಯಾಶ್ಚನಾಗಾಶ್ಚವಹಂತಿ ಚೋದಿತಾಃ
ಅನುಕ್ತಮಪ್ಯೂಹತಿ ಪಂಡಿತೋಜನಃ ಪರೇಂಗಿತಜ್ಞಾನಫಲಾಹಿ ಬುದ್ಧಯಃ ॥೯॥

ಟೀ॥ ನುಡಿಯಲ್ಪಟ್ಟ ಪ್ರಯೋಜನಮಂ ಪಶುವಾದೊಡಮಱಿವುದು; ಕುದುರೆಗಳುಂ ಆನೆಗಳುಂ ನೂಂಕಲೌಂಕಲುಂ ನಡೆವುವು; ವಿವೇಕಿಗಳಪ್ಪವರ್ಕಳ್ ಪೇೞದಿರ್ದರುಮಱಿವರ್; ಪೆಱರ ಅಂತರ್ಗತಮನಱಿವುದೇ ಬುದ್ಧಿಗೆ ಫಲಂ, ಎಂಬುದಱಿಂದೀತನಿರ್ದಿರವೇ ಭೀತನಾದುದನಱಿಪಿದಪ್ಪುದು: ಈಯವಸರದೊಳೊಳಪ್ಪೊಕ್ಕು, ತಿಳಿದು, ಅರಸನ ಮನದೊಳೊದವಿದ ಭಯಮಂ ಕಳೆಯಲ್‌ವೇೞ್ಕುಮಂತೆ ನಾವಾಪ್ತರುಂ ಹಿತವರುಮಪ್ಪೆವೆನೆ. ಕರಟಕನಿಂತೆಂದಂ :

ಸುರತಾಸಕ್ತನನನ್ಯಕಾರ್ಯಪರನಂ ನಿದ್ರಾಳುವಂ ಕೋಪಭೀ-
ಕರನಂ ವಾದಿತ ನೃತ್ಯ ಗೀತ ಮಧುರಾಳಾಪೇಷ್ಟ ಗೋಷ್ಠೀಮನೋ-
ಹರನಂ ಕುಕ್ಕುಟ ಮಲ್ಲಮೇಷ ಮಹಿಷೇಭ ದ್ವಂದ್ವಯುದ್ಧಕ್ರಿಯಾ-
ಪರನಂ ಭೂಪನನೆಯ್ದಿ ಬಿನ್ನವಿಸಬೇಡೇನಾದೊಡಂ ಸೇವಕಂ ೭೧

ಅರಿನೃಪರುತ್ಸವಮಂ ಕೇ-
ಳ್ದಿರೆಯುಂ ಸೆಂಡಾಡುತಿರೆಯುಮಾನೆಯನೇಱು-
ತ್ತಿರೆಯುಂ ಮಂತಣದೊಳ್ ಕು-
ಳ್ಳಿರೆಯುಂ ಬಿನ್ನವಿಸಲಾಗದೆಂತುಂ ಭೃತ್ಯಂ ೭೨

ಬಳಿಗೆ ಹೋಗಿ ಕಾರ್ಯದ ಅಂತರಂಗವನ್ನು ಅರಿಯೋಣ. ಅದಕ್ಕೆ, ಅರಸನು ಭೀತನಾಗಿರುವನು ಎಂದು ನೀನು ಹೇಗೆ ತಿಳಿದೆ ಎಂದು ಕರಟಕನು ಕೇಳಲು ದವನಕನು ಹೀಗೆಂದಿತು : ಶ್ಲೋ॥ ಹೇಳಿದ ಅರ್ಥವನ್ನು ಪಶುವಾದರೂ ಅರಿಯಬಲ್ಲುದು. ಕುದುರೆಗಳೂ, ಆನೆಗಳೂ ನೂಕಲು, ಅವುಕಲು ನಡೆಯುವುವು. ವಿವೇಕಿಗಳಾದವರು ಹೇಳದಿದ್ದರೂ ತಿಳಿಯಬಲ್ಲರು. ಪರರ ಇಂಗಿತವನ್ನು ಅರಿಯುವುದೇ ಬುದ್ಧಿಯ ಫಲ. ಈತನಿದ್ದ ರೀತಿಯೇ ಭೀತನಾಗಿರುವುದನ್ನು ತಿಳಿಸುವುದು. ಈ ಸಂದರ್ಭದಲ್ಲಿ ಒಳಹೊಕ್ಕು ತಿಳಿದು ಅರಸನ ಮನಸ್ಸಿನಲ್ಲಿ ಸಂಭವಿಸಿದ ಭಯವನ್ನು ನಿವಾರಿಸಬೇಕು. ಅದಕ್ಕೆ ಕರಟಕ ಹೀಗೆಂದಿತು : ೭೧. ಕಾಮಾಸಕ್ತನೂ ಅನ್ಯಕಾರ್ಯಪರನೂ ನಿದ್ರಾಳುವೂ ಕೋಪ ಭಯಂಕರನೂ ವಾದ್ಯ ನೃತ್ಯ ಗೀತ ಮಧುರಾಲಾಪಗಳಲ್ಲಿ ಇಷ್ಟಗೋಷ್ಠಿಮನೋಹರನೂ ಕೋಳಿ, ಮಲ್ಲ, ಕುರಿ, ಕೋಣ, ಆನೆಗಳ ದ್ವಂದ್ವಯುದ್ಧದಲ್ಲಿ ತತ್ಪರನಾದವನೂ ಆದ ರಾಜನನ್ನು ಸೇವಕನಾದವನು ಏನಾದರೂ ಕೇಳಿಕೊಳ್ಳಬಾರದು. ೭೨. ಶತ್ರುರಾಜರ ಉತ್ಸವವನ್ನು ಕೇಳಿದಾಗಲೂ ಚೆಂಡಾಡುತ್ತಿರುವಾಗಲೂ ಆನೆಯನ್ನು ಏರುತ್ತಿರುವಾಗಲೂ ಮಂತ್ರಾಲೋಚನೆಯಲ್ಲಿ ಕುಳಿತುಕೊಳ್ಳುವಾಗಲೂ ಭೃತ್ಯನಾದವನು ಏನಾದರೂ

ಭೀತನನಲಸಿದನಂ ಕಾ-
ರ್ಯಾತುರನಂ ಪಸಿದನಂ ತೃಷಾಪೀಡಿತನಂ
ದ್ಯೂತಮೃಗವ್ಯಸನ ಜನೋ-
ಪೇತನನಱಿದಱಿದು ಬಿಣ್ನವಿಪ್ಪಂ ಗಾಂಪಂ ೮೩

ವ॥ ಇಂತೀ ಸೇವಾಧರ್ಮಮಂ ನಾವಱಿದುಮಱಿಯದರಂತೆ ಪೊಕ್ಕು ನುಡಿವುದು ತಕ್ಕುದಲ್ಲೆನೆ, ದವನಕನಿಂತೆಂದಂ : ನೀನೆಂದಂತೆ ನೀತಿವಿದನಪ್ಪರಸನನೇ ತೆಱದಿಂ ಸೇವಿಸುವುದೇ ನೀತಿಯುಪ್ಪುದು; ಅವಿನೀತನುಂ, ಅಪ್ರತಿಷ್ಠನುಂ, ಸ್ವಪರಾಂತಸ್ಥವಿದನುಮಲ್ಲದರಸನನಱಿದಿಂ ಬೞಿಕ್ಕೆ ಸಮೀಪಕ್ಕೆ ಪೋಗಿ ದುರಭಿಮಾನದಿಂ ನುಡಿವುದು ತಕ್ಕುದಲ್ಲಂ ಅದೆಂತೆನೆ :

ಶ್ಲೋ॥ ಆಸನ್ನಮೇವ ನೃಪತಿರ್ಭಜತೇ ಮನುಷ್ಯಂ ವಿದ್ಯಾವಿಹೀನಮಕುಲೀನಮಪಂಡಿತಂ ವಾ
ಪ್ರಾಯೇಣ ಭೂಮಿಪತಯಃ ಪ್ರಮದಾಲತಾಶ್ಚಯಃ ಪಾರ್ಶ್ವತೋ ವಸತಿ ತಂ
ಪರಿವೇಷ್ಟಯಂತಿ ॥೧೦॥

ಟೀ॥ ಅರಸುಗಳ್ ತಮ್ಮ ಪೊರೆಯೊಳಿರ್ದೋಲೈಸುವ ಮನುಜಂ ವಿದ್ಯೆಯಿಲ್ಲದವನಾದೊಡಂ ಅಕುಲೀನನಾದೊಡಂ ಅಯೋಗ್ಯನಾದೊಡಂ ಸ್ವೀಕರಿಸುವರ್ ಸ್ತ್ರೀಯರ್ಕಳ್ ಆವನೊರ್ವಂ ಕೆಲದೊಳಿರ್ದಪನವನನೇ ಪಿಡಿವರ್. ಲತೆಗಳ್ ಸಮೀಪದಲಾವ ಮರನಿರ್ದಪುದದನೇ ಪಿಡಿವುವು ಎಂಬ ಪುರಾತನನೀತಿಗಳೊಳವೆಂಬುದುಂ, ಕರಟಕನಿಂತೆಂದಂ :

ವಾಕ್ಯಂ ॥ ಬುದ್ಧೇ ಫಲಮನಾಗ್ರಹಃ

ಟೀ॥ ಬುದ್ಧಿಗೆ ಫಲವು ಆಗ್ರಹವಿಲ್ಲದಿರುವುದು ಎಂಬ ನೀತಿಯಿಂದೆನ್ನ ಆಗ್ರಹಮಂ ಮಾಣ್ದೆಂ; ನಿನ್ನ ದುರಾಗ್ರಹದಿಂದೇನಾನುಮೊಂದು ದುರ್ಣಯಮಾಗದಿರದು; ಅದುಮಂ ಕಾಣಲಕ್ಕುಂ, ನಿನಗಿದುವೇ ಕರ್ತವ್ಯವಪ್ಪೊಡೆ ಪೋಗೆಂಬುದುಂ, ದವನಕಂ ಬಂದು, ಮಹಾಪ್ರತೀಹಾರನಪ್ಪ

ವಿಜ್ಞಾಪಿಸಿಕೊಳ್ಳಲಾಗದು. ೮೩. ಭೀತನೂ ಅಲಸಿಯೂ ಕಾರ್ಯಾತುರನೂ ಹಸಿದವನೂ ತೃಷಾಪೀಡಿತನೂ ದ್ಯೂತ ಬೇಟೆಯ ಜನರಿಂದ ಕೂಡಿದವನೂ ಆದವನನ್ನು ವಿಜ್ಞಾಪಿಸಿಕೊಳ್ಳುವವನು ದಡ್ಡನು. ವ॥ ಹೀಗೆ ಈ ಸೇವಾಧರ್ಮವನ್ನು ನಾವು ತಿಳಿದೂ ತಿಳಿಯದವರಂತೆ ಹೊಕ್ಕು ನುಡಿಯುವುದು ತಕ್ಕುದಲ್ಲ ಎನ್ನಲು ದವನಕನು ಹೀಗೆಂದನು: ನೀನು ಹೇಳಿದಂತೆ ನೀತಿಜ್ಞನಾದ ಅರಸನನ್ನು ಹೇಗಾದರೂ ಸೇವಿಸುವುದೇ ನೀತಿಯೆನಿಸುವುದು. ಅವಿನೀತನೂ, ಅಪ್ರತಿಷ್ಠನೂ, ತನ್ನನ್ನೂ ಇತರರನ್ನು ತಿಳಿಯಲಾರದ ಅರಸನನ್ನು ತಿಳಿದ ಮೇಲೆ ಸಮೀಪಕ್ಕೆ ಹೋಗಿ ದುರಭಿಮಾನದಿಂದ ನುಡಿಯುವುದು ಯೋಗ್ಯವಲ್ಲ. ಅದು ಹೇಗೆಂದರೆ, ಶ್ಲೋ॥ ಅರಸರು ತಮ್ಮ ಹತ್ತಿರದಲ್ಲಿ ಇದ್ದು ಓಲೈಸುವ ಮನುಜನು ವಿದ್ಯೆಯಿಲ್ಲದವನಾದರೂ ಕುಲೀನನಲ್ಲದಿದ್ದರೂ, ಅಯೋಗ್ಯನಾದರೂ ಸ್ವೀಕರಿಸುವರು. ಸ್ತ್ರೀಯರು ಯಾವನಾದರೂ ಪಕ್ಕದಲ್ಲಿರುವವನನ್ನೇ ಹಿಡಿದುಕೊಳ್ಳುವರು. ಲತೆಗಳು ಸಮೀಪದಲ್ಲಿ ಯಾವ ಮರ ಇರುವುದೋ ಅದನ್ನೇ ಅಪ್ಪುವವು ಎಂಬ ಪುರಾತನನೀತಿಗಳಿವೆ ಎನ್ನಲು ಕರಟಕನು ಹೀಗೆಂದಿತು : ಶ್ಲೋ॥ ಆಗ್ರಹವಿಲ್ಲದಿರುವುದೇ ಬುದ್ಧಿಗೆ ಫಲ ಎಂಬ ನೀತಿಯಿಂದ ನನ್ನ ಆಗ್ರಹವನ್ನು ಬಿಟ್ಟೆನು. ನಿನ್ನ ಕೆಟ್ಟ ಹಟದಿಂದ ಏನಾದರೊಂದು ದುರ್ನೀತಿಯಾಗದೆ ಇರದು ; ಅದನ್ನೂ ಕಾಣಬಹುದು. ನಿನಗೆ ಇದೇ ಕರ್ತವ್ಯವಾದರೆ ಹೋಗು ಎಂದಿತು. ದವನಕನು ಬಂದು ಮಹಾಪ್ರತೀಹಾರನಾದ

ಸುಭದ್ರನೆಂಬುದೊಂದು ವನಮಹಿಷನ ಸಾರೆವಂದು, ಅರಸನವಸರಮಾವುದೆಂದೊಡೆ, ಅರಸನೇನುಂ ವಿರಸನಾಗಿರ್ದಪಂ ನಿಲ್ಲೆಂಬುದುಂ; ಕಟ್ಟಿದಿರೊಳ್ ನಿಂದನಂ ಪಿಂಗಳಕಂ ಕಂಡು, ಅರಸುಗಳ್ ತಮಗೆನಿತುಂ ಸಮಚಿತ್ತಮಿಲ್ಲದಿರ್ದೊಡಂ ಸಮ್ಮುಖಕ್ಕೆ ಬಂದ ಪ್ರಾಣಿಮಾತ್ರಕ್ಕೆ ಪರಾಙ್ಮುಖರಾಗಲಾಗದು, ದಾಕ್ಷಿಣ್ಯಂ ಬೇಟ್ಕುಮೆಂಬ ನೀತಿಯುಂಟು, ಈತನನ್ವಯಾಗತನುಮಾಪ್ತನುಂ ಕಾರ್ಯಸಹಾಯನುಮಾಗಿರ್ಪಂ; ಈಯವಸರದೊಳೀತನಂ ಬರಿಸಿ ಎನ್ನ ಮನೋಗತಕಾರ್ಯಮಂ ಪೇಟಲ್ವೇಟ್ಕುಮೆಂಬುದಂ ಬಗೆದು, ಬರವೇಟ್ಕೆಂಬುದುಂ, ವಿನೀತವೇಷಂ ಮೆಲ್ಲಮೆಲ್ಲನಾಸ್ಥಾನಮಂ ಪೊಕ್ಕು, ಮೃಗಾಧಿರಾಜನನೆಯ್ದೆವಂದು, ಸಾಷ್ಟಾಂಗಮೆಱಗಿ ಪೊಡೆವಟ್ಟೊಡೆ ಇತ್ತ ಬಾಯೆಂಬುದುಂ ಮಹಾಪ್ರಸಾದಮೆಂದು ಯಥೋಚಿತಪ್ರದೇಶದಳ್ ಕುಳ್ಳಿರ್ದ ದವನಕನ ಮೊಗಮಂ ಪಿಂಗಳಕನಾದರಂಬೆರಸು ನೀಡುಂ ಭಾವಿಸಿ ನೋಡಿ,

ಏಂ ಗಳ ದವನಕ ಪಲವು ದಿ-
ನಂಗಳ್ ಕಂಡಱಿಯವೆಮ್ಮ ಬಾರದುದುಂ ಕ-
ಜ್ಜಂಗಳನಱಿಪದುದುಂ ಸಚಿ-
ವಂಗಂ ಕೂರ್ಪಂಗಮೊಂದುಮಿಪ್ಪ ಗುಣದೊಳಗೇ ೮೪

ಎಂದಿನ ಮಾಟ್ಕೆ ಮನ್ನಣೆಯನೇಂ ಮಱೆದಿರ್ದೆನೊ ನಿನ್ನ ಪೇಟ್ದುದೊಂ-
ದಂದಮನೊಲ್ಲದನ್ನೆಗರ ಪೇಟ್ದುದುಗೆಯ್ದೆನೊ ಮೂಲವೃತ್ತಿಯಿಂ-
ದೊಂದಿ ನಿರಂತರಂ ನಡೆವ ಸಾಮ್ಯಮನಾಂ ಪೆಱರ್ಗಿತ್ತೆನೋ ಮನಂ
ನೊಂದವೊಲೆನ್ನ ಕಾರ್ಯಮನುಪೇಕ್ಷಿಸಿ ಮಾಣ್ದುದಿದಾವ ಕಾರಣಂ ೮೫

ಸುಭದ್ರನೆಂಬ ಕಾಡುಕೋಣನ ಹತ್ತಿರ ಬಂದು ಅರಸನ ಸಂದರ್ಭವೇನು ಎನ್ನಲು ಅರಸನು ಏಕೋ ವಿರಸನಾಗಿದ್ದಾನೆ, ನಿಲ್ಲು ಎಂದಿತು. ಎದುರು ನಿಂದವನನ್ನು ಪಿಂಗಳಕನು ಕಂಡು ಅರಸರು ತಮಗೆ ಎಷ್ಟು ಸಮಾಧಾನವಿಲ್ಲದಿದ್ದರೂ ಎದುರಿಗೆ ಬಂದ ಪ್ರಾಣಿ ಮಾತ್ರಕ್ಕೆ ಪರಾಙ್ಮುಖರಾಗಬಾರದು ; ದಾಕ್ಷಿಣ್ಯ ಬೇಕು ಎಂಬ ನೀತಿಯುಂಟು ; ಈತನು ಅನ್ವಯಾಗತನೂ, ಆಪ್ತನೂ, ಕಾರ್ಯಸಹಾಯನೂ ಆಗಿರುವನು. ಈ ಸಂದರ್ಭದಲ್ಲಿ ಈತನನ್ನು ಬರಿಸಿಕೊಂಡು ನನ್ನ ಮನೋಗತ ಕಾರ್ಯವನ್ನು ಹೇಳಬೇಕು ಎಂದು ಯೋಚಿಸಿ, ಬರಹೇಳು ಎನ್ನಲು, ವಿನೀತ ವೇಷನು ಮೆಲ್ಲಮೆಲ್ಲನೆ ಆಸ್ಥಾನವನ್ನು ಪ್ರವೇಶಿಸಿ ಮೃಗಾಧಿರಾಜನನ್ನು ಸಮೀಪಿಸಿ ಸಾಷ್ಟಾಂಗ ನಮಸ್ಕರಿಸಲು ಇತ್ತ ಬಾ ಎನ್ನಲು ಮಹಾಪ್ರಸಾದ ಎಂದು ಯಥೋಚಿತಪ್ರದೇಶದಲ್ಲಿ ಕುಳಿತುಕೊಂಡ ದವನಕನ ಮುಖವನ್ನು ಪಿಂಗಳಕನು ಆದರದಿಂದ ದೀರ್ಘಾಲೋಚಿಸಿ ನೋಡಿ ಹೀಗೆಂದಿತು: ೮೪. ಏನಯ್ಯಾ ದವನಕ! ಅನೇಕ ದಿನಗಳಿಂದ ಕಾಣಲಿಕ್ಕಿಲ್ಲವಲ್ಲ, ನೀನು ಬಾರದುದೂ ಕಾರ್ಯಗಳನ್ನು ತಿಳಿಸದಿರುವುದೂ ಸಚಿವರಿಗೂ ಮಿತ್ರರಿಗೂ ಭೂಷಣವೇ ? ೮೫. ನಿನಗೆ ಯಾವಾಗಲೂ ಸಲ್ಲಬೇಕಾದ ಮನ್ನಣೆಯಲ್ಲಿ ಏನಾದರೂ ಕೊರತೆಯಾಯಿತೇ ? ನೀನು ಹೇಳಿದುದನ್ನು ಮಾಡದೆ ಬೇರೆಯವರೆಂದಂತೆ ನಡೆದುಕೊಂಡೆನೇ ? ನಿನಗೆ ಕೊಡಬೇಕಾದ ಕಾರ್ಯವನ್ನು ಬೇರೆಯುವರಿಗೆ ಒಪ್ಪಿಸಿದೆನೇ " ಮನಸ್ಸು ನೊಂದವರಂತೆ ನಿನ್ನ ಕಾರ್ಯವನ್ನು

ವ॥ ಎಂಬುದುಂ, ದವನಕಂ, ಈತಂ ಕಾರ್ಯಾತುರನಪ್ಪುದು ತಪ್ಪದು ಎನ್ನಂ ಕರಂ ಮನ್ನಿಸಿ ಮಾತಾಡಿದಪಂ; ಎನಗಂ ಮನೋರಥ ಸಿದ್ಧಿಯಾಗೆ ಬಗೆದೋರ್ಪುದು; ಆದಜೆಂದೀತನ ಬುದ್ಧಿಯಂ ನಿಶ್ಚಯಮಾಗಱಿದು ಬಳಿಕವರ್ಕೆ ತಕ್ಕುದಂ ನೆಗಳ್ವೆನೆಂಬುದಂ ಮನದೊಳ್ ಬಗೆದು ಪಿಂಗಳಕಂಗಿಂತೆಂದಂ; ದೇವರ ಶ್ರೀಪಾದಸೇವಕರೊಳ್ ನಾನಾವ ದೂರೆ? ಅರಸುಗೆಯ್ವಾತಂಗೆಂತಪ್ಪನುಂ ಬಾಟ್ಕೆಯಾಗದನಿಲ್ಲಂ ಅದೆಂತೆನೆ :

ಶ್ಲೋ॥ ದಂತಸ್ಯ ನಿರ್ಘರ್ಷಣ ಕೇನ ರಾಜನ್ ಕರ್ಣಸ್ಯ ಕಂಡೂಯಕೇನ ವಾಪಿ
ತೃಣೇನ ಕಾರ್ಯಂ ಭವತೀಶ್ವರಾಣಾಂ ಕಿಮಂಗವಾಕ್ಪಾಣಿಮತಾ ನರೇಣ॥೧೧॥

ಟೀ॥ ಪಲ್ಲಂ ಸುಲಿವೊಡಂ ಕಿವಿ ತೀಂಟೊಡೆ ತುಱಿಸುವೊಡಂ ಪುಲ್ಲಿಂದೆನಿತುಂ ಪ್ರಯೋಜನಮುಂಟು. ಕೈಕಾಲ್ ನಡೆನುಡಿಯುಳ್ಳ ಮನುಷ್ಯನಿಂದೆಂತುಂ ಕಾರ್ಯಮುಂಟು ಎಂಬ ರಾಜನೀತಿಯನಱಿವಿರಪ್ಪುದಱೆಂ ಎನ್ನನಾದೊಡಂ ಮನ್ನಿಸವೇೞ್ಪುದು. 'ವೃಂದಂ ನರೇಂದ್ರಾಯತೇ' ಎಂಬ ನೀತಿಯಂತೆ ಪೞೆಯರ ಮಕ್ಕಳನೆಂತುಂ ಪೊರೆಯಲೆವೇೞ್ಕುಂ. ಏತದರ್ಥಮಾಗಿ ದೇವರ್ ದಯೆವೆರಸು ಬೆಸಸಿದರ್. ಎಮ್ಮಂತಪ್ಪ ಪ್ರಾಣಿಮಾತ್ರಗಳಿಲ್ಲದೊಡೆ ಅಪ್ರತಿಮಪರಾಕ್ರಮನಪ್ಪ ನಿಮಗೆ ತೀರದ ಕಜ್ಜಮಾವುದಾನುಮಿಲ್ಲ. ಇನಿತುದಿವಸಮೆಯ್ದೆ ಬಾರಮದೆಲ್ಲಂ ನೀಮೆನ್ನನೆನ್ನವನೆನ್ನದ ಕಾರಣದಿಂ, ದೂರದೊಳಿರ್ದು ನಿಮ್ಮಭ್ಯುದಯದೊಳ್ ಸುಖಂಬಾೞ್ವನ್ವಯಾಗತನಪ್ಪುದಱೆಂ ನಿಮ್ಮ ಸಿರಿಯಂ ಕಣ್ದೀವಿ ನೋಡಿಯುಂ ನಿಮಗಪ್ಪ ಯೋಗಕ್ಷೇಮಂಗಳನಾರೈದುಂ ಸುಖದೊಳಿರ್ಪೆಂ. ಇಂದು ನಿಮ್ಮ ಮನಸ್ಸಿನೊಳಿನಿಸಾನುಂ ಶಂಕೆವೆರಸಿದ ಚಿಂತೆಯಂ ಕಂಡು ಇದಱ ಕಾರಣಮಂ ನಿಮ್ಮಡಿಯಂ

ಉಪೇಕ್ಷಿಸಿರಲು ಕಾರಣವೇನು ? ಎನ್ನಲು ವ॥ ದವನಕನು ಈತ ಕಾರ್ಯಾತುರನಾಗಿರುವುದು ಸುಳ್ಳಲ್ಲ. ನನ್ನನ್ನು ಚೆನ್ನಾಗಿ ಮನ್ನಿಸಿ ಮಾತಾಡಿಸುತ್ತಿದ್ದಾನೆ. ನನಗೂ ಮನೋರಥ ಸಿದ್ಧಿಯಾಗುವಂತೆ ತೋರುವುದು. ಆದರಿಂದ ಇವನ ಬುದ್ಧಿಯನ್ನು ನಿಶ್ಚಯಪಡಿಸಿಕೊಂಡು ಬಳಿಕ ಅದಕ್ಕೆ ತಕ್ಕುದಾದುದನ್ನು ಮಾಡುವೆ ಎಂದು ಆಲೋಚಿಸಿ ಪಿಂಗಳಕನಿಗೆ ಹೀಗೆಂದಿತು : ದೇವರ ಶ್ರೀಪಾದಸೇವಕರಲ್ಲಿ ನಾನು ಯಾವ ಮಹಾ ? ರಾಜ್ಯವಾಳುವವನಿಗೆ ಎಂಥವನೂ ಪ್ರಯೋಜನವಾಗದವನಿಲ್ಲ. ಹೇಗೆಂದರೆ, ಶ್ಲೋ॥ ಹಲ್ಲನ್ನು ಉಜ್ಜಲೂ, ಕಿವಿಯನ್ನು ತುರಿಸಲೂ ಹುಲ್ಲಿಂದಲೂ ಪ್ರಯೋಜನವುಂಟು. ಕೈಕಾಲು ನಡೆನುಡಿಯಳ್ಳ ಮನುಷ್ಯನಿಂದ ಆಗದ ಕಾರ್ಯವುಂಟೇ ಎಂಬ ರಾಜನೀತಿಯನ್ನು ಅರಿತವರಾದುದರಿಂದ ನನ್ನನ್ನಾದರೂ ಮನ್ನಿಸಬೇಕು 'ವೃಂದಂ ನರೇಂದ್ರಾಯತೇ' - ಗುಂಪು ರಾಜನನ್ನಾಗಿಸುತ್ತದೆ - ಎಂಬ ನೀತಿಯಂತೆ ವೃದ್ಧ ಮಂತ್ರಿಗಳ ಮಕ್ಕಳನ್ನು ಹೇಗಿದ್ದರೂ ಕಾಪಾಡಲೇ ಬೇಕು. ನಮ್ಮಂತಹ ಪ್ರಾಣಿಮಾತ್ರಗಳಿಲ್ಲದಿದ್ದರೆ ಅಪ್ರತಿಮ ಪರಾಕ್ರಮಿಗಳಾದ ನಿಮಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ. ಇಷ್ಟುದಿನ ಬಾರದಿರುವುದೆಲ್ಲ ನೀವು ನನ್ನನ್ನು ನನ್ನವನು ಎಂದು ಹೇಳದುದರಿಂದ ಅಷ್ಟೇ, ನಾನು ದೂರದಲ್ಲಿದ್ದು ನಿಮ್ಮ ದಯದಿಂದ ಅನ್ವಯಾಗತನಾಗಿರುವುದರಿಂದ ನಿಮ್ಮ ಸಂಪತ್ತನ್ನು ಕಣ್ತುಂಬ ನೋಡಿ, ನಿಮ್ಮ ಯೋಗಕ್ಷೇಮವನ್ನು ವಿಚಾರಿಸುತ್ತ ಸುಖದಿಂದಿದ್ದೆ. ಇಂದು ನಿಮ್ಮ ಮನಸ್ಸಿನಲ್ಲಿ ಸ್ವಲ್ಪ ಸಂದೇಹಗ್ರಸ್ತವಾದ ಚಿಂತೆಯನ್ನು ಕಂಡು ಇದರ ಕಾರಣವನ್ನು ನಿಮ್ಮಿಂದ ಕೇಳಿ ತಿಳಿದುಕೊಂಡು ಅನಂತರ ಅದಕ್ಕೆ ತಕ್ಕ

ಬೆಸಗೊಂಡು ತಿಳಿದು ಬಟೆಕ್ಕಿದರ್ಕೆ ತಕ್ಕ ಬುದ್ಧಿ ಪ್ರತೀಕಾರಮಂ ಮಾಡಲುಂ ನಿಮ್ಮ ಸಂತೋಷದೊಳ್ ಕೂಡಲುಮೆಂದು ಬಂದೆಂ. ಎನಗಿನಿಸಾನುಂ ಏಕಾಂತಮಂ ದೇವರ್ ದಯೆಗೆಯ್ವುದೆಂದೆನಲ್: ಮೃಗಾಧಿರಾಜಂ ಶ್ವಾಪದಯೂಥಮಂ ಪೋಗಲ್‌ವೇಳ್ವುದುಂ, ದವನಕನಿಂತೆಂದಂ :

ನೀರನುಣಲ್ಕೆ ಪೋಗಿ ಯಮುನಾನದಿಗೊರ್ಮೆಯೆ ಬೆರ್ಚಿದಂತೆ ನಿ-
ಷ್ಕಾರಣಮೇಕೆ ನೀಂ ಮಗುಟ್ದು ನಿನ್ನೊಳೆ ಚಿಂತಿಸುತಿರ್ದೆ ಪೇಟೆದಂ
ಪಾರದೆ ಬೇಱದೊಂದುಮನನೂನ ಮದಾವಿಲ ಕುಂಭಿ ಕುಂಭ ನಿ-
ರ್ದಾರಣ ದಾರುಣಾಯತ ನಖಪ್ರಕರೋದ್ಗತ ದಂಷ್ಟ್ರಭೂಷಣಾ ೮೫

ವ॥ ಎಂಬುದುಂ, ಪಿಂಗಳಕನತಿವಿಸ್ಮಯಂಬಟ್ಟು, ಧಾತುರಕ್ತಾಶೋಕ ಕಿಸಲಯವಿಭಾಸಿಭಾಸುರ ಸಟಾಕಲಾಪಮಲ್ಲಾಡೆ ತಲೆಯಂ ತೂಗಿ ಪರೇಂಗಿತಜ್ಞಾನಮೀತಂಗುಳ್ಳುದಾರ್ಗಮಿಲ್ಲ, ಈಗಳೆನ್ನ ಮನದೊಳೊದವಿದ ಮಹಾಭಯಮಪ್ಪ ಕಜ್ಜಕ್ಕೆ ಪ್ರತೀಕಾರಮನೇಕಾಕಿಯಾಗಿ ಚಿಂತಿಸಲ್ಬಾರದು. ಎಂತುಂ 'ಸಹಾಯಾನ್ಮಂತ್ರನಿಶ್ಚಯಃ' ಎಂಬ ವಾಕ್ಯಾರ್ಥಮುಂಟು. ಈತನುಂ ಸಹಾಯಗುಣಸಂಪನ್ನ ಭೃತ್ಯಗುಣಸಂಪೂರ್ಣನುಮಪ್ಪುದಱೆಂ.

ಶ್ಲೋ॥ ಸ್ವಾಮಿನಿ ಗುಣಾಂತರಜ್ಞೇ ಗುಣವತಿ ಭೃತ್ಯೇಽನುಕೂಲಿನಿ ಕಳತ್ರೇ
ಮಿತ್ರೇಚಾವ್ಯಭಿಚಾರಿಣಿ ನಿವೇದ್ಯ ದುಃಖಂ ಸುಖೀ ಭವತಿ ॥೧೨॥

ಟೀ॥ ಗುಣಂಗಳಱಿವ ಒಡೆಯನಲ್ಲಿ, ಗುಣವಂತನಪ್ಪ ಭೃತ್ಯನಲ್ಲಿ, ಅನುಕೂಲೆಯಪ್ಪ ಸ್ತ್ರೀಯಲ್ಲಿ ತಪ್ಪದಿಹ ಮಿತ್ರನಲ್ಲಿ ತನ್ನ ದುಃಖವನಱಿಪಿ ಸುಖಿಯಾಗಿಹುದು ಎಂಬುದು ಈತಂಗಱಿಪದ ಕಜ್ಜಮುಂ ವೈದ್ಯಂಗಱಿಪದ ಕುತ್ತಮುಂ ತೀರಲಱಿಯದೆಂದು ನಿಷ್ಕಪಟಚಿತ್ತಂ ಮೃಗಾಧಿರಾಜಂ ಕಪಟಪಟುವಪ್ಪ ದವನಕಂಗಿಂತೆಂದಂ :

ಬುದ್ಧಿಪ್ರತಿಕಾರವನ್ನು ಮಾಡಲೂ, ನಿಮ್ಮ ಸಂತೋಷದಲ್ಲಿ ಕೂಡಲೂ ಮನಸ್ಸಾಗಿ ಬಂದೆ, ನನಗೆ ಸ್ವಲ್ಪ ಏಕಾಂತವನ್ನು ದೇವರು ದಯಪಾಲಿಸಬೇಕು, ಎನ್ನಲು ಮೃಗಾಧಿರಾಜನು ಮೃಗಸಮೂಹವನ್ನು ಅಲ್ಲಿಂದ ಹೋಗಹೇಳಲು ದವನಕನು ಹೀಗೆಂದನು : ೮೫. ಅನೂನ ಮದಾವಿಲಕುಂಭಿಕುಂಭನಿರ್ದಾರಣದಾರುಣಾಯತನಖಪ್ರಕರೋದ್ಗತದಂಷ್ಟ್ರ ಭೂಷಣಾ! ನೀರು ಕುಡಿಯಬೇಕೆಂದು ಯಮುನಾನದಿಗೆ ಹೋಗಿ ಒಮ್ಮೆಯೇ ಹೆದರಿದವನಂತೆ ನಿಷ್ಕಾರಣವಾಗಿ ನೀನೇಕೆ ಚಿಂತಿಸುತ್ತಿರುವೆ, ಎನ್ನಲು ವ॥ ಪಿಂಗಳಕನು ಅತ್ಯಂತ ವಿಸ್ಮಿತನಾಗಿ ಧಾತುರಕ್ತ ಶೋಕ ಕಿಸಲಯ ವಿಭಾಸಿ ಭಾಸುರ ಸಟಾಕಲಾಪವು ಅಲ್ಲಾಡುವಂತೆ ತಲೆಯನ್ನು ತೂಗಿ, ಇವನಿಗಿರುವ ಪರೇಂಗಿತಜ್ಞಾನ ಯಾರಿಗೂ ಇಲ್ಲ ಎಂದು ಮೆಚ್ಚಿಕೊಂಡನು. ಶ್ಲೋ॥ ಗುಣಗಳನ್ನು ತಿಳಿಯಬಲ್ಲ ಒಡೆಯನಲ್ಲಿಯೂ, ಗುಣವಂತನಾದ ಸೇವಕನಲ್ಲಿಯೂ, ಅನುಕೂಲೆಯಾದ ಹೆಂಡತಿಯಲ್ಲಿಯೂ, ತಪ್ಪದ ಮಿತ್ರನಲ್ಲಿಯೂ ತನ್ನ ದುಃಖವನ್ನು ತಿಳಿಸಿ ಸುಖಿಯಾಗಿರಬೇಕು. ಇವನಿಗೆ ತಿಳಿಸದ ಕಾರ್ಯವು ವೈದ್ಯನಿಗೆ ಹೇಳದ ರೋಗದಂತಾಗುವುದು ಎಂದು ನಿಷ್ಕಪಟಚಿತ್ತನಾದ

ನೋಡೆ ನವಜಲದ ರವದೊಳ್
ಕೂಡಿದುದಂತಪ್ಪುದೊಂದು ಶಬ್ದಂ ಕಿವಿಯೊಳ್-
ತೀಡೆ ಕರಮುಗಿದು ಮನಮ-
ಲ್ಲಾಡೆ ಭಯಂಗೊಂಡು ಪೋಗಲೊಲ್ಲದೆ ಮಗುಟ್ದೆಂ ೮೬

ಆವುದದೆಂದೊಡೆ ರೌದ್ರಾ-
ರಾವಂ ತಾನೊರ್ಮೆಗೊರ್ಮೆಗೀ ಬನವನಿತುಂ
ತೀವುವಿನಂ ಪೊಣ್ಮಿದಪುದು
ಭಾವಿಸಿ ನೀಂ ಕೇಳ ಕೇಳಲಪ್ಪುದದಿನ್ನುಂ ೮೭

ಎನೆ, ದವನಕನೇಕಾಗ್ರಮನನಾಗಿ ಕಿಜಿದು ಬೇಗಮದನಾಲಿಸಿ ಕೇಳ್ದನಗಮಿನಿಸಾನುಂ ಭಯಂಕರರವಂ ಕೇಳಲಾದಪ್ಪುದೆಂಬುದುಂ, ಪಿಂಗಳಕನಿಂತೆಂದಂ: ಈ ಬನಮಪೂರ್ವಸತ್ವಾವಿಷ್ಟಮಾದುದಿನ್ನಿಲ್ಲಿ ನಿಲ್ಲದೆ ಪೋಪುದೇ ಕಜ್ಜಮೆಂದಳ್ಕಿ ನುಡಿಯೆ. ದವನಕನಿಂತೆಂದಂ :

ಭೇರಿಮೃದಂಗ ಘಂಟಾ-
ನೀರದ ಸಂಖಾದಿಜನಿತ ಶಬ್ದಮನೇಕಾ-
ಕಾರಂ ಕೊಡುಗುಮೆಯ್ದೆ ವಿ-
ಚಾರಿಸಿದನಂತೆ ಕೇಳ್ದು ನೀಂ ಬೆರ್ಚುವುದೇ ೮೮

ವ|| ಅದುಕಾರಣದಿಂ ನೀವಿದೇನೆಂದಾರಯ್ಯದೆಯುಂ ಅಜೆಯದೆಯುಂ ಮುನ್ನಮ ಪಶುವಿನಂತೆ ದೆಸೆದೆಸೆಗೆ ಬೆರ್ಚುವುದುಂ ಪಿತೃಪರ್ಯಾಗತಮಪ್ಪ ಬನಮಂ ಪತ್ತುವಿಡುವುದುಂ ತಕ್ಕುದಲ್ತೆನೆ: ಮೃಗಾಧಿರಾಜನಿಂತೆಂದಂ : ಈ ಮಹಾಗಂಭೀರ ಘೋರ ನಿರ್ಘೋಷಮಂ ನೀಂ ಶಬ್ದ ಮಾತ್ರಮೆಂದೇಕೆ ನಿರಾಕರಿಸುವೆ? ವಿಚಾರಿಸುವಾಗಳಾ ಮಹಾಶಬ್ದಕ್ಕೆ ತಕ್ಕಂತುಟೇ ದೇಹಮಕ್ಕುಂ. ಆ ದೇಹಕ್ಕೆ ತಕ್ಕ

ಮೃಗಾಧಿರಾಜನು ಕಪಟಪಟುವಾದ ದವನಕನಿಗೆ ಹೀಗೆಂದನು : ೮೬. ಗುಡುಗಿನ ಆರ್ಭಟದಂತೆ ಕೇಳಿಬಂದ ಶಬ್ದವೊಂದು ಕಿವಿಯಲ್ಲಿ ಬಡಿಯಲು ಬೆದರಿ ಮುಂದರಿಯಲಾರದೆ ಹಿಂದಿರುಗಿದೆ, ೮೭. ಆ ರೌದ್ರ ಶಬ್ದ ಆಗೊಮ್ಮೆ ಈಗೊಮ್ಮೆ ಈ ವನವನ್ನೆಲ್ಲ ತುಂಬುವಂತೆ ಕೇಳಿಬರುವುದು. ಅದನ್ನು ನೀನೂ ಇನ್ನೂ ಕೇಳಬಹುದು. ವ|| ದವನಕನು ಏಕಾಗ್ರಮನಸ್ಸಿನಿಂದ ಸ್ವಲ್ಪ ಹೊತ್ತಿನಲ್ಲಿಯೇ ಅದನ್ನು ಆಲಿಸಿ ಕೇಳಿ, 'ನನಗೂ ಭಯಂಕರವಾದ ಶಬ್ದ ಕೇಳಿಬರುವುದು' ಎಂದನು. ಅದಕ್ಕೆ ಪಿಂಗಳಕನು, 'ಈ ವನವು ಅಪೂರ್ವವಾದ ಪ್ರಾಣಿಯನ್ನೊಳಗೊಂಡಿದೆ. ಇನ್ನು ಇಲ್ಲಿ ನಿಲ್ಲದೆ ಬೇರೆಕಡೆಗೆ ಹೋಗುವುದೇ ಲೇಸು' ಎನ್ನಲು ದವನಕನು ಹೀಗೆಂದನು : ೮೮. ಭೇರಿ, ಮೃದಂಗ, ಘಂಟೆ, ಗುಡುಗು, ಶಂಖ - ಇವುಗಳ ಸ್ವರಗಳು ಈ ರೀತಿಯಲ್ಲಿ ಕೇಳಿಸುವುದುಂಟು. ಇದನ್ನು ವಿಚಾರಿಸದೆ ನೀನು ಹೆದರುವುದೇ ? ವ|| ಆದರಿಂದ ನೀನು ಇದು ಏನು ಎಂದು ವಿಚಾರಿಸುವ ಮೊದಲೇ ಪಶುವಿನಂತೆ ದಿಕ್ಕುದಿಕ್ಕಿಗೆ ಹೆದರುವುದೂ ವಂಶಾನುಗತವಾಗಿ ಬಂದ ವನವನ್ನು ಬಿಡುವುದೂ ತಕ್ಕುದಲ್ಲ ಎನ್ನಲು ಪಿಂಗಳಕನು ಹೀಗೆಂದನು : ಈ ಮಹಾಗಂಭೀರ ಘೋರನಿರ್ಘೋಷವನ್ನು ನೀನು ಶಬ್ದ ಮಾತ್ರವೆಂದು ಏಕೆ ನಿರಾಕರಿಸುವೆ ? ವಿಚಾರಿಸಿ ನೋಡಿದರೆ ಆ ಮಹಾಶಬ್ದಕ್ಕೆ ತಕ್ಕುದಾದ ದೇಹವಿದ್ದೀತು; ಆ ದೇಹಕ್ಕೆ ತಕ್ಕ ಸಾಮರ್ಥ್ಯವಿದ್ದೀತು; ಆ

ಸತ್ತ್ವಂ ಸಮನಿಸುಗುಂ, ಆ ಸತ್ತ್ವಕ್ಕೆ ತಕ್ಕ ದರ್ಪಂ ದೊರೆಕೊಳ್ಗುಂ, ಆ ದರ್ಪಕ್ಕೆ ತಕ್ಕ ಕಲಿತನಮಾಗದಿರದು, ಅಂತಪ್ಪ ನಿಚ್ಚಟಿಗಲಿ ಕಲಹಮನೇ ಬಯಸಿ ತನಗೆ ಅಧಿಕನನಱಸುವಂ. ಅದಱಿನಿಂತಪ್ಪತುಲಬಲ ಪರಾಕ್ರಮ ವಿಕ್ರಮದೊಳೆನಗಧಿಕನುಂ ಸಮಾನಬಲನುಮಲ್ಲದೆ ಹೀನನಾಗಲಱಿಯನಪ್ಪುದನಱಿದು, ನಿನ್ನ ಪೇಳ್ದ ಕಜ್ಜದ ಬಲಮಂ ಸಾಧಾರಣಂ ಮಾಡಿನ್ನ ಬಲಮಂ ನಚ್ಚಿ ನಿಂದು, ವಿಗ್ರಹಮನೊಡರ್ಚಿದೆನಪ್ಪೊಡೆ, ಇರ್ವರುಂ ಸಮಾನಬಲರಾದಂದು 'ಮಹಿಷಾಶ್ವಮಾಮೇಳನೇ ಸಹ ವಿನಶ್ಯತಿ' ಎಂಬುದಕ್ಕುಂ, ಅಧಿಕಬಲನಾದೊಡೆ 'ಹಸ್ತಿನಾ ಪದಾತಿಯುದ್ಧಮಿವ ಬಲವದ್ವಿಗ್ರಹಃ' ಎಂಬ ನೀತಿಯಂತಕ್ಕುಂ ಎಂದುಮದಱಿನಿಂತಪ್ಪುದನಱಿದು ಪೂರ್ವಪುರುಷರಿಂದಾದ ಮಹಾಟವಿಯಂ ಬಿಡಲಾಗದೆಂದು ನೀತಿವಿರುದ್ಧಂಗಳಪ್ಪ ಮಾತುಗಳಂ ನುಡಿದೆಯಾದೊಡೆಯಿಂತೀಯವಸರಕ್ಕೆ ತಕ್ಕುದೊಂದು ಕಥೆಯುಂಟೆಂಬುದಂ, ದವನಕನದೆಂತೆನೆ, ಪಿಂಗಳಕಂ ಪೇಳ್ಗುಂ :

೪. ನರಿಯುಂ ಬಿಲನುಂ

ಕಪಟಪ್ರಪಂಚ ಪರಿಣತ-
ನುಪಾಯನಿಪುಣಾಭಿಧಾನ ಜಂಬುಕನುದ್ಯ-
ದ್ವಿಪುಳತರಮಪ್ಪ ಗಿರಿವರ-
ದುಪಕಂಠದ ಬಿಲದೊಳಿರ್ಪುದತಿಮುದದಿಂದಂ ೪೯

ವ॥ ಆ ಜಂಬುಕನೊಂದು ದಿವಸಮಾಹಾರವಿಹಾರಕ್ಕೆ ಪೋಪುದುಮದಱ ಬಿಲಕ್ಕೊಂದು ಪುಲಿ ಬಂದು ಪೊಕ್ಕಿರ್ದುದನ್ನೆಗಂ ಕಿಱಿದಾನುಂ ಬೇಗದೊಳಾ ನರಿ ಬಂದು ಬಾಗಿಲೊಳ್ ನಿಂದು ಪುಲಿಯ ಪಜ್ಜೆಯುಮಂ ಸೊಪ್ಪಾದ ಬಿಲನುಮಂ ಕಂಡು, ಇದೆತ್ತಾನುಮೊಂದಪಾಯಮಾಗದೆ

ಸಾಮರ್ಥ್ಯಕ್ಕೆ ತಕ್ಕ ದರ್ಪವೂ ಸೇರಿದ್ದೀತು; ದರ್ಪಕ್ಕೆ ತಕ್ಕ ಪರಾಕ್ರಮವೂ ಕೂದಿದ್ದಿರಬೇಕು. ಅಂತಹ ನಿಶ್ಚಲ ಪರಾಕ್ರಮಿಯೂ ಕಲಹವನ್ನೇ ಬಯಸಿ ತನಗಿಂತ ಅಧಿಕನಾದವನನ್ನು ಅರಸುವನು. ಆದರಿಂದ ಅತುಲಬಲ ಪರಾಕ್ರಮದಲ್ಲಿ ನನಗೆ ಅಧಿಕನೂ ಸಮಾನಬಲನೂ ಆಗಿರುವನೇ ಹೊರತು ಹೀನಬಲನಲ್ಲ. ಅವನೊಡನೆ ನಾನು ಯುದ್ಧ ಮಾಡಿದೆನಾದರೆ ಇಬ್ಬರೂ ಸಮಾನಬಲರಾಗಿದ್ದರೆ 'ಮಹಿಷಾಶ್ವ ಮಾಮೇಳನೇ ಸಹ ವಿನಶ್ಯತಿ' - ಮಹಿಷಾಶ್ವಗಳಿಗೆ ಯುದ್ಧವಾದರೆ ಎರಡೂ ಒಮ್ಮೆಲೇ ಸಾಯುವುವು - ಎಂಬಂತೆ ಆಗುವುದು. ಅಧಿಕಬಲನಾದರೆ, 'ಹಸ್ತಿನಾ ಪದಾತಿಯುದ್ಧಮಿವ ಬಲವದ್ವಿಗ್ರಹಃ' - ಆನೆಯೊಡನೆ ಕಾಲಾಳಿನ ಕಾಳಗದಂತೆ - ಎಂಬ ನೀತಿಯಂತಾಗುವುದು. ಆದರಿಂದ ಪೂರ್ವಪುರುಷರಿಂದ ಮಹಾಟವಿಯನ್ನು ಬಿಡಬಾರದು ನೀತಿವಿರುದ್ಧವಾದ ಮಾತುಗಳನ್ನು ನುಡಿವೆಯಾದರೆ ಅದಕ್ಕೆ ತಕ್ಕ ಒಂದು ಕಥೆಯುಂಟು. ದವನಕನು ಅದೇನೆಂದು ಕೇಳಲು ಪಿಂಗಳಕನು ಹೇಳತೊಡಗುವನು : ೪೯. ಕಪಟಪ್ರಪಂಚಪರಿಣತನಾದ ಉಪಾಯನಿಪುಣ ಎಂಬ ಅಭಿದಾನದ ಒಂದು ಜಂಬುಕನು ಒಂದು ಪರ್ವತದ ತಪ್ಪಲಿನ ಬಿಲದಲ್ಲಿ ಅತ್ಯಂತ ಸಂತೋಷದಿಂದ ಮನೆ ಮಾಡಿಕೊಂಡಿತ್ತು. ಆ ಜಂಬುಕನು ಒಂದು ದಿನ ಆಹಾರವಿಹಾರಕ್ಕೆ ಹೋಗಲು ಅದರ ಬಿಲಕ್ಕೆ ಒಂದು ಹುಲಿ ಬಂದು ಹೊಕ್ಕಿತು. ಸ್ವಲ್ಪ ಹೊತ್ತಿನಲ್ಲೇ ಆ ನರಿ ಬಂದು ಬಾಗಿಲಲ್ಲಿ ನಿಂತು ಹುಲಿಯ ಹೆಜ್ಜೆಗಳನ್ನೂ ಹಾಳಾದ ಬಿಲವನ್ನೂ ಕಂಡು, ಇದು

ಪೋಗದೆಂದು ಶಂಕಿಸಿ, ಕಿಱಿದೆಡೆಯುಂ ಪೆಱಮೆಟ್ಟಿ ಬಂದು ನಿಂದು, ಈ ಚೋದ್ಯಮನುಪಾಯದೊಳೇ ನೋಡುವೆನೆಂದು, ಬಿಲನಂ ಪೆಸರ್ಗೊಂಡು ಪಲವುಂ ಸೂೞ್ ಕರೆಯಲ್, ಆ ಬಿಲಂ ನುಡಿಯದಿರ್ಪುದುಂ, ಬಿಲನೆ ನೀನಿನಿತು ಕಾಲಂ ನಾಂ ಬರ್ಪಾಗಳಿದಿರ್ವಂದು ಸೇವೆಯಂ ಮಾಡುತ್ತಿರ್ದಯ್ ಈಗಳದುಗೆಟ್ಟು ಕರೆದೊಡಂ ಮೊದಲಾಗಿ ಸರಂದೋಱಿದಪೆಯಿಲ್ಲ ಪೆಱನೋರ್ವಂಗೆ ಕೂರ್ತೆಯಕ್ಕುಂ, ಮೇಣ್ ಬಲ್ಲಿದನಿರ್ದನಕ್ಕುಮಲ್ಲದೊಡೀಗಳೇಕುಸಿರದಿರ್ದಪೆ? ಆದೊಡಮೇಂ, ನಿನ್ನ ಗುಣಕ್ಕಿನ್ನೊರ್ಮೆ ಕರೆವೆಂ ಇನ್ನುಮುಸಿರದಿರ್ದೊಡೆ ಪೆಱತೊಂದು ಬಿಲನನಱಿಸಿಕೊಳ್ವೆಂ, ಸರಂದೋಱಿದೆಯಪ್ಪೊಡೆ ನಿನ್ನಲ್ಲಿಗೆ ಬರ್ಪೆನೆಂದು ಮತ್ತಂ ಬಿಲನಂ ಕರೆವುದುಂ, ಪುಲಿ ಇದೆಲ್ಲಮಂ ಕೇಳ್ದು, ಬಿಲನೆನಗೆ ಭಯಸ್ಥನಾಗಿ ಸರಂದೋಱಲಣ್ಮದಿರ್ದುದಾಗಲ್ವೇೞ್ಕುಮಿನ್ನಾನಾದೊಡಂ ಸರಂದೋಱಿ ನರಿಯಂ ಬರಿಸಿ ತಿಂಬೆನೆಂಬಱಿವಗೆಯುಂ ಬೇಡರಂತೆ ಬಗೆದು ಹೂಂಕಾರಂಗೆಯ್ವುದುಂ, ಆ ಧ್ವನಿಯಂ ನರಿ ಕೇಳ್ದು ತನ್ನ ಬುದ್ಧಿಗೆ ತಾನೆ ಮೆಚ್ಚಿ,

ಶ್ಲೋ॥ ಅನಾಗತಂ ಯಃ ಕುರುತೇ ಸ ಶೋಭತೇ ನ ಶೋಭತೇ ಯೋ ನ 'ರೋತ್ಯನಾಗತಂ
ವನೇ ವಸನ್ನತ್ರ ಜರಾಮುಪಾಗತೋ ಬಿಲಸ್ಯವಾಚೋ ನ ಕದಾಚನಶ್ರುತಾಃ ॥೧೩॥

ಟೀ॥ ಆವನೊರ್ಬಂ ಮೇಲಪ್ಪ ಕಜ್ಜವನಱಿದು ಮಾಡದಿರ್ದಪನವನನೊಪ್ಪಲಱಿಯೆಂ. ನಾನೀ ವನದುರ್ಗದೊಳಿರ್ದು ವಾರ್ಧಿಕಪನೆಯ್ದಿದೆಂ, ಬಿಲದ ನುಡಿಯನೆಂದುಂ ಕೇಳ್ದುದಿಲ್ಲ, ಎಂದಿಂತು ಪಲಕಾಲಮೀ ವನದೊಳಿರ್ದುಂ ಈ ವನದೊಳಾಡಿಯುಂ ಬಲ್ಲೆಂ, ಬಿಲಂ ನುಡಿವುದಂ ಗಿಡಂಗಳ್ ನಡೆವುದಂ ನಾನೆಂದುಂ ಕಂಡುಂ ಕೇಳ್ದುಮಱಿಯೆನೆಂದು ಆ ನರಿ ಬಗೆಯೊಳ್ ಪಿರಿಯನಪ್ಪುದಱಿಂ ತನ್ನ ಬುದ್ಧಿಗೆ ತಾನೆ ಮೆಚ್ಚಿ ಆಯೆಡೆಯುಂ ಬಿಟ್ಟೋಡಿ ಬರ್ದುಂಕಿತು.

ಏನೋ ಅಪಾಯವಲ್ಲದೆ ಇರದು ಎಂದು ಮನಸ್ಸಿನಲ್ಲಿ ಸಂದೇಹಿಸಿತು. ಸ್ವಲ್ಪ ಹಿಂದಕ್ಕೆ ಸರಿದು ಈ ಚೋದ್ಯವನ್ನು ಉಪಾಯದಿಂದಲೇ ನೋಡುವೆನೆಂದು ಬಿಲವನ್ನು ಹೆಸರಿಟ್ಟು ಹಲವುಬಾರಿ ಕರೆಯಲು ಆ ಬಿಲವು ಮರುಮಾತು ಕೊಡಲಿಲ್ಲ, 'ಬಿಲನೆ, ನೀನಿಷ್ಟು ಕಾಲ ನಾನು ಬರುವಾಗ ಇದಿರುಗೊಂಡು ಸೇವಿಸುತ್ತಿದ್ದೆ. ಈಗ ಅದನ್ನು ಬಿಟ್ಟು ಕರೆವರೂ ಮಾತಾಡುವುದಿಲ್ಲ ; ಬೇರೊಬ್ಬನನ್ನು ಪ್ರೀತಿಸಿರಬೇಕು! ಅಲ್ಲದೆ ಅವನು ಬುದ್ಧಿವಂತನಿರಬೇಕು. ಅಲ್ಲದಿದ್ದಲ್ಲಿ ಈಗ ಏಕೆ ಮಾತನಾಡದೆ ಇರುವೆ! ಆದರೇನು, ನಿನ್ನ ಗುಣಕ್ಕಾಗಿ ಇನ್ನೊಮ್ಮೆ ಕರೆಯುವೆ, ಇನ್ನೂ ಮಾತಾಡದಿದ್ದಲ್ಲಿ ಬೇರೊಂದು ಬಿಲವನ್ನು ಅರಸಿಕೊಳ್ಳುವೆ ; ಮಾತಾಡಿದರೆ ನಿನ್ನ ಬಿಲಕ್ಕೇ ಬರುವೆ ಎಂದು ಮತ್ತೊಮ್ಮೆ ಬಿಲವನ್ನು ಕರೆಯತೊಡಗಿತು. ಹುಲಿಯು ಇದನ್ನೆಲ್ಲ ಕೇಳಿ, ಬಿಲವು ನನಗೆ ಹೆದರಿ ಮಾತಾಡದೆ ಸುಮ್ಮನಿದ್ದಿರಬೇಕು ; ಇನ್ನು ನಾನಾದರೂ ಮಾತಾಡಿ ನರಿಯನ್ನು ಬರುವಂತೆ ಮಾಡಿ ತಿಂದುಬಿಡುವೆ ಎಂದು ಹೀನಾಪೇಕ್ಷೆಯಿಂದ ದಡ್ಡರಂತೆ ಯೋಚಿಸಿ ಹೂಂಕರಿಸಲು ಆ ಧ್ವನಿಯನ್ನು ನರಿಯು ಕೇಳಿ ತನ್ನ ಬುದ್ಧಿಗೆ ತಾನೇ ಮೆಚ್ಚಿಕೊಂಡಿತು. ಶ್ಲೋ॥ ಯಾವನು ಮೇಲಾದ ಕಾರ್ಯವನ್ನು ಅರಿತೂ ಮಾಡದಿರುವನೋ ಅವನನ್ನು ನಂಬುವುದು ಕಷ್ಟ. ನಾನು ಈ ವನದುರ್ಗದಲ್ಲಿದ್ದು ವಾರ್ಧಕ್ಯವನ್ನು ಹೊಂದಿದೆ ; ಬಿಲದ ನುಡಿಯನ್ನು ಎಂದೂ ಕೇಳಿಲ್ಲ. ಹೀಗೆ ಹಲವುಕಾಲ ಈ ವನದಲ್ಲಿದ್ದೂ ಈ ವನದಲ್ಲಿ ಆಡಿಯೂ ಬಲ್ಲೆ. ಬಿಲ ನುಡಿಯುವುದನ್ನೂ, ಗಿಡಗಳು ನಡೆಯುವುದನ್ನೂ ನಾನು ಎಂದೂ ಕಂಡು ಕೇಳಿಯೂ ಅರಿಯೆನು. ಎಂದು ಆ ನರಿ ಮನಸ್ಸಿನಲ್ಲಿ ಹಿರಿಯನಾದುದರಿಂದ ತನ್ನ ಬುದ್ಧಿಗೆ ತಾನೇ

ಅಂತುಮಲ್ಲದೆಯುಂ 'ಆತ್ಮಾರ್ಥಂ ಪೃಥಿವೀಂ ತ್ಯಜೇತ್', ತನ್ನ ನಿಮಿತ್ತಮಾಗಿ ಭೂಮಿಯಂ ಬಿಡುವುದೆಂಬ ನೀತಿಶಾಸ್ತ್ರಮುಂಟು. 'ತಾನುಳ್ಳೊಡೆ ಮೂರುಲೋಕಮುಂಟು' ಎಂಬ ನಾಣ್ನುಡಿಯುಂಟು. ಆತ್ಮರಕ್ಷಣಮೇ ಪರಮಪುರುಷಾರ್ಥಮೆಂಬ ಸರ್ವಜನಸಮ್ಮತಮಂ ಕೇಳ್ದುಂ ಕಂಡುಮಱಿದುಮಿಂತಪ್ಪ ಸ್ಥಾನದೊಳೆಂತಿರ್ಪೆನೆನೆ, ದವನಕನಿಂತೆಂದಂ : ಇನಿತುವರಂ ದೇವರ ಮನದೊಳತಿಭಯಮುಳ್ಳೊಡಿದು ವಿಸ್ಮಯಮಪ್ಪುದಾದೊಡಂ ನಿಮಗಿನಿತು ಭಯಂ ಮಾಡಿದಂಗೆ ನೀಂ ಪೇಳ್ದ ಗುಣಂಗಳೊಳ ವಿಳ್ದೆಂಬುದುಮಂ ಅವನೊರ್ವನೋ ಚತುರ್ಬಲಸಮೇತನೋ ಎಂಬುದುಮನಾರಯ್ದು ನಿಶ್ಚಯಂ ಶತ್ರು ಬಲವಂತನಾದುದನಱಿದಿಂ ಬೞಿಕ್ಕಂ ಅದರ್ಕೆ ತಕ್ಕುದಂ ನೆಗೆೞ್ವೆನೆಂದು ಪಲವುಮುಪಾಯದಿಂ ತಿಳಿಪಿ ನಿಲಿಸಿ,

ಶ್ಲೋ ॥ ಕ್ಷೀಣೇ ಕೋಶೇ ಪ್ರಜಾನಾಶೇ ಶತ್ರೌ ನಿಕಟವರ್ತಿನಿ
ನ ಸ್ಥಾತವ್ಯಂ ನ ಯೋದ್ಧವ್ಯಂ ತದ್ದೇಶಂ ಚ ಪರಿತ್ಯಜೇತ್ ॥೧೪॥

ಟೀ॥ ಭಂಡಾರಂ ಸವೆದೆಡೆ ಪ್ರಜೆ ಕೆಟ್ಟೆಡೆ ಪಗೆ ಸಮೀಪವಾದೆಡೆಯಲ್ಲಿರಲಾಗದು, ಯುದ್ಧಂ ಮಾಡಲಾಗದು, ಆ ದೇಶಮಂ ಬಿಟ್ಟು ಪೋಪುದು ಎಂಬುದನಱಿದು ಈ ನಯಂಗಳೊಳಗೆ ನಿನಗೆ ಶತ್ರುಸಂಕಟಮೆಂಬ ಶಂಕೆಯಿಲ್ಲದೆ ಸಪ್ತಾಂಗದೊಳೇಕಾಂಗಮಪ್ಪುದುಂ ವಿಕಳಮಾವುದಿಲ್ಲ. ಸಾಮಾದ್ಯುಪಾಯಂಗಳಿಂ ಶತ್ರುಗಳಂ ವಶಂ ಮಾಡಲಾರದೆ ಅಪಸರಣಮೇ ಶರಣಮಾಗಿರ್ಪುದುಮಂ ಪ್ರಯೋಗಿಸದೆ ಶಬ್ದಶ್ರವಣಮಾತ್ರಕ್ಕೆ ಭಯಂಗೊಂಡೋಡಿದಿರಪ್ಪೊಡೆ

ಶ್ಲೋ ॥ ಪೂರ್ವಮೇವ ಮಯಾಜ್ಞಾತಂ ಪೂರ್ವಮೇತದ್ವಿವೇಚಿತಂ
ಅನುಪ್ರವಿಶ್ಯ ವಿಜ್ಞಾತಂ ಯಾವದ್ದಾರು ಚ ಚರ್ಮ ಚ ॥೧೫॥

ಮೆಚ್ಚಿ ಆ ಎಡೆಯನ್ನು ಬಿಟ್ಟು ಓಡಿ ಬದುಕಿಕೊಂಡಿತು. ಅಲ್ಲದೆ 'ಆತ್ಮಾರ್ಥಂ ಪೃಥಿವೀಂ ತ್ಯಜೇತ್' - ತನಗಾಗಿ ಭೂಮಿಯನ್ನು ಬಿಡಬೇಕು - ಎಂಬ ನೀತಿಶಾಸ್ತ್ರವಿದೆ. 'ತಾನುಂಟೋ ಮೂರು ಲೋಕವುಂಟು' ಎಂಬ ನಾಣ್ಣುಡಿಯೂ ಇದೆ. ಆತ್ಮರಕ್ಷಣೆಯೇ ಪರಮಪುರುಷಾರ್ಥ ಎಂಬ ಸರ್ವಜನಸಮ್ಮತವನ್ನು ಕೇಳಿಯೂ ಕಂಡೂ ಅರಿತೂ ಇಂಥ ಅಪಾಯಕರವಾದ ಸ್ಥಳದಲ್ಲಿ ಹೇಗಿರಬಲ್ಲೆನು ? ಅದಕ್ಕೆ ದವನಕನು ಹೀಗೆಂದನು: ನಿಮಗೆ ಇಷ್ಟೊಂದು ಭಯವನ್ನುಂಟುಮಾಡಿದವನಲ್ಲಿ ನೀವು ಹೇಳಿದ ಗುಣಗಳು ಇವೆಯೋ, ಇಲ್ಲವೋ ಎಂಬುದನ್ನೂ ಅವನೊಬ್ಬನೇ ಚತುರ್ಬಲಸಮೇತನೋ ಎಂಬುದನ್ನೂ ವಿಚಾರಿಸಿ ನಿಶ್ಚಯವಾಗಿಯೂ ಶತ್ರುವು ಅಧಿಕ ಬಲನೆಂದು ತಿಳಿದ ಮೇಲೆ ಅದಕ್ಕೆ ತಕ್ಕುದಾದುದನ್ನು ಮಾಡುವೆ, ಎಂದು ಹಲವು ಉಪಾಯದಿಂದ ತಿಳಿಸಿ ನಿಲ್ಲಿಸಿದನು. ಶ್ಲೋ॥ ಭಂಡಾರ ಬರಿದಾದರೆ, ಪ್ರಜೆಗಳು ನಾಶವಾದರೆ, ಹಗೆಗಳು ಸಮೀಪದಲ್ಲಿದ್ದರೆ ಆ ದೇಶದಲ್ಲಿರಬಾರದು; ಅಂಥಲ್ಲಿ ಯುದ್ಧ ಮಾಡಬಾರದು, ಆ ದೇಶವನ್ನು ಬಿಟ್ಟುಹೋಗಬೇಕು ಎಂಬುವನ್ನು ತಿಳಿದು ಈ ನೀತಿಗಳಲ್ಲಿ ನಿನಗೆ ಶತ್ರುಸಂಕಟ ಎಂಬ ಶಂಕೆಯಿಲ್ಲದೆ ಸಪ್ತಾಂಗಗಳಲ್ಲಿ ಒಂದು ಅಂಗವೂ ಕೊರತೆಯಿಲ್ಲ. ಸಾಮಾದಿ ಉಪಾಯಗಳಿಂದ ಶತ್ರುಗಳನ್ನು ವಶಪಡಿಸಿಕೊಳ್ಳ ಲಾರದೆ ಓಡಿಹೋಗುವುದೇ ಶರಣಾಗಿರುವುದು. ಅದನ್ನೂ ಪ್ರಯೋಗಿಸದೆ ಶಬ್ದ ಶ್ರವಣ ಮಾತ್ರಕ್ಕೆ ಭಯಗೊಂಡು ಓಡಿದರೆ ಶ್ಲೋ॥ ಮೊದಲೊಮ್ಮೆ ಇದು ನನಗೆ ಅನುಭವಕ್ಕೆ ಬಂದಿತು. ಮೊದಲೊಮ್ಮೆ ನನಗೆ ಈ ಅವಸ್ಥೆಯ ಅರಿವಾಗಿತ್ತು ; ಅದು ಮರ ಮತ್ತು

ಟೀ|| ಮುನ್ನಮಿದೆನ್ನಿಂದಱಿಯಲ್ಪಟ್ಟತು, ಮುನ್ನಮೆನಗೀಯವಸ್ಥೆಯೊಳಗೆ ಪೊಕ್ಕಱಿಯಲ್ಪಟ್ಟತ್ತು, ಮರನುಂ, ತೊವಲುಂ ಎಂಬುದು-ಎಂಬ ಕಥೆಯಂತಕ್ಕುಮೆನೆ, ಪಿಂಗಳಕನದೆಂತೆನೆ, ದವನಕಂ ಪೇಳ್ಗುಂ :

೫. ನರಿಯೂ ಭೇರಿಯೂ

ಮದಗಜಸಂಕುಳದಿಂ ಶ್ವಾ-
ಪದದಿಂದಂ ಗಿರಿಗುಹಾಳಿಯಿಂದಧಿಕ ಭಯ-
ಪ್ರದಮೆನಿಪ ಘೋರಕಾಂತಾ-
ರದೊಳ್ ಮಹಾಭೀರುವೆಂಬ ಜಂಬುಕನಿರ್ಕುಂ ೯೦

ಆ ಜಂಬುಕನೊಂದು ದಿವಸಂ ಆಹಾರ ವಿಹಾರಕಾಂಕ್ಷೆಯಿಂದಡವಿಯೆಲ್ಲಮಂ ತೊಳಲ್ದು ಎಲ್ಲಿಯುಮೇನುಮಂ ಪಡೆಯದೆ ತನಗೆ ಸಹಾಯನಪ್ಪದೊಂದು ವಾಯಸನಿರ್ದಲ್ಲಿಗೆ ಬರ್ಪುದುಮಾ ವಾಯಸಂ ಇದಿರ್ವಂದು, ಎಲೆ ಭಾವ, ಏಂ ಬಡವಾದಿರೆನೆ ಪಲವು ದಿವಸಮಾಹಾರಂಬಡೆಯದೆ ಬಡವಾಗಿ ನಿನ್ನಲ್ಲಿ ಆಸೆಪಟ್ಟು ಬಂದೆನೆಂಬುದುಂ, ಇದಾವ ಗಹನಮೀಗಳಾಂ ಪೋಗಿ ಬರ್ಪನ್ನೆವರಮಿಲ್ಲಿಯೇ ನಿಲ್ವಿಮೆಂದು ವಾಯುವೇಗದಿಂ ವಾಯಸಂ ಪೋಗಿ ಬಂದು, ಈ ತೋರ್ಪ ನದಿಯ ತೀರದೊಳ್ ಚತುರ್ಬಲಯುತರಿರ್ವರರಸುಗಳ್ ಕಾದಿದಲ್ಲಿ ಪೆಣಮಯಮಾಗಿರ್ದರಣ್ಯಭೂಮಿಯಂ ಕಂಡೆಂ, ನಿನ್ನೊಡಲ ಬಡತನಂ ಕಿಡುವಿನಮಾಹಾರಕ್ಕೆಡೆಯಾದುದಲ್ಲಿಗೆ ಪೋಗೆಂದು ಪೇಳ್ದುದುಮಾ ನರಿ ಪರಿದು ಸಮರರಂಗಭೂಮಿಯನೆಯ್ದಿ ಅನೇಕ ಶವಾಲೋಕನಜಾತಹರ್ಷನಾಗಿರ್ಪುದುಂ, ಕಿಱಿದಾನುಂ ಬೇಗಕ್ಕೆ ಭೋಂಕನೆ ಪೊಣ್ಮಿದ ಭಯಂಕರಧ್ವಾನಮಂ ಕೇಳ್ದಲ್ಲಿಯುಂ ನಿಲಲಣ್ಮದೆ ಓಡಿಬರ್ಪುದುಂ,

ಅದರ ರೆಂಪೆಯೆಂಬುದು ಮತ್ತೆ ಅರಿವಾಯಿತು - ಆ ಕಥೆಯಂತೆ ಆದೀತು ಎನ್ನಲು, ಪಿಂಗಳಕನು ಅದೇನು ಎನ್ನಲು, ದವನಕನು ಹೇಳುವನು. ೯೦. ಮದ್ದಾನೆಗಳ ಸಮೂಹದಿಂದಲೂ ಪ್ರಾಣಿಗಳಿಂದಲೂ ಗಿರಿಗುಹೆಗಳಿಂದಲೂ ಅತ್ಯಂತ ಭಯಂಕರವಾದ ಘೋರ ಕಾಂತಾರದಲ್ಲಿ ಮಹಾಭೀರು ಎಂಬ ಹೆಸರಿನ ಜಂಬುಕವಿತ್ತು. ವ|| ಆ ಜಂಬುಕನು ಒಂದು ದಿನ ಆಹಾರ ವಿಹಾರಕಾಂಕ್ಷೆಯಿಂದ ಅಡವಿಯನ್ನೆಲ್ಲ ತೊಳಲಿ ಎಲ್ಲಿಯೂ ಏನನ್ನೂ ಪಡೆಯದೆ ತನ್ನ ಸ್ನೇಹಿತನಾದ ಒಂದು ವಾಯಸದ ಬಳಿಗೆ ಹೋಯಿತು. ಆ ಕಾಗೆ ಎದುರುಗೊಂಡು, 'ಎಲೆ ಭಾವ ! ಏಕೆ ಬಡವಾಗಿದ್ದೀರಿ' ಎನ್ನಲು ಹಲವು ದಿನಗಳಿಂದ ಆಹಾರ ಪಡೆಯದೆ ನಿನ್ನಲ್ಲಿಗೆ ಆಸೆಪಟ್ಟು ಬಂದೆ ಎಂದಿತು. ಇದೆಂಥ ಮಹಾಕಾರ್ಯ! ಈಗ ನಾನು ಹೋಗಿ ಹಿಂದಿರುಗುವವರೆಗೆ ನೀವು ಇಲ್ಲಿಯೇ ನಿಲ್ಲಿರಿ ಎಂದು ವಾಯುವೇಗದಿಂದ ವಾಯಸವು ಹೋಗಿ ಮರಳಿತು. ಇಲ್ಲಿಗೆ ಕಾಣಿಸುತ್ತಿರುವ ನದೀತೀರದಲ್ಲಿ ಚತುರ್ಬಲಯುತರಾದ ಇಬ್ಬರು ರಾಜರು ಹೋರಾಡಿ ಹೆಣಮಯವಾಗಿರುವ ರಣಭೂಮಿಯನ್ನು ಕಂಡೆನು. ನಿನ್ನ ಒಡಲ ಬಡತನ ಕಳೆಯುವಷ್ಟು ಆಹಾರವುಂಟು ; ಅಲ್ಲಿಗೆ ನಡೆ ಎಂದು ಆ ವಾಯಸವು ಹೇಳಿತು. ಆ ನರಿ ಹೋಗಿ ಸಮರಭೂಮಿಯನ್ನು ಸೇರಿ ಅನೇಕ ಶವಗಳನ್ನು ನೋಡಿದುದರಿಂದ ಉಂಟಾದ ಹರ್ಷದಿಂದ ತುಂಬಿತ್ತು. ಸ್ವಲ್ಪ ಸಮಯದಲ್ಲಿ ಅನಿರೀಕ್ಷಿತವಾಗಿ ಹೊಮ್ಮಿದ ಭಯಂಕರಧ್ವಾನವನ್ನು ಕೇಳಿ ಎಲ್ಲಿಯೂ ನಿಲ್ಲದೆ ಓಡಿಬರಲು ಲಂಬಕರ್ಣ ಎಂಬ ಹೆಸರಿನ

ಲಂಬಕರ್ಣನೆಂಬುದೊಂದು ಜಂಬುಕಂ ಕಂಡಿದೇನೆಲೆ ಭಾವಾ! ನೀನೇತರ್ಕೆ ಭಯಾತುರನಾಗಿ ಬರ್ಪೆ, ಎನೆ, ಕೊಳುಗುಳಂ ನಿರ್ಮಾನುಷ್ಯಗೋಚರಮೆಂದು ಬಗೆದು ಪೋಪನ್ನೆಗಂ, ನೆಲಂ ಮೊಳಗಿದಂತಪ್ಪುದೊಂದು ಭಯಂಕರಧ್ವಾನಮಾಗಲದಂ ಕೇಳ್ದೋಡಿ ಬಂದೆನೆಂಬುದುಂ, ಆ ಜಂಬುಕನೆಂದುದು; ಆ ಧ್ವಾನಮಾವುದೆಂದುದುಮಱಿಯದೆ ದೂರಭೀರುವಾಗಿ ಪೋಗಲ್ವೇಡ, ಆಯೆಡೆಯನೆನಗೆ ತೋಱು ಬಾ, ಎಂದೊಡಂಗೊಂಡು ಬಂದು ನೋಡುವನ್ನೆಗಂ, ಶಿಖರಿ ಶಿಖರಾನುಕಾರಿಯಪ್ಪುದೊಂದು ಭೇರಿ ಸಮೀರಣಪ್ರೇರಿತ ಭೂರುಹಶಾಖಾಗ್ರಹತಿಯಿಂದತಿ ಘೋಷಂಗೆಯ್ದು ತದಾಹತಿಯಿಲ್ಲದಾಗಳ್ ನಿಶ್ಶಬ್ದಮಾಗಿಯುಂ ಇರ್ಪುದಂ ಕಂಡಾ ಜಂಬುಕಂ ಮನುಷ್ಯಸಂಚಾರಮಿಲ್ಲದುದಂ ನಿಶ್ಚಯಮಾಗಱಿದಾರಯ್ದು ಬಳಿಸಂದು ನಿಂದು ನೋಡಿ ಮತ್ತಲ್ಲಿಯೇನಾನುಮಿರ್ಕುಮೆಂದು ಶಂಕೆಯಿಂ ಭೇರಿಯ ಕಣ್ಣಂ ವಿದಾರಿಸಿಯದಱೊಳೇನುಮಂ ಕಾಣದೆ ಲಂಬಕರ್ಣಂ ಆ ನರಿ ದೂರಭೀರುವಾದುದರ್ಕೆ ಹಾಸ್ಯಂಗೆಯ್ದುದು ಅದು ಕಾರಣದಿಂ ನೀಂ ಶಬ್ದಮಾತ್ರಕ್ಕೆ ಬೆರ್ಚಿದೊಡಿಂತಪ್ಪ ನಗೆಗೆಡೆಯಪ್ಪಿರದಱಿಂ ದೇವರೆನ್ನನಟ್ಟಿಯಾರಯ್ದು ಬಳಿಕ್ಕದರ್ಕೆ ತಕ್ಕುದಂ ನೆಗಳ್ವುದೆಂಬುದಂ, ಪಿಂಗಳಕಂ ನಿನ್ನ ಮನದೊಳಿದುಮೆ ಕಜ್ಜಮಪ್ಪೊಡೆ ಪೋಗೆಂದು ಮತ್ತಮಿಂತೆಂದಂ : ಈ ಬೆಸನಪ್ಪೊಡೆ ದೂತರ್ಗೆ ಭಟ್ಟರ್ಗೆ ಪರಿಗರ್ಗಲ್ಲದೆ ನೀಂ ಮಾಡಲ್ತಕ್ಕುದಲ್ಲ; ಇಂತಪ್ಪ ವಿಷಮಾನ್ವೇಷಣಕ್ಕೆಂತಟ್ಟುವೆನೆನೆ, ದಮನಕಂ, ದೇವರ್ ಬೆಸಸಿದಂತರಸುಗಳುಂ ತಮ್ಮಾಜ್ಞೆ

ಒಂದು ಜಂಬುಕನು ಕಂಡು ಇದೇನು ಎಲೆ ಭಾವಾ ! ನೀನು ಏಕೆ ಭಯಾತುರನಾಗಿ ಓಡಿಬರುತ್ತಿರುವೆ ಎಂದು ಕೇಳಿತು. ಅದಕ್ಕೆ ಮಹಾಭೀರುವು ಕೊಳುಗುಳವು ಮನುಷ್ಯರಹಿತವೆಂದು ಭಾವಿಸಿ ಹೋದರೆ ನೆಲ ಮೊಳಗಿದಂತಹ ಒಂದು ಭಯಂಕರ ಧ್ವಾನವಾಗಲು ಅದನ್ನು ಕೇಳಿ ಓಡಿಬಂದೆ ಎಂದಿತು. ಅದಕ್ಕೆ ಆ ಜಂಬುಕನು ಹೀಗೆಂದಿತು; ಆ ಶಬ್ದವು ಏನೆಂಬುದನ್ನು ತಿಳಿಯದೆ ದೂರಭೀರುವಾಗಿ ಹೋಗಬೇಡ ; ಆ ಪ್ರದೇಶವನ್ನು ನನಗೆ ತೋರಿಸು, ಬಾ ಎಂದು ಆ ನರಿಯನ್ನು ಒಡಗೊಂಡು ಬಂದು ನೋಡಿತು. ಪರ್ವತದ ಶಿಖರವನ್ನು ಅನುಕರಿಸುವಂಥ ಒಂದು ಭೇರಿ ಗಾಳಿಯಿಂದ ಪ್ರೇರಿತವಾದ ಮರದ ಕೊಂಬೆಯ ಹೊಡೆತದಿಂದ ಅತಿಘೋಷವನ್ನು ಮಾಡಿ, ಹಾಗೆ ಗಾಳಿಯಿಲ್ಲದಾಗ ನಿಶ್ಶಬ್ದವಾಗಿರುವುದನ್ನು ಆ ನರಿ ಕಂಡಿತು. ಮನುಷ್ಯಸಂಚಾರ ಇಲ್ಲದಿರುವುದನ್ನು ನಿಶ್ಚಯಮಾಡಿಕೊಂಡು ವಿಚಾರಿಸಿ ಆ ಭೇರಿಯನ್ನು ಸುತ್ತಿ ಮತ್ತೆ ಅದರಲ್ಲಿ ಏನಾದರೂ ಇದ್ದೀತೆಂದು ಸಂದೇಹದಿಂದ ಭೇರಿಯ ಕಣ್ಣನ್ನು ಹರಿದು ನೋಡಿ ಏನನ್ನೂ ಕಾಣದೆ ಲಂಬಕರ್ಣನು ಆ ನರಿ ಧೂರಭೀರುವಾದುದಕ್ಕೆ ಪರಿಹಾಸಮಾಡಿತು. ಆದ್ದರಿಂದ ನೀವು ಶಬ್ದ ಮಾತ್ರಕ್ಕೆ ಹೆದರಿದರೆ ಇಂತಹ ಪರಿಹಾಸಕ್ಕೆ ಒಳಗಾಗುವಿರಿ. ದೇವರು ನನ್ನನ್ನು ಅಲ್ಲಿಗೆ ಅಟ್ಟಿ ಬಳಿಕ ಅದಕ್ಕೆ ತಕ್ಕುದನ್ನು ಕೈಕೊಳ್ಳಬಹುದು ಎಂದಿತು. ಅದಕ್ಕೆ ಪಿಂಗಳಕನು, ನಿನ್ನ ಮನಸ್ಸಿನಲ್ಲಿ ಇದೇ ಉಪಾಯ ಸರಿ ಎಂದು ಕಂಡರೆ ಹೋಗಿ ಬಾ ಎಂದು ಹೀಗೆಂದಿತು: ಈ ಕಾರ್ಯವನ್ನು ದೂತರೂ, ಭಟ್ಟರೂ, ಪರಿಜನರೂ ಮಾಡಬೇಕಾದುದಲ್ಲದೆ ನೀನು ಮಾಡುವುದು ಉಚಿತವಲ್ಲ : ಇಂಥ ವಿಷಮಾನ್ವೇಷಣಕ್ಕೆ ನಿನ್ನನ್ನು ಹೇಗೆ ಅಟ್ಟಲಿ? ಅದಕ್ಕೆ ದಮನಕ ಹೇಳಿತು : ದೇವರು ಹೇಳಿದಂತೆ ಅರಸರು ತಮ್ಮ ಆಜ್ಞೆ ನೆರವೇರುವಲ್ಲಿಯೂ,

ಸಲ್ವಲ್ಲಿಗಲ್ಲದ ಪೋಕ್ ಮಿತ್ರರಲ್ಲಿಗಲ್ಲದ ಶತ್ರುಗಳಲ್ಲಿಗೆ ಮುನ್ನಮೆ ಪ್ರಧಾನರುಮಂ ಪಸಾಯ್ತರುಮನಟ್ಟಲಾಗದೆಂಬ ರಾಜನೀತಿಯನಱಿವಿರಾಗಿಯುಂ ಪೋದೆಡೆಯೊಳೇನಾನುಮಪಾಯ ಮಕ್ಕುಮೆಂಬ ಶಂಕೆಯಿಂದೆನಗೆ ಕಾರುಣ್ಯಂಗೆಯ್ದಿರಾಗಿಯುಂ ಬೆಸಸಿದಿರ್. ಈಯೆಡೆಗೆ ಮಹಾಪ್ರಸಾದಮಾದೊಡಂ ದೇವರ್ಗಿಂತಪ್ಪತಿ ಕುತೂಹಲಂ ಪುಟ್ಟಿದೀಯೆಡೆಯೊಳೀ ಬೆಸನಲ್ತು, ಮತ್ತಾವ ಬೆಸಕ್ಕಮಾವ ತೆಱದೊಳಾನೆ ಸಾಲ್ವೆನೆಂದು ನುಡಿಯೆ, ಪಿಂಗಳಕಂ ಸಂತಸಂಬಟ್ಟಿಂತೆಂದಂ :

ಶ್ಲೋ ॥ ಅಪ್ರಾಜ್ಞೇನ ಚ ಕಾತರೇಣ ಚ ಗುಣಸ್ಸ್ಯಾತ್ ಸಾನುರಾಗೇಣ ಕಃ
ಪ್ರಜ್ಞಾ ವಿಕ್ರಮಶಾಲಿನೋಽಪಿ ಹಿಭವೇತ್ ಕಿಂ ಭಕ್ತಿಹೀನಾತ್ಫಲಂ
ಪ್ರಜ್ಞಾ ವಿಕ್ರಮ ಭಕ್ತಯಃ ಸಮುದಿತಾ ಯೇಷಾಂ ಗುಣಾ ಭೂತಯೇ
ತೇ ಭೃತ್ಯಾನ್ನೃಪತೇಃ ಕಳತ್ರಮಿತರೇ ಸುಪತ್ಸುಚಾಪತ್ಸುಚ ॥೧೬॥

ಟೀ॥ ಬುದ್ಧಿಹೀನನುಂ ಕಾತುರನುಮಾಗಿರ್ಪವಂ ಸ್ನೇಹಿತನುಮಾದುದಱಿಂದಾವ ಲೇಸುಂಟು. ಬುದ್ಧಿ ಪರಾಕ್ರಮಗಳಿಂದೊಳ್ಪುವೆತ್ತವನಾದೊಡಂ ಭಕ್ತಿಯಿಲ್ಲದವನೇತರ್ಕಂ ಬಾರ್ತೆಯಿಲ್ಲಂ. ಬುದ್ಧಿಪರಾಕ್ರಮಭಕ್ತಿಗಳ್ ಆರ್ಕೆಲಬರ್ಗೊಳವಾ ಭೃತ್ಯರರಸುಗಳ್ಗೆ ಪೆಂಡಿರ್ಮಕ್ಕಳೋಪಾದಿಯಲ್ಲಿ ಸಂಪತ್ತಾದೊಡಂ ವಿಪತ್ತಾದೊಡಂ ಬಿಡರ್, ಎಂದು ಪೂರ್ವಾಚಾರ್ಯರ್ ಪೇಳ್ದ ಸದ್ಭೃತ್ಯರ ಲಕ್ಷಣಂಗಳ್ ನಿನಗೆ ಕ್ಷೇಮಮುಂ ಎನಗೆ ತೇಜಮುಮಂತಕ್ಕುಮಂತೆ ಮಾಡೆಂದು, ಬೇಗಂ ಪೋಗೆಂಬುದುಂ ದವನಕಂ ಪೋದಂ, ಅನ್ನೆಗಮಿತ್ತಂ ಪಿಂಗಳಕನಾತ್ಮಗತದೊಳಿಂತೆಂದಂ :

ಅವಮಾನಿತನಪ್ಪುದಱಿಂ
ದವನಕನೆತ್ತಾನುಮೆನಗವಕ್ರಿಯೆಯನೊಡ-
ರ್ಚುವನೊ ಮನವಱಿಯದಾದನಿಂ-
ತವಿವೇಕಿಯೆನಾಗಿ ಪೋಗಲಟ್ಟಿದೆನವನಂ ॥೯೧॥

ಮಿತ್ರರಲ್ಲಿಯೂ ಮೊದಲೇ ಪ್ರಧಾನರನ್ನು ಕಳುಹಿಸಬೇಕಲ್ಲದೆ ಶತ್ರುಗಳಲ್ಲಿಗೆ ಅಟ್ಟಬಾರದು ಎಂದು ರಾಜನೀತಿಯನ್ನು ಅರಿತವರಾಗಿದ್ದೀರಿ. ಹೋದಕಡೆಯಲ್ಲಿ ಏನಾದರೂ ಅಪಾಯ ಸಂಭವಿಸೀತು ಎಂಬ ಸಂದೇಹದಿಂದ ನನಗೆ ದಯೆ ತೋರಿಸಿದಿರಿ ಎಂದು ಹೇಳಿದಿರಿ. ಇಂಥ ಸಂದರ್ಭದಲ್ಲಿ ನಿಮಗೆ ಹೋಗಬೇಕೆಂಬ ಬಯಕೆ ಅತೀವವಾಗಿದ್ದರೂ ದೇವರಿಗೆ ಇಂಥ ಅತಿಕುತೂಹಲ ಹುಟ್ಟಿದ ಸ್ಥಳಕ್ಕೆ ಈ ಕಾರ್ಯ ಅನುಚಿತ, ಇನ್ನು ಯಾವ ಕಾರ್ಯಕ್ಕಾದರೂ ಯಾವ ರೀತಿಯಲ್ಲೂ ನಾನೇ ಸಾಕಾಗುತ್ತೇನೆ. ಪಿಂಗಳಕನಿಗೆ ದವನಕನ ಮಾತನ್ನು ಕೇಳಿ ಸಂತೋಷವಾಗಿ ಹೀಗೆಂದಿತು : ಶ್ಲೋ॥ ಬುದ್ಧಿಹೀನನೂ, ಕಾತರನೂ ಆಗಿರುವವನು ಸ್ನೇಹಿತನಾಗುವುದರಿಂದ ಯಾವ ಲೇಸುಂಟು ? ಬುದ್ಧಿ ಪರಾಕ್ರಮ ಸದ್ಗುಣಗಳಿಂದ ಕೂಡಿದವನಾದರೂ ಭಕ್ತಿಯಿಲ್ಲದವನು ಯಾವ ಕೆಲಸಕ್ಕೂ ಬಾರನು. ಬುದ್ಧಿ ಪರಾಕ್ರಮ ಭಕ್ತಿಗಳು ಯಾರಲ್ಲಿ ಉಂಟೋ ಆ ಭೃತ್ಯರು ಅರಸರನ್ನು ಹೆಂಡತಿ ಮಕ್ಕಳಂತೆ ಸಂಪತ್ತಿನಲ್ಲೂ, ವಿಪತ್ತಿನಲ್ಲೂ ಕೈಬಿಡಲಾರರು. ಪೂರ್ವಾಚಾರ್ಯರು ಹೇಳಿದ ಸದ್ಭೃತ್ಯರ ಲಕ್ಷಣಗಳು ನಿನ್ನಲ್ಲಿ ಚೆನ್ನಾಗಿವೆ. ಇನ್ನು ನಿನಗೆ ನಾನು ಏನೆಂದು ಉಪದೇಶಿಸಲಿ, ನಿನಗೆ ತೇಜಸ್ಸು ನನಗೆ ಶ್ರೇಯಸ್ಸು ಉಂಟಾಗುವಂತೆ ನಡೆದುಕೋ, ಬೇಗ ಹೋಗಿ ಬಾ! ದವನಕನು ಹೋದನು. ಇತ್ತ ಪಿಂಗಳಕನು ತನ್ನ ಮನಸ್ಸಿನಲ್ಲಿಯೇ ಹೀಗೆಂದುಕೊಂಡನು:
೯೧. ಅವಮಾನಿತನಾದುದರಿಂದ ದವನಕನು ಎಲ್ಲಿಯಾದರೂ ನನಗೆ ಅಹಿತವನ್ನು ಎಣಿಸಿಯಾನೋ ಏನೋ ! ಅವನ ಇಂಗಿತವನ್ನು ಅರಿಯದೆ ನಾನು ಹೀಗೆ ಅವಿವೇಕಿಯಾಗಿ

ಅಂತು ಕ್ರುದ್ಧ ಲುಬ್ಧಭೀತಾಪಮಾನಿತರಪ್ಪರನೆಂತುಂ ವಿಶ್ವಾಸಿಸಲ್ ಬಾರದೆಂದರ್ಥಶಾಸ್ತ್ರಾಭಿಪ್ರಾಯಮುಂಟು. ದವನಕನಂ ಪಟಿಯ ಮಗನೆಂಬಿನಿತಲ್ಲದೆ ಇನಿತು ದೆವಸಮಪಮಾನಿತನಾಗಿರ್ದನಪ್ಪುದಱಿಂ ತನ್ನ ಪೞಮೆಯುಂ ಮಱೆದು ಪಗೆಪಂ ಬಲ್ಲಿದನಪ್ಪೊಡೆ ಅವನೊಳ್ ಕೂಡಿ ಮೇಲೆವಂದೊಡತಿಭರಮಕ್ಕುಂ. ಅವನೇನಂ ಮಾಡಿದಪನೆಂಬುದನರಿಯಲ್‌ಬಾರದುದರಿಂದೀ ಸ್ಥಾನಮಂ ಬಿಟ್ಟು ಪೆಱತೊಂದು ದುರ್ಗಸ್ಥಾನದೊಳಿರ್ದು ನೋೞ್ಪೆನೆಂದಾತ್ಮಗತಂಗೆಯ್ದು ಮತ್ತಂ ಸತ್ವಾವಲಂಬನಾಗಿ,

ಶ್ಲೋ॥ ಆಹಾರ ನಿದ್ರಾಭಯ ಮೈಥುನಂಚ ಸಾಮಾನ್ಯಮೇತತ್ಪಶುಭಿರ್ನರಾಣಾಂ
ಜ್ಞಾನಂ ನರಾಣಾಮಧಿಕೋ ವಿಶೇಷಃ ಜ್ಞಾನೇನಹೀನಃ ಪಶುಭಿಸ್ಸಮಾನಃ॥೧೭॥

ಟೀ॥ ಭೋಜನ, ನಿದ್ರೆ, ಭೀತಿ, ಸ್ತ್ರೀಸಂಗಮೆಂಬೀ ನಾಲ್ಕುಂ ಪಶುಗಳ್ಗಂ ಮನುಜರ್ಗಂ ಸರಿ. ಜ್ಞಾನಮೇ ಮನುಷ್ಯರೊಳಧಿಕಂ, ಜ್ಞಾನಮಿಲ್ಲದವಂ ಪಶುವಿನ ಸಮಾನಂ ಎಂಬ ನಿಸರ್ಗ ಗುಣದೊಳಾದ ಭಯಂ ದೇಶಕಾಲ ವಿಕಳತೆಯಿಂದೆನಗಂ ಮನೋಭಂಗಮನೆ ಮಾಡಿದಪ್ಪುದು. ಸುಸ್ವಾಮಿಗಂ ವಿಶ್ವಾಸಿಯಪ್ಪ ಪಟಿಯರುಮಾಪ್ತರುಮೆಂದುಂ ತಪ್ಪುವರಲ್ಲೆಂಬುದು ಸಮಸ್ತ ನೀತಿಶಾಸ್ತ್ರ ಪರಾನುಮತದೊಳಮನುಭವದೊಳಂ ಪ್ರತ್ಯಕ್ಷಮುಂ ಪ್ರಮಾಣಮುಮಾಗಿರ್ಪುದು, ಆಪ್ತನನಾಪ್ತನೆಂದು ಹಿತನನಹಿತನೆಂದುಮವಿಚಾರದಿಂ ಸಂದೆಗಂಬಡುವಂಗೆಂದುಂ ಸುಖಮಾಗಲಱಿಯದು. ದವನಕನಪ್ಪೊಡೆ ಉಪಧಾವಿಶುದ್ಧನಪ್ಪ ಮಂತ್ರಿಪುತ್ರಂ, ಎನಗೆಂದುಂ ತಪ್ಪುವನಲ್ಲೆಂದು ನಿಶ್ಚಿಂತಮನನಾಗಿರ್ಪುದುಮಿತ್ತಲ್

ಪ್ಲಕ್ಷ ಕದಂಬ ನಿಂಬ ಪನಸಾರ್ಜುನ ತಾಲ ಲವಂಗ ಲುಂಗ ರು-
ದ್ರಾಕ್ಷ ತುರುಷ್ಕಮುಷ್ಕ ನಿಚುಳಾಮ್ರ ಕರಂಜ ವಟಾದ್ಯನೇಕ ವೃ-
ಕ್ಷಕ್ಷುಪವೀರುಧೌಷಧಪರೀತ ಸಮುನ್ನತ ಕೂಟ ಕೋಟಿ ರೌ
ದ್ರಕ್ಷಿತಿ ಭೃದ್ಗುಹಾಗಹನಮಂ ಕಳಿದಾ ಮೃಗಧೂರ್ತನೆಯ್ದಿದಂ ೯೨

ಅವನನ್ನು ಕಳುಹಿಸಿಕೊಟ್ಟೆನು. ವ॥ ಕ್ರುದ್ಧರೂ, ಲುಬ್ಧರೂ, ಭೀತರೂ, ಅಪಮಾನಿತರೂ ಆದವರಲ್ಲಿ ಏನಾದರೂ ವಿಶ್ವಾಸವನ್ನು ಇಡಬಾರದು ಎಂದು ಅರ್ಥಶಾಸ್ತ್ರದ ಅಭಿಪ್ರಾಯವಿದೆ. ದವನಕನು ಹಳೆಯ ಮಂತ್ರಿಯ ಮಗ ಎಂಬುದಲ್ಲದೆ ಇಷ್ಟುದಿನಗಳವರೆಗೆ ಅಪಮಾನಿತನಾಗಿದ್ದವನು. ಅವನೇನು ಮಾಡುತ್ತಾನೋ ಎಂದು ನಂಬುವುದು ಕಷ್ಟ. ಅದರಿಂದ ಈ ಸ್ಥಾನವನ್ನು ಬಿಟ್ಟು ಬೇರೊಂದು ದುರ್ಗಸ್ಥಾನದಲ್ಲಿದ್ದು ನೋಡುವೆನು ಎಂದು ಆತ್ಮಗತವಾಗಿ ಅಂದುಕೊಂಡು ಪುನಃ ಸತ್ವಾವಲಂಬನಾದನು. ಶ್ಲೋ॥ ಭೋಜನ, ನಿದ್ರೆ, ಭೀತಿ, ಸ್ತ್ರೀಸಂಗ ಎಂಬ ಈ ನಾಲ್ಕು ಪಶುಗಳಿಗೂ, ಮನುಷ್ಯರಿಗೂ ಸಮಾನವಾದ ವಿಷಯಗಳು; ಜ್ಞಾನವೇ ಮನುಷ್ಯರಲ್ಲಿ ಶ್ರೇಷ್ಠವಾದುದು. ಜ್ಞಾನವಿಲ್ಲದವ ಪಶುವಿಗೆ ಸಮಾನ. ಈ ರೀತಿಯ ನೈಸರ್ಗಿಕವಾದ ಭಯ ದೇಶಕಾಲವಿಕಳತೆಯಿಂದ ನನಗೂ ಮನೋಭಂಗವನ್ನುಂಟುಮಾಡುವುದು. ಸುಸ್ವಾಮಿಗೆ ವಿಶ್ವಾಸಿಯಾದ ವೃದ್ಧಜನರೂ ಆಪ್ತರೂ ಎಂದೂ ತಪ್ಪುವುದಿಲ್ಲ ಎಂದು ನೀತಿಶಾಸ್ತ್ರದಲ್ಲಿಯೂ ಅನುಭವದಲ್ಲಿಯೂ ಪ್ರತ್ಯಕ್ಷವೂ ಪ್ರಮಾಣವೂ ಆದ ವಿಚಾರ. ಆಪ್ತನನ್ನು ಅನಾಪ್ತನೆಂದೂ ಹಿತನನ್ನು ಅಹಿತನೆಂದೂ ಅವಿಚಾರದಿಂದ ಸಂದೇಹಪಡುವವನಿಗೆ ಎಂದೆಂದೂ ಸುಖವಾಗದು. ದವನಕನು ಉಪಧಾವಿಶುದ್ಧನಾದ ಮಂತ್ರಿಪುತ್ರ. ನನಗೆಂದೂ ತಪ್ಪುವವನಲ್ಲ ಎಂದು ನಿಶ್ಚಿಂತಮನನಾಗಿದ್ದನು. ೯೨. ಇತ್ತ, ಬಸರಿ, ಕಡವೆ, ಬೇವು, ಹಲಸು, ಮತ್ತಿ, ತಾಳೆ, ಲವಂಗ, ಲುಂಗ, ರುದ್ರಾಕ್ಷ, ಸಾಂಬ್ರಾಣಿ, ಮುಷ್ಕ, ತೊರಗಣಿಗಿಲೆ, ಮಾವು, ಹನಗಲು,

ವ॥ ಅಂತೆಯ್ದಿ,

ಪ್ರಾವೃಡದಭ್ರಮೇಘಪಟಲಾಂತರಿತೇಂದುವಿಭಾಸಿಯುಂ ಸುರಾ-
ಜೀವಜಃ ಕದಂಬವನ ಕೈರವಚಾರು ಕಳಿಂದಕನ್ಯಕಾ
ಜೀವನವರ್ಧಿತಾಯತ ತಮಾಲವನಾಂತದವಲ್ಲಿ ನಿಂದ ಸಂ-
ಜೀವಕನಂ ಮೃಗೇಂದ್ರಸಚಿವಾಗ್ರಣಿ ಕಂಡನಖಂಡಸತ್ತ್ವನಂ ೯೩

ವ॥ ಅಂತು ಕಂಡು ಪುನ್ನಮಡವಿಯೊಳ್ ನಡೆವ ಬೀಡಿನೆತ್ತುಗಳಂ ದೂರದೊಳ್ ನೋಡಿಯುಂ ಸಮೀಪದೊಳಾಡಿಯುಂ ಅಱಿವುದಾಗಿಯುಂ ಸಂಜೀವಕಂ ಸ್ವೇಚ್ಛಾವಿಹಾರದಿಂ ವರ್ಣ ಗಂಧಗತಿಸ್ವರಂಗಳಿನಪೂರ್ವಾಂಗನಪ್ಪುದಱಿಂ ಕಿಱಿದು ಬೇಗಂ ಸಂದೆಗಂಬಟ್ಟು, ಸಮೀಪಕ್ಕೆ ಬಂದು ನಿಶ್ಚಯಮೆತ್ತಪ್ಪುದನಱಿದು ನರಿ ಹರಿಯ ಮರುಳ್ತನಕ್ಕೆ ನಕ್ಕು, ನಾನೀಯೆತ್ತನೆತ್ತಿಂ ಕಂಡೆನೆಂದು ನಿಷ್ಕಪಟವೃತ್ತಿಯಿಂ ಕೂರ್ತು ನಮ್ಮರಸಂಗೆ ಪೇೞ್ದಿನಪ್ಪೊಡೆ ನಾನೇತರ್ಕಂ ಬಾರ್ತೆಯಾಗಲಱಿಯೆಂ. ಅದಱಿಂದರಸಂಗೆ ನಾನೇ ಮುಖ್ಯಪ್ರಧಾನನಾಗಿಪ್ಪೊಡಂ ಕೃಪೆಯಂ ಪಡೆವನಪ್ಪೊಡಂ ಇದೇಕಾರಣಮೆಂದಱಿದು, ಇದಂ ಪಿರಿದುಮಾಡಿ ಪೇೞ್ವೆನೆಂಬ ಬಗೆ ಮನದೊಳ್ ಮಿಗೆ ಮಾಣದಾಕ್ಷಣದೊಳಲ್ಲಿಂ ತಳರ್ದು,

ಸತತಗತಿವೇಗದಿಂ ಪರಿ-
ಚಿತಮಾರ್ಗದೆ ಮಗುೞ್ದು ಬಂದು ಪೂರ್ವಾಸ್ಥಾನ-
ಸ್ಥಿತನಂ ಕಂಡಂ ಮೃಗಗಣ
ಪತಿಯಂ ಮೃಗಧೂರ್ತನಧ್ವಜಕ್ಲೇಶಾರ್ತಂ ೯೪

ಆಲ ಮೊದಲಾದ ಅನೇಕ ಮರ ಪೊದರು ಪೊದೆಗಳೇ ಮೊದಲಾದ ವನಸ್ಪತಿಗಳಿಂದ ಕೂಡಿದ ಎತ್ತರವಾದ ಶಿಖರಾಗ್ರಗಳಿಂದ, ಭಯಂಕರವಾದ ಬೆಟ್ಟಗುಹೆಗಳಿಂದ ಕೂಡಿದ ಅರಣ್ಯವನ್ನು ದಾಟಿ ಆ ನರಿ ಹೋಯಿತು. ೯೩. ಮಳೆಗಾಲದ ಮೋಡದ ಮರೆಯ ಚಂದ್ರನಂತೆ ಹೊಳೆಯುವ ಸುರಾಜೀವರಜಸ್ಸಾದ ಕದಂಬವನದ ಬಿಳಿನೈದಿಲೆಯಂತೆ ಸುಂದರವಾದ, ಯಮುನಾನದಿಯ ನೀರಿನಿಂದ ಪುಷ್ಟವಾಗಿ ಬೆಳೆದ ಹೊಂಗೆಯ ಮರಗಳಿಂದ ಕೂಡಿದ ಅರಣ್ಯದಲ್ಲಿ ನಿಂದ ಅಖಂಡಸತ್ತ್ವನಾದ ಸಂಜೀವಕನನ್ನು ಮೃಗೇಂದ್ರಸಚಿವಾಗ್ರಣಿ ಕಂಡನು. ವ॥ ಹಾಗೆ ಕಂಡು ಮೊದಲು ಅಡವಿಯಲ್ಲಿ ಮೇಯುತ್ತಿದ್ದ ಊರಿನ ಎತ್ತುಗಳನ್ನು ದೂರದಿಂದ ನೋಡಿಯೂ ಸಮೀಪದಿಂದ ಆಡಿಯೂ ತಿಳಿದಿರುವುದರಿಂದಲೂ, ಸಂಜೀವಕನು ಸ್ವೇಚ್ಛಾವಿಹಾರದಿಂದಾಗಿ ವರ್ಣ, ಗಂಧ, ಗತಿ, ಸ್ವರಗಳಲ್ಲಿ ಅಪೂರ್ವಾಂಗ ನಾಗಿ ಕಂಡುಬಂದುದರಿಂದಲೂ, ಸ್ವಲ್ಪ ಸಂದೇಹಗ್ರಸ್ತನಾಗಿ ಸಮೀಪಕ್ಕೆ ಬಂದು ನಿಶ್ಚಯವಾಗಿಯೂ ಎತ್ತೆಂಬುದನ್ನು ತಿಳಿದು ನರಿ ಹರಿಯ ಮರುಳುತನಕ್ಕೆ ನಕ್ಕಿತು: ನಾನು ಈ ಎತ್ತನ್ನು ಕಂಡೆ ಎಂದು ನಿಷ್ಕಪಟವೃತ್ತಿಯಿಂದ ವಿಶ್ವಾಸದಿಂದ ನಮ್ಮ ಅರಸನಿಗೆ ಹೇಳಿದೆನಾದರೆ ನಾನು ಯಾವ ಕೆಲಸಕ್ಕೂ ಬರಲಾರೆ. ಅರಸನಿಗೆ ನಾನೇ ಮುಖ್ಯ ಪ್ರಧಾನನಾಗಬೇಕೆಂಬ ಕೃಪೆಯನ್ನು ಪಡೆಯಬೇಕಾದರೆ ಇದೇ ಉಪಾಯ ಎಂಬುದನ್ನು ತಿಳಿದು ಇದನ್ನು ದೊಡ್ಡದು ಮಾಡಿ ಹೇಳುವೆ ಎಂದು ದವನಕ ದೃಢನಿಶ್ಚಯಮಾಡಿ ಅಲ್ಲಿಂದ ಹೊರಟನು. ಸತತಗತಿವೇಗದಿಂದ ಪರಿಚಿತಮಾರ್ಗದಲ್ಲಿ

ವ|| ಅಂತು ಕಂಡು ವಿನಯವಿನಮಿತೋತ್ತಮಾಂಗನಾಗಿ ದಮನಕಂ ಸಮುಚಿತಾಸನದೊಳ್ ಕುಳ್ಳಿರ್ದಿಂತೆಂದಂ :

ವನಮಾತಂಗಘಟಾಮ-
ರ್ದನ ಶಬ್ದಶ್ರವಣಮಾತ್ರದಿಂದಂ ನೀಂ ಪೇ-
ಳ್ದನಿತರ್ಕಮಗ್ಗಳಂ ದೇ-
ವ ನಿಶ್ಚಯಂ ಬಗೆವೊಡವನ ರೌದ್ರಾಕಾರಂ ೯೫

ವ|| ಆ ಮಹಾರೌದ್ರಭದ್ರಾಕಾರನ ಪೊಡರ್ಪಿನಾರ್ಪಿನಳವಿಗಜಿದು ದರ್ಪಮಂ ಪೇೞ್ವೊಡೆ ಕಾಳಿಂದಿಯ ಮಡುವನಿರ್ಬಗೆಯಾಗಿ ಪಾಯ್ದು ಕದಡುವಿನಂ ಜಲಕೇಳಿಯಾಡಿ ಪೊಜಮಟ್ಟು ನಿಂದು ಜಾತಹರ್ಷನಾಗಿ ಬೆಟ್ಟುಗಳ್ ಬರಿಯೆ ನಿಷ್ಠುರಧ್ವಾನಂಗೆಯ್ದು ಮೇದಿನಿಯನೆತ್ತಿದಾದಿವರಾಹನಂತೆ ದರಿಗಳಂ ಕೋಡೊಳ್ ಕುತ್ತಿಯೆತ್ತಿ ಬಿದಿರ್ದೀಡಾಡತಿರ್ದು ಕಟ್ಟಿಗಟ್ಟುವಂತಾಗಿ ಜಗುನೆಯಲ್ಲಿ ಪರಿಪರಿದು ಬೇಗಂ ಮಾಣ್ದೆರೆಯುಂ ಮತ್ತಂ ಪುಟಿ ಸೊಕ್ಕಿ ಕೊಣಕುತುಂ ಪಾಜೆ ದೆಸೆದೆಸೆಗೆ ಪರಿಮ ಪಿರಿಯ ಮರಂಗಳನುಜದೆ ಕೊಂಡು ನೂಂಕಿ ಪೊತ್ತುಂ ಪರಿಯುತ್ತುಂ ಪೊಣರ್ದುದ್ದಂ ನೆಗೆದು ಕುನುಂಗಿ ಭರದಿಂ ತಲೆಯೆತ್ತಿಯುರ್ಬಿ ನಭಮಂ ನುಂಗಲೊಡರ್ಚಿದಂತೆ ಮೇಘಮಂ ನೋಡಿ ದೆಸೆದೆಸೆಯಂ ವಾಸಿಸಿ ನೆಲವರಿದು ಪ್ರಾಣಿಗಳೊಳ್ ತನಗದಿರದಿದಿರಾಂಪರೊರ್ವರುಮಂ ಕಾಣದೆ ಸಮುಸ್ತಸಮುದ್ರಮುದ್ರಿತಮೇದಿನಿಯನಡಿಗೊಳಂಗಿನೊಳ್ ಮಡಂಗಿರಿಸಲ್ಬಗೆದು ಗರ್ವಪರ್ವತಾರೂಢನಾಗಿ ಪರ್ವತಮಂ ತಾಗೆ ಬೇಗದೊಳ್ ಕೆಡೆವ ಕೋಡುಂಗಲ್ಗಳಂ ಕೋಡೊಳಾಂತೀಡಾಡುತ್ತುಂ ಜಗದ ಮೃಗಮೆಲ್ಲಮಂ ಜವನೆ ನೆವಮಿಟ್ಟು ನುಂಗಲುಂ ನೊಣೆಯಲುಂ ಪುಟ್ಟಿದಂತಪ್ಪ ಮಹಾದ್ಭುತಮನಭೂತಪೂರ್ವಮಂ

ಹಿಂದಿರುಗಿ ಬಂದು ಆ ಮೃಗಧೂರ್ತನು ಮೃಗಪತಿಯನ್ನು ಸೇರಿದನು. ದಮನಕನು ವಿನಯವಿನಮಿತ ಉತ್ತಮಾಂಗನಾಗಿ ಉಚಿತಾಸನದಲ್ಲಿ ಕುಳಿತು ಹೀಗೆಂದ ; ವನಮಾತಂಗಘಟಾಮರ್ದನ! ಶಬ್ದ ಶ್ರವಣಮಾತ್ರದಿಂದಲೇ ನೀನು ಕಲ್ಪಿಸಿಕೊಂಡ ಅವನ ರೌದ್ರಾಕಾರ ನಿಜವಾಗಿಯೂ ಅದಕ್ಕಿಂತ ಹಿರಿದಾದುದು. ಆ ಮಹಾರೌದ್ರಭದ್ರಾಕಾರನ ಸಾಮರ್ಥ್ಯವನ್ನು ವರ್ಣಿಸಲು ಅಸಾಧ್ಯ. ಕಾಳಿಂದೀನದಿಯನ್ನು ಎರಡುಭಾಗವಾಗುವಂತೆ ನುಗ್ಗಿ ಅದು ಕದಡಿ ಹೋಗುವಂತೆ ಜಲಕೇಳಿಯಾಡಿ ಹರ್ಷಚಿತ್ತನಾಗಿ ನಿಂತು ಬೆಟ್ಟಗಳು ಮೇದಿನಿಯನ್ನು ಎತ್ತಿದ ಆದಿವರಾಹನಂತೆ ಕಂದರಗಳನ್ನು ಕೋಡುಗಳಿಂದ ಕುತ್ತಿ ಎತ್ತಿ ಚೆಲ್ಲುವನು. ಯಮುನೆಯಲ್ಲಿ ಬಿರಿಯುವಂತೆ ನಿಷ್ಠುರಧನಮಾಡಿ ಸ್ನಾನಮಾಡಿ ಮೇಲೆದ್ದು ಸೊಕ್ಕಿ ದಿಕ್ಕು ದಿಕ್ಕಿಗೆ ಹಾರಿ ದೊಡ್ಡ ದೊಡ್ಡ ಮರಗಳನ್ನೂ ಲಕ್ಷ್ಯಮಾಡದೆ ನೂಕುವನು. ಆಕಾಶವನ್ನೇ ನುಂಗುವೆನೆಂಬಂತೆ ಮೋಡಗಳನ್ನು ನೋಡಿ ದಿಕ್ಕುಗಳನ್ನು ಮೂಸಿ ಪ್ರಾಣಿಗಳಲ್ಲಿ ತನಗೆ ಹೆದರದೆ ಪ್ರತಿಭಟಿಸುವ ಒಬ್ಬರನ್ನೂ ಕಾಣದೆ ಸಮಸ್ತಸಮುದ್ರಮುದ್ರಿತಮೇದಿನಿಯನ್ನು ತನ್ನ ಕಾಲಿನ ಗೊರಸಿನಡಿಯಲ್ಲಿ ಇಟ್ಟುಕೊಳ್ಳಬೇಕೆಂದು ಗರ್ವಪರ್ವತಾರೂಢನಾಗಿ ಪರ್ವತವನ್ನು ಅಪ್ಪಳಿಸಿದನು. ಆಗ ಬಿದ್ದ ಕೋಡುಗಲ್ಲುಗಳನ್ನು ತನ್ನ ಕೊಂಬುಗಳಲ್ಲಿ ಧರಿಸಿದನು. ಜಗತ್ತಿನಲ್ಲಿರುವ ಮೃಗಗಳನ್ನೆಲ್ಲ ಯಮನೇ ನುಂಗಿ ನೀರುಕುಡಿಯಲು ಹುಟ್ಟಿದಂತಹ ಮಹಾದ್ಭುತನೂ, ಅಭೂತಪೂರ್ವನೂ ಆಗಿ ರುದ್ರನ ಭದ್ರವೃಷಭನನ್ನು ಅನುಕರಿಸು ವಂತಿರುವುದನ್ನು ನಾನು ಕಂಡೆ ಎಂದು ಮಹಾದ್ಭುತ ಭಯರೌದ್ರ ಭಯಾನಕ

ರುದ್ರನ ಭದ್ರ ವೃಷಭನನಿನಿಸನುಕರಿಸುವುದುಮಂ ಕಂಡೆನೆಂದು ಮಹಾದ್ಭುತಭಯರೌದ್ರ ಭಯಾನಕವೀರರಸಂಗಳನೆ ಕಪಟಕ್ರಿಯೆಯಿಂ ಪಿರಿದುಮಾಡಿ ಪೇೞ್ವುದುಂ; ಪಿಂಗಳಕಂ ಭಗ್ನಮನನಾಗಿ ಕಿಱಿದು ಬೇಗಂ ಪಂದೆಯಂ ಪಾವಡರ್ದಂತೆ ಮೇಗುಸಿರ್ವಿಟ್ಟು ಪಮ್ಮಿದಂಬೋಗಿ ಮುಮ್ಮನೆ ಬೆಮರ್ತು ತನ್ನಿಂ ತಾ ಚೇತರಿಸಿ ಕಾತರತೆಯಂ ಮಾಣ್ದು ದವನಕಂಗೆ ಪಿಂಗಳಕನಿಂತೆಂದಂ:

> ಇಂತಪ್ಪ ರೌದ್ರನುಂ ಕ-
> ಲ್ಪಾಂತಕನಪ್ರತಿಮನಪ್ಪನುಂ ನಿನ್ನಂ ಕಂ-
> ಡೆಂತು ಕಡೆಗಣಿಸಿ ಕೊಲ್ಲದೆ
> ಸಂತಂ ಬರಲಿತ್ತನದಱ ತೆಱನಂ ಪೇೞಾ ೯೬

ವ॥ ಎನೆ ದವನಕನಿಂತೆಂದಂ :

> ಅತುಲಬಲ ವಿಕ್ರಮ ಪ್ರಾ-
> ನ್ವಿತನಸಮರ್ಥಂಗೆ ಮುನಿಯಲೞೆಗುಮೆ ಅಧಿಕೋ-
> ನ್ನತಗಜನಿವಹಂ ಭೂಜ-
> ಪ್ರತತಿಯನುಡಿವಂತೆ ಪುಲ್ಲನೇನುಡಿದಪುದೇ ೯೭

ಶ್ಲೋ॥ ತೃಣಾನಿ ನೋನ್ಮೂಲಯತಿ ಪ್ರಭಂಜನೋ ಮೃದೂನಿನೀಚೈಃ ಪ್ರಣತಾನಿ ಸರ್ವತಃ ಸಮುಚ್ಛ್ರಿತಾನೇವ ತರೂನ್ ಪ್ರಬಾಧತೇ ಮಹಾನ್ ಮಹತ್ಸ್ವೇವ ಕರೋತಿ ವಿಗ್ರಹಂ ॥೧೮॥

ಟೀ॥ ಪವನಂ ಪೆರ್ಚಿದ ಮಹಾವೃಕ್ಷಂಗಳಂ ಕೀೞ್ವುದಲ್ಲದೆ ಮೃದುವಪ್ಪ ತೃಣಂಗಳಂ ಕೀೞದು ; ಅದೆಂತೆನೆ, ನೀಚಂಗಳಾಗಿ ತಲೆವಾಗಿರ್ಪ ಕಾರಣಂ, ಸತ್ವಾಧಿಕರುಂ ತಮ್ಮ ಪರಾಕ್ರಮವನಧಿಕ ಬಲರೊಳಲ್ಲದೆ ನೀಚರಲ್ಲಿ ಮಾಡರ್. ಅದಲ್ಲದೆ,

> ಶ್ಲೋ ॥ ಗಂಡಸ್ಥಲೇ ಮದಜಲೇ ಮದವಾರಿ ಲೋಭ
> ಮತ್ತಭ್ರಮದ್ಭ್ರಮರಪಾದ ತಲಾಹತೋಽಪಿ
> ಕೋಪಂ ನ ಗಚ್ಛತಿ ನಿತಾಂತಬಲೋಽಪಿ ನಾಗ-
> ಸ್ತುಲ್ಯಂ ಬಲೇನ ಬಲಿನಃ ಪ್ರತಿಕೋಪಯಂತಿ ॥೧೯॥

ವೀರರಸಗಳನ್ನು ಕಪಟಕ್ರಿಯೆಯಿಂದ ದೊಡ್ಡದು ಮಾಡಿ ಹೇಳಿದನು. ಇದನ್ನು ಕೇಳಿದ ಪಿಂಗಳಕನು ಭಗ್ನಮನಸ್ಕನಾಗಿ ಸ್ವಲ್ಪಹೊತ್ತಿನಲ್ಲೇ ಹೇಡಿಯನ್ನು ಹಾವು ಅಡರಿದಂತೆ ಮೇಲುಸಿರು ಬಿಟ್ಟು ಮೂರ್ಛೆಹೋಗಿ ಬೆವರಿ ತನ್ನಿಂದ ತಾನೇ ಚೇತರಿಸಿಕೊಂಡು ಕಾತರತೆಯಿಂದ ಸಂವರಿಸಿಕೊಂಡು ದವನಕನಿಗೆ ಹೀಗೆಂದನು : ಇಂತಹ ರೌದ್ರನೂ ಕಲ್ಪಾಂತಕನ ಸಮನಾದವನೂ ಆದ ಅವನು ನಿನ್ನನ್ನು ಕಂಡು ಹೇಗೆ ಕೊಲ್ಲದೆ ಸುಮ್ಮನೆ ಬಿಟ್ಟನೆಂಬುದನ್ನು ತಿಳಿಸು. ವ॥ ಆಗ ದವನಕನು ಹೇಳಿದನು : ೯೭. ಅತುಲಬಲ ವಿಕ್ರಮನಾದವನು ಅಸಮರ್ಥನ ಮೇಲೆ ಬೀಳುವುದುಂಟೇ? ಅಧಿಕೋನ್ನತಗಜನಿವಹವು ವೃಕ್ಷ ಸಮೂಹವನ್ನು ಕೆಡೆಯುವುದಲ್ಲದೆ ಹುಲು ಹುಲ್ಲನ್ನು ಕೀಳುವುದೇ ? ಶ್ಲೋ॥ ಬಿರುಗಾಳಿಯು ಕೊಬ್ಬಿ ನಿಂತ ಮಹಾವೃಕ್ಷಗಳನ್ನು ಕೀಳುವುದಲ್ಲದೆ ಕೋಮಲವಾದ ತೃಣಗಳನ್ನು ಕೀಳದು. ಹುಲ್ಲು ನೆಲಕ್ಕೆ ತಾಗುವಂತೆ ತಲೆಯನ್ನು ಬಾಗಿಕೊಂಡಿರುತ್ತದೆ. ಸತ್ವಾಧಿಕರೂ ತಮ್ಮ ಪರಾಕ್ರಮವನ್ನು ಅಧಿಕಬಲರಲ್ಲಲ್ಲದೆ ನೀಚರಲ್ಲಿ ಪ್ರದರ್ಶಿಸರು. ಅಲ್ಲದೆ, ಶ್ಲೋ॥ ಕಪೋಲ ಸ್ಥಳದಲ್ಲಿಯ ಮದೋದಕಲೋಭದಿಂದ ಸೊಕ್ಕಿ ಸುಳಿಯುತ್ತಿರುವ

ಟೀ॥ ಮದದಿಂ ಮನೋಹರವಹ ಕಪೋಲಸ್ಥಳದಲ್ಲಿಯ ಮದೋದಕಲೋಭದಿಂ ಸೊಕ್ಕಿಂ ತಿರುಗುತಿರ್ಪ ತುಂಬಿಗಳ್ ಪಾದತಳದಿಂದೊದೆದೊಡಂ ಆ ಹಸ್ತಿ ಅತಿಬಲನಾದೊಡಂ ಕೋಪಮನೆಯ್ದದು. ಅದೆಂತೆನೆ, ಬಲವಂತರಪ್ಪರ್ ಸದೃಶಬಲರೊಡನೆ ಕೋಪಮಂ ಮಾಳ್ಪರ್. ಎಂಬೀ ನೀತಿವಾಕ್ಯಮುಂಟಪ್ಪುದರಿಂದೆನ್ನಂತಪ್ಪ ಕ್ಷುದ್ರಂಗೆಂತುಂ ಮುಳಿವನಲ್ಲೆನೆ : ಪಿಂಗಳಕನಿಂತೆಂದಂ ನೀನೆಂದಂತೆ ತಪ್ಪದು, ಇನ್ನದಂತಿರ್ಕೆ, ಮುನ್ನಮಾಂ ನಿನಗೇನೆಂದು ಪೇಳ್ದೊಡಂ ನಂಬದೆ ನೀನೇ ಪೋಗಿ ನೋಡಿ ಬಂದೆ, ಇನ್ನೇಗೆಯ್ವಂ ಪೇಳೆನೆ, ದವನಕನಿಂತೆಂದಂ : ದೇವರೆಂದಂತೆ ಶತ್ರು ಬಲವಂತನಾದೊಡಂ ಸಂಧಿ ವಿಗ್ರಹ ಯಾನಾಸನಸಂಶ್ರಯದ್ವೈಧೀಭಾವ ಷಾಡ್ಗುಣ್ಯಂಗಳೆಂಬ ನಯಂಗಳೊಳಂ ಸಾಮ ಭೇದ ದಾನ ದಂಡಗಳೆಂಬ ಚತುರೋಪಾಯಂಗಳೊಳಂ ಮತ್ತಮನೇಕ ವಿಧದೊಳಂ ಶತ್ರುವನುದಾಸೀನನಂ ಮಾಡಲುಂ ಉದಾಸೀನನಂ ಮಿತ್ರನಂ ಮಾಡಲುಂ ಮಿತ್ರನನಾತ್ಮಾಯತ್ತನಂ ಮಾಡಲುಮಾನರಿವೆನಾಗಿ ನಿನಗಾಯತ್ತಂ ಮಾಡುವೆನೆನೆ, ಮೃಗೇಂದ್ರನೆಂದಂ : ಮಂತ್ರಂ ದಿವ್ಯಗ್ರಹಕ್ಕಲ್ಲದೆ ಅಪಸ್ಮಾರಗ್ರಹಕ್ಕಾಗದಂತೆ ನೀ ಪ್ರಯೋಗಿಸುವ ಮಂತ್ರದಿಂ ಸಾಧ್ಯವಾಗಲರಿಯನುಮವನತಿದರ್ಪನುಂ ದುಷ್ಟನುಮಸಾಧ್ಯನುಮಭೇದ್ಯನುಮೆಂದು ನೀನೆ ಪೇಳ್ದೆ, ಅಂತುಮಲ್ಲದೆಯುಂ,

ಶ್ಲೋ ॥ ಸರ್ಪಃ ಕ್ರೂರಃ ಖಳಃ ಕ್ರೂರಃ ಸರ್ಪಾತ್ ಕ್ರೂರತರಃ ಖಳಃ
ಮಂತ್ರೌಷಧಿವಶಸ್ಸರ್ಪಃ ಖಳಃ ಕೇನೋಪಶಾಮ್ಯತಿ ॥೨೦॥

ಟೀ॥ ಸರ್ಪನುಂ ಖಳನುಂ ಕ್ರೂರಮಾದೊಡಂ ಸರ್ಪನಿಂದಂ ಖಳನೇ ಕ್ರೂರಂ. ಅದೆಂತೆಂದೊಡೆ ಮಂತ್ರೌಷಧಗಳಿಂದ ಸರ್ಪನಂ ವಶಂಗೆಯ್ಯಲಕ್ಕುಮಾ ದುರ್ಜನನೇತರಿಂದಂ ಶಾಂತನಾಗಂ ಎಂಬ ನೀತಿಯುಂಟು. ಇಂತಪ್ಪ ಖಳನನೆಂತೊಡಂಬಡಿಸಿದಪೆ ಎನೆ ದವನಕನೆಂದಂ : ಅವನೆಂತುಮೆನ್ನಂ

ತುಂಬಿಗಳು ತಮ್ಮ ಕಾಲುಗಳಿಂದ ಒದೆದರೂ ಮದ್ದಾನೆ ಅತಿಬಲನಾದರೂ ಕೋಪಿಸದು. ಬಲವಂತರು ಸಮಾನಬಲರಲ್ಲಿ ಮಾತ್ರ ಸೆಣಸುವರು ಎಂಬ ನೀತಿವಾಕ್ಯವುಂಟು. ಅದರಿಂದ ನನ್ನಂತಹ ಕ್ಷುದ್ರನ ಮೇಲೆ ಎಂತೂ ಕೋಪಿಸಲಾರನು. ಅದಕ್ಕೆ ಪಿಂಗಳಕ ಹೀಗೆಂದನು. ನೀನು ಹೇಳಿದ ಮಾತು ತಪ್ಪಲ್ಲ. ಇನ್ನು ಆ ಮಾತು ಹಾಗಿರಲಿ. ನಾನು ಮೊದಲು ಏನು ಹೇಳಿದರೂ ನೀನು ಒಪ್ಪದೆ ನೀನೇ ಹೋಗಿ ನೋಡಿ ಬಂದ ಮೇಲೆ ನಿನಗೆ ತಿಳಿಯಿತು. ಮುಂದೇನು ಮಾಡಬೇಕೆಂದು ಹೇಳು. ದವನಕನು ಹೇಳತೊಡಗಿದನು : ಅದರಿಂದ, ದೇವರು ಹೇಳಿದಂತೆ ಶತ್ರು ಪ್ರಬಲನಾಗಿದ್ದರೂ ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀಭಾವ ಎಂಬ ಷಾಡ್ಗುಣ್ಯಗಳೆಂಬ ನೀತಿಗಳಿಂದಲೂ, ಸಾಮ ಭೇದ ದಾನ ದಂಡಗಳೆಂಬ ಚತುರುಪಾಯಗಳಿಂದಲೂ, ಇನ್ನೂ ಅನೇಕ ಉಪಾಯಗಳಿಂದಲೂ ಶತ್ರುವನ್ನು ಉದಾಸೀನನನ್ನಾಗಿಯೂ ಮಿತ್ರನನ್ನಾಗಿಯೂ, ಮಿತ್ರನನ್ನು ಆತ್ಮೀಯನನ್ನಾಗಿಯೂ ಮಾಡಬಲ್ಲೆ. ಮೃಗೇಂದ್ರನು ನುಡಿದನು : ಮಂತ್ರವು ದಿವ್ಯಗ್ರಹಕ್ಕಲ್ಲದೆ ಅಪಸ್ಮಾರಗ್ರಹಕ್ಕೆ ಆಗದಂತೆ ನೀನು ಪ್ರಯೋಗಿಸುವ ಮಂತ್ರದಿಂದ ಸಾಧ್ಯವಾಗದು. ಅವನು ಅತಿದರ್ಪಿಷ್ಟನೂ, ದುಷ್ಟನೂ, ಅಭೇದ್ಯನೂ ಎಂದು ನೀನೇ ಹೇಳಿದಿಯಲ್ಲವೇ? ಶ್ಲೋ॥ ಸರ್ಪ - ಖಳರಲ್ಲಿ ಇಬ್ಬರೂ ಕ್ರೂರರಾದರೂ ಸರ್ಪಕ್ಕಿಂತ ಖಳನೇ ಕ್ರೂರ, ಮಂತ್ರೌಷಧಗಳಿಂದ ಸರ್ಪವನ್ನು ವಶಪಡಿಸಿಕೊಳ್ಳಬಹುದು. ದುರ್ಜನ ಯಾರಿಗೂ ಯಾರಿಂದಲೂ ಶಾಂತನಾಗಲಿಕ್ಕಿಲ್ಲ ಎಂಬ ನೀತಿಯುಂಟು. ಆದರೆ ಇಂತಹ ಖಳನನ್ನು

ನಂಬನಾದೊಡಮುಪಾಯಕುಶಲರಪ್ಪವರ್ ಮದಕರಿಗಳಂ ಸೂಕರಗಳಂ ಕಟ್ಟುವಂತೆ ಮನದೊಳ್ ಪಗೆಯಂ ಮನದಿಂ ಮುನ್ನಮಶ್ರಮದಿಂದಮೆ ಮುಟ್ಟಲುಂ ಪರಕಾಯಪ್ರವೇಶಗೆಯ್ಯಲುಂ ದೇಹಲೋಹಮೆಂಬೆರಡುಮಂ ಸಿದ್ಧರಸವಿದ್ಯೆಯಿಂ ಸುವರ್ಣಚ್ಛಾಯಂ ಮಾಡಲುಂ ಅಕೂಪಾರಮಂ ಪಾಯಲುಂ ಇಂತಪ್ಪುಪಾಯಂಗಳಂ ಪಲವಂ ಮಾದಿದರದಱಂ ನಿನಗಪ್ರತಿಮಲ್ಲನಪ್ಪ ಬಲ್ಲಳಂ ನಿನ್ನಲ್ಲಿಗೆವಂದಸ್ಮದಾದಿಗಳಪ್ಪ ಭೃತ್ಯರೋಳಿಯೊಳ್ ಭೃತ್ಯಭಾವಮಂ ನೆಗಳ್ವಂತೆಮಾಡಿ ಎನ್ ಮಂತ್ರಶಕ್ತಿಯನಿಲ್ಲಿ ಬಲ್ಲ ಮಾಟ್ಕೆಯಿಂ ಮೆಱೆವೆನೆಂದು ನುಡಿದದವನಕನ ವಿನಯೋಕ್ತಿಗಳ್ಗೆ ಪಿಂಗಳಕಂ ಸಂತಸಂಬಟ್ಟು,

> ಚಳದಳಕಂ ಹರ್ಷೋದ್ಗತ
> ಪುಳಕಂ ನಖಮುಖವಿದಾರಿತೋಗ್ರೇಭ ಶಿರಃ
> ಫಳಕಂ ಮೃಗತಿಳಕಂ ಪಿಂ-
> ಗಳಕಂ ಪೋಗೆಂದು ಕಳುಪಿದಂ ದವನಕನಂ ೯೮

ಎಂದು ಕಳಿಪ್ಪುವುದುಂ ದವನಕಂ ಮಹಾಪ್ರಸಾದಮೆಂದು ತ್ವರಿತಗತಿಯಿಂ ಸಂಜೀವಕ ನಿರ್ದೆಡೆಯನೆಯ್ದಿವಂದು ಎಟ್ಟೆಪ್ಪುದನಱೆದೆಂತಿರ್ದೊಡಮೆಂತು ನೋಡಿದೊಡಂ ತನಗೆ ಭಯಮಿಲ್ಲೆಂಬುದನಱೆದಿಂತೆಂದಂ : ಈ ಮಹಾಟವಿಯೊಳಿರ್ದನ್ನಾಳ್ದನಪ್ಪ ಮೃಗಾಧಿರಾಜಂ ಪಿಂಗಳಕನಂ ಕಾಣದೆಯುಂ ಆಳ್ದನಕ್ಕೆ ಪೂಣದೆಯುಮಿಲ್ಲಿ ನಿನ್ನ ಬಾಳ್ವುಪಾಯಮಾವುದೆನೆ, ಸಂಜೀವಕನೆಂದಂ : ಪಿಂಗಳಕನೆಂಬಾತನಾರ್? ಆತನಂ ಕಂಡಱೆಯೆಂ, ಎಲ್ಲಿರ್ದಪನೆನೆ, ದವನಕನಿಂತೆಂದಂ :

ನೀನು ಹೇಗೆ ಒಡಂಬಡಿಸುವೆ ? ಅದಕ್ಕೆ ದವನಕನೆಂದ : ಹೇಗಿದ್ದರೂ ಅವನು ನಮ್ಮನ್ನು ನಂಬುವುದಿಲ್ಲ. ಆದರೂ ಉಪಾಯಕುಶಲರಾದವರು ಮದ್ದಾನೆಗಳನ್ನೂ ಕಾಡುಹಂದಿಗಳನ್ನೂ ಹಿಡಿಯುವಂತೆ ಮನಸ್ಸಿನಲ್ಲೇ ಹಗೆಯ ಇಂಗಿತವನ್ನು ತಿಳಿಯಲೂ ಪರಕಾಯಪ್ರವೇಶಮಾಡಲೂ ದೇಹವೆಂಬ ಲೋಹವನ್ನು ಸಿದ್ಧರಸವಿದ್ಯೆಯಿಂದ ಸುವರ್ಣವನ್ನಾಗಿ ಮಾಡಲೂ ಸಮುದ್ರವನ್ನು ಉತ್ತರಿಸಲೂ ಮೊದಲಾದ ಇಂಥ ಅನೇಕ ಉಪಾಯಗಳನ್ನು ಮಾಡಿದರು. ಅದರಿಂದ, ನಿನಗೆ ಅಪ್ರತಿಮಲ್ಲನಾದ ಸಮರ್ಥನನ್ನು ನಿನ್ನಲ್ಲಿಗೆ ಬರುವಂತೆ ಮಾಡಿ ನಿಮ್ಮ ಭೃತ್ಯರ ಸಾಲಿನಲ್ಲಿ ಭೃತ್ಯಭಾವವನ್ನು ಸ್ವೀಕರಿಸುವಂತೆ ಮಾಡಿ ನನ್ನ ತಂತ್ರಶಕ್ತಿಯನ್ನು ಇಲ್ಲಿ ನನ್ನಿಂದ ಸಾಧ್ಯವಾದಷ್ಟು ಬಗೆಗಳಿಂದ ಮೆರೆಯಿಸುವೆನು. ದವನಕನ ಈ ವಿನಯೋಕ್ತಿಯನ್ನು ಕೇಳಿ ಪಿಂಗಳಕನಿಗೆ ಅತ್ಯಂತ ಸಂತಸವಾಯಿತು. ೯೮. ಅಲ್ಲಾಡುವ ಮುಂಗುರುಳುಗಳುಳ್ಳವನೂ, ಹರ್ಷದಿಂದ ಪುಳಕಿತನಾದವನೂ, ಭಯಂಕರವಾದ ಆನೆಯ ಕುಂಭಸ್ಥಳವನ್ನು ನಖಮುಖದಿಂದ ಸೀಳಿದವನೂ ಆದ ಮೃಗಶ್ರೇಷ್ಠನಾದ ಪಿಂಗಳಕನು ದವನಕನನ್ನು ಹೋಗು ಎಂದು ಕಳುಹಿಸಿದನು. ವ॥ ದವನಕನು ಮಹಾಪ್ರಸಾದವೆಂದು ತ್ವರಿತಗತಿಯಿಂದ ಸಂಜೀವಕನಿದ್ದೆಡೆಗೆ ಬಂದು ಎತ್ತಾಗಿರುವುದನ್ನು ತಿಳಿದು ಹೇಗಿದ್ದರೂ, ಹೇಗೆ ನೋಡಿದರೂ ನನಗೆ ಭಯವಿಲ್ಲ ಎಂದು ದೃಢ ಪಡಿಸಿಕೊಂಡನು. ಈ ಮಹಾರಣ್ಯದಲ್ಲಿರುವ ನನ್ನ ಒಡೆಯ ಮೃಗಾಧಿರಾಜನಾದ ಪಿಂಗಳಕನನ್ನು ಕಾಣದೆ , ಅವನ ಭೃತ್ಯನಾಗಿರದೆ ನೀನು ಬಾಳುವ ಬಗೆಯೇನು ? ಎಂದು ದವನಕನು ಕೇಳಿದನು. ಅದಕ್ಕೆ ಸಂಜೀವಕನು, ಪಿಂಗಳಕನೆಂಬವನು, ಯಾರು, ಅವನ ಪರಿಚಯ ನನಗಿಲ್ಲ, ಅವನೆಲ್ಲಿರುವನು ಎಂದು ಕೇಳಿದನು. ದವನಕನು ಹೇಳತೊಡಗಿದನು:

ಪ್ರಕಟೀಭೂತ ಪರಾಕ್ರಮಕ್ರಮನನುಗ್ರಾಟೋಪನಂ ಶ್ವಾಪದ
ಪ್ರಕರಾಧೀಶ್ವರಚಕ್ರವರ್ತಿಯನರಣ್ಯಾನೀಮಹೀಚಕ್ರರ-
ಕ್ಷಕನಂ ನೀನಜೆವ್ಯೆ ಮದಾವಿಳ ಗಳ ಪ್ರೋತ್ತುಂಗ ಮಾತಂಗ ಮ
ಸ್ತಕ ಮಸ್ತಿಷ್ಕ ರಸಾರ್ದ್ರ ರೌದ್ರನಖರಶ್ರೇಣೀಪ್ರಭಾಭಾಸಿಯಂ ೯೯

ಬಳಸಿಯುಮೆತ್ತಮೋಲಗಿಪ ವಿಶ್ವ ಮೃಗಾವಳಿಯಾಧಿಪತ್ಯಮಂ
ತಳೆದು ಮಹಾವಿಭೂತಿವೆರಸಾದರದಿಂದ ಮಹಾವಿಶಾಲಮಂ-
ಡಳವಟಭೂರಿಭೂರುಹದ ತಣ್ಣೆಳಲೊಳ್ ಮದವಾರಣಾರಿ ಪಿಂ-
ಗಳಕನಖಂಡ ಚಂಡಭುಜ ವಿಕ್ರಮಮಂಡನನಿರ್ದನಲ್ಲವೇ ೧೦೦

ವ॥ ಎಂದು ಮಂದರಕ್ಷುಭಿತಪಯೋಧಿನಾದದಿಂ ಗಜಱೆ ಗರ್ಜಿಸಿ ನುಡಿದ ದವನಕನ ಗಭೀರಾಳಾಪಂಗಳಂ ಸಂಜೀವಕಂ ಕೇಳ್ದು ಕಿಱಿದುಬೇಗಂ ವಿಸ್ಮಯಂಬಟ್ಟು, ಈ ನರಿ ಪೇೞ್ದ ಪಿಂಗಳಕನೆಂಬುದು ಸಿಂಹಮಾಗಲೆವೇೞ್ಕುಂ, ಆ ಸಿಂಗಂ ಮತ್ತಮಾತಂಗಯೂಥಕ್ಕಲ್ಲದೆ ಕೇವಲ ಪ್ರಾಣಿ ಮಾತ್ರಕ್ಕೆ ಮುಳಿಯನೆಂಬುದು ಲೋಕಪ್ರಸಿದ್ಧಂ, ಅಂತಪ್ಪುದೆನಗೆ ಮುಳಿಯದದೆಂತೆನೆ,

ಶ್ಲೋ ॥ ಆಸನ್ನೇಪಿ ನ ಸಾರಂಗೇ ಕರೋತ್ಯಾಶಾಂ ಮೃಗಾಧಿಪಃ
ಉತ್ತುಂಗಮತ್ತಮಾತಂಗಮಸ್ತಕನ್ಯಸ್ತಲೋಚನಃ ॥೨೧॥

ಟೀ॥ ಸಮೀಪದೊಳ್ ಸಾರಂಗಮಿರ್ದೊಡಂ ಸಿಂಹಮೊಂದುಂ ಕಾಂಕ್ಷಿಸದು ಮದಸೊರ್ಕಿದಾನೆಯ ಮಸ್ತಕದ ಮೇಲೆ ದಿಟ್ಟಿ ನಟ್ಟಿರ್ಪುದು – ಎಂಬೀ ಶ್ಲೋಕಾರ್ಥದಿಂ ಮೃಗಾಧಿರಾಜನೆನಗೆ ಮುಳಿಯನಾದೊಡಂ ಮೃಗಧೂರ್ತನನಪಜ್ಞೆಗೆಯ್ವುದುಚಿತಮಲ್ಲ ಎಂತುಂ.

ವಾಕ್ಯಂ ॥ ತೃಣಮಪಿ ಪುರುಷೋ ನಾವಮನ್ಯೇತ

೯೯. ಪರಾಕ್ರಮದ ಪಾದಗಳನ್ನು ಪ್ರಕಟಪಡಿಸಿದವನು ಭಯಂಕರ ಆಟೋಪನೂ, ಪ್ರಾಣಿಗಳ ಸಮೂಹದ ಒಡೆಯರಿಗೆ ಚಕ್ರವರ್ತಿಯೂ ಅರಣ್ಯದಿಂದ ಕೂಡಿದ ಮಹೀಮಂಡಲಕ್ಕೆ ರಕ್ಷಕನೂ ಮದಜಲ ಸೋರುತ್ತಿರುವ ದೊಡ್ಡ ಆನೆಯ ಕುಂಭಸ್ಥಳದ ರಕ್ತದಿಂದ ಭಯಂಕರವಾದ ಉಗುರುಗಳ ಸಮೂಹದ ಕಾಂತಿಯಿಂದ ಹೊಳೆಯುತ್ತಿರುವವನೂ ಆದವನನ್ನು ನೀನು ತಿಳಿದುಕೊಳ್ಳುವೆ. ೧೦೦. ವಿಶ್ವಮೃಗಾವಳಿಯ ಆಧಿಪತ್ಯವನ್ನು ಪಡೆದು ಮಹಾವೈಭವದಿಂದ ವಿಶಾಲ ವಟವೃಕ್ಷದ ತಂಪಾದ ನೆರಳಿನಲ್ಲಿ ಪಿಂಗಳಕನೆಂಬವನು ಅಖಂಡಚಂಡಭುಜವಿಕ್ರಮ ಮಂಡನನೆನಿಸಿರುವನು. ವ॥ ಹೀಗೆ ಮಂದರಕ್ಷುಭಿತಪಯೋಧಿನಾದದಿಂದ ಗರ್ಜಿಸಿ ನುಡಿದ ದವನಕನ ಗಂಭೀರವಾದ ಮಾತನ್ನು ಸಂಜೀವಕನು ಕೇಳಿ ಸ್ವಲ್ಪಹೊತ್ತಿನಲ್ಲಿಯೇ ಆಶ್ಚರ್ಯಚಕಿತನಾದನು. ಈ ನರಿ ಹೇಳಿದ ಪಿಂಗಳಕನೆಂಬವನು ಸಿಂಹವೇ ಇರಬೇಕು. ಅವನು ಮದ್ದಾನೆಗಳನ್ನಲ್ಲದೆ ಸಾಮಾನ್ಯ ಪ್ರಾಣಿಗಳನ್ನು ಹಿಂಸಿಸುವುದಿಲ್ಲ ಎಂಬ ವಿಚಾರ ಲೋಕಪ್ರಸಿದ್ಧವಾದುದು. ಶ್ಲೋ॥ ಸಮೀಪದಲ್ಲಿ ಸಾರಂಗವಿದ್ದರೂ ಸಿಂಹ ಎಂದಿಗೂ ಅದನ್ನು ಬಯಸದು. ಸೊಕ್ಕಿದಾನೆಯ ಮಸ್ತಕದ ಮೇಲೆಯೇ ಸದಾ ಅವನ ದೃಷ್ಟಿ ನೆಟ್ಟಿರುತ್ತದೆ. ಹೀಗೆ ಮೃಗರಾಜನು ನನಗೆ ಯಾವ ರೀತಿಯ ಕೇಡನ್ನು ಮಾಡುವವನಲ್ಲವಾದರೂ ಈ ಮೃಗಧೂರ್ತನನ್ನು ನಂಬುವುದು ಉಚಿತವಲ್ಲ. ವಾ॥ ಪುರುಷನು ಹುಲ್ಲನ್ನೂ ತುಚ್ಛೀಕರಿಸಬಾರದು. ಈತನನ್ನು

ಟೀ॥ ಪುರುಷನು ಹುಲ್ಲನ್ನುಂ ಕಷ್ಟಂ ಬಗೆಯಲಾಗದು ಎಂಬ ವಾಕ್ಯಾರ್ಥದಿಂದೀತನನು ದಾಸೀನಂ ಮಾಡಿ ಕಳಿಪಿದೆನಪ್ಪೊಡೇನಾನುಮಂ ಪುಸಿದು ಪಿಸುಣ್ಣೇೞ್ದಪಂ, ಪೇೞ್ವಾಗಳ್ ಪಿಸುಣರ ಮಾತಿಂಗೆ ಮುನಿ ಮೊದಲಾಗಿ ಮನದೊಳ್ ಮುನಿಗುಮೆಂಬೊಡೆ ಆ ಸಿಂಗಂ ಮುಳಿಯದೇ ಕಿರ್ಱುಮದಱಿಂದೀತನ ಮಾತಿಂಗೆ ತಕ್ಕ ಮಱುಮಾತಂ ನುಡಿದೊಡಂಬಡಿಸಿ ಕಳಿಪುವೆನೆಂದು ಸಂಜೀವಕಂ ದವನಕಂಗಿಂತೆಂದಂ : ನಿಮ್ಮರಸಂಗಾಳಾಗಲೇವೇೞ್ಕುಮೆಂದೆನ್ನಂ ನೀನಾಗ್ರಹಂಗೆಯ್ವಪೆ ವಿಚಾರಿಸಿ ನೋೞ್ಪೊಡರಸರ್ ವಿಷಮಸ್ವಭಾವರದೆಂತೆನೆ :

॥ ಪಿರಿಯಕ್ಕರ ॥ ಕುಲಜನಪ್ಪನಂ ಕುಲಹೀನನೆಂದಪರ್ ಕುಲಹೀನನಂ ಕುಲಜಾತನೆಂಬರ್
ಕಲಿಯಂ ಕಡುಪಂದೆಯೆಂದು ಮಾತಾಡುವರ್ ಕಡುಪಂದೆಯ ಕಲಿಯೆಂದು ನುಡಿವರ್
ಪಲಬರ್ ಜೀಯೆನೆ ನನ್ನಿಯಂ ನುಡಿವನಂ ಪುಸಿಗನೆಂಬರ್ ಪುಸಿವಾತುಗನಂ
ನೆಲದೊಳೀತನೆ ಪುಸಿಯಿಲ್ಲದವನೆಂಬರರಸುಗಳ್ಗಿದುನ್ನೈಜಗುಣಮಾಗಿರ್ಕುಂ ೧೦೧

ವ॥ ಮತ್ತಮದಲ್ಲದೆಯುಂ, ಅರಸುಗಳ್ಗೆ ವಿರಸಮದವಸರದೊಳ್ ಚಾಗಿಯಂ ಲುಬ್ಧನೆಂಬರ್, ಭೋಗಿಯಪ್ಪನಂ ಪೂಜೆಗನೆಂಬರ್, ಸೌಭಾಗ್ಯಮುಳ್ಳವನಂ ಪಾಣ್ಬನೆಂಬರ್ ; ತ್ಯಾಗಿಯಂ ಅರ್ಥದೂಷಕನೆಂಬರ್ ಅರ್ಥದೂಷಕನಂ ತ್ಯಾಗಿಯೆಂಬರ್ ; ಏಗೆಯ್ದುಂ ಪೆಱವೆಣ್ಗಾಟಿಸುವನಂ ಶುಚಿಯೆಂಬರ್ ; ಶುಚಿಯಂ ಅಶುಚಿಯೆಂಬರ್ ; ಧೂರ್ತನಂ ಛಾಂದಸನೆಂಬರ್ ; ಮೇಕುದೋಱೆ ಒರೊರ್ವರ ಗುಣಕ್ಕೆ ಮಚ್ಚರಿಸಿ ತೋಱುತ್ತಿರ್ಪರೀ ಕಾಲದರಸುಗಳ್ ಅದಲ್ಲದೆಯುಂ

ಉದಾಸೀನನಾಗಿ ಕಳುಹಿಸಿದರೆ ಏನಾದರೂ ಸುಳ್ಳು ಚಾಡಿ ಹೇಳಿಯಾನು. ಹೇಳುವಾಗ ಚಾಡಿಕೋರರ ಮಾತಿಗೆ ಮುನಿಗಳೇ ಮರುಳರಾಗಿ ಮುನಿಯುವರೆಂದರೆ ಆ ಸಿಂಹ ಮುನಿಯದಿರುವುದೇ ? ಆದುದರಿಂದ ಈತನ ಮಾತಿಗೆ ತಕ್ಕ ಉತ್ತರವನ್ನು ಹೇಳಿ ಹಿಂದೆ ಕಳುಹಿಸುವೆನು ಎಂದು ಸಂಜೀವಕನು ದವನಕನಿಗೆ ಹೀಗೆಂದ: ನಿಮ್ಮ ಅರಸನಿಗೆ ನಾನು ಆಳಾಗಬೇಕೆಂದು ನೀನು ನನ್ನನ್ನು ಆಗ್ರಹಪಡಿಸುತ್ತಿರುವೆ. ಅರಸರು ವಿಷಮಸ್ವಭಾವದವರು. ಕುಲಜನನ್ನು ಕುಲಹೀನನೆನ್ನುವರು; ೧೦೧. ಕುಲಹೀನನನ್ನು ಕುಲಜಾತನೆನ್ನುವರು. ಪರಾಕ್ರಮಿಯನ್ನು ಅತ್ಯಂತ ಹೇಡಿ ಎಂದು ಮಾತಾಡುವರು. ಕಡುಹೇಡಿಯನ್ನು ಪರಮ ಪರಾಕ್ರಮಿಯೆನ್ನುವರು. ಎಲ್ಲರೂ ಒಪ್ಪುವಂತೆ ಸತ್ಯವನ್ನು ನುಡಿಯುವವನನ್ನು ಹುಸಿಕನೆನ್ನುವರು; ಸುಳ್ಳಿಗನನ್ನು ಭೂಮಿಯಲ್ಲಿ ಇವನಷ್ಟು ಸತ್ಯವಂತ ಬೇರೆಯಿಲ್ಲ ಎನ್ನುವರು. ಇದು ಅರಸರಿಗೆ ಸ್ವಾಭಾವಿಕ. ಇಂಥ ಅವಿವೇಕಿಗಳೂ ಅಜ್ಞಾನಿಗಳೂ ಆದ ಅರಸರ ಸೇವೆ ಮಾಡುವುದು ಅಸಾಧ್ಯ. ವ॥ ಅಲ್ಲದೆ, ಅರಸರಿಗೆ ವಿರಸವಾದ ಸಂದರ್ಭದಲ್ಲಿ ತ್ಯಾಗಿಯನ್ನು ಲುಬ್ಧನೆಂದು ಹೇಳುವರು. ಭೋಗಿಯನ್ನು ಪೂಜಾರಿ ಎಂಬರು. ಸೌಭಾಗ್ಯಶಾಲಿಯನ್ನು ವ್ಯಭಿಚಾರಿ ಎನ್ನುವರು ; ತ್ಯಾಗಿಯನ್ನು ಅರ್ಥದೂಷಕ ಎನ್ನುವರು. ಅರ್ಥದೂಷಕನನ್ನು ತ್ಯಾಗಿ ಎನ್ನುವರು. ಏನುಮಾಡಿದರೂ ಪರಸ್ತ್ರೀಯರನ್ನು ಬಯಸುವವರನ್ನು ಶುದ್ಧರು ಎನ್ನುವರು ; ಶುದ್ಧರನ್ನು ಅಶುದ್ಧರು ಎನ್ನುವರು. ಧೂರ್ತನನ್ನು ವೇದವಿದನೆನ್ನುವರು ; ಸ್ಪರ್ಧೆಮಾಡಿ ಒಬ್ಬೊಬ್ಬರ ಗುಣಕ್ಕೆ ಮತ್ಸರಿಸಿ ಈ ಕಾಲದ ಅರಸರು

ಅಕ್ಕರ ॥ ಒರ್ವನನಚ್ಚಿಪರೊರ್ವನ ಮುನ್ನಂ ಬಟಕ್ಕವನೊಳ್ಗುಣಂಗಳಂ
ಕೊರ್ವಿಪರೊರ್ವನಂ ನೋಡಿ ಸೈರಿಸದೆ ಪುರುಡಿಪಂತಿರೆ ಪೊರೆವರ್ ಮ-
ತ್ತೊರ್ವನಂ ಮುನಿಸಿನೊಳ್ ಕಳೆವರಚ್ಚಿಜೆಂದೊರ್ವನಂ ಕೂ-
ರ್ತೊರ್ವನಂ ಕೂರದಂತಿರ್ಪರರಸುಗಳವಿಚಾರರಪ್ಪುದಜೆಂ ೧೦೨

ತ್ರಿಪದಿ ॥ ಹಿತವನತಿಭಕ್ತನನ್ವಿತನಿವಂ ಸುಭೃತ್ಯಂ
ಕೃತಕೃತ್ಯನೆನ್ನರ್ ಪಿಸುಣಿಂದೆ ಕಿಡಿಪರೀ
ಕ್ಷಿತಿಪತಿಗಳಿಂತವಿಚಾರದಿಂ ೧೦೩

ಇಂತಪ್ಪವಿವೇಕಿಗಳುಮಜ್ಞಾನಿಗಳುಮಪ್ಪರಸುಗಳನೋಲೈಸುವುದರಿದು. ಎಂತುಂ ಸೇವಾವೃತ್ತಿಯೇ ಕಷ್ಟಮದೆಂತೆನೆ :

ಶ್ಲೋ ॥ ಪ್ರಣಮತ್ಯುನ್ನತಿ ಹೇತೋರ್ಜೀವಿತ ಹೇತೋರ್ವಿಮುಂಚತಿ ಪ್ರಾಣಾನ್
ದುಃಖೀಯತಿ ಸುಖಹೇತೋಃ ಕೋ ಮೂಢಸ್ಸೇವಕಾದಪರಃ ॥೨೨॥

ಟೀ॥ ಉನ್ನತನಾಗಿರ್ಪೆನೆಂಬವಂ ತನ್ನೊಡೆಯಂಗೆ ಪೊಡೆಮಡವೇಟ್ಕುಂ; ಜೀವಿತಮಂ ಕೊಂಡು ಬಾಳ್ವೆನೆಂಬವಂ ಪ್ರಾಣಮಂ ಕುಡಲ್ವೇಟ್ಕುಮದಲ್ಲದೆ ಸುಖಂಬಡೆವೆನೆಂಬವಂ ದುಃಖಂ ಬಡುವನದುಕಾರಣಂ ಓಲಗಿಪವನಿಂ ಮೂಢನಾರುಮಿಲ್ಲ, ಮತ್ತಲ್ಲದೆಯುಂ.

ಶ್ಲೋ ॥ ಭೇತವ್ಯಂ ನೃಪತೇಸ್ತತಸ್ಸಚಿವತೋ ಧೂರ್ತಾಸ್ತತಸ್ಸೌಹೃದೋ
ಯೇ ದೈನ್ಯೇನ ಭವಂತಿ ಯಸ್ಯ ಭವನೇ ಲಬ್ಧಪ್ರಸಾದಾ ವಿಟಾಃ
ಕೃಚ್ಛ್ರಾತ್ತೋದರಪೂರಣಾರ್ಥಮನಿಶಂ ವ್ಯರ್ಥೀ ಕೃತಾಯಾಸತ
ಸ್ಸೇವಾಂ ಲಾಘವಕಾರಿಣೀಂ ಖಲು ಬುಧಾಃ ಸ್ವಾನೇಶ್ವವೃತ್ತಿಂ ವಿದುಃ॥೨೩॥

ಟೀ॥ ಸೇವಕಂ ಮೊದಲೊಳರಸಂಗಂ ತದನಂತರಂ ಪ್ರಧಾನರ್ಗಂ ಅರಸಿನ ಮಿತ್ರರ್ಗಂ ಸಲುಗೆಯನ್ನುಳ್ಳವರ್ಗಂ ಧೂರ್ತಜನಕ್ಕಂ ಭೀತನಾಗಿರದೇಟ್ಕುಂ. ಅದಲ್ಲದೆ. ತನ್ನ ದೈನ್ಯದಿಂ

ತೋರಿಬರವರು. ಅದಲ್ಲದೆ, ೧೦೨. ಅರಸರು ಅವಿಚಾರಿಗಳಾದುದರಿಂದ ಮೊದಲು ಒಬ್ಬನನ್ನು ಕ್ಷೀಣವಾಗುವಂತೆ ಮಾಡುವರು ; ಬಳಿಕ ಅವನ ಒಳ್ಳೆಯ ಗುಣಗಳನ್ನು ಕೊಬ್ಬಿಸುವರು. ಒಬ್ಬನನ್ನು ನೋಡಿ ಸಹಿಸದೆ ಸ್ಪರ್ಧೆಯೇಳುವಂತೆ ಕಾಪಾಡುವರು. ಮತ್ತೊಬ್ಬನನ್ನು ಮುನಿಸಿನಿಂದ ನಾಶಮಾಡುವರು. ಅಕ್ಕರೆಯಿಂದ ಒಬ್ಬನನ್ನು ಪ್ರೀತಿಸಿ ಮತ್ತೊಬ್ಬನನ್ನು ಪ್ರೀತಿಸದೆ ಇರುತ್ತಾರೆ. ೧೦೩. ಹೀಗೆ ಕ್ಷಿತಿಪತಿಗಳು ಅವಿಚಾರದಿಂದ ಹಿತನೂ, ಅತಿಭಕ್ತನೂ, ಅನ್ವಿತನೂ, ಸುಭೃತ್ಯನೂ, ಕೃತಕೃತ್ಯನೂ ಆಗಿರುವನು ಎಂದು ಹೇಳುವುದಿಲ್ಲ ಚಾಡಿಯಿಂದ ಕೆಡಿಸುವರು. ವ॥ ಇಂತಹ ಅವಿವೇಕಿಗಳೂ ಅಜ್ಞಾನಿಗಳೂ ಆದ ಅರಸರನ್ನು ಸೇವಿಸುವುದು ಅಸಾಧ್ಯ. ಹೇಗಿದ್ದರೂ ಸೇವಾವೃತ್ತಿಯೇ ಕಷ್ಟವಾಗಿದೆ. ಹೇಗೆಂದರೆ, ಶ್ಲೋ॥ ಉನ್ನತನಾಗಿರುವೆನೆಂಬವನು ತನ್ನ ಒಡೆಯನಿಗೆ ಬಗ್ಗಿಕೊಂಡಿರಬೇಕು. ಜೀವಿಸಿಕೊಂಡಿರುವೆನೆಂಬವನು ಸಮಯ ಬಂದರೆ ಪ್ರಾಣವನ್ನೂ ಕೊಡಬೇಕು. ಸುಖಪಡೆಯಬೇಕೆಂಬವನು ದುಃಖವನ್ನು ಅನುಭವಿಸಬೇಕು. ಅದಕ್ಕಾಗಿ ಸೇವಕನಿಗಿಂತ ಮೂಢನಾದವನು ಯಾರೂ ಇಲ್ಲ. ಶ್ಲೋ॥ ಸೇವಕನಾದವನು ಮೊದಲು ಅರಸನಿಗೂ, ಅನಂತರ ಪ್ರಧಾನರಿಗೂ, ಅರಸನ ಮಿತ್ರರಿಗೂ, ಧೂರ್ತರಿಗೂ ಭೀತನಾಗಿರಬೇಕು. ಅಲ್ಲದೆ ತನ್ನ ದೈನ್ಯದಿಂದ ಸುಖ ಪಡುವೆನೆಂಬವನು ಲಂಪಟತನದ ಕಷ್ಟವನ್ನು ಸಹಿಸಬೇಕು.

ಸುಖಂಬಡೆವೆನೆಂಬ ಲಂಪಳಿಕೆಯಾಯಾಸಮುಱುದು. ಇಂತು ಲಘುತರಮಪ್ಪ ಸೇವೆಯಿಂ ತನ್ನಿಚ್ಛೆಯೊಳ್ ಬರ್ದುಂಕುವ ಶುನಕಂ ಲೇಸೆಂದು ವಿದ್ವಾಂಸರ್ ಪೇೞ್ವರ್ - ಎಂಬ ಪುರಾತನ ನೀತಿವಾಕ್ಯಮುಂಟಪ್ಪುದಱಿಂ, ಸೇವಾವೃತ್ತಿ ಕಷ್ಟಂ ರಾಜಸೇವೆಯೆಂಬುದು ಜೀವನೋಪಾಯಕ್ಕೆ ಕಾರಣಂ; ಎನಗೆ ಜೀವಿತಂ ಪುಲ್ಲುಂ ನೀರುಂ; ಇವುಳ್ಳೊಡೆ ಸಾಲ್ಗುಂ. ಅವೀಗಳೆಲ್ಲಿಯುಂ ಸುಲಭಂ; ಅವಱೆನೋಲಗದೊಳಪ್ಪ ಸೌಖ್ಯಂ ಬಾರ್ತೆಯಿಲ್ಲಂ; ಎಂತುಂ,

ಸಾಲದೆ ಸೋಲದೆ ಪೊಡೆಮ-
ಟ್ಟೋಲೈಸದೆ ನಿಚ್ಚಪಯಣಮಿಲ್ಲದೆ ತನ್ನಿ-
ರ್ದಾಲಯದೊಳಿರ್ದು ಬಾೞ್ವುದೆ
ಭೂಲೋಕಮನಾಳ್ವ ಸೊಗದಿನಗ್ಗಳಮಲ್ತೇ ೧೦೪

ಎಂದು ಸಂಜೀವಕಂ ನುಡಿದ ಸಾಭಿಪ್ರಾಯವಚನಂಗಳಂ ದವನಕಂ ಕೇಳ್ದು ಚೋದ್ಯಂಬಟ್ಟು, ಆಃ! ಇದು ಶಾಪೋಪಹತಮಾದ ಮಾನವನಾಗಲೆವೇೞ್ಕುಂ, ಕೇವಲಂ ವೃಷಭನಾಗಲಱಿಯದು. ಇದಱ ಮಾತಂ ಕೇಳ್ದೆನಗಂ ಮೊದಲಾಗಿ ಮನದೊಳ್ ಸಮ್ಮೋಹನಮಾದಪುದು. ಈ ಸಂಜೀವಕನನುಯ್ದು ಪಿಂಗಳಕನೊಳ್ ಕೂಡಿ ಕೆಳೆಯನಂ ಮಾಡಿದೆನಪ್ಪೊಡಿದುವೇ ಪ್ರಧಾನನಕ್ಕುಂ. ಆದೊಂದು

ಶ್ಲೋ ॥ ಏಕದ್ರವ್ಯಾಭಿಲಾಷಿತ್ವಂ ಮಹತಾಂ ವೈರಕಾರಣಂ ॥೨೪॥

ಟೀ॥ ಒಂದೇ ಪದಾರ್ಥದಲ್ಲಿ ಆಶೆಪಡುವುದು ದೊಡ್ಡವರುಗಳಲ್ಲಿಯೂ ವೈರವನ್ನುಂಟು ಮಾಡುತ್ತದೆ- ಎಂಬಂತಿದಕಮೆನಗಂ ಬದ್ಧವೈರಮುಕ್ಕುಂ. ಅದಱಿಂದೀತನನುಯ್ದು ಸ್ವಯಂಕೃತಾನರ್ಥಮಂ ಮಾಡಿಕೊಳ್ವುದಿದಾವ ಕಾರಣಮೆಂದಾತ್ಮಗತಂ ಬಗೆದು, ಮತ್ತಮೀ ವೃಷಭನನಾಂ ತರ್ಪೆನೆಂದು ಪಿಂಗಳಕಂಗೆ ಪೂಣ್ದು ಬಂದೀಗಳ್ ಸ್ವಾರ್ಥಮನಾಲೋಚಿಸಿ ಪುರುಷಾರ್ಥಮಂ ಬಿಸುಟೆನಪ್ಪೊಡೆ.

ಇಂಥ ಹಗುರವಾದ ಸೇವಾಕಾರ್ಯಕ್ಕಿಂತ ಸ್ವತಂತ್ರವಾಗಿ ಬದುಕುವ ನಾಯಿಯಾಗಿರುವುದು ಲೇಸು. ರಾಜಸೇವೆ ಜೀವನೋಪಾಯಕ್ಕಾಗಿ, ನನಗೆ ಪ್ರಾಣ, ಹುಲ್ಲು, ನೀರು ಇವುಗಳಿದ್ದರೆ ಸಾಕು. ಅವು ಈಗ ಎಲ್ಲೆಲ್ಲಿಯೂ ಸುಲಭವಾಗಿ ದೊರಕುವುವು. ಅದಕ್ಕೇಕೆ ಓಲಗಕ್ಕೆ ಹೋಗಬೇಕು ? ೧೦೪. ಸಾಲದೆ ಸೋಲದೆ ಬಾಗಿ ವಂದಿಸಿ ಸೇವೆ ಮಾಡದೆ ನಿತ್ಯ ಪ್ರಯಾಣವಿಲ್ಲದೆ ತನ್ನ ಮನೆಯಲ್ಲಿದ್ದು ಬಾಳುವುದೇ ಭೂಲೋಕವನ್ನು ಆಳುವ ಸುಖಕ್ಕಿಂತ ಶ್ರೇಷ್ಠವಾದುದಲ್ಲವೇ? ವ॥ ಸಂಜೀವಕನು ನುಡಿದ ಸಾಭಿಪ್ರಾಯವಚನಗಳನ್ನು ಕೇಳಿ ದವನಕನು ಆಶ್ಚರ್ಯಪಟ್ಟು ಆಃ ಇದು ಶಾಪಗ್ರಸ್ತವಾದ ಮಾನವನಾಗಿರಲೇಬೇಕು. ಇದು ಕೇವಲ ವೃಷಭವಲ್ಲ, ಇದರ ಮಾತನ್ನು ಕೇಳಿದ ನನಗೂ ಮನಸ್ಸಿನಲ್ಲಿ ಸಮ್ಮೋಹನ ಮೊಳೆಯುತ್ತಿದೆ. ಈ ಸಂಜೀವಕನನ್ನು ಕರೆದುಕೊಂಡು ಹೋಗಿ ಆ ಪಿಂಗಳಕನೊಡನೆ ಸಂದರ್ಶನ ಮಾಡಿಸಿದರೆ ಇವನೇ ಪ್ರಧಾನನಾದಾನು ! ಶ್ಲೋ॥ 'ಏಕದ್ರವ್ಯಾಭಿಲಾಷಿತ್ವಂ ಮಹತಾಂ ವೈರಕಾರಣಂ' - ಒಂದೇ ವಸ್ತುವಿಗೆ ಆಸೆಪಡುವುದು ದೊಡ್ಡವರಲ್ಲಿಯೂ ವೈರವನ್ನುಂಟುಮಾಡುತ್ತದೆ - ಎಂಬಂತೆ ಇದಕ್ಕೂ ನನಗೂ ಅಕಾರಣವಾಗಿ ಬದ್ಧ ವೈರ ಸಂಭವಿಸುವುದು. ಆದರಿಂದ ಈತನನ್ನು ಕರೆದುಕೊಂಡು ಹೋಗಿ ಸ್ವಯಂಕೃತವಾದ ಅನರ್ಥವನ್ನು ಏಕೆ ತಂದುಕೊಳ್ಳಬೇಕು ಎಂದು ಮನಸ್ಸಿನಲ್ಲಿಯೇ ಯೋಚಿಸಿದನು. ಈ ವೃಷಭನನ್ನು ನಾನು ತರುವೆನು ಎಂದು ಪಿಂಗಳಕನಿಗೆ ಮಾತು ಕೊಟ್ಟು ಬಂದು ಈಗ

ಶ್ಲೋ ॥ ಪ್ರಾರಬ್ಧಸ್ಯಾಂತಗಮನಂ ಮಹಾಪುರುಷ ಲಕ್ಷಣಂ ॥೨೫॥

ಟೀ॥ ತೊಡಗಿದ ಕೆಲಸವನ್ನು ಕೊನೆಗಾಣಿಪುದೇ ಮಹಾಪುರುಷರ ಲಕ್ಷಣವು ಎಂಬುದು ಕಿಡುಗುಂ-ತುದಿಯೊಳ್ ಎನಗಪ್ಪುದಾಗಲೀಗಳೀತನನೇತೆಱದೊಳಾದೊಡವೊಡಂಬಡಿಸಿ ಪಿಂಗಳಕನಲ್ಲಿಗಯ್ವೆನೆಂಬುದನೆ ನಿಶ್ಚಯಿಸಿ, ಸಂಜೀವಕಂಗಿಂತೆಂದಂ; ನೀನಪ್ಪೊಡೆ ಪಶು. ನಿನ್ನಂ ಮತ್ತೊರ್ವಂ ರಕ್ಷಿಸದಂದು ನಿನಗೆ ಕ್ಷುದ್ರಮೃಗೋಪದ್ರವಮಕ್ಕುಮೆಂದು ಪೇೞ್ವೆಂ. ಅದಲ್ಲದೆಯುಂ ದೃಢಕಠಿನದೇಹನಪ್ಪ ನಿನ್ನಂ ಕಂಡಾ ಸಿಂಹಂ ಇದೊಂದಪೂರ್ವಮೃಗಮೆಂದು ಮುಳಿದಂದು ಜವಂ ಮುಳಿದಂತಕ್ಕುಮೆಂದು ಹಿತವಂ ಬಗೆದೊಡಂಗೊಂಡು ಪೋದಪೆನಲ್ಲದೆ ನಿನ್ನಿಂದಮೆನ್ನಾಳ್ದಂಗಮೊಂದು ವಸ್ತುಸಾಧ್ಯಮಕ್ಕುಮೆಂದು ಯ್ವೆನಿಲ್ಲ. ನೀನಮೋಘಂ ರಾಜದರ್ಶನಂಗೆಯ್ವುದುಚಿತಮಡೆಂತೆನೆ :

ಶ್ಲೋ ॥ ಗಂತವ್ಯಾ ರಾಜಸಭಾದ್ರಷ್ಟವ್ಯಾ ರಾಜಪೂಜಿತಾಃ ಪುರುಷಾಃ
ಯದ್ಯಪಿ ನ ಭವೇದರ್ಥೋಃ ಭವೇದನರ್ಥ ಪ್ರತೀಕಾರಃ ॥೨೬॥

ಟೀ॥ ನೃಪಸಭೆಯನ್ನೈದಲೆವೇೞ್ಕುಂ ನೃಪರ್ ಮನ್ನಿಸುವ ಪುರುಷರಂ ಕಾಣಲೆವೇೞ್ಕುಂ ಎತ್ತಲಾನುಮರ್ಥವಿಲ್ಲದಿರ್ದೊಡಂ ತನಗೆ ಬಂದನರ್ಥಮಂ ಪರಿಹರಿಸಲ್ ಬಹುದು ಎಂಬ ರಾಜನೀತಿಯುಂಟು. ಇದನಱಿವೊಡೆ ನೀನೆನ್ನ ಬುದ್ಧಿಯಂ ಕೇಳ್ದು ಸುಖಂಬಾೞ್ವೊಡೆ ಎನ್ನಾಳ್ದನಂ ಕಂಡು ನಿಶ್ಚಿಂತಮಿರ್ಪೆಯಾದೊಡೆ ಎನ್ನೊಡನೆ ಬಹುದೊಳ್ಳಿತೆಂದು ನಯಭಯಮಂ ತೋಱಿ ನುಡಿದ ದಮನಕನ ನುಡಿಗೆ ಸಂಜೀವಕಂ ಕರಮೊಳ್ಳಿತೆಂದಳ್ಳಿ, ನೀನೆಂತುಮೆನ್ನನುಯ್ದಲ್ಲದೆ ಮಾಣೆಯಪ್ಪೊಡೆ, ನಿನ್ನಾಳ್ದನೊಳಭಯವಚನಮಂ ಪಡೆದು ಬಂದೆನ್ನನೊಡಗೊಂಡು ಪೋಗೆಂಬುದುಂ.

ಸ್ವಾರ್ಥದಿಂದ ಪುರುಷಾರ್ಥವನ್ನು ತ್ಯಜಿಸುವುದು ತರವಲ್ಲ. ಶ್ಲೋ॥ 'ಪ್ರಾರಬ್ಧಸ್ಯಾಂತಗಮನಂ ಮಹಾಪುರುಷ ಲಕ್ಷಣಂ' - ತೊಡಗಿದ ಕೆಲಸವನ್ನು ಕೊನೆಗಾಣಿಸುವುದೇ ಮಹಾಪುರುಷರ ಲಕ್ಷಣ ಎಂಬುದು ಕೆಡುವುದು. ಕೊನೆಯಲ್ಲಿ ನನಗೆ ಏನೇ ಆಗಲಿ ; ಇವನನ್ನು ಯಾವ ರೀತಿಯಿಂದಲಾದರೂ ಒಡಂಬಡಿಸಿ ಪಿಂಗಳಕನಲ್ಲಿಗೆ ಕರೆತರುವೆನೆಂದು ನಿರ್ಧರಿಸಿ ಸಂಜೀವಕನಿಗೆ ಹೀಗೆಂದನು : ನೀನು ಪಶು, ನಿನ್ನನ್ನು ಮತ್ತೊಬ್ಬನು ಯಾರಾದರೂ ರಕ್ಷಿಸದಿದ್ದರೆ ನಿನಗೆ ಕ್ಷುದ್ರಮೃಗಗಳ ಉಪದ್ರವ ತಪ್ಪಿದ್ದಲ್ಲ. ಅಲ್ಲದೆ, ದೃಢಕಠಿನದೇಹಿಯಾದ ನಿನ್ನನ್ನು ಕಂಡು, ಈ ಸಿಂಹ ಇದೊಂದು ಅಪೂರ್ವ ಮೃಗವೆಂದು ಮುಳಿದರೆ ಯಮನ ಕೋಪಕ್ಕೆ ತುತ್ತಾದಂತೆಯೇ ಸರಿ ಎಂದು ಹಿತವನ್ನು ಬಗೆದು ಒಡಗೊಂಡು ಹೋಗುವೆನಲ್ಲದೆ ನಿನ್ನಿಂದ ನನ್ನ ಒಡೆಯನಿಗೆ ಏನಾದರೂ ಪ್ರಯೋಜನವಾದೀತೆಂದು ನಾನು ನಿನ್ನನ್ನು ಕರೆದುಕೊಂಡು ಹೋಗುತ್ತಿಲ್ಲ ! ನೀನು ಕೂಡಲೇ ರಾಜನನ್ನು ಕಾಣುವುದು ಉಚಿತ. ಶ್ಲೋ॥ ನೃಪಸಭೆಯನ್ನು ಪ್ರವೇಶಿಸಲೇ ಬೇಕು; ನೃಪರು ಮನ್ನಿಸುವ ಪುರುಷರನ್ನು ಕಾಣಲೇಬೇಕು. ಇದರಿಂದ ಪ್ರಯೋಜನವಿಲ್ಲದಿದ್ದರೂ ತನಗೆ ಬಂದ ಅನರ್ಥವನ್ನು ಪರಿಹರಿಸಿಕೊಳ್ಳಬಹುದು ಎಂಬ ರಾಜನೀತಿಯುಂಟು. ನೀನು ನನ್ನ ಬುದ್ಧಿವಾದವನ್ನು ಕೇಳುವಿಯಾದರೆ, ಸುಖವಾಗಿ ಬಾಳಬೇಕೆಂದಿದ್ದರೆ, ನನ್ನ ಒಡೆಯನನ್ನು ಕಂಡು ನಿಶ್ಚಿಂತನಾಗಿರಬೇಕೆಂದಿದ್ದರೆ ನನ್ನೊಡನೆ ಬರುವುದು ಒಳ್ಳೆಯದು. ಹೀಗೆ ನಯಭಯವನ್ನು ತೋರಿಸಿ ನುಡಿದ ದಮನಕನ ಮಾತಿಗೆ ಸಂಜೀವಕನು ಹಾಗೆಯೇ ಆಗಲಿ ಎಂದು ಹೀಗೆಂದನು: ನೀನು ಎಂತೂ ನನ್ನನ್ನು ಕರೆದುಕೊಂಡು ಹೋಗದೆ ಬಿಡುವವನಲ್ಲವಾದರೆ ನಿನ್ನ ಅರಸನಿಂದ

ದವನಕನಂತೆಗೆಯ್ವೆನೆಂದು ಬರುತ್ತ 'ಮುಱಿದ ಬಿಲ್ಗೆ ಮೂವರಂಜಿದರ್', ಎಂಬ ನಾಣ್ನುಡಿಯಿವರೊಳ್ ಕಾಣಲಾದುದೆಂದು ನಗುತ್ತುಂ ಬರ್ಪ ನರಿಯಂ ಪಿಂಗಳಕಂ ದೂರಾಂತರದೊಳ್ ಕಂಡಿವಂ ತಡೆದು ಬರ್ಪ ಬರವೇ ಕಾರ್ಯಸಿದ್ಧಿಯಂ ಪೇೞ್ವುದೆಂದು ಬಗೆವಿನಮೆಯ್ದೆವಂದು ಪೊಡೆವಟ್ಟು ದವನಕನ ಮೊಗಮಂ ನೋಡಿ, ನಾಡೆಯುಂ ತಡೆದೆಯೆಂಬುದುಮಾ ದವನಕನಿಂತೆಂದಂ : ಮಹಾಭದ್ರಾಕಾರನಂ ರೌದ್ರಕೋಪಾಟೋಪನನನೇಕೋಪಾಯದಿನೆಂತಾನುಂ ಸಂಧಾನಕ್ಕೊಡಂಬಡಿಸಿದೊಡ ಮತ್ತಮಾ ಧೂರ್ತನೆಲ್ತೆನಂದಮನೆ ಮಾಡಿ ಮರ್ಯಾದೆಯೊಳೊರ್ಮೆಯೊಡಂಬಟ್ಟು ಒರ್ಮೆಯೊಡಂಬಡದೆಯುಂ ಬಳಗಮಿಕ್ಕಿ ಕಾಡಿದೊಡೆ ಮತ್ತಮೆಂತಾನುಮೊಡಂಬಡಿಸಿ ದೇವರ ಶ್ರೀಪಾದಮಂ ಕಾಣಲ್ವರ್ಪಂತು ಮಾಡಿದೆಂ ಇದೆಲ್ಲಮಂ ದೇವರ್ಗೆ ಪೂರ್ವಸೂಚನೆಗೆಯ್ದು ಬೞಿಕ್ಕೊಡಗೊಂಡು ಬರ್ಪೆನೆಂದು ಬಂದೆಂ ದೇವರುಮಾ ಸಂಜೀವಕಂ ಬಂದು ಕಾಣಲೊಡಂ ಪರಮಮಿತ್ರನಂ ಕಂಡಂತೆ ಸಂಭ್ರಮವೆರಸು ಮನ್ನಿಸಿ ಸಂಭಾಷಣಂಗೆಯ್ವುದೆನೆ, ಪಿಂಗಳಕನಂತೆಗೆಯ್ವೆಂ ನೀನೀಗಳೇ ಪೋಗಿ ಬೇಗಮೊಡಗೊಂಡು ಬರ್ಪುದೆನೆ, ದವನಕಂ ಸಂಜೀವಕಲ್ಲಿಗೆಯ್ದೆವಂದು,

ಕರುಣಂಗೆಯ್ದಂ ಮೃಗಗಣ
ಪರಿವೃಢನಿನ್ನಂಜವೇಡಪಾದಂ ಪುಣ್ಯಂ
ದೊರೆಕೊಂಡುದು ನಿನಗೀಗಳ್
ಶರಣಾಗತವಜ್ರಪಂಜರಂ ಪಿಂಗಳಕಂ ೧೦೫

ಎಂದು ಪಲವು ತೆಱದಿಂ ಸಂಜೀವಕನೊಳಾದ ಭಯಂ ಪತ್ತುವಿಡೆ ಸಂತಸಂಬಡೆ ನುಡಿದೊಡಂಗೊಂಡು ಬಂದು, ದೇವಾ ಸಂಜೀವಕಂ ಬಂದನೆಂದು ಬಿನ್ನಪಂಗೆಯ್ವುದುಮಾ

ಅಭಯವಚನವನ್ನು ಪಡೆದು ಬಂದು ನನ್ನನ್ನು ಕರೆದುಕೊಂಡು ಹೋಗು. ಹಾಗೆಯೇ ಆಗಲಿ ಎಂದು ದವನಕನು, 'ಮುರಿದ ಬಿಲ್ಲಿಗೆ ಮೂವರು ಅಂಜಿದರು' ಎಂಬ ನಾಣ್ಣುಡಿ ಇವರಲ್ಲಿ ಕಂಡುಬಂತು ಎಂದು ನಗುತ್ತ ಬರುತ್ತಿದ್ದ ನರಿಯನ್ನು ಪಿಂಗಳಕನು ದೂರದಿಂದ ಕಂಡು ಇವನು ನಿಧಾನವಾಗಿ ಬರುವ ರೀತಿಯೇ ಕಾರ್ಯಸಿದ್ಧಿಯನ್ನು ಸೂಚಿಸುವುದು ಎಂದು ಆಲೋಚಿಸುತ್ತಿರಲು ಬಂದು ನಮಸ್ಕರಿಸಿ ದವನಕನ ಮುಖವನ್ನು ನೋಡಿ, ಬಹಳ ತಡವಾದುದೇಕೆ, ಎನ್ನಲು ದವನಕನು ಹೀಗೆ ಹೇಳಿದನು : ಮಹಾಭದ್ರಾಕಾರನನ್ನು, ರೌದ್ರಕೋಪಾಟೋಪವನ್ನು ಅನೇಕ ಉಪಾಯಗಳಿಂದ ಹೇಗೋ ಸಂಧಾನಕ್ಕೆ ಒಪ್ಪಿಸಿ ದೇವರ ಶ್ರೀಪಾದವನ್ನು ಸಂದರ್ಶಿಸುವಂತೆ ಮಾಡಿದೆ. ಇದೆಲ್ಲವನ್ನೂ ದೇವರಿಗೆ ಪೂರ್ವಸೂಚನೆ ಕೊಟ್ಟು ಬಳಿಕ ಕರೆತರುವೆನೆಂದು ಬಂದೆ. ಪ್ರಭುಗಳೂ ಆ ಸಂಜೀವಕನು ಬಂದಾಗ ಪರಮಮಿತ್ರನನ್ನು ಕಾಣುವಂತೆ ಸಂಭ್ರಮದಿಂದ ಮನ್ನಿಸಿ ಮಾತನಾಡಿಸಬೇಕು ಪಿಂಗಳಕನು ಹಾಗೆಯೇ ಆಗಲಿ ಎನ್ನಲು ದವನಕನು ಸಂಜೀವಕನಲ್ಲಿಗೆ ಬಂದು, ೧೦೫. ಮೃಗಾಧಿರಾಜನು ಕರುಣೆದೋರಿದನು. ಇನ್ನು ಅಂಜದಿರು ನೀನು ಪುಣ್ಯವಂತ, ನಮ್ಮರಸನು ಶರಣಾಗತ ವಜ್ರಪಂಜರ ಎಂದು ಸಂಜೀವಕನ ಭಯವನ್ನು ಪರಿಹರಿಸಿದನು. ವ|| ಅಲ್ಲಿಂದ ಪಿಂಗಳಕನಲ್ಲಿಗೆ ಸಂಜೀವಕನನ್ನು ಕರೆದುಕೊಂಡು ಬಂದು, ದೇವಾ ! ಸಂಜೀವಕನು ಬಂದನು ಎನ್ನಲು ಆ ಮೃಗೇಂದ್ರನು ಇಂದ್ರಪದವಿ ಸಿಕ್ಕಿದವನಂತೆ ಪರಮಾನಂದಭರಿತನಾಗಿ ಅವನನ್ನು ಕರೆದುಕೊಂಡು ಬಾ ಎಂದನು. ದವನಕನು

ಮೃಗೇಂದ್ರನಿಂದ್ರಪದವಿ ಕೈಸಾರ್ದಂತೆ ಪರಮಾನಂದಮನೆಯ್ದಿ ತಂಮ ಕಾಣಿಸೆಂಬುದುಂ, ದವನಕಂ ಪಡಿಯಱಂಬೆರಸು ಪೋಗಿ ಸಂಜೀವಕನಂ ಕಾಣಿಸಲೊಡಂ, ಮೃಗೇಂದ್ರಂ ವೃಷಭೇಂದ್ರನ ಮೊಗಮನಾದರಂಬೆರಸು ನೀಡುಂ ಭಾವಿಸಿ ನೋಡಿ ಪೀಠಾಂತರಕ್ಕೆ ಕರೆದು,

ಉದಿತಸ್ಮೇರನಿಭೇಂದ್ರವೈರಿ ನಯದಿಂ ಕೈನೀಡಿ ಗೋಮುಖ್ಯ ಬ-
ಲ್ಲಿದಿರೇ ಸಂತಸಮೇ ಕರಂ ಕುಶಲಮೇ ಕ್ಷೇಮಾಂಗಮೇ ದೇವ ಸಂ-
ಪದಮುಂ ಬಲ್ಲಿದೆವಾಂ ಕರಂ ಕುಶಲಮುಂ ಕ್ಷೇಮಾಂಗಮೀಗಳ್ ಭವ-
ತ್ಪದಪಂಕೇಜವಿಳೋಕನಜಾತದಯೆಯಿಂದಾದೆಂ ಮೃಗಾಧೀಶ್ವರಾ ೧೦೬

ಸದಯಂ ಮುಕ್ತಭಯಂ ನಮದ್ಭವನಕಾಸ್ಯಾಲೋಕನಸ್ಮೇರ ಸ-
ದ್ವದನಂ ಸ್ವಾಗತಪೂರ್ವಮಾತ್ಮಕರಮಂ ಸಂಜೀವಕಂಗೊಲ್ದು ನೀ-
ಡಿದನುದ್ಭಿನ್ನಮದಾಂಧಸಿಂಧುರಘಟಾಸಂಘಟ್ಟಕುಂಭಾಗ್ರನಿ-
ರ್ಯದಸೃಕ್ಕುಂಕುಮಪಂಕಪಂಕಿಳಸಟಾಜಾಳಂ ಮೃಗಾಧೀಶ್ವರಂ ೧೦೭

ಅಂತು ಸಮದಕುಂಜರಘಟಾಪುಂಜ ಭಂಜನಂ ಮೃಗಾಧಿರಾಜಂ ಕೈನೀಡಿ ಸಂಜೀವಕನ ನನೇಕ ಪ್ರಕಾರ ಸನ್ಮಾನ ಕ್ರಿಯೆಗಳಿಂ ತಣಿಪಿ ಬಟೆಕ್ಕಿಂತೆಂದಂ :

ಶರಭವ್ಯಾಘ್ರೋಗ್ರಖಡ್ಗಿಪ್ರಕರ ಖರ ಭಯಾಕ್ರಾಂತಮಂ ಕ್ರೂರವಾಸೇ-
ಚರಚಂಚಚ್ಚಾಪಮೌರ್ವೀರವಬಧಿರಿತದಿಕ್ಚಕ್ರಮಂ ಸಿಂಹಸಂಘಾ-
ತರವೈಕಾಭೀಳಮಂ ಭೀಕರ ಕುಧರ ಗುಹಾರೌದ್ರಮಂ ಘೋರಮಾದ್ಯ-
ದ್ದ್ವಿರದವ್ಯಾಕೀರ್ಣಮಂ ನಿರ್ಜನವನಮನಿದಂ ಬಂದು ನೀನೆಂತು ಪೊಕ್ಕೈ ೧೦೮

ಪ್ರತೀಹಾರಿಯೊಡನೆ ಹೋಗಿ ಸಂಜೀವಕನನ್ನು ಕಾಣಿಸಲು ಮೃಗೇಂದ್ರನು ವೃಷಭೇಂದ್ರನ ಮುಖವನ್ನು ಆದರದಿಂದ ಚೆನ್ನಾಗಿ ನೋಡಿ ತನ್ನ ಪಾದಪೀಠಾಂತರಕ್ಕೆ ಕರೆದು ಪ್ರೀತಿಯಿಂದ ಕೈನೀಡಿ ಹೀಗೆಂದನು : ೧೦೬. ಗೋಮುಖ್ಯನೇ ! ಸಂತೋಷವೇ, ಕುಶಲವೇ, ಕ್ಷೇಮವೇ? ಅದಕ್ಕೆ ಸಂಜೀವಕನು, ದೇವಾ ! ನಿಮ್ಮ ಸಂಪದವನ್ನೂ ಬಲ್ಲೆವು. ನಾವು ನಿಮ್ಮ ಪಾದಪಂಕೇಜವಿಳೋಕ ಜಾತದಯೆಯಿಂದ ಕುಶಲರಾದೆವು ಎಂದನು. ೧೦೭. ಸದಯನೂ, ಭಯಮುಕ್ತನೂ, ಮದಾಂಧಸಿಂಧುರಘಟಾಸಂಘಟ್ಟಕುಂಭಾಗ್ರ ನಿರ್ಯದಸೃಕ್ಕುಂಕುಮಪಂಕಪಂಕಿಳಸಟಾ ಜಾಳನೂ ಆದ ಮೃಗಾಧೀಶ್ವರನು ಸ್ವಾಗತಪೂರ್ವಕವಾಗಿ ತನ್ನ ಕರವನ್ನು ಸಂಜೀವಕನಿಗೆ ಒಲಿದು ನೀಡಿದನು. ವ|| ಹಾಗೆ ಸಮದಕುಂಜರಘಟಾಪುಂಜಭಂಜನನಾದ ಮೃಗರಾಜನು ಕೈನೀಡಿ ಸಂಜೀವಕನನ್ನು ಅನೇಕ ಪ್ರಕಾರ ಸನ್ಮಾನಕ್ರಿಯೆಗಳಿಂದ ತೃಪ್ತಿಪಡಿಸಿ ಬಳಿಕ ಹೀಗೆಂದನು : ೧೦೮. ಶರಭ, ವ್ಯಾಘ್ರ, ಖಡ್ಗ ಮೃಗಗಳ ಸಮೂಹದಿಂದ ಕ್ರೂರವೂ ಭಯಂಕರವೂ, ದುಷ್ಟರಾದ ಬೇಡರ ಹೊಳೆಯುವ ಬಿಲ್ಲಿನ ಹಗ್ಗದ ಟಂಕಾರದಿಂದ ಕಿವುಡಾದ ದಿಕ್ಕುಗಳೂ, ಸಿಂಹಸಮೂಹ ವೊಂದರಿಂದಲೇ ಭಯಂಕರವಾಗಿಯೂ, ಭಯಂಕರ ಪರ್ವತ ಗುಹೆಗಳಿಂದ ರೌದ್ರವೂ, ಘೋರವಾದ ಮದ್ದಾನೆಗಳಿಂದ ತುಂಬಿರುವುದೂ, ನಿರ್ಜನವೂ ಆದ ಈ ವನವನ್ನು

ಎಂದು ಬೆಸಗೊಳ್ವುದುಂ ಸಂಜೀವಕನಾತ್ಮೀಯ ವನಪ್ರವೇಶಕಾರಣಂ ಸಪ್ರಪಂಚಂ ಬಿನ್ನಪಂಗೆಯ್ಯೆ ಪಂಚಾನನಂ ಕೇಳ್ದಿಂತೆಂದಂ :

ಕ್ರೂರ ವನೇಚರ ಪ್ರಕರಮಂ ದ್ವಿರದೋತ್ಕರಮಂ ಭಯಂಕರಾ-
ಕಾರ ಚಮೂರುಸಂಕುಳಮನುದ್ಧತ ಭೀಕರ ಸೂಕರಾಳಿಯಂ
ಸಾರದೆ ಭದ್ರ ನೀನಿರು ಮದೀಯ ಭುಜಾಪರಿಪಾಲಿತೋರು ಕಾಂ-
ತಾರದೊಳಚ್ಛನೀರದೊಳನೇಕತೃಣಾಕ್ಷುಪ ಗುಲ್ಮಜಾಲದೊಳ್ ೧೦೯

ಎಂದಿಂತು ಪಿಂಗಳಕಂ ಸಂಜೀವಕಂಗೆ ಸಂತುಷ್ಟನುಮಾಗಿ ಬುದ್ಧಿಯಂ ಪೇಳ್ವುದುಂ, ಮಹಾಪ್ರಸಾದಮಂತೆಗೆಯ್ವೆನೆನಲೊಡಮೆರಡರ್ಕಂ ಪರಸ್ಪರ ಸ್ನೇಹಮಾಗೆ ಬಳಿಕ್ಕೆ ಸಂಜೀವಕನಂ ವಿಸರ್ಜಿಸಿ, ದವನಕನ ಮೊಗಮಂ ನೋಡಿ,

ಶ್ಲೋ ॥ ಪ್ರತ್ಯಕ್ಷೇ ಗುರವಃ ಸ್ತುತ್ಯಾಃ ಪರೋಕ್ಷೇ ಮಿತ್ರಬಾಂಧವಾಃ
ಕರ್ಮಾಂತೇ ದಾಸಭೃತ್ಯಾಶ್ಚ ನ ತು ಪುತ್ರೋ ಮೃತಾಃ ಸ್ತ್ರಿಯಃ ॥೨೭॥

ಟೀ॥ ಗುರುವಂ ಮುಂದೆ ಪೊಗಳ್ವುದು, ಮಿತ್ರರಂ ಬಂಧುಗಳಂ ಪಿಂದೆ ಪೊಗಳ್ವುದು, ಕೆಲಸದ ಕಡೆಯಲ್ಲಿ ದಾಸಭೃತ್ಯರನ್ನು ಪೊಗಳ್ವುದು, ಮಗನನೆಂದುಂ ಪೊಗಳಲಾಗದು, ಸ್ತ್ರೀಯಂ ಸತ್ತ ಬಳಿಕ್ಕ ಪೊಗಳ್ವುದು – ಎಂಬ ನೀತಿಯುಂಟು. ಈತನೆನಗೆ ಕೃತಕ್ಲೇಶನಪ್ಪುದಱಿಂದೀಯ ವಸರದೊಳೆ ಸಂತಸಂಬಡಿಸಲ್ವೇಳ್ಕುಮೆಂದಿಂತೆಂದಂ : ನಿನ್ನಂತಹಾಪ್ತ ಮಂತ್ರಿಪುತ್ರನಿಂದೆಮಗೆ ಮನೋರಥಸಿದ್ಧಿಯಾಯ್ತುದೆಂದು ದವನಕನಂ ಸಪ್ರಸಾದ ವಚನಂಗಳಿಂ ಸಂತಸಂಬಡೆ ನುಡಿದು ಬಳಿಕ್ಕೆ ನೀರಸುಣಲ್ ಪೋಗಲ್ ಬಗೆದಲ್ಲಿಂ ತಳರ್ದು

ನೀನು ಹೇಗೆ ಪ್ರವೇಶಿಸಿದೆ ವ॥ ಎಂದು ವಿಚಾರಿಸಲು ಸಂಜೀವಕನು ತನ್ನ ವನಪ್ರವೇಶಕಾರಣವನ್ನು ವಿವರವಾಗಿ ಬಿನ್ನೈಸಲು ಸಿಂಹನು ಕೇಳಿ ಸಂಜೀವಕನಿಗೆ ಈ ರೀತಿ ಹೇಳಿದನು : ೧೦೯. ಈ ಕಾಡಿನಲ್ಲಿರುವ ಕ್ರೂರವಾದ ಮೃಗಪ್ರಕರವನ್ನೂ, ಆನೆಗಳ ಸಮೂಹವನ್ನೂ ಭಯಂಕರ ಆಕಾರದ ವ್ಯಾಘ್ರಸಮೂಹವನ್ನೂ ಭೀಕರ ಸೂಕರಗಳನ್ನೂ ಸೇರದೆ ನನ್ನ ಭುಜಗಳಿಂದ ಪರಿಪಾಲಿತವಾದ ಅಚ್ಛೋದಸರೋವರಗಳಿಂದಲೂ, ತೃಣಗುಲ್ಮಗಳಿಂದಲೂ ಕೂಡಿದ ಈ ಅರಣ್ಯದಲ್ಲಿ ವಾಸಮಾಡಿಕೊಂಡಿರು. ವ॥ ಅದಕ್ಕೆ ಸಂಜೀವಕನು ಮಹಾಪ್ರಸಾದ ಹಾಗೆಯೇ ಆಗಲಿ ಎನ್ನಲು, ಎರಡಕ್ಕೂ ಮಹಾಸ್ನೇಹವುಂಟಾಗಲು ಪಿಂಗಳಕನು ಸಂಜೀವಕನನ್ನು ಹೋಗಬಿಟ್ಟು ದವನಕನ ಮುಖ ನೋಡಿ ಹೀಗೆ ಹೇಳಿದನು : ಶ್ಲೋ॥ ಗುರುಗಳನ್ನು ಪ್ರತ್ಯಕ್ಷವಾಗಿ ಹೊಗಳಬೇಕು, ಬಂಧುಮಿತ್ರರನ್ನು ಪರೋಕ್ಷವಾಗಿ ಸ್ತುತಿಸಬೇಕು, ಕೆಲಸವಾದ ಮೇಲೆ ದಾಸಭೃತ್ಯರನ್ನು ಪ್ರಶಂಸಿಸಬೇಕು, ಮಗನನ್ನು ಎಂದಿಗೂ ಹೊಗಳಬಾರದು, ಸ್ತ್ರೀಯರನ್ನು ಸತ್ತಮೇಲೆ ಹೊಗಳಬೇಕು! ಎಂಬ ನೀತಿಯುಂಟು. ಈತನು ನನಗೆ ಕ್ಲೇಶವನ್ನುಂಟು ಮಾಡಿದುದರಿಂದ ಈಗಲೇ ಈತನನ್ನು ಸಂತೋಷಪಡಿಸಬೇಕು ಎಂದು ಮನಸ್ಸಿನಲ್ಲೇ ಆಲೋಚಿಸಿ ನಿನ್ನಂಥ ಆಪ್ತ ಮಂತ್ರಿ ಪುತ್ರನಿಂದ ನಮಗೆ ಮನೋರಥಸಿದ್ಧಿಯಾಯಿತು ಎಂದು ಸಂತಸದ ನುಡಿಗಳಿಂದ ದವನಕನೂ ಸಂತೋಷಪಡುವಂತೆ ಮಾಡಿದನು. ಅಲ್ಲಿಂದ ನೀರು

ಅಳಿಮಾಳಾನೀಳನೀಳೋತ್ಪಳದಳವಿಳಸತ್ಕಂಜಕಿಂಜಲ್ಕಪುಂಜಾ
ವಿಳ ಕಾಳಿಂದೀಸದೀತೀರಮನತಿಮುದದಿಂದೆಯ್ದೆವಂದಂ ಪಿಪಾಸಾ-
ಕುಳಿತಂ ಪಂಚಾನನಂ ಶ್ವಾಪದಗಣಸಹಿತಂ ಭಿನ್ನವನ್ಯೇಭಕುಂಭ-
ಸ್ಥಳಸಂಭದ್ಬಿಂಬಕಾವಗ್ರಹಗಗನಶಿರಾಸಿಕ್ತಸಿಕ್ತಾಂಗಪೀಠಂ ೧೧೦

ಅಂತೆಯ್ದಿಂ.

ಯಮುನಾವಾರಿಯನಿಂದ್ರನೀಲಮಣಿ ಭೃಂಗಾಕಾರಿಯಂ ಪ್ರಾಣಿವ-
ರ್ಗ ಮನೋಹಾರಿಯನುಜ್ಜ್ವಲಾಂಬುಜ ರಜಶ್ರೀಭಾರಿಯಂ ಸ್ವೇಚ್ಛೆಯಿಂ
ಸಮೃಗವ್ರಾತನಭೀತಚೇತನತುಳಂ ಪೀರ್ದಂ ಗಜಾರಾತಿ ಪಂ-
ಚಮುಖಂ ತೀಕ್ಷ್ಣನಖಂ ಸಕೇಸರಶಿಖಂ ವಿಕ್ರಾಂತಲಕ್ಷ್ಮೀಸಖಂ ೧೧೧

ಅಂತು ಪಿಂಗಳಕಂ ಯಮುನಾಜಳಮನೀಂಟ ಮಗುಳ್ದು ಬಂದು ನಿಜಭುಜಪರಿಪಾಲಿತ ಕಾಂತಾರಮಂ ಪೊಕ್ಕು ಅರಮನೆಗೆ ಬಂದು ದೆಸೆದೆಸೆಗೆಯ್ದು ಸಕಲಮೃಗಗಣಸಮೇತಂ ತಾನುಂ ಸಂಜೀವಕನುಂ ವಿನೋದಪ್ರಾಣಮಿತ್ರರಾಗಿರ್ದೆಡೆಯೊಳೊಂದು ದಿವಸಂ ಪಿಂಗಳಕನನೇಕ ಕರಿಣೀ ಕಳಭವ್ರಾತಮನಸಂಖ್ಯಾತಮಂ ಕೊಂದು ಕಾಕಾನೀಕಜಂಬುಕನಿಕುರುಂಬಕ್ಕೆ ಸೋವತಂ ಮಾಡುವುದಂ ಸಂಜೀವಕಂ ಕಂಡು ಕರುಣರಸಾರ್ದ್ರಹೃದಯನಾಗಿ ತಾಂ ಮುನ್ನಮೇ ಧರ್ಮಾರ್ಥವರ್ಧನ ಚಂದ್ರಾಯಮಾನನಪ್ಪ ವರ್ಧಮಾನನ ಮನೆಯೊಳಿರ್ಪಂದಷ್ಟಾದಶಪುರಾಣಶ್ರುತಿಸ್ಮೃತಿರಾಮಾಯಣ ಭಾರತಾದಿ ಕಥಾಶ್ರವಣಪರಿಣತನುಂ ಮನ್ವತ್ರಿವಸಿಷ್ಠ ಹಾರೀತಯಾಜ್ಞವಲ್ಕ್ಯಾಂಗಿರಸಸಂಯಮನಾಪಸ್ತಂಬ ಸಂವರ್ತ ಕಾತ್ಯಾಯನ ಬೃಹಸ್ಪತಿ ಪಾರಾಶರ ವ್ಯಾಸಾಂಬರೀಷ ಗೌತಮ ಸತ್ಯಂತಪ ಭೃಗು ಕಾಶ್ಯಪ

ಕುಡಿಯಲು ಯಮುನಾನದಿಗೆ ಹೊರಟನು. ೧೧೦. ದುಂಬಿಗಳ ಸಮೂಹದಷ್ಟು ಕಪ್ಪಗಿರುವ ಕನ್ನೈದಿಲೆಗಳಿಂದ ಕೂಡಿದುದೂ ಅರಳಿರುವ ಕಮಲದ ಕೇಸರಗಳಿಂದ ವ್ಯಾಪ್ತವಾದುದೂ ಆದ ಯಮುನಾನದೀತೀರಕ್ಕೆ ಬಾಯಾರಿಕೆಯಿಂದ ಕೂಡಿದ ಪಿಂಗಳಕನು ಪ್ರಾಣಿಪ್ರಪಂಚದೊಡನೆ ಸಂತೋಷದಿಂದ ಬಂದನು. ೧೧೧. ಪ್ರಾಣಿವರ್ಗ ಮನೋಹಾರಿಯೂ, ಉಜ್ವಲಾಂಬುಜ ರಸಶ್ರೀಭಾರಿಯೂ ಆದ ಯಮುನಾವಾರಿಯನ್ನು ತೀಕ್ಷ್ಣನಖಿನೂ, ಸಕೇಸರಶಿಖಿನೂ, ವಿಕ್ರಾಂತಲಕ್ಷ್ಮೀಸಖಿನೂ ಆದ ಪಂಚಮುಖಿನು ಹೀರಿದನು. ವ॥ ಹಾಗೆ ಪಿಂಗಳಕನು ಯಮುನಾಜಲವನ್ನು ಕುಡಿದು ತನ್ನ ಅರಮನೆಗೆ ಬಂದು, ಸಕಲಮೃಗಗಣಸಮೇತನಾಗಿ ತಾನೂ, ಸಂಜಿವಕನೂ ಪ್ರಾಣಮಿತ್ರರಾಗಿದ್ದ ಅದೊಂದು ದಿನ ಪಿಂಗಳಕನು ಅನೇಕ ಕರಿಣೀಕಳಭವ್ರಾತವನ್ನು ಕೊಂದು ಕಾಕಾನೀಕಜಂಬುಕನಿಕರಕ್ಕೆ ಔತಣವನ್ನು ಮಾಡಿದನು. ಇದನ್ನು ಕಂಡು ಸಂಜೀವಕನು ಕರುಣಾರಸಾರ್ದ್ರಹೃದಯನಾಗಿ ತಾನು ಮೊದಲೇ ಧರ್ಮ ವಾರ್ಥವರ್ಧನಚಂದ್ರನಾದ ವರ್ಧಮಾನನ ಮನೆಯಲ್ಲಿ ಬೆಳೆದವನಾದುದರಿಂದ ಅಷ್ಟಾದಶಪುರಾಣ, ಶ್ರುತಿ ಸ್ಮೃತಿ ರಾಮಾಯಣ, ಮಹಾಭಾರತ ಮೊದಲಾದ ಕಥಾ ಶ್ರವಣಪರಿಣತನೂ, ಮನು, ಅತ್ರಿ, ವಸಿಷ್ಠ, ಹಾರೀತ, ಯಾಜ್ಞವಲ್ಕ್ಯ, ಆಂಗೀರಸ, ಸಂಯಮನ, ಆಪಸ್ತಂಬ, ಸಂವರ್ತ, ಕಾತ್ಯಾಯನ, ಬೃಹಸ್ಪತಿ, ಪರಾಶರ, ವ್ಯಾಸ, ಅಂಬರೀಷ, ಗೌತಮ, ಸತ್ಯಂತಪ, ಭೃಗು,

ವಿಶ್ವಾಮಿತ್ರ ವಾಮದೇವ ಲೋಕಾಯತಾದಿ ಸಮಸ್ತ ಮುನಿಮುಖ್ಯ ಮುಖವಿನಿರ್ಗತ ಶ್ರುತಿ ಸ್ಮೃತಿ ವಿಹಿತ ಧರ್ಮವಿಚಾರಪಾರಗನಪ್ಪ ಕಾರಣದಿಂ ವಾರಣಗಣಕ್ಕಕಾರಣಮಪ್ಪ ಪ್ರಾಣಹಾನಿಯುಮಿಷ್ಟಂಗ ದೃಷ್ಟಹಾನಿಯುಮಾಗದಂತು ಮಾಡುವೆನೆಂಡು ಮನದೊಳ್ ನೆನೆದು ಪಿಂಗಳಕನಲ್ಲಿಗೆ ವಂದಿಂತೆಂದಂ:

ಆರೈದು ನೋಡೆ ಧರ್ಮಮೆ
ಸಾರಂ ಸಂಸಾರಿಗದಱಿನುತ್ತಮ ಧರ್ಮಾ-
ಧಾರಮತಿಯಾಗಿ ನೆಗೞ್ದುದು
ಘೋರಾಘವಿದೂರನೆನಿಪ ಪುರುಷಂ ಧರೆಯೊಳ್ ೧೧೨

ಅನಿಮಿಷಚಾಪದಂತೆ ಸಿರಿ ಶಾರದ ನೀರದಕಾಂತಿಯಂತೆ ಯೌ-
ವನದೆಸಕಂ ತೃಣಾಗ್ರಗತವಾಃಕಣಿಕಾಗಣದಂತೆ ಸಂದ ಜೀ-
ವನಮದಱಿಂ ಭವಪ್ರಭವ ಜೀವಿಗೆ ನಿರ್ಮಲಧರ್ಮಮಾರ್ಗದೊಳ್
ಮನಮೊಪೆದಾಗಳುಂ ನಡೆಯವೇೞ್ಪುದು ವಿಶ್ವಮೃಗೇಂದ್ರವಲ್ಲಭಾ ೧೧೩

ಅದಲ್ಲದೆಯುಂ,

ಶ್ಲೋ॥ ಇಷ್ಟಾಯ ದುರ್ಮತಿಂ ದದ್ಯಾತ್ ಯೋ ನಾಮ ನರಕಂ ವ್ರಜೇತ್
ತಸ್ಮಾತ್ಸರ್ವಪ್ರಯತ್ನೇನ ಇಷ್ಟಂ ಧರ್ಮೇಣ ಯೋಜಯೇತ್ ॥೨೮॥

ಟೀ॥ ಇಷ್ಟಂಗಾವನದೊರ್ವಂ ದುರ್ಬುದ್ಧಿಯನಿತ್ತಪನವಂ ನರಕದೊಳಗಿೞಿವನದು ಕಾರಣದಿಂ ಸರ್ವಪ್ರಯತ್ನದಿಂದಿಷ್ಟಂಗೆ ಧರ್ಮವನೆ ಮಾಡಿಕುಡಲ್ವೇೞ್ಕುದು ಎಂಬ ನೀತಿವಚನಮುಂಟಪ್ಪುದಱಿಂ ನಿಮ್ಮಡಿಗಳ್ಗೆ ಹಿತೋಪದೇಶಂಗೆಯಲ್ ಬಂದೆಂ. ಇದಂ ದಿವ್ಯಚಿತ್ತದಿಂದವಧರಿಸಿ ಕೈಕೊಳ್ವುದೆಂದನೇಕ

ಕಾಶ್ಯಪ, ವಿಶ್ವಾಮಿತ್ರ, ವಾಮದೇವ, ಲೋಕಾಯತ ಮೊದಲಾದ ಸಮಸ್ತ ಮುನಿಮುಖ್ಯರ ಮುಖಗಳಿಂದ ಹೊರಟ ಶ್ರುತಿ ಸ್ಮೃತಿ ವಿಹಿತ ಧರ್ಮವಿಚಾರಪಾರಂಗತನಾದುದರಿಂದಲೂ ಆನೆಗಳ ಸಮೂಹಕ್ಕೆ ಅಕಾರಣವಾಗಿ ಪ್ರಾಣಹಾನಿಯೂ ಇಷ್ಟನಿಗೆ ಅದೃಷ್ಟಹಾನಿಯೂ ಆಗದಂತೆ ಮಾಡುವೆನು ಎಂದು ಮನಸ್ಸಿನಲ್ಲೇ ನೆನೆದು ಪಿಂಗಳಕನಲ್ಲಿಗೆ ಬಂದು ಹೀಗೆಂದನು; ೧೧೨. ವಿಚಾರಿಸಿ ನೋಡಿದರೆ ಸಂಸಾರಿಗೆ ಧರ್ಮವೇ ಜಗತ್ತಿನಲ್ಲಿ ಶ್ರೇಷ್ಠವಾದುದು. ಅದರಿಂದ ಉತ್ತಮ ಧರ್ಮಮತಿಯಾಗಿ ನಡೆದುಕೊಳ್ಳುವುದರಿಂದ ಮನುಷ್ಯನು ಘೋರವಾದ ಪಾಪಗಳಿಂದ ದೂರನಾಗುವನು. ೧೧೩. ಕಾಮನ ಬಿಲ್ಲಿನಂತೆ, ಶರತ್ಕಾಲದ ಮೋಡದಂತೆಯೂ ಸಿರಿ, ಯೌವನ ಕ್ಷಣಿಕವಾದುದು. ಹುಲ್ಲಿನ ತುದಿಯ ನೀರಿನ ಹನಿಯಂತೆ ಆಯುಸ್ಸು ಶಾಶ್ವತವಾದುದಲ್ಲ. ಆದುದರಿಂದ, ವಿಶ್ವ ಮೃಗೇಂದ್ರವಲ್ಲಭಾ ! ಪ್ರತಿಯೊಂದು ಪ್ರಾಣಿಯೂ ನಿರ್ಮಲವಾದ ಧರ್ಮಮಾರ್ಗದಲ್ಲಿ ಮನಸ್ಸಿಟ್ಟು ನೆನೆಯಬೇಕು. ಅಲ್ಲದೆ, ಶ್ಲೋ॥ ಪ್ರಿಯನಾದವನಿಗೆ ಯಾರು ದುರ್ಬುದ್ಧಿಯನ್ನು ಉಪದೇಶಿಸುವನೋ ಅವನು ನರಕಭಾಜನನಾಗುವನು. ಅದರಿಂದ ಸರ್ವಪ್ರಯತ್ನಗಳಿಂದಲೂ ಸ್ನೇಹಿತರಿಗೆ ಧರ್ಮವನ್ನೇ ಬೋಧಿಸಬೇಕು ಎಂಬ ನೀತಿವಾಕ್ಯ ಉಂಟು. ಅದರಿಂದ ನಿಮಗೆ ಹಿತೋಪದೇಶವನ್ನು ಮಾಡೋಣ ಎಂದು ಬಂದೆ. ಇದನ್ನು ದಿವ್ಯಚಿತ್ತದಿಂದ ಅವಧರಿಸಿ ಸ್ವೀಕರಿಸಬೇಕೆಂದು ಅನೇಕ ಪ್ರಕಾರ ವಚನರಚನೆಗಳಿಂದ ಪಂಚಮುಖನನ್ನು ತನಗೆ ಅಭಿಮುಖನನ್ನಾಗಿಸಿ

ಪ್ರಕಾರ ವಚನರಚನೆಗಳಿಂ ಪಂಚಮುಖನಂ ತನಗಭಿಮುಖನಂ ಮಾಡಿ ಸವಿಸ್ತರಂ ಪೇಟಲ್ ತಗುಳ್ದಿಂತೆಂದಂ: ದೇವರ್ ಮುನ್ನಿನ ಭವದೊಳ್ ಮಾಯಾಪುರಮೆಂಬ ಪಟ್ಟಣದೊಳ್ ಸಿಂಹವರ್ಮನೆಂಬರಸಾಗಿ ರಾಜ್ಯಂಗೆಯ್ಯುತ್ತುಂ ಪಲವು ಕಾಲದಿಂ ಮೇಲೆ ಸಂಸಾರಸುಖಕ್ಕಲಸಿ ತಪೋವನದೊಳ್ ನೆಲಸಿ ನಿಲುತ್ತುಮಾಪ್ತಾಗಮಪದಾರ್ಥಂಗಳನಱಿಯದೆ ಗುರೂಪದೇಶಂಗೊಳ್ಳದೆ ಪಂಚಾಗ್ನಿಸಾಧಕನಪ್ಪ ತಪೋಧನನಂ ಕಂಡಾನುಮಿಂತೆ ತಪಂಗೆಯ್ವೆನೆಂದು ಪಂಚಾಗ್ನಿತಾಪತಪ್ತನಾಗಿ ಭಾವಶುದ್ಧಿಗೆಟ್ಟು ಕೋಪಾಗ್ನಿ ಪೆರ್ಚೆ ರೌದ್ರಧ್ಯಾನದೊಳ್ ಸತ್ತತುಳಬಲಪರಾಕ್ರಮನಪ್ಪ ಸಿಂಗನಾಗಿ ಪುಟ್ಟಿದಿರ್ ಆನುಂ ತಪೋವನದೊಳ್ ಪಲಕಾಲಂ ತಪಂಗೆಯ್ದು ಕೇವಲಜ್ಞಾನಂ ಪುಟ್ಟುವಲ್ಲಿ ಜನ್ಮಾಂತರ ದುಷ್ಕರ್ಮ ವಾಸನೆ ಮಿಗೆ ಗುರುಗಳಾಜ್ಞೆಯುನವಜ್ಞೆಗೆಯ್ದು ತಾಪಸಕನ್ಯೆಯಂ ಕಂಡು ಸಾಪೇಕ್ಷನಾಗಿ ನೋಡುವುದುಮಾ ತಪಸ್ವಿ ಕಂಡು ಮುಳಿದೆನಗೆ, ಪಶುವಿನ ಬಸಿಱೊಳ್ ಬರ್ಪುದೆಂದು ಶಾಪವನೀಯೆ ಶಾಪಕ್ಕಳ್ಕಿ ಕೈಕೊಂಡು ನಿಮ್ಮಡಿಗಳಲ್ಲಿ ದಯೆಯುಳ್ಳೊಡೆ ಧರ್ಮಶ್ರವಣಮುಳ್ಳವರ್ಗಳ ಮನೆಯಲ್ಲಿ ಪುಟ್ಟುವಂತು, ಜಾತಿಸ್ಮರನಪ್ಪಂತು ವರಮಂ ದಯೆಗೆಯ್ಯಿಮೆನೆ, ತಪಸ್ವಿ ಕಾರುಣ್ಯದಿಂ ತಥಾಸ್ತುವೆನಲದಱಿಂ ನಿರ್ಮಳಧರ್ಮಮಾರ್ಗನಪ್ಪ ವರ್ಧಮಾನನ ಮನೆಯೊಳ್ ಪಶುವಾಗಿ ಪುಟ್ಟಿ ಧರ್ಮಾಧರ್ಮಂಗಳನಱಿವೆನಪ್ಪುದಱಿಂ ನಿಮಗೆ ತಿಳಿಪಿದೆಪೆನದೆಂತೆನೆ :

ಆಯತಚಿತ್ತ ! ಮತ್ತಕಳಭೋತ್ಕರಮಂ ತವೆ ಕೊಂದ ಕಾರಣಂ
ವಾಯಸಗೃಧ್ರ ಸಂಕುಳ ವೃಕಪ್ರಕರೋರು ತರಕ್ಷು ಋಕ್ಷಗೋ-
ಮಾಯುನಿಕಾಯಮಂ ತಣಿಪಿ ವಿಶ್ವಮೃಗೇಶ್ವರ ಚಕ್ರವರ್ತಿಲ-
ಕ್ಷ್ಮೀಯುತ ಮಾಡಿಕೊಳ್ಳದಿರು ನೀನನಿಮಿತ್ತಮದೃಷ್ಟಹಾನಿಯಂ ೧೧೪

ಸವಿಸ್ತಾರವಾಗಿ ಹೇಳತೊಡಗಿದನು : ಪ್ರಭುಗಳು ಪೂರ್ವಜನ್ಮದಲ್ಲಿ ಮಾಯಾಪುರ ಎಂಬ ಪಟ್ಟಣದಲ್ಲಿ ಸಿಂಹವರ್ಮ ಎಂಬ ಅರಸನಾಗಿ ರಾಜ್ಯಭಾರಮಾದುತ್ತಿದ್ದಿರಿ. ಹಲವು ಕಾಲದ ಮೇಲೆ ಸಂಸಾರಸುಖಕ್ಕೆ ಅಸಹ್ಯಪಟ್ಟು ತಪೋವನದಲ್ಲಿ ನೆಲಸಿದಿರಿ. ಅಲ್ಲಿ ಆಪ್ತಾಗಮಪದಾರ್ಥಗಳನ್ನು ತಿಳಿದುಕೊಳ್ಳದೆ ಗುರೂಪದೇಶವನ್ನು ಸ್ವೀಕರಿಸದೆ ಪಂಚಾಗ್ನಿಸಾಧಕನಾದ ಒಬ್ಬ ತಪೋಧನನನ್ನು ಕಂಡು ತಾನೂ ಹೀಗೆಯೇ ತಪಸ್ಸು ಮಾಡುವೆನೆಂದು ಪಂಚಾಗ್ನಿತಾಪತಪ್ತನಾಗಿ ಭಾವಶುದ್ಧಿಗೆಟ್ಟು ಕೋಪಾಗ್ನಿ ಹೆಚ್ಚಿ ರೌದ್ರಧ್ಯಾನದಿಂದ ಸತ್ತು ಅತುಳಬಲಪರಾಕ್ರಮಿಯಾದ ಸಿಂಹವಾಗಿ ಹುಟ್ಟಿದಿರಿ. ನಾನೂ ತಪೋವನದಲ್ಲಿ ಹಲವುಕಾಲ ತಪಸ್ಸನ್ನು ಮಾಡಿ ಕೇವಲಜ್ಞಾನ ಹುಟ್ಟುತ್ತಿದ್ದಾಗ ಜನ್ಮಾಂತರ ದುಷ್ಕರ್ಮವಾಸನೆಯಿಂದಾಗಿ ಗುರುಗಳ ಆಜ್ಞೆಯನ್ನು ತಿರಸ್ಕರಿಸಿ ತಾಪಸಕನ್ಯೆಯನ್ನು ಕಂಡು ಸಾಪೇಕ್ಷನಾಗಿ ನೋಡಿದೆ. ಆ ತಪಸ್ವಿ ನನ್ನನ್ನು ಕಂಡು ಕೋಪಿಸಿ ಪಶುವಿನ ಹೊಟ್ಟೆಯಲ್ಲಿ ಹುಟ್ಟು ಎಂದು ಶಾಪಕೊಡಲು ಶಾಪಕ್ಕೆ ಹೆದರಿ ದಯವಿಟ್ಟು ಧರ್ಮಶ್ರವಣರ ಮನೆಯಲ್ಲಿ ಹುಟ್ಟುವಂತೆಯೂ, ಜಾತಿಸ್ಮರನಾಗುವಂತೆಯೂ ಅನುಗ್ರಹಿಸಿ ಎಂದು ಬೇಡಿಕೊಂಡೆ. ತಪಸ್ವಿ ಕರುಣೆಯಿಂದ ತಥಾಸ್ತು ಎಂದು ಹೇಳಲು ನಿರ್ಮಲಧರ್ಮನಾದ ವರ್ಧಮಾನನ ಮನೆಯಲ್ಲಿ ಹುಟ್ಟಿ ಧರ್ಮಾಧರ್ಮಗಳನ್ನು ತಿಳಿಯುವಂತಾಯಿತು. ಅದರಿಂದ ನಿಮಗೆ ಅದನ್ನು ಬೋಧಿಸಿದೆ. ೧೧೪. ಆಯತಚಿತ್ತ ! ವಿಶ್ವಮೃಗೇಶ್ವರ ಚಕ್ರವರ್ತಿಲಕ್ಷ್ಮೀಯುತ! ಮತ್ತ ಕಳಭಸಮೂಹವನ್ನು ಕೊಂದುದರಿಂದ ಕಾಗೆ ಹದ್ದು ತೋಳ ಹುಲಿ ಕರಡಿ ನರಿಗಳೇ ಮೊದಲಾದ ಪ್ರಾಣಿಗಳನ್ನು ತೃಪ್ತಿ ಪಡಿಸಿ ನಿಷ್ಕಾರಣವಾಗಿ ನೀನು ಅದೃಷ್ಟ ಹಾನಿಯನ್ನು

ಎಂದು ಮಾಣದ ಮತ್ತಮಿಂತೆಂದಂ : ನೀನೀ ಕ್ರೂರಕರ್ಮಮಂ ಪತ್ತುವಿಡದೆ ನಡೆದು, ನರಕದೊಳ್ ನಾರಕರ್ ಮಾಳ್ಪ ಘೋರತರ ತಾಪಕ್ಕೆ ಪಕ್ಕಾಗಿ ನಿಷ್ಕಾರಣಂ ಕಿಡದೆ ಎನ್ನ ಪೇಳ್ವುದಂ ಗೆಯ್ವೆಯಪ್ಪೊಡೆ ವೃಥಾ ಪ್ರಾಣಿವಧೆಯಂ ಮಾಣ್ದು ಪರಲೋಕಸುಖಮಂ ಪಡೆದುಕೊಳ್ವುದ ಬುದ್ಧಿಯೆನೆ ಪಿಂಗಳಕನಿಂತೆಂದಂ : ಸಮಸ್ತಪ್ರಾಣಿಗಳುಂ ತಂತಮ್ಮ ಜಾತಿಗೆ ತಕ್ಕಂದದೊಳೆ ಜೀವನೋಪಾಯಮಂ ಚಿಂತಿಸಿಕೊಂಡು ಬಾಳ್ವುದ ಧರ್ಮಮದಱೆನೆನಗಂ ಕೊಲ್ವುದುಂ ತಿಂಬುದುಂ ಧರ್ಮವಲ್ಲದ ಪೆಱತು ಧರ್ಮಮಾವುದುಮಿಲ್ಲೆನೆ ಸಂಜೀವಕಂ ಪೇೞ್ಗುಂ: ಈ ಲೋಕದೊಳ್ ತತ್ತ್ವನಿಶ್ಚಯಂಗೆಯ್ವುದ ಕಾರಣಮಾಗಿ ಸಮಯಸಿದ್ಧಾಂತಂಗಳ್ ಪಲವಾದವು. ಅಲ್ಲಿ ಧರ್ಮಮಧರ್ಮಮೆಂದೆರಡ ಭೇದಮಕ್ಕುಂ ಅವಾವುವೆಂದೊಡ, 'ನ ಹಿಂಸ್ಯಾತ್ ಸರ್ವಭೂತಾನಿ' ಎಂದು ಅಕಳಂಕ ತರ್ಕ ಪ್ರತಿಷ್ಠಾ ನಿಶ್ಚಯ ಜೈನಸಿದ್ಧಾಂತವಾದಿಗಳುಂ 'ಅಹಿಂಸಾ ಲಕ್ಷಣೋ ಧರ್ಮಃ' ಎಂಬ ವೈಶೇಷಿಕ ನೈಯಾಯಿಕ ಸಾಂಖ್ಯ ಮೀಮಾಂಸಕ ಷಟ್ತರ್ಕ ಸಿದ್ಧಾಂತವಾದಿಗಳುಂ, ಈಯೊಂದದೆಯೊಳ್ ಏಕವಾಕ್ಯರಾಗಿ ಪ್ರಾಣಿರಕ್ಷಣಮೆ ಪರಮಧರ್ಮಂ, ಪ್ರಾಣಿವಧೆಯೆ ಪರಮಪಾತಕಮೆಂಬುದಱಿಂ ಪ್ರಾಣಿವಧೆಗೆಯ್ಯಲಾಗದನೆ ಮತ್ತಂ ಪಿಂಗಳಕನಿಂತೆಂದಂ: ಅಂತಪ್ಪೊಡೆ ಶ್ರೋತ್ರಿಯರುಂ ಕ್ಷತ್ರಿಯರುಂ ಪಱೆಗುಟ್ಟಿ ಪಶುಯಾಗಂಗೆಯ್ದೀ ಲೋಕದೊಳ್ ಪಾತ್ರೀಭೂತರುಂ ಪವಿತ್ರಗೋತ್ರರುಮಾಗಿ ಪರಲೋಕದೊಳ್ ಪಾಕಶಾಸನಸಮಾನ ಭೋಗಿಗಳಪ್ಪರೆಂದು ಈ ಲೋಕಮೆಲ್ಲಮದನೇ ಪ್ರಮಾಣಮಂ ಮಾಡಿ ನುಡಿದು ಪರಮಾರ್ಥಮಂ ಕಂಡುಮಂತೆ ನಡೆದಪರೆಂತೆನೆ ಮತ್ತಂ ಸಂಜೀವಕನಿಂತೆಂದಂ : ನೀವೆಂದಂತೆ ಬ್ರಾಹ್ಮಣರುಂ ಕ್ಷತ್ರಿಯರುಂ ವೇದವಿಹಿತಕರ್ಮಾನುಷ್ಠಾನತತ್ಪರರಪ್ಪುದಱಿಂ ಯಾಗಾತಿಥಿಪಿತೃದೇವತಾನಿಮಿತ್ತಂ ವಿಧಿಪೂರ್ವಕಂ

ಮಾಡಿಕೊಳ್ಳದಿರು. ವ॥ ನೀನು ಈ ಕ್ರೂರಕರ್ಮವನ್ನು ಮಾಡುತ್ತ ನರಕದಲ್ಲಿ ನಾರಕರು ಮಾಡುವ ಘೋರತರ ಪಾಶಕ್ಕೆ ತುತ್ತಾಗಿ ನಿಷ್ಕಾರಣವಾಗಿ ಕೆಡದೆ, ನಾನು ಹೇಳಿದಂತೆ ಕೇಳುವೆಯಾದರೆ ವೃಥಾ ಪ್ರಾಣಿವಧೆಯನ್ನು ಬಿಟ್ಟು ಪರಲೋಕಸುಖವನ್ನು ಪಡೆಯುವುದೇ ಬುದ್ಧಿವಂತಿಕೆ. ಆಗ ಪಿಂಗಳಕನು ಹೀಗೆಂದನು : ಸಮಸ್ತಪ್ರಾಣಿಗಳೂ ತಮ್ಮತಮ್ಮ ಜಾತಿಗೆ ತಕ್ಕಂತೆ ಜೀವನೋಪಾಯವನ್ನು ಚಿಂತಿಸುತ್ತ ಬಾಳುವುದೇ ಧರ್ಮ. ಹಾಗೆಯೇ ಕೊಲ್ಲುವುದೂ ತಿನ್ನುವುದೂ ನನ್ನ ಧರ್ಮ. ಅದಕ್ಕೆ ಸಂಜೀವಕನು ಮತ್ತೆ ಹೇಳಿದನು : ಈ ಲೋಕದಲ್ಲಿ ತತ್ತ್ವನಿಶ್ಚಯಮಾಡಲಿಕ್ಕಾಗಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು. ಅಲ್ಲಿ ಧರ್ಮ, ಅಧರ್ಮ ಎಂದು ಎರಡೇ ಭೇದಗಳು. 'ನ ಹಿಂಸ್ಯಾತ್ ಸರ್ವ ಭೂತಾನಿ' ಎಂಬುದು ಅವುಗಳಲ್ಲೊಂದು. ಇನ್ನೊಂದು 'ಅಹಿಂಸಾಲಕ್ಷಣೋ ಧರ್ಮಃ' ಈ ಒಂದೇ ವಿಷಯವನ್ನು ಏಕವಾಕ್ಯವಾಗಿ ಪ್ರಾಣಿರಕ್ಷಣೆಯೇ ಪರಮಧರ್ಮ, ಪ್ರಾಣಿವಧೆಯೇ ಪಾಪಕರ್ಮ ಎಂದು ಹೇಳಿರುವರು. ಅದರಿಂದ ಪ್ರಾಣಿವಧೆಯನ್ನು ಮಾಡುವುದು ವಿಹಿತವಲ್ಲ. ಅದಕ್ಕೆ ಪಿಂಗಳಕನು ಹೀಗೆಂದನು : ಹಾಗಾದರೆ ಶ್ರೋತ್ರಿಯರೂ, ಕ್ಷತ್ರಿಯರೂ ಪಶುಯಜ್ಞಮಾಡಿ ಈ ಲೋಕದಲ್ಲಿ ಪವಿತ್ರಗೋತ್ರರೂ ಪರಲೋಕದಲ್ಲಿ ಇಂದ್ರಸಮಾನ ಭೋಗಿಗಳೂ ಎನ್ನಿಸುವರಲ್ಲವೇ ? ಈ ಲೋಕವೆಲ್ಲವೂ ಅದನ್ನೇ ಪ್ರಮಾಣವೆಂದು ತಿಳಿದು ಅದರಲ್ಲಿಯೇ ಪರಮಾರ್ಥವನ್ನು ಕಂಡು ಅದರಂತೆ ನಡೆಯುತ್ತಿದ್ದಾರಲ್ಲ, ಇದು ಹೇಗೆ ಧರ್ಮ ? ಸಂಜೀವಕನು ಹೇಳಿದ : ನೀವು ಹೇಳಿದಂತೆ ಬ್ರಾಹ್ಮಣರೂ ಕ್ಷತ್ರಿಯರೂ ವೇದವಿಹಿತಕರ್ಮಾನುಷ್ಠಾನತತ್ಪರರಾದುದರಿಂದ ಯಾಗ, ಅತಿಥಿ, ಪಿತೃದೇವತೆಗಳಿಗಾಗಿ

ಪ್ರಾಣಿವಧೆಗೆಯ್ವರಲ್ಲದೆ ವೃಥಾ ವಧೆಗೆಯ್ವರಿಲ್ಲ ಆವರ್ಗಮಾ ಕರ್ಮಂ ಪುಣ್ಯಫಲಮನೀವುದೊಂದುಂ ಸಂದೆಯಮಿಲ್ಲ ಈಯಂದಮಲ್ಲದೆ ಪ್ರಾಣಿಗಳಂ ಕೊಂದೊಡಂ ತಿಂದೊಡಂ ಮಹಾಪಾತಕಗತಿಯ ನೆಯ್ದುವರದೆಂತೆನೆ :

ಶ್ಲೋ ॥ ಯಾವನ್ತಿ ಪಶುರೋಮಾಣಿ ತಾವದ್ಗತ್ವಾ ಹಿ ಮಾರಣಮ್
ವೃಥಾ ಪಶುತ್ವಮಾಪ್ನೋತಿ ನರಕಂ ಚೈವ ಗಚ್ಛತಿ ॥೨೯॥

ಟೀ॥ ಪಶುಗಳ ಮೆಯ್ಯೊಳೆನಿತು ರೋಮಮುಂಟನಿತು ಬಾರಿ ತಾಂ ಕೊಲಿಸಿಕೊಂಬಂ ವೃಥಾ ಪಶುವಧೆಯಂ ಮಾಡಿದವಂ; ನರಕವನೆಯ್ದುವಂ, ಪಶುತ್ವವನೆಯ್ದುವಂ ಎಂಬುದು ಮಹಾಮನುಮುನಿಗಳ್ ಪೇಳ್ದ ವಾಕ್ಯಮುಂಟಪುದಱಿಂ ವೃಥಾ ಪ್ರಾಣಿವಧೆಗೆಯ್ಯೆ ನರಕ ತಿರ್ಯಗ್ಯೋನಿಗಳೊಳನೇಕ ಕಾಲಂ ಬಹುಪ್ರಕಾರಜೀವಿಗಳಾಗಿ ಪುಟ್ಟುವರೆನೆ ಮತ್ತಂ ಪಿಂಗಳಕನಿಂತೆಂದಂ: ಓದುಗಳಂ ಬಲ್ಲ ಚದುರರೇನಾನುಮೊಂದನೆಲ್ಲಾ ತೆಱದಿಂ ಮಾಡಲ್ಬರದಱಿಂದೋದುಗಳುಂ ಪ್ರಮಾಣ ಮಲ್ಲಮೆತ್ತಾನುಂ ನಿನ್ನ ಪೇಳ್ವಂತೋದುಗಳುಂ ಪ್ರಮಾಣಮಪ್ಪೊಡೆ

ಶ್ಲೋ ॥ ಯಾವಜ್ಜೀವಂ ಸುಖಂ ಜೀವೇತ್ ನಾಸ್ತಿ ಮೃತ್ಯೋರಗೋಚರಃ
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥೩೦॥

ಟೀ॥ ಎನ್ನೆವರಂ ಜೀವಿಸುವನನ್ನೆವರಂ ಸುಖಂಬಡುವುದು : ಮೃತ್ಯುವಿಗೊಳಗಾಗದ ಪ್ರಾಣಿಯೇ ಇಲ್ಲ; ಬೂದಿಯಾದ ದೇಹಂ ಮರಳಿ ಪುಟ್ಟುವುದೇ ಇಲ್ಲಂ-ಎಂಬುದಿದು ಬೃಹಸ್ಪತಿಯ ಮತಂ ಇದು ಪ್ರತ್ಯಕ್ಷಾನುಭವಸಿದ್ಧಮಪ್ಪುದಱಿಂದಿದವೆ ಪ್ರಮಾಣಂ. ಬೆಂದ ಬೀಜಂ ಪುಟ್ಟದಂತೆ ಭಸ್ಮಾಂತರಿತದೇಹಂ ನಿಶ್ಚಯಂ ಪುಟ್ಟುವುದಿಲ್ಲ, ಪರಲೋಕಮಂ ಕಂಡವರಿಲ್ಲ, ಅದು ಕಾರಣದಿಂದಾವ ಪ್ರಾಣಿಯುಂ ತನಗೆ ತಾಂ ತನಗೆ ಪ್ರಾಣಮುಳ್ಳನ್ನೆಗಂ ಸುಖಮಂ ನೆಗೞ್ವುದೆನೆ ಮತ್ತಂ ಸಂಜೀವಕನಿಂತೆಂದಂ; ದೇವಾ! ನೀವಿಂತಪ್ಪಪಸಿದ್ಧಾಂತಮಂ ಪಿಡಿದು ನುಡಿದು ಕಿಡಬೇಡಿಮೆಂದೆಂತೆನೆ :

ವಿಧಿಪೂರ್ವಕವಾಗಿ ಪ್ರಾಣಿವಧೆ ಮಾಡುವರಲ್ಲದೆ ವೃಥಾ ಆಚರಿಸುತ್ತಿಲ್ಲ, ಅವರಿಗೆ ಆ ಕಾರ್ಯಗಳು ಪುಣ್ಯಫಲವನ್ನು ಕೊಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ; ಈ ರೀತಿಯಲ್ಲಿ ಅಲ್ಲದೆ ಬೇರೆ ರೀತಿಯಲ್ಲಿ ಪ್ರಾಣಿಗಳನ್ನು ಕೊಂದರೂ, ತಿಂದರೂ ಮಹಾಪಾತಕಕ್ಕೆ ಪಾತ್ರರಾಗುವರು. ಶ್ಲೋ॥ ವೃಥಾ ಪಶುವಧೆಯನ್ನು ಮಾಡಿದವನು ಪಶುಗಳ ಮೈಯಲ್ಲಿ ಎಷ್ಟು ರೋಮಗಳಿವೆಯೋ ಅಷ್ಟುಬಾರಿ ತನ್ನನ್ನು ಕೊಲ್ಲಿಸಿಕೊಳ್ಳುವನು ; ಅಲ್ಲದೆ ನರಕವನ್ನೂ ಪಶುತ್ವವನ್ನು ಹೊಂದುವನು ಎಂದು ಮಹಾಮುನಿಗಳು ಹೇಳಿದ ಮಾತು. ಅದಕ್ಕೆ ಪಿಂಗಳಕನು ಹೇಳಿದನು : ಓದನ್ನು ಬಲ್ಲ ಚತುರರು ಏನನ್ನಾದರೂ ಒಂದನ್ನು ಎಲ್ಲಾ ರೀತಿಗಳಿಂದ ಮಾಡಬಲ್ಲರು. ಅದರಿಂದ ಓದುಗಳು ಪ್ರಮಾಣವಲ್ಲ. ಶ್ಲೋ॥ ಎಲ್ಲಿಯವರೆಗೆ ಜೀವಿಸುವುದು ಸಾಧ್ಯವೋ ಅಲ್ಲಿಯವರೆಗೆ ಸುಖಪಡಬೇಕು ಮೃತ್ಯುವಿಗೆ ಒಳಗಾಗದ ಪ್ರಾಣಿಯೇ ಇಲ್ಲ. ಬೂದಿಯಾದ ದೇಹವು ಮರಳಿ ಹುಟ್ಟುವುದೇ ಸಾಧ್ಯವಿಲ್ಲ ಎಂಬುದು ಬೃಹಸ್ಪತಿಯ ವಾಣಿ. ಇದು ಪ್ರತ್ಯಕ್ಷವಾಗಿ ಅನುಭವಸಿದ್ಧವಾದುದರಿಂದ ಇದೇ ಪ್ರಮಾಣ. ಬೆಂದ ಬೀಜ ಎಂದೂ ಹುಟ್ಟದಿರುವಂತೆ ಭಸ್ಮಾಂತರಿತದೇಹ ಖಂಡಿತವಾಗಿಯೂ ಹುಟ್ಟುವುದಿಲ್ಲ, ಪರಲೋಕವನ್ನು ಕಂಡವರಿಲ್ಲ. ಆದುದರಿಂದ ಯಾವ ಪ್ರಾಣಿಯಾದರೂ ಪ್ರಾಣವಿರುವವರೆಗೆ ಸುಖಪಡೆಯಬೇಕು. ಸಂಜೀವಕನು ಹೇಳಿದನು : ದೇವಾ ನೀವು

ಶ್ಲೋ॥ ಸಂದಿಗ್ಧೇಽಪಿ ಪರೇ ಲೋಕೇ ತ್ಯಾಜ್ಯಮೇವಾಶುಭಂ ಬುಧೈಃ
ಯದಿ ನಾಸ್ತಿ ತತಃ ಕಿಂ ಸ್ಯಾತ್ ಅಸ್ತಿ ಚೇನ್ನಾಸ್ತಿಕೋ ಹತಃ ॥೩೦॥

ಟೀ॥ ಪರಲೋಕಮೆತ್ತಲಾನುಮಾದಪ್ಪುದೋ ಆಗದೋ ಎಂಬ ಸಂದೆಯಮುಳ್ಳೊಡಂ ಬುದ್ಧಿವಂತರಪ್ಪರ್ ಪಾಪಮಂ ಮಾಡಲಾಗದು; ಪರಲೋಕಮೆತ್ತಲಾನುಮಿಲ್ಲದಿರ್ದೊಡಂ ಅಧರ್ಮಮಂ ಬಿಟ್ಟುದಱಿಂದಾವ ಹಾನಿಯಪ್ಪುದು ? ಏಗೆಯ್ದುಂ ಪರಲೋಕಮಿಲ್ಲೆಂಬ ನಾಸ್ತಿಕಂ ಕಿಡುವಂ-ಎಂಬುದು ತತ್ತ್ವವಾಕ್ಯಮುಂಟಪ್ಪುದಱಿಂ ಪರಮಿಲ್ಲೆಂಬವನಾ ಅಪಸಿದ್ಧಾಂತಮನೆ ಪ್ರಮಾಣಮಂ ಮಾಡಿ ಕೇವಲ ಪಾಪಪರನಪ್ಪಂ. ಪರಮುಂಟಾದ ಪಕ್ಷಂ ನಿಷ್ಫಲಂ ಕಿಡುಗುಂ ಧರ್ಮಪರನಪ್ಪಂ ಪರಮುಳ್ಳೊಡಮಿಲ್ಲದೊಡಂ ಕಿಡಂ. ಅದಲ್ಲದೆಯುಂ. ವರರುಚಿಭಟ್ಟಂ ಪುಣ್ಯಾರ್ಥಂ ತೀರ್ಥಯಾತ್ರಾನಿಮಿತ್ತಂ ದಂಡಕಾರಣ್ಯದೊಳ್ ಬರುತ್ತಿರಲಲ್ಲೊರ್ವಂ ಬ್ರಹ್ಮರಾಕ್ಷಸನಂ ಕಂಡು ತಿನಲೆಂದು ಬಗೆದು ಕೈಯಂ ಪಿಡಿದು

ವಾಕ್ಯಂ ॥ ಕಃ ಪನ್ಥಾಃ ಕಾ ವಾರ್ತಾ ಕೋ ಮೋದತೇಕಸ್ಸೇವ್ಯತೇ ॥೩೧॥

ಎಂಬುದಂ, ಭಟ್ಟನಾತನ ಚೇಷ್ಟಾಭಾಷೆಗಳಿಂದಾತನಭಿಪ್ರಾಯಮನಱಿದು ಇಂತೆಂದಂ :

ಶ್ಲೋ ॥ ಪ್ರಾಣಾಘಾತಾನ್ನಿವೃತ್ತಿಃ ಪರಧನಹರಣೇ ಸಂಯಮಃ ಸತ್ಯವಾಕ್ಯಂ
ಕಾಲೇ ಶಕ್ತ್ಯಾಪ್ರದಾನಂ ಯುವತಿಜನಕಥಾ ಮೂಕಭಾವಃ ಪರೇಷಾಂ
ತೃಷ್ಣಾಸ್ರೋತೋ ವಿಭಂಗೋ ಗುರುಷು ಚ ವಿನಯಃ ಸರ್ವಭೂತಾನುಕಂಪಾ
ಸಾಮಾನ್ಯರ ಸರ್ವಶಾಸ್ತ್ರೇಷ್ವನುಪಹತವಿಧಿಶ್ಶ್ರೇಯಸಾಮೇಷಪಂಥಾಃ ॥೩೨॥

ಟೀ॥ ಪ್ರಾಣಿಗಳಂ ಕೊಲಲಾಗದು. ಲೋಗರ ವಸ್ತುವಂ ಕೊಳಲಾಗದು. ಸತ್ಯವನೇ ನುಡಿವುದು. ಕಾಲೋಚಿತದಲ್ಲಿ ತನ್ನ ಶಕ್ತಿಯನಱಿದು ದಾನಮಂ ಮಾಳ್ಪುದು; ಪರಸ್ತ್ರೀಯರ ಮಾತನಾಡುವಲ್ಲಿ ಮೂಕನಾಗಿರ್ಪುದು; ತೃಷ್ಣೆಯೆಂಬ ತೊಱೆಯಂ ಕಟ್ಟುವುದು; ಗುರುಗಳಲ್ಲಿ

ಇಂಥ ಅಪಸಿದ್ಧಾಂತವನ್ನು ಎತ್ತಿ ಹಿಡಿದು ಕೆಡಬೇಡಿ. ಶ್ಲೋ॥ ಪರಲೋಕ ಎಲ್ಲಿಯಾದರೂ ಸಿಕ್ಕೀತೋ ಇಲ್ಲವೋ ಎಂಬ ಸಂದೇಹವಿರುವುದಾದರೆ ಬುದ್ಧಿವಂತರಾದವರು ಪಾಪಕರ್ಮಗಳಲ್ಲಿ ನಿರತರಾಗಿರಬಾರದು. ಪರಲೋಕವು ಇಲ್ಲದಿದ್ದರೂ ಅಧರ್ಮವನ್ನು ತ್ಯಜಿಸುವುದರಿಂದ ಆಗುವ ಹಾನಿಯೇನು? ಏನು ಮಾಡಿದರೂ ಪರಲೋಕವೇ ಇಲ್ಲ ಎನ್ನುವ ನಾಸ್ತಿಕನು ಕೆಡುವನು ; ಎಂದು ತತ್ತ್ವವಾಕ್ಯವಿರುವುದರಿಂದ ಪರವಿಲ್ಲ ಎಂಬುವನ ಅಪಸಿದ್ಧಾಂತವನ್ನೇ ಪ್ರಮಾಣವೆಂದು ಪಾಪಪರನಾಗುವನು. ಪರವುಂಟಾದಲ್ಲಿ ನಿಷ್ಫಲವಾಗಿ ಕೆಡುವುದು. ಧರ್ಮಪರನಾದವನು ಪರವಿದ್ದರೂ ಇಲ್ಲದಿದ್ದರೂ ಕೆಡನು. ಅಲ್ಲದೆ ವರರುಚಿ ಭಟ್ಟನೆಂಬವನು ತೀರ್ಥಯಾತ್ರೆಗೆಂದು ದಂಡಕಾರಣ್ಯದಲ್ಲಿ ಬರುತ್ತಿರಲು ಅಲ್ಲೊಬ್ಬ ಬ್ರಹ್ಮ ರಾಕ್ಷಸನು ಅವನನ್ನು ಕಂಡು ತಿನ್ನಬೇಕೆಂದು ಬಗೆದು ಅವನ ಕೈಹಿಡಿದುಕೊಂಡು, ವಾ॥ 'ಕಃ ಪಂಥಾಃ ಕಾ ವಾರ್ತಾ ಕೋಮೋದತೇಕ ಸ್ಸೇವ್ಯತೇ' ವ॥ ಎಂದು ಕೇಳಲು ಭಟ್ಟನು ಆತನ ಚೇಷ್ಟಾ ಭಾಷೆಗಳಿಂದ ಆತನ ಅಭಿಪ್ರಾಯವನ್ನು ತಿಳಿದು ಹೀಗೆ ಹೇಳಿದನು : ಶ್ಲೋ॥ ಪ್ರಾಣಿಗಳನ್ನು ಕೊಲ್ಲಬಾರದು, ಜನರ ವಸ್ತುಗಳನ್ನು ಕಳಬಾರದು, ಸತ್ಯವನ್ನೇ ನುಡಿಯಬೇಕು, ಕಾಲೋಚಿತವಾಗಿ ತನ್ನ ಶಕ್ತಿಯನ್ನರಿತು ದಾನಮಾಡಬೇಕು, ಪರಸ್ತ್ರೀಯರನ್ನು ಕುರಿತು ಮಾತನಾಡಬಾರದು, ತೃಷ್ಣೆಯೆಂಬ ತೊರೆಯನ್ನು ಅಡ್ಡಕಟ್ಟಬೇಕು, ಗುರುಗಳಲ್ಲಿ

ವಿನಯಂಗೆಯ್ವುದು; ಸರ್ವಪ್ರಾಣಿಗಳಲ್ಲಿ ದಯೆಯನೆ ಮಾಳ್ಪುದು ಇವೆಲ್ಲಮಲ್ಲಾ ಶಾಸ್ತ್ರಂಗಳಲ್ಲಿ ಸಾಧಾರಣಂ, ಕಿಡದ ವಿಧಾನಮನುಳ್ಳ ಇವು ಲೇಸುಗಳ್ಗೆ ಬಟ್ಟೆಯೆನಿಸುವುವು

ಶ್ಲೋ॥ ಅಸ್ಮನ್ಮಹತ್ಯಂಡ ಕಟಾಹಮಧ್ಯೇ ಸೂರಾಗ್ನಿನಾ ರಾತ್ರಿದಿನೇಂಧನೇನ
ಮಾಸರ್ತು ದರ್ವೀ ಪರಿಘಟ್ಟನೇನ ಭೂತಾನಿ ಕಾಲಃ ಪಚತೀತಿ ವಾರ್ತಾ॥೩೪॥

ಟೀ॥ ಬ್ರಹ್ಮಾಂಡಮೆಂಬ ಕೊಪ್ಪರಿಕೆಯ ಮಧ್ಯದಲ್ಲಿ ಸೂರ್ಯನೆಂಬಗ್ನಿಯಿಂ ಪಗಲಿರುಳೆಂಬ ಅಡುಗರ್ಬುಗಳಿಂ ಮಾಸಋತುಗಳೆಂಬ ಸಟ್ಟುಗದಿಂ ತೊಳಸುತ್ತುಂ ಭೂತಂಗಳಂ ಜವ ನಡುತಿರ್ದನಿಂತೆಂಬುದೆ ವಾರ್ತೆ

ಶ್ಲೋ ॥ ಪಂಚಮೇಹನಿ ಷಷ್ಠೇ ವಾ ಶಾಕಂ ಪಚತಿ ಯೋ ಗೃಹೇ
ಅನೃಣೋಹ್ಯಪರ ಪ್ರೇಷ್ಯಃ ಸ ರಾತ್ರಿಂಚರ ಮೋದತೇ ॥೩೫॥

ಟೀ॥ ಐದುದಿನಕಾದೊಡಮಾಱುದಿನಕಾದೊಡಂ ತನ್ನ ಮನೆಯಲ್ಲಿ ಮಾದುರಮನಾದೊಡಮಟ್ಟು ಸಾಲಮಿಲ್ಲದೆ ಪರರಾಳಲ್ಲದುಂಡಿಹುದುಚಿತಮೆಲೆ ರಾತ್ರಿಂಚರ

ಶ್ಲೋ ॥ ಏಕಾ ಭಾರ್ಯಾ ತ್ರಯಃ ಪುತ್ರಾ ದ್ವೌಹಲೌ ದಶಧೇನವಃ
ಮಧ್ಯರಾಷ್ಟ್ರಂತು ಸುಕ್ಷೇತ್ರಂ ಅಸ್ತಿ ಚೇದತಿ ಸೇವ್ಯತೇ ॥೩೬॥

ಟೀ॥ ಒಬ್ಬಳೇ ಪೆಂಡತಿ ಮೂವರ್ ಪುತ್ರರ್, ಎರಡಾರ ಬೆವಸಾಯಂ, ಹತ್ತುಹಸುಕಱಿಹ ಮಧ್ಯದೇಶದೊಳ್ ಸುಕ್ಷೇತ್ರಮಪ್ಪ ತಾಣದೊಳಿರ್ಪುದೇ ಸೇವ್ಯಂ ಎಂದಿಂತು ವರರುಚಿಭಟ್ಟಂ ನಿರತಿಶಯ ಶ್ರೇಯಸ್ಕರಮಪ್ಪ ಧರ್ಮಮಂ ಪೇಳ್ವಲ್ಲಿ ಪ್ರಾಣಿರಕ್ಷಣಮೇ ಮುಖ್ಯಧರ್ಮಮೆಂದು ಪೇಳ್ದಂ ಅದಲ್ಲದೆಯುಂ, ವ್ಯಾಸಭಟ್ಟಂ, ಮಹಾಭಾರತ ಕಥಾಪ್ರಪಂಚಮನನಾಗತಃ ಕಂಡದಂ ಗ್ರಂಥವಿಸ್ತರಂ ಮಾಡಲ್ಬಗೆದು, ಮುನ್ನಂ ವಾಲ್ಮೀಕಿಮುನಿ ರಾಮಾಯಣಮನನಾಗತಂ ಕಂಡಂದು ಗ್ರಂಥವಿಸ್ತರಂಗೆಯ್ವಲ್ಲಿ ಇನ್ನೆಮ್ಮಂತಪ್ಪನಾಗತಕರ್ತೃಗಳುಮಾಗದಿರ್ಕೆಂದಾಜ್ಞೆಯಂ ಮಾಡಿದ ಕಾರಣಂ ವ್ಯಾಸಮುನಿ ವಾಲ್ಮೀಕಿಗಳಲ್ಲಿಗೆ

ವಿನೀತನಾಗಿರಬೇಕು, ಸರ್ವಪ್ರಾಣಿಗಳಲ್ಲೂ ಅನುಕಂಪವನ್ನು ಇಡಬೇಕು. ಇವೆಲ್ಲವೂ ಸರ್ವ ಶಾಸ್ತ್ರಗಳಲ್ಲೂ ಸಾಮಾನ್ಯ. ಎಂದೆಂದೂ ಕೆಡದ ಈ ವಿಧಿಯೇ ಮಾರ್ಗ. ಶ್ಲೋ॥ ಬ್ರಹ್ಮಾಂಡವೆಂಬ ಕೊಪ್ಪರಿಗೆಯಲ್ಲಿ ಸೂರ್ಯನೆಂಬ ಅಗ್ನಿಯಿಂದ ಹಗಲು ಇರುಳುಗಳೆಂಬ ಸೌದೆಗಳಿಂದ ಮಾಸ ಋತುಗಳೆಂಬ ಸಟ್ಟುಗದಿಂದ ಮಗುಚುತ್ತ ಜೀವಿಗಳನ್ನು ಯಮನು ಅಡುಗೆ ಮಾಡುತ್ತಿರುವನು ಎಂಬುದೇ ವಾರ್ತೆ. ಐದುದಿನಕ್ಕಾಗಲೀ, ಆರುದಿನಕ್ಕಾಗಲೀ ತನ್ನ ಮನೆಯಲ್ಲಿಯೇ ಮಧುರವಾದ ಅಡುಗೆಯನ್ನು ಮಾಡಿ ಸಾಲವಿಲ್ಲದೆ ಪರರ ಆಳಾಗದೆ ಉಂಡು ಬದುಕುವುದೇ ಉಚಿತವೆನಿಸುವುದು. ಒಬ್ಬಳೇ ಹೆಂಡತಿ, ಮೂವರು ಪುತ್ರರು, ಎರಡುನೇಗಿಲು ಬೇಸಾಯ, ಹತ್ತು ಹಸುಗಳ ಕರಾವು, ಮಧ್ಯಪ್ರದೇಶದಲ್ಲಿ ಸುಕ್ಷೇತ್ರವಾದ ಸ್ಥಾನದಲ್ಲಿರುವುದೇ ಸೇವ್ಯವಾದುದು. ಹೀಗೆ ವರರುಚಿ ಭಟ್ಟ ಧರ್ಮವನ್ನು ಹೇಳುವಾಗ ಪ್ರಾಣಿರಕ್ಷಣೆಯೇ ಮುಖ್ಯಧರ್ಮವೆಂದು ಹೇಳಿದನು. ಅಲ್ಲದೆ ವ್ಯಾಸಭಟ್ಟನು ಮಹಾಭಾರತಕಥಾಪ್ರಪಂಚವನ್ನು ಕಂಡು ಅದನ್ನು ಗ್ರಂಥವಾಗಿ ರಚಿಸಬೇಕೆಂದು ಬಗೆದು ಮೊದಲು ವಾಲ್ಮೀಕಿ ಮುನಿ ರಾಮಾಯಣ ರಚಿಸುವಾಗ ಇನ್ನು ನಮ್ಮಂತಹ ಕವಿಗಳು ಆಗದಿರಲಿ ಎಂಬ ಆಜ್ಞೆ ಮಾಡಿದ ಕಾರಣ ವ್ಯಾಸಮುನಿ ವಾಲ್ಮೀಕಿಗಳಲ್ಲಿಗೆ ಹೋದನು.

ಪೋಗಿ ವಿನಯವಿನಮಿತೋತ್ತಮಾಂಗನಾಗಿ ಕೈಗಳಂ ಮುಗಿದಿಂತೆಂದಂ : ನಿಮ್ಮಡಿ, ಧರ್ಮಾರ್ಥಕಾಮಮೋಕ್ಷ ಸಾಧನೋಪಾಯಸಾಧನಮಪ್ಪುದೊಂದು ಕಥೆಯಂ ಕಂಡೆ ಅದಂ ಕಬ್ಬಮಂ ಮಾಡಿದಪೆನನುಗ್ರಹಂಗೆಯ್ಯಿಮೆನೆ. ಮುನಿ ಮನದೊಳಗವಧರಿಸಿ ಬಟಿಕ್ಕಿಂತೆಂದಂ : ಅಂತಪ್ಪೊಡೆ ಕೇವಲಂ ಧರ್ಮಮಾವುದದಂ ಪೇಟೆಮೆನೆ ವ್ಯಾಸದೇವನವರ್ಗಿಂತೆಂದಂ :

ಶ್ಲೋ ॥ ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾಚೈವಾವಧಾರ್ಯತಾಂ
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥೩೭॥

ಟೀ ॥ ಎಲ್ಲಾ ಧರ್ಮದ ತಿರುಳಂ ಕೇಳ್ವುದು, ಕೇಳ್ದ ತೆಱನಂ ಲೇಸಾಗವಧರಿಪುದು. ತನಗೆ ಪ್ರತಿಕೂಲಮಪ್ಪುದಂ ಪೆಱರ್ಗೆ ಮಾಡಲಾಗದು ಎಂದಿಂತು ಸಕಲ ಧರ್ಮದ ಸಾರಮಂ ಸಂಕ್ಷೇಪದಿಂ ವ್ಯಾಸಮುನಿ ಪೇೞ್ದನದು ಕಾರಣದಿಂ

ತನಗೆಂದುಂ ಕೇಡಿಲ್ಲದು-
ದನೆ ಬಯಸುವ ಮನುಜನಾವ ಜೀವಮುಮಂ ತ-
ನ್ನನೆ ಬಗೆವ ತೆಱದೆ ಬಗೆವುದು
ಮುನಿ ವೇದವ್ಯಾಸಮತಮಿದತಿಶಯಧರ್ಮಂ ೧೧೪

ಅದಱಿಂ ಪ್ರಾಣಿವಧೆಯೋ ಪೊಲ್ಲದು, ಸಕಲಪ್ರಾಣಿಹಿತಮೋ ಧರ್ಮಮೆಂದನೇಕ ಶ್ರುತದೃಷ್ಟಾನುಮಾನಂಗಳಿಂ ಸಂಜೀವಕಂ ತಿಳಿಪೆ, ಪಿಂಗಳಕಂ ಮೃದುಹೃದಯನಾಗಿ ಮತ್ತಮಿಂತೆಂದಂ:

ಎಲೆ ಪರಮಮಿತ್ರಪುಂಗವ
ವಿಲಸನ್ಮತಿ ನಿನ್ನ ಪೇೞ್ದ ಧರ್ಮಶ್ರವಣಂ
ಪಲತೆಱದಿನೆನ್ನ ಮನದೊಳ್
ನೆಲಸಿದುದಿನ್ನೊಂದು ಚಿಂತೆ ಮನದೊಳಗೆನ್ನಾ ೧೧೫

ಅಲ್ಲಿ ವಿನಯವಿನಮಿತೋತ್ತಮಾಂಗನಾಗಿ ಕೈಮುಗಿದು ಹೀಗೆಂದನು. ಪೂಜ್ಯರೇ, ಧರ್ಮಾರ್ಥಕಾಮಮೋಕ್ಷಸಾಧನೋಪಾಯಸಾಧಕವಾದ ಒಂದು ಕಥೆಯನ್ನು ಕಂಡೆ. ಅದನ್ನು ಕಾವ್ಯವಾಗಿ ಬರೆಯಬೇಕೆಂದಿದ್ದೇನೆ, ಅನುಗ್ರಹಿಸಬೇಕು. ಅದಕ್ಕೆ ವಾಲ್ಮೀಕಿಮುನಿಗಳು ಹೀಗೆ ಉತ್ತರವಿತ್ತರು : ಹಾಗಾದರೆ ಕೇವಲಧರ್ಮವು ಯಾವುದು ಎಂಬುದನ್ನು ಹೇಳಿರಿ ಎನ್ನಲು ವ್ಯಾಸದೇವನು ಅವರಿಗೆ ಹೀಗೆ ಹೇಳಿದನು : ಶ್ಲೋ॥ ಸರ್ವಧರ್ಮಗಳ ತಿರುಳನ್ನು ಕೇಳಬೇಕು ; ಕೇಳಿದಂತೆಯೇ ಲೇಸಾಗಿ ಅವಧರಿಸಬೇಕು ; ತನಗೆ ಪ್ರತಿಕೂಲವಾದುದನ್ನು ಪರರಿಗೆ ಬಗೆಯಬಾರದು. ೧೧೪. ಹೀಗೆ ಸಕಲಧರ್ಮದ ಸಾರವನ್ನೂ ಸಂಕ್ಷೇಪವಾಗಿ ವ್ಯಾಸಮುನಿ ತಿಳಿಸಿದನು. ಅದರಿಂದ, ತನಗೆ ಎಂದೂ ಕೇಡಿಲ್ಲದುದನ್ನೇ ಬಯಸುವ ಮನುಷ್ಯನು ಯಾವ ಜೀವವನ್ನೂ ತನ್ನನ್ನೇ ಬಗೆಯುವಂತೆ ಎಣಿಸಬೇಕು. ಇದೇ ಅತಿಶಯವಾದ ಧರ್ಮ. ಇದು ಮುನಿ ವೇದವ್ಯಾಸನ ಮತ. ವ॥ ಅದರಿಂದ ಪ್ರಾಣವಧೆಯೇ ನೀಚವಾದುದು. ಸಕಲ ಪ್ರಾಣಿಹಿತವೇ ಧರ್ಮವೆಂದು ಅನೇಕ ಶ್ರುತದೃಷ್ಟಾನುಮಾನಗಳಿಂದ ಸಂಜೀವಕನು ತಿಳಿಸಲು, ಪಿಂಗಳಕನು ಮೃದುಹೃದಯನಾಗಿ ಹೀಗೆಂದನು : ೧೧೫. ಎಲೈ ಪರಮಮಿತ್ರ ಪುಂಗವ! ವಿಲಸನ್ಮತಿಯಾದ ನೀನು ತಿಳಿಸಿದ ಧರ್ಮಶ್ರವಣ ನನ್ನ ಮನಸ್ಸಿನಲ್ಲಿ ನೆಲಸಿತು. ಆದರೆ ಒಂದು ಚಿಂತೆ ನನ್ನನ್ನು ಕಾಡುತ್ತಿದೆ.

ದಾವುದೆನೆ, 'ಸ್ವಯಂ ಚತುಷ್ಪದಾದಿ ಸೇವ್ಯಃ' ಎಂಬ ಅಭಿಧಾನಮಾತ್ರಮದಲ್ಲದೆ ನೀನೆಂದಂತೆ, ನೆಗಳ್ದು ಪುಲ್ಲಂ ಮೇಯಲಱಿಯೆಂ, ಪಿಶಿತಾಹಾರಮಿಲ್ಲದೆ ಶರೀರಂ ನಿಲ್ಲದೇಗೆಯ್ವೆನೆನೆ; ಸಂಜೀವಕನಿಂತೆಂದಂ : ಆದೊಡಂ ನಿಮಗೆಂ ಹರ್ಷಮಾದಾಗಳನೇಕ ಮೃಗಗಣಮನೆಯ್ದೆ ಕೊಲ್ಲದೆ ಕ್ಷುಧಾನಿವಾರಣಾರ್ಥಮಾಗಿ ನಿಮಗೆನಿತುವೇಟ್ಕುಮನಿತನೆ ಕೈಕೊಂಡು ನಿಶ್ಚಿಂತಮಿರ್ಪುದೆನಲ್, ಅಂತೆಗೆಯ್ವೆನೆಂದು ಕ್ರೂರಕರ್ಮಮಂ ಪತ್ತುವಿಟ್ಟು ಶುದ್ಧಚಿತ್ತನಾಗಿ ಸ್ವೋದರಪೂರಣಮಾತ್ರಕ್ಕೆ ತಕ್ಕನಿತನೇ ಸ್ವೀಕರಿಸಿ ನಿಶ್ಚಿಂತಮಿರ್ಪುದುಂ, ಕರಟಕ ದವನಕ ಪ್ರಮುಖ ನಿಖಿಲ ಕ್ರೂರಮೃಗಂಗಳೆಲ್ಲಂ ಪಲವುದಿವಸಮಾಹಾರಂಬಡೆಯದೆ ಮಱುಮಱನೆ ಮಱುಗಿ ಸಾವನಿತವಸ್ಥೆ ಪುಟ್ಟೆ ಸೈರಿಸಲಾಱದೆ ಪಿಂಗಳಕನಲ್ಲಿಗೆ ಬಂದು ಪೊಡೆವಟ್ಟುವುವಱೊಳಗೊಂದು ಜಾಂಬವಂತನೆಂಬ ಪುರಾಣ ಜಂಬುಕನಿಂತೆಂದುದು :

ನಿಮ್ಮಡಿ ಬಿನ್ನಪಮಂ ಕೇ-
ಳ್ವಿಮ್ಮಂ ನೀಂ ಪೊರೆದು ಪಲವು ಕಾಲಮನೀಗಳ್
ಕೆಮ್ಮನೆ ಪರಿಹರಿಸುವುದುಂ
ನಿಮ್ಮೊಡಲನೆ ಪೊರೆದು ಬಾಳ್ವುದುಂ ಗುಣದೊಳಗೇ ೧೧೬

ಅಂತುಮಲ್ಲದೆಲ್ಲಿಯಾನುಂ ಬಂದ ಧೂರ್ತನಪ್ಪೆತ್ತಿನ ಬುದ್ಧಿಯಂ ಕೈಕೊಂಡು ಅನ್ವಯಾಗತರುಂ ಹಿತರುಮಪ್ಪ ಪರಿಗ್ರಹಕ್ಕೆ ನೀಂ ವಿರಕ್ತನಾಗಿರ್ದಂದು,

ಶ್ಲೋ॥ ರಕ್ತಾದ್ವೃತ್ತಿಂ ಸಮಾಪದ್ಯಹ್ಯರಕ್ತಂ ತು ಪರಿತ್ಯಜೇತ್ ॥೩೮॥

ಎಂಬ ಉಕ್ತಿಯುಂಟಪ್ಪುದರಿಂ, ನೀನಿಂತು ವಿರಕ್ತನಾದುದನಱಿದಿಂ ಬಳಿಕ್ಕೆ ಪರಿಗ್ರಹಂ ಪೆಱನೊರ್ವಾಳ್ದನನಱಸಿ ಪೋಕುಮಂತಾದಂದು,

ವ॥ 'ಸ್ವಯಂ ಚತುಷ್ಪಾದಾದಿ ಸೇವ್ಯಃ' ಎಂಬ ಅಭಿಧಾನ ಮಾತ್ರವಲ್ಲದೆ ನೀನು ತಿಳಿಸಿದಂತೆ ಆಚರಿಸಿ ಹುಲ್ಲನ್ನು ಮೇಯಲಾರೆ ; ಪಿಶಿತಾಹಾರವಿಲ್ಲದೆ ಶರೀರ ಬದುಕದು, ಅದಕ್ಕೇನುಮಾಡಲಿ ? ಸಂಜೀವಕನು ಹೇಳಿದನು : ಹಾಗಾದರೆ ನಿಮಗೆ ಹರ್ಷವಾದಾಗ ಅನೇಕ ಮೃಗಗಣವನ್ನು ಕೊಲ್ಲದೆ ಕ್ಷುಧಾನಿವಾರಣಾರ್ಥವಾಗಿ ನಿಮಗೆಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಿ ನಿಶ್ಚಿಂತರಾಗಿರಿ. ಹಾಗೆಯೇ ಆಗಲೆಂದು ಪಿಂಗಳಕನು ಕ್ರೂರಕರ್ಮವನ್ನು ಪರಿತ್ಯಜಿಸಿ ಶುದ್ಧಚಿತ್ತನಾಗಿ ಸ್ವಂತ ಉದರಪೂರಣ ಮಾತ್ರಕ್ಕೆ ಬೇಕಾದಷ್ಟನ್ನು ಸ್ವೀಕರಿಸಿ ನಿಶ್ಚಿಂತನಾಗಿದ್ದನು. ಕರಟಕ ದವನಕ ಪ್ರಮುಖನಿಖಿಲಕ್ರೂರಮೃಗಗಳೆಲ್ಲವೂ ಹಲವು ದಿವಸಗಳವರೆಗೆ ಆಹಾರವಿಲ್ಲದೆ ಮಮ್ಮಲ ಮರುಗಿ ಸಾಯುವ ಅವಸ್ಥೆಗೆ ಬರಲು ಸಹಿಸಲಾರದೆ ಪಿಂಗಳಕನಲ್ಲಿಗೆ ಬಂದು ನಮಸ್ಕರಿಸಿದವು. ಅವುಗಳಲ್ಲಿ ಜಾಂಬವಂತನೆಂಬ ಒಂದು ಪುರಾಣಜಂಬುಕನು ಹೀಗೆಂದಿತು: ೧೧೬. ನಿಮ್ಮ ಆಜ್ಞಾನುವರ್ತಿಗಳಾದ ನಮ್ಮನ್ನು ತೊರೆದು ನಿಮ್ಮ ಒಡಲನ್ನು ಮಾತ್ರ ಹೊರೆದುಕೊಳ್ಳುವುದು ಗುಣವೆನಿಸುವುದೇ ? ಅಲ್ಲದೆ ಎಲ್ಲಿಂದಲೋ ಬಂದ ಧೂರ್ತನಾದ ಎತ್ತಿನ ಬುದ್ಧಿಯನ್ನು ನಂಬಿ ಅನ್ವಯಾಗತರೂ, ಹಿತರೂ ಆದವರ ಪರಿಗ್ರಹಕ್ಕೆ ವಿರಕ್ತರಾಗಿರುವುದು ನ್ಯಾಯವೇ ! ಶ್ಲೋ॥ 'ರಕ್ತಾದ್ವೃತ್ತಿಂ ಸಮಾಪದ್ಯ ಹ್ಯರಕ್ತಂ ತು ಪರಿತ್ಯಜೇತ್' ವ॥ ಎಂಬ ಉಕ್ತಿಯುಂಟು. ನೀವಿಂತು ವಿರಕ್ತರಾದುದರಿಂದ ಬೇರೊಬ್ಬ ಅರಸನನ್ನು ಅರಸಿಕೊಂಡು ಹೋಗಬೇಕಾಗುತ್ತದೆ.

ಶ್ಲೋ|| ಯೋಧ್ರುವಾಣಿ ಪರಿತ್ಯಜ್ಯಾಧ್ರುವಾಣಿ ಪರಿಸೇವತೇ
ತಸ್ಯ ಧ್ರುವಾಣಿ ನಶ್ಯಂತಿ ಹ್ಯಧ್ರುವಂ ನಷ್ಟಮೇವ ಚ ||೩೯||

ಟೀ|| ಆವನೊರ್ವಂ ಸ್ಥಿರಮಾಗಿರ್ಪುದಂ ಬಿಟ್ಟು ಅಸ್ಥಿರಮಾದಪ್ಪುದಂ ಸೇವಿಸುತ್ತಿರ್ದಪಂ ಆತಂಗೆ ಸ್ಥಿರಮಪ್ಪುದುಂ ಕಿಡುಗುಂ, ಅಸ್ಥಿರಮಪ್ಪುದೆಂತುಂ ಕೆಟ್ಟುದೇ–ಎಂಬ ನೀತಿವಾಕ್ಯಮುಂಟಪ್ಪುದಱಿಂ, ಮುಗಿಲ ನೀರಂ ನಚ್ಚಿ ಡೊಣೆಯ ನೀರಂ ತುಳುಂಕಿದ ಕೋಣಗದಂದಂ ನಿನಗಕ್ಕುಮದಱಿಂ ನಿನ್ನ ಸಂಜೀವಕನ ಬುದ್ಧಿಯುಮನೆನ್ನ ಬುದ್ಧಿಯುಮಂ ವಿಚಾರಿಸಿಕೊಳ್ವುದೆಂದು ಪಲತೆಱದಿಂ ನುಡಿದ ಪುರಾಣ ಜಂಬುಕನ ಮಾತಂ ಕೇಳ್ದು ಪಿಂಗಳಕನೀ ಪಾಪಿಗುತ್ತರಂಗೊಟ್ಟೊಡೆ ಪಾಪೋಪದೇಶಂಗೆಯ್ವಪನದಱಿಂ 'ಮೌನಂ ಸರ್ವಾರ್ಥ ಸಾಧನಂ' ಎಂಬುದುಂಟೆಂದುಸಿರದಿರ್ಪುದುಂ, ಅಂತಿರ್ದ ಪಿಂಗಳಕನಂ ಕಂಡು ಮೃಗಂಗಳೆಲ್ಲಂ ತಮ್ಮ ತಮ್ಮಿಚ್ಚೆಯೊಳ್ ಪರೆದುಪೋದುವು. ಅಲ್ಲಿ ದವನಕಂ ಕರಟಕನ ಮೊಗಮಂ ನೋಡಿ.

ಎನ್ನ ದುರಾಗ್ರಹದಿಂದ ಮ–
ದನ್ನಯಮೇನಾನುಮಕ್ಕುಮೆಂಬುದನಱಿದಂ–
ದೆನ್ನಂ ನೀ ಬಾರಿಸಿದುದು
ಸನ್ನಿದಮಾಯ್ತಿನ್ನಿದರ್ಕೆ ಪೇಟೀಗೆಯ್ವೆಂ ೧೧೭

ಮುನ್ನಂ ನೀಂ ಬಾರಿಸೆಯುಮ–
ದನ್ನಯಮಪ್ಪನ್ನ ಮಾಡಿದಟೆಗಜ್ಜಂ ಪೇ–
ಟೆನ್ನೆಂತು ಮಾಡಲಕ್ಕುಮಿ–
ದನ್ನಯದೊಳ್ ಕೂಡುವಂತನಾಗತವೇದೀ ೧೧೮

ಸ್ಥಿರವಾಗಿರುವುದನ್ನು ಬಿಟ್ಟು ಅಶಾಶ್ವತವಾದುದನ್ನು ಸ್ವೀಕರಿಸುವವನು ಸ್ಥಿರವಾದುದನ್ನು ಕಳೆದುಕೊಳ್ಳುವನು. ಅಸ್ಥಿರವಾದುದು ಎಂತೂ ನಾಶವಾಗತಕ್ಕುದೇ. ಮುಗಿಲ ನೀರನ್ನು ನಂಬಿ ಹೊಂಡದ ನೀರನ್ನು ತುಳುಕಿಬಿಟ್ಟ ಕೋಡಗದಂತೆ ನೀನಾಗುವೆ. ಅದರಿಂದ ನಿನ್ನ ಸಂಜೀವಕನ ಬುದ್ಧಿಯನ್ನು ನನ್ನ ಬುದ್ಧಿವಾದವನ್ನೂ ವಿಚಾರಿಸಿ ನೋಡು ಹೀಗೆ ಹಲವು ರೀತಿಗಳಿಂದ ಬುದ್ಧಿವಾದವನ್ನೂ ಹೇಳಿದ ಪುರಾಣ ಜಂಬುಕನ ಮಾತನ್ನು ಕೇಳಿ ಪಿಂಗಳಕನು ಈ ಪಾಪಿಗೆ ಉತ್ತರವನ್ನು ಕೊಟ್ಟರೆ ಪಾಪೋಪದೇಶವನ್ನು ಮಾಡಿಯಾನು. ಅದರಿಂದ, 'ಮೌನಂ ಸರ್ವಾರ್ಥ ಸಾಧನಂ' ಎಂದು ಮಾತನಾಡದೆ ಇದ್ದ ಪಿಂಗಳಕನನ್ನು ಕಂಡು ಮೃಗಗಳೆಲ್ಲವೂ ತಮ್ಮ ತಮ್ಮ ಇಚ್ಛೆ ಬಂದ ಕಡೆಗೆ ಚೆದರಿಹೋದವು. ಆಗ ದವನಕನು ಕರಟಕನ ಮುಖವನ್ನು ನೋಡಿ, ಹೀಗೆಂದಿತು : ೧೧೭. ನನ್ನ ದುರಾಗ್ರಹದಿಂದ ಏನಾದರೂ ಅನ್ಯಾಯವಾದೀತು ಎಂದು ನೀನು ತಿಳಿದು ಆಗ ನನ್ನನ್ನು ನಿವಾರಿಸಿದುದು ಈಗ ಸನ್ನಿಹಿತವಾಯಿತು. ಇನ್ನು ಇದಕ್ಕೆ ಏನುಮಾಡಲಿ ಎಂಬುದನ್ನು ತಿಳಿಸು. ೧೧೮. ಮೊದಲು ನೀನು ಬೇಡಬೇಡವೆಂದರೂ ಅನ್ಯಾಯವಾಗುವಂತೆ ಮಾಡಿದ ನನ್ನ ಹೀನಕಾರ್ಯವನ್ನು ಅನ್ಯಾಯದಲ್ಲಿ ಕೂಡುವಂತೆ ಈಗ ಏನುಮಾಡೋಣ, ಅನಾಗತವೇದೀ ಹೇಳು ಅದಕ್ಕೆ

ಕರಟಕನಿಂತೆಂದು ನೀನಾಗಿಯುಮನಾಗತಕಾರ್ಯಸಿದ್ಧಿ ಅತ್ಯದ್ಭುತಬುದ್ಧಿ ನಿನಗುಳ್ಳನಿತೆನಗಿಲ್ಲ ಅದರ್ಕೆ ತಕ್ಕುದಂ ನೀನೆ ಬಲ್ಲೆಯೆಂಬುದುಂ, ದವನಕನಿಂತೆಂದಂ :

ಕರಟಕ ಕೇಳ್ ಕರಟೀಘಟ
ಕರಟಕನೆನೆ ನೆಗಳ್ದ ಪಂಚವದನಂಗಂ ಶಾ-
ಕ್ವರ ಪರಿಬೃಢನೆನಿಪಂಗಂ
ವಿರಕ್ತಿಯಪ್ಪಂತು ಮಾಳ್ಪುದಿಂತಿದು ಕಜ್ಜಂ ೧೧೯

ಎಂದು ಮತ್ತಮಿಂತೆಂದಂ : ನೀನೆಂದಂತೀ ಕಜ್ಜಮೆನ್ನಿಂದಮೆ ಸಾಧ್ಯಮಕ್ಕುಮಾದೊಡಿದೆಲ್ಲಂ ವಾಕ್ಯ || 'ತ್ರಯೋನರ್ಥಾಃ ಸ್ವಯಂಕೃತಾಃ' ಎಂದು ದೇವಶರ್ಮಂ ಪೇಳ್ದ ಕಥೆಯೆಮಗಾದುದೆಂಬುದುಂ, ಕರಟಕನದೆಂತೆನೆ, ದವನಕಂ ಪೇಳ್ಗುಂ :

೬. ದೇವಶರ್ಮನ ಕಥೆ

ಆಭೀಳಮೆಂಬ ಜನಪದಮುಂಟು. ಅಲ್ಲಿ,

ಅಂಚಿತ ದೇವತಾಭವನಸಂಕುಳದಿಂ ಗಣಿಕಾನಿವಾಸದಿಂ
ಕಾಂಚನಕೂಟಕೋಟಿಗಳಿನುತ್ತಮ ಧಾರ್ಮಿಕರಿಂ ಮುನೀಂದ್ರರಿಂ
ಕ್ರೌಂಚ ರಥಾಂಗರಂಜಿತ ಸರೋರುಹಷಂಡದಿನಾದಮೊಪ್ಪುಗುಂ
ಕ್ರೌಂಚಪುರಂ ಪುರಂದರಪುರಪ್ರತಿಮಂ ಧರೆಯೊಳ್ ನಿರಂತರಂ ೧೨೦

ಆ ಪುರದೊಳ್ ದೇವಶರ್ಮನೆಂಬ ಗೊರವನುಗ್ರೋಗ್ರ ತಪೋನುಷ್ಠಾನನಿಷ್ಠಿತಚಿತ್ತನಾಗಿ ಪಲಕಾಲಮಿರ್ಪಂ, ಆತಂಗೆ ಧಾರ್ಮಿಕರಪ್ಪಗ್ರಜನ್ಮರೆಲ್ಲಂ ಸೋಮಸೂರ್ಯಗ್ರಹಣಾದಿ ಪುಣ್ಯತಿಥಿಗಳೊಳ್

ಕರಟಕನು ಹೀಗೆಂದನು : ವ|| ನಿನಗಿರುವಷ್ಟು ಅನಾಗತಕಾರ್ಯಸಿದ್ಧಿಯೂ, ಅತ್ಯದ್ಭುತ ಬುದ್ಧಿಯೂ ನನಗಿಲ್ಲ. ಆದಕ್ಕೆ ತಕ್ಕುದನ್ನು ನೀನೇ ಬಲ್ಲವನು. ಆದಕ್ಕೆ ದವನಕನು ಹೀಗೆಂದನು: ೧೧೯. ಕರಟಕ ! ಕೇಳು, ಕರಟೀಘಟಕರಟಕನೆಂಬ ಬಿರುದನ್ನು ಹೊತ್ತ ಈ ಪಂಚಾನನನಿಗೂ ಆ ಶಾಕ್ವರಪರಿವೃಢನೆನಿಸಿದ ಸಂಜೀವಕನಿಗೂ ವಿರಸವಾಗುವಂತೆ ಮಾಡುವುದೇ ಉಚಿತ ಉಪಾಯ. ವ|| ನೀನು ಹೇಳಿದಂತೆ ಈ ಕಾರ್ಯವು ನಿನ್ನಿಂದಲೇ ಸಾಧ್ಯವಾಗಬೇಕು. ಆದರೆ ಇದೆಲ್ಲ ವಾ|| 'ತ್ರಯೋನರ್ಥಾಃ ಸ್ವಯಂ ಕೃತಾಃ' ಎಂದು ದೇವಶರ್ಮನು ಹೇಳಿದ ಕಥೆಯೇ ನಮಗಾಯಿತು. ಎಂದನು. ಆಗ ಕರಟಕನು ಆ ಕಥೆಯೇನೆಂದು ಕೇಳಲು ದವನಕನು ಹೇಳಿದನು : ಆಭೀಳ ಎಂಬ ನಾಡುಂಟು. ಅಲ್ಲಿ ೧೨೦. ಸುಪ್ರಸಿದ್ಧವಾದ ದೇವಾಲಯಸಮೂಹದಿಂದಲೂ ಗಣಿಕಾನಿವಾಸದಿಂದಲೂ, ಚಿನ್ನದ ಬೆಟ್ಟದ ಶಿಖರಗಳಿಂದಲೂ, ಉತ್ತಮಧಾರ್ಮಿಕರಿಂದಲೂ ಮುನೀಂದ್ರರಿಂದಲೂ, ಕ್ರೌಂಚ, ಚಕ್ರವಾಕಗಳಿಂದ ಶೋಭಿಸುವ ಸರೋಜಸಮೂಹದಿಂದಲೂ ಕ್ರೌಂಚಪುರವು ಇಂದ್ರನ ಅಮರಾವತಿಗೆ ಸಮಾನವಾಗಿ ಧರೆಯಲ್ಲಿ ಅತಿಶಯವಾಗಿ ಸದಾ ಶೋಭಿಸುತ್ತಿತ್ತು. ವ|| ಆ ಪಟ್ಟಣದಲ್ಲಿ ದೇವಶರ್ಮನೆಂಬ ಶೈವಬ್ರಾಹ್ಮಣನು ಉಗ್ರೋಗ್ರ ತಪೋನುಷ್ಠಾನ ಚಿತ್ತನಾಗಿ ಹಲವು ಕಾಲದಿಂದ ಇದ್ದನು. ಅವನಿಗೆ ರಾಜರು ಸೂರ್ಯ ಚಂದ್ರಗ್ರಹಣಾದಿ ಪುಣ್ಯತಿಥಿಗಳಲ್ಲಿ ಭಕ್ತಿಪೂರ್ವಕವಾಗಿ ಸುವರ್ಣದಾನವನ್ನು ಕೊಡಲು ಕಾಲಕಳೆದಂತೆ ಆ

ಭಕ್ತಿಪೂರ್ವಕಂ ಸುವರ್ಣದಾನಮಂ ಕುಡೆ, ಪಲವುಕಾಲಕ್ಕೆ ಸಹಸ್ರ ಸಂಖ್ಯೆಯಾದ ಪೊನ್ನಂ ದೇವಶರ್ಮಂ ಸರ್ವಪ್ರಯತ್ನದಿಂ ತಾಯ್ ಮಗನಂ, ಉತ್ತಮ ಸತ್ತ್ವಸಂಪನ್ನಂ ಶರಣಾಗತನಂ, ಧಾರ್ಮಿಕಂ ಧರ್ಮಮಂ, ಯಶೋವೃತ್ತಿ ಯಶಮಂ, ಸತ್ಪುರುಷನಾಶ್ರಿತರಂ, ನಿಸರ್ಗಭೀರು ಪ್ರಾಣಂಗಳಂ, ಶೂರಂ ವಿಕ್ರಾಂತಮಂ, ಮಹಾಸತಿ ಪತಿವ್ರತಾಗುಣಮಂ, ಲುಬ್ಧ ಧನಮಂ, ಮನಸ್ವಿ ಮಾನಮಂ ರಕ್ಷಿಸುವವೊಲ್ ರಕ್ಷಿಸುತಿರ್ಪುದುಮವಾ ಪುರದೊಳ್ ದ್ಯೂತವ್ಯಸನವಿಕಳಭೂತಿಯಾಷಾಢಭೂತಿಯೆಂಬ ಧೂರ್ತನೊರ್ವನಿರ್ಪಂ. ಆತಂ ತನಗೇನುಮಿಲ್ಲದೆ ಪರಿಭ್ರಮಿಸುತಿರ್ದು ದೇವಶರ್ಮಂಗೇನಾನುಂ ಧನಮುಂಟೆಂಬುದುಂ ಕೇಳ್ದು ತಾನುಮರಿವನಾಗಿ ದೇವಶರ್ಮನಲ್ಲಿಗೆ ಪೋಗಿ ಸಾಷ್ಟಾಂಗಪ್ರಣತನಾಗಿ ನಿಮ್ಮಡಿ ವಿದ್ಯಾರ್ಥಿಯಾಗಿ ಬಂದೆನೆನ್ನಂ ಕೈಕೊಳ್ವುದೆನೆ, ತಪಸ್ವಿ ಕರಮೊಳ್ಳಿತ್ತೆಂದು ಕೈಕೊಂಡಿರೆ ಪರಮಭಕ್ತಿಯಿಂದಾಷಾಢಭೂತಿ ಬೆಸಗೆಯ್ಯುತ್ತಿರೆ, ಪಲವುಕಾಲಕ್ಕೆ ತೀರ್ಥಯಾತ್ರಾಸಕ್ತಚಿತ್ತನಾಗಿ ದೇವಶರ್ಮಂ ತನಗೆ ತಕ್ಕನಿತು ದ್ರವ್ಯಮಂ ದಾನಂಗೆಯ್ಯಲ್ವೇಟ್ಟುಮೆಂದು ದೇವರ ಪೇಳಿಗೆಯೊಳಿಕ್ಕಿ ಬಳಿಕ್ಕ ತಾನುಮಾಷಾಢಭೂತಿಯುಂ ಕ್ರೌಂಚಪುರಮಂ ಪೋಱಮಟ್ಟು ಕಿಱಿದಂತರಮಂ ಪೋಗಿ,

ಅಂಚೆಗಳೋಳಿಯಿಂ ಝುಷನಿಕಾಯದಿನುತ್ತಮಸಾರಸಂಗಳಿಂ
ಕ್ರೌಂಚಕುಳಂಗಳಿಂ ಬಕಕದಂಬಕದಿಂ ವರಚಕ್ರಚಕ್ರದಿಂ
ಚಂಚದಳಿವ್ರಜಾವೃತಸರೋಜ ನವೋತ್ಪಲ ಕೈರವಂಗಳಿಂ-
ದಂಚಿತಮಾದ ಪದ್ಮವನಮಂ ಮುನಿ ಕಂಡನುದಾರತೀರಮಂ ೧೨೧

ಹೊನ್ನು ಸಹಸ್ರಸಂಖ್ಯೆಯಾಗಿ ಬೆಳೆಯಿತು. ದೇವಶರ್ಮನು ಅದನ್ನು ತಾಯಿಯು ತನ್ನ ಮಗನನ್ನು, ಉತ್ತಮ ಸತ್ತ್ವಸಂಪನ್ನನು ತನ್ನ ಶರಣಾಗತನನ್ನು, ಧಾರ್ಮಿಕನು ಧರ್ಮವನ್ನು, ಯಶೋವೃತ್ತಿಯು ಯಶಸ್ಸನ್ನೂ, ಸತ್ಪುರುಷರು ಆಶ್ರಿತರನ್ನೂ, ನಿಸರ್ಗಭೀರು ಪ್ರಾಣವನ್ನೂ, ಶೂರನು ವಿಕ್ರಾಂತವನ್ನೂ, ಮಹಾಸತಿ ಪತಿವ್ರತಾಗುಣವನ್ನೂ,ಲೋಭಿಯು ಧನವನ್ನೂ, ಮನಸ್ವಿಯು ತನ್ನ ಮಾನವನ್ನು ರಕ್ಷಿಸುವಂತೆ ಕಾಪಾಡಿಕೊಂಡಿದ್ದನು. ಆ ಪಟ್ಟಣದಲ್ಲಿ ದ್ಯೂತವ್ಯಸನದಿಂದ ವಿಕಳಭೂತಿಯಾದ ಆಷಾಢಭೂತಿಯೆಂಬ ಧೂರ್ತನಿದ್ದನು. ಆತನು ತನಗೇನೂ ಗತಿಯಿಲ್ಲದೆ ಪರಿಭ್ರಮಿಸುತ್ತಿರಲು ದೇವಶರ್ಮನ ಹತ್ತಿರ ಧನವುಂಟು ಎಂಬುದನ್ನ ಕೇಳಿ ತಿಳಿದುಕೊಂಡು ದೇವಶರ್ಮನಲ್ಲಿಗೆ ಹೋಗಿ ಸಾಷ್ಟಾಂಗಪ್ರಣತನಾದನು. ಸ್ವಾಮಿ, ವಿದ್ಯಾರ್ಥಿಯಾಗಿ ಬಂದ ನನ್ನನ್ನು ಸ್ವೀಕರಿಸಬೇಕು ಎಂದು ಹೇಳಲು ದೇವಶರ್ಮನು ಅವನನ್ನು ಸ್ವೀಕರಿಸಿದನು. ಪರಮ ಭಕ್ತಿಯಿಂದ ಆಷಾಢಭೂತಿಯು ಗುರುವಿನ ಕೈಂಕರ್ಯವನ್ನು ಮಾಡಿದನು. ಕೆಲವು ದಿನಗಳಲ್ಲಿ ತೀರ್ಥಯಾತ್ರಾಸಕ್ತಚಿತ್ತನಾಗಿ ದೇವಶರ್ಮನು ತನಗೆ ದಾನಮಾಡಲು ಸಾಕಾಗುವಷ್ಟು ದ್ರವ್ಯವನ್ನು ದೇವರ ಪೆಟ್ಟಿಗೆಯಲ್ಲಿಟ್ಟು ಬಳಿಕ ಆಷಾಢಭೂತಿಯೊಡನೆ ಕ್ರೌಂಚಪುರದಿಂದ ಯಾತ್ರೆಗೆಂದು ಹೊರಟನು. ೧೨೧. ಹಂಸಗಳ ಸಾಲಿನಿಂದಲೂ, ಮೀನುಗಳ ರಾಶಿಯಿಂದಲೂ, ಉತ್ತಮ ಸಾರಸ ಪಕ್ಷಿಗಳಿಂದಲೂ ಕ್ರೌಂಚಸಮೂಹದಿಂದಲೂ, ಬಕಸಮೂಹದಿಂದಲೂ, ಶ್ರೇಷ್ಠವಾದ ಚಕ್ರವಾಕಗಳಿಂದಲೂ, ಚಂಚಲವಾದ ದುಂಬಿಗಳಿಂದ ಆವೃತವಾದ ಕಮಲ, ಕನ್ನೈದಿಲೆ, ಬಿಳಿಯ ನೈದಿಲೆಗಳಿಂದಲೂ ಪ್ರಸಿದ್ಧವಾದ ಸರೋವರದ ವಿಸ್ತಾರವಾದ ತೀರವನ್ನು ಆ

ಅಂತು ಕಂಡಾ ಸರೋವರದೊಳ್ ದೇವಶರ್ಮಂ ದೇವಪೂಜೆಯಂ ಮಾಡಿ ಪೋಪಮೆಂದಾಷಾಢ ಭೂತಿಯಂ ಮಾತ್ರಾಭಾಂಡಕ್ಕೆ ಕಾಪಿರಿಸಿ ಪಾದಪ್ರಕ್ಷಾಳನಂಗೆಯ್ದು ಭಸ್ಮೋದ್ಧೂಳಿತಗಾತ್ರನಾಗಿ ದೇವತಾಸಮಾರಾಧನೆಗೆ ಕುಳ್ಳಿರ್ದು,

ಹರನಂ ಶಂಕರನಂ ಜಿತತ್ರಿಪುರನಂ ನೇತ್ರಾಗ್ನಿಭಸ್ಮೀಕೃತ
ಸ್ಮರನಂ ತುಂಗಜಟಾಜೂಟಾಭರನಸುದ್ಯದ್ಭಕ್ತಿಭಾರಸತಂ
ವರಗಂಗಾಧರನಂ ಮೃಡಾಣಿವರನಂ ಪ್ರಾಲೋಲಬಾಲೇಂದು ಶೇ-
ಖರನಂ ತಾಳ್ದಿದನಾತ್ಮಹೃತ್ಕಮಳದೊಳ್ ಯೋಗೀಂದ್ರ ವೃಂದಾರಕಂ ೧೨೨

ಅಂತು ತಾಳ್ದಿ ಪರಮಾತ್ಮಧ್ಯಾನಾಧೀನಮಾನಸನಾಗಿ ತಪೋಧನಂ ಪರಮಾತ್ಮಾವಸ್ಥೆಗೆ ಸಂದುದುಮಂ ಕೆಲದೊಳ್ ಪೆಱರಾರುಮಿಲ್ಲದುದುಮಂ ಕಂಡಾಷಾಢಭೂತಿ ತಾಂ ಛಿದ್ರಾನ್ವೇಷಿಯಪ್ಪುದಱಿಂ ತನಗಿದುವೆ ಪದನೆಂದು ಬಗೆದು,

ಶ್ಲೋ॥ ವಿಶ್ವಾಸಪ್ರತಿಪನ್ನಾನಾಂ ವಂಚನಂ ಕಾ ವಿದಗ್ಧತಾ ॥೪೦॥

ಟೀ॥ ವಿಶ್ವಾಸಿಸಿದವರೊಳ್ ವಂಚನೆಯನೆಸಗುವುದಾವ ಪ್ರೌಢಿಮೆ ?

ಎಂಬೀ ಸುಭಾಷಿತಮಂ ಬಗೆಯದೆ ಆ ದುರಾತ್ಮನಾ ಮಹಾತ್ಮನ ಧನಮಂ ಕೊಂಡು ಬ್ರಹ್ಮಸ್ವ ತರಣಮಂ ಸುವರ್ಣಹರಣಮುಂಗೆಯ್ದಾ ಪಾತಕಂ ನರಕಗತಿಗೆಯ್ದುವ ಧೂರ್ತತನದಿಂ ಕುಟಿಲಮಾರ್ಗಾಂತರ್ಗತನಾಗಿ ಪೋಗೆ, ಕಿಜಿದಾನುಂ ಬೇಗದಿಂ ದೇವಶರ್ಮಂ ದೇವಪೂಜಾವಿಧಾನಮಂ ನಿರ್ವರ್ತಿಸಿ ದೆಸೆದೆಸೆಯಂ ನೋಡಿ ಕೆಲದೊಳಿರ್ದ ಮಾತ್ರಾಭಾಂಡಿಕೆಯುಮನಾಷಾಢಭೂತಿಯುಮಂ ಕಾಣದೆ ಅರ್ಥನಾಶದಿಂ ವಿಕಳಚಿತ್ತನಾಗಿನಿಸಾನುಂ ಬೇಗದಿಂ ತನ್ನಿಂ ತಾನೆ ಸಂಭವಿತಾತ್ಮನುಮಾಗಿ ಪಲಕಾಲದಿಂ ಪಡೆದರ್ಥಂ ನಿರರ್ಥಂ ಕೆಟ್ಟುದೆಂದು ಚಿಂತಾಕ್ರಾಂತನಾಗೆ, ತನ್ನಿಂ ತಾನೆ ಸಂತೈಸಿಕೊಂಡಿಂತೆಂದಂ :

ಬ್ರಾಹ್ಮಣನು ಕಂಡನು. ಆ ಸರೋವರದಲ್ಲಿ ದೇವಶರ್ಮನು ದೇವಪೂಜೆಯನ್ನು ಮಾಡಿ ಹೋಗೋಣವೆಂದು ಆಷಾಢಭೂತಿಯನ್ನು ತನ್ನ ದ್ರವ್ಯಕ್ಕೆ ಕಾವಲು ಇರಿಸಿ ಪಾದಪ್ರಕ್ಷಾಳನಮಾಡಿ ಭಸ್ಮೋದ್ಧೂಳಿತಗಾತ್ರನಾಗಿ ದೇವತಾಸಮಾರಾಧನೆಗೆ ಕುಳಿತು ೧೨೨. ಹರನೂ, ಶಂಕರನೂ, ತ್ರಿಪುರನನ್ನು ಗೆದ್ದವನೂ, ಸ್ಮರನನ್ನು ಸುಟ್ಟವನೂ, ಉನ್ನತ ಜಟಾಧರನೂ, ಅತಿಶಯ ಭಕ್ತಿಗೆ ಬಾಗಿದವನೂ, ಗಂಗಾಧರನೂ, ಮೃಡಾಣೀವರನೂ, ಚಂದ್ರಶೇಖರನೂ ಆದ ಶಿವನನ್ನು ಧ್ಯಾನಿಸಿದನು. ಶ್ರೇಷ್ಠನು ತನ್ನ ಹೃತ್ಕಮಲದಲ್ಲಿ ಧರಿಸಿದನು. ಪರಮಾತ್ಮಧ್ಯಾನಾಧೀನಮಾನಸನಾದ ದೇವಶರ್ಮನು ಪರಮಾತ್ಮಾವಸ್ಥೆಗೆ ಸಂದುದನ್ನೂ, ಹತ್ತಿರದಲ್ಲಿ ಬೇರೆ ಯಾರೂ ಇಲ್ಲದಿರುವುದನ್ನೂ ಕಂಡು ಆಷಾಢಭೂತಿಯು ತಾನು ಛಿದ್ರಾನ್ವೇಷಿಯಾದುದರಿಂದ ತನಗೆ ಇದೇ ತಕ್ಕಸ್ಥಾನವೆಂದು ಭಾವಿಸಿದನು. ಶ್ಲೋ॥ 'ವಿಶ್ವಾಸ ಪ್ರತಿಪನ್ನಾನಾಂ ವಂಚನಂ ಕಾ ವಿದಗ್ಧತಾ' - ವಿಶ್ವಾಸವನ್ನಿಟ್ಟವರನ್ನು ವಂಚಿಸುವುದು ಎಂಥ ಪ್ರೌಢಿಮೆ - ವ॥ ಎಂದು ಬಗೆಯದೆ ಆ ದುರಾತ್ಮನು ಆ ಮಹಾತ್ಮನ ಧನವನ್ನು ಕೊಂಡುಹೋದನು. ದೇವಶರ್ಮನು ಸ್ವಲ್ಪ ಹೊತ್ತಿನಲ್ಲಿ ದೆಸೆದೆಸೆಗೆ ನೋಡಿ ಹತ್ತಿರದಲ್ಲಿದ್ದ ಪೆಟ್ಟಿಗೆಯನ್ನೂ ಆಷಾಢಭೂತಿಯನ್ನೂ ಕಾಣದೆ ಅರ್ಥನಾಶದಿಂದ ವಿಕಳಚಿತ್ತನಾಗಿ ಹಲವು ಕಾಲದಿಂದ ಪಡೆದ ಹಣ ನಿರರ್ಥಕವಾಗಿ ನಾಶವಾಯಿತೆಂದು ಚಿಂತಾಕ್ರಾಂತನಾಗಿ ತನ್ನನ್ನು

ಶ್ಲೋ ॥ ದಾತವ್ಯಂ ಭೋಕ್ತವ್ಯಂ ಸತಿ ವಿಭವೇ ನೈವ ಸಂಚಯೇದರ್ಥಂ
ಪಶ್ಯೇಹ ಮಧುಕರಣಾಂ ಸಂಚಿತಮರ್ಥಂ ಹರಂತ್ಯನ್ಯೇ ॥೪೦॥

ಟೀ॥ ವಸುವುಂಟಾದೊಡೆ ಪರಪುರುಷಾರ್ಥಮಂ ಮಾಳ್ಪುದು, ತಾನುಣ್ಬುದು, ಅಲ್ಲದೆ ಸಂಚಿತಮಾಗಿರಿಸಲಾಗದಂತೆನೆ, ಜೇನನೊಳಂಗಳ್ ತುಪ್ಪವನಿರಿಸಿದೊಡೆ ಲೋಗರ್ ಕೊಂಡು ಪೋಪರ್ ಎಂಬೀ ನೀತಿಶಾಸ್ತ್ರಾಭಿಪ್ರಾಯಮಾದುದು. ಎಲ್ಲಮದೃಷ್ಟವಶಮಲ್ಲದೆ ಎನ್ನ ವಶಮಲ್ಲಮೆಂದು ಖೇದಮಂ ಮಾಣ್ದಿರ್ಪುದುಂ, ಆ ಸಮಯದೊಳ್ ಮಹಾಟವಿಯೊಳಾಡುತಿರ್ಪ ಕುಱಿವಿಂಡು ನೀರುಣಲ್ ಬಗೆದು ಬಂದಲ್ಲಿ ನೀರನುಂಡು ಕೊರ್ವಿ ಕೊಣಕಿಟ್ಟು ತಗರೆರಡುಂ ಭರಂಗೆಯ್ದು ತಾಗುವುದುಂ ನಡುವಿರ್ದ ನರಿ ಕರಿಮೆಟ್ಟಿದ ಸೋರೆಯ ಕಾಯಂತೆ ಜಿಗಿಜಿಗಿಯಾಗಿ ಸತ್ತೊಡದಂ ದೇವಶರ್ಮಂ ಕಂಡು, 'ಜಂಬುಕೋ ಮೇಷಯುದ್ಧೇನ ವಯಂಚಾಷಾಢಭೂತಿನಾ' ಎಂದಲ್ಲಿಂ ತಳರ್ದು ಕಿಱಿದಂತರದೊಳಿರ್ದೊಂದೂರಂ ಕಂಡು ಅಲ್ಲಿಗೆ ವರ್ಪನ್ನೆಗಂ.

ಮುಗಿಯೆ ಸರೋಜಷಂಡಮಲರ್ದೊಪ್ಪೆ ನವೋತ್ಪಲರಾಜಿ ಚಕ್ರವ-
ಕ್ಕಿಗಳ ಮನಕ್ಕೆ ತಾಪಪೊದವುತ್ತಿರೆ ವಿದ್ರುಮ ಭಂಗಕಾಂತಿ ಕೈ-
ಮಿಗೆ ಘನವೀಧಿಯೊಳ್ ನಿಜಕುಳಾಯತನಕ್ಕೆ ಪಾಱೆ ಪ-
ಕ್ಕಿಗಳಪರಾಂಬುರಾಶಿಗಿಳಿದಂ ನಳಿನೀವನಜೀವಿತೇಶ್ವರಂ ೧೨೩

ಅಂತಾದಿತ್ಯನಸ್ತಗಿರಿಯನೆಯ್ದುವುದುಮಾ ಗೊರವನೂರ ಚತುಷ್ಪಥಮಧ್ಯದೊಳ್ ಬಳಲ್ದೆಬಿಲ್ದ ಮೆಯ್ಯಿಂ ಶ್ರಮಶ್ರಾಂತ್ಯಾಕ್ರಾಂತನಾಗಿ ಮೇಗುಸಿರ್ವಟ್ಟು ಸುಯ್ಯಿಂ ಗೂಢಪ್ರಾಣಿಯಂತೊಳಪೊಕ್ಕಡಂಗಿದ

ತಾನೇ ಸಂತೈಸಿಕೊಂಡನು. ಶ್ಲೋ॥ ಐಶ್ವರ್ಯವಿದ್ದಲ್ಲಿ ಪುರುಷಾರ್ಥವನ್ನು ಮಾಡಬೇಕು ; ತಾನು ಅದನ್ನು ಅನುಭವಿಸಬೇಕಲ್ಲದೆ ಕೂಡಿಡಬಾರದು. ಜೇನುನೊಣಗಳು ತುಪ್ಪವನ್ನು ಕೂಡಿಟ್ಟರೆ ಜನರು ಕೊಂಡುಹೋಗುವರು ! ಎಂಬ ನೀತಿಶಾಸ್ತ್ರದ ಅಭಿಪ್ರಾಯವಾಯಿತು. ಎಲ್ಲವೂ ಅದೃಷ್ಟವಶವಲ್ಲದೆ ನನ್ನಿಂದ ಏನೂ ನಡೆಯದು ಎಂದು ಖೇದವನ್ನು ಬಿಟ್ಟಿದ್ದನು. ಆ ಸಮಯದಲ್ಲಿ ಅಡವಿಯಲ್ಲಿ ಆಡುತ್ತಿದ್ದ ಕುರಿಹಿಂಡು ನೀರು ಕುಡಿಯಬೇಕೆಂದು ಬಂದಿತು. ಎರಡು ತಗರುಗಳು ಕೊಣಕಿಟ್ಟು ತಮ್ಮತಮ್ಮಲ್ಲೇ ಕಿಡಿಗುಟ್ಟಿದಂತೆ ಹೋರಾಡುತ್ತಿದ್ದವು. ನೆತ್ತಿಯೊಡೆದು ಸುರಿಯುತ್ತಿದ್ದ ಬಿಸಿನೆತ್ತರನ್ನೂ ಮಾಂಸದ ಮುದ್ದೆಯನ್ನೂ ಕಂಡು ಕ್ಷುಧಾರ್ತನಾದ ಒಂದು ಮೃಗಧೂರ್ತನು ಆ ಮಾಂಸಖಂಡದ ಹತ್ತಿರ ಬರಲು ಆ ತಗರೆರಡೂ ಮತ್ತೊಮ್ಮೆ ಹೋರಾಡಲು ನಡುವಿದ್ದ ನರಿಯು ಆನೆ ಮೆಟ್ಟಿದ ಸೋರೆಯ ಕಾಯಿಯಂತೆ ಜಿಗಿ ಜಿಗಿಯಾಗಿ ಸತ್ತುದನ್ನು ದೇವಶರ್ಮನು ಕಂಡನು. 'ಜಂಬುಕೋ ಮೇಷಯುದ್ಧೇನ ವಯಂಚಾಷಾಢಭೂತಿನಾ' ಎಂದು ಅಲ್ಲಿಂದ ಹೊರಟು ಸ್ವಲ್ಪ ದೂರದಲ್ಲಿದ್ದ ಊರನ್ನು ಕಂಡು ಅಲ್ಲಿಗೆ ಬರುವಷ್ಟರಲ್ಲಿ, ೧೨೩. ಕಮಲಗಳು ಕಣ್ಣು ಮುಚ್ಚಿದುವು, ನೈದಿಲೆಗಳು ಅರಳಿದವು, ಚಕ್ರವಾಕಪಕ್ಷಿಗಳಿಗೆ ವಿರಹವುಂಟಾಯಿತು. ದೊಡ್ಡ ಬೀದಿಗಳಲ್ಲಿ ಹವಳದ ಬಣ್ಣದ ಕಾಂತಿ ವ್ಯಾಪಿಸಲು ಹಕ್ಕಿಗಳು ತಮ್ಮ ಗೂಡುಗಳಿಗೆ ಹಾರಿದುವು, ಸೂರ್ಯನು ಪಶ್ಚಿಮಾಂಬುಧಿಗೆ ಇಳಿದನು. ವ॥ ಹಾಗೆ ಸಂಜೆಯಾಗಲು ಆ ಮುನಿಯು ಆ ಊರಿನ ನಾಲ್ಕು ದಾರಿಗಳು ಕೂಡುವೆಡೆಯಲ್ಲಿ ಬಳಲಿದ ಶರೀರದಿಂದ ಬಿದ್ದು, ಮೇಲುಸಿರು ಬಿಡುತ್ತಿದ್ದ ಗೂಢಪ್ರಾಣಿಯಂತೆ ಒಳಹೊಕ್ಕ ಕಣ್ಣಿನ ಬರಗಾಲದ

ಕಣ್ಣುಂ ಬಱಗಾಲದ ಕೆಱೆಯಂತೆ ನೆಱೆ ಬತ್ತಿದ ಬಾಯುಂ ಬೇತಾಳನ ಬಸಿಱಂತೆ ಬೆನ್ನಂ ಪತ್ತಿದ ಬಸಿಱುಂಬೆರಸು ಬರ್ಪ ವೃದ್ಧತಾಪಸನಂ ಕಂಡವರ್ಗೆಲ್ಲಂ ಕರುಣಮಾಗಲ್ ಆಲ್ಲಿಯ ಮೂಲಿಗನಪ್ಪ ಪಟ್ಟಸಾಲಿಗಂ ಕಂಡು ತನ್ನ ಮನೆಗೊಡಗೊಂಡು ಪೋಗಿ ಪರಮಭಕ್ತಿಯಿಂದಂ ಪಥಪರಿಶ್ರಮಮನಾಱೆಸಿ ಬೞಕ್ಕೆ ತನ್ನ ಪೆಂಡತಿಯಂ ಕರೆದು ಈ ತಪೋಧನಂಗೆ ನಿವಾತಮಪ್ಪೆಡೆಯೊಳ್ ಪಟ್ಟೆಗೆಡೆಮಾಡಿ ಕುಡೆಂದು ಪೇೞ್ದು ತಾಂ ಮಧುಪಾನಕ್ರೀಡಾನಿರತನಾಗಿ ಪೋಗಲ್ ಬಗೆದು ಚಿತ್ರಾಂಬರಪರಿಧಾನನುಂ ಕರ್ಪೂರಮಿಶ್ರಿತನವಮಲಯಜರಸವಿಲಿಪ್ತಗಾತ್ರನುಂ ಸುರಭಿಕುಸುಮಾಮಾಲಾಲಂಕೃತೋತ್ತಮಾಂಗನುಂ ಸರ್ವಾಭರಣಭೂಷಿತನುಮಾಗಿ ಕತಿಪಯಸಮಾನಶೀಲವ್ಯಸನಸಹಾಯರ್ವೆರಸು

ಕಮನೀಯೋದಾರ ಚಾಮೀಕರ ಚಷಕ ಚಯನ್ಯಸ್ತಮಾರ್ದ್ವೀಕ ಗಂಧಾಂ-
ಧ ಮದಾಳಿವ್ರಾತಝುಂಕಾರಿಯನಧಿಕಮನೋಹಾರಿಯಂ ಮತ್ತನೃತ್ಯ-
ತ್ಪ್ರಮದಾ ಕಸ್ತೂರಿಕಾಮಿಶ್ರಿತ ಗುರುಕಬರೀನಿರ್ಗಳತ್ಪುಷ್ಪಸಂದೋ-
ಹಮನುದ್ವೃತ್ತಾನ ಭೂರಂಗಮನತಿಮುದದಿಂದೆಯ್ದಿದಂ ತಂತುವಾಯಂ ೧೨೪

ಆನ್ನೆಗಮಿತ್ತಲ್ ತಂತುವಾಯಿಕೆ ತಪೋಧನಂಗೆ ಮನೆಯೋವರಿಯೊಳ್ ಪಾಸಿಕೊಟ್ಟು, ನಿಮ್ಮಡಿ, ನೀವಿಲ್ಲಿ ಸುಖನಿದ್ರೆಗೆಯ್ಯಿಮೆಂದು ತಾಂ ಜೋಡಾಡಲ್ ಬಗೆದು ಮನೆಯಾಣ್ಮಂ ಬಾರದನ್ನಂ ಕೞ್ತಲೆಪೋಗದನ್ನಂ ಚಂದ್ರೋದಯಮಾಗದನ್ನಂ ತನ್ನ ಮನೋರಥಮಂ ತೀರ್ಚುವೆನೆಂದು ದೂತಿಯಂ ಕರೆದು ತನ್ನಾತನಂ ಸಂಕೇತನಿಕೇತನಕ್ಕೊಡಗೊಂಡು ಬರ್ಪುದೆಂದು ಪೇೞ್ದಟ್ಟೆ,

ಕೆರೆಯಂತೆ ಬತ್ತಿದ್ದ ಬಾಯಿಯ, ಬೇತಾಳನ ಹೊಟ್ಟೆಯಂತೆ ಬೆನ್ನಿಗೆ ಹತ್ತಿದ ಹೊಟ್ಟೆಯಿಂದ ಕೂಡಿ ಬರುತ್ತಿದ್ದ ವೃದ್ಧತಾಪಸನನ್ನು ಕಂಡು ಅವರಿಗೆಲ್ಲ ಕರುಣೆ ಹುಟ್ಟಿತು. ಆ ಊರಿನ ಮೂಲಿಗನಾದ ಒಬ್ಬ ಪಟ್ಟಸಾಲಿಗನು ಅವನನ್ನು ಕಂಡು ತನ್ನ ಮನೆಗೆ ಕರೆದುಕೊಂಡು ಹೋಗಿ ಪರಮಭಕ್ತಿಯಿಂದ ಅವನ ಪಥಪರಿಶ್ರಮವನ್ನು ಆರಿಸಿ ಬಳಿಕ ತನ್ನ ಹೆಂಡತಿಯನ್ನು ಕರೆದು ಈ ತಪೋಧನನಿಗೆ ನಿರ್ವಾತವಾದ ಎಡೆಯಲ್ಲಿ ಹಾಸಿಗೆ ಹಾಸಿಕೊಡು ಎಂದನು. ಅವನು ಮಧುಪಾನಕ್ರೀಡಾನಿರತನಾಗಿ ಹೋಗಲು ಯೋಚಿಸಿ ಚಿತ್ರಗಳಿಂದ ಕೂಡಿದ ಬಟ್ಟೆಯನ್ನುಟ್ಟು ಕರ್ಪೂರಮಿಶ್ರಿತ ನವಮಲಯಜರಸವನ್ನು ಮೆಯ್ಗೆ ಬಳಿದುಕೊಂಡು, ಪರಿಮಳಪುಷ್ಪವನ್ನು ತಲೆಯಲ್ಲಿ ಮುಡಿದುಕೊಂಡು ಕೆಲವರು ಸಮಾನಶೀಲ ಸ್ನೇಹಿತರನ್ನು ಕರೆದುಕೊಂಡು ಹೊರಟನು. ೧೨೪. ಮನೋಹರವೂ ಶ್ರೇಷ್ಠವೂ ಆದ ಚಿನ್ನದ ಬಟ್ಟಲುಗಳ ಸಮೂಹಕ್ಕೆ ಸುರಿದ ಮದ್ಯದ ವಾಸನೆಯಿಂದ ಕೂಡಿದ, ಮದಿಸಿದ ದುಂಬಿಗಳ ಸಮೂಹದ ಶಬ್ದದಿಂದ ಕೂಡಿದ, ಅತ್ಯಂತ ಮನೋಹರವಾದ, ಮದದಿಂದ ಕುಣಿಯುವ ಸ್ತ್ರೀಯರ ಕಸ್ತೂರೀಮಿಶ್ರಿತ ತೋರಹೆರಳಿನಿಂದ ಬೀಳುತ್ತಿರುವ ಪುಷ್ಪರಾಶಿಯಿಂದ ಕೂಡಿದ, ಶ್ರೇಷ್ಠವಾದ ಪಾನ ಭೂಮಿಯನ್ನು ತಂತುವಾಯನು ಅತ್ಯಂತ ಸಂತೋಷದಿಂದ ತಲುಪಿದನು. ವ॥ ಅಷ್ಟರಲ್ಲಿ, ಇತ್ತ ತಂತುವಾಯಿಕೆಯು ಮನೆಯ ಓವರಿಯಲ್ಲಿ ಹಾಸಿಕೊಟ್ಟು, ಸ್ವಾಮೀ, ನೀವು ಇಲ್ಲಿ ಸುಖವಾಗಿ ನಿದ್ರಿಸಿರಿ ಎಂದು ತಾನು ಜೋಡಾಡಲು, ಮನೆಯ ಯಜಮಾನನು ಬರುವುದರೊಳಗೆ, ಬೆಳಗಾಗುವುದರೊಳಗೆ, ಚಂದ್ರೋದಯವಾಗುವ ಮೊದಲು ತನ್ನ ಮನೋರಥವನ್ನು ಈಡೇರಿಸಿಕೊಳ್ಳುವೆನೆಂದು ದೂತಿಯನ್ನು ಕರೆದು ತನ್ನಾತನನ್ನು ಸಂಕೇತ

ತೋಯನಿಧಾನಫೇನ ವಿಶದೋತ್ತಮವಸ್ತ್ರಮನುಟ್ಟು ಪುಷ್ಪಮಾ-
ಲಾಯುತೆಯಾಗಿ ರಾಗದಿನುಪೇಶ್ವರನೊಳ್ ನೆರೆವಳ್ಕರೆಂ ಪ್ರಸೂ-
ನಾಯುಧತಾಪತಪ್ತೆ ಕದುಗಬ್ಬಲೆಯೊಳ್ ಹರಿಣಾಕ್ಷಿ ಪುಂಶ್ಚಲೀ
ನಾಯಕೆ ತಂತುವಾಯಿಕೆ ನಿಜಾಲಯದಿಂ ಪೊಱಮಟ್ಟಳಟ್ಟೆಯಿಂ ೧೨೫

ಅಂತು ತಂತುವಾಯಿಕೆ ಪೊಱಮಟ್ಟು ಕಿಱಿದಂತರಂ ಪೋಗುತ್ತುಂ ಕಟ್ಟಿದಿರೊಳ್ ತಾಮೂರ್ಟ್ಟಾಗೆ ಮದಿರಾಮದೋನ್ಮತ್ತನಾಗಿ ತನ್ನಿಚ್ಚೆಯಿಂ ಮೆಚ್ಚಿದಂತೆ ಗಱಪುತ್ತುಂ ಬರ್ಪ ಮನೆಯಾಣ್ಮನ ಸರಮಂ ಭೋಂಕನೆ ಸಮೀಪದೊಳ್ ಕೇಳ್ದು ಬಟ್ಟೆಯೊಳ್ ಪೋಪ ಬೆಳ್ಬಾಳ್ ಕಳ್ಳಾಳ ಸರಮಂ ಕೇಳ್ದಂತೆ ಪೆಪ್ಪಳಿಸಿ ಮಗುಳ್ದು ಮನೆಗೆ ಬಂದು ವಿಶೇಷಾಲಂಕಾರಮುಮಂ ಶೃಂಗಾರಮುಮಂ ಕಳೆದು ಪೂರ್ವಸ್ವರೂಪಮಂ ತಾಳ್ದಿರುತಿರ್ಪನ್ನೆಗಂ ಬೆನ್ನನೆ ಬಂದು ಮುಂದೆ ನಿಂದಿರ್ದ ಗಂಡನಂ ಕಂಡು ಪ್ರಚಂಡೆ ವಂಚನೋಪಾಯಮಂ ಕಾಣದೆ ಬಲ್ಲುಂ ಬೆಱಗುಮಾಗಿರೆ ಕಂಡಿದೇನೆಂದು ಬೆಸಗೊಂಡೊಡವಳ್ ಸನ್ನಿಪಾತಮಡೆಗೊಂಡರವೊಲೇನುಮೆನಲರಿಯದಿರೆಯುಂ ಮಂತ್ರವಾದಿಯಂ ಕಂಡ ಗ್ರಹದಂತೆ ಸಮ್ಮುಖದೊಳ್ ನೋಡಲಣ್ಮದಿರೆಯುಂ ಆ ತಂತುವಾಯಂ ಮುನ್ನಮ ತನ್ನ ಪೆಂಡತಿ ಜೋಡೆಯೆಂದು ಸಂದೇಹಂಬಡುವಾತನವಳ ವಿಪರೀತವೇಷಂ ತನಗೆ ರೋಷಮನೀಯೆ ಸಾಯೆ ಸದೆಬಡಿದು ಮನೆಯ ನಡುಗಂಭದೊಳದಸಿ ಕಟ್ಟಿ ಕಳ್ಳಸೊರ್ಕಿನೊಳಮವಳ ಪೊರ್ಕುಳಿಯೊಳಂ ಬಳಲ್ದು ನಿದ್ರಿತನಪ್ಪುದುಂ, ಅನ್ನೆಗಂ ನೆರಮನೆಯ ನಾವಿದನ ಪೆಂಡತಿಯುಪ್ಪ ದೂದವಿ ಪಾದರಿಗನಂ ಸಂಕೇತಸ್ಥಾನದೊಳಿರಿಸಿ ಪರಿತಂದು ಕಟ್ಟುವಟ್ಟಿರ್ದ ಕೆಳದಿಯಂ ಕಂಡು, ತದ್ವೃತ್ತಾಂತಮನೆಲ್ಲಮನಱಿವಲ್, ಆಕೆಯ ಕಟ್ಟುಗಳಂ ಬಿಟ್ಟನ್ನೆಗಂ ತನ್ನನಲ್ಲಿ ಕಟ್ಟಿಸಿಕೊಂಡು ನಿನ್ನ ಮನೋವಲ್ಲಭನೊಳ್ ನೆರೆದು ಬೇಗಂ ಬರ್ಪುದೆಂದು ಪೇೞ್ದು

ನಿಕೇತನಕ್ಕೆ ಕರೆದುಕೊಂಡು ಬಾ ಎಂದು ಹೇಳಿದಳು. ಶ್ವೇತಾಂಬರಧಾರಿಯಾಗಿ, ಪುಷ್ಪಮಾಲಾಯುತೆಯಾಗಿ ಕಡುಕತ್ತಲೆಯಲ್ಲಿ ಆ ಕಾಮಾಂಧೆ ತಂತುವಾಯಿಕೆ ತನ್ನ ಮನೆಯಿಂದ ಹೊರಹೊರಟಳು. ವ॥ ಹಾಗೆ ಸ್ವಲ್ಪ ದೂರ ಹೋಗುತ್ತಿರಲು ಎದುರುಗಡೆ ಮದಿರಾಮದೋನ್ಮತ್ತನಾಗಿ ಸ್ವೇಚ್ಛೆಯಿಂದ ಹರಟುತ್ತ ಬರುತ್ತಿದ್ದ ಮನೆಯ ಯಜಮಾನನ ಸ್ವರವನ್ನು ಕೇಳಿ, ದಾರಿಯಲ್ಲಿ ಹೋಗುವ ಅಂಜುಬುರುಕನು ಕಳ್ಳನನ್ನು ಕಂಡಂತೆ ಭಯಭ್ರಾಂತಳಾಗಿ ಮನೆಗೆ ಹಿಂದಿರುಗಿದಳು. ತನ್ನ ಮೈಮೇಲಿನ ವಿಶೇಷಾಲಂಕಾರವನ್ನೂ ಶೃಂಗಾರವನ್ನೂ ತೆಗೆದುಹಾಕಿ ಮೊದಲಿನ ರೂಪದಲ್ಲಿಯೇ ಇರಲು ಹಿಂದಿನಿಂದಲೇ ಬಂದು ಮುಂದೆ ನಿಂತಿದ್ದ ಗಂಡನನ್ನು ಕಂಡು ಆ ಪ್ರಚಂಡೆ ವಂಚನೋಪಾಯವನ್ನು ಕಾಣದೆ ಬೆರಗಾಗಿ ಇದೇನೆಂದು ಕೇಳಿದರೆ ಸನ್ನಿಪಾತರೋಗಗ್ರಸ್ತರಂತೆ ಬಾಯಿ ಬಿಡದಿರಲು ಆ ತಂತುವಾಯನು ತನ್ನ ಹೆಂಡತಿ ಜೋಡೆಯೆಂದು ಮೊದಲಿಂದ ಸಂದೇಹ ಪಡುತ್ತಿದ್ದನಾದುದರಿಂದ ಅವಳ ವಿಪರೀತವೇಷ ತನಗೆ ರೋಷವನ್ನುಂಟುಮಾಡಲು ಅವಳನ್ನು ಸಾಯುವಂತೆ ಹೊಡೆದು ಮನೆಯ ನಡುಗಂಬಕ್ಕೆ ಕಟ್ಟಿದನು. ಕಳ್ಳಿನ ಸೊಕ್ಕಿನಿಂದಲೂ, ಹೋರಾಟದಿಂದಲೂ ನಿದ್ರಾಮುದ್ರಿತನಾದನು. ಅಷ್ಟರಲ್ಲಿ ದೂತಿಯಾದ ನೆರೆಮನೆಯ ನಾವಿದನ ಹೆಂಡತಿ ಹಾದರಿಗನನ್ನು ಸಂಕೇತಸ್ಥಾನದಲ್ಲಿಟ್ಟು ಬಂದು ಬಂಧಿತಳಾದ ಗೆಳತಿಯನ್ನು ಕಂಡು ವೃತ್ತಾಂತವೆಲ್ಲವನ್ನೂ ತಿಳಿದು, ಅವಳ ಕಟ್ಟನ್ನು ಬಿಚ್ಚಿ ತನ್ನನ್ನು ಕಂಬಕ್ಕೆ ಕಟ್ಟಿಸಿಕೊಂಡು ನಿನ್ನ ಮನೋವಲ್ಲಭನೊಡನೆ ಕೂಡಿ ಬೇಗ ಬಾ ಎಂದು

ಒಟ್ಟೈಸಿ ಕರ್ಮವಶದಿಂ
ತೊಟ್ಟನೆ ಮತಿಗೆಟ್ಟು ದೂತಿ ಕಟ್ಟಿಸಿಕೊಂಡಳ್
ಮುಟ್ಟುಗಿಡೆ ತಾನೆ ತನ್ನಂ
ಕಟ್ಟಿದುದಂ ಕಳೆಯಲಾರ್ಗಮೇಂ ಬಂದಪುದೇ ೧೨೬

ಅಂತು ಕಟ್ಟಿಸಿಕೊಂಡು ಕಜ್ಜಲೆಯೊಳ್ ತಲೆಗರೆದಿರ್ಪುದುಮಿನಿಸಾನುಂ ಬೇಗದಿಂ ತಂತುವಾಯ ನೆಚ್ಚತ್ತು ಮತ್ತಮಾಕೆಯನನೇಕ ಪ್ರಕಾರದಿಂ ಬಯ್ದು ನಿನ್ನ ಬೇಟದ ಮಿಂಡನಾವನವನಂ ಪೇೞೆಂದು ಬೆಸಗೊಳೆ, ದೂತಿ ಭೀತಿಯಿಂದುಸಿರಿಕ್ಕದಿರೆ, ಸೈರಿಸಲಾಱದೀ ತೊತ್ತಿಂಗೆ ತಕ್ಕುದಂ ಮಾೞ್ಪೆನೆಂದು ಬಗೆದು.

ಆಡಿದವಳಾಡಿ ಪೋದಳ್
ನೋಡಲ್ ಬಂದವಳ್ಗೆ ಮೂಗು ಪೋಯ್ತೆಂಬನಿತಂ
ಮಾಡುವೆನೆಂಬಂತಿರ್ದಾ
ಜೋಡೆಯ ಮೂಗಿಂಗೆ ಮೃತ್ಯು ಮೂಡುವ ತೆಱದಿಂ ೧೨೭

ಅಂತಾ ತಂತುವಾಯನೆಲ್ಬು ಅವಳ ಮೂಗನರಿದು ಮತ್ತಂ ನಿದ್ರಾಂಗನಾಸಂಗತನಾದಂ, ಇತ್ತಲ್ ತಂತುವಾಯಿಕೆ ಜಾರನೊಳ್ ನೆರೆದು ಸುರತಸುಖಮನನುಭವಿಸುತಿರ್ಪನ್ನೆಗಮಿತ್ತಲ್,

ಸೌಂದರನಂ ಪ್ರತಾಪಪರನಪ್ಪ ನಿಜೇಶನನೊಲ್ಲದೆಲ್ಲರುಂ
ನಿಂದಿಸೆ ತೀಕ್ಷ್ಣಮಪ್ಪ ನೃಪದಂಡನೆಗಳ್ಕದೆ ಮೆಯ್ಗೆ ಮೆಚ್ಚಿದೊಂ-
ದಂದದೆ ಜಾಣ್ಬರೊಳ್ ನೆರೆವ ಜಾಣ್ಬೆಯರಾಟಮನೀಕ್ಷಿಸಲ್ ಮನಂ-
ದಂದಿರದೇೞಿದಂ ಮುದದ ಚಂದ್ರಮನಿಂದ್ರಹರಿನ್ನಗೇಂದ್ರಮಂ ೧೨೮

ಅಂತಾ ಚಂದ್ರೋದಯವಾದುದಂ ತಂತುವಾಯಿಕೆ ಕಂಡು ಬೆಗಡುಗೊಂಡು ಜಾಣ್ಬನಂ ಬೀೞ್ಕೊಂಡು ಪೊಱಮಟ್ಟು,

ಹೇಳಿದಳು ! ೧೨೬. ಕರ್ಮವಶದಿಂದ ಆ ದೂತಿಯು ಮತಿಗೆಟ್ಟು ಕಟ್ಟಿಸಿಕೊಂಡು ಕೆಟ್ಟಳು. ತಾನಾಗಿ ಕಟ್ಟಿಸಿಕೊಂಡುದನ್ನು ಯಾರಿಂದಲಾದರೂ ಬಿಡಿಸಿಕೊಳ್ಳುವುದು ಸಾಧ್ಯವೇ? ವ।। ಸ್ವಲ್ಪ ಹೊತ್ತಿನಲ್ಲಿ ತಂತುವಾಯನು ಎಚ್ಚತ್ತು ಅವಳನ್ನು ನಾನಾ ವಿಧದಿಂದ ಬಯ್ದು ನಿನ್ನ ಬೇಟದ ಮಿಂಡನು ಯಾವನವನು, ಹೇಳೆನ್ನಲು ದೂತಿಯು ಭೀತಿಯಿಂದ ಉಸಿರಿಡದಿರಲು ಸಹಿಸಲಾರದೆ ಇವಳಿಗೆ ತಕ್ಕ ಶಿಕ್ಷೆ ಮಾಡುವೆನೆಂದು ಬಗೆದನು. ೧೨೭. ಆಡಿದವಳು ಆಡಿ ಹೋದಳು ; ನೋಡಬಂದವಳಿಗೆ ಮೂಗುಹೋಯ್ತು ಎಂಬ ಇಷ್ಟನ್ನು ಮಾಡುವೆನೆಂದು ಆ ಜೋಡೆಯ ಮೂಗಿಗೆ ಮೃತ್ಯುದೂಡುವಂತೆ ವ।। ಅವಳ ಮೂಗನ್ನು ಕೊಯ್ದು ಮತ್ತೆ ನಿದ್ರಾಂಗನಾಸಂಗತನಾದನು. ಇತ್ತ ತಂತುವಾಯಿಕೆಯು ಜಾರನೊಡನೆ ಕೂಡಿ ಸುರತಸುಖವನ್ನನುಭವಿಸುತ್ತಿರಲು, ೧೨೮. ಸುಂದರನೂ, ಪ್ರತಾಪಶಾಲಿಯೂ ಆದ ತನ್ನ ಪತಿಯನ್ನು ಒಲ್ಲದೆ ಎಲ್ಲರೂ ನಿಂದಿಸಲು ತೀಕ್ಷ್ಣವಾದ ನೃಪದಂಡನೆಗೆ ಅಳುಕದೆ ಶರೀರಸುಖಕ್ಕಾಗಿ ವಿಟರೊಡನೆ ಕೂಡುವ ವ್ಯಭಿಚಾರಿಣಿಯರ ಆಟವನ್ನು ಈಕ್ಷಿಸಲು ಮನಸ್ಸು ಮಾಡಿ ಸಂತೋಷದಿಂದ ಚಂದ್ರನು ಉದಯಪರ್ವತವನ್ನು ಏರಿದನು. ವ।। ಹಾಗೆ ಆ ಚಂದ್ರೋದಯವಾದುದನ್ನು ತಂತುವಾಯಿಕೆ ಕಂಡು

ಸುರತಮದೋತ್ಥಘರ್ಮಜಲಬಿಂದುಮನೋಹರಹಾರೆ ವಲ್ಲಭಾ-
ಧರಮಧುಪಾನನಿರ್ಗತಮನೋಭವತಾಪೆ ನಖವ್ರಣಾವಳೀ
ಸ್ಫುರಿತಘನೋರುಯುಗ್ಮೆ ನೃಪದಂಡಭಯಾತುರೆ ತಂತುವಾಯ ಸೌಂ-
ದರಿ ಕಡುವೇಗದಿಂ ಕುಟಿಲಮಾರ್ಗದಿನೆಯ್ದಿದಳಾತ್ಮಗೇಹಮಂ ೧೨೯

ಅಂತೆಯ್ದಿ ಕತ್ತಲೆಯೊಳ್ ಕಟ್ಟುವಡೆದಿರ್ದಾ ದ್ರೋಹಿಯಂ ಕಂಡಾ ಪತಿದ್ರೋಹಿ ಸಾರ್ದು ನಿಮ್ಮ ಭಾವನೇನಾನುಮಂದ ಮಾತುಳ್ಳೊಡೆ ಪೇಳೆನಲೇನಂ ಪೇಳ್ವೆಂ? 'ಪೊಕ್ಕೆಱೆಯಲ್ ಪೋಗಿ ಮೂಗಿಱಿವಡೆದರ್' ಎಂಬ ನಾಣ್ನುಡಿ ತನ್ನೊಳ್ ಸನ್ನಿದಮಾದುದಿದರ್ಕೆ ತಕ್ಕುದಂ ನೆಗಬಲ್ವೇಳ್ಕುಂ, ಈ ಕಟ್ಟುಗಳಂ ಬೇಗಂ ಬಿಡಿಸೆಂದು ಬಿಡಿಸಿಕೊಂಡು ಪೋದಳ್, ಇತ್ತಲ್ ತಂತುವಾಯಿಕೆಯುಂ ತನಗೆ ಮುಂತಪ್ಪ ನಿರ್ಗಮೋಪಾಯಮಂ ಚಿಂತಿಸಿಕೊಂಡು ಸಂತಸಂಬಟ್ಟನ್ನೀ ಬೆಳ್ಪನನಾಳವಾಡಲ್ ಬಲ್ಲೆನೆಂದು ಬಗೆದು ಗೃಹಮಧ್ಯಸ್ತಂಭಾವಷ್ಟಂಭೆಯಾಗಿರೆ, ತಂತುವಾಯನೆೞ್ದು ಈಗಳ್ ನಿನ್ನ ರೂಪವಿಲಾಸವಿಭ್ರಮಂಗಳ್ ಮಂಗಳಮಾಗಿರ್ದುದನೀ ಪದದೊಳ್ ನಿನ್ನ ಮನೋವಲ್ಲಭನಲ್ಲಿಗೆ ಪೋಗಿ ತೋಱದೇಕೆ ಪಾೞ್ನೆ? ಎಂದು ವಿರಸಮಪ್ಪ ಸರಸವಚನಂಗಳಂ ನುಡಿಯೆ, ತಂತುವಾಯಿಕೆಯಿಂತೆಂದಳ್ :

ನೀನಿಂತು ಕರಂ ಕಯ್ಗೆ-
ಯ್ದಾನಂದಮನಸ್ಕನಾದೊಡಾನುಂ ನಿನಗ-
ತ್ಯಾನಂದಂ ಮಾಡುವೆನೆಂ-
ಬೀ ನೆವದಿಂದೆಸೆಯೆ ಪಸದನಂಗೊಂಡಿರ್ದೆಂ ೧೩೦

ಆಶ್ಚರ್ಯಗೊಂಡು ವಿಟನನ್ನು ಬೀಳ್ಕೊಟ್ಟು ಹೊರಹೊರಟಳು. ೧೨೯. ಸುರತದ ಸೊಕ್ಕಿನಿಂದ ಮೂಡಿದ ಬೆವರಿನ ಬಿಂದುಗಳ ಮನೋಹರಹಾರವುಳ್ಳವಳೂ, ವಲ್ಲಭನ ಅಧರದ ಮಧುಪಾನದಿಂದ ಕಾಮತಾಪವನ್ನು ಪರಿಹರಿಸಿಕೊಂಡವಳೂ. ನಖಕ್ಷತಗಳ ಸಾಲುಗಳಿಂದ ಹೊಳೆಯುವ ತೋರವಾದ ಎರಡು ತೊಡೆಗಳುಳ್ಳವಳೂ ರಾಜನ ಶಿಕ್ಷೆಗೆ ಹೆದರಿದವಳೂ ಆದ ಆ ತಂತುವಾಯನ ಸುಂದರಿ ಬೇಗ ಬೇಗನೆ ಒಳದಾರಿಯಿಂದ ತನ್ನ ಮನೆಯನ್ನು ಸೇರಿದಳು. ವ॥ ಕತ್ತಲೆಯಲ್ಲಿ ಕಟ್ಟಿಸಿಕೊಂಡಿದ್ದ ದ್ರೋಹಿಯನ್ನು ಆ ಪತಿದ್ರೋಹಿ ಕಂಡು, ನಿಮ್ಮ ಭಾವನೇನಾದರೂ ಹೇಳಿದನೇ ಎನ್ನಲು ಅವಳು, ಏನುಹೇಳಲಿ ಹೊಕ್ಕು ಇರಿಯಲು ಹೋದರೆ ಮೂಗರಿದರು ಎಂಬಂತೆ ಆಯಿತು. ಇದಕ್ಕೆ ತಕ್ಕುದನ್ನು ಮಾಡಬೇಕು. ಈ ಕಟ್ಟುಗಳನ್ನು ಬೇಗ ಬಿಡಿಸೆಂದು ಬಿಡಿಸಿಕೊಂಡು ಹೋದಳು. ಇತ್ತ ತಂತುವಾಯಿಕೆ ತನ್ನ ನಿರ್ಗಮೋಪಾಯವನ್ನು ಆಲೋಚಿಸಿ ಸಂಸತಪಟ್ಟು ಇನ್ನು ಈ ದಡ್ಡನಿಗೆ ಮೋಸಮಾಡಲು ಬಲ್ಲೆ ಎಂದು ಗೃಹಮಧ್ಯ ಸ್ತಂಭಾವಷ್ಟಂಭೆಯಾಗಿ ನಿಂತಳು. ಅಷ್ಟರಲ್ಲಿ ಆ ತಂತುವಾಯನು ಎದ್ದು, ಈಗ ನಿನ್ನ ರೂಪ ವಿಲಾಸ ವಿಭ್ರಮಗಳನ್ನು ನಿನ್ನ ಮನೋವಲ್ಲಭನಿಗೆ ತೋರಿಸದೆ ಏಕೆ ಸುಮ್ಮನಿರುವೆ ಎಂದು ವಿರಸವಾದ ಸರಸವಚನಗಳನ್ನು ನುಡಿಯಲು ತಂತುವಾಯಿಕೆ ಹೀಗೆಂದಳು : ೧೩೦. ನೀನು ಹೀಗೆ ಚೆನ್ನಾಗಿ ಅಲಂಕೃತನಾಗಿ ಆನಂದಮನಸ್ಕನಾಗಿರಲು ನಾನೂ ನಿನಗೆ ಅತ್ಯಾನಂದವನ್ನು ಮಾಡುವೆನು ಎಂಬ ಈ

ಅಂತಿರ್ದೊಡದನೆ ದೋಷಂಗೆಯ್ದು ರೋಷಗ್ರಹಾವೇಶನಾಗಿ ನಿಷ್ಕಾರಣಂ ಪರಿಭವಿಸಿ ನೋಯಿಸಿದೆ. ಆದೊಡಮೇಂ ಆಸಂತಪ್ಪ ಒರ್ಬ ತಾಯ್ಗಂ ತಂದೆಗಂ ಪುಟ್ಟಿದೆನಾದೊಡೆ, ನಾಂ ಪತಿವ್ರತೆಯಾದೊಡೆ, ಮನೆದೈವಂಗಳೆನಗೆ ಸನ್ನಿದಮಾದೊಡೆನ್ನ ಮೂಗು ಮುನ್ನಿನಂತಾಗಲೀ ಕಟ್ಟಿರ್ದ ಕಟ್ಟೆಲ್ಲಂ ಬಿಟ್ಟುಪೋಗಲೆವೇೞ್ಕುಂ, ಅದಲ್ಲದಾಗಳುಂ ಮಹಾಸತಿಯಲ್ಲೆಂದು ಪ್ರತಿಜ್ಞೆಗೆಯ್ಯೆ ತಂತುವಾಯಂ ವಿಸ್ಮಯಂಬಟ್ಟೀ ಕೌತುಕಮಂ ನೋೞ್ಪೆನೆಂದು ತೃಣಾಗ್ನಿಯಂ ಸಂಧಿಸಿ ತಂದು ನೋೞ್ಪಲ್ ಪೂರ್ವರೂಪಿಯುಮಪೂರ್ವಸ್ವರೂಪಿಯುಮಾಗಿರ್ದಾ ಮಾಯಾವಿಯಂ ಕಂಡು ರೋಮಾಂಚಕಂಚುಕಿತ ಕಾಯಂ ತಂತುವಾಯಂ ಕೈಗಳಂ ಮುಗಿದು,

ವನಜಾಕ್ಷಿ ದೋಷಿಯಲ್ಲದ
ನಿನಗೆ ಕರಂ ಪೊಲ್ಲಗೆಯ್ದೆನೆಂದಿರದಾತ್ಮಾಂ-
ಗನೆಯ ಪದಕ್ಕೆಱಗಿದನೆ-
ನ್ನನುಮಱಿಗುಮೆ ಧೂರ್ತೆಯಪ್ಪ ಕಾಂತೆಯ ಮನಮಂ ೧೩.೧

ಅಂತಿರೆ ತಂತುವಾಯನಾ ಜೋಡಿಯಂ ಸಂತಸಂಬಡಿಸಿ ಸುಖನಿದ್ರಿತನಾದಂ. ಆದೆಲ್ಲಮನಲ್ಲಿ ಪಟ್ಟಿರ್ದ ವೃದ್ಧತಾಪಸಂ ಕಂಡುಂ,

ನಂಬಿಪರೆನ್ನರಪ್ಪರುಮನೇತೆಱದಿಂ ಸಲೆ ನಂಬಿ ಪಾಣ್ಬೆಯರ್
ಡಂಬಿಪರಿಂತನೇಕವಿಧದಿಂದೆ ವಿಚಾರಿಸಿ ನೋಡೆ ಪೆಂಡಿರಂ
ನಂಬಲೆಯಾಗ ನಂಬದಿರಲಾಗವರಿಲ್ಲದೆ ಬಾೞಲಾಗದೇ-
ನೆಂಬುದಿದರ್ಕೆ ತಕ್ಕುದನೆ ಬಲ್ಲವನುಳ್ಳೊಡೆ ದೇವನಲ್ಲನೇ ೧೩.೨

ಕಾರಣದಿಂದ ಶೋಭಿಸುವಂತೆ ಅಲಂಕಾರ ಮಾಡಿಕೊಂಡಿದ್ದೆ. ವ|| ಹಾಗಿರಲು ನೀನು ಅದನ್ನೇ ದೋಷವೆಂದು ಬಗೆದು ರೋಷಗ್ರಹಾವೇಶನಾಗಿ ನಿಷ್ಕಾರಣವಾಗಿ ನನ್ನನ್ನು ನೋಯಿಸಿದೆ. ನಾನು ಒಬ್ಬ ತಂದೆತಾಯಿಗಳಿಗೆ ಹುಟ್ಟಿದುದು ನಿಜವಾದರೆ, ಪತಿವ್ರತೆಯಾಗಿದ್ದರೆ, ಮನೆದೇವ ನನ್ನನ್ನು ಒಲಿದುದು ನಿಜವಾಗಿದ್ದರೆ ನನ್ನ ಮೂಗು ಮೊದಲಿನಂತೆ ಆಗಲಿ ; ನನ್ನನ್ನು ಕಟ್ಟಿದ ಈ ಕಟ್ಟೆಲ್ಲ ಬಿಚ್ಚಿಹೋಗಲಿ. ಹಾಗಾಗದಿದ್ದರೆ ನಾನು ಮಹಾಸತಿಯಲ್ಲ ಎಂದು ಪ್ರತಿಜ್ಞೆ ಮಾಡಿದಳು. ತಂತುವಾಯನು ವಿಸ್ಮಯದಿಂದ ಈ ಕೌತುಕವನ್ನು ನೋಡುವೆ ಎಂದು ಹುಲ್ಲುಬೆಂಕಿಯನ್ನು ತಂದು ಹಿಡಿದು ನೋಡಲು ಪೂರ್ವರೂಪಿಯೂ ಅಪೂರ್ವಸ್ವರೂಪಿಯೂ ಆಗಿದ್ದ ಆ ಮಾಯಾವಿಯನ್ನು ಕಂಡನು. ರೋಮಾಂಚನಗೊಂಡು ಆ ತಂತುವಾಯಿಕೆಗೆ ಕೈಗಳನ್ನು ಮುಗಿದು, ೧೩.೧. ವನಜಾಕ್ಷಿ! ನಿರ್ದೋಷಿಯಾದ ನಿನಗೆ ನಾನು ನೀಚಕಾರ್ಯವನ್ನು ಎಸಗಿದೆ ಎಂದು ತನ್ನ ಅಂಗನೆಯ ಪಾದಕ್ಕೆರಗಿದನು. ಧೂರ್ತೆಯಾದ ಕಾಂತೆಯ ಮನಸ್ಸನ್ನು ಅರಿಯುವುದು ಎಂಥವನಿಂದಲೂ ಸಾಧ್ಯವೇ! ವ|| ಹಾಗೆ ತಂತುವಾಯನು ಆ ಹಾದರಗಿತ್ತಿಯನ್ನು ಸಂತೋಷಪಡಿಸಿ ಸುಖನಿದ್ರಿತನಾದ. ಅದೆಲ್ಲವನ್ನೂ ಅಲ್ಲೇ ಮಲಗಿದ್ದ ವೃದ್ಧತಾಪಸನು ಕಂಡು ಮನಸ್ಸಿನಲ್ಲಿಯೇ ಹೀಗೆಂದುಕೊಂಡನು : ೧೩.೨. ವೇಶ್ಯೆಯರು ಎಂಥವರನ್ನೂ ನಂಬುವಂತೆ ಮಾಡುವರು. ಅನೇಕ ವಿಧಗಳಿಂದ ಮೋಸಗೊಳಿಸುವರು. ಹೆಂಡಿರನ್ನು ನಂಬುವುದೂ ಕಷ್ಟ, ನಂಬದಿರುವುದೂ ಕಷ್ಟ ; ಅವರಿಲ್ಲದೆ ಬಾಳುವುದೂ ಕಷ್ಟ. ಇದಕ್ಕೇನೆನ್ನಲಿ ಅವರನ್ನು ಹೇಗೆ ನೋಡಿಕೊಳ್ಳಬೇಕೆಂಬುದನ್ನು ತಿಳಿದವನಿದ್ದರೆ ಅವನೇ ದೇವತೆಯಲ್ಲವೇ!

ಎಂದು ದೇವಶರ್ಮಂ ಚೋದ್ಯಂಬಟ್ಟಿರ್ಪಿನಮಿತ್ತಂ ದೂದವಿಯುಂ ನಿಜನಿವಾಸಕ್ಕೆ ಪೋಗಿ ಇದರ್ಕೇಗೆಯ್ವೆನೆಂದು ಚಿಂತಿಸುತಿರ್ಪನ್ನೆಗಮಿತ್ತಲ್,

ಭುವನಜನವಿನುತಪಾದಂ
ದಿವಸಕರಂ ನಿಖಿಳಕಮಲವನಕಾಹ್ಲಾದಂ
ಪ್ರವಿದಿತ ಕೌಶಿಕಪಾದಂ
ದಿವಿಜಾಶಾಶಿಖರಿಶಿಖರಶೇಖರನಾದಂ ೧೩೩

ಅಂತಾದಿತ್ಯೋದಯಮಾಗಲೊಡಂ ದೂದವಿಯ ಗಂಡಂ ಬಂದು ಅರಸರ್ ಬೆಸವೇೞ್ದರ್, ಬೇಗಂ ಕ್ಷುರಭಾಂಡಮನೀಯೆಂದು ಬೇಡಿದೊಡವಳ್ ಧೂರ್ತೋಕ್ತಿಯಿಂ ತನ್ನ ದೋಷಮಂ ಪರಿಹರಿಸಲಿದೊಂದು ಉಪಾಯಮಾದುದೆಂದು ಬಾಳಂ ಕಲ್ಲಮೇಲೀಡಾಡಿದೊಡದು ಮುಕ್ಕುವೋದುದಂ ಕಂಡು ಕಡುಮುಳಿದು ನಾವಿದನಾ ಬಾಳನವಳ ಮೇಲೆ ಮಗುೞ್ಚೀಡಾಡಿದೊಡವಳ್ ತನ್ನ ಮೂಗನಕಾರಣಂ ಕೊಯ್ದನೆಂದು ಮೂಗಂ ಮತ್ತಂ ನೆತ್ತರ್ ಸುರಿವಿನಮೊರಸಿ ಹಾಹಾಕ್ರಂದನರವದಿಂ ಹುಯ್ಯಲಿಡುವ ಕರುಣಾರವಮಂ ತಳವಾಱಂ ಕೇಳ್ದು ಪರಿತಂದು ನಾವಿದನುಮನವನ ಪೆಂಡತಿಯುಮಂ ಪಿಡಿದೊಡಗೊಂಡು ಪೋಗಿ ಧರ್ಮಾಧಿಕರಣದ ತಾಣಾಂತರದೊಳಿರಿಸಿದಂ, ಅನ್ನೆಗಂ ದೇವಶರ್ಮಂ ತನ್ನ ಬಗೆದೆಡೆಗೆ ಪೋಗಲೆಂದು ಬರುತ್ತುಂ ಪಿರಿದಾಗಿ ನೆಱೆದಿರ್ದ ಜನಮಂ ಕಂಡಿದಿನಿಸಾನುಂ ಕೌತುಕಮಾಗಲೆವೇೞ್ಕುಮಿದಂ ನೋಡುವೆನೆಂದು ಪೋಗಿ ನೋಡುತಿರ್ಪನ್ನೆಗಂ, ಧರ್ಮಾಧಿಕರಣದವರ್ ನಾವಿದನಂ ಕರೆದು ನೀನಿವಳ ಮೂಗನೇಂ ಕಾರಣಂ ಪಱಿದೆ ಪೇೞೆಂದು ಪಲವು ಸೂೞುಂ ಬೆಸಗೊಂಡೊಡವಂ ಮತಿಭ್ರಾಂತಿಯಿಂದುಸಿರದಿರ್ಪುದುಮದಂ ಕಂಡು ಪೆಂಡತಿಯು

ವ॥ ಎಂದು ದೇವಶರ್ಮನು ಆಶ್ಚರ್ಯಪಟ್ಟನು. ಇತ್ತ ಆ ನಾವಿದನ ಹೆಂಡತಿ ತನ್ನ ಮನೆಗೆ ಹೋಗಿ ಇದಕ್ಕೇನು ಮಾಡಲಿ ಎಂದು ಚಿಂತಿಸುತ್ತಿದ್ದಳು. ಅತ್ತ ಭುವನಜನವಿನುತಪಾದನೂ ಸಮಸ್ತ ಕಮಲವನಕ್ಕೆ ಆಹ್ಲಾದನೂ, ವಿದಿತಕೌಶಿಕಪಾದನೂ ಆದ ಸೂರ್ಯನು ಉದಯಪರ್ವತದ ಶಿಖರವನ್ನು ಏರಿದನು. ವ॥ ಹಾಗೆ ಆದಿತ್ಯೋದಯವಾಗಲು ಆ ದೂತಿಯ ಗಂಡ ಬಂದು ಅರಸರ ಕರೆ ಬಂದಿದೆ, ಬೇಗನೆ ಕ್ಷೌರದ ಪೆಟ್ಟಿಗೆಯನ್ನು ಕೊಡು ಎಂದು ಕೇಳಿದನು. ಅವಳು ಕೆಟ್ಟಮಾತುಗಳಿಂದ ತನ್ನ ದೋಷವನ್ನು ಪರಿಹರಿಸಿಕೊಳ್ಳಲು ಇದು ತಕ್ಕ ಉಪಾಯ ಎಂದು ಬಾಳನ್ನು ಕಲ್ಲಮೇಲೆ ಕೆಡೆಯಲು ಅದು ಮುಕ್ಕಾಗಿಹೋಯಿತು. ಅದನ್ನು ಕಂಡು ಸಿಟ್ಟಾಗಿ ಆ ನಾವಿದ ಬಾಳನ್ನು ಅವಳ ಮೇಲೆ ಎಸೆಯಲು ಅವಳು ತನ್ನ ಮೂಗನ್ನು ಅಕಾರಣವಾಗಿ ಕೊಯ್ದನೆಂದು ಮತ್ತಷ್ಟು ನೆತ್ತರು ಸುರಿಯುವಂತೆ ಒರಸಿಕೊಂಡು ಹಾಹಾಕ್ರಂದನದಿಂದ ಹುಯ್ಯಲಿಡತೊಡಗಿದಳು. ಈ ಗೋಳನ್ನು ಹತ್ತಿರವಿದ್ದ ತಳವಾರನು ಕೇಳಿ ನಾವಿದನನ್ನು ಆತನ ಹೆಂಡತಿಯನ್ನೂ ಹಿಡಿದುಕೊಂಡು ನ್ಯಾಯಾಸ್ಥಾನಕ್ಕೆ ಎಳೆದುಕೊಂಡು ಹೋದನು. ಅಷ್ಟರಲ್ಲಿ ದೇವಶರ್ಮನು ತನ್ನ ಇಚ್ಛೆ ಬಂದ ಕಡೆಗೆ ಹೋಗುತ್ತ ಗುಂಪುಗೂಡಿದ್ದ ಜನರನ್ನು ಕಂಡು ಇದೇನೋ ಆಶ್ಚರ್ಯವಿರಬೇಕೆಂದು ನೋಡತೊಡಗಿದನು. ನ್ಯಾಯಾಧಿಕಾರಿಗಳು ನಾವಿದನನ್ನು ಕರೆದು ನೀನಿವಳ ಮೂಗನ್ನು ಯಾವ ಕಾರಣದಿಂದ ಕೊಯ್ದೆ ಎಂದು ಹಲವು ಬಾರಿ ಕೇಳಿದರೂ ಅವನು ಮತಿಭ್ರಾಂತಿಯಿಂದ ಉತ್ತರಕೊಡದಿರಲು ಹೆಂಡತಿಯ

ಮೂಗನಕಾರಣದಿನರಿವವನಂ ಜವನ ಬಾಜೆಗಟ್ಟುವುದೆ ಧರ್ಮಮೆಂದು ಧರ್ಮಾಧಿಕರಣಂ ದಂಡಧರಂಗೆ ಪೇೞ್ದುದುಮಾ ತಳಾಱರಾ ನಾವಿದನಂ ಪಿಡಿದುಯ್ವುತಿರ್ದಾಗಳ್ ದೇವಶರ್ಮನವನ್ನೆಗಂ ಮಾಣೆಂದು ಧರ್ಮಾಧಿಕರಣರ್ಗಿಂತೆಂದಂ : ಈ ಪಾತಕಿಯ ಮಾತಂ ನಂಬಿ ದೋಷಿಯಲ್ಲದನಂ ಕೊಲಿಸುವುದು ಧರ್ಮಮಲ್ಲೆಂದು ನುಡಿವುದುಂ, ನೀನೆಂತಱಿವೆಯೆಂದು ಧರ್ಮಾಧಿಕರಣರ್ ಬೆಸಗೊಂಡೊಡೆ ದೇವಶರ್ಮನಿಂತೆಂದಂ :

ಶ್ಲೋ॥ ಜಂಬುಕೋ ಮೇಷಯುದ್ಧೇನ ವಯಂಚಾಷಾಢಭೂತಿನಾ
ದೂತಿಕಾ ತಂತುವಾಯೇನ ತ್ರಯೋಽನರ್ಥಾಸ್ಸ್ವಯಂಕೃತಾಃ ॥೪೪॥

ಟೀ॥ ತಗರ್ ಕಾದುವಲ್ಲಿ ನಡುವೊಕ್ಕು ನರಿ ಸತ್ತುದು. ಆಷಾಢಭೂತಿಯಿಂದಂ ದೇವಶರ್ಮನಪ್ಪೆನ್ನ ಧನಂ ಪೋದುದು, ಸಾಲಿಗನ ಕೈಯೊಳ್ ದೂದವಿಯಪ್ಪವಳ್ ವೃಥಾ ಮೂಗಂ ಕೊಯಿಸಿಕೊಂಡಳ್. ಈ ಮೂಱುನರ್ಥಂಗಳ್ ತಮ್ಮಿಂ ತಾವೆ ಮಾಡಿಕೊಂಡುವು. ಎಂದಿಂತಿವರ ಕಥಾವೃತ್ತಾಂತಮಂ ಧರ್ಮಾಧಿಕರಣರ್ಗೆ ದೇವಶರ್ಮಂ ಪೇೞ್ದು ನಾವಿದನ ಸಾವಂ ಮಾಣಿಸಿದಂ.

ಎಂಬಂತೆ ಸಂಜೀವಕನೆಂಬ ಪಾತಕನಂ ತಂದು ಪಿಂಗಳಕನೊಳ್ ಕೂಡಿ ಸ್ವಯಂಕೃತಾನರ್ಥಮಂ ಮಾಡಿಕೊಂಡೆವೆನೆ ಕರಟಕನಿಂತೆಂದಂ : ಮಂತ್ರನಿಶ್ಚಯಮಿಲ್ಲದೆ ಅನಾಲೋಚಿತ ಕಾರ್ಯಾನುಷ್ಠಾನವಿಪತ್ತಿಯೊಳಿದಂ ಮೊದಲೊಳಿಂತೆ ಮಾಡದೆ ಪೊಲ್ಲದಾಯ್ತೆಂದು ಬೞಿಕ್ಕ ಕಾಣ್ಬ ಕಾಣ್ಕೆಯಿಂ ಮುನ್ನಮೆ ಕಾಣ್ಬಂಗಾವ ಕಾರ್ಯಮುಮಸಾಧ್ಯಮಾಗಲಱಿಯದು. ಇನ್ನಾದೊಡಂ ನಿನ್ನ ಪಶ್ಚಾತ್ತಾಪಮಂ ಮಾಣ್ಬು

ಮೂಗನ್ನು ನಿಷ್ಕಾರಣವಾಗಿ ಕೊಯ್ಯುವವನನ್ನು ಯಮನ ಸರದಿಗೆ ಕೊಡುವುದು ಧರ್ಮವೆಂದು ನ್ಯಾಯಾಧಿಕಾರಿಗಳು ದಂಡಧರನಿಗೆ ಆಜ್ಞೆಯಿತ್ತರು. ಆ ತಳವಾರರು ಆ ನಾವಿದನನ್ನು ಹಿಡಿದೆಳೆಯುತ್ತಿರಲು ದೇವಶರ್ಮನು ಅವರನ್ನು ತಡೆದು ಈ ಪಾತಕಿಯ ಮಾತನ್ನು ನಂಬಿ ನಿರ್ದೋಷಿಯಾದವನನ್ನು ಕೊಲಿಸುವುದು ಧರ್ಮವಲ್ಲ ಎಂದನು. ಅದಕ್ಕೆ ನೀನು ಹೇಗೆ ಈ ವಿಚಾರವನ್ನು ತಿಳಿದುಕೊಂಡೆ ಎಂದು ನ್ಯಾಯಾಧಿಕಾರಿಗಳು ಕೇಳಲು ದೇವಶರ್ಮನು ಹೀಗೆಂದನು ; ಶ್ಲೋ॥ ಟಗರುಗಳು ಕಾಯುತ್ತಿದ್ದಾಗ ನಡುವೆ ಹೊಕ್ಕು ನರಿ ಸತ್ತಿತು. ಆಷಾಢಭೂತಿಯಿಂದ ದೇವಶರ್ಮನಾದ ನನ್ನ ಧನ ಕದ್ದುಹೋಯಿತು. ಸಾಲಿಗನ ಕೈಯಿಂದ ದೂತಿಯಾದವಳು ವೃಥಾ ಮೂಗನ್ನು ಕೊಯಿಸಿಕೊಂಡಳು. ಈ ಮೂರೂ ಅನರ್ಥಗಳು ತಮ್ಮಿಂದ ತಾವೇ ಮಾಡಿಕೊಂಡುವು. ಹೀಗೆ ಇವರ ಕಥಾವೃತ್ತಾಂತವನ್ನು ನ್ಯಾಯಾಧಿಕಾರಿಗಳಿಗೆ ದೇವಶರ್ಮನು ತಿಳಿಸಿ ನಾವಿದನ ಸಾವನ್ನು ತಪ್ಪಿಸಿದನು. ವ॥ ಹಾಗೆಯೇ ಸಂಜೀವಕನೆಂಬ ಪಾತಕನನ್ನು ಕರೆದುಕೊಂಡು ಬಂದು ಪಿಂಗಳಕನೊಡನೆ ಸೇರಿಸಿ ಸ್ವಯಂಕೃತವಾದ ಅನರ್ಥವನ್ನು ಮಾಡಿಕೊಂಡೆವು. ಆಗ ಕರಟಕನು ಹೀಗೆಂದನು ; ಮಂತ್ರಾಲೋಚನೆಯಿಲ್ಲದೆ ಮೊದಲೇ ಆಲೋಚಿಸದೆ ಮಾಡಿದುದರಿಂದ ಹೀಗೆ ಹೊಲಸಾಯಿತು. ಕಾರ್ಯಾನಂತರ ಆಗುವ ಆಲೋಚನೆಗಿಂತ ಮುಂದಾಲೋಚನೆಯಿರುವ ವ್ಯಕ್ತಿಗೆ ಯಾವ ಕಾರ್ಯವೂ ಅಸಾಧ್ಯವಲ್ಲ. ಇನ್ನಾದರೂ ನಿನ್ನ ಪಶ್ಚಾತ್ತಾಪವನ್ನು

ನಿನ್ನ ಪುತ್ರಮಿತ್ರಕಲತ್ರಬಾಂಧವರ್ ಹಸಿದು ಸಾಯದಂತಪ್ಪುಪಾಯಮನೀಯವಸರದೊಳ್ ಮಾಡಿ ನಿನ್ನ ಬುದ್ಧಿಯನಿಲ್ಲಿ ತೋಱಲ್ ಬಲ್ಲೆಯಪ್ಪೊಡೆ ತೋಱಿನೆ ದವನಕನಂತೆಗೆಯ್ವೆನೆಂದಿಂತೆಂದಂ :

ಶ್ಲೋ ॥ ಆಸನ್ನ ಕಾರ್ಯಸ್ಯ ಸಮುದ್ಭವಾರ್ಥಂ ಆಗಾಮಿನೋರ್ಥಸ್ಯ ಚ ಸಂಗ್ರಹಾರ್ಥಂ
ಅನರ್ಥಕಾರ್ಯ ಪ್ರತಿಘಾತನಾರ್ಥಂ ಯನ್ಮಂತ್ರ್ಯತೇ ಸಾ ಪರಮೋ
ಹಿ ಮಂತ್ರಃ ॥೪೫॥

ಟೀ॥ ಆಗಿರ್ದ ಕಾರ್ಯದ ಪೆರ್ಚುಗೆಗಂ ಮುಂತಪ್ಪ ಕಜ್ಜಮುಮಂ ಮಾೞ್ಪುದರ್ಕೆ ಮನರ್ಥಕಮಪ್ಪ ಕಜ್ಜದ ಪ್ರತೀಕಾರಕ್ಕಮಾವುದಾನೊಂದಾಲೋಚನೆಗೆಯ್ದು ಮಾೞ್ಪುದುತ್ತಮಮಂತ್ರಂ. ಅದು ಕಾರಣದಿನೀಗಳ್ ಪಿಂಗಳಕನಪ್ಪೊಡೆ ಮಹಾವ್ಯಸನಮಂ ಕೈಕೊಂಡಂ ; ಅದಾವುವೆಂದೊಡೆ, ಅರಸನಪ್ಪಾತಂಗೆ ಸ್ವಭಾವ ಪ್ರದೋಷ ಪ್ರಸಂಗಗುಣಪ್ರತಿಲೋಮ ಪೀಡನವೆಂದಯ್ದು ಮೂಲವ್ಯಸನಂಗಳಕ್ಕುಂ. ಅವಱೊಳ್ ಸ್ವಾಮ್ಯಮಾತ್ಯ ಜನಪದ ದುರ್ಗ ಸುಹೃತ್ ಕೋಶದಂಡಮೆಂಬೇೞಂಗದೊಳೇಕಾಂಗಂ ವಿಕಳಮಾದೊಡಂ ಸ್ವಭಾವಮೆಂಬುದಕ್ಕುಂ ಬಾಹ್ಯಾಂತಃ ಪ್ರಕೃತಿಗಳೆರಡುಮೊರ್ಮೆಯೆ ಪ್ರಕೋಪಂಗೆಯ್ವುದು ಪ್ರದೋಷಮೆಂಬುದಕ್ಕುಂ. ಅಂಗನಾ ದ್ಯೂತ ಮೃಗಯಾ ಪಾನ ವಾಗ್ದಂಡ ಹರ್ಷಾರ್ಥದೂಷಣಂಗಳೆಂಬೇೞುಂ ಪ್ರಸಂಗಗುಣಮೆಂಬುದಕ್ಕುಂ. ಕಾಂತಾ ದ್ಯೂತ ಮೃಗಯಾ ಪಾನಂಗಳ್ ನಾಲ್ಕುಂ ಕಾಮಜಂಗಳ್, ಉೞಿದ ವಾಗ್ದಂಡ ಹರ್ಷಾರ್ಥ ದೂಷಣಂಗಳ್ ಮೂಱುಂ ಕ್ರೋಧಜಂಗಳಕ್ಕುಂ. ಸಂಧಿ ವಿಗ್ರಹಯಾನಾಸನ ದ್ವೈಧೀಭಾವ ಸಮಾಶ್ರಯಂಗಳೆಂಬಾಱುಗುಣಂಗಳೊಳಂ ಸಂಧಿಕಾರ್ಯದೆಡೆಯೊಳ್ ವಿಗ್ರಹಮನೆತ್ತಿಕೊಳ್ವುದುಂ, ವಿಗ್ರಹಮಪ್ಪೆಡೆಯೊಳ್ ಸಂಧಿಯನೊಡರ್ಚುವುದುಮುೞಿದ ಗುಣಂಗಳುಮನೀಯಂದದೊಳ್

ತೊರೆದು ನಿನ್ನ ಹೆಂಡತಿ ಮಕ್ಕಳು ಹಸಿದು ಸಾಯದ ಹಾಗೆ ಒಂದು ಉಪಾಯವನ್ನು ಮಾಡಿ ನಿನ್ನ ಬುದ್ಧಿಶಕ್ತಿಯನ್ನು ಮೆರೆಯಿಸು. ಆಗ ದವನಕನು ಹಾಗೆಯೇ ಮಾಡುವೆನೆಂದು ಹೀಗೆಂದನು: ಶ್ಲೋ॥ ಆಗಿಹೋದ ಕಾರ್ಯದ ಹೆಚ್ಚಳಕ್ಕೂ ಮೊದಲೇ ಆಗಬೇಕಾದ ಕಾರ್ಯವನ್ನು ಮಾಡುವುದಕ್ಕೂ ಅನರ್ಥವಾದ ಕಾರ್ಯದ ಪ್ರತೀಕಾರಕ್ಕೂ ಯಾವುದಾದರೂ ಒಂದು ಆಲೋಚನೆ ಮಾಡಿ ಮಾಡುವುದು ಉತ್ತಮ ಯೋಚನೆ. ಆ ಕಾರಣದಿಂದ ಈಗ ಪಿಂಗಳಕನಿಗೆ ಮಹಾವ್ಯಸನ ಪ್ರಾಪ್ತವಾಯಿತು. ಅರಸನಾದವನಿಗೆ ಸ್ವಭಾವ, ಪ್ರದೋಷ, ಪ್ರಸಂಗಗುಣ, ಪ್ರತಿಲೋಮ, ಪೀಡನ ಎಂಬ ಐದು ವಿಧದ ಮೂಲ ವ್ಯಸನಗಳಿವೆ. ಅವುಗಳಲ್ಲಿ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಸುಹೃತ್, ಕೋಶ, ದಂಡ ಎಂಬ ಏಳೂ ಅಂಗಗಳಲ್ಲಿ ಒಂದು ಅಂಗ ವಿಕಳವಾದರೂ ಅದು ಸ್ವಭಾವ ವೆನಿಸುವುದು. ಬಾಹ್ಯ ಅಂತರಂಗಗಳು ಎರಡೂ ಒಮ್ಮೆಯೇ ಪ್ರಕೋಪ ಮಾಡುವುದು ಪ್ರದೋಷವೆನಿಸುವುದು. ಅಂಗನಾ, ದ್ಯೂತ, ಮೃಗಯಾ, ಪಾನ, ವಾಗ್ದಂಡ, ಹರ್ಷ, ಅರ್ಥದೂಷಣಗಳೆಂಬ ಏಳೂ ಪ್ರಸಂಗಗುಣ ಎಂದೆನಿಸುವುವು. ಕಾಂತಾ, ದ್ಯೂತ, ಮೃಗಯಾ, ಪಾನ ಎಂಬ ನಾಲ್ಕು ಕಾಮದಿಂದ ಹುಟ್ಟಿದವುಗಳು. ಉಳಿದ ವಾಗ್ದಂಡ, ಹರ್ಷ, ಅರ್ಥದೂಷಣಗಳು ಮೂರೂ ಕ್ರೋಧದಿಂದ ಹುಟ್ಟಿದವುಗಳು. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಆರುಗುಣಗಳಲ್ಲಿ ಸಂಧಿಕಾರ್ಯದಲ್ಲಿ ವಿಗ್ರಹವನ್ನು ಮಾಡುವುದೂ, ವಿಗ್ರಹವಾಗುವಲ್ಲಿ ಸಂಧಿ ಮಾಡುವುದೂ, ಉಳಿದ

ಪ್ರತಿಲೋಮಂಗೆಯ್ವುದುಂ ಪ್ರತಿಲೋಮವೆಂಬ ವ್ಯಸನಮಕ್ಕುಂ. ವೈರಾಗ್ಯ, ಅಗ್ನಿ, ಉದಕ, ವ್ಯಾತಂಕ, ಮಾರಿಗುತ್ತ, ದುರ್ಭಿಕ್ಷ, ಅತಿವೃಷ್ಟಿ, ಅನಾವೃಷ್ಟಿಗಳೆಂಬೆಂಟುಂ ಪೀಡನಮೆಂಬುದಕ್ಕುಂ. ಇಂತೈದುಂ ವ್ಯಸನಂಗಳೊಳ್ ನಮ್ಮರಸನಪ್ಪ ಪಿಂಗಳಕಂ ಪಶುವಿಂಗೆ ವಶಗತನಾಗಿ ವಿರಕ್ತಪ್ರಕೃತಿಯಪ್ಪುದರಿಂ ಸ್ವಭಾವಮೆಂಬ ವ್ಯಸನಂಗೂಡಿ ವಿರಕ್ತನಾಗಿರ್ದಪಂ. ಅದಱಿಂದಾತಂಗೆ ಸಂಜೀವಕನೊಳ್ ವಿರಕ್ತಿಯಂ ಮಾಡುವುದೆ ಕಜ್ಜಮೆನೆ ಕರಟಕಂ ಅಂತಪ್ಪೊಡೆ ನಿನ್ನ ಪೇೞ್ದ ಗುಣಂಗಳೀಗಳಿವರಿರ್ಬರ್ಗಂ ವಿರಕ್ತಿಯಂ ಮಾಡುವುದುಂ ನಾಡೆಯುಂ ಗಹನಮೆನೆ, ದವನಕನದಾವಗಹನಂ, ಬುದ್ಧಿಗಸಾಧ್ಯಮಾವುದುಮಿಲ್ಲೆಂಬುದಂ ಕೇಳ್ದಱಿವುದಿಲ್ಲಕ್ಕುಮೆಂದಿಂತೆಂದಂ :

ಶ್ಲೋ॥ ಉಪಾಯೇನ ಹಿತಂ ಕುರ್ಯಾದನ್ಯಶಕ್ತಿ ಪರಾಕ್ರಮೈಃ
ಕಾಕೀ ಕನಕಸೂತ್ರೇಣ ಕೃಷ್ಣಸರ್ಪಮಘಾತಯತ್ ॥೪೬॥

ಟೀ॥ ಉಪಾಯದಿಂದಂ ತನಗೆ ಹಿತವಂ ಮಾಡಿಕೊಂಬುದು ; ಆವನೊರ್ವಂಗೆ ಪರಾಕ್ರಮಶಕ್ತಿಯಲ್ಲದಿರ್ದೊಡಮನ್ಯಶಕ್ತಿ ಪರಾಕ್ರಮದಿಂ ಸಾಧಿಸಿಕೊಂಬುದು ; ಕಾಗೆ ತಂದ ಕನಕಸೂತ್ರದಿಂ ಕೃಷ್ಣಸರ್ಪನೆಂತು ಮರಣಮನೆಯ್ದುತ್ತುದಗೆ ಆದೆಂತನೆ, ಕರಟಕಂ ಪೇೞ್ದುದು :

೨. ಕಾಗೆ ಕೃಷ್ಣಸರ್ಪನಂ ಕೊಂದ ಕಥೆ

ಮಹಾನದೀತೀರದೊಳಿರ್ಪುದೊಂದು ಮಹಾವಟವಿಟಪಿಕೋಟರಮೆ ಕುಲಾಯಮಾಗಿ ಕಾಕಮಿಥುನಮಿರ್ಕುಂ. ಅವಱ ತತ್ತಿಗಳನಾ ಮರದ ಮೊದಲ ಪುತ್ತಿನೊಳಿರ್ಪುದೊಂದು ಪಾವು ಪಲಕಾಲಂ ತಿನುತ್ತಿರೆ, ಆ ವಾಯಸಂ ತಪ್ಪಾಯಸರಸಮಂ ಕುಡಿದಂತೆ ಮಲುಮಲನೆ ಮಱುಗಿ

ಗುಣಗಳನ್ನೂ ಈ ರೀತಿಯಲ್ಲಿ ಪ್ರತಿಲೋಮಮಾಡುವುದೂ ಪ್ರತಿಲೋಮ ಎಂಬ ವ್ಯಸನವೆನಿಸುವುದು. ವೈರಾಗ್ಯ, ಅಗ್ನಿ, ಉದಕ, ವ್ಯಾತಂಕ, ಮಾರಿಗುತ್ತ, ದುರ್ಭಿಕ್ಷ, ಅತಿವೃಷ್ಟಿ, ಅನಾವೃಷ್ಟಿಗಳೆಂಬ ಎಂಟೂ ಪೀಡನವೆನಿಸುವುವು. ಹೀಗೆ ಈ ಐದೂ ವ್ಯಸನಗಳಲ್ಲಿ ನಮ್ಮರಸನಾದ ಪಿಂಗಳಕನು ಪಶುವಿಗೆ ವಶಗತನಾಗಿ ವಿರಕ್ತ ಪ್ರಕೃತಿಯವನಾಗಿದ್ದಾನೆ. ಅದರಿಂದ ಅವನಲ್ಲಿ ಸಂಜೀವಕನ ಬಗೆಗೆ ವಿರಕ್ತಿಯನ್ನು ಹುಟ್ಟಿಸುವುದೇ ಉಪಾಯ. ಆಗ ಕರಟಕನು ನೀನು ಹೇಳಿದ ಗುಣಗಳಲ್ಲಿ ಅವರಿಬ್ಬರಲ್ಲಿಯೂ ವಿರಕ್ತಿಯನ್ನು ಉಂಟುಮಾಡುವುದು ಇನ್ನೂ ಉತ್ತಮ ಎನ್ನಲು, ದವನಕನು ಅದು ಯಾವ ದೊಡ್ಡ ಕೆಲಸ, ಬುದ್ಧಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ನೀನು ಬಹುಶಃ ಕೇಳಿರಲಿಕ್ಕಿಲ್ಲ ಎಂದು ಹೀಗೆಂದನು : ಶ್ಲೋ॥ ಉಪಾಯದಿಂದ ತನಗೆ ಹಿತವನ್ನುಂಟು ಮಾಡಿಕೊಳ್ಳಬೇಕು, ಯಾರಿಗಾದರೂ ಸ್ವಂತಶಕ್ತಿಯಿಲ್ಲದಿದ್ದಲ್ಲಿ ಅನ್ಯರ ಶಕ್ತಿ ಪರಾಕ್ರಮಗಳಿಂದ ಅದನ್ನು ಸಾಧಿಸಿಕೊಳ್ಳಬೇಕು ; ಕಾಗೆ ತಂದ ಕನಕಸೂತ್ರದಿಂದ ಕೃಷ್ಣಸರ್ಪ ಮರಣ ಹೊಂದಿದ ಹಾಗೆ! ಆ ಕಥೆ ಏನು ಎನ್ನಲು ದವನಕನು ಹೇಳತೊಡಗಿದನು: ಮಹಾನದೀತೀರದಲ್ಲಿರುವ ಒಂದು ಮಹಾವಟವೃಕ್ಷದ ಪೊಟ್ಟರೆಯನ್ನೇ ಮನೆಮಾಡಿಕೊಂಡು ಕಾಗೆಯ ದಂಪತಿಗಳಿದ್ದುವು. ಅವುಗಳ ಮೊಟ್ಟೆಗಳನ್ನು ಆ ಮರದ ಬುಡದ ಹುತ್ತದಲ್ಲಿರುವ ಒಂದು ಹಾವು ಹಲವುಕಾಲದಿಂದ ತಿನ್ನುತ್ತಿರಲು, ಆ ವಾಯಸ ಕಾದ ಕಬ್ಬಿಣದ ರಸವನ್ನು ಕುಡಿದಂತೆ ಮಲುಮಲನೆ ಮರುಗಿ ಸಹಿಸಲಾಗದೆ ಈ ಹಾವನ್ನು ಏನಾದರೊಂದು ಉಪಾಯವನ್ನು

ಸೈರಿಸಲಾಱದೆ ಈ ಪಾಪಿಂಗಾನಾವುದಾನುಮೊಂದುಪಾಯದೊಳ್ ಸಾವಂ ಮಾೞ್ಪೆನೆಂದು, ತನಗೆ ಪರಮಮಿತ್ರನಪ್ಪುದೊಂದು ಜಂಬುಕನಲ್ಲಿಗೆ ವಂದು ಶೋಕಂಗೆಯ್ಯೆ ಜಂಬುಕಂ – ಏಂ ಕಾರಣಂ ಶೋಕಂಗೆಯ್ವಪೆ ಎಂದು ಬೆಸಗೊಳೆ ವಾಯಸಂ ಪೇೞ್ಗುಂ : ಆನಿರ್ಪ ಮರದ ಮೊದಲ ಪುತ್ತಿನೊಳಿರ್ಪುದೊಂದು ಮಹಾಸರ್ಪನೆನ್ನ ಪೆಂಡತಿಯ ಪ್ರಸೂತಿಕಾಲಮಂ ಪಾರ್ದು ಪರಿತಂದು ತತ್ತಿಗಳಂ ತಿಂದೆನಗೆ ವಿಷಾದಂ ಮಾಡುತಿರ್ದಪುದದು ಕಾರಣಂ ನೀನೆನಗೆ ಪರಮಮಿತ್ರನಪ್ಪೊಡೆ ಉರಗನಂ ಕೊಲ್ವುಪಾಯಮಂ ಪೇೞಲ್ವೇೞ್ಪುದು. ಎಂತುಂ ಸುಭಾಷಿತಮಿಂತೆಂಬುದಲ್ತೆ :

ಶ್ಲೋಕ ॥ ಆತುರೇ ವ್ಯಸನೇ ಪ್ರಾಪ್ತೇ ದುರ್ಭಿಕ್ಷೇ ಶತ್ರುವಿಗ್ರಹೇ
ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾಂಧವಃ ॥೪೭॥

ಟೀ॥ ವ್ಯಾಧಿಯಲ್ಲಿ, ಕ್ಲೇಶದಲ್ಲಿ, ಬಱಹಿನಲ್ಲಿ ಹಗೆಗಳ್ ಕೊಲಬಂದಲ್ಲಿ ಅರಮನೆಯ ದ್ವಾರದಲ್ಲಿ ಶ್ಮಶಾನದಲ್ಲಿ ತನಗಾದವರೇ ಬಂಧುಗಳ್–ಎಂದು ಪೇೞ್ದ ಸತ್ಪುರುಷರ ಗುಣಮಂ ಕೈಕೊಂಡು ಎನ್ನ ಪಗೆ ಸಾಧ್ಯಮಪ್ಪಂತು ಮಾಡುವುದೆನೆ ನರಿ ಕರಮೊಳ್ಳಿತ್ತಂತೆಗೆಯ್ವೆನೆಂದೀ ಯೆಡೆಗೊಂದು ವಾಕ್ಯಮುಂಟದೆಂತೆನೆ :

ಶ್ಲೋ ॥ ಅತಿ ಲೌಲ್ಯಾದ್ಬಕಃ ಕಶ್ಚಿತ್ ಮೃತಃ ಕರ್ಕಟ ಸಂಗ್ರಹಾತ್ ॥೪೮॥

ಎಂಬ ಕಥೆಯಂ ಸರ್ಪಂಗಾಂ ಮಾೞ್ಪೆನೆನೆ ವಾಯಸನದೆಂತೆನೆ ಪೇೞ್ಗುಂ :

೮. ಕೊಕ್ಕರೆಯುಮೇಡಿಯುಂ

ಮಹಾಗಹನಮಧ್ಯದೊಳೊಂದು ಸರೋವರಮುಂಟು. ಅಲ್ಲಿ ಪಲವು ಮತ್ಸ್ಯಂಗಳಿರ್ಪುದ ಮೊಂದು ಬಕಂ ಕಂಡು ತಾನೊಂದು ನೆವದಿಂದಾ ಮೀನ್ಗಳಂ ತಿಂದು ಕಾಲಮಂ ಕಳೆವೆನೆಂದು

ಮಾಡಿ ಕೊಲ್ಲಬೇಕೆಂದು ತನಗೆ ಪರಮಮಿತ್ರನಾದ ಜಂಬುಕನಲ್ಲಿಗೆ ಬಂದು ಶೋಕಮಾಡಿತು. ಜಂಬುಕನು ಯಾವ ಕಾರಣದಿಂದ ಶೋಕಿಸುವೆ ಎನ್ನಲು ವಾಯಸ ಹೇಳಿತು : ನಾನು ವಾಸವಾಗಿರುವ ಮರದ ಬುಡದ ಹುತ್ತದಲ್ಲಿರುವ ಒಂದು ಮಹಾಸರ್ಪವು ನನ್ನ ಹೆಂಡತಿಯ ಪ್ರಸೂತಿಕಾಲವನ್ನು ನಿರೀಕ್ಷಿಸಿ ಹರಿದು ಬಂದು ಮೊಟ್ಟೆಗಳನ್ನು ತಿಂದು ನನಗೆ ವಿಷಾದವನ್ನುಂಟುಮಾಡುತ್ತಿದೆ. ಆದಕ್ಕಾಗಿ ನೀನು ನನ್ನ ಪರಮಮಿತ್ರನಾದುದರಿಂದ ಈ ಉರಗವನ್ನು ಕೊಲ್ಲುವ ಉಪಾಯವನ್ನು ಹೇಳಬೇಕು. ಶ್ಲೋ॥ ವ್ಯಾಧಿಯಲ್ಲಿ ಕಷ್ಟದಲ್ಲಿ ಬರಗಾಲದಲ್ಲಿ ಹಗೆಗಳು ಕೊಲ್ಲಲು ಬಂದಾಗ ಅರಮನೆಯ ದ್ವಾರದಲ್ಲಿ ಶ್ಮಶಾನದಲ್ಲಿ ತನಗೆ ಯಾರು ಸಹಾಯಕರಾಗುವರೋ ಅವರೇ ನಿಜವಾದ ಬಂಧುಗಳು ಎಂದು ಹೇಳಿದ ಸತ್ಪುರುಷರ ಮಾತನ್ನು ಕೇಳಿ ನನ್ನ ಕಾರ್ಯ ಕೈಗೂಡುವಂತೆ ಮಾಡಬೇಕು. ಆಗ ನರಿಯು, ಒಳ್ಳೆಯದು ಹಾಗೆಯೇ ಮಾಡುವೆ : ಈ ಸಂದರ್ಭಕ್ಕೆ ಒಂದು ಸೂಕ್ತಿ ಇದೆ ಎಂದು ಹೇಳತೊಡಗಿತು : ಶ್ಲೋ॥ 'ಅತಿಲೌಲ್ಯಾದ್ಬಕಃ ಕಶ್ಚಿತ್ ಮೃತಃ ಕರ್ಕಟಸಂಗ್ರಹಾತ್' ಎಂಬ ಕಥೆಯನ್ನು ಸರ್ಪನಿಗೆ ನಾನು ಮಾಡುತ್ತೇನೆ ಎನ್ನಲು ವಾಯಸವು ಅದೇನೆಂದು ಕೇಳಲು ಜಂಬುಕ ಹೇಳತೊಡಗಿತು: ವ॥ ದೊಡ್ಡ ಕಾಡಿನ ನಡುವೆಯೊಂದು ಸರೋವರವುಂಟು. ಅದರಲ್ಲಿ ಹಲವು ಮೀನುಗಳಿರುವುದನ್ನು ಒಂದು ಕೊಕ್ಕರೆ ಕಂಡಿತು. ಒಂದ ಉಪಾಯದಿಂದ ತಾನು ಆ ಮೀನುಗಳನ್ನು ತಿಂದು ಕಾಲಕಳೆಯುವೆನೆಂದು ಆ ಕೊಕ್ಕರೆ ತಪಸ್ವಿಯ ರೂಪವನ್ನು ಧರಿಸಿತು. ಕಿರಿಯ ಮೀನುಗಳೆಲ್ಲ ಮುಗಿಯಲು ದೊಡ್ಡ ಮೀನುಗಳು ಸಿಗದಿರಲು ಈ

ತಪೋರೂಪಮಂ ಕೈಕೊಂಡು ಕಿಱಿಮೀಂಗಳೆಲ್ಲಮಂ ನೆಱೆಯೆ ತಿಂದು ಪಿರಿಯಮೀಂಗಳ್ ದೊರೆಕೊಳ್ವದೊಡೀ ಮೀಂಗಳನಾವ ಪಾಂಗಿನೊಳ್ ನಾ ತಿಂಬೆನೆಂದು ನೀರ ತಡಿಯೊಳ್ ಪೋಣಂಗೊಂಡು ಜಾನಿಸುತ್ತಿರೆ ಆ ಬಕನಂ ಮೀಂಗಳೆಲ್ಲಂ ಕಂಡು ನಿಮ್ಮದಿ ನೀವಿಂತೇಕೆ ಚಿಂತಾಕ್ರಾಂತರಾಗಿರ್ಪಿರೆನೆ ಬಕನಿಂತೆಂದುದು :

ಪಲಕಾಲಂ ಸುಖದಿಂದಂ
ನೆಲಸಿರ್ದುಂ ನೀಮುಮಾಮುಮೀ ಭೂಗೊಳದೊಳ್
ಕೆಲವುದಿನಕ್ಕಾಸಿಲ್ಲಿಂ
ತೊಲಗುವುದಂ ನಿಮಗೆ ಸಾವುಮಂ ಕಂಡಿರ್ದೆಂ ॥೧೩೪॥

ಅಂತು ಕಂಡು ನಿಮ್ಮನಗಲ್ದೆಂತು ಪೋಪೆಂ, ಇರ್ದೆಂತು ರಕ್ಷಿಸುವೆನೆಂದು ಚಿಂತಿಸಿದಪೆನೆನೆ ಮತ್ಸ್ಯ ಸಮೂಹಂಗಳಿಂತೆಂದುವು : ತಮಗೆ ಮರಣಮೇ ಕಾರಣಮಪ್ಪುದದಂ ನೀವಱಿಯ ಪೇೞಿಮೆನೆ ಬಕಂ ವಿಕಟಮಪ್ಪುದೊಂದು ಕಥೆಯುಂ ಪೇೞ್ದು ಮತ್ಸ್ಯಂಗಳಂ ನಂಬಿಸಿ ತಿಂಬೆನೆಂದಿಂತೆಂದುದು: ವಾಕ್ಯಂ ॥ 'ರಾಜಾ ಕಾಲಸ್ಯ ಕಾರಣಂ' ಎಂಬ ವಾಕ್ಯೋಕ್ತಿಯುಂಟಪ್ಪುದಱಿಂದೀ ದೇಶಮನಾಳ್ವರಸಂ ನಿಜಕುಲಾಂಗನೆಯೊಳೆಂದುಂ ಋತುಕಾಲ ಸಂಗವಿರಕ್ತನುಂ ದೇವಾಗ್ನಿದ್ವಿಜಗುರು ಪಿತೃತರ್ಪಣಂಗಳಂ ಮಾಳ್ಪನುಮಲ್ಲಮದಱಿಂದಾತನಪಚಾರಣಮೆ ಕಾರಣಮಾಗಿ ಪನ್ನೆರಡು ವರ್ಷಮನಾವೃಷ್ಟಿಯಾದಪ್ಪುದು ಈ ಕೊಳನುಂ ಬತ್ತಿದಪ್ಪುದು, ನಿಮಗಪಾಯಮಪ್ಪುದೆಂದು ಪೇೞ್ವುದುಂ ಅಂತಪ್ಪೊಡೆ ನಿಮ್ಮದಿ ನೀವೆಮ್ಮನೀಯಪಾಯಸ್ಥಳದಿಂ ಪೋಗಿಮಡುವುಪಾಯಮಂ ಮಾಡಿದಿರಪ್ಪೊಡೆ

ಮೀನುಗಳನ್ನು ಯಾವ ಉಪಾಯದಿಂದ ತಿನ್ನಲಿ ಎಂದು ನೀರಿನ ದಡದಲ್ಲಿ ಮೌನದಿಂದ ಜಾನಿಸುತ್ತಿತ್ತು. ಆ ಬಕನನ್ನು ಮೀನುಗಳು ಕಂಡು, ಸ್ವಾಮಿ ! ನೀವು ಹೀಗೆ ಚಿಂತಾಕ್ರಾಂತರಾಗಿರಲು ಕಾರಣವೇನೆಂದು ಕೇಳಿದುವು. ಅದಕ್ಕೆ ಬಕನು ಹೀಗೆಂದಿತು : ೧೩೪. ನಾನೂ ನೀವೂ ಹಲವು ಕಾಲದಿಂದ ಈ ಸರೋವರದಲ್ಲಿ ಒಟ್ಟಿಗೆ ಇದ್ದೆವು. ಕೆಲವು ದಿನಗಳಲ್ಲಿ ನಾನು ಇದನ್ನು ಬಿಟ್ಟು ಹೋಗುವೆ. ಅನಂತರ ನಿಮಗೆ ಸಾವು ತಪ್ಪಿದ್ದಲ್ಲ. ವ॥ ಆದರೆ ನಿಮ್ಮನ್ನಗಲಿ ನಾನೆಂತು ಹೋಗಲಿ, ಇದ್ದು ನಿಮ್ಮನ್ನೆಲ್ಲ ಹೇಗೆ ರಕ್ಷಿಸಲಿ ಎಂದು ಚಿಂತಿಸುತ್ತಿರುವೆ. ಅದಕ್ಕೆ ಆ ಮೀನುಗಳು ತಮಗೆ ಮರಣ ಯಾವ ಕಾರಣದಿಂದ ಸಂಭವಿಸುವುದು ಎಂಬ ವಿಚಾರವನ್ನು ದಯಮಾಡಿ ಅರುಹಬೇಕು ಎನ್ನಲು ಬಕ ವಿಕಟವಾದ ಒಂದು ಕಥೆಯನ್ನು ಹೇಳಿ ಮೀನುಗಳನ್ನು ನಂಬಿಸಿ ತಿನ್ನುವೆನೆಂದು ಹೀಗೆ ಹೇಳಿತು : ವಾ॥ 'ರಾಜಾ ಕಾಲಸ್ಯ ಕಾರಣಂ' ಎಂಬ ಉಕ್ತಿಯುಂಟು. ಅದರಿಂದ ಈ ದೇಶವನ್ನು ಆಳುವ ಅರಸ ತನ್ನ ಕುಲಾಂಗನೆಯೊಡನೆ ಯಾವಾಗಲೂ ಸಂಗವಿರಕ್ತನಾಗಿ ದೇವ ಅಗ್ನಿ ದ್ವಿಜ ಗುರು ಪಿತೃತರ್ಪಣಗಳನ್ನು ಮಾಡುವವನಲ್ಲ. ಅದರಿಂದ ಆತನ ಕೆಟ್ಟ ನಡತೆಯ ಕಾರಣದಿಂದ ಹನ್ನೆರಡುವರ್ಷಗಳವರೆಗೆ ಅನಾವೃಷ್ಟಿ ಸಂಭವಿಸುವುದು. ಈ ಕೊಳವೂ ಬತ್ತಿಹೋಗುವುದು. ಅದರಿಂದ ನಿಮಗೆ ಅಪಾಯ ತಪ್ಪದು. ಅದಕ್ಕೆ ಮೀನುಗಳು ಹಾಗಿದ್ದರೆ ಸ್ವಾಮಿ ! ನೀವು ನಮ್ಮನ್ನು ಈ ಅಪಾಯಸ್ಥಳದಿಂದ ಹೊರಟುಹೋಗುವ ಉಪಾಯವನ್ನು ಮಾಡಿದರೆ ನಾವು ನಿಮ್ಮ ದಯೆಯಿಂದ ಬದುಕಿಕೊಳ್ಳುವೆವು, ಎಂದು ಹೇಳಿತು. ಹಾಗಾದರೆ ಒಳ್ಳೆಯದು; ಇಲ್ಲಿಂದ ಒಂದು ಯೋಜನ ದೂರದಲ್ಲಿ ಮಹಾನದಿ

ನಿಮ್ಮ ಧರ್ಮದಿಂ ಸುಖಂಬಾಳ್ವೆವೆಂಬುದುಂ ಕರಮೊಳ್ಳಿತಿಲ್ಲಿಗೊಂದು ಯೋಜನಾಂತರದೊಳೊಂದು ಮಹಾನದಿಯುಂಟಲ್ಲಿಗೆ ನಿಮ್ಮಂ ದಿವಸಗತಿಯಿಂದುಯ್ವೆನೆಂದೊಡಂಬಡಿಸಿ ಪೇಳ್ದ ಕಪಟತಪೋಧನಂಗೆ ಮೀನ್ಗಳಿಂತೆಂದವು: ತಮ್ಮಂ ನಂಬಿದವರಂ ಸೋರೆಯ ಕಾಯ್ ಮುಂತಾಗಿ ನದಿಯ ತಡಿಯಂ ಸಾರ್ಚುವುದೆಂದೊಡೆ ನೀಂ ತಪೋವೃದ್ಧರುಂ ತ್ರಿಕಾಲದರ್ಶಿಗಳುಂ ಸಕಳಭೂತಂಗಳಂ ಸವನಾಗಿ ಕಾಣ್ಬ ಕರುಣಾರಸಾರ್ದ್ರ ಹೃದಯರಪ್ಪುದಱಿಂ ನಿಮ್ಮಂ ನಂಬಿ ಬಂದಪೆವೆಂಬುದುಂ ಕರಮೊಳ್ಳಿತ್ತೆಂದು ನಂಬೆ ನುಡಿದೊಡಂಬಡಿಸಿ ನಿಚ್ಚಲೊಂದೊಂದು ಮೀನಂ ಕರ್ಚಿಕೊಂಡು ಪೋಗಿ ಪಿರಿದಪ್ಪುದೊಂದು ಶಿಲಾತಳದ ಮೇಲಿಕ್ಕಿ ನಿಜಚಂಚುಪುಟದಿಂ ಶತಖಂಡಂ ಮಾಡಿ ತಿಂದು ಬೆಣ್ಣೆಯಂ ತಿಂದ ಬೆಕ್ಕನಂತೆ ಅಱಿಯಲೀಯದೆ ಮತ್ತೆಯುೞಿದ ಮತ್ಸ್ಯಂಗಳನೀ ತೆಱದೊಳ್ ತಿನುತಿರ್ದು ಮತ್ಸ್ಯಮಾಂಸಂ ಸಮೆದತ್ತಿನ್ನೇನಂ ತಿಂಬೆನೆನುತ್ತಿರೆ, ಕರ್ಕಟಕಮಂ ಸಮೀಪಕ್ಕೆ ಕರೆದು, ಮಗನೆ, ನೀಂ ಕರಂ ಗರ್ಭಸುಖಿ, ಬಿಸಿಲಾಗದನ್ನಂ ಬೇಗಂ ಬಾ, ನಿನ್ನನುಯ್ದುರಿಸಿ ಬೞಿಕ್ಕೀ ಮೀಂಗಳನುಯ್ವೆನೆಂದೊಡೆ ಏಡಿ ಬರ್ದುಂಕಿದೆನೆಂದು ಮುಂದೆ ನಿಲೆ, ನಿಜಕಂಠತಳಮಂ ಪತ್ತಿಸಿಕೊಂಡು ಶಿಲಾತಳಮನೆಯ್ದುವಪ್ಪುದುಂ, ಕರ್ಕಟಕನು ಪಾಯನಿಪುಣಂ ನಾಲ್ದೆಸೆಯುಮಂ ನೋಡಿ ನದನದೀ ತಟಾಕ ಸರೋವರಂಗಳನೊಂದುಮಂ ಕಾಣದೆ ಮತ್ಸ್ಯಾಸ್ಥಿಮಯಮಾಗಿರ್ದ ಶಿಲಾತಳಮಂ ನೋಡಿ ಪಾವಿನ ಪೆಳಿಗೆಯುಂ ಬಿಟ್ಟು ನೋಡಿದ ಮರ್ಕಟನಂತೆ ಬೆಕ್ಕಸಂಬಟ್ಟುಮೀ ವಿಶ್ವಾಸಘಾತುಕಂ ತನ್ನುಮಂ ತಿನ್ನದೆ ಮಾಣ್ಣಂ, ಈಯಪಾಯಕ್ಕೆ ವಂಚನೋಪಾಯಮಾವುದುಮಿಲ್ಲ, ಎನಗೆ ಪರಿಚ್ಛೇದಮೇ ಕಾರ್ಯಮದೆಂತೆನೆ :

ಇದೆ. ಅಲ್ಲಿಗೆ ನಿಮ್ಮನ್ನು ದಿನದಿನವೂ ಒಯ್ಯುವೆನೆಂದು ಆ ಮೀನುಗಳು ಒಡಂಬಡಿಸಿದ ಆ ಕಪಟ ತಪೋಧನನಿಗೆ ಮೀನುಗಳೆಂದುವು : ತಮ್ಮನ್ನು ನಂಬಿದವರನ್ನು ಸೋರೆಯಕಾಯಿಯೂ ದಡಕ್ಕೆ ಮುಟ್ಟಿಸುವುದೆಂದ ಮೇಲೆ ತಪೋವೃದ್ಧರೂ, ತ್ರಿಕಾಲಜ್ಞರೂ, ಕರುಣರಸಾರ್ದ್ರಹೃದಯರೂ ಆದ ನಿಮ್ಮನ್ನು ನಂಬಿ ಬರುವೆವು. ಒಳ್ಳೆಯದು, ಹಾಗೆಯೇ ಮಾಡಿ ಎಂದು ನಂಬುವಂತೆ ನುಡಿದು ಅದು ಒಡಂಬಡಿಸಿತು. ನಿತ್ಯವೂ ಒಂದೊಂದು ಮೀನನ್ನು ಕಚ್ಚಿಕೊಂಡು ಹೋಗಿ ದೊಡ್ಡದೊಂದು ಬಂಡೆಯ ಮೇಲೆ ಹಾಕಿಕೊಂಡು ತನ್ನ ಕತ್ತರಿಯಂಥ ಕೊಕ್ಕಿನಿಂದ ತುಂಡು ತುಂಡುಮಾಡಿ ತಿಂದು ಬೆಣ್ಣೆ ತಿಂದ ಬೆಕ್ಕಿನಂತೆ ತನಗೇನೂ ತಿಳಿಯದಂತಿತ್ತು. ಉಳಿದ ಮೀನುಗಳನ್ನು ಇದೇ ರೀತಿಯಲ್ಲಿ ತಿನ್ನುತ್ತಿದ್ದು ಮತ್ಸ್ಯಗಳು ಮುಗಿದುವು ; ಇನ್ನೇನನ್ನು ತಿನ್ನಲಿ ಎಂದು ಆಲೋಚಿಸುತ್ತಿರಲು ಒಂದು ಏಡಿಯನ್ನು ಕಂಡಿತು. ಆ ಏಡಿಯನ್ನು ಹತ್ತಿರಕ್ಕೆ ಕರೆದು, ಮಗನೇ ! ನೀನು ಯಾವಾಗಲೂ ನೀರಿನ ತಳದಲ್ಲಿ ಸುಖವಾಗಿ ಇರುವವನು. ಬಿಸಿಲೇರುವ ಮೊದಲು ಬೇಗ ಬಾ ; ನಿನ್ನನ್ನು ಕರೆದುಕೊಂಡು ಹೋಗಿಬಿಟ್ಟು ಮರಳಿ ಈ ಮೀನುಗಳನ್ನು ಒಯ್ಯುವೆ ಎಂದಿತು. ಅದಕ್ಕೆ ಏಡಿ ಬದುಕಿದೆಯಾ ಬಡಜೀವವೇ ಎಂದು ಮುಂದೆ ಬರಲು ತನ್ನ ಕಂಠಪ್ರದೇಶದಲ್ಲಿ ಅದನ್ನು ಹತ್ತಿಸಿಕೊಂಡು ಬಂಡೆಯ ಹತ್ತಿರ ಬರುತ್ತಿತ್ತು. ಕರ್ಕಟಕನು ಉಪಾಯನಿಪುಣನಾಗಿತ್ತು. ಸುತ್ತಲೂ ನೋಡಿ ನದಿ, ಕೆರೆ ಸರೋವರಗಳಲ್ಲಿ ಯಾವುದೊಂದನ್ನೂ ಕಾಣದೆ ಮೀನುಗಳ ಮೂಳೆಗಳ ರಾಶಿಯಿಂದ ತುಂಬಿದ ಬಂಡೆಯನ್ನು ಕಂಡು ಹಾವಿನ ಬುಟ್ಟಿಯ ಮುಚ್ಚಳವನ್ನು ತೆರೆದು ನೋಡಿದ ಮಂಗನಂತೆ ಬೆದರಿತು. ಈ ವಿಶ್ವಾಸಘಾತುಕ ತನ್ನನ್ನೂ ತಿನ್ನದೆ ಬಿಡನು. ಈ ಅಪಾಯಕ್ಕೆ ವಂಚನೋಪಾಯ

ತನ್ನಂ ಕೊಲ್ವುದನಱಿದೊಡೆ
ಮುನ್ನಂ ತಾಂ ಕೊಲ್ಗೆ ಪಗೆವನಂ ಶಂಕಿಸದು-
ತ್ಪನ್ನಮತಿಯಪ್ಪವಂ ಪೋ
ತನ್ನಪ್ಪುದದಕ್ಕೆ ದೈವವಶದಿಂ ತುದಿಯೊಳ್ ೧೩೫

ಅನಿಮಿಷ ಸಪತ್ನ ಬಕ ಕಂ
ಠನಾಳಮಂ ಭೀಮನೊತ್ತುವಂದದಿನೊತ್ತಿ
ತ್ತನಿಮಿಷ ಸಪತ್ನಬಕಕಂ
ಠನಾಳಮಂ ಪಱಿಯೆ ಕೋಡಿನೊಳ್ ಕರ್ಕಟಕಂ ೧೩೬

ಅಂತು ಕರ್ಕಟಕಂ ನಿಜಕರ್ಕಶ ಕರ್ತರಿಗ್ರಹಣದಿಂ ಬಾಳಮೃಣಾಳನಾಳೋಪಮ ಬಕಕಂಠನಾಳಮಂ ಕತ್ತರಿಸಿತ್ತು, ಅದಱಿಂ,

ಶ್ಲೋ ॥ ಭಕ್ಷಯಿತ್ವಾ ಬಹೂನ್ ಮತ್ಸ್ಯಾನ್ ಉತ್ತಮಾಧಮ ಮಧ್ಯಮಾನ್
ಅತಿಲೌಲ್ಯಾದ್ಬಕಃ ಕಶ್ಚಿತ್ ಮೃತಃ ಕರ್ಕಟ ಸಂಗ್ರಹಾತ್ ॥೪೯॥

ಟೀ॥ ಪಿರಿದುಂ ಲಂಪಟನಪ್ಪೊಂದಾನೊಂದು ಬಕನುತ್ತಮ ಮಧ್ಯಮಾಧಮಂಗಳಪ್ಪ ಮೀಂಗಳಂ ದಿನಕ್ರಮದಿಂ ತಿಂದುದಲ್ಲದೆ ಬಂದೆಸಡಿಯಂ ತಿಂಬೆನೆಂದು ಕೊಂಡೊಯ್ಯುತ್ತುಮಿರಲಾ ಯೆಸಡಿ ತನ್ನ ಗೋಣನಿಱುಂಕಿ ಕೊಂದುದು.

ಅಂತಾ ಬಕನಿಂದಂ ಅತಿಚಪಳನಪ್ಪ ಸರ್ಪಂಗಪಾಯಮಪ್ಪುಪಾಯಮಂ ನಿನಗೆ ಪೇೞ್ವೆ ಪೆನೆಲ್ಲಿಯಾನುಮೊಂದು ಕನಕಸೂತ್ರಮಂ ತಂದಾ ಸರ್ಪನಿರ್ಪ ಪುತ್ತಿನೊಳಿಕ್ಕಿದೊಡೆಯಾ ತುಡುಗೆಯೊಡೆಯರೊಡಮೆಯ ಕಾರಣಮಾಗಿ ಪುತ್ತನಗುೞ್ದು ಪಾವಂ ಕೊಲ್ವರೆನೆ ಅಂತೆಗೆಯ್ವೆನೆಂದಾ ವಾಯಸಂ ಪೋಗಿ ತೀರ್ಥಸ್ನಾನಾರ್ಥಂ ಬಂದ ನೃಪವಿಲಾಸಿನಿಯರ್ ತುಡುಗೆಯಂ ಕಳಿಲ್ಚಿ ತಡಿಯೊಳ್

ಯಾವುದೂ ಇಲ್ಲ. ನನಗೆ ಪರಿಚ್ಛೇದವೇ ಈಗ ತಕ್ಕ ಉಪಾಯ. ೧೩೫. ಉತ್ಪನ್ನಮತಿಯಾದವನು ತನ್ನನ್ನು ಕೊಲ್ಲುವನೆಂದು ತಿಳಿದಕೂಡಲೇ ಹಗೆಯನ್ನು ಸಂದೇಹಿಸದೆ ಸಂಹರಿಸತಕ್ಕದ್ದು ಎಂದು ೧೩೬. ಬಕಾಸುರನ ಕಂಠನಾಳವನ್ನು ಭೀಮಸೇನನು ಒತ್ತಿ ಕೊಂದಂತೆ ಆ ಕರ್ಕಟಕನು ಬಕನ ಕಂಠನಾಳವನ್ನು ತನ್ನ ಕೊಂಡಿಯಿಂದ ಹರಿಯಿತು. ವ॥ ಹಾಗೆ ಆ ಕರ್ಕಟಕನು ತನ್ನ ಕರ್ಕಶವಾದ ಕತ್ತರಿ ಪ್ರಯೋಗದಿಂದ ಎಳೆಯ ತಾವರೆಯ ದಂಟಿನಂತೆ ಕೋಮಲವಾದ ಬಕನ ಕಂಠನಾಳವನ್ನು ಕತ್ತರಿಸಿತು. ಹೀಗೆ ಅತಿಲಂಪಟನಾದ ಒಂದ ಬಕ ಹಿರಿಕಿರಿಯ ಮೀನುಗಳನ್ನು ದಿನದಿನವೂ ತಿಂದುದಲ್ಲದೆ ಬಂದು ಏಡಿಯನ್ನೂ ತಿನ್ನುವೆನೆಂದು ಅದನ್ನು ಕೊಂಡೊಯ್ಯುತ್ತಿರಲು ಆ ಏಡಿ ತನ್ನ ಗೋಣನ್ನೇ ಇರುಕಿ ಕೊಂದಿತು. ವ॥ ಹಾಗೆ ಆ ಬಕನಿಗಿಂತ ಹೆಚ್ಚು ಚಪಲನಾದ ಸರ್ಪನಿಗೆ ಅಪಾಯಕರವಾದ ಉಪಾಯವನ್ನು ಹೇಳುವೆ. ಎಲ್ಲಿಂದಾದರೂ ಒಂದು ಕನಕಸೂತ್ರವನ್ನು ತಂದು ಆ ಸರ್ಪವಿರುವ ಹುತ್ತದೊಳಕ್ಕೆ ಇಟ್ಟರೆ ಆ ಆಭರಣದ ಒಡೆಯರು ಒಡವೆಯ ನೆಪದಿಂದ ಹುತ್ತವನ್ನು ಅಗೆದು ಹಾವನ್ನು ಕೊಲ್ಲುವರು. ಹೀಗೆ ಹೇಳಲು ಹಾಗೆಯೇ ಮಾಡುವೆನೆಂದು ಆ ಕಾಗೆ ಹೋಗಿ ತೀರ್ಥಸ್ನಾನಕ್ಕೆಂದು ಬಂದ ನೃಪವಿಲಾಸಿನಿಯರು ತಮ್ಮ ಆಭರಣಗಳನ್ನು

ಬೈತಿಟ್ಟರಲವಱೊಳಗೊಂದಂ ಕರ್ಚಿಕೊಂಡಾಕಾಶಮಾರ್ಗಕ್ಕೆ ನೆಗೆಯಲಾ ತುಡುಗೆಯ ಕಾಪಿನವರ್ ಬೆನ್ನನೆ ಬರೆವರೆ :

ಅತಿಶಯ ಕಾಂಚನಸೂತ್ರಾಂ
ಚಿತಚಂಚಚ್ಚಂಚು ಮೆಲ್ಲಮೆಲ್ಲನುರಗೇಂದ್ರೋಪ
ಸ್ಥಿತಭೂರುಹಮಂ ಸಾರ್ದುದು
ಸುತವಿರಹೋದ್ರೇಕ ಜನಿತಶೋಕಂ ಕಾಕಂ ೧೩೭

ಅಂತಾ ಕಾಗೆಯುಂ ತುಡುಗೆಯೊಡೆಯರ್ ತನ್ನನೆಯ್ದುವರಲೊಡಂ ವಿಷಧರಂಗೆ ವಿಷಮು ನಿಕ್ಕುವಂತೆ ಪುತ್ತಿನೊಳಗಾ ಕನಕಸೂತ್ರವನಿಕ್ಕುವುದುಮವಂದಿರ್ ಪುತ್ತನಗುಟ್ಟು ಪಾವಂ ಕೊಂದರ್.

ಅದಱಿಂದುಪಾಯನಿಪುಣನಪ್ಪಂಗೆ ಆವ ಕಾರ್ಯಮುಂ ಸಾಧ್ಯಮಲ್ಲದಿರದೆನೆ ಕರಟಕನೆಂದಂ : ಎನಿತುಪಾಯಕುಶಲನಾದೊಡಂ ದುರ್ಬಲಂಗಂ ಅಸಹಾಯಂಗಂ ಪ್ರತಿಕೂಲಂಗೆಯ್ದನಪ್ಪವಂಗಮಾವ ಕಜ್ಜಮುಂ ಬೆಜ್ಜಿಯಿಲ್ಲದ ಬೇನೆಯಂತೆ ತೀರಲಱಿಯದೆನೆ ದವನಕನೆಂದಂ : ಅಂತಲ್ತು ಸಮ್ಯಗುಪಾಯ ನಿಪುಣನಪ್ಪವಂಗೆಲ್ಲಮನುಕೂಲಮಪ್ಪುದು. ಒಂದುಂ ಸಂದೆಯಮಿಲ್ಲದೆಂತೆನೆ :

ಶ್ಲೋ॥ ಬುದ್ಧಿರ್ನ ವಿದ್ಯತೇ ಯಸ್ಯ ಬಲಂ ತಸ್ಯ ಕರೋತಿ ಕಂ
ಮಹಾಬಲೋಽಪಿ ಪಂಚಾಸ್ಯಃ ಶಶಕೇನ ನಿಪಾತಿತಃ ॥೫೦॥

ಟೀ॥ ಬುದ್ಧಿಯಿಲ್ಲದಂಗೆ ಶಕ್ತಿಯಿರ್ದುಂ ಪ್ರಯೋಜನವಿಲ್ಲ. ಅದೆಂತೆನೆ. ಬಲವಂತನಪ್ಪದೊಂದು ಸಿಂಹಮಂ ಮೊಲಂ ಕೊಂಬುದು. ಎಂಬೀ ಕಥೆಯಂ ನೀಂ ಕೇಳ್ದುದಿಲ್ಲಕ್ಕುಮೆನೆ ಕರಟಕನದೆಂತೆನೆ ದವನಕಂ ಪೇೞ್ಗುಂ :

ಕಳಚಿ ದಡದಲ್ಲಿ ಇಟ್ಟಿರಲು ಅವುಗಳಲ್ಲಿ ಒಂದನ್ನು ಕಚ್ಚಿಕೊಂಡು ಹಾರಿಬಂತು. ಅದನ್ನು ಅನುಸರಿಸಿ ಆ ಆಭರಣಗಳ ಕಾವಲುಗಾರರು ಹಿಂದಿನಿಂದ ಅಟ್ಟಿಕೊಂಡು ಬಂದರು. ೧೩೭. ಸುತವಿರಹದಿಂದ ನೊಂದ ಆ ಕಾಗೆ ಉರಗೇಂದ್ರನಿದ್ದ ಮರದ ಮೇಲೆ ಬಂದು ಕುಳಿತಿತು. ವ॥ ಆಭರಣಗಳ ಕಾವಲಿನವರು ತನ್ನನ್ನು ಅಟ್ಟಿಸಿಕೊಂಡು ಬರುತ್ತಿರಲು ವಿಷಧರನಿಗೆ ವಿಷವಿಕ್ಕುವಂತೆ ಆ ಹುತ್ತದೊಳಕ್ಕೆ ಆ ಕನಕಸೂತ್ರವನ್ನು ಹಾಕಲು ಅವರು ಹುತ್ತವನ್ನು ಅಗೆದು ಹಾವನ್ನು ಕೊಂದರು. ಅದರಿಂದ ಉಪಾಯಕುಶಲನಾದವನಿಗೆ ಯಾವ ಕಾರ್ಯವೂ ಸಾಧ್ಯವಾಗದೆ ಇರದು. ಅದಕ್ಕೆ ಕರಟಕನು ಎಷ್ಟು ಉಪಾಯವಿದ್ದರೂ ದುರ್ಬಲನಿಗೂ ಅಸಹಾಯಕನಿಗೂ ಪ್ರತಿಕೂಲವನ್ನು ಹೊಂದಿದವನಿಗೂ ಯಾವ ಕಾರ್ಯವೂ ಮದ್ದಿಲ್ಲದ ರೋಗದಂತೆ ಪ್ರಯೋಜನಕ್ಕೆ ಬಾರದು ಎಂದು ಹೇಳಿದನು. ಅದಕ್ಕೆ ದವನಕನು ಹೀಗೆಂದನು : ಹಾಗಲ್ಲ, ಒಳ್ಳೆಯ ಉಪಾಯನಿಪುಣನಾದವನಿಗೆ ಎಲ್ಲವೂ ಅನುಕೂಲವಾಗುವುದು ; ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಶ್ಲೋ॥ ಬುದ್ಧಿಯಿಲ್ಲದವನಿಗೆ ಶಕ್ತಿಯಿದ್ದೂ ಪ್ರಯೋಜನವಿಲ್ಲ. ಬಲಶಾಲಿಯಾದ ಒಂದು ಸಿಂಹವನ್ನು ಒಂದು ಮೊಲ ಕೊಂದಿತು. ಈ ಕಥೆಯನ್ನು ನೀನು ಕೇಳಿರಲಿಕ್ಕಿಲ್ಲವಲ್ಲವೇ ?

೯. ಮೊಲಂ ಸಿಂಹಮುಂ ಕೊಂದ ಕಥೆ

ವೃಕ ಭಲ್ಲೂಕ ಸುಗಂಡ ಚಂಡಹರಿಣಶ್ರೇಣೀರುರೂರೂಗ್ರ ಶ
ಲ್ಯಕ ಸಾರಂಗ ಶಶಾವಳೀ ಶರಭ ಗೋಲಾಂಗೂಲ ಮಾಲಾ ಹರಿ
ಪ್ರಕರಾಭೀಳಸೃಗಾಳಜಾಳ ಮದವಚ್ಛುಂಡಾಲ ಶಾರ್ದೂಲ ಕಾ-
ಕಕುಳ ವ್ಯಾಳಕರಾಳ ವಿಸ್ಫುರದರಣ್ಯಾನೀಮಹೀದೇಶದೊಳ್ ೧೩೮

ದುರ್ಧರ ವಿಕ್ರಮನುರುತರ
ದೋರ್ದಂಡಸಹಾಯನಿರ್ಘೃದೆಂದುಮಜೇಯಂ
ನಿರ್ದಯನನುಪಮ ನಖಮುಖ
ನಿರ್ದಾರಿತವನ್ಯನಾಗಸಂಘಂ ಸಿಂಗಂ ೧೩೯

ಆ ಮೃಗಾಧಿರಾಜಂ ಸಾಮಜವೆಲ್ಲಮಂ ತವೆ ಕೊಂದು ತಿಂದು ಬಳಿಕ್ಕಮಾಹಾರಂಬಡೆಯದಡವಿಯ ಮೃಗಂಗಳನೆಲ್ಲಮನಿಂಬಿಟ್ಟು ತಿನುತ್ತಿರೆ ; ಮೃಗಂಗಳೆಲ್ಲಮೊಂದಾಗಿ ತಮ್ಮೊಳಾಳೋಚನಂಗೆಯ್ದು ಮೃಗೇಂದ್ರನಲ್ಲಿಗೆ ಬಂದು ಪೊಡೆವಟ್ಟು,

ಬಿನ್ನಪಮೀ ಮೃಗನಿವಹಂ
ನಿನ್ನಾಜ್ಞೆಯೊಳಿರ್ಕುಮೀ ಮಹಾಟವಿಯೊಳ್ ಶೌ-
ರ್ಯೋನ್ನತ ಕಾವುದು ನೀನೆ-
ಮ್ಮನ್ನಯವಿದ ಧರ್ಮಮಾರ್ಗದಿಂ ಗಜವೈರಿ ೧೪೦

ಎಂದು ದೇವಾ ! ನೀವಿನಿತುಕಾಲವೆಮ್ಮಂ ಪೊರೆಯಲಾಯ್ತೀಗಳ್ ನಿಮಗೆಡರಾದಲ್ಲಿ ನಾವೆಲ್ಲಮಿರ್ಪುದೇತಕ್ಕೆ ಬಾಳ್ವೆ, ನಿಮಗೆ ಕರಿಗಳ್ ದೊರೆಕೊಳ್ವನ್ನಂ ನಿಚ್ಚಲೊಂದೊಂದು

ಆಗ ಕರಟಕನು ಅದೇನೆಂದು ಕೇಳಲು ದವನಕ ಹೇಳತೊಡಗಿದ : ೧೩೮. ಒಂದು ತೋಳ, ಕರಡಿ, ಒಳ್ಳೆಯ ಕೊರಳಿನ ಹೊಳೆಯುವ ಹರಿಣಗಳ ಸಾಲು, ಬಿಳಿಪಟ್ಟೆಯನ್ನುಳ್ಳ ಸಾರಂಗ, ಭಯಂಕರವಾದ ಕಣೆಹಂದಿ, ಸಾರಂಗ, ಮೊಲಗಳು, ಹುಲಿ, ಕಪಿಗಳ ಗುಂಪು ಸಿಂಹಸಮೂಹ, ಭಯಂಕರವಾದ ನರಿಗಳ ಮಂದೆ, ಮದದಿಂದ ಕೂಡಿದ ಆನೆ, ಶಾರ್ದೂಲ, ಕಾಗೆಗಳ ಗುಂಪು, ಸರ್ಪಗಳಿಂದ ಭೀಕರವಾಗಿ ಹೊಳೆಯುವ ಕಾಡಿನಲ್ಲಿ ೧೩೯. ದುರ್ಧರವಿಕ್ರಮನೂ, ದೋರ್ದಂಡಸಹಾಯನೂ, ಅಜೇಯನೂ, ನಿರ್ದಯನೂ, ಅಸಾಧಾರಣವಾದ ನಖಮುಖಗಳಿಂದ ಕಾಡಿನ ಆನೆಗಳ ಸಮೂಹವನ್ನು ಸೀಳಿದವನೂ ಆದ ಸಿಂಹವಿತ್ತು. ವ।। ಆ ಮೃಗಾಧಿರಾಜನು ಆನೆಗಳನ್ನೆಲ್ಲ ಕೊಂದು ತಿಂದ ಬಳಿಕ ಎಲ್ಲಿಯೂ ಆಹಾರ ಸಿಕ್ಕದೆ ಕಾಡಿನಲ್ಲಿದ್ದ ಸಿಕ್ಕ ಸಿಕ್ಕ ಬಡ ಪ್ರಾಣಿಗಳನ್ನೆಲ್ಲ ತಿನ್ನತೊಡಗಿತು. ಆಗ ಮೃಗಗಳೆಲ್ಲ ಒಂದಾಗಿ ತಮ್ಮ ತಮ್ಮಲ್ಲೆ ಆಲೋಚನೆಮಾಡಿ ಮೃಗೇಂದ್ರನಲ್ಲಿಗೆ ಬಂದು ನಮಸ್ಕರಿಸಿ ಹೀಗೆಂದುವು : ೧೪೦. ಗಜವೈರಿ ! ಈ ಮಹಾ ಅರಣ್ಯದಲ್ಲಿ ವಾಸಿಸುವ ಈ ಮೃಗಸಮೂಹವು ನಿನ್ನ ಆಜ್ಞೆಗೆ ಒಳಪಟ್ಟವು. ಶೌರ್ಯೋನ್ನತನೂ, ನೀತಿಜ್ಞನೂ ಆದ ನೀನು ನಮ್ಮನ್ನೆಲ್ಲ ಧರ್ಮಮಾರ್ಗದಿಂದ ಕಾಪಾಡಬೇಕು. ವ।। ದೇವಾ ! ನೀವು ಇಷ್ಟರವರೆಗೆ ನಮ್ಮನ್ನು ಕಾಪಾಡಿದಿರಿ. ಈಗ ನಿಮಗೆ ಅಪಾಯ ಸಂಭವಿಸಿರಲು ನಾವು ನಿಮ್ಮ ಉಪಕಾರಕ್ಕಾಗದಿದ್ದರೆ ನಾವಿದ್ದೂ ಏನು ಪ್ರಯೋಜನ ? ನಿಮಗೆ ಆನೆಗಳು ಸಿಗುವ

ಮೃಗವನಟ್ಟುವೆವದಂ ಕೈಕೊಂಡಿಂತು ನಡೆವಿರಪ್ಪೊಡೆ ನಿರ್ವಹಿಪೆವಾಗದೊಡೋಡಿ ಪೋಪೆವೆನೆ, ಮೃಗಾಧಿರಾಜನಂತೆಗೆಯ್ವೆನೆಂದೊಡಂಬಟ್ಟು, ಬಾಯಾಳೆಂಬ ಬಳ್ಳುಮಂ ಬಾರಿಕನಂ ಮಾಡಿ ಪಲಕಾಲಂ ಸಲುತಮಿರ್ಪುದುಂ, ಒಂದು ದಿನಮಾ ಸಿಂಗಕ್ಕೆ ಮಾರಿ ಬರ್ಪಂತೆ ದೀರ್ಘಕರ್ಣನೆಂಬ ಮೊಲಕ್ಕೆ ಬಾರಿ ಬರ್ಪುದುಮಾ ಮೊಲನುಪಾಯಕುಶಲನಪ್ಪುದಱಿಂ ಕಾಲಜ್ಞಾನಮುಂ ಕಾಲಜಯಮುಮಂ ಬಲ್ಲ ಪರಮಯೋಗಿಯಂತೆ ತನಗಾಸನ್ನಕಾಲಾಪಾಯಕ್ಕೆ ಜಯೋಪಾಯಮಂ ಮನದೊಳಗೆ ಬಗೆದು, 'ವಾಕ್ಯಂ ॥ ನಾಶಕ್ಯಂ ಬುದ್ಧಿಮತಃ ಪುರುಷಸ್ಯ' ಎಂಬ ವಾಕ್ಯೋಕ್ತಿಯಿಂ ಬುದ್ಧಿವಂತರ್ಗೆ ಕೇಡಿಲ್ಲೆಂದು ನಿಶ್ಚೈಸಿಕೊಂಡು ದಿನಾಂತಂಬರೆಗಂ ತಡೆದು, ಬೞಿಕ್ಕೆಲ್ಲಿಯುಂ ನಿಲ್ಲದೆ, ಪೆಱಗಂ ನೋಡುತ್ತುಂ ಭಯಾತುರನಂತೆ ಬಂದುಂ ಮರಣಭ್ರಾಂತಿಯಂ ಚಿಂತಿಸಿ ಬರುತ್ತುಂ ತೊಟ್ಟನೆ ಮುಂದಿರ್ದ ಪುರಾಣಕೂಪಮಂ ಕಂಡು ತೃಷೆಯಿಂ ನೀರ್ಗುಡಿಯವೇೞ್ಕೆಂದು ನೋಡಿ ಏಱೆ ಇೞಿಯಲುಂ ಬಾರದ ಸ್ವಚ್ಛಜಲದೊಳ್ ತನ್ನ ಪ್ರತಿಬಿಂಬಮಂತು ಬಿಂಬಿಸುವುದಂ ಕಂಡು ಈ ಸಿಂಹಮನಿಲ್ಲಿಯೆ ಕೊಲಲುಂ ಗೆಲಲುಂ ಸಾಲ್ಗುಮೆಂದುತ್ಸಾಹದಿಂದುಪಾಯನಿಪುಣನಪ್ಪ ಶಶಕನಾ ಸಿಂಹಮನಿಲ್ಲಿ ತಂದು ಕೊಲ್ವೆಂ, ಕೊಲಲಾಱದಂದು, 'ಸಾವಂಗೆ ಸಮುದ್ರಂ ಮೊಣಕಾಲುದ್ದಂ' ಎಂಬಂತೆ 'ಕಿರ್ಚಿನೊಳ್ ಬಿೞ್ದಂಗೆ ಸಾವು ತಪ್ಪದು' ಎಂಬಂತೆ, ಅವಂ ಮುನಿದು ಇರ್ಮಡಿಸಿ ಕೊಂದಪನೋ ಭಯಮೇಕೆನಗಿಲ್ಲಿ

ತನಕ ಪ್ರತಿನಿತ್ಯವೂ ನಿಮ್ಮ ಬಳಿಗೆ ಒಂದೊಂದು ಮೃಗವನ್ನು ನಿಮ್ಮ ಆಹಾರಕ್ಕಾಗಿ ಕಳುಹಿಸುವೆವು. ಈ ವಿಚಾರ ನಿಮಗೆ ಸಮ್ಮತವೆನಿಸಿದರೆ ನಾವು ಇಲ್ಲೇ ಇರುವೆವು ; ಇಲ್ಲವಾದಲ್ಲಿ ಇಲ್ಲಿಂದ ಓಡಿಹೋಗುವೆವು. ಆ ಮಾತಿಗೆ ಮೃಗರಾಜನು ಹಾಗೆಯೇ ಮಾಡುವೆ ಎಂದು ಒಪ್ಪಿ ಬಾಯಾಳೆಂಬ ನರಿಯನ್ನು ಸರದಿಗಾರನನ್ನಾಗಿ ನೇಮಿಸಿ ಕೆಲವು ಕಾಲ ಕಳೆಯಿತು. ಹೀಗಿರುವ ಒಂದು ದಿನ ಆ ಸಿಂಹಕ್ಕೆ ಮಾರಿ ಬರುವಂತೆ ದೀರ್ಘಕರ್ಣನೆಂಬ ಮೊಲದ ಸರದಿ ಬಂತು. ಆ ಮೊಲವು ಉಪಾಯಕುಶಲನಾದುದರಿಂದ ಕಾಲಜ್ಞಾನವನ್ನೂ, ಕಾಲಜಯುವನ್ನೂ ಬಲ್ಲ ಪರಮಯೋಗಿಯಂತೆ ತನಗೆ ಬಂದ ಅಪಾಯಕ್ಕೆ ಜಯೋಪಾಯವನ್ನು ಮನಸ್ಸಿನಲ್ಲೇ ಯೋಚಿಸಿತು. 'ನಾಶಕ್ಯಂ ಬುದ್ಧಿಮತಃ ಪುರುಷಸ್ಯ' ಎಂಬಂತೆ ಮಾತನಾಡುವುದರಲ್ಲಿ ಬುದ್ಧಿವಂತರಾದವರಿಗೆ ಕೇಡಿಲ್ಲ ಎಂಬುದನ್ನು ನಿಶ್ಚಯಿಸಿ ಸಂಜೆಯುವರೆಗೆ ಕಾದಿದ್ದು ಬಳಿಕ ಎಲ್ಲಿಯೂ ನಿಲ್ಲದೆ ಹಿಂದೆ ನೋಡುತ್ತ ಭಯಾತುರಗೊಂಡವನಂತೆ ಬಂದು ತನ್ನ ಮರಣಭ್ರಾಂತಿಯನ್ನು ಚಿಂತಿಸಿತು. ಇದ್ದಕ್ಕಿದ್ದಂತೆ ತನ್ನ ಎದುರಿನಲ್ಲೇ ಇದ್ದ ಒಂದು ಹಳೆಯ ಬಾವಿಯನ್ನು ಕಂಡು ಬಾಯಾರಿಕೆಯಿಂದ ನೀರು ಕುಡಿಯಬೇಕೆಂದು ನೋಡಿತು. ಇಳಿದು ಹತ್ತಲಾಗದ ಆ ಬಾವಿಯ ಸ್ವಚ್ಛಜಲದಲ್ಲಿ ತನ್ನ ಪ್ರತಿಬಿಂಬವು ಇದ್ದ ಹಾಗೆಯೇ ಬಿಂಬಿಸುವುದನ್ನು ಕಂಡಿತು. ಈ ಸಿಂಹವನ್ನು ಇಲ್ಲಿಯೇ ಕೊಲ್ಲಲೂ, ಗೆಲ್ಲಲೂ ಸಾಧ್ಯ ಎಂದ ಉತ್ಸಾಹದಿಂದ ಉಪಾಯನಿಪುಣನಾದ ಆ ಮೊಲ ಆ ಸಿಂಹನನ್ನು ಇಲ್ಲಿಗೆ ತಂದು ಕೊಲ್ಲುವ. ಒಂದು ವೇಳೆ ಕೊಲ್ಲಲಾಗದಿದ್ದರೆ, 'ಸಾಯುವವನಿಗೆ ಸಮುದ್ರ ಮೊಳಕಾಲುದ್ದ' ಎಂಬಂತೆಯೂ, 'ಕಿಚ್ಚಿನಲ್ಲಿ ಬಿದ್ದವನಿಗೆ ಸಾವು ತಪ್ಪದು' ಎಂಬಂತೆಯೂ ತನಗೆ ಸಾವು ತಪ್ಪಿದ್ದಲ್ಲ. ಹೆಚ್ಚೆಂದರೆ ಅವನು ನನ್ನ ಮೇಲೆ ಇಮ್ಮಡಿ ಕೋಪಗೊಂಡು ಕೊಂದಾನಷ್ಟೇ ! ಹೀಗಿರಲು ನಾನೇಕೆ ಭಯಪಡಬೇಕು.

ಶ್ಲೋ ॥ ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ ॥ ೫೧ ॥

ಎಂಬ ವಾಕ್ಯದಿಂ ಪರಮಯೋಗಿಯಂತೆ ತನಗಾಸನ್ನಕಾಲ ಪ್ರಯೋಜಾಯಮಂ ಮನದೊಳ್ ಬಗೆದು ದಿನಾಂತಂಬರೆಗಂ ತಡೆದು, ಬಟೆಕೆಲ್ಲಿಯುಂ ನಿಲ್ಲದೆ ಪೆಱಗಂ ನೋಡುತ್ತುಂ ಭಯಾತುರನಂತೆ ಬಂದು,

ಭ್ರುಕುಟಿಪುಟರಕ್ತ ನೇತ್ರನ-
ನಕಾಲಕಾಲೋಗ್ರನಂ ಭಯಂಕರ ದಂಷ್ಟ್ರಾ-
ಪ್ರಕರಾಳವದನನಂ ದೀ-
ರ್ಘಕರ್ಣನೆಯ್ದಿದನರಣ್ಯಮೃಗವಲ್ಲಭನಂ ೧೪೧

ಅಂತೆಯ್ದಿವಂದ ದೀರ್ಘಕರ್ಣನಂ ಕಂಡು ಜಠರಾನಳಶಿಖಾಕಳಾಪದಂದಹ್ಯಮಾನಮಾನಸಂ ಸಿಂಗಂ ಮುಳಿದೇನೆಲವೋ! ನೀನಿನಿತು ಪೊಲ್ತಾರ ಎಂದೊಳ್ ತವೆದೆ ? ಈಗಳ್ ಬರುತಡಿಗಡಿಗೆ ಪೆಱಗಂ ನೋಡುತ್ತುಂ ಭಯಾತುರನಾಗಿ ಬಂದೆ, ನಿನ್ನಂ ಕಾವನೆಂಬನುಳ್ಳೊಡೆ ತೋಱಪನಂ ಮುನ್ನಮಾಪೋಶನಂಗೊಂಡು ಬೞಿಕ್ಕೆ ನಿನ್ನಂ ಪ್ರಾಣಾಹುತಿಗೆಯ್ವೆನೆಂಬುದುಂ : ದೇವ! ನಿಮ್ಮ ಕೋಪಮುಂ ಪ್ರತಾಪಮುಮೆಮ್ಮಂದಿಗರಪ್ಪ ಬಡವ್ರುಗಳ್ಗಲ್ಲದೆ ಪೆಱರ್ಗಿಲ್ಲ, ಆದೊಡಂ ಬರ್ಪಾಗಳೊಂದು ಸಿಂಹಂ ಬರಲೀಯದೆ ತಡೆದಡ್ಡಂ ಬಂದೆನ್ನಂ ಬರವಿನ ವೃತ್ತಾಂತಮುಂ ಬೆಸಗೊಂಡಿಂತೆಂದುದು :

ತುಂಗಗಜಂಗಳ್ಗಳ್ಳಿ ಮೃ
ಗಂಗಳನಾಯ್ದುಱಿಸಿ ತಿಂಬುದಪ್ಪೊಡೆ ಪೇೞತೇಂ
ಸಿಂಗಮುದಲ್ಲದು ಪೋಗಾ
ಸಿಂಗಂ ತಾಂ ಗಾವಸಿಂಗಮೆಂದುದು ನಿನ್ನಂ ೧೪೨

ಎಂದು ನಿಮ್ಮಡಿಯನನೇಕ ಪ್ರಕಾರದಿಂ ಜೋಡಾಡಿ ಬಯ್ಯುತೆನ್ನಂ ಬರಲೀಯದೆ ಕಾದುತ್ತಿರ್ದ ಕಾರಣದಿನಿನ್ನೆಗಂ ತಡೆದೆನೆಂದು ಪೇೞ್ವುದುಂ, ಕೇಸರಿಯಾಸುರಂ ಮಸಗಿ ಕ್ಷುಧಾಗ್ನಿಯೊಡನೆ ಕೋಪಾಗ್ನಿ

ಶ್ಲೋ॥ ಕ್ಷಣಮಾತ್ರದಲ್ಲಿ ಧ್ವಂಸವಾಗುವ ಕಾಯಕ್ಕೆ ಯುದ್ಧದಲ್ಲಿಯಾಗಲಿ ಮರಣದಲ್ಲಿಯಾಗಲಿ ಏಕೆ ಚಿಂತೆ ವ॥ ಎಂದು ಯೋಚಿಸಿ ಸಂಜೆಯವರೆಗೆ ಕಾದಿದ್ದು ಬಳಿಕ ಎಲ್ಲಿಯೂ ನಿಲ್ಲದೆ ಹಿಂದಕ್ಕೆ ನೋಡುತ್ತ ಭಯಾತುರನಂತೆ ಬಂದಿತು. ೧೪೧. ಹುಬ್ಬು ಗಂಟಿಕ್ಕಿದ ಕೆಂಡಕಾರುವ ಕಣ್ಣುಗಳ, ದಾಡೆಹಲ್ಲುಗಳಿಂದ ಕರಾಳಮುಖವಾದ ಮೃಗವಲ್ಲಭನನ್ನು ಮೊಲ ಕಂಡಿತು. ವ॥ ಹಾಗೆ ಬಂದ ದೀರ್ಘಕರ್ಣನನ್ನು ಕಂಡು ಜಠರಾಗ್ನಿಜ್ವಾಲೆಯಿಂದ ಸುಟ್ಟ ಮನಸ್ಸಿನ ಸಿಂಹ ಸಿಟ್ಟಿನಿಂದ ಉರಿದೇಳುತ್ತ ಹೀಗೆಂದಿತು : ಎಲವೋ ! ನೀನಿಷ್ಟು ಹೊತ್ತು ತಡವಾಗಿ ಬರಲು ಕಾರಣವಾರು? ಈಗ ಬರುವಾಗ ಹೆಜ್ಜೆ ಹೆಜ್ಜೆಗೂ ಭಯಾತುರನಾಗಿ ಹಿಂದೆ ನೋಡುತ್ತ ಬಂದೆ. ನಿನ್ನ ಒಡೆಯನೆಂಬುವನು ಯಾರಾದರೂ ಇದ್ದರೆ ತೋರಿಸು. ಮೊದಲು ಅವನನ್ನು ಆಪೋಶನ ಮಾಡಿ ಅನಂತರ ನಿನ್ನನ್ನು ಪ್ರಾಣಾಹುತಿ ಮಾಡುವೆ. ಅದಕ್ಕೆ ದೀರ್ಘಕರ್ಣ ಹೀಗೆಂದಿತು : ನಿಮ್ಮ ಕೋಪವೂ ಪ್ರತಾಪವೂ ನಮ್ಮಂಥ ಬಡವರ ಮೇಲಲ್ಲದೆ ಬೇರೆ ಏನೂ ಇಲ್ಲ. ಆದರೂ ನಾನು ಬರುತ್ತಿದ್ದಾಗ ದಾರಿಯಲ್ಲಿ ಒಂದು ಸಿಂಹ ನನ್ನನ್ನು ಬರಲು ಬಿಡದೆ ತಡೆದು ಅಡ್ಡಗಟ್ಟಿತು. ಆಗ ಆ ಕೇಸರಿ ಭಯಂಕರವಾಗಿ ಗರ್ಜಿಸಿ ಕ್ಷುಧಾಗ್ನಿಯೊಡನೆ ಕೋಪಾಗ್ನಿಯೂ ಹೆಚ್ಚಿ ಮೊಲದ ಮಾತಿನ ಬಲೆಗೆ ಸಿಕ್ಕಿಬಿದ್ದಿತು. ತನ್ನನ್ನು

ಪೆರ್ಚೆ ಮೊಲದ ಮಾತಿನ ಬಲೆಯೊಳ್ ಸಿಲ್ಕಿ ಕಡುಮುಳಿದು, ತನ್ನನಿಂತು ಕಡೆ ನುಡಿದ ಸಿಂಗಮಿರ್ಪೆಡೆಯಂ ತೋಱಿನೆ ಮೊಲನೆಂದುದು : ಆ ಸಿಂಗನತಿಬಲನಪ್ಪುದಱಿಂ ದೇವರ್ಪೋಗಿ ಪೆಱಗೆ ಹೀನಮಕ್ಕುಮದಾಗಳುಱಿದ ಮೃಗಂಗಳೆಲ್ಲ ಹಾಸ್ಯಂಗೆಯ್ವುವವದಱಿಂದೆನ್ನನಾರೋಗಿಸಿ ಸುಖದೊಳಿರಿಂ. 'ಜೀವನ್ ಭದ್ರಾಣಿ ಪಶ್ಯತಿ' ಎಂಬ ನೀತಿಯುಂಟಪ್ಪುದಱಿಂ ನಿಷ್ಕಾರಣಂ ಸಾಯದೆನ್ನಂ ಕೊಳ್ಳಿಮೆನಲಾ ಸಿಂಗಂ ಕೇಳ್ದು ನೀನುಸಿರದವನಿರ್ದೆಡೆಯಂ ತೋಱು ನಡೆಯೆನಲಾ ದೀರ್ಘಕರ್ಣನಂತೆಗೆಯ್ವೆನೆಂದು ಮುಂದಿಟ್ಟೊಡಗೊಂಡು ಬಂದತರ್ಕ್ಯ ಪರಾಕ್ರಮನಪ್ಪ ನಿಮ್ಮಂ ಮೆಚ್ಚದೆ ಮಚ್ಚರಿಸುವ ಸಿಂಹಮಿಲ್ಲಿರ್ದುದೆಂದು,

ತರಳ ಸ್ಫಾಟಿಕ ಭಿತ್ತಿರು-
ಚಿರಮಂ ತಾಂ ತಾರಹಾರಶಶಿವಿಶದಾಂಭಃ
ಪರಿಪೂರ್ಣಮನುರುತರಮಂ
ಪುರಾಣಕೂಪಮನಗಾಧಮಂ ಭೀಕರಮಂ ೧೪೩

ಅಂತಾ ಬಾವಿಯಂ ತೋಱೆ, ದೇವಾ! ನೋಡಿಮೆನಲೊಡಂ, ಕೋಪಾನ್ಧಂ ಕೂಪದೊಳಗಂ ನೋಡುವುದುಮಲ್ಲಿ ಪ್ರತಿಬಿಂಬಿಸಿದ ತನ್ನ ರೂಪಮಂ ಮತ್ತೊಂದು ಸಿಂಹಮೆ ಗೆತ್ತು,

ಕೋಪಾಳನನಳುರೆ ಮಱಾ
ಕೂಪದೊಳಿಭವೈರಿ ಪಾಯ್ದು ಸತ್ತುದು ಘನ ಶೌ-
ರ್ಯೋಪೇತನಾದೊಡಂ ಸಲೆ
ಕೋಪಾತುರನಪ್ಪನಾವನುಂ ಬಟ್ಟಪನೇ ೧೪೪

ಅಂತಾ ಸಿಂಹಮಂ ಬುದ್ಧಿಯ ಬಲದೊಳ್ ಮೊಲಂ ಮೊದಲಾಗಿ ಕೊಂದುದೆಂದೊಡೆ ವಿಶುದ್ಧಬುದ್ಧಿಯುಂ ನಿಶ್ಚಯಾತ್ಮಕನುಮಪ್ಪಾತನೆತ್ತಿಕೊಂಡ ಕಜ್ಜಂ ಪಲಸಿನ ಮರದಂತೆ ಫಲಮನೆತ್ತಿಕೊಂಡು ಬರಲಕ್ಕುಂ

ಈ ರೀತಿ ತಿರಸ್ಕರಿಸಿದ ಸಿಂಹವಿರುವ ಕಡೆಯನ್ನು ನನಗೆ ತೋರಿಸು ಎಂದಿತು. ದೀರ್ಘಕರ್ಣನು ಹಾಗೆಯೇ ಆಗಲಿ ಎಂದು ಸಿಂಹವನ್ನು ಮುಂದೆ ಮಾಡಿಕೊಂಡು ಬಂದು ನಿಮ್ಮನ್ನು ಮೆಚ್ಚದೆ ಮತ್ಸರಿಸುವ ಅಸಾಧಾರಣ ಪರಾಕ್ರಮಿಯಾದ ಸಿಂಹ ಇಲ್ಲಿದೆ ಎಂದು ೧೪೩. ಸ್ಫಟಿಕದ ಭಿತ್ತಿಯಂತೆ ಹೊಳೆಯುವ, ಮುತ್ತಿನ ಹಾರದಂತೆ, ಚಂದ್ರನಂತೆ ತಿಳಿಜಲವುಳ್ಳುದೂ ಭಯಂಕರವೂ ಅತ್ಯಂತ ಅಗಾಧವೂ ಆದ ಒಂದು ಹಳೆಯ ಬಾವಿಯನ್ನು ತೋರಿಸಿತು. ಹಾಗೆ ಆ ಬಾವಿಯನ್ನು ತೋರಿಸಿ ದೇವಾ ! ನೋಡಿರಿ ಎನ್ನಲು ಕೋಪಾಂಧನಾದ ಆ ಕೇಸರಿ ಕೂಪದೊಳಕ್ಕೆ ನೋಡಲು ಅಲ್ಲಿ ಪ್ರತಿಬಿಂಬಿಸಿದ ತನ್ನ ರೂಪವನ್ನೇ ಮತ್ತೊಂದು ಸಿಂಹವೆಂದು ಭ್ರಮಿಸಿತು. ೧೪೪. ಕೋಪದಿಂದ ಆ ಮಹಾಕೂಪದಲ್ಲಿ ಬಿದ್ದು ಸತ್ತಿತು. ಎಷ್ಟೇ ಶೌರ್ಯ ಎಂತಹುದಾದರೂ ಕೋಪಾತುರನಾದವನು ಎಂದಾದರೂ ಬಾಳುವನೇ? ವ|| ಹಾಗೆ ಆ ಸಿಂಹವನ್ನು ಬುದ್ಧಿಬಲದಿಂದ ಒಂದು ಮೊಲ ಕೊಂದಿತು. ಹಾಗೆಯೇ ವಿಶುದ್ಧಬುದ್ಧಿಯುಳ್ಳವನೂ ದೃಢನಿರ್ಧಾರವುಳ್ಳವನೂ ಕೈಕೊಂಡ ಕಾರ್ಯ ಹಲಸಿನಮರ ಹಣ್ಣು ಬಿಟ್ಟಂತೆ ಫಲಪ್ರದವಾಗುವುದು.

ಆದು ಕಾರಣದಿಂ ಭಾವಿಸೆ
ಸದಮಳಮತಿಯುತನೆನಿಪ್ಪವಂಗೆಂತುಂ ತಿ:-
ರದ ಕಜ್ಜಮುಂಟೆ ಬುದ್ಧಿಯೊ-
ಳೆದೆವೆರಸಿದ ನರರಸಾಧ್ಯರಂ ಸಲೆ ಗೆಲ್ವರ್ ೧೪೫

ಎಂದಿಂತನೇಕದೃಷ್ಟಾಂತಂಗಳಂ ತೋಱೆ ನುಡಿದ ದವನಕನ ಮಾತಂ ಕರಟಕಂ ಕೇಳ್ದು ನೀನುಪಾಯ ಕುಶಲನುಂ ಕುಶಾಗ್ರಬುದ್ಧಿಯುಮಪ್ಪುದರ್ಕೇನುಂ ಸಂದೆಯಮಿಲ್ಲ, ತದೆಯದೆ ನೀನೆತ್ತಿದ ಕಜ್ಜದ ಕಡೆಯನೆಯ್ದಿಸೆಂಬುದುಮಂತೆಗೆಯ್ವೆನೆಂದು,

ಪೃಥ್ವೀ ವೃತ್ತಂ ॥ ತಠಪ್ರಕೃತಿ ನಿರ್ಗುಣಂ ಸಕಲಧರ್ಮ ಭೂಜಾವಳೀ
ಕುಠಾರನಿರದೆಯ್ದಿದಂ ದವನಕಂ ಮೃಗಾಧೀಶನಂ
ಕಠೋರನಖರಾಹತದ್ವಿರದ ಕುಂಭಪೀಠಸ್ಥಳೀ
ಲುಠದ್ರುಧಿರ ದಾರುಣೋಲ್ಲಸಿತ ಕೇಸರೋದ್ಭಾಸಿಯಂ ೧೪೬

ಅಂತೆಯ್ದಿ ಪೊಡೆಮಟ್ಟು ಸಮುಚಿತಸ್ಥಾನದೊಳ್ ಕುಳ್ಳಿರ್ದು ತಲೆಯಂ ಬಾಗಿ ನೆಲನನುಂಗುಟದಿಂ ಬರೆಯುತಿರ್ದ ದವನಕನ ಕೃತಕವೇಷಮಂ ಕಂಡು ಪ್ರಾಕೃತವೇಷಮೆಂದು ನಂಬಿ ಪಿಂಗಳಕನಿಂತೆಂದಂ: ಏಂ ದವನಕ! ನೀನಿಂತು ಚಿಂತಾಕ್ರಾಂತನುಂ ಭ್ರಾಂತಚಿತ್ತನುಮಾಗಿರ್ಪುದಾವ ಕಾರಣಂ ಪೇೞೆನೆ ದವನಕನಿಂತೆಂದಂ :

ದೇವ ಸರಭಸದಿನೀ ಸಂ-
ಜೀವಕನೆಂಬೆತ್ತು ಕೆಲೆದೊಡಾ ಧ್ವನಿಗೊಂದಂ
ಭಾವಿಸದೆ ನೀಂ ಭಯುಂಬ-
ಟ್ಟೀ ವನಮಂ ಬಿಟ್ಟು ಪೋಪೆನೆಂಬುದುಮಾಗಳ್ ೧೪೭

೧೪೫. ಬುದ್ಧಿವಂತರಾದವರಿಗೆ ಸಾಧ್ಯವಾಗದ ಕೆಲಸವುಂಟೇ ? ವ॥ ಈ ರೀತಿ ಅನೇಕ ದೃಷ್ಟಾಂತಗಳನ್ನು ತೋರಿ ಹೇಳಿದ ದವನಕನ ಮಾತನ್ನು ಕರಟಕನು ಕೇಳಿ ನೀನು ಉಪಾಯಕುಶಲನೂ ಕುಶಾಗ್ರ ಬುದ್ಧಿಯುಳ್ಳವನೂ ಆಗಿರುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ, ತಡಮಾಡದೆ ನೀನು ಯೋಚಿಸಿದ ಕಾರ್ಯವನ್ನು ಕೊನೆಗೊಳಿಸು ಎಂದು ಹೇಳಿತು. ಅಂತೆಯೇ ೧೪೬. ಹಟವಾದಿಯೂ, ನಿರ್ಗುಣನೂ, ಸಕಲ ಧರ್ಮ ವೃಕ್ಷಗಳಿಗೆ ಕುಠಾರ ಸ್ವರೂಪನೂ ಆದ ಕಠೋರವಾದ ಉಗುರುಗಳ ಹೊಡೆತಕ್ಕೆ ಆನೆಗಳ ಕುಂಭಸ್ಥಳಗಳನ್ನು ಒಡೆದು ರಕ್ತಸಿಕ್ತ ಕೇಸರಗಳಿಂದ ಶೋಭಿಸುವ ಮೃಗಾಧೀಶನಲ್ಲಿಗೆ ದವನಕನು ಹೋಗಿ ವ॥ ನಮಸ್ಕರಿಸಿ ಸಮುಚಿತಸ್ಥಾನದಲ್ಲಿ ಕುಳಿತು ತಲೆಬಾಗಿ ನೆಲವನ್ನು ಬರೆಯುತ್ತಿದ್ದ ದವನಕನ ಕೃತಕವೇಷವನ್ನು ಕಂಡು ಇದು ಪ್ರಾಕೃತವೇಷವೆಂದು ಭಾವಿಸಿ ಪಿಂಗಳಕ ಹೀಗೆಂದ: ಏನು ದವನಕ ! ನೀನು ಹೀಗೆ ಚಿಂತಾಕ್ರಾಂತನೂ ಭ್ರಾಂತಚಿತ್ತನೂ ಆಗಿರಲು ಕಾರಣವೇನು? ಅದಕ್ಕೆ ದವನಕನು ಹೀಗೆ ಹೇಳಿದ : ೧೪೭. ದೇವಾ ! ಈ ಸಂಜೀವಕ ಎಂಬ ಎತ್ತು ರಭಸದಿಂದ ಕೆಲೆಯಲು ಆ ಧ್ವನಿಗೆ ಭಯಪಟ್ಟು ಈ ವನವನ್ನೇ ಬಿಟ್ಟು

ಅಂ ನಿಮ್ಮದಿಯ ಭಯಮಂ ಕಳೆಯಲೆಂದಾ ಮಹಾಸತ್ತ್ವಸಂಪನ್ನನಂ ನಿಮ್ಮೊಳ್ ಕೂಡುವುದುಂ ಕೂಡಿದೊಡಾ ಪಾಪಕರ್ಮಂ ಪೊಲೆಗೆಳೆಯಂತೆಯುಂ ಶಾಂತಿಗೆಯ್ವ ಬೇತಾಳಂ ಮೂಡಿದಂತೆ ತಾಂ ಜಾತಿಯೊಳ್ ಪಶುವಪ್ಪುದಱಿಂ ಪೋಱಿಯುಂ ಧರ್ಮಮುಮನಱಿಯದಾ ಮೂಢಂ ನಿನ್ನ ರಾಜ್ಯಕ್ಕಾಸೆವಟ್ಟು ನಿನ್ನಂ ಕೊಂದಪೆನೆಂದು ಸಮಕಟ್ಟುತಿರ್ದಪನದನಾನಱಿದೆನಪ್ಪುದಱಿಂದಿಲ್ಲಿ ಕರ್ತವ್ಯಮಾವುದೆಂದು ಚಿಂತಿಸಿದಪೆನೆಂದು ಬಿನ್ನಪಂಗೆಯ್ವುದುಂ, ಪಿಂಗಳಕನಿಂತೆಂದಂ :

> ಅನುರಕ್ತಂ ಭಕ್ತಂ ಹಿತ-
> ನೆನಗೀಗಳ್ ಜೀವಮಾಗಿ ಸಂಜೀವಕನಿಂ-
> ಬೆನೆ ನಡಪುತಿರ್ದಪಂ ಮ-
> ತ್ತಿನಿಸುಂ ವಿಪರೀತಮಪ್ಪುದಂ ಕಂಡಱಿಯೆಂ ೧೪೮

ಅಂತುಮಲ್ಲದೀಗಳೆನಗೆ ಅತ್ಯಾಸನ್ನವರ್ತಿಯಪ್ಪುದಱಿಂ ನಮ್ಮ ದುಷ್ಟಪರಿಗ್ರಹಂ ಕೆಮ್ಮನೆ ದ್ವೇಷಂಗೆಯ್ದು ತಾವೆಲ್ಲರಾಱದೆ ನಿನ್ನನುಪೇಕ್ಷಿಸಿದರವಂದಿರ ಮಾತಂ ಕೇಳಲುಂ ನೀಂ ಮನಂಗುಡಲ್ವೇಡೆಂದು ನುಡಿವುದುಂ, ದವನಕನಿಂತೆಂದಂ : ನಾನಾವ ಕಜ್ಜವನಾದೊಡಂ ತ್ರಿಕಾಲಜ್ಞಾನಿಯ ಕಾಣ್ಕೆಯಂತೆ ಕಂಡುದಂ, ಸಮಸ್ತಶಾಸ್ತ್ರಶ್ರವಣಪರಿಣತಂ ಕೇಳ್ದ ನಿಶ್ಚಯಾರ್ಥದಂತೆ ಕೇಳ್ದುದನಲ್ಲದೆ ಜಾತ್ಯಂಧನಂತೆ ಪೆಱರ ಕಾಣ್ಕೆಯೊಳ್ ಕಂಡುದಂ ಜಾತಿಬಧಿರನಂತನ್ಯರ ಕಿವಿಯೊಳ್ ಕೇಳ್ದುದಂ ನುಡಿವನಲ್ಲೆಂ, ದೇವರೆನ್ನ ಬುದ್ಧಿಯ ನೆಗಟ್ದ ಸಾಹಸಂಗಳುಮಂ ಪುರುಷಕಾರಂಗಳುಮನಱಿತುಮಱಿಯದಂತೆ ಪರಪ್ರೇರಕನುಮನವಿಚಾರಕನುಮಂ ಮಾಡಿ ನುಡಿದಿರ್, ಎಂತುಂ ವಾಕ್ಯಂ ॥ 'ಯಃ ಸಂಧಿಪರಃ ದೋಷಾನ್ವೇತ್ತಿ ತಸ್ಯ ದೋಷ ಬಹುತ್ವಂ ಪ್ರಖ್ಯಾಪಯತಿ' ಎಂಬ ನೀತಿಯನಱಿವೆನಪ್ಪುದಱಿಂನಾಂ

ಹೋಗುವೆನೆಂದೆಯಲ್ಲವೇ ! ವ॥ ನಾನು ಪೂಜ್ಯರಾದ ನಿಮ್ಮ ಭಯವನ್ನು ನಿವಾರಿಸಲೆಂದು ಆ ಮಹಾಸತ್ತ್ವಸಂಪನ್ನನನ್ನು ನಿಮ್ಮೊಡನೆ ಕೂಡಿಸಿದೆ. ಆದರೆ ಆ ಪಾಪಿಷ್ಠ ದುಷ್ಟ ಸ್ನೇಹಿತನಂತೆಯೂ ಶಾಂತಿಮಾಡಲು ಬೇತಾಳ ಮೂಡಿದಂತೆಯೂ ತಾನು ಜಾತಿಯಲ್ಲಿ ಪಶುವಾದುದರಿಂದ ಸಂಬಂಧವನ್ನೂ ಧರ್ಮವನ್ನೂ ಅರಿಯದ ಮೂಢನಾದುದರಿಂದಲೂ ನಿನ್ನ ರಾಜ್ಯಕ್ಕಾಸೆಪಟ್ಟು ನಿನ್ನನ್ನು ಕೊಲ್ಲಬೇಕೆಂದು ಹವಣಿಸುತ್ತಿರುವನು. ಅದನ್ನು ನಾನು ತಿಳಿದುದರಿಂದ ಈಗ ನನ್ನ ಕರ್ತವ್ಯವೇನೆಂದು ಚಿಂತಿಸುತ್ತಿರುವೆನೆಂದು ಬಿನ್ನವಿಸಲು ಪಿಂಗಳಕನು ಹೀಗೆ ಹೇಳಿದನು: ೧೪೮. ಅನುರಕ್ತನೂ, ಭಕ್ತನೂ, ಹಿತನೂ ಆಗಿರುವ ನನ್ನ ಜೀವವಾಗಿರುವ ಸಂಜೀವಕನು ನನಗೆ ಸರಿಯಾಗಿ ನಡೆದುಕೊಳ್ಳುತ್ತಿರುವನು. ಈಗ ವಿರೋಧವಾಗಿ ನಾನು ವರ್ತಿಸಲಾರೆ. ವ॥ ಅಲ್ಲದೆ, ಈಗ ನನಗೆ ಅತ್ಯಾಸನ್ನಕಾಲ ವಾದುದರಿಂದ ನಮ್ಮ ವೈರಿಗಳು ಸುಮ್ಮ ಸುಮ್ಮನೆ ದ್ವೇಷಿಸುತ್ತ ನಿನ್ನನ್ನು ಉಪೇಕ್ಷಿಸಿದರು. ಅವರ ಮಾತನ್ನು ಕೇಳಬೇಡ ; ಅದಕ್ಕೆಲ್ಲ ಮನಸ್ಸು ಕೊಡಬೇಡ. ಅದಕ್ಕೆ ದವನಕನು ಹೀಗೆಂದನು : ನಾನು ಯಾವ ಕೆಲಸವನ್ನಾದರೂ ತ್ರಿಕಾಲಜ್ಞಾನಿಯ ದರ್ಶನದಂತೆ ಕೇಳಿದುದನ್ನು ಅಲ್ಲದೆ ಹುಟ್ಟು ಕುರುಡನಂತೆ ಬೇರೆಯವರು ಕಂಡುದನ್ನು, ಹುಟ್ಟು ಕಿವುಡನಂತೆ ಬೇರೆಯವರು ಕೇಳಿದುದನ್ನು ನುಡಿಯುವವನಲ್ಲ. ಪೂಜ್ಯರಾದ ತಾವು ನನ್ನ ಸಾಹಸಗಳನ್ನೂ, ಸಾಮರ್ಥ್ಯಗಳನ್ನೂ ಲೆಕ್ಕಿಸದೆ ವೈರಿಪ್ರೇರಕನೆಂಬಂತೆ, ಅವಿಚಾರಕನೆಂಬಂತೆ ನೋಡಿದಿರಿ. 'ಯಃ ಸಂಧಿಪರಃ ದೋಷಾನ್ವೇತ್ತಿ ತಸ್ಯ ದೋಷಬಹುತ್ವಂ ಪ್ರಖ್ಯಾಪಯತಿ' ಎಂಬ

ಕಂಡುಂ ಕೇಳ್ದುಂ ನುಡಿವೆನಲ್ಲದೆ ವೃಥಾ ಪರನಿಂದೆಗೆಯ್ವೆನಲ್ಲೆಂ, ಇದು ಸ್ವಾಮಿಕಾರ್ಯಮಪ್ಪು ದಱಿಂದುಪೇಕ್ಷಿಸಿರ್ಪುದು ಅನುಜೀವಿಗಳ್ಗೆ ಗುಣಮಲ್ಲಂ-ಅದಱಿಂ ನುಡಿದಪೆನದೆಂತೆನೆ:

ಸ್ವಾಮಿಹಿತನಪ್ಪವಂ ಸ್ವ
ಸ್ವಾಮಿಗೆ ಹಿತಮಪ್ಪ ಕಜ್ಜಮುಳ್ಳೊಡೆ ಪಿರಿದುಂ
ಪ್ರೇಮದಿನಱಿಪುವುದಱಿಪದೊ-
ಡೇಮಾತಿಹಪರವಿರುದ್ಧಮಪ್ಪುದಮೋಘಂ ೧೪೯

ಅಱಿದುದನಾಳ್ದನೊಳ್ ಮಱಸಿ ಮಾಣ್ದಿರದೊಯ್ಯನೆ ಪೇೞದಾತನೇ-
ತಱ ಹಿತನೆಯ್ದೆ ಕೂರ್ಪವರ ಪೇೞ್ದುದನಿಂಬೆನೆ ಕೇಳದಾತನೇ-
ತಱ ವಿಭು ಮಂತ್ರಿಯುಂ ನೃಪತಿಯುಂ ಬಗೆಗೊಂಡನುಕೂಲವೃತ್ತಿಯೊಳ್
ನೆಱೆದಿರೆ ಕೂಡುಗುಂ ನಿಖಿಲರಾಜ್ಯವಿಭೂತಿಗಳಾವ ಕಾಲಮುಂ ೧೫೦

ಹಿತನಪ್ಪ ಭೃತ್ಯನೆಂದುಂ
ಪತಿಗಪಜಯಮಾಗದಂತು ನೆಗೞ್ವುದು ಪತಿದು-
ರ್ಮತಿಯಾಗಿ ದುಷ್ಟಜನಸಂ-
ಗತಿಗೆಱಗಿದೊಡೆಱಗಲೀಯದಿರ್ಪುದಮೋಘಂ ೧೫೧

ಎಂತುಂ ಪೂರ್ವೋಕ್ತಮಿಂತೆಂಬುದಲ್ತೆ

ಶ್ಲೋ ॥ ಯದಿಷ್ಟಂ ತಸ್ಯ ತದ್ಬ್ರೂಯಾತ್ ಯಸ್ಯ ನೇಚ್ಛೇತ್ಪರಾಭವಂ
ಏಷ ಏವ ಸತಾಂ ಧರ್ಮೋ ವಿಪರೀತಮತೋಽನ್ಯಥಾ ॥೫೨॥

ಟೀ॥ ಆವನಾವನೋರ್ವಂಗೆ ಪೊಲ್ಲಹಮಂ ಬಯಸುವಾತನಾತಂಗನುಕೂಲಮಾಗಿಯೆ ಪೇೞ್ವುದು ; ಲೇಸಂ ಬಯಸುವಾತಂ ಅಕಾರ್ಯಮನನುಕೂಲಮಾಗಿ ನುಡಿಯಲಾಗದು ಎಂದಿಂತನುರಕ್ತನಪ್ಪ ಸದ್ಭೃತ್ಯಂಗಂ ಸಚಿವಂಗಂ ಪೇೞ್ದೀಗುಣಂಗಳನಾನಱಿವೆನಾಗಿಯುಂ ನೀಂ ಕಿಡೆ ಕಿಡಲುಂ ನೀಂ ಬಾೞೆ

ನೀತಿಯನ್ನು ಅರಿತವನಾದುದರಿಂದ ಕಂಡು, ಕೇಳಿ ಹೇಳುವೆನಲ್ಲದೆ ಸುಮ್ಮನೆ ಬೇರೆಯವರನ್ನು ನಿಂದಿಸುವವನು ನಾನಲ್ಲ. ಇದು ಸ್ವಾಮಿಕಾರ್ಯವಾದುದರಿಂದ ಇದನ್ನು ಉಪೇಕ್ಷಿಸುವುದು ಭೃತ್ಯರ ಗುಣವಲ್ಲ. ೧೪೯. ಸ್ವಾಮಿಹಿತನಾದವನು ತನ್ನ ಒಡೆಯನಿಗೆ ಹಿತವಾದ ಕಾರ್ಯವಿದ್ದಲ್ಲಿ ಪ್ರೀತಿಯಿಂದ ತಿಳಿಸಬೇಕು, ತಿಳಿಸದಿದ್ದಲ್ಲಿ ಇಹಪರಗಳಲ್ಲಿ ವಿರೋಧ ವುಂಟಾಗುವುದು. ೧೫೦. ತಿಳಿದುದನ್ನು ಆಳುವವನಲ್ಲಿ ಮರೆಸಿ ಹೇಳದವನು ಎಂಥ ಸೇವಕ ? ಹೇಳಿದುದನ್ನು ಉಚಿತವರಿತು ಕೇಳದವನು ಎಂಥ ಸ್ವಾಮಿ ? ಪ್ರಭುವೂ ಮಂತ್ರಿಯೂ ಕೂಡಿ ನಡೆದರೆ ಎಲ್ಲ ಕಾಲದಲ್ಲೂ ಸಕಲ ರಾಜ್ಯವಿಭೂತಿಗಳೂ ಕೂಡಿಬರುವುವು. ೧೫೧. ಹಿತನಾದ ಭೃತ್ಯನು ಎಂದೂ ತನ್ನ ಒಡೆಯನಾದವನಿಗೆ ಅಪಜಯವಾಗದಂತೆ ನಡೆದುಕೊಳ್ಳತಕ್ಕದ್ದು. ಪತಿ ದುರ್ಮತಿಯಾಗಿ ದುಷ್ಟರ ಸಹವಾಸಕ್ಕೆರಗಿದರೆ ಹಾಗಾದಂತೆ ನೋಡಿಕೊಳ್ಳತಕ್ಕದ್ದು. ಶ್ಲೋ॥ ಒಬ್ಬನಿಗೆ ಕೆಟ್ಟದ್ದನ್ನು ಬಯಸುವಾತನು ಆತನಿಗೆ ಅನುಕೂಲವಾಗಿ ಹೇಳಬೇಕು. ಲೇಸನ್ನು ಬಯಸುವಾತನು ಅಕಾರ್ಯವನ್ನು ಅನುಕೂಲವಾಗಿ ನುಡಿಯಲಾಗದು. ಹೀಗೆ ಅನುರಕ್ತನಾದ ಸದ್ಭೃತ್ಯನ, ಸಚಿವನ ಗುಣಗಳನ್ನು ತಿಳಿದ ನಾನು, ನೀನು ಕೆಡಲು ಕೆಡಲಿಕ್ಕೂ, ನೀನು ಬಾಳಲು

ಬಾಲಲುಮಿರ್ದೆನಾಗಿಯುಂ ಕಂಡ ಕಜ್ಜಮಂ ದೇವರ್ಗಱಿಯೆ ಬಿನ್ನಪಂಗೆಯ್ದೆನೆಂಬುದುಂ; ಪಿಂಗಳಕನಿಂತೆಂದಂ; ನೀನೀಗಳ್ ನುಡಿದ ಮಾತಿನಿತುಮಾಪ್ತಂಗಂ ಹಿತವಂಗಂ ನುಡಿಯಲಪ್ಪು ದಾದೊಡಮವಾಙ್ಮನಸಗೋಚರಮಪ್ಪಾತ್ಮತತ್ತ್ವಮಂ ತತ್ತ್ವವಿಚಾರಪಾರಗರುಂ ಅನುಮಾನಪ್ರಮಾಣರುಮಾಗಿ ಕೈಕೊಂಡೊರ್ವರೊಂದನೆ ಕಂಡೆಂತುಂ ನಿಶ್ಚಯಿಸಲುಮೇಕವಾಕ್ಯರಾಗಲುಮಱಿದಪರಿಲ್ಲದಱಿಂ ಅಂತಪ್ಪಾತ್ಮ ತತ್ತ್ವಮನೆನಗಱಿಪಿದ ಸದಾಚಾರನುಂ ಸಾಧುವೇಷನುಂ ಸತ್ಪುರುಷನುಮಪ್ಪ ಸಂಜೀವಕನ ಗುಣಂಗಳುಮಂ ಪ್ರತ್ಯಕ್ಷಪ್ರಮಾಣಂಗಳಿನಾವಱಿದಿರ್ದುಂ ನಮಗಾತಂ ತಪ್ಪುವನೆಂದು ನಿಶ್ಚೈಸಲ್ಬರ್ಕುಮೆ ಎನೆ ದವನಕಂ ಮುಗುಳ್ನಗೆ ನಗುತ್ತಿಂತೆಂದಂ :

ಶ್ಲೋ ॥ ಅಭ್ರಾಂತಶ್ಚ ನೃಪೋ ನಾಸ್ತಿ ಶ್ರೋತ್ರಿಯೋ ನಾಸ್ತಿ ಬುದ್ಧಿಮಾನ್
ಅವಿದಗ್ಧಾಂಗನಾ ನಾಸ್ತಿ ಕಿರಾಟೋ ನಾಸ್ತಿ ನಿಶ್ಶಠಃ ॥೫೩॥

ಟೀ॥ ಮರುಳನಲ್ಲದರಸಿಲ್ಲ; ಬುದ್ಧಿಯುಳ್ಳ ಛಾಂದಸರಿಲ್ಲ ಜಾಣೆಯಲ್ಲದ ಸ್ತ್ರೀಯಿಲ್ಲ, ಹುಸಿಯದ ವ್ಯವಹಾರಿಯಿಲ್ಲ ಎಂಬೀ ಶ್ಲೋಕಾರ್ಥಮುಂಟಪ್ಪುದಱಿಂ 'ಪರಮಾಣು ಪ್ರಮಾಣನೊರ್ವ ಕ್ಷತ್ರಿಯನ ಮೇಲೆ ಪರ್ವತಪ್ರಮಾಣ ಪಂಚಶತ ಪಿಶಾಚಂಗಳಿರ್ಪುವು' ಎಂಬ ನಾಣ್ನುಡಿಯುಂಟು. 'ಅರಸುಮಾನೆಯುಂ ತಿರಿಪುವರಿಚ್ಚೆ' ಎಂಬ ಲೋಕಗಾದೆಯೇಕೆ ಪುಸಿಯಕ್ಕುಂ? ಇದೆಲ್ಲಂ ಸಂಜೀವಕನೆಂಬ ಪಸುವಂ ತಂದು ನಿಮ್ಮೊಳ್ ಕೂಡಿದೆನ್ನ ಮರುಳ್ತನಮಲ್ಲದೆ ನಿಮ್ಮೊಳಿನಿತುಂ ದೋಷಮಿಲ್ಲ; ಆದಂತಿರ್ಕೆ, ಆತನನಾಂ ತಂದು ಕಾಣಿಸಿ ಕೂಡಿದಂದಿಂ ತೊಟ್ಟು ಇಂದುವರಮೆನ್ನಂ ಕರಂ ಮನ್ನಿಸಿ ನಡಪುತ್ತಿರ್ದು ಈಗಳುಂ ಎನ್ನಂ ತನ್ನಾತನೆಂದೇ ಬಗೆದೆನ್ನಂ ಕಟ್ಟೇಕಾಂತಕ್ಕುಯ್ದಿಂತೆಂದಂ :

ಬಾಳಲಿಕ್ಕೂ ಸಿದ್ಧನಾಗಿರುವುದರಿಂದಲೇ ನನಗೆನಿಸಿದ ವಿಚಾರವನ್ನು ಪೂಜ್ಯರಿಗೆ ಬಿನ್ನಯಿಸಿದೆ. ಅದಕ್ಕೆ ಪಿಂಗಳಕನು ಹೀಗೆ ನುಡಿದನು : ನೀನು ಈಗ ಹೇಳಿದ ಈ ಮಾತೆಲ್ಲ ಆಪ್ತನಿಗೂ ಹಿತನಿಗೂ ಹೇಳಬೇಕಾದುದಾದರೂ ಅವಾಙ್ಮನಸಗೋಚರವಾದ ಆತ್ಮತತ್ತ್ವವನ್ನು ನನಗೆ ಉಪದೇಶಿಸಿದ ಸದಾಚಾರನೂ ಸಾಧುವೇಷನೂ ಸತ್ಪುರುಷನೂ ಆದ ಸಂಜೀವಕನ ಗುಣಗಳನ್ನು ಪ್ರತ್ಯಕ್ಷವಾಗಿಯೂ ಪ್ರಮಾಣಪೂರ್ವಕವಾಗಿಯೂ ನಾವು ತಿಳಿದಿದ್ದೂ ನಮಗೆ ಅವನು ಎರಡೆಣಿಸುವನೆಂದು ಹೇಗೆ ನಿಶ್ಚಯಿಸುವುದು ? ಆಗ ದವನಕ ಮುಗುಳ್ನಗುತ್ತ ಹೀಗೆಂದ: ಶ್ಲೋ॥ ಮರುಳನಲ್ಲದ ಅರಸಿಲ್ಲ, ಬುದ್ಧಿವಂತನಾದ ಬ್ರಾಹ್ಮಣನಿಲ್ಲ, ಜಾಣೆಯಲ್ಲದ ಸ್ತ್ರೀಯಿಲ್ಲ ; ಹುಸಿಯದ ವ್ಯವಹಾರಿಯಿಲ್ಲ ಎಂಬ ಶ್ಲೋಕಾರ್ಥ ವಿರುವುದರಿಂದ 'ಪರಮಾಣುಪ್ರಮಾಣನಾದ ಒಬ್ಬ ಕ್ಷತ್ರಿಯನ ಮೇಲೆ ಪರ್ವತಪ್ರಮಾಣದ ಐನೂರು ಪಿಶಾಚಗಳಿರುವುವು' ಎಂಬ ನಾಣ್ಣುಡಿಯುಂಟು, 'ಅರಸೂ ಆನೆಯೂ ತಿರುಗಿಸುವವರ ಇಚ್ಛೆ' ಎಂಬ ಲೋಕದ ಗಾದೆ ಏಕೆ ಸುಳ್ಳಾಗುವುದು ? ಇದೆಲ್ಲವೂ ಸಂಜೀವಕ ಎಂಬ ಪಶುವನ್ನು ನಿಮ್ಮಲ್ಲಿ ತಂದು ಕೂಡಿಸಿದ ನನ್ನ ಮರುಳುತನವಲ್ಲದೆ ನಿಮ್ಮಲ್ಲಿ ಲೇಶವೂ ದೋಷವಿಲ್ಲ. ಅದು ಹಾಗಿರಲಿ. ಆತನನ್ನು ನಾನು ನಿಮಗೆ ಕಾಣಿಸಿ ಕೂಡಿಸಿದಂದಿನಿಂದ ಇಂದಿನವರೆಗೆ ನನ್ನನ್ನು ಚೆನ್ನಾಗಿ ಮನ್ನಿಸಿ ನಡೆಸುತ್ತಿದ್ದು ಈಗಲೂ ನನ್ನನ್ನು ತನ್ನವನೆಂದೇ ಬಗೆದು ನನ್ನನ್ನು ಏಕಾಂತಕ್ಕೆ ಕರೆದು ಹೀಗೆಂದ :

ಅಪವಿನೀತನಂ ಧೃತ-
ಕೋಪನನಜ್ಞಾನಿಯಂ ಕೃತಘ್ನನನೆಂದುಂ
ಪಾಪಿಯನವಿಚಾರಿಯನಿಂ-
ತೀ ಪಿಂಗಳಕನನಶೇಷದೋಷಾವಿಳನಂ ೧೫೨

ಇಂತಪ್ಪನನಾಳ್ವನೆಂದೋಲಗಿಪರ್ಗೇನಾನುಮೊಂದು ನೆವದಿಂದಾತನ ಕೈಯೊಳೇ ಸಾವಾಗದೆ ಪೋಗದು, ಅವನಂ ನೀಂ ಮುನ್ನಂ ಶಾಂತನುಂ ಪಿರಿಯನುಮಾಗಿ ಪೇಟ್ಟೆ, ಈಗಳಾತನ ಪುರುಷಾರ್ಥದ ಪುರುಳುಂ ಶಕ್ತಿಯಳವುಂ ಕಲಿತನದ ಗುಣ್ಪುಂ ಪರಾಕ್ರಮದ ಬಿಣ್ಪುಂ ಕರತಳಾಮಳಕಮಾಗಿರ್ದಪ್ಪುದು, ಆ ಹರಿಯನೊಂದು ನರಿಯಂ ಕೊಲ್ವಂತಶ್ರಮದಿಂದೆ ಕೊಂದು ಗಜಾದಿ ಮೃಗಗಣಮಂ ನಿರ್ಬಾಧೆಯಿಂ ನಿಶ್ಚಿಂತಮಿರ್ಪಂತು ಮಾಳ್ಪೆನೆಂದು ಮತ್ತಮಿಂತೆಂದಂ :

ಅಸದೃಶಮೆನಿಪ್ಪ ಭವದೀ-
ಯ ಸತ್ವಮಂ ಬಗೆಯದಾತ್ಮಸತ್ವಮೆಸೆ ಸಮ-
ರ್ಥಿಸಿ ದೇವ 'ವೀರಭೋಜ್ಯಾ
ವಸುಂಧರಾ' ಎಂದು ನುಡಿದನಾ ವೃಷಭೇಂದ್ರಂ ೧೫೩

ಮೃಗರಾಜನ ಶಕ್ತಿತ್ರಯ-
ದ ಗುಣ್ಪುಮಂ ಬಾಹುಬಲದ ತಿಣ್ಪುಮನರಿದೆಂ
ಬಗೆಯೊಳ್ ಕೊಂದಾತನನಾ
ಮೃಗರಾಜ್ಯಶ್ರೀಯನಾವಗಂ ಕೈಕೊಳ್ವೆಂ ೧೫೪

ಎಂಬಂ, ಅದಲ್ಲದೆಯುಂ,

ವೃಷಭೇಂದ್ರನಂದಮೀಗಳ್
ವಿಷಮತರಂ ಮುನ್ನಿನಂದಮಲ್ಲಂ ಬಗೆಯಂ
ವಿಷಧರವಲ್ಲಭ ಭೂಷಣ
ವೃಷಭನುಮಂ ದೇವ ನಿಮ್ಮನೇಂ ಬಗೆದಪನೇ ೧೫೫

೧೫೨. ಅಪದ್ವಿನೀತನೂ, ಕೋಪಿಷ್ಠನೂ, ಅಜ್ಞಾನಿಯೂ, ಕೃತಘ್ನನೂ, ಪಾಪಿಯೂ, ಅವಿಚಾರಿಯೂ ಆದ ವ।। ಈ ಪಿಂಗಳಕನನ್ನು ಓಲಗಿಸುವವರಿಗೆ ಏನಾದರೊಂದು ನೆವದಿಂದ ಆತನ ಕೈಯಿಂದಲೇ ಸಾವಾಗದೆ ಇರದು. ಅವನನ್ನು ನೀನು ಮೊದಲು ಶಾಂತನೂ ಹಿರಿಯನೂ ಎಂದು ಹೇಳಿದೆ. ಈಗ ಆತನ ಪುರುಷಾರ್ಥದ ಹುರುಳನ್ನೂ ಶಕ್ತಿಯನ್ನೂ ಪರಾಕ್ರಮವನ್ನೂ ತಿಳಿದಿರುವೆ. ಸಿಂಹವನ್ನು ಒಂದು ನರಿಯನ್ನು ಕೊಲ್ಲುವಂತೆ ಅಶ್ರಮದಿಂದ ಕೊಂದು ಗಜಾದಿಮೃಗಗಳಿಗೆ ನಿರ್ಬಾಧೆಯೂ, ನಿಶ್ಚಿಂತೆಯೂ ಉಂಟಾಗುವಂತೆ ಮಾಡುವೆನೆಂದು ನುಡಿದ : ೧೫೩. ದೇವಾ! ಅಸದೃಶವಾದ ನಿಮ್ಮ ಸಾಮರ್ಥ್ಯವನ್ನು ಬಗೆಯದೆ ತನ್ನ ಸಾಮರ್ಥ್ಯವನ್ನೇ ದೊಡ್ಡದೆಂದು ಸಮರ್ಥಿಸಿ 'ವೀರಭೋಜ್ಯಾ ವಸುಂಧರಾ' ಎಂದು ಆ ವೃಷಭೇಂದ್ರನು ನುಡಿಯಬಹುದೇ ? ೧೫೪. ಮೃಗರಾಜನ ಶಕ್ತಿ ತ್ರಯವನ್ನೂ ಬಾಹುಬಲದ ತೀವ್ರತೆಯನ್ನೂ ಅರಿತುಕೊಂಡು ಉಪಾಯದಿಂದ ಮೃಗರಾಜನನ್ನು ಕೊಂದು ಈ ವನಕ್ಕೆ ಅಧಿಪತಿಯಾಗುವ ಎಂದು ಯೋಚಿಸುತ್ತಿರುವನು. ೧೫೫. ಈಗ ಆ ವೃಷಭೇಂದ್ರನ ಪರಿ ವಿಷಮತರವಾಗಿದೆ. ಅವನು ಈಗ ಮೊದಲಿನಂತಿಲ್ಲ. ಈಶ್ವರನ

ಸಕಲೋರ್ವೀತಳಪೂಜ್ಯಮಪ್ಪ ಭವದೀಯ ಪ್ರಾಜ್ಯರಾಜ್ಯಕ್ಕೆ ಕಂ-
ಟಕನಾದಂ ಕ್ರಮದಿಂದೆ ಸಂವರಿಸಿದಂ ಕ್ರೋಧಾದಿ ವರ್ಗಂಗಳಂ
ಸುಕರಂ ಭಾವಿಸಿ ನೋಡೆ ದೇವ ಪೆಱತೇಂ ಸಂಜೀವಕಂ ದಾವಪಾ-
ವಕನಾದಂ ಭವದಿಷ್ಟ ಸೇವಕಗಣಕ್ಕೇಂ ಪರ್ಚುವೇಂ ಮಂತಣಂ ೧೫೬

ಕೇಸರಿ ಚಕ್ರವರ್ತಿ ಪೆಱತೇಂ ನಿನಗಲ್ತು ವಿರೋಧಿನಾಯಕ
ತ್ರಾಸಕನೆಂಬ ಪೆಂಪನೊಳಕೊಂಡ ಹಿರಣ್ಯಕನಂ ಪರಾಕ್ರಮೋ-
ದ್ಭಾಸಿಯನಾತ್ತ ತೀಕ್ಷ್ಣನಖರಂಗಳಿನಾಸುರಮಾಗಿ ಸೀೞ್ದ ಪುಂ-
ಸ್ಕೇಸರಿಗಂ ಬಲಾಧಿಕನಸಾಧ್ಯತರಂ ನೆಗೞ್ದಂ ವೃಷಾಧಿಪಂ ೧೫೭

ಮತ್ತಂ ನಿನಗೆ ಶತ್ರುಮಿತ್ರೋದಾಸೀನರಾಗಿರ್ದವರ್ಗಳಲ್ಲಿಗೆ ತನ್ನ ಗುಪ್ತಚರರನಟ್ಟಿ ತನಗೆ ಮಾಡಿಕೊಳುತಿರ್ದಪನದೆಂತೆನೆ :

ವೃಕಶಾರ್ದೂಲ ವರಾಹಮುಖ್ಯರ ಮನಂಗೊಂಡಂ ಮಹಾಶ್ವಾಪದ
ಪ್ರಕರಾಮಾತ್ಯರೊಳಂ ಗಜಾಧಿಪರೊಳಂ ನಂಟತನಂಗೊಂಡನ-
ಪ್ರಕಟಂ ನೀತಿವಿರುದ್ಧಮಾದೆಡೆಯೊಳಂ ತಾನೆಂಬ ಸನ್ಮಂತ್ರಿಯಿಂ
ವಿಕಳಂ ಮಾಡುವನಿಂತು ತೊಟ್ಟನೆ ಭವತ್ಸಪ್ತಾಂಗಮಂ ಪುಂಗವಂ ೧೫೮

ಅದಲ್ಲದೆಯುಂ ದೇವರ್ ತನಗೆ ಸಮಾನಬಲರಪ್ಪುದಱಿಂ ಸಮಬಲನೊಳಮಧಿಕಬಲನೊಳಂ ಯುದ್ಧಂ ನಿಷಿದ್ಧಂ ಜಯಂ ಸಂದೆಯಮೆಂದಱಿವನಪ್ಪುದಱಿಂ ದೇವರ್ಗೆ ಬಲಕ್ಷಯಮಪ್ಪಂತು

ವಾಹನವಾದ ವೃಷಭೇಂದ್ರನನ್ನೂ ಅವನು ಲೆಕ್ಕಿಸುತ್ತಿಲ್ಲ ಎಂದ ಮೇಲೆ ನಿಮ್ಮನ್ನು ಬಗೆಯುವನೇ ? ೧೫೬. ಸಕಲೋರ್ವಿಗೂ ಪೂಜ್ಯನಾದ ನಿನ್ನ ಸಾಮ್ರಾಜ್ಯಕ್ಕೆ ಅವನು ಕಂಟಕನಾಗಿ ಪರಿಣಮಿಸಿದ್ದಾನೆ. ಕ್ರಮವಾಗಿ ಕ್ರೋಧಾದಿ ಅರಿವರ್ಗವನ್ನು ರೂಢಿಸಿಕೊಳ್ಳುತ್ತಿದ್ದಾನೆ. ದೇವ, ಹೆಚ್ಚೇನು ಹೇಳಲಿ, ಸಂಜೀವಕನು ಬೆಂಕಿಯಂತೆ ವರ್ಧಿಸುತ್ತಿದ್ದಾನೆ. ಹೀಗಿರುವಾಗ ನಿಮ್ಮ ಇಷ್ಟವಾದ ಸೇವಕಜನರೊಂದಿಗೆ ಮತ್ತೇಕೆ ಮಂತಣ? ೧೫೭. ಸಿಂಹ ಚಕ್ರಿಯೆ, ನಿನಗಿರಲಿ, ವಿರೋಧಿನಾಯಕರಿಗೆ ಪರಮ ಸಂಕಟಕರನಾಗಿದ್ದ ಹಿರಣ್ಯಾಕ್ಷನನ್ನು ತೀಕ್ಷ್ಣವಾದ ಉಗುರುಗಳಿಂದ ಭಯಂಕರವಾಗಿ ಸೀಳಿ ಕೊಂದ ಸಾಕ್ಷಾತ್ ನರಸಿಂಹನಿಗೂ ಅವನು ಅಸಾಧ್ಯನಾಗಿದ್ದಾನೆ. ಮತ್ತೆ, ನಿನಗೆ ಶತ್ರು, ಮಿತ್ರ, ಉದಾಸೀನರಾಗಿದ್ದವರ ಬಳಿಗೆಲ್ಲ ಗುಪ್ತಚಾರರನ್ನು ಕಳುಹಿಸಿಕೊಟ್ಟು ಅವರೆಲ್ಲರನ್ನೂ ತನ್ನ ಪಕ್ಷವಾಗಿ ಮಾಡಿಕೊಳ್ಳುತ್ತಿದ್ದಾನೆ, ಹೇಗೆಂದರೆ ೧೫೮. ವೃಕ ಶಾರ್ದೂಲ, ವರಾಹ ಮುಖ್ಯರ ಮನಸ್ಸನ್ನು ಒಲಿಸಿಕೊಂಡಿದ್ದಾನೆ, ಶ್ವಾಪದ ಪ್ರಕರ ಅಮಾತ್ಯರಲ್ಲಿಯೂ, ಗಜಾಧಿಪರಲ್ಲಿಯೂ ನಂಟಸ್ತಿಕೆ ಬೆಳಸಿದ್ದಾನೆ. ನೀತಿವಿರುದ್ಧವಾದೆಡೆಗಳಲ್ಲಿ ಇದ್ದು ನಿನ್ನ ಸಪ್ತಾಂಗವನ್ನು ಹಾಳುಮಾಡುತ್ತಿದ್ದಾನೆ. ಅಲ್ಲದೆ ಪೂಜ್ಯರು ತನ್ನ ಸಮಾನಬಲರಾದುದರಿಂದ ಸಮಬಲರಲ್ಲಿಯೂ, ಅಧಿಕಬಲರಲ್ಲಿಯೂ ಯುದ್ಧ ನಿಷಿದ್ಧ ; ಜಯ ಸಂದೇಹ ಎಂದು ತಿಳಿದವನಾದುದರಿಂದ ತಮಗೆ ಬಲಕ್ಷಯವಾಗುವಂತೆ ಸಂಜೀವಕನು ಏನಾದರೂ ತಂತ್ರ

ಸಂಜೀವಕನುಮೇನಾನುಮೊಂದಂ ತಂತ್ರಿಸಿ ಸಂಸಾರಿಯುಂ ಪರಾಕ್ರಮಿಯುಮಪ್ಪ ನಿನಗೆ ದಿವ್ಯಮುನಿಗೆ ಪೇಳ್ವಂತೆ ನಿವೃತ್ತಿಧರ್ಮಮಂ ಪೇಳುತ್ತಿರ್ದಪನದನೇ ಕ್ಷತ್ರಧರ್ಮಮಂ ಪತ್ತುವಿಟ್ಟು ನೀಂ ನೆಗಳುತಿರ್ಪ ಕಾರಣಂ,

ಬಿಡದೀಗಳ್ ಮೃಗಯಾನಿಮಿತ್ತಮೆಸೆವೀ ಕಾಂತಾರದೊಳ್ ವ್ಯಾಧರಾ-
ಗದೆಯತ್ಯಾಗ್ರಹದಿಂ ತೊಲಲ್ವರಲೆದಿತ್ತೀಗಳ್ ಮೃಗವ್ರಾತಮಿಂ
ಪಡೆಮಾತೇಂ ಮದಗಂಧಸಿಂಧುರಘಟಾಚಕ್ರಂ ಮನೋರಾಗದಿಂ
ಕುಡಿಗುಂ ಸಂತತಮೀಗಳಂಜದೆ ಭವತ್ಕ್ರೀಡಾಸರೋವಾರಿಯಂ ೧೫೯

ಪಿರಿದಾಳಾಪದೊಳೇಂ ಮೃಗ
ಪರಿವೃಢ ನೀಂ ನಂಬು ನಂಬದಿರ್ ಕೈಕೊಳ್ ಮೇಣ್
ಪರಿಹರಿಸು ಗಂಧಸಿಂಧುರ
ವಿರೋಧಿ ನಿನ್ನಿಚ್ಛೆ ನಿನಗಮಂಜದೆ ನುಡಿವೆಂ ೧೬೦

ಹರಿಣೀನೇತ್ರೆಯನಬ್ಜಷಂಡಮುಖಿಯಂ ಬಿಂಬೋಷ್ಠಿಯಂ ಕುಂದ ಸೌಂ-
ದರದಂತೋಜ್ಜ್ವಲೆಯಂ ಸುರೂಪವತಿಯಂ ಶ್ಯಾಮಾಂಗಿಯಂ ಭೂರಿಭೂ-
ಧರ ತುಂಗಸ್ತನೆಯಂ ಮಯೂರಕಚಭಾರಾಕ್ರಾಂತೆಯಂ ದೇವ ಶಾ-
ಕ್ವರಚಕ್ರೇಶ್ವರನೀ ವನಪ್ರಮದೆಯಂ ಕೈಕೊಳ್ವುದೇಂ ಪೂಣ್ದನೇ ೧೬೧

ಶ್ಲೋ॥ ಯಸ್ಮಿನ್ನೇವಾಧಿಕಂ ಭಾರಮಾರೋಪಯತಿ ಪಾರ್ಥಿವಃ
ಸುತೇ ವಾ ತತ್ಕುಲೀನೇ ವಾ ಸ್ವಲಕ್ಷ್ಮೀಂ ಹರತೇ ತದಾ ॥೫೪॥

ಟೀ॥ ಅರಸಂ ತನ್ನ ಮಗನಲ್ಲಿಯಾದೊಡಂ ತನ್ನ ಕುಲದಲ್ಲಿಯಾದೊಡಂ ಆವನೋರ್ವನ ಮೇಲೆ ರಾಜ್ಯಭಾರಮಂ ಹೊರಿಸಿಯಿಹಂ ತಾನವನೈಶ್ವರ್ಯವನಪಹರಿಸಬೇಕಾಗಿ ಮಾಡಿದಪಂ ಮತ್ತಮದಲ್ಲದೆಯುಂ,

ಶ್ಲೋ॥ ಮೂಲಭೃತ್ಯೇ ಸಾಪರಾಧೇಪ್ಯಾಗತಂ ತು ನ ಮಾನಯೇತ್
ಪೂರ್ವಾಶ್ರಿತೇನ ರಾಜ್ಯಂ ಚ ಸಾಧ್ಯತೇ ನ ಪರೇಣ ಚ ॥೫೫॥

ಮಾಡಿ ಸಂಸಾರಿಯೂ ಪರಾಕ್ರಮಿಯೂ ಆದ ನಿಮಗೆ ದಿವ್ಯಮುನಿ ಹೇಳುವಂತೆ ವೈರಾಗ್ಯವನ್ನು ಬೋಧಿಸುತ್ತಿರುವನು. ೧೫೯. ಆದರಿಂದ ನೀವು ಕ್ಷಾತ್ರಧರ್ಮವನ್ನು ತ್ಯಜಿಸುವಂತಾಯಿತು. ಮದ್ದಾನೆಗಳ ಹಿಂಡು ನಿರ್ಭಯವಾಗಿ ನಿಮ್ಮ ಕ್ರೀಡಾಸರೋವರದ ನೀರನ್ನು ಕುಡಿಯುವಂತಾಯಿತು ! ೧೬೦. ಮೃಗಾಧಿಪ ! ಹೆಚ್ಚು ಮಾತಿನಿಂದ ಏನು ಪ್ರಯೋಜನ ? ನೀನು ನಂಬು, ಬಿಡು; ನಾನು ಹೇಳಿದ ವಿಚಾರವನ್ನು ಕೈಕೊಳ್ಳು, ಬಿಡು ಅದು ನಿನ್ನ ಇಷ್ಟ ; ನನಗೆನ್ನಿಸಿದುದನ್ನು ನಾನು ಅಂಜದೆ ನಿನಗೆ ತಿಳಿಸಿದೆ. ೧೬೧. ಜಿಂಕೆಗಳೆಂಬ ಕಣ್ಣುಗಳು, ತಾವರೆಗೊಳವೆಂಬ ಮುಖ, ಬಿಂಬಫಲದ ತುಟಿ, ಮಲ್ಲಿಗೆಯ ಸೌಂದರ್ಯಗಳಿರುವ ಶ್ಯಾಮಾಂಗಿಯಾದ, ನವಿಲುಗರಿಗಳ ಸಿರಿಮುಡಿಯುಳ್ಳ

ಟೀ॥ ಪಟಿಯನಾಗಿರ್ದವನ ಮೇಲಪರಾಧಮಾದೊಡಂ ಪೊಸತಾಗಿ ಬಂದಾತಂಗೆ ಸತ್ಕಾರಮಂ ಮಾಡಲಾಗದು : ತನ್ನ ಪೂರ್ವಾಶ್ರಿತನಲ್ಲದೆ ಮತ್ತೊರ್ವಂ ರಾಜ್ಯಮಂ ಸಾಧಿಸಲಱಿಯಂ, ಎಂಬ ನೀತಿಯುಂಟಪ್ಪುದಱಿಂದೀ ಸಂಜೀವಕನನಾಪ್ತನೆಂದು ಮಂತ್ರಿಯಂ ಮಾಡಿ ಕೊಂಡಾಡಿ ತೇಜವನಿತ್ತು ಮೂಲಬಲಮನೆಲ್ಲಮನವಜ್ಞೆಗೈದು ವಿರಕ್ತಪ್ರಕೃತಿಯುಮೇಕಾಕಿಯುಮಾದೆ. ಅದು ಕಾರಣದಿಂ ನಿನ್ನ ರಾಜ್ಯಕ್ಕಾತನೇ ನೇತೃವಾದನೆಂದು ನುಡಿದ ದವನಕನ ನಿಷ್ಠುರಾಲಾಪಂಗಳ್ಗೆ ಪಿಂಗಳಕಂ ಕರಂ ಮುಳಿದಿಂತೆಂದಂ :

ದವನಕ ನೀನೇನೆಂದೊಡ-
ಮವಶ್ಯಮಾಂ ಮುಳಿವುದಿಲ್ಲವಾ ಭದ್ರಮನಂ-
ಗೆ ವೃಷೋತ್ತಮಂಗೆ ಧರ್ಮೋ-
ಕ್ತಿವಿದಿತ ಸಂಜೀವಕಂಗೆ ನಿಷ್ಕಾರಣದಿಂ ೧೬೨

ಅದಱಿಂ ಸಂಜೀವಕನೆನ್ನನೇಗೆಯ್ದೊಡಮೊಳ್ಳಿತ್ತು, ನೀನುಸಿರದಿರೆಂಬುದುಂ ಮತ್ತಂ ದವನಕನಿಂತೆಂದಂ:

ಶ್ಲೋ॥ ಸ್ವಾಮಿಹಿತ ನಿಷ್ಠುರಾಣಾಂ ವಿಜ್ಞಾಪಯತಾಂ ಯಥೋಚಿತಂ ಕಾಲೇ
ಭೃತ್ಯಾನಾಂ ಯಸ್ತಸ್ಮಾನ್ ಮೃತ್ಯುರಪಿ ಶ್ಲಾಘನೀಯೋಽಸೌ ॥೫೬॥

ಟೀ॥ ಭೃತ್ಯರೊಳಗಾವನಾನೊರ್ವಂ ವೇಳೆಯಲ್ಲಿ ಯಥೋಚಿತವಾಗಿ ಆಳ್ದಂಗೆ ಹಿತಮಪ್ಪ ನಿಷ್ಠುರಮಂ ಬಿನ್ನಪಂಗೆಯ್ವುಪನಾ ಭೃತ್ಯನೊಡೆಯನಿಂ ಪೋಲ್ದಿಹಂ ಬಂದೊಡಂ ಕೊಂಡಾಡಬೇಕು, ಎಂಬುದುಪಱಿವಿಗೆ ಗುಣಮೆಂದು ಪೇಟ್ದ ನೀತಿಯುಂಟಪ್ಪುದಱಿಂ ನೀನೆನ್ನಂ ಏಗೆಯ್ದೊಡಮಕ್ಕುಂ. ಭವದೀಯ ರಾಜ್ಯಲಕ್ಷ್ಮೀ ಗರ್ವಪರ್ವತಾರೂಢನುಂ ಬಲಾಧಿಕನುಮಪ್ಪ ಸಂಜೀವಕನಂ ಕಿಡಿಸುವುದೇ ನಯಂ. ಪೂರ್ವೋಕ್ತಮಿಂತೆಂಬುದಲ್ತೆ ;

ಶ್ಲೋ॥ ವಿರುದ್ಧಸ್ಯ ಚ ಭೃತ್ಯಸ್ಯ ದಂತಸ್ಯ ಚಲಿತಸ್ಯ ಚ
ಅಮಾತ್ಯಸ್ಯ ಚ ದುಷ್ಟಸ್ಯ ಮೂಲಾದುದ್ಧರಣಂ ಸುಖಂ ॥೫೭॥

ಈ ವನಸ್ತ್ರೀಯನ್ನು ಆ ವೃಷಭನು ಅಪಹರಿಸದೆ ಬಿಡುವನೆ ? ಶ್ಲೋ॥ ಅಪರಾಧ ಮಾಡಿದ್ದರೂ ಹೊಸತಾಗಿ ಬಂದವನನ್ನು ಸತ್ಕರಿಸಬಾರದು. ಪೂರ್ವಾಶ್ರಿತನಲ್ಲದೆ ಮತ್ತೊಬ್ಬನು ರಾಜ್ಯವನ್ನು ಸಾಧಿಸಲರಿಯನು ಎಂಬ ನೀತಿಯುಂಟು. ಈ ಸಂಜೀವಕನನ್ನು ಆಪ್ತನೆಂದು ಮಂತ್ರಿಯನ್ನಾಗಿ ಮಾಡಿ ಕೊಂಡಾಡಿ ಮೂಲಬಲವೆಲ್ಲವನ್ನೂ ಅವಜ್ಞೆಗೈದು ವಿರಕ್ತನೂ ಏಕಾಕಿಯೂ ಆದೆ. ಅದರಿಂದಾಗಿ ನಿನ್ನ ರಾಜ್ಯಕ್ಕೆ ಅವನೇ ಒಡೆಯನೆನಿಸಿದನು. ಹೀಗೆ ನೀಡಿದ ದವನಕನ ನಿಷ್ಠುರಾಲಾಪಕ್ಕೆ ಪಿಂಗಳಕನು ಸಿಟ್ಟಾಗಿ ಹೀಗೆಂದನು : ೧೬೨. ದವನಕ ! ಆ ಭದ್ರಮನಸ್ಕನೂ, ವೃಷೋತ್ತಮನೂ, ಧರ್ಮಜ್ಞನೂ ಎನಿಸಿದ ಸಂಜೀವಕನ ಬಗೆಗೆ ನಿಷ್ಕಾರಣವಾಗಿ ನೀನು ಏನು ಹೇಳಿದರೂ ನಾನು ಸಿಟ್ಟಾಗುವವನಲ್ಲ. ವ॥ ಅದರಿಂದ ಸಂಜೀವಕನು ನನಗೆ ಏನು ಮಾಡಿದರೂ ಒಳ್ಳೆಯದಕ್ಕೆ; ನೀನು ಸುಮ್ಮನಿರು ! ಬಳಿಕ ದವನಕನು ಹೀಗೆ ಹೇಳಿದನು: ಶ್ಲೋ॥ ಯಾವ ಭೃತ್ಯನು ಸಕಾಲದಲ್ಲಿ ಯಥೋಚಿತವಾಗಿ ಒಡೆಯನಿಗೆ ಹಿತವಾದ ನಿಷ್ಠುರವನ್ನು ಬಿನ್ನಯಿಸುವನೋ ಅಂಥ ಸೇವಕ ತನ್ನ ಒಡೆಯನಿಂದ ಕೇಡುಂಟಾದರೂ ಕೊಂಡಾಡಬೇಕು ಎಂದು ನೀತಿಯುಂಟು. ಅದರಿಂದ ನೀನು ನನ್ನನ್ನು ಏನು ಮಾಡಿದರೂ ಅನುಭವಿಸುವೆ. ತಮ್ಮ ರಾಜ್ಯಾಶ್ರಯದ ಐಶ್ವರ್ಯವನ್ನು ಅನುಭವಿಸಿ

ಟೀ|| ಪಗೆಯಪ್ಪ ಭೃತ್ಯನಂ, ಅಲುಗಾಡುವ ಪಲ್ಲಂ, ದುಷ್ಟನಪ್ಪ ಮಂತ್ರಿಯಂ ಬೇರ್ವೆರಸಿ ಕೀಳ್ವುದೇ ಸುಖಂ, ಅದೆಂತೆನೆ :

ಶ್ಲೋ|| ಗಚ್ಛೇದ್ದೂರಮಪಿ ಯತ್ರಾನಂದಸೇ ಪೃಚ್ಛೇ ಬಾಲಮಪಿ ಬುದ್ಧಿವಿಸ್ತರಂ
ದೇಹಿದೇಹಮಪಿ ಪಾತ್ರ ಆಗತೇ ಛಿಂಧಿ ಬಾಹುಮಪಿ ದುಷ್ಟಮಾತ್ಮನಃ||೫೮||

ಟೀ|| ಎನಿತು ದೂರಮಾದೊಡಂ ತನಗೆ ಸುಖಮುಂಟಾದಲ್ಲಿಗೆ ಪೋಪುದು. ಚಿಕ್ಕಾತನಾದೊಡಂ ಬುದ್ಧಿವಂತನಲ್ಲಿ ಕಾರ್ಯಮಂ ಕೇಳ್ವುದು ; ಸತ್ಪಾತ್ರಕ್ಕೆ ಶರೀರವನಾದೊಡಂ ಕುಡುವುದು; ದೋಷಮುಳ್ಳೊಡೆ ತನ್ನ ತೋಳನ್ನಾದೊಡಂ ಕಡಿದುಬಿಡುವುದು, ಎಂಬುದುಂ ಅದೆಲ್ಲಮಂ ಕೇಳ್ದು ಪಿಂಗಳಕನಿಂತೆಂದಂ : ಸಂಜೀವಕನಪ್ಪೊಡೆನಗೆ ಪರಮವಿಶ್ವಾಸಿಯುಂ ಸದ್ಭೃತ್ಯನುಮಾಗಿರ್ಪನೆಂತು ತಪ್ಪುವನೆನೆ, ದವನಕನಿಂತೆಂದಂ : ಆವಂ ಭೃತ್ಯಾಭೃತ್ಯನೆಂಬುದನೇಕಾಂತಿಕಮಪ್ಪುದದೆಂತೆಂದೊಡೆ:

ಅರಸನೋಲೈಸುವರಾ-
ದರದಿಂ ಬಲಹೀನರಾಗಿ ಸೇವಕರೆಂಮುಂ
ವರರಾಜ್ಯಂ ಶ್ರೀ ಸಹಿತಂ
ದೊರಕಲ್ ಕೈಕೊಳ್ಳದಿರ್ಪರಾರೀ ಜಗದೊಳ್ ೧೬೩

ಅದಲ್ಲದೆಯುಂ, ಶ್ಲೋ|| ನ ಚಾಸ್ತಿ ಪುರುಷೋ ರಾಜ್ಞಾಂ ಯೋ ನ ಕಾಮಯತೇ ಶ್ರಿಯಂ
ಅಶಕ್ತಾಶ್ರಿಯಮಾನೇತುಂ ನರೇಂದ್ರಂ ಪರ್ಯುಪಾಸತೇ ||೫೯||

ಟೀ|| ಅರಸುಗಳ ಐಶ್ವರ್ಯಮಂ ಬಯಸದಿರ್ಪ ಮನುಷ್ಯರೆಂದುಮಿಲ್ಲ, ಅಶಕ್ತರಪ್ಪವರ್ ಬಹಳೈಶ್ವರ್ಯಮಂ ಪಡೆಯಬೇಕೆಂದರಸರನೋಲೈಸುವರ್,

ಶ್ಲೋ|| ಅನೇಕ ದೋಷದುಷ್ಟೋಽಪಿ ಕಾಯಃ ಕಸ್ಯ ನ ವಲ್ಲಭಃ
ಕುರ್ವನ್ನಪಿ ವ್ಯಲೀಕಾನಿ ಯಃ ಪ್ರಿಯಃ ಪ್ರಿಯ ಏವ ಸಃ ||೬೦||

ಗರ್ವಪರ್ವತಾರೂಢನೂ ಬಲಾಧಿಕನೂ ಆದ ಸಂಜೀವಕನನ್ನು ಕೆಡಿಸುವುದೇ ನೀತಿ. ಶ್ಲೋ|| ಹಗೆಯಾದ ಭೃತ್ಯನನ್ನೂ ಅಲುಗಾಡುವ ಹಲ್ಲನ್ನೂ ದುಷ್ಟನಾದ ಮಂತ್ರಿಯನ್ನೂ ಬೇರುಸಹಿತವಾಗಿ ಕೀಳುವುದೇ ಸುಖಕರ. ಶ್ಲೋ|| ಎಷ್ಟೇ ದೂರವಿದ್ದರೂ ತನಗೆ ಸುಖವೆನಿಸಿದಲ್ಲಿಗೆ ಹೋಗುವುದು ; ಚಿಕ್ಕವನಾದರೂ ಬುದ್ಧಿವಂತನಲ್ಲಿ ಆಲೋಚನೆಯನ್ನು ಕೇಳುವುದು ; ಸತ್ಪಾತ್ರಕ್ಕೆ ತನ್ನ ದೇಹವನ್ನಾದರೂ ಕೊಡುವುದು ; ದೋಷಯುಕ್ತವಾಗಿದ್ದರೆ ತನ್ನ ತೋಳನ್ನಾದರೂ ಕಡಿದುಬಿಡುವುದು. ಅದೆಲ್ಲವನ್ನು ಕೇಳಿ ಪಿಂಗಳಕನು ಹೀಗೆಂದನು: ಸಂಜೀವಕನು ನನಗೆ ಪರಮ ವಿಶ್ವಾಸಿಯೂ, ಸದ್ಭೃತ್ಯನೂ ಎನ್ನಿಸಿಕೊಂಡಿದ್ದಾನೆ. ಅಂಥವನು ನನಗೆ ಹೇಗೆ ತಪ್ಪುವನು? ಅದಕ್ಕೆ ದವನಕನು ಹೀಗೆ ಹೇಳಿದನು : ೧೬೩. ಸೇವಕರು ಬಲಹೀನರಾದುದರಿಂದಲೇ ಅರಸರನ್ನು ಓಲೈಸುವರು. ಶ್ರೇಷ್ಠವಾದ ರಾಜ್ಯವು ಐಶ್ವರ್ಯಸಹಿತ ಸಿಕ್ಕುವುದಾದರೆ ಜಗತ್ತಿನಲ್ಲಿ ಯಾರು ತಾನೇ ಅದನ್ನು ಬಯಸಲಿಕ್ಕಿಲ್ಲ ! ಅರಸರ ಐಶ್ವರ್ಯವನ್ನು ಬಯಸದಿರುವ ಮನುಷ್ಯರಿಲ್ಲ, ಶ್ಲೋ|| ಅಶಕ್ತರಾದವರು ಬಹಳ ಐಶ್ವರ್ಯವನ್ನು ಪಡೆಯಬೇಕೆಂದು ಅರಸರನ್ನು ಓಲೈಸುವರು. ಶ್ಲೋ|| ಅನೇಕ ದೋಷಗಳಿಂದ ಕೆಟ್ಟುಹೋಗಿದ್ದರೂ ಶರೀರವು ಯಾರಿಗೆ ತಾನೇ ಪ್ರಿಯವಾಗಿಲ್ಲ?

ಟೀ|| ಅನೇಕ ದೋಷದಿಂ ದುಷ್ಟಮಪ್ಪುದಾದೊಡಂ ಶರೀರವಾರ್ಗೆ ಪ್ರಿಯವಲ್ಲ? ಅವಿವೇಕಿಗಳ್ ಶತ್ರುಕಪಟದಿಂ ಮಾಳ್ಪ ಹಿತಮಂ ಕಂಡು ಪ್ರಿಯಮೆಂದೇ ಬಗೆವರ್

ಪ್ರಿಯನಾದನತ್ಯವಶ್ಯಂ
ಪ್ರಿಯನಕ್ಕುಂ ದುಷ್ಟನಾಗಿಯುಂ ಸಲೆ ದುಷ್ಟಾ-
ಶ್ರಯಮಾಗಿಯುಂ ಶರೀರಂ
ಪ್ರಿಯಮಾದುದು ಸಕಲ ವಸುಮತೀತಳಕೆಲ್ಲಂ ೧೬೪

ಅದಱಿಂ ಸಂಜೀವಕಂಗೆ ನೀಂ ಕೂರ್ಪೆಯಪ್ಪ ಕಾರಣದಿಂದಾತನೆನಿತು ಪೊಲ್ಲಮೆಗೆಯ್ವನಾದೊಡ ಮೊಳ್ಳಿದನೆಂದು ನುಡಿದಪೆ. ಇದು ನಿನ್ನ ಅಜ್ಞಾನಮಲ್ಲದೆ ಪರಮಜ್ಞಾನಮಲ್ಲೆಂದು ಮತ್ತಮಿಂತೆಂದಂ:

ಅನುಪಮಬಲಂ ಮಹಾಕಾ-
ಯನೆನಗೆ ಪಿರಿದುಂ ಸಹಾಯನೆಂದೇನಾನುಂ
ಮನದೊಳ್ ನೆನೆವೈ ವೃಷಭೇಂ-
ದ್ರನನದು ಕೂಡದು ಮೃಗೇಂದ್ರ ನಿನಗೀ ಪದದೊಳ್ ೧೬೫

ಅದೆಂತೆನೆ, ಶ್ಲೋ|| ಕಿಂ ಗಜೇನ ಪ್ರಮತ್ತೇನ ಕಿಂ ದುಷ್ಟೇನ ಚ ಮಂತ್ರಿಣಾ
ಕಿಂ ಧನೇನಾತಿದುಃಖೇನ ಕಿಂ ಮಿತ್ರೇಣ ಶಠೇನ ಚ ||೬೧||

ಟೀ|| ಸೊರ್ಕಿದಾನೆಯಿಂ, ದುಷ್ಟನಾದ ಮಂತ್ರಿಯಿಂ, ಹಿರಿದು ದುಃಖವಹ ಧನದಿಂ, ಕಪಟಯಾದ ಮಿತ್ರನಿಂದೇಂ ಪ್ರಯೋಜನಂ, ಅದುಕಾರಣದಿಂ ಸಂಜೀವಕನಪ್ಪೊಡೆ ನಿಮ್ಮಡಿಗೊಂದು ಪ್ರಯೋಜನ ಮಾತ್ರನಲ್ಲಂ, ಎನ್ನ ಬಿನ್ನಪವನವಧರಿಸುವಿರಪ್ಪೊಡೆ ಪರಿಹರಿಸುವುದೆ ಕಾರ್ಯಮದಲ್ಲದಾಗಳ್ ಪಿರಿದುಮಪಾಯಮಕ್ಕುಮದೆಂತೆನೆ

ಶ್ಲೋ|| ಸತಾಂ ಮತಿಮತಿಕ್ರಮ್ಯ ಯೋ ಸತಾಂ ವರ್ತತೇ ವಶೇ
ಅಚಿರಾತ್ ಸಸ್ಥಿತಸ್ಥಾನೇ ದ್ವಿಷತಾಂ ವರ್ತತೇ ವಶೇ ||೬೨||

ಅವಿವೇಕಿಗಳು ಶತ್ರುವು ಕಪಟಬುದ್ಧಿಯಿಂದ ಮಾಡುವ ಹಿತವನ್ನು ಕಂಡು ಪ್ರಿಯವೆಂದೇ ನಂಬುವರು. ಅದರಿಂದ ಸಂಜೀವಕನ ಬಗೆಗೆ ನಿನಗೆ ವಿಶ್ವಾಸವಿರುವುದರಿಂದ ಆತನು ಎಂಥ ನೀಚಕಾರ್ಯ ಮಾಡಿದರೂ ಅವನು ಒಳ್ಳೆಯವನೆಂದು ನೀನು ನುಡಿಯುತ್ತಿರುವೆ. ಇದು ನಿನ್ನ ಅಜ್ಞಾನವೇ ಹೊರತು ಪರಮಜ್ಞಾನವಲ್ಲ. ೧೬೫. ಅನುಪಮಬಲನೆಂದೂ ಮಹಾಕಾಯನೆಂದೂ ಅತ್ಯಂತಸಹಾಯಕನೆಂದೂ ನಿನ್ನ ಮನಸ್ಸಿನಲ್ಲಿ ವೃಷಭೇಂದ್ರನ ಬಗೆಗೆ ವಿಶ್ವಾಸವಿಟ್ಟುಕೊಂಡಿರಬಹುದು ಹಾಗಿದ್ದಲ್ಲಿ ಅದು ಕೂಡದು. ಶ್ಲೋ|| ಸೊಕ್ಕಿದಾನೆಯಿಂದಲೂ ದುಷ್ಟಮಂತ್ರಿಯಿಂದಲೂ ಹಿರಿದಾದ ದುಃಖವನ್ನುಂಟು ಮಾಡುವ ಧನದಿಂದಲೂ ಕಪಟಮಿತ್ರನಿಂದಲೂ ಏನು ಪ್ರಯೋಜನ? ಅದರಿಂದ ಸಂಜೀವಕನು ಮಹಾಪ್ರಭುಗಳಿಗೆ ಒಂದು ಪ್ರಯೋಜನಕ್ಕೂ ಬರುವವನಲ್ಲ, ನನ್ನ ಮಾತನ್ನು ಕೇಳುವಿರಾದರೆ ಅವನನ್ನು ನಿವಾರಿಸುವುದೇ ಸೂಕ್ತ ; ಅಲ್ಲದಿದ್ದರೆ ದೊಡ್ಡ ಅಪಾಯವುಂಟು.

ಟೀ|| ಆವನೊರ್ವಂ ಸಜ್ಜನರ ಬುದ್ಧಿಯನತಿಕ್ರಮಿಸಿ ದುರ್ಜನರ ವಶದೊಳಿರ್ದಪಂ ಆತಂ ತಾನಿರ್ದ ಠಾವಿನಲ್ಲೆ ಹಗೆವರ್ಗೆ ಸಾಧ್ಯವಹಂ. ಅದಲ್ಲದೆಯುಂ,

ಶ್ಲೋ|| ಅಪ್ರಿಯಸ್ಯಾಪಿ ವಚಸಃ ಪರಿಣಾಮಾವಿರೋಧಿನಃ
ವಕ್ತಾ ಶ್ರೋತಾ ಚ ಯತ್ರಾಸ್ತಿ ರಮಂತೇ ತತ್ರ ಸಂಪದಃ ||೬೩||

ಟೀ|| ಅಪ್ರಿಯವಾದೊಡಂ ಮೇಲೆ ಹಿತಕರಮಪ್ಪ ನುಡಿಯಂ ನುಡಿಯಬಲ್ಲವನುಂ ನುಡಿದುದನಱಿದು ಕೇಳಬಲ್ಲವನುಮೆಲ್ಲಿಯುಂಟು ಅಲ್ಲಿ ಸಂಪತ್ತುಮಪ್ಪುವು.

ಮತ್ತಮಲ್ಲದೆಯುಂ,

ಶ್ಲೋ|| ಸುಲಭಾಃ ಪುರುಷಾ ರಾಜ್ಞಃ ಸತತಂ ಪ್ರಿಯವಾದಿನಃ
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ||೬೪||

ಟೀ|| ಅರಸಿಂಗೆ ಎಲ್ಲಾ ಹೊತ್ತು ಹಿತವಂ ನುಡಿವ ಮನುಷ್ಯರ್ ಹಲವರುಂಟು: ಅಪ್ರಿಯವಾಗಿಯುಂ ಹಿತವಂ ನುಡಿವವನುಂ ಕೇಳಬಲ್ಲವನುಂ ದುರ್ಲಭಂ - ಎಂಬೀ ರಾಜನೀತಿಯ ಕ್ರಮಂಗಳನತಿಕ್ರಮಿಸಿ ನಡೆವುದು ಉಚಿತಮಲ್ಲೆಂದು ನುಡಿದ ದವನಕನ ಮಾತನಾಕರ್ಣಿಸಿ ಪಿಂಗಳಕನಿಂತೆಂದಂ :

ಶರಣಾಗತನೆಂದತ್ಯಾ-
ದರದಿಂ ಕೈ ಕೊಂಡು ಮಗುಳ್ದು ಸಂಜೀವಕನಂ
ಪರಮಸ್ನೇಹಿತನಂ ಪರಿ-
ಹರಿಸುವನಲ್ಲೆಂ ಸಮುಸ್ತಗುಣಸಂಯುತನಂ ೧೬೬

ಅಂತುಮಲ್ಲದಾತಂಗಾನೇತಱೊಳಂ ಪೊಲ್ಲೆನಲ್ಲೆಂ, ಏನಾನುಂ ನಿರ್ಮಳಧರ್ಮಮಾರ್ಗಾನುವರ್ತಿಯಪ್ಪುದಱಿಂದೆನ್ನಂ ತನ್ನ ಸಹಧರ್ಮಿಯಪ್ಪಂತು ಧರ್ಮೋಪದೇಶಂಗೆಯ್ದನಪ್ಪುದಱಿಂ ಗುರುಸ್ಥಾನನುಂ ಶರಣಾಗತನಪ್ಪುದಱಿಂ ಪುತ್ರಸ್ಥಾನನುಮಾಗಿರ್ಪಂ. ಅಂತಪ್ಪಾತಂಗೆಂತುಂ ತಪ್ಪುವನಲ್ಲೆಂ.

ಶ್ಲೋ|| ಕ್ಷುದ್ರೇಽಪಿ ನೂನಂ ಶರಣಂ ಪ್ರಪನ್ನೇ
ಮಮತ್ವಮುಚ್ಚೈಃಶ್ಶಿರಸಾಂ ಸತೀವ ||೬೫||

ಶ್ಲೋ|| ಯಾವನು ಸಜ್ಜನರ ಬುದ್ಧಿಯನ್ನು ಅತಿಕ್ರಮಿಸಿ ದುರ್ಜನರ ವಶದಲ್ಲಿರುವನೋ ಅವನು ತಾನಿದ್ದ ಸ್ಥಳದಲ್ಲಿಯೇ ಹಗೆಯ ವಶವಾಗುವನು. ಶ್ಲೋ|| ಅಪ್ರಿಯವಾದರೂ ಮುಂದೆ ಹಿತಕರವಾದ ನುಡಿಯನ್ನು ಹೇಳಬಲ್ಲವನೂ ಹೇಳಿದುದನ್ನು ತಿಳಿದು ಕೇಳಬಲ್ಲವನೂ ಇರುವಲ್ಲಿ ಸಂಪತ್ತು ಇರುವುದು. ಅರಸನಿಗೆ ಸದಾಕಾಲವೂ ಹಿತವಾದುದನ್ನು ನುಡಿಯಬಲ್ಲ, ಮನುಷ್ಯರು ಅನೇಕರಿರುವರು. ಅಪ್ರಿಯವಾದರೂ ಹಿತವನ್ನು ಹೇಳುವವನೂ ಕೇಳಬಲ್ಲವನೂ ಸಿಕ್ಕುವುದು ದುರ್ಲಭ. ಈ ರಾಜನೀತಿಯ ಕ್ರಮಗಳನ್ನು ಅತಿಕ್ರಮಿಸಿ ನಡೆಯುವುದು ಉಚಿತವಲ್ಲ ಎಂದು ನುಡಿದ ದವನಕನ ಮಾತನ್ನು ಕೇಳಿ ಪಿಂಗಳಕನು ಹೀಗೆಂದನು : ೧೬೬. ಶರಣಾಗತನೆಂದು ಅತ್ಯಾದರದಿಂದ ಸಂಜೀವಕನನ್ನು ಸ್ವೀಕರಿಸಿ ಈಗ ಅಂಥ ಪರಮಸ್ನೇಹಿತನನ್ನು ನಾನು ಬಿಡಲಾರೆ. ವ|| ಅಲ್ಲದೆ, ಆತನ ಬಗೆಗೆ ನಾನು ಇಷ್ಟರವರೆಗೆ ಯಾವುದರಲ್ಲೂ ದುಷ್ಟನಾಗಿ ವರ್ತಿಸಲಿಲ್ಲ. ಏನಾದರೂ ಸದ್ಧರ್ಮಮಾರ್ಗಾನುವರ್ತಿ ಯಾಗುವುದಾದಲ್ಲಿ ತನ್ನ ಸಹಧರ್ಮಿಯಾಗುವಂತೆ ಧರ್ಮೋಪದೇಶ ಮಾಡಿದುದರಿಂದ ಗುರುಸ್ಥಾನನೂ ಶರಣಾಗತನಾದುದರಿಂದ

ಟೀ॥ ದುಷ್ಟನಾದೊಡಂ ಶರಣ್ಬೊಕ್ಕನಲ್ಲಿ ಮಹಾಪುರುಷರ್ಗೆ ಪಿರಿದು ಸ್ನೇಹಮುಂಟಾಗಿಹುದು.

ಸುರಪತಿ ಗೃಧ್ರನಾಗಿ ತಗುಳಲ್ ಮಱೆವೊಕ್ಕ ಕಪೋತನಂ ಕ್ಷಿತೀ-
ಶ್ವರ ಕುಲಚಕ್ರವರ್ತಿ ಶಿಬಿಯೆಂಬ ನೃಪೋತ್ತಮನಾತ್ಮಮಾಂಸಮಂ
ಸುರಪತಿಗಿತ್ತು ರಕ್ಷಿಸಿ ಪಯೋಧಿಪರೀತಧರಿತ್ರಿ ಬಣ್ಣಿಸು-
ತ್ತಿರೆ ತಳೆದಂ ಶರಶ್ಲಮಯ ಚಂದ್ರಕರೋಜ್ಜ್ವಲ ರುಂದ್ರಕೀರ್ತಿಯಂ ೧೬೭

ಆತತಕೀರ್ತಿ ರಾಮನೃಪನಾತ್ಮಕುಲಾಂಗನೆಯಂ ಮನೋಜ್ಞೆಯಂ
ಸೀತೆಯನುಯ್ದ ರಾವಣನ ತಮ್ಮನನಾತನ ಪಕ್ಷವೆನ್ನದೀ
ಭೂತಳವಾಸಿಗಳ್ ಪೊಗಟ್ ರಕ್ಷಿಸಿ ತುಂಗನಿಜಪ್ರತಾಪಮಂ
ಸೇತುವರಂ ನಿಮಿರ್ಚಿ ತಳೆದಂ ಜಸಮಂ ರಘುವಂಶಮಂಡನಂ ೧೬೮

ಕುಲಿಶಾಸ್ತ್ರಭೀತಿಯಿಂ ಬರೆ
ಜಲನಿಧಿ ಮುಂ ಮಱೆಗೆ ವಂದ ಕುಲಪರ್ವತ ಸಂ-
ಕುಲಮಂ ರಕ್ಷಿಸಿ ತಳೆದ-
ತ್ತಲಘುತರಶ್ರೀಯನಸಮಗಂಭೀರತೆಯಂ ೧೬೯

ಎಂದು ನುಡಿದ ಪಿಂಗಳಕಂಗೆ ದವನಕನಿಂತೆಂದಂ : ದೇವಾ! ಸಂಜೀವಕಂ ನಿಮ್ಮಧಿಯಾಧಿಪತ್ಯಮಂ ಕೊಳಲ್ ಬಂದು ಮುನ್ನಮೆ ತನ್ನ ಗರ್ಜನೆಗೆ ಭಯಂಬಟ್ಟು ನೆಲನಂ ಪತ್ತುವಿಟ್ಟು ಪೋಪಂತು ಮಾಟ್ಪೆನೆಂದು ಸಮುಕಟ್ಟಿಕೊಂಡು ಬಂದಿರ್ದಂ. ಅದಲ್ಲದೆಯುಂ ಅದು ಕಡೆ ಸಲ್ಲದಿರ್ದೊಡೆ ಭಯಸ್ಥನಾಗಿ ಬಂದು ನಿಮಗೆ ಶರಣಾಗತನಾದಂ ಬಕವೇಷಿಯುಂ ಬದ್ಧದ್ವೇಷಿಯುಂ ಬುದ್ಧಿವಂತನುಮಪ್ಪುದತೆಂ,

ಪುತ್ರಸ್ಥಾನನೂ ಆಗಿರುವನು. ಅಂಥವನಿಗೆ ಏನಾದರೂ ನಾನು ತಪ್ಪಲಿಕ್ಕಿಲ್ಲ. ಶ್ಲೋ॥ ದುಷ್ಟನಾದರೂ ಶರಣುಬಂದವನಲ್ಲಿ ಮಹಾಪುರುಷರಿಗೆ ಹಿರಿಯ ಸ್ನೇಹವುಂಟಾಗುವುದು. ೧೬೭. ಹಿಂದೆ ದೇವೇಂದ್ರನು ಗೃಧ್ರವೇಷದಿಂದ ಬಂದಾಗ ಮರೆಹೊಕ್ಕ ಪಾರಿವಾಳವನ್ನು ರಕ್ಷಿಸಲು ಶಿಬಿಚಕ್ರವರ್ತಿಯು ತನ್ನ ಮಾಂಸವನ್ನು ದೇವೇಂದ್ರನಿಗೆ ಕೊಟ್ಟು ಮೂರು ಲೋಕವೂ ಅವನ ದಾನಗುಣವನ್ನು ಬಣ್ಣಿಸುವಂತಾಯಿತು. ೧೬೮. ಶ್ರೀರಾಮನು ತನ್ನ ಸತಿಯಾದ ಸೀತೆಯನ್ನು ರಾವಣ ಕದ್ದೊಯ್ದರೂ ಅವನ ತಮ್ಮ ವಿಭೀಷಣನು ಶ್ರೀರಾಮನ ಮರೆಹೋಗಲು ಅವನನ್ನು ರಕ್ಷಿಸಿ ರಘುವಂಶಮಂಡನನೆನಿಸಿದನು. ೧೬೯. ದೇವೇಂದ್ರನ ವಜ್ರಾಯುಧದ ಹತಿಯನ್ನು ತಪ್ಪಿಸಿಕೊಳ್ಳಲು ತನ್ನ ಆಶ್ರಯಕ್ಕೆ ಬಂದ ಕುಲಪರ್ವತಗಳನ್ನು ರಕ್ಷಿಸಿ ಜಲನಿಧಿಯು ತನ್ನ ಅಸಮಗಂಭೀರತೆಯನ್ನು ಮೆರೆಯಿತು. ವ॥ ಈ ರೀತಿ ಹೇಳಿದ ಪಿಂಗಳಕನಿಗೆ ದವನಕನು ಹೀಗೆ ನುಡಿದನು : ದೇವಾ ! ಸಂಜೀವಕನು ನಿಮ್ಮ ಆಧಿಪತ್ಯವನ್ನು ವಶಪಡಿಸಿಕೊಳ್ಳಲು ಬಂದು ಮೊದಲೇ ತನ್ನೊಂದು ಗರ್ಜನೆಗೆ ಭಯಪಟ್ಟು ಈ ನೆಲವನ್ನು ಬಿಟ್ಟು ಹೋಗುವಂತೆ ಮಾಡುವೆನೆಂದು ಸ್ಪರ್ಧೆಯಿಂದ ಇಲ್ಲಿಗೆ ಬಂದಿರುವನು. ಅದಾಗದಿರುವುದರಿಂದ ಭಯದಿಂದ ನಿಮಗೆ ಶರಣಾಗತನಾದನು. ಅಲ್ಲದೆ ಅವನು

ಶ್ಲೋ॥ ಸ್ವಾರ್ಥಮುದ್ಧರತೇ ಪ್ರಾಜ್ಞಃ ಸ್ವಾರ್ಥಭ್ರಂಶೋ ಹಿ ಮೂರ್ಖತಾ ॥೬೭॥

ಟೀ॥ ಬುದ್ಧಿವಂತನಪ್ಪುದಱಿಂ ತನ್ನ ಕಾರ್ಯಮನೆ ಮಾಡಿಕೊಳ್ವುದು; ತನ್ನ ಕಾರ್ಯಮಂ ಕೆಡಿಸುವುದೆ ಮೂರ್ಖತೆ, ಅದುಕಾರಣಂ ತನ್ನ ಕಾರ್ಯಮಪ್ಪನ್ನೆವರಮಾತಂ,

ಶ್ಲೋ॥ ಬಹಿಸ್ಸರ್ವಾಕಾರಪ್ರವಣ ರಮಣೀಯಂ ವ್ಯವಹರನ್
ಪರಾನೂಹ್ಯಸ್ಥಾನಾನ್ಯಪಿ ತನುತರಾಣಿ ಸ್ಥಗಯತಿ
ಜಗದ್ವಿದ್ವಾನೇವಂ ನಿಪುಣಮತಿಸಂಧಾಯ ಕಪಟೈಃ
ತಟಸ್ಥ ಸ್ವಾನರ್ಥಾನ್ ಘಟಯತಿ ಚ ಮೌನಂ ಚ ಭಜತೇ ॥೬೮॥

ಟೀ॥ ಬಹಿರಾಕಾರಮೆಲ್ಲಂ ಚೆಲ್ವಾಗಿರ್ಪಂತು ವ್ಯವಹರಿಸುವಂ; ಪರರ ದೆಸೆಯಿಂ ತನ್ನ ಮರ್ಮಸ್ಥಾನಂಗಳನತ್ಯಂತ ಸೂಕ್ಷ್ಮಮಾದೊಡಂ ಮಱಸುವಂ ಪ್ರೌಢತರಬುದ್ಧಿಯನುಂಟು ಮಾಡಿ ನಿರ್ಮಾಹೋಪಾಯಂಗಳಿಂ ತಟಸ್ಥನಾಗಿ ತನಗೆ ಪ್ರಯೋಜನಮಪ್ಪುದಂ ಮಾಡಿಕೊಳುತ್ತುಂ ನುಡಿಯದಿರ್ಪಂ ಎಂಬ ನೀತಿಯೊಳಾತಂ ಪರಿಣತನಪ್ಪುದಱಿಂ ತನ್ನ ಮಾಳ್ಪ ಕಜ್ಜಮನೆನ್ನರುಮಱಿಯದಂತು ನೆಗಳ್ವಂ. ಹಾವು ಹಾವಿನ ಹಜ್ಜೆಯನಱಿವಂತೆಮ್ಮಂದಿಗರ್ಗಲ್ಲದಾತನಭಿಪ್ರಾಯಮಂ ಪೆಱರ್ಗಱಿಯಲ್ ಬಾರದು. ಆ ಧೂರ್ತಂ ಸ್ವಾರ್ಥಸಿದ್ಧಿಯಪ್ಪನ್ನೆವರಮಿಂತಿರ್ದಪನಲ್ಲದೆ ತನ್ನ ದುರ್ಜನತ್ವಮನೆಂತುಂ ಬಿಡಂ ಅದೆಂತೆನೆ :

ಶ್ಲೋ॥ ದುರ್ಜನಃ ಪ್ರಕೃತಿಂ ಯಾತಿ ಸೇವ್ಯಮಾನೋಽಪಿ ಯತ್ನತಃ
ಸ್ವೇದನಾಭ್ಯಂಜನೋಪಾಯೈಃ ಶ್ವಪುಚ್ಛಮಿವ ನಾಮಿತಂ ॥೬೯॥

ಟೀ॥ ದುರ್ಜನಸ್ವಭಾವಮಂ ಕಂಡು ಯತ್ನದಿಂ ನಡೆಸುವೊಡಂ ನೈಜಗುಣಂ ಬಿಡದು. ಅದು ಎಹಗೆಂದೊಡೆ ನಾಯಬಾಲಮಂ ಕಾಸಿ ತಿರ್ದಿದೊಡಂ ಕೊಂಕು ಮಾಣದಹಗೆ- ಎಂದು ನುಡಿದ ಮೃಗಧೂರ್ತಕನ ನುಡಿಯಂ ಪಿಂಗಳಕಂ ಕೇಳ್ದು; ಈ ಪಾಪಿಗಾ ಪಶುವಿನ ಮೇಲೆ

ಬಕವೇಷಿಯೂ ಬದ್ಧ ದ್ವೇಷಿಯೂ ಬುದ್ಧಿವಂತನೂ ಆಗಿರುವುದರಿಂದ ಶ್ಲೋ॥ ಬುದ್ಧಿವಂತನಾದವನು ತನ್ನ ಕಾರ್ಯವನ್ನು ಮಾಡಿಕೊಳ್ಳತಕ್ಕದ್ದು. ತನ್ನ ಕಾರ್ಯವನ್ನು ಕೆಡಿಸಿಕೊಳ್ಳುವುದೇ ಮೂರ್ಖತೆ. ಆದರಿಂದ ತನ್ನ ಕಾರ್ಯವಾಗುವವರೆಗೆ ಆತನು ಬಾಹ್ಯಕಾರವೆಲ್ಲ ಚೆನ್ನಾಗಿರುವಂತೆ ವ್ಯವಹರಿಸುವನು; ಪರರಿಗೆ ತನ್ನ ಮರ್ಮಸ್ಥಾನಗಳನ್ನು ತೋರಿಸುವುದಿಲ್ಲ. ಪ್ರೌಢಬುದ್ಧಿಯಿಂದ ಉಪಾಯಗಳನ್ನೊಡ್ಡಿ ತಟಸ್ಥನಾಗಿದ್ದು ತನಗೆ ಪ್ರಯೋಜನವಾದುದನ್ನು ಮಾಡಿಕೊಳ್ಳುತ್ತ ಮೌನವಾಗಿರುವನು. ಈ ನೀತಿಯಲ್ಲಿ ಸಂಜೀವಕನು ನಿಪುಣನಾದುದರಿಂದ ತಾನು ಮಾಡುವ ಕಾರ್ಯವನ್ನು ಯಾರಿಗೂ ತಿಳಿಯದಂತೆ ಮಾಡುವನು. ಹಾವು ಹಾವಿನ ಹೆಜ್ಜೆಯನ್ನು ಅರಿಯುವಂತೆ ನಮ್ಮವರಿಗಲ್ಲದೆ ಆವನ ವಿಚಾರವನ್ನು ಬೇರೆಯವರು ಅರಿಯುವುದು ಅಸಾಧ್ಯ. ಆ ಧೂರ್ತನು ಸ್ವಾರ್ಥಸಿದ್ಧಿಯಾಗುವವರೆಗೆ ಹೀಗಿದ್ದು ತನ್ನ ದುರ್ಜನತ್ವವನ್ನು ಎಂದಿಗೂ ಬಿಡನು. ಶ್ಲೋ॥ ದುರ್ಜನ ಸ್ವಭಾವವನ್ನು ಕಂಡು ಯತ್ನದಿಂದ ನಡೆಯಿಸಿದರೂ ನೈಜಗುಣ ಬಿಡದು. ನಾಯಬಾಲವನ್ನು ಕಾಸಿ ತಿದ್ದಿದರೂ ಅದರ ಡೊಂಕು ಪರಿಹರಿಸದು. ಮೃಗಧೂರ್ತನ ಮಾತನ್ನು ಪಿಂಗಳಕನು ಕೇಳಿ ಈ ಪಾಪಿಗೆ ಆ ಪಶುವಿನ ಮೇಲಿನ ಕೋಪ ಹೋಗಿಲ್ಲ ;

ಕೋಪಂ ಪೋದುದಿಲ್ಲೇಗೆಯ್ವೆನೆಂದು ಬೆಱಗಾಗಿ ಮಱುಮಾತಂ ಕುಡಲಱಿಯದಿರ್ದನಂ ಕಂಡು ದವನಕನಿಂತೆಂದಂ : ದೇವಾ! ನಿಮ್ಮ ಮುನ್ನಿನ ಭವದ ಅಗಣ್ಯಪುಣ್ಯೋದಯದಿಂ ಮೃಗಾಧಿರಾಜನಾಗಿ ಪುಟ್ಟಿದೆ : ಎಮ್ಮಂತಪ್ಪ ಪೞೆಯರುಮನಾಪ್ತರುಮನವಜ್ಞೆಗೆಯ್ದೆಲ್ಲಿಯಾನುಂ ಬಂದ ಚಲ್ಲವೊತ್ತನ ಬೆಲ್ಲವಾತುಗಳಂ ಕೈಕೊಂಡು ರಾಜ್ಯಮಂ ಕಿಡಿಸಲ್ಬಗೆದೆಯಪ್ಪೊಡದನುಪೇಕ್ಷಿಸಲ್ಬಾರದೆಂತೆನೆ,

ಶ್ಲೋ॥ ನೃಪಃ ಕಾಮಾಸಕ್ತೋ ನ ಗಣಯತಿ ಕಾರ್ಯಂ ನ ಚ ಹಿತಂ
ಯಥೇಷ್ಟಂ ಸ್ವಚ್ಛಂದೋ ವಿಹರತಿ ಚ ಮತ್ತೋ ಗಜ ಇವ ॥೬೮॥

ತದಾಧ್ಮಾತಃ ಪಶ್ಚಾತ್ಪತತಿ ಸ ಯದಾ ಶೋಕ ಗಹನೇ
ತದಾಮಾತ್ಯೇ ದೋಷಾನ್ ಕ್ಷಿಪತಿ ನ ನಿಜಂ ವೇತ್ತ್ಯವಿನಯಂ ॥೬೯॥

ಟೀ॥ ಒಂದಿಚ್ಛೆಯಲ್ಲಿ ಆಸಕ್ತನಾಗಿರ್ದರಸು ತನಗೆ ಕಾರ್ಯಮಂ ತನಗೆ ಹಿತವಪ್ಪುದಂ ಬಗೆಯಂ, ಮದಸೊರ್ಕಿದಾನೆಯಂತೆ ತನ್ನಿಚ್ಛೆಯಿಂ ಬೇೞ್ಪನಿತು ವಿಸಟಂಬರಿವಂ. ಆವುರ್ಬಿಂದೊಂದುಬಾರಿ ದುಃಖಂಬಡೆವಂ, ಆ ವೇಳೆಯಲ್ಲಿ ಸ್ವಭಾವವಿನಯಮಂ ಬಿಟ್ಟು ಪ್ರಧಾನನ ಮೇಲೆ ದೋಷಂಗಳನಾರೋಪಿಸುವಂ, ಮತ್ತಮದಲ್ಲದೆಯುಂ,

ಜನನಾಥಂ ಕಾಮಾಸ-
ಕ್ತನಾಗಿ ಮದದಂತಿಯಂತೆ ಚರಿಯಿಸಿ ತುದಿಯೊಳ್
ತನಗಾಪತ್ತಾದೊಡಮಾ-
ತ್ಯನಿಂದಮಾಯ್ತೆಂಗುಮಱಿಯನಾತ್ಮಸ್ಥಿತಿಯಂ- ೧೨೦

ಅದಱಿಂ

ಆಗ್ರಹದಿಂ ಬಾರಿಪುದು ದು-
ರಾಗ್ರಹನನಕಾರ್ಯಮಾರ್ಗಯುಕ್ತನನಾಕೇ-
ಸಗ್ರಹಣಾಂತ ಸಾಧುಜ-
ನಾಗ್ರಣಿಯುಂ ಹಿತನುಮೆನಿಪ ಸಚಿವಂ ನೃಪನಂ ೧೨೧

ಏನು ಮಾಡಲಿ ಎಂದು ಬೆರಗಾಗಿ ಮರು ನುಡಿಯಲಾರದೆ ಇದ್ದ ಪಿಂಗಳಕನನ್ನು ಕಂಡು ದವನಕನು ಹೀಗೆಂದನು: ದೇವಾ ! ನಿಮ್ಮ ಪೂರ್ವಜನ್ಮದ ಅಗಣ್ಯಪುಣ್ಯದಿಂದ ಮೃಗಾಧಿರಾಜನಾಗಿ ಹುಟ್ಟಿದೆ. ನಮ್ಮಂಥ ಹಳೆಯರನ್ನೂ ಆಪ್ತರನ್ನೂ ಅವಜ್ಞೆಗೈದು ಎಲ್ಲಿಂದಲೋ ಬಂದ ಚಾಡಿಕೋರನ ಬೆಲ್ಲವಾತುಗಳನ್ನು ಕೈಕೊಂಡು ರಾಜ್ಯವನ್ನು ಕೆಡಿಸಲು ಬಗೆದೆಯಾದರೆ ಅದನ್ನು ಉಪೇಕ್ಷಿಸಬಾರದು. ೧೨೦. ಕಾಮಾಸಕ್ತನಾದ ಅರಸನು ತನ್ನ ಹಿತವನ್ನು ಬಗೆಯನು. ಮದ್ದಾನೆಯಂತೆ ತನ್ನ ಇಚ್ಛಾನುಸಾರವಾಗಿ ಅಲೆದಾಡುವನು. ಆ ಮದದಿಂದ ಮಹಾದುಃಖವನ್ನು ಅನುಭವಿಸುವನು. ಆ ಸಮಯದಲ್ಲಿ ಸ್ವಭಾವಸಹಜವಾದ ಅವಿನಯವನ್ನು ಬಿಟ್ಟು ಪ್ರಧಾನನ ಮೇಲೆ ದೋಷವನ್ನು ಆರೋಪಿಸುವನು. ಅದರಿಂದ ಬಲವಂತವಾಗಿ ೧೨೧. ಅಕಾರ್ಯಮಾರ್ಗಯುಕ್ತನಾದ ಆ ದುರಾಗ್ರಹನನ್ನು

ಎಂದಿಂತು ದಮನಕಂ ಸೂಕ್ತಿಯುಂ ತೋಱೆ ನುಡಿಯೆ, ಪಿಂಗಳಕಂ ಕಿನಿಸಿ ಕೆರಳ್ದು ಕಡಿಕಡಿವೋಗಿ, ಪಲವು ಮಾತಿನೊಳೇಂ, ಈ ಬೂತಂ ನಿರುತ್ತರಂ ಮಾಡಿದಪೆನೆಂದಿಂತೆಂದಂ : ಎಲವೋ! ನೀಂ ಪೞಮೆಯನೆ ತೋಱೆ ಕೀೞ ಕಡೆ ನುಡಿದಪೆ, ಒಂದೆಡೆಗೆ ಪೞಿಯನಿಂ ಪೊಸಂಬನೆ ಲೇಸು.

ಅದಂತೆನೆ, ಶ್ಲೋ ॥ ಮೂಷಕಾ ಗೃಹಜಾತಾಶ್ಚ ಹಂತವ್ಯಾಹ್ಯಪಕಾರಿಣಃ
ಉಪಪ್ರದಾನ್ಯೈರ್ಮಾರ್ಜಾರೋ ಹಿತಕೃದ್ರಕ್ಷ್ಯತೇ ಬುಧೈಃ ॥೭೦॥

ಟೀ॥ ಇಲಿಗಳ್ ಮನೆಯಲ್ಲಿ ಪುಟ್ಟಿದುವಾದೊಡಂ ಅಪಕಾರಿಗಳಾದುದಱೆಂ ಕೊಲಿಸಿಕೊಂಬುವು. ಲೋಗರ ಕೈಯಲ್ಲಿ ಕೊಂಡು ಸಲಹಿದ ಬೆಕ್ಕು ಹಿತಂ ಮಾಡುವ ಕಾರಣದಿಂ ರಕ್ಷಿಸಿಕೊಳಲ್ಪಟ್ಟುದು. ಮತ್ತಮಲ್ಲದೆಯುಂ,

ಇಲಿಗಳ್ ಮನೆಯೊಳ್ ಪುಟ್ಟಿಯು-
ಮಲಸದೆ ತವೆ ತೋಡಿ ಮನೆಗಳಂ ಕಿಡಿಸುವವೊಲ್
ಖಲನೆನಿತು ಪೞಿಯನಾದೊಡ-
ಮಿಲೇಶ್ವರಂಗಟಿವನೊಡರಿಕುಂ ದುಷ್ಟತೆಯಿಂ ೧೭೨

ಅದಱೆಂ ಕೇವಳಂ ಪೞಮೆಯೇ ಪ್ರಯೋಜನಮಿಲ್ಲ, ನೀಂ ಪೞಿಯನಾದೊಡಂ ಧೂರ್ತನುಮಪ್ರಯೋಜಕನುಮಪ್ಪೆ : ಗಱಪದಿರ್. ಆನುಮಾತನುಂ ಪರಸ್ಪರೋಪಕಾರಿಗಳಪ್ಪುದಱೆಂದೋರ್ವರ್ಗೆ ತಪ್ಪುವರಲ್ಲೆನೆ ದಮನಕನಿಂತೆಂದಂ ; ದೇವಾ! ಸಂಜೀವಕನಪ್ಪೊಡೆ ನೀಚನುಂ ನಿಸ್ತ್ರಿಂಶನುಮಾಗಿರ್ದನಪನು ನಂಬಿದಂದು ಪೊಲ್ಲಮಕ್ಕುಮದೆಂತೆನೆ :

ಶ್ಲೋ ॥ ಉಪಕರ್ತರಿ ಸಜ್ಜನೇಽಪಿ ನೀಚಃ ಕೃತಕೃಸ್ತ್ವಪಕರ್ತುಮೀಹತೇ
ಅತವಿವ ಹತೋ ವನೇ ಸುಪುತ್ರೋಽಪ್ಯುಪಕರ್ತಾ ಕಥಕೇನ ವಾನರಃ॥೭೧॥

ತೊರೆಯುವುದು ವಿಹಿತ. ವ॥ ಹೀಗೆಂದು ದವನಕನು ಸೂಕ್ಷ್ಮವನ್ನು ಹೇಳಲು ಪಿಂಗಳಕನು ಕಿಡಿಕಿಡಿಯಾಗಿ ಹಲವು ಮಾತಿನಿಂದೇನು ಪ್ರಯೋಜನ ; ಈ ಬೂತನ್ನು ನಿರುತ್ತರಗೊಳಿಸುವೆನೆಂದು ಹೀಗೆ ನುಡಿದನು: ಎಲವೋ ! ನೀನು ಹಳೆಯದನ್ನೇ ಹೇಳಿ ಹೇಳಿ ನೀಚವಾದುದನ್ನು ನುಡಿಯುತ್ತಿರುವೆ. ಒಂದು ದೃಷ್ಟಿಯಿಂದ ಹಳೆಯನಿಗಿಂತ ಹೊಸಬನೆ ಲೇಸು. ಶ್ಲೋ॥ ಇಲಿಗಳು ಮನೆಯಲ್ಲಿ ಹುಟ್ಟಿದುವಾದರೂ ಅಪಕಾರಿಗಳಾಗಿರುವುದರಿಂದ ಕೊಲ್ಲಿಸಿಕೊಳ್ಳುವುವು. ಜನರ ಕೈಯಿಂದ ಕೊಂಡು ಸಾಕಿದ ಬೆಕ್ಕು ಹಿತವನ್ನುಂಟು ಮಾಡುವುದರಿಂದ ಬದುಕಿ ಉಳಿದುಕೊಳ್ಳುತ್ತದೆ! ವ॥ ಅದರಿಂದ ಕೇವಲ ಹಳಮೆಯಿಂದ ಪ್ರಯೋಜನವಿಲ್ಲ. ನೀನು ಹಳೆಯನಾದರೂ ಧೂರ್ತನೂ ಅಪ್ರಯೋಜಕನೂ ಆಗಿರುವೆ. ಹರಟಬೇಡ. ನಾನೂ, ಆತನೂ ಪರಸ್ಪರ ಉಪಕಾರಿಗಳಾದುದರಿಂದ ಪರಸ್ಪರ ತಪ್ಪುವುದಿಲ್ಲ. ಅದಕ್ಕೆ ದವನಕನು ಹೀಗೆಂದನು: ದೇವಾ! ಸಂಜೀವಕನು ನೀಚನೂ ನಿಸ್ತ್ರಿಂಶನೂ ಆಗಿರುವುದರಿಂದ ಅವನನ್ನು ನಂಬಿದರೆ ಕೇಡು ಸಂಭವಿಸದೆ ಇರದು. ಶ್ಲೋ॥ ಉಪಕಾರವನ್ನು ಮಾಡಿದ ಸಜ್ಜನನಿಗಾದರೂ ನೀಚನಾದವನು ಅಪಕಾರವನ್ನೇ ಎಣಿಸುವನು. ವನದಲ್ಲಿ ತನ್ನ ಮರಿಗಳೊಡಗೂಡಿಕೊಂಡಿದ್ದ ಒಂದು ವಾನರನು ಕಥಕನೆಂಬ ಬೇಡನಿಗೆ ಉಪಕಾರವನ್ನು ಮಾಡಿ ಅವನಿಂದ ಕೊಲ್ಲಿಸಿಕೊಂಡಿತು.

ಟೀ॥ ಉಪಕಾರಮಂ ಮಾಡಿದ ಸಜ್ಜನನಲ್ಲಿಯಾದೊಡಂ ನೀಚನಾಗಿರ್ದವನಪಕಾರಮನೇ ಮಾಡಲುದ್ಯೋಗಿಸುವಂ, ಅದೆಹಗೆಂದೊಡೆ, ವನದೊಳ್ ತನ್ನ ಮಱಿಗಳೊಡಗೂಡಿರ್ಪುದೊಂದು ವಾನರಂ ಕಥಕನೆಂಬ ಬೇಡಂಗುಪಕಾರಮಂ ಮಾಡಿ ಕೊಲಿಸಿಕೊಳಲ್ಪಟ್ಟುದು ಎಂಬ ಕಥೆಯಂತಕ್ಕುಮೆನೆ, ಪಿಂಗಳಕನದೆಂತೆನೆ ದಮನಕಂ ಪೇಳ್ಗುಂ :

೧೦. ಉಪಕಾರಮಂ ಮಾಡಿ ಕೆಟ್ಟ ಕಪಿಯ ಕಥೆ

ಕಾಮ್ಯಕವನವೆಂಬ ವನದಲ್ಲಿ ಕಥಕನೆಂಬ ಬೇಡನಿರ್ಪಂ. ಆತನೊಂದು ದಿವಸಂ ಬೇಂಟೆವೋಗಿ ವಯೋಧಿಕನಪ್ಪುದೊಂದು ಪುಲಿಯಂ ಕಂಡು ಅದನೆಚ್ಚು ತಪ್ಪುವುದುಂ, ಆ ಪುಲಿ ಮುನಿದವನನೆಟ್ಟಿಟ್ಟಲೊಡಂ,

ಮನದಿಂ ಬೇಗಂ ಕಪಿಯೂ-
ಥನಿಲಯಮುಂ ವಿಪುಲತರವಟೋರ್ವೀರುಹಮುಂ
ಘನಕೂಟಮುಂ ಪಲಾಯನ
ಜನಿತ ವಿಷಾದಂ ನಿಷಾದನೆಯ್ದಿದನಾಗಳ್ ೧೭೩

ಅಂತೆಯ್ದಿ ತರುಶಿಖೆಯಂ ಪಿಡಿದಿರ್ಪನನಲ್ಲಿರ್ಪುದೊಂದು ಕಪಿ ಕಂಡು ಬೇಗಮಿದಿರಂ ಬಂದು ಅಂಜದಿರೆಂದು ಕೈಯುಂ ಪಿಡಿದು ತೆಗೆವುದುಂ, ಆ ಜರಚ್ಛಮೂರಂ ಕಂಡು, ಎಲೆ ಶಾಖಾಚರ, ನೀನೀ ವನೇಚರನಂ ತೆಗೆದೆನಗೆಯ್ದುವಾರದಾತು ದೂರಂ ಮಾಡಲ್ವೇಡ ಇವನಪ್ಪೊಡೆ ಮಹಾಪಾತಕಂ ವಿಶ್ವಾಸಘಾತುಕಂ ತನಗೀಂಬುವರೆ ನಿನಗಂ ತಪ್ಪದಿರ್ಪನಲ್ಲಿವನನವಱೆಂ ಕೆಡೆನೂಂಕು, ಕೊಂದು ತಿಂದಪೆನೆಂದೊಡಾ ಕಪಿ ಕುಪಿತನಾಗಿ ಶರಣ್ಬೊಕ್ಕ ಪುಳಿಂದನನೊಪ್ಪಿಸುವನಲ್ಲೆಂ ನಿನ್ನ ಬಂದ ಬಟ್ಟೆಯನೆ ಪೋಗೆಂದೊಡೆ, ಮತ್ತಂ ಪುಲಿಯಿಂತೆಂದುದು :

ಆ ಕಥೆಯಂತೆ ಅದೀತು ಎನ್ನಲು ಪಿಂಗಳಕನು ಅದೇನು ಎಂದು ಕೇಳಲು ದಮನಕನು ಹೇಳತೊಡಗಿದನು :

ವ॥ ಕಾಮ್ಯಕ ಎಂಬ ವನದಲ್ಲಿ ಕಥಕನೆಂಬ ಬೇಡನಿದ್ದನು. ಆತನೊಂದು ದಿನ ಬೇಟೆಗೆಂದು ಹೋಗಿ ವಯಸ್ಸಾದ ಒಂದು ಹುಲಿಯನ್ನು ಕಂಡು ಅದನ್ನು ಹೊಡೆಯಲು ಹೋಗಿ ಗುರಿ ತಪ್ಪಲು ಆ ಹುಲಿ ಕೋಪದಿಂದ ಅವನನ್ನು ಅಟ್ಟಿಕೊಂಡು ಬಂತು. ೧೭೩. ಆಗ ಆ ನಿಷಾದನು ಮನೋವೇಗದಿಂದ ಒಂದು ದೊಡ್ಡ ಮರದ ಮೇಲಿರುವ ಕಪಿಗಳ ಮನಗೆ ಓಡಿಬಂದನು. ವ॥ ಮರದ ಕೊಂಬೆಯನ್ನು ಹಿಡಿದು ಮೇಲಕ್ಕೇರುತ್ತಿದ್ದ ಬೇಡನನ್ನು ಕಂಡು ಒಂದು ಕಪಿ ಬೇಗನೆ ಎದುರುಗೊಂಡು ಅಂಜದಿರು ಎಂದು ಕೈ ಹಿಡಿದು ರಕ್ಷಿಸಿತು. ಆ ಹಳೆಯ ಹುಲಿ ಇದನ್ನು ಕಂಡು, ಎಲೆ ಶಾಖಾಚರ! ನೀನು ವನೇಚರನನ್ನು ಹತ್ತಿರ ಸೇರಿಸಿ ನನಗೆ ಸಿಕ್ಕದಂತೆ ದೂರಗೊಳಿಸಬೇಡ. ಇವನು ಮಹಾಪಾತಕನು; ವಿಶ್ವಾಸಘಾತುಕನು; ಅನುಕೂಲಸಮಯ ಬಂದಲ್ಲಿ ನಿನಗೂ ಕೇಡನ್ನುಂಟುಮಾಡದಿರನು. ಅದರಿಂದ ಇವನನ್ನು ಕೆಳಕ್ಕೆ ಬೀಳಿಸು ; ಕೊಂದು ತಿಂದುಬಿಡುವೆ ಎಂದು ಹೇಳಿತು. ಅದಕ್ಕೆ ಆ ಕಪಿ ಕುಪಿತನಾಗಿ ಶರಣು ಬಂದ ಪುಳಿಂದನನ್ನು ಒಪ್ಪಿಸಲಾರೆ;

ವಲಿಮುಖ ನೀತಿ ಬಹಿರ್ಮುಖ
ಮಲಿನಾತ್ಮನನೆನ್ನ ಮಾತುಗೇಳದೆ ನೀನೀ
ಖಲನನೊಳಕೊಂಡೊಡೆಲೆ ಕಂ-
ಬಲಕಂ ಶಿವಭೂತಿಗಾದ ಕಥೆಯಂತಕ್ಕುಂ ೧೭೪

ಎಂಬುದುಂ ಆದೆಂತೆಂದು ಗೋಲಾಂಗೂಲಂ ಬೆಸಗೊಳೆ, ಶಾರ್ದೂಲಂ ಪೇೞ್ಗುಂ:

೧೧. ಶಿವಭೂತಿಯ ಕಥೆ

ಒಂದು ಮಹಾಟವಿಯೊಳ್ ಕಂಬಳಕನೆಂಬ ಬೇಡನೊಂದು ಪುಲಿ ತನ್ನನಟ್ಟಿವರೆ ಪ್ರಾಣ ಭಯದಿಂ ದೆಸೆಗಾಣದೆ ಪುರಾಣಕೂಪದೊಳ್ ಬಿರ್ದಂ. ಆ ಪುಲಿಯುಂ ಕೋಪಾಂಧನಪ್ಪುದಱಿಂದಲ್ಲಿಯೆ ಬಿರ್ದುದು. ಅನ್ನೆಗಮೊಂದು ಚಪಲಕನೆಂಬ ಕಪಿ ನೀರ್ಗುಡಿಯಲೆಂದು ಬಾವಿಯಂ ಪುಗುತಂದು ತತ್ಕೂಪ ಸಮೀಪದೊಳ್ ನಿಂದು ಪೋಗಲಿಂಬಿಲ್ಲದೆ ತಡಿವಿಡಿದೆಳಲುತ್ತಿರ್ದ ಸರ್ಪನ ಬಾಲಮಂ ಬಳ್ಳಿಯೆಂದು ಬಗೆದು ಪಿಡಿದಿೞಿಯುತ್ತುಮಹಿಸಹಿತಂ ಬಿರ್ದುದು, ಅನ್ನೆಗಂ :

ಮಲರಹಿತನನೂನದಯಾ
ನಿಲಯನದ್ವಯಾರ್ಥಿ ತೀರ್ಥಯಾತ್ರಾಸ್ರಮ ವಿ-
ಹ್ವಲಮಾನಸಂ ಪಿಪಾಸಾ-
ಕುಲಿತಂ ಶಿವಭೂತಿಯೆಂಬ ಪಾರ್ವಂ ಬರುತುಂ ೧೭೫

ತತ್ಕೂಪಮಂ ಕಂಡು ತನ್ನ ಕಯ್ಯ ಕಳಶಮಂ ಬಳ್ಳಿಯೊಳ್ ಕಟ್ಟಿ ನೀರಂ ತೆಗೆವಾಗಳದಂ ಪುಲಿ ಪಿಡಿದು ನೇಲ್ವುದುಮದು ಕಯ್ಗೆ ಬಣ್ಣಿತ್ತಾದೊಡದಂ ನೋೞ್ಪೆನೆಂದು ಬಲಿದು ಪಿಡಿದು ಮೆಲ್ಲನೆ ತೆಗೆದು, ಪುಲಿ ಪೊಱಮಟ್ಟು ಪೊಡೆಪಡೆ ಕಂಡು ಚೋದ್ಯಂಬಟ್ಟು, ನೀನೀ ಬಾವಿಯೊಳ್

ನೀನು ಬಂದ ದಾರಿ ಹಿಡಿ ಎನ್ನಲು ಮತ್ತೊಮ್ಮೆ ಹುಲಿ ಹೀಗೆಂದಿತು : ೧೭೪. ಎಲೈ ವಲೀಮುಖ ! ನನ್ನ ಮಾತು ಕೇಳದೆ ನೀನು ಈ ಖಳನನ್ನು ಒಳಕೊಂಡರೆ ಕಂಬಲಕನಿಗೂ ಶಿವಭೂತಿಗೂ ಆದ ಕಥೆಯಂತೆ ಆದೀತು ಎಂದಿತು. ವ|| ಅದೇನೆಂದು ಗೋಲಾಂಗೂಲ ಕೇಳಲು ಆ ಶಾರ್ದೂಲ ಅದನ್ನು ಹೇಳತೊಡಗಿತು: ಒಂದು ದೊಡ್ಡ ಕಾಡಿನಲ್ಲಿ ಕಂಬಳಕನೆಂಬ ಬೇಡನು ಒಂದು ಹುಲಿಯು ತನ್ನನ್ನು ಅಟ್ಟಿಕೊಂಡು ಬರಲು ಪ್ರಾಣಭಯದಿಂದ ದಿಕ್ಕುಗಾಣದೆ ಒಂದು ಹಳೆಯ ಬಾವಿಯಲ್ಲಿ ಬಿದ್ದನು. ಆ ಹುಲಿಯೂ ಕೋಪಾಂಧನಾಗಿ ಅದೇ ಬಾವಿಯಲ್ಲಿ ಬಿದ್ದಿತು. ಅಷ್ಟರಲ್ಲಿ ಚಪಲಕನೆಂಬ ಒಂದು ಕಪಿ ನೀರು ಕುಡಿಯಬೇಕೆಂದು ಆ ಬಾವಿಯ ಬಳಿಗೆ ಬಂದು ಅದರ ಸಮೀಪದಲ್ಲಿ ನಿಂತು ಹೋಗಲು ದಾರಿಯಿಲ್ಲದೆ ದಡವನ್ನು ಹಿಡಿದುಕೊಂಡು ಜೋತಾಡುತ್ತಿದ್ದ ಸರ್ಪನ ಬಾಲದನ್ನು ಬಳ್ಳಿಯೆಂದು ತಿಳಿದು ಹಿಡಿದು ಇಳಿಯುತ್ತಿರಲು ಆ ಸರ್ಪಸಹಿತವಾಗಿ ಬಿದ್ದಿತು. ಅಷ್ಟರಲ್ಲಿ ೧೭೫. ತೀರ್ಥಯಾತ್ರಾರ್ಥಿಯಾದ ದಯಾಪರನಾದ ಬಾಯಾರಿದ ಶಿವಭೂತಿಯೆಂಬ ಬ್ರಾಹ್ಮಣನು ಬಂದನು. ವ|| ಆ ಬಾವಿಯನ್ನು ಕಂಡು ತನ್ನ ಕಯ್ಯ ಕಲಶವನ್ನು ಬಳ್ಳಿಯಿಂದ ಕಟ್ಟಿ ನೀರನ್ನು ತೆಗೆಯುತ್ತಿರಲು ಅದನ್ನು ಹುಲಿ ಹಿಡಿದು ನೇಲುತ್ತಿರಲು ಕುಯ್ಗೆ ಭಾರವಾದರೂ ಅದನ್ನು ನೋಡೋಣವೆಂದು ಬಲವಾಗಿ ಹಿಡಿದು

ಬಿಟ್ಟ ಕಾರಣಮಾವುದೆಂದು ವಸುಧಾಮರಂ ಬೆಸಗೊಳೆ, ತಾನುಂ ಬೇಡನುಂ ವ್ಯಾಳನುಂ ಗೋಲಾಂಗೂಲನುಂ ಬಿರ್ದ ಕಾರಣಮಂ ಪೇಳ್ದು, ನಿಮ್ಮಡಿಗಳ ಕೃಪೆಯಿಂ ಮೃತ್ಯುಮುಖದಿಂ ಪೊಱಮಟ್ಟು ಬರ್ದುಂಕಿದೆಂ. ಈ ತೋರ್ಪ ಪಿರಿಯ ಗಿರಿಯ ತಬ್ಬಿಲ ಗುಹೆಯೊಳಿರ್ದಪೆನಲ್ಲಿಗೆ ಬನ್ನಿಂ, ನಿಮಗಮೌಲ್ಯಮಪ್ಪ ವಸ್ತುಗಳನೀವೆನೆಂದೊಡೆ ನೀಂ ಪೇಳ್ದ ಪ್ರಾಣಿಗಳಂ ತೆಗೆದು ತೀರ್ಥಯಾತ್ರೆಗೆಯ್ದು ಮಗುೞ್ದು ಬರ್ಪಲ್ಲಿ ನಿನ್ನಲ್ಲಿಗೆ ಬರ್ಪೆನೆಂದೊಡಾ ಶಾರ್ದೂಲಂ, ಅಂತಪ್ಪೊಡೆ ಈ ವ್ಯಾಧನಂ ತೆಗೆಯದಿರಿಂ. ನೀಚಂಗೆನಿತುಪಕಾರಂಗೆಯ್ದೊಡಮೊಳ್ಳಿತ್ತುಗೆಯ್ವನಲ್ಲದೆಂತೆನೆ :

ಶ್ಲೋ॥ ಉಪಕಾರೋಽಪಿ ನೀಚಾನಾಂ ಅಪಕಾರಾಯ ಕಲ್ಪತೇ
ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಂ ॥೭೨॥

ಟೀ॥ ನೀಚಂಗುಪಕಾರವಂ ಮಾಡಿದೊಡೆ ಅಪಕಾರವನೆ ಮಾಡುವನಲ್ಲದೆ ಶಾಂತನಾಗಲರಿಯಂ, ಅದೆಂತೆಂದೊಡೆ ಹಾವಿಂಗೆ ಹಾಲನೆಱೆದೊಡೆ ವಿಷಂ ಪೆರ್ಚುವಂತೆ–ಎಂಬೀ ಶ್ಲೋಕಾರ್ಥಮನವಧರಿಸಿ ನೆಗಳ್ವುದೆಂದು ಪುಲಿ ಪೇೞ್ದು ಪೋಪುದುಂ ಆ ಪಾರ್ವಂ ತತ್ಕೂಪಸ್ಥಮಪ್ಪ ವ್ಯಾಳನುಮಂ ಗೋಲಾಂಗೂಲನುಮಂ ತೆಗೆವುದುಮವೆರಡುಂ ಪೊಱಮಟ್ಟು ಪೊಡೆಮಟ್ಟು ಬಳಿಯಂ ವಳೀಮುಖನಿಂತೆಂದುದು : ನಿಮ್ಮಡಿ, ನಿಮ್ಮ ಪ್ರಸಾದದಿಂದೆನಗೆ ಪುನರ್ಜನ್ಮಮಾದುದು. ಆಂ ಬದರಿಕಾಶ್ರಮದುಪವನದೊಳಿರ್ಪೆಂ ಅಲ್ಲಿಗೆತ್ತಾನುಂ ಬಂದಿರಪ್ಪೊಡೆನ್ನಾರ್ಪ ಶಕ್ತಿಯಿಂ ಭಕ್ತಿಗೆಯ್ವೆನೆಂದು ಗೋಲಾಂಗೋಲಂ ಪೇೞ್ದು ಪೋಪುದುಂ ಉರಗಂ ನಿಮ್ಮಡಿ, ನೀಮೆನಗೆ ಪ್ರಾಣೋಪಕಾರಂಗೆಯ್ದಿರ್

ಮೇಲಕ್ಕೆ ತೆಗೆಯಲು ಹುಲಿ ಹೊರಕ್ಕೆ ಬಂದು ನಮಸ್ಕರಿಸುತ್ತಿರುವುದನ್ನು ಕಂಡು ಆಶ್ಚರ್ಯಪಟ್ಟನು. ನೀನು ಈ ಬಾವಿಯಲ್ಲಿ ಬಿದ್ದ ಕಾರಣವೇನು ಎಂದ ಶಿವಭೂತಿ ಕೇಳಲು ತಾನೂ, ಬೇಡನೂ, ಸರ್ಪನೂ, ಗೋಲಾಂಗೂಲನೂ ಬಿದ್ದ ಕಾರಣವನ್ನು ಅದು ಹೇಳಿತು. ನಿಮ್ಮ ಕೃಪೆಯಿಂದ ಮೃತ್ಯುಮುಖದಿಂದ ಪಾರಾಗಿ ಬದುಕಿದೆ, ಇಲ್ಲಿಗೆ ತೋರುವ ದೊಡ್ಡ ಪರ್ವತದ ತಪ್ಪಲ ಗುಹೆಯಲ್ಲಿ ನಾನಿರುವೆನು. ಅಲ್ಲಿಗೆ ಬನ್ನಿ. ನಿಮಗೆ ಅಮೂಲ್ಯವಾದ ವಸ್ತುಗಳನ್ನು ಕೊಡುವೆನು ಎನ್ನಲು ನೀನು ಹೇಳಿದ ಪ್ರಾಣಿಗಳನ್ನು ಹೊರಕ್ಕೆ ತೆಗೆದು ತೀರ್ಥಯಾತ್ರೆಮಾಡಿ ಹಿಂದಿರುಗಿ ಬರುವಾಗ ನಿನ್ನಲ್ಲಿಗೆ ಬರುವೆನೆಂದು ಹೇಳಿದನು. ಅದಕ್ಕೆ ಆ ಶಾರ್ದೂಲನು ಹಾಗಾದರೆ ಈ ವ್ಯಾಧನೊಬ್ಬನನ್ನು ತೆಗೆಯಬೇಡಿರಿ. ನೀಚನಿಗೆ ಎಷ್ಟೇ ಉಪಕಾರ ಮಾಡಿದರೂ ಒಳ್ಳೆಯದನ್ನು ಮಾಡುವವನಲ್ಲ. ಶ್ಲೋ॥ ನೀಚನಿಗೆ ಉಪಕಾರವನ್ನು ಮಾಡಿದರೆ ಅಪಕಾರವನ್ನೇ ಬಗೆಯುವನಲ್ಲದೆ ಶಾಂತವಾಗಲರಿಯನು. ಹಾವಿಗೆ ಹಾಲೆರೆದರೆ ವಿಷಮಾತ್ರ ಅಧಿಕವಾಗುತ್ತದೆ. ವ॥ ಇದನ್ನು ತಿಳಿದು ವರ್ತಿಸಿರಿ ಎಂದು ಹುಲಿಯು ಹೇಳಿ ಹೋಯಿತು. ಆ ಬ್ರಾಹ್ಮಣನು ಆ ಬಾವಿಯಲ್ಲಿ ಬಿದ್ದಿದ್ದ ಸರ್ಪನನ್ನೂ, ಗೋಲಾಂಗೂಲವನ್ನೂ ತೆಗೆಯಲು ಅವು ಹೊರಬಂದು ನಮಸ್ಕರಿಸಿ ವಲೀಮುಖ ಹೀಗೆಂದಿತು : ಪೂಜ್ಯರೇ, ನಿಮ್ಮ ಪ್ರಸಾದದಿಂದ ನನಗೆ ಪುನರ್ಜನ್ಮವಾಯಿತು. ನಾನು ಬದರಿಕಾಶ್ರಮದ ಉಪವನದಲ್ಲಿರುವೆ. ಅಲ್ಲಿಗೆಂದಾದರೂ ತಾವು ಬಂದಾಗ ನನ್ನಿಂದಾದ ಶಕ್ತಿಯಿಂದ ಭಕ್ತಿಯನ್ನು ಮಾಡುವೆನೆಂದು ಗೋಲಾಂಗೂಲವು ಹೇಳಿಹೋಯಿತು. ಸರ್ಪನು ನೀವು ನನಗೆ ಪ್ರಾಣೋಪಕಾರವನ್ನು ಮಾಡಿದಿರಿ.

ನಿಮಗೇನಾನುಮಧ್ಥಾನಮಾದಾಗಳೆನ್ನಂ ನೆನೆದೊಡಾಂ ಬಂದು ದೇವರ ಸೇವೆಯಂ ಮಾಡಿ ಪೋಪೆನೆಂದುರಗಂ ಪೇಟೆ ಪೋಪುದುಂ, ಆ ದ್ವಿಜಂ ತನ್ನ ಮನದೊಳಿಂತೆಂದು ಬಗೆದು,

ಪೊಲ್ಲ ಗಡ ತೆಗೆಯಲಪ್ಪೊಡೆ
ಭಿಲ್ಲನನೆಂದೆನಗೆ ಪುಂಡರೀಕಂ ಪೇೞ್ದ-
ತ್ತಿಲ್ಲುಭಯಪಕ್ಷಪಾತಮೆ
ಪೊಲ್ಲದು ಪೊಲ್ಲದೆ ಪರೋಪಕಾರವ್ಯಸನಂ ೧೭೬

ಎಂತುಂ 'ಯತ್ಪರಾರ್ಥಂ ಶರೀರಂ' ಎಂಬ ಸುಭಾಷಿತಂ ಪೇೞೆದಂತೆ ಈ ಪುರುಷನಂ ತೆಗೆಯದಂದು ಕಾಪುರುಷನಪ್ಪೆಂ ತನ್ನಪ್ಪುದಕ್ಕೆಂದು ಪರೋಪಕಾರವಿಭೂತಿ ಶಿವಭೂತಿ

ಕರುಣಾರಸಾರ್ದ್ರಹೃದಯಂ
ದುರಾತ್ಮನೆನ್ನದೆ ಕಿರಾತನಂ ತೆಗೆದನಿಳಾ-
ಮರಜನವಿನುತಂ ಭಾವಿಸೆ
ಪರಹಿತನಿರತಾತ್ಮನಪ್ಪವಂಗಱೆದುಂಟೇ ೧೭೭

ಅಂತು ತೆಗೆವುದುಂ ಕಿರಾತನುಂ ಪೊಡೆವಟ್ಟು ನಿಮ್ಮ ದ್ದಿಯ ಧರ್ಮದಿಂ ನಾ ಬರ್ದುಂಕಿದೆಂ. ಆಂ ಪದ್ಮನಗರದೊಳಿರ್ಪೆಂ. ನೀಮೆತ್ತಾನುಂ ಬಾರ್ತೆಯಪ್ಪೊಡಲ್ಲಿಗೆ ಬನ್ನಿಂ. ಎನ್ನಾರ್ಪನಿತು ಶಕ್ತಿಯೊಳುಪಕರಿಸಿದಪ್ಪೆನೆಂದು ಪೋದಂ, ಶಿವಭೂತಿಯುಂ ಕೆಲವುಕಾಲಕ್ಕೆ ತೀರ್ಥಯಾತ್ರೆಗೆಯ್ದು ಮಗುೞ್ದು ಬರುತ್ತುಂ ಉತ್ತುಂಗಶಿಖರಿಯ ತಪ್ಪಲೊಳ್ ಬರ್ಪುದನಾ ವ್ಯಾಘ್ರಂ ಕಂಡು ಶೀಘ್ರ ಮಿದಿರಂಬಂದು ಶಿವಭೂತಿಗೆ ಪಾದಾಕ್ರಾಂತನಾಗಿ ತನ್ನಿರ್ಪ ಗುಹೆಗೊಡಂಗೊಂಡು ಪೋಗಿ.

ನಿಮಗೇನಾದರೂ ಕಷ್ಟ ಬಂದಲ್ಲಿ ನನ್ನನ್ನು ನೆನೆದ ಕೂಡಲೇ ಬಂದು ತಮ್ಮ ಸೇವೆ ಮಾಡಿ ಹೋಗುವೆನೆಂದು ಹೇಳಿಹೋಯಿತು. ಆಗ ಬ್ರಾಹ್ಮಣನು ತನ್ನ ಮನಸ್ಸಿನಲ್ಲಿ ಹೀಗೆಂದು ಆಲೋಚಿಸಿದನು. ೧೭೬. ಆ ಭಿಲ್ಲನನ್ನು ಹೊರತೆಗೆದರೆ ಕೇಡಾಗುವುದೆಂದು ಆ ಹುಲಿ ಹೇಳಿಹೋಯಿತಷ್ಟೆ. ಇಲ್ಲ ಉಭಯ ಪಕ್ಷಪಾತವೇ ನೀಚವಾದುದು. ಪರೋಪಕಾರ ಎಂದಾದರೂ ನೀಚಕಾರ್ಯವೇ ? ವ|| ಹೇಗೂ 'ಯತ್ಪರಾರ್ಥಂ ಶರೀರಂ' ಎಂಬ ಸುಭಾಷಿತವು ಹೇಳಿದಂತೆ ಈ ಪುರುಷನನ್ನು ತೆಗೆಯದಿದ್ದಲ್ಲಿ ಕಾಪುರುಷನೆನಿಸುವೆನು, ತನಗಾಗುವುದಾಗಲಿ ಎಂದು ಪರೋಪಕಾರ ವಿಭೂತಿಯೆನಿಸಿದ ಆ ಶಿವಭೂತಿ ೧೭೭. ಕರುಣಾರಸಾರ್ದ್ರಹೃದಯನಾಗಿ ದುರಾತ್ಮನೆಂದು ಎಣಿಸದೆ ಆ ಕಿರಾತನನ್ನು ಹೊರಕ್ಕೆ ತೆಗೆದನು. ಪರಹಿತನಿರತಾತ್ಮರಿಗೆ ಅಸಾಧ್ಯವಾದುದುಂಟೇ ? ವ|| ಹಾಗೆ ತೆಗೆಯಲು ಕಿರಾತನೂ ನಮಸ್ಕರಿಸಿ ನಿಮ್ಮಿಂದಾಗಿ ಬದುಕಿದೆ. ನಾನು ಪದ್ಮನಗರದಲ್ಲಿ ವಾಸಮಾಡಿಕೊಂಡಿರುವೆ. ನಿಮಗೆಲ್ಲಿಯಾದರೂ ಅನುಕೂಲವಾದಾಗ ಅತ್ತಕಡೆ ಚಿತ್ತೈಸಿರಿ. ನನ್ನಿಂದಾದಷ್ಟು ಭಕ್ತಿಯಿಂದ ನಿಮ್ಮನ್ನು ಉಪಚರಿಸುವೆನೆಂದು ಹೇಳಿ ಹೊರಟುಹೋದನು. ಶಿವಭೂತಿಯೂ ಕೆಲವುಕಾಲಕ್ಕೆ ತೀರ್ಥಯಾತ್ರೆ ಪೂರೈಸಿ ಹಿಂದಿರುಗಿ ಬರುತ್ತಿರಲು ಉತ್ತುಂಗ ಶಿಖರಿಯ ತಪ್ಪಲಲ್ಲಿ ಅವನು ಬರುತ್ತಿರುವುದನ್ನು ಆ ವ್ಯಾಘ್ರ ಕಂಡು ಶೀಘ್ರವಾಗಿ ಎದುರುಗೊಂಡು ಶಿವಭೂತಿಗೆ ನಮಸ್ಕರಿಸಿ ತಾನಿರುವ ಗುಹೆಗೆ ಕರೆದುಕೊಂಡು

ಹಾರಾಂಗದ ಕುಂಡಲ ವಿ-
ಸ್ತಾರ ಕಿರೀಟಾದ್ಯಮೂಲ್ಯಭೂಷಣಚಯಮಂ
ಚಾರುಗುಣಾಂಕಿತನಿರದೆ ಚ-
ಮೂರಂ ಶಿವಭೂತಿಗಿತ್ತುದತ್ಯಾದರದಿಂ ೧೭೮

ಅಂತು ತೊಡಿಗೆಗಳಂ ಪುಲಿಯಿಂ ಪಡೆದು ಶಿವಭೂತಿ ಪರಮವಿಭೂತಿಗಾಸ್ಪದನಾದೆನೆಂದು ಸಂತಸಂಬಟ್ಟಲ್ಲಿಂ ತಳರ್ದು ಬದರಿಕಾಶ್ರಮವನಕ್ಕೆ ಬಂದು ಪಥಪರಿಶ್ರಮಮನಾಱಿಸಲೆಂದು ಧರಾಮರಂ ಮಾಮರದಡಿಯೊಳ್ ವಿಶ್ರಮಿಸಿರ್ಪುದುಮಾ ವನದೊಳಿರ್ಪ ಬಲೀಮುಖಂ ಕಂಡತಿಪ್ರೀತಿಯಿಂ ಪ್ರಸನ್ನಮುಖನಾಗಿ ಬಂದು ಪೊಡೆಮಟ್ಟು,

ಪನಸಾಮ್ರ ಜಂಬು ಜಂಬೀ-
ರ ನಾರಿಕೇಳೀ ಕಪಿತ್ಥ ಕದಳೀಸಾರಂ-
ಗ ನವೀನ ಫಲಾವಳಿಯಂ
ವಿನಯದಿನಾ ದ್ವಿಜವರಂಗೆ ಕಪಿವರನಿತ್ತಂ ೧೭೯

ಅಂತು ಶಾಖಾಚರಂ ತಂದಿತ್ತ ಫಲಂಗಳಂ ಕೊಂಡು ಶಿವಭೂತಿಯುಮಂದಿನ ದಿವಸಮಲ್ಲಿರ್ದು ಕೆಲವಾನುಂ ದಿವಸಕ್ಕೆ ಪದ್ಮನಗರಮನೆಯ್ದಿ ಕಂಬಳಕನ ಮನೆಯನಱಸುತ್ತುಂ ಬರ್ಪುದುಮಾ ಕಿರಾತಂ ಕಂಡು ಪೊಡೆವಟ್ಟು ಮನೆಗೊಡಂಗೊಂಡೊಯ್ದು ಶಿವಭೂತಿಗಭ್ಯಾಗತಕ್ರಿಯೆಯಂ ಮಾಡಲುಪಾಯಮಿಲ್ಲದುಸಿರದಿರ್ಪನಂ ಕಂಡೇಂ ಮಗನೆ ! ಚಿಂತಿಸುತಿರ್ದಪೆಯೆಂಬುದುಂ ನಿಮ್ಮಡಿಗಳುಂ ಬಿಜಯಂಗೆಯ್ದಿರ್ದಾನುಂ ನಿರುಪಾಯನಾಗಿರ್ದಪೆನೆಂಬುದುಂ ಇನ್ನುಮಿದರ್ಕೆೞಂದುಂ ಚಿಂತೆಗೆಯ್ಯ

ಹೋಯಿತು. ೧೭೮. ಹಾರ, ಅಂಗದ, ಕುಂಡಲ, ಕಿರೀಟಾದಿ ಅಮೂಲ್ಯ ಭೂಷಣಗಳನ್ನು ಆದರಪೂರ್ವಕವಾಗಿ ಶಿವಭೂತಿಗೆ ಕೊಟ್ಟಿತು. ವ|| ಹಾಗೆ ಆ ತೊಡಿಗೆಗಳನ್ನು ಹುಲಿಯಿಂದ ಪಡೆದು ಶಿವಭೂತಿಯು ಮಹಾ ಐಶ್ವರ್ಯಕ್ಕೆ ಆಸ್ಪದವಾಯಿತೆಂದು ಸಂತೋಷಪಟ್ಟು ಅಲ್ಲಿಂದ ಹೊರಟನು. ಬದರಿಕಾಶ್ರಮವನಕ್ಕೆ ಬಂದು ಪಥಪರಿಶ್ರಮವನ್ನು ಆರಿಸಿಕೊಳ್ಳಲೆಂದು ಶಿವಭೂತಿ ಒಂದು ಮಾವಿನ ಮರದಡಿಯಲ್ಲಿ ವಿಶ್ರಮಿಸಿಕೊಂಡಿರಲು ಆ ವನದಲ್ಲಿದ್ದ ಬಲೀಮುಖನು ಕಂಡು ಅತಿ ಪ್ರೀತಿಯಿಂದ ಪ್ರಸನ್ನಮುಖನಾಗಿ ಬಂದು ನಮಸ್ಕರಿಸಿ ೧೭೯. ಹಲಸು, ಮಾವು, ನೇರಿಳೆ,ಕಿತ್ತಳೆ, ತೆಂಗು, ಬಾಳೆ, ಬೇಲ ಮೊದಲಾದ ಹೊಸ ಹೊಸ ಹಣ್ಣುಗಳನ್ನು ತಂದು ವಿನಯಪೂರ್ವಕವಾಗಿ ಆ ಕಪಿವರನು ಕೊಟ್ಟನು. ವ|| ಹಾಗೆ ಶಾಖಾಚರನು ತಂದಿತ್ತ ಫಲಗಳನ್ನು ಕೊಂಡು ಶಿವಭೂತಿಯು ಅಂದು ಅಲ್ಲಿಯೇ ಉಳಿದು ಕೆಲವು ದಿನಗಳ ಬಳಿಕ ಪದ್ಮನಗರವನ್ನು ಸೇರಿ ಕಂಬಳಕನ ಮನೆಯನ್ನು ಅರಸುತ್ತ ಬರಲು ಆ ಕಿರಾತನು ಕಂಡು ನಮಸ್ಕರಿಸಿ ಮನೆಗೆ ಕರೆದುಕೊಂಡು ಬಂದು ಶಿವಭೂತಿಗೆ ಅಭ್ಯಾಗತ ಕ್ರಿಯೆಯನ್ನು ಮಾಡಲು ಉಪಾಯವಿಲ್ಲದೆ ಸುಮ್ಮನೆ ಇದ್ದುದನ್ನು ಕಂಡು ಮಗನೇ ಏನು ಚಿಂತಿಸುತ್ತಿರುವೆ ಎಂದು ಕೇಳಿದನು. ಅದಕ್ಕೆ ಆ ಬೇಡನು ನಿಮ್ಮಡಿಗಳು ಚಿತ್ತೈಸಿದಿರಿ; ನಾನು ನಿಮ್ಮನ್ನು ಸತ್ಕರಿಸಲು ನಿರುಪಾಯನಾಗಿರುವೆನೆಂದನು. ಇನ್ನು ನೀನು ಇದಕ್ಕಾಗಿ ಚಿಂತಿಸಬೇಡ ; ನಿನಗೆ ಬದುಕುವ ಉಪಾಯವನ್ನು ನಾನೇ

ಲ್ವೇಡಿನ್ನುಂ ನಿನಗೆ ಬಾೞ್ವುಪಾಯಮನಾನೇ ಮಾೞ್ಪೆನೆಂದೇಕಾಂತದೊಳ್ ಕುಳ್ಳಿರ್ದು ತನ್ನ ತಂದಮೂಲ್ಯವಸ್ತುಗಳನವಂಗೆ ತೋಱುವುದುಂ,

ಎನಗೆ ಹಿತಂ ಬ್ರಾಹ್ಮಣನೀ-
ತನೆನ್ನದವಿವೇಕಿಯಾಗಿ ಶಿವಭೂತಿಗೆ ತೊ-
ಟ್ಟನೆ ಬಗೆದನಹಿತಮಂ ತ-
ದ್ವನಚರನೆಂತುಂ ಕೃತಘ್ನರೇನಂ ಮಾಡರ್ ೧೮೦

ಅಂತು ಬಗೆದು ಪೊೞಲನಾಳ್ವರಸನಲ್ಲಿಗೆ ಪೋಗಿ, ದೇವಾ! ನಿಮ್ಮ ತುಡುವಾಭರಣಂಗಳಂ ಪಲವಮೂಲ್ಯವಸ್ತುಗಳಂ ತಂದೆನ್ನ ಮನೆಯೊಳೊರ್ವ ಪಾರ್ವನಿರ್ದಪನೆಂದು ಪೇೞ್ದುದುಮರಸಂ, ತಳಾಱರ್ಗೆ ಪೇೞಲೊಡಮವರ್ ಪರಿದಾ ಪಾರ್ವನಂ ಪಿಡಿದು ಪೆಡಗಯ್ಯುಂ ಕಟ್ಟಿ ತಂದೊಪ್ಪಿಸುವುದುಮರಸನಾತನ ಕಯ್ಯೊಳಿರ್ದ ವಸ್ತುಗಳೆಲ್ಲಮಂ ಕೊಂಡು ಬೞಿಕ್ಕೆ ಸೆಱೆಯೊಳಿಕ್ಕೆ, ಕಿಱಿದು ಬೇಗಂ ಬೞಗಾಗಿರ್ದು ತನ್ನ ಮರುಳ್ತನಕ್ಕೆ ತಾನೆ ಹಾಸ್ಯಂಗೆಯ್ದು ತನಗೆ ಬಂಧನ ಮೋಕ್ಷೋಪಾಯಮಂ ಚಿಂತಿಸಿ, ನಿನಗಧ್ವಾನಮಾದಾಗಳೆನ್ನಂ ನೆನೆವುದೆಂದು ಪಾವು ಪೇೞ್ದು ಪೋದುದಂ ನೆನೆದು ನೋೞ್ಪೆನೆಂದು ನೆನೆಯಲೊಡಮಾ ಪಾವು ಮನದಿಂ ಮುನ್ನವೆ ಬಂದು ಪೊಡೆಮಟ್ಟು, ಬೆಸನೇನೆಂಬುದುಮೀ ಪೊೞಲನಾಳ್ವರಸನೆನ್ನರ್ಥಮೆಲ್ಲಮಂ ಕೊಂಡುದಲ್ಲದೆಯುಮೆನಗಿಂತಪ್ಪವಸ್ಥೆಯಂ ಮಾಡಿದನಿದರ್ಕೆ ತಕ್ಕುದಂ ನೀನೆ ಬಲ್ಲೆಯೆಂಬುದುಮಿದಾವ ಗಹನಮರಸನ ಪಿರಿಯ ಮಗನನೀಗಳೆ ಪೋಗಿ ಕೊಂದಪೆಂ, ನಿಮಗಲ್ಲದೆ ಪೆಱರ್ಗಂ ಸಾಧ್ಯಮಾಗೆ, ನೀಮೊಂದುಪಾಯದಿಂ ಬಂದು

ಯೋಚಿಸುವೆನೆಂದು ಏಕಾಂತದಲ್ಲಿ ಕುಳಿತುಕೊಂಡು ತಾನು ತಂದ ಅಮೂಲ್ಯ ಆಭರಣಗಳನ್ನು ತೋರಿಸಿದನು. ಆಗ ಆ ವನೇಚರನು ೧೮೦. ಈ ಬ್ರಾಹ್ಮಣ ತನಗೆ ಹಿತವನ್ನುಂಟು ಮಾಡಿದವನೆಂದು ಬಗೆಯದೆ ಶಿವಭೂತಿಗೆ ಅಹಿತವನ್ನು ಎಣಿಸಿದನು. ಕೃತಘ್ನರೇನು ಮಾಡಲಿಕ್ಕಿಲ್ಲ ! ವ॥ ಆ ನಗರವನ್ನು ಆಳುವ ಅರಸನಲ್ಲಿಗೆ ಹೋಗಿ, ದೇವಾ ! ನೀವು ಧರಿಸುವ ಆಭರಣಗಳನ್ನು ತಂದ ಒಬ್ಬ ಬ್ರಾಹ್ಮಣನು ನನ್ನ ಮನೆಯಲ್ಲಿರುವನು ಎಂದು ಹೇಳಿದನು. ಅರಸನು ತನ್ನ ತಳಾರರಿಗೆ ಆಜ್ಞಾಪಿಸಲು ಅವರು ಅಲ್ಲಿಗೆ ಧಾವಿಸಿ ಅವನ ಹೆಡಗಯ್ಯನ್ನು ಕಟ್ಟಿ ತಂದು ಅರಸನಿಗೆ ಒಪ್ಪಿಸಲು ಅವನು ಬ್ರಾಹ್ಮಣನ ಕಯ್ಯಲ್ಲಿದ್ದ ಆಭರಣಗಳನ್ನೆಲ್ಲ ಕಸಿದುಕೊಂಡು ಸೆರೆಮನೆಯಲ್ಲಿಟ್ಟನು. ಬ್ರಾಹ್ಮಣನು ತನ್ನ ಮರುಳುತನಕ್ಕೆ ತಾನೇ ಹಾಸ್ಯಮಾಡಿ ತನ್ನ ಬಂಧನದ ಬಿಡುಗಡೆಯ ಉಪಾಯವನ್ನು ಚಿಂತಿಸಿ, ನಿನಗೆ ಕಷ್ಟ ಬಂದಾಗ ನನ್ನನ್ನು ನೆನೆ ಎಂದು ಹಾವು ಹೇಳಿದ ಮಾತನ್ನು ನೆನಪಿಸಿಕೊಂಡು ಹಾಗೆ ಸ್ಮರಿಸಿಕೊಳ್ಳಲು ಆ ಹಾವು ಆಲೋಚಿಸುವ ಮೊದಲೇ ಅಲ್ಲಿಗೆ ಬಂದು ನಮಸ್ಕರಿಸಿ ನನ್ನಿಂದೇನಾಗಬೇಕೆಂದು ಕೇಳಿತು. ಈ ಊರಿನ ಅರಸನು ನನ್ನ ಐಶ್ವರ್ಯವನ್ನೆಲ್ಲ ದೋಚಿಕೊಂಡು ನನಗೆ ಇಂಥ ಅವಸ್ಥೆಯನ್ನುಂಟುಮಾಡಿದನು. ಇದಕ್ಕೆ ತಕ್ಕುದನ್ನು ನೀನೇ ಬಲ್ಲೆ ಎಂದು ಹೇಳಿದನು. ಅದಕ್ಕೆ ಸರ್ಪನು ಇದಾವ ಮಹಾಕಾರ್ಯ, ಅರಸನ ಹಿರಿಯ ಮಗನನ್ನು ಈಗಲೇ ಹೋಗಿ ಕೊಂದುಬಿಡುವೆನು. ನಿಮಗಲ್ಲದೆ ಗುಣಮಾಡಲು ಬೇರೆ ಯಾರಿಗೂ ಸಾಧ್ಯವಾಗದಂತೆ ಮಾಡುವೆನು. ನೀವು ಬಂದು

ನೀರನಭಿಮಂತ್ರಿಸಿ ತಳಿಯಲೊಡಂ ನಿರ್ವಿಷಮಪ್ಪಂ ಅಲ್ಲಿ ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿಕೊಳ್ಳಿಮೆಂದು ಪೇಟ್ಟು ಪೋಗಿ ನಂದನವನದೊಳಾಡುತ್ತಿರ್ದ ನೃಪನಂದನನಂ ಕಂಡಾಗಳ್.

ಸಕಲಕಲಾಧರನಂ ರಾ-
ಹು ಕೊಳ್ವ ತೆಱದಿಂ ವಿಷಾತಿಭೀಕರದಂಷ್ಟ್ರಾ
ನಿಕರಂ ಕೊಂಡುದು ನರಪಾ-
ಲಕಸುತನಂ ಮಿತ್ರಕಾರ್ಯತತ್ಪರನುರಗಂ ೧೮೧

ಅಂತು ಪಾವು ಕೊಳಲೊಡಂ, ವಿಷಮವಿಷಧರವಿಷದೂಷಿತನಾಗಿರ್ದ ಕುಮಾರನಂ ಗಾರುಡಿಗರ್ ಬಂದು ಕಂಡು ತಮ್ಮತಮ್ಮಱಿವಂದದಿಂ ಮಂತ್ರಿಸಿದೊಡೆಂತುಂ ನಿರ್ವಿಷಮಾಗದಿರ್ಪುದು ಮರಸಂ ಕಂಡೀ ಕುಮಾರನನೆತ್ತಿದಂಗೆ ಬೇಡಿತ್ತಂ ಕುಡುವೆನೆಂದು ಡಂಗುರಂಬೊಯ್ಸಲೊಡಂ ಶಿವಭೂತಿ ಕೇಳ್ದು ತಾನೆತ್ತುವೆನೆಂದು ಪೇೞ್ದೊಡರಸಂ ಕೇಳ್ದು ಪರಿತಂದು ಶಿವಭೂತಿಯಂ ಸೆಱೆಯಂ ಬಿಟ್ಟೊಡಗೊಂಡು ಪೋಪುದುಮಾತಂ ಪೋಗಿ ಗುಂಡಿಗೆಯ ನೀರನಭಿಮಂತ್ರಿಸಿ ತಳಿಯಲೊಡಂ, ಕುಮಾರಂ ದಷ್ಟನಿಷ್ಟನಂ ಕಂಡಂತೆ ಭೋಂಕನೆರ್ದು ಕುಳ್ಳಿರ್ದನಂ ಕಂಡರಸಂ ಸಂತೋಷಂಬಟ್ಟು ಶಿವಭೂತಿಗೆ ಪಿರಿದುಂ ವಿಭೂತಿಯಂ ಮಾಡಿ ಆತಂಗೆ ಕಿರಾತನಿಂದಾದವಸ್ಥೆಯಂ ಕೇಳ್ದಾ ಕಿರಾತನಂ ಯಮಪುರಕ್ಕೆ ಕಳುಪಿದಂ.

ಅದು ಕಾರಣದಿಂದೀ ಪಾಪಕರ್ಮನಂ ನಂಬಲ್ವೇಡ; ಕೆಡೆನೂಂಕೆಂಬುದುಂ, ಮರ್ಕಟ ನಿಂತೆಂದುದು : ಈತನನಾವ ತೆಱದಿಂ ನೂಂಕುವನಲ್ಲೆಂ ಪೋಗೆನೆ, ಪುಲಿ ಪೋದುದು. ಇತ್ತಂ ತರುಚರಂ ವನಚರಂ ಪಸಿದನೆಂದು ಫಲಾವಳಿಯಂ ತರಲ್ಪೋಪುದುಮಾ ಪಾಪಕರ್ಮನದಱ

ನೀರನ್ನು ಅಭಿಮಂತ್ರಿಸಿ ತಳಿದ ಕೂಡಲೇ ನಿರ್ವಿಷನಾಗುವೆ. ಆಗ ನಿಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳಿರಿ ಎಂದು ೧೮೧. ನಂದನವನದಲ್ಲಿ ಆಡುತ್ತಿದ್ದ ಅರಸುಮಗನ್ನು ಆ ಮಿತ್ರಕಾರ್ಯತತ್ಪರನಾದ ಉರಗ ಕಚ್ಚಿತು. ವ|| ವಿಷಸರ್ಪ ಕಚ್ಚಿದ ರಾಜಕುಮಾರನನ್ನು ಗಾರುಡಿಗರು ಬಂದು ಕಂಡು ತಮ್ಮತಮ್ಮ ತಿಳಿವಳಿಕೆಗೆ ಅನುಗುಣವಾಗಿ ಮಂತ್ರಿಸಿದರೂ ನಿರ್ವಿಷವಾಗದೆ ಇರಲು ಅರಸನು ಈ ರಾಜಕುಮಾರನನ್ನು ಏಳಿಸಿದವನಿಗೆ ಬೇಡಿದುದನ್ನು ಕೊಡುವೆನು ಎಂದು ಡಂಗುರ ಸಾರಲು ಅದನ್ನು ಕೇಳಿ ಶಿವಭೂತಿಯು ತಾನು ರಾಜಕುಮಾರನನ್ನು ಬದುಕಿಸುವೆನೆಂದು ಹೇಳಲು ಅವನನ್ನು ಸೆರೆಯಿಂದ ಬಿಡಿಸಿದರು. ತನ್ನ ಗುಂಡಿಗೆಯ ನೀರನ್ನು ಅಭಿಮಂತ್ರಿಸಿ ತಳಿಯಲು ರಾಜಕುಮಾರನು ದಷ್ಟನು ತನ್ನ ಇಷ್ಟನನ್ನು ಕಂಡವನಂತೆ ಭೋಂಕನೆ ಎದ್ದು ಕುಳಿತನು. ಅರಸನು ಕಂಡು ಸಂತೋಷಪಟ್ಟು ಶಿವಭೂತಿಗೆ ಬೇಕಾದಷ್ಟು ಐಶ್ವರ್ಯವನ್ನು ಕೊಟ್ಟು ಆತನಿಗೆ ಕಿರಾತನಿಂದ ಒದಗಿದ ದುರವಸ್ಥೆಯನ್ನು ತಿಳಿದು ಆ ಕಿರಾತನನ್ನು ಯಮಪುರಕ್ಕೆ ಕಳುಹಿಸಿದನು. ಅದರಿಂದ ಈ ಪಾಪಕರ್ಮನನ್ನು ನಂಬಬೇಡ ; ಬೀಳುವಂತೆ ಕೆಳಕ್ಕೆ ನೂಕು ಎನ್ನಲು ಆ ಮರ್ಕಟನು ಹೀಗೆಂದನು : ಈತನನ್ನು ನೀನು ಎಷ್ಟು ಹೇಳಿದರೂ ನೂಕಲಾರೆ ; ಇಲ್ಲಿಂದ ಹೊರಟುಹೋಗು ಎನ್ನಲು ಹುಲಿ ಅಲ್ಲಿಂದ ಹೋಯಿತು. ಇತ್ತ ಆ ತರುಚರ ವನಚರನು ಹಸಿದನು ಎಂದು ಫಲಾವಳಿಯನ್ನು ತರಹೋಗಲು ಆ ಪಾಪಕರ್ಮನು ಆ ಕಪಿಯ

ಮಱಿಗಳಂ ಕಂಡಿವೆನ್ನ ಕುಟುಂಬಕ್ಕೊಂದೆರಡು ದಿವಸದಾಹಾರಮಕ್ಕುಮೆಂದವಂ ತೆಗೆದುಕೊಂಡು ಪೋದಂ. ಅದಱಿಂ

ಏ ಪಡೆಮಾತೀ ಜಗದೊಳ್
ಕೋಪನನಂ ಪಾಪರೂಪನಂ ನಂಬಿದವಂ-
ಗಾಪತ್ತಱಿವವಿವೇಕಮನ-
ಸ್ತಾಪ ಪರಂಪರೆಗಳೆಂಬಿವಕ್ಕುಮಮೋಘಂ ೧೮೨

ಎಂದು ದವನಕಂ ಪೇೞ್ದ ಕಥೆಯಂ ಪಿಂಗಳಕಂ ಕೇಳ್ದಿಂತೆಂದಂ :

ವಿಷಮಮತಿ ನಿನ್ನ ಪೇೞ್ದುದೆ
ವಿಶೇಷಮತಮಪ್ಪುದಾದೊಡಂ ವೃಷಭೇಂದ್ರಂ
ಪಶು ನಿಷ್ಪಾಪಂ ಧಾರ್ಮಿಕ-
ನಶೇಷನೀತಿಜ್ಞನುಂ ಕೃತಜ್ಞನುಮಪ್ಪಂ ೧೮೩

ಅದಱಿಂ, ಸಂಜೀವಕನೊಳಾದ ವಿಶ್ವಾಸಂ ದೋಷಮಲ್ಲೆನೆ ಮತ್ತಂ ದವನಕನಿಂತೆಂದಂ : ಸಂಜೀವಕನ ತತ್ಸೂರ್ಮೆಯನಿನ್ನೇವೇೞ್ವೆ ಕ್ಷತ್ರಿಯಧರ್ಮವರ್ತಿಯಪ್ಪ ನಿನಗೆ ಯತಿಧರ್ಮಮಂ ಪತ್ತಿಸಿದಂ. ನೀನುಮದಱಂತೆ ಕೆಲವು ದಿನಕ್ಕೆ ಪುಲ್ಲಂ ತಿಂದು ಪಶುತ್ವಮಂ ಪೊರ್ದದಿರೆ ಎಂತುಂ,

ವಾಕ್ಯಂ ।।ಸಂಸರ್ಗಜಾ ದೋಷಗುಣಾ ಭವಂತಿ

ಟೀ।। ದೋಷಗುಣಗಳು ಸಹವಾಸದಿಂದುಂಟಾಗುವುವು-ಎಂಬ ಸುಭಾಷಿತಾರ್ಥಮೇಕೆ ತಪ್ಪುಗುಮೆನೆ, ಪಿಂಗಳಕನದೆಂತೆನೆ, ದವನಕಂ ಪೇೞ್ಗುಂ :

ಮರಿಗಳನ್ನು ಕಂಡು ಇವು ನನ್ನ ಕುಟುಂಬಕ್ಕೆ ಒಂದೆರಡು ದಿನಗಳವರೆಗೆ ಆಹಾರಕ್ಕಾದೀತು ಎಂದು ಕೊಂಡುಹೋದನು. ೧೮೨. ಅದರಿಂದ ಕೋಪಿಯನ್ನೂ ಪಾಪಕರ್ಮಿಯನ್ನೂ ನಂಬಿದವನಿಗೆ ಆಪತ್ತು ತಪ್ಪಿದ್ದಲ್ಲ ವ।। ಎಂದು ದವನಕನು ಹೇಳಿದ ಕಥೆಯನ್ನು ಪಿಂಗಳಕನು ಕೇಳಿ ಹೀಗೆಂದನು. ೧೮೩. ವಿಷಮಮತಿ ! ನೀನು ಹೇಳಿದುದು ನಿಜವಾದರೂ ವೃಷಭೇಂದ್ರನು ನಿಷ್ಪಾಪಿ, ಪಶು, ಧಾರ್ಮಿಕನು, ನೀತಿಜ್ಞ, ಕೃತಜ್ಞ, ವ।। ಅದರಿಂದ ಸಂಜೀವಕನೊಡನೆ ನನಗೆ ಉಂಟಾದ ಸ್ನೇಹ ನಿರ್ದುಷ್ಟವಾದುದು. ಅದಕ್ಕೆ ದವನಕನು ಹೀಗೆಂದನು : ಸಂಜೀವಕನ ಸ್ನೇಹವನ್ನು ಏನೆಂದು ಬಣ್ಣಿಸಲಿ ? ಕ್ಷತ್ರಿಯಧರ್ಮವರ್ತಿಯಾದ ನಿನಗೆ ಯತಿಧರ್ಮವನ್ನು ಅಂಟಿಸಿದ. ನೀನೂ ಅದರಂತೆ ಕೆಲವು ದಿನಗಳಲ್ಲಿ ಹುಲ್ಲು ತಿಂದು ಪಶುತ್ವವನ್ನು ಹೊಂದುವೆ. ವಾ।। 'ಸಂಸರ್ಗ ಜಾ ದೋಷಗುಣಾ ಭವಂತಿ' ಎಂಬ ಸುಭಾಷಿತದ ಅರ್ಥ ಏಕೆ ತಪ್ಪುವುದು ? ಎನ್ನಲು ಪಿಂಗಳಕನು ಅದೇನು ಎಂದು

೧೨. ಎರಡು ಗಿಣಿಗಳ ಕಥೆ

ಶ್ರೀಧರನಿಭನೆನೆ ನೆಗಳ್ದ ಜ-
ನೋದಯನೆಂಬರಸನೊರ್ಮೆ ಬೇಂಟೆಯನಾಡಲ್
ಪೋದುದನಱಿದಾತನ ದಾ-
ಯಾದಂ ಕೊಲಲೆಂದು ಮೇಲೆ ಬರ್ಪುದುಮಾಗಳ್ ೧೮೪

ಅಂತಾತನ ಬರವಂ ದೂರದೊಳೆ ಕಂಡು ಪಗೆವನಪ್ಪುದಂ ನಿಶ್ಚಯಮಾಗಲಱಿತು ಪಗೆಗೆ ಪಕ್ಕಾಗೆ ನಿಷ್ಕಾರಣಂ ಸಾವುದಾವ ಕಾರಣಂ. 'ಬರ್ದನೆ ಬಂಟಂ' ಎಂಬ ನಾಣ್ನುಡಿಯುಂಟು. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ಪುರಾಣವಾಕ್ಯಮುಂಟಪ್ಪುದಱಿಂ, ತಾನೇಱಿದ ಜಾತ್ಯಶ್ವಮಂ ಕೀಱಿ ಬಿಟ್ಟಕ್ಕಲೊಡಮದು ಗಾಳಿಗೆ ಗಱಿಮೂಡಿದಂತೆಯುಂ ಮನಮನೆಡಗಲಸಿದಂತೆಯುಮಾಗಿ ಪಿರಿದಂತರಮಂ ಪೋಗಿಯೊಂದು ಶಬರಶಿಬಿರಮನೆಯ್ದುವುದುಮದಂ ಕಂಡಲ್ಲಿ ನಿಲಲ್ಬಗೆದು ಬರ್ಪ ರಾಜಪುತ್ರನಂ ಪುಳಿಂದಮಂದಿರದೊಳೊಂದು ಪಂಜರಗತನಾಗಿರ್ದ ಶುಕಪತತ್ರಿ ಕಂಡು ನಿಜಾಧಿಪನಪ್ಪ ಕಿರಾತಾಧೀಶಂಗಿಂತೆಂದುದು :

ಎಲೆ ಶಬರರಾಜ ನೋಡಿನೆ
ಪಲವುಂ ಪೊಂದುಡಿಗೆದೊಟ್ಟು ಬಂದೊರ್ವಂ ವ್ಯಾ-
ಕುಲನಾಗಿರ್ಪಂ ನೀಂ ವ್ಯಾ-
ಕುಲನಲ್ಲದೆ ಬಂದು ಪಿಡಿದುಕೊಳ್ಳೀ ಧನಮಂ ೧೮೫

ಎಂದು ಗಳಪುವರಗಿಳಿಯ ಸರಮನಾಲಿಸಿ ಕೇಳ್ದಲ್ಲಿಯುಂ ನಿಲಲಣ್ಮದೆ ಮತ್ತಂ ಕಿಱಿದಂತರಮಂ ಬರ್ಪುದುಮಾ ಮಹಾಗಹನಮಧ್ಯದೊಳಂಬರವರೆಗಂ ಬೆಳೆದ ಮರದುಱುಗಲ ನಡುವೆ ನೀಳ್ದೊಪ್ಪಿ

ಕೇಳಲು ದವನಕನು ಹೇಳತೊಡಗಿದನು : ೧೮೪. ಶ್ರೀಮನ್ನಾರಾಯಣನಿಗೆ ಸಮಾನನೆಂಬಂತಿದ್ದ ಜನೋದಯ ಎಂಬ ರಾಜನು ಒಮ್ಮೆ ಬೇಟೆಯನ್ನಾಡಲು ಕಾಡಿಗೆ ಹೋದುದನ್ನು ತಿಳಿದು ಅವನ ದಾಯಾದಿ ಅವನನ್ನು ಕೊಲ್ಲಬೇಕೆಂದು ಅವನನ್ನು ಹಿಂಬಾಲಿಸಿದನು. ವ॥ ಅವನ ಬರವನ್ನು ದೂರದಿಂದಲೇ ಕಂಡು ಅವನು ತನ್ನ ಹಗೆ ಎಂಬುದನ್ನು ನಿಶ್ಚಯಿಸಿ ಹಗೆಗೆ ಗುರಿಯಾಗಿ ನಿಷ್ಕಾರಣವಾಗಿ ಯಾಕೆ ಸಾಯಬೇಕು, 'ಬದುಕಿದವನೇ ಬಂಟ' ಎಂಬ ನಾಣ್ಣುಡಿಯುಂಟು. 'ಶರೀರಮಾದ್ಯಂ ಖಲುಧರ್ಮಸಾಧನಂ' ಎಂಬ ಪುರಾಣವಾಕ್ಯ ಉಂಟು. ಅದರಿಂದ ತಾನು ಏರಿದ ಜಾತ್ಯಶ್ವವನ್ನು ಸವರಲು ಅದು ಗಾಳಿಗೆ ಗರಿಮೂಡಿದಂತೆಯೂ ಮನಸ್ಸಿನ ವೇಗಕ್ಕೂ ಮಿಗಿಲೆಂಬಂತೆಯೂ ದೂರ ಹೋಗಿ ಒಂದು ಬೇಡರ ಬಿಡಾರವನ್ನು ತಲುಪಿತು. ಅದನ್ನು ಕಂಡು ಅಲ್ಲಿ ನಿಲ್ಲಬೇಕೆಂದು ಬರುತ್ತಿದ್ದ ರಾಜಕುಮಾರನನ್ನು ಬೇಡರ ಬಿಡಾರದಲ್ಲಿದ್ದ ಪಂಜರದ ಗಿಣಿ ಕಂಡು ತನ್ನ ಅಧಿಪತಿಯಾದ ಕಿರಾತಾಧೀಶನಿಗೆ ಈ ರೀತಿಯಾಗಿ ಹೇಳಿತು: ೧೮೫. ಎಲೈ ಶಬರರಾಜ ! ಬಗೆಬಗೆಯ ಚಿನ್ನದ ಆಭರಣಗಳನ್ನು ತೊಟ್ಟುಕೊಂಡು ಒಬ್ಬನು ವ್ಯಾಕುಲಗೊಂಡು ಇಲ್ಲಿಗೆ ಬರುತ್ತಿದ್ದಾನೆ. ನೀನು ನಿರ್ವ್ಯಾಕುಲನಾಗಿ ಈ ಐಶ್ವರ್ಯವನ್ನು ತೆಗೆದುಕೊಳ್ಳು ವ॥ ಎಂದು ಗಳಹುವ ಅರಗಿಳಿಯ ಮಾತನ್ನು ಕೇಳಿ ಅಲ್ಲಿಯೂ ನಿಲ್ಲಲಾರದೆ ಸ್ವಲ್ಪದೂರ ಮುಂದುವರಿದನು. ಆ ಮಹಾಗಹನ ಮಧ್ಯದಲ್ಲಿ

ದಿವಕ್ಕೆ ಪೋಪ ಬಟ್ಟೆಗೆ ಸೋಪಾನಂಗಟ್ಟಿದಂತೆ ತೆಱತೆಱದಿಂ ನೆಗೆದೊಗೆವ ಪೊಗೆಯಂ ಕಂಡು ಮತ್ತಮದಂ ಬೇಡರ ಪಳ್ಳಿಯೆಂದೆ ಬಗೆದು ಭಯಂಗೊಂಡು ತನ್ನಿಷ್ಟದೈವಮಂ ಸ್ಮರಿಸಿ ತನ್ನಪ್ಪುದಕ್ಕೆ ಇನ್ನೆತ್ತಂ ಪೋಪೆಂ ; ಕುದುರೆಯುಂ ಜವಂಗೆಟ್ಟುದು ; ನಾಂ ಪಥಶ್ರಾಂತನಾದೆನಗೆ ದೈವಮೇ ಶರಣೆಂದು ಕಂಠಗತಪ್ರಾಣನಾಗಿ ಮನಂಗುಂದಿ ಬರ್ಪ ಜನೋದಯನೃಪಂಗೆ ಪ್ರಾಣವಾಯು ಬರ್ಪಂತೆ ಹೋಮಧೂಮಧೂಪಿತ ದಿವ್ಯಗಂಧಾಮೃತಂ ಬೆರಸು,

ವಿದಳಿತ ಪುಷ್ಪಸೌರಭಮನಾವಗಮಿರ್ಕುಳಿಗೊಂಡು ಕೊಂಡು ಷ-
ಟ್ಪದ ಪದಪದ್ಮಿನೀನಿವಹಪತ್ರದೊಳೊಯ್ಯನೆ ಕೂಡಿ ಕೂಡಿ ಮಾ-
ಣದೆ ವಿವಿಧ ದ್ರುಮೋತ್ಕರದಿಱುಂಬಿನೊಳಿಂಬೆನೆ ನಿಂದು ನಿಂದು ತೀ-
ಡಿದುದಪಹಾರಣಂ ಪಥಪರಿಶ್ರಮವಾರಣನಾ ಸಮೀರಣಂ ೧೮೬

ಅಂತು ಬಂದ ಮಂದಮಾರುತನಿಂದಾಪ್ಯಾಯಿತಶರೀರನಾಗಿ ತದ್ಧೂಪವಾಸನೆಯಿಂದಿದು ಋಷ್ಯಾಶ್ರಮಮೆಂದು ನಿಶ್ಚೈಸಿ ತದಾಶ್ರಮಾಭಿಮುಖನಾಗಿ ಬರುತ್ತುಮಾಶ್ರಮಿಗಳ ಹೋಮಕಾರ್ಯಕ್ಕೆ ಕಱೆವ ಕಾಮಧೇನುಗಳಂತೆ ಕಱೆವ ಹೋಮಧೇನುಗಳಂ ಕಿಡಲೀಯದೆ ಕಾದು ಪಾಲಾಶಾಶ್ವತ್ಥೋದುಂಬರಾರ್ಕ ನ್ಯಗ್ರೋಧ ಶಮ್ಯಪಾಮಾರ್ಗ ಖದಿರಾದಿ ಶುಷ್ಕ ಸಮಿತ್ತುಗಳುಮಂ ಕುಶಾಶ್ವಲಾಯನ ವಿಶ್ವಾಮಿತ್ರಾದಿ ದೂರ್ವಾಂಕುರ ಪವಿತ್ರವಸ್ತುಗಳುಮಂ ಕೊಂಡು ಧೇನುಗಳಂ ಮುಂಕೊಂಡು ಬರ್ಪ ಶಿಷ್ಯಸಮೂಹಂಗಳುಮಂ, ಕುಂದ ಮುಚುಕುಂದ ಮಂದಾರೇಂದೀವರ ನಂದ್ಯಾವರ್ತ ತ್ರಿಸಂಧ್ಯಾ ಬಂಧೂಕ ಕದಂಬ ಕನಕ ಕರವೀರ ಕರ್ಣಿಕಾರ ಕುಮುದ ವಕುಳ ಕುರವಕ ಕಮಲ ತಿಲಕ ಚಂಪಕ ಪಾಟಲಿ ಪಾರಿಜಾತ ಜಾತಿ ಪುನ್ನಾಗ ಮಲ್ಲಿಕಾದ್ಯನೇಕ ಸುರಭಿ

ಮುಗಿಲು ಮುದ್ದಿಡುವ ಮರಗಳ ಗುಂಪಿನ ನಡುವೆ ಸ್ವರ್ಗಕ್ಕೆ ಹೋಗಲು ಸೋಪಾನ ಕಟ್ಟಿದಂತೆ ಏರುತ್ತಿದ್ದ ಹೊಗೆಯನ್ನು ಕಂಡು ಅದೂ ಬೇಡರ ಹಳ್ಳಿಯೆಂದೇ ಭಾವಿಸಿ ಭಯಗೊಂಡು ತನ್ನ ಇಷ್ಟದೈವವನ್ನು ಸ್ಮರಿಸಿದನು. ಆಗುವುದು ಆಗಲಿ, ಇನ್ನೆತ್ತ ಹೋಗಲಿ; ಕುದುರೆಗೂ ಶ್ರಮವಾಗಿದೆ. ಮಾರ್ಗಾಯಾಸದಿಂದ ಬಳಲಿದ ನನಗೆ ದೇವರೇ ಗತಿಯೆಂದು ಕಂಠಗತಪ್ರಾಣನಾಗಿ ಮನಗುಂದಿ ಬರುತ್ತಿದ್ದ ಜನೋದಯ ನೃಪನಿಗೆ ಪ್ರಾಣವಾಯು ಬರುವಂತೆ ಹೋಮಧೂಮದ ಕಂಪನ್ನು ಹೊತ್ತ ತಂಗಾಳಿ ತೀಡಿತು. ಆ ಮಂದ ಮಾರುತದಿಂದ ದೇಹದ ಬಳಲಿಕೆ ಪರಿಹಾರವಾಗಿ ಆ ಧೂಪವಾಸನೆಯಿಂದ ಇದು ಋಷ್ಯಾಶ್ರಮವಾಗಿರಬೇಕೆಂದು ನಿಶ್ಚಯಿಸಿ ಆ ಆಶ್ರಮಕ್ಕೆ ಎದುರಾಗಿ ಬರುತ್ತಿದ್ದನು. ಆಶ್ರಮಿಗಳ ಹೋಮಕಾರ್ಯಕ್ಕೆ ಕರೆವ ಕಾಮಧೇನುಗಳಂತೆ ಕರೆವ ಹೋಮಧೇನುಗಳನ್ನು ಕಳೆದುಹೋಗದಂತೆ ಕಾಯುತ್ತ ಪಲಾಶ, ಅಶ್ವತ್ಥ, ಅತ್ತಿ, ಎಕ್ಕೆ, ಆಲ, ಶಮಿ ಮೊದಲಾದ ಒಣಸೌದೆಗಳನ್ನೂ ಆಶ್ವಲಾಯನ ವಿಶ್ವಾಮಿತ್ರ ಎಂಬ ದರ್ಭೆ ದೂರ್ವಾಂಕುರ ಮೊದಲಾದ ಪವಿತ್ರವಸ್ತುಗಳನ್ನೂ ಹೊತ್ತುಕೊಂಡು ಮೊಲ್ಲೆ, ನಿತ್ಯಮಲ್ಲಿಗೆ, ಮಂದಾರ, ಕನ್ನೈದಿಲೆ, ನಂದಿಬಟ್ಟಲು, ತ್ರಿಸಂಧ್ಯಾ, ಬಂಧೂಕ, ಕದಂಬ, ಹೊಂಗಣಗಿಲೆ, ಬೆಟ್ಟದಾವರೆ, ಬಿಳಿಯ ನೈದಿಲೆ, ಬಕುಳ, ಕುರವಕ, ತಾವರೆ, ತಿಲಕ, ಸಂಪಿಗೆ, ಪಾದರಿ, ಪಾರಿಜಾತ, ಜಾಜಿ, ಸುರಹೊನ್ನೆ, ಮಲ್ಲಿಗೆಗಳನ್ನು ಕೊಂಡು ಬರುತ್ತಿದ್ದ ಶಿಷ್ಯಸಮೂಹವನ್ನೂ, ಬಗೆಬಗೆಯ ಪರಿಮಳಭರಿತವಾದ ಹೂವುಗಳನ್ನೂ ಮೊಗ್ಗೆಗಳನ್ನೂ ಬುಟ್ಟಿಯಲ್ಲಿ ತುಂಬಿಕೊಂಡು

ಕುಸುಮಂಗಳಂ ಸಜ್ಜುಕಮಪ್ಪುವಂ ಪುಟ್ಟಿಯೊಳ್ ತೀವಿಕೊಂಡು ದಧಿ ಮಧು ಘೃತ ಕ್ಷೀರ ಗೋಮಯ ಗೋಮೂತ್ರಂಗಳುಮಂ ಪುಣ್ಯತೀರ್ಥೋದಕಗಳುಮಂ ಕಲಶಂಗಳೊಳ್ ತೀವಿಕೊಂಡು ತಪೋಧನರ ದೇವತಾರಾಧನೆಗೆ ಕಾಲಾತಿಕ್ರಮಮಾಗಲೀಯದ ಧಾಳಾಧಾಳಿಯಲ್ಲಿ ಬರ್ಪ ಪರಿಚಾರಕರ ನೆರವಿಯುಮಂ ಕಂಡವರ ಪಿಂದುಪಿಂದನೆ ಬಂದು ಮುನಿವನಮನೆಯ್ದುವುದುಮಾ ವನದೊಳಾ ವನಕ್ಕಿಕ್ಕಿದ ಬಾಳ್ವೇಲಿಯಂತೆ ರಸರಸಾಯನಂಗಳಂ ತೀವಿ ನೇಲೆದ ಪೊಂಗಳಸಂಗಳಂತಪ್ಪ ನವಫಲಂಗಳಿಂ ನೆಱೆದೊಪ್ಪುವ ಮಾತುಲುಂಗದ ಪೊದಱುಗಳುಮನಾ ಪೊದಱ ಮೊದಲೊಳೊದವಿ ಬೆಳೆದು ಬೀಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆಯಂಕುರವೊತ್ತಿ ಬೆಳೆಯುತಿರ್ದ ಕಬ್ಬಿನ ಪುದಲ್ಗಳುಮಂ ಅಲ್ಲಿಂದೊಳಗೆ ಕಲ್ಪವೃಕ್ಷದೊಳ್ವಿಕಲ್ಪಮಿಲ್ಲೆನಿಸಿ ಬೇರಿಂತೊಟ್ಟು ತುದಿಗೊಂಬುವರಮೋರಂತೆ ನೇಲೆದುವಾಗಿರ್ದಲೆಯಿಂ ತುಱುಗಿ ಫಲವಾದ ಪನಸಿನ ಮರಂಗಳುಮಂ, ಭೂತಳಕ್ಕತಿಪ್ರೀತಿಕರಮಾಗಿ ಪೂತು ಪಣ್ತಱಗಿದರ ನೇಲೆಲು ಇಮ್ಮಾವಿನ ತೆಂಗಿನ ನಾರಂಗದ ಮರಂಗಳ್ ಮೊದಲಾಗಿ ಫಲಂಗಳಿಂ ನೆಱೆದೊಪ್ಪುವನೇಕ ವೃಕ್ಷಂಗಳುಮಂ, ಆ ಮರಂಗಳ ಶಾಖಾಗ್ರಂಗಳ ತಳಿರ ತುಱುಗಲೊಳಿರ್ದು ಪಾಪರೂಪನಿದಂ ಪುಗಲ್ವೇಡೆಂಬಂತೆ ಪುಗಿಲ್ಪುಗಿಲೆನುತಿರ್ಪ ಪುಷ್ಟಪರಪುಷ್ಟಂಗಳುಮಂ, ಮೃದುಮಧುರ ಗಂಭೀರ ರವದಿಂ ಸಾಮವೇದಮನನುವಾದಂಗೆಯ್ವುತಿರ್ಪ ಮಧುಕರಪ್ರಕರಮುಮಂ, ವೇದಾಂತ ಸಿದ್ಧಾಂತ ಪ್ರಮಾಣ ಶಾಸ್ತ್ರಂಗಳನೋದಿ ತರ್ಕಿಸುವ ಪಂಡಿತರ್ಕಳೊಡನೆ ತೊಡರ್ದು ನುಡಿದು ಸದುತ್ತರಂಗುಡುತಿರ್ಪ

ಮೊಸರು, ಜೇನುತುಪ್ಪ, ಹಾಲು ಗೋಮಯ, ಗೋಮೂತ್ರಗಳನ್ನೂ ಪುಣ್ಯ ತೀರ್ಥೋದಕಗಳನ್ನೂ ಕಲಶಗಳಲ್ಲಿ ತುಂಬಿಕೊಂಡು ತಪೋಧನರ ದೇವತಾರಾಧನೆಗೆ ಕಾಲ ಮೀರದಂತೆ ಧಾಳಾಧಾಳಿಯಲ್ಲಿ ಬರುತ್ತಿದ್ದ ಪರಿಚಾರಕರ ಗುಂಪನ್ನೂ ಕಂಡು ಅವರ ಹಿಂದೆಯೇ ಬಂದು ಮುನಿವನವನ್ನು ಸೇರಿದನು. ಆ ವನದಲ್ಲಿ ಆ ವನಕ್ಕೆ ಹಾಕಿದ ಜೀವಂತವಾದ ಬೇಲಿಯಂತೆ ರಸರಸಾಯನಗಳನ್ನು ತುಂಬಿಕೊಂಡು ಚಿನ್ನದ ಕಲಶಗಳಂಥ ಹೊಸಹಣ್ಣುಗಳಿಂದ ತುಂಬಿ ಶೋಭಿಸುವ ಮಾದಳದ ಪೊದೆಗಳನ್ನೂ, ಅವುಗಳ ಬುಡದಲ್ಲಿ ಬೆಳೆದು ಬೀಗಿ ತಮ್ಮಿಂದ ತಾವೇ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಹಣ್ಣುಗಳ ತಂಪಾದ ರಸದ ಪ್ರವಾಹವೇ ಕಾಲುವೆಯಾಗಲು ಮೊಳಕೆ ಬಿಟ್ಟು ಬೆಳೆಯುತ್ತಿದ್ದ ಕಬ್ಬಿನ ಸೋಗೆಗಳನ್ನೂ, ಅಲ್ಲಿಂದ ಒಳಗೆ ಕಲ್ಪವೃಕ್ಷಕ್ಕೂ ಇದಕ್ಕೂ ವ್ಯತ್ಯಾಸವಿಲ್ಲವೆಂಬಂತೆ ಬೇರಿನಿಂದ ತುದಿಕೊಂಬೆಯವರೆಗೆ ಒಂದೇ ರೀತಿಯಾಗಿ ತುಂಬಿದ ಎಲೆಗಳಿಂದ ಕಿಕ್ಕಿರಿದು ಹಣ್ಣು ಬಿಟ್ಟ ಹಲಸಿನ ಮರಗಳನ್ನೂ, ಭೂಮಿಗೆ ಅತ್ಯಂತ ಪ್ರೀತಿಯಾಗುವಂತೆ ಹೂಬಿಟ್ಟು ಹಣ್ಣಾಗಿ ಎರಗಿದ ಅರನೇರಿಳೆಯ, ಇಮ್ಮಾವಿನ, ತೆಂಗಿನ, ಕಿತ್ತಿಳೆಯ ಮರಗಳು ಹಣ್ಣುಗಳಿಂದ ತುಂಬಿ ಶೋಭಿಸುವ ಅನೇಕ ವೃಕ್ಷಗಳನ್ನೂ, ಆ ಮರಗಳು ಕೊಂಬೆಗಳ ತುದಿಯ ಚಿಗುರ ಪೊದೆಯಲ್ಲಿದ್ದು ಪಾಪರೂಪನಾದವನು ಇದನ್ನು ಪ್ರವೇಶಿಸಬೇಡ ಎಂಬಂತೆ ಪುಗಿಲ್ ಪುಗಿಲ್ ಎನ್ನುತ್ತಿರುವ ಪುಷ್ಟವಾದ ಕೋಗಿಲೆಗಳನ್ನೂ, ಮೃದುಮಧುರ ಗಂಭೀರ ಸ್ವರದಿಂದ ಸಾಮವೇದವನ್ನು ಅನುವಾದಿಸುವಂತಿದ್ದ ತುಂಬಿಗಳ ಹಿಂಡನ್ನೂ, ವೇದಾಂತ ಸಿದ್ಧಾಂತ ಪ್ರಮಾಣ ಶಾಸ್ತ್ರಗಳನ್ನು ಓದಿ ತರ್ಕಿಸುವ ಪಂಡಿತರೊಡನೆ ಸೇರಿ ನುಡಿಯುತ್ತ ಸದುತ್ತರ

ಶುಕಶಾರಿಕಾನಿಕಾಯಂಗಳುಮಂ, ಪಂಚಾಗ್ನಿತಾಪತಪ್ತಮಾನಸರಪ್ಪ ತಪೋಧನಜನಕ್ಕೆ ತಪನತಾಪಮನಾಗಲೀಯದೆ ತಳಿರ್ದುಱುಗಲಂ ಪೊತ್ತು ನಭದೊಳ್ ನಲಿದಾಡುವ ಸೋಗೆನವಿಲ್ಗಳ ಪಿಂಡುಗಳುಮಂ, ಅಗ್ನಿಹೋತ್ರೋಪಚರಣ ಪರಿಣತಾಂತಃಕರಣರಪ್ಪ ಆಹಿತಾಗ್ನಿಗಳ ಮೆಯ್ಯೊಳೊಗೆದ ಶ್ರಮಸ್ವೇದಬಿಂದುಗಳುಮಂ ತಂತಮ್ಮೆಱಂಕೆಯ ಗಾಳಿಯೊಳಾಱಿಸುತ್ತಿರ್ಪ ರಾಜಹಂಸೆಗಳುಮಂ, ದೇವತಾರಾಧನಂಗೆಯ್ವ ತಪೋಧನರ್ಗಿರದೆ ಗದ್ದುಗೆಗಳಂ ಕಟ್ಟಿ ಧೂಪದೀಪಂಗಳುಮಂ ಕೊಟ್ಟು ಪರಿಯಚ್ಛಿಗೆಯ್ವ ಪಟುತರ ಮರ್ಕಟಸಮೂಹಂಗಳುಮಂ, ಕೃಚ್ಛ್ರಾತಿಕೃಚ್ಛ್ರ ಚಾಂದ್ರಾಯಣ ಸಾಂತಪನಾದಿ ಮಹಾತಪಂಗಳಿಂ ತಪ್ತರಾಗಿ ಕ್ಷೀಣಧಾತುಗಳಾಗಿಯುಂ ಮಾಣದೆ ನಡೆವಾಡುತಿರ್ದೆಡವಿ ಕೆಡೆವ ಜರತ್ತಾಪಸರ ಕಯ್ಯಂ ಪಿಡಿದೊಯ್ಯನೆತ್ತುವ ಗೋಲಾಂಗೂಲಜಾಲಮುಮಂ, ಹೋಮಾಗ್ನಿಯಂ ನಂದಿಸಲುಂ ಕುಂದಿಸಲುಮೀಯದೆ ಶುಷ್ಕಸಾಧನಂಗಳಂ ಸಂಧಿಸುವ ಕರಿಕರೇಣುಗಳುಮಂ, ಸ್ನಾತಕವ್ರಾತಕ್ಕೆ ಶೌಚಕಾರ್ಯ ನಿಮಿತ್ತಂ ದರಿಯ ಮಣ್ಣಂ ಕೋಡೊಳೆತ್ತಿ ತಂದವರ ಮುಂದಿಕ್ಕುವ ಭದ್ರಗಜವ್ರಜಮುಮಂ, ತೀರ್ಥಸ್ನಾನಾರ್ಥಂ ಪರಸ್ಥಾನಂಗೆಯ್ವ ವಾನಪ್ರಸ್ಥಜನಂಗಳ ಧೌತವಸ್ತ್ರ 'ಪವಿತ್ರಾಕ್ಷಸೂತ್ರಂಗಳಂ ತಮ್ಮ ಕವಲ್ಕೊಂಬುಗಳೊಳ್ ಸೇಱಿಸಿಕೊಂಡಿಂಬಿನೊಳವರೊಡನೆ ನಡೆವ ಸಾರಂಗಸಮೂಹಮುಮಂ, ಭಿಕ್ಷುಗಳ ಭೈಕ್ಷಂಗಳೊಳ್ ಮಕ್ಷಿಕಾಸಂಗತಿಯಾಗಲೀಯದೆ ತಮ್ಮ ಬಾಲಂಗಳೊಳ್ ಬೀಸುತ್ತುಂ ಪೋಪ ಚಮರೀಮೃಗಂಗಳುಮಂ, ಕಾಂತಾರ ಭೈಕ್ಷಾಹಾರಿಗಳಪ್ಪ ಭಿಕ್ಷುಗಳ್ಗೆ ವೃಕ್ಷರೂಪದೊಳಿರ್ದು ಭಿಕ್ಷಮನಿಕ್ಕುವ ಯಕ್ಷದೇವತೆಯರುಮಂ, ಯೋಗಾಭ್ಯಾಸಂಗೆಯ್ವ ಯೋಗೀಂದ್ರಬೃಂದಕ್ಕೆ ಯೋಗಾಸನಮಾಗಿ

ಕೊಡುತ್ತಿರುವ ಶುಕಸಾರಿಕೆಗಳ ಸಮೂಹಗಳನ್ನೂ, ಪಂಚಾಗ್ನಿ ತಾಪತಪ್ತ ಮಾನಸರಾದ ತಪೋಧನರಿಗೆ ಬಿಸಿಲಿನ ಝಳ ತಾಗದಂತೆ ಚಿಗುರುಗಳ ಹೊರೆಯನ್ನು ಹೊತ್ತು ಬಾನಿನಲ್ಲಿ ನಲಿದಾಡುವ ಗಂಡು ನವಿಲುಗಳ ಹಿಂಡುಗಳನ್ನೂ, ಅಗ್ನಿಹೋತ್ರಗಳನ್ನು ಆಚರಿಸುವುದರಲ್ಲಿ ಪರಿಣತಾಂತಃಕರಣರಾದ ಆಹಿತಾಗ್ನಿಗಳ ಮೈಯಲ್ಲಿ ಹುಟ್ಟಿದ ಬೆವರಿನ ಹನಿಗಳನ್ನು ತಮ್ಮ ತಮ್ಮ ರೆಕ್ಕೆಯ ಗಾಳಿಯಿಂದ ಆರಿಸುತ್ತಿದ್ದ ರಾಜಹಂಸೆಗಳನ್ನೂ, ದೇವತಾರಾಧನೆಯನ್ನು ಮಾಡುವ ತಪೋಧನರಿಗೆ ಪೀಠಗಳನ್ನು ಕಟ್ಟಿ ಧೂಪದೀಪಗಳನ್ನು ಕೊಟ್ಟು ಸೇವೆ ಮಾಡುವ ಚುರುಕಿನ ಮಂಗಗಳ ಸಮೂಹಗಳನ್ನೂ, ಕೃಚ್ಛ್ರ, ಅತಿಕೃಚ್ಛ್ರ, ಚಾಂದ್ರಾಯಣ, ಸಾಂತಪನ ಮೊದಲಾದ ಮಹಾತಪಸ್ಸುಗಳಿಂದ ತಪ್ತರಾಗಿ ಕ್ಷೀಣಧಾತುಗಳಾದರೂ ಬಿಡದೆ ನಡೆದಾಡುತ್ತಿದ್ದು ಎಡವಿ ಬೀಳುವ ವೃದ್ಧತಾಪಸರ ಕಯ್ಯನ್ನು ಹಿಡಿದು ಕೂಡಲೇ ಎತ್ತುವ ಕೋತಿಗಳ ಗುಂಪನ್ನೂ, ಹೋಮಾಗ್ನಿಯನ್ನು ನಂದಿಸಲೂ ಕುಂದಿಸಲೂ ಬಿಡದೆ ಒಣಗಿದ ಸಾಧನಗಳನ್ನು ಜೋಡಿಸುವ ಆನೆಯ ಮರಿಗಳನ್ನೂ, ಸ್ನಾತಕವ್ರಾತಕ್ಕೆ ಶೌಚಕಾರ್ಯಕ್ಕಾಗಿ ಕಣಿವೆಯ ಮಣ್ಣನ್ನು ಕೊಂಬುಗಳಿಂದ ಎತ್ತಿ ತಂದು ಅವರ ಮುಂದೆ ಹಾಕುವ ಉತ್ತಮವಾದ ಗಜಗಳ ಗುಂಪನ್ನೂ, ತೀರ್ಥಸ್ನಾನಕ್ಕಾಗಿ ಪ್ರಯಾಣಿಸುವ ವಾನಪ್ರಸ್ಥ ಜನರ ಧೋತ್ರ, ಪವಿತ್ರ ಜಪಸರಗಳನ್ನು ತಮ್ಮ ಕವಲುಗೊಂಬುಗಳಲ್ಲಿ ಸಿಕ್ಕಿಸಿಕೊಂಡು ಅವರೊಡನೆ ನಡೆಯುವ ಸಾರಂಗಸಮೂಹವನ್ನೂ, ಭಿಕ್ಷುಗಳ ಭಿಕ್ಷೆಯಲ್ಲಿ ನೊಣಗಳು ಬೀಳದಂತೆ ತಮ್ಮ ಬಾಲಗಳಿಂದ ಬೀಸುತ್ತ ಹೋಗುವ ಚಮರೀಮೃಗಗಳನ್ನೂ, ಕಾಡಿನಲ್ಲಿ ಭಿಕ್ಷಾಹಾರಿಗಳಾದ ಭಿಕ್ಷುಗಳಿಗೆ ವೃಕ್ಷರೂಪದಲ್ಲಿದ್ದು ಭಿಕ್ಷೆಯನ್ನು ಹಾಕುವ ಯಕ್ಷದೇವತೆಗಳನ್ನೂ, ಯೋಗಾಭ್ಯಾಸವನ್ನು ಮಾಡುವ ಯೋಗೀಂದ್ರವೃಂದಕ್ಕೆ

ಸುತ್ತುಗೊಂಡು ಬತ್ತರಂಗೆಯ್ವಂತಿರ್ದ ಭೋಗೀಂದ್ರವೃಂದಮುಮಂ, ಬಾಲಕರಂತೆ ಕಂದಮೂಲಫಲಂಗಳಂ ಪೆಱರ್ ತಂದಿಕ್ಕೆ, ತಿಂದಾನಂದಮನಸ್ಕರಾಗಿ ನಿಂದ ತಪೋಧನರುಮಂ, ಚಕ್ಷುಶ್ರುತಿಗಳಂತೆ ವಾಯುಭಕ್ಷಕರಾಗಿರ್ದ ಮುಮುಕ್ಷುನಿಕರಮುಮಂ, ನೀರ್ಮಾನಸರಂತೆ ನೀರೊಳ್ ನೆಲೆಸಿರ್ದುದಕವಾಸಿಗಳುಮಂ, ಸಂಸಾರಸಾಗರಮನೀಯಂದದಿಂ ದಾಂಟುವುದೆಂದು ತೋಱುವಂದದಿಂದೊಂದೆ ಕಾಲೊಳ್ ನಿಂದಿರ್ದೇಕಪಾದವ್ರತಸ್ಥರುಮಂ, ಸಗ್ಗದ ಬಟ್ಟೆಯಂ ಸುಟ್ಟಿ ತೋಱುವಂತೆ ಕಯ್ಯನೆತ್ತಿ ನಿಂದೂರ್ಧ್ವಬಾಹುವ್ರತಿಗಳುಮಂ, ಪಸರಿಸಿದ ಕುಸುಮದೆಸಳ ಕಸವರಂ ದೆಸೆದೆಸೆಗೆ ಮಸುಳೆ ಮಲಯಾನಿಳಂ ಬೀಸಿ ಕಳೆಯೆ ತ್ರಿಕಾಲದೊಳಂ ಖಿಲ್ವಾಯಿತನಂತೆ ಗಂಗಾಜಲಮಂ ತಂದು ತಳಿವ ಬೆಳ್ಮುಗಿಲ್ಗಳುಮಂ, ಧರ್ಮಶಾಸ್ತ್ರ ವ್ಯಾಖ್ಯಾನಂಗೆಯ್ವ ಮುನಿಮುಖ್ಯರ ಪಕ್ಕದೊಳಾಗಳುಮಗಲದ ಕರಿ ರುರು ಹರಿಣ ಶಶಕ ಸಾರಂಗಮು ಮೊದಲಾದ ಮೃಗಂಗಳೊಡನೆ ಬದ್ಧವೈರಮಂ ಪತ್ತುವಿಟ್ಟು ಒಂದೊಂದನವುಂಕಿ ನೂಂಕಿ ಪತ್ತಿ ಕಿವಿಯಿತ್ತೊಲ್ದು ಕೇಳ್ವ ಸಿಂಹ ಶರಭ ಶಾರ್ದೂಲ ವ್ಯಾಳಾದಿ ಕ್ರೂರಮೃಗನಿವಹಮುಮಂ ಕಂಡಾ ತಪೋಧನರ ತಪೋವನದ ತಪಃಪ್ರಭಾವಕ್ಕಮಲ್ಲಿಯ ಪಶುಮೃಗ ಪಕ್ಷಿಜಾತಿಗಳ್ ಮೊದಲಾದ ಚರಾಚರಂಗಳ್ಗೆ ಪುಟ್ಟಿದುಪಶಮಾದಿ ಗುಣಕ್ಕಂ ಚೋದ್ಯಂಬಟ್ಟು ನೋಡುತಿರ್ದ ರಾಜಕುಮಾರನಂ ಅಲ್ಲಿರ್ದುದೊಂದು ರಾಜಕೀರಂ ಕಂಡು, ಎಲೆ ಮಹಾಪುರುಷ! ನೀನುಂ ಕುದುರೆಯುಂ ಕರಂ ಬಳಲ್ದಿರ್ ಇಂದಿನ ದಿವಸಮನೀ ಋಷ್ಯಾಶ್ರಮದೊಳ್ ವಿಶ್ರಮಿಸಿ ಪೋಗಿಮೆಂಬುದುಂ ಆ ಪಕ್ಷಿಯ ಮಾತು ತನ್ನ ಮನಕ್ಕೆ ಬಂದು

ಯೋಗಾಸನವಾಗಿ ಸುತ್ತಿಕೊಂಡು ವಿಸ್ತಾರಗೈಯ್ಯುವಂತಿದ್ದ ಭೋಗೀಂದ್ರವೃಂದವನ್ನೂ, ಬಾಲಕರಂತೆ ಕಂದಮೂಲಫಲಗಳನ್ನು ಬೇರೆಯವರು ತಂದುಹಾಕಲು ತಿಂದು ಆನಂದ ಮನಸ್ಕರಾಗಿರುವ ತಪೋಧನರನ್ನೂ, ಹಾವುಗಳಂತೆ ವಾಯುಭಕ್ಷಕರಾಗಿದ್ದ ಮುಮುಕ್ಷು ನಿಕರವನ್ನೂ, ನೀರ್ಮಾನಸರಂತೆ ನೀರಿನಲ್ಲಿ ನೆಲೆಸಿದ್ದ ಉದಕವಾಸಿಗಳನ್ನೂ, ಸಂಸಾರ ಸಾಗರವನ್ನು ಈ ರೀತಿಯಿಂದ ದಾಟುವುದೆಂದು ತೋರಿಸುವಂತೆ ಒಂದೇ ಕಾಲಿನಲ್ಲಿ ನಿಂತಿದ್ದ ಏಕಪಾದವ್ರತಸ್ಥರನ್ನೂ, ಸ್ವರ್ಗದ ಮಾರ್ಗವನ್ನು ನಿರ್ದೇಶಿಸಿ ತೋರುವಂತೆ ಕೈಯ್ಯನ್ನೆತ್ತಿ ನಿಂತ ಊರ್ಧ್ವಬಾಹುವ್ರತಿಗಳನ್ನೂ, ಹಸರಿಸಿದ ಕುಸುಮದೆಸಳ ಚಿನ್ನವನ್ನು ದಿಕ್ಕುದಿಕ್ಕಿಗೆ ಕಂದಿರಲು ಮಲಯಾನಿಲ ಬೀಸಿ ಕಳೆಯಲು ಮೂರು ಕಾಲಗಳಲ್ಲೂ ಖಿಲ್ವಾಯಿತನಂತೆ ಗಂಗಾಜಲವನ್ನು ತಂದು ತಳಿಯುವ ಬಿಳಿಯ ಮುಗಿಲುಗಳನ್ನೂ, ಧರ್ಮ ಶಾಸ್ತ್ರ ವ್ಯಾಖ್ಯಾನಮಾಡುವ ಮುನಿಮುಖ್ಯರ ಪಕ್ಕದಲ್ಲಿ ಯಾವಾಗಲೂ ಅಗಲದೆ ಇರುವ ಆನೆ, ಜಿಂಕೆ, ಹರಿಣ, ಮೊಲ, ಸಾರಂಗ ಮೊದಲಾದ ಮೃಗಗಳೊಡನೆ ಬದ್ಧವೈರವನ್ನು ಬಿಟ್ಟು ಒಂದೊಂದನ್ನೂ ಅವುಕಿ ನೂಕಿ ಹತ್ತಿ ಕಿವಿಯಿಟ್ಟು ಪ್ರೀತಿಯಿಂದ ಕೇಳುವ ಸಿಂಹ ಶರಭ ಶಾರ್ದೂಲ ಸರ್ಪ ಮೊದಲಾದ ಕ್ರೂರಮೃಗಸಮೂಹವನ್ನು ಕಂಡು ಆ ತಪೋಧನರ ತಪೋವನದ ತಪಃಪ್ರಭಾವಕ್ಕೆ ಅಲ್ಲಿಯ ಪಶುಪಕ್ಷಿ ಮೊದಲಾದ ಚರಾಚರಗಳಿಗೆ ಹುಟ್ಟಿದ ಉಪಶಾಂತಿ ಮೊದಲಾದ ಗುಣಕ್ಕೆ ಚೋದ್ಯ ಹೊಂದಿ ನೋಡುತ್ತಿದ್ದ ಆ ರಾಜಕುಮಾರನನ್ನು ಅಲ್ಲಿದ್ದ ಒಂದು ರಾಜಕೀರ ಕಂಡು ಎಲೆ ಮಹಾಪುರುಷ! ನೀನೂ ಕುದುರೆಯೂ ತುಂಬ ಬಳಲಿದ್ದೀರಿ. ಇಂದು ನೀವು ಈ ಋಷ್ಯಾಶ್ರಮದಲ್ಲಿ ವಿಶ್ರಮಿಸಿಕೊಂಡು

ಒಂದು ಪೂಗೋಳದ ತಡಿಯ ಮಾಮರದಡಿಯೊಳ್ ಹಲ್ಲಣಮಂ ಬಿಟ್ಟು ಕುದುರೆಯಂ ನೀರಂ ಕುಡಿಸಿ ತಾನುಂ ಸ್ನಾನಾದಿ ನಿತ್ಯನಿಯಮಂಗಳಂ ತೀರ್ಚಿಯಾ ಪೂಗೋಳದಿಂ ಪೊಱಮಟ್ಟು ತದಾಶ್ರಮದ ಗುರುಗಳ ಸಮೀಪಕ್ಕೆ ಬಂದವರ್ಗೆ ವೃದ್ಧಾನುಕ್ರಮದಿಂ ಪೊಡೆಮಟ್ಟು, ನಿಮ್ಮಡಿ ದೇವತಾಸ್ವರೂಪರ್ ತತ್ತ್ವಂ ತಪಂ ಧರ್ಮವೆಂಬಿವೆಂತಪ್ಪುವವನೆನಗಱಿಯೆ ಬೆಸಸಿಮೆನೆ ಮುನೀಶ್ವರನಿಂತೆಂದಂ:

ಸಾವುಂ ಪುಟ್ಟುಮದಿಲ್ಲದ-
ನಾವನವಂ ದೇವನಾತನೆಂದುದೆ ತತ್ತ್ವಂ
ಜೀವದಯೆ ಧರ್ಮಮಿಂದ್ರಿಯ
ಸೇವನೆಯಂ ಬಟ್ಟೊದದುವೆ ತಪಮುಪಶಮದಿಂ ೧೪೭

ಎಂದು ಯೋಗೀಶ್ವರನಾತನಭಿಪ್ರಾಯಮಂ ಕಿಱಿದಱೊಳೆ ನೆಱೆಯೆ ಪೇಳ್ದುದುಮರಸಂ ಸಂತಸಂಬಟ್ಟು ಕುಳ್ಳಿರ್ಪನ್ನೆಗಮಾ ರಾಜಕೀರಂ ರಾಜಜಂಬೂ ರಂಭಾದಿ ಸ್ವಾದುಫಲಂಗಳಂ ತಂದೀಯೆ ಅವನಾಸ್ವಾದಿಸಿ ವಿಗತಶ್ರಮನಾಗಿ ಮಿತ್ರನಪ್ಪ ಶುಕಪತತ್ರಿಗಿಂತೆಂದಂ

ತನುರುಚಿ ರೂಪ ಸನ್ನುತ ವಯಃಸ್ವರ ಚೇಷ್ಟೆಗಳಿಂದಮೊಂದಿ ನಿ
ನ್ನನೆ ನೆಱೆ ಪೋಲ್ವುದೊಂದು ಗಿಳಿ ಬೇಡರ ಪಳ್ಳಿಯೊಳಿರ್ದು ಕಂಡುಮೆ
ನ್ನನೆ ಪಿಡಿ ಕಟ್ಟು ಕೊಲ್ಲಿವನನೆಂದುದು ದುರ್ಣಯದಿಂ ಸಮಂತು ನೀ
ನೆನಗುಪಕಾರಮಂ ವಿನಯದಿಂ ನೆಱೆ ಮಾಳ್ಪುದಿದೇಂ ಸುಮಿತ್ರ ಪೇಳ್ ೧೪೮

ಎಂಬುದುಂ : ಶ್ಲೋ ॥ ಮಾತಾಪ್ಯೇಕಾ ಪಿತಾಪ್ಯೇಕೋ ಮಮತಸ್ಯ ಚ ಪಕ್ಷಿಣಃ
ಅಹಂ ಮುನಿಭಿರಾನೀತೋ ನೀತಸ್ಸತು ಗವಾಶನೈಃ॥೭೩॥

ಹೋಗಿ ಎಂದಿತು. ಆ ಪಕ್ಷಿಯ ಮಾತನ್ನು ನಂಬಿ ಒಂದು ಪೂಗೋಳದ ದಡದ ಮಾವಿನ ಮರದ ಬುಡದಲ್ಲಿ ಹಲ್ಲಣವನ್ನು ಬಿಚ್ಚಿ ಕುದುರೆಗೆ ನೀರನ್ನು ಕುಡಿಸಿ, ತಾನೂ ಸ್ನಾನಾದಿ ನಿತ್ಯ ನಿಯಮಗಳನ್ನು ಪೂರೈಸಿದನು. ಅಲ್ಲಿಯೇ ಹತ್ತಿರವಿದ್ದ ಆಶ್ರಮದ ಗುರುಗಳ ಸಮೀಪಕ್ಕೆ ಬಂದು ಅವರಿಗೆ ನಮಸ್ಕರಿಸಿ, ನೀವು ದೇವತಾಸ್ವರೂಪರು. ತತ್ತ್ವ , ತಪಸ್ಸು, ಧರ್ಮ ಎಂಬಿವುಗಳು ಹೇಗಿವೆ ಎಂಬುದನ್ನು ನನಗೆ ತಿಳಿಯುವಂತೆ ಹೇಳಿರಿ ಎಂದು ಕೇಳಲು ಆ ಮುನೀಶ್ವರನು ಹೀಗೆ ಹೇಳಿದನು : ೧೪೭. ಸಾವೂ ಹುಟ್ಟೂ ಇಲ್ಲದವನೇ ದೇವನು : ಆತನ ಮಾತೇ ತತ್ತ್ವ; ಜೀವದಯೆಯೇ ಧರ್ಮ ; ಇಂದ್ರಿಯಸೇವೆಯನ್ನು ತೊರೆಯುವುದೇ ತಪಸ್ಸು ವ॥ ಎಂದು ಆ ಯೋಗೀಶ್ವರನು ತನ್ನ ಅಭಿಪ್ರಾಯವನ್ನು ಕಿರಿದರಲ್ಲಿ ತುಂಬುವಂತೆ ಹೇಳಲು, ಅರಸನು ಸಂತೋಷಪಟ್ಟು ಅಲ್ಲಿಯೇ ಕುಳಿತುಕೊಂಡನು. ಆಗ ಆ ರಾಜಕೀರವು ನೇರಳೆ ಬಾಳೆ ಮೊದಲಾದ ರುಚಿಕರವಾದ ಹಣ್ಣುಗಳನ್ನು ತಂದುಕೊಡಲು ಅವನ್ನು ಆಸ್ವಾದಿಸಿ ಶ್ರಮ ಪರಿಹರಿಸಿಕೊಂಡು ಮಿತ್ರನಾದ ಆ ಗಿಳಿಗೆ ಹೀಗೆ ಹೇಳಿದನು: ೧೪೮. ದೇಹ, ರೂಪು, ವಯಸ್ಸು, ಸ್ವರ, ಚೇಷ್ಟೆಗಳಲ್ಲಿ ನಿನಗೆ ಅನುರೂಪವಾದ ಒಂದು ಗಿಳಿ ಬೇಡರ ಹಳ್ಳಿಯಲ್ಲಿರುವುದನ್ನು ಕಂಡೆ. ಅದು ನನ್ನನ್ನು ಕಂಡು ಇವನನ್ನು ಹಿಡಿ, ಕಟ್ಟು, ಕೊಲ್ಲು ಎಂದು ದುರ್ಣಯದಿಂದ ವರ್ತಿಸಿತು. ನೀನು ಮಿತ್ರನಾಗಿ ನಡೆದುಕೊಂಡೆ; ಇದಕ್ಕೆ ಕಾರಣವೇನು? ಎಂದು ಕೇಳಲು ಶ್ಲೋ॥ ನನಗೂ, ಆ ಪಕ್ಷಿಗೂ ತಂದೆತಾಯಿಗಳೊಬ್ಬರೇ. ನನ್ನನ್ನು ಈ ಮುನಿಗಳು ಕೊಂಡುಬಂದರು. ಅವನನ್ನು ಕ್ರೂರರೂ ಮ್ಲೇಚ್ಛರೂ

ಟೀ|| ಎನಗಮಾ ಪಕ್ಷಿಗಂ ತಾಯುಮೊರ್ವಳ್ ತಂದೆಯುಮೊರ್ವಂ ಎನ್ನನೀ ಮುನಿಗಳ್ ಕೊಂಡುಬಂದರ್. ಆ ಪಕ್ಷಿಯಂ ಕ್ರೂರರುಂ ಮ್ಲೇಚ್ಛರುಮಪ್ಪ ಬೇಡರ್ ಕೊಂಡು ಪೋದರ್

ಮತ್ತಮಲ್ಲದಯುಂ, ಶ್ಲೋ || ಅಹಂ ಮುನೀನಾಂ ವಚನಂ ಶೃಣೋಮಿ
ಶೃಣೋತ್ಯಸೌ ಕ್ರೂರ ಗವಾಶನಾನಾಂ
ಪ್ರತ್ಯಕ್ಷಮೇತದ್ಭವತಾಪಿ ದೃಷ್ಟಂ
ಸಂಸರ್ಗಜಾ ದೋಷಗುಣಾ ಭವಂತಿ ||೭೪||

ಟೀ|| ನಾಂ ಮುನಿಗಳ ವಚನಮಂ ಕೇಳ್ವೆಂ. ಆ ಪಕ್ಷಿ ಕ್ರೂರರಪ್ಪ ಮ್ಲೇಚ್ಛರ ಮಾತಂ ಕೇಳ್ವುದು. ಇದು ಪ್ರತ್ಯಕ್ಷಮಾಗಿ ನಿನ್ನಿಂದಮೆ ಕಾಣಲ್ಪಟ್ಟುದು ; ಸಂಸರ್ಗದಿಂ ದೋಷಗುಣಂಗಳಹವು-ಎಂದು ರಾಜಕೀರಂ ಪೇೞ್ದುದಱಿಂದಂತಪ್ಪ ಬುದ್ಧಿವಂತನುಂ ಸಂಸರ್ಗವಶದಿಂ ನಿಸರ್ಗಗುಣಮಂ ಪತ್ತುವಿಡುವುದು ಕಡುದಿಟಂ ; ಆನೇನಂ ಪೇೞ್ದೊಡಂ ನೀ ಮೋನಂಗೊಂಡಿರ್ದಪೆ ಇದು ನಿನ್ನ ಮುನ್ನಿನ ಭವದ ದುಷ್ಕರ್ಮಮೆಂದು ನೊಂದು ನುಡಿದ ದವನಕಂಗೆ ಪಿಂಗಳಕನಿಂತೆಂದಂ : ಸಂಜೀವಕನನೆಂತುಂ ಪರಿಹರಿಸುವನಲ್ಲೆನೆಂದು ಪಲವು ತೆಱದೊಳಂ ನುಡಿದು ನಿನ್ನಂ ಮಾಣಿಸಲಾಱದಾನುಸಿರದಿರ್ದೊಡಂ ನೀಂ ಮಾಣದಾ ಪ್ರಾಣಿಯ ಮೇಲೆ ನಿಷ್ಕಾರಣಂ ವಿರುದ್ಧಂಗಟ್ಟ ತಗುಳ್ದಪೆ, ನಿನ್ನಂ ಕಯ್ಮುಗಿದು ಬೇಡಿಕೊಂಡಪೆನಿನ್ನಾದೊಡಂ ಉಸಿರದಿರೆನಲೊಡಂ ದವನಕಂ ಬೆಕ್ಕಸಂಬಟ್ಟು ಮೃಗೇಂದ್ರನಿಂದ್ರನೀಲದಂತೆ ತೃಣಗ್ರಾಹಿಯಪ್ಪ ವೃಷಭೇಂದ್ರನ ಬುದ್ಧಿಯೊಳೇಕಗ್ರಾಹಿಯಾಗಿರ್ದಪನಿನ್ನೀ ಮರುಳನೆಂತು ತಿಳಿಪುವೆನೆಂದು ಮತ್ತಮಿಂತೆಂದಂ :

ಸಂಜೀವಕನಂ ಸಾಧುಸ
ಜ್ಜನನಂ ಮಾಡಿ ದುಷ್ಟನೆಂದೀಗಳೆ ಎ
ನ್ನಂ ಜಡಿದು ನುಡಿವೆ ಕೆಮ್ಮನೆ
ಕುಂಜರ ಮದಹರಣ ! ನಿನಗೆ ಮತ್ತಂ ಪೇೞ್ವೆಂ ೧೪೯

ಆದ ಬೇಡರು ಕೊಂಡುಹೋದರು. ಅಲ್ಲದೆ, ಶ್ಲೋ|| ನಾನು ಮುನಿಗಳ ವಚನವನ್ನು ಕೇಳುವೆನು. ಅವನು ಕ್ರೂರರಾದ ಮ್ಲೇಚ್ಛರ ಮಾತನ್ನು ಕೇಳುವನು. ಇದನ್ನು ಪ್ರತ್ಯಕ್ಷವಾಗಿ ನೀನೇ ಕಂಡಿರುವೆ. ಸಂಸರ್ಗದಿಂದ ದೋಷಗುಣಗಳುಂಟಾಗುವುವು ವ|| ಎಂದು ರಾಜಕೀರವು ಹೇಳಿದುದರಿಂದ ಎಂಥ ಬುದ್ಧಿವಂತನೂ ಸಂಗವಶದಿಂದ ಸ್ವಭಾವಗುಣವನ್ನು ಬಿಡುವುದು ಸತ್ಯ. ನಾನು ಏನನ್ನು ಹೇಳಿದರೂ ನೀನು ಮೌನವಾಗಿರುವೆ. ಇದು ನಿನ್ನ ಪೂರ್ವಜನ್ಮದ ದುಷ್ಕೃತ್ಯ ಎಂದು ನೊಂದು ನುಡಿದ ದವನಕನಿಗೆ ಪಿಂಗಳಕನು ಹೀಗೆಂದನು: ಸಂಜೀವಕನನ್ನು ನಾನು ಓಡಿಸುವವನಲ್ಲ ಎಂದು ಹಲವು ರೀತಿಯಲ್ಲಿ ಹೇಳಿದ ನಿನ್ನನ್ನು ನಿವಾರಿಸಲಾರದೆ ನಾನು ಮೌನದಿಂದಿದ್ದರೂ ನೀನು ಬಿಡದೆ ಆ ಪ್ರಾಣಿಯ ಮೇಲೆ ನಿಷ್ಕಾರಣವಾಗಿ ವಿರೋಧವನ್ನು ಕಟ್ಟುವೆ. ನಿನಗೆ ಕಯ್ಮುಗಿದು ಬೇಡಿಕೊಳ್ಳುವೆ ; ಇನ್ನಾದರೂ ಉಸಿರೆತ್ತದಿರು. ಅದಕ್ಕೆ ದವನಕನು ಆಶ್ಚರ್ಯಪಟ್ಟು ಮೃಗೇಂದ್ರನು ಇಂದ್ರನೀಲದಂತಿರುವ ಹುಲ್ಲು ಮೇಯುವ ವೃಷಭೇಂದ್ರನ ಬುದ್ಧಿಯೊಳಗೆ ಏಕಗ್ರಾಹಿಯಾಗಿರುವನು. ಇನ್ನು ಈ ಮರುಳನನ್ನು ಹೇಗೆ ಒಲಿಸಿಕೊಳ್ಳಲಿ ಎಂದು ಹೀಗೆಂದನು : ೧೪೯. ಸಂಜೀವಕನನ್ನು ಸಾಧುಸಜ್ಜನನನ್ನಾಗಿ ಮಾಡಿ ನನ್ನನ್ನು ದುಷ್ಟನೆಂದು ಜಡಿದು ನುಡಿದೆ. ಕುಂಜರಮದಹರಣ!

ಅದೆಂತೆಂದೊಡಿಷ್ಟರ್ ಬಾರಿಸಿದೊಡಂ ಮಾಣದೆ ದುಷ್ಟರನೊಳಕೊಂಡು ಕೆಟ್ಟರ ಕಥೆಗಳಂ ಪೇಟ್ವೆಂ ಕೇಳಿಮೆಂದಿಂತೆಂದಂ :

ಶ್ಲೋ ॥ ನತ್ವ ವಿಜ್ಞಾತಶೀಲಾಯ ಗೃಹೇ ದದ್ಯಾತ್ ಪ್ರತಿಶ್ರಯಂ
ಡುಂಡುಕಸ್ಯ ಹಿ ದೋಷೇಣ ಹತಾ ಮಂದವಿಸರ್ಪಿಣೀ ॥೭೫॥

ಟೀ॥ ಅಜ್ಞಾತಕುಲಶೀಲನಪ್ಪಾತನಂ ತನ್ನಾವಾಸಮಂ ಪುಗಿಸಲಾಗದು ; ಢುಂಡುಕನೆಂಬ ತಿಗುಣೆ ಮಾಡಿದ ದೋಷದಿಂ ಮಂದವಿಸರ್ಪಿಣಿಯೆಂಬ ವಸ್ತ್ರಮೃಗಂ ಕೆಟ್ಟುದು. ಅದೆಂತೆನೆ ಪೇೞ್ವೆಂ:

೧೩. ತಿಗುಣೆಯುಂ ಕೂಱೆಯುಂ

ರಾಜಂ ನಿಳಿಂಪಭೂಪಮ
ನೋಜಂ ಕೌಶಾಂಬಿಯೆಂಬ ನಗರದೊಳಿರ್ಪಂ
ರಾಜಾಧಿರಾಜನನುಪಮ
ತೇಜಂ ರಾಜೇಂದ್ರಚಂದ್ರನೆಂಬ ನರೇಂದ್ರಂ ೧೯೦

ಆ ರಾಜೇಂದ್ರನ ರಾಜಭವನದೊಳಗೆ,

ನವಕಾಲಾಗರು ಧೂಪಧೂಮಮಲಿನಂ ನಾನಾವಿಧಾನೂನ ಚ
ತ್ರವಿತಾನೋತ್ತಮರತ್ನಭಿತ್ತಿರುಚಿರಂ ಸತ್ಕಾಂಚನೋದಂಚ ಜಾ
ಳವಿಳಾಶೋಭಿತಮಾಗಳುಂ ಸೊಗಯಿಕುಂ ಶೋಭಾವಹಂ ಚಿತ್ತಸಂ
ಭವ ಲಕ್ಷ್ಮೀನಿಳಯಂ ಸಮಸ್ತಜನಚೇತೋಹಾರಿ ಶಯ್ಯಾಗೃಹಂ ೧೯೧

ಅಂತೊಪ್ಪುವ ಶಯ್ಯಾಗೃಹದೊಳ್ ನೂತನರತ್ನರಚಿತ ಚಂಚತ್ಕಾಂಚನಮಯ ಮಂಚಾಗ್ರಸ್ಥಿತ ಮಂದಾಕಿನೀ ಪುಳಿನಾಯಮಾನ ಪ್ರಚ್ಛದಾಚ್ಛಾದಿತಮಪ್ಪ ಶಯ್ಯಾತಳದೊಳ್ ಮಂದ

ನಿನಗೆ ಇನ್ನೂ ಒಮ್ಮೆ ಹೇಳಿನೋಡುವೆ. ವ॥ ಇಷ್ಟರಾದವರು ನಿವಾರಿಸಿದರೂ ಕೇಳದೆ ದುಷ್ಟರನ್ನು ಒಳಕ್ಕೆ ಸೇರಿಸಿ ಕೆಟ್ಟುಹೋದವರ ಕಥೆಗಳನ್ನು ಹೇಳುವೆ ಕೇಳಿ ಎಂದು ಹೇಳತೊಡಗಿದನು: ಶ್ಲೋ॥ ಕುಲಶೀಲವನ್ನು ಅರಿಯದವನನ್ನು ತನ್ನ ಮನೆಗೆ ಹೊಗಿಸಬಾರದು. ಡುಂಡುಕನೆಂಬ ತಿಗುಣೆ ಮಾಡಿದ ದೋಷದಿಂದ ಮಂದವಿಸರ್ಪಿಣಿ ಎಂಬ ವಸ್ತ್ರಮೃಗ ಕೆಟ್ಟುಹೋಯಿತು. ಅದು ಹೇಗೆಂದು ಹೇಳುವೆನು : ೧೯೦. ಕೌಶಾಂಬಿ ಎಂಬ ನಗರದಲ್ಲಿ ದೇವೇಂದ್ರ ಮನೋಜನಾದ (?) ಅನುಪಮ ತೇಜನಾದ ರಾಜೇಂದ್ರಚಂದ್ರನೆಂಬ ರಾಜಾಧಿರಾಜನು ಇದ್ದನು. ವ॥ ಆ ರಾಜೇಂದ್ರನ ರಾಜಭವನದೊಳಗೆ ೧೯೧. ಹೊಸ ಕಾಲಾಗರು ಧೂಪದಿಂದ ಮಲಿನವಾದ, ನಾನಾ ವಿಧದ ಉತ್ತಮ ಚಿತ್ರಗಳ ಮೇಲ್ಕಟ್ಟಿನಿಂದ ಕೂಡಿದ ಉತ್ತಮ ರತ್ನಭಿತ್ತಿಯಿಂದ ಶೋಭಿಸುವ ಒಳ್ಳೆಯ ಬಂಗಾರದಿಂದ ಹೊಳೆಯುವ ಜಾಳವಿಳಾಶೋಭಿತವಾಗಿ ಯಾವಾಗಲೂ ರತಿನಿಲಯವಾಗಿ ಸಮಸ್ತಜನ ಚೇತೋಹಾರಿ ಯಾಗಿ ಶಯ್ಯಾಗೃಹವು ಶೋಭಾವಹವಾಗಿ ಸೊಗಯಿಸುತ್ತಿತ್ತು. ವ॥ ಹಾಗೆ ಶೋಭಿಸುವ ಶಯ್ಯಾಗೃಹದಲ್ಲಿ ನೂತನ ರತ್ನರಚಿತವಾದ ಹೊಳೆಯುವ ಹೊನ್ನಿನ ಮಂಚದಲ್ಲಿ ಗಂಗಾನದಿಯ ಮರಳಿನಂತೆ ಹಾಸುಬಟ್ಟೆಯಿಂದ

ವಿಸರ್ಪಿಣಿಯೆಂಬುದೊಂದು ಪೇನಿರ್ಪುದು. ಅಲ್ಲಿಗೆ ಡುಂಡುಕನೆಂಬ ತಿಗುಣೆ ಬಂದು, ಆನುಂ ನಿನ್ನ ಸಮೀಪದೊಳಿರ್ಪೆನೆನೆ ಪೇಸಿಂತೆಂದುದು : ನೀನಪ್ಪೊಡೆ ವಿಷಮಶೀಲಂ, ನಿನ್ನನೊಳಕೊಂಡಂದು ಕೃಷ್ಣೋರಗನನೊಳಕೊಂಡ ದುಂಡುಭಂಗಳ ಕಥೆಯೆನಗಕ್ಕುಮೆನೆ, ಡುಂಡುಕನದೆಂತೆನೆ ಮಂದವಿಸರ್ಪಿಣಿ ಪೇಱ್ಗುಂ :

೧೪. ಕೃಷ್ಣೋರಗನನೊಳಕೊಂಡ ಒಳ್ಳೆಗಳ ಕಥೆ

ಪ್ರಜಾಪಾಲನೆಂಬರಸು ಲೀಲೋದ್ಯಾನವನದೊಳ್ ಜಲಕೇಳಿ ನಿಮಿತ್ತಂ ಕ್ರೀಡಾಸರೋವರಮಂ ಮಾಡಿಸಿ ನೀರಂ ತೀವಿ ಮತ್ತಲ್ಲಿ ಜಲಕೇಳಿಯಾಡುವ ಗಾದಿಕಾರ್ತಿಯರಂ ಕಾಡಲೆಂದೊಳ್ಳೆಗಳಂ ತಂದು ಬಿಡಿಸಿಯವರ್ಕೆ ಪಾಲನೆಱೆದು ನಡೆಪುತಿರ್ಪನ್ನೆಗಮಲ್ಲಿಗೊಂದು ಕೃಷ್ಣತರುಣೋರಗಂ ಬಂದು ಕೊಬ್ಬಿಯಾಡುವ ದುಂಡುಭಂಗಳಂ ಕಂಡು ಆನುಂ ನಿಮ್ಮೊಡನಿರ್ದಪೆನೆಂದೊಡೊಳ್ಳೆಗಳ್, ಕರಮೊಳ್ಳಿತ್ತು ಬನ್ನಿಮೆಂಬುದುಂ : ಅವಂ ಮಾರ್ಕೊಂಡುಮೊಂದು ಪುರಾಣಡುಂಡುಭನಿಂತೆಂದುದು. ಈ ವಿಷಧರಂ ಮಹಾವಿಷಧರಂ, ನಾವೆಲ್ಲಂ ವಿಷಧರರಾಗಿಯುಂ ನಿರ್ವಿಷರುಮಪ್ಪೆಂದಿದರ್ಕಂ ನಮಗಂ ಸಹಚರತ್ವಮುಂ ಮಿತ್ರತ್ವಮುಮಾಗದದೆಂತೆನೆ 'ಕುಮಿತ್ರ ಸೇವಾಂ ನ ಕದಾಪಿ ಕುರ್ಯಾತ್' ಎಂಬ ಕಥೆಯುಂ ಕೇಳ್ದಱಿವುದಿಲ್ಲಕ್ಕುಮೆ ಎನೆ ಡುಂಡುಭಂಗಳದೆಂತೆನೆ ಪುರಾಣಡುಂಡುಭಂ ಪೇಱ್ಗುಂ:

ಆಚ್ಛಾದಿತವಾದ ಶಯ್ಯಾತಳದಲ್ಲಿ ಮಂದವಿಸರ್ಪಿಣಿ ಎಂಬ ಒಂದು ಹೇನು ವಾಸಮಾಡಿಕೊಂಡಿತ್ತು. ಅಲ್ಲಿಗೆ ಡುಂಡುಕನೆಂಬ ತಿಗಣೆ ಬಂದು ನಾನೂ ನಿನ್ನ ಸಮೀಪದಲ್ಲಿರುವೆನು ಎನ್ನಲು ಹೇನು ಹೀಗೆಂದಿತು: ನೀನಾದರೋ ವಿಷಮಶೀಲನು ; ನಿನ್ನನ್ನು ಒಳಕ್ಕೆ ಸೇರಿಸಿಕೊಂಡರೆ ಕೃಷ್ಣೋರಗನನ್ನು ಸೇರಿಸಿಕೊಂಡ ಡುಂಡುಭಗಳ ಕಥೆಯಂತೆ ಆದೀತು ಎನ್ನಲು ಡುಂಡುಕನು ಅದೇನೆಂದು ಕೇಳಲು ಮಂದವಿಸರ್ಪಿಣಿ ಹೇಳಿತು : ಪ್ರಜಾಪಾಲನೆಂಬ ಅರಸನು ಕ್ರೀಡೋದ್ಯಾನದಲ್ಲಿ ಜಲಕೇಳಿಗಾಗಿ ಕ್ರೀಡಾಸರೋವರವನ್ನು ಮಾಡಿಸಿ ನೀರನ್ನು ತುಂಬಿಸಿ ಅಲ್ಲಿ ಜಲಕೇಳಿಯಾಡುವ ಸುಂದರಿಯರನ್ನು ಕಾಡಲೆಂದು ಒಳ್ಳೆಗಳನ್ನು ತಂದು ಬಿಟ್ಟು ಅವುಗಳಿಗೆ ಹಾಲನ್ನೆರೆದು ಸಾಕುತ್ತಿದ್ದನು. ಅಷ್ಟರಲ್ಲಿ ಅಲ್ಲಿಗೆ ಒಂದು ಕೃಷ್ಣಸರ್ಪವು ಬಂದು ಕೊಬ್ಬಿಯಾಡುತ್ತಿದ್ದ ಡುಂಡುಭಗಳನ್ನು ಕಂಡು ನಾನೂ ನಿಮ್ಮೊಡನೆ ಇರುವೆನು ಎನ್ನಲು ಒಳ್ಳೆಗಳು ಒಳ್ಳೆಯದು ಬನ್ನಿ ಎಂದುವು. ಅವುಗಳನ್ನು ಪ್ರತಿಭಟಿಸಿ ಒಂದು ಹಳೆಯ ಒಳ್ಳೆ ಹೀಗೆಂದಿತು : ಈ ಹಾವು ಮಹಾವಿಷಧರ. ನಾವೆಲ್ಲ ಹಾವುಗಳಾದರೂ ನಿರ್ವಿಷಧರರು. ಆದರಿಂದ ಇದಕ್ಕೂ ನಮಗೂ ಸಹಚರ್ಯ ವುಂಟಾಗದು. 'ಕುಮಿತ್ರ ಸೇವಾಂ ನ ಕದಾಪಿ ಕುರ್ಯಾತ್' ಎಂಬ ಕಥೆಯನ್ನು ನೀವು ಕೇಳಿರಲಿಕ್ಕಿಲ್ಲ ಎನ್ನಲು ಡುಂಡುಭಗಳು ಅದೇನೆಂದು ಕೇಳಲು ಹಳೆಯ ಒಳ್ಳೆ ಹೇಳಿತು :

೧೫. ರಾಜಹಂಸನುಂ ಆಂದೆಯುಂ

ಒಂದು ಮಹಾಟವಿಯೊಳ್ ಅತ್ಯಂತ ಶೋಭಾಕರಮಪ್ಪದೊಂದು ಸರೋಚಾಕರಮುಂಟು. ಅಲ್ಲಿ

ಶರಮದ್ವಚ್ಚಾರು ಚಂದ್ರೋಪಮ ವಿಶದ ಸತ್ಪಕ್ಷಯುಗ್ಮಂ ಸರೋಜಾ
ಕರಲಕ್ಷ್ಮೀತಾರಹಾರಂ ತರುಣ ಬಿಸಲತಾ ಲೋಲನಾ ತಾಮ್ರಚಂಚ
ಚ್ಚರಣದ್ವಂದ್ವಂ ಸಲೀಲಾಗತಿ ವಿರಚಿತ ವಾರಾಂಗನಾಶಿಕ್ಷನತ್ವಾ
ದರದಿಂದಿರ್ಪಂ ಸುಮಿತ್ರಂ ಪೆಸರೊಳಸದೃಶಂ ರಾಜಹಂಸಾವತಂಸಂ ೧೯೨

ಆ ರಾಜಹಂಸಂಗಂ ಕನಕಾಕ್ಷನೆಂಬೊಂದಾಂದೆಗಂ ಪರಮಮಿತ್ರತ್ವಮಾಗಿ ಕೆಲವುಕಾಲಂ ಸಲುತ್ತಿರೆ, ಕನಕಾಕ್ಷನ ನಿವಾಸಮಪ್ಪ ಮಹಾವಟವೃಕ್ಷದ ಸಮೀಪದೊಳನೂನ ಮದಾಂಧಗಂಧ ಸಿಂಧುರ ಘಟಾನಿನಾದ ಬಧಿರಿತದಿಗಂತರಾಳಮುಂ ರಥಚಕ್ರಚೀತ್ಕಾರ ಭೀಕರಮುಂ ಹಯಹೇಷಾ ಭೀಷಣಮುಂ ಉದ್ಭಟಸುಭಟಹೂಂಕಾರಭಯಂಕರಮುಮಪ್ಪದೊಂದು ಮಹಾಕಟಕಂ ಬಂದು ಬಿದುವುದುಂ ಅದು ಕಂಡಾನ್ತೆಗಾನಂದಂ ಪುಟ್ಟಿ ತನಗೆ ಪರಮಮಿತ್ರನಪ್ಪ ಸುಮಿತ್ರನಲ್ಲಿಗೆ ಬಂದು ಇಂತೆಂದುದು : ನಿನ್ನ ಮನೆಗೆಂದುಂ ಬಂದಾಂ ತುಷ್ಟನಾಗಿ ಪೋಪೆಂ, ನೀನೆನ್ನ ಮನೆಗೆಂದುಂ ಬಂದಱಿಯೆ ಇಂದು ಬಂದೆನ್ನ ಸಿರಿಯುಮಂ ಸಂಪತ್ತುಮಂ ನೋೞ್ಪುದೆನೆ ರಾಜಹಂಸನಿಂತೆಂದಂ! ನಿನ್ನ ಮನೆಯೆಂಬುದೆನ್ನ ಮನೆ, ಎನ್ನ ಮನೆಯೆಂಬುದು ನಿನ್ನ ಮನೆ ನೀಂ ಬೇಱಾಂ ಬೇಱೆಂಬ ಭಿನ್ನಬುದ್ಧಿ ನಿನಗಂ ನನಗಂ ಬೇಡದೆಂತೆನೆ :

ಶ್ಲೋ ॥ ಅಹಮಿಹೈವ ವಸನ್ನಪಿ ತಾವಕಸ್ತ್ವಮಪಿ ತತ್ರವಸನ್ನಪಿ ಮಾಮಕಃ।
ಹೃದಯಸಂಗಮ ಏವ ಸುಸಂಗತಮೋ ನ ತನುಸಂಗಮ ಏವ ಸುಸಂಗಮಃ।
॥೭೬॥

ಒಂದು ದೊಡ್ಡ ಅಡವಿಯಲ್ಲಿ ಅತ್ಯಂತ ಶೋಭಾಕರವಾದ ಒಂದು ಸರೋವರವಿತ್ತು. ೧೯೨. ಅಲ್ಲಿ ಶರಚ್ಚಂದ್ರನಂತೆ ಬೆಳ್ಳಗಿನ ಸುಂದರವಾದ ರೆಕ್ಕೆಯುಳ್ಳವನೂ, ಆ ಸರೋವರ ಲಕ್ಷ್ಮಿಯ ತಾರಹಾರನೂ, ಎಳೆಯ ತಾವರೆದಂಟುಗಳೊಡನೆ ಆಡುವವನೂ ನಸುಕೆಂಪಾದ ಹೊಳೆಯುವ ಪಾದಗಳುಳ್ಳವನೂ! ತನ್ನ ಕ್ರೀಡಾಗತಿಯನ್ನು ವಾರಾಂಗನೆಯರಿಗೆ ಕಲಿಸಿದವನೂ ರಾಜಹಂಸಗಳಿಗೆ ಭೂಷಣಪ್ರಾಯನೂ ಆದ ಸುಮಿತ್ರನೆಂಬ ಅಸದೃಶವಾದ ಹೆಸರಿನವನು ಇದ್ದನು. ವ॥ ಆ ರಾಜಹಂಸನಿಗೂ ಕನಕಾಕ್ಷನೆಂಬ ಹೆಸರಿನ ಒಂದು ಆಂದೆಗೂ ಮಿತ್ರತ್ವವುಂಟಾಯಿತು. ಹೀಗೆ ಕೆಲವು ಕಾಲ ಕಳೆಯಲು ಆ ಕನಕಾಕ್ಷನು ವಾಸ ಮಾಡಿಕೊಂಡಿದ್ದ ಮಹಾವಟವೃಕ್ಷದ ಸಮೀಪದಲ್ಲಿ ಒಂದು ಮಹಾಸೈನ್ಯವು ಬಂದಿಳಿಯಿತು. ಅದನ್ನು ಕಂಡು ಆ ಆಂದೆಗೆ ಆನಂದವಾಗಿ ತನ್ನ ಪರಮಮಿತ್ರನಾದ ಸುಮಿತ್ರನಲ್ಲಿಗೆ ಬಂದು ಹೀಗೆಂದಿತು : ನಿನ್ನ ಮನೆಗೆ ನಾನು ಯಾವಾಗಲೂ ಬಂದು ಸಂತುಷ್ಟನಾಗಿ ಹೋಗುವೆ. ನೀನು ನನ್ನ ಮನೆಗೆ ಎಂದೂ ಬಂದವನಲ್ಲ, ಇಂದು ಬಂದು ನನ್ನ ಸಿರಿಯನ್ನೂ ವೈಭವವನ್ನೂ ಕಾಣಬೇಕು ಎನ್ನಲು ರಾಜಹಂಸ ಹೀಗೆಂದಿತು : ನಿನ್ನ ಮನೆಯೇ ನನ್ನ ಮನೆ ; ನನ್ನ ಮನೆಯೇ ನಿನ್ನ ಮನೆ. ನೀನು ಬೇರೆ ನಾನು ಬೇರೆ ಎಂಬ ಭಿನ್ನಬುದ್ಧಿ ನಮ್ಮೊಳಗೆ ಬೇಡ. ಶ್ಲೋ॥ ನಾನಿಲ್ಲಿದ್ದೂ ನಿನ್ನವನು, ನೀನಲ್ಲಿದ್ದೂ ನನ್ನವನು. ಮನಸ್ಸಂಗಮವೇ ಸಂಗಮ :

ಟೀ॥ ನಾನಿಲ್ಲಿರ್ದುಂ ನಿನ್ನವನು, ನೀನಲ್ಲಿರ್ದುಂ ಎನ್ನವನು. ಮನಸ್ಸಂಗಮೆವೆ ಸಂಗಮವು, ಶರೀರ ಸಂಯೋಗಮೆಂಬುದು ಪ್ರಯೋಜನವಲ್ಲ-ಎಂದಿಂತು ಮಿತ್ರಂಗೆ ಪೇಳ್ದ ಲಕ್ಷಣಗಳೊಳವು, ನಿನಗಮೆನಗಮೇತರೊಳಂ ವಿಕಲ್ಪಮಿಲ್ಲ ನಿಶ್ಚಿಂತಮಿರೆಂಬುದುಮಾಂದ ಇಂತೆಂದುದು : ನೀನೆಂದುದಪ್ಪುದಾದೊಡಂ ಲೌಕಿಕೋಕ್ತಿಯಿಂತಪ್ಪುದಲ್ತೆ :

ಶ್ಲೋ॥ ದದಾತಿ ಪ್ರತಿಗೃಹ್ಣಾತಿ ಗೋಪ್ಯಮಾಖ್ಯಾತಿ ಪೃಚ್ಛತಿ
ಭುಙ್ಕ್ತೇ ಭೋಜಯತೇ ಚೈವ ಷಡ್ವಿಧಂ ಪ್ರೀತಿಲಕ್ಷಣಂ ॥೭೭॥

ಟೀ॥ ತಾಂ ಕುಡುವುದು ಮಗುಳ್ದವರ ಕಯ್ಯಲ್ಲೀಸುಕೊಂಬುದು, ಗುಪ್ತವಪ್ಪ ಕಾರ್ಯಮಂ ಪೇಳ್ವುದು ಮರಳಿ ತಾನವರಂ ಬೆಸಗೊಂಬುದು ತಾನುಂಬುದು ಮಗುಳ್ದವರ್ಗಿಕ್ಕುಸುವುದು : ಎಂದಿಂತು ಪ್ರೀತಿಯಾಱುತೆಱನಕ್ಕುಂ. ಅದಱಿಂ ನೀನಿಂದೆನ್ನ ಮನೆಗೆ ಬಾರದುಂದು ನಿನ್ನ ಕೆಳೆ ಟಕ್ಕರ ಕೆಳೆಯಂತಕ್ಕುಮಲ್ಲದ ತಕ್ಕರ ಕೆಳೆಯಂತೊಪ್ಪಲಱಿಯದು, ಅಮೋಘಂ ಬರಲ್ವೇಳ್ಕುಮೆಂದು ನಯಮೆಂ ನುಡಿದಾಗ್ರಹಂಗೆಯ್ದು ಕಾಲಂ ಪಿಡಿಯೆ ನಾಂ ಪೋಗದಿರ್ದೊಡೆ ಕನಕಾಕ್ಷಂ ಮುನಿಸ್ಕೊಂತಬಡುಗುಮೆಂದು ಪೋಗಲ್ಬಗೆದು, 'ಸ್ನೇಹೋಪಿ ಕಾರಣಮನರ್ಥಪರಂಪರಾಯಾಃ' ಅನರ್ಥ ಪರಂಪರೆಗೆ ಸ್ನೇಹಮೇ ಕಾರಣಂ ಎಂಬ ಅರ್ಥಮಂ ಯಥಾರ್ಥಂ ಮಾಡಲ್ವೋಪಂತೆ ಸುಮಿತ್ರಂ ಕುಮಿತ್ರನಪ್ಪಾಂದೆಯ ಪಿಂದುಪಿಂದನೆ ಬಂದು ರಾತ್ರಿಯೊಳಾ ರಾತ್ರಿಚರಸ್ಥಾನಮನೆಯ್ದೆ ವಂದಿರ್ಪುದುಂ:

ಎಸೆವೀ ಸಿಂಧುರಮೀ ರಥಪ್ರಕರಮೀ ಜಾತ್ಯಶ್ವಮೀ ರೌದ್ರವೀ
ರಸಮೂಹಂ ನೆಗಟ್ಟೀ ಮನೋಹರವಧೂಸಂದೋಹಮೀ ರಾಜಕ-
ಪ್ರಸರಂ ನಿಕ್ಕುವಮೆನ್ನದೆಂದು ವಿಹಗೇಂದ್ರಂಗಾಂದ ತೋಱಿತ್ತು ಸಂ
ತಸದಿಂ ತೋಱದರಾರೊ ಬಂಧುಜನಕಾತ್ಮೀಯಾಧಿಕೈಶ್ವರ್ಯಮಂ ೧೯೩

ಶರೀರ ಸಂಯೋಗ ಪ್ರಯೋಜನವಿಲ್ಲ, ವ॥ ಇದು ಮಿತ್ರಲಕ್ಷಣ. ನಿನಗೂ ನನಗೂ ಯಾವುದರಲ್ಲೂ ವಿಕಲ್ಪವಿಲ್ಲ; ನಿಶ್ಚಿಂತನಾಗಿರು ಎನ್ನಲು ಆಂದೆ ಹೀಗೆಂದಿತು; ನೀನು ಹೇಳಿದುದು ನಿಜವಾದರೂ ಲೌಕಿಕೋಕ್ತಿ ಹೀಗಿರುವುದಲ್ಲವೇ ? ಶ್ಲೋ॥ ಕೊಡುವುದು, ತೆಗೆದುಕೊಳ್ಳುವುದು, ರಹಸ್ಯ ವಿಚಾರಗಳನ್ನು ಹೇಳುವುದು, ಕೇಳುವುದು, ಊಟ ಮಾಡುವುದು, ಊಟ ಮಾಡಿಸುವುದು -ಹೀಗೆ ಪ್ರೀತಿಯೆಂಬುದು ಆರು ರೀತಿಯದಾಗಿದೆ. ವ॥ ಆದ್ದರಿಂದ ನೀನಿಂದು ನಮ್ಮ ಮನೆಗೆ ಬಾರದಿದ್ದಲ್ಲಿ ನಿನ್ನ ಗೆಳೆತನವು ಠಕ್ಕರ ಗೆಳೆತನದಂತೆ ಶೋಭಿಸಲಾರದು ಎಂದು ತಪ್ಪದೆ ಬರಬೇಕೆಂದು ಸ್ನೇಹದಿಂದ ವರ್ತಿಸಿ ಬಲಾತ್ಕರಿಸಿ ಕಾಲುಹಿಡಿಯಿತು. ಆಗ ಆ ರಾಜಹಂಸವು ತಾನು ಹೋಗದಿದ್ದಲ್ಲಿ ಕನಕಾಕ್ಷನ ಮನಸ್ಸಿಗೆ ನೋವಾಗುವುದೆಂದು, ಹೋಗುವುದೆಂದು ಯೋಚಿಸಿ 'ಸ್ನೇಹೋಪಿ ಕಾರಣಮನರ್ಥ ಪರಂಪರಾಯಾಃ' ಅನರ್ಥ ಪರಂಪರೆಗೆ ಸ್ನೇಹವೇ ಕಾರಣ ಎಂಬುದನ್ನು ಯಥಾರ್ಥಗೊಳಿಸಲು ಹೋಗುವಂತೆ ಸುಮಿತ್ರನು ಕುಮಿತ್ರನಾದ ಆಂದೆಯ ಹಿಂದೆ ಹಿಂದೆ ಬಂದು, ರಾತ್ರಿಕಾಲದಲ್ಲಿ ಅದರ ನಿವಾಸವನ್ನು ಸೇರಿದುವು. ೧೯೩. ಆಗ ಅಲ್ಲಿ ಶೋಭಿಸುತ್ತಿದ್ದ ಆನೆ, ರಥ, ಕುದುರೆ, ಸೈನ್ಯ, ಮನೋಹರಿಯರ ಸಂದೋಹಗಳೆಲ್ಲವೂ ನಿಶ್ಚಯವಾಗಿಯೂ ತನಗೆ ಸೇರಿದವು ಎಂದು ಆ ವಿಹಗೇಂದ್ರನಿಗೆ ಆಂದೆಯು ತೋರಿಸಿತು! ಬಂಧುಜನಕ್ಕೆ ಸಂತೋಷದಿಂದ ತಮ್ಮ ಐಶ್ವರ್ಯವನ್ನು ತೋರಿಸದೆ ಇರುವವರು ಯಾರು?

ಅಂತಾ ಪಿಂಗಲಿಯೆಂಬ ಅಂದೆಗೇರನಾ ಹಂಸಗೆ ಕಾಪುರುಷನಂತೆ ತನಗಿಲ್ಲದ ವೈಮೆಯನುಂಟುಮಾಡಿ ನುಡಿಯುತಿರ್ಪನ್ನೆಗಂ ನಿಶಾವಸಾನಸಮಯದೊಳ್ ಪಯಣದ ಸೂಳುಗಾಳೆಗಳಂ ಪಿಡಿದು ಬೀಡೆತ್ತಲುದ್ಯೋಗಂಗೆಯ್ವುದಂ ಕಂಡು ಧವಲಪಕ್ಷಂ ಕನಕಾಕ್ಷಂಗಿಂತೆಂದಂ: ನಿನ್ನ ಪಡೆಯಪ್ಪೊಡೇಕಿಲ್ಲಿಂದೆತ್ತ ಪೋದಪುದು ಎಂಬುದುಂ, ಎನ್ನ ನಿಯಾಮಮಿಲ್ಲದೆತ್ತಲಿಕೆಯದಿದ ನೀಗಳೆ ಮಾಣಿಸುವೆನೆಂದು ಬಿಲ್ಲಾಳಪ್ಪ ಬಲ್ಲ ಬಿನ್ನಣಿಯುದಿರ ರೂಪನೆತ್ತಲೀಯದೊಂದೆ ಕೋಲಿಂದಿಸುವಂತೊಂದೆ ಕೊರಲೊಳೆತ್ತಲೀಯದೆ ಸೇವಿಸುವುದುಮಾ ಸರಮನರಸಂ ಕೇಳ್ದಿಂದಿನ ಪಯಣಮುಪ್ಪಯಣಮೆಂದಂದಿನ ಪಯಣಮಂ ಮಾಣ್ದು ಮಱುದೆವಸಂ ಯಾಮಿನೀವಿರಾಮವಪ್ಪುದಂ ಪ್ರಯಾಣಭೇರಿಯಂ ಪೊಯ್ಸಿದಾಗಳದಂ ವಿಹಗೇಂದ್ರಂ ಕೇಳ್ದಾಂದೆಗೆಂದುದು : ಭಾವಾ! ನಿನ್ನ ಬೀಡಿಂದೇಕೆತ್ತಪೋದಪ್ಪುದೆಂಬುದುಮೆನ್ನಾಜ್ಞೆಯಿಲ್ಲದೆಲ್ಲಿಗಪೋಕೆ ಪೋಕುಂ ಚಂದ್ರೋದಯದೊಳ್ ಸಮುದ್ರಘೋಷಮುಮಾದಿತ್ಯೋದಯದೊಳೆನ್ನ ಬೀಡಿನ ಘೋಷಮುಮೆಂದುಮೀಯಂದಮೆ ಎಂದು ಮಱೆಗಾಲಮುಂಟೆಂದು ತಪ್ಪಿದ ಜೋಯಿಸಂ ಬಾವಿಯ ನೀರಡಕಿ ನೀರ್ಪೊಯ್ವನೆಂಬ ಕಥೆಯಂತೆ ಪುಸಿಯರಸುತನದ ಬೆಸನದೊಳ್ ತೊಡರ್ದುಸಿರದಿರ್ದನಪ್ಪೊಡೆ ಎನ್ನ ಕೆಳೆಯನೊಳಗನಱಿದಪನೆಂದು ನಾಲ್ಕೈದು ಕೊರಲಂ ಸಿಲ್ಕುವಳಿದು ಮತ್ತಂ ಮೇಲಟ್ಟಿದಾ ಸಱಮಂ ಕೇಳ್ದು ಆ ಪಡೆ ಪಯಣಮನಂದುಂ ಮಾಣ್ದುದುಂ, ಅದೆಲ್ಲಮನರಸಂ ಕೇಳ್ದು ಮಱುದಿವಸಮರ್ಧರಾತ್ರಿಯೊಳ್ ಪೋಗಲುದ್ಯೋಗಂಗೆಯ್ವುದುಂ: ರಾಜಹಂಸಂ ಕಂಡೇಂ ಗಡಾ ಕನಕಾಕ್ಷಾ ! ನಿನ್ನ ಪಡೆ ಪೇಳ್ದ ಮುನ್ನಿನಂದಮಲ್ಲ ಇಂದು ನಡುವಿರುಳೆ ನಡೆಯಲೊಡರಿಸಿದಪ್ಪುದೆಂಬುದುಮಾಂದೆಯಿಂತೆಂದುದು:

ವ॥ ಹಾಗೆ, ಆ ಆಂದೆಯು ಕಾಪುರುಷನಂತೆ ತನಗಿಲ್ಲದ ಮಹಿಮೆಯನ್ನು ಆರೋಪಿಸಿ ಆ ರಾಜಹಂಸನೊಡನೆ ನುಡಿಯುತ್ತಿರಲು ಮುಂಜಾನೆ ಪ್ರಯಾಣದ ಸರದಿ ಕಹಳೆಗಳು ಬೀಡೆತ್ತಲು ಪ್ರಾರಂಭಿಸುವುದನ್ನು ಕಂಡು ಆ ಹಂಸವು ಕನಕಾಕ್ಷನೊಡನೆ ಹೀಗೆಂದು ಕೇಳಿತು: ಇದು ನಿನ್ನ ಸೈನ್ಯವಾಗಿದ್ದಲ್ಲಿ ಇದು ಇಲ್ಲಿಂದೇಕೆ ಹೋಗುತ್ತಿರುವುದು ಎಂದು ಕೇಳಲು ನನ್ನ ಅಪ್ಪಣೆಯಿಲ್ಲದೆ ಇದು ಇಲ್ಲಿಂದ ಹೋಗಲಾರದು ; ಇದನ್ನೀಗಲೇ ತಡೆಯುವೆನೆಂದು ಒಕ್ಕೊರಲಿನಿಂದ ಕೂಗಲು ಅರಸನು ಇಂದಿನ ಪ್ರಯಾಣ ಉಪ್ಪಯಣ ಎಂದು ಅಂದಿನ ಪ್ರಯಾಣವನ್ನು ನಿಲ್ಲಿಸಿದನು. ಮರುದಿನ ಮುಂಜಾನೆ ಪ್ರಯಾಣ ಭೇರಿಯನ್ನು ಬಾರಿಸಲು ವಿಹಗೇಂದ್ರನು ಕೇಳಿ ಆಂದೆಗೆ ಹೇಳಿತು : ಭಾವ ! ನಿನ್ನ ಬೀಡಿನಿಂದ ಯಾಕೆ ಸೈನ್ಯ ಹೋಗುತ್ತಿರುವುದು ? ಅದಕ್ಕೆ ಆ ಆಂದೆ ನನ್ನ ಅಜ್ಞೆಯಿಲ್ಲದೆ ಅದೆಲ್ಲಿಗೆ ಹೋಗುವುದು ? ? ಚಂದ್ರೋದಯದಲ್ಲಿ ಸಮುದ್ರಘೋಷದಂತೆ ಸೂರ್ಯೋದಯಕಾಲದಲ್ಲಿ ನನ್ನ ಬೀಡಿನ ಘೋಷವು ಸಹಜ. ಮಳೆಗಾಲ ಉಂಟು ಎಂದು ತಪ್ಪ ಹೇಳಿದ ಜೋಯಿಸನು ಬಾವಿಯ ನೀರನ್ನೆತ್ತಿ ಹೊಯ್ದನೆಂಬ ಕಥೆಯಂತೆ ಹುಸಿ ಅರಸುತನದ ವ್ಯಸನದಲ್ಲಿ ಸಿಲುಕಿ, ಮಾತಾಡದಿದ್ದಲ್ಲಿ ನನ್ನ ಗೆಳೆಯನು ನನ್ನ ರಹಸ್ಯವನ್ನು ಅರಿಯುವನೆಂದು ನಾಲ್ಕೈದು ಬಾರಿ ಕೂಗಿತು. ಆ ಸ್ವರವನ್ನು ಕೇಳಿ ಆ ದಿನವೂ ಪ್ರಯಾಣವನ್ನು ನಿಲ್ಲಿಸಿದರು. ಅದೆಲ್ಲವನ್ನೂ ಅರಸನು ಕೇಳಿ ಮರುದಿನ ಅರ್ಧರಾತ್ರಿಯಲ್ಲಿ ಹೋಗಬೇಕೆಂದು ನಿಶ್ಚಯಿಸಲು ರಾಜಹಂಸವು ಕಂಡು, ಏನು ಕನಕಾಕ್ಷ ! ನಿನ್ನ ಸೈನ್ಯವು ನೀನು ಹೇಳಿದಂತೆ ಮಾಡುತ್ತಿಲ್ಲವಲ್ಲ ; ಇಂದಿನ ನಡುವಿರುಳೇ ಹೊರಡುವುದು ಎನ್ನಲು ಆಂದೆಯು ಹೀಗೆಂದಿತು : ಈ ಸೈನ್ಯವನ್ನು ನಾನು

ಈ ಪಡೆಯನಾಂ ಮುನ್ನಂ ಪರಮಂಡಲಕ್ಕೆ ಪೇೞ್ದ ಕಾರಣದಿಂದೆತ್ತಲ್ಗೆವಪ್ಪುದಿದನಾನಿಂದು ಪೋಗಲೀಯೆನೆಂದು ಪಲವುಂ ಸೂೞುಲಿದು ಪಲ್ಗರ್ಚಿ ಕಲ್ಪಸರದಿಂ ಸಿಲ್ಕುವಳಿದು ಮಾಣ್ಬುದುಮದೆಲ್ಲಮನರಸಂ ಕೇಳ್ದು ಶಕುನಿಗರಂ ಕರೆಯಿಸಿ, ಈ ಶಕುನಮದೇನಂ ಪೇೞ್ಪುದೆಂದು ಬೆಸಗೊಳ್ವುದುಂ : ಅಲ್ಲಿ ಶಕುನಿಗರೊಳೊರ್ವಂ ನಿಂತೆಂದಂ: ಈ ಪಕ್ಕಿ ನುಡಿದ ಮೂಱುಂ ಸರವಭಿಪ್ರಾಯದೊಳ್ ನಮ್ಮ ಶತ್ರುವಕ್ಕೆ ಈ ಪಕ್ಷಿಯ ಮಿತ್ರನಕ್ಕೆ ಸಾಗುಮೆಂದು ಪೇೞ್ವುದುಂ ಎನ್ನ ಮನಮುಂ ನಿನ್ನ ಕಂಡ ಯುಕ್ತಿಯುಮೊಂದಾಗಿರ್ದುದು ಇನ್ನಿದರ್ಕೆ ತಕ್ಕುದನಾನೆ ಬಲ್ಲೆನೆಂದು ಧನುರ್ವೇದಿಯುಂ ಶಬ್ದವೇದಿಯುಮಪ್ಪ ಬಿಲ್ಲ ಬಿನ್ನಣಿಯೊರ್ವನಂ ಕರೆದು ನಿಚ್ಚಂ ವಕ್ರಿಸುತ್ತಿರ್ಪ ನಿಚ್ಚಲವಕ್ಕಿಯನೆಚ್ಚು ಬಾಯೆಂದು ಪೇೞ್ವುದುಮಾತನಂತೆಗೆಯ್ವೆನೆಂದು ಆಂದೆಯಿರ್ದ ಮರದ ಸಮೀಪಕ್ಕೆ ಬಂದು ಬಱಿಕ್ಕದಱ ಸರಮನೆಲ್ಲಿಯುಂ ಕೇಳಲಿಂಬಿಲ್ಲದೆ ಕೊಂಬಿನೊಳ್ ವಸಿಯಿಸಿ ಮಿಸುಗುತಿರ್ದ ರಾಜಹಂಸನಂ ಆಂದೆಯೆಂದೇ ಬಗೆದು.

ಭರದಿಂ ರಾಮಂ ಕಾಕಾ-
ಸುರನಂ ಮುನಿದಿಸುವ ತೆಱದಿನೆಚ್ಚಂ ವಿಹಗೇ-
ಶ್ವರನೆನಿಪ ಹಂಸನಂ ವರ
ಶರಾಸನಾಗಮವಿಶಾರದಂ ತತ್ಕ್ಷಣದಿಂ ೧೯೪

ಅಂತೆಚ್ಚ ಕೋಲಿಂ ಮುನ್ನಮ ಸುರುಳ್ದುರುಳ್ದು ಹಂಸಂ ವಿಧ್ವಂಸಮನೆಯ್ದಿತ್ತು

(ಪದಿನಾಲ್ಕನೆಯ ಕಥೆಯು ಶೇಷ)

ಅದಱಿಂ, ಶ್ಲೋ ॥ ಅಕಾಲಚರ್ಯಾಂ ವಿಷಮೇಷು ಗೋಷ್ಠೀಂ
ಕುಮಿತ್ರಸೇವಾಂ ನ ಕದಾಪಿ ಕುರ್ಯಾತ್
ಪಶ್ಯಾಂಡಜಂ ಪದ್ಮವನೇ ಪ್ರಸೂತಂ
ಧನುರ್ವಿಮುಕ್ತೇನ ಶರೇಣ ವಿದ್ಧಂ ॥೭೮॥

ಮೊದಲು ಪರರಾಷ್ಟ್ರಕ್ಕೆ ಕಳುಹಿಸಬೇಕೆಂದಿರುವುದರಿಂದ ಅದು ಹೊರಟಿತು. ಅದನ್ನು ನಾನು ಇಂದು ಹೋಗಲು ಬಿಡುವುದಿಲ್ಲ ಎಂದು ಹಲವು ಬಾರಿ ಹಲ್ಲುಕಚ್ಚಿ ಕರ್ಕಶವಾಗಿ ಕೂಗಲು, ಅದನ್ನು ಕೇಳಿದ ರಾಜನು ಈ ಶಕುನದ ಅರ್ಥವೇನೆಂದು ಶಕುನಿಗರನ್ನು ಕರೆಯಿಸಿ ಕೇಳಿದನು. ಆ ಶಕುನಿಗರಲ್ಲೊಬ್ಬನು ಹೀಗೆಂದನು: ಮೂರು ಬಾರಿ ಕೂಗಿದ ಹಕ್ಕಿಯ ಸ್ವರದಲ್ಲಿ ನಮ್ಮ ಶತ್ರುವಾಗಲೀ ಈ ಹಕ್ಕಿಯ ಮಿತ್ರನಾಗಲೀ ಸಾಯುವುದು ಎಂದು ಅರ್ಥವಾಗುವುದು: ಅದಕ್ಕೆ ಅರಸನು ನನ್ನ ಮನಸ್ಸೂ ನೀನು ಹೇಳಿದ ಅರ್ಥವೂ ಒಂದೇ ಆಗಿದೆ. ಇನ್ನದಕ್ಕೆ ತಕ್ಕುದನ್ನು ನಾನೇ ಬಲ್ಲೆ ಎಂದು ಧನುರ್ವೇದಿಯೂ ಶಬ್ದವೇದಿಯೂ ಆದ ಒಬ್ಬ ಬಿಲ್ಲಾಳನ್ನು ಕರೆಯಿಸಿ ನಿತ್ಯವೂ ವಕ್ರವಾಗಿ ಕೂಗುತ್ತಿರುವ ಈ ಅನಿಷ್ಟಕರವಾದ ಹಕ್ಕಿಯನ್ನು ಕೊಂದು ಬಾ ಎಂದು ಹೇಳಿದನು. ಆತನು ಹಾಗೆಯೇ ಮಾಡುವೆನೆಂದು ಆಂದೆಯಿದ್ದ ಮರದ ಸಮೀಪಕ್ಕೆ ಬಂದು ಅದರ ಸ್ವರವನ್ನು ಎಲ್ಲಿಯೂ ಕೇಳದೆ ಕೊಂಬೆಯಲ್ಲಿ ವಾಸಿಸುತ್ತಿದ್ದ ರಾಜಹಂಸವನ್ನು ಆಂದೆಯೆಂದೇ ತಿಳಿದು ೧೯೪. ರಾಮನು ಕಾಕಾಸುರನ ಮೇಲೆ ಕೋಪದಿಂದ ಬಾಣ ಪ್ರಯೋಗಿಸಿದಂತೆ ಆ ಪಕ್ಷಿಶ್ರೇಷ್ಠನನ್ನು ತತ್‌ಕ್ಷಣವೇ ಕೊಂದನು. ವ॥ ಹಾಗೆ ಬಿಟ್ಟ ಬಾಣ ಮುಟ್ಟುವ ಮೊದಲೇ ಸುರಳುರುಳಿ ಹಂಸ ವಿಧ್ವಂಸವಾಯಿತು. (ಹದಿನಾಲ್ಕನೆಯ ಕಥೆಯ ಶೇಷ) ಆದರಿಂದ, ಶ್ಲೋ॥ ಅಕಾಲದಲ್ಲಿ ಸಂಚರಿಸಬಾರದು, ವಿಷಮರೊಡನೆ ಗೋಷ್ಠಿಯನ್ನು ಮಾಡಬಾರದು:

ಟೀ|| ಅಕಾಲದಲ್ಲಿ ಚರಿಸಲಾಗದು. ವಿಷಮರೊಡನೆ ಗೋಷ್ಠಿಯಂ ಮಾಡಲಾಗದು. ಕುಮಿತ್ರನ ಸಂಗಡ ಆಡಲಾಗದು: ಅದು ಹೇಂಗೆಂದೊಡೆ ಪದ್ಮವನದಲ್ಲಿ ಪುಟ್ಟಿದ ರಾಜಹಂಸೆಯಾಂದೆಯ ಕೆಳಗೊಂಡ ಕಾರಣದಿಂದೊಂದೆ ಬಾಣದಿಂ ಮರಣಮನೆಯ್ದಿತ್ತು, ಎಂದಿಂತು ಬುದ್ಧಿವಂತನಪ್ಪೊಳ್ಳೆ ಪೇಚ್ಛೊಡದಂ ಮಾಣದೆ ಮತ್ತಿನೊಳ್ಳೆಗಳ್ ದರ್ಪದಿಂ ಸರ್ಪನಂ ನಡುವಿಟ್ಟುಕೊಂಡಿರ್ಪುದುಮಾ ಪಾವು ಪಾಲಂ ಕುಡಿದು ಕೊರ್ಬಿ ನೆಳೆದಾಡುತ್ತುಮಿರ್ದುದು. ಅನ್ನೆಗಮಿತ್ತಂ,

ಅಳಿನೀಸಂಕುಳವೇಷ್ಟಿತಪ್ರವಿಳಸನ್ಮಲ್ಲೀವನಂ ಚಾರುಪಾ
ಟಳಮಸ್ತಂಗತಕುಂದಮೆಸೆದತ್ತೆತ್ತಂ ದವೋಗ್ರಾಗ್ನಿದ-
ಗ್ಧಳತಾವ್ರಾತಮಪಾಸ್ತ ಮೇಘಮುದಿತಾಬ್ದೌಘಂ ನಿದಾಘಂ ಮಹೀ-
ತಳದೊಳ್ ತಪ್ತಮಹೀರಜಂ ದಿವಸಕೃತ್ತಾಪಾರ್ತದೇಹಿವ್ರಜಂ ೧೯೫

ಅಂತೊಪ್ಪುವ ನಿದಾಘಸಮಯದೊಳ್ ಪ್ರಜಾಪಾಲ ಮಹೀಪಾಲಂ ಜಲಕ್ರೀಡಾಸಕ್ತಚಿತ್ತನಾಗಿ ಮದನಮತ್ತಮಾತಂಗ ಗಮನೆಯರುಂ ಮಾರವೀರಧನುಃ ಖಂಡಾಯಮಾನಭ್ರೂಲತಾ ವಿಭ್ರಮಭ್ರಾಜಿತೆಯರುಂ ಮಣಿಮಯಮಂಜೀರಮಂಜು ಶಿಂಜಿತವಾಚಾಳಚಾರುಚರಣೆಯರುಂ ಮದಮದಿರಾಮದೋನ್ಮತ್ತೆಯರುಂ ಮಕರಕೇತನ ರಾಜ್ಯಾಧಿದೇವತೆಯರುಮಪ್ಪ ನಿಜಾಂತಃಪುರಪುರಂಧ್ರಿಯರ್ವೆರಸು ಪೋಗಿ ಜಲಕ್ರೀಡೆಯಾಡುತಿರ್ಪುದುಂ ಅಂದಲ್ಲಿರ್ದ ಸರ್ಪನರಸಿಯಂ ಪಿಡಿದು ಬಿಡದಿರ್ಪುದುಮದನರಸಂ ಕಂಡೆಂತಾನುಂ ಬಿಡಿಸಿ ಕಳೆದಾ ಸರ್ಪನುಮನೊಳ್ಳೆಗಳುಮಂ ಶತಖಂಡಂ ಮಾಡಿ ಕೊಲಿಸಿದಂ, ಅದಜೆಂ,

ಕುಮಿತ್ರನ ಸಂಗಡ ಮಾತನಾಡಬಾರದು. ಸರೋವರದಲ್ಲಿ ಹುಟ್ಟಿದ ರಾಜಹಂಸ ಆಂದೆಯ ಗೆಳೆತನ ಮಾಡಿದುದರಿಂದ ಒಂದೇ ಬಾಣದಿಂದ ಮರಣಹೊಂದಿತು. ವ|| ಈ ರೀತಿಯಲ್ಲಿ ಬುದ್ಧಿವಂತನಾದ ಒಳ್ಳೆಯು ಹೇಳಿದರೂ ಕೇಳದೆ ಉಳಿದ ಒಳ್ಳೆಗಳು ದರ್ಪದಿಂದ ಆ ಸರ್ಪವನ್ನು ತಮ್ಮ ನಡುವೆ ಇಟ್ಟುಕೊಂಡಿರಲು ಆ ಹಾವು ಹಾಲನ್ನು ಕುಡಿದು ಕೊಬ್ಬಿ ಒಳ್ಳೆಗಳೊಡನೆ ಕೂಡಿ ಆಡಿಕೊಂಡಿತ್ತು. ಅಷ್ಟರಲ್ಲಿ ಇತ್ತ, ೧೯೫ ಹೆಣ್ಣು ತುಂಬಿಗಳ ಸಮೂಹದಿಂದ ಸುತ್ತುವರಿದ ಚೆನ್ನಾಗಿ ಅರಳಿರುವ ಮಲ್ಲಿಗೆಯ ತೋಟ, ಸುಂದರ ಪಾದರಿ, ಮುಚ್ಚಿದ ಮೊಲ್ಲೆಯ ರಾಶಿ, ಕಾಡುಗಿಚ್ಚಿನ ಭಯಂಕರವಾದ ಅಗ್ನಿಯಿಂದ ದಗ್ಧವಾದ ಬಳ್ಳಿಗಳು, ಬೇಸಗೆ, ನೆಲದಲ್ಲಿ ಸುಡುವ ಧೂಳು, ಸೂರ್ಯನ ಬಿಸಿಲಿನ ಝಳದಿಂದ ಆಯಾಸಗೊಂಡ ಜೀವಿಗಳು ಎಲ್ಲೆಲ್ಲಿಯೂ ಕಂಡುಬಂದವು. ವ|| ಅಂತಹ ಬೇಸಗೆಯ ಕಾಲದಲ್ಲಿ ಪ್ರಜಾಪಾಲ ರಾಜನು ಜಲಕ್ರೀಡಾಸಕ್ತನಾಗಿ ಮನ್ಮಥನ ಮದ್ದಾನೆಯ ನಡಗೆಯುಳ್ಳವರೂ, ಮನ್ಮಥನ ಬಿಲ್ಲಿನ ತುಂಡೆಂಬಂತೆ ಹುಬ್ಬಿನ ಬಳ್ಳಿಯಿಂದ ಶೋಭಿಸುವವರೂ, ರತ್ನಖಚಿತವಾದ ಕಾಲಂದುಗೆಯ ಮಧುರನಾದದಿಂದ ಕೂಡಿದ ಸುಂದರ ಪಾದೆಯರೂ, ಮದಮದ್ಯದಿಂದ ಉನ್ಮತ್ತೆಯರೂ, ಕಾಮರಾಜ್ಯದ ಅಧಿದೇವತೆಯರೂ ಆದ ತನ್ನ ಅಂತಃಪುರದ ಚೆಲುವೆಯರನ್ನು ಕೂಡಿಕೊಂಡು ಹೋಗಿ ಜಲಕ್ರೀಡೆಯಾಡುತ್ತಿದ್ದನು. ಅಂದು ಅಲ್ಲಿದ್ದ ಸರ್ಪವು ಅರಸಿಯನ್ನು ಹಿಡಿದುಕೊಂಡು ಬಿಡದೆ ಇರಲು ಅರಸನು ಅದನ್ನು ಕಂಡು ಹೇಗೋ ಅದನ್ನು ಬಿಡಿಸಿ ಸರ್ಪವನ್ನೂ

ಶ್ಲೋ॥ ಸುಖಂ ವಸಂತಃ ಪಯಸಾ ಚ ಪುಷ್ಟಾಃ
ನೃಪಸ್ಯ ಭಾರ್ಯಾ ಸಹದೀಪ್ಯಮಾನಾಃ
ತೇ ಡುಂಡುಭಾ ಸರ್ಪಕೃತಾಪರಾಧಾನ್
ನಷ್ಟಾ ಧ್ರುವಂ ದುಷ್ಟ ಪರಿಗ್ರಹೇಣ ॥೭೯॥

ಟೀ॥ ಪಾಲಂ ಕುಡಿದು ಸುಖದೊಳ್ ನೃಪಸತಿಯರ ಕೂಡಿರ್ದೊಳ್ಳೆಗಳ್ ಸರ್ಪಕೃತಾಪರಾಧ ನಿಮಿತ್ತಂ ಕೊಲಿಸಿಕೊಳ್ಳಲ್ಪಟ್ಟವು.

ಅದಱಿಂ ನಿನ್ನನೊಳಕೊಂಡಂದೆನಗಮಾ ವಿಧಿಯಕ್ಕುಮೆಂದು ಮಂದವಿಸರ್ಪಿಣಿ ಪೇಱ್ವುದುಂ ಡುಂಡುಕನಿಂತೆಂದುದು : ನಿನಗಿನಿತವಸ್ಥೆಯುಮನಿಷ್ಟಮುಮಾಗಲ್ವೇಡ, ಆನಿಲ್ಲಿರ್ಪೆನಲ್ಲೆಂ ಅತಿಥಿ ಯುಮನಭ್ಯಾಗತನುಮನವಜ್ಞೆಗೆಯ್ವುದೇತಱ ಧರ್ಮಂ, ಅದೆಂತೆನೆ,

ಶ್ಲೋ॥ ಗುರುರಗ್ನಿರ್ದ್ವಿಜಾತೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ
ಪತಿರೇವ ಗುರುಸ್ತ್ರೀಣಾಂ ಸರ್ವಸ್ಯಾಭ್ಯಾಗತೋ ಗುರುಃ ॥೮೦॥

ಟೀ॥ಬ್ರಾಹ್ಮಣಂಗೆ ಅಗ್ನಿಯೇ ಗುರು, ಕ್ಷತ್ರಿಯ ವೈಶ್ಯ ಶೂದ್ರರ್ಗೆ ಬ್ರಾಹ್ಮಣನೇ ಗುರು. ಸತಿಗೆ ಪತಿಯೇ ಗುರು, ಎಲ್ಲರ್ಗಮಭ್ಯಾಗತನೇ ಗುರು. ಮತ್ತಮದಲ್ಲದಯುಂ

ಶ್ಲೋ॥ ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿ ನಿವರ್ತತೇ
ಸ ದತ್ವಾ ದುಷ್ಕೃತಂ ತಸ್ಯ ಪುಣ್ಯಮಾದಾಯ ಗಚ್ಛತಿ ॥೮೧॥

ಟೀ॥ ಆವನಾನೊರ್ವನ ಮನೆಗೆ ಬಂದತಿಥಿ ಭಗ್ನಮನಸ್ಕನಾದೊಡೆ ತಾಂ ಮಾಡಿದ ಪಾಪಮಂ ಗೃಹಸ್ಥಂಗೆ ಕೊಟ್ಟು ಆ ಗೃಹಸ್ಥನುಪಾರ್ಜಿಸಿದ ಪುಣ್ಯಮನುಯ್ವಂ. ಎಂಬುದು ಮನೆವಾಱದಮ್ಮುಮವೆಲ್ಲಮಂ ನೀನೆ ಬಲ್ಲೆಯೆಂದೊಡೆ ಮಂದವಿಸರ್ಪಿಣಿ ಮತಿಭ್ರಾಂತಿಯಿಂ ದುಷ್ಟನಂ ಶಿಷ್ಟನೆಂದೆಡೆಗೊಟ್ಟಿರಲ್ ಇತ್ತಲರಸಂ ಸಿರಿಮಂಚದೊಳ್ ಪವಡಿಸಲೊಡಂ,

ಒಳ್ಳೆಗಳನ್ನೂ ನುಚ್ಚುನುರಿಗೊಳಿಸಿ ಕೊಲ್ಲಿಸಿದನು. ಶ್ಲೋ॥ ಅದರಿಂದ ಹಾಲು ಕುಡಿದು ಸುಖದಿಂದ ನೃಪಸತಿಯರನ್ನು ಕೂಡಿಕೊಂಡಿದ್ದ ಒಳ್ಳೆಗಳು ಸರ್ಪಕೃತಾಪರಾಧದಿಂದಾಗಿ ಸತ್ತುಹೋದವು. ಅದರಿಂದ ನಿನ್ನನ್ನು ಒಳಕ್ಕೆ ಸೇರಿಸಿಕೊಂಡರೆ ನನಗೂ ಅದೇ ಗತಿಯಾದೀತು ಎಂದು ಮಂದವಿಸರ್ಪಿಣಿ ಹೇಳಲು ಡುಂಡುಕ ಹೀಗೆಂದಿತು: ನಿನಗೆ ಇಂಥ ಅನಿಷ್ಟವೂ ಅವಸ್ಥೆಯೂ ಆಗುವುದು ಬೇಡ. ನಾನಿಲ್ಲಿರುವವನಲ್ಲ, ಅತಿಥಿಯನ್ನೂ ಅಭ್ಯಾಗತನನ್ನೂ ಅವಜ್ಞೆಗೆಯ್ಯುವುದು ಅದೆಂಥ ಧರ್ಮ ? ಹೇಗೆಂದರೆ, ಶ್ಲೋ॥ ಬ್ರಾಹ್ಮಣನಿಗೆ ಅಗ್ನಿಯೇ ಗುರು, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಬ್ರಾಹ್ಮಣನೇ ಗುರು, ಸತಿಗೆ ಪತಿಯೇ ಗುರು, ಅಭ್ಯಾಗತನು ಸರ್ವರಿಗೂ ಗುರು. ಶ್ಲೋ॥ ಅಲ್ಲದೆ, ಯಾವನಾದರೊಬ್ಬನ ಮನೆಗೆ ಬಂದ ಅತಿಥಿ ಭಗ್ನಮನಸ್ಕನಾದರೆ ತಾನು ಮಾಡಿದ ಪಾಪವನ್ನು ಆ ಗೃಹಸ್ಥನಿಗೆ ಕೊಟ್ಟು ಆ ಗೃಹಸ್ಥ ಸಂಪಾದಿಸಿದ ಪುಣ್ಯವನ್ನು ಕೊಂಡು ಹೋಗುವನು. ವ॥ ಈ ರೀತಿ ಹೇಳಲು ಮನೆವಾರ್ತೆಯ ಧರ್ಮವೆಲ್ಲವನ್ನೂ ನೀನೇ ಬಲ್ಲೆಯೆನ್ನಲು ಮಂದವಿಸರ್ಪಿಣಿ ಮತಿಭ್ರಾಂತಿಯಿಂದ ದುಷ್ಟನನ್ನು ಶಿಷ್ಟನೆಂದು ಸ್ವೀಕರಿಸಿತು. ಇತ್ತ ಅರಸನು ತನ್ನ

ಪರಿತಂದು ತಿಂದು ಮಂಚಾಂ
ತರದೊಳ್ ತಚ್ಛಿದ್ರಭಾಗಮಂ ಪೊಕ್ಕುದತಿ-
ತ್ವರಿತಗತಿ ಮತ್ಕುಣಂ ಮುಖ
ಪರಿಪೀತನರೇಂದ್ರರುಧಿರ ಪಾಟಲಮಾಗಳ್ ೧೯೬

ಅಂತು ಡುಂಡುಕತುಂಡ ಖಂಡಿತ ಶರೀರನರಸಂ ಭೋಂಕನೆಚ್ಚಱೆಪುದುಂ ಸೆಜ್ಜೆಯ ಕಾಪಿನವರ್ ಪರಿತಂದು ಶೋಧಿಸಿ ನೋಡಿ ಪಚ್ಚಡಿಕೆಯುಂ ಪತ್ತಿರ್ದ ಕೂಱೆಯುಂ ಕಂಡರಸಂಗೆ ನಿದ್ರಾಭಂಗಮಂ ಮಾಡಿದ ದ್ರೋಹನಿದಕ್ಕುಮೆಂದು ಮಂದವಿಸರ್ಪಿಣಿಯಂ ಕೊಂದರ್ ಅದಱಿಂ,

ಶ್ಲೋ॥ ಯೋಽವಿನೀತಸ್ಯ ಸಂಸ್ಥಾನಂ ದದಾತಿ ಸ ವಿನಶ್ಯತಿ
ಡುಂಡುಕಸ್ಯಾಪರಾಧೇನ ಹತಾ ಮಂದವಿಸರ್ಪಿಣೀ ॥೫೨॥

ಟೀ॥ ಆವನಾನೊರ್ವಂ ದುರ್ಜನನನೊಳ್ಕೊಂಡಿಹಂ ಅವಂ ಕಿಡುವಂ. ಅದು ಎಂತೆಂದೊಡೆ, ಡುಂಡುಕನೆಂಬ ತಿಗುಣೆಯ ಅಪರಾಧದಿಂ ಮಂದವಿಸರ್ಪಿಣಿಯೆಂಬ ಪೇನು ಕೊಲಿಸಿಕೊಳಲ್ಪಟ್ಟುದು-ಎಂದಿಂತನೇಕ ಪ್ರಕಾರಮಾದುಪಕಥೆಗಳಂ ಕುಱಿತು ದೃಷ್ಟಾಂತಂಗಳಂ ನೀತಿ ಶಾಸ್ತ್ರಾಭಿಪ್ರಾಯಂಗಳಂ ದವನಕಂ ಪೇೞ್ದು ಮತ್ತಮಿಂತೆಂದಂ : ನಿನ್ನ ಮರುಳ್ತನಕ್ಕೆ ಮುನ್ನಮೆ ಬೇಸತ್ತು ಬಿಟ್ಟು ಪರಿಗ್ರಹಮೆಲ್ಲಂ ಪರೆಮಪೋದುದು. ಆನುಂ ಕಾರ್ಯಸಹಾಯನಲ್ಲದೆ ಖಡ್ಗ ಸಹಾಯನಲ್ಲೆಂ. ಅಂತಾಗಿಯುಮೆನ್ನಱಿವುದೆಲ್ಲಮಂ ನೆಱೆಯೆ ಬಿನ್ನಪಂಗೆಯ್ದೆಂ. ಇನ್ನಪ್ಪೊಡೆನ್ನ ಮೇಲೆ ದೋಷಮಿಲ್ಲ, ಮೇಲಪ್ಪುದುಂ ನೀನೆ ಬಲ್ಲೆಯೆಂಬುದುಮದಱ ಕುಮಂತ್ರದಿಂ ಪಿಂಗಳಕನೆಂಬ ಗೃಹಂ ಸದಾಗ್ರಹಮನೆಂತಾನುಂ ಪತ್ತುವಿಟ್ಟಿಂತೆಂದುದು : ನೀನೆನಗಿನಿತಾಗ್ರಹಂಗೆಯ್ದು ಬುದ್ಧಿಪೇೞ್ದುದೆಲ್ಲಮೆನ್ನ ಹಾನಿವೃದ್ಧಿಗಳ್ ನಿನ್ನವಪ್ಪ ಕಾರಣದಿಂ ಪೇೞ್ದೆ, ಆನುಮಿನಿತುಂ ಮಾರ್ಕೊಂಡುದು

ಸಿರಿಮಂಚದಲ್ಲಿ ಪವಡಿಸಲು ೧೯೬. ಅತಿತ್ವರಿತಗತಿಯ, ರಾಜನ ರಕ್ತವನ್ನು ಕುಡಿದಿರುವ ಬಾಯಿಯ ಆ ತಿಗಣೆಯು ಮಂಚದ ಛಿದ್ರಭಾಗವನ್ನು ಹೊಕ್ಕಿತು. ಅಂತು ಡುಂಡುಕತುಂಡ ಖಂಡಿತಶರೀರನಾದ ಅರಸನು ಭೋಂಕನೆ ಎಚ್ಚರಗೊಳ್ಳಲು ಶಯ್ಯಾಗೃಹದ ಕಾವಲುಗಾರರು ಅಲ್ಲಿಗೆ ಓಡಿಬಂದು ಹುಡುಕಿ ನೋಡಲು ಹೊದೆವಸ್ತ್ರವನ್ನು ಹತ್ತಿಕೊಂಡಿದ್ದ ಕೂರೆಯನ್ನು ಕಂಡು ಅರಸನ ನಿದ್ರಾಭಂಗಮಾಡಿದ ದ್ರೋಹಿ ಇದೇ ಎಂದು ಮಂದವಿಸರ್ಪಿಣಿಯನ್ನು ಕೊಂದರು. ಅದರಿಂದ ಶ್ಲೋ॥ ದುರ್ಜನರನ್ನು ಸೇರಿಸಿಕೊಂಡವನು ಕೆಡುವನು. ಡುಂಡುಕನೆಂಬ ತಿಗಣೆಯ ಅಪರಾಧದಿಂದ ಮಂದವಿಸರ್ಪಿಣಿಯೆಂಬ ಹೇನು ಸತ್ತುಹೋಯಿತು. ವ॥ ಈ ರೀತಿಯ ಅನೇಕ ಉಪಕಥೆಗಳನ್ನು ಕುರಿತು ದೃಷ್ಟಾಂತಗಳನ್ನೂ ನೀತಿಶಾಸ್ತ್ರದ ಅಭಿಪ್ರಾಯಗಳನ್ನೂ ಹೇಳಿ ದವನಕನು ಬಳಿಕ ಹೀಗೆಂದನು : ನಿನ್ನ ಮರುಳುತನಕ್ಕೆ ಮೊದಲೇ ಬೇಸತ್ತು ಪರಿಗ್ರಹಗಳೆಲ್ಲ ಹರಿದುಹೋದುವು. ನಾನೂ ಕಾರ್ಯಸಹಾಯನಲ್ಲದೆ ಖಡ್ಗಸಹಾಯನಲ್ಲ. ಹಾಗಿದ್ದರೂ ನನಗೆ ತಿಳಿದ ಎಲ್ಲ ವಿಚಾರಗಳನ್ನೂ ಚೆನ್ನಾಗಿ ಬಿನ್ನೈಸಿದೆನು. ಇನ್ನು ನನ್ನಲ್ಲಿ ದೋಷವಿಲ್ಲ. ಮುಂದಾಗುವುದನ್ನು ನೀನೇ ಬಲ್ಲೆ ಎನ್ನಲು ಪಿಂಗಳಕನು ಹೀಗೆಂದಿತು : ನೀನು ನನಗೆ ಇಷ್ಟೆಲ್ಲ ಒತ್ತಾಯದಿಂದ ಬುದ್ಧಿ ಹೇಳಿದುದೆಲ್ಲ ನನ್ನ ಹಾನಿವೃದ್ಧಿಗಳು ನಿನ್ನದಾದುದರಿಂದ ಹೇಳಿದೆಯಷ್ಟೆ. ನಾನೂ ಇಷ್ಟರವರೆಗೆ ವಿರೋಧಿಸಿದುದು ಸಂಜೀವಕನು ಪಶುವಾಗಿರುವುದಕ್ಕಾಗಿ. ನಾನಾದರೋ

ದೆಲ್ಲಂ ಸಂಜೀವಕನಪ್ಪೊಡೆ ಪಸು, ನಾನಪ್ಪೊಡೆ ಮೃಗಾಧಿರಾಜನದಪೆಂತುಂ ಕೊಲ್ವೆನೆಂದಿರ್ದೆಂ. ನೀನೆಂಡುದು ತಪ್ಪದು. ಅರಸುಗೆಯ್ವಾತಂ ಮಂತ್ರಿಯ ಪೇೞ್ಗೆಯ್ಯಲೆವೇೞ್ಕುಂ. ಅದೆಂತೆನೆ ;

ಶ್ಲೋ॥ ಸ ಕಿಂ ಸಖಾ ಸಾಧು ನ ಶಾಸ್ತಿ ಯೋಧಿಪಂ
ಹಿತಾನ್ನಯಸ್ಸಂಶೃಣುತೇ ಸ ಕಿಂ ಪ್ರಭುಃ
ಸದಾನುಕೂಲೇಷು ಹಿ ಕುರ್ವತೇ ರತಿಂ
ನೃಪೇಷ್ವಮಾತ್ಯೇಷು ಚ ಸರ್ವಸಂಪದಃ ॥೫೩॥

ಟೀ॥ ಸ್ನೇಹಿತಂಗೆ ಬುದ್ಧಿಗಲಿಸದ ಮಿತ್ರನುಂ ಒಡೆಯಂಗೆ ಹಿತವಂ ಮಾಡದ ಭೃತ್ಯನುಂ ಮಂತ್ರಿಯ ಮಾತಂ ಕೇಳದರಸುಂ ಇಂತಿವರ್ ಪ್ರಯೋಜನಮಿಲ್ಲ, ಅನುಕೂಲನಹ ಪ್ರಧಾನನಲ್ಲಿಯುಂ ಅರಸನಲ್ಲಿಯುಂ ಸಕಲ ಸಂಪತ್ತು ದೊರಕೊಂಬುದು – ಎಂದಿಂತಪ್ಪ ರಾಜನೀತಿಗಳೊಳವು. ಆಂ ನಿನ್ನ ಪೇೞ್ದ ಬುದ್ಧಿಯೊಳ್ ಸಂಜೀವಕಂಗೆ ತಕ್ಕುದಂ ಮಾೞ್ಪೆನಾತನೆನಗೆ ತಪ್ಪಲ್ಗೆಪುದನೆಂತಱಿಯಲಕ್ಕು ಮೆಂಬುಮಂ ದವನಕನಿಂತೆಂದಂ : ದೇವಾ! ನೀವೇಕಾಕಿಯಾಗಿರ್ದವಸರದೊಳ್ ಸಂಜೀವಕಂ ನಿಮ್ಮಲ್ಲಿ ಮುನ್ನಂ ಬರ್ಪಂದಮಲ್ಲದೆ ಭೋರನೆ ಬಂದತಿದೂರಮುಮತ್ಯಾಸನ್ನಮುಮಲ್ಲದೆ ನಿಂದು ಹಿಂದುಮುಂದುಮನೆಡಬಲನುಮಂ ಬೆರ್ಚಿದಂತೆ ನೋೞ್ಪುಮಪ್ಪೊಡಾಗಳ್ ನಿಮಗೆ ತಪ್ಪಲ್ಗೆಯ ಬಂದನೆಂದಱಿಯಿಮೆಂದು ಪೇೞ್ದುದುಂ ಪಿಂಗಳಕಂ ಕರಂ ಮುಳಿದಿಂತೆಂದಂ :

ಕೊಬ್ಬಿದ ಶಾಕ್ವರನಂ ಭುಜ
ಗರ್ಬದೆ ಪಿಡಿದಡಸಿ ಸೀೞ್ದು ನಿಜಗರ್ಬದಗು
ರ್ಬುರ್ಬಿಲೆ ಕೊರ್ಬಿರೆ ಕೊಂದಾಂ
ಪರ್ಬಂ ಮಾಡೆನೆ ಸೃಗಾಲ ನಾಳೆಯೆ ನಿನಗಂ ೧೯೭

ಮೃಗಾಧಿರಾಜ; ಅದನ್ನು ಹೇಗೆ ಕೊಲ್ಲಲಿ ಎಂದಿದ್ದೆ. ನೀನು ಹೇಳಿದುದು ತಪ್ಪಲ್ಲ. ಅರಸನಾದವನು ಮಂತ್ರಿಯ ಮಾತನ್ನು ಅಂಗೀಕರಿಸಲೇಬೇಕು. ಶ್ಲೋ॥ ಸ್ನೇಹಿತನಿಗೆ ಬುದ್ಧಿ ಹೇಳದ ಮಿತ್ರನೂ ಒಡೆಯನಿಗೆ ಹಿತ ಬಯಸದ ಭೃತ್ಯನೂ ಮಂತ್ರಿಯ ಮಾತನ್ನು ಕೇಳದ ಅರಸನೂ ಪ್ರಯೋಜನವಿಲ್ಲ. ಅನುಕೂಲನಾದ ಅರಸನಲ್ಲಿಯೂ ಪ್ರಧಾನನಲ್ಲಿಯೂ ಸಕಲ ಸಂಪತ್ತೂ ಬಂದು ಸೇರುವುವು. ವ॥ ನಾನು ನೀನು ಹೇಳಿದಂತೆ ಸಂಜೀವಕನಿಗೆ ತಕ್ಕುದನ್ನು ಮಾಡುವೆನು. ಆತನು ನನಗೆ ಎರಡೆಣಿಸಿದುದನ್ನು ಹೇಗೆ ತಿಳಿಯುವುದು ಸಾಧ್ಯ ಎನ್ನಲು ದವನಕನು ಹೀಗೆಂದನು : ದೇವಾ ! ನೀವು ಏಕಾಕಿಗಳಾಗಿದ್ದ ಸಮಯದಲ್ಲಿ ಸಂಜೀವಕನು ನಿಮ್ಮಲ್ಲಿಗೆ ಎಂದಿನಂತೆ ಬರುವ ರೀತಿ ಬಿಟ್ಟು ಇದ್ದಕ್ಕಿದ್ದಂತೆ ಬಂದು ಅತಿದೂರವೂ ಅತಿಹತ್ತಿರವೂ ಅಲ್ಲದಲ್ಲಿ ನಿಂತು ಹಿಂದೆ ಮುಂದೆ ಎಡಬಲಗಳನ್ನು ಹೆದರಿದವನಂತೆ ನೋಡಿದನಾದರೆ ನಿಮಗೆ ಎರಡೆಣಿಸಿ ಬಂದನೆಂದು ತಿಳಿಯಿರಿ ಎಂದು ಹೇಳಿದನು. ಅದಕ್ಕೆ ಪಿಂಗಳಕನು ಸಿಟ್ಟಾಗಿ ಹೀಗೆಂದನು: ೧೯೭. ಕೊಬ್ಬಿದ ಎತ್ತನ್ನು ಭುಜಬಲದಿಂದ ಹಿಡಿದು ಸೀಳಿ ಅದನ್ನು ಕೊಂದು ನಾಳೆಯೇ ನಿನಗೆ ಹಬ್ಬವನ್ನು

ಎಂಬುದುಂ. ದವನಕಂ ಮಹಾಪ್ರಸಾದಮೆಂದು ನಾನಿನ್ನುಸಿರದಿರ್ದೊಡೆ ದೂತನಿರ್ದಿಷ್ಟಮಕ್ಕುಂ ಸಂಜೀವಕನಂ ಬೇಗಂ ಪ್ರಕೋಪಂಗೊಳಿಸುವೆನೆಂದಲ್ಲಿಂ ತಳರ್ದು ಬರುತ್ತುಂ ಕಠಿಣಹೃದಯನಪ್ಪ ಕಂಠೀರವನೊಂದುದನೆನಿಸಿದೆಂ. ಈ ಮೃದುಹೃದಯನಪ್ಪ ಸಂಜೀವಕನಂ ಭೇದಿಸುವುದಾವ ಗಹನಮೆಂದು ಕೃತಕವಿಷಾದಂ ದೀನವದನನಾಗಿ ಬಂದು ಮುಂದೆ ನಿಂದ ದವನಕನಂ ಕಂಡು ಸಂಜೀವಕಂ ಮಿತ್ರಪ್ರತಿಪತ್ತಿಯೆಲ್ಲಮಂ ನೆಱೆಯೆ ಮಾಡಿ ಬೞಿಕ್ಕಂನ್ಹೊ ಭೂ ನಿನ್ನ ಮೊಗಂ ಖಿನ್ನವಾದ ಕಾರಣವೇನೆಂಬುದುಂ ಧೂರ್ತಜಂಬುಕನಿಂತೆಂದುದು :

ಶ್ಲೋ॥ ಸಂಪತ್ತಯಃ ಪರಾಯತ್ತಾಃ ಸದಾಚಿತ್ತಮನಿರ್ವೃತಂ
ತಜ್ಜೀವಿತಮವಿಶ್ವಾಸ್ಯಂ ತೇಷಾಂ ಯೇ ರಾಜಸಂಶ್ರಯಾಃ ॥೮೪॥

ಟೀ॥ ಆರ್ ಕೆಲಂಬರರಸನನೋಲೈಸುವರ್ ಅವರೈಶ್ವರ್ಯಂ ಪರಾಧೀನವಾಗಿಹುದು ಚಿತ್ತಮೆಂದುಂ ಸುಖಂಬಡೆಯದು. ಜೀವಿಸುಹವುಂ ನಂಬುಗೆಯಿಲ್ಲದುದು. ಮತ್ತಂ

ಶ್ಲೋ॥ ಆಚಾರ್ಯಾ ನ ಪರತಯಶ್ಚ ತುಲ್ಯಶೀಲಾ
ನಹ್ಯೇಷಾಂ ಪರಿಚಿತಮಸ್ತಿ ಸೌಹೃದಂ ವಾ
ಶುಶ್ರೂಷಾಂ ಚಿರಮಪಿ ಸಂಭೃತಾಂ ಪ್ರಯತ್ನಾತ್
ಸಂಕ್ರುದ್ಧಾ ರಜ ಇವ ನಾಶಯಂತಿ ಮೇಘಾಃ ॥೮೫॥

ಟೀ॥ ಆಚಾರ್ಯರ್ ಅರಸುಗಳ್ ಸಮಾನಶೀಲರ್, ಅವರಲ್ಲಿ ಪರಿಚಯಾಭ್ಯಾಸವೆಂಬುದಿಲ್ಲ. ಮಿತ್ರಭಾವವುಮಿಲ್ಲ, ಕೋಪಿಸಿದರಾದೊಡೆ ಪ್ರಯತ್ನದಿಂ ಪಲವು ಕಾಲಂ ಮಾಡಿದ ಶುಶ್ರೂಷೆಯುಂ ಕಿಡಿಸುವರ್. ಅದೆಹಗೆಂದೊಡೆ ಮೇಘಂಗಳ್ ರಜವ ಕಿಡಿಸುವ ಹಾಗೆ. ಮತ್ತಂ

ಮಾಡಿಸುವೆನು ! ವ॥ ದವನಕನು ಅವಕ್ಕೆ ಮಹಾಪ್ರಸಾದವೆಂದು ನಾನಿನ್ನು ಮಾತನಾಡದಿದ್ದರೆ ದೂತರನ್ನಟ್ಟಿಯಾನು. ಸಂಜೀವಕನನ್ನು ಆದಷ್ಟು ಬೇಗನೆ ಕೋಪಗೊಳಿಸುವೆನೆಂದು ಅಲ್ಲಿಂದ ಹೊರಟು ಬರುತ್ತ ಹೀಗೆ ಯೋಚಿಸಿತು : ಕಠಿಣ ಹೃದಯನಾದ ಕಂಠೀರವನು ಹೇಳಿದುದನ್ನೇ ಮಾಡಿಸಿದೆ. ಈ ಮೃದುಹೃದಯನಾದ ಸಂಜೀವಕನನ್ನು ಭೇದಿಸುವುದು ಯಾವ ಮಹಾಕಾರ್ಯ ಎಂದು ಕೃತಕವಾದ ವಿಷಾದದಿಂದ ದೀನವದನನಾಗಿ ಬಂದು ಮುಂದೆ ನಿಂತ ದವನಕನನ್ನು ಕಂಡು ಸಂಜೀವಕನು ಮಿತ್ರನನ್ನು ಬರಮಾಡಿಕೊಳ್ಳುವ ರೀತಿಯಲ್ಲಿ ಸ್ವಾಗತಿಸಿದನು. ಬಳಿಕ ನಿನ್ನ ಮುಖ ಖಿನ್ನವಾದ ಕಾರಣವೇನು ಎಂದು ಕೇಳಲು ಧೂರ್ತ ಜಂಬುಕ ಹೀಗೆಂದಿತು : ಶ್ಲೋ॥ ಅರಸರನ್ನು ಓಲೈಸುವವರ ಐಶ್ವರ್ಯ ಪರಾಧೀನವಾದುದು. ಅವರ ಚಿತ್ತ ಎಂದಿಗೂ ಸುಖವನ್ನು ಪಡೆಯದು. ಜೀವಿಸುವುದೂ ನಿಶ್ಚಯವಲ್ಲ. ಅಲ್ಲದೆ, ಶ್ಲೋ॥ ಆಚಾರ್ಯರೂ ಅರಸರೂ ಸಮಾನಶೀಲರು. ಅವರಲ್ಲಿ ಪರಿಚಯ ಅಭ್ಯಾಸಗಳೆಂಬುದಿಲ್ಲ ; ಮಿತ್ರತ್ವವೂ ಇಲ್ಲ. ಕೋಪಗೊಂಡರಾದರೆ ಪ್ರಯತ್ನದಿಂದ ಅನೇಕ ಕಾಲ ಮಾಡಿದ ಶುಶ್ರೂಷೆಯನ್ನೂ ಮೇಘಗಳು ಧೂಳನ್ನು ಕೆಡಿಸುವಂತೆ ನಾಶಗೊಳಿಸುವರು. ಅಲ್ಲದೆ ಶ್ಲೋ॥ ಅತಿಬುದ್ಧಿವಂತರೂ ಶಾಸ್ತ್ರಾಭ್ಯಾಸವನ್ನು ಮಾಡಬೇಕು. ಎಷ್ಟು ಕಾಲ ಸೇವೆಮಾಡಿದರೂ ತನ್ನ

ಶ್ಲೋ॥ ಶಾಸ್ತ್ರಂ ಸುನಿಶ್ಚಿತಧಿಯಾ ಪರಿಚಿಂತನೀಯಂ
ಆರಾಧಿತೋಽಪಿ ನೃಪತಿಃ ಪರಿಶಂಕನೀಯಃ
ಅಂಕೇ ಸ್ಥಿತಾಪಿ ಯುವತಿಃ ಪರಿರಕ್ಷಣೀಯಾ
ಶಾಸ್ತ್ರೇ ನೃಪೇ ಚ ಯುವತೌ ಚ ಕುತೋ ವಶಿತ್ವಂ ॥೮೬॥

ಟೀ॥ ಅತಿಬುದ್ಧಿಯುಳ್ಳವರಾದೊಡಂ ಶಾಸ್ತ್ರಚಿಂತನೆಯಂ ಮಾಡವೇೞ್ಕುಂ. ವಿಸು ಕಾಲವೋಲೈಸಿದೊಡಂ ತನ್ನೊಡೆಯಂಗಂಜಬೇಕು, ತೊಡೆಯ ಮೇಲಿರ್ದೊಡಂ ಸ್ತ್ರೀಯನಾ ರೈದುಕೊಂಡಿರಬೇಕು. ಶಾಸ್ತ್ರದಲ್ಲಿಯುಂ ನೃಪನಲ್ಲಿಯುಂ ಸ್ತ್ರೀಯರಲ್ಲಿಯುಂ ತನಗೆ ವಶವಾಯಿತೆಂದು ಮೆಯ್ಯಱಿದಿರಲಾಗದು.

ಪುಗುವುದು ಕಿಚ್ಚಂ ನುಂಗುವು
ದು ಗರಳಮಂ ಪಾಯ್ವುದಧಿಕಕುಧರಾಗ್ರದಿನು
ರ್ವಿಗೆ ಸೇವಿಸದಿರ್ಪುದಪೇ
ವ್ವಗುಣಾನ್ವಿತನಪ್ಪ ನರಪನಂ ಮಾನಧನಂ ೧೯೮

ಸ್ಥಿತಿಸಾರರಲ್ಲದವನೀ
ಪತಿಗಳನೋಲೈಸಿ ಪಡೆವ ಧನಲಾಭದಿನು
ನ್ನತಗಿರಿಗುಹಾಂತರಾಳ
ಸ್ಥಿತಿಲಾಭಂ ಪೂಜ್ಯಮೆಂಬರಱಿವವರೆಲ್ಲರ್ ೧೯೯

ಇಂತೆಂದು ದವನಕಂ ಭಾ
ಷಾಂತರದೋದುಗಳನೋದೆ ಗೋಪತಿಗೆ ಭಯ
ಭ್ರಾಂತಿ ಪಿರಿದಾಗಿ ಚಿಂತಾ
ಕ್ರಾಂತಮನಂ ದವನಕಂಗೆ ಮತ್ತಿಂತೆಂದಂ ೨೦೦

ನೀನಿಂತು ಪಲವೋದನೋದಿ ಎನ್ನಂ ಪೊಲೆಗಿಡಿಸದೆ ಉಳ್ಳುದನುಳ್ಳಂತೆ ಪೇೞೆನೆ ದವನಕ ನಿಂತೆಂದಂ :

ಒಡೆಯನಿಗೆ ಅಂಜಬೇಕು. ತೊಡೆಯನ್ನೇರಿದ್ದರೂ ಸ್ತ್ರೀಯನ್ನು ವಿಚಾರಿಸಿಕೊಂಡಿರಬೇಕು. ಶಾಸ್ತ್ರದಲ್ಲಿಯೂ ಅರಸನಲ್ಲಿಯೂ ಸ್ತ್ರೀಯಲ್ಲಿಯೂ ತನಗೆ ವಶವಾಯಿತೆಂದು ಮೆಯ್ಮರೆದು ಇರಲಾಗದು. ೧೯೮. ಕಿಚ್ಚನ್ನಾದರೂ ಹೊಗಬಹುದು, ವಿಷವನ್ನಾದರೂ ನುಂಗಬಹುದು, ಎತ್ತರವಾದ ಬೆಟ್ಟದಿಂದ ಭೂಮಿಗೆ ಧುಮುಕಬಹುದು. ೧೯೯. ಗುಣಹೀನನಾದ ಅರಸನನ್ನು ಮಾನಧನನಾದವನು ಸೇವಿಸುವುದು ತರವಲ್ಲ. ಸ್ಥಿತಿಸಾರರಲ್ಲದ ರಾಜರನ್ನು ಓಲೈಸಿ ಪಡೆವ ಧನಲಾಭಕ್ಕಿಂತ ಉನ್ನತವಾದ ಗಿರಿಯ ಗುಹೆಯಲ್ಲಿ ಬದುಕುವುದು ವಿಹಿತ. ೨೦೦. ಈ ರೀತಿ ದವನಕನು ಪರೋಕ್ಷವಾಗಿ ಹೇಳಲು ಆ ವೃಷಭಕ್ಕೆ ಭಯಭ್ರಾಂತಿ ಹೆಚ್ಚಾಗಿ ಚಿಂತಾಕ್ರಾಂತನಾಗಿ ದವನಕನಿಗೆ ಹೀಗೆಂದಿತು: ವ॥ ನೀನು ಈ ರೀತಿ ಹಲವು ರೀತಿಯಲ್ಲಿ ಬಳಸುಮಾತುಗಳಿಂದ ಕಾಡದೆ ಇದ್ದುದನ್ನು ಇದ್ದಂತೆ ಹೇಳು. ಅದಕ್ಕೆ ದವನಕನು ಹೀಗೆಂದನು:

ಅರಸುಗಳವಿಚಾರಪರರ್
ಪುರುಷದ್ವೇಷಿಗಳನಾಪ್ತರಹಿತರಪಾಯಂ
ಪಿರಿದದಱಿಂ ನೃಪರೋಲಗ
ದರಿದಂಜುವೆನೆಂದೊಡಂದು ಪಲ ತೆಱದಿಂದಂ ೨೦೧

ನೀನೆಂದೊಡಂ ನಿನ್ನನಾಂ ನಂಬಿಸಿ ನುಡಿದಾಗ್ರಹದಿಂ ತಂದೆಮ್ಮರಸರಗಾಳ್ಮಾಡಿದೊಡೆ ನೀನುಂ ಭೃತ್ಯಭಾವದಿಂ ನಡೆಯುತ್ತಿರೆ ಪಿಂಗಳಕನಿಂದು ತನ್ನಾಸ್ಥಾನದೊಳಿರ್ದು ನಿರ್ನಿಮಿತ್ತಂ ನಿನಗೆ ಮುನಿದು ಸಂಜೀವಕನಂ ಕೊಂದಲ್ಲದೆ ಮಾಣೆನೆಂದು ತೊಟ್ಟನೆ ಮರ್ಯಾದೆಗೆಟ್ಟು ನುಡಿದಂ ಅದನಾಂ ಕೇಳ್ದುಸಿರದಿರ್ದೆನಪ್ಪೊಡೆ ವಿಶ್ವಾಸಘಾತುಕತ್ವಮುಂ ಮಿತ್ರದ್ರೋಹಮುಮಪ್ಪುದೆಂದಱಿಪಲ್ಬಂದೆನೆಂಬುದುಮಾ ಮಾತಂ ಕೇಳ್ದು ಸಂಜೀವಕಂ ನಿರ್ಜೀವಕನಾಗಿ ಕಿಱಿದು ಬೇಗಮಿರ್ದು ಬಱಿಕಮಿಂತೆಂದಂ :

ಕನಸಿನೊಳಂ ನೆನಸಿನೊಳಂ
ಮನೋವಚಃಕಾಯಕರ್ಮವೆಂಬಿನಿತಱೊಳಂ
ತನಕೆ ಕರಂ ಹಿತನುಂ ಭ
ಕ್ತನುಮಪ್ಪನನೇಕೆ ಕೋಪಿಪಂ ಮೃಗರಾಜಂ ೨೦೨

ಅದಲ್ಲದೆಯುಮಾತಂಗಾನೇತೆಱದೊಳಂ ಪೊಲ್ಲನಲ್ಲೆಂ. ಅಕಾರಣಂ ಮುನಿದಂ. ಎತ್ತಾನುಂ.

ಶ್ಲೋ|| ಕಾರಣೇನೈವ ಜಾಯಂತೇ ಮಿತ್ರಾಣಿ ರಿಪವಸ್ತಥಾ
ರಿಪವೋ ಯೇನ ಜಾಯಂತೇ ಕಾರಣಂ ತತ್ಪರಿತ್ಯಜೇತ್ ||೮೭||

ಟೀ|| ಒಂದು ಕಾರಣದಿಂ ಕೆಳೆಯರುಂ ಹಗೆಗಳಹರು. ಆವುದಾನೊಂದು ಕಾರಣದಿಂ ಪಗೆಗಳಾದರೆಂಬುದನಱಿದು ಆ ಕಾರಣಮುಂ ಬಿಟ್ಟು ಕಳೆವುದು. ಎಂಬೀ ನೀತಿಯುಂಟು.

೨೦೧. ಅರಸರು ಅವಿಚಾರಿಗಳು, ಪುರುಷದ್ವೇಷಿಗಳು. ಆಪ್ತರಿಗೆ ಅಹಿತವನ್ನುಂಟು ಮಾಡುವವರು. ಆದರಿಂದ ಅಪಾಯ ಹಿರಿದಾದುದು. ನೃಪರ ಓಲಗವೆಂದರೆ ಅಂಜುವೆನೆಂದು ನೀನಂದು ಹಲವು ರೀತಿಯಲ್ಲಿ ನನಗೆ ಹೇಳಿದರೂ ವ|| ನಿನ್ನನ್ನು ನಾನು ನಂಬಿಸಿ ಒತ್ತಾಯದಿಂದ ನಮ್ಮ ಅರಸರ ಆಳನ್ನಾಗಿ ಮಾಡಿದೆ. ನೀನು ಭೃತ್ಯಭಾವದಿಂದ ನಡೆದುಕೊಂಡೆ. ಆದರೆ ಪಿಂಗಳಕನು ಇಂದು ನಿರ್ನಿಮಿತ್ತವಾಗಿ ತನ್ನ ಆಸ್ಥಾನದಲ್ಲಿ ನಿನ್ನ ಬಗೆಗೆ ಸಿಟ್ಟಾಗಿ ಸಂಜೀವಕನನ್ನು ಕೊಲ್ಲದೆ ಬಿಡೆನು ಎಂದು ಇದ್ದಕ್ಕಿದ್ದಂತೆ ಮರ್ಯಾದೆಗೆಟ್ಟು ನುಡಿದನು. ಅದನ್ನು ನಾನು ಕೇಳಿ ನಿನಗೆ ತಿಳಿಸದೆ ಇದ್ದಲ್ಲಿ ವಿಶ್ವಾಸಘಾತುಕನೂ ಮಿತ್ರದ್ರೋಹಿಯೂ ಆಗುವೆನೆಂದು ತಿಳಿಸಿ ಹೋಗೋಣವೆಂದು ಬಂದೆ. ಆ ಮಾತನ್ನು ಕೇಳಿ ಸಂಜೀವಕನು ಜೀವಹೋದವನಂತಾಗಿ ಹೀಗೆಂದನು. ೨೦೨. ಕನಸುಮನಸುಗಳಲ್ಲಿ ತನಗೆ ಮನೋವಚಃಕಾಯಕರ್ಮಗಳಲ್ಲಿ ಹಿತನೂ ಭಕ್ತನೂ ಆಗಿರುವವನ ಮೇಲೆ ವಿನಾಕಾರಣ ಮೃಗರಾಜನು ಯಾಕೆ ತಾನೇ ಕೋಪಿಸುವನು? ವ|| ಅಲ್ಲದೆ ಅವನಿಗೆ ನಾನು ಯಾವ ರೀತಿಯಲ್ಲೂ ಕೆಡುಕನ್ನುಂಟು ಮಾಡಿಲ್ಲ. ನಿಷ್ಕಾರಣವಾಗಿ ಮುನಿದನೇ? ಶ್ಲೋ|| ಒಂದಲ್ಲ ಒಂದು ಕಾರಣದಿಂದ ಗೆಳೆಯರೂ ಹಗೆಗಳೆನಿಸುವರು. ಆ ಕಾರಣವನ್ನು ತಿಳಿದುಕೊಂಡು ಹಗೆತನವನ್ನು ಬಿಟ್ಟು ಕಳೆಯಬೇಕು ಎಂಬ ನೀತಿಯುಂಟು. ವ||

ಮೃಗೇಂದ್ರಂಗಮೆನಗಂ ವೈರಕಾರಣಮಾವುದದಂ ನೀನಱಿವೆಯಪ್ಪೊಡೆ ಪೇೞ್. ಆ ಅಂದಮ ನಿಂದು ಮೊದಲ್ ಪತ್ತುವಿಟ್ಟು ನಡೆವೆನೆಂಬುದುಂ ಜಂಬುಕಮದೇಂ ಕಾರಣಮೆಂದಱಿಯೆನೆನೆ ಮತ್ತಂ ಸಂಜೀವಕನಿಂತೆಂದಂ :

ಶ್ಲೋ॥ ನಿಮಿತ್ತಮುದ್ದಿಶ್ಯ ಹಿ ಯಃ ಪ್ರಕುಪ್ಯತೇ
ಧ್ರುವಂ ಸತಸ್ಯಾಪಗಮೇ ಪ್ರಸೀದತಿ
ಅಕಾರಣದ್ವೇಷಿ ಮನೋ ಹಿ ಯಸ್ಯತತ್
ವೈರಂ ಕದಾಸೌ ಪರಿತೋಷಮೇಷ್ಯತಿ ॥೮೮॥

ಟೀ॥ ಆವನೊರ್ವಂ ನಿಮಿತ್ತವನುದ್ದೇಶಿಸಿ ಕೋಪಿಸುವಂ ಆ ನಿಮಿತ್ತಂ ತೀರಲೇಗೆಯ್ದುಂ ಪ್ರಸನ್ನನಹಂ ; ನಿಷ್ಕಾರಣಮಾವನೋರ್ವನ ಚಿತ್ತಂ ದ್ವೇಷಮುಳ್ಳುದಾಗಿಪುದು ಆತನ ವೈರಮೆಂದುಂ ತೀರಲರಿಯದು. ಎಂಬ ನೀತಿಯುಂಟಪ್ಪುದಱಿಂದಕಾರಣಕೋಪನುಂ ಪಾಪರೂಪನಪ್ಪಾ ಕೇಸರಿಗಾಸುರ ಕರ್ಮಂಗೆಯ್ಯಲ್ವೇಡೆಂದು ಧರ್ಮೋಪದೇಶಂಗೆಯ್ದು ಪರಲೋಕಕ್ಕುತ್ತರಸಾಧಕನಾಗಿ ನಡೆವೆಂ, ಎನಗಾತಂ ಮುನಿವುದೆಲ್ಲಮವಿನೀತಸೇವೆಯ ಫಲಮದೆಂತೆನೆ:

ಶ್ಲೋ॥ ಅರಣ್ಯರುದಿತಂ ಕೃತಂ ಶವಶರೀರಮುದ್ವರ್ತಿತಂ
ಸ್ಥಲೇಬ್ಜಮವರೋಪಿತಂ ಬಧಿರಕರ್ಣಜಾಪಃ ಕೃತಃ
ಶ್ವ ಪುಚ್ಛಮವನಾಮಿತಂ ಸತತಮೂಷರೇ ವರ್ಷಿತಂ
ತದಂಧ ಮುಖದರ್ಪಣಂ ಯದಬುಧೋ ಜನಸ್ಸೇವಿತಃ ॥೮೯॥

ಟೀ॥ ಅಡವಿಯೊಳೞುಹವುಂ ಪೆಣಕ್ಕೆ ಲೇಪನಂಗೆಯ್ವುದುಂ ನೆಲದಲ್ಲಿ ತಾವರೆಯಂ ಬಿತ್ತುಹವುಂ ಕಿವುಡಂಗೇಕಾಂತಮಂ ಪೇೞುಹವುಂ ನಾಯಬಾಲಮಂ ಕಾಸಿ ತಿರ್ದುಹವುಂ ಸೌಳುಮಣ್ಣಿನಲ್ಲಿ ಮೞೆ ಬರುಹವುಂ ಕುರುಡಂಗೆ ಕನ್ನಡಿಯಂ ತೋರುಹವುಂ ಮೂರ್ಖನಂ ಬುದ್ಧಿವಂತನೋಲೈಸುಹವುಂ

ಮೃಗೇಂದ್ರನಿಗೂ ನನಗೂ ವೈರಕಾರಣವೇನೆಂದು ನಿನಗೆ ಗೊತ್ತಿದ್ದರೆ ತಿಳಿಸು ಅದನ್ನು ಇಂದಿನಿಂದ ತೊರೆದುಬಿಡುವೆನು. ಆಗ ಜಂಬುಕನು ಆ ಕಾರಣವು ನನಗರಿಯುದು ಎನ್ನಲು ಸಂಜೀವಕನು ಹೀಗೆಂದನು : ಶ್ಲೋ॥ ಯಾವನು ನಿಮಿತ್ತವನ್ನುದ್ದೇಶಿಸಿ ಕೋಪಿಸುವನೋ ಆ ನಿಮಿತ್ತವು ತೀರಿದ ಮೇಲೆ ಹೇಗಾದರೂ ಪ್ರಸನ್ನನಾಗುವನು. ನಿಷ್ಕಾರಣವಾಗಿ ಯಾವನ ಚಿತ್ತವು ದ್ವೇಷವನ್ನು ಹೊಂದುವುದೋ ಅಂಥವನ ವೈರವು ಎಂದೆಂದೂ ತೀರುವುದು ಅಸಾಧ್ಯ ಎಂಬ ನೀತಿ ಇದೆ. ವ॥ ಅದರಿಂದ ಅಕಾರಣಕೋಪನೂ ಪಾಪರೂಪನೂ ಆದ ಆ ಕೇಸರಿಗೆ ಅಸುರಕರ್ಮ ನಿರತನಾಗಬೇಡವೆಂದು ಧರ್ಮೋಪದೇಶಮಾಡಿ ಪರಲೋಕಕ್ಕೆ ಉತ್ತರಸಾಧಕನಾಗಿ ನಡೆಯುವೆನು. ನನ್ನ ಮೇಲೆ ಅವನು ಮುನಿಯುವುದೆಲ್ಲ ಅವಿನೀತ ಸೇವೆಯ ಫಲ. ಶ್ಲೋ॥ ಕಾಡಿನಲ್ಲಿ ಅಳುವುದೂ ಹೆಣಕ್ಕೆ ಲೇಪನ ಮಾಡುವುದೂ ನೆಲದಲ್ಲಿ ತಾವರೆಬೀಜವನ್ನು ಬಿತ್ತುವುದೂ ಕಿವುಡನಿಗೆ ಏಕಾಂತವನ್ನು ಹೇಳುವುದೂ ನಾಯಿಯ ಬಾಲವನ್ನು ಕಾಸಿ ತಿದ್ದುವುದೂ ಸೌಳುಮಣ್ಣಿನಲ್ಲಿ ಮಳೆಯಾಗುವುದೂ ಕುರುಡನಿಗೆ ಕನ್ನಡಿ ತೋರುವುದೂ ಮೂರ್ಖನನ್ನು ಬುದ್ಧಿವಂತನು

ಇವಱಿೞೋಪಾದಿ ಎಂಬ ನೀತಿಕಾಱನ ಮಾತದೇಕೆ ತಪ್ಪುಗುಮಲ್ಲದೆಯುಂ ಆತನುಮಾಂ ಪೇೞ್ದ ಧರ್ಮೋಪದೇಶಮುಮಂ ಬಿಟ್ಟು ತನ್ನ ಮುನ್ನಿನ ದುಷ್ಟಮಂತ್ರಿಗಳ ಮಾತಂ ಕೈಕೊಂಡನದಱಿಂ,

ಶ್ಲೋ॥ ಗುಣಾ ಗುಣಜ್ಞೇಷು ಗುಣಾ ಭವಂತಿ
ತೇ ನಿರ್ಗುಣಂ ಪ್ರಾಪ್ಯ ಭವಂತಿ ದೋಷಾಃ
ಸುಸ್ವಾದುತೋಯಾಃ ಪ್ರವಹಂತಿ ನದ್ಯಃ
ಸಮುದ್ರಮಾಸಾದ್ಯ ಭವಂತ್ಯಪೇಯಾಃ ॥೯೦॥

ಟೀ॥ ಗುಣಂಗಳ್ ಗುಣಂಗಳನಱಿವವರಲ್ಲಿ ಗುಣಂಗಳೆ ಅಪುವು. ದುರ್ಜನನಯ್ದಿದೊಡೆ ದೋಷಂಗಳೆ ಅಹುವು. ಅದು ಪೇಗೆಂದರೆ ಸ್ವಾದೂದಕವಪ್ಪ ನದಿಗಳ್ ಸಮುದ್ರಮಂ ಕೂಡಿದ ಹಾಂಗೆ. ಅದಲ್ಲದೆಯುಂ,

ಶ್ಲೋ॥ ಕೃತಶತಮಸತ್ಸು ನಷ್ಟಂ ಸುಭಾಷಿತಶತಂ ಚ ನಷ್ಟಮಜ್ಞೇಷು
ವಚನಶತಮವಚನಜ್ಞೇ ಬುದ್ಧಿಶತಂ ಚೇತ್ಯಚೇತನೇ ನಷ್ಟಂ ॥೯೧॥

ಟೀ॥ ದುರ್ಜನಂಗೆ ನೂಱು ಲೇಸಂ ಮಾಡಿದೊಡಂ ಕಿಡುವುದು. ಅಱಿಯದವನ ಮುಂದೆ ನೂಱು ಸುಭಾಷಿತವನೋದಿದೊಡಂ ಕೆಡುವುದು. ಕೇಳದವಂಗೆ ನೂಱು ಮಾತಂ ಪೇೞ್ದೊಡಂ ಕೆಡುವುದು. ಮಱವುಳ್ಳವಂಗೆ ನೂಱು ಬುದ್ಧಿಯಂ ಪೇೞ್ದೊಡಂ ಕಿಡುವುದು. ಮತ್ತಂ,

ಶ್ಲೋ॥ ದುರ್ಜನಗಮ್ಯಾ ನಾರ್ಯಃ ಪ್ರಾಯೇಣಾ ಪಾತ್ರಭೃದ್ಭವತಿ ರಾಜಾ
ಕೃಪಣಾನುಸಾರಿ ವಿತ್ತಂ ದೇವೋ ಗಿರ್ಯುದಧಿ ವರ್ಷಿತಶ್ಚಕ್ರಃ ॥೯೨॥

ಟೀ॥ ಸ್ತ್ರೀಯರ್ ನೀಚರಿಂದೆ ಭೋಗಿಸತಕ್ಕವರ್. ಅರಸುಗಳ್ ಯೋಗ್ಯರಲ್ಲದವರನೆ ಲೇಸಾಗಿ ಸಲಹುವರ್. ಅತಿಲೋಭಿಗಳ್ಗೆ ವಸ್ತು ಸೇರುವುದು. ಇಂದ್ರಂ ಗಿರಿಸಮುದ್ರಂಗಳಲ್ಲಿಯೆ ಮೞೆಯಂ ಕಱೆವಂ. ಮತ್ತಂ

ಶ್ಲೋ॥ ಸ್ನಿಗ್ಧೈರೇವಾಪ್ಯುಪಕೃತಮಪಿ ದ್ವೇಷ್ಯತಾಮೇತಿ ಕಿಂಚಿತ್
ಸ್ನಿಗ್ಧಾದನ್ಯೈರಪಕೃತಮಪಿ ಪ್ರೀತಿ ಮೇವಾತನೋತಿ
ದುರ್ಗ್ರಾಹ್ಯತ್ವಂ ನೃಪತಿ ವಚಸಾಮೇಕ ಭಾವಾಶ್ರಯಾಣಾಂ
ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ ॥೯೩॥

ಓಲೈಸುವುದೂ ಇವರ ರೀತಿ ಎಂಬ ನೀತಿಕಾರನ ಮಾತೇಕೆ ತಪ್ಪಾಗುವುದು? ವ॥ ಆತನೂ ನಾನು ಹೇಳಿದ ಧರ್ಮೋಪದೇಶವನ್ನು ಬಿಟ್ಟು ತನ್ನ ಮೊದಲಿನ ದುಷ್ಟಮಂತ್ರಿಗಳ ಮಾತನ್ನು ಕೇಳಿದನು. ಆದರಿಂದ, ಶ್ಲೋ॥ ಗುಣಗಳನ್ನು ತಿಳಿದುಕೊಳ್ಳುವವರಲ್ಲಿ ಗುಣಗಳು ಗುಣಗಳೇ ಎನಿಸುವುವು. ದುರ್ಜನನನ್ನು ಸೇರಿದರೆ ಸಿಹಿನೀರಿನ ನದಿಗಳು ಅಪೇಯವಾದ ಸಮುದ್ರವನ್ನು ಸೇರಿದ ಹಾಗೆ ದೋಷಗಳೇ ಆಗುವುವು. ಶ್ಲೋ॥ ದುರ್ಜನನಾದವನಿಗೆ ನೂರು ಒಳ್ಳೆಯದನ್ನು ಮಾಡಿದರೂ ಕೆಡುವುದು. ಅರಿಯದವನ ಮುಂದೆ ನೂರು ಸುಭಾಷಿತವನ್ನು ಓದಿದರೂ ಕೆಡುವುದು. ಕೇಳದವನಿಗೆ ನೂರು ಮಾತನ್ನು ಹೇಳಿದರೂ ಕೆಡುವುದು. ಮರೆಯುವವನಿಗೆ ನೂರು ಬುದ್ಧಿಯನ್ನು ಹೇಳಿದರೂ ಕೆಡುವುದು. ಶ್ಲೋ॥ ಸ್ತ್ರೀಯರು ನೀಚರಿಂದಲೇ ಭೋಗಿಸತಕ್ಕವರು. ಅರಸರು ಯೋಗ್ಯರಲ್ಲದವರನ್ನೇ ಚೆನ್ನಾಗಿ ಸಲಹುವರು. ಐಶ್ವರ್ಯವು ಅತಿಲೋಭಿಗಳನ್ನೇ ಸೇರುವುದು. ಇಂದ್ರನು ಗಿರಿಸಮುದ್ರಗಳಲ್ಲೇ

ಟೀ॥ ಸ್ನೇಹವುಳ್ಳವರುಪಕಾರಮಂ ಮಾಡಿದೊಡಂ ಕೋಪವಪ್ಪುದು. ದುರ್ಜನರಪಕಾರಮಂ ಮಾಡಿದೊಡದು ಸಂತೋಷವಾಗಿಪ್ಪುದು. ಒಂದೇ ಸ್ವಭಾವವಪ್ಪ ನೃಪವಚನಂಗಳಾರ್ಗಂ ಸ್ವೀಕರಿಸಲ್ಬಾರದುವು. ಸೇವಾಧರ್ಮಮೆಂಬುದು ಅತ್ಯಂತಂ ನಿರ್ವಹಿಸಲ್ಬಾರದು. ತಪಸ್ವಿಗಳ್ಗಾದೊಡಂ ಸಾಧ್ಯಮಲ್ಲ.

ಶ್ಲೋ॥ ಮೌನಾನ್ಮೂಕಃ ಪ್ರವಚನಪಟುರ್ವಾಚಕೋ ಜಲ್ಪಕೋ ವಾ
ಪಾರ್ಶ್ವೇ ಧೃಷ್ಟಃ ಕಿಮಪರಥವಾ ದೂರತೋಽಪ್ಯಪ್ರಗಲ್ಭಃ
ಕ್ಷಾಂತ್ಯಾಭೀರುರ್ಯದಿ ನ ಸಹತೇ ಪ್ರಾಯಶೋ ನಾಭಿಜಾತಃ
ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ ॥೯೪॥

ಟೀ॥ ಉಸಿಕನಿರ್ದೊಡೆ ಮೂಗುವಟ್ಟನೆಂದುಂ ಮಾತಜೆದೊಡೆ ಗಟಿಹನೆಂದುಂ ಪಕ್ಕದೊಳಿರೆ ಧೃಷ್ಟನೆಂದುಂ ದೂರದೊಳಿರೆ ಜಾಣನಲ್ಲನೆಂದುಂ ಸೈರಿಸಿದೊಡೆ ಪಂದೆಯೆಂದುಂ ಸೈರಣೆಯಿಲ್ಲದೊಡೆ ಕೀಳನೆಂದುಂ ಪಟಿಗೆಡೆಯಕ್ಕುಂ. ಸೇವಾಧರ್ಮಮೆನ್ನರ್ಗಂ ಕಷ್ಟಂ. ಕಿತ್ತಡಿಗಳ್ಗಪ್ಪೊಡಂ ಮಾಡಲ್ಬಾರದು.

ಶ್ಲೋ॥ ಪರಸೇವಾ ಮನುಷ್ಯಾಣಾಮಸಿಧಾರಾವಲೇಹನಂ
ಪಂಚಾನನ ಪರಿಷ್ವಂಗೋ ವ್ಯಾಳೀವದನಚುಂಬನಂ ॥೯೫॥

ಟೀ॥ ಪರಸೇವೆಯೆಂಬುದು ಬಾಳ ಬಾಯ್ವಾರೆಯಂ ನೆಕ್ಕಿದಂತೆಯುಂ ಸಿಂಗಮನಾಲಿಂಗಿಸಿದಂತೆಯುಂ ಪಾವಿನ ನಂಜುವಾಯನಂಜದೆ ಚುಂಬಿಸಿದಂತೆಯುಮಿರ್ಕುಂ. ಇಂತಪ್ಪ ಸೇವಾಧರ್ಮಮನಾಂ ಮುನ್ನಱಿವಾತನಾಗಿಯುಮೇನಾನುಮೊಂದು ತೆಱದಿಂ ಕೀೞ್ವೆಸಂಗೆಯ್ದನಕ್ಕು ಪಿಂಗಳಕನೇಕೆ ಮುನಿವಂ. ಇದನಾತನಂ ಬೆಸಗೊಂಡೀಯೊರ್ಮೆಗೆ ಕ್ಷಮಿಸುವಂತು ಮಾಳ್ಪೆಂ. ಅದಲ್ಲದಾಗಳ್ ಅರಸುಗಳವಿಚಾರದಿಂದಾರಾನುಮಂ ಕೊಲಲುಂ ಕಿಡಿಸಲುಮೆಂದಿರ್ದರಲ್ಲದೆ ಮಂತ್ರಿಗಳಿಚ್ಚೆಯಂ ಪ್ರತಿಪಾಲಿಸರದೆಂತೆನೆ:

ಶ್ಲೋ॥ ವೈದ್ಯೋ ವಿದ್ವಜ್ಜನೋಽಮಾತ್ಯೋ ಯಸ್ಯ ರಾಜ್ಞಃ ಪ್ರಿಯಂ ವದೇತ್
ಆರೋಗ್ಯ ಧರ್ಮಕೋಶೇಭ್ಯಃ ಕ್ಷಿಪ್ರಂ ಸ ಪರಿಹೀಯತೇ ॥೯೬॥

ಮಳೆಯನ್ನು ಸುರಿಯುವನು. ಶ್ಲೋ॥ ಸ್ನೇಹವುಳ್ಳವರು ಉಪಕಾರವನ್ನು ಮಾಡಿದರೂ ಕೋಪವುಂಟಾಗುವುದು. ದುರ್ಜನರು ಅಪಕಾರವನ್ನು ಮಾಡಿದರೂ ಅದು ಸಂತೋಷವನ್ನುಂಟುಮಾಡುವುದು. ಒಂದೇ ಸ್ವಭಾವದ ನೃಪವಚನವನ್ನು ಯಾರೂ ಸ್ವೀಕರಿಸಬಾರದು; ಸೇವಾಧರ್ಮವನ್ನು ಎಂದೂ ನಿರ್ವಹಿಸಬಾರದು; ಅದು ತಪಸ್ವಿಗಳಿಂದಲೂ ಸಾಧ್ಯವಿಲ್ಲ. ಶ್ಲೋ॥ ಮಾತನಾಡದಿದ್ದರೆ ಮೂಕನೆನ್ನುವರು. ಪ್ರವಚನಪಟುವಾದರೆ ಹರಟೆಕೋರನೆನ್ನುವರು, ಹತ್ತಿರ ಹೋದರೆ ಧೃಷ್ಟನೆನ್ನುವರು, ದೂರವಾದರೆ ಹೆಡ್ಡನೆನ್ನುವರು. ಸಮಾಧಾನಿಯಾಗಿದ್ದರೆ ಹೆದರಿಕೆಯ ಪುಕ್ಕನೆನ್ನುವರು. ಸಹಿಸದಿದ್ದರೆ ಕೀಳನೆಂದು ದೂರುವರು. ಅರಸರ ಸೇವೆಯನ್ನು ಮಾಡುವುದು ತಪಸ್ವಿಗಳಿಂದಲೂ ಸಾಧ್ಯವಿಲ್ಲ. ಶ್ಲೋ॥ ಪರಸೇವೆಯೆಂಬುದು ಕತ್ತಿಯ ಅಲಗನ್ನು ನೆಕ್ಕಿದಂತೆಯೂ ಸಿಂಹವನ್ನು ಆಲಿಂಗಿಸಿದಂತೆಯೂ ಸರ್ಪಿಣಿಯನ್ನು ಚುಂಬಿಸಿದಂತೆಯೂ ಇರುತ್ತದೆ. ವ॥ ಇಂತಹ ಸೇವಾಧರ್ಮವನ್ನು ನಾನು ತಿಳಿದೂ ತಿಳಿದೂ ಒಂದಲ್ಲ ಒಂದು ರೀತಿಯಿಂದ ನೀಚವಾದುದನ್ನೆಸಗಿದೆ, ಇಲ್ಲದಿದ್ದರೆ ಪಿಂಗಳಕನೇಕೆ ನನ್ನ ಮೇಲೆ ಮುನಿವನು? ಇದನ್ನು ಅವನೊಡನೆ ಕೇಳಿ ಇದೊಂದು ಬಾರಿ ಕ್ಷಮಿಸುವಂತೆ ಮಾಡುವೆ. ಅರಸರು

ಟೀ|| ವೈದ್ಯನುಂ ವಿದ್ವಾಂಸನುಂ ಮಂತ್ರಿಯುಂ ಅರಸಿನಿಚ್ಛೆಯನೆ ನುಡಿದಹರ್. ಆ ನೃಪರಾರೋಗ್ಯಧರ್ಮಕೋಶಂಗಳ ದೆಸೆಯಿಂ ಬೇಗಂ ಹೀಯಮಾನನಹನು. ಎಂಬುದು ನೀತಿ ಶಾಸ್ತ್ರಮುಂಟು. ನೀನಪ್ಪೊಡೆ ಪಿಂಗಳಕಂಗೆ ಮಂತ್ರಿಯಪ್ಪೆ, ಈಗಳಾತನೆನ್ನನಳಿದು ತನ್ನ ಜಸಮುಮಂ ಧರ್ಮಮುಮನಳಿದುಕೊಳಲ್ಬಗೆದಂ. ಆನುಂ ಮುನ್ನಮೆ ನಿನ್ನಂ ನಂಬಿ ಬಂದಿರ್ದೆನದರಿಂ,

ಶ್ಲೋ|| ಕಾರ್ಯೇಷು ಯದಾಸನ್ನಂ ವಿನಿಪಾತೇ ಯತ್ಪ್ರದಾನಂ ಚ
ಶಕ್ಯಂ ಸುಖಾನುಬಂಧಂ ವಿಪುಳಫಲಂ ಯಚ್ಚ ಧರ್ಮಿಷ್ಠಂ ||೯೭||

ಟೀ|| ಕಾರ್ಯಾಸನ್ನನಾಗಿರ್ದಲ್ಲಿ ಆನತನಾಗಿರ್ದಲ್ಲಿ ಸುಖಾನುಬಂಧದಲ್ಲಿ ಆವುದಾನೊಂದು ಧರ್ಮಾರ್ಥವಾಗಿ ಕೊಟ್ಟುದು ವಿಪುಳಫಲವಾಗಿಪುದು, ಎಂಬ ನೀತಿಯುಂಟಪ್ಪುದರಿಂದಿಲ್ಲಿ ಯಾಸನ್ನವಿನಿಪಾತಮಾಗಲಿರ್ದ ಕಾರ್ಯದ ಸಮಾವಸ್ಥೆಯಂ ನೀನರಿಯದಿರ್ದೆಯದರಿಂದೀಯವಸರದೊಳ್ ಪೊಕ್ಕು ನುಡಿದು ನಿರ್ಭಯಮಪ್ಪಂತು ಮಾಡಲ್ವೇಳ್ಕುಮೆನೆ ದವನಕನಿಂತೆಂದಂ : ನೀಂ ಪೇಳ್ದಂತೆ ಮೃಗಾಧಿರಾಜನ ಮನೆಯೊಳಗೆ ಮಂತ್ರಿಯಪ್ಪೆನಾಗಿಯುಂ,

ಶ್ಲೋ|| ಮೃದುನಾ ಸಲಿಲೇನ ಭೇದ್ಯಮಾನಾನ್ಯವಕೃಷ್ಯನ್ತಿ ಗಿರೇರಪಿ ಸ್ಥಳಾನಿ
ಉಪಜಾಪಕ ಕರ್ಣಜಾಪಕೌಘ್ಯೈಃ ಕಿಮು ಚೇತಾಂಸಿ ಮೃದೂನಿ ಮಾನವಾನಾಂ
||೯೮||

ಟೀ|| ಮೃದುವಪ್ಪ ಮನುಷ್ಯರ ಚಿತ್ತಂಗಳ್ ಕೊಂಡೆಯರಿಂ ಕಿಡುವುವು. ಅದೆಹಗೆಂದೊಡೆ ಮೃದುವಪ್ಪ ಉದಕದಿಂ ಭೇದಿಸಲ್ಪಟ್ಟ ಗಿರಿತಟಂಗಳೊಳಗಾಗಿ ಬೀಳ್ವುವಗೆ ಎಂಬ ನೀತಿಗಳೊಳವು. ಆತಂ ಕರ್ಣೇಜಪರ ಮಾತಂ ಕೇಳ್ದು ಕೈಕೊಂಡನೆಂಬುದಂ ಸಂಜೀವಕಂ ಭಾವಿಸಿ ಬಟಿಕ್ಕಂತೆಂದಂ:

ಅವಿವೇಕದಿಂದ ಯಾರನ್ನಾದರೂ ಕೊಲ್ಲಬೇಕೆಂದಿರುವರಲ್ಲದೆ ಮಂತ್ರಿಗಳ ಹಿತವಚನವನ್ನು ಪರಿಪಾಲಿಸರು. ಶ್ಲೋ|| ವೈದ್ಯನೂ ವಿದ್ವಜ್ಜನರೂ ಮಂತ್ರಿಯೂ ಅರಸನ ಇಚ್ಛೆಗನುಸಾರವಾಗಿ ನುಡಿದರೆ ಆ ರಾಜನ ಆರೋಗ್ಯ ಧರ್ಮ ಕೋಶಗಳು ಬೇಗನೆ ನಾಶಹೊಂದುವುವು. ವ|| ನೀನು ಪಿಂಗಳಕನ ಮಂತ್ರಿಯಾಗಿರುವೆ. ಈಗ ಆತನು ನನ್ನನ್ನು ಕೊಂದು ತನ್ನ ಯಶಸ್ಸನ್ನೂ ಧರ್ಮವನ್ನೂ ನಾಶಪಡಿಸಿಕೊಳ್ಳುವನು. ನಾನೂ ನಿನ್ನನ್ನೇ ಮೊದಲು ನಂಬಿ ಬಂದವನು. ಶ್ಲೋ|| ಕಾರ್ಯಾಸನ್ನನಾಗಿದ್ದಲ್ಲಿ ಆನತನಾಗಿದ್ದಲ್ಲಿ ಸುಖಾನುಬಂಧದಲ್ಲಿ ಏನಾದರೊಂದನ್ನು ಧರ್ಮಾರ್ಥವಾಗಿ ಕೊಟ್ಟುದು ವಿಪುಲಫಲವನ್ನುಂಟುಮಾಡುವುದು. ವ|| ಅದರಿಂದ ಇಲ್ಲಿ ಆಸನ್ನ ವಿನಿಪಾತವಾಗಲಿರುವ ಕಾರ್ಯದ ಸಮಾವಸ್ಥೆಯನ್ನು ನೀನು ಅರಿಯದಿರುವೆ. ಅದರಿಂದ ಈ ಸಂದರ್ಭದಲ್ಲಿ ಹತ್ತಿರ ಹೋಗಿ ಹೇಳಿಕೊಂಡು ನಿರ್ಭಯವಾಗುವಂತೆ ಮಾಡಬೇಕು. ಅದಕ್ಕೆ ದವನಕನು ಹೀಗೆಂದನು : ಶ್ಲೋ|| ನೀನು ಹೇಳಿದಂತೆ ಮೃಗಾಧಿರಾಜನ ಮನೆಯಲ್ಲಿ ನಾನೇ ಮಂತ್ರಿಯಾಗಿರುವುದರಿಂದ, ಶ್ಲೋ|| ಮೃದುವಾದ ಮನುಷ್ಯರ ಚಿತ್ತಗಳು ಚಾಡಿಕೋರರಿಂದ ಕೆಡುವುವು. ಹೇಗೆಂದರೆ, ಮೃದುವಾದ ಉದಕದಿಂದ ಭೇದಿತವಾದ ಗಿರಿತಟಗಳು ಒಳಗಾಗಿ ಬೀಳುತ್ತವೆ. ಆತನು ಚಾಡಿಕೋರರ ಮಾತನ್ನು ಕೇಳಿ ಕೈಕೊಂಡನೆಂಬುದನ್ನು ಸಂಜೀವಕನು ಭಾವಿಸಿ ಹೀಗೆಂದನು.

ಶ್ಲೋ॥ ನರಪತಿ ಹಿತಕರ್ತಾ ದ್ವೇಷ್ಯತಾಂ ಯಾತಿ ಲೋಕೋ
ಜನಪದ ಹಿತಕರ್ತಾ ತ್ಯಜ್ಯತೇ ಭೂಮಿಪಾಲ್ಯೈಃ
ಇತಿ ಮಹತಿ ವಿರೋಧೇ ದೃಶ್ಯಮಾನೋ ಸಮಾನೇ
ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥೯೯॥

ಟೀ॥ ಅರಸಿಂಗೆ ಹಿತವ ಮಾಡುವಾತಂ ಪ್ರಜೆಗೆ ಹಗೆಯಹನು ; ಪ್ರಜೆಗೆ ಹಿತವ ಮಾಡುವಾತನನರಸುಗಳ್ ಕೈಹಿಡಿಯರು ; ಇಂತು ಮಹಂಥ ವಿರೋಧಂ ಸಮನಾಗಿ ಕಾಣಲ್ಪಡುತ್ತುಂ ಇರಲು ನೃಪಂಗಂ ಪ್ರಜೆಗಂ ಹಿತವಹಂತು ಮಾಡುವ ಮಂತ್ರಿ ದುರ್ಲಭನು ಎಂಬ ನಯಶಾಸ್ತ್ರಮೇಕೆ ತಪ್ಪುಗುಂ, ಮುನ್ನಂ ಪಟಿಯರುಮನಾಪ್ತರುಮಂ ಪೊರಗಿಕ್ಕಿ ಪತಿಗೆ ಹಿತೋಪದೇಶಂಗೆಯ್ಯರದೆಂತೆನೆ : ಉಷ್ಟ್ರಂ ಕಾಕಾದಯೋ ಯಥಾ ಎಂಬ ಕಥೆಯಂತಕ್ಕುಮೆನೆ ದವನಕನದೆಂತೆನೆ ಸಂಜೀವಕಂ ಪೇಳ್ಗುಂ

೧೬. ಒಟ್ಟೆಯುಂ ಕಾಗೆಯುಂ

ದಾರುಣ ಧಾರಿಣೀಧರ ಗುಹಾವಳಿಯಿಂ ಮದಾವಾರಣಂಗಳಿಂ
ಕ್ರೂರಮೃಗಂಗಳಿಂ ಶಬರಸಂಕುಲದಿಂದತಿರೌದ್ರಮಪ್ಪ ಕಾಂ
ತಾರದೊಳಿರ್ಪುದೊಂದು ಹರಶೌರ್ಯಗುಣಪ್ರಕರಂ ನಖಾಗ್ರ ನಿ
ರ್ದಾರಿತ ವನ್ಯಸಾಮಜ ಸಮಾಜಕಟಂ ಪೆಸರಿಂ ಮದೋತ್ಕಟಂ ೨೦೩

ಆ ಮೃಗಾಧಿರಾಜಂ ತನಗೆ ಕಾಗೆಯುಂ ಸೃಗಾಲನುಂ ಶಾರ್ದೂಲನುಂ ಅನುಚರರಾಗಿ ಕಾಂತಾರಾಂತರಾಳದೊಳ್ ತೊಳಲುತ್ತಮಿರೆ ನಡೆವ ಬೀದಿನೊಳೊಂದೊಟ್ಟೆ ಪೊಲಂಬುಗೆಟ್ಟು ಬಂದಾಡುತಿರ್ದುದನತಿದೂರದೊಳ್ ಕಂಡದೊಂದಪೂರ್ವಮಪ್ಪ ಮಗ್ಗಮದೆತ್ತಣಿಂ ಬಂದುದಿನ್ನೆತ್ತಲ್ ಪೋದಪ್ಪುದಾವ ಜಾತಿ ಪೆಸರೇನೆಂಬುದಂ ಬೆಸಗೊಂಡು ಬಾಯೆಂದು ವಾಯಸಮಂ ಕಳುಪಲ್

ಶ್ಲೋ॥ ಅರಸನಿಗೆ ಹಿತವನ್ನು ಮಾಡುವವನು ಪ್ರಜೆಗೆ ಹಗೆಯಾಗುವನು. ಪ್ರಜೆಗೆ ಹಿತಮಾಡುವವನನ್ನು ಅರಸರು ಕೈಹಿಡಿಯರು. ಈ ರೀತಿಯಿರುವ ವಿರೋಧವು ಸಮಾನವಾಗಿ ಕಂಡಿರಲು ನೃಪನಿಗೂ ಪ್ರಜೆಗೂ ಹಿತವಾಗುವಂತೆ ಮಾಡುವ ಮಂತ್ರಿ ದುರ್ಲಭ ಎಂಬ ನೀತಿಶಾಸ್ತ್ರವೇಕೆ ತಪ್ಪುವುದು? ವ॥ ಮೊದಲಿನ ಹಳೆಯರನ್ನೂ ಆಪ್ತರನ್ನೂ ಹೊರಗೆ ಹಾಕಿ ಪತಿಗೆ ಹಿತೋಪದೇಶವನ್ನು ಮಾಡರು. ಅದು ಹೇಗೆಂದರೆ ಒಂಟೆ ಕಾಗೆಗಳ ಕಥೆಯಂತಾಗುವುದು. ದವನಕನು ಅದೇನೆಂದು ಕೇಳಲು ಸಂಜೀವಕನು ಹೇಳಿದನು : ೨೦೩. ಭಯಂಕರವಾದ ಪರ್ವತ ಗುಹಾವಳಿಯಿಂದಲೂ ಮದ್ದಾನೆಗಳಿಂದಲೂ ಕ್ರೂರ ಪ್ರಾಣಿಗಳಿಂದಲೂ ಬೇಡರ ಗುಂಪಿನಿಂದಲೂ ಅತಿರೌದ್ರವಾದ ಒಂದು ಕಾಡಿನಲ್ಲಿ ಶೌರ್ಯಗುಣಗಳಿಂದಲೂ ಕಾಡಿನ ಮದ್ದಾನೆಗಳ ಹಿಂಡನ್ನು ಸೀಳಿದ ಉಗುರುಗಳಿಂದಲೂ ಕೂಡಿದ ಮದೋತ್ಕಟ ಎಂಬ ಹೆಸರಿನ ಒಂದು ಸಿಂಹವಿತ್ತು. ವ॥ ಆ ಮೃಗಾಧಿರಾಜನು ಕಾಗೆಯನ್ನೂ ನರಿಯನ್ನೂ ಶಾರ್ದೂಲವನ್ನೂ ತನ್ನ ಭೃತ್ಯರನ್ನಾಗಿ ಹೊಂದಿ ಕಾಂತಾರಾಂತರದಲ್ಲಿ ತೊಳಲಾಡುತ್ತಿತ್ತು. ಅಲ್ಲಿಗೆ ಒಂದು ಒಂಟೆ ದಾರಿತಪ್ಪಿ ಬಂದು ಆಡುತ್ತಿರುವುದನ್ನು ಅತಿದೂರದಿಂದ ಕಂಡು ಆ ಅಪೂರ್ವವಾದ ಮೃಗ ಎಲ್ಲಿಂದ ಬಂತು, ಎಲ್ಲಿಗೆ ಹೋಗುವುದು, ಯಾವ ಜಾತಿಯದು, ಹೆಸರೇನು ಎಂಬುದನ್ನು ವಿಚಾರಿಸಿಕೊಂಡು

ಅದು ವಾಯುವೇಗದಿಂ ಪರಿದೊಟ್ಟೆಯನೆಯ್ದಿವಂದದಱ ವೃತ್ತಾಂತಮನೆಲ್ಲಮನಱೆದಾಗಳೆ ಮಗುಳ್ದು ಬಂದಿಂತೆಂದುದು :

ಮದಗಜ ಭಿದುವಿದಲನಕೋ
ವಿದ ಜಾತಿಯೊಳೊಟ್ಟೆ ನಾಮದಿಂ ಕಥಕನೆನಿ
ಪ್ಪುದು ನಿನ್ನ ದೆಸೆಯಿನಭಯ
ಪ್ರದಾನಮಂ ಪಡೆದು ಭೃತ್ಯನಾಗಲ್ಬಂದಂ ೨೦೪

ಎಂಬುದುಮಾ ಮೃಗಾಧಿರಾಜನಂಜದಿರೆಂದು ತಂದು ಕಾಣಿಸೆನಲೊಡಂ ವಾಯಸಮಾಗಳೆ ಪೋಗಿಯೊಟ್ಟೆಯನಂಜದಿರೆಂದು ನಂಬೆ ನುಡಿದೊಡಂಬಡಿಸಿಯೊಡಂಗೊಂಡು ಬಂದು ಮುಂದಿಟ್ಟು ಕಾಣಿಸುವುದುಮದಱ ವಿಕಟರೂಪಮಂ ಕಂಡು ಮದೋತ್ಕಟನುತ್ಕಟಹರ್ಷನಾಗಿ ನಮಗೊಂದು ವಿನೋದಪಾತ್ರಮಿದೊಂದಾದುದೆಂದು ಸಂತೋಷಂಬಟ್ಟೊಂದು ದೆವಸಮವಿರಳಮದಾಂಬು ಧಾರಾಮಲಿನಗಂಡಮಂಡಲನಪ್ಪುದೊಂದು ಶುಂಡಾಲನ ಮೇಲೆ ಪಾಯ್ದು ತದೀಯ ದಂತಾಶನಿಘಾತ ವ್ರಣವೇದನಾ ವಿಹ್ವಲೀಭೂತಚೇತನನಾಗಿ ಮಹಾಗುಹಾಂತರಮಂ ಪೊಕ್ಕು ವೇದನಾ ಪರವಶತೆಯಿಂ ಪಲವುದಿನಮಾಹಾರಕ್ಕೆ ಪೊಱಮಡಲಾಱದೆ ಬಾಡಿದ ಮೊಗಮುಂ ಬಡವಾದೊಡಲುಂಬೆರಸು ಗುಹೆಯ ಬಾಗಿಲೊಳ್ ಬಂದಿರ್ದ ತನ್ನನುಚರರಂ ಕಂಡು, ಮದೋತ್ಕಟನಿಂತೆಂದಂ :

ಆನುಂ ಪೊಱಮಡಲಾಱೆಂ
ನೂನಂ ಮನಮಿಕ್ಕಿ ಪಸಿದು ಸಾಯದ ನೀಮು
ತ್ತಾನುಂ ಪಡೆವೊಡೆ ಪಿಶಿತಮ
ನೇನಾನುಮನಱಸಿ ತಿನ್ನಿಮೆನಗಂ ತನ್ನಿಂ ೨೦೫

ಬಾ ಎಂದು ಕಾಗೆಯನ್ನು ಕಳುಹಿಸಿತು. ಆ ಕಾಗೆ ವಾಯುವೇಗದಿಂದ ಹಾರಿ ಒಂಟೆಯ ಬಳಿಗೆ ಬಂದು ಅದರ ವೃತ್ತಾಂತವನ್ನೆಲ್ಲ ತಿಳಿದುಕೊಂಡು ಹಿಂದಿರುಗಿ ಬಂದು ಹೀಗೆಂದಿತು: ೨೦೪. ಮದಗಜಭಿದುವಿದಲನಕೋವಿದ ! ಆ ಮೃಗವು ಒಂಟೆಯ ಜಾತಿಗೆ ಸೇರಿದುದು. ಅದರ ಹೆಸರು ಕಥಕ. ನಿನ್ನಿಂದ ಅಭಯಪ್ರದಾನವನ್ನು ಪಡೆದು ನಿನ್ನ ಭೃತ್ಯನಾಗಿರಬೇಕೆಂದು ಬಂದಿದೆ. ವ॥ ಅದಕ್ಕೆ ಸಿಂಹವು ಅಂಜದಿರೆಂದು ಒಂಟೆಗೆ ತಿಳಿಸಿ ಅದನ್ನು ತಂದು ನನ್ನ ಭೇಟಿಮಾಡಿಸು ಎಂದಿತು. ಕಾಗೆ ಕೂಡಲೇ ಹೋಗಿ ಹೆದರಬೇಡವೆಂದು ಹೇಳಿ ಒಂಟೆಗೆ ನಂಬಿಕೆ ಬರುವಂತೆ ತಿಳಿಸಿ ಸಿಂಹದ ಬಳಿಗೆ ಕರೆದುತಂದಿತು. ಒಂಟೆಯ ವಿಕಟರೂಪವನ್ನು ಕಂಡು ಮದೋತ್ಕಟನು ಉತ್ಕಟಹರ್ಷನಾಗಿ ನಮಗೊಂದು ವಿನೋದಪಾತ್ರಕ್ಕೆ ಇವನು ಸಿಕ್ಕಿದನು ಎಂದು ಸಂತೋಷಪಟ್ಟಿತು. ಒಂದು ದಿನ ಆ ಸಿಂಹ ಒಂದು ಮದಭರಿತವಾದ ಆನೆಯ ಮೇಲೆ ಬಿದ್ದು ಅದರ ದಾಡೆಯ ಹೊಡೆತದಿಂದ ಗಾಯಗೊಂಡು ತನ್ನ ಗುಹೆಯನ್ನು ಹೊಕ್ಕು ವೇದನಾಪರವಶತೆಯಿಂದ ಹಲವು ದಿನಗಳಿಂದ ಆಹಾರಕ್ಕಾಗಿ ಹೊರಹೊರಡಲಿಲ್ಲ. ಬಾಡಿದ ಮೊಗದಿಂದಲೂ ಬಡವಾದ ಒಡಲಿನಿಂದಲೂ ಕೂಡಿದ್ದ ಆ ಸಿಂಹ ಗುಹೆಯ ಬಾಗಿಲಿನಲ್ಲಿದ್ದ ತನ್ನ ಅನುಚರರೊಡನೆ ಹೀಗೆಂದಿತು : ೨೦೫. ನಾನೂ ಹೊರಹೊರಡಲಾರೆ; ನೀವೂ ನನ್ನ ಚಿಂತೆಯಿಂದ ಹಸಿದು ಸಾಯದೆ ಎಲ್ಲಿಯಾದರೂ ಅರಸಿ ಮಾಂಸವನ್ನು

ಎಂದು ಪೇೞ್ವುದುಮವು ತಮ್ಮೊಳೋರೊರ್ವರ ಮೊಗಮಂ ನೋಡಿ ಬೞಿಕ್ಕೆ ನರಿಯಿಂತೆಂದುದು: ಆನುಂ ಕಾಗೆಯುಂ ಪೆಱರಾರಾನುಂ ಕೊಂದು ತಿಂದೀಡಾಡಿದ ಪಿಶಿತಮನಾಯ್ದುಱಿಸಿ ತಿಂದು ಜೀವಿಸುವೆವೆಮ್ಮೊಡನಾಡಿರ್ದ ಕಾರಣದಿಂದೀ ಪುಲಿಯುಮೊಂದಿಲಿಯನಪ್ಪೊಡಂ ಕೊಲಲಣ್ಮದಿಂತಪ್ಪ ಮೃಗಲಿಗಳೆನೆ ಮದೋತ್ಕಟನಿಂತೆಂದಂ :

ಶ್ಲೋ॥ ಯಾದೃಶೀ ಜಾಯತೇ ಬುದ್ಧಿಃ ವ್ಯವಸಾಯಶ್ಚ ತಾದೃಶಃ
ಸಹಾಯಸ್ತಾದೃಶೋ ಜ್ಞೇಯೋ ಯಾದೃಶೀ ಭವಿತವ್ಯತಾ ॥೧೦೧॥

ಟೀ॥ ಬುದ್ಧಿ ಆವ ಪ್ರಕಾರವಾಗಿಹುದು ಹಾಂಗೆಯೆ ವ್ಯವಸಾಯಮಿಹುದು. ಭಾಗ್ಯವಾವ ಪ್ರಕಾರವಾದಹುದು ಸಹಾಯವ್ರೂ ಹಾಂಗೆಯಹುದು. ಎಂಬ ನೀತಿಯ ವಾಕ್ಯಮೇಕೆ ತಪ್ಪುಗುಂ. ಎನ್ನ ಭಾಗ್ಯಕ್ಕಂ ಭವಿತವ್ಯಕ್ಕಂ ಅನುಸಾರಿಗಳೆ ಸಹಾಯರಾದರಿವರ ಮೇಲೆ ದೋಷಮಿಲ್ಲೆಂದು ಮುತ್ತವರ್ಗಿಂತೆಂದಂ : ಎನಗೆ ತರಲಾಱದಿರ್ದೊಡಂ ನಿಮಗಪ್ಪನಿತಾಹಾರಮನಿಂದಿನೊಂದು ದಿವಸಕ್ಕಮಱಸಿಕೊಳ್ಳಿಂ ಪೋಗಿಮೆನೆ ಕಿಂಕರತ್ರಯಂ ಕಿಱಿದಂತರಂ ಪೋಗಿ ನಾವಿನ್ನೇಗೆಯ್ವಮೆಂದು ತಮ್ಮೊಳಾಳೋಚಿಸುವಲ್ಲಿ ನರಿಯೆಂದುದು : ಇಲ್ಲಿಗೊಂದುಪಾಯವ ನಾನೇ ಬಲ್ಲೆಂ. ಈಯೊಟ್ಟೆಯಂ ಕೊಂದರಸಂಗಂ ನಮಗಂ ಒಂದೆರಡು ದಿವಸಕ್ಕಾಹಾರಮಂ ಮಾಡಿಕೊಂಡು ಬೞಿಕ್ಕೆ ಮೇಲಪ್ಪುದಂ ಬಗೆದುಕೊಳ್ವಮೆಂದೊಡನದಂ ಕೊಲ್ವ ದೆಸೆಯಂ ಪೇೞ್ದೊಡಾಮಾತಂ ಕೇಳೆ ಒಟ್ಟೆಗಮಭಯಮಂ ಕೊಟ್ಟೆನೆಂದು ಮದೋತ್ಕಟಂ ನಮಗೆ ಮುಳಿಗುಮೆಂದು ಪುಲಿ ನುಡಿವುದುಂ, ವಾಯಸಂ ನಿರಾಯಾಸದೊಳೊಡಂಬಡಿಸಲಾನೇ ಸಾಲ್ವೆನೆಂದು ಮದೋತ್ಕಟನಲ್ಲಿಗೆ ಬಂದಿಂತೆಂದುದು : ದೇವಾ!

ತಿನ್ನಿ; ಹಾಗೆಯೇ ನನಗೂ ಅಷ್ಟು ತನ್ನಿ. ವ॥ ಅವು ತಮ್ಮತಮ್ಮಲ್ಲಿ ಒಬ್ಬೊಬ್ಬರ ಮುಖವನ್ನು ನೋಡಿ ಬಳಿಕ ನರಿ ಹೀಗೆಂದಿತು : ನಾನೂ, ಕಾಗೆಯೂ ಬೇರೆ ಯಾರಾದರೂ ಕೊಂದು ತಿಂದು ಚೆಲ್ಲಿದ ಮಾಂಸವನ್ನು ತಿಂದು ಜೀವಿಸುವೆವು. ನಮ್ಮ ಒಡನಾಡಿಯಾದ ಕಾರಣದಿಂದ ಈ ಹುಲಿ ಒಂದು ಇಲಿಯನ್ನೂ ಕೊಲ್ಲಲಾರದು. ಆಗ ಮದೋತ್ಕಟನು ಹೀಗೆಂದನು : ಶ್ಲೋ॥ ಬುದ್ಧಿಯಂತೆ ವ್ಯವಸಾಯವಿರುವುದು ; ಭಾಗ್ಯವು ಹೇಗೋ ಸಹಾಯವೂ ಹಾಗೆಯೇ. ನನ್ನ ಭಾಗ್ಯಕ್ಕೂ ಭವಿಷ್ಯಕ್ಕೂ ನನ್ನ ಅನುಚರರೇ ಸಹಾಯಕರಾದರು. ಇವರಲ್ಲಿ ದೋಷವಿಲ್ಲ ಎಂದು ಹೀಗೆ ಹೇಳಿತು : ವ॥ ನನಗೆ ತರಲು ಸಾಧ್ಯವಾಗದಿದ್ದಲ್ಲಿ ನಿಮಗೆ ಬೇಕಾಗುವಷ್ಟು ಆಹಾರವನ್ನಾದರೂ ಇದೊಂದು ದಿನ ಹುಡುಕಿಕೊಳ್ಳಿ, ಹೋಗಿ. ಆಗ ಆ ಮೂವರು ಭೃತ್ಯರೂ ಸ್ವಲ್ಪದೂರ ಹೋಗಿ ನಾವಿನ್ನೇನು ಮಾಡಲಿ ಎಂದು ಪರಸ್ಪರ ಆಲೋಚಿಸುತ್ತಿದ್ದಾಗ ನರಿ ಹೀಗೆಂದಿತು : ಈಗ ನನಗೊಂದು ಉಪಾಯ ಹೊಳೆಯಿತು. ಈ ಒಂಟೆಯನ್ನು ಕೊಂದು ಅರಸನಿಗೂ ನಮಗೂ ಒಂದೆರಡು ದಿವಸಕ್ಕೆ ಆಹಾರ ಮಾಡಿಕೊಂಡು ಬಳಿಕ ಮುಂದಿನದನ್ನು ಯೋಚಿಸೋಣ ಎಂದು ಒಂಟೆಯನ್ನು ಕೊಲ್ಲುವ ಉಪಾಯವನ್ನು ಹೇಳುತ್ತಿರಲು ಆ ಮಾತನ್ನು ಕೇಳಿ ಒಂಟೆಗೆ ಅಭಯವಚನವನ್ನು ಕೊಟ್ಟಿರುವೆನೆಂದು ಸಿಂಹ ನಮ್ಮ ಮೇಲೆ ಸಿಟ್ಟಾಗುವನು ಎಂದು ಹುಲಿ ಹೇಳಿತು. ಆಗ ಕಾಗೆ ನಿರಾಯಾಸವಾಗಿ ಸಿಂಹವನ್ನು ಒಡಂಬಡಿಸುವುದಕ್ಕೆ ನಾನೇ ಸಾಕು ಎಂದು ಮದೋತ್ಕಟನಲ್ಲಿಗೆ ಬಂದು ಹೀಗೆಂದಿತು : ದೇವಾ ಬೇರೆಲ್ಲಿಯೂ ಆಹಾರವನ್ನು ಪಡೆಯಲು

ಪೆಱತೆಡೆಯೊಳೆಲ್ಲಿಯುಮಾಹಾರಂಬಡೆಯಲಾರ್ತೆವಿಲ್ಲ, ಎನ್ನ ಬುದ್ಧಿಯಂ ಕೈಕೊಳ್ವಿರಪ್ಪೊಡೆ ನಮಗೊಂದರ್ಕಂ ಮುಟ್ಟಲ್ಲದೀಯೊಟ್ಟೆಯಂ ಕೊಂದೊಂದೆರಡು ದಿವಸದಾಹಾರಮಂ ನಿಮಗಪ್ಪನಿತಂ ಮಾಡಿಕೊಳ್ವುದೆನೆ ಮದೋತ್ಕಟನಿಂತೆಂದಂ :

ಒದವಿದ ದಯೆಯಿಂದಭಯ
ಪ್ರದಾನಪೂರ್ವಕಮಿರೆಂದು ಪೇೞ್ದಾಂ ಸಲೆ ನಂ
ಬಿದನಂ ಕೊಂದೊಡೆ ಪಾಪಮ
ದೊದವಿರ್ಕುಂ ಕೀರ್ತಿ ಮಾಸುಗುಂ ಧರೆ ಪೞಿಗುಂ ೨೦೬

ಅದಲ್ಲದೆಯುಂ, ಶ್ಲೋ॥ ನ ಗೋಪ್ರದಾನಂ ನ ಚ ಭೂಮಿದಾನಂ
ನಚಾನ್ನದಾನಂ ನ ಹಿರಣ್ಯದಾನಂ
ಸರ್ವಪ್ರದಾನೇಷ್ವಭಯಪ್ರದಾನಂ
ತಥಾ ಪ್ರದಾನಂ ಪ್ರವದಂತಿ ಧೀರಾಃ ॥೧೦೨॥

ಟೀ॥ ಗೋದಾನಂ ಭೂದಾನಂ ಅನ್ನದಾನಂ ಹಿರಣ್ಯದಾನಂ ಇವೆಲ್ಲವುಂ ಬಾರ್ತೆಯಲ್ಲ, ಸರ್ವದಾನಂಗಳೊಳಭಯಪ್ರದಾನಮೇ ಮುಖ್ಯಮೆಂದು ಬಲ್ಲರ್ ಪೇೞ್ವರ್. ಎಂಬ ಧರ್ಮಶಾಸ್ತ್ರ ಮುಂಟದಱಿಂ ನಂಬಿದನಂ ಕೊಂದು ತಿಂಬುದು ಧರ್ಮಮಲ್ಲೆನೆ ವಾಯಸನಿಂತೆಂದುದು: ದೇವಾ! ಧರ್ಮಮಂ ನೀವೆತ್ತಲಱಿವಿರ್.

೧೭. ನಾಳೀಜಂಘನೆಂಬ ಗೋಲಾಂಗೂಲದ ಕಥೆ

ಸಕಲವೇದಾಂತಪಾರಂಗತನಪ್ಪ ಗೌತಮ ಮಹಾಮುನಿ ಮಹಾಟವಿಯಂ ಪೊಕ್ಕು ಉಗ್ರೋಗ್ರ ತಪೋನಿಯಮಾನುಷ್ಠಾನನಿಷ್ಠಿತಚಿತ್ತನಾಗಿ ಪಲವು ಕಾಲಂ ನಿರಾಹಾರನಾಗಿರ್ದ ಕಾರಣಂ

ಸಾಧ್ಯವಾಗಲಿಲ್ಲ. ನನ್ನ ಉಪಾಯವನ್ನು ಸಮ್ಮತಿಸುವಿರಾದರೆ ನಮಗಾರಿಗೂ ಸಂಬಂಧವಿಲ್ಲದ ಈ ಒಂಟೆಯನ್ನು ಕೊಂದು ಒಂದೆರಡು ದಿವಸಕ್ಕೆ ನಿಮಗೆ ಸಾಕಾಗುವಷ್ಟು ಆಹಾರವನ್ನು ಮಾಡಿಕೊಳ್ಳುವುದು ಎನ್ನಲು ಮದೋತ್ಕಟ ಹೀಗೆಂದಿತು : ೨೦೬. ಅವನಲ್ಲಿ ಉಂಟಾದ ದಯೆಯಿಂದ ಅವನಿಗೆ ಅಭಯಪ್ರದಾನಮಾಡಿ ನಂಬಿಸಿ ಅವನನ್ನು ಕೊಂದರೆ ಪಾಪ ಸಂಭವಿಸುವುದು ; ಕೀರ್ತಿ ಕುಂದುವುದು ; ಲೋಕ ಹಳಿಯುವುದು. ಅಲ್ಲದೆ, ಶ್ಲೋ॥ ಗೋದಾನ, ಭೂದಾನ, ಅನ್ನದಾನ, ಹಿರಣ್ಯದಾನ ಇವೆಲ್ಲ ಪ್ರಯೋಜನವಿಲ್ಲ, ಸರ್ವದಾನಗಳಲ್ಲಿ ಅಭಯದಾನವೇ ಮುಖ್ಯವೆಂದು ಬಲ್ಲವರು ಹೇಳಿರುವರು. ವ॥ ಅದರಿಂದ ನಂಬಿದವರನ್ನು ಕೊಂದು ತಿನ್ನುವುದು ಧರ್ಮವಲ್ಲ ಎನ್ನಲು ಕಾಗೆ ಹೀಗೆಂದಿತು: ದೇವಾ ! ಧರ್ಮ ನಿಮಗೇನು ಗೊತ್ತು ? ಸಕಲ ವೇದಾಂತ ಪಾರಂಗತನಾದ ಗೌತಮ ಮಹಾಮುನಿ ಮಹಾಅರಣ್ಯವನ್ನು ಹೊಕ್ಕು ಉಗ್ರೋಗ್ರತಪೋನುಷ್ಠಾನಚಿತ್ತನಾಗಿ ಹಲವು ಕಾಲದವರೆಗೆ ನಿರಾಹಾರಿಯಾಗಿದ್ದ ಕಾರಣ ಪ್ರಾಣಹೋಗುವ ಸಮಯ ಬಂತು. ಹಿಂದೆ ನೋಡಿಕೊಂಡ ಒಂದು ನಾಳೀಜಂಘನೆಂಬ ಮಂಗನು ಕಂಡು, ಪೂಜ್ಯರೇ, ನನ್ನ ಶರೀರವನ್ನು ಆಹಾರಮಾಡಿಕೊಂಡು ಇನ್ನೂ ಕೆಲವು ಕಾಲದವರೆಗೆ ತಪಸ್ಸುಮಾಡಿರಿ ಎಂದು ಹೇಳಿತು. ಅದಕ್ಕೆ ಆ ಮುನಿ ತಾನು ಸಾಕಿದ ಪ್ರಾಣಿಯನ್ನು ತಿನ್ನುವುದು ಧರ್ಮವಲ್ಲ ಎನ್ನಲು ಕಪಿ

ಪ್ರಾಣವಿಯೋಗವಾಗಲಿರ್ದನನಾತಂ ಮುನ್ನ ನಡಪಿದುದೊಂದು ಗೋಲಾಂಗೂಲಂ ನಾಳೀಜಂಘನೆಂಬುದು ಕಂಡು ನಿಮ್ಮಡಿ, ನೀವೆನ್ನ ಶರೀರಮನಾಹಾರಂ ಮಾಡಿನ್ನು ಕೆಲವು ಕಾಲಂ ತಪಂಗೆಯ್ಯಿಮೆಂದೊಡಾ ಮುನಿ ತಾಂ ನಡಪಿದ ಪ್ರಾಣಿಯಂ ತಿಂಬುದು ಧರ್ಮಮಲ್ಲೆಂದೊಡಾ ಕಪಿ ತಾಂ ತಾಪಸರ ಸಮೀಪದೊಳ್ ಬಳೆದ ಕಾರಣದಿಂ ತತ್ವವೇದಿಯಪ್ಪುದಱಿಂ ಮತ್ತಮಿಂತೆಂದುದು : ನಿಮ್ಮಡಿ ನಿಮಗೆ ಭ್ರಾಂತಿಜ್ಞಾನಮಿನ್ನುಂ ಪೋದುದಿಲ್ಲ, ಶರೀರಕ್ಕಲ್ಲದೆ ಶರೀರಿಗೆಲ್ಲಿಯುಂ ಕೇಡಿಲ್ಲ, ಪರೋಪಕಾರಾರ್ಥಮಿದಂ ಶರೀರಂ ಎಂಬುದನಱಿವೆನಾಗಿಯುಂ ಈ ಶರೀರಮಂ ನಿಮಗಿತ್ತಪೆಂ. ನೀವಿದಂ ಕೈಕೊಂಡೆನ್ನಂ ಕೃತಾರ್ಥನಂ ಮಾಡಿಮೆಂದು ಪ್ರಾರ್ಥಿಸೆ ಪ್ರಾಣರಕ್ಷಣಾರ್ಥಂ ತಾಂ ನಡಪಿದ ಕಪಿಯಂ ತಿಂದಂ.

ಶ್ಲೋ॥ ಪುನರ್ವಿತ್ತಂ ಪುನರ್ಮಿತ್ರಂ ಪುನರ್ಭಾರ್ಯಾ ಪುನರ್ಮಹೀ
ಪುನಶ್ಶಬ್ದಾದಯೋ ರಮ್ಯಾ ನ ಶರೀರಂ ಪುನಃ ಪುನಃ ॥೧೦೩॥

ಟೀ॥ ಧನಮುಂ ಮಿತ್ರನುಂ ಹೆಂಡತಿಯುಂ ಭೂಮಿಯುಂ ಇವೆಲ್ಲಮುಂ ಮರಳಿ ಪಡೆಯಲ್ಬಹುದು ಶರೀರಮೆಂಬುದಂ ಮರಳಿ ಪಡೆಯಲ್ಬಾರದು ಎಂಬ ಶಾಸ್ತ್ರೋಕ್ತಮುಂಟಪ್ಪುದಱಿಂ, ನಿಮಗಂ ಪುಣ್ಣ ಬೇನೆ ತಿಣ್ಣಮಪ್ಪುದಱಿಂ ಮೇಲೆ ಕ್ಷುಧಾಪೀಡೆಯಾದುದಪ್ಪುದೆ ಶರೀರಮಂ ಸಂಹರಿಸಲ್ಬಾರದು ಕಥಕನಪ್ಪುದೆಲ್ಲಿಯಾನುಂ ಬಂದ ಕವಲದಂ ತಿಂದೊಡೊಂದುಂ ದೋಷಮಿಲ್ಲೆಂದೊದಂತಾದೊಡಂ ನಿಮಗೆ ಮನೋವ್ಯಥೆಯಾಗದಂತು ನಾಲ್ವರುಂ ಬಂದೆಮ್ಮನ್ನುಂ ನಿವೇದಿಸಿದೊಡಲ್ಲಿ ನಿಮ್ಮ ಮನಕ್ಕೆ ಬಂದವರಂ ಕಳೆದುಕೊಳ್ಳಿಮೆಂದು ಕಾಗೆ ಬಾಯ್ಗೆ ಬಂದುದಂ ಗಳಪಿದೊಡೆ ಮದೋತ್ಕಟನೊಡಂಬಟ್ಟಾವುದುಮಂ ನೀನೆ ಬಲ್ಲೆಯೆನೆ ವಾಯಸಂ ಸೃಗಾಲ ಶಾರ್ದೂಲಂಗಳಲ್ಲಿಗೆ ಬಂದೊಟ್ಟೆಯಂ ಮೊಟ್ಟನೆ ಮಾಳ್ಪ ಕಜ್ಜಮಂ ಪೇಳ್ದೊಡಂಬಡಿಸಿ ಬಂದೆನೆಂದು ತತ್ಪ್ರಪಂಚಮೆಲ್ಲಮಂ ಪೇೞ್ದು ಬಳಿಕ್ಕೆ

ತಾಪಸರ ಸಮೀಪದಲ್ಲೇ ಬಳೆದ ಕಾರಣ ತತ್ತ್ವವೇದಿಯಾದುದರಿಂದ ಮತ್ತೆ ಹೀಗೆಂದಿತು: ಪೂಜ್ಯರೇ, ನಿಮಗೆ ಭ್ರಾಂತಿ ಇನ್ನೂ ಕಳೆಯಲಿಲ್ಲ. ಶರೀರಕ್ಕಲ್ಲದೆ ಶರೀರಿಗೆ ಎಲ್ಲಿಯೂ ಕೇಡಿಲ್ಲ. 'ಪರೋಪಕಾರಾರ್ಥಮಿದಂ ಶರೀರಂ' ಎಂಬುದನ್ನು ತಿಳಿದವನಾದುದರಿಂದ ಈ ಶರೀರವನ್ನು ನಿಮಗೆ ಅರ್ಪಿಸುವೆನು. ನೀವು ಇದನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಿರಿ ಎಂದು ಪ್ರಾರ್ಥಿಸಲು ಪ್ರಾಣರಕ್ಷಣಾರ್ಥವಾಗಿ ಅವನು ತಾನು ಸಾಕಿದ ಕಪಿಯನ್ನೇ ತಿಂದನು. ಅಲ್ಲದೆ 'ಶರೀರಮಾದ್ಯಂ ಖಲು ಧರ್ಮಸಾಧನಂ'. ಶ್ಲೋ॥ ಐಶ್ವರ್ಯವನ್ನೂ, ಮಿತ್ರನನ್ನೂ, ಹೆಂಡತಿಯನ್ನೂ, ಭೂಮಿಯನ್ನೂ ಮರಳಿ ಪಡೆಯಬಹುದು. ಶರೀರವನ್ನು ಮರಳಿ ಪಡೆಯಲು ಸಾಧ್ಯವಿಲ್ಲ ಎಂಬ ಶಾಸ್ತ್ರೋಕ್ತಿ ಉಂಟು. ವ॥ ಆದರಿಂದ ನಿಮಗೂ ಹುಣ್ಣಿನ ಬೇನೆ ತುಂಬ ತೀಕ್ಷ್ಣವಾಗಿದೆ. ಅಲ್ಲದೆ ಹಸಿವಿನ ಪೀಡೆಯಿಂದ ಶರೀರವನ್ನು ಸ[illegible]ಸಬಾರದು. ಕಥಕನು ಎಲ್ಲಿಂದಲೋ ಬಂದ ಕವಳ ; ಅದನ್ನು ತಿಂದರೆ ದೋಷವಿಲ್ಲ. ನಿಮಗೆ ಮನೋವ್ಯಥೆಯಾಗದ ಹಾಗೆ ನಾವು ನಾಲ್ವರೂ ಬಂದು ನಮ್ಮನ್ನು ನಿವೇದಿಸಿಕೊಳ್ಳುವೆವು. ನಿಮ್ಮ ಮನಸ್ಸಿಗೆ ಬಂದವರನ್ನು ತಿನ್ನಿ ಎಂದು ಕಾಗೆ ಬಾಯಿಗೆ ಬಂದುದನ್ನು ಹರಟಿತು. ಅದಕ್ಕೆ ಮದೋತ್ಕಟನೂ ಒಡಂಬಟ್ಟು ಎಲ್ಲವನ್ನೂ ನೀನೇ ಬಲ್ಲೆ ಎಂದಿತು. ವಾಯಸವು ಸೃಗಾಲ, ಶಾರ್ದೂಲಗಳಲ್ಲಿಗೆ ಬಂದು ಒಂಟೆಯನ್ನು ಮೊಟ್ಟನೆ ಮಾಡುವ ಕಾರ್ಯವನ್ನು ಹೇಳಿ ಒಡಂಬಡಿಸಿ ಬಂದೆನೆಂದು ಆ ವಿವರವನ್ನೆಲ್ಲ ತಿಳಿಸಿ

ಕಥಕನಂ ಕರೆದು ನಮ್ಮರಸು ಪಲವು ದಿನಕ್ಕಮಾಹಾರಂ ಬಡೆಯದೆ ಮಱುಗುತ್ತಿರ್ದಪನಾಮುಂ ಪೆಱತೆಡೆಯೊಳಾಹಾರಂಬಡೆಯಲಾರ್ತೆವಿಲ್ಲೆಮ್ಮಂ ನಿವೇದಿಸಿದೊಡೇಗೆಯ್ವಂ ತಪ್ಪುವನಲ್ಲಂ ; ಸುಮ್ಮನಿರದೆ ಪಾಳಿಯಂ ಪಾಳಿಸುವಂ ಬನ್ನಿಮೆಂದಾ ಧೂರ್ತತ್ರಯಂ ಕಥಕಂಬೆರಸು ಸಿಂಹನಲ್ಲಿಗೆ ಬಂದು ಪೊಡೆವಟ್ಟು ಬೞಿಕ್ಕೆ ಕಾಗೆ ಇಂತೆಂದುದು :

ದೇವ ನಿಮಗಪ್ಪ ಪಿಶಿತಮ
ನಾವೆಡೆಯೊಳಮಱಸಿ ಪಡೆದೆವಿಲ್ಲಾದೊಡಮೇಂ
ನೀವುಳ್ಳೊಡೆ ಮತ್ತಂ ಪೆಱ
ತಾವುದುಮಂ ಪಡೆಯಲಕ್ಕುಮುದಱಿಂದೀಗಳ್ .೨೦೭

ಎಂದೆಂದಿನ ಬಾಣಸಕೆನ್ನಂ ನಿವೇದಿಸಿದೆಂ ದೇವರ್ ಕೈಕೊಳ್ಳಿಮನೆ ಮದೋತ್ಕಟನಿಂತೆಂದಂ: ಕಾಗೆಯಂ ತಿಂದಪೆನೆಂಬನಿತರೊಳೆ ವಿಕ್ರಮಾದಿತ್ಯದೇವನನಿನ್ನುಮೀ ಲೋಕಂ ಪೞಿವಪ್ಪುದು; ಅಂತುಮಲ್ಲದೆ 'ಕಾಗೆಯುಡಗು ಬೋನಂಬುಗದು' ಎಂಬುದು ಲೋಕಪ್ರಸಿದ್ಧಮುದಱಿಂ ನಿಷಿದ್ಧಮೆಂಬೆ ಜಂಬುಕನಿಂತೆಂದುದು : ಅಂತಪ್ಪೊಡೆ ದೇವರೆನ್ನನಾರೋಗಿಸಿ ನಿರೋಗಿಗಳಾಗಿಮೆಂದೊಡೆ, ಉತ್ತುಂಗಮತ್ತ ಮಾತಂಗಮಂ ಕೊಂದು ತಿಂಬ ಸಿಂಹನೊಂದು ನರಿಯಂ ತಿಂದುದೆಂದು ಲೋಕಮುಪಹಾಸ್ಯಂಗೆಯ್ಗುಮೆನೆ, ಪುಲಿ ಕಲಿಯಾಗಿ ಮುಂದೆ ನಿಂದು, ದೇವರೆನ್ನಂ ಭಕ್ಷಿಸಿ ನಿಮ್ಮ ಶರೀರಮಂ ರಕ್ಷಿಸಿಮೆಂದೊಡಾಂ ವ್ರಣಶರೀರಿ, ಎನ್ನ ಪುಣ್ಣೊಳಗೆ ನಿನ್ನ ರೋಮಂ ಪುಗೆ ಪೊಲ್ಲದಪ್ಪುದು, ನಿನ್ನ ಮಾಂಸಮನೆಂತು ತಿನಲ್ಬರ್ಕುಮೆನೆ, ಇದೆಲ್ಲಮನೊಟ್ಟೆ ಕೇಳ್ದು ದುಷ್ಟರಂ ತಿನ್ನದ ಸಿಂಹಂ ತನ್ನನೆ

ಬಳಿಕ ಕಥಕನನ್ನು ಕರೆದು ಹೀಗೆಂದಿತು : ನಮ್ಮ ಅರಸನು ಹಲವು ದಿನಗಳಿಂದ ಆಹಾರವನ್ನು ಪಡೆಯದೆ ಮರುಗುತ್ತಿರುವನು. ನಾವೂ ಬೇರೆ ಕಡೆಯಿಂದ ಆಹಾರ ಪಡೆಯುವುದು ಸಾಧ್ಯವಾಗಲಿಲ್ಲ. ನಮ್ಮನ್ನು ಅವನಿಗೆ ನಿವೇದಿಸಿಕೊಂಡಲ್ಲಿ ಹೇಗೂ ಒಪ್ಪುವನು. ಸುಮ್ಮನೆ ಇರದೆ ನಮ್ಮ ಋಣವನ್ನು ತೀರಿಸೋಣ ಬನ್ನಿ ಎಂದು ಧೂರ್ತತ್ರಯ ಕಥಕನೊಡನೆ ಸಿಂಹದ ಬಳಿಗೆ ಬಂದು ನಮಸ್ಕರಿಸಿ ಕಾಗೆ ಹೀಗೆಂದಿತು : ೨೦೭. ದೇವಾ ! ನಿಮಗೆ ಬೇಕಾದ ಮಾಂಸವನ್ನು ಎಲ್ಲಿ ಹುಡುಕಿದರೂ ಪಡೆಯದಾದೆವು. ಆದರೂ ಕೆಟ್ಟುಹೋದುದೇನು ? ನೀವಿದ್ದರೆ ಮತ್ತೇನನ್ನೂ ಪಡೆಯುವುದು ಸಾಧ್ಯ. ವ।। ಅದರಿಂದ ನಿಮ್ಮ ಇಂದಿನ ಆಹಾರಕ್ಕೆ ನನ್ನನ್ನೇ ನಿವೇದಿಸಿಕೊಂಡಿರುವೆ. ದೇವರು ಸ್ವೀಕರಿಸುವುದು ಎನಲು ಮದೋತ್ಕಟ ಹೀಗೆಂದಿತು : ಕಾಗೆಯನ್ನು ತಿನ್ನುವೆನೆಂದು ಹೇಳಿದಷ್ಟಕ್ಕೇ ವಿಕ್ರಮಾದಿತ್ಯ ದೇವನನ್ನು ಲೋಕವು ಇನ್ನೂ ಹಳಿಯುತ್ತಿರುವುದು. ಅಲ್ಲದೆ ಕಾಗೆಯ ಮಾಂಸ ಊಟಕ್ಕೆ ಆಗದು ಎಂಬುದು ಲೋಕಪ್ರಸಿದ್ಧವಾದುದರಿಂದ ಅದು ನಿಷಿದ್ಧ. ಆಗ ಜಂಬುಕನು ಹೀಗೆಂದಿತು : ಹಾಗಾದರೆ ದೇವರು ನನ್ನನ್ನು ಆರೋಗಿಸಿ ನಿರೋಗಿಗಳಾಗಿರಿ ಎನ್ನಲು ಉತ್ತುಂಗಮತ್ತ ಮಾತಂಗಗಳನ್ನು ಕೊಂದು ತಿನ್ನುವ ಸಿಂಹವು ಒಂದು ನರಿಯನ್ನು ತಿಂದಿತು ಎಂದು ಲೋಕ ಅಪಹಾಸ್ಯಮಾಡೀತು. ಹುಲಿಯು ಕಲಿ ಎಂಬಂತೆ ಮುಂದೆ ಬಂದು ದೇವರು ನನ್ನನ್ನು ತಿಂದು ನಿಮ್ಮ ಶರೀರವನ್ನು ರಕ್ಷಿಸಿಕೊಳ್ಳಿರಿ ಎಂದಿತು. ಅದಕ್ಕೆ ಸಿಂಹವು ನಾನು ವ್ರಣಶರೀರಿ, ನನ್ನ ಹುಣ್ಣಿನೊಳಗೆ ನಿನ್ನ ರೋಮವು ಹೋದರೆ ಕೆಟ್ಟುಹೋಗುವೆ. ನಿನ್ನ ಮಾಂಸವನ್ನು ಹೇಗೆ ತಿನ್ನಲಾದೀತು ಎಂದಿತು. ಇದೆಲ್ಲವನ್ನೂ ಕೇಳಿದ ಒಂಟೆಯು

ನಂಬಿ ಬಂದಿರ್ದೆನ್ನನೆಂತುಂ ತಿಂಬುದಿಲ್ಲಮಾದೊದಮಾನುಂ ನುಡಿದು ಮಾತಂ ಪಾಲಿಸುವೆನೆಂದು ಸಿಂಹದ ಸಮೀಪಕ್ಕೆ, ಬಂದೆನ್ನೊಡಲ್ ದೇವರೆಡರ್ಗಲ್ಲದೊಡೇವಾಟ್ಟೆ, ಎನ್ನ ಶರೀರಮಂ ಕೈಕೊಳ್ಳಿಮೆನೆ ಮದೋತ್ಕಟನುಸಿರದಿರ್ಪುದುಂ ಸೃಗಾಲ ಶಾರ್ದೂಲ ಕಾಕಂಗಳ್ ಕಥಕನ ಪೃಥುಶರೀರಮಂ ಸೀಳ್ದು ಸೀಳುಂಬುಳಾಡಿ ಕೊಂದುವು.

ಶ್ಲೋ॥ ಬಹವಃ ಪಂಡಿತಾಃ ಕ್ಷುದ್ರಾಃ ಸರ್ವೇ ಮಾಯೋಪಜೀವಿನಃ
ಕುರ್ಯುರ್ದೋಷಮದೋಷಂ ವಾ ಉಷ್ಟ್ರೇ ಕಾಕಾದಯೋ ಯಥಾ॥೧೦೪॥

ಟೀ॥ ಹಲಬರು ಪಂಡಿತರು ಕ್ಷುದ್ರರು ವಂಚನೆಯಿಂ ಜೀವಿಪ್ಪರೆಲ್ಲರು ಲೇಸನಾದೊಡಂ ಹೊಲ್ಲಹವಂ ಮಾಳ್ಪರು. ಅದು ಹೇಗೆಂದೊಡೊಟ್ಟೆಯಂ ಕಾಕಾದಿಗಳ್ ಕೊಲಿಸಿದ ಹಾಗೆ. ಎಂಬುದು ಕಾರಣಂ ದುಷ್ಟರ ನಡುವಿರ್ದ ಶಿಷ್ಟಂಗೇಗೆಯ್ದುಂ ಸುಖಮಾಗಲರಿಯದು ಪಿಂಗಳಕನೆನಗಿನಿತನರ್ಥಮಂ ಬಗೆವುದೆಲ್ಲಂ ಕ್ಷುದ್ರಪರಿವಾರ ಪ್ರೇರಣೆಯಿಂದಲ್ಲದೆ ಪೆಱತೊಂದು ಕಾರಣಮಿಲ್ಲನೆ ದವನಕನಿಂತೆಂದಂ: ನೀಂ ಪೇಳ್ದ ದೃಷ್ಟಾಂತಂಗಳ್ ಪುಸಿಯಲ್ಲಮದೆಂತೆನೆ :

ಶ್ಲೋ॥ ಬಹವೋ ಬಲವಂತಶ್ಚ ಉಪಾಯಜ್ಞಾಶ್ಚ ದುರ್ಜನಾಃ

ಎಂಬ ಕಥೆಯೊಂದುಂಟೆನೆ ಸಂಜೀವಕನದೆಂತೆನೆ ದವನಕಂ ಪೇಳ್ಗುಂ :

೧೮. ನಾಲ್ವರ್ ಧೂರ್ತರ್ ಓರ್ವ ಬ್ರಾಹ್ಮಣನಂ ವಂಚಿಸಿದ ಕಥೆ

ಒಬ್ಬ ಶ್ರೋತ್ರಿಯನಪ್ಪ ಪಾರ್ವಂ ಯಜ್ಞನಿಮಿತ್ತಂ ಒಂದಾಡಂ ಬೇಱೂರಿಂ ಮಾಱುಗೊಂಡು ಹೆಗಲೊಳಿಕ್ಕಿ ಪೋಪನಂ ನಾಲ್ವರ್ ಧೂರ್ತರ್ ಕಂಡು ನಾಮೀ ಬೆಳ್ಳನನಾಳವಾಡಿಕೊಂಡೀಯಾಡಂ ನಾಯಂ ಮಾಡಿ ತಿಂಬಂ ಬನ್ನಿಮೆಂದು ಮುಂದೆ ಪರಿದೋರೊರ್ವರೆ ಮಾರ್ಬಟ್ಟೆಯೊಳ್ ಬರ್ಪಂತಾಗಿ

ದುಷ್ಟರನ್ನು ತಿನ್ನದ ಸಿಂಹವು ತನ್ನನ್ನೇ ನಂಬಿ ಬಂದ ನನ್ನನ್ನು ಹೇಗೂ ತಿನ್ನದು. ಆದರಿಂದ ನಾನೂ ನನ್ನ ಸರದಿಯನ್ನು ಪಾಲಿಸುವೆನು ಎಂದು ಸಿಂಹದ ಬಳಿಗೆ ಬಂದು ನನ್ನ ಶರೀರವು ದೇವರ ಆಪತ್ತಿಗಾಗದಿದ್ದರೆ ಏನು ಪ್ರಯೋಜನ, ನನ್ನ ಶರೀರವನ್ನು ಸ್ವೀಕರಿಸಿರಿ ಎನ್ನಲು ಮದೋತ್ಕಟನೂ ಮೌನದಿಂದಿರಲು ಸೃಗಾಲ ಶಾರ್ದೂಲ ಕಾಗೆಗಳು ಕಥಕನ ದೊಡ್ಡ ದೇಹವನ್ನು ಹರಿಹರಿದು ಕೊಂದುವು. ಶ್ಲೋ॥ ಹಲವರು ಪಂಡಿತರೂ ಕ್ಷುದ್ರರೂ ವಂಚನೆಯಿಂದ ಜೀವಿಸುವವರೆಲ್ಲರೂ ಒಂಟೆಯನ್ನು ಕಾಗೆ ಮೊದಲಾದವು ಕೊಂದ ಹಾಗೆ ಲೇಸನ್ನೂ ಹೊಲೆಗೆಡಿಸುವವರು. ವ॥ ಅದರಿಂದ ದುಷ್ಟರ ನಡುವಿರುವ ಶಿಷ್ಟರಿಗೆ ಏನಾದರೂ ಸುಖ ಸಿಗದು. ಪಿಂಗಳಕನು ನನಗೆ ಇಷ್ಟೆಲ್ಲ ಅನರ್ಥವನ್ನುಂಟುಮಾಡುವುದು ಕ್ಷುದ್ರ ಪರಿವಾರದ ಪ್ರೇರಣೆಯಿಂದಲ್ಲದೆ, ಬೇರೆ ಕಾರಣದಿಂದಲ್ಲ. ಆದಕ್ಕೆ ದವನಕನು ಹೀಗೆಂದನು ; ನೀನು ಹೇಳಿದ ದೃಷ್ಟಾಂತಗಳು ಸುಳ್ಳಲ್ಲ. ಶ್ಲೋ॥ 'ಬಹವೋ ಬಲವಂತಶ್ಚ ಉಪಾಯಜ್ಞಾಶ್ಚ ದುರ್ಜನಾಃ' ಎಂಬ ಕಥೆಯುಂಟು. ಸಂಜೀವಕನು ಅದೇನು ಎನ್ನಲು ದವನಕನು ಹೇಳತೊಡಗಿತು: ಒಬ್ಬ ಬ್ರಾಹ್ಮಣನು ಯಜ್ಞಕ್ಕಾಗಿ ಒಂದು ಆಡನ್ನು ಬೇರೆ ಊರಿನಿಂದ ಕ್ರಯಕ್ಕೆ ಕೊಂಡು ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದನು. ಅವನನ್ನು ನಾಲ್ವರು ಧೂರ್ತರು ನೋಡಿದರು. ನಾವು ಈ ದಡ್ಡನನ್ನು ಮೋಸಮಾಡಿ ಈ ಆಡನ್ನು ನಾಯಿಯನ್ನಾಗಿ ಮಾಡಿ ತಿನ್ನೋಣ, ಬನ್ನಿರಿ ಎಂದು ಮಾತನಾಡಿಕೊಂಡು ಮುಂದುವರಿದು

ಬರುತ್ತುಂ ಮುನ್ನಮೊರ್ವಂ ಬಂದೆಲೆ ಪಾರ್ವ! ನೀನಪ್ಪೊಡೆ ದುರ್ವಾಸನ ಸಮಾನನಪ್ಪ ಬ್ರಾಹ್ಮಣಂ ನೀನೀ ಶ್ವಾನನನೇನಿಮಿತ್ತಂ ಪೊತ್ತು ಪೋದಪೆಯೆಂದು ನುಡಿದು ಪೋದಂ. ಆ ಭಟ್ಟನೀ ದುಷ್ಟಂಗೆ ಮಱುಮಾತುಗೊಟ್ಟೊಡೇನಪ್ಪುದೆಂದುಸಿರದೆ ನಡೆವುದುಂ ಮತ್ತೊರ್ವನಿದಿರೆ ಬಂದೆಲೆ ಭಟ್ಟರೇ! ಬ್ರಾಹ್ಮಣಂ ನಾಯುಂ ಮುಟ್ಟಲಾಗದೆಂಬರದು ಕೆಟ್ಟು ಪೊತ್ತುಕೊಂಡು ಪೋದಪೆ ನೀವೆತ್ತಾನುಂ ಮಱುಳ್ಗೊಂಡಿರೋ ಮರುಳಿಕ್ಕಿ ಅಟ್ಟುದನುಂಡಿರೋ ಪೇೞಿಮಲ್ಲದಾಗಳ್ ನೀನೆತ್ತಲೀ ಚಂಡಾಲಕರ್ಮದೊಳ್ ತೊಡರ್ದು ಇಂತು ಭ್ರಷ್ಟಾಚಾರನಾದ. ನಿನ್ನಂ ಮುಟ್ಟಲಾಗದೆಂದವಂ ಕಳಿದು ಪೋಪುದುಂ. ಭಟ್ಟಂಗೆ ಭ್ರಾಂತಿಪುಟ್ಟಿ ನಿಂದು ಪೆಗಲೊಳಿರ್ದ ಛಾಗಲಮಂ ಭೂಭಾಗದೊಳಿೞಿಪಿ,

ಶ್ರವಣ ಶಿರಃಪೃಚ್ಛಾಸ್ಯಾ
ದ್ಯವಯವಮಂ ಮುಟ್ಟಿ ನೋಡಿ ನಾಯಲ್ಲಿದು ಭೂ
ಭುವನ ಪ್ರಸಿದ್ಧಮಜಮೆಂ
ದವಧಾರಿಸಿ ಪೊತ್ತುಕೊಂಡು ಪೋದಂ ಪಾರ್ವಂ ೨೦೮

ಅಂತು ನಡೆದ ಪಾರ್ವಂಗೆ ಮತ್ತೊರ್ವನಿದಿರಂ ಬಂದೆಲೆ ಪಾರ್ವ! ನಿಮಗೆ ಕುಶಾಕ್ಷಮಾಲಾ ಯಜ್ಞೋಪವೀತೋತ್ತರೀಯಾದಿ ಚಿಹ್ನಂಗಳೆತ್ತಲೀ ನಾಯಂ ಪೊತ್ತು ಪೋಪುದೆತ್ತಲೆತ್ತಾನುಂ ನಿಮಗೆ ಮೃಗಯಾವ್ಯಸನ ವ್ಯಾಪಾರಮಾದುದಕ್ಕುಮಲ್ಲದಾಗಳಿದು ನಿಮ್ಮ ದುಷ್ಕರ್ಮದ ಫಲಮೆಂದು ನುಡಿದು ಪೋಪುಮಮಾ ಪಾರ್ವಂ ಚೋದ್ಯಂಬಟ್ಟು.

ಒಬ್ಬೊಬ್ಬರಾಗಿ ಬೇರೊಂದು ದಾರಿಯಿಂದ ಬಂದರು. ಮೊದಲೊಬ್ಬ ಬಂದನು. : ಎಲೈ ಬ್ರಾಹ್ಮಣಾ ! ನೀನಾದರೋ ದುರ್ವಾಸನ ಸಮಾನನಾದ ಬ್ರಾಹ್ಮಣಾ. ನೀನು ಈ ಶ್ವಾನವನ್ನು ಯಾವುದಕ್ಕಾಗಿ ಹೊತ್ತುಕೊಂಡು ಹೋಗುವೆ ಎಂದು ನುಡಿದು ಹೋದನು. ಆ ಭಟ್ಟನು ಈ ದುಷ್ಟನಿಗೆ ಪ್ರತ್ಯುತ್ತರ ಕೊಟ್ಟು ಏನಾಗಬೇಕೆಂದು ಮಾತನಾಡದೆ ಮುಂದಕ್ಕೆ ನಡೆದನು. ಅಷ್ಟರಲ್ಲಿ ಮತ್ತೊಬ್ಬನು ಎದುರುಗಡೆಯಿಂದಲೇ ಬಂದು ಎಲೈ ಭಟ್ಟರೇ ! ಬ್ರಾಹ್ಮಣನು ನಾಯಿಯನ್ನು ಮುಟ್ಟಬಾರದು ಎನ್ನುವರು ಅದು ಬಿಟ್ಟು ಹೊತ್ತುಕೊಂಡು ಹೋಗುವಿರಿ. ನೀವೆಲ್ಲಿಯಾದರೂ ಹುಚ್ಚರಾದಿರೋ, ಇಲ್ಲವೆ ಹುಚ್ಚು ಹಿಡಿಯಲಿ ಎಂದು ಮಾಡಿದ ಅದುಗೆಯನ್ನು ಉಂಡಿರೋ ಹೇಳಿರಿ. ಅಲ್ಲದಿದ್ದರೆ ನೀವು ಇಂಥ ಚಂಡಾಲಕರ್ಮದಲ್ಲಿ ತೊಡಗಿ ಹೀಗೆ ಭ್ರಷ್ಟಾಚಾರರಾದಿರಿ. ನಿಮ್ಮನ್ನು ಮುಟ್ಟಬಾರದು ಎಂದು ಅವನು ಅಲ್ಲಿಂದ ಹೊರಟುಹೋದನು. ಭಟ್ಟನಿಗೆ ಭ್ರಾಂತಿ ಕವಿದು ಹೆಗಲಲ್ಲಿ ಹೊತ್ತ ಆಡನ್ನು ಕೆಳಕ್ಕಿಳಿಸಿ ೨೦೮. ಕಿವಿ, ಮಂಡೆ, ಬಾಲ ಮೊದಲಾದ ಅವಯವಗಳನ್ನು ಮುಟ್ಟಿ ನೋಡಿ ಇದು ನಾಯಲ್ಲ; ಭುವನಪ್ರಸಿದ್ಧವೆಂಬಂತೆ ಇದು ಆಡೇ ಆಗಿದೆ ಎಂದು ಅಲ್ಲಿಂದ ಮುಂದಕ್ಕೆ ಹೊತ್ತುಕೊಂಡು ಹೋದನು. ವ॥ ಹಾಗೆ ನಡೆಯುತ್ತಿದ್ದ ಬ್ರಾಹ್ಮಣನ ಎದುರು ಮತ್ತೊಬ್ಬನು ಬಂದು ಎಲೈ ಬ್ರಾಹ್ಮಣಾ ! ನಿಮ್ಮ ದರ್ಭೆ, ಜಪಸರ, ಯಜ್ಞೋಪವೀತ, ಉತ್ತರೀಯಗಳೆಲ್ಲಿ, ಈ ನಾಯಿಯನ್ನು ಹೊತ್ತುಕೊಂಡು ಹೋಗುವ ಈ ಹೀನಕಾರ್ಯವೆಲ್ಲಿ ! ಎಲ್ಲಿಯಾದರೂ ನಿಮಗೆ ಬೇಟೆಯಾಡುವ ಚಟ ಹತ್ತಿರಬೇಕು. ಅಲ್ಲದಿದ್ದರೆ ಇದು ನಿಮ್ಮ ದುಷ್ಕರ್ಮದ

ಚಿತ್ತಭ್ರಾಂತಿಭ್ರಾಂತಂ
ಪೊತ್ತುದುಮಂ ತಡವಿ ನೋಡುತುಂ ಛಾಗಲಮಂ
ಮತ್ತಾ ಪಾರ್ವಂ ವಿಸ್ಮಿತ
ಚಿತ್ತಂ ಚಿಂತಿಸುತೆ ಮುಂತೆ ಬರೆ ಮತ್ತೊರ್ವಂ ೨೦೯

ಅಂತು ಬಂದೆಲೆ ದ್ವಿಜ! ನೀನಿನಿತು ಕಾಲಂ ಬ್ರಾಹ್ಮಣನುಂ ಸದಾಚಾರನುಮಾಗಿರ್ದೀಗಳೀ ಶ್ವಾನನಂ ಪೊತ್ತು ಹೀನಜಾತಿ ಸಮಾನನಾದೆ. ಇದಂ ಮಹಾಜನಂಗಳ್ ಕಂಡರಪ್ಪೊಡೆ ಸಭಾಜನಕ್ಕಂ ಸಹಪಙ್ಕ್ತಿಗಂ ಪೊಱಗೆಂದು ಸಮಯಬಾಹ್ಯನಂ ಮಾಳ್ಪರದಱಿಂದೀ ನಾಯನೀಡಾಡಿ ಪ್ರಾಯಶ್ಚಿತ್ತಮಂ ಕೈಕೊಳ್ಳಿಮೆಂಬು ಪೇೞ್ದು ಪೋಪುದುಮಾ ಪಾರ್ವನಿದಂ ಕಂಡವರೆಲ್ಲಂ ನಾಯುಮಂ ಪೊತ್ತುಕೊಂಡು ಪೋದಪನೆನುತ್ತುಮಿರ್ದರಾನೆತ್ತಾನುಂ ಮರುಳ್ಗೊಂಡೆನಕ್ಕುಮದಲ್ಲದಾಗಳಿದು ಕಾಮರೂಪಿಯಕ್ಕುಮಿದನೆಂತಱಿಯಲಕ್ಕುಮೆಂದು ಭಯಂಗೊಂಡಾಡಂ ಶ್ವಾನನೆಂದೀಡಾಡಿ ಮಾಳಂಗೊಂಡೋಡಿದಂ. ಇತ್ತಲಾ ಧೂರ್ತರೆಲ್ಲರ್ ಬಂದು ತಮ್ಮ ವಂಚನೋಪಾಯಕ್ಕೆ ತಾವೆ ಮೆಚ್ಚಿ ನಕ್ಕು ಆಡಂ ತಿಂದರ್ ಎಂಬ ಕಥೆಯಂತಾದುದದಱಿಂ

ಶ್ಲೋ॥ ಬಹವೋ ಬಲವಂತಶ್ಚ ಉಪಾಯಜ್ಞಾಶ್ಚ ದುರ್ಜನಾಃ
ಶಕ್ತಾ ವಂಚಯಿತುಂ ಬುದ್ಧ್ಯಾ ಬ್ರಾಹ್ಮಣಂ ಛಾಗ ಕುರ್ಕುರಾತ್ ॥೧೦೫॥

ಟೀ॥ ಹಲಂಬರು ಶಕ್ತಿವಂತರುಂ ಉಪಾಯಮಂ ಬಲ್ಲ ದುರ್ಜನರುಂ ಬುದ್ಧಿಯಿಂದೊರ್ಬನಂ ವಂಚಿಸಲು ಸಮರ್ಥರು. ಅದಂತೆಂದೊಡೆ ಬ್ರಾಹ್ಮಣನ ಕೈಯಲಿರ್ದಾಡಂ ನಾಯೆಂದು ಹಾಕಿಸಿದಹಗೆ ಎಂಬುದುಮಲ್ಲದೆಯುಂ ಪ್ರಭಾಕರನೆಂಬ ಗುರುವಂ ಅಂಬಷ್ಟ ಛಂದೋರಗವೆಂದು ಪೇೞ್ದನಿತಱಿಂ ಕೊಳರಸನಂತಾ ಭಟ್ಟನುಮಂ ಪಲಂಬರ್ ದುಷ್ಟರೊಂದಾಗಿ ಮರುಳ್ಮಾಡಿದರ್; ಮತ್ತಂ ವರರುಚಿ ಭಟ್ಟನಂ ಪಲರ್ ದುಷ್ಟರೊಂದಾಗಿ ಪೊಲೆಯನೆಂದು ಗೆಲಿ ಬಾಯಾರ್ವರೆಂದೊಡುಟಿದರಳ

ಫಲ ಎಂದು ಹೇಳಿ ಹೋದನು. ಆ ಬ್ರಾಹ್ಮಣನು ಆಶ್ಚರ್ಯಪಟ್ಟು ೨೦೯. ಭ್ರಮೆಯಿಂದ ಬಳಲಿ ಹೊತ್ತುದನ್ನು ತಡವಿ ನೋಡುತ್ತ ವಿಸ್ಮಿತನಾಗಿ ಮುಂದುವರಿದನು. ಇನ್ನೊಬ್ಬನು ಬಂದು ವ॥ ಎಲೈ ದ್ವಿಜೋತ್ತಮನೇ ! ನೀನು ಇಷ್ಟರವರೆಗೆ ಬ್ರಾಹ್ಮಣನೂ ಸದಾಚಾರನೂ ಆಗಿದ್ದು ಈಗ ಈ ಶ್ವಾನವನ್ನು ಹೊತ್ತು ಹೀನಜಾತಿಗೆ ಸಮಾನನಾದೆ. ಇದನ್ನು ಮಹಾಜನರು ಕಂಡರಾದರೆ ಸಭಾಜನಕ್ಕೂ ಸಹಪಂಕ್ತಿಗೂ ಹೊರಗೆಂದು ಧರ್ಮಭ್ರಷ್ಟನನ್ನಾಗಿ ಮಾಡುವರು. ಆದರಿಂದ ಈ ನಾಯಿಯನ್ನು ಬಿಸುಟು ಹೋಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳು ಎಂದು ಹೇಳಿ ಹೋದನು. ಆ ಬ್ರಾಹ್ಮಣನು ಇದನ್ನು ಕಂಡವರೆಲ್ಲರೂ ನಾಯಿಯನ್ನು ಹೊತ್ತುಕೊಂಡು ಹೋಗುವನು ಎಂದು ಹೇಳುತ್ತಿರುವರು. ನನಗೇನೋ ಮರುಳು ಹಿಡಿದಿರಬೇಕು. ಅದಲ್ಲದೆ ಇದು ಕಾಮರೂಪಿಯಾಗಿದೆ ಎಂದು ಭಯಗೊಂಡು ಆಡನ್ನು ನಾಯಿಯೆಂದು ಬಿಸುಟು ಓಡಿದನು. ಇತ್ತ ಆ ಧೂರ್ತರೆಲ್ಲರೂ ಬಂದು ತಮ್ಮ ವಂಚನೋಪಾಯಕ್ಕೆ ತಾವೇ ಮೆಚ್ಚಿ ನಕ್ಕು ಆಡನ್ನು ಕೊಂದು ತಿಂದರು. ಅದರಿಂದ ಶ್ಲೋ॥ ಹಲವರು ಶಕ್ತಿವಂತರೂ ಉಪಾಯವನ್ನು ಬಲ್ಲ ದುರ್ಜನರೂ ಬ್ರಾಹ್ಮಣನ ಕೈಯಲ್ಲಿದ್ದ ಆಡನ್ನು ನಾಯಿಯೆಂದು ಹಾಕಿಸಿದಂತೆ ಬುದ್ಧಿಪೂರ್ವಕವಾಗಿ ಒಬ್ಬನನ್ನು ವಂಚಿಸಲು ಸಮರ್ಥರಾಗಿರುವರು. ವ॥ ಪಿಂಗಳಕನು ಈಗ ನಿಷ್ಕಾರಣವಾಗಿ ನಿನ್ನ ಮೇಲೆ ಮುಳಿದಿರುವನು. ಅಲ್ಲದೆ,

ವಾವುದು. ಪಿಂಗಳಕನೀಗಳ್ ನಿನಗೆ ನಿರ್ನಿಮಿತ್ತಂ ಮುಳಿದೆನಲ್ಲದೆಯುಂ, 'ಕರ್ತವ್ಯಂ ಚ ನಕರ್ತವ್ಯಂ ಯದುಕ್ತಂ ಬಹುಭಿರ್ಜನೈಃ' ಎಂಬೀ ನಯಮಂ ಕೈಕೊಂಡತಿಕೋಪಿಯಾಗಿರ್ದಪನೀಯವಸರಕ್ಕೆ ಕಷ್ಟಮದೆಂತೆನೆ :

ಶ್ಲೋ॥ ಯಾವದ್ಭಯಸ್ಯ ಭೇತವ್ಯಂ ತಾವದ್ಭಯಮನಾಗತಂ
ಆಗತಂ ತು ಭಯಂ ದೃಷ್ಟ್ವಾ ತತ್ಕಾಲೇಚ ಭಯಂ ತ್ಯಜೇತ್ ॥೧೦೬॥

ಟೀ॥ ಎನ್ನೆವರಂ ಭಯಂ ಬಹುದು ಅನ್ನೆವರಮಂಜುವುದು ; ಭಯಂ ಮುಟ್ಟಿ ಬಂದ ಬಳಿಕ್ಕಂಜಲಾಗದು-ಎಂಬುದನಱಿದು ತಱಿಸಂದಿಱಿವುದೆ ನಯಮಲ್ಲದೆ ಪೆಱತಾವ ನಯಕ್ಕುಪಾಯಮಿಲ್ಲೆನೆ ಸಂಜೀವಕನಿಂತೆಂದಂ :

ಶ್ಲೋ॥ ಕೋಽಹಂ ಕೌದೇಶಕಾಲೌ ಸಮವಿಷಮಗುಣಾಃ ಕೇಽರ್ಥಿನಃ ಕೇ ಸಹಾಯಾಃ
ಕಾ ಶಕ್ತಿಃ ಕೋಽಭ್ಯುಪಾಯಃ ಕಥಮಪಿ ಚ ಕಿಯತ್ತೀದೃಶೀ ದೈವಸಂಪತ್
ಸಂಪತ್ತೌ ಕೋಽನುಬಂಧಃ ಪ್ರತಿಹತ ವಚನಸ್ಯೋತ್ತರಂ ಕಿನ್ನುಮೇಸ್ಯಾತ್
ಇತ್ಯೇವಂ ಕಾರ್ಯಸಿದ್ಧೌ ವ್ಯವಸಿತ ಮನಸೋ ನೋಪಹಾಸ್ಯಂ ಪ್ರಯಾಂತಿ॥೧೦೭॥

ಟೀ॥ ನಾನಾರ್ ದೇಶಕಾಲಂಗಳಾವುವು ಸಮವಿಷಮವತು ಹಗೆಗಳಾರ್ ಸಹಾಯರಾರ್ ತನ್ನ ಶಕ್ತಿಯುಪ್ಪುಪಾಯಮಾವುದು ಅದು ಹೇಂಗೆ ದೈವಸಹಾಯವೆಷ್ಟು ಆವುದ್ಯೋಗದಿಂ ದೈವಸಹಾಯಂ ದೊರೆಕೊಂಬುದು ಲೋಗರಿಂ ಕಿಡುವ ನುಡಿಯುಳ್ಳವಗುತ್ತರವಾವುದಹುದೆಂತೆಂತೀ ಪ್ರಕಾರದಿಂ ತಮ್ಮ ಕಾರ್ಯಸಿದ್ಧಿಯಲ್ಲಿ ಉದ್ಯೋಗಚಿತ್ತವುಳ್ಳವರೆಂದುಂ ನಗಿಸಿಕೊಳ್ಳದಿಱರು.

ಶ್ಲೋ॥ ಭಯ ಬರುವವರೆಗೆ ಅದಕ್ಕಂಜಬೇಕು. ಭಯ ಹತ್ತಿರ ಬಂದ ಬಳಿಕ ಅದಕ್ಕೆ ಹೆದರಬಾರದು ಎಂಬುದನ್ನು ತಿಳಿದು ನಿಶ್ಚಯಿಸಿ ಇರಿಯುವುದು ಧರ್ಮವಲ್ಲದೆ ಬೇರೆ ಯಾವ ಉಪಾಯವೂ ಕಾಣುವುದಿಲ್ಲ, ಎನ್ನಲು ಸಂಜೀವಕನು ಹೀಗೆಂದನು ; ಶ್ಲೋ॥ ನಾನು ಯಾರು, ದೇಶಕಾಲಗಳು ಯಾವುವು, ಸಮವಿಷಮರಾದ ಹಗೆಗಳು ಯಾರು, ತನ್ನ ಶಕ್ತಿಗೆ ಲಭ್ಯವಾದ ಉಪಾಯ ಯಾವುದು, ಅದು ಹೇಗೆ, ದೈವಸಹಾಯವೆಷ್ಟು, ಯಾವ ಉದ್ಯೋಗದಿಂದ ದೈವಸಹಾಯವು ಲಭಿಸುವುದು, ಜನರಿಂದ ಅವಮಾನಕರವಾದ ಮಾತಿಗೆ ಉತ್ತರವೇನು ಎಂದು ಈ ಪ್ರಕಾರವಾಗಿ ತಮ್ಮ ಕಾರ್ಯಸಿದ್ಧಿಯಲ್ಲಿ ಉದ್ಯೋಗಚಿತ್ತವುಳ್ಳವರು ಯಾವಾಗಲಾದರೂ ನಗೆಗೀಡಾಗದೆ ಇರಲಾರರು. ಶ್ಲೋ॥ ಗುಣವಂತರಾಗಲಿ ಗುಣಹೀನರಾಗಲಿ ಕಾರ್ಯವನ್ನು ಮಾಡುವವರಿಗೆ ಬುದ್ಧಿವಂತರಿಂದ ಯಾವ ಕಾರ್ಯವಾದರೂ ನಿರ್ಧರಿತವಾಗುವುದು. ಅತಿತ್ವರಿತವಾಗಿ ಕೆಲಸಮಾಡುವವರಿಗೆ ಕಾರ್ಯಗಳಾದ ಮೇಲೆ ಶಲ್ಯದಂತೆ ಹೃದಯವನ್ನು ಚುಚ್ಚುವುದು. ವ॥ ನಾನಾದರೋ ಎತ್ತು, ನನಗೆ ಸಹಾಯಾದಿ ಸಾಧನೋಪಾಯಗಳೊಂದೂ ಇಲ್ಲ. ಪಿಂಗಳಕನಾದರೋ ಮದ್ದಾನೆಗಳ ಹಿಂಡುಗಳನ್ನು ದಿಂಡುಗೆಡುವ ಸಿಂಹ. ಆದರಿಂದ ಅಸಮಾನವಿಗ್ರಹನೊಡನೆ ಸಮಾನವಿಗ್ರಹವನ್ನು ಹೇಗೆ ಕೈಗೊಳ್ಳಲಿ ಎಂದಿತು. ಹೀಗೇಕೆ ಮನಗುಂದಿ ಮಾತಾಡುವೆ ಎಂದು ದವನಕನು ಹೀಗೆಂದಿತು; ದೈವಬಲ, ಮನುಷ್ಯಬಲ ಎಂಬ ಎರಡರಲ್ಲಿಯೂ ಕಾರ್ಯಸಿದ್ಧಿಯಾಗುವುದು. ಅಲ್ಲಿ ಮನುಷ್ಯಬಲವಿಲ್ಲದವರು ಸತ್ತ್ವವಿಳಂಬಿಗಳಾಗಿ

ಶ್ಲೋ॥ ಗುಣವದಗುಣವದ್ವಾ ಕುರ್ವತಾ ಕಾರ್ಯಜಾತಂ
ಪರಿಣತಿರವಧಾರ್ಯಾ ಯತ್ನತಃ ಪಂಡಿತೇನ
ಅತಿರಭಸಕೃತಾನಾಂ ಕರ್ಮಣಾಮಾವಿಪತ್ತೇ
ರ್ಭವತಿ ಹೃದಯದಾಹೀ ಶಲ್ಯತುಲ್ಯೋ ವಿಪಾಕಃ ॥೧೦೮॥

ಟೀ॥ ಗುಣಮುಳ್ಳರಾಗಲಿ ಗುಣಹೀನರಾಗಲಿ ಕಾರ್ಯಮಂ ಮಾಡುವವರ್ಗೆ ಬುದ್ಧಿವಂತರಿಂದಾವ ಕಾರ್ಯವುಂ ನಿಶ್ಚಯಿಸಲ್ಪಡುವುದು. ಅತಿತ್ವರಿತದಿಂ ಮಾಡುವವರ್ಗೆ ಕಾರ್ಯಂಗಳಾಧಿಪತ್ಯದಲ್ಲಿ ಶಲ್ಯದೋಪಾದಿ ಹೃದಯಮಂ ಸುಡುವುದುಂ. ಇಂತಪ್ಪ ನೀತಿಗಳೊಳವು, ಆನಪ್ಪೊಡೆತ್ತು, ಎನಗೆ ಸಹಾಯಾದಿ ಸಾಧನೋಪಾಯಂಗಳೊಂದುಮಿಲ್ಲ, ಪಿಂಗಳಕನಪ್ಪೊಡೆ ಮತ್ತಮಾತಂಗಯೂಥಮಂ ಬೆದಱೆ ಬೆಂಕೊಂಡು ಕೊಲ್ವ ಸಿಂಗಂ ಆದಱೆಂದಸಮಾನ ವಿಗ್ರಹನೊಡನೆ ಸಮಾನವಿಗ್ರಹಮನೆಂತೆಶ್ತಿಕೊಳ್ವೆನೆಂದೊಡೆ ಇಂತೇಕೆ ಮನಂಗುಂದಿ ನುಡಿವೆಯೆಂದು ದವನಕನಿಂತೆಂದಂ : ದೈವ ಮನುಷ್ಯಬಲಮೆಂಬೆರಡಱೊಳಂ ಕಾರ್ಯಸಿದ್ಧಿಯಕ್ಕುಂ ಅಲ್ಲಿ ಮನುಷ್ಯಬಲವಿಲ್ಲದವರ್ ಸತ್ತ್ವವಿಳಂಬಿಗಳಾಗಿ ಸಾಹಸಂಗೆಯ್ದು ದೈವಬಲದಿಂದಧಿಕರಪ್ಪರಂ ಗೆಲ್ದ ಕಥೆಗಳೊಳವೆನೆ ಸಂಜೀವಕನದೆಂತೆನೆ ದವನಕಂ ಹೇಱ್ಗುಂ :

೧೯. ಟಿಟ್ಟಿಭ ಮಿಥುನಂಗಳ ಕಥೆ

ಬಲವೈರಿಸ್ಫಾರವಜ್ರಾಧಿಕ ಭಯಚಕಿತೋದ್ಧೂತ ಮೈನಾಕಗೋತ್ರಾ
ಚಲಪಕ್ಷತ್ರಾಯಿಯಿಂದುಪ್ರಿಯತಮನತಿಗಂಭೀರನಂತರ್ನಿವಿಷ್ಟಾ
ಖಿಲಲೋಕಂ ನಕ್ರಚಕ್ರಸ್ಫುರದುರುತರಯಾದಶ್ಚರಾಧ್ಯಾಸಿತ ಪ್ರೋ
ತ್ಥಲಿತಾಂಭಃ ಕುಂಭಿ ಕುಂಭೋನ್ಮದ ರಸವಿಲಸತ್ಕ್ಷೋಭರೌದ್ರಂ ಸಮುದ್ರಂ ೨೧೦

ಅಂತಾ ಸಮುದ್ರದ ತೀರೈಕ ಪ್ರದೇಶದೊಳ್ ಮಧುರಾಲಾಪೆಯುಂ ಚಂಡಪರಾಕ್ರಮನುಮೆಂಬ ಟಿಟ್ಟಿಭಮಿಥುನಂ ಸುಖದಿನಿರ್ದೊಂದು ದೆವಸಂ ಮಧುರಾಲಾಪೆ ನಿಜಪ್ರಾಣೇಶ್ವರಂಗಿಂತೆಂದಳ್: ಈ ಸಮುದ್ರತೀರಮಪಾಯಬಹುಳಮೆನಗಂ ಪ್ರಸವಸಮಯಮಾಸನ್ನಮಾದಪ್ಪುದು ಇನ್ನಿಲ್ಲಿರಲ್ಬಾರದು.

ಸಾಹಸಗೆಯ್ದು ದೈವಬಲಕ್ಕಿಂತಲೂ ಅಧಿಕರಾದವರನ್ನು ಗೆದ್ದ ಕಥೆಗಳಿವೆ. ಸಂಜೀವಕನು ಅದೇನು ಎಂದು ಕೇಳಲು ದವನಕನು ಹೇಳತೊಡಗಿತು ; ೨೧೦. ಇಂದ್ರನ ಘನವಾದ ವಜ್ರಾಯುಧದ ಅತಿಶಯ ಭಯದಿಂದ ಚಕಿತವಾಗಿ, ಮೇಲಕ್ಕೆದ್ದ ಮೈನಾಕವೇ ಮೊದಲಾದ ಕುಲಪರ್ವತಗಳ ರೆಕ್ಕೆಗಳನ್ನು ಸಲಹಿದುದೂ, ಚಂದ್ರನಿಗೆ ಅತ್ಯಂತ ಪ್ರಿಯನಾಗಿರುವುದೂ ಅತ್ಯಂತ ಗಂಭೀರನೂ, ಅಖಿಲ ಲೋಕಗಳನ್ನು ಒಳಗೊಂಡವನೂ, ಮೊಸಳೆಗಳ ಸಮೂಹ ದಿಂದ ಅತ್ಯಂತ ಶೋಭಿಸುವುದೂ ಜಲಚರಪ್ರಾಣಿಗಳ ಆವಾಸದಿಂದ ಕ್ಷುಭಿತವಾದುದೂ, ನೀರಾನೆಯ ಕುಂಭಸ್ಥಲದ ಮದಜಲದಿಂದ ಶೋಭಿಸುವುದೂ ಕ್ಷೋಭೆಯಿಂದ ರೌದ್ರ ವಾದುದೂ ಆದ ಸಮುದ್ರದ ತೀರದಲ್ಲಿ ವ॥ ಒಂದು ಪ್ರದೇಶದಲ್ಲಿ ಮಧುರಾಲಾಪೆಯೂ ಚಂಡಪರಾಕ್ರಮನೂ ಎಂಬ ಟಿಟ್ಟಿಭಗಳು ಸುಖದಿಂದ ಇದ್ದುವು. ಒಂದು ದಿನ ಮಧುರಾಲಾಪೆ ತನ್ನ ಪ್ರಾಣೇಶನೊಡನೆ ಹೀಗೆಂದಳು : ಈ ಸಮುದ್ರತೀರವು ಬಹಳ ಅಪಾಯಕರವಾಗಿದೆ. ನನಗೂ ಪ್ರಸವಕಾಲ ಹತ್ತಿರ ಹತ್ತಿರವಾಗುತ್ತ ಬಂತು. ಇನ್ನು ಇಲ್ಲಿರಬಾರದು. ಬೇರೊಂದು ಸುರಕ್ಷಿತವಾದ ಸ್ಥಳವನ್ನು ನೋಡಿ ನನ್ನನ್ನು ಕರೆದುಕೊಂಡು

ಪೆಱತೊಂದು ನಿರಾಕುಳಮಪ್ಪೆಡೆಯನೆಡೆಮಾಡಿ ಬಂದೆನ್ನನೊಡಗೊಂಡು ಪೋಗಿಮೆಂಬುದುಂ ಟಟ್ಟಿಭನಿಂತೆಂದಂ : ಇಲ್ಲಿಂದಗ್ಗಳಮಪ್ಪ ನಿರಾಕುಳಸ್ಥಾನಮುಂ ಪಡೆಯಲ್ಬಾರದೆನೆ ಮಧುರಾಲಾಪೆ ಮತ್ತಮಿಂತೆಂದಳ್ : ಈ ಸಮುದ್ರಂ ಮೇಲೆ ಭೋರೆಂದೆತ್ತಿ ಬಂದೀ ತತ್ತಿಗಳಂ ಕೊಂಡು ಪೋದೊಡುತ್ತರ ಕಾಲಕ್ಕೇಗೆಯ್ವಂ ಪೇೞಿಮೆನೆ ಚಂಡಪರಾಕ್ರಮನಿಂತೆಂದ :

ಬಡಬಾನಲಂಗೆ ಸಾಸಿ
ರ್ಮಡಿಯೆನಿಸಿದ ರೌದ್ರಕೋಪಮುಂ ತಳೆದೆನ್ನೊಳ್
ತೊಡರ್ದುದಕಾರಣ ವೈರಮ
ನೊಡರ್ಚಿಯುಂ ಕಡಲದಾರ ಮಱೆಯಂ ಪುಗುವಂ ೨೧೧

ಎನೆ ಮಧುರಾಲಾಪೆ ನಿನಗಿನಿತುವರಮನರ್ಥಮನಾಕೃಷ್ಟಿಗೆಯ್ಯುಕೊಳ್ವಕಾರಣಮೇನೆನುತ್ತಂ

ಹಿತರುಂ ಸ್ನೇಹಿತರುಂ ಪಂ
ಡಿತರುಮೆನಿಪ್ಪವರ ವಚನಮಂ ಕೇಳದ ದು
ರ್ಮತಿಯುಪ್ಪವಂಗವಶ್ಯಂ
ಸತತಂ ಕೇಡಾಗದಿರದು ಕಜ್ಜದ ಕಡೆಯೊಳ್ ೨೧೨

ಎಂಬ ನೀತಿಗಳೊಳವು. ಎನ್ನ ಮಾತಂ ಕೇಳದೆ ಕಲಹಕ್ಕೆ ಕಚ್ಚೆಯಂ ಕಟ್ಟುವ ನಿನಗೆ ಕಚ್ಛಪ ಕಥೆಯಾಗದೆ ಪೋಗದೆನೆ ಚಂಡಪರಾಕ್ರಮನದೆಂತೆನೆ ಮಧುರಾಲಾಪೆ ಪೇೞ್ಗುಂ:

೨೦. ಕಚ್ಛಪ ಕಥೆ

ಒಂದು ಸರೋವರದೊಳ್ ಸಕಟ ವಿಕಟಂಗಳೆಂಬೆರಡು ಹಂಸೆಗಳಿರ್ಪುವು. ಆ ಹಂಸೆಗಳ್ಗಂ ವಾಚಾಳನೆಂಬುದೊಂದಾವೆಗಂ ಪರಮಮಿತ್ರತ್ವಮಾಗಿ ಪಲಕಾಲಮಿರ್ಪುದುಮನಾವೃಷ್ಟಿಯಿಂದ ಕೊಳಂ ಬತ್ತುವುದುಂ ಕಲಹಂಸೆಗಳ್ ಕಂಡು ಎಮಗಿಲ್ಲಿರಲ್ಬಾರದು ಮಾನಸಸರೋವರಕ್ಕೆ

ಹೋಗಿರಿ. ಅದಕ್ಕೆ ಟಿಟ್ಟಿಭನು ಇದಕ್ಕಿಂತ ಸುರಕ್ಷಿತವಾದ ಸ್ಥಳ ಸಿಕ್ಕಲಾರದು ಎನ್ನಲು ಮಧುರಾಲಾಪೆ ಮತ್ತೆ ಹೀಗೆಂದಳು ; ಈ ಸಮುದ್ರವು ಮೇಲಕ್ಕೆ ಭೋರೆಂದು ಅಪ್ಪಳಿಸಿ ಈ ತತ್ತಿಗಳನ್ನು ತೆಗೆದುಕೊಂಡು ಹೋದರೆ ಬಳಿಕ ಏನು ಮಾಡಲಿ ಹೇಳಿರಿ ಎನ್ನಲು ಚಂಡಪರಾಕ್ರಮನು ಹೀಗೆಂದನು : ೨೧೧. ಬಡಬಾಗ್ನಿಗಿಂತಲೂ ಸಾವಿರಮಡಿ ರೌದ್ರಕೋಪವನ್ನು ತಳೆದ ನನ್ನಲ್ಲಿ ಅಕಾರಣ ವೈರವನ್ನು ಕಟ್ಟಿಕೊಂಡು ಕಡಲು ಯಾರ ಮರೆಯನ್ನು ಹೊಕ್ಕು ಬದುಕೀತು ! ವ॥ ಆಗ ಮಧುರಾಲಾಪೆ ನಿನಗಿನ್ನೂ ಅನರ್ಥವನ್ನು ಆಕರ್ಷಿಸುವ ಬುದ್ಧಿ ಯಾಕೆ ? ೨೧೨. ಹಿತರೂ ಸ್ನೇಹಿತರೂ ಪಂಡಿತರೂ ಎನ್ನಿಸುವರ ಮಾತನ್ನು ಕೇಳದ ದುಷ್ಟನಿಗೆ ಕಾರ್ಯಾಂತದಲ್ಲಿ ಕೇಡಾಗದೆ ಇರದು ಎಂಬ ನೀತಿಯುಂಟು. ವ॥ ನನ್ನ ಮಾತನ್ನು ಕೇಳದೆ ಕಲಹಕ್ಕೆ ಕಚ್ಚೆಕಟ್ಟುವ ನಿನಗೆ ಕಚ್ಛಪಕಥೆಯಂತಾಗದೆ ಇರದು ಎನ್ನಲು ಚಂಡಪರಾಕ್ರಮನು ಅದೇನೆನ್ನಲು ಮಧುರಾಲಾಪೆ ಹೇಳತೊಡಗಿದಳು : ಒಂದು ಸರೋವರದಲ್ಲಿ ಸಕಟ ವಿಕಟಗಳೆಂಬ ಎರಡು ಹಂಸೆಗಳಿದ್ದವು. ಆ ಹಂಸೆಗಳಿಗೂ ವಾಚಾಲನೆಂಬ ಒಂದು ಆಮೆಗೂ ಪರಮಮಿತ್ರತ್ವವುಂಟಾಗಿ ಹಲವು ಕಾಲವಿದ್ದುವು. ಅನಾವೃಷ್ಟಿಯಿಂದಾಗಿ ಒಮ್ಮೆ ಆ ಕೊಳ ಬತ್ತಲು ನಾವು ಇಲ್ಲಿರಬಾರದು ; ಮಾನಸ ಸರೋವರಕ್ಕೆ ಹೋಗುವೆವು ಎಂಬ ಹಂಸೆಗಳ ಮಾತನ್ನು ಕೇಳಿ ಆಮೆ ಹೀಗೆಂದಿತು :

ಪೋಪೆವೆಂದಾಳೋಚಿಸುವುದುಂ ಕಚ್ಛಪಂ ಕೇಳ್ದು ನೀವಿಲ್ಲದಾನಿಲ್ಲಿ ನಿರ್ವಹಿಸುವೆನಲ್ಲೆನೆನ್ನುಮನೊಡಗೊಂಡು ಪೋಗಿಮೆನೆ ಕಳಹಂಸಗಳಿಂತೆಂದವು : ನೀನಪ್ಪೊಡೆ ಬಹುಭಾಷಿ ತುಂಬಿದ ಸಿದ್ಧಿಗೆಯಂತೆ ರಥದ ಗಾಲಿಯಂತೆ ಬೆಟ್ಟಿತ್ತಾಗಿರ್ಪೆ ನಿನ್ನನೆಂತುಯ್ವಲ್ಬರ್ಕುಮೆನೆ ಪಂಚ್ಛಕ ಅಪ್ಪೊಡೆಯೀಯೆಡೆಗೊಂದು ಕಥೆಯುಂಟದಂ ಕೇಳಿಮೆಂದಿಂತೆಂದಂ :

೨೧. ದೇವದತ್ತನ ಕಥೆ

ಡಾವರಡಾಕಿನಿ ಶಾಕಿನಿ
ದೇವತೆ ಕತೆವೇಳಲತಿಶಯಂ ಬಲ್ಲಳ್ ನಾ
ನಾವಿಧದ ಗಾಳುಗುಂಟಣಿ
ಭೂವಳಯದೊಳೆಸೆವ ಕನ್ನೆಯುಜ್ಜಯಿನಿಯೊಳಂ ೨೧೩

ಅಂತಾಕೆ ಸಾಸಿರ ಗದ್ಯಾಣಕ್ಕಲ್ಲದೆ ಕಥೆಯಂ ಪೇಳ್ವಳಲ್ಲೆಂಬುದಂ ದೇವದತ್ತನೆಂಬ ಬ್ರಾಹ್ಮಣಂ ಕೇಳ್ದು ಭ್ರಾಂತಿಗೊಂಡು ಸಾಸಿರ ಪೊನ್ನಂ ಕೊಂಡು ಮಹಾರಣ್ಯದೊಳಗೆ ಬರ್ಪನನೊರ್ವ ಬ್ರಹ್ಮರಕ್ಕಸಂ ಕಂಡು ಪಿಡಿದು ತಿನಲೆಂದು ತೆಗೆವುದುಂ ದೇವದತ್ತಂ ತನ್ನ ಪೋಪ ವೃತ್ತಾಂತವೆಲ್ಲಮಂ ರಕ್ಕಸಗಱಿಯೆ ಪೇಳ್ದು ಕಥೆಯ ಕಾರಣಮಾಗಿ ಪಿರಿದಾಯಾಸದಿಂದರ್ಥಮಂ ಪಡೆದು ಬಂದೆನೆನ್ನ ಮನದಪೇಕ್ಷೆಯುಮಂ ಕಿಡಿಸದೆ ಪಂಚರಾತ್ರಿಯನೆಡೆಗೊಟ್ಟೆಯಪ್ಪೊಡೆನ್ನದೆ ಕಥೆಯುಂ ಕೇಳ್ದು ತಡೆಯದೆ ಬರ್ಪೆನಂತಪ್ಪುದಕ್ಕೆ ನನ್ನಂ ನಂಬುವುದೆನೆ, ರಕ್ಕಸನದರ್ಕೊಡಂಬಟ್ಟು ನೀಂ ಪಸಿದು ಬಂದೆಯೆಂದಾತಂಗೆ ತಕ್ಕನಿತಾಹಾರಮಂ ಕುಡೆ ಕೊಂಡು ರಕ್ಕಸನಂ ಬೀಳ್ಕೊಂಡು ಪೋಗಿ ಭೋಂಕನೆ ಉಜ್ಜಯಿನಿಯನೆಯ್ದಿ ಪೊೞಲ ಪೊಕ್ಕು ಡಾವರಡಾಕಿನಿಯ ಮನೆಯನರಸುತ್ತುಂ ಬಂದು,

ನೀವಿಲ್ಲದೆ ನಾನಿಲ್ಲಿ ನಿರ್ವಹಿಸಲಾರೆ ; ನನ್ನನ್ನೂ ಕರೆದುಕೊಂಡು ಹೋಗಿರಿ ಎನ್ನಲು ಕಲಹಂಸೆಗಳು ಹೀಗೆಂದುವು : ನೀನಾದರೋ ಬಹುಭಾಷಿ ; ತುಂಬಿದ ಸಿದ್ದಿಗೆಯಂತೆ ರಥದ ಗಾಲಿಯಂತೆ ಬಟ್ಟಿತ್ತಾಗಿರುವೆ. ನಿನ್ನನ್ನು ಹೇಗೆ ಸಾಗಿಸಲಿ ಎಂದು ಕೇಳಿದುವು. ಅದಕ್ಕೆ ಆಮೆ ಅದಕ್ಕೊಂದು ಕಥೆಯಿದೆ ; ಅದನ್ನು ಕೇಳಿ ಎಂದು ಹೇಳಲು ಪ್ರಾರಂಭಿಸಿತು:

೨೧೩. ಉಜ್ಜಯಿನಿಯಲ್ಲಿ ಡಾವರ ಡಾಕಿನಿ ಶಾಕಿನಿ ಮೊದಲಾದ ದೇವತೆಗಳ ಕಥೆಗಳನ್ನು ಹೇಳಲು ಬಲ್ಲ ಒಬ್ಬಳು ಕನ್ಯೆಯಿದ್ದಳು. ವ|| ಅವಳು ಸಾವಿರಗದ್ಯಾಣಕ್ಕಲ್ಲದೆ ಕಥೆಯನ್ನು ಹೇಳುವವಳಾಗಿರಲಿಲ್ಲ. ಈ ವಿಚಾರವನ್ನು ದೇವದತ್ತನೆಂಬ ಬ್ರಾಹ್ಮಣನು ಕೇಳಿ ಭ್ರಾಂತಿಗೊಂಡು ಸಾವಿರ ಹೊನ್ನನ್ನು ಕೊಂಡು ಮಹಾರಣ್ಯದ ಮಾರ್ಗವಾಗಿ ಬರುತ್ತಿದ್ದನು. ಅವನನ್ನು ಒಬ್ಬ ಬ್ರಹ್ಮರಾಕ್ಷಸನು ಕಂಡುಹಿಡಿದು ತಿನ್ನಲೆಂದು ಹವಣಿಸಿತು. ದೇವದತ್ತನು ತಾನು ಹೋಗುವ ವೃತ್ತಾಂತವನ್ನೆಲ್ಲ ರಾಕ್ಷಸನಿಗೆ ತಿಳಿಯುವಂತೆ ಹೇಳಿ ಕಥೆಯ ಕಾರಣದಿಂದಾಗಿ ಬಹಳ ಕಷ್ಟದಿಂದ ಹೊನ್ನನ್ನು ಪಡೆದು ಬಂದೆ. ನನ್ನ ಮನಸ್ಸಿನ ಅಪೇಕ್ಷೆಯನ್ನು ಕೆಡಿಸದೆ ಐದು ರಾತ್ರಿಗಳ ಅವಕಾಶವನ್ನು ಕೊಟ್ಟೆಯಾದರೆ ಕಥೆಯನ್ನು ಕೇಳಿ ತಡಮಾಡದೆ ಬರುವೆನು ; ಮುಂದಾಗುವುದು ಆಗಲಿ ; ನನ್ನನ್ನು ನಂಬುವುದು ಎಂದನು. ರಾಕ್ಷಸನು ಅದಕ್ಕೆ ಒಡಂಬಟ್ಟು ನೀನು ಹಸಿದು ಬಂದೆ ಎಂದು ಆತನಿಗೆ ಸಾಕಷ್ಟು ಆಹಾರವನ್ನು ಕೊಡಲು ಅದನ್ನು ಸ್ವೀಕರಿಸಿ ರಾಕ್ಷಸನನ್ನು ಬೀಳ್ಕೊಂಡು ಹೋಗಿ ಬೇಗನೆ ಉಜ್ಜಯನಿಯನ್ನು ಸೇರಿ ಪಟ್ಟಣವನ್ನು ಹೊಕ್ಕು ಡಾವರ ಡಾಕಿನಿಯ ಮನೆಯನ್ನು

ದೇವರ ದೊರೆಯ ವಿದಗ್ಧಜ
ನಾವಳಿಯುಮನಲಗೆಗಟ್ಟಿ ಮಾಜುತ್ತುಂ ನಾ
ನಾ ವಿಧದೊಳ್ ಪೊಕ್ಕಾಡುವ
ಡಾವರಡಾಕಿನಿಯ ಮನೆಯನಾಗಳ್ ಕಂಡಂ ೨೧೪

ಅಂತು ಕಂಡು ಮನೆಯೊಳಗಂ ಪೊಕ್ಕು ಡಾವರಡಾಕಿನಿಯ ಮುಂದೆ ಪೊನ್ನನಿಟ್ಟು ಪೊಡೆವಟ್ಟು ತಾಯೆ, ಕಥೆಯಂ ಪೇೞಿಮೆಂದೊಡಾಗಳ್ ಕುಂಟಣಿ ಕರಮೊಳ್ಳಿತ್ತೇಕಚಿತ್ತದಿಂ ಕೇಳಿಮೆಂದಿಂತೆಂದಳ್; ಒರ್ಮೆ ಕಂಡವರ್ ಮತ್ತೊರ್ಮೆ ಕಂಡೊಡೆ ನಂಟರ್ ಇದುವೆ ಪರಮಾರ್ಥಂ ಕಥೆಯೆನೆ ದೇವದತ್ತಂ ವಿಸ್ಮಯಂಬಟ್ಟು ಕುಂಟಣಿಯಂ ಬೀೞ್ಕೊಂಡು ಮತ್ತಂ ರಕ್ಕಸನಲ್ಲಿಗೆ ಬರ್ಪುದುಂ ಆತನಿದಿರಂ ಬಂದೇಂ ಭಾವ! ಬಂದಿರ್ ಎಂಬ ಬೞಿಕ್ಕೆ ನಿಮಗೆ ಪೇೞ್ದ ಕಥೆಯಂ ಪೇೞಿಮೆನೆ ದೇವದತ್ತನಿಂತೆಂದಂ:

ವರಗುಣಗಣಯುತರೆನಿಪರ್
ಧರೆಯೊಳಗೋರೊರ್ಮೆ ಕಂಡು ಮತ್ತಂ ಕಂಡಂ
ದಿರದವರೆ ನಂಟರೆಂಬುದು
ಪರಮಾರ್ಥಂ ಕಥೆಯಿದೆಂದು ಕುಂಟಣಿ ಪೇೞ್ದಳ್ ೨೧೫

ಎಂದೊಡಾ ಕಥೆಯಂ ರಕ್ಕಸಂ ಕೇಳ್ದು ಬೆಕ್ಕಸಂಬಟ್ಟು ನಿನ್ನನಾಂ ಮುಂ ಕಂಡನಿತೆಯಲ್ಲು ನಿನಗಾಹಾರಮನಿಕ್ಕಿದೆನದಱಿಂ ನೀನೆನಗೆ ನಂಟನೆ ಎಂದು ರಕ್ಕಸಂ ಮೊದಲಾಗಿ ರಕ್ಷಿಸಿದಂ. ಎಂದೊಡೆ ನೀವೆನ್ನನೆಂತುಪೇಕ್ಷಿಸಿ ಪೋದಪಿರೆನೆ ಕಳಹಂಸೆಗಳಿಂತೆಂದವು : ನೀನೆಂದಂತೆ,

ವಾಕ್ಯಂ: ಸತಾಂ ಸಾಪ್ತಪದಂ ಮೈತ್ರಂ

ಟೀ॥ ತಮ್ಮೊಡನೆ ಏೞಡಿವರಂ ನಡೆದವನೇ ಸಜ್ಜನರ್ಗೆ ಕೆಳೆಯೆನಿಪನು. ಎಂಬುಕ್ತಿಯುಂಟು. ನಿನ್ನನೊಂದುಪಾಯದೊಳೊಯ್ವಪೆವು. ಆ ವೇಳೆಯೊಳಾರೇನನೆಂದೊಡಂ ನೀನೇನುಂ ಕಂಡೊಡಂ

ಅರಸತೊಡಗಿದನು. ೨೧೪. ಅವಳ ಮನೆಯನ್ನು ಅಂತು ಹುಡುಕಿದನು. ವ॥ ಮನೆಯೊಳಗೆ ಹೋಗಿ ಡಾವರ ಡಾಕಿನಿಯ ಮುಂದೆ ಹೊನ್ನನ್ನಿಟ್ಟು ನಮಸ್ಕರಿಸಿ 'ತಾಯೇ ಕಥೆಯನ್ನು ಹೇಳಿರಿ' ಎಂದನು. ಆಗ ಆ ಕುಂಟಣಿ 'ಬಹಳ ಒಳ್ಳೆಯದಾಯಿತು : ಏಕಾಗ್ರಚಿತ್ತದಿಂದ ಕೇಳಿರಿ' ಎಂದು ಹೀಗೆ ಆರಂಭಿಸಿದಳು : ಒಮ್ಮೆ ಕಂಡವರು ಮತ್ತೊಮ್ಮೆ ಕಂಡರೆ ನಂಟರು. ಇದೇ ಪರಮಾರ್ಥವಾದ ಕಥೆ ಎಂದು ಹೇಳಿದಳು. ದೇವದತ್ತನು ವಿಸ್ಮಯಪಟ್ಟು ಕುಂಟಣಿಯನ್ನು ಬೀಳ್ಕೊಂಡು ಮತ್ತೆ ರಕ್ಕಸನಲ್ಲಿಗೆ ಬಂದನು. ಆತನು ಎದುರುಗೊಂಡು ಏನು ಭಾವನವರೇ! ಬಂದಿರಿ ಎಂದು ಬಳಿಕ ನಿಮಗೆ ಹೇಳಿದ ಕಥೆಯನ್ನು ಹೇಳಿರಿ ಎಂದು ಕೇಳಲು ದೇವದತ್ತನು ಹೀಗೆಂದನು : ೨೧೫. ಗುಣಯುತರೆನ್ನಿಸುವವರು ಒಮ್ಮೆ ಕಂಡು ಮತ್ತೊಮ್ಮೆ ಕಾಣುವ ಪ್ರಸಂಗ ಬಂದರೆ ಅವರೇ ನಂಟರಾಗುವರು ಎಂಬುದೇ ಪರಮಾರ್ಥವುಳ್ಳ ಕಥೆ ಎಂದು ಕುಂಟಣಿ ಹೇಳಿದಳು ಎಂದನು. ವ॥ ಆ ಕಥೆಯನ್ನು ರಾಕ್ಷಸನು ಕೇಳಿ ಆಶ್ಚರ್ಯಪಟ್ಟು ನಿನ್ನನ್ನು ನಾನು ಮೊದಲು ಕಂಡದ್ದು ಮಾತ್ರವಲ್ಲ; ನಿನಗೆ ಊಟ ಹಾಕಿದೆ. ಅದರಿಂದ ನೀನು ನನಗೆ ನಂಟನೇ ಆಗಿರುವೆ ಎಂದು ದೇವದತ್ತನನ್ನು ರಕ್ಷಿಸಿದನು. (ಇಪ್ಪತ್ತನೆಯ ಕಥೆಯ ಶೇಷ) ಹೀಗಿರುವಾಗ ನೀವು ನನ್ನನ್ನು ಹೇಗೆ ಉಪೇಕ್ಷಿಸಿ ಹೋಗುವಿರಿ ಎನ್ನಲು ಕಲಹಂಸೆಗಳು ಹೀಗೆಂದವು : ವಾ॥ 'ಸತಾಂ ಸಾಪ್ತಪದಂ ಮೈತ್ರಂ' ವ॥ ತಮ್ಮೊಡನೆ ಏಳಡಿಯವರೆಗೆ ನಡೆದವನೇ ಸಜ್ಜನರಿಗೆ ಗೆಳೆಯನೆನಿಸುವನು ಎಂಬ ಉಕ್ತಿಯುಂಟು. ನಿನ್ನನ್ನು ಒಂದು ಉಪಾಯದಿಂದ ಒಯ್ಯುವೆವು. ಆ ವೇಳೆಯಲ್ಲಿ ಯಾರು

ನುಡಿಯಲಾಗದು. ಎಮ್ಮ ಮಾತಂ ಮಿಕ್ಕು ನುಡಿದೆಯಾದೊಡೆ ಸೊಸೆಯ ಮಾತಂ ಕೇಳದತ್ತೆಯ ಕಥೆಯಂತಕ್ಕುಮೆನೆ ಕಚ್ಛಪನದೆಂತೆನೆ ಕಳಹಂಸೆಗಳ್ ಪೇೞ್ಗುಂ

೨೨. ಸೊಸೆಯ ಮಾತಂ ಕೇಳದತ್ತೆಯ ಕಥೆ

ಸಾಲಗ್ರಾಮವೆಂಬ ಮಹಾಗ್ರಹಾರದೊಳ್ ಗ್ರಾಮಾಧಿಪತಿಯ ಸತಿ ಕುಮತಿಯೆಂಬಳಾಕೆಯೊಂದು ದಿವಸಂ ತನ್ನ ಸೊಸೆಯಪ್ಪ ಸೌಮಿತ್ರಿಗಿಂತೆಂದಳ್ : ಆಂ ನೆರೆಯೂರ್ಗೆ ಪೋಗಿ ಬಂದಪೆಂ ನೀಂ ಮನೆಯಂ ಸುಯ್ಯಾನಂ ಮಾಡಿಕೊಂಡಿರೆಂದು ಪೇೞ್ದು ಪೋದಳ್ ಅನ್ನೆಗಂ ಸೌಮಿತ್ರಿಯಲ್ಲಿಗೊರ್ವ ಹಾರ್ವಂ ಬಂದು ಮಗಳೆ ! ನೀನಿಂದು ಪನ್ನಿರ್ವರ್ ಪಾರ್ವರ್ಗೆ ಸಾರಮಪ್ಪ ಕ್ಷೀರಭೋಜನಮಂ ಮಾಡಿಸಿದೆಯಪ್ಪೊಡೆ ನಿನಗೆ ಕನಕಲಾಭಮುಂ ಪುತ್ರಲಾಭಮುಂ ಮನೋರಥ ಸಿದ್ಧಿಯುಮಕ್ಕುಮೆನೆ ಸೌಮಿತ್ರಿ ಸುಮತಿಯಪ್ಪುದಱಿಂ ತನ್ನ ಮನದೊಳಿಂತೆಂದಳ್ :

ಶ್ಲೋ॥ ಬ್ರಾಹ್ಮಣಾನ್ನಾವಮನ್ಯೇತ ನಾವಮನ್ಯೇತ ದೇವತಾಃ
ಸರ್ವದೇವಮಯೋ ವಿಪ್ರೋ ನ ತದ್ವಚನಮನ್ಯಥಾ ॥೧೦೯॥

ಟೀ॥ ಬ್ರಾಹ್ಮಣರನ್ನೂ ದೇವರನ್ನೂ ಅವಜ್ಞೆಯಂ ಮಾಡಲಾಗದು. ಸರ್ವದೇವತಾಸ್ವರೂಪರಹ ಬ್ರಾಹ್ಮಣರುಗಳ ವಾಕ್ಯಮೆಂದುಂ ಹುಸಿಯಲ್ಲ ಎಂಬುದು ಶಾಸ್ತ್ರಾರ್ಥಮುಂಟು. ಬ್ರಾಹ್ಮಣವಚನಂ ನಿಶ್ಚಯಮಕ್ಕುಮಿದಂ ನೋೞ್ಪೆನೆಂದು,

ವಸುಧಾದೇವರನಾಮಂ
ತ್ರಿಸಿ ಪಿರಿದುಂ ಭಕ್ತಿಪೂರ್ವಕಂ ವಿಧಿಯಿಂ ಪೂ
ಜಿಸಿ ಮುದದೆ ಮಾಡಿದಳ್ ಪಾ
ಯಸಮಂ ನವಘೃತಸಮನ್ವಿತಂ ಸಿತಸಹಿತಂ ೨೧೬

ಏನೆಂದರೂ ನೀನು ಏನನ್ನು ಕಂಡರೂ ನುಡಿಯಬಾರದು. ನಮ್ಮ ಮಾತನ್ನು ಮೀರಿ ನುಡಿದೆಯಾದರೆ ಸೊಸೆಯ ಮಾತನ್ನು ಕೇಳದ ಅತ್ತೆಯ ಕಥೆಯಂತಾಗುವುದು ಎನ್ನಲು ಆಮೆ ಅದೇನು ಎಂದು ಕೇಳಲು ಹಂಸೆಗಳು ಹೇಳಿದುವು: ಸಾಲಗ್ರಾಮವೆಂಬ ಮಹಾಅಗ್ರಹಾರದಲ್ಲಿ ಗ್ರಾಮದ ಅಧಿಪತಿಯ ಸತಿ ಕುಮತಿಯೆಂಬವಳಿದ್ದಳು. ಅವಳು ಒಂದು ದಿನ ತನ್ನ ಸೊಸೆಯಾಗಿದ್ದ ಸೌಮಿತ್ರಿಗೆ ಹೀಗೆಂದು ಹೇಳಿದಳು: ನಾನು ನೆರೆಯೂರಿಗೆ ಹೋಗಿಬರುವೆ. ನೀನು ಮನೆಯನ್ನು ಎಚ್ಚರಿಕೆಯಿಂದ ನೋಡಿಕೊಂಡಿರು ಎಂದು ಹೇಳಿ ಹೋದಳು. ಅಷ್ಟರಲ್ಲಿ ಸೌಮಿತ್ರಿಯ ಮನೆಗೆ ಒಬ್ಬ ಬ್ರಾಹ್ಮಣನು ಬಂದು ಮಗಳೆ ! ನೀನು ಇಂದು ಹನ್ನೆರಡು ಜನ ಬ್ರಾಹ್ಮಣರಿಗೆ ಶ್ರೇಷ್ಠವಾದ ಕ್ಷೀರಭೋಜನವನ್ನು ಮಾಡಿಸಿದೆಯಾದರೆ ನಿನಗೆ ಕನಕಲಾಭವೂ ಮನೋರಥಸಿದ್ಧಿಯೂ ಉಂಟಾಗುವುದು ಎಂದನು. ಸೌಮಿತ್ರಿಯು ಬುದ್ಧಿವಂತೆಯಾದುದರಿಂದ ತನ್ನ ಮನಸ್ಸಿನಲ್ಲೇ ಹೀಗೆಂದು ಯೋಚಿಸಿದಳು : ಶ್ಲೋ॥ ಬ್ರಾಹ್ಮಣರನ್ನೂ ದೇವರನ್ನೂ ಅವಜ್ಞೆಮಾಡಬಾರದು; ಸರ್ವದೇವತಾಸ್ವರೂಪಿಗಳಾದ ಬ್ರಾಹ್ಮಣರ ವಾಕ್ಯ ಎಂದೂ ಸುಳ್ಳಲ್ಲ ಎಂಬ ಶಾಸ್ತ್ರಾರ್ಥವುಂಟು. ಬ್ರಾಹ್ಮಣರ ಮಾತು ನಿಶ್ಚಯವಾಗಿಯೂ ಸತ್ಯವಾಗುವುದು ಎಂದು ೨೧೬. ಆ ವಸುಧಾಮರರನ್ನು ಆಮಂತ್ರಿಸಿ ಭಕ್ತಿಭಾವದಿಂದ ಪೂಜಿಸಿ ಸಂತೋಷದಿಂದ

ಅಂತು ಪಾರ್ವರ್ಗೂಡಿ ಪರಕೆಯನಾಂತು ಸೌಮಿತ್ರಿ ಸಂತೋಷದಿನಿರ್ಪುದುಂ ಕಿಱಿದಾನುಂ ಬೇಗಕ್ಕೆಯಾ ಸೌಮಿತ್ರಿಯತ್ತೆ ಕುಮತಿಯೆಂಬಳ್ ಬಂದೆಲ್ಲಮಂ ಕಂಡೆಲೆ ತೊತ್ತೆ ! ನಿನಗಿನಿತು ಸಾಮರ್ಥ್ಯವನಾರ್ಮಾಡಿದರ್ ನೀನಿನಿತು ಪೊೞ್ತು ಮನೆಯೊಳಗಾನಿಲ್ಲದನಿತಱೊಳೆ ಎಡೆವೊತ್ತುಪೊಲಿಯುಂ ಕಲೆಮುಟ್ಟಲ್ವೆತ್ತಂತೆ ಮನೆಯೊಳುಳ್ಳುದೆಲ್ಲಮಂ ಕಾಕಭೋಜನಂಮಾಡಿ ಕಿಡಿಸಿದೆಯೆಂದು ಸೊಸೆಯುಂ ನೋಯೆ ನುಡಿದು ಜಡಿದು ಮನೆಯಿಂ ಪೊಱಮಡಿಸೆ ಕಟ್ಟಲೆಯೊಳಾಕೆ ಭಯಾಕುಲೆಯಾಗಿ ದೂರಂ ಪೋಗಲಣ್ಮದೂರ ಮುಂದಿರ್ದ ಪುಣಿಸೆಯ ಮರದ ಕಿಱಿದಪ್ಪ ಪೊಟ್ಟಱೊಳಡಂಗಿರ್ದಳ್. ಅನ್ನೆಗಮಲ್ಲಿಗೆಣ್ಬರ್ ಮಾಯಾರೂಪಿಗಳಪ್ಪ ಶಾಕಿನಿಯರ್ ಬಂದು ಮರನನೇಱಿರ್ದು ಸುವರ್ಣದ್ವೀಪಕ್ಕೆ ಪೋಗೆಂದಭಿಮಂತ್ರಿಸುವುದುಮದು ಮನದಿಂ ಮುನ್ನಮೆಯ್ದಲೊಡಂ ರಕ್ಕಸಿಯರ್ ಮಾಂಸಭಕ್ಷಣಕ್ಕೆ ಪೋಪುದುಂ ದೆಸೆಯಂ ನೋಡಿ ಸೌಮಿತ್ರಿ ಧರ್ಮಮೇ ಗತಿಯೆಂದು ಪೊಱಮಟ್ಟು ದೆಸೆಯಂ ನೋೞ್ಪಾಗಳ್,

ಇಲಿಯ ಬಿಲದ್ವಾರಂಗಳ
ಕೆಲದೊಳ್ ಕೆಂಪೆಸೆದು ಮಿಸುಪ ಕನಕದ ರಜಮಂ
ಲಲಿತಾಂಗಿ ಕಂಡುಕೊಂಡಾ
ಕುಲವಧು ವಿಪ್ರಪ್ರಸಾದಮಾಯ್ತೆಂದಾಗಳ್ ೨೧೭

ಅಂತು ಪೊನ್ನಂ ಪೊಱೆಗಟ್ಟಿಕೊಂಡು ಮತ್ತಮಾ ಪುಣಿಸೆಯ ಮರದೊಳ್ ಪೊಕ್ಕಡಂಗಿರ್ಪುದುಂ ಕಿಱಿದಾನುಂ ಬೇಗಕ್ಕೆ ರಕ್ಕಸಿಯರ್ ಬಂದಾ ಮರನನೇಱಿರ್ದಭಿಮಂತ್ರಿಸಲೊಡಂ ಅದು ಪೞಿಯಂತೆ ಮುನ್ನಿನ ಸ್ಥಾನಕ್ಕೆ ಬಂದಿರೆ ಶಾಕಿನಿಯರ್ ತಮ್ಮತಮ್ಮ ಮನೆಗಳ್ಗೆ ಪೋದರ್. ಇತ್ತಲ್ ಸೌಮಿತ್ರಿಯುಂ

ನವಘೃತ ಸಮನ್ವಿತವಾದ ಪಾಯಸವನ್ನು ಮಾಡಿ ಬ್ರಾಹ್ಮಣರಿಗೆ ಬಡಿಸಿದಳು. ವ|| ಅವರ ಆಶೀರ್ವಾದವನ್ನು ಪಡೆದು ಸೌಮಿತ್ರಿ ಸಂತೋಷದಿಂದಿದ್ದಳು. ಸ್ವಲ್ಪ ಸಮಯದಲ್ಲಿ ಸೌಮಿತ್ರಿಯ ಅತ್ತೆ ಕುಮತಿ ಬಂದು ಎಲ್ಲವನ್ನೂ ಕಂಡು ತೊತ್ತೆ ! ನಿನಗೆ ಇಷ್ಟು ಅಧಿಕಾರವನ್ನು ಯಾರು ಕೊಟ್ಟವರು ? ನೀನಿಷ್ಟು ದಿನ ಮನೆಯಲ್ಲಿ ನಾನಿಲ್ಲದ ವೇಳೆಯನ್ನೇ ನೋಡಿ ಮನೆಯಲ್ಲಿರುವುದನ್ನೆಲ್ಲ ಕಾಗೆಗಳಿಗೆ ಹಾಕಿ ಕೆಡಿಸಿದೆಯೆಂದು ಸೊಸೆಯ ಮನಸ್ಸಿಗೆ ನೋವಾಗುವಂತೆ ನುಡಿದು ಬಯ್ದು ಮನೆಯಿಂದ ಹೊರಕ್ಕೆ ಹಾಕಿದಳು. ಕಗ್ಗತ್ತಲಲ್ಲಿ ಆಕೆ ಭಯಗ್ರಸ್ತೆಯಾಗಿ ದೂರ ಹೋಗಲಾರದೆ ಮುಂದೆ ಇದ್ದ ಹುಣಿಸೆಯ ಮರದ ಪೊಟ್ಟರೆಯಲ್ಲಿ ಅಡಗಿಕೊಂಡಳು. ಅಷ್ಟರಲ್ಲಿ ಅಲ್ಲಿಗೆ ಎಂಟು ಮಂದಿ ಮಾಯಾರೂಪಿಗಳಾದ ಶಾಕಿನಿಯರು ಬಂದು ಮರವನ್ನು ಹತ್ತಿ ಸುವರ್ಣದ್ವೀಪಕ್ಕೆ ಹೋಗಲಿ ಎಂದು ಅಭಿಮಂತ್ರಿಸಲು ಅದು ಮನಸ್ಸಿಗೂ ಮೊದಲು ಅಲ್ಲಿಗೆ ಹೋಯಿತು. ರಾಕ್ಷಸಿಯರು ಮಾಂಸಭಕ್ಷಣಕ್ಕೆ ಹೋಗಲು ಸೌಮಿತ್ರಿ ದಿಕ್ಕುಗೆಟ್ಟು ಧರ್ಮವೇ ಗತಿಯೆಂದು ಹೊರಕ್ಕೆ ಬಂದು ನೋಡಿದಳು. ೨೧೭. ಇಲಿಯ ಬಿಲದ್ವಾರಗಳ ಬಳಿಯಲ್ಲಿ ಕೆಂಪಾಗಿ ಹೊಳೆಯುತ್ತಿದ್ದ ಚಿನ್ನದ ರಜವನ್ನು ಕಂಡು ಆ ಕುಲವಧು ವಿಪ್ರಪ್ರಸಾದವಾಯಿತು ಎಂದು ವ|| ಹೊನ್ನನ್ನು ಹೊರೆಗಟ್ಟಿ ಆ ಹುಣಿಸೆಯ ಮರದ ಪೊಟ್ಟರೆಯಲ್ಲಿ ಅಡಗಿಕೊಂಡಳು. ಸ್ವಲ್ಪ ಸಮಯದಲ್ಲಿಯೇ ಆ ರಕ್ಕಸಿಯರು ಆ ಮರವನ್ನು ಏರಿ ಅಭಿಮಂತ್ರಿಸಲು ಅದು ಹಿಂದೆ ಇದ್ದ ಹಾಗೆ ಮೊದಲಿದ್ದಲ್ಲಿಗೇ ಬರಲು ಶಾಕಿನಿಯರು ತಮ್ಮ ತಮ್ಮ ಮನೆಗೆ ಹೋದರು. ಇತ್ತ ಸೌಮಿತ್ರಿಯು ತನ್ನ ಮನೆಗೆ ಬಂದು

ತನ್ನ ಮನೆಗೆ ಬಂದು ಪೊನ್ನಪುಡಿಯನತ್ತೆಯಿರ ಮುಂದಿಟ್ಟು ಪೊಡಮಟ್ಟೊಡತ್ತೆಯಿರ್ ಸಂತೋಷಂಬಟ್ಟು ಬೞಿಕ ತತ್ಪ್ರಪಂಚಮೆಲ್ಲಮಂ ಕೇಳ್ದು ಸೌಮಿತ್ರಿಗಿಂತೆಂದಳ್ : ಇಂದಾಂ ಪೋಗಿ ಸಂಪೂರ್ಣಮಾಗಿ ಪೊನ್ನಂ ತಂದಪೆನೆಂದು ನೇಸಱ್ ಪಡಲೊಡಂ ಮರದ ಪೊೞಲಂ ಪುಗಲೆಂದು ಪೋಪಳ್ಗೆ ಸೌಮಿತ್ರಿಯಿಂತೆಂದಳ್ : ರಕ್ಕಸಿಯರುಕ್ಕೈವಮನಮನಱಿಯಲ್ಬಾರದು ಅತ್ತೆಯಿರೇ! ನೀಂ ಪೋದಲ್ಲದಿರೆವೆಂಬರಪ್ಪೊಡೆ ಅವರೇನೆಂದೊಡಮೇಗೆಯ್ದೊಡಮುಸಿರದಿರಲಾರ್ಪಿರಪ್ಪೊಡೆ ಪೋಗಿಮಲ್ಲದಾಗಳ್ ಪೋಗಲ್ವೇಡೆಂದೊಡಾ ಪ್ರಚಂಡೆ ಇಂತೆಂದಳ್ :

ನೀನೆನಗೆ ಬುದ್ಧಿವೇೞದೊ
ಡಾನಱಿಯೆನೆ ಪಾಮೆಯರ್ಕಳುಕ್ಕೈವಮಂ ನೀ
ನೇನುಮನೆನ್ನದಿರೆಂದಪ
ಮಾನಿಸಿ ಪೊಱಮಟ್ಟಳತ್ತೆ ಮನೆಯಿಂದಾಗಳ್ ೨೧೮

ಅಂತಾಕೆ ಸೊಸೆ ಬಾರಿಸೆ ಮಾಣದೈತಂದು ಚೌವಟದೊಳಿರ್ದ ಮರನನೆಯ್ದಿ

ಒಗೆದೊದವಿದ ಕೞ್ತಲೆಯೊಳ್
ಮಿಗೆ ಕುಮತಿಗೆ ಪೊನ್ನ ಮೋಹಮಾಗಲ್ ಸಾವಂ
ಬಗೆಯದೆ ಮಿೞ್ತುವ ಬಾಯಂ
ಪುಗುವಂತಾ ಮರದ ಪೊೞಲೊಳಿಂತುಂ ಪೊಕ್ಕಳ್ ೨೧೯

ಪೊನ್ನೆಂದೊಡೆ ಸುವ್ರತಸಂ
ಪನ್ನರ ಮನಮುಂ ಮರಂಗಳುಂ ಸೊಡರ್ಗುಡಿಯುಂ
ತಾನ್ನಿರುತಮೆಱಗುಗುಂ ಪೇ
ಟೆನ್ನುಟೆದಟೆಮನದ ಮನುಜರೆಱಗದರೊಳರೇ ೨೨೦

ಹೊನ್ನಹುಡಿಯನ್ನು ಅತ್ತೆಯ ಮುಂದೆ ಇಟ್ಟು ನಮಸ್ಕರಿಸಿದಳು. ಅತ್ತೆ ಅದನ್ನು ಕಂಡು ಸಂತೋಷಪಟ್ಟು ಬಳಿಕ ಆ ವೃತ್ತಾಂತವನ್ನೆಲ್ಲ ಕೇಳಿ ಸೌಮಿತ್ರಿಗೆ ಹೀಗೆಂದಳು : ಇಂದು ನಾನು ಹೋಗಿ ಸಂಪೂರ್ಣವಾಗಿ ಹೊನ್ನನ್ನು ತರುವೆನು. ನೇಸರು ಕಂತಲು ಮರದ ಪೊಟ್ಟರೆಯನ್ನು ಸೇರಬೇಕೆಂದು ಹೋಗುವ ಅತ್ತೆಯನ್ನು ಕಂಡು ಸೊಸೆ ಹೀಗೆಂದಳು : ರಕ್ಕಸಿಯರ ಮೋಸದ ಮನಸ್ಸನ್ನು ಅರಿಯುವುದು ಅಶಕ್ಯ ಅತ್ತೆಯಂದಿರೇ ! ನಿಮಗೆ ಹೋಗಲೇಬೇಕೆಂದಿದ್ದರೆ ಅವರೇನೆಂದರೂ, ಅವರೇನು ಮಾಡಿದರೂ ಮಾತನಾಡದೆ ಇರುವುದು ಸಾಧ್ಯವಾದರೆ ಮಾತ್ರ ಹೋಗಿರಿ ; ಇಲ್ಲದಿದ್ದಲ್ಲಿ ಹೋಗುವುದು ಒಳ್ಳೆಯದಲ್ಲ ಎಂದಳು. ಅದಕ್ಕೆ ಆ ಪ್ರಚಂಡೆ ಹೀಗೆಂದಳು : ೨೧೮. ನೀನು ನನಗೆ ಬುದ್ಧಿ ಹೇಳದಿದ್ದರೆ ನನಗೆ ಗೊತ್ತಾಗುವುದಿಲ್ಲವೇ ; ನೀನು ಸುಮ್ಮನಿರು ಎಂದು ಅವಮಾನಪಡಿಸಿ ಮನೆಯಿಂದ ಅತ್ತೆ ಹೊರಹೊರಟಳು. ವ॥ ಹಾಗೆ ಆಕೆ ಸೊಸೆ ಬೇಡವೆಂದರೂ ಕೇಳದೆ ಮರವನ್ನು ಸೇರಿದಳು. ೨೧೯. ಕತ್ತಲೆಯಲ್ಲಿ ಕುಮತಿಗೆ ಚಿನ್ನದ ಮೇಲಿನ ಮೋಹವಾಗಲು ಸಾವನ್ನೂ ಲೆಕ್ಕಿಸದೆ ಮೃತ್ಯುವಿನ ಬಾಯಿಯನ್ನು ಹೊಗುವಂತೆ ಆ ಮರದ ಪೊಟ್ಟರೆಯನ್ನು ಹೊಕ್ಕಳು. ೨೨೦. ಹೊನ್ನು ಎಂದರೆ ಸುವ್ರತ ಸಂಪನ್ನರ ಮನಸ್ಸೂ, ಮರಗಳೂ, ದೀಪಶಿಖೆಯೂ

ಅನ್ನೆಗಮರ್ಧರಾತ್ರಿಯಾಗಲೊಡಂ ಶಾಕಿನಿಯರ್ ಬಂದು ಮರನನಡರ್ದಿಂದುಂ ನಾವು ಕಡಾರದ್ವೀಪಕ್ಕೆ ಪೋಪಮೆಂದಾಳೋಚಿಸುವುದುಂ ಕುಮತಿ ಕೇಳ್ದಿನ್ನುಸಿರದಿರ್ದೊಡೆನ್ನ ಬಗೆ ಕೂಡದು ತನ್ನಪ್ಪುದಕ್ಕೆಂದು ಶಾಕಿನಿಯರ್ಗಾಕೆಯಿಂತೆಂದಳ್ : ಕಡಾರದ್ವೀಪದ ಮಾನಸರ ಮಾಂಸಂ ಕ್ಷಾರಮುಂ ನಿಸ್ಸಾರಮುಂ ಅಲ್ಲಿಗೆ ಪೋಗಲ್ವೇಡ ಸುವರ್ಣದ್ವೀಪದ ಮಾನಸರ ಮಾಂಸಮಮೃತೋಪಮಾನಮಲ್ಲಿಗೆ ಪೋಗಿಮೆಂದು ಪೇೞಲೊಡಮದಂ ಕೇಳ್ದು ರಕ್ಕಸಿಯರ್ ಅಕ್ಕಟ! ಸಗ್ಗಮಿದಿರಂ ಬಂದುದು, ಎಮಗೆ ಅಱಸುವ ಬಳ್ಳಿ ಕಾಲ್ತೊಡರ್ದುದು ಎಂಬ ನಾಣ್ನುಡಿ ಪ್ರತ್ಯಕ್ಷಮಾದುದೆಂದು ರಾಗಿಸಿ ಬಿಲದೊಳಗಿರ್ದ ಇಲಿಯಂ ತೆಗೆವಂತೆ ಪೊೞಲೊಳಗಿರ್ದ ಕುಮತಿಯಂ ಕಾಲಂ ಪಿಡಿದು ತೆಗೆದು ಇರ್ಬಗಿಮಾಡಿ ಕೊಂದು ತಿಂದರ್.

ಅದಱಿಂದಿದನಱಿದೇನುಮಂ ನುಡಿಯದೆ ಬರ್ಪುದೆಂದು ಕಳಹಂಸೆಗಳ್ ಕಚ್ಛಪಂಗೆ ಬುದ್ಧಿವೇೞ್ದೊಡಂತೆಗೆಯ್ವೆನೆಂಬುದುಂ ಕಲಹಂಸೆಗಳ್ ಬಲ್ಲಿತಪ್ಪುದೊಂದು ದಕ್ಕಂ ತಂದದಱೆರಡು ಕಡೆಯುಮಂ ತಾವದಸಿ ಕರ್ಚೆ ನಡುವೆಯಾವೆಯಂ ಕರ್ಚಿಸಿಕೊಂಡನೇಕ ಗ್ರಾಮನಗರ ಖೇಟ ಖರ್ವಟ ಮಡಂಬ ಪತ್ತನ ದ್ರೋಣಾಮುಖಂಗಳಂ ಜನಪದಂಗಳಂ ಕಳೆದು ಬರುತ್ತುಂ ಪರಶುರಾಮನ ಬಾಣಘಾತದಿಂ ಭಿನ್ನಮಾದ ಕ್ರೌಂಚಾಚಲದ ಶಿಖರಪ್ರದೇಶಮಂ ನೋಡುತ್ತುಮಳಕಾಪುರದ ಪೊಱವೊೞಲನೆಯ್ದುವುದುವಲ್ಲಿಯ ಜನಪದಂಗಳ್ ಕಂಡು ಇದೊಂದು ಭಂಡಿಯ

ಎರಗುತ್ತವೆ ಎಂದ ಮೇಲೆ ಇನ್ನು ಹೀನಮನಸ್ಸಿನ ಮನುಷ್ಯರು ಎರಗದಿರುವರೇ! ವ॥ ಅಷ್ಟರಲ್ಲಿ ಅರ್ಧರಾತ್ರಿಯಾಗಲು ಶಾಕಿನಿಯರು ಬಂದು ಮರವನ್ನೇರಿ ಇಂದೂ ನಾವು ಕಡಾರ ದ್ವೀಪಕ್ಕೆ ಹೋಗೋಣ ಎಂದು ಆಲೋಚಿಸಿದರು. ಆಗ ಕುಮತಿ ಅವರ ಮಾತನ್ನು ಕೇಳಿ ಇನ್ನೂ ಮಾತನಾಡದಿದ್ದಲ್ಲಿ ನನ್ನ ಅಪೇಕ್ಷೆ ನೆರವೇರದು; ತನಗಾಗುವುದು ಆಗಲಿ ಎಂದು ಶಾಕಿನಿಯರಿಗೆ ಆಕೆ ಹೀಗೆಂದಳು : ಕಡಾರ ದ್ವೀಪದ ಮಾನವರ ಮಾಂಸ ಖಾರವೂ, ನಿಸ್ಸಾರವೂ ಆಗಿದೆ. ಅಲ್ಲಿಗೆ ಹೋಗುವುದು ಬೇಡ. ಸುವರ್ಣದ್ವೀಪದ ಮಾನವರ ಮಾಂಸವು ಅಮೃತೋಪಮವಾಗಿದೆ, ಅಲ್ಲಿಗೆ ಹೋಗಿರಿ ಎಂದು ಹೇಳಿದಳು. ಅದನ್ನು ಕೇಳಿ ರಾಕ್ಷಸಿಯರು ಅಕ್ಕಟ ! ಸ್ವರ್ಗವೇ ಎದುರು ಬಂದಿತು. ನಾವು ಅರಸುತ್ತಿರುವ ಬಳ್ಳಿ ಕಾಲಿಗೆ ತೊಡರಿತು ಎಂದು ಸಂತುಷ್ಟರಾಗಿ ಬಿಲದೊಳಗಿದ್ದ ಇಲಿಯನ್ನು ಹೊರಕ್ಕೆಳೆಯುವಂತೆ ಪೊಟ್ಟರೆಯಲ್ಲಿದ್ದ ಕುಮತಿಯ ಕಾಲನ್ನು ಹಿಡಿದು ತೆಗೆದು ಎರಡು ಸೀಳು ಮಾಡಿ ಕೊಂದು ತಿಂದರು. ಆದರಿಂದ ಈ ಕಥೆಯನ್ನು ತಿಳಿದು ಏನನ್ನೂ ಮಾತನಾಡದೆ ಬರಬೇಕು ಎಂದು ಕಲಹಂಸೆಗಳು ಆಮೆಗೆ ಬುದ್ಧಿ ಹೇಳಲು ಆಮೆಯು ಹಾಗೆಯೇ ಆಗಲಿ ಎಂದಿತು. ಕಲಹಂಸೆಗಳು ಬಲವಾದ ಒಂದು ದೊಣ್ಣೆಯನ್ನು ತಂದು ಅದರ ಎರಡು ಕಡೆಗಳನ್ನೂ ತಮ್ಮ ಕೊಕ್ಕಿನಿಂದ ಕಚ್ಚಿ ನಡುವೆ ಆಮೆಯನ್ನು ಕಚ್ಚಿಸಿಕೊಂಡು ಅನೇಕ ಗ್ರಾಮನಗರ ಖೇಟ ಖರ್ವಟ ಮಡಂಬ ಪತ್ತನ ದ್ರೋಣಾಮುಖಗಳನ್ನೂ, ಜನಪದಗಳನ್ನೂ ದಾಟಿ ಬರುತ್ತ ಪರಶುರಾಮನ ಬಾಣಾಘಾತದಿಂದ ಭಿನ್ನವಾದ ಕ್ರೌಂಚಾಚಲದ ಶಿಖರಪ್ರದೇಶವನ್ನು ನೋಡುತ್ತ ಅಲಕಾಪುರದ ಹೊರಭಾಗವನ್ನು ಸೇರಿದುವು. ಅಲ್ಲಿಯ ಜನರು ಕಂಡು ಇದೊಂದು ಬಂಡಿಯ ಗಾಲಿಯಂತಿರುವವನನ್ನು ಎರಡು ಕಲಹಂಸೆಗಳು ಕಚ್ಚಿಕೊಂಡು

ಗಾಲಿಯುಂತುಟನೆರಡು ಕಲಹಂಸೆಗಳ್ ಕರ್ಚಿಕೊಂಡು ಪೋದಪ್ಪುವಿದೊಂದಾಶ್ಚರ್ಯಮೆಂದು ಘೋರೆಂದಾಱುತ್ತುಂ ಬರ್ಪ ರಭಸಮಂ ಕೂರ್ಮಂ ಕೇಳ್ದೀ ಪಾಪಕರ್ಮರೆಮ್ಮಂ ವಿಚಾರಿಸುವುದು ತಮಗಾವ ಕಾರ್ಯಮೆಂದು ನುಡಿಯಲ್ ಬಗೆದು ಬಾಯಂ ತೆಗೆವುದುಂ ಅಚ್ಚು ಮುಱಿದ ಬಂಡಿಯಂತೆ ನುಚ್ಚುನುಱಿಯಾಗೆ ಬಿರ್ದುದಂ ಮಾಂಸಾಹಾರಿಗಳ್ ಕಂಡು ಕೊರಪ್ಪುಳ್ಳಿಯೊಳ್ ಮೋದಿ ಕೊಂದರ್, ಅದಱಿಂ,

ಶ್ಲೋ॥ ಸ್ನಿಗ್ಧಾನಾಂ ಹಿತಕರ್ತ್ರೂಣಾಂ ಯೋ ವಾಕ್ಯಂ ನಾಭಿನಂದತಿ
ಸ ಕೂರ್ಮ ಇವ ದುರ್ಬುದ್ಧಿಃ ಕಾಷ್ಠಾದ್ಭ್ರಷ್ಟೋ ವಿನಶ್ಯತಿ ॥೧೧॥

ಟೀ॥ ಹಿತಮಂ ಮಾಡುವ ಸ್ನೇಹಿತರ ಮಾತನಾವನೊರ್ವಂ ಕೇಳದೆ ಇರ್ಪನಾತಂ ಕಿಡುವಂ ಅದು ಹೇಗೆಂದೊಡೆ ಕಾಷ್ಠಮಂ ಬಿಟ್ಟು ಬಿರ್ದು ಸತ್ತ ಕೂರ್ಮನಂತೆಗೆ. ಎಂಬೀ ಕಥೆಯಂ ಕೇಳ್ದು ಚಂಡಪರಾಕ್ರಮನಿಂತೆಂದಂ : ತತ್ತಿಗಳಂ ನೀ ಪೆತ್ತಂದು ಚಿಂತಿಸಿಕೊಳ್ವಂ ನಿನ್ನಪ್ಪ ಕಜ್ಜಕ್ಕೆ ಮುನ್ನಮೆ ಮಱುಗುವುದಿದಾವ ಕಾರಣಮೆನೆ ಮಧುರಾಲಾಪೆ ಮತ್ತಿಂತೆಂದಳ್ : ನಿನಗಿನಿತಪ್ಪ ದುರ್ಬುದ್ಧಿ ಪುಟ್ಟಿತಾದೊಡಂ ಯುದ್ಧವಿಷ್ಯನೆಂಬ ಮತ್ಸ್ಯದ ಕಥೆಯಂ ಕೇಳೆಂದು ಪೇೞ್ದುದು. ಅದೆಂತೆನೆ :

೨೩. ಯುದ್ಭವಿಷ್ಯನೆಂಬ ಮತ್ಸ್ಯದ ಕಥೆ

ಮಹಾನದಿಯ ಮಡುವಿನೊಳನಾಗತಮತಿಯುಮುತ್ಪನ್ನಮತಿಯುಂ ಯುದ್ಭವಿಷ್ಯನುಮೆಂಬ ಪೆಸರ ಮೂಱು ಮತ್ಸ್ಯಂಗಳ್ ಮತ್ಸ್ಯಪ್ರಧಾನರಾಗಿರ್ಪುವು. ಅಲ್ಲಿಗೊಂದು ದಿವಸಂ ಜಾಲಗಾಱರ್ ಬಂದು ಆ ಮಡುವಿನೊಳ್ ಪಲವು ಮತ್ಸ್ಯಂಗಳೊಳವಿಲ್ಲಿಗೆ ನಾಳೆ ಬಂದು ಜಾಲಮಂ ಬೀಸಿ ಮತ್ಸ್ಯಂಗಳಂ ಪಿಡಿವಮೆಂದು ನುಡಿದ ಮಾತನನಾಗತಮತಿ ಕೇಳ್ದು ಮತ್ತಿನ ಮತ್ಸ್ಯದ್ವಯದಲ್ಲಿಗೆ ಬಂದು ತತ್ಪ್ರಪಂಚಮನೆಲ್ಲಮಂ ಪೇೞ್ದು ನಮಗಿಲ್ಲಿರಲ್ಬಾರದು ಪೆಱತೊಂದು ಮಡುವಿಗೆ ಪೋಪಂ

ಹೋಗುತ್ತಿವೆ, ಇದೊಂದು ಆಶ್ಚರ್ಯ ಎನ್ನುವ ಮಾತನ್ನು ಕೂರ್ಮವು ಕೇಳಿತು. ಈ ಪಾಪಕರ್ಮರು ನಮ್ಮನ್ನೇಕೆ ವಿಚಾರಿಸಬೇಕು ಎಂದು ನುಡಿಯಬೇಕೆಂದು ಬಾಯಿಯನ್ನು ತೆರೆಯಲು ಅಚ್ಚು ಮುರಿದ ಬಂಡಿಯಂತೆ ನುಚ್ಚುನುರಿಯಾಗಿ ಬಿದ್ದುದನ್ನು ಮಾಂಸಾಹಾರಿಗಳು ಕಂಡು ಕಟ್ಟಿಗೆಯಿಂದ ಮೋದಿ ಕೊಂದರು. ಅದರಿಂದ ಕಾಷ್ಠವನ್ನು ಬಿಟ್ಟು ಕೆಟ್ಟ ಕೂರ್ಮನಂತೆ ಶ್ಲೋ॥ ಹಿತವನ್ನು ಮಾಡುವ ಸ್ನೇಹಿತರ ಮಾತನ್ನು ಯಾವನು ಕೇಳದಿರುವನೋ ಅವನು ಕೆಡುವನು. ವ॥ ಈ ಕಥೆಯನ್ನು ಕೇಳಿ ಚಂಡಪರಾಕ್ರಮನು ಹೀಗೆಂದನು : ತತ್ತಿಗಳನ್ನು ನೀನು ಹೆತ್ತಂದು ಯೋಚಿಸೋಣ. ಮುಂದೆ ಆಗಲಿರುವ ಕಾರ್ಯಕ್ಕೆ ಈಗಲೇ ಚಿಂತಿಸುವುದೇಕೆ. ಮಧುರಾಲಾಪೆ ಮತ್ತೆ ಹೀಗೆಂದಳು : ನಿನಗೆ ಇಂಥ ದುರ್ಬುದ್ಧಿ ಹುಟ್ಟಿದ್ದಾದರೆ ಯುದ್ಭವಿಷ್ಯನೆಂಬ ಮತ್ಸ್ಯದ ಕಥೆಯನ್ನು ಕೇಳು ಎಂದು ಹೇಳಿತು. ಮಹಾನದಿಯ ಮಡುವಿನಲ್ಲಿ ಅನಾಗತಮತಿ, ಉತ್ಪನ್ನಮತಿ, ಯುದ್ಭವಿಷ್ಯ ಎಂಬ ಮೂರು ಮತ್ಸ್ಯಗಳು ಮತ್ಸ್ಯಗಳಿಗೆಲ್ಲ ಪ್ರಧಾನವಾಗಿದ್ದುವು. ಅಲ್ಲಿಗೊಂದು ದಿನ ಜಾಲಗಾರರು ಬಂದು ಈ ಮಡುವಿನಲ್ಲಿ ಹಲವು ಮತ್ಸ್ಯಗಳಿವೆ. ಇಲ್ಲಿಗೆ ನಾಳೆ ಬಂದು ಜಾಲವನ್ನು ಬೀಸಿ ಮೀನುಗಳನ್ನು ಹಿಡಿಯೋಣ ಎಂದು ನುಡಿದ ಮಾತನ್ನು ಅನಾಗತಮತಿ ಕೇಳಿ ಮತ್ತೆರಡು ಮತ್ಸ್ಯಪ್ರಧಾನರಲ್ಲಿಗೆ ಬಂದು ಆ ವೃತ್ತಾಂತವನ್ನೆಲ್ಲ ಹೇಳಿ ನಾವಿಲ್ಲಿರುವುದು ತರವಲ್ಲ ಬೇರೊಂದು ಮಡುವಿಗೆ ಹೋಗೋಣ ಬನ್ನಿ ಎಂದಿತು. ಅವಕ್ಕೆ ಉತ್ಪನ್ನಮತಿ

ಬನ್ನಿಮೆಂದೊಡುತ್ಪನ್ನಮತಿ ಮುನ್ನಮೆ ಪೋಗದೊಡೇಂ ಅವರ್ಬಂದಾಗಳೇ ಬಗೆದುಕೊಳಲ್ಬರ್ಕುಮೆಂಬುದುಂ ಯದ್ಭವಿಷ್ಯಂ ಇಂತುಟಪ್ಪೆಡೆಯನೆಲ್ಲಿಯುಂ ಪಡೆಯಲ್ಬಾರದು ತನ್ನಪ್ಪುದಕ್ಕೆ ಇಲ್ಲಿಂದಂ ಪೋಗಲ್ವೇಡೆಂದೊಡೆ ಅವರನೊಡಂಬಡಿಸಲಾಱದನಾಗತಮತಿ ತನ್ನ ಸಮೂಹಂಬೆರಸು ಪೆಱತೊಂದೆಡೆಗೆ ಪೋಪುದುಂ ಮಱುದಿವಸಮಾ ಜಾಲಗಾಱರ್ ಬಂದು ಜಾಲಮಂ ಬೀಸುವುದುಂ ಆ ಬಲೆಯೊಳುತ್ಪನ್ನಮತಿ ತೊಡರ್ದು ತನ್ನ ಪೆಸರಂ ನೆನೆದುಸಿರನೊಳತೆಗೆದಸು ಪೋದಂತೆ ಮಿಸುಕದಿರ್ಪುದುಂ ಮೀಂಗುಲಿಗರ್ ಬಲೆಯಂ ತೆಗೆದು ನೋಡಿ ಮುನ್ನಮೆ ಸತ್ತಂತಿರ್ದುತ್ಪನ್ನಮತಿಯಂ ಕಂಡು ಬಲೆಯಿಂ ತೆಗೆದು ನೆಲದೊಳಿರಿಸುವುದುಮದು ಪೊಳೆದು ಜಳದೊಳ್ ಮುೞುಂಗಿ ಪೋದುದು. ಯದ್ಭವಿಷ್ಯಂ ಮತ್ತೊಂದು ಬಲೆಯೊಳ್ ಸಿಲ್ಕಿ ತಲೆಯಂ ಬಡಿಯುತ್ತಿರ್ದುದಂ ಮೀಂಗುಲಿಗಂ ಕಂಡು ನೆಲದೊಳಪ್ಪಳಿಸಿ ಕೊಂದಂ ಅದಱಿಂ

ಶ್ಲೋ॥ ಅನಾಗತ ವಿಧಾತಾ ಚ ಪ್ರತ್ಯುತ್ಪನ್ನಮತಿಸ್ತಥಾ
ದ್ವಾವಿಮೌ ಸುಖಮೇಧೇತೇ ಯದ್ಭವಿಷ್ಯೋ ವಿನಶ್ಯತಿ ॥೧೧೧॥

ಟೀ॥ ಮುಂದೆ ಬಹುದನಱಿವವನುಂ ಬಂದುದರ್ಕೆ ತಕ್ಕುದಂ ನಿಶ್ಚೈಸಬಲ್ಲವನುಂ ಈಯಿರ್ಬರೇ ಸುಖಂಬಡುವರ್ ; ಬಂದುದಂ ಬರಲಿಯೆಂದಿರ್ದವಂ ಕಿಡುವಂ. ಎಂಬೀ ಕಥೆಯಂತೆನ್ನ ಮಾತಂ ಕೇಳದೆ ನೀನುಂ ಯದ್ಭವಿಷ್ಯನಾದೆ ಎಂದು ನುಡಿಯೆ ಚಂಡಪರಾಕ್ರಮನಿಂತೆಂದಂ :

ಪೆಂಡಿರ ಮಾತಂ ಸಲೆ ಕೈ
ಕೊಂಡವರಭಿಮತದೆ ನಡೆವನಪ್ಪೊಡೆ ಗಂಡಂ
ಗಂಡನಣಮಾಗಲಱಿಯಂ
ಭಂಡಂ ಪೇೞ್ ಷಂಡನಕ್ಕುಮಾ ಚಂಡಾಲಂ ೨೨೧

ಮೊದಲೇ ಯಾಕೆ ಹೋಗಬೇಕು ; ಅವರು ಬಂದಾಗಲೇ ಯೋಚಿಸಿಕೊಂಡರಾಯಿತು ಎಂದಿತು. ಯದ್ಭವಿಷ್ಯವು ಇಂಥ ಸುರಕ್ಷಿತವಾದ ಸ್ಥಳ ಎಲ್ಲಿಯೂ ಸಿಕ್ಕದು ; ಆಗುವುದಾಗಲಿ ಇಲ್ಲಿಂದ ಹೋಗುವುದು ಬೇಡ ಎನ್ನಲು ಅವರಿಬ್ಬರನ್ನು ಒಡಂಬಡಿಸುವುದು ಅಸಾಧ್ಯವೆಂದು ಅನಾಗತಮತಿ ತನ್ನ ಗುಂಪನ್ನು ಕರೆದುಕೊಂಡು ಬೇರೊಂದು ಕಡೆಗೆ ಹೋಯಿತು. ಮರುದಿನ ಆ ಜಾಲಗಾರರು ಬಂದು ಬಲೆ ಬೀಸಲು ಆ ಬಲೆಯಲ್ಲಿ ಉತ್ಪನ್ನಮತಿ ಸಿಕ್ಕಿಬಿದ್ದು ತನ್ನ ಹೆಸರನ್ನು ನೆನೆದು ಶ್ವಾಸ ಕಟ್ಟಿ ಪ್ರಾಣಹೋದಂತೆ ಅಲ್ಲಾಡದಿರಲು ಮೀಂಗುಲಿಗರು ಬಲೆಯನ್ನು ತೆಗೆದು ನೋಡಿ ಮೊದಲೇ ಸತ್ತಂತಿದ್ದ ಉತ್ಪನ್ನಮತಿಯನ್ನು ಕಂಡು ಬಲೆಯಿಂದ ತೆಗೆದು ನೆಲದ ಮೇಲೆ ಹಾಕಲು ಅದು ಹೊಳೆದು ಜಲದಲ್ಲಿ ಮುಳುಗಿಹೋಯಿತು. ಯದ್ಭವಿಷ್ಯವು ಮತ್ತೊಂದು ಬಲೆಯಲ್ಲಿ ಸಿಕ್ಕಿ ತಲೆ ಬಡಿಯುತ್ತಿರುವುದನ್ನು ಬೆಸ್ತನು ಕಂಡು ನೆಲಕ್ಕೆ ಅಪ್ಪಳಿಸಿ ಕೊಂದನು. ಆದರಿಂದ ಶ್ಲೋ॥ ಮುಂದಾಗುವುದನ್ನು ಅರಿಯುವವನೂ, ಬಂದುದಕ್ಕೆ ತಕ್ಕ ಉಪಾಯವನ್ನೂ ನಿಶ್ಚಯಿಸುವವನೂ ಈ ಇಬ್ಬರೇ ಸುಖಪಡುವವರು. ಬಂದುದು ಬರಲಿ ಎಂದು ಸುಮ್ಮನಿರುವವನು ಕೆಡುವನು ವ॥ ಎಂಬ ಕಥೆಯಂತೆ ನನ್ನ ಮಾತನ್ನು ಕೇಳದೆ ನೀನೂ ಯದ್ಭವಿಷ್ಯನಾದೆ ಎಂದು ನುಡಿಯಲು ಚಂಡಪರಾಕ್ರಮನು ಹೀಗೆಂದನು : ೨೨೧. ಹೆಂಡಿರ ಮಾತನ್ನು ಕೇಳಿ ಅವರ ಅಭಿಪ್ರಾಯದಂತೆ ನಡೆಯುವ

ಅದಱಿನ್ನಾವುದುಮಂ ನಾನೆ ಬಲ್ಲೆಂ. ನೀನುಸಿರದಿರೆಂದು ವಲ್ಲಭೆಯಂ ಕಲ್ಸರದಿಂ ನುಡಿದು ಮೂಣಿಸುವುದುಂ ಮಧುರಾಲಾಪೆ ಮಱುದಿವಸಂ ತತ್ತಿಗಳಂ ಪೆತ್ತು ಬಳಿಕ್ಕೆ ನಿಜಪ್ರಾಣೇಶ್ವರನುಂ ತಾನುಂ ಕುಡುಕಂ ಕೊಳಲಡವಿಗೆ ಪೋಪುದುಮನ್ನೆಗಮಾ ಸಮುದ್ರಂ ವೇಲೆಯೆತ್ತಿ ತತ್ತಿಗಳಂ ತನ್ನ ತೆರೆಗೈಗಳಿಂ ಮೆಲ್ಲನೆ ತೆಗೆದು ತಂದಾಗಳ್ ಮತ್ತೊಂದುತ್ತಮಮಪ್ಪೆಡೆಗೆ ಸಾರ್ಚಲನ್ನೆಗಂ ಟಿಟ್ಟಿಭ ಮಿಥುನಂ ಕಿಱಿದಾನುಂ ಬೇಗದಿಂ ಬಂದು ತಮ್ಮಿರ್ಕೆಗೆ ಪೋಗಲಲ್ಲಿ ತತ್ತಿಗಳಂ ಕಾಣದೆ ಬೆಕ್ಕಸಂಬಟ್ಟು ಮಱುಗಿ ಮಧುರಾಲಾಪೆ ವಿಪ್ರಲಾಪಂಗೆಯ್ಯೆ ಚಂಡಪರಾಕ್ರಮನಿಂತೆಂದಂ :

ಚಂಡಪರಾಕ್ರಮವೆಸರಂ
ಕೊಂಡಿರ್ದೆನ್ನಳವನಱಿದುಮಱಿಯದೆ ವೈರಂ
ಗೊಂಡೀ ಕಡಲಂ ತವೆ ಪೀ
ರ್ದಂಡಂಗಳನಱಸಿ ತಂದು ನಿನಗಾನೀವೆಂ ೨೨೨

ಬಗೆಯದಿರಾ ನಿನ್ನಯ ತ
ತ್ತಿಗಳಂ ಸಾಗರಮನೊತ್ತಿ ತಂದಾನೀವೆಂ
ಪಗೆಗೊಂಡು ಕುಡದೆ ತಡೆದಂ
ದಗಸ್ತ್ಯನುಱ್ ಪೀರ್ದ ತೆಱದೆ ಕಡಲಂ ಪೀರ್ವೆಂ ೨೨೩

ಎಂದು ಮೂಣದೆ ಬಕ ಕಾಕ ಕೋಕಿಲ ಶುಕ ಚಕ್ರವಾಕ ಚಕೋರ ಕರ್ಕರ ಶ್ಯೇನ ಕಪೋತ ಹಂಸ ಕಾರಂಡ ಭೇರುಂಡಾದಿ ಸಮಸ್ತ ವಿಹಂಗಮ ಜಾತಿಗಳೆಲ್ಲಮಂ ನೆರಪಿ ತನ್ನ ತತ್ತಿಗಳಂ ಸಮುದ್ರನೆತ್ತಿಕೊಂಡುಯ್ದನೆಂದು ಪುಯ್ಯಲಿಡುವುದುಂ ಪಕ್ಷಿಗಣಂಗಳಿದನುಪೇಕ್ಷಿಸಲಾಗದು ಎಮಗೆ ಕುಲಸ್ವಾಮಿಯಪ್ಪ ಗರುಡಂಗಱಿಪಲ್ವೇಳ್ಕುಮೆಂದೆಲ್ಲಮೊಂದಾಗಿ ಪೋಗಿ,

ಗಂಡ ಗಂಡನಲ್ಲ ; ಅವನು ಭಂಡ, ಷಂಡ, ಚಂಡಾಲ, ವ|| ಅದರಿಂದ ಯಾವುದನ್ನು ನಾನೇ ಬಲ್ಲೆ ; ನೀನು ಸುಮ್ಮನಿರು ಎಂದು ವಲ್ಲಭೆಯನ್ನು ಕಠೋರ ಸ್ವರದಿಂದ ಪ್ರತಿಭಟಿಸಿದನು. ಮಧುರಾಲಾಪೆ ಮರುದಿನ ತತ್ತಿಗಳನ್ನು ಹೆತ್ತು ಬಳಿಕ ತಾನೂ ತನ್ನ ಗಂಡನೂ ಗುಟುಕನ್ನು ಕೊಡಲು ಅಡವಿಗೆ ಹೋದಾಗ ಸಮುದ್ರವು ದಡ ಮೀರಿ ಬಂದು ತನ್ನ ತೆರೆಗೈಗಳಿಂದ ತತ್ತಿಗಳನ್ನು ಮೆಲ್ಲಗೆ ತೆಗೆದುಕೊಂಡು ಬಂದು ಮತ್ತೊಂದು ಉತ್ತಮವಾದ ಸ್ಥಳದಲ್ಲಿಟ್ಟಿತು. ಅಷ್ಟರಲ್ಲಿ ಟಿಟ್ಟಿಭಗಳು ಬಂದು ತಮ್ಮ ಗೂಡಿಗೆ ಹೋಗಿ ಅಲ್ಲಿ ತತ್ತಿಗಳನ್ನು ಕಾಣದೆ ಮರುಗಿ ಮಧುರಾಲಾಪೆ ಪ್ರಲಾಪಿಸಲು ಚಂಡಪರಾಕ್ರಮನು ಹೀಗೆಂದನು! ೨೨೨. ಚಂಡಪರಾಕ್ರಮನೆಂಬ ಹೆಸರು ಹೊತ್ತಿರುವ ನನ್ನ ಸಾಮರ್ಥ್ಯವನ್ನು ಅರಿಯದೆ ವೈರದಿಂದ ವರ್ತಿಸಿದ ಈ ಕದಲನ್ನು ಕುಡಿದು ಅಂಡಗಳನ್ನು ಹುಡುಕಿ ತಂದುಕೊಡುವೆ. ನೀನು ಚಿಂತಿಸದಿರು ; ಆ ಸಾಗರವನ್ನು ಒತ್ತಿ ನಿನ್ನ ತತ್ತಿಗಳನ್ನು ತಂದುಕೊಡುವೆ ; ಇಲ್ಲದಿದ್ದರೆ ಆ ಅಗಸ್ತ್ಯನಂತೆ ಕಡಲನ್ನು ಹೀರುವೆ ! ವ|| ಬಕ, ಕಾಕ, ಕೋಕಿಲ, ಶುಕ, ಚಕ್ರವಾಕ, ಚಕೋರ, ಕರ್ಕರ, ಶ್ಯೇನ, ಕಪೋತ, ಹಂಸ, ಕಾರಂಡ, ಭೇರುಂಡಾದಿ ಸಮಸ್ತ ಪಕ್ಷಿಜಾತಿಗಳನ್ನೆಲ್ಲ ಸೇರಿಸಿ ತನ್ನ ತತ್ತಿಗಳನ್ನು ಸಮುದ್ರ ಎತ್ತಿಕೊಂಡು ಹೋಯಿತು ಎಂದು ಹುಯ್ಯಲಿಟ್ಟಿತು. ಪಕ್ಷಿಗಳು ಇದನ್ನು ಉಪೇಕ್ಷಿಸಬಾರದೆಂದು ನಮಗೆ ಕುಲಸ್ವಾಮಿಯಾದ

ಕನಕನಿಭಪ್ರಭಾಂಘ್ರಿಯುಗನಂ ತುಹಿನಾಚಲವರ್ಣಮಧ್ಯದೇ
ಹನನುದಿತಾರುಣಪ್ರತಿಮಕಂಠನನಂಜನಮೇಚಕೋರುಮೂ
ರ್ಧನನತುಲಪ್ರತಾಪವಿಜಿತೋದ್ಧತ ವಿಶ್ವಮರುನ್ನಿಕಾಯನಂ
ವಿನಿಹತಕಾದ್ರವೇಯನನಜೇಯನನೂರ್ಜಿತವೈನತೇಯನಂ ೨೨೪

ಅಂತು ಕಂಡು ಪೊಡೆಮಟ್ಟು ಸಮುದ್ರನ ದೆಸೆಯಿಂ ತಮಗಾದುಪದ್ರವಮನಱಿಪೆ, ತದುಪದ್ರವಪ್ರತೀಕಾರವಿಧಾನಸಮರ್ಥನವಿಳಕಾದ್ರವೇಯ ವಿದ್ರಾವಣಂ ಸಕಲ ಶಕುನಿಗಣಸಮೇತಂ ಕ್ಷೀರಪಾರಾವಾರಾಭಿಮುಖನಾಗಿ ಭಾಸುರಸುರಾಸುರಶಿರೋಮಣಿ ಮರೀಚಿಮಾಲಾಲಂಕೃತ ಚಾರುಚರಣಾರವಿಂದನಂ ಲಕ್ಷ್ಮೀಕುಚಕುಂಭಕುಂಕುಮಪಂಕಾರುಣೀಭೂತವಿಶಾಲವಕ್ಷಃಸ್ಥಳನಂ ಮಧುಮುಖ್ಯಾಸುರವಧೂಜನಾಕ್ರಂದನ ನಯನ ವಾರಿಧಾರಾಪೂರ ಪರಿಪೂತ ನಿರಾಕೃತ ಕಲುಷ ಶಿಖಿಶಿಖಾಕಲಾಪನಂ ಭೌಮ ಭಾಮಾಭರಣಭಂಜನ ವಿಧಾನ ಸಮರ್ಥನಂ ಹಿರಣ್ಯಕಶಿಪು ಮಹಾದಾನವ ವಕ್ಷಃಸ್ಥಳಸ್ಥಿತ ವಜ್ರಾಯಿತ ನಖರಾಲಿಯಂ ವಜ್ರಪಾಷಾಣ ವಿಷಮಿತ ಶಂಖಚಕ್ರಧರನಂ ಪಿತಾಮಹಾದಿಮುನಿಗಣಸ್ತೂಯಮಾನಶುಭಚರಿತನಂ ನಿಜಪ್ರತಾಪ ಸಂತೋಷಿತದನುಜವೃಂದಲತಾ ಕಂದನಂ ಮುಕುಂದನಂ ಕಂಡು ಕೈಗಳಂ ಮುಗಿದು.

ಗರುಡನಿಗೆ ತಿಳಿಸಬೇಕು ಎಂದು ಹೋದುವು. ೨೨೪. ಚಿನ್ನದ ಕಾಂತಿಗೆ ಸಮನಾದ ಕಾಲುಗಳುಳ್ಳವನೂ, ಹಿಮಾಚಲದಂತೆ ಬೆಳ್ಳಗಿರುವ ದೇಹದ ಮಧ್ಯಭಾಗವಿರುದವನೂ ಅರುಣ ಕಂಠವುಳ್ಳವನೂ ಕಪ್ಪು ಮತ್ತು ಪಚ್ಚೆ ಬಣ್ಣದ ತೊಡೆ ಹಾಗೂ ಶಿರಸ್ಸುಳ್ಳವನೂ ಅಸಾಧ್ಯವಾದ ಪರಾಕ್ರಮದಿಂದ ವಾಯುವನ್ನು ಗೆದ್ದವನೂ ಹಾವನ್ನು ಕೊಂದವನೂ ಆದ ಗರುಡನನ್ನು ವ॥ ಕಂಡು ನಮಸ್ಕರಿಸಿ ಸಮುದ್ರನ ದೆಸೆಯಿಂದ ತಮಗಾದ ಉಪದ್ರವವನ್ನು ನಿವೇದಿಸಿಕೊಂಡವು. ಆಗ ವೈನತೇಯನು ಸಕಲ ಪಕ್ಷಿ ಸಂಕುಲದೊಂದಿಗೆ ಕ್ಷೀರಸಾಗರದ ಕಡೆಗೆ ಹಾರಿ ಹೊಳೆಯುವ ಸುರಾಸುರರ ಶಿರೋಮಣಿಯ ಕಾಂತಿಸಮೂಹದಿಂದ ಅಲಂಕೃತವಾದ ಚಾರುಚರಣನೂ, ಲಕ್ಷ್ಮೀಕುಚಕುಂಭ ಕುಂಕುಮಪಂಕದಿಂದ ಕೆಂಪಾದ ವಿಶಾಲ ವಕ್ಷಃಸ್ಥಳನೂ, ಮಧು ಮೊದಲಾದ ರಾಕ್ಷಸರ ಹೆಂಡಿರ ದುಃಖದ ಕಾರಣದಿಂದ ಬಂದ ಕಣ್ಣೀರ ಪ್ರವಾಹದಿಂದ ನಿವಾರಿತವಾದ ಕಲುಷವೆಂಬ ನವಿಲಿನ ಜುಟ್ಟಿನಿಂದ ಅಲಂಕರಿಸಿಕೊಂಡವನೂ ಭೂಕಾಂತಾಭರಣ ಧರಿಸುವುದರಲ್ಲಿ ಸಮರ್ಥನೂ ಹಿರಣ್ಯಕಶಿಪು ಎಂಬ ಮಹಾದೈತ್ಯನ ವಕ್ಷಃಸ್ಥಳದಲ್ಲಿ ವಜ್ರನಖವನ್ನು ಇಟ್ಟವನೂ ವಜ್ರಪಾಷಾಣ ವಿಷಮಿತ ಶಂಖ ಚಕ್ರಧರನೂ ಬ್ರಹ್ಮನೇ ಮೊದಲಾದ ಮುನಿಸಮೂಹದಿಂದ ಸ್ತುತಿಸಿದ ಶುಭಚರಿತನೂ, ತನ್ನ ಪ್ರತಾಪದಿಂದ ರಾಕ್ಷಸರೆಂಬ ಲತೆಯ ಬೇರನ್ನೇ ಒಣಗಿಸಿದವನೂ ಆದ ಮುಕುಂದನನ್ನು ಕಂಡು ಕೈಮುಗಿದು

(ಪದ್ಯ೯)

ಜಯ ದಿವಿಜಗಣಾರ್ಚಿತ ಚಾರುಚರಣ
ದುರಿತೋಗ್ರತಮಃಪಟಲೋಷ್ಣಕಿರಣ
ತಾಪಿಂಛಸಮಚ್ಛವಿ ನೀಲವರ್ಣ
ವಿದ್ಯಾಧರ ಕಾಂತಾ ಗೀತವರ್ಣ
ರಾಮಾವದನಾಂಬುಜಮತ್ತಭೃಂಗ
ವರಕೌಸ್ತುಭಭೂಷಣಭೂಷಿತಾಂಗ
ಮಧುಕೈಟಭಪಾದಪ ಘನಕುಠಾರ

ಲಕ್ಷ್ಮೀಕುಚಮಂಡನತಾರಹಾರ
ನರಕಾಸುರಮದಕರಿ ಪಂಚವದನ
ಕುಸುಮಾಯುಧನುಂಗಳ್ ಜನ್ಮಸದನ
ಕಂಸಾಸುರಹಂಸಪಯೋದಕಾಲ
ಶಕಟಾಸುರಪ್ರಕಟ ವಿಲಯಕಾಲ

ಕೃತಬಾಣಭಯಂಕರ ದರ್ಪಭಂಗ
ಚಾಣೂರ ಸರೋರುಹ ಮದಮಾತಂಗ
ನಖಭಿನ್ನ ಹಿರಣ್ಯಕಶಿಪು ಶರೀರ
ಜಠರಾಂತರ್ವಿನಿಹಿತಭುವನಭಾರ

ಖಳಧೇನುಕಕಾನನ ಕೃಷ್ಣಮಾರ್ಗ
ವಿತ್ರಸ್ತ ಸಮಸ್ತ ನಿಶಾಟವರ್ಗ
ಕೋಪಾನಲಮಗ್ನ ಸುರಾರಿಶಲಭ
ಘನಭಕ್ತಿ ಸಮನ್ವಿತಯೋಗಿಸುಲಭ

ಬಗೆಬಗೆಯಿಂದ ಹೀಗೆ ಸ್ತುತಿಸಿದನು : ದೇವತೆಗಳಿಂದ ಅರ್ಚಿತವಾದ ಚಾರುಚರಣನಿಗೆ ಜಯವಾಗಲಿ. ಪಾಪವೆಂಬ ಅಂಧಕಾರಕ್ಕೆ ಸೂರ್ಯನಾಗಿರುವವನೂ, ತಮಾಲವೃಕ್ಷದ ನೀಲಬಣ್ಣದವನೂ, ವಿದ್ಯಾಧರಿಯರ ಗೀತೆಗಳ ವರ್ಣವನ್ನುಳ್ಳವನೂ ಲಕ್ಷ್ಮಿಯ ಮುಖಕಮಲಕ್ಕೆರಗಿದ ಸೊಕ್ಕಿದ ತುಂಬಿಯಾಗಿರುವವನೂ, ಶ್ರೇಷ್ಠ ಕೌಸ್ತುಭ ಎಂಬ ರತ್ನವನ್ನು ತೊಟ್ಟ ಅಂಗವುಳ್ಳವನೂ, ಮಧುಕೈಟಭರೆಂಬ ವೃಕ್ಷಕ್ಕೆ ಮಹಾಕುಠಾರನೆನಿಸಿದವನೂ, ಲಕ್ಷ್ಮೀಕುಚಮಂಡನ ತಾರಹಾರನೂ ನರಕಾಸುರನೆಂಬ ಮದ್ದಾನೆಗೆ ಸಿಂಹಪ್ರಾಯನೂ ಮದನಜನಕನೂ ಕಂಸಾಸುರನೆಂಬ ಹಂಸಕ್ಕೆ ಮಳೆಗಾಲವಾಗಿರುವವನೂ ಶಕಟಾಸುರನಿಗೆ ಪ್ರಳಯಕಾಲನೂ ಬಾಣಾಸುರನ ದರ್ಪವನ್ನು ಮುರಿದವನೂ ಚಾಣೂರನೆಂಬ ಕಮಲಕ್ಕೆ ಮದ್ದಾನೆಯಾದವನೂ ಹಿರಣ್ಯಕಶಿಪುವಿನ ಶರೀರವನ್ನು ಉಗುರುಗಳಿಂದ ಭೇದಿಸಿದವನೂ ಭುವನಭಾರವನ್ನೆಲ್ಲ ಹೊಟ್ಟೆಯಲ್ಲಿ ಹೊತ್ತವನೂ ಧೇನುಕಾಸುರನೆಂಬ ಕಾಡಿಗೆ ಕಿಚ್ಚಾದವನೂ ಸಮಸ್ತ ರಾಕ್ಷಸರನ್ನು ನಾಶಮಾಡಿದವನೂ ರಾಕ್ಷಸರೆಂಬ ಕೀಟಗಳನ್ನು ತನ್ನ ಕೋಪಾನಲಕ್ಕೆ ಬೀಳಿಸಿದವನೂ, ಘನಭಕ್ತಿಯಿಂದ ಕೂಡಿದ ಯೋಗಿ ಜನಗಳಿಗೆ ಸುಲಭನೂ

ಉತ್ಪಾಟಿತ ಕಾಳೀಯ ಭುಜಗದಂತ
ದಿತಿಜೋತ್ತಮ ಸಮುದಿತಸುಕೃತಾಂತ
ಮಂದಾರರಜೋಂಚಿತ ಮಣಿಕಿರೀಟ
ಬಳಭೀಕರ ಮುಷ್ಟಿಕ ಕಾಳಕೂಟ

ಪರಶೌರ್ಯವಿನಿರ್ಜಿತ ಕಾರ್ತವೀರ್ಯ
ಚಲಿತೋನ್ನತ ಮಂದರ ಕಂಧರಧೈರ್ಯ
ಸರ್ವೇಶ್ವರ ಸರ್ವಗ ದೇವದೇವ
ಸರ್ವಜ್ಞ ನಮಸ್ತೇ ವಾಸುದೇವ ೨೨॥

ಎಂದು ದೇವದೇವನನನೇಕಪ್ರಕಾರದಿಂ ಸ್ತುತಿಸಿ ಸಾಷ್ಟಾಂಗವೆರಗಿ ಪೊಡೆಮಟ್ಟು ಮುಂದೆ ನಿಂತ ಪತತ್ರಿಗೋತ್ರಾಧಿಪತಿಯ ಮೊಗಮಂ ದಾಮೋದರನಾದರಂಬೆರಸು ನೋಡಿ ನೀನೆಂದಿನಂದಮಲ್ಲಿಂದು ನಿನ್ನ ಗೋತ್ರಸಮೇತಂ ಬಂದ ಕಾರಣಮಾವುದೆನೆ ವಿನತಾನಂದನಿಂತೆಂದು ಬಿನ್ನಪಂಗೆಯ್ವಂ : ಈ ಟಿಟ್ಟಿಭನ ತತ್ತಿಗಳಂ ವಾರಿಧಿ ಮೇರೆದಪ್ಪಿ ಕೊಂಡುಯ್ದೊಡೆ ಪುಯ್ಯಲಿಡಲ್ಬಂದೆವೆಂಬುದುಂ ಮುಕುಂದಂ ಮುಗುಳ್ನಗೆ ನಗುತ್ತುಂ ಇದಾವ ಕಾರ್ಯಮೆಂದಿಂತಪಹಾಸ್ಯಂಗೆಯ್ವೆ ವಿನತಾನಂದನಂ ಮತ್ತಮಿಂತೆಂದು ಬಿನ್ನಪಂಗೆಯ್ವಂ :

ಶ್ಲೋ ॥ ಆಶಾಃ ಪೂರಯಿತುಂ ಗುಣಾನ್ ಪ್ರಕಟಿತುಂ ಮಾನೋನ್ನತಿಂ ರಕ್ಷಿತುಂ
ಕಾರ್ಯಂ ಸಾಧಯಿತುಂ ಖಲಾನ್ ಸ್ಖಲಯಿತುಂ ಲಕ್ಷ್ಮೀಂ ಸಮಾಸೇವಿತುಂ
ಸ್ವಪ್ರಾಣೈಃ ಪರಿಕಲ್ಪಿತಾಂಜಲಿಜಲೈಃ ವಿಕ್ರೀಯ ದೇಹಸ್ಥಿತಿಂ
ಸಂತೋ ಭೂಪತಿಮಾಶ್ರಯಂತಿ ನ ಪುನರ್ದೈನ್ಯಾಯ ದುಃಖಾಯ ಚ ॥೧೧೨॥

ಟೀ॥ ಬಯಕೆಯಂ ತೀರ್ಚಲುಂ ಗುಣಮಂ ಪ್ರಕಟಿಸಲುಂ ಅಭಿಮಾನದ ಪೆರ್ಚಂ ರಕ್ಷಿಸಲುಂ ಕಾರ್ಯಮಂ ಸಾಧಿಸಲುಂ ದುರ್ಜನರಂ ಕಿಡಿಸಲುಂ ಶ್ರೀಯುಂ ಲೇಸಾಗಿ ಭೋಗಿಸಲುಂ

ಕಾಳೀಯನಾಗನ ಹಲ್ಲನ್ನು ಕಿತ್ತವನೂ ಶ್ರೇಷ್ಠ ರಾಕ್ಷಸರ ಕೊಬ್ಬಿದ ದೇಹಕ್ಕೆ ಯಮನ ಸ್ವರೂಪನೂ ಮಂದಾರ ಪರಾಗಗಳಿಂದ ಕೂಡಿದ ರತ್ನಕಿರೀಟವುಳ್ಳವನೂ ಬಲಭೀಕರನಾದ ಮುಷ್ಟಿಕನಿಗೆ ವಿಷಪ್ರಾಯನೂ ಕಾರ್ತವೀರ್ಯನನ್ನು ಶೌರ್ಯದಿಂದ ನಾಶಮಾಡಿದವನೂ ಉನ್ನತ ಮಂದರಪರ್ವತವನ್ನು ಚಲಿಸುವಂತೆ ಮಾಡುವ ಧೈರ್ಯವುಳ್ಳವನೂ ಸರ್ವೇಶ್ವರನೂ ಸರ್ವಗಮ್ಯನೂ ದೇವದೇವನೂ ಸರ್ವಜ್ಞನೂ ಆದ ವಾಸುದೇವನಿಗೆ ನಮಸ್ಕಾರ. ವ॥ ಈ ರೀತಿ ದೇವದೇವನನ್ನು ಅನೇಕ ಪ್ರಕಾರಗಳಿಂದ ಸ್ತುತಿಸಿ ಸಾಷ್ಟಾಂಗವೆರಗಿದನು. ಮುಂದೆ ನಿಂತ ಪಕ್ಷಿರಾಜನನ್ನು ದಾಮೋದರನು ಪ್ರೀತಿಯಿಂದ ನೋಡಿ ನೀನು ಎಂದಿನ ಹಾಗೆ ಇಲ್ಲ ; ಇಂದು ನಿನ್ನ ಪರಿವಾರದೊಂದಿಗೆ ಬಂದ ಕಾರಣವೇನು ಎಂದು ಕೇಳಿದನು. ಆಗ ವಿನತಾನಂದನನು ಈ ಟಿಟ್ಟಿಭನ ತತ್ತಿಗಳನ್ನು ವಾರಿಧಿ ಮೇರೆದಪ್ಪಿ ಕೊಂಡೊಯ್ದನು; ಅದನ್ನು ದೂರಲು ಬಂದೆನು ಎಂದನು. ಮುಕುಂದನು ಮುಗುಳ್ನಕ್ಕು ಇದೆಂತಹ ಮಹಾಕಾರ್ಯ ಎಂದು ತಿರಸ್ಕರಿಸಲು ಮತ್ತೆ ವಿನತಾನಂದನನು ಬಿನ್ನವಿಸಿಕೊಂಡನು. ಶ್ಲೋ॥ ಬಯಕೆಗಳನ್ನು ತೀರಿಸಿಕೊಳ್ಳಲೂ ಗುಣಗಳನ್ನು ಪ್ರಕಟಿಸಲೂ ಅಭಿಮಾನವನ್ನು ರಕ್ಷಿಸಿಕೊಳ್ಳಲೂ ಕಾರ್ಯಸಾಧನೆಗಾಗಿಯೂ ದುರ್ಜನರನ್ನು ನಾಶಪಡಿಸಲೂ ಐಶ್ವರ್ಯವನ್ನು

ತಮ್ಮ ಪ್ರಾಣಮಂ ಧಾರೆಯನೆಱೆದು ದೇಹಸ್ಥಿತಿಯಂ ಮಾಱಿ ಸತ್ಪುರುಷರ್ ಅರಸನನಾಶ್ರಯಿಸಿರ್ಪರ್. ಅದಲ್ಲದೆ ದೈನ್ಯಕ್ಕಂ ದುಃಖಕ್ಕಂ ಆಶ್ರಯಿಸುವರಲ್ಲ,

ಎಂದು ನೊಂದು ನುಡಿದ ತಾರ್ಕ್ಷ್ಯನ ಮನಃಕ್ಷತಮನಧೋಕ್ಷಜನಱಿತು ವರುಣನಂ ನೆನೆಯಲೊಡಮಾತಂ ಬಂದು ಪೊಡೆಮಟ್ಟು ಬೆಸನಾವುದೆಂದೊಡೀ ಪಕ್ಷಿಯ ತತ್ತಿಗಳಂ ಸಮುದ್ರಂ ತನ್ನ ಮೇರೆಯಂ ಮೀಱಿ ಕೊಂಡುಪೋದಂ. ಅವಂ ಬೇಗಂ ತಂದೊಪ್ಪಿಸೆನಲೊಡಂ ಮಹಾಪ್ರಸಾದಮೆಂದು ತಂದಾ ತತ್ತಿಗಳಂ ಟಿಟ್ಟಿಭಮಿಥುನಕ್ಕೆ ಕೊಟ್ಟಂ ಅದಱಿಂ,

ಶ್ಲೋ॥ ಶತ್ರೋರ್ಬಲಮವಿಜ್ಞಾಯ ವೈರಮಾಚರತೇ ತು ಯಃ
ಸ ಪರಾಭವಮಾಪ್ನೋತಿ ಸಮುದ್ರ ಇವ ಟಿಟ್ಟಿಭಾತ್ ॥೧೧೩॥

ಟೀ॥ ಆವನಾನೊರ್ವಂ ಶತ್ರುವಿನ ಬಲವನಱಿಯದೆ ವಿರೋಧಂಗೊಂಬಂ ಅವಂ ಸೋಲವನ್ನೆಯ್ದುವಂ. ಅದೆಂತೆಂದೊಡೆ ಟಿಟ್ಟಿಭನಿಂ ಸಮುದ್ರವೆಂತಂತೆ. ಎಂಬ ಶ್ಲೋಕಾರ್ಥಮುಂಟಪ್ಪುದಱಿಂ, 'ಸಾಹಸ್ಯೇ ಖಲು ಶ್ರೀರ್ವಸತಿ' – ಸಾಹಸಂಗಳಿಂ ಸಿರಿ ನೆಲೆಗೊಳ್ಗುಂ ಎಂಬ ನಯಮಂ ಪಿಡಿದು ಸಾಹಸಂಗೆಯ್ವುದೆನೆ ಸಂಜೀವಕನಿಂತೆಂದಂ : 'ಸಂದಿಗ್ಧೋ ವಿಜಯೋಯುಧಿ' – ಕಾಳೆಗದೊಳು ಗೆಲುವಿಂತೆಂದು ನಿರ್ಣಯಿಸಲರಿದು ಎಂಬುದು; ಇನ್ನು ಪಿಂಗಳಕನಲ್ಲಿಗೆ ಪೋಗಿ ನಿನ್ನಱಿವಂದದಿಂ ನುಡಿದೆನ್ನಂ ನೀನೊರ್ಮೆಗೆ ಕಾವುದೆನೆ, ದವನಕನಿಂತೆಂದಂ : 'ಅರ್ಥೀ ದೋಷಂ ನ ಪಶ್ಯತಿ' ಪಿರಿದುಂ ಬಯಕೆಯನುಳ್ಳವಂ ಕೇಡಂ ನೋಡಂ ಎಂಬುದು ತಪ್ಪದು ಅದೆಂತೆನೆ,

೨೪. ಅರ್ಥೀ ದೋಷಂ ನ ಪಶ್ಯತಿ

ಬೊಮ್ಮದೇವನ ಪೊಮ್ಮಂ ಶ್ರುತಿವಿಹಿತಕರ್ಮಾನುಷ್ಠಾನನಿಷ್ಠನಪ್ಪ ರಾವಣಂ ಕಾಮಾತುರನಾಗಿ ರಾಮನಂ ವಂಚಿಸಿ ಭೂಮಿಜೆಯನುಯ್ದು ತದ್ವಿಯೋಗವಿಹ್ವಲೀಭೂತಚಿತ್ತಂ ರಘುವಂಶಜಾತಂ ಸೇತುವಂ

ಭೋಗಿಸಲೂ ತಮ್ಮ ಪ್ರಾಣವನ್ನು ಧಾರೆಯೆರೆದು ದೇಹಸ್ಥಿತಿಯನ್ನು ಮಾರಿ ಸತ್ಪುರುಷರು ಅರಸನನ್ನು ಆಶ್ರಯಿಸುವರು. ಅದಲ್ಲದೆ ದೈನ್ಯಕ್ಕೂ ದುಃಖಕ್ಕೂ ಆಶ್ರಯಿಸುವರಲ್ಲ ವ॥ ಎಂದು ನೊಂದು ನುಡಿದ ಗರುಡನ ಮನಃಕ್ಷತವನ್ನು ವಿಷ್ಣುವು ಅರಿತನು. ವರುಣನನ್ನು ನೆನೆದ ಕೂಡಲೇ ಆತನು ಬಂದು ವಂದಿಸಿ ಏನಪ್ಪಣೆ ಎಂದು ಕೇಳಲು ಈ ಪಕ್ಷಿಯ ತತ್ತಿಗಳನ್ನು ಸಮುದ್ರನು ತನ್ನ ಮೇರೆ ಮೀರಿ ಕೊಂಡುಹೋದನಂತೆ. ಅವುಗಳನ್ನು ಬೇಗನೆ ತಂದೊಪ್ಪಿಸು ಎನ್ನಲು ಮಹಾಪ್ರಸಾದ ಎಂದು ಆ ತತ್ತಿಗಳನ್ನು ತಂದು ಟಿಟ್ಟಿಭಗಳಿಗೆ ಕೊಟ್ಟನು. ಅದರಿಂದ ಶ್ಲೋ॥ ಯಾವನಾದರೂ ಶತ್ರುವಿನ ಬಲವನ್ನು ನೋಡಿ ವಿರೋಧವನ್ನು ಕಟ್ಟಿಕೊಳ್ಳುವವನು ಸೋಲನ್ನು ಹೊಂದುತ್ತಾನೆ. ಅದು ಹೇಗೆಂದರೆ ಟಿಟ್ಟಿಭನಿಂದ ಸಮುದ್ರ ಹೇಗೋ ಹಾಗೆ ಎಂಬ ಶ್ಲೋಕಾರ್ಥ ಉಂಟು. ವ॥ ಅದರಿಂದ 'ಸಾಹಸ್ಯೆ ಖಲು ಶ್ರೀರ್ವಸತಿ' – ಸಾಹಸಗಳಿಂದ ಸಿರಿ ನೆಲೆಗೊಳ್ಳುವುದು ಎಂಬ ನೀತಿಯನ್ನು ಹಿಡಿದು ಸಾಹಸ ಮಾಡಬೇಕು. ಆಗ ಸಂಜೀವಕನು ಹೀಗೆಂದನು : 'ಸಂಧಿಗ್ಧೋ ವಿಜಯೋ ಯುಧಿ' – ಯುದ್ಧದಲ್ಲಿ ಗೆಲುವು ಹೀಗೆ ಎಂದು ಹೇಳಲು ಬರುವುದಿಲ್ಲ, ಇನ್ನು ಪಿಂಗಳಕನಲ್ಲಿಗೆ ಹೋಗಿ ನೀನು ತಿಳಿದಂತೆ ನುಡಿದು ನನ್ನನ್ನು ನೀನು ಒಮ್ಮೆಗೆ ಕಾಪಾಡುವುದು. ಆಗ ದವನಕನು ಹೀಗೆಂದನು : 'ಅರ್ಥೀ ದೋಷಂ ನ ಪಶ್ಯತಿ' ಹಿರಿದಾದ ಬಯಕೆಯುಳ್ಳವನು ಕೇಡನ್ನು ನೋಡನು ಎಂಬುದು ತಪ್ಪದು ಎಂದಿತು. ಅದು ಹೇಗೆಂದರೆ- ಬ್ರಹ್ಮದೇವನ ಮೊಮ್ಮಗನೂ ಶ್ರುತಿವಿಹಿತ ಕರ್ಮಾನುಷ್ಠಾನನಿಷ್ಠನಾದ ರಾವಣನು ಕಾಮಾತುರನಾಗಿ ರಾಮನನ್ನು ವಂಚಿಸಿ ಭೂಮಿಜೆಯನ್ನು ಒಯ್ದನು. ಅವಳ ವಿಯೋಗದಿಂದ

ಬಂಧನಂಗೆಯ್ದು ಮೇಲೆವರಲಿರ್ಪುದಂ ರಾವಣಂ ಕೇಳ್ದು ತತ್ಕಾರ್ಯ ಪರ್ಯಾಲೋಚನೆಯೊಳಿರ್ದಲ್ಲಿ ವಿಭೀಷಣನಿಂತೆಂದಂ :

ಶತಧೃತಿಪಾತ್ರನುಂ ಜಿತಜಗತ್ತ್ರಯವೀರನುಮಾಗಿ ನೀಂ ಮಹಾ
ಸತಿಗವನೀಜೆಗನ್ನವಧುಗಾಟಿಸೆ ವಾಸವ ವಹ್ನಿ ಧರ್ಮ ನೈ
ರತಿ ವರುಣಾನಿಲಾರ್ಥಪಹರರ್ ನಗುವರ್ ಮುಳಿಗುಂ ಮುರಾರಿ ವಾ
ಕ್ಪತಿ ಪಟೆಗುಂ ಮನೋಜರಿಪು ಪೇಸುಗುಮುಗ್ಗದ ಕೀರ್ತಿ ಮಾಸುಗುಂ ೨೨೬

ಎಂಬುದುಮಲ್ಲದೆಯುಂ, 'ಪರದಾರಗಮನಮನಾಯುಃ' – ಪರವೆಣ್ಗೊಳ್ ಕೂಡುವವನಾಯುವರೆಗುಂ ಎಂಬುದು ಶಾಸ್ತ್ರಾರ್ಥಮುಂಟದಱಿಂ ಸೀತೆಯಂ ರಾಮಗೊಪ್ಪಿಸುವುದೆ ನೀತಿಯುಂ ನಿರ್ವಾಹಮುಮೆಂದು ಸತ್ಪುರುಷವಿಭೂಷಣನಪ್ಪ ವಿಭೀಷಣಂ ಸುಭಾಷಿತಂಗಳಂ ನುಡಿಯೆ ತನಗಿಚ್ಛಾವಿಘಾತಿಯಂ ಮಾಡಿದನೆಂಬನಿತಱೊಳಾ ದನುಜನನುಜನಂ ಮೊದಲಾಗಿ ಕೊಲಲ್ಬಗೆದಂ. ಪಿಂಗಳಕನಪ್ಪೊಡೆ ಕೇವಲಂ ರಜೋಮೂರ್ತಿಯುಮತಿವರ್ತಿಯುಮಾಗಿರ್ಪನಂತುಮಲ್ಲದೆಯುಂ.

ಶ್ಲೋ॥ ನ ವದೇತ್ಸ್ವಾಮಿನಿ ಕ್ರುದ್ಧೇ ಯುಕ್ತಮಪ್ಯುತ್ತರಂ ಬುಧಃ
ಜ್ವರಾದೌ ದುಗ್ಧಪಾನಂ ಹಿ ವಿಷಮಾಹುರ್ಮನೀಷಿಣಃ ॥೧೧೪॥

ಟೀ॥ ಅರಸು ಕುಪಿತನಾದಲ್ಲಿ ಉಚಿತಮಪ್ಪ ಉತ್ತರವಾದೊಡಂ ಬಲ್ಲವರ್ ನುಡಿಯಲಾಗದು. ಜ್ವರದ ಮೊದಲಲ್ಲಿ ಹಾಲಂ ಕುಡಿದೊಡಂ ವಿಷಮಕ್ಕುಮೆಂದು ಬುದ್ಧಿವಂತರ್ ಪೇಳ್ವರ್. ಎಂಬ ನೀತಿವಾಕ್ಯಮುಂಟಪ್ಪುದಲ್ಲದೆ ಪಲವು ದಿವಸಮಾಹಾರಂಬಡೆಯದ ಕೆಂಗೋಲ್ಸಗಿದ ಸಿಂಹಕ್ಕೆ ಪ್ರಾಣಿಗತನದಿಂದೇನಾನುಮೊಂದಂ ನುಡಿದೆನಪ್ಪೊಡೆನ್ನನೆ ಮುನ್ನಮಾಪೋಶನಂಗೊಳ್ಗುಮದಱಿಂ ನುಡಿವುದಂತಿರ್ಕೆ; ಅದಿರ್ದ ದೆಸೆಯಂ ಮೊದಲಾಗಿ ನೋಡಲಣ್ಮೆನದಲ್ಲದೆಯುಂ.

ವಿಹ್ವಲಿತಚಿತ್ತನಾಗಿ ರಾಘವನು ಸೇತುಬಂಧನ ಮಾಡಿ ಆಕ್ರಮಣಕ್ಕೆ ಬರುವುದನ್ನು ರಾವಣನು ಕೇಳಿ ತತ್ಕಾರ್ಯ ಪರ್ಯಾಲೋಚನೆಯಲ್ಲಿದ್ದಾಗ ವಿಭೀಷಣನು ಹೀಗೆ ನುಡಿದನು:
೨೨೬. ಬ್ರಹ್ಮನ ಮೊಮ್ಮಗನೂ ಜಗತ್ತ್ರಯವೀರನೂ ಆಗಿ ನೀನು ಪರಸ್ತ್ರೀಯನ್ನು ಬಯಸಿದರೆ ಇಂದ್ರಾಗ್ನಿ ಯಮ ನೈಋತಿ ವರುಣ ವಾಯು ಕುಬೇರರು ನಗುವರು ; ಮುರಾರಿ ಮುಳಿಯುವನು ; ವಾಕ್ಪತಿ ಹಳಿಯುವನು ; ಹರನು ಹೇಸುವನು. ಶ್ರೇಷ್ಠವಾದ ಕೀರ್ತಿ ಮಾಸುವುದು. ವ॥ ಅಲ್ಲದೆ, 'ಪರದಾರಗಮನಮನಾಯುಃ'- ಹೆರರ ಹೆಣ್ಣಿನಲ್ಲಿ ಕೂಡುವವನ ಆಯುಸ್ಸು ನಾಶವಾಗುವುದು. ಆದರಿಂದ ಸೀತೆಯನ್ನು ರಾಮನಿಗೆ ಒಪ್ಪಿಸುವುದೇ ನೀತಿಯೂ ಕರ್ತವ್ಯವೂ ಆಗಿದೆ ಎಂದು ಸತ್ಪುರುಷವಿಭೂಷಣನು ಸುಭಾಷಿತಗಳನ್ನು ನುಡಿದನು. ತನ್ನ ಬಯಕೆಯನ್ನು ವಿರೋಧಿಸಿದನೆಂಬ ಕಾರಣದಿಂದ ಆ ದನುಜನು ತನ್ನ ತಮ್ಮನನ್ನು ಮೊದಲು ಕೊಲ್ಲ ಬಗೆದನು. ಪಿಂಗಳಕನಾದರೋ ಕೇವಲ ರಜೋಮೂರ್ತಿಯುತ, ಅತಿವರ್ತಿಯೂ ಆಗಿರುವನು ಅಲ್ಲದೆ, ಶ್ಲೋ॥ ಅರಸನು ಕುಪಿತನಾಗಿದ್ದಲ್ಲಿ ಉಚಿತವಾದ ಉತ್ತರವಾದರೂ ಬಲ್ಲವರು ನುಡಿಯಬಾರದು. ಜ್ವರದ ಮೊದಲಲ್ಲಿ ಹಾಲನ್ನು ಕುಡಿದರೂ ವಿಷವಾಗುವುದೆಂದು ಬುದ್ಧಿವಂತರು ಹೇಳುವರು. ವ॥ ಹಲವು ದಿವಸ ಆಹಾರ ಪಡೆಯದೆ ಕೋಪಗೊಂಡ ಸಿಂಹಕ್ಕೆ ಏನಾದರೂ ನಾನು ವಿಚಾರದೃಷ್ಟಿಯಿಂದ ಮಾತಾಡಿದೆನಾದರೆ ನನ್ನನ್ನೇ ಮೊದಲು ಆಪೋಶನ ಕೊಳ್ಳುವನು. ಆದರಿಂದ ಮಾತನಾಡುವುದು ಹಾಗಿರಲಿ.

ಸಂಜೀವಕ ನೀನೆನಿತೆನಿ
ತಂಜಿದೊಡಂ ಕುಂಜರಾರಿ ಕೊಲ್ಲದೆ ಮಾಣಂ
ಕಂಜೋದರನುಂ ಹರನುಂ
ಕಂಜಾಸನನುಂ ಕಡಂಗಿ ಕಾವೊಡಮೀಗಳ್ ೨೨೭

ಎನೆ ಗವಾಧಿಪನದೆಲ್ಲಮಂ ಕೇಳ್ದಾದೊಡಮಿನ್ನೆಂತು ಶಕ್ತ್ಯನುರೂಪದಿಂ ಸಾಹಸಂಗೈದಪ್ಪೆಂ ಪಿಂಗಳಕನೆನಗೆ ತಪ್ಪಂ ಬಗೆವಾಗಳೆಂತಿರ್ಪನೆಂಬುದಱಿಯೆ ಪೇಳೆನೆ ದವನಕಂ ಪೇೞ್ಗು ಆ ಸಿಂಗಂ ಮುನ್ನಿನಿರ್ಪಂದಮಲ್ಲದೆ ಶಿಲಾತಳದ ಮೇಲೆ ಕಾಲುಮಂ ಬಾಲಮುಮನುಡುಗಿಯಡಂಗಿಸಿ ಕಿವಿಯಂ ಕತ್ತರಿಸಿ ಶರೀರಮಂ ಸಂಕೋಚಿಸಿ ನಟ್ಟ ದಿಟ್ಟಿಗಳ್ದೆರಸು ನಿನ್ನನೆ ನೋಡುತ್ತುಮಿರ್ಕುಮಪ್ಪೊಡಾಗಳೆ ಯುದ್ಧಸನ್ನದ್ಧನೆಂದಱಿಯೆಂದು ಪೇೞ್ದಿರಡರ್ಕಂ ಪರಸ್ಪರವಿರೋಧಮಂ ಮಾಡಿ ಪ್ರಕೋಪಂಗೊಳಿಸಿ ಮಾಣದಾಕ್ಷಣದೊಳೆ ದವನಕಂ ಕರಟಕನಲ್ಲಿಗೆ ಬಂದು, ಎನ್ನೆತ್ತಿಕೊಂಡ ಕಜ್ಜದ ಕಡೆಯನೆಯ್ದಿಸಿ ಬಂದೆನೆಂಬುದುಂ ಕರಟಕನಿಂತೆಂದಂ :

ಶ್ಲೋ ॥ ಭಿನತ್ತಿಸಮ್ಯಕ್ಪ್ರಹಿತೋ ಭೇದೋಪಾಯಸ್ಥಿರಾಂ ಮತಿಂ
ಭೂಧರಾನ್ ಕರ್ಕಶಶಿಲಾನ್ ಮಹಾಶನಿರಿವೋದಕಂ ॥೧೧೫॥

ಟೀ॥ ಲೇಸಾಗಿ ಪ್ರಯೋಗಿಸಿದ ಭೇದೋಪಾಯವು ಸ್ಥಿರವಹ ಮತಿಯಂ ಭೇದಿಸುವುದು; ಅದು ಹೇಗೆಂದೊಡೆ ಬೆಟ್ಟತಪ್ಪ ಕಲ್ಲುಗಳುಳ್ಳ ಬೆಟ್ಟದುಂ ಸಿಡಿಲುಂ ನೀರುಂ ಭೇದಿಸುವಹಗೆ, ಎಂದಿಂತಾ ನರಿಗಳ್ ತಮ್ಮೊಳ್ ನುಡಿಯುತಿರ್ಪನ್ನೆಗಮಿತ್ತಲ್,

ಸಂಜೀವಕನೆಂದಂತೆನ
ಗಂ ಜೀವನದಾಸೆಯುದು ನಿರಾಸೆಯುಮಾಯ್ತು
ನ್ನಂಜದೆ ಕಾದುವೆನಂಜಿದೊ
ಡಂ ಜವನಿನ್ನೆನ್ನ ಬಟೆಯನೇನುಜಿವಪನೇ ೨೨೮

ಅದು ಇರುವ ದೆಸೆಯನ್ನು ನೋಡುವ ಸಾಮರ್ಥ್ಯವೂ ನನಗಿಲ್ಲ. ೨೨೭. ಸಂಜೀವಕ, ನೀನು ಎಷ್ಟು ಅಂಜಿದರೂ ಸಿಂಹವು ನಿನ್ನನ್ನು ಕೊಲ್ಲದೆ ಬಿಡನು. ಹರಿಹರಬ್ರಹ್ಮಾದಿಗಳು ನಿನ್ನನ್ನು ಕಾಪಾಡುವುದಾದರೂ ಬಿಡನು ಎನ್ನಲು ವ॥ ಆ ಎತ್ತು ಇದೆಲ್ಲವನ್ನೂ ಕೇಳಿ ಆದರೂ ನನ್ನ ಶಕ್ತ್ಯನುಸಾರ ಸಾಹಸ ಮಾಡುವೆ, ಪಿಂಗಳಕನು ನನಗೆ ತಪ್ಪನ್ನು ಬಗೆವಾಗ ಹೇಗಿರುವನು ಎಂದಾದರೂ ತಿಳಿಸು ಎಂದು ಕೇಳಿಕೊಂಡಿತು. ಅದಕ್ಕೆ ದವನಕ ಹೇಳಿತು: ಆ ಸಿಂಹವು ಮೊದಲಿದ್ದ ರೀತಿಯಲ್ಲಿ ಇಲ್ಲದೆ ಶಿಲಾತಲದ ಮೇಲೆ ಕಾಲನ್ನೂ ಬಾಲವನ್ನೂ ಉಡುಗಿ ಅಡಗಿಸಿಟ್ಟುಕೊಂಡು ಕಿವಿಯನ್ನು ಕತ್ತರಿಸಿ ಶರೀರವನ್ನು ಸಂಕೋಚಿಸಿ ನೆಟ್ಟ ದೃಷ್ಟಿಯಿಂದ ನಿನ್ನನ್ನೇ ನೋಡುತ್ತ ಇದ್ದರೆ ಆಗಲೇ ಯುದ್ಧಸನ್ನದ್ಧವಾಗಿದೆಯೆಂದು ತಿಳಿ ಎಂದು ಹೇಳಿ ಎರಡಕ್ಕೂ ಪರಸ್ಪರ ವಿರೋಧವನ್ನುಂಟುಮಾಡಿ ಪ್ರಕೋಪಗೊಳಿಸಿತು. ಅಲ್ಲಿಂದ ದವನಕನು ಕರಟಕನಲ್ಲಿಗೆ ಬಂದು ನಾನು ಕೈಕೊಂಡ ಕೆಲಸವನ್ನು ಕಡೆಗೊಳಿಸಿ ಬಂದೆನೆಂದಿತು. ಅದಕ್ಕೆ ಕರಟಕನು ಹೀಗೆಂದನು : ಶ್ಲೋ॥ ಚೆನ್ನಾಗಿ ಪ್ರಯೋಗಿಸಿದ ಭೇದೋಪಾಯವು ಕಠೋರವಾದ ಕಲ್ಲುಗಳುಳ್ಳ ಬೆಟ್ಟವನ್ನು ಸಿಡಿಲೂ ನೀರೂ ಭೇದಿಸುವ ಹಾಗೆ ಎಂಥ ದೃಢಚಿತ್ತನನ್ನೂ ಭೇದಿಸುವುದು ಎಂದು ಆ ನರಿಗಳು ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದುವು. ೨೨೮. ಇತ್ತ ಸಂಜೀವಕನು ತನಗೆ ಇನ್ನು ಜೀವನದ ಆಸೆ

ಆದಪೆಂದೀಗಳೆ ಪೋಗಿ ತಾಗಿ ತಳ್ತಿಱಿವೆಂ ಬಱಿಕ್ಕೆ ತನ್ನವ್ಪುದಕ್ಕೆಂದು ಭೋರೆನೆ ಬಂದಾಸನ್ನಮುಮತಿದೂರಮುಮಲ್ಲದೆ ನಿಂದು ದವನಕಂ ಪೇೞ್ದ ಚಿಹ್ನಂಗಳನಾ ಸಿಂಗದ ಮೊಗದೊಳ್ ಕಂಡು ಕಡುಗಲಿಯಪ್ಪುದಱ ಚೇಷ್ಟೆಯುಮಂ ಪಿಂಗಳಕಂ ಕಂಡು ಕಡುಮುಳಿದು,

ಬಳವದರಿಕುಂಭಿ ಕುಂಭ
ಸ್ಥಳಕ್ಕೆ ಪಾಯ್ವಂತೆ ಪಾಯ್ದನಧಿಕಬಲಂ ಪಿಂ
ಗಳಕಂ ಮಾಣದೆ ಗೋಮಂ
ಪಳೆ ಮುಖ್ಖನ ಮೇಲೆ ಕಲುಷ ಕಲುಷಿತವದನಂ ೨೨೯

ಅಂತು ಪಾಯ್ಪುದುಂ ಸಂಜೀವಕಂ ವಜ್ರಪಾಷಾಣನಿಶಿತವಿಷಾಣಯುಗಳದಿಂ ಕಂಠೀರವನ ಕಂಠಪ್ರದೇಶಮನಿಱಿದು ಪಿರಿದುಂ ಪೊೞ್ತು ತಳ್ತಿಱಿದು ಕಾದಿ,

ಬಳಿಭುಗ್ಗೃಧ್ರ ಕದಂಬಮಂಬರದೊಳುಗ್ರಶ್ವಾಪದಶ್ರೇಣಿ ಭೂ
ತಳದೊಳ್ ನರ್ತಿಸೆ ಕೋಪಪಾವಕಶಿಖಾಜಾಲಾತಿರೌದ್ರಾನನಂ
ಕುಳಿಶಾಗ್ರೋಗ್ರ ಪರಿಸ್ಫುರನ್ನಖಮುಖವ್ಯಾಳಗ್ನ ಮಾತಂಗಜಾಂ
ಗಳಕಂ ಪಿಂಗಳಕಂ ಗವಾಧಿಪತಿಯಂ ಕೊಂದಂ ಭುಜಾದಂಡದಿಂ ೨೩೦

ಅಂತುಕೊಂದತಿಕ್ರಾಂತನಾಗಿ ವಸಂತಸಮಯ ಕಿಂಶುಕೋಜ್ಜ್ವಲನಖಮುಖದಿನತ್ಯಾಸುರಮಾಗಿರ್ದ ನಿಜಸ್ವಾಮಿಯಂ ಕಂಡು ಕರಟಕಂ ದವನಕಂಗಿಂತೆಂದಂ : ನಿನ್ನಂತಪ್ಪ ದುರ್ಮತಿಯ ಕಾರಣದಿಂ ಪಿಂಗಳಕಂಗೆ ಧರ್ಮಹಾನಿಯುಂ ಯಶೋಹಾನಿಯುಮಾಗಿ ಮಾಣದೆ ಪ್ರಾಣಹಾನಿಯುಮಾಗಲಿರ್ದುದಿದಾತನ ದೋಷಮಲ್ಲದೆ ನಿನ್ನ ದೋಷಮಲ್ಲದೆಂತೆನೆ :

ನಿರಾಶೆಯಾಯಿತು, ಇನ್ನು ಹೆದರದೆ ಕಾದುವೆನು; ಅಂಜಿದರೆ ಏನಾದರೂ ಯಮನು ನನ್ನನ್ನು ಬಿಡುವನೇ ! ವ॥ ಅದರಿಂದ ಈಗಲೇ ಹೋಗಿ ಪ್ರತಿಭಟಿಸುವೆ. ಬಳಿಕ ತನಗಾಗುವುದು ಆಗಲಿ ಎಂದು ಭಾವಿಸಿ ಬೇಗನೆ ಬಂದನು. ಅತ್ಯಂತ ಹತ್ತಿರವೂ ಅತಿದೂರವೂ ಆಗದಂತೆ ನಿಂತು ದವನಕನು ಹೇಳಿದ ಗುರುತುಗಳನ್ನು ಆ ಸಿಂಹದ ಮುಖದಲ್ಲಿ ಕಂಡು ಕಡುಗಲಿಯಾದ ಸಂಜೀವಕನ ಚೇಷ್ಟೆಯನ್ನು ಪಿಂಗಳಕನು ಕಂಡು ಕೋಪಾವಿಷ್ಟನಾಗಿ ೨೨೯. ಮದ್ದಾನೆಗಳ ಕುಂಭಸ್ಥಲಕ್ಕೆ ಹಾಯುವಂತೆ ಅಧಿಕಬಲನಾದ ಪಿಂಗಳಕನು ಸಂಜೀವಕನ ಮೇಲೆ ಕಲುಷಕಲುಷಿತವದನನಾಗಿ ಎರಗಿದನು. ವ॥ ಸಂಜೀವಕನು ಕೂಡ ವಜ್ರಪಾಷಾಣನಿಶಿತವಿಷಾಣಯುಗಳದಿಂದ ಕಂಠೀರವನ ಕಂಠಪ್ರದೇಶವನ್ನು ೨೩೦. ಕಾಗೆ ಹದ್ದುಗಳ ಸಮೂಹವು ಆಕಾಶದಲ್ಲೂ ಕ್ರೂರಪ್ರಾಣಿಗಳ ಗುಂಪು ಭೂಮಿಯಲ್ಲೂ ನರ್ತಿಸಲು ಕೋಪಾಗ್ನಿಯಿಂದ ರೌದ್ರಾನನನಾದ, ವಜ್ರಾಯುಧದ ಹಾಗೆ ಹೊಳೆಯುವ ಉಗುರುಗಳನ್ನು ಮದ್ದಾನೆಗಳ ಮೇಲೆ ನಾಟಿದವನೂ ಇರಿದು ಬಹಳ ಹೊತ್ತಿನವರೆಗೆ ಕಾದಾಡಿದನು. ಪಿಂಗಳಕನು ಸಂಜೀವಕನನ್ನು ತನ್ನ ಭುಜಾದಂಡದಿಂದ ಕೊಂದನು. ವ॥ ಅತ್ಯಂತ ಭಯಂಕರನಾಗಿದ್ದ ನಿಜಸ್ವಾಮಿಯನ್ನು ಕರಟಕನು ಕಂಡು ದವನಕನೊಡನೆ ಹೀಗೆಂದನು : ನಿನ್ನಂತಹ ದುರ್ಮಂತ್ರಿಯ ಕಾರಣದಿಂದ ಪಿಂಗಳಕನಿಗೆ ಧರ್ಮಹಾನಿಯೂ ಯಶೋಹಾನಿಯೂ ಆಗಿ ಪ್ರಾಣಹಾನಿಯೂ ಆಗುತ್ತಿತ್ತು. ಇದು

ಶ್ಲೋ ॥ ದುರ್ಮಂತ್ರಿಣಂ ಕಮುಪಯಾಂತಿ ನ ನೀತಿದೋಷಾಃ
ಸಂತಾಪಯಂತಿ ಕಮಪಥ್ಯಭುಜಂ ನ ರೋಗಾಃ
ಕಂ ಶ್ರೀರ್ನದರ್ಪಯತಿ ಕಂನ ನಿಹನ್ತಿ ಮೃತ್ಯುಃ
ಕಂ ಸ್ತ್ರೀಕೃತಾ ನ ವಿಷಯಾಃ ಪರಿತಾಪಯಂತಿ ॥೧೧೬॥

ಟೀ॥ ದುರ್ಮಂತ್ರಿಯಾಗಿರ್ದವನ ನೀತಿದೋಷಂಗಳ್ ತಾಗದಿರವು. ಅಪಥ್ಯದಲುಂಬವನ ವ್ಯಾಧಿಗಳ್ ಪೀಡಿಸುವುವು, ಐಶ್ವರ್ಯವೆಂತಹನನುಂ ಸೊಕ್ಕಿಸುವುದು, ಮೃತ್ಯುವೆಂತಹನನುಂ ಕೊಲುವುದು, ಸ್ತ್ರೀಯರು ಮಾಡಿದಂಥ ವಿಷಯುಗಳಾವನನಾದೊಡಂ ಸಂತಾಪಂಬಡಿಸುವುವು. ಮತ್ತಂ,

ಶ್ಲೋ ॥ ಸಾಮ್ನೈವ ಹಿ ಪ್ರಯೋಕ್ತವ್ಯಮಾದೌ ಕಾರ್ಯಂ ವಿಜಾನತಾ
ಸಾಮಸಿದ್ಧ್ಯೋ ಹಿ ವಿಜಯೋ ನ ಪ್ರಯಾತಿ ಪರಾಭವಂ ॥೧೧೭॥

ಟೀ॥ ಕಾರ್ಯಮನರಿವಾತನು ಮೊದಲಲ್ಲಿ ಸಾಮವನೆ ಪ್ರಯೋಗಿಸುವುದು, ಸಾಮಂ ಸಿದ್ಧಿಸಿದೊಡೆ ವಿಜಯಮಪ್ಪುದು ಸೋಲವನೈದನು, ಅದೆಂತೆಂದೊಡೆ,

ಶ್ಲೋ॥ ಸಾಮಾದಿದಂಡಪರ್ಯಂತಂ ನಯಃ ಪ್ರೋಕ್ತಶ್ಚತುರ್ವಿಧಃ
ತೇಷಾಂ ದಂಡಸ್ತು ಪಾಪೀಯಾನ್ ತಸ್ಮಾದ್ದಂಡಂ ವಿಸರ್ಜಯೇತ್ ॥೧೧೮॥

ಟೀ॥ ಸಾಮಾದಿಯಾಗಿ ದಂಡಪರ್ಯಂತಮಾವುಪಾಯಂ ನಾಲ್ಕು ತೆಱನಕ್ಕುಂ. ಅವಱೊಳಗೆ ದಂಡಮೆಂಬುದು ಪಾಪವನ್ನುಳ್ಳುದು, ಅದು ಕಾರಣದಿಂ ದಂಡಮಂ ಬಿಟ್ಟು ಕಳೆವುದು.

ಶ್ಲೋ॥ ನ ಮಯೂಖೇನ ರತ್ನಾನಾಂ ನಾತಪೇನ ನ ವಹ್ನಿನಾ
ಸಾಮ್ನೈವ ಪ್ರಭಯಾ ಯಾತಿ ವಿದ್ವಿಷಪ್ರಭವಂ ತಮಃ ॥೧೧೯॥

ಟೀ॥ ಶತ್ರುವಿಂ ಜನಿಸಿದ ಕಱ್ತಲೆಯೆಂಬುದು ರತ್ನದ ಬೆಳಗಿಂದಂ, ಬಿಸಿಲಿಂದಂ, ಕಿರ್ಚಿಂದಂ ಕಿಡುವುದಿಲ್ಲ; ಸಾಮದ ಬೆಳಗಿಂದಮೆ ಕಿಡುವುದು.

ಶ್ಲೋ॥ ಕಾರ್ಯಾಣ್ಯುತ್ತಮದಂಡ ಸಾಹಸಮಯಾ ನ್ಯಾಯಾ ಸ ಸಾಧ್ಯಾನಿ ಯೇ
ಪ್ರೀತ್ಯಾ ಸನ್ನಮಯಂತಿ ನೀತಿಕುಶಲಾಃ ಸಾಮ್ನೈವ ತೇ ಮಂತ್ರಿಣಃ
ನಿಸ್ಸಾರಾಲ್ಪ ಫಲಾನಿ ಯೇತ್ವವಿಧಿನಾ ವಾಂಛಂತಿ ದಂಡಾಧಮಾ
ಸ್ತೇಷಾಂ ದುರ್ಣಯಚೇಷ್ಟಿತೈರ್ನರಪತೇರಾರೋಪ್ಯತೇ ಶ್ರೀಸ್ತುಲಾಂ ॥೧೨೦॥

ಆತನ ದೋಷವಲ್ಲದೆ ನಿನ್ನ ದೋಷವಲ್ಲ. ಶ್ಲೋ॥ ದುರ್ಮಂತ್ರಿಯಾದವನ ನೀತಿ ದೋಷಗಳು ತಾಗದೆ ಇರವು. ಅಪಥ್ಯದಲ್ಲಿ ಉಣ್ಣುವವನನ್ನು ವ್ಯಾಧಿಗಳು ಪೀಡಿಸುವುವು. ಐಶ್ವರ್ಯವು ಎಂಥವನನ್ನೂ ಸೊಕ್ಕಿಸುವುದು; ಮೃತ್ಯು ಎಂಥವನನ್ನೂ ಕೊಲ್ಲುವುದು. ಸ್ತ್ರೀಯರು ಮಾಡಿದಂಥ ವಿಷಯಗಳು ಯಾರನ್ನಾದರೂ ಸಂತಾಪಪಡಿಸುವುವು. ಶ್ಲೋ॥ ಅಲ್ಲದೆ, ಕಾರ್ಯವನ್ನರಿತವನು ಮೊದಲು ಸಾಮವನ್ನೇ ಪ್ರಯೋಗಿಸಬೇಕು. ಸಾಮ ಸಿದ್ಧಿಸಿದರೆ ವಿಜಯವಾಗುವುದು; ಸೋಲುವುದಿಲ್ಲ. ಶ್ಲೋ॥ ನಾಲ್ಕು ರೀತಿಯ ಉಪಾಯಗಳಿವೆ. ಅವುಗಳಲ್ಲಿ ದಂಡವೆನ್ನುವುದು ಪಾಪಕರವಾದುದು ; ಆದರಿಂದ ದಂಡವನ್ನು ನಿವಾರಿಸಿಕೊಳ್ಳಬೇಕು. ಶ್ಲೋ॥ ಶತ್ರುವಿನಿಂದ ಜನಿಸಿದ ಕತ್ತಲೆ ರತ್ನದ ಬೆಳಕಿನಿಂದಲೂ ಬಿಸಿಲಿನಿಂದಲೂ ಕಿಚ್ಚಿನಿಂದಲೂ ಕೆಡುವುದಿಲ್ಲ ; ಸಾಮದ ಬೆಳಕಿನಿಂದಲೇ ಕೆಡುವುದು. ಶ್ಲೋ॥ ನೀತಿಕುಶಲರಾದವರು ದಂಡ ಸಾಹಸಮಯವಾದ ಅಸಾಧ್ಯವಾದ ಕಾರ್ಯಗಳನ್ನು ಸಾಮದಿಂದ ಮಾಡಿ ನೃಪನನ್ನು ಸಂತೋಷಪಡಿಸುವವರೋ ಅವರೇ ನಿಜವಾದ ಮಂತ್ರಿಗಳು;

ಟೀ॥ ಆರ್ ಕೆಲಂಬರ್ ನೀತಿಕುಶಲರ್ ದಂಡಸಾಹಸಮಯವಹ ಅಸಾಧ್ಯಮಪ್ಪ ಕಾರ್ಯಂಗಳಂ ಸಾಮದಿಂದವೆ ಮಾಡಿ ನೃಪಂಗೆ ಸಂತೋಷಂಬಡಿಸುವರ್ ಅವರೀಗಲೆ ಮಂತ್ರಿಗಳ್' ಆರ್ ಕೆಲಂಬರ್ ತೆಜನಜೆಯದೆ ನಿಸ್ಸಾರವಾಗಿ ಅಲ್ಪಫಲವಹಂತಹವನೆ ಮಾದಲಿಚ್ಛೈಸಿಹರ್ ಅವರ್ ದಂಡಾಧಮರೆನಿಸಿಕೊಂಬರ್; ಅವರ ದುರ್ನಯಚೇಷ್ಟೆಗಳಿಂ ನೃಪನೈಶ್ವರ್ಯಂ ತೊಲೆಯಲ್ಲಿ ತೂಗಿಸಿಕೊಂಬುದು.

ಜಯಮಂ ಸ್ವಾಮಿಗೆ ಮೊದಲೊಳ್
ಬಯಸುವ ಸಚಿವಂ ಸಮಸ್ತ ಕಾರ್ಯಂಗಳೊಳಂ
ನಯಶಾಸ್ತ್ರಕ್ರಮದಿಂದಂ
ಪ್ರಯತ್ನದಿಂ ಸಾಮಮಂ ಪ್ರಯೋಗಿಪ್ಪುದುಚಿತಂ ೨೩೧

ಅದಜೆಂ ನೀತಿಶಾಸ್ತ್ರಾಭಿಪ್ರಾಯೋಪಾಯನಿಪುಣನುಂ ಸ್ವಾಮಿಹಿತನುಂ ಚತುರುಪಧಾವಿಶುದ್ಧನುಮಲ್ಲದ ನಿರ್ಬುದ್ಧಿಯನನ್ವಯಾಗತನೆಂಬನಿತಱೊಳೆ ಮಂತ್ರಿಯಂ ಮಾಡಿದ ಕಾರಣದಿಂ ನಿನ್ನ ದುರ್ಮಂತ್ರದಿಂ ಮೃಗಾಧಿರಾಜನಪ್ಪ ಪಿಂಗಳಕಂಗಿಂತಪ್ಪವಸ್ಥೆಯಾದುದು.

ಶ್ಲೋ॥ ದುಷ್ಟಬುದ್ಧಿಸ್ಸುಬುದ್ಧಿಶ್ಚದ್ವಯೋರ್ಧರ್ಮಸ್ಯ ಸಂಶ್ರಯಾತ್ ॥೧೨೧॥

ಎಂಬ ಕಥೆಯಂತಾದುದೆನೆ ದವನಕನದೆಂತೆನೆ ಕರಟಕಂ ಪೇೞ್ಗುಂ:

೨೫. ದುಷ್ಟಬುದ್ಧಿಯುಂ ಧರ್ಮಬುದ್ಧಿಯುಂ

ನ್ಯಗ್ಭೂತಸುರಪುರಂ ಸುವ
ಣಿಗ್ವಾಸಿ ಸಮಸ್ತವಸ್ತು ಪರಿಪೂರ್ಣಂ ಸ
ಮ್ಯಗ್ಭವನರುಚಿರಮುತ್ತರ
ದಿಗ್ಭಾಗದೊಳುಂಟು ಮಧುರೆಯೆಂಬುದು ನಗರಂ ೨೩೨

ಯಾರು ಕ್ರಮವನ್ನರಿಯದೆ ನಿಸ್ಸಾರವಾದ ಅಲ್ಪಫಲವನ್ನುಂಟುಮಾಡುವರೋ ಅವರು ದಂಡಾಧಮರೆನ್ನಿಸಿಕೊಳ್ಳುವರು. ಅವರ ದುರ್ನೀತಿಯಿಂದಾಗಿ ನೃಪನ ಐಶ್ವರ್ಯವು ತುಲೆಯಲ್ಲಿ ತೂಗಿಸಿಕೊಳ್ಳುವುದು. ೨೩೧. ತನ್ನ ಸ್ವಾಮಿಗೆ ಜಯವನ್ನು ಹಾರೈಸುವ ಸಚಿವನು ಸಮಸ್ತ ಕಾರ್ಯಗಳಲ್ಲಿಯೂ ನೀತಿಶಾಸ್ತ್ರಕ್ರಮದಿಂದ ಸಾಮೋಪಾಯವನ್ನು ಪ್ರಯೋಗಿಸುವುದು ಉಚಿತ ವ॥ ನೀತಿಶಾಸ್ತ್ರೋಪಾಯನಿಪುಣನೂ ಸ್ವಾಮಿಹಿತನೂ ಚತುರುಪಧಾವಿಶುದ್ಧನೂ ಅಲ್ಲದ ಮೂರ್ಖನನ್ನು ವಂಶಪಾರಂಪರ್ಯದಿಂದ ಬಂದವನೆಂಬ ಒಂದೇ ಕಾರಣದಿಂದ ಮಂತ್ರಿಯನ್ನಾಗಿ ಮಾಡಿದ ಕಾರಣವಾಗಿದೆ. ಅದರಿಂದ ನಿನ್ನ ದುರ್ಮಂತ್ರದಿಂದ ಮೃಗಾಧಿರಾಜನಾದ ಪಿಂಗಳಕನಿಗೆ ಇಂತಹ ಅವಸ್ಥೆಯಾಯಿತು. ಶ್ಲೋ॥ 'ದುಷ್ಟಬುದ್ಧಿಸ್ಸುಬುದ್ಧಿಶ್ಚ ದ್ವಯೋರ್ಧರ್ಮಸ್ಯ ಸಂಶ್ರಯಾತ್' ಎಂಬ ಕಥೆಯಂತಾಯಿತು. ವ॥ ದವನಕನು ಅದೇನು ಎಂದು ಕೇಳಲು ಕರಟಕನು ಹೇಳಿದನು. ೨೩೨. ಅಮರಾವತಿಯನ್ನು ಕೀಳುಮಾಡಿದ ಒಳ್ಳೆಯ ವ್ಯಾಪಾರಿಗಳಿಂದ ಶೋಭಿಸುವ ಸಮಸ್ತ ವಸ್ತು ಪರಿಪೂರ್ಣವಾದ ಒಳ್ಳೆಯ ಭವನಗಳಿಂದ ಅಲಂಕೃತವಾದ ಮಧುರೆಯೆಂಬ ನಗರವು

ಅಂತಾ ನಗರದೊಳಗೆ ಧರ್ಮಬುದ್ಧಿಯುಂ ದುಷ್ಟಬುದ್ಧಿಯುಮೆಂಬರಿರ್ವರ್ ವಣಿಕ್ಪುತ್ರರ್ ಪುದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನ ಪಡೆದು ಮಗುಳ್ದು ಬಂದು ನಿಜಜನ್ಮಭೂಮಿಯಪ್ಪ ಮಥುರಾಪುರದ ಬಹಿರುದ್ಯಾನವನದೊಳಗೆ ಬೀಡಂ ಬಿಟ್ಟರ್ಧರಾತ್ರಿಯೊಳ್ ಧರ್ಮಬುದ್ಧಿ ದುರ್ಬುದ್ಧಿಯಪ್ಪ ದುಷ್ಟಬುದ್ಧಿಯುಂ ಕರೆದು ಪೊನ್ನಂ ಪಚ್ಚುಕೊಳ್ವಮೆನೆ ದುಷ್ಟಬುದ್ಧಿ ಪಾಪಬುದ್ಧಿಯಾಗಲ್ವಗೆದಿಂತೆಂದಂ : ನಾವೀ ಪೊನ್ನಂ ಪಚ್ಚುಕೊಂಡು ಮನೆಯೊಳ್ ಸ್ವೇಚ್ಛೆಯಿಂದಿರ್ಪವರಲ್ಲಂ ಮತ್ತಂ ಪರದುವೋಗಲ್ವೇಳ್ಕುಮದುಕಾರಣದಿಂ ನಿನಗಮೆನಗಂ ಬೀಯಕ್ಕೆ ತಕ್ಕನಿತು ಪೊನ್ನಂ ಕೊಂಡು ಮಿಕ್ಕ ಪೊನ್ನನೆಲ್ಲಮನಿಲ್ಲಿಯೆ ಮಡಂಗುವಮೆನೆ, ಧರ್ಮಬುದ್ಧಿಯಾ ಪಾಪಕರ್ಮನಂ ತನ್ನ ಮನದನ್ನನೆಂದೆ ಬಗೆದುಮದರ್ಕೊಡಂಬಟ್ಟೊಂದು ಮಹಾವಟವಿಟಪಿಯ ಕೆಲದೊಳ್ ಪೊನ್ನಂ ಪೂಳ್ದು ಮಱುದಿವಸಮಿರ್ವರುಂ ಪೊೞಲಂ ಪೊಕ್ಕು ಇಷ್ಟವಿಷಯ ಕಾಮಭೋಗ ಸುಖಂಗಳನನುಭವಿಸುತಿರ್ದು ದುಷ್ಟಬುದ್ಧಿ ಧರ್ಮಬುದ್ಧಿಯುಂ ವಂಚಿಸಿ ಪೋಗಿ ಪೊನ್ನನೆಲ್ಲಮಂ ಕೊಂಡು ಕುೞಿಯಂ ಮುನ್ನಿನಂತೆ ಪೂಳ್ದು ಕೆಲವಾನುಂ ದಿವಸಕ್ಕೆ ತಾನೆ ಧರ್ಮಬುದ್ಧಿಯಲ್ಲಿಗೆ ವಂದು ಬೀಯಕ್ಕೆ ಪೊನ್ನಿಲ್ಲವಿನ್ನುಂ ಕಿಱಿದು ಪೊನ್ನಂ ತೆಗೆದುಕೊಳ್ವಂ ಬನ್ನಿಮೆಂದೊಡಂಗೊಂದು ಪೋಗಿ ಪೂೞ್ದೆಡೆಯೊಳ್ ಪೊನ್ನಂ ಕಾಣದೆ ಇನ್ನುಸಿರದಿರ್ದೊಡೆ ಅನ್ಯತಂ ತನ್ನ ಮೇಲೆ ವರ್ಪುದೆಂದು ಪೊನ್ನನೆಲ್ಲಮಂ ನೀನೆ ಕೊಂಡೆಯೆಂಬುದುಂ

ಉತ್ತರ ದಿಕ್ಕಿನಲ್ಲಿದೆ. ವ|| ಆ ನಗರದಲ್ಲಿ ಧರ್ಮಬುದ್ಧಿಯೂ ದುಷ್ಟಬುದ್ಧಿಯೂ ಎಂಬ ಇಬ್ಬರು ವ್ಯಾಪಾರಿಗಳು ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಬಹಳ ಹೊನ್ನನ್ನು ಪಡೆದು ಹಿಂದಿರುಗಿ ಬಂದು ತಮ್ಮ ಜನ್ಮಭೂಮಿಯಾದ ಮಥುರಾಪುರದ ಬಹಿರುದ್ಯಾನದಲ್ಲಿ ಬೀಡುಬಿಟ್ಟರು. ಅರ್ಧರಾತ್ರಿಯ ಸಮಯ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು ಹೊನ್ನನ್ನು ಪಾಲುಮಾಡಿಕೊಳ್ಳೋಣ ಎನ್ನಲು ದುಷ್ಟಬುದ್ಧಿ ಪಾಪಬುದ್ಧಿಯನ್ನು ಬಗೆದು ಹೀಗೆಂದನು : ನಾವು ಈ ಹೊನ್ನನ್ನು ಪಾಲು ಮಾಡಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವುದು ಸಾಧ್ಯವಿಲ್ಲ. ಮರಳಿ ವ್ಯಾಪಾರಕ್ಕೆ ಹೋಗಬೇಕು. ಆದರಿಂದ ನಿನಗೂ ನನಗೂ ವ್ಯಯಕ್ಕೆ ಬೇಕಾದಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನೆಲ್ಲವನ್ನೂ ಇಲ್ಲಿಯೇ ಇಟ್ಟು ಹೋಗೋಣ ಎಂದನು. ಅದಕ್ಕೆ ಧರ್ಮಬುದ್ಧಿಯು ಆ ಪಾಪಕರ್ಮನನ್ನು ತನ್ನಂಥವನೇ ಎಂದು ಬಗೆದು ಅದಕ್ಕೆ ಒಡಂಬಟ್ಟು ಒಂದು ದೊಡ್ಡ ಆಲದ ಮರದ ಬಳಿಯಲ್ಲಿ ಹೊನ್ನನ್ನು ಹೂಳಿ ಮರುದಿನ ಇಬ್ಬರೂ ನಗರಕ್ಕೆ ಹೋಗಿ ಇಷ್ಟ ವಿಷಯ ಕಾಮಭೋಗಗಳನ್ನು ಅನುಭವಿಸುತ್ತಿದ್ದರು. ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ವಂಚಿಸಿ ಹೋಗಿ ಹೊನ್ನನ್ನೆಲ್ಲ ಕೊಂಡು ಹೊಂಡವನ್ನು ಮೊದಲಿನಂತೆ ಮುಚ್ಚಿದನು. ಸ್ವಲ್ಪದಿನಗಳ ಮೇಲೆ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ವ್ಯಯಕ್ಕೆ ಇನ್ನು ಹೊನ್ನಿಲ್ಲ ; ಮತ್ತಷ್ಟು ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಬರೋಣ ಎಂದು ಒಟ್ಟಿಗೆ ಹೋಗಿ ಹೂಳಿದ ಸ್ಥಳವನ್ನು ಅಗೆಯಲು ಹೊನ್ನನ್ನು ಕಾಣದೆ ಉಸಿರದೆ ಇರಲು ಸುಳ್ಳು ತನ್ನ ಮೇಲೆ ಬರುವುದೆಂದು ಹೊನ್ನನ್ನೆಲ್ಲ ನೀನೇ ತೆಗೆದಿರಬೇಕು ಎಂದನು.

ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿವಂ ಪುಸಿಯುಂ
ಮತಿಗೆಟ್ಟು 'ತಸ್ಕರಸ್ಯಾ
ನೃತಂ ಬಲಂ' ಎನಿಪ ವಾಕ್ಯಮಂ ನೆನೆಯುತ್ತುಂ ೨೩.೩

ಅಂತು ದುಷ್ಟಬುದ್ಧಿ ಮುನ್ನಮೆ ಹಾ! ಹಾ! ಕೆಟ್ಟೆನೆಂದು ಬಾಯಂ ಬಸಿಱಂ ಪೊಯ್ದುಕೊಂಡು ಪುಯ್ಯಲಿಟ್ಟು ಧರ್ಮಬುದ್ಧಿಯ ಮೇಲೆ ಕಳವನಿಟ್ಟು ಕಾಪಟಿದು ಕಾತರಿಸಿ ನುಡಿಯೆ ತತ್ಕ್ಷಣಮಾಗಿಡಲ್ಪಡಿದು ನೀಂ ಗೆಲೆ ಬಾಯಾರ್ದು ಪೋಗಲ್ವಡೆಯೆ ವಿಚಾರಂಗೆಯ್ವಮೆಂದು ಧರ್ಮಾಧಿಕರಣರಲ್ಲಿಗೆ ಬಂದಿರ್ವರುಂ ತತ್ಪ್ರಪಂಚಮೆಲ್ಲಮಂ ಸವಿಸ್ತರಂ ನುಡಿದು ಕಡೆಯೊಳ್ ದುಷ್ಟಬುದ್ಧಿಯಿಂತೆಂದಂ : ಪೊನ್ನೆಲ್ಲಮನೀತನೆ ಕಳೆದುಕೊಂಡವರ್ಕೆ ಸಾಕ್ಷಿಯುಂಟೆನೆ ಸಭಾಸದರ್ ಸಾಕ್ಷಿಯಂ ಪೇಟೆನೆ ಪೊನ್ನಂ ಮಡಗುವಾಗಳೀತನುಮಾನುಮಲ್ಲದೆ ಮನುಷ್ಯರ್ ಪೆಱರಿಲ್ಲ, ತತ್ಸನ್ನಿಧಾನಸ್ಥಿತಮಪ್ಪ ವಟವೃಕ್ಷಮೇ ಸಾಕ್ಷಿಯೆಂಬುಮಂ ಧರ್ಮಾಧಿಕರಣರ್ ವಿಸ್ಮಯಂಬಟ್ಟು ಈತನ ಮಾತು ಅಶ್ರುತಪೂರ್ವಮೀ ಚೋದ್ಯಮಂ ನೋಡುವಮೆಂದು ಧರ್ಮಬುದ್ಧಿಯಂ ಕರೆದು ನೀನೀ ಸಾಕ್ಷಿಯಂ ಕೈಕೊಳ್ವುದೆಂದೊಡಾತಂ ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇಳ್ವರುಂ ಕೇಳ್ದರುಮಿಲ್ಲಮದಲ್ಲದೆಯುಂ,

ಶ್ಲೋ ॥ ಗೃಹಿಣಃ ಪುತ್ರಿಣೋ ಮೌಲಾಃ ಕ್ಷತ್ರವಿಟ್ಛೂದ್ರಯೋನಯಃ
ಇತ್ಯುಕ್ತಾಸ್ಸಾಕ್ಷ್ಯಮರ್ಹಂತಿ ನಯಕೋವಿದಮಾಪದಿ ॥೧೨೨॥

ಟೀ॥ ಗೃಹಸ್ಥರಪ್ಪ ಪುತ್ರರುಗಳುಳ್ಳ ಕ್ಷತ್ರಿಯವೈಶ್ಯಶೂದ್ರರುಗಳು ಆಪತ್ತಿನಲ್ಲಿ ನೀತಿವಿದರನೆ ಸಾಕ್ಷಿಯೆಂದು ಕೈಕೊಳ್ವರ್. ಎಂಬೀ ಶ್ಲೋಕಂಗಳೊಳಂ ಆವಾವ ವಿಷಯದೊಳಂ ಪ್ರಾಪ್ತಮನುಷ್ಯರೆ ಸಾಕ್ಷಿಯಪ್ಪರೆಂದು ಪೇಳ್ದರಲ್ಲದೆ ವೃಕ್ಷಂ ಸಾಕ್ಷಿಯೆಂದು ಪೇಳ್ದರಿಲ್ಲ; ಎಂತು ಕೈಕೊಳ್ವೆನೆನೆ ಧರ್ಮಾಧಿಕರಣದವರಿಂತೆಂದರ್ :

೨೩.೩. ಅತಿಕುಟಿಲ ಮನಸ್ಸಿನ ದುಷ್ಟಬುದ್ಧಿ ಮತಿಗೆಟ್ಟು ಧನಲೋಭದಿಂದ 'ತಸ್ಕರಸ್ಯಾನೃತಂ ಬಲಂ' ಎಂಬ ವಾಕ್ಯವನ್ನು ನೆನೆದು ಸುಳ್ಳನ್ನು ಆಡಿದನು. ವ॥ ಹಾಗೆ ದುಷ್ಟಬುದ್ಧಿಯು ಮೊದಲೇ ಹಾ! ಹಾ! ಕೆಟ್ಟೆನೆಂದು ಬಾಯನ್ನೂ ಹೊಟ್ಟೆಯನ್ನೂ ಹೊಡೆದುಕೊಳ್ಳುತ್ತ ಕೂಗಾಡಿ ಧರ್ಮಬುದ್ಧಿಯ ಮೇಲೆ ಕಳವನ್ನು ಆರೋಪಿಸಿದನು. ಧರ್ಮಬುದ್ಧಿಯು ವಿಚಾರಮಾಡೋಣವೆಂದು ಧರ್ಮಾಧಿಕರಣರಲ್ಲಿಗೆ ಬಂದು ಇಬ್ಬರೂ ಆ ವಿಚಾರವನ್ನೆಲ್ಲ ಸವಿಸ್ತಾರವಾಗಿ ನುಡಿದು ಕಟ್ಟಕಡೆಗೆ ದುಷ್ಟಬುದ್ಧಿಯು ಹೀಗೆಂದನು : ಹೊನ್ನೆಲ್ಲವನ್ನೂ ಈತನೇ ಕದ್ದಿರುವವನು ಎಂಬುದಕ್ಕೆ ಸಾಕ್ಷಿಯಿದೆ ಎನ್ನಲು ಸಭಾಸದರು ಸಾಕ್ಷಿಯನ್ನು ಹೇಳು ಎಂದನು. ಹೊನ್ನನ್ನು ಇಡುವಾಗ ಈತನೂ ನಾನೂ ಅಲ್ಲದೆ ಮನುಷ್ಯರು ಬೇರೆ ಯಾರೂ ಇರಲಿಲ್ಲ, ಅಲ್ಲಿದ್ದ ವಟವೃಕ್ಷವೇ ಸಾಕ್ಷಿ ಎಂದು ಹೇಳಿದನು. ಧರ್ಮಾಧಿಕರಣರು ವಿಸ್ಮಯಪಟ್ಟು ಈತನ ಮಾತು ಹಿಂದೆಂದೂ ಕೇಳದ ವಿಚಾರ. ಈ ಚೋದ್ಯವನ್ನು ನೋಡೋಣ ಎಂದು ಧರ್ಮಬುದ್ಧಿಯನ್ನು ಕರೆದು ನೀನು ಈ ಸಾಕ್ಷಿಯನ್ನು ಒಪ್ಪಿಕೊಳ್ಳುವುದು ಎನ್ನಲು ಆತನು ವೃಕ್ಷಸಾಕ್ಷಿಯನ್ನು ಈ ಹಿಂದೆ ಹೇಳಿದವರೂ ಕೇಳಿದವರೂ ಇಲ್ಲ. ಅಲ್ಲದೆ, ಶ್ಲೋ॥ ಗೃಹಸ್ಥರೂ ಮಕ್ಕಳೊಂದಿಗರೂ ಆದ ಕ್ಷತ್ರಿಯ ವೈಶ್ಯ ಶೂದ್ರರು ಆಪತ್ತಿನಲ್ಲಿ ನೀತಿವಿದರನ್ನೇ ಸಾಕ್ಷಿಯೆಂದು ಕೈಕೊಳ್ಳುವರು. ಪ್ರಾಪ್ತಮನುಷ್ಯರೇ ಸಾಕ್ಷಿಯಾಗುವರು ಎಂದು ಹೇಳಿದರಲ್ಲದೆ ವೃಕ್ಷಸಾಕ್ಷಿಯೆಂದು ಹೇಳಿದವರಿಲ್ಲ, ಹೇಗೆ

ಶ್ಲೋ॥ ಆದಿತ್ಯಚಂದ್ರಾವನಿಲೋನಲಶ್ಚ ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ
ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ ಧರ್ಮಸ್ಯ ಜಾನಾತಿ ನರಸ್ಯ ವೃತ್ತಂ ॥೧೨೩॥

ಟೀ॥ ಸೂರ್ಯಚಂದ್ರಮರುಗಳು ವಾಯು ಅಗ್ನಿ ಆಕಾಶ ಭೂಮಿ ಉದಕ ಹೃದಯ ಯಮನು ಹಗಲಿರುಳು ಉದಯ ಐಯ್ಯುಗಳು ಧರ್ಮವು ಎಂಬಿವು ಮನುಷ್ಯರ ನಡೆವಳಿಯ ನಱಿವುವು. ಎಂಬುದು ವಾಕ್ಯಮುಂಟು. ಮನುಷ್ಯರ ಸುಕೃತದುಷ್ಕೃತಂಗಳಂ ದೈವಗಳಱಿಗುಮದಱಿಂದೀ ಸಾಕ್ಷಿಯುಮುಚಿತಂ. ಮನುಷ್ಯಂ ಮೊದಲಾಗಿ ನುಡಿವುದರಿಂದೆಂಮೊಡೆ ಮರನಂ ನುಡಿಸುವುದು ಪರಮಗಹನಮೀ ಸಾಕ್ಷಿಯಂ ಕೈಕೊಳ್ವುದೆನೆ ಧರ್ಮಬುದ್ಧಿ ಕರಮೊಳ್ಳಿತ್ತು ಕೈಕೊಂಡೆನೆನೆ ಧರ್ಮಾಧಿಕರಣದವರಂದು ಪೊಱ್ತು ಪೋದುದು, ನಾಳೆ ಪೋಗಿ ಕೇಳ್ವಮೆನೆ ತಮ್ಮ ತಮ್ಮ ಮನೆಗೆಲ್ಲರುಂ ಪೋದರ್, ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕಯ್ಯಂ ಪಿಡಿದು ಕಟ್ಟೇಕಾಂತಕ್ಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇೞ್ದು ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವುಕಾಲಂ ಪಸಿಯದುಂಡು ಬಾಳ್ವಂತರ್ಥಂ ಸಾರ್ದಪುದು ನೀವಾ ಮರದ ಪೊಟಲೊಳಡಂಗಿರ್ದು ಧರ್ಮಬುದ್ಧಿಯೆ ಪೊನ್ನಂ ಕೊಂಡುಯ್ದನೆಂದು ನುಡಿಯಿಮೆಂಬುದು ಮಾತನಿಂತೆಂದಂ :

ಧರಣೀವಳಯಂ ಚಃ ಎನೆ
ಪರಧನಮಂ ಕಪಟವೃತ್ತಿಯಿಂ ವಂಚಿಸಿಕೊಂ
ಡುರುರಾಜ್ಯಶ್ರೀಸಹಿತಂ
ನಿರುತಮೊಳಂದಿಟೆದ ಕೌರವಂ ರೌರವಮಂ ೨೩೪

ಒಪ್ಪಿಕೊಳ್ಳಲಿ? ಎಂದನು. ಅದಕ್ಕೆ ಧರ್ಮಾಧಿಕರಣರು ಹೀಗೆಂದರು : ಶ್ಲೋ॥ ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ಉದಕ, ಹೃದಯ, ಯಮ, ಹಗಲಿರುಳು, ಉದಯ, ಅಸ್ತಮಾನ, ಧರ್ಮ ಎಂಬಿವು ಮನುಷ್ಯನ ನಡೆವಳಿಕೆಯನ್ನು ಅರಿಯುವುವು. ವ॥ ಮನುಷ್ಯರ ಸುಕೃತ ದುಷ್ಕೃತಗಳನ್ನು ದೈವಗಳು ತಿಳಿಯುವುವು. ಅದರಿಂದ ಈ ಸಾಕ್ಷಿಯೂ ಉಚಿತವಾದುದು. ಸಾಕ್ಷಿಯ ವಿಚಾರದಲ್ಲಿ ಮನುಷ್ಯನೇ ನುಡಿಯುವುದು ಅಸಾಧ್ಯವೆಂದ ಮೇಲೆ ಮರವನ್ನು ಮಾತನಾಡಿಸುವುದು ಪರಮಗಹನವಾದ ವಿಚಾರ. ಈ ಸಾಕ್ಷಿಯನ್ನು ಅಂಗೀಕರಿಸುವುದು ಎಂದರು. ಅದಕ್ಕೆ ಧರ್ಮಬುದ್ಧಿಯು ಒಳ್ಳೆಯದು ಹಾಗೆಯೇ ಆಗಲಿ ಎಂದನು. ಧರ್ಮಾಧಿಕರಣರು ಇಂದು ಹೊತ್ತು ಹೋಯಿತು ; ನಾಳೆ ಹೋಗಿ ಕೇಳೋಣ ಎನ್ನಲು ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಅಷ್ಟರಲ್ಲಿ ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಏಕಾಂತಕ್ಕೆ ಕರೆದು ಆ ವೃತ್ತಾಂತವೆಲ್ಲವನ್ನೂ ತಿಳಿಸಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣ ಬರುವುದು. ನೀವು ಆ ಮರದ ಪೊಟ್ಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹಣವನ್ನು ಕೊಂಡುಹೋದನೆಂದು ಹೇಳಿರಿ ಎನ್ನಲು ಅವನು ಹೀಗೆಂದನು : ೨೩೪. ಸಮಸ್ತ ಪ್ರಪಂಚವೂ ಛೀಮಾರಿ ಹಾಕಲು ಪರಧನವನ್ನು ಕಪಟವೃತ್ತಿಯಿಂದ ವಂಚಿಸಿ ಪಡೆದು

ಅಂತದಱಿಂ ಪರಧನಹರಣಮುಂ ಪರಸ್ತ್ರೀಗಮನಮುಂ ವಿಶ್ವಾಸಘಾತುಕಮುಂ ಸ್ವಾಮಿದ್ರೋಹಮುಂ ಇವೆಲ್ಲಮೇಗೆಯ್ದುಂ ಕಿಡಿಸುಗುಮಿಂತಪ್ಪುದೆಲ್ಲಮಂ ನೀನಱಿದಿರ್ದೆನ್ನುಮಂ ಸಾಕ್ಷಿ ಮಾಡಿ ನುಡಿಸಿ ಕಿಡಿಸಲ್ಬಗೆದೆ, ನಿನ್ನ ಪಙುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ. ಅದಲ್ಲದೆಯುಂ ನಿನ್ನ ಕಂಡೀಯುಪಾಯಕ್ಕಪಾಯಂ ಬಹುಳಮದೆಂತೆನೆ :

ಶ್ರೂಯತೇ ಹಿ ಸಮುದ್ರಾಂತೇ ನ ಕುಲ್ಯೈರ್ಭಕ್ಷಿತೋ ಬಕಃ

ಎಂಬ ಕಥೆಯಂ ಕೇಳ್ದಱಿವುದಿಲ್ಲಕ್ಕುಮೆನೆ ದುಷ್ಟಬುದ್ಧಿಯದೆಂತೆನೆ ಪ್ರೇಮಮತಿ ಪೇೞ್ಗುಂ :

೨೬. ಬಕನ ತತ್ತಿಯುಂ ಮುಂಗುರಿಗಳುಂ

ಸಮುದ್ರತೀರದೊಳೊಂದು ಮರದೊಳ್ ಬಕಮಿಥುನಮಿರ್ಕುಂ, ಅವಱ ತತ್ತಿಗಳನಾ ಮರದ ಕೆಲದ ಪುತ್ತಿನೊಳಿರ್ಪುದೊಂದು ಸರ್ಪಂ ಪರಿತಂದು ಮರನನಡರ್ದು ತಿನುತ್ತಿರೆ ಬಕಂ ಕಲುಷಿತಚಿತ್ತನಾಗಿಯೇಗೆಯ್ವುದುಮಱಿಯದೊಂದು ದಿವಸಂ ಸಮುದ್ರತೀರದೊಳ್ ನಿಂದು ಜಾನಿಸುತಿರ್ಪುದನೊಂದು ಕರ್ಕಟಕಂ ಕಂಡೇಂ ಭಾವಾ ! ನೀನಂದಾಹಾರಚಿಂತೆಯ ಮಾಣ್ದು ಪೇಹಾರಂಗೆಯ್ವರಂತೆ ಕಣ್ಣಂ ತಿಣ್ಣಂ ಮುಚ್ಚಿಕೊಂಡಿರ್ಪ ಕಾರಣಮಾವುದೆನೆ ಬಕನಿಂತೆಂದುದು : ಎನಗೆ ಮನದ ಮಱುಕಂ ಪಿರಿದುಮಾಹಾರಕ್ಕೆಂತು ಚಿಂತೆಗೆಯ್ವೆನೆನೆ ಕರ್ಕಟಕನದೇಂ ನಿಮಿತ್ತಮೆನೆ ತದ್ವೃತ್ತಾಂತಮೆಲ್ಲಮಂ ಬಕಂ ಪೇೞೆ ಕೇಳ್ದಿಂತೆಂದುದು :

ಅಂತಪ್ಪೊಡುರಗನಂ ಕೊ
ಲ್ವಂತಪ್ಪುಪದೇಶಮೊಂದನಾಂ ಪೇೞ್ದಪೆಂ
ನೀಂ ತಪ್ಪದೆ ಪಿಶಿತಮನು
ಯ್ವಂತಾ ನಕುಲಂಗಳಾದುವೆದೆಯುಂ ತೊಟ್ಟುಂ ೨೩೫

ಅಂದು ಕೌರವನು ರಾಜ್ಯಶ್ರೀಸಹಿತ ರೌರವವನ್ನು ಅನುಭವಿಸಿದನಲ್ಲವೇ? ವ।। ಅದರಿಂದ ಪರಧನಹರಣವೂ ಪರಸ್ತ್ರೀಗಮನವೂ ವಿಶ್ವಾಸಘಾತುಕವೂ ಸ್ವಾಮಿದ್ರೋಹವೂ ಇವೆಲ್ಲ ಏನು ಮಾಡಿದರೂ ಕೆಡುಕನ್ನು ಉಂಟುಮಾಡುವುವು. ಇವೆಲ್ಲವನ್ನು ನೀನು ತಿಳಿದಿದ್ದೂ ನನ್ನನ್ನು ಸಾಕ್ಷಿ ಮಾಡಿ ನುಡಿಸಿ ಕೆಡಿಸಲು ಯೋಚಿಸಿದೆ. ನಿನ್ನ ಕ್ಷುಲ್ಲಕಯೋಜನೆಯು ನಮ್ಮ ಕುಲವನ್ನೇ ನಾಶಮಾಡುವ ರೀತಿಯದು. ಅಲ್ಲದೆ ನಿನ್ನ ಈ ಬಗೆಯ ಉಪಾಯಕ್ಕೆ ಅಪಾಯ ಬಹಳವಿದೆ. 'ಶ್ರೂಯತೇ ಹಿ ಸಮುದ್ರಾಂತೇ ನಕುಲೈರ್ಭಕ್ಷಿತೋ ಬಕಃ' ಎಂಬ ಕಥೆಯನ್ನು ನೀನು ಕೇಳಿರಲಿಕ್ಕಿಲ್ಲ ಎನ್ನಲು ದುಷ್ಟಬುದ್ಧಿಯು ಅದೇನು ಎಂದು ಕೇಳಲು ಪ್ರೇಮಮತಿ ಹೇಳುವನು : ಸಮುದ್ರತೀರದ ಒಂದು ಮರದಲ್ಲಿ ಬಕಮಿಥುನಗಳಿದ್ದುವು. ಅವುಗಳ ತತ್ತಿಗಳನ್ನು ಆ ಮರದ ಬಳಿಯ ಹುತ್ತದಲ್ಲಿದ್ದ ಒಂದು ಸರ್ಪವು ಬಂದು ಮರವನ್ನೇರಿ ತಿನ್ನುತ್ತಿರಲು ಬಕವು ಕಲುಷಿತ ಚಿತ್ತದಿಂದ ಏನು ಮಾಡುವುದೆಂದು ತಿಳಿಯದೆ ಒಂದು ದಿವಸ ಸಮುದ್ರತೀರದಲ್ಲಿ ನಿಂತು ಜಾನಿಸುತ್ತಿತ್ತು. ಅದನ್ನು ಕಂಡು ಒಂದು ಏಡಿ, ಏನು ಭಾವಾ! ನೀನು ಇಂದು ಆಹಾರಚಿಂತೆಯನ್ನು ಬಿಟ್ಟು ತಪಸ್ವಿಗಳಂತೆ ಕಣ್ಣನ್ನು ತೀಕ್ಷ್ಣವಾಗಿ ಮುಚ್ಚಿಕೊಂಡಿರುವ ಕಾರಣವೇನು ಎನ್ನಲು ಬಕವು ಹೀಗೆಂದಿತು : ನನಗೆ ಮನೋಚಿಂತೆ ಅಧಿಕವಾಗಿದೆ ; ಆಹಾರದ ಚಿಂತೆ ಹೇಗುಂಟಾದೀತು ಎನ್ನಲು ಏಡಿ ಅದೇನು ಎಂದು ಕೇಳಲು ಆ ವೃತ್ತಾಂತವೆಲ್ಲವನ್ನೂ ಬಕವು ಕೇಳಿ ಹೀಗೆಂದಿತು ; ೨೩೫. ಹಾಗಾದರೆ ಸರ್ಪವನ್ನು ಕೊಲ್ಲುವಂಥ ಉಪದೇಶವೊಂದನ್ನು ತಿಳಿಸುವೆ. ನೀನು ಮತ್ಸ್ಯದ ಮಾಂಸವನ್ನು

ಉರಗನ ಪುತ್ತುವರಂ ಸೈ
ತಿರೆ ಸಾಲಿಟ್ಟಂತೆ ಮಾಂಸಖಂಡಮನಿಡೆ ಮುಂ
ಗುರಿಗಳ್ ಲಬ್ಧಾಸ್ವಾದದಿ
ನುರಗನುಮಂ ತಿಂಗುಮೆಂದು ಪೇೞ್ದುದುಮಾಗಳ್ ೨೩೬

ಅಂತೆಗಯ್ವೆನೆಂದುಮಾ ಬಕಂ ಮೀಂಗಳನಾಗಳೆ ಕೊಂದು ತಂದು ಕರ್ಕಟಂ ಪೇೞ್ದಂದ ದೊಳಿಕ್ಕುವುದುಂ ಮುಂಗುರಿಗಳ್ ಮತ್ಸ್ಯಮಾಂಸಮುಂ ತಿನುತಂ ಬಂದು ಪುತ್ತುಮನೈದುವುದುಂ ಉರಗಂ ಪೊಱಮಟ್ಟು ಮರನನಡರ್ವುದಂ ಕಂಡದಂ ಶತಖಂಡಂ ಮಾಡಿ ಕೊಂದು ತಿಂದು ಮತ್ತಂ ಮಱುದಿವಸಮಾ ಮಾರ್ಗದಿಂ ಬಂದೆಲ್ಲಿಯುಮುಡಗಂ ಪಡೆಯದೆ ಮರನನಡರ್ದು ಪಾವಿನ ಬಾಯಿಂ ಬರ್ದುಂಕಿದ ತತ್ತಿಗಳಂ ನಕುಲಂಗಳ್ ತಿಂದುವು.

ಅದಱಿಂ, ಶ್ಲೋ॥ ಉಪಾಯಂ ಚಿಂತಯೇತ್ ಪ್ರಾಜ್ಞಸ್ತಥಾಪಾಯಂ ಚ ಚಿಂತಯೇತ್
ಶ್ರೂಯತೇ ಹಿ ಸಮುದ್ರಾಂತೇ ನಕುಲೈರ್ಭಕ್ಷಿತೋ ಬಕಃ ॥೧೨೪॥

ಟೀ॥ ಬಲ್ಲವರುಪಾಯಮುಮಂ ಚಿಂತಿಸುವುದು. ಮೇಲೆ ಬರ್ಪಪಾಯಮುಮಂ ಚಿಂತಿಸುವುದು. ಅದೇನು ಕಾರಣಮೆಂದೊಡೆ ಸಮುದ್ರತೀರದಲ್ಲಿರ್ದ ಬಕನ ತತ್ತಿಗಳಂ ಮುಂಗುರಿಗಳ್ ತಿಂದು ವಪ್ಪುದೆ ಕಾರಣಮಾಗಿ ಎಂಬ ಕಥೆಯಂ ದುಷ್ಟಬುದ್ಧಿ ಕೇಳ್ದು ನೀನೊಂದು ಭಣಿತೆಯ ಕಥೆಯಂ ಪೇೞ್ದು ನಮ್ಮ ನಿರ್ವಾಹಮಂ ಕಿಡಿಸದೆನ್ನೆಂದುದಂ ಗೆಯ್ಯೆಂದು ತನ್ನ ತಂದೆಯನೊಡಂಬಡಿಸುತಿರ್ಪಿನ ಮಾದಿತ್ಯನಪರಗಿರಿಯನೆಯ್ದುವುದುಂ,

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ
ಚ್ಛಾದಿತದಿಙ್ಮುಖಂ ವ್ಯವಹಿತಾಖಿಲದೃಷ್ಟಿಪಥಂ ತಮಾಲ ಭೃಂ
ಗೋದರ ನೀರದಾಗಮ ಘನ ಪ್ರಕರಾಂಜನ ಪುಂಜ ಕೋಕಿಲಾ
ಬ್ಜೋದರಕಾಯಕಾಂತಿ ಶಿತಿಕಂಠಗಳಪ್ರತಿಮಪ್ರಭಂ ತಮಂ ೨೩೭

ತಂದು ಮುಂಗುರಿಗಳು ಆಡುವ ಸ್ಥಳದಿಂದ ೨೩೬. ಸರ್ಪದ ಹುತ್ತದ ವರೆಗೆ ಸರಿಯಾಗಿ ಸಾಲಾಗಿ ಮಾಂಸಖಂಡಗಳನ್ನು ಇಡಲು ವ॥ ಮುಂಗುರಿಗಳು ಮೀನುಗಳನ್ನು ತಿನ್ನುತ್ತ ಬಂದು ಹುತ್ತವನ್ನು ಸೇರಿದುವು. ಉರಗವು ಹೊರಹೊರಟು ಮರವನ್ನೇರುವುದನ್ನು ಕಂಡು ಅದನ್ನು ಶತಖಂಡ ಮಾಡಿಕೊಂದುವು. ಮರುದಿವಸ ಆ ಮಾರ್ಗದಲ್ಲಿಯೇ ಬಂದು ಎಲ್ಲಿಯೂ ಮಾಂಸವನ್ನು ಕಾಣದೆ ಮರವನ್ನೇರಿ ಹಾವಿನ ಬಾಯಿಯಿಂದ ಬದುಕಿದ ತತ್ತಿಗಳನ್ನು ಮುಂಗುರಿಗಳು ತಿಂದುವು. ಶ್ಲೋ॥ ಅದರಿಂದ ಪ್ರಾಜ್ಞರಾದವರು ಉಪಾಯವನ್ನು ಚಿಂತಿಸಬೇಕು ; ಅದರಿಂದ ಬರುವ ಅಪಾಯವನ್ನು ಚಿಂತಿಸಬೇಕು. ಸಮುದ್ರ ತೀರದಲ್ಲಿದ್ದ ಬಕನ ತತ್ತಿಗಳನ್ನು ಮುಂಗುರಿಗಳು ಹಾಗೆಯೇ ತಿಂದುವಲ್ಲವೇ ! ವ॥ ದುಷ್ಟಬುದ್ಧಿಯು ಆ ಕಥೆಯನ್ನು ಕೇಳಿ ನೀನು ಒಂದು ದಂತಕಥೆಯನ್ನು ಹೇಳಿ ನಮ್ಮ ಕಾರ್ಯವನ್ನು ಕೆಡಿಸದೆ ನಾನು ಹೇಳಿದುದನ್ನು ಮಾಡು ಎಂದು ತನ್ನ ತಂದೆಯನ್ನು ಒಪ್ಪಿಸುತ್ತಿರಲು ಸಂಜೆಯಾಯಿತು. ೨೩೭. ಆಕಾಶವನ್ನು ಆವರಿಸಿ ದಿಕ್ಕುಗಳನ್ನು ಮುಚ್ಚಿ ದೃಷ್ಟಿಯನ್ನು ತಡೆದು ಹೊಗೆ ತುಂಬಿ, ಮಳೆಗಾಲದ ಮೋಡ, ಕಾಡಿಗೆಯ ರಾಶಿ, ಕೋಗಿಲೆ, ವಿಷ್ಣುವಿನ ಕಾಯ ಕಾಂತಿ, ಶಿವನ ಕುತ್ತಿಗೆಯ ಬಣ್ಣದ ಕತ್ತಲೆ ಕ್ರಮೇಣ ಹಬ್ಬಿತು. ಕವಿದ ಕತ್ತಲೆಯಲ್ಲಿ ದುಷ್ಟಬುದ್ಧಿ ತನ್ನ ತಂದೆಯನ್ನು ಕೊಲ್ಲದೆ ಬಿಡೆನೆಂಬಂತೆ ಕರೆದುಕೊಂಡು ಹೋಗಿ ಮಾರಿಯ ಗುಡಿಗೆ

ಅಂತು ಕವಿದ ಕತ್ತಲೆಯೊಳ್ ದುಷ್ಟಬುದ್ಧಿ ತನ್ನ ತಂದೆಯಂ ಕೊಂದಲ್ಲದೆ ಮಾಣೆನೆಂದುಯ್ದಂತುಯ್ದು ಬಳಾರಿಯ ಮನೆಯಂ ಪರಕೆಯ ಕುಳಿಯಂ ಪುಗಿಸುವಂತೆ ವಟವಿಟಪಿ ಕೋಟರಕುಟೀರಾಂತರಮಂ ಪುಗಿಸಿ ಬವರಮಂ ಗೆಲ್ದೆನೆಂದು ರಾಗಿಸಿ ಮನೆಗೆವಂದು ನಿದ್ರಾಂಗನಾಸಕ್ತನಾದಂ. ಅನ್ನೆಗಮಿತ್ತಂ,

ಪರಧನಹರಣಾರ್ಥಂ ನಿಜ
ಗುರುವಧೆಯಂ ಮಾಳ್ಪ ದುಷ್ಟಬುದ್ಧಿಯ ಕಥೆಯಂ
ನಿರುತಂ ನೋಡಲ್ ಬರ್ಪಂ
ತಿರೆ ಬಂದಂ ಪೂರ್ವಗಿರಿಗೆ ಸರಸಿಜಮಿತ್ರಂ ೨೩೮

ಅಂತಾದಿತ್ಯೋದಯಮಾಗಲೊಡಂ ಧರ್ಮಬುದ್ಧಿ ದೇವಗುರು ದ್ವಿಜಪೂಜೆಗಳಂ ಮಾಡುತ್ತುಂ ತಡೆಯೆ ದುಷ್ಟಬುದ್ಧಿ ಮುಖಮಂ ತೊಳೆಯದೆ ಬಂದು ಧರ್ಮಾಧಿಕರಣಕ್ಕಿಂತೆಂದಂ:

ಪ್ರತ್ಯರ್ಥಿ ಬಂದನಿಲ್ಲ, ಪಿರಿದುಂ ಪೊಳ್ತು ಪೋದುದು; ಎನಗೆ ಕರ್ತವ್ಯಮಾವುದೆಂದು ನುಡಿಯುತಿರ್ಪನ್ನೆಗಂ, ಧರ್ಮಬುದ್ಧಿಯ ಬರವಂ ಕಂಡಾಕ್ಷಣದೊಳ್ ಧರ್ಮಾಧಿಕರಣರ್ ನಡೆಯಿಂ ನಿಮ್ಮಿರ್ವರ ಬವರಮಂ ತಿರ್ದುವವೆಂದು ವಟವೃಕ್ಷದ ಸಮೀಪಕ್ಕೆ ವಂದಷ್ಟವಿಧಾರ್ಚನೆಯಿಂದರ್ಚಿಸಿತದನಂತರಮಾಯಿರ್ವರುಮಂ ನುಡಿಸಿ ಬಳಿಕ್ಕಾ ಮರನನಿಂತೆಂದರ್ :

ಶ್ಲೋ॥ ಬ್ರೂಹಿ ಸಾಕ್ಷಿನ್ಯಥಾವೃತ್ತಂ ಲಂಬಂ ತೇ ಪಿತರಸ್ತವ
ತಥಾವಾಕ್ಯಮುದೀಕ್ಷಂತೇ ಉತ್ಪತಂತು ಪತಂತು ವಾ ॥೧೨೪॥

ಟೀ॥ ಎಲೈ ವೃಕ್ಷವೇ, ಪಿತೃಗಳ್ ನಿನ್ನನ್ನೇ ಅವಲಂಬಿಸಿ ಇರ್ದಪರು ; ನಿನ್ನ ವಾಕ್ಯವನೆ ಇಚ್ಛೈಸಿಪರು; ಉತ್ಪತನವಾಗಲಿ ಪತನವಾಗಲಿ ಯಥಾವೃತ್ತವಪ ಸಾಕ್ಷಿಯನೆ ನುಡಿ.

ಶ್ಲೋ॥ ನಗ್ನೋ ಮುಂಡಃ ಕಪಾಲೀ ಚ ಭಿಕ್ಷಾರ್ಥೀ ಕ್ಷುತ್ಪಿಪಾಸಿತಃ
ಅಂಧಶ್ಶತ್ರುಗೃಹಂ ಗಚ್ಛೇದ್ಯಸ್ಸಾಕ್ಷೀಚಾನೃತಂ ವದೇತ್ ॥೧೨೫॥

ಕುರಿಯನ್ನು ಕೊಂಡು ಹೋಗುವಂತೆ ಮರದ ಪೊಟ್ಟರೆಗೆ ಹೊಗಿಸಿ ಗೆದ್ದೆನೆಂದು ಮನೆಗೆ ಬಂದು ನಿದ್ದೆ ಮಾಡಿದನು. ೨೩೮. ಪರಧನವನ್ನು ಕಳಲಿಕ್ಕಾಗಿ ತನ್ನ ತಂದೆಯನ್ನು ವಧಿಸುವ ದುಷ್ಟಬುದ್ಧಿಯ ಕಥೆಯನ್ನು ತಾನು ನೋಡಲು ಬರುವಂತೆ ಪೂರ್ವದಲ್ಲಿ ಸೂರ್ಯ ಉದಯಿಸಿದನು. ವ॥ ಬೆಳಗಾಗಲು ಧರ್ಮಬುದ್ಧಿಯು ದೇವ, ಗುರು, ದ್ವಿಜಪೂಜೆಗಳನ್ನು ಮಾಡುತ್ತ ಕಳೆದನು. ದುಷ್ಟಬುದ್ಧಿ ಮುಖವನ್ನು ತೊಳೆಯದೆ ಬಂದು ಧರ್ಮಾಧಿಕರಣರಿಗೆ ಹೀಗೆಂದನು : ಪ್ರತ್ಯರ್ಥಿ ಬಂದಿಲ್ಲ, ಬಹಳ ಹೊತ್ತಾಯಿತು, ನಾನೇನು ಮಾಡಬೇಕು ಎಂದು ಕೇಳುತ್ತಿರಲು ಧರ್ಮಬುದ್ಧಿಯ ಬರವನ್ನು ಕಂಡು ಧರ್ಮಾಧಿಕರಣರು ನಡೆಯಿರಿ ನಿಮ್ಮಿಬ್ಬರ ಜಗಳವನ್ನು ತೀರ್ಮಾನಿಸುವೆವು ಎಂದು ವಟವೃಕ್ಷದ ಸಮೀಪಕ್ಕೆ ಬಂದರು. ಅಷ್ಟ ವಿಧಾರ್ಚನೆಯಿಂದ ಆಲದ ಮರವನ್ನು ಅರ್ಚಿಸಿ ಅನಂತರ ಅವರಿಬ್ಬರನ್ನೂ ವಿಚಾರಿಸಿ ಆ ಮರವನ್ನು ಕುರಿತು ಹೀಗೆಂದರು : ಶ್ಲೋ॥ ಎಲೈ ವೃಕ್ಷವೇ, ಪಿತೃಗಳು ನಿನ್ನನ್ನೇ ಅವಲಂಬಿಸಿರುವರು. ನಿನ್ನ ವಾಕ್ಯವನ್ನೇ ಬಯಸುತ್ತಿರುವರು. ಉದ್ಧಾರವಾಗಲಿ, ಅಧೋಗತಿಯಾಗಲಿ, ಸತ್ಯವಾದ ಸಾಕ್ಷಿಯನ್ನೇ ನುಡಿ ಎಂದರು. ಅಲ್ಲದೆ, ಶ್ಲೋ॥ ಯಾವ ಸಾಕ್ಷಿ ಸುಳ್ಳು ಹೇಳುವನೋ ಅವನು ದಿಗಂಬರನೂ ಬೋಳನೂ ಕಾಪಾಲಿಕನೂ ಭಿಕ್ಷುಕನೂ ಹಸಿವು ಬಾಯಾರಿಕೆಯುಳ್ಳವನೂ ಕುರುಡನೂ ಆಗಿ ಹಗೆಯ ಮನೆಗೆ ತಿರಿದುಣ್ಣುವುದಕ್ಕೆ

ಟೀ॥ ಆವನೋರ್ವ ಸಾಕ್ಷಿ ಅನೃತವಂ ನುಡಿವನು ಆವನು ದಿಗಂಬರನು, ಬೋಳನು, ಕಾಪಾಲಿಕನು, ಭಿಕ್ಷುಕನು, ಹಸಿವು ತೃಷೆಯುಳ್ಳಾತನು, ಕುರುಡನು ಆಗಿ ಹಗೆಯ ಮನೆಗೆ ತಿರಿದುಂಬುದಕ್ಕೆ ಪೋಹನು. ಎಂಬುದು ವಾಕ್ಯಮುಂಟು. ಸಾಕ್ಷಿಯಾಗಿ ತಪ್ಪಿ ನುಡಿವರ್ಗೆ ಪಾಪಮೆ ಸಂಭವಿಸುವುದು. ನೀನಪ್ಪೊಡೆ ಯಕ್ಷಾದಿ ದಿವ್ಯದೇವತಾವಾಸಮುಂ ಸೇವ್ಯಮುಮಪ್ಪ ವೃಕ್ಷಮದು ಕಾರಣದಿಂ ನಿನ್ನಂ ಸಾಕ್ಷಿಮಾಡಿ ಕೇಳ್ದಪೆವು. ನೀಂ ತಪ್ಪದೆ ನುಡಿಯೆಂದು ಧರ್ಮಾಧಿಕರಣಂ ಧರ್ಮಶ್ರವಣಂಗೆ ಯ್ಯುಸಿರದಿರ್ಪುದುಂ ಪೊಟರೊಳಡಂಗಿರ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯಂ ಬಿಟ್ಟು, 'ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ' ಎಂದು ನುಡಿವಂತೆ ಧರ್ಮಬುದ್ಧಿಯೆ ಧನಮಂ ತೆಗೆದುಕೊಂಡನೆಂದು ನುಡಿವುದುಂ ನೆರವಿಯುಂ ಧರ್ಮಾಧಿಕರಣಮುಂ ಚೋದ್ಯಂಬಟ್ಟರೆ ಧರ್ಮಬುದ್ಧಿ, 'ಧರ್ಮೋ ಜಯತಿ ನಾಧರ್ಮ ಇತ್ಯಮೋಘ ಕೃತಂ ವಚಃ' ಎಂಬೀ ವಾಕ್ಯಂ ತಪ್ಪಲಱಿಯದಪ್ಪುದಱಿಂದೆನಗಮಿದಂ ಚೋದ್ಯಮಿದು ದೈವಮಲ್ಲಕ್ಕುಮಂತಪ್ಪೊಡೆ ಸತ್ಯಮನೇಕೆ ನುಡಿಯದು. ಇದೇನಾನುಮೊಂದು ಕೃತ್ರಿಮಮಾಗಲೆವೇಳ್ಕುಮೆಂದಾ ಮರನಂ ಬಳಸಂದು ನೋಡಿ ಪಿರಿದಪ್ಪ ಪೊಟಲುಮನಲ್ಲಿಯ ಮನುಷ್ಯಸಂಚಾರಮಾಗಿರ್ದುದುಮಂ ಕಂಡು ನಿಶ್ಚೈಸಿ ಧರ್ಮಬುದ್ಧಿ ಧರ್ಮಾಧಿಕರಣರ್ಗಿಂತೆಂದಂ 'ಕಿರಾಟೋ ನಾಸ್ತಿ ನಿಶ್ಕೃತಃ' ಎಂಬ ವಾಕ್ಯಾರ್ಥದಿಂ ಹುಸಿಯಾದ ಬೇಹಾರಿಯೇ ಇಲ್ಲ, ನಾಂ ಬೇಹಾರಿಯಪ್ಪುದಱಿಂದೆಮ್ಮ ಜಾತಿಧರ್ಮಕ್ಕೆ ಧರ್ಮಬುದ್ಧಿಯಧರ್ಮಬುದ್ಧಿಯಾಗಿ ಧನಮಂ ಬಂಚಿಸಿಕೊಂಡೆನ್ನ ಮನೆಗುಯ್ವೆನೆಂಬನ್ನೆಗಂ ನೇಸರ್ಮೂಡಿವೊಡುಯ್ಯಲಿಂಬಲ್ಲದೆ ಮರದ ಪೊಟಲೊಳಗಿಟ್ಟು ಬಂದು ಮಱುದಿವಸಂ ಪೋಗಿ ನೋೞ್ಪನ್ನೆಗಂ ಆ ಪೊನ್ನನೊಂದು ಪನ್ನಗಂ

ಹೋಗುವನು. ವ॥ ಸಾಕ್ಷಿಯಾಗಿ ಸುಳ್ಳಾಡುವವರಿಗೆ ಪಾಪವೇ ಸಂಭವಿಸುವುದು. ನೀನಾದರೋ ಯಕ್ಷಾದಿ ದಿವ್ಯದೇವತಾವಾಸವೂ ಸೇವ್ಯವೂ ಆದ ವೃಕ್ಷವಾಗಿರುವೆ. ಆದರಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುವೆವು. ನೀನು ತಪ್ಪದೆ ನುಡಿಯೆಂದು ಧರ್ಮಾಧಿಕರಣರು ಕೇಳಿದರು. ಪೊಟ್ಟರೆಯಲ್ಲಿ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯನ್ನು ಬಿಟ್ಟು, 'ಪ್ರಕೃತಿವಿಕೃತಿಯಾದ ಮನುಷ್ಯನ ಆಯುಷ್ಯ ಕುಂದುವುದು' ಎಂದು ಜನರು ಹೇಳುವಂತೆ ಧರ್ಮಬುದ್ಧಿಯೇ ಧನವನ್ನು ತೆಗೆದುಕೊಂಡಿರುವನೆಂದು ಹೇಳಿದನು. ನೆರವಿಯೂ ಧರ್ಮಾಧಿಕರಣರೂ ಅದನ್ನು ಕೇಳಿ ವಿಸ್ಮಯಗೊಂಡರು. ಆಗ ಧರ್ಮಬುದ್ಧಿಯು 'ಧರ್ಮೋ ಜಯತಿ ನಾಧರ್ಮ ಇತ್ಯಮೋಘಕೃತಂ ವಚಃ' ಎಂಬ ವಾಕ್ಯ ಸುಳ್ಳಾಗುವುದು ಸಾಧ್ಯವಿಲ್ಲ, ನನಗೂ ಇದು ಆಶ್ಚರ್ಯ. ಇದು ದೈವವಲ್ಲ; ಆಗಿದ್ದರೆ ಸತ್ಯವನ್ನೇಕೆ ನುಡಿಯದು. ಇದೇನೋ ಒಂದು ಕೃತ್ರಿಮವಾಗಿರಲೇಬೇಕು ಎಂದು ಆ ಮರಕ್ಕೆ ಸುತ್ತು ಬಂದು ದೊಡ್ಡ ಪೊಟರೆಯನ್ನೂ, ಮನುಷ್ಯಸಂಚಾರವಾಗಿದ್ದ ಚಿಹ್ನೆಯನ್ನೂ ಕಂಡು ಧರ್ಮಬುದ್ಧಿಯು ಧರ್ಮಾಧಿಕರಣರನ್ನು ಕುರಿತು ಹೀಗೆಂದನು : 'ಕಿರಾಟೋ ನಾಸ್ತಿ ನಿಶ್ಕೃತಃ' ಹುಸಿಯದ ವ್ಯಾಪಾರಿಯೇ ಇಲ್ಲ ! ನಾನು ವ್ಯಾಪಾರಿಯಾಗಿರುವುದರಿಂದ ನನ್ನ ಜಾತಿಧರ್ಮಕ್ಕೆ ಧರ್ಮಬುದ್ಧಿ ಅಧರ್ಮಬುದ್ಧಿಯಾಗಿ ಧನವನ್ನು ವಂಚಿಸಿ ನನ್ನ ಮನೆಗೆ ಕೊಂಡುಹೋಗುವೆನು ಎಂದು ಮನಸ್ಸಿನಲ್ಲೇ ಎಣಿಸಿಕೊಂಡೆನು. ಆಗ ಸೂರ್ಯ ಮೂಡಿದುದರಿಂದ ತೆಗೆದುಕೊಂಡು ಹೋಗಲು ದಾರಿಯಿಲ್ಲದೆ ಮರದ ಪೊಟರೆಯಲ್ಲಿಟ್ಟು ಬಂದೆನು. ಮರುದಿನ ಹೋಗಿ ನೋಡಲು ಆ ಹೊನ್ನನ್ನು ಒಂದು ಸರ್ಪ ಸುತ್ತಿಕೊಂಡು

ಸುತ್ತಿಪಟ್ಟಿರ್ದೊಡೆ ಕೊಳಲಂಜಿ ಪೋದೆಂ. ನೀಮಿಲ್ಲಿರ್ದುಂತೆ. ನೋಡುತ್ತುಮಿರಿಂ; ಪೊಟರೆಯೊಳಗೆ ಪೊಗೆಯನಿಕ್ಕಿ ಪಾವಂ ಪೊಱಮಡಿಸಿ ಕಳ್ದುಕೊಂಡೊಡವೆಯುಂ ಕುಡುವೆನೆಂದು ಧರ್ಮಬುದ್ಧಿ ಪುಲ್ಲುಂ ಪುಳ್ಳಿಯುಂ ತರಿಸಿಯಾ ಪೊಟರೊಳಗಡಸಿ ತುಂಬಿ ದುಷ್ಟಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ ಕಿಚ್ಚನಿಕ್ಕಲೊಡಂ ಪೊಗೆ ಸುತ್ತಿಯುರಿಯುಟ್ಟಲ್ ಪ್ರೇಮಮತಿ ಧೃತಿಗೆಟ್ಟು ಪುಯ್ಯಲಿಟ್ಟು ಪೊಟರೊಳಗಿಂದಂ ಸುರುಳ್ದುರುಳ್ದು ಕಂಠಗತಪ್ರಾಣನಾಗಿರ್ಪುದುಮಂ ಧರ್ಮಾಧಿಕರಣರ್ ಕಂಡು ದುಷ್ಟಬುದ್ಧಿಯ ತಂದೆಯಪ್ಪುದಂ ಸಂದೆಯಮಿಲ್ಲೆಂದಱಿದು ಈ ಪಾಪಕರ್ಮನಪ್ಪ ದುಷ್ಪುತ್ರನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದೆಂದು ನುಡಿವುದುಂ ಪ್ರೇಮಮತಿಯಿಂತೆಂದಂ ; ಇನಿತನ್ಯಾಯಮನಾನೆ ಮಾಡಿದೆನೆನ್ನ ಮಗನ ಮೇಲೆ ದೋಷಮಾವುದುಮಿಲ್ಲೆಂದು ಲೋಕಾಂತರಿತನಾದಂ. ಅದೆಲ್ಲಮಂ ಕಂಡು ಧರ್ಮಾಧಿಕರಣರ್ ತಮ್ಮೊಳಿಂತೆಂದರ್ :

ಪುರುಷೋತ್ತಮನಾದರದಿಂ
ಪರೋಪಕಾರಾರ್ಥಮಿತ್ತನಾತ್ಮೀಯಕಳೇ
ಬರಮಂ ಸುತರಕ್ಷಾರ್ಥಂ
ಶರೀರಮಂ ಜನಕನೀವುದಾವುದು ಚೋದ್ಯಂ ೨೩೯

ಎಂದು ಸಭಾಸದರ್ ಪಱಿದೆರ್ದು ಪೋದರ್, ಅದಱಿಂ,

ಶ್ಲೋ ॥ ದುಷ್ಟಬುದ್ಧೇಸ್ಸುಬುದ್ಧೇಶ್ಚ ದ್ವಯೋರ್ಧರ್ಮಸ್ಯ ಸಂಶ್ರಯಾತ್
ಪುತ್ರಸ್ಯಾಪ್ಯತಿ ಪಾಂಡಿತ್ಯಾತ್ ಪಿತಾ ಧೂಮೇನ ಮಾರಿತಃ ॥೧೩೭॥

ಮಲಗಿರುವುದನ್ನು ಕಂಡು ಕೊಂಡುಹೋಗಲು ಅಂಜಿದೆನು, ನೀವೆಲ್ಲ ಇಲ್ಲಿಯೇ ಇದ್ದು ಹಾಗೆಯೇ ನೋಡುತ್ತ ಇರಿ. ಪೊಟ್ಟರೆಯಲ್ಲಿ ಹೊಗೆಯನ್ನು ಹಾಕಿ ಹಾವನ್ನು ಹೊರಹೊರಡಿಸಿ ಕದ್ದ ಒಡವೆಯನ್ನು ಕೊಡುವೆನು ಎಂದು ಧರ್ಮಬುದ್ಧಿ ಹುಲ್ಲನ್ನೂ ಕಟ್ಟಿಗೆಯನ್ನೂ ತರಿಸಿ ಆ ಪೊಟ್ಟರೆಯಲ್ಲಿ ತುಂಬಿ ದುಷ್ಟಬುದ್ಧಿಯ ಮನೆಗೆ ಕಿಚ್ಚು ಹಾಕುವಂತೆ ಬೆಂಕಿ ಹಾಕಿದನು. ಹೊಗೆ ಸುತ್ತಿ ಬೆಂಕಿ ಧಗಧಗಿಸಲು ಪ್ರೇಮಮತಿ ಧೈರ್ಯಗೆಟ್ಟು ಬೊಬ್ಬೆ ಹಾಕಿ ಪೊಟ್ಟರೆಯೊಳಗಿನಿಂದ ಹೊರಳಿ ಉರುಳಿ ಕಂಠಗತಪ್ರಾಣನಾದುದನ್ನು ಧರ್ಮಾಧಿಕರಣರು ಕಂಡು ದುಷ್ಟಬುದ್ಧಿಯ ತಂದೆಯಾಗಿರುವುದರಲ್ಲಿ ಸಂದೇಹವಿಲ್ಲ ಎಂದು ತಿಳಿದರು. ಈ ಪಾಪಕರ್ಮನಾಗಿರುವ ದುಷ್ಟಮಗನಿಂದ ನಿನಗೆ ಇಂಥ ದುರ್ಮರಣ ಉಂಟಾಯಿತು ಎಂದು ಹೇಳಿದರು. ಅದಕ್ಕೆ ಪ್ರೇಮಮತಿ ಹೀಗೆಂದನು : ಇಷ್ಟೆಲ್ಲ ಅನ್ಯಾಯಕ್ಕೆ ನಾನೇ ಕಾರಣನಾದೆ ; ನನ್ನ ಮಗನಲ್ಲಿ ಯಾವ ದೋಷವೂ ಇಲ್ಲ ಎಂದು ಲೋಕಾಂತರಕ್ಕೆ ಹೋದನು. ಅದೆಲ್ಲವನ್ನೂ ಕಂಡು ಧರ್ಮಾಧಿಕರಣರು ತಮ್ಮಲ್ಲೇ ಹೀಗೆಂದುಕೊಂಡರು: ೨೩೯. ಪರೋಪಕಾರಕ್ಕಾಗಿ ತನ್ನ ದೇಹತ್ಯಾಗ ಮಾಡಿದನು ಪುರುಷೋತ್ತಮನು. ತನ್ನ ಮಗನ ರಕ್ಷಣೆಗೆಂದು ತಂದೆ ತನ್ನ ಶರೀರವನ್ನು ಕೊಡುವುದು ಏನಾಶ್ಚರ್ಯ ವ॥ ಎಂದು ಸಭಾಸದರು ಅಲ್ಲಿಂದ ಚೆದರಿ ಎದ್ದು ಹೋದರು. ಅದರಿಂದ, ಶ್ಲೋ॥ ದುಷ್ಟಬುದ್ಧಿಯೂ, ಸುಬುದ್ಧಿಯೂ ಎಂಬಿಬ್ಬರೊಳಗೆ ದುಷ್ಟಬುದ್ಧಿಯು ದುರ್ಬುದ್ಧಿಯಿಂದ ತನ್ನ ತಂದೆಯನ್ನು

ಟೀ|| ದುಷ್ಟಬುದ್ಧಿಯುಂ ಸುಬುದ್ಧಿಯುಮೆಂಬಿರ್ವರೊಳಗೆ ದುಷ್ಟಬುದ್ಧಿ ದುರ್ಬುದ್ಧಿಯಿಂ ತನ್ನ ತಂದೆಯಂ ಹೊಗೆಯಿಂದಂ ಮರಣವನ್ನೆಯ್ದಿಸಿದನು ಎಂಬ ಕಥೆಯಂತೆ ನಿನ್ನ ಪಾಂಡಿತ್ಯದಿಂ ಪತಿಗಿನಿತನರ್ಥಮಾದುದು. 'ತಮ್ಮೊಡೆಗೆ ಮೋಹಿಪ ಶ್ವಾನಂ ಧರ್ಮಿಯನೇಕೆ ಬಾಳಲೀವುದು' ಎಂಬಂತೆ ನೀನುೞಿದರಂ ಬಾಳಲುಂ ಬಾರ್ದೆಂತಲೇಕಿತ್ತಪೆಯೆನೆ ದಮನಕನಿಂತೆಂದಂ : ಎತ್ತಂ ಸಿಂಗಂ ಕೊಂದೊಡೆ ನಿನಗಾವುದು ಭಯಂ ಬಂದಪ್ಪುದೆನೆ ದಾತ್ರಂ ಕರಟಕನಿಂತೆಂದಂ : 'ದಾಸೀ ಮೇಷ ವಿರುದ್ಧೇನ ವಾನರಾಃ ಪ್ರಳಯಂಗತಾಃ' ಎಂಬ ಕಥೆಯಂ ನಿನಗೆ ಪೇೞ್ವೆಂ ಕೇಳೆಂದಿಂತೆಂದಂ :

೨೭. ತಗರಿನ ಮತ್ತು ತೊತ್ತಿನ ಕಲಹದಿಂದ ಕಪಿಗಳು ಕೆಟ್ಟ ಕಥೆ

ಸಗರಪುರಮೆಂಬ ಪುರದೊಳ್
ಸಗರಾನ್ವಯದರಸನಧಿಕವಿಭವಂ ಪೆಸರಿಂ
ಸಗರಂ ತಗರಂ ಪೋಱಿದ
ಬಗೆಯಿಂ ತಗರಂ ವಿನೋದದಿಂದಂ ಪೊರೆದಂ ೨೪೦

ಅಂತಾತಂ ಪಲವುಂ ತಗರನಾಳ್ವ ಮಾಡದೊಳಂ ಮಂದುರದೊಳಂ ಕಟ್ಟಿಸಿರ್ದೊಡೊರ್ವ ಸೊರ್ಕಿದ ತೊೞ್ತು ತೊೞ್ತುಗೆಲಸಕ್ಕರಮನೆಯುಂ ಪುಗುವ ಪೊಱಮಡುವ ಪೊೞ್ತೊಳೆಲ್ಲಂ ಒಂದು ತಗರಂ ಬಗೆಯದೆ ಬಡಿಯುತ್ತುಮಿರ್ಪುದುಮೊಂದು ದಿವಸಮಾ ತೊೞ್ತು ಕಸಗೆ ಪಕ್ಕಾಗಿ ಬಂದಾ ಪಾಂಡೆ ನಿಲೆ, ಸಂಜಾತರೋಷಂ ಮೇಷಂ ಮುಳಿದು ಕೆಡೆಯೆ ಪಾಯ್ದೊಡವಳ್ ಕಡುಮುಳಿದು ಒರಿಯುದೊಂದುರಿವ ಕೊಳ್ಳಿಯಂ ತಂದಾ ತಗರಂ ಪೊಯ್ಯಲೊಡನದಱಮೆಯ್ಯನುರಿ ಪತ್ತಲ್ ಕಟ್ಟಿದ ನೇಣಂ ಪಱಿಯೆ ಪಾಯ್ದಾ ತಗರ್ ಪರಿದು ಕುದುರೆಯ ಮಂದುರಮಂ ಮಾಗಿ ಪುಗುವಂತೆ ಹೊಗೆಗೆ ಸಿಕ್ಕಿಸಿ ಕೊಂದನು. ವ|| ಅದರಿಂದ ನಿನ್ನ ಅತಿಪಾಂಡಿತ್ಯದಿಂದ ಒಡೆಯನಿಗೆ ಇಷ್ಟೆಲ್ಲ ಅನರ್ಥವುಂಟಾಯಿತು. 'ತನ್ನ ಯಜಮಾನನಿಗೇ ಬೊಗಳುವ ನಾಯಿ ಧರ್ಮಿಯನ್ನೇಕೆ ಬದುಕಲು ಬಿಡುವುದು?' ಎಂಬಂತೆ ನೀನು ಉಳಿದವರನ್ನು ಬದುಕಲು ಏಕೆ ಬಿಡುವೆ ಎಂದಿತು. ಅದಕ್ಕೆ ದವನಕನು ಹೀಗೆಂದನು : ಎತ್ತನ್ನು ಸಿಂಹ ಕೊಂದರೆ ನಿನಗೇನು ಭಯ ಎನ್ನಲು ಕರಟಕನು ಹೀಗೆಂದನು : 'ದಾಸೀ ಮೇಷ ವಿರುದ್ಧೇನ ವಾನರಾಃ ಪ್ರಳಯಂಗತಾಃ' ಎಂಬ ಕಥೆಯನ್ನು ನಿನಗೆ ಹೇಳುವೆನು, ಕೇಳು : ೨೪೦. ಸಗರಪುರ ಎಂಬ ಪಟ್ಟಣದಲ್ಲಿ ಸಗರವಂಶದ ಸಗರನೆಂಬ ಹೆಸರಿನ ಅರಸನು ಟಗರುಕಾಳಗಕ್ಕಾಗಿ ಟಗರುಗಳನ್ನು ಸಾಕುತ್ತಿದ್ದ. ವ|| ಹೀಗೆ ಅನೇಕ ಟಗರುಗಳನ್ನು ದೊಪ್ಪದಲ್ಲಿ ಕಟ್ಟಿಸಿದ. ಒಬ್ಬಳು ಸೊಕ್ಕಿದ ತೊತ್ತು ಅರಮನೆಗೆ ತೊತ್ತುಗೆಲಸಕ್ಕಾಗಿ ಹೋಗಿಬರುವ ಸಮಯದಲ್ಲೆಲ್ಲ ಒಂದು ಟಗರನ್ನು ಚೆನ್ನಾಗಿ ಹೊಡೆಯುತ್ತಿದ್ದಳು. ಒಂದು ದಿನ ಸರಿಯಾದ ಕಾಲ ಬರಲು ಕೋಪಗೊಂಡ ಟಗರು ಅವಳನ್ನು ಕೆಡೆಯಲು ಅವಳು ಸಿಟ್ಟಾಗಿ ಉರಿಯುವ ಕೊಳ್ಳಿಯೊಂದನ್ನು ತಂದು ಆ ಟಗರನ್ನು ಹೊಡೆಯಲು ಅದರ ಮೆಯ್ಗೆ ಬೆಂಕಿ ಹಿಡಿಯಲು ಅದು ಕಟ್ಟಿದ ನೇಣನ್ನು ಹರಿದುಕೊಂಡು ಮಾರಿ ಹೋಗುವಂತೆ ಕುದುರೆಯ ಲಾಯವನ್ನು ಹೊಕ್ಕಿತು. ಅದು ಅಲ್ಲಿಯ ಹುಲ್ಲಿನ ಮೇಲೆ ಹೊರಳಾಡಲು ಆ ಹುಲ್ಲು ಹೊತ್ತಿ ಹೊಗೆದು ಉರಿದು ಲಾಯವನ್ನು ಸುಡಲು ಅಲ್ಲಿ ಅರ್ಧ ಬೆಂದ ತುರಗಗಳನ್ನು ಕಂಡು ಅಶ್ವವೈದ್ಯರನ್ನು ಕರೆದು ಇವುಗಳಿಗೆ ತಕ್ಕ ಚಿಕಿತ್ಸೆ ಏನೆಂದು ಕೇಳಿದನು. ವೈದ್ಯರು ಇದಕ್ಕೆ ಮರ್ಕಟಗಳ ನೆಣವೂ ನೆತ್ತರೂ ಮದ್ದು ಎಂದು ಹೇಳಿದರು. ರಾಜನ ಅಪ್ಪಣೆಯಂತೆ ಪುರಜನರೂ

ಪೊಕ್ಕು ಚರಣೆಯ ಪುಲ್ಲೊಳ್ ಪೊರಬಲೊಡಮಾ ಪುಲ್ಲು ಪೊತ್ತಿ ಪೊಗೆದುರಿದು ಮಂದುರಮಂ ಪೊತ್ತಿಸಿದೊಡಲ್ಲಿಯುಲೆಯಿಂ ತುರಗಂಗಳಸರಸಂ ಕಂಡು ಅಶ್ವವೈದ್ಯರಂ ಕರೆದಿವರ್ಕೆ ತಕ್ಕ ಚಿಕಿತ್ಸೆಯಂ ಬೆಸಸೆಂದೆ ವೈದ್ಯರಿಂದೆ ಮರ್ಕಟಂಗಳ ಮೇದಮುಂ ನೆತ್ತರುಮಂ ಮರ್ದಿಂದೊಡರಸನ ಬೆಸದೊಳ್ ಪರಿಜನಮುಂ ಜನಮುಮುಂ ಪರಿತಂದು ಕಪಿಚರಂಗಳಂ ನಿರವಶೇಷಂಗಳಂ ಮಾಡಿ ಕೊಂದರ್, ಅದಱಿಂ,

ಶ್ಲೋ॥ ಜಾತೀಮೇಷವಿರುದ್ಧೇಷು ಮಾನಗಾಃ ಪ್ರಳಯಂಗತಾಃ
ತಸ್ಮಾತ್ಕಲಹ ಸಂಯೋಗಂ ದೂರತಃ ಪರಿವರ್ಜಯೇತ್ ॥೧.೨೭॥

ಟೀ॥ ತಗರ ಮುತ್ತ ತೂಂತಿನ ಕಲಹದಿಂ ಕಪಿಗಳ್ ಕೆಟ್ಟುವು. ಅದಱಿಂ ಕಲಹಶೀಲನಂ ದೂರದೊಳಿರಿಸವೇಡ್ಕುಂ ಎಂದು ವೃತ್ತಂ

ಕಲಹಸ್ಥಾನಂಗಳೊಳಂ
ಕಲಹಪ್ರಿಯರಪ್ಪ ಜನದ ಸಂವಾದದೊಳಂ
ನೆಲಸಿದ ಸಾಧುಜನಾಳಿಗೆ
ಪಲತೆಱದಿನಪಾಯಮಕ್ಕುಮೆಂತುಂ ತುದಿಯೊಳ್ ೨೪೧

ಅದಱಿಂ ಕಲಹಕ್ಕೆ ಕಾರಣಮಿಲ್ಲದ ಪರಮಮಿತ್ರನಂ ಭೇದಿಸಿ ಕಾದಿಸಿದ ಕಲಹದ ಪ್ರಿಯಂ ನೀಂ, ನಿನ್ನ ಸಮೀಪದೊಳಿನ್ನಿರಲಾಗದೆಂದು ಕರಟಕಂ ದವನಕನನಗಲ್ದು ಪೋದಂ. ಅನ್ನೆಗಮಿತ್ತಲ್ ತಾರಪರ್ವತದ ತಪ್ಪಲೊಳ್ ಬಿಬ್ದಿರ್ದ ಗಂಡಶೈಲಮಂ ಪೋಲ್ತಿರ್ದ ಗೋಪತಿಯಂ ಮೃಗಾಧಿಪತಿ ನೋಡಿ ಕರುಣಾರಸಾರ್ದ್ರಹೃದಯನಾಗಿ ಮನಂ ಮಿಕ್ಕು ಖಿನ್ನನಾಗಿರ್ದ ಪಿಂಗಳಕನಲ್ಲಿಗೆ ದವನಕಂ ಬಂದು, ದೇವಾ! ನೀಮೀ ದ್ರೋಹನ ಮುಂದೆ ನಿಂದಿರ್ದೇನೆಂದು ಚಿಂತಿಸುತಿರ್ದಪಿರೆನೆ ಪಿಂಗಳಕಂ ಕಡುಮುಳಿದೆಲೆ ಪಾತಕ! ಮುನ್ನಂ ನಿನ್ನ ಪ್ರೇರಣೆಯಿಂದೀ ಪಶುವಂ ಕೊಂದು ದುರ್ಗತಿಯಂ ಮಾಡಿಕೊಂಡೆಂ. ಇನ್ನಾಂ ನಿನಗೆ ಮುಳಿದೊಡೆನ್ನ ಜಸಂ ಮಸುಳಿಸುಗುಮುಸಿರದೆ ಪೋಗು ಮೇಲಪ್ಪುದಂ

ಪರಿಜನರೂ ಹೋಗಿ ಮಂಗಗಳನ್ನೆಲ್ಲ ಕೊಂದರು. ಅದರಿಂದ ಶ್ಲೋ॥ ಟಗರು ಮತ್ತು ತೊತ್ತಿನ ಕಲಹದಿಂದ ಕಪಿಗಳು ಸತ್ತುವು. ಅದರಿಂದ ಕಲಹಶೀಲನನ್ನು ದೂರದಲ್ಲೇ ಇರಿಸಬೇಕು. ಅಲ್ಲದೆ ೨೪೧. ಕಲಹಸ್ಥಾನಗಳಲ್ಲಿಯೂ ಕಲಹಪ್ರಿಯರಾದ ಜನರ ಸಂವಾದದಲ್ಲಿಯೂ ನೆಲೆಸಿದ ಸಾಧುಜನರಿಗೆ ಹಲವು ರೀತಿಯ ಅಪಾಯಗಳು ಕೊನೆಯಲ್ಲಿ ತಪ್ಪಿದ್ದಲ್ಲ. ವ॥ ಆದರಿಂದ ಕಲಹಕ್ಕೆ ಕಾರಣನಲ್ಲದ ಪರಮಮಿತ್ರನನ್ನು ಭೇದಿಸಿ ಕಾಡಿಸಿದ ಕಲಹಪ್ರಿಯ ನೀನು ; ನಿನ್ನ ಸಮೀಪದಲ್ಲಿ ಇನ್ನು ಇರಬಾರದೆಂದು ಕರಟಕನು ದವನಕನನ್ನು ಬಿಟ್ಟುಹೋದನು. ಅಷ್ಟರಲ್ಲಿ ಇತ್ತ ತಾರಪರ್ವತದ ತಪ್ಪಲಲ್ಲಿ ಬಿದ್ದಿದ್ದ ಗಂಡಪರ್ವತವನ್ನು ಹೋಲುತ್ತಿದ್ದ ಗೋಪತಿಯನ್ನು ಮೃಗಾಧಿಪತಿ ನೋಡಿ ಕರುಣಾರಸಾರ್ದ್ರಹೃದಯನಾಗಿ ಮನಸ್ಸು ಮೀರಿ ಖಿನ್ನನಾಗಿದ್ದ ಪಿಂಗಳಕನಲ್ಲಿಗೆ ದವನಕನು ಬಂದು ಹೀಗೆಂದನು : ದೇವಾ; ನೀವು ಈ ದ್ರೋಹಿಯ ಮುಂದೆ ನಿಂತು ಏನೆಂದು ಚಿಂತಿಸುತ್ತಿದ್ದೀರಿ ? ಆದಕ್ಕೆ ಪಿಂಗಳಕನು ಕಡುಕೋಪದಿಂದ, ಎಲೆ ಪಾತಕಿ ! ಮೊದಲು ನಿನ್ನ ಪ್ರೇರಣೆಯಿಂದ ಈ ಪಶುವನ್ನು ಕೊಂದು ದುರ್ಗತಿಯನ್ನು ಮಾಡಿಕೊಂಡೆ; ಇನ್ನು ನಾನು ನಿನ್ನ ಮೇಲೆ ಸಿಟ್ಟಾದರೆ ನನ್ನ ಯಶಸ್ಸು ಕುಂದುವುದು; ಉಸಿರೆತ್ತದೆ ಇಲ್ಲಿಂದ ಹೋಗು; ಮುಂದಾಗುವುದನ್ನು ನಾನೇ ಬಲ್ಲೆ ಎಂದನು. ನರಿ ಸಿಂಹದ ಕಠೋರ ಸ್ವಭಾವವನ್ನು ತಿಳಿಯದಿದ್ದುದರಿಂದ ಸಂದೇಹಿಸದೆ

ನಾನೆ ಬಲ್ಲೆನೆನೆ, ನರಿ ತರಿಯ ಪುರುಷಾಕಾರದ ಪುರುಳನರಿಪುದಪ್ಪುದರಿಂ ಶಂಕಿಸದೆ ಮತ್ತಮಿಂತೆಂದುದು: ದೇವಾ! ನೀನೆನ್ನನೇಗೆಯ್ದೊಡಮಕ್ಕುಂ ಸಿಂಹದೊಡನೆಟ್ಟು ಪೋರ್ದುದೆಂಬುದಂ ಕಥೆಗಳೊಳಪ್ಪೊಡಂ ಕೇಳ್ದುದಿಲ್ಲ, ಸಂಜೀವಕಂ ನಿನ್ನ ಮುನ್ನಿನ ಭವದ ಪಗೆ ಪಶುವಾಗಿ ಪುಟ್ಟಿ.

ಶ್ಲೋ॥ ಹಾದೇ ಹಾಸ್ಯೇನ್ನಪಾನಾದೌ ಶತ್ರುಣಾ ಸಹಭೋಜನಂ
ಸಂಬಂಧಮಪಿ ಕುರ್ವೀತ ತತ್ರ ವೈರಮನುಸ್ಮರೇತ್ ॥೧೩೮॥

ಟೀ॥ ಮೆಲ್ಪಲ್ಲಿ ನಗುವಲ್ಲಿ ಅನ್ನಪಾನಾದಿಕಂಗಳಲ್ಲಿ ನುಡಿವಲ್ಲಿ ವಿರೋಧಿಗಳ ಸಹಭೋಜನಮಂ ಸಂಬಂಧಮನಾದರೂ ಮಾಡುವುದು, ಅಲ್ಲಿ ತನ್ನ ವೈರಮಂ ನೆನೆವುದು ಎಂಬುದಂ ಬಗೆಯದ ನಿಮ್ಮೊಳ್ ಕೊರ್ಬಿ ಕೋಡಿಟ್ಟು ಮೇಲ್ವಾಯ್ದು ಸತ್ತುದು. ನೀನುಂ ನಿನ್ನಾಯುಷ್ಯಬಲದಿಂ ಬರ್ದುಂಕಿದೆ. ಇಂತಪ್ಪ ಪಗೆಯಂ ಕೊಂದು ಸಂತೋಷಂಬಡುವುದಲ್ಲದೆ ಚಿಂತೆಗೆಯ್ವುದೇಕೆನೆ ಮತ್ತಂ ಪಿಂಗಳಕನಿಂತೆಂದಂ: ಸಂಜೀವಕನೆನಗೆ ತಪ್ಪಿದೊಡಾಂ ಸೈರಿಸುವುದೆ ಧರ್ಮಮದಲ್ಲದಾಸದರ್ಕೆ ತಪ್ಪುವುದೆಂತುಂ ಧರ್ಮಮಲ್ಲದೆಂತೆನೆ :

ಶ್ಲೋ॥ ಅಪಹೃತಲಕ್ಷ್ಮೀರ್ಹರಣಾರ್ಥ ವೈರತಾಮಚಿಂತಯಿತ್ವಾ ಚ ತದದ್ರಿಮರ್ದನಂ
ದದೌ ನಿವಾಸಂ ಹರಯೇ ಮಹೋದಧಿರ್ವಿಮತ್ಸರಾ ಧೀರಧಿಯಾಂ
ಹಿ ವೃತ್ತಯಃ ॥೧೩೯॥

ಟೀ॥ ಮಂದರಾಚಲದಿಂ ನೋಯೆ ಕಡೆದೊಡಂ ಅಲ್ಲಿ ಪುಟ್ಟಿದಂತಪ್ಪ ಲಕ್ಷ್ಮಿಯಂ ಕೊಂಡೊಡು ವಾರಿಧಿ ಹರಿಯಿರಲ್ಕೆಡೆಗೊಟ್ಟುದಲ್ಲದೆ ವೈರಮಂ ನೆನೆದುದಿಲ್ಲ, ಅದು ಕಾರಣಮಾಗಿ ಹಿರಿಯರ ನೆಗಳ್ತೆಗಳಪೆಂದುಂ ದೋಷಮನೈದುವುದಲ್ಲ ಎಂಬುದು ಮಹಾಸತ್ಪುರುಷರ ಚರಿತಂ. ಇಂತಪ್ಪುದನಾಂ ಬಗೆಯದೆ ಸಂಜೀವಕನಂ ಕೊಂದೀ ಜಗದೊಳ್ ನಿಂದಿಸಿಕೊಂಡೆಂ. ಇನ್ನಿದಾಡುದನಪ್ಪೆಂ. ಆಗಲಾಜದ ಪಕ್ಷಂ ಮುಮುಕ್ಷುವೃತ್ತಿಯೊಳಿರ್ಪೆನೆನೆ ದವನಕನಿಂತೆಂದಂ : ದೇವಾ! ನೀವೊರ್ಬರಲ್ಲದು ಮುನ್ನಂ

ಪುನಃ ಹೀಗೆಂದಿತು : ದೇವಾ ! ನೀನು ನನ್ನನ್ನು ಏನು ಮಾಡಿದರೂ ಸರಿ. ಸಿಂಹದೊಡನೆ ಎತ್ತು ಹೋರಾಡಿತು ಎಂಬುದನ್ನು ಕಥೆಗಳಲ್ಲೂ ಕೇಳಿರಲಿಲ್ಲ. ಸಂಜೀವಕನು ನಿನ್ನ ಪೂರ್ವಜನ್ಮದ ಶತ್ರು. ಪಶುವಾಗಿ ಹುಟ್ಟಿ ಶ್ಲೋ॥ ಮೆಲ್ಲುವಲ್ಲಿ, ನಗುವಲ್ಲಿ, ಅನ್ನಪಾನಾದಿಗಳಲ್ಲಿ, ನುಡಿವಲ್ಲಿ ವಿರೋಧಿಗಳ ಸಹಭೋಜನವನ್ನೂ ಸಂಬಂಧವನ್ನೂ ಮಾಡಬೇಕು ; ಅಲ್ಲಿ ತನ್ನ ವೈರವನ್ನು ನೆನೆಯಬೇಕು ವ॥ ಎಂದು ಬಗೆದು ನಿಮ್ಮೊಡನೆ ಕೊಬ್ಬಿ ಕೋಡಿನಿಂದ ಹೋರಾಡಿ ಸತ್ತುದು. ನೀನೂ ನಿನ್ನ ಆಯುಷ್ಯ ಬಲದಿಂದ ಬದುಕಿದೆ. ಇಂತಹ ಹಗೆಯನ್ನು ಕೊಂದು ಸಂತೋಷಪಡಬೇಕೇ ಹೊರತು ಚಿಂತಿಸುವುದು ತರವಲ್ಲ ಎಂದನು. ಆದಕ್ಕೆ ಪಿಂಗಳಕನು ಹೀಗೆಂದನು : ಸಂಜೀವಕನು ನನ್ನ ಮೇಲೆ ತಪ್ಪು ಮಾಡಿದರೆ ನಾನು ಸಹಿಸುವುದೇ ಧರ್ಮ, ಅದಕ್ಕೆ ನಾನು ತಪ್ಪುವುದು ಎಷ್ಟಕ್ಕೂ ಧರ್ಮವಲ್ಲ. ಶ್ಲೋ॥ ಮಂದರಾಚಲದಿಂದ ನೋಯುವಂತೆ ಕಡೆದರೂ ಅಲ್ಲಿ ಹುಟ್ಟಿದಂಥ ಲಕ್ಷ್ಮಿಯನ್ನು ತೆಗೆದುಕೊಂಡರೂ ವಾರಿಧಿ ವಿಷ್ಣುವಿಗೆ ಎಡೆಕೊಟ್ಟಿತಲ್ಲದೆ ವೈರವನ್ನು ನೆನೆಯಲಿಲ್ಲ. ಅದರಿಂದ ಮಹಾತ್ಮರ ಕೆಲಸವೆಂದೂ ದೋಷದಿಂದ ಕೂಡಿರುವುದಿಲ್ಲ. ಇದು ಮಹಾ ಸತ್ಪುರುಷರ ಚರಿತೆ. ವ॥ ಹೀಗಿರುವುದನ್ನು ನಾನು ಬಗೆಯದೆ ಸಂಜೀವಕನನ್ನು ಕೊಂದು ಈ ಜಗತ್ತಿನಲ್ಲಿ ನಿಂದಿತನಾದೆ. ಇನ್ನು ಇದರ ಗತಿಯನ್ನೇ ನಾನು ಹೊಂದುವೆ ; ಆಗದಿದ್ದಲ್ಲಿ ವೈರಾಗ್ಯ ವೃತ್ತಿಯಿಂದಿರುವೆ ಎಂದಿತು. ಅದಕ್ಕೆ ದವನಕನು ಹೀಗೆಂದನು : ದೇವಾ ! ನೀವೊಬ್ಬರಲ್ಲ. ಹಿಂದೆ ಕ್ಷತ್ರಿಯಕುಮಾರನಾದ ಯುಧಿಷ್ಠಿರನು ಸಹೋದರರನ್ನು ದಾಯಾದಿಗಳೆಂದು ಕೊಂದು

ರಾಜತನೂಜನಪ್ಪಂ ಯುಧಿಷ್ಠಿರಂ ಮೊದಲಾಗಿ ಸೋದರರಂ ದಾಯಾದರೆಂದು ಕೊಂದು ಬಳಿಕ್ಕೆ ವೈರಾಗ್ಯಂ ಪುಟ್ಟಿ ರಾಜ್ಯಂಗೆಯ್ಯಲೊಲ್ಲದಿರೆ, ಗುರುಜನಮುಂ ಬಂಧುಜನಮುಮಾತನಂ ತಿಳಿಪಿ ರಾಜ್ಯಂಗೆಯಿಸಿದರದಱಿಂ ದೇವಾ ನೀವೀ ಪಶ್ಚಾತ್ತಾಪಮಂ ಮಾಣ್ದು ನಿಶ್ಚಿಂತರಾಗಿರ್ಪುದೆನೆ ಪಿಂಗಳಕನಲ್ಲಿಂ ತಳರ್ದು ಮತ್ತಮೊಂದು ರಮ್ಯಪ್ರದೇಶಕ್ಕೆ ಪೋಗಿ,

ಭ್ರಾಜಿಷ್ಣು ಸಮದ ಸಾಮಜ
ರಾಜಿಶಿರಃಪೀಠದಳನದಕ್ಷಂ ರಾಜ
ತ್ತೇಜೋನಿಧಿ ಬಲದೊಳ್ ಮೃಗ
ರಾಜಂ ಸುಖಸಂಕಥಾವಿನೋದದೊಳಿರ್ದಂ ೨೪೨

ಕಾದಿ ಗೆಲಲ್ಕಸಾಧ್ಯರೆನೆ ಸಂದ ಸರಿತ್ಸುತ ಕುಂಭಜರ್ಕಳಂ
ಭೇದಿಸಿ ಕಾದಿ ಗೆಲ್ದನಧಿಕಂ ಯಮನಂದನನೆಂದೊಡೊಂದೆ ಸಾ
ಮಾದಿನಯಂಗಳೊಳ್ ಸುನಯ ಸಾಧನಮಪ್ಪುದು ಭೇದಮಂತದಂ
ಭೇದಿಸಿ ದುರ್ಗಸಿಂಹ ಮತದಿಂದಮೆ ಗೆಲ್ಗೆ ವಿರೋಧಿವರ್ಗಮಂ ೨೪೩

ಉದಯೋತ್ತುಂಗನಗ ಸ್ವಭಾವದಿನಪಂ ಪ್ರೋದ್ದಾಮಧರ್ಮ ಕ್ಷಮಾ
ಜದ ಬೇರ್ ಸ್ವಾಮಿಹಿತೌಘ ನಿರ್ಮಲ ಮಹಾರತ್ನಾಕರಂ ನೀತಿಶಾ
ಸ್ತ್ರದ ಮಂತ್ರಕ್ಕಧಿದೈವತಂ ದ್ವಿಜಕುಲ ಶ್ರೀಕೇಳಿ ಸಂವಾಸಮೆಂ
ಬುದು ಸರ್ವೋರ್ವರೆ ಧರ್ಮನಿರ್ಮಲ ಯಶಸ್ಸದ್ವರ್ಗನಂ ದುರ್ಗನಂ ೨೪೪

ಇದು ವಿನಮದಮರರಾಜಮೌಳಿ ಮಾಣಿಕ್ಯ ಮರೀಚಿ ಮಂಜರೀ ಪುಂಜರಂಜಿತ ಭಗವದ್ಭವಾನೀವಲ್ಲಭ ಚರಣ ಸರಸಿರುಹ ಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹ ವಿರಚಿತಮಪ್ಪ ಪಂಚತಂತ್ರದೊಳ್ ಭೇದಪ್ರಕರಣ ವರ್ಣನಂ ಪ್ರಥಮತಂತ್ರಂ ಸಮಾಪ್ತಂ

ಬಳಿಕ ವೈರಾಗ್ಯ ಹುಟ್ಟಿ ರಾಜ್ಯಭಾರ ಮಾಡದಿರಲು ಗುರುಜನರೂ ಬಂಧುಜನರೂ ಆತನಿಗೆ ಬುದ್ಧಿ ಹೇಳಿ ಪುನಃ ರಾಜ್ಯಭಾರ ಮಾಡುವಂತೆ ಮಾಡಿದರು. ಆದರಿಂದ ದೇವಾ! ನೀವು ನಿಶ್ಚಿಂತರಾಗಿರಬೇಕು ಎಂದಿತು. ಪಿಂಗಳಕನು ಅಲ್ಲಿಂದ ಹೊರಟು ಮತ್ತೊಂದು ರಮ್ಯಪ್ರದೇಶಕ್ಕೆ ಹೋಗಿ, ೨೪೨. ಕಾಂತಿಯುತನೂ ಮದ್ದಾನೆಗಳ ಕುಂಭಸ್ಥಳಗಳನ್ನು ಭೇದಿಸುವುದರಲ್ಲಿ ಶಕ್ತನೂ ಆದ ಮೃಗರಾಜನು ಹೊಳೆಯುವ ತೇಜೋನಿಧಿಬಲದೊಡನೆ ಸುಖಸಂಕಥಾ ವಿನೋದದಿಂದಿದ್ದನು. ೨೪೩. ಕಾದಾಡಿ ಗೆಲ್ಲಲು ಅಸಾಧ್ಯರಾದ ಪ್ರಸಿದ್ಧರಾದ ಭೀಷ್ಮದ್ರೋಣಾದಿಗಳನ್ನು ಭೇದಿಸಿ ಕಾದಾಡಿ ಯುಧಿಷ್ಠಿರನು ಗೆದ್ದನು. ಆದರಿಂದ ಸಾಮಾದಿ ನೀತಿಗಳಿಂದ ಸುನೀತಿ ಸಾಧನವಾಗುವುದು ಭೇದ ನೀತಿ, ಅದರಿಂದ ವಿರೋಧಿವರ್ಗವನ್ನು ದುರ್ಗಸಿಂಹ ಮತದಿಂದ ಭೇದಿಸಿ ಗೆಲ್ಲಲಿ. ೨೪೪. ಉನ್ನತವಾದ ಉದಯಪರ್ವತದ ಸಹಜ ಸೂರ್ಯನೂ, ಅತ್ಯಂತ ಶ್ರೇಷ್ಠವಾದ ಧರ್ಮವೃಕ್ಷದ ಬೇರಾಗಿದ್ದವನೂ, ಒಡೆಯನಿಗೆ ಹಿತಕಾರ್ಯಗಳನ್ನು ಮಾಡುವುದರಲ್ಲಿ ಪರಿಶುದ್ಧವಾದ ಸಮುದ್ರದಂತಿರುವವನೂ, ಬ್ರಾಹ್ಮಣಕುಲವೆಂಬ ಲಕ್ಷ್ಮಿಯ ಕ್ರೀಡಾಗಾರನೂ, ಶಿಷ್ಟಸಮೂಹಕ್ಕೆ ಸೇರಿದವನೂ ಆದ ದುರ್ಗಸಿಂಹನನ್ನು ಸಮಸ್ತ ಪ್ರಪಂಚ ಹೀಗೆ ಕೊಂಡಾಡುವುದು. ವ॥ ಇದು ವಿನಮದಮರರಾಜಮೌಳಿ ಮಾಣಿಕ್ಯಮರೀಚಿ ಮಂಜರೀಪುಂಜರಂಜಿತ ಭಗವದ್ಭವಾನೀ ವಲ್ಲಭ ಚರಣ ಸರಸಿರುಹ ಷಟ್ಚರಣ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹ ವಿರಚಿತವಾದ ಪಂಚತಂತ್ರದಲ್ಲಿ ಭೇದಪ್ರಕರಣ ವರ್ಣನ ಎಂಬ ಪ್ರಥಮತಂತ್ರವು ಸಮಾಪ್ತವಾಯಿತು.

ಪರೀಕ್ಷಾ ವ್ಯಾವರ್ಣನಂ ದ್ವಿತೀಯತಂತ್ರಂ

ಶ್ರೀಗಂ ವಿಶುದ್ಧ ಕೀರ್ತಿ
ಶ್ರೀಗಂ ನೆಲೆಯಪ್ಪೆನೆಂಬ ಮಹಿಪತಿ ರಭಸೋ-
ದ್ಯೋಗಮನುಳಿದು ಪರೀಕ್ಷಕ
ನಾಗಲ್ವೇಳ್ಕುಮು ಸಮಸ್ತಕಾರ್ಯಂಗಳೊಳಂ ೨೪೩

ವಿಪುಳನಯಶಾಸ್ತ್ರ ವಾರಾ
ಶಿ ಪಾರಗಂ ಸುಕವಿ ಸಂಧಿವಿಗ್ರಹಿ ದುರ್ಗಂ
ನೃಪಹಿತಮಂ ಪೇಳ್ಗುಂ ಸಲೆ
ಸುಪರೀಕ್ಷಾತಂತ್ರಮಂ ಜಗಜ್ಜನವಿನುತಂ ೨೪೪

ಶ್ಲೋ॥ ಯೋಽಕಾರ್ಯೇ ತತ್ತ್ವಮವಿಜ್ಞಾಯ ವಶಂ ಕ್ರೋಧಸ್ಯ ಗಚ್ಛತಿ
ಸೋಽಚಿರಾದ್ಭ್ರಂಶಯೇನ್ಮಿತ್ರಂ ಬ್ರಾಹ್ಮಣೋ ನಕುಲಂ ಯಥಾ ॥೧೩೦॥

ಟೀ॥ ಆವನಾನೊರ್ವಂ ಕಾರ್ಯದ ನಿಜವನರಿಯದೆ ಕೋಪಿಸಿದಂ, ಆತಂ ಬೇಗದಿಂ ಮಿತ್ರನಂ ಕಿಡಿಸುವಂ, ಅದೆಂತೆಂದೊಡೆ ಬ್ರಾಹ್ಮಣಂ ಮುಂಗುರಿಯಂ ಕಿಡಿಸಿದಂತೆ.

೧. ಬ್ರಾಹ್ಮಣಂ ಮುಂಗುರಿಯಂ ಕೊಂದ ಕಥೆ

ಆ ಕಥಾಪ್ರಪಂಚಮೆಂತೆನೆ.

ಭೂಭುವನವಿನುತಮಿಂದ್ರ ಪು
ರಾಭಂ ಮಣಿಮಾಟಕೂಟಕಾನಕ ಭವನ-
ವ್ರಾಭಾಸಿತ ರತ್ನಚಯಂ
ಶೋಭಾವತಿಯೆಂಬ ಪುರವರಂ ರಂಜಿಸುಗುಂ ೨೪೫

೨೪೩. ಸಂಪತ್ತಿಗೂ ಕೀರ್ತಿಗೂ ನೆಲೆಯಾಗಬೇಕೆಂಬ ಮಹೀಪತಿಯು ರಭಸೋದ್ಯೋಗವನ್ನು ಬಿಟ್ಟು ಸಮಸ್ತ ಕಾರ್ಯಗಳಲ್ಲೂ ಪರೀಕ್ಷಕನಾಗಿ ವರ್ತಿಸಬೇಕು. ೨೪೪. ಅನೇಕ ನೀತಿಶಾಸ್ತ್ರ ಸಮುದ್ರಪಾರಂಗತನೂ, ಸುಕವಿಯೂ, ಸಂಧಿವಿಗ್ರಹಿಯೂ ಆದ ದುರ್ಗಸಿಂಹನು ಜಗಜ್ಜನವು ಹೊಗಳಿದ, ರಾಜರಿಗೆ ಹಿತವಾದ ಪರೀಕ್ಷಾತಂತ್ರವನ್ನು ಹೇಳುವನು. ಶ್ಲೋ॥ ಯಾವನಾದರೂ ಕಾರ್ಯದ ಸತ್ಯಾಂಶವನ್ನರಿಯದೆ ಕೋಪಿಸಿಕೊಳ್ಳುವವನು ಬ್ರಾಹ್ಮಣನು ಮುಂಗುರಿಯನ್ನು ಕೊಂದಂತೆ ಬೇಗನೆ ಮಿತ್ರನನ್ನು ಕಳೆದುಕೊಳ್ಳುವನು.

ವ॥ ಆ ಕಥೆ ಏನೆಂದರೆ, ೨೪೫. ಪ್ರಪಂಚಪ್ರಸಿದ್ಧವೂ ಅಮರಾವತಿಯಂತೆ ಸೊಗಯಿಸುವುದೂ ರತ್ನ ಚಿನ್ನಗಳಿಂದ ಖಚಿತವಾದ ಭವನಗಳನ್ನು ಹೊಳೆಯುವ ಹಾಗೆ ಮಾಡಿದ ರತ್ನರಾಶಿಯಿಂದಲೂ ಶೋಭಾವತಿ ಎಂಬ ಪುರವು ರಂಜಿಸುತ್ತಿತ್ತು.

ಅನಿಲಾಂದೋಳಿತಚಿತ್ರಕೇತುನಿವಹ ಪ್ರಾಭಾಸಿತೋದಗ್ರದೇ
ವನಿವಾಸಾಳಿಯಿನುಪ್ಪ ಶಾಳಿವನದಿಂ ಸರ್ವರ್ತುಕೋದ್ಯಾನನಂ
ದನದಿಂ ಸೌಂದರ ಸೌಂದರೀನಿವಹದಿಂದಂಭೋಜಷಂಡಂಗಳಿಂ
ತನಗನ್ವರ್ಥಮೆನಿಪ್ಪುದಾ ಪುರವರಂ ಶೋಭಾವತೀನಾಮದಿಂ ೨೪೮

ಅಂತಪ್ಪ ಪುರದೊಳ್ ನಿರಂತರಂ ವೇದಾಧ್ಯಯನ ತತ್ಪರನುಮಜಸ್ರ ಸ್ರುಕ್‌ಸಂದರ್ಭ ಪವಿತ್ರ ಸಂವಾಹನಪವಿತ್ರಿತಪಾಣಿಪಲ್ಲವನುಂ ಪುರೋಡಾಶಭೋಜನಪವಿತ್ರೀಕೃತಗಾತ್ರನುಂ ಯಜನಾದಿಷಟ್ಕರ್ಮ ನಿರತನುಂ ಆಹಿತಾಗ್ನಿಯುಮಪ್ಪ ದೇವಶರ್ಮನೆಂಬ ಪಾರ್ವನಿರ್ಪಂ. ಆತನ ಸತಿ ಪರಮಪತಿವ್ರತಾಗುಣ ವಿಶುದ್ಧಚಿತ್ತೆ ಯಜ್ಞದತ್ತೆಯೆಂಬಳ್, ಆಕೆಗೆ ಋತುಕಾಲಪ್ರವೃತ್ತಿಯಿಂ ಗರ್ಭಮಾಗೆ ಕೆಲವು ದಿವಸದಿಂ,

ಬಸಿರುಮನೇತ್ತಂ ತೊಳ್ಳಿತು ಪೊಣ್ಮಿದುದು ದಾಂಗುಡಿಯಿಟ್ಟು, ಬಾಸೆ ನೀ
ಳ್ದಿದುದು ಪಿಂಗಿ ಪೋದುವು ವಳಿತ್ರಿತಯಂ ಕುಚಚೂಚುಕಂಗಳೊಳ್
ಪಸರಿಸಿ ಕರ್ಪು ಪರ್ಬಿದುದು ಮಂದರಯಾನಮೊಡರ್ಚೆ ತಾನನಂ
ಮಿಸುಗೆ ಬೆಳರ್ತು ಪೂರ್ಣ ಶಶಿಕಾಂತಿಯನಾಂತುದು ಗರ್ಭದೇಳ್ಗೆಯೊಳ್ ೨೪೯

ಅಂತು ತೋಱಿದ ಗರ್ಭಚಿಹ್ನಮಂ ಕಂಡು ದೇವಶರ್ಮಂ ನಿಧಿಗಂಡ ನಿರ್ಧನನಂತೆ ರಾಗಿಸಿ ನಿಜಸತಿಯುಮಂತರ್ವರ್ತಿನಿಯುಂ ಕರೆದಿಂತೆಂದಂ : ಎಮಗೆ ಮನೋರಥಸಿದ್ಧಿಯಾಗಲ್ ಬಗೆವಪ್ಪುದದೇಕೆಂದೊಡೆ ನಿನ್ನ ಗರ್ಭದೊಳ್ ಗಂಡುಗೂಸು ಪುಟ್ಟಿದಪುದು ; ನಾವಾ ಸುತಂಗೆ

೨೪೮. ಗಾಳಿಯಿಂದ ಮಿಳಿರುತ್ತಿರುವ ಚಿತ್ರಿತವಾದ ಧ್ವಜಸಮೂಹದಿಂದ ಪ್ರಕಾಶಿಸುವ ಉನ್ನತ ದೇವಾಲಯಗಳಿಂದಲೂ ಶ್ರೇಷ್ಠವಾದ ಬತ್ತದ ಗದ್ದೆಗಳಿಂದಲೂ ಎಲ್ಲ ಋತುಗಳಲ್ಲೂ ಫಲಪುಷ್ಪಗಳನ್ನು ಬಿಡುವ ಉದ್ಯಾನವನಗಳಿಂದಲೂ ಸುಂದರಸ್ತ್ರೀಸಮೂಹದಿಂದಲೂ ಕಮಲಗಳ ಸರೋವರಗಳಿಂದಲೂ ಆ ಪಟ್ಟಣವು ತನಗೆ ಶೋಭಾವತೀ ಎಂಬ ಹೆಸರು ಅನ್ವರ್ಥವಾಗುವಂತೆ ಇತ್ತು. ವ|| ಅಂತಹ ಪಟ್ಟಣದಲ್ಲಿ ಯಾವಾಗಲೂ ವೇದಾಧ್ಯಯನ ತತ್ಪರನೂ, ಯಾವಾಗಲೂ ಹೋಮ ಮಾಡುವ ಸೌಟನ್ನು ಧರಿಸುವ ಸಂದರ್ಭದಲ್ಲಿ ಹಾಕಿಕೊಂಡ ದರ್ಭೆಯ ಪವಿತ್ರದಿಂದ ಪವಿತ್ರಗೊಂಡ ಪಾಣಿಪಲ್ಲವನೂ ಪುರೋಡಾಶ ಎಂಬ ಯಾಗಭಕ್ಷ್ಯವನ್ನು ತಿಂದು ಪವಿತ್ರಗಾತ್ರನಾದವನೂ ಯಜನಾದಿ ಷಟ್ಕರ್ಮಗಳಲ್ಲಿ ತತ್ಪರನೂ ಆಹಿತಾಗ್ನಿಯೂ ಆದ ದೇವಶರ್ಮನೆಂಬ ಬ್ರಾಹ್ಮಣನಿದ್ದನು. ಆತನ ಸತಿಯು ಪರಮಪತಿವ್ರತಾಗುಣದಿಂದ ಶುದ್ಧ ಚಿತ್ತೆಯಾದ ಯಜ್ಞದತ್ತೆ ಎಂಬವಳಾಗಿದ್ದಳು. ಆಕೆಗೆ ಋತುಕಾಲ ಬಂದು ಗರ್ಭವುಂಟಾಗಲು ಕೆಲವು ದಿವಸಗಳಲ್ಲಿ, ೨೪೯. ಆ ಸುಂದರಿಯ ಸುಂದರವಾದ ನಡು ಕಂಡು ಬಂತು. ಹೊಟ್ಟೆಯ ರೋಮರಾಜಿ ಬೆಳೆದು ಶೋಭಿಸಿತು. ಹೊಟ್ಟೆಯ ಮೂರು ಗೆರೆಗಳು ಹಿಂಗಿಹೋದವು. ಕುಚಗಳ ತುದಿಗಳಲ್ಲಿನ ಕಪ್ಪು ವಿಸ್ತರಿಸಿ ಹಬ್ಬಿದುದು. ನಿಧಾನವಾದ ನಡೆಯುಂಟಾಯಿತು. ಮುಖವು ಶೋಭಿಸುವಂತೆ ಬೆಳ್ಳಗಾಗಿ ಗರ್ಭದ ಬೆಳವಣಿಗೆಯಾಗುತ್ತ ಪೂರ್ಣಚಂದ್ರನ ಶೋಭೆಯನ್ನು ಪೊಂದಿತು. ವ|| ಹಾಗೆ ತೋರಿದ ಗರ್ಭಚಿಹ್ನೆಯನ್ನು ಕಂಡು ದೇವಶರ್ಮನು ನಿಧಿಯನ್ನು ಕಂಡ ನಿರ್ಧನನಂತೆ ಸಂತೋಷಿಸಿ ತನ್ನ ಸತಿಯನ್ನು ಅಂತರಂಗಕ್ಕೆ ಕರೆದು ಹೀಗೆಂದನು : ನಮ್ಮ ಮನೋರಥ ಸಿದ್ಧಿಯಾಗುವುದೆಂದು ತೋರುವುದು. ನಿನ್ನ ಗರ್ಭದಲ್ಲಿ ಗಂಡುಕೂಸು ಹುಟ್ಟುವುದು. ಆ

ಜಾತಕರ್ಮ ನಾಮಕರಣಾನ್ನಪ್ರಾಶನ ಚೌಲೋಪನಯನಾದಿ ಕ್ರಿಯೆಗಳಂ ಮಾಡಿ ಬಳಿಕ್ಕ ವೇದಶಾಸ್ತ್ರ ಕಾವ್ಯನಾಟಕಪುರಾಣಂಗಳನೋದಿಸುವಮೆಂದೊಡಾ ಮಹಾಸತಿ ನಿಜಪತಿಯಂ ನೋಕ್ಕೊಂಡಿಂತೆಂದಳ್:

ಶ್ಲೋ॥ ಆಯುಷ್ಯಜ್ಞಾನೇ ವಯೋಜ್ಞಾನೇ ಗರ್ಭಿಣೀ ಗರ್ಭಸಂಭವೇ
ಮುನಯೋಽಪಿ ವಿಮುಹ್ಯಂತಿ ಕಿಂ ಪುನರ್ಮಾಂಸ ಚಕ್ಷುಷಃ ॥೧೩೧॥

ಟೀ॥ ಆಯುಷ್ಯಮನರಿವಲ್ಲಿ ವಯಸ್ಸನರಿವಲ್ಲಿ ಗರ್ಭಿಣಿಯರ ಗರ್ಭದ ನೆಲೆಯಲ್ಲಿ ಋಷಿಯರುಂ ನಿಶ್ಚೈಸಲರಿಯರು; ಮತ್ತಿನ ಜಡರುಗಳೆಂತುಂ ತಪ್ಪರೆನಲಾಗದು.

ಅದೆಂತೆಂದೊಡೆ

ಶ್ಲೋ॥ ಅನಾಗತವತೀಂ ಚಿಂತಾಂ ಯೋ ನರಃ ಕರ್ತುಮಿಚ್ಛತಿ
ಸತತಂ ಪಾಂಡುರಂಗಸ್ಸ್ಯಾತ್ ನಾಗಶರ್ಮ ಪಿತಾ ಯಥಾ ॥೧೩೨॥

ಟೀ॥ ಆವನಾನೊರ್ವ ಮನುಷ್ಯನು ಮುಂದೆ ಬಹಂಥದನು ಚಿಂತಿಸಿ ಮಾಡಲುದ್ಯೋಗಿಸಿಹನು, ಅವನನುದಿನವು ಪಾಂಡುರಾಂಗನಹನು ; ಅದು ಎಹಗೆಂದೊಡೆ ನಾಗಶರ್ಮನ ತಂದೆಯುಹಗೆ ಎಂದಿಂತನಾಗತಮಂ ಚಿಂತಿಸುವುದು ಲೋಕಾಪಹಾಸ್ಯಕ್ಕೆಡೆಯಪ್ಪುದದೆಂತನೆ :

ಶ್ಲೋ ॥ ಅನಾಗತಾರ್ಥಮುತ್ಪ್ರೇಕ್ಷ್ಯ ಯಸ್ಯಾರಂಭೋ ವಿಜೃಂಭತೇ
ಲೋಕೇ ಹಾಸ್ಯಮವಾಪ್ನೋತಿ ಸೋಮಶರ್ಮಪಿತಾ ಯಥಾ ॥೧೩೩॥

ಟೀ॥ ಮುಂದಹಂತಹ ಕಾರ್ಯವನಪೇಕ್ಷಿಸಿ ಆವನಾನೊರ್ವನಾರಂಭವು ಹೆಚ್ಚುತಿರ್ದಹುದು; ಆದು ಲೋಕದಲ್ಲಿ ಹಾಸ್ಯಕ್ಕೊಳಗಹುದು. ಅದೆಂತೆಂದೊಡೆ ಸೋಮಶರ್ಮನ ತಂದೆಯಂತೆ, ಆ ಪಾರ್ವನದೆಂತೆನೆ ಪಾರ್ವತಿ ಪೇಳ್ಗು :

೨. ಸೋಮಶರ್ಮನ ತಂದೆಯ ಕಥೆ

ಧರ್ಮಪತಿಯೆಂಬ ಪುರದೊಳ್ ನಾಗಶರ್ಮನೆಂಬ ಪಾರ್ವಂ ತನಗೆ ಯಾಚಕವೃತ್ತಿಯೆ ವೃತ್ತಿಯಾಗಿರ್ದು ಪಲವು ದಿವಸಕ್ಕೊಂದು ಕೊಡಂ ತೀವಿದ ಸತ್ತುಗದ ಪುಡಿಯಂ ಪಡೆದು ಆ ಕೊಡನಂ ತನ್ನ ಪಟ್ಟಿರ್ಪೆಡೆಯೊಳ್ ಕಟ್ಟಿ ನೇಲ್ವಿಟ್ಟು ಮಹಳದ ಪಕ್ಷದೊಳೊಂದು ದಿವಸಂ

ಮಗನಿಗೆ ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನಾದಿ ಕಾರ್ಯಗಳನ್ನು ಮಾಡಿ ಬಳಿಕ ವೇದಶಾಸ್ತ್ರ ಕಾವ್ಯನಾಟಕ ಪುರಾಣಗಳನ್ನು ಓದಿಸೋಣ. ಅವಕ್ಕೆ ಆತನ ಮಹಾಸತಿಯು ಪ್ರತ್ಯುತ್ತರವಾಗಿ ಹೀಗೆಂದಳು : ಶ್ಲೋ॥ ಆಯುಸ್ಸನ್ನೂ ವಯಸ್ಸನ್ನೂ ಗರ್ಭಿಣಿಯರ ಗರ್ಭದ ನೆಲೆಯನ್ನೂ ಋಷಿಗಳು ಕೂಡ ಅರಿಯರು. ಉಳಿದ ಜಡಜನರು ಹೇಗೂ ತಪ್ಪಿಯಾರು. ವ॥ ಅದು ಹೇಗೆಂದರೆ, ಶ್ಲೋ॥ ಯಾವ ಒಬ್ಬ ಮನುಷ್ಯನು ಮುಂದೆ ಬರುವಂಥದನ್ನು ಚಿಂತಿಸಿ ಕಾರ್ಯೋದ್ಯುಕ್ತನಾಗುವನೋ ಅವನು ಯಾವಾಗಲೂ ನಾಗಶರ್ಮನ ತಂದೆಯ ಹಾಗೆ ಪಾಂಡುರಾಂಗನಾಗುವನು. ಈ ರೀತಿಯಲ್ಲಿ ಅನಾಗತವನ್ನು ಚಿಂತಿಸುವುದು ಲೋಕಾಪಹಾಸ್ಯಕ್ಕೆ ಎಡೆಯಾಗುವುದು. ಶ್ಲೋ॥ ಮುಂದಾಗುವಂಥ ಕಾರ್ಯವನ್ನು ಅಪೇಕ್ಷಿಸಿ ಯಾವನು ಆರಂಭಶೂರನಾಗುತ್ತಾನೋ ಅವನು ಸೋಮಶರ್ಮನ ತಂದೆಯಂತೆ ಲೋಕದಲ್ಲಿ ಹಾಸ್ಯಕ್ಕೊಳಗಾಗುತ್ತಾನೆ. ಆ ಬ್ರಾಹ್ಮಣನು ಅದೇನೆಂದು ಕೇಳಲು ಅವನ ಹೆಂಡತಿ ಹೇಳತೊಡಗಿದಳು. ವ॥ ಧರ್ಮವತಿಯೆಂಬ ಪುರದಲ್ಲಿ ನಾಗಶರ್ಮನೆಂಬ ಬ್ರಾಹ್ಮಣನು ತನ್ನ ಯಾಚಕ ವೃತ್ತಿಯಿಂದ ಸಂಪಾದಿಸಿದ ಒಂದು ಕೊಡ ಹುರಿಹಿಟ್ಟನ್ನು ತಾನು ಮಲಗುವಲ್ಲೇ ಮೇಲೆ ನೇತಾಡಿಸಿಟ್ಟನು. ಮಹಾಲಯ

ಇಂಬಾಗಿರೆ ಮುದದಿಂ ಪಲ
ವುಂ ಬಣ್ಣದ ಭಕ್ಷ್ಯರಾಶಿವೆರಸಾ ಕಂಠೋ
ಷ್ಠಂಬರಮುಂಡೊಯ್ಯನೆ ಪಾ
ರ್ವಂ ಬಂದಾ ಕೊಡನ ಕೆಳಗೆ ಪಟ್ಟಿರ್ದಾಗಳ್ ೨೫೦

ಆ ನಾಗಶರ್ಮಂ ರಾಗಿಸಿ ಮೇಗಂ ನೋಡಿ ತನ್ನೊಡೆಯನ ಬಡಹಾರ್ವಂಗಿಂತೆಂದಂ : ಧಾನ್ಯಮನರ್ಘಮಾದ ಕಾಲದೊಳೀ ಕೊಡಂ ತೀವಿದ ಸತ್ತುಗದ ಪುಡಿಯಂ ಪತ್ತುಪಣವಿಂಗೆ ಮಾಱಿ ಮೂಱುಪತ್ತಾಡಂ ಕೊಳ್ವೆಂ. ಅವು ವರುಷಕ್ಕಿರ್ಮೆ ಮಱಿಯಂ ಪಡೆವುವು. ಪ್ರಸವಪರಿವರ್ತನದಿಂ ಪಲವಾದಕ್ಕುಂ. ಆದೊಡವಂ ಕೊಟ್ಟು ಪಯನಾವಂ ಕೊಳ್ವೆಂ. ಅವರ್ಕೆ ಪುಟ್ಟಿದ ಪೋರಿಗಳಂ ತಿರ್ದಿಯಾರಂಬಂಗೆಯ್ದು ಸಮಸ್ತಧಾನ್ಯಮಂ ಸಂಪೂರ್ಣಮಾಗಿ ಬೆಳೆದು ಆ ಧಾನ್ಯಮಂ ಮಾಱಿ ಪೊನ್ನಂ ಪಡೆದು ಈ ಪೊೞಲೊಳ್ ಸುಪ್ರದೇಶಮಪ್ಪ ಸ್ಥಾನದೊಳ್ ಸುಧಾಧವಳಿತಮಪ್ಪ ಧವಳಾಗಾರಂ ಗೋಷ್ಠಾಗಾರಂ ಮೊದಲಾಗಿ ಪಲವುಂ ಶೋಭಾವಹಂಗಳಪ್ಪ ಗೃಹಂಗಳಂ ಮಾಡಿಸಿ ಧನಕನಕ ಸಮೃದ್ಧಿಯಿಂ ತನಗೆ ವಜ್ರದ ಕುಂಡಲಮಂ ವಜ್ರಧಾರೆಯ ಚೆನ್ನಸರಪಳಿಯುಮಂ ನವಗ್ರಹದ ವಿಚಿತ್ರಕಂಕಣಮುಮಂ ನವರತ್ನದುಂಗುರಂಗಳುಮಂ ಮಾಡಿಸಿಕೊಂಡು ಪಟ್ಟಾವಳಿಯನುಟ್ಟು ಕೊಂಡರಸುಮಗನಂ ಪೋಲ್ತು ಪುರಜನಂಗಳ್ಗೆಲ್ಲಂ ಪಿರಿಯನಾಗಿರ್ದೆನ್ನಂ ಕಂಡೊರ್ವಂ ಕುಲಮುಂ ಶೀಲಮುಂ ಪೆಂಪುಂ ಬಣ್ಪುಂ ಪುಣ್ಯಮುಮುಳ್ಳಾತಂ ತನ್ನ ಮಗಳ್ ಚೆನ್ನೆಯಪ್ಪ ಕನ್ನೆಯಂ ಕುಡೆ ಮದುವೆಯುಂ ಮಾಡಿಕೊಂಡು ಇಷ್ಟ ವಿಷಯ ಕಾಮಭೋಗಂಗಳನನುಭವಿಸುತಿರ್ಪುದುಂ

ಪಕ್ಷದಲ್ಲೊಂದು ದಿನ ೨೫೦. ಕುತ್ತಿಗೆವರೆಗೆ ಸಂತೋಷದಿಂದ ಹಲವು ಬಣ್ಣ ಬಣ್ಣದ ಭಕ್ಷ್ಯರಾಶಿಯನ್ನು ಉಂಡು ಆ ಬ್ರಾಹ್ಮಣನು ಆ ಕೊಡದ ಕೆಳಗೆ ಮಲಗಿದ್ದನು. ಆಗ ಆ ನಾಗಶರ್ಮನು ಸಂತೋಷದಿಂದ ಮೇಲೆ ನೋಡಿ ತನ್ನೊಡನಿದ್ದ ಬಡಬ್ರಾಹ್ಮಣನೊಡನೆ ಹೀಗೆಂದನು : ಧಾನ್ಯ ಅನರ್ಘ್ಯವಾದ ಕಾಲದಲ್ಲಿ ಈ ಕೊಡದಲ್ಲಿರುವ ಹುರಿಹಿಟ್ಟನ್ನು ಹತ್ತು ಹಣಕ್ಕೆ ಮಾರಿ ಹತ್ತು ಆಡುಗಳನ್ನು ಕೊಂಡುಕೊಳ್ಳುವೆನು. ಅವು ವರ್ಷಕ್ಕೆ ಎರಡು ಬಾರಿ ಮರಿಯಿಡುವುವು. ಪ್ರಸವಪರಿವರ್ತನದಿಂದ ಹಲವು ಆಡುಗಳಾಗುವುವು. ಹಾಗಾದಲ್ಲಿ ಅವನ್ನು ಮಾರಿ ಹಾಲುಕೊಡುವ ಹಸುವನ್ನು ಕೊಂಡುಕೊಳ್ಳುವೆನು. ಅದಕ್ಕೆ ಹುಟ್ಟಿದ ಹೋರಿಗಳನ್ನು ತಿದ್ದಿ ವ್ಯವಸಾಯ ಮಾಡಿ ಸಮಸ್ತ ಧಾನ್ಯವನ್ನು ಸಂಪೂರ್ಣವಾಗಿ ಬೆಳೆದು ಆ ಧಾನ್ಯವನ್ನು ಮಾರಿ ಹೊನ್ನನ್ನು ಪಡೆದು ಈ ಪಟ್ಟಣದಲ್ಲಿ ಸುಪ್ರದೇಶವಾದ ಸ್ಥಾನದಲ್ಲಿ ಸುಧಾಧವಳಿತವಾದ ಧವಳಾಗಾರ, ಗೋಷ್ಠಾಗಾರ ಮೊದಲಾದ ಹಲವು ಸುಂದರಗೃಹಗಳನ್ನು ಮಾಡಿಸುವೆನು. ಧನಕನಕ ಸಮೃದ್ಧಿಯಿಂದ ತನಗೆ ವಜ್ರದ ಕುಂಡಲವನ್ನೂ ವಜ್ರಧಾರೆಯ ಸುಂದರ ಸರಪಳಿಯನ್ನೂ ನವಗ್ರಹದ ವಿಚಿತ್ರಕಂಕಣವನ್ನೂ ನವರತ್ನದ ಉಂಗುರಗಳನ್ನೂ ಮಾಡಿಸಿಕೊಂಡು ಪಟ್ಟಾವಳಿಯನ್ನುಟ್ಟುಕೊಂಡು ಅರಸುಮಗನಂತೆ ಪುರಜನರಲ್ಲೆಲ್ಲ ಹಿರಿಯನಾಗಿರುವ ನನ್ನನ್ನು ಕಂಡು, ಕುಲ, ಶೀಲ, ಗೌರವ, ಕೀರ್ತಿ, ಪುಣ್ಯಗಳನ್ನುಳ್ಳ ಒಬ್ಬನು ತನ್ನ ಚೆನ್ನೆ ಕನ್ನೆಯನ್ನು ಕೊಡಲು ಅವಳನ್ನು ಮದುವೆಯಾಗಿ ಇಷ್ಟವಿಷಯ ಕಾಮಭೋಗಗಳನ್ನು ಅನುಭವಿಸುವೆ. ಕೆಲವು ದಿವಸಗಳ

ಕೆಲದಿವಸಕ್ಕಾಕೆಗೆ ಗರ್ಭಮಾಗೆ ಗರ್ಭಚಿಹ್ನಂಗಳನಾಂ ಕಂಡು ಬಲ್ಲ ಜೋಯಿಸನಂ ಕರೆಯಿಸಿ ಎನ್ನ ಪೆಂಡತಿಯೇನಂ ಪಡೆವಳೆಂದು ಬೆಸಗೊಂಡೆಂಡೆ ಗಂಡುಗೂಸಂ ಪಡೆವಳೆಂದು ಪೇಳ್ದೊಡೆ ಕೇಳ್ದು ಭಟ್ಟಂಗೆ ಮೆಚ್ಚುಗೊಟ್ಟು ಬಳಿಕ್ಕಾಕೆಯ ಸೀಮಂತಮಂ ಸಂಭ್ರಮದಿಂ ಮಾಡಿ ಶೋಭನಕ್ರಿಯೆಗಳೊಳ್ಳಿತ್ತಾಗೆ ಪುರಜನಂಗಳಂ ಬಂಧುಜನಂಗಳುಮನಾಮಂತ್ರಿಸಿ ತುಪ್ಪದ ತೊಱೆಗಳ್ ಪರಿವನ್ನಂ ಪಿರಿದಪ್ಪ ಭಕ್ಷ್ಯಭೋಜ್ಯಗಳಿಂ ಭೋಜನಂಗಳಂ ಮಾಡಿಸಿ ತದನಂತರಂ ನವಮಾಸಂ ನೆಱೆವುದುಮೆನ್ನ ಪೆಂಡತಿ ಗಂಡುಮಗನಂ ಪೆಱಲೊಡಮಷ್ಟಶೋಭೆಯುಂ ಮಾಡಿಸಿ ಮಹಾದಾನಂಗೆಯ್ದಾ ಶಿಶುವಿಂಗೆ ಜಾತಕರ್ಮಮಂ ಸೋಮಶರ್ಮನೆಂಬ ನಾಮಕರಣಮಂ ಅನ್ನಪ್ರಾಶನಮಂ ಕ್ರಮದಿಂ ಮಾಡಿ ಸುಖದಿನಿರ್ಪುದುಮಾ ಬಾಲಕಂ ಬಾಲದುಡಿಗೆಗಳಂ ತೊಟ್ಟು ನಡೆಗಲ್ತೊಂದು ದಿವಸಂ ಗೋವ್ರಜಂಗಳೊಳ್ ಸೋಂಕುವುದನಾಂ ಕಂಡೆಲೆ ತೊತ್ತೇ ಮಗನನೀ ಪೊತ್ತಿನೊಳ್ ಪರಿಯಬಿಟ್ಟೆಯೆಂದು,

> ಮುನಿದಿರದೆ ಜರಿದು ಪಿರಿದೊಂ
> ದೊನಕೆಯೊಳಾನವಳ ತಲೆಯನೀ ತೆಱದಿಂ ಪೊ
> ಯ್ವೆನೆನುತೆತ್ತಿಯಷ್ಟಿಯಂ ಕೊಂ
> ಡೆನಸುಂ ಪೊಯ್ದಂ ಕಡಂಗಿ ಸತ್ತದ ಕೊಡನಂ ೨೫೧

ಅಂತು ಪೊಯ್ಕೆ ಕೊಡನೊಡೆದು ಶ್ವೇತಚೂರ್ಣಮೆಲ್ಲಂ ತನ್ನ ಮೇಲೆ ಬೀಳ್ವುದುಂ; ನಾಗಶರ್ಮಂ ಬೂದಿವೂಸಿದ ತಪೋಧನನಂತೆಯುಂ, ಪುಡಿಯೊಳ್ ಪೊರಳ್ದ ಬೆಳ್ಗತ್ತೆಯಂತೆಯುಂ ಶ್ಲೇಷ್ಮೋತ್ಕಟಮಾದಂತೆಯುಗುಳುತ್ತುಂ, ಅಳಿಗಣ್ಣರಂತೆ ಮಿಳುಮಿಳನೆ ನೋಡುತ್ತುಂ ಮಠದಿಂ

ಬಳಿಕ ಆಕೆಗೆ ಗರ್ಭವಾಗುವುದು. ಜೋಯಿಸರನ್ನು ಕರೆದು ನನ್ನ ಹೆಂಡತಿ ಏನನ್ನು ಹಡೆಯುವಳು ಎಂದು ವಿಚಾರಿಸಲು ಗಂಡುಗೂಸನ್ನು ಹಡೆಯುವಳು ಎಂದು ಹೇಳುವನು. ಆದಕ್ಕೆ ಅವನಿಗೆ ಮೆಚ್ಚುಗೊಟ್ಟು ಆಕೆಯ ಸೀಮಂತವನ್ನು ಸಂಭ್ರಮದಿಂದ ಮಾಡಿ ಪುರಜನರನ್ನೂ ಬಂಧುಜನರನ್ನೂ ಆಮಂತ್ರಿಸಿ ತುಪ್ಪದ ತೊರೆಯಲ್ಲಿ ಹರಿಯುವಷ್ಟು ಭಕ್ಷ್ಯಭೋಜ್ಯಗಳಿಂದ ಭೋಜನಗಳನ್ನು ಮಾಡಿಸುವೆನು. ಅನಂತರ ನವಮಾಸ ತುಂಬಿ ನನ್ನ ಹೆಂಡತಿ ಮಗನನ್ನು ಹಡೆಯಲು ಅಷ್ಟಶೋಭೆಯನ್ನು ಮಾಡಿಸಿ ಮಹಾದಾನ ಮಾಡಿ ಆ ಶಿಶುವಿಗೆ ಜಾತಕ ಕರ್ಮವನ್ನೂ ಸೋಮಶರ್ಮನೆಂಬ ನಾಮಕರಣವನ್ನೂ ಅನ್ನಪ್ರಾಶನವನ್ನೂ ಕ್ರಮವಾಗಿ ಮಾಡಿಸಿ ಸುಖದಿಂದಿರುವೆನು. ಆ ಬಾಲಕನೂ ಬಾಲದುಡಿಗೆಗಳನ್ನು ತೊಟ್ಟು ನಡೆಯುವುದನ್ನು ಕಲಿತು ಒಂದು ದಿವಸ ದನಗಳ ಹಿಂಡಿಗೆ ಹೋಗಲು ನಾನದನ್ನು ಕಂಡು, ಎಲೆ ತೊತ್ತೇ ! ಮಗನನ್ನು ಈ ಹೊತ್ತಿನಲ್ಲಿ ಹೋಗಲು ಬಿಟ್ಟೆಯೇಕೆ ೨೫೧. ಎಂದು ಕೋಪದಿಂದ ಒಂದು ದೊಡ್ಡ ಒನಕೆಯಿಂದ ಅವಳ ತಲೆಯನ್ನು ಈ ರೀತಿ ಹೊಡೆಯುವೆನು ಎಂದು ತನ್ನ ಕೈಯಲ್ಲಿದ್ದ ಯಷ್ಟಿಯನ್ನು ಎತ್ತಿ ಹಿಟ್ಟಿನ ಕೊಡಕ್ಕೆ ಹೊಡೆದನು. ವ॥ ಹಾಗೆ ಹೊಡೆಯಲು ಕೊಡವೊಡೆದು ಶ್ವೇತಚೂರ್ಣವೆಲ್ಲವೂ ಅವನ ಮೇಲೆ ಬಿದ್ದಿತು. ನಾಗಶರ್ಮನು ಬೂದಿ ಬಳಿದ ತಪೋಧನನಂತೆಯೂ, ಧೂಳಿನಲ್ಲಿ ಹೊರಳಿದ ದಡ್ಡ ಕತ್ತೆಯಂತೆಯೂ ಶ್ಲೇಷ್ಮ ಹೆಚ್ಚಿದವನಂತೆ ಉಗುಳುತ್ತಲೂ ಕೆಟ್ಟ ಕಣ್ಣಿನವರಂತೆ ಮಿಳ ಮಿಳನೆ ನೋಡುತ್ತಲೂ ಮಠದಿಂದ ಹೊರಹೊರಟು ನಿಂತು ಛಾಂದಸಬ್ರಾಹ್ಮಣನನ್ನು

ಪೊಱಮಟ್ಟು ನಿಂದ ಛಾಂದಸಬ್ರಾಹ್ಮಣನಂ ಕಂಡು ಗುಂಡು ನೆರೆದಿದೇನೆಂದು ಬೆಸಗೊಂಡೊಡಾತನೊಡನೆಯ ಪಾರ್ವಂ ತತ್ಪ್ರಪಂಚಮೆಲ್ಲಮಂ ಸವಿಸ್ತರಂ ಪೇೞ್ವುದುಂ ಪುರಜನಂಗಳ್ ಕೇಳ್ದು ಕರುಳಂ ಪಿಡಿದು ನಗೆಯೊಳ್ ಪೊರಳ್ದರ್ ಅದಱಿಂ

ಏಗೆಯ್ದುಂ ಸತ್ಪುರುಷರ
ನಾಗತಮುಂ ಗತಮುಮಪ್ಪ ಕಾರ್ಯಮನೆಂದುಂ
ರಾಗಿಸಿ ಬಯಸುವುದುಂ ಹೃ
ದ್ರೋಗಂಬಡುವುದುಮಿವೆರಡು ಕಷ್ಟಮನಿಷ್ಟಂ ೨೫೨

ಎಂದು ಯಜ್ಞದತ್ತೆ ತನ್ನ ಗಂಡನಂ ಬಾರಿಸಿದಳ್, ಅನ್ನೆಗಂ ಪ್ರಸವಸಮಯಮಾಸನ್ನಮಾಗೆ

ವಿಮಲ ನಿಜಗೋತ್ರಶತಪ
ತ್ರಮಿತ್ರನಂ ಸದ್ಗ್ರಹಂಗಳೆಲ್ಲಂ ವರ್ಗೋ
ತ್ತಮದಿನಿರೆ ಮುದದಿನತ್ಯು
ತ್ತಮದಿನದೊಳ್ ಯಜ್ಞದತ್ತೆ ಸುತನಂ ಪಡೆದಳ್ ೨೫೩

ಅಂತು ಪುತ್ರೋತ್ಪತ್ತಿಯಾಗಲೊಡಮಾ ಶಿಶುವಿಂಗೆ ದೇವಶರ್ಮಂ ಜಾತಕಕರ್ಮವಿಧಾನಮಂ ತೀರ್ಚಿ ಸುಖದಿನಿರ್ದೊಂದು ದಿವಸಂ ಯಜ್ಞದತ್ತೆ ಕೂಸಿಂಗೆ ಪಾಸುವ ಸೀರೆಗಳನೊಗೆಯಲೆಂದು ಪೋಗುತ್ತುಂ ಸುತನಂ ಸುರಕ್ಷಿತನಂಗೆಯ್ಯಿಮೆಂದು ತನ್ನ ಪಾರ್ವಂಗೆ ಪೇೞ್ದು ಪೋದಳ್. ಅನ್ನೆಗಮಾ ಪೊೞಲನಾಳ್ವರಸಂ ದಾನಂಗೊಟ್ಟಪೆನೆಂದು ಬೞಿಯಟ್ಟಿದೊಡೆ ಭಟ್ಟಂ ಪುತ್ರ ರಕ್ಷಣಾರ್ಥಮಂ ಬಗೆಯದೆ ಅರ್ಥಾರ್ಥಿಯಾಗಿ ಪೋಗಲ್ಬಗೆದು ತನ್ನ ಮನೆಯೊಳ್ ಮಾರ್ಮನುಷ್ಯರಿಲ್ಲದ ಕಾರಣದಿಂ ತಾಂ ನಡಪಿದೊಂದು ನಕುಲನಂ ತೊಟ್ಟಿಲ ಸಮೀಪದೊಳ್ ನಿಡಿದಪ್ಪ ನೇಣಿಂ ಕಟ್ಟಿ ಪೋದಂ, ಅನ್ನೆಗಮಿತ್ತಂ,

ಕಂಡು ಗುಂಪು ನೆರೆದು ಇದೇನೆಂದು ವಿಚಾರಿಸಲು ಆತನೊಡನಿದ್ದ ಬ್ರಾಹ್ಮಣನು ಆ ವಿಚಾರವನ್ನೆಲ್ಲ ಸವಿಸ್ತಾರವಾಗಿ ಹೇಳಲು ಪುರಜನರು ಕೇಳಿ ಕರುಳನ್ನು ಹಿಡಿದು ನಗೆಯಲ್ಲಿ ಹೊರಳಾಡಿದರು. ಆದರಿಂದ ೨೫೨. ಏನಾದರೂ ಸತ್ಪುರುಷರು ಭೂತಭವಿಷ್ಯತ್ಕಾಲದ ಕಾರ್ಯಗಳನ್ನು ಎಂದೂ ಬಯಸುವುದೂ ಅದರಿಂದ ಹೃದ್ರೋಗವನ್ನು ಅನುಭವಿಸುವುದೂ ಇವೆರಡೂ ಕಷ್ಟಕರವೂ ಅನಿಷ್ಟಪ್ರದವೂ ಆಗಿವೆ. ವ॥ ಹೀಗೆಂದು ಯಜ್ಞದತ್ತೆಯು ತನ್ನ ಗಂಡನನ್ನು ಎಚ್ಚರಿಸಿದಳು. ಅಷ್ಟರಲ್ಲಿ ಪ್ರಸವಸಮಯ ಹತ್ತಿರವಾಗಲು ೨೫೩. ಸೂರ್ಯನನ್ನು ಸದ್ಗ್ರಹಗಳೆಲ್ಲ ವರ್ಗೋತ್ತಮವಾಗಿ ಬಳಸಿರಲು ಯಜ್ಞದತ್ತೆಯು ಅತ್ಯುತ್ತಮದಿನದಲ್ಲಿ ಮಗನನ್ನು ಪಡೆದಳು. ವ॥ ಹಾಗೆ ಪುತ್ರೋತ್ಪತ್ತಿಯಾಗಲು ಆ ಶಿಶುವಿಗೆ ದೇವಶರ್ಮನು ಜಾತಕರ್ಮವಿಧಾನವನ್ನು ತೀರಿಸಿ ಸುಖದಿಂದಿದ್ದನು. ಒಂದು ದಿನ ಅವಳು ಕೂಸಿಗೆ ಹಾಸುವ ಬಟ್ಟೆಗಳನ್ನು ಒಗೆಯಲೆಂದು ಹೋಗುತ್ತ ಮಗುವನ್ನು ಸುರಕ್ಷಿತವಾಗಿಟ್ಟುಕೊಳ್ಳಿ ಎಂದು ಗಂಡನೊಡನೆ ಹೇಳಿ ಹೋದಳು. ಅಷ್ಟರಲ್ಲಿ ಆ ಪಟ್ಟಣವನ್ನು ಆಳುವ ಅರಸನು ದಾನ ಕೊಡುತ್ತೇನೆ ಎಂದು ದೂತರನ್ನು ಅಟ್ಟಲು ಭಟ್ಟನು ಪುತ್ರರಕ್ಷಣೆಯನ್ನು ಬಗೆಯದೆ ಅರ್ಥಾರ್ಥಿಯಾಗಿ ಹೋಗಬಯಸಿ ತನ್ನ ಮನೆಯಲ್ಲಿ ಬೇರೆ ಯಾರೂ ಇಲ್ಲದುದರಿಂದ ತಾನು ಸಾಕಿದ ಮುಂಗುರಿಯೊಂದನ್ನು ತೊಟ್ಟಿಲ ಸಮೀಪದಲ್ಲಿ ಉದ್ದವಾದ ನೇಣಿನಿಂದ ಕಟ್ಟಿ ಹೋದನು. ಇತ್ತ ೨೫೪. ವಿಷದಿಂದ ತುಂಬಿದ ಹೊಳೆಯುವ ಹಲ್ಲುಗಳಿಂದ ಭಯಂಕರ ಮುಖದ ಯಮಪಾಶದಂತಿದ್ದ ಒಂದು ಉರಗವು ಮಗುವಿನ ಹಾಸಿಗೆಯ

ಸ್ಫುರಿತವಿಶಾಲವಿಲಮುಷ್ಟಾಂ
ಕುರ ಸಂಕುಳ ಭೀಕರಾನನಂ ಸಾರ್ದತೊಂ
ದುರಗಂ ಮೆಲ್ಲನೆ ಬಾಲಾ
ಸ್ತರಣಾಂಕಿತಮಂ ಕೃತಾಂತಪಾಶಪ್ರತಿಮಂ ೨೫೮

ಅಂತು ಸಾರ್ತರ್ಪ ಭುಜಂಗನನಾ ಮುಂಗುರಿ ಕಂಡು ನಿಸರ್ಗವೈರಮಂ ನೆನೆದಿರದೆ ಸರ್ಪನಂ ಶತಖಂಡಂ ಮಾಡಿ ಕೊಂದು ತಿನುತ್ತಿರ್ಪುದುಂ, ಕಿಱಿದಾನುಂ ಬೇಗಕ್ಕೆ ಹಾರ್ವಂ ಬರ್ಪುದುಂ ತನ್ನ ಸಾಹಸಮಂ ತನ್ನಾಳ್ವಂಗೆ ತೋಱಲೆಂದು ರುಧಿರಾರುಣಿತಮಾದ ನಖಮುಖಮಂ ಪಲ್ಗಳೊಳ್ ಪತ್ತಿರ್ಪ ಖಂಡಂಗಳ್ವೆರಸು ಪರಿತಂದು ಕಾಲಮೇಲೆ ಪೊರಳ್ದು ಚಾಟುಕಾರಂಗೆಯ್ವುದುಂ ಹಾರ್ವಂ ಕಂಡೀ ಕಾವಲ್ ಕೂಸು ಕೊಂದುದಾಗಲೆವೇಳ್ಕುಮೆಂದು ವಿಚಾರವಿಕಳಂ ನಕುಲನ ಶಿರಮಂ ಬಿರಿಯೆ ಪೊಯ್ದು ಮಾಣದೆ ಪರಿತಂದು ನೋಡಿ ತೊಟ್ಟಲೊಳ್ ಸುಖನಿದ್ರಿತನುಮಕ್ಷತ ಶರೀರನುಮಾಗಿರ್ದ ಮಗನುಮನಾ ಕೆಲದೊಳ್ ಶತಖಂಡಮಾಗಿರ್ದ ಪಾವುಮಂ ಕಂಡು ಬಳಿಕ್ಕೆ ಹಾರ್ವಂ ಮುಂಗುರಿಯ ಮೇಲೆ ನೀರಂ ತಳಿದು ಬೀಸೆ ನಿರ್ಜೀವಮಾದುದಂ ಕಂಡು ಪಾಪಕರ್ಮಂ ತಾಂ ಕೋಪವಶದಿಂ ಕೂಸಿನಂತೆ ನಡಪಿದೆ ನಕುಲನಂ ಪರೀಕ್ಷಿಸದೆ ಕೊಂದೆನೆಂದು ಶೋಕಂಗೆಯ್ಯುತ್ತುಮಿರ್ಪನಂ ಯಜ್ಞದತ್ತೆ ಬಂದಿದೇನೆಂದು ಬೆಸಗೊಳೆ ದೇವಶರ್ಮಂ ತತ್ಪ್ರಪಂಚಮೆಲ್ಲಮಂ ಪೇೞೆ ಕೇಳ್ದಿಂತೆಂದಳ್

ಶ್ಲೋ॥ ಕುದೃಷ್ಟಂ ಕುಪರಿಜ್ಞಾತಂ ಕುಶ್ರುತಂ ಕುಪರೀಕ್ಷಿತಂ
ತನ್ನರೇಣನ ಕರ್ತವ್ಯಂ ಕಿರಾಟೇನ ತು ಯತ್ಕೃತಂ ॥೧೩೮॥

ಬಳಿಗೆ ಮೆಲ್ಲನೆ ಸಮೀಪಿಸಿತು. ೨೫೮. ಹಾಗೆ ಬರುತ್ತಿದ್ದ ಸರ್ಪವನ್ನು ಆ ಮುಂಗುರಿ ಕಂಡು ಸ್ವಾಭಾವಿಕವಾದ ವೈರದಿಂದ ಸರ್ಪವನ್ನು ನುಚ್ಚುನುರಿ ಮಾಡಿ ಕೊಂದು ತಿನ್ನುತ್ತಿರಲು ಸ್ವಲ್ಪ ಹೊತ್ತಿನಲ್ಲಿ ಆ ಬ್ರಾಹ್ಮಣನು ಮನೆಗೆ ಹಿಂದಿರುಗಲು ತನ್ನ ಸಾಹಸವನ್ನು ತನ್ನ ಒಡೆಯನಿಗೆ ತೋರಿಸಲೆಂದು ರಕ್ತ ಬಳಿದ ಉಗುರುಗಳಿಂದಲೂ, ಹಲ್ಲುಗಳಲ್ಲಿ ಅಂಟಿದ ಮಾಂಸಖಂಡಗಳಿಂದಲೂ ಬಂದು ಕಾಲ ಮೇಲೆ ಹೊರಳಾಡಿ ಸಲಿಗೆ ತೋರಿಸಲು ಬ್ರಾಹ್ಮಣನು ಈ ಕಾವಲು ಕೂಸನ್ನು ಕೊಂದಿರಬೇಕೆಂದು ಅವಿವೇಕಿಯಾಗಿ ಮುಂಗುರಿಯ ಮಂಡೆಯನ್ನು ಬಿರಿಯುವಂತೆ ಹೊಡೆದನು. ತೊಟ್ಟಿಲ ಬಳಿಗೆ ಬಂದು ನೋಡಲು ಸುಖವಾಗಿ ಮಲಗಿ ಸುರಕ್ಷಿತವಾಗಿ ನಿದ್ರಿಸಿದ ಮಗನನ್ನೂ ಅಲ್ಲೇ ಬಳಿಯಲ್ಲಿ ನುಚ್ಚು ನುರಿಯಾಗಿ ಬಿದ್ದಿದ್ದ ಹಾವನ್ನೂ ಕಂಡು ಆ ಬ್ರಾಹ್ಮಣನು ಮುಂಗುರಿಯ ಮೇಲೆ ನೀರನ್ನು ತಳಿದು ಬೀಸಲು ನಿರ್ಜೀವವಾಗಿರುವುದನ್ನು ಕಂಡು ಪಾಪಕರ್ಮನಾದ ತಾನು ಕೋಪವಶದಿಂದ ಕೂಸಿನಂತೆ ಸಾಕಿ ಸಲಹಿದ ಮುಂಗುರಿಯನ್ನು ಪರೀಕ್ಷಿಸದೆ ಕೊಂದೆನೆಂದು ಶೋಕಮಾಡುತ್ತಿರಲು ಯಜ್ಞದತ್ತೆ ಬಂದು ಇದೇನೆಂದು ವಿಚಾರಿಸಲು ದೇವಶರ್ಮನು ಆ ವಿಚಾರವನ್ನೆಲ್ಲ ಹೇಳಲು ಕೇಳಿ ಹೀಗೆಂದಳು : ಶ್ಲೋ॥ ಮನುಷ್ಯನು ಚೆನ್ನಾಗಿ ಕಾಣದುದನ್ನೂ ತಿಳಿಯದುದನ್ನೂ ಪರೀಕ್ಷಿಸದುದನ್ನೂ ಮಾಡಬಾರದು. ಯಾವುದಾದರೊಂದನ್ನು ಅರಿಯದೆ ಮಾಡಿದ ವ್ಯವಹಾರಿಯು ಹಾಗೆ ಎಂಬ

ಟೀ|| ಮನುಷ್ಯಂ ಲೇಸಾಗಿ ಕಾಣದುದಂ ಆಱಿಯದುದಂ ಪರೀಕ್ಷಿಸದುದಂ ಮಾಡಲಾಗದು. ಆವುದಾನೊಂದನಱಿಯದೆ ವ್ಯವಹಾರಿ ಮಾಡಿದ ಹಾಗೆ. ಎಂಬ ಕಥೆಯಂತಾದುದೆನೆ ದೇವಶರ್ಮನದೆಂತೆನೆ ಯಜ್ಞದತ್ತೆ ಪೇೞ್ಗುಂ :

೩. ಪರದನ ಕಥೆ

ಭದ್ರಪುರವೆಂಬ ಪುರದೊಳ್ ದಾರಿದ್ರ್ಯಭೂತಿಯೆಂಬ ಪರದನಿರ್ಪಂ. ಆತನ ಮಗಂ ಧನದತ್ತನೆಂಬಂ ನವಯೌವನಪ್ರಾರಂಭದೊಳ್ ತನಗಿಷ್ಟ ಭೋಗಕಾಮವಿಷಯಸುಖಕು ಪಾಯಮಿಲ್ಲದೆ ಸಂಸಾರಕ್ಕೆ ಬೇಸತ್ತೊಂದು ದಿವಸಂ ನಡುವಿರುಳ್ ತನ್ನ ತಂದೆಗಿಂತೆಂದಂ :

ಶ್ಲೋ || ಪುಂಸಾಮುನ್ನತ ಚಿತ್ತಾನಾಂ ದ್ವಯಮೇವ ಸುಖಾವಹಂ
ಸರ್ವಸಂಗನಿವೃತ್ತಿರ್ವಾ ವಿಭೂತಿರ್ವಾ ಸುವಿಸ್ತರಾ ||೧೩೫||

ಟೀ|| ಸುಚಿತ್ತರಪ್ಪ ಪುರುಷರ್ಗೆ ಸರ್ವಸಂಗಪರಿತ್ಯಾಗವಾಗಲಿ ಸಕಲೈಶ್ವರ್ಯವಾಗಲಿ ಎರಡೇ ಸುಖಮಪ್ಪುದಹುದು ಎಂಬ ನೀತಿಯುಂಟು. ತಾಂ ಮಹಾನೃಪತಿಯ ಸೇವೆಗೆಯ್ಯಲ್ಪೋಪೆನೆಂದೊಡಾತನ ತಂದೆಯಿಂತೆಂದಂ : ಮಗನೆ ದೇಶಾಂತರಕ್ಕೆ ಪೋಗಿ ಪೊನ್ನಂ ಪಡೆವುದು ಸಂದೆಯಂ, ಸಾವುಂ ಕೇಡುಂ ನಿಶ್ಚಯಮದಱಿಂ ಪೋಗಲ್ವೇಡೆನೆ ಧನದತ್ತಂ ಮತ್ತಮಿಂತೆಂದಂ :

ಶ್ಲೋ|| ಉದ್ಯೋಗೀ ಪ್ರಾಪ್ನುಯಾದರ್ಥಂ ಯಶೋ ವಾ ಮೃತ್ಯುಮೇವ ವಾ
ಮೃತ್ಯುಮೇವ ನಿರುದ್ಯೋಗೀ ನ ಯಶೋ ನಾರ್ಥಸಂಪದಃ ||೧೩೬||

ಟೀ|| ಉದ್ಯೋಗವುಳ್ಳಾತಂಗರ್ಥಲಾಭವಪ್ಪುದು. ಕೀರ್ತಿಯನಾಗಲಿ ಮೃತ್ಯುವನಾಗಲಿ ಐದುವನು. ನಿರುದ್ಯೋಗಿಗೆ ಕೀರ್ತಿಯಾಗದು ಅರ್ಥಲಾಭವಾಗದು ಮೃತ್ಯುವೇ ಅಹುದು. ಎಂಬುದು ಯುಕ್ತಿಯುಂಟಪ್ಪುದಱಿಂ,

ಕಥೆಯಂತಾಯಿತು ಎನ್ನಲು ದೇವಶರ್ಮನು ಅದೇನೆಂದು ಕೇಳಲು ಯಜ್ಞದತ್ತೆಯು ಹೇಳಿದಳು : ವ|| ಭದ್ರಪುರ ಎಂಬ ಪಟ್ಟಣದಲ್ಲಿ ದಾರಿದ್ರ್ಯಭೂತಿಯೆಂಬ ವ್ಯಾಪಾರಿಯಿದ್ದನು. ಆತನ ಮಗನಾದ ಧನದತ್ತನೆಂಬುವನು ನವಯೌವನಪ್ರಾರಂಭದಲ್ಲಿ ತನ್ನ ಇಷ್ಟ ವಿಷಯ ಕಾಮಭೋಗಕ್ಕೆ ಉಪಾಯವಿಲ್ಲದೆ ಸಂಸಾರಕ್ಕೆ ಬೇಸತ್ತು ಒಂದು ದಿವಸ ನಡುರಾತ್ರಿಯಲ್ಲಿ ತನ್ನ ತಂದೆಗೆ ಹೀಗೆಂದನು : ಶ್ಲೋ|| ಸುಚಿತ್ತರಾದ ಪುರುಷರಿಗೆ ಸರ್ವಸಂಗಪರಿತ್ಯಾಗವಾಗಲಿ ಸಕಲೈಶ್ವರ್ಯವಾಗಲಿ ಎರಡೇ ಸುಖವನ್ನುಂಟುಮಾಡುವುದು ಎಂಬ ನೀತಿಯುಂಟು. ತಾನು ಮಹಾರಾಜನ ಸೇವೆ ಮಾಡಲು ಹೋಗುವೆನೆಂದರೆ ಆತನ ತಂದೆ ಹೀಗೆಂಬನು : ಮಗನೇ, ದೇಶಾಂತರಕ್ಕೆ ಹೋಗಿ ಹೊನ್ನನ್ನು ಪಡೆಯುವುದು ಸಂದೇಹ. ಸಾವೂ ಕೇಡೂ ನಿಶ್ಚಯ. ಅದರಿಂದ ಹೋಗಬೇಡ ಎನ್ನಲು ಧನದತ್ತನು ಪುನಃ ಹೀಗೆಂದನು : ಶ್ಲೋ|| ಉದ್ಯೋಗಶೀಲನಿಗೆ ಅರ್ಥಲಾಭವಾಗುವುದು. ಅವನು ಕೀರ್ತಿಯನ್ನಾಗಲೀ ಮೃತ್ಯುವನ್ನಾಗಲೀ ಹೊಂದುವನು. ನಿರುದ್ಯೋಗಿಗೆ ಕೀರ್ತಿಯಾಗದು ; ಅರ್ಥಲಾಭವಾಗದು;

ಪುರುಷಂ ದೈವಮೆ ಶರಣೆಂ
ದಿರಲಾಗದು ತನಗೆ ತಾನೆ ಮಾಡದು ದೈವಂ
ಪುರುಷಾರ್ಥಂಗೆಯ್ಯುತ್ತಿರೆ
ಪರಮಾರ್ಥಂ ದೈವಮುಂ ಕೃತಾರ್ಥಮದಕ್ಕುಂ ೨೫೫

ಆದಱಿಂ ತಾನೇಗೆಯ್ಯುಂ ಪೋಗಿ ಪುರುಷಾರ್ಥಂಗೆಯ್ಯದೆ ಮಾಣೆನೆಂದು ತನ್ನ ಮನೋಧರ್ಮಮಂ ತಂದೆಗೆ ಪೇೞ್ದು ನಿದ್ರಾಂಗನಾಸಕ್ತನಾಗಿರ್ಪುದುಂ ನಿಶಾವಸಾನಸಮಯದೊಳಾತನ ಮುನ್ನ ಮಾಡಿದ ದಾನಧರ್ಮಂಗಳ ಫಲಂಗಳೇ ಮೂರ್ತಿಮತ್ತಾಗಿ ಬಂದಿಂತೆಂದವು :

ನೀನಿನಿತು ಕಾಲಮುದ್ಯಮ
ಹೀನನೆಯಾಗಿರ್ದೆಯದಱಿನಾಮುಂ ನಿನಗಂ
ತೇನುಮುಪಕರಿಸಲಱಿಯಮೆ
ನೀನೀ ತೆಱದಿಂದೆ ನೆಱೆಯೆ ತಱಿಸಂದುದಱಿಂ ೨೫೬

ಇನ್ನೆಮಗಿರಲ್ವಾರದು. ನಾಳೆ ನಾಂ ನಾಲ್ವರ್ ದಿಗಂಬರರೂಪಗೊಂಡು ನಿನ್ನ ಮನೆಗೆ ಬಂದಪ್ಪೆವು. ನೀನೆಮಗಿದಿರಂ ಬಂದು ವಂದಿಸಿ ವಿಧಿಯಿಂದರ್ಚಿಸಪೊಡಂ ನಿಧಿಗಳಾಗಿ ಪರಿಣಮಿಸುವೆವೆಂದು ಪೇೞ್ದುದುಂ ಕನಸಂ ಧನದತ್ತಂ ನನಸೆಂದು ಭೋಂಕನೆೞ್ಚತ್ತತಿ ಕುತೂಹಲಂಬೆತ್ತುಮೀ ಚೋದ್ಯಮಂ ನೋೞ್ಪೆನೆಂದು ಮನೆಯಂ ಶೋಭಾವಹಂಗೈದು ಶುಚಿರ್ಭೂತನಾಗಿರ್ದು ದ್ವಾರದೊಳ್ ನಿಲ್ವುದುಂ ನಾಲ್ವರ್ ಸವಣರ್ ಸೈತೆ ತನ್ನ ಮನೆಗಾಗಿ ಬರ್ಪುದಂ ಕಂಡು ಇದಿರಂ ಪೋಗಿ ಬಲವಂದು ವಂದಿಸಿ ಮನೆಗೊಡಂಗೊಂಡು ಪೋಗಿ ಪೂಜಿಸಿ ಪೊಡಮಡಲೊಡಂ ಪೊನ್ನರಾಶಿಯಾಗಿರ್ದುದಂ ನೆರೆಮನೆಯ ಪರದಂ ಕಂಡೊಡಾತಂಗೆ ರಹಸ್ಯರಕ್ಷಣೋಚಿತಂ ಕಿಱಿದಂ ಪೊನ್ನನಿತ್ತೊಡವನದನೀಡಾಡಿ ಪೋಗಿ,

ಮೃತ್ಯುವಂತೂ ತಪ್ಪಿದ್ದಲ್ಲ ಎಂಬ ಯುಕ್ತಿಯಿರುವುದರಿಂದ ೨೫೫. ಪುರುಷನು ದೈವವೇ ಶರಣು ಎಂದು ಸುಮ್ಮನೆ ಇರಬಾರದು. ದೈವವು ತನ್ನಿಂದ ತಾನೇ ಏನನ್ನೂ ಮಾಡದು. ಪುರುಷಾರ್ಥವನ್ನು ಮಾಡುತ್ತಿರಲು ಪರಮಾರ್ಥವೂ ದೈವವೂ ಕೃತಾರ್ಥವಾಗುವುದು. ವ।। ಆದರಿಂದ ತಾನು ಏನಾದರೂ ಹೋಗಿ ಪುರುಷಾರ್ಥವನ್ನು ಮಾಡದೆ ಇರೆನು ಎಂದು ತನ್ನ ಮನೋಧರ್ಮವನ್ನು ತಂದೆಗೆ ಹೇಳಿ ನಿದ್ರಾಂಗನಾಸಕ್ತನಾದನು. ಮುಂಜಾನೆ ಹಿಂದೆ ಮಾಡಿದ ದಾನ ಧರ್ಮಗಳ ಫಲಗಳೇ ಮೂರ್ತಿಮತ್ತಾಗಿ ಬಂದು ಹೀಗೆಂದುವು: ೨೫೬. ನೀನಿಷ್ಟರವರೆಗೆ ಉದ್ಯೋಗಹೀನನಾಗಿದ್ದೆ. ಅದರಿಂದ ನಾವೂ ನಿನಗೆ ಏನೂ ಉಪಕಾರವನ್ನು ಮಾಡಲಿಲ್ಲ. ವ।। ಇನ್ನು ನಾವು ನಾಳೆ ಸುಮ್ಮನಿರೆವು. ನಾಲ್ವರು ದಿಗಂಬರರೂಪದಲ್ಲಿ ನಿನ್ನ ಮನೆಗೆ ಬರುವೆವು. ನೀನು ನಮ್ಮನ್ನು ಎದುರುಗೊಂಡು ವಂದಿಸಿ ವಿಧಿಪೂರ್ವಕವಾಗಿ ಅರ್ಚಿಸಿದಲ್ಲಿ ನಿಧಿಗಳಾಗಿ ಪರಿಣಮಿಸುವೆವು ಎಂದು ಹೇಳಲು ಕನಸನ್ನು ಧನದತ್ತನು ನನಸೆಂದೇ ತಿಳಿದು ಭೋಂಕನೆ ಎಚ್ಚತ್ತು ಅತಿ ಕುತೂಹಲಗೊಂಡು ಈ ಆಶ್ಚರ್ಯವನ್ನು ನೋಡುವೆನೆಂದು ಮನೆಯನ್ನು ಸಿಂಗರಿಸಿ ಶುಚಿರ್ಭೂತನಾಗಿದ್ದು ದ್ವಾರದಲ್ಲಿ ನಿಂತನು. ನಾಲ್ವರು ಶ್ರಮಣರು ನೇರವಾಗಿ ತನ್ನ ಮನೆಗೇ ಬರುತ್ತಿರುವುದನ್ನು ಕಂಡು ಎದುರುಗೊಂಡು ಪ್ರದಕ್ಷಿಣೆ ಬಂದು ನಮಸ್ಕರಿಸಿ ಮನೆಗೆ ಕರೆದುಕೊಂಡು ಹೋಗಿ ಪೂಜಿಸಿ ನಮಸ್ಕರಿಸಲು ಹೊನ್ನ ರಾಶಿಯಾಗಿದ್ದುದನ್ನು ನೆರೆಮನೆಯ ವ್ಯಾಪಾರಿಯು ಕಾಣಲು ರಹಸ್ಯ ರಕ್ಷಣೋಚಿತವಾಗಿ ಅವನಿಗೆ ಸ್ವಲ್ಪ ಹೊನ್ನನ್ನು ಕೊಡಲು ಅವನು ಅದನ್ನು ಬಿಸುಟು

ನಿನಗುಳ್ಳ ಸವಣರೇಂ ಮ
ತ್ತೆನಗಿಲ್ಲವೆಯೆಂದು ಪರಿದು ಪರದಂ ಪುರದೊಳ್
ಮುನಿಗಳ್ ಚರಿಗೆಗೆ ಬರುತಿರೆ
ಮನೆಗುಯ್ದಾರಾಧನೋಕ್ತಿ ಪೂರ್ವಕ್ರಮದಿಂ ೨೫೭

ಅಂತು ಪೂಜಿಸಿ ಪೊಡೆಮಟ್ಟು ತನಗೆ ಪೊನ್ನರಾಸಿಗಳಾಗಿಮೆನೆ ಭಿಕ್ಷುಗಳ್ ಬೆಕ್ಕಸಂಬಟ್ಟು ಬೆಱಗಾಗಿರ್ದಾವರ ಶಿರಂಗಳಂ ಕಿರಾಟಂ ಲಕುಟದಿಂ ಬಿರಿಯೆ ಪೊಯ್ಯಲೊಡನವರ್ ಪುಯ್ಯಲಿಡಲೊಡಂ ಕೇಳ್ದು ತಳಾಱರ್ ಪರಿತಂದು ಪರದನಂ ಪಿಡಿದು ಪೆಡಗಯ್ಯಂ ಕಟ್ಟಿ ಧರ್ಮಾಧಿಕರಣರಲ್ಲಿಗುಯ್ಯೆ

ಕರಣಮಿದೇಃ ಕಾರಣದಿಂ
ತಿರಿವರನಕೃತಾಪರಾಧಿಗಳನವಿಚಾರಂ
ಪರಿಭವಿಸಿದೆ ಪೇಟೆಂದೊಡೆ
ಪರದಂ ಧರ್ಮಾಧಿಕರಣದವರ್ಗಿಂತೆಂದಂ ೨೫೮

ಧನದತ್ತನ ಮನೆಗೆ ನಾಲ್ವರ್ ಸವಣರ್ ಬಂದು ಪೊನ್ನಾದುದಂ ನಾಂ ಪ್ರತ್ಯಕ್ಷಂ ಕಂಡೆಂ ಎನ್ನ ಮನೆಗೆ ಸಾಧುಗಳಪ್ಪ ನಾಲ್ವರ್ ಸವಣರಂ ಬರಿಸಿ ವಿಧಾನದಿಂದರ್ಚಿಸಿ ಪೂಜಿಸಿ ಬೞಿಕ್ಕೆ ಪೊನ್ನಾಗಿಮೆಂದು ಪೊಡೆಮಟ್ಟೊಡಪರೆಂತುಂ ಪೊನ್ನಾಗದಿರೆ ಬಡಿದೆನಕಾರಣಂ ಪೊಯ್ದುದಿಲ್ಲೆನೆ ಸಭೆಯೆಲ್ಲ ನಗೆ ಧರ್ಮಾಧಿಕರಣರಿಂತೆಂದರ್ : ಆವುದುಮಂ ಪ್ರತ್ಯಕ್ಷಮಂ ಕಂಡುಂ ಕೇಳ್ದುಂ ಮತ್ತಂ ಯುಕ್ತಾಯುಕ್ತದಿಂ ವಿಚಾರಿಸಿ ನೆಗೞಲೆವೇೞ್ಕುಮುದೆಂತೆಂದೊಡೆ,

ಹೋದನು. ೨೫೭. ನಿನಗಿರುವ ಸವಣರು ನನಗೇಕಿಲ್ಲವೇ ಎಂದು ಆ ವ್ಯಾಪಾರಿಯು ಪುರದಲ್ಲಿ ಮುನಿಗಳು ಭಿಕ್ಷೆಗೆ ಬರುತ್ತಿರಲು ಮನೆಗೆ ಕರೆದುಕೊಂಡು ಹೋಗಿ ಆರಾಧನೋಕ್ತಿಪೂರ್ವಕವಾಗಿ ಪೂಜಿಸಿ ನಮಸ್ಕರಿಸಿ ತನಗೆ ಹೊನ್ನರಾಶಿಗಳಾಗಿರಿ ಎನ್ನಲು ಭಿಕ್ಷುಗಳು ಆಶ್ಚರ್ಯಪಟ್ಟು ಬೆರಗಾಗಿರಲು ವ್ಯಾಪಾರಿಯು ದಂಡದಿಂದ ಅವರ ಶಿರಸ್ಸನ್ನು ಬಿರಿಯುವಂತೆ ಹೊಡೆಯಲು ಅವರು ಪುಯ್ಯಲಿಡಲು ಅದನ್ನು ಕೇಳಿ ತಳಾರರು ಬಂದು ವ್ಯಾಪಾರಿಯನ್ನು ಹಿಡಿದು ಕೈಗಳನ್ನು ಹಿಂದಕ್ಕೆ ಕಟ್ಟಿ ಧರ್ಮಾಧಿಕರಣರಲ್ಲಿ ಒಯ್ದರು. ೨೫೮. ನಿರಪರಾಧಿಗಳಾದ ಭಿಕ್ಷುಗಳನ್ನು ವಿನಾಕಾರಣ ಹೊಡೆದುದೇಕೆಂದು ಧರ್ಮಾಧಿಕರಣರು ಕೇಳಲು ವ್ಯಾಪಾರಿ ಅವರಿಗೆ ಹೀಗೆ ಹೇಳಿದನು : ವ।। ಧನದತ್ತನ ಮನೆಗೆ ನಾಲ್ವರು ಸವಣರು ಬಂದು ಹೊನ್ನಾದುದನ್ನು ನಾನು ಪ್ರತ್ಯಕ್ಷವಾಗಿ ಕಂಡೆ. ಆದರಿಂದ ನನ್ನ ಮನೆಗೆ ನಾಲ್ವರು ಸವಣರನ್ನು ಬರಿಸಿ ವಿಧಾನದಿಂದ ಅರ್ಚಿಸಿ ಬಳಿಕ ಹೊನ್ನಾಗಿರಿ ಎಂದು ನಮಸ್ಕರಿಸಲು ಅವರು ಏನು ಮಾಡಿದರೂ ಹೊನ್ನಾಗದಿರಲು ಬಡಿದೆನು. ಅಕಾರಣವಾಗಿ ಹೊಡೆಯಲಿಲ್ಲ ಎನ್ನಲು ಸಭೆಯೆಲ್ಲ ನಗೆಯಾಡಿತು. ಧರ್ಮಾಧಿಕರಣರು ಹೀಗೆಂದರು : ಯಾವುದನ್ನೂ ಪ್ರತ್ಯಕ್ಷವಾಗಿ ಕಂಡೂ, ಕೇಳಿಯೂ, ಯುಕ್ತಾಯುಕ್ತವಾಗಿ

೪. ಅಜಿತನ ಕಥೆ

ಅಮರಾವತಿಯೆಂಬ ಪೊಟಲೊಳ್ ವಿಮಳಮತಿಯೆಂಬ ಪರದಂ ಪಿರಿದುಂ ಪೊನ್ನಂ ಪಡೆದು ದಾನಧರ್ಮ ಪರೋಪಕಾರಕ್ಕೆಡೆಯುಡುಗದೆ ಕೊಟ್ಟು ಕಡೆಯೊಳ್ ಬದತನಮುಂ ಮುಪ್ಪುಂ ಒಡನಡಸುವುದುಂ ಅವಸಾನಕಾಲದೊಳಾತಂ ತನ್ನ ಮಗನಪ್ಪ ಅಜಿತನಂ ಕರೆದು ಎಲೆ ಮಗನೆ, ನಿನಗಾಪ್ತಮಾದ ಪಸದನಮನಮೂಲ್ಯಮಪ್ಪ ವಸ್ತುವನೊಂದು ಪುಸ್ತಕದೊಳ್ ಮಡಗಿಟ್ಟೆನೆಂದು ಪೇೞ್ದು ಲೋಕಾಂತರಿತನಾದಂ, ಅಜಿತಂ ತನ್ನ ತಂದೆಗೆ ಪರಲೋಕಕ್ರಿಯೆಗಳಂ ಮಾಡಿ ಬಳಿಕ್ಕಂ ತಮ್ಮಯ್ಯಂ ಮಡಗಿಟ್ಟ ವಸ್ತುವಂ ನೋೞ್ಪೆನೆಂದು ಕವಳಿಗೆಯಂ ಬಿಟ್ಟು ನೋೞ್ಪನ್ನೆಗಂ ಪಲವುಂ ಕಪ್ಪಡಂಗಳೊಳ್ ಸುತ್ತಿರ್ಪುದೊಂದೋಲೆಯೊಳ್ ಬರೆದಿರ್ದ ಗಾಹೆಯಂ ಕಂಡು ತಮ್ಮಯ್ಯನಾಪದ್ಧನ ಮೆಂದು ತನಗೆ ಬೈತಿಟ್ಟ ವಸ್ತುವಿದಕ್ಕುಮೆಂದು ಬಲಿಕ್ಕದಂ ವಾಚಿಸಿನೋಡಿ,

ಶ್ಲೋ ॥ ಗುರುಪತ್ನೀವ ಸಾಗಮ್ಯಾ ಯಾ ಶ್ರೀಃ ಪೂರ್ವಕ್ರಮಾಗತಾ
ಸ್ವಭುಜೋಪಾರ್ಜಿತಾ ಯಾ ತು ಸಾ ಹಿ ಸತ್ವವತಾಂ ಪ್ರಿಯಾ ॥೧೩೭॥

ಟೀ॥ ಸಮರ್ಥರಪ ಪುರುಷರ್ಗೆ ಆವುದಾನೊಂದು ಅನ್ವಯಾಗತಮಪ್ಪ ಶ್ರೀಯಂ ಭೋಗಿಸಲು ಯೋಗ್ಯವಲ್ಲ, ಅದು ಗುರುವಿನ ಸ್ತ್ರೀಯ ಸಮಾನವಾಗಿಪುದು. ತನ್ನ ಭುಜಬಲದಿಂ ಗಳಿಯಿಸಿದ ಶ್ರೀಯೆ ಭೋಗಿಸಲು ಯೋಗ್ಯವಹಂತಹುದು. ಎಂಬುದು ಮಹಾಪುರುಷರ ಚರಿತ್ರಮೆಂದಿರದಾಂ ಪಿತೃವಿತ್ತಕಾಸೆಪಟ್ಟು ಕಷ್ಟನೆಯಾದೆನೆಂದು ತನ್ನಂ ತಾಂ ನಿಂದಿಸಿ ಮಹಾನೃಪತಿಯ ಸೇವೆಗೆಯ್ವೆನೆಂದು ಕಪ್ಪಡಮಂ ಸೀೞ್ದು ಮನೆಯಂ ಪೊಱಮಟ್ಟು ಕೆಲವಾಸು ದಿವಸದಿಂ,

ವಿಚಾರಿಸಿಯೂ ಕೈಗೊಳ್ಳಬೇಕು. ಅದು ಹೇಗೆಂದರೆ, ವ॥ ಅಮರಾವತಿಯೆಂಬ ಪಟ್ಟಣದಲ್ಲಿ ವಿಮಳಮತಿಯೆಂಬ ವ್ಯಾಪಾರಿಯು ಅಧಿಕವಾದ ಹೊನ್ನನ್ನು ಪಡೆದು ದಾನಧರ್ಮ ಪರೋಪಕಾರಕ್ಕೆ ಎಡೆಯಿಲ್ಲದಷ್ಟು ಕೊಟ್ಟು ಕಡೆಯಲ್ಲಿ ಬಡತನವೂ ಮುಪ್ಪೂ ಒಡನೆಯೇ ಅಡರಲು ಅವಸಾನಕಾಲದಲ್ಲಿ ಆತನು ತನ್ನ ಮಗನಾದ ಅಜಿತನನ್ನು ಕರೆದು ಎಲೆ ಮಗನೇ, ನಿನಗೆ ಆಪ್ತವಾದ ಆಸ್ತಿಯನ್ನೂ ಅಮೂಲ್ಯವಾದ ವಸ್ತುವನ್ನೂ ಒಂದು ಪುಸ್ತಕದಲ್ಲಿ ಇಟ್ಟಿರುವೆನೆಂದು ಹೇಳಿ ಲೋಕಾಂತರಕ್ಕೆ ಸಂದನು. ಅಜಿತನು ತನ್ನ ತಂದೆಗೆ ಪರಲೋಕಕ್ರಿಯೆಗಳನ್ನು ಮಾಡಿ ಬಳಿಕ ತನ್ನ ತಂದೆ ಇಟ್ಟಿದ್ದ ವಸ್ತುವನ್ನು ನೋಡುವೆನೆಂದು ಕವಳಿಗೆಯನ್ನು ಕಳಚಿ ನೋಡಲು ಹಲವು ಬಟ್ಟೆಗಳನ್ನು ಸುತ್ತಿದ ಒಂದು ಓಲೆಯಲ್ಲಿ ಬರೆದಿದ್ದ ಗಾಹೆಯನ್ನು ಕಂಡು ತನ್ನ ತಂದೆ ಆಪದ್ಧನವೆಂದು ತನಗಾಗಿ ಬಿಟ್ಟುಹೋದ ವಸ್ತುವಿದಾಗಿರಬೇಕೆಂದು ಅದನ್ನು ಓದಿ ನೋಡಿದನು : ಶ್ಲೋ॥ ಸಮರ್ಥರಾದ ಪುರುಷರಿಗೆ ಯಾವುದಾದರೂ ಒಂದು ವಂಶಾನುಗತವಾಗಿ ಬಂದ ಐಶ್ವರ್ಯವನ್ನು ಭೋಗಿಸುವುದು ಯೋಗ್ಯವಲ್ಲ ; ಅದು ಗುರುಪತ್ನಿಗೆ ಸಮಾನವಾಗಿರುವುದು. ತನ್ನ ಭುಜಬಲದಿಂದ ಗಳಿಸಿದ ಐಶ್ವರ್ಯವೇ ಭೋಗಕ್ಕೆ ಯೋಗ್ಯವಾದುದು ಎಂಬುದು ಮಹಾಪುರುಷರ ಚರಿತ್ರವೆಂದು ಬಗೆಯದೆ ನಾನು ಪಿತೃವಿತ್ತಕ್ಕೆ ಆಸೆಪಟ್ಟು ಕಷ್ಟವನ್ನು ಅನುಭವಿಸಿದೆ ಎಂದು ತನ್ನನ್ನು ತಾನೇ ನಿಂದಿಸಿ ಮಹಾರಾಜನ ಸೇವೆ ಮಾಡುವೆನೆಂದು ಬಟ್ಟೆಯನ್ನು ಕಟ್ಟಿ ಮನೆಯನ್ನು ಬಿಟ್ಟು

ನಯವಿದ್ಯಾವಿದರಿಂ ಕವಿಪ್ರಕರದಿಂ ತರ್ಕಜ್ಞರಿಂ ಶಬ್ದವಿ
ದ್ಯೆಯೊಳಬ್ಜಾಸನಕಲ್ಪರಪ್ಪ ವಿಳಸದ್ಭೂದೇವರಿಂ ದೇವತಾ
ಲಯದಿಂದೊಪ್ಪುವ ಗುಪ್ತವಂಶವಸುಧಾಧೀಶಾವಳೀ ರಾಜಧಾ
ನಿಯನುಜ್ಜೈನಿಯನೆಯ್ದಿ ಬಂದನಜಿತಂ ಪುಂಭದ್ಗುಣಭ್ರಾಜಿತಂ ೨೫೯

ಅಂತೆಯ್ದಿ ರಾಜಭವನಮಂ ಪೊಕ್ಕು ರಾಜಾಧಿರಾಜನಂ ವಿಭವಾಧರೀಭೂತನಳನಹುಷ ಭರತಭಗೀರಥಹರಿಶ್ಚಂದ್ರಾದಿ ಪುರಾತನ ಮಹೀಪಾಲಚರಿತ್ರನಂ ಕರಾಳಕರವಾಳಧಾರಾವಿದಾರಿ ತಮದವದರಾತಿಮಂಡಲೇಶ್ವರ ಪ್ರಚಂಡಶುಂಡಾಲನಂ ಪ್ರತಾಪಾನುರಾಗಾವನತ ಸಕಳ ಸಾಮಂತ ಮಕುಟಮಣಿ ಮರೀಚಿಮಾಲಾಂಕೃತ ಚಾರುಚರಣಕಮಲನಂ ಅತುಳವಿತರಣವಿನಿರ್ಜಿತ ಜೀಮೂತವಾಹನದಾನಾಧೀಶ್ವರ ದಿನಕರತನೂಜನಂ ಸಕಲ ಜಗಜ್ಜನಸಂಸ್ತೂಯಮಾನ ಗುಪ್ತಾನ್ವಯ ಜಲಧರಮಾರ್ಗಗಭಸ್ತಿಮಾಲಿಯಂ ವಾಮನಜಯಾದಿತ್ಯಪ್ರಮುಖಮುಖಕಮಳವಿನಿರ್ಗತ ಸೂಕ್ತಿ ಮುಕ್ತಾವಲೀಮಣಿಕುಂಡಲಮಂಡಿತಕರ್ಣನಂ ಚತುರುದಧಿವಲಯವೇಲಾಲಂಕೃತ ವಸುಂಧರಾಸುಂದರೀ ಜೀವಿತೇಶ್ವರನಂ ವಿಬುಧವನಜವನಾದಿತ್ಯನಪ್ಪ ವಿಕ್ರಮಾದಿತ್ಯನಂ ಕಂಡು,

ಶ್ಲೋ ॥ ಅರ್ಥಿನಾಂ ಕೃಪಣಾದೃಷ್ಟಿಸ್ತ್ವನ್ಮುಖೇ ಪತಿತಾಸಕೃತ್
ತದವಸ್ಥಾ ಪುನರ್ದೇವನಾನ್ಯಸ್ಯ ಮುಖಮೀಕ್ಷ್ಯತೇ ॥೧೪೭॥

ಟೀ॥ ಬೇಡುವರ ದೀನತರಮಪ್ಪ ದೃಷ್ಟಿಯರಸಿನ ಮುಖದಲ್ಲಿ ಬಿರ್ದುದಾದೊಡೆ ಮರಳಿಯುಮ ಆ ಅವಸ್ಥೆಯಲ್ಲಿ ಮತ್ತೊಬ್ಬನ ಮುಖಮಂ ನೋಡದು ಎಂಬ ಶ್ಲೋಕಮಂ ಪೇಳ್ದೊಡಾತಂಗೆ ವಿಕ್ರಮಾದಿತ್ಯದೇವಂ ಮೆಚ್ಚಿದೆಂ. ಬೇಡಿಕೊಳ್ಳೆಂಬುದುಂ ಅಜಿತನಿಂತೆಂದಂ :

ಕೆಲವು ದಿನಗಳಲ್ಲಿ ೨೫೯. ನೀತಿಶಾಸ್ತ್ರಜ್ಞರಿಂದಲೂ ಕವಿಸಮೂಹದಿಂದಲೂ, ತರ್ಕಶಾಸ್ತ್ರಜ್ಞರಿಂದಲೂ ಶಬ್ದವಿದ್ಯೆಯಲ್ಲಿ ಬ್ರಹ್ಮನಿಗೆ ಸಮಾನರಿಂದಲೂ ಸಜ್ಜನರಾದ ಬ್ರಾಹ್ಮಣರಿಂದಲೂ ದೇವಾಲಯಗಳಿಂದಲೂ ಶೋಭಿಸುವ ಗುಪ್ತವಂಶದ ರಾಜನ ರಾಜಧಾನಿಯಾದ ಉಜ್ಜಯನಿಗೆ ಸದ್ಗುಣಶೋಭಿತನಾದ ಅಜಿತನು ಬಂದನು. ವ॥ ಹಾಗೆ ರಾಜಭವನವನ್ನು ಹೊಕ್ಕು ರಾಜಾಧಿರಾಜನೂ ಭರತ ಭಗೀರಥ ಹರಿಶ್ಚಂದ್ರಾದಿ ಪುರಾತನಮಹೀಪಾಲರ ವೈಭವವನ್ನು ಕುಂದಿಸಿದ ಚರಿತ್ರನೂ ಶತ್ರುರಾಜರೆಂಬ ಮದ್ದಾನೆಗಳನ್ನು ಸೀಳಿದ ಖಡ್ಗಧಾರೆಗಳಿಂದ ಕೂಡಿದವನೂ ಪರಾಕ್ರಮದಿಂದಲೂ ಪ್ರೀತಿಯಿಂದಲೂ ಶರಣಾಗತರನ್ನಾಗಿಸಿದ ಸಕಲ ಸಾಮಂತ ಮಕುಟಮಣಿಯ ಕಾಂತಿಯಿಂದ ಅಲಂಕೃತವಾದ ಸುಂದರ ಪಾದಪದ್ಮನೂ ಸಮಸ್ತ ಪ್ರಪಂಚದಿಂದ ಸ್ತುತವಾದ ಗುಪ್ತವಂಶವೆಂಬ ಗಗನಕ್ಕೆ ಸೂರ್ಯನಂತಿರುವವನೂ ವಾಮನ ಜಯಾದಿತ್ಯರೇ ಮೊದಲಾದವರ ಮುಖಕಮಲದಿಂದ ಹೊರಹೊರಟ ಸೂಕ್ತಿ ಮುಕ್ತಾವಲಿಯೆಂಬ ಕರ್ಣಾಭರಣದಿಂದ ಅಲಂಕೃತನಾದ ಕಿವಿಗಳುಳ್ಳವನೂ ನಾಲ್ಕು ಸಮುದ್ರಗಳ ತರಂಗಗಳಿಂದ ಅಲಂಕೃತಳಾದ ಭೂದೇವಿಯ ಪ್ರಾಣೇಶ್ವರನೂ ವಿದ್ವಾಂಸರೆಂಬ ಕಮಲವನಕ್ಕೆ ಸೂರ್ಯನಂತಿರುವವನೂ ಆದ ವಿಕ್ರಮಾದಿತ್ಯನನ್ನು ಕಂಡನು. ಶ್ಲೋ॥ ಬೇಡುವವರ ದೀನತರವಾದ ದೃಷ್ಟಿ ಅರಸನ ಮುಖದ ಮೇಲೆ ಬಿದ್ದಲ್ಲಿ ಮರಳಿ ಅದು ಆ ಅವಸ್ಥೆಯಲ್ಲಿ ಮತ್ತೊಬ್ಬನ ಮುಖವನ್ನು ನೋಡದು ಎಂಬ ಶ್ಲೋಕವನ್ನು ಹೇಳಲು ಆತನಿಗೆ ವಿಕ್ರಮಾದಿತ್ಯನು, ಮೆಚ್ಚಿದೆ, ಬೇಕಾದುದನ್ನು ಬೇಡಿಕೊಳ್ಳು ಎನ್ನಲು ಅಜಿತನು ಹೀಗೆಂದನು:

ಜಯಲಕ್ಷ್ಮೀಧಾಮ ಧನಾ
ರ್ಥಿಯೆನಲ್ಲೆನಶೇಷ ಭುವನವಲ್ಲಭಸೇವಾ
ರ್ಥಿಯೆನಾಂ ಭವತ್ಪದಾಬ್ಜ
ದ್ವಯಮಂ ಸೇವಿಸುವೆನೆಂಬ ಬಗೆಯಿಂ ಬಂದೆಂ ೨೬೦

ಎಂದೊಡರಸಂ ಕರಮೊಲ್ದಿತ್ತೊಂದು ಸಜ್ಜೆಯ ಕಾಪಿನ ಬೆಸನಂ ಕುಡೆ ಪಡೆದು ನಿಶ್ಚಿಂತಮಿರಲೊಂದು ದೆವಸಮರಸಂ ಬೇಂಟೆವೋದೊಡಜಿತಂ ತಮ್ಮಯ್ಯಂ ಪೇೞ್ದ ಗಾಹೆಯಂ ಕಟ್ಟುವಂಜರದ ನಡುವಣ ನಾಗವೇದಿಕೆಯೊಳ್ ವಿನೋದದಿಂ ಬರೆದಿಟ್ಟಂ. ಇತ್ತಲ್ ಮಹಾದೇವಿಯುಂ ರೂಪಾದೇವಿಯು ಮೆಂಬಿರಿರ್ವರರಸಿಯರುಂ ವಿನೋದಾರ್ಥದಿಂ ಸೀತೆಯುಂ ರಾಮನುಮಾಗಿ ಕೃತಕನಾಟಕಮನಾಡಿ ಬೞಿಲ್ಕು ಕೃತಕ ಪುರುಷಾಕಾರಚಿಹ್ನಂಗಳಂ ಕಳೆಯಲ್ ಮಱೆದು ಅರಸನ ಸಿರಿಮಂಚದೊಳ್ ಗಾಢಾಲಿಂಗನಂಗೈದು ಮಱೆದೊಱಗಿರ್ದರ್. ಅನ್ನೆಗಮರಸನರ್ಧರಾತ್ರಿಸಮಯದೊಳ್ ಬಂದು ಶ್ರಮಶ್ರಾಂತಿಯಿಂ ಮಜ್ಜನಭೋಜನಾದಿ ಕ್ರಿಯೆಗೆಯ್ಯಲಾಱದೆ ಸಜ್ಜೆಯ ಮನೆಯಂ ಪೊಕ್ಕು ಸಿರಿಮಂಚದೊಳ್ ಮಹಾದೇವಿಯರೊಡನೆ ಪಟ್ಟಿರ್ದ ಪುರುಷರೂಪಮಂ ಕಂಡು ಕೋಪಾನಳಶಿಖಾಕಳಾಪದಹ್ಯಮಾನಮಾನಸನಾಗಿ ಪೆಱತೇನುಮಂ ಕಾಣದೆ ಕೇಬಾಳಿನ ಕಯ್ಯೊಳಿರ್ದ ಬಾಳಂ ಕೊಂಡೆತ್ತಿ ಪೊಯ್ಯುವುದುಮಾ ಬಾಳ್ ನಾಗವೇದಿಕೆಯಂ ತಾಗಿ ತೆತ್ತಿಸೆ ಮೇಗಂ ನೋಡಿ.

ವರ ನಾಗವೇದಿಕಾಭ್ಯಂ
ತರಲಿಖಿತಂಗಳನತಿಸ್ಫುಟಂಗಳನುದ್ಯ
ತ್ಪರುಷತರ ಕೋಪಾಸ್ತಂಭಾ
ಕ್ಷರಂಗಳೆನಿಪಕ್ಷರಂಗಳಂ ವಿಭು ಕಂಡಂ ೨೬೧

೨೬೦. ಮಹಾರಾಜಾ, ನಾನು ಧನಾರ್ಥಿಯಾಗಿ ನಿನ್ನಲ್ಲಿಗೆ ಬಂದವನಲ್ಲ, ಚಕ್ರವರ್ತಿಯ ಸೇವಾರ್ಥಿಯಾಗಿ ಬಂದವನು ; ನಾನು ನಿನ್ನ ಪಾದಸೇವೆಯ ಭಾಗ್ಯವನ್ನು ಪಡೆಯಬೇಕೆಂದು ಬಂದೆ ಎನ್ನಲು ಅರಸನು ಹಾಗೆಯೇ ಆಗಲಿ ಎಂದು ಶಯ್ಯಾಗೃಹದ ಕಾವಲಿನ ಕೆಲಸವನ್ನು ಕೊಡಲು ಅದನ್ನು ಪಡೆದು ನಿಶ್ಚಿಂತನಾಗಿದ್ದನು. ಒಂದು ದಿನ ಅರಸನು ಬೇಟೆಗೆ ಹೋಗಲು ಅಜಿತನು ತನ್ನ ತಂದೆ ಹೇಳಿದ ಗಾಹೆಯನ್ನು ಮೇಲ್ಕಟ್ಟಿನ ನಡುವೆ ನಾಗವೇದಿಕೆಯಲ್ಲಿ ವಿನೋದಕ್ಕಾಗಿ ಬರೆದಿಟ್ಟನು. ಇತ್ತ ಮಹಾರಾಣಿಯೂ ರೂಪಾದೇವಿ ಎಂಬ ಅರಸಿಯೂ ವಿನೋದಕ್ಕಾಗಿ ಸೀತಾರಾಮರಾಗಿ ಕೃತಕನಾಟಕವನ್ನಾಡಿ ಬಳಲಿ ಕೃತಕ ಪುರುಷರೂಪ ಚಿಹ್ನೆಗಳನ್ನು ತೆಗೆಯಲು ಮರೆತು ಅರಸನ ಸಿರಿಮಂಚದಲ್ಲಿ ಗಾಢಾಲಿಂಗನದಲ್ಲಿ ಮೈಮರೆತು ಮಲಗಿದ್ದರು. ಅಷ್ಟರಲ್ಲಿ ಅರಸನು ಅರ್ಧರಾತ್ರಿಯ ಸಮಯ ಬಂದು ಆಯಾಸದಿಂದ ಮಜ್ಜನಭೋಜನಾದಿ ಕಾರ್ಯಗಳನ್ನು ಮಾಡದೆ ಶಯ್ಯಾಗೃಹವನ್ನು ಹೊಕ್ಕು ಸಿರಿಮಂಚದಲ್ಲಿ ಮಹಾರಾಣಿಯೊಡನೆ ಮಲಗಿದ್ದ ಪುರುಷನನ್ನು ಕಂಡು ಕೋಪಾಕ್ರಾಂತನಾಗಿ ಬೇರೇನನ್ನೂ ಕಾಣದೆ ಸೇವಕನ ಕೈಯಲ್ಲಿದ್ದ ಕತ್ತಿಯನ್ನು ಕೊಂಡು ಎತ್ತಿ ಹೊಡೆಯಲು ಆ ಕತ್ತಿ ನಾಗವೇದಿಕೆಯನ್ನು ತಾಗಿ ನಾಟಿಕೊಳ್ಳಲು ರಾಜನು ಮೇಲೆ ನೋಡಿದಾಗ ೨೬೧. ನಾಗವೇದಿಕೆಯಲ್ಲಿ ಬರೆದ ಅಕ್ಷರಗಳನ್ನು ಕಂಡನು : ಹೇಳಿ ಕೇಳಿದ ಮಾತನ್ನೇ

ಗಾಹೆ॥ ಮಾಹೇಹಿ ಸುವಗ್ಗಾಹಿಂಯ ಮಾಪತ್ತಿಯುಜಣ್ಣದಿಟ್ಟಪಚ್ಚಕ್ಖಂ
ಪಚ್ಚಕ್ಖಂ ಮಿಯದಿಟ್ಠಂ ಜುತ್ತಾಜುತ್ತಂ ವಿಯಾರೇಹಿ ॥೧೩೯॥

ಟೀ॥ ಪೇಟೆ ಕೇಳಿದ ಮಾತನೆ ವಿಶ್ವಾಸಿಸಲಾಗದು. ಅಜ್ಞಾನವಹ ದೃಷ್ಟಿಯಿಂ ಕಂಡ ಕಾರ್ಯಮನೆ ಬೇಗಂ ಮಾಡಲಾಗದು. ಪ್ರತ್ಯಕ್ಷವಾಗಿ ಕಂಡುದನು ಯಥಾಯುಕ್ತವಾಗಿ ವಿಚಾರಿಸಿ ಮಾಡುವುದು. ಎಂದಿರಲ್ ಕಂಡಾ ಗಾಹೆಯುರ್ಥಮನರಸಂ ವಿಚಾರಿಸಿ ಮತ್ತಮಿಂತೆಂದು ಬಗೆದು,

ಮಱೆದೋಱಗಿದರಂ ಲಿಂಗದ
ಮಱೆಪೊಕ್ಕವರಂ ನಿರಾಯುಧರನಾಹವದೊಳ್
ಪೊಱಮಾಱಿದರಂ ತುಱಿಲಾ
ಳಿಱಿದೊಡೆ ನೆಱೆ ದೋಷಿಯಾಗಿ ಪೋಗನೆ ಜಗದೊಳ್ ೨೬೨

ಆದಱೆಂದಿವಂದಿರನೆತ್ತಿ ನುಡಿಸಿ ಬಳಿಕ್ಕ ತಕ್ಕುದಂ ಮಾಳ್ಪೆನೆಂದು ಪಿಡಿದಿರ್ದ ಬಾಳೊಳ್ ತೊಡೆಯುಂ ಪೊಯ್ವೆತ್ತುವುದುಂ ಅರಸಿಯರಿರ್ವರುಂ ಝೋಂಕನೆಟ್ಟತ್ತು ತನ್ನ ಕಾಲ ಮೇಲೆ ಬಿರ್ದೊಡರಸನಿದೇನೆಂದು ಬೆಸಗೊಳ್ವುದುಂ ರೂಪವತಿಯಿಂತೆಂದಳ್ : ನೀಂ ಬೇಂಟೆವೋಗಿ ತಡವಾದ ಕಾರಣದಿಂ ಪೊೞ್ತು ಪೋಗದೆ ಅಟ್ಟೆಯಿಂದಾಂ ರಾಮಚಂದ್ರನಾಗಿಯುಂ ಮಹಾದೇವಿ ಸೀತಾದೇವಿಯಾಗಿಯುಂ ನಾಟಕಮನಭಿಯಿಸಿ ಕರಂ ಬೞಲ್ದು ನೇಪಥ್ಯಮುಂ ಕಳೆಯಲ್ ಶಕ್ತಿಯಿಲ್ಲದೆ ನಿದ್ರಾಸಕ್ತರಾದವು, ಇದರ್ಕೆ ದೇವರ್ ದಯೆಗಿಡಲ್ವೇಡೆಂದು ಕಾಲ್ಗೆಱಗುವುದುಮರಸಂ ವಿಸ್ಮಯರಸಾವೇಷ್ಟಿತನಾಗಿಯರಸಿಯರ್ಗೆ ತತ್ಪ್ರಪಂಚಮೆಲ್ಲಮಂ ಪೇೞುತ್ತುಮಿರ್ಪಿನಮನ್ನೆಗಂ ನೇಸಱ್ ಮೂಡುವುದುಂ ಸಮಸ್ತಪರಿವಾರಮಂ ಬರಿಸಿ ಸಜ್ಜೆಯ ಮನೆಯ ನಾಗವೇದಿಯೊಳ್ ಸುಭಾಷಿತಮನಾರ್ ಬರೆದರ್ ಪೇೞಿಮೆಂಬುದುಂ ಸಜ್ಜೆಯ ಮನೆಯ ಕಾಪಿನವನೊರ್ವಂ ಪೊಸಮಾಣಿ ಬರೆದನಿದನೆಂದು

ವಿಶ್ವಾಸಿಸಬಾರದು. ಅಜ್ಞಾನವಾದ ದೃಷ್ಟಿಯಿಂದ ಕಂಡ ಕಾರ್ಯವನ್ನೇ ಬೇಗನೇ ಮಾಡಬಾರದು. ಪ್ರತ್ಯಕ್ಷವಾಗಿ ಕಂಡುದನ್ನೂ ಯುಕ್ತಾಯುಕ್ತವಾಗಿ ವಿಚಾರಿಸಿ ಮಾಡಬೇಕು ಎಂದಿರಲು ಕಂಡು ಆ ಗಾದೆಯ ಅರ್ಥವನ್ನು ಅರಸನು ವಿಚಾರಿಸಿ ಈ ರೀತಿಯಲ್ಲಿ ಆಲೋಚಿಸಿದನು : ೨೬೨. ಮರೆದೊರಗಿದವರನ್ನೂ, ಲಿಂಗದ ಮರೆಹೊಕ್ಕವರನ್ನೂ, ನಿರಾಯುಧರನ್ನೂ, ಯುದ್ಧರಂಗದಿಂದ ಹಿಮ್ಮೆಟ್ಟಿ ಓಡುವವರನ್ನೂ ಕೊಂದರೆ ಜಗತ್ತಿನಲ್ಲಿ ಅವನು ದೋಷಿಯಾಗದೆ ಇರುವನೇ ? ವ॥ ಆದರಿಂದ ಇವರನ್ನು ಎಬ್ಬಿಸಿ ಮಾತನಾಡಿಸಿದ ಬಳಿಕ ತಕ್ಕ ಶಿಕ್ಷೆಯನ್ನು ಕೈಗೊಳ್ಳುವೆನು, ಎಂದು ಕೈಯ ಕತ್ತಿಯಿಂದ ತೊಡೆಯನ್ನು ಬಡಿದು ಎಬ್ಬಿಸಲು ಅರಸಿಯರಿಬ್ಬರೂ ಎಚ್ಚತ್ತು ತನ್ನ ಕಾಲ ಮೇಲೆ ಬೀಳಲು ಅರಸನು ಇದೇನೆಂದು ವಿಚಾರಿಸಲು ರೂಪಾದೇವಿ ಹೀಗೆಂದಳು ದೇವಾ ! ನೀನು ಬೇಟೆಗೆ ಹೋಗಿ ತಡವಾದ ಕಾರಣದಿಂದ ಹೊತ್ತು ಹೋಗದೆ ಪ್ರೀತಿಯಿಂದ ನಾನು ರಾಮಚಂದ್ರನಾಗಿಯೂ ಮಹಾರಾಣಿ ಸೀತಾದೇವಿಯಾಗಿಯೂ ನಾಟಕವನ್ನಾಡಿ ಬಳಲಿ ನೇಪಥ್ಯವನ್ನು ತೆಗೆದಿಡಲು ಶಕ್ತಿಯಿಲ್ಲದೆ ನಿದ್ರಾಸಕ್ತರಾದೆವು. ಇದಕ್ಕಾಗಿ ಪ್ರಭುಗಳು ದಯೆಗೆಡುವುದು ಬೇಡ ಎಂದು ಕಾಲಿಗೆರಗಿದಳು. ಆಗ ಅರಸನು ವಿಸ್ಮಯಚಿತ್ತನಾಗಿ ಅರಸಿಯರಿಗೆ ತನ್ನ ವಿಚಾರವನ್ನೆಲ್ಲ ತಿಳಿಸುತ್ತಿರಲು ಸೂರ್ಯೋದಯವಾಗಲು ಸಮಸ್ತ ಪರಿವಾರವನ್ನೂ ಬರಿಸಿ ಶಯ್ಯಾಗೃಹದ ನಾಗವೇದಿಕೆಯಲ್ಲಿ ಸುಭಾಷಿತವನ್ನು ಬರೆದವರು ಯಾರು ಎಂದು ತಿಳಿಸಿ ಎನ್ನಲು

ಬಿನ್ನಪಂಗೆಯ್ವುದುಮರಸನಾತನಂ ಕರೆದು ಕಟ್ಟುವಂಜರದೊಳ್ ನೀಂ ಬರೆದ ಗಾಹೆಯನೆಲ್ಲಿ ಕಲ್ತೆಯೆಂದೊಡೆಮ್ಮ ತಂದೆ ಮಹಾಸಿರಿವಂತನಾಗಿಯುಂ ಪೊನ್ನೆಂಬ ಪೆಸರ ಚಿನ್ನಮನಿರಿಸದೆ ದಾನಧರ್ಮಂಗೆಯ್ದು ತನಗವಸಾನಕಾಲಮಪ್ಪುದುಮೆನ್ನಂ ಕರೆದು ಮಗನೆ, ನಿನಗೆ ಜೀವನೋಪಾಯಮೊಂದನರ್ಘಮಪ್ಪ ರತ್ನಮಂ ಪುಸ್ತಕದೊಳ್ ಮಡಗಿಟ್ಟೆನೆಂದು ಪರಲೋಕಪ್ರಾಪ್ತನಾದಂ. ಬಳಿಕ್ಕೆ ನಾನಾ ಕವಳಿಗೆಯಂ ಬಿಟ್ಟು ನೋಡಿ ಪೆಱತೇನುಮಂ ಕಾಣದೆ ಗಾಹೆಯಂ ಕಂಡು ಪಾಠಮಂಗೆಯ್ದೆನೆಂದು ಬಿನ್ನಪಂಗೆಯ್ವೊಡರಸನಿಂತೆಂದಂ : ನಿಮ್ಮಯ್ಯನನರ್ಘವಸ್ತುವೆಂದು ಪೇೞ್ದುದೊಂದು ಸಂದೆಯಮಿಲ್ಲೆಂತೆಂದೊಡೆನ್ನ ಪ್ರಾಣೇಶ್ವರಿಯರಿರ್ವರುಂ ಸ್ತ್ರೀ ಪುರುಷರೂಪಧಾರಿಗಳಾಗಿ ನಿದ್ರೆಗೆಯ್ದಿರ್ದರನಾಂ ಕಂಡು ಬಾಳಂ ಕಿತ್ತೆತ್ತಿ ಪೊಯ್ಯಲದು ನಾಗವೇದಿಕೆಯಂ ತಾಗಿ ತಡೆಯೆ ಮೇಗಂ ನೋಡಿ ಬರೆದಿರ್ದ ಸುಭಾಷಿತಮಂ ಕಂಡು ಪರೀಕ್ಷಿಸುವ ಬುದ್ಧಿ ಪುಟ್ಟಿ ಪಟ್ಟಿರ್ದರನೆತ್ತುವುದುಮವರೆಲ್ಲತ್ತು ತತ್ಪ್ರಪಂಚಮೆಲ್ಲಮಂ ಪೇೞೆ ಕೇಳ್ದೀ ಸುಭಾಷಿತದ ಪ್ರಸಾದದಿಂದೆನಗೆ ಸ್ತ್ರೀವಧೆಯುಂ ಯಶೋಹಾನಿಯುಮಾದುದಿಲ್ಲದಱಿಂ ರತ್ನಮೆಂಬುದು ಪಾಷಾಣವಿಶೇಷಮಪ್ಪುದದರ್ಕೆ ಬೆಲೆಯಿಡಲಕ್ಕುಮೀ ಸುಭಾಷಿತರತ್ನಕ್ಕೆ ಬೆಲೆಯಿಲ್ಲೆಂದು,

ಅಹಿತಮದಭಂಜನಂ ವಿಬು
ಧಹಿತಂ ಶ್ರೀ ಸಾಹಸಾಂಕನಜಿತಂಗಿತ್ತಂ
ಮಹಿಪಂ ಸ್ವಾಂಗಸ್ಪೃಷ್ಟಕ
ಸಹಿತಂ ಮಣಿಕನಕವಸ್ತುವಾಹನಚಯಮಂ ೨೬೩

ಶಯ್ಯಾಗೃಹದ ಕಾವಲಿನವರಲ್ಲಿ ಒಬ್ಬನಾದ ಹೊಸಮಾಣಿ ಬರೆದನು ಎಂದು ಬಿನ್ನವಿಸಿದರು. ಅರಸನು ಆತನನ್ನು ಕರೆದು ನಾಗವೇದಿಕೆಯಲ್ಲಿ ನೀನು ಬರೆದ ಗಾಹೆಯನ್ನು ಎಲ್ಲಿ ಕಲಿತೆ ಎಂದು ಕೇಳಿದನು. ಅದಕ್ಕೆ ಅವನು ನಮ್ಮ ತಂದೆ ಮಹಾ ಶ್ರೀಮಂತನಾಗಿದ್ದರೂ ಹೊನ್ನೆಂಬುದನ್ನು ಹೆಸರಿಗೂ ಇರಿಸದೆ ದಾನಧರ್ಮಗಳನ್ನು ಮಾಡಿ ತನಗೆ ಅವಸಾನ ಕಾಲವುಂಟಾಗಲು ನನ್ನನ್ನು ಕರೆದು, ಮಗನೇ, ನಿನಗೆ ಜೀವನೋಪಾಯವಾದ ಅನರ್ಘವಾದ ಒಂದು ರತ್ನವನ್ನು ಪುಸ್ತಕದಲ್ಲಿ ಮಡಗಿಟ್ಟಿರುವೆನೆಂದು ಪರಲೋಕವಾಸಿಯಾದನು. ಬಳಿಕ ನಾನು ಅದನ್ನು ಬಿಚ್ಚಿನೋಡಿ ಬೇರೇನನ್ನೂ ಕಾಣದೆ ಗಾಹೆಯನ್ನು ಕಂಡು ಪಾಠ ಮಾಡಿದೆನು ಎಂದು ಬಿನ್ನವಿಸಿದನು. ಅರಸನು ಹೀಗೆಂದನು : ನಿನ್ನ ತಂದೆ ಅನರ್ಘವಸ್ತು ಎಂದು ಹೇಳಿರುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನನ್ನ ಅರಸಿಯರಿಬ್ಬರೂ ಸ್ತ್ರೀ ಪುರುಷರೂಪಧಾರಿಗಳಾಗಿ ನಿದ್ರಿಸುತ್ತಿದ್ದುದನ್ನು ನಾನು ಕಂಡು ಕತ್ತಿಯನ್ನು ಕಿತ್ತು ಎತ್ತಿ ಹೊಡೆಯಲು ಅದು ನಾಗವೇದಿಕೆಯನ್ನು ತಾಗಿ ನಾಟಲು ಮೇಲೆ ನೋಡಿ ಬರೆದಿದ್ದ ಸುಭಾಷಿತವನ್ನು ಕಂಡು ಪರೀಕ್ಷಿಸುವ ಬುದ್ಧಿ ಹುಟ್ಟಿ ಮಲಗಿದವರನ್ನು ಎಬ್ಬಿಸಲು ಅವರು ತಮ್ಮ ವಿಚಾರವನ್ನೆಲ್ಲ ತಿಳಿಸಲು ಕೇಳಿ ಈ ಸುಭಾಷಿತದ ಪ್ರಸಾದದಿಂದ ನನಗೆ ಸ್ತ್ರೀವಧೆಯೂ ಯಶೋಹಾನಿಯೂ ಆಗಲಿಲ್ಲ. ಅದರಿಂದ ರತ್ನವೆನ್ನುವುದು ಪಾಷಾಣ ವಿಶೇಷ ಮಾತ್ರವಾದುದರಿಂದ ಅದಕ್ಕೆ ಬೆಲೆಗಟ್ಟಬಹುದು. ಈ ಸುಭಾಷಿತರತ್ನಕ್ಕೆ ಬೆಲೆಗಟ್ಟುವುದು ಅಶಕ್ಯ ಎಂದು ೨೬೩. ಶತ್ರುಗಳ ಸೊಕ್ಕನ್ನು ಮುರಿದವನೂ, ಜ್ಞಾನಿಗಳಿಗೆ ಹಿತನೂ, ಶ್ರೀಸಾಹಸಾಂಕನೂ ಆದ ಅರಸನು ಅಜಿತನಿಗೆ ತಾನು ತೊಟ್ಟ ಆಭರಣಗಳ ಸಹಿತವಾಗಿ

ಅದಜೆಂ ಪ್ರತ್ಯಕ್ಷಂ ಕಂಡುದುದಂ ಪರೀಕ್ಷಿಸಲ್ವೇಡಿಡುದು. ಧನದತ್ತಂಗನಿಮಿತ್ತಂ ಮುನಿಗಳ್ ಬಂದು ನಿಧಿಗಳಾಗಲರಿಯರೆತ್ತಾನುಮಪ್ಪೊಡಾತನ ಪೂರ್ವಜನ್ಮದ ಸುಕೃತಂಗಳ್ ಮೂರ್ತಿಮತ್ತುಗಳಾಗಿ ಬಂದಾ ನೆವದೊಳ್ ನಿಧಿಗಳಾಗಿ ಪರಿಣಮಿಸಿದುವಕ್ಕುಂ. ಅದನಾತನಂ ಬೆಸಗೊಳ್ಳದೆ ಅಪರೀಕ್ಷಿತಂ ಮುಮುಕ್ಷುಗಳಂ ಸಾಯೆ ಸದೆಬಡಿದನೀ ದುರಾತ್ಮಂ. ಪ್ರತ್ಯಕ್ಷಂ ದೋಷಮುಂ ಮಾಡಿದ ದುಷ್ಟನಿವಂಗೆ ತಕ್ಕುದಂ ಮಾಡಲ್ವೇಟ್ಕುಮೆಂದು ತಮ್ಮೊಳಾಲೋಚಿಸಿಕೊಂಡಿಂತೆಂದರ್ :

ಶ್ಲೋ॥ ಗುರುರಾತ್ಮವತಾಂ ಶಾಸ್ತಾ ಶಾಸ್ತಾ ರಾಜಾ ದುರಾತ್ಮನಾಂ
ಅಂತಃಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥೧೪೦॥

ಟೀ॥ ಬುದ್ಧಿಯುಳ್ಳರಂ ಗುರು ಶಿಕ್ಷಿಸುವಂ, ದುರಾತ್ಮರನರಸಂ ಶಿಕ್ಷಿಸುವಂ, ಪಾಪಿಗಳ ನಂತಕಂ ಶಿಕ್ಷಿಸುವಂ. ಎಂದು ಧರ್ಮಾಧಿಕರಣದವರ್ ದೋಷಾನುರೂಪದಂಡಮಂ ನಿರೂಪಿಸಿ ದಂಡಧರಂಗೆ ಪೇಟ್ದರ್. ಅದಜೆಂ ಮುಂಗುರಿ ಕೂಸಂ ಕೊಂದುದಂ ಪ್ರತ್ಯಕ್ಷಂ ಕಂಡೊಡಮದು ವಧಾಪ್ರಾಪ್ತನಲ್ಲಮುದೆಂತೆನೆ :

೫. ವೃದ್ಧಗೌತಮಿ

ಸಿದ್ಧಾಂತತತ್ತ್ವವೇದಿ ವಿ
ಶುದ್ಧ ಸದಾಚಾರೆ ಚಾರುಗುಣಯುತೆ ಸಾಕ್ಷಾ
ದ್ಬುದ್ಧಿ ವಿವೇಕ ಮಹಾನಿಧಿ
ಸದ್ಧರ್ಮಸುಮೂರ್ತಿ ವೃದ್ಧಗೌತಮಿಯೆಂಬಳ್ ೨೬೪

ಆ ಪರಮೇಶ್ವರಿಯ ಪಿರಿಯ ಮಗನನೊಂದು ಉರಗಂ ಕೊಂಡೊಡೆ ಅದನೊರ್ವ ನಿಷಾದಂ ಕಂಡು ಪಿಡಿದದಸಿ ಕಟ್ಟಿ ಗೌತಮಿಯ ಮುಂದಿಕ್ಕಿ ನಿನ್ನಮಗನನೀ ಪನ್ನಗಂ ಕೊಂದುದಿದಂ

ಮಣಿಕನಕ ವಸ್ತು ವಾಹನಾದಿಗಳನ್ನಿತ್ತು ಮನ್ನಿಸಿದನು. ವ॥ ಆದರಿಂದ ಪ್ರತ್ಯಕ್ಷವಾಗಿ ಕಂಡುದನ್ನೂ ಪರೀಕ್ಷಿಸಬೇಕು ಎಂದು ಹೇಳಿರುವುದು. ಧನದತ್ತನಿಗೆ ನಿಷ್ಕಾರಣವಾಗಿ ಮುನಿಗಳು ಬಂದು ನಿಧಿಯಾಗುವುದು ಅಸಾಧ್ಯ. ಏನೋ ಅವನ ಪೂರ್ವಜನ್ಮದ ಸುಕೃತಗಳು ಮೂರ್ತಿಮತ್ತಾಗಿ ಬಂದು ಆ ನೆಪದಲ್ಲಿ ನಿಧಿಗಳಾಗಿ ಪರಿಣಮಿಸಿರಬೇಕು. ಅದನ್ನು ಆತನೊಡನೆ ವಿಚಾರಿಸದೆ ಪರೀಕ್ಷಿಸದೆ ಸವಣರನ್ನು ಈ ದುರಾತ್ಮನು ಸಾಯೆ ಬಡಿದನು. ಪ್ರತ್ಯಕ್ಷವಾಗಿ ದೋಷವನ್ನು ಮಾಡಿದ ದುಷ್ಟನಾದ ಇವನಿಗೆ ಶಿಕ್ಷೆಯಾಗಬೇಕು ಎಂದು ಆಲೋಚಿಸಿ ಹೀಗೆಂದರು : ಶ್ಲೋ॥ ಬುದ್ಧಿಯುಳ್ಳವರನ್ನು ಗುರು ಶಿಕ್ಷಿಸುವನು ; ದುರಾತ್ಮರನ್ನು ಅರಸನು ಶಿಕ್ಷಿಸುವನು ; ಪಾಪಿಗಳನ್ನು ಅಂತಕನು ಶಿಕ್ಷಿಸುವನು ಎಂದು ಧರ್ಮಾಧಿಕರಣರು ದೋಷಾನುರೂಪವಾದ ಶಿಕ್ಷೆಯನ್ನು ವಿಧಿಸುವಂತೆ ದಂಡಧರನಿಗೆ ಹೇಳಿದರು. ಆದರಿಂದ ಮುಂಗುರಿ ಕೂಸನ್ನು ಕೊಂದುದನ್ನು ಪ್ರತ್ಯಕ್ಷವಾಗಿ ಕಂಡರೂ ಅದು ವಧ್ಯವಲ್ಲ. ೨೬೪. ಹೇಗೆಂದರೆ, ಸಿದ್ಧಾಂತತತ್ತ್ವವೇದಿಯೂ ವಿಶುದ್ಧ ಸದಾಚಾರೆಯೂ ಸುಂದರ ಗುಣಯುತೆಯೂ ಪ್ರತ್ಯಕ್ಷ ಬುದ್ಧಿ ವಿವೇಕಗಳ ಮಹಾನಿಧಿಯೂ ಸದ್ಧರ್ಮಮೂರ್ತಿಯೂ ಎನಿಸಿದ ವೃದ್ಧಗೌತಮಿಯೆಂಬವಳ ವ॥ ಹಿರಿಯ ಮಗನನ್ನು ಒಂದು ಸರ್ಪವು ಕಚ್ಚಲು ಅದನ್ನು ಕಂಡು ಒಬ್ಬ ಬೇಡನು ಅದನ್ನು ಹಿಡಿದು ಕಟ್ಟಿ ಗೌತಮಿಯ ಮುಂದೆ ಹಾಕಿ ನಿನ್ನ ಮಗನನ್ನು ಈ ಪನ್ನಗವು ಕಚ್ಚಿ ಕೊಂದಿತು. ಆದರಿಂದ ಇದನ್ನು ಕೊಲ್ಲುತ್ತೇನೆ ಎಂದು

ಕೊಂದಪೆನೆಂದು ಪಿರಿದಾಗ್ರಹಗೆಯ್ವುದುಮವಂಗೆ ಗೌತಮಿಯಿಂತೆಂದಳ್ : ಇದು ಕಾರಣಭೂತಮಲ್ಲದೆ ನಿಮಿತ್ತಭೂತಮಲ್ಲ, ಅಂತುಮಲ್ಲದೆ ಕ್ಷುದ್ರಜಂತುವಪ್ಪುದಱಿಂ ಸ್ವಭಾವಸಿದ್ಧವಾದುದು, ವಧಪ್ರಾಪ್ತನಲ್ಲೆಂದು ತನ್ನ ಮಗನಂ ಕೊಂದ ಸರ್ಪನಂ ಪ್ರತ್ಯಕ್ಷಂ ಕಂಡುಂ ಕೊಲಲಿತ್ತಳಿಲ್ಲ. ನೀವಿದಱ ನಖಮುಂ ಮುಖಮುಂ ರಕ್ತಮಾಗಿರ್ದುದೆಂಬನಿತಱಿಂದನಪರಾಧಿಯುಂ ಪರಮೋಪಕಾರಿಯುಮೀ ಮುಂಗುರಿಯಂ ಪರೀಕ್ಷಿಸದೆ ಕೊಂದು ಕಷ್ಟಂಗೆಯ್ದಿರ್ ಇನ್ನು ಪಶ್ಚಾತ್ತಾಪಮುಂ ವಿಪ್ರಲಾಪಮುಂ ಪ್ರಯೋಜನಮಿಲ್ಲ; ಇನ್ನುಸಿರದಿರಿಮೆಂದು ಪಾರ್ವನಂ ಸಂತೈಸಿ ಮತ್ತಮಿಂತೆಂದಳ್

ದಶರಥನೆಂಬ ನರೇಂದ್ರಂ
ವಿಶದಯಶಂ ಗಜಮೆಗೆತ್ತು ಋಷಿಪುತ್ರನುಮಂ
ಶಿಶುವನಪರೀಕ್ಷಿತಂ ಕೊಂ
ದು ಶಾಪಮಂ ಭೂಪನಾಗಳಲ್ಲಿಯೆ ಪಡೆದಂ ೨೬೫

ಅಂತುಮಲ್ಲದೆಯುಂ,

ಜಸಮಂ ಧರ್ಮಮುಮಂ ಪಾ
ಲಿಸುವೊಡಮಿಹಪರಮನೊಲ್ವೊಡಂ ತನ್ನಂ ರ
ಕ್ಷಿಸುವೊಡಮಾರೈದು ಪರೀ
ಕ್ಷಿಸುವುದು ಮನುಜಂ ಸಮಸ್ತಕಾರ್ಯಸ್ಥಿತಿಯಂ ೨೬೬

ಇಹದೊಳ್ ದುರ್ಯಶಮಾಗದಂತು ಪರದೊಳ್ ಪಾಪಕ್ಕೆ ಪಕ್ಕಾಗದಂ
ತು ಹಿತಾರ್ಥಂಗಳನೆಂತು ನೀತಿನಿಪುಣರ್ ಪೇೞ್ದಂತೆ ಸಂತರ್ ಸಮಂ
ತು ಹಿತಸ್ವಾಂತಗುಣೋಕ್ತಮಾಗೆ ಸುಪರೀಕ್ಷಾಕಾರ್ಯಮಂ ಮಾೞ್ಪುದಾ
ತ್ಮಹಿತಂ ತಾನಿದು ದುರ್ಗಸಿಂಹನ ಮತಂ ಲೋಕೋತ್ತರಂ ಧಾತ್ರಿಯೊಳ್ ೨೬೭

ಬಹಳ ಒತ್ತಾಯ ಪಡಿಸಲು ಅವನಿಗೆ ಗೌತಮಿ ಹೀಗೆಂದಳು: ಇದು ಕಾರಣಭೂತವಲ್ಲದೆ ನಿಮಿತ್ತಭೂತವಲ್ಲ. ಅಲ್ಲದೆ ಕ್ಷುದ್ರಜಂತುವಾದುದರಿಂದ ಅದು ಅದರ ಸ್ವಭಾವಸಿದ್ಧವಾದುದು. ಅದನ್ನು ಕೊಲ್ಲಬಾರದೆಂದು ಅವಳು ತನ್ನ ಮಗನನ್ನು ಕೊಂದ ಸರ್ಪವನ್ನು ಪ್ರತ್ಯಕ್ಷವಾಗಿ ಕಂಡರೂ ಅದನ್ನು ಕೊಲ್ಲಲು ಬಿಡಲಿಲ್ಲ. ನೀವು ಇದರ ಉಗುರುಗಳೂ ಮುಖವೂ ರಕ್ತವಾಗಿರುವಷ್ಟರಿಂದಲೇ ಅನಪರಾಧಿಯೂ, ಪರಮೋಪಕಾರಿಯೂ ಆದ ಈ ಮುಂಗುರಿಯನ್ನು ಪರೀಕ್ಷಿಸದೆ ಕೊಂದುಬಿಟ್ಟಿರಿ. ಇನ್ನು ಪಶ್ಚಾತ್ತಾಪವೂ ವಿಪ್ರಲಾಪವೂ ಪ್ರಯೋಜನವಿಲ್ಲ ; ಇನ್ನು ಸುಮ್ಮನಿರಿ ಎಂದು ಪತಿಯನ್ನು ಸಂತೈಸಿ ಹೀಗೆಂದಳು: ೨೬೫. ಹಿಂದೆ ದಶರಥನೆಂಬ ಭೂಪನು ಋಷಿಪುತ್ರನನ್ನು ಆನೆಯೆಂದು ಭ್ರಮಿಸಿ ಕೊಂದು ಶಾಪಗ್ರಸ್ತನಾಗಲಿಲ್ಲವೇ ? ಅದರಿಂದ ೨೬೬. ಮನುಷ್ಯನು ಯಶಸ್ಸನ್ನೂ ಧರ್ಮವನ್ನೂ ಪಾಲಿಸುವುದಾದರೆ ಇಹಪರಗಳನ್ನು ಬಯಸುವುದಾದರೆ ಸಮಸ್ತಕಾರ್ಯಗಳನ್ನೂ ವಿಚಾರಿಸಿ ಪರೀಕ್ಷಿಸಿ ಕೈಕೊಳ್ಳಬೇಕು. ೨೬೭. ಇಹದಲ್ಲಿ ಅಪಕೀರ್ತಿ ತಟ್ಟದಂತೆ ಪರದಲ್ಲಿ ಪಾಪಕ್ಕೆ ಗುರಿಯಾಗದಂತೆ ನೀತಿನಿಪುಣರೂ ಸಂತರೂ ಹೇಳಿದಂತೆ ಲೋಕದಲ್ಲಿ ಪರೀಕ್ಷಿಸಿ ಕಾರ್ಯವನ್ನು ಮಾಡಬೇಕು. ಇದು ದುರ್ಗಸಿಂಹನ ಲೋಕೋತ್ತರವಾದ ಮತ.

ರಕ್ಷಿಪೊಡಿಹಪರಸುಖಮನು
ಪೇಕ್ಷಿಸದೆ ಸಮಸ್ತಕಾರ್ಯಮಂ ಸತ್ಪುರುಷಂ
ದಕ್ಷತೆಯಿನ್ನೆಂದೆ ನೋಡಿ ಪ
ರೀಕ್ಷಿಸುವುದು ದುರ್ಗಸಿಂಹಮತಮಂ ಹಿತಮಂ ೨೬೮

ಇದು ವಿನಮದಮರರಾಜ ಮೌಳಿಮಾಣಿಕ್ಯಮರೀಚಿಮಂಜರೀಪುಂಜರಂಜಿತ ಭಗವದ್ಭವಾನೀವಲ್ಲಭ ಚರಣಸರಸೀರುಹಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತಮಪ್ಪ ಪಂಚತಂತ್ರದೊಳ್ ಪರೀಕ್ಷಾವ್ಯಾವರ್ಣನಂ ದ್ವಿತೀಯತಂತ್ರಂ ಸಮಾಪ್ತಂ.

೨೬೮. ಇಹಪರಸುಖವನ್ನು ರಕ್ಷಿಸುವುದಾದರೆ ಸಮಸ್ತ ಕಾರ್ಯವನ್ನು ಉಪೇಕ್ಷಿಸದೆ ಸತ್ಪುರುಷನಾದವನು ದಕ್ಷತೆಯಿಂದ ಚೆನ್ನಾಗಿ ನೋಡಿ ಪರೀಕ್ಷಿಸುವುದು. ಇದು ಹಿತವಾದ ದುರ್ಗಸಿಂಹನ ಅಭಿಪ್ರಾಯ. ವ|| ಇದು ವಿನಮದಮರರಾಜ ಮೌಳಿ ಮಾಣಿಕ್ಯ ಮರೀಚಿ ಮಂಜರೀ ಪುಂಜರಂಜಿತ ಭಗವದ್ಭವಾನೀವಲ್ಲಭಚರಣಸರಸೀರುಹಷಟ್ಚರಣ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತವಾದ ಪಂಚತಂತ್ರದಲ್ಲಿ ಪರೀಕ್ಷಾವ್ಯಾವರ್ಣನಂ ಎಂಬ ದ್ವಿತೀಯತಂತ್ರ ಸಮಾಪ್ತಿಯಾಯಿತು.

ವಿಶ್ವಾಸಪ್ರಕರಣಂ ತೃತೀಯತಂತ್ರಂ

ಶ್ರೀ ಸುದತಿಗಮಖಿಳಧರಾ
ಶ್ರೀ ಸುದತಿಗಮಧಿಪನಪ್ಪ ಬಗೆಯುಳ್ಳೊಡೆ ವಿ-
ಶ್ವಾಸಮನೆ ಮಾಡ ವಸುಧಾ-
ಧೀಶಂ ಗೆಲ್ಗಹಿತಜನಮನನುನಯದಿಂದಂ   ೨೬೯

ಅದಱಿಂ ವಾಕ್ಶ್ರೀಲೀಲಾ
ಸದನಂ ವಿಶ್ವಾಸಮೆಂಬ ತಂತ್ರಮನಸುಹೃ-
ನ್ಮದಹರಮಂ ಪೇೞ್ಗುಂ ಸುಕ-
ವಿ ದುರ್ಗಸಿಂಹಂ ನಯಾಗಮಜ್ಞರ ಮತದಿಂ   ೨೨೦

ಶ್ಲೋ॥ ನ ವಿಶ್ವಸೇತ್ ಪೂರ್ವ ವಿರೋಧಿತಸ್ಯ ಶತ್ರೋರ್ಹಿ ಮಿತ್ರತ್ವಮುಪಾಗತಸ್ಯ
ದಗ್ಧಾಂ ಗುಹಾಂ ಪಶ್ಯ ಉಲೂಕ ಪೂರ್ಣಾಂ ಕಾಕಪ್ರಣೀತೇನಹುತಾಶನೇನ ॥೧೪೦॥

ಟೀ॥ ಪೂರ್ವದಲ್ಲಿ ವಿರೋಧವಂ ಮಾಡಿದಂತಪ್ಪ ಶತ್ರುವನು ವಿಶ್ವಾಸಿಸಲಾಗದು. ಅದು ಹೇಗೆಂದೊಡೆ, ಗೂಗೆಗಳ್ ತುಂಬಿರ್ದ ಗುಹೆಯನು ಕಾಗೆಗಳ್ ಸುಟ್ಟವಪ್ಪುದೇ ಕಾರಣಮಾಗಿ ಈ ಕಥಾಪ್ರಪಂಚಮೆಂತೆಂದೊಡೆ :

೧. ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟ ಕಥೆ

ಅನೇಕಾಕಾರಮಹಾಮಹೀರುಹಷಂಡಮಂಡಿತಮಪ್ಪ ಕಾಂತಾರಾಂತರಾಳದೊಳಸೂನವಿಶಾಲ ಪತ್ರಚ್ಛತ್ರನಿರಾಕೃತದಿವಸಕರಪ್ರಕಾಶಮುಪಮ್ಯತಕಿರಣಬಿಂಬಾಯಮಾನಶೀತಳಚ್ಛಾಯಾಪರಿಪೀತ ಪಥಿಕಜನಶ್ರಮಜನಿತ ಸ್ವೇದಬಿಂದುಸಂದೋಹಮುಮಪ್ಪ ವಟವಿಟಪಿಯೆ ತನಗೆ ರಾಜಧಾನಿಯಾಗೆ,

೨೬೯. ಐಶ್ವರ್ಯಕ್ಕೂ ರಾಜ್ಯಕ್ಕೂ ಅಧಿಪತಿಯಾಗಬೇಕೆಂಬ ಅಪೇಕ್ಷೆಯಿದ್ದಲ್ಲಿ ವೈರಿಗಳನ್ನು ವಿಶ್ವಾಸದಿಂದ ನೋಡಿ ಗೆಲ್ಲತಕ್ಕದ್ದು. ೨೨೦. ಆದರಿಂದ ದುರ್ಗಸಿಂಹನೆಂಬ ಕವಿ ವೈರಿಗಳ ಸೊಕ್ಕನ್ನು ಮುರಿಯುವ ವಿಶ್ವಾಸವೆಂಬ ತಂತ್ರವನ್ನು ನೀತಿಶಾಸ್ತ್ರವಿದರ ಅಭಿಮತದಿಂದ ಹೇಳುವನು : ಶ್ಲೋ॥ ಪೂರ್ವದಲ್ಲಿ ವಿರೋಧವನ್ನು ಮಾಡಿದಂಥ ಶತ್ರುವನ್ನು ವಿಶ್ವಾಸಿಸಬಾರದು. ಗೂಗೆಗಳು ತುಂಬಿದ್ದ ಗುಹೆಯನ್ನು ಕಾಗೆಗಳು ಸುಟ್ಟುಬಿಡಲಿಲ್ಲವೇ ?

ವ॥ ಅನೇಕ ರೀತಿಯ ಮರಗಳಿಂದಲೂ ಸೂರ್ಯನ ಬಿಸಿಲು ಬೀಳದ ಚಂದ್ರನ ಬೆಳಕಿನಂಥ ತಂಪಾದ ನೆರಳುಳ್ಳ ವಟವೃಕ್ಷವೇ ತನ್ನ ರಾಜಧಾನಿಯೆನಿಸಿಕೊಂಡು ೨೨೧. ಕಾಕಾವೃಂದಾರಕಪತಿಯೆನಿಸಿದ ಕಾಗೆಯೊಂದು ವಾಸಮಾಡಿಕೊಂಡಿತ್ತು. ಆ ವನದಲ್ಲಿ ಶತ್ರುಗಳನ್ನು ಅಡಗಿಸಿದ ಕೀರ್ತಿಶಾಲಿಯೂ, ಶ್ರೇಷ್ಠರೂ ಶುದ್ಧರೂ ಆದ ಮಂತ್ರಿಸಮೂಹ ದಿಂದ ಕೂಡಿದವನೂ, ಉತ್ತಮ ಗೂಢಚಾರರಿಂದ ಕೂಡಿದವನೂ ಸನ್ಮಿತ್ರರ ಕಾರ್ಯಸಹಾಯವುಳ್ಳವನೂ ಶ್ರೇಷ್ಠವಾದ ಕಾಗೆಗಳ ಸಮೂಹಕ್ಕೆ ಒಡೆಯನೂ ಮೇಘವರ್ಣ ಎಂಬ ಹೆಸರಿನವನೂ ಮಳೆಗಾಲದ ಮೋಡದ ಬಣ್ಣದವನೂ ಪಕ್ಷಿಸಮೂಹದ

ಶಮಿತಾರಾತಿಪ್ರಭಾವಂ ಪರಿಜನಸಹಿತಂ ರಾಗದಿಂದಿರ್ಪನತ್ತು-
ತ್ತಮ ಶುದ್ಧಾಮಾತ್ಯವರ್ಗಂ ವರಚರನಿಚಯಂ ಗುಪ್ತಮಂತ್ರಂ ಸುಮಿತ್ರೋ-
ದ್ಯಮನುದ್ಯುತ್ಕಾಕವೃಂದಾರಕಪತಿ ಪೆಸರಿಂ ಮೇಘವರ್ಣಂ ಪಯೋದಾ-
ಗಮ ಶುಂಭನ್ಮೇಘವರ್ಣಂ ಖಗಗಣಗಣಿಕಾವ್ರಾತಸಂಗೀತವರ್ಣಂ ೨೭೧

ಮತ್ತಮಾ ಬನದುತ್ತರದಿಗ್ಭಾಗದೊಳೊಂದು ಯೋಜನ ಪ್ರಮಾಣಾಂತರದೊಳಂಜನಗಿರಿಯೆಂಬ ಪರ್ವತಮುಂಟು. ಅದರ ನಿತಂಬಪ್ರದೇಶದೊಳ್ ಪಲವುಂ ಗಹ್ವರಂಗಳೊಳವು. ಅಲ್ಲಿ

ಅರಿಮರ್ದನನೆಂಬನುಳೂ
ಕರಾಜನಿರ್ಪಂ ಸಮಸ್ತ ಪರಿವಾರಜನಂ-
ಬೆರಸನುಪಮಪ್ರತಾಪಂ
ಗುರುತರಸತ್ತ್ವಂ ಮಹಾಗುಹಾಭ್ಯಂತರದೊಳ್ ೨೭೨

ಅಂತಾತನೊಂದು ದಿವಸಂ ಪಲವುಂ ಕಾಗೆಗಳ್ ನೆರೆದು ಕರೆವ ಸರಮನಾಲಿಸಿ ಕೇಳ್ದು ಪೂರ್ವವೈರಮಂ ನೆನೆದೀ ಕಾಕಬಲಂಗಳನಿಂದು ಕೊಂದಲ್ಲದೆ ಮಾಣೆನೆಂದು ನಿಜಪ್ರಧಾನಸೇನಾಧಿಪರಪ್ಪ ಕೌಶಿಕಬಲಂಗಳನೊಂದು ಮಾಡಿಕೊಂಡು ನಡುವಿರುಳ್ ಪೊಱಮಟ್ಟು ಸಕಲಕಾಕಾಧೀಶ್ವರನಪ್ಪ ಮೇಘವರ್ಣನಿರ್ದ ಮಹಾವಟವಿಟಪಿಯಂ ಸುತ್ತಿಮುತ್ತಿ ಮಱಿದೊಱಗಿರ್ದ ಕಾಕಬಲಮೆಲ್ಲಮಂ ಬಱಿಕೆಯ್ದು ಪೇೞಿ ಪೆಸರಿಲ್ಲದೆ ಕೊಂದಾಕ್ಷಣದೊಳೆ ನಿಜನಿವಾಸಕ್ಕೆ ಮಗುೞ್ದಂ. ಅನ್ನೆಗಮೊಂದು ವಾಯಸಂ ನಿಜಸ್ವಾಮಿಯಪ್ಪ ಮೇಘವರ್ಣನಲ್ಲಿಗೆ ಬಂದು

ಬಲಬಲಮನುೞಿದೆ ಕೌಶಿಕ
ಬಲಮದಿರದಿದಿರ್ಚಿ ಕೊಲ್ದು ತೆಱದಿಂದುದ್ಯ-
ದ್ಬಲಬಲಮನುೞಿದೆ ಕೌಶಿಕ
ಬಲಮದಿರದಿದಿರ್ಚಿ ಕೊಂದು ಪೋದತ್ತೀಗಳ್ ೨೭೩

ಗಣಿಕೆಯರಿಂದ ಕೂಡಿದವನೂ ಸಂಗೀತಜ್ಞನೂ ಆಗಿ ಇದ್ದನು. ವ|| ಅಲ್ಲದೆ ಆ ವನದ ಉತ್ತರಭಾಗದಿಂದ ಒಂದ ಯೋಜನದ ದೂರದಲ್ಲಿ ಅಂಜನಗಿರಿ ಎಂಬ ಪರ್ವತವಿತ್ತು. ಅದರ ತಪ್ಪಲಿನಲ್ಲಿ ಹಲವು ಗುಹೆಗಳಿದ್ದುವು. ಅಲ್ಲಿ ೨೭೨. ಅರಿಮರ್ದನನೆಂಬ ಗೂಗೆಗಳ ರಾಜನಿದ್ದನು. ಅವನು ಸಮಸ್ತ ಪರಿವಾರಜನರಿಂದ ಕೂಡಿದವನೂ ಅಸಮಾನ್ಯ ಪರಾಕ್ರಮಿಯೂ ಮಹಾಬಲಶಾಲಿಯೂ ಆಗಿ ಒಂದು ದೊಡ್ಡ ಗುಹೆಯೊಳಗೆ ಇದ್ದನು. ವ|| ಹಾಗೆ ಅವನು ಒಂದು ದಿವಸ ಹಲವು ಕಾಗೆಗಳು ಸೇರಿ ಕರೆಯುತ್ತಿದ್ದ ಸ್ವರವನ್ನು ಕೇಳಿ ಪೂರ್ವವೈರವನ್ನು ನೆನೆದು ಈ ಕಾಕಸೈನ್ಯವನ್ನಿಂದು ಕೊಂದಲ್ಲದೆ ಬಿಡೆನು ಎಂದು ತನ್ನ ಪ್ರಧಾನಸೇನಾಪತಿಗಳನ್ನು ಒಟ್ಟಿಗೆ ಸೇರಿಸಿಕೊಂಡು ಅರ್ಧರಾತ್ರಿಯಲ್ಲಿ ಹೊರಹೊರಟು ಸಕಲಕಾಕಾಧೀಶ್ವರನಾದ ಮೇಘವರ್ಣನಿದ್ದ ಮಹಾವಟವೃಕ್ಷವನ್ನು ಸುತ್ತಿಮುತ್ತಿ ನಿದ್ರಿಸಿದ್ದ ಕಾಗೆಬಲವನ್ನೆಲ್ಲವನ್ನೂ ಬರಿದುಗೈದು ಹೇಳಹೆಸರಿಲ್ಲದಂತೆ ಕೊಂದು ಆಕ್ಷಣವೇ ತನ್ನ ಮನೆಗೆ ಮರಳಿದನು. ಅಷ್ಟರಲ್ಲಿ ಒಂದು ಕಾಗೆಯು ತನ್ನ ಒಡೆಯನಾದ ಮೇಘವರ್ಣನ ಬಳಿಗೆ ಬಂದು ೨೭೩. ಗೂಗೆಗಳ ಸೈನ್ಯವು ನಮ್ಮ ಸೈನ್ಯವನ್ನು ಕೊಂದು ಹೋಯಿತು ಎಂದು

ಎಂದು ಬಿನ್ನಪಂಗೆಯ್ವುದುಮಿನಿಸಾನುಂ ಬೇಗದಿಂ,

ಕುಮುದವನಶ್ರೀಕಾಂತಿಯು-
ಮಮೃತಕರದ್ಯುತಿಯುಮುಡುಗಣದ್ಯೋತಿಯುಮ-
ಸ್ತಮಿಸೆ ಜಗನ್ನುತನುದಯಾ-
ದ್ರಿಮಸ್ತಕಸ್ಥಲಮನೇಱಿದಂ ದಿವಸಕರಂ ೨೭೪

ಅಂತಾದಿತ್ಯೋದಯಮಾಗಲೊಡಂ ಮೇಘವರ್ಣನೆರ್ದು ಕಾಕಬಲರುಧಿರಾರುಣೀಭೂತಮಾಗಿರ್ದ ಸಮರಾಂಗಣಮುಮನುಲೂಕನಿಕರ ಸೂಚೀಮುಖಚಂಚುಚರಣಪಕ್ಷಘಾತಕ್ಷದಿರದಿದಿರಾಂತು ಕಾದಿ ಸತ್ತ ವಾಯಸವೀರನಿಕಾಯಮುಮನಲ್ಲಿಯೆ ನೊಂದು ಬಸವಟೆದಿರ್ದ ಬಲಿಭುಗ್ಬಲಪ್ರಧಾನರಂ ಕಂಡು ಬೆಱಗಾಗಿರ್ದ ವಾಯಸಾಧೀಶ್ವರನಲ್ಲಿಗೆ ಕೆಲವು ವಾಯಸಂಗಳ್ ಬಱಿತೋಡಿ ಕಾದೊಳ್ದೂಡಿರ್ದುವೆಲ್ಲಂ ಬಂದು ದೇವಾ, ನಾವಿರುಳಿನ ಕಾಳೆಗಕ್ಕಳ್ಗಿವು; ಅಂತುಮಲ್ಲದೆ ನಮ್ಮ ಬಲಮುಮಂ ಪಗೆವರ ಬಲಮುಮನಱಿಯದೆ ಪೆಱದೆಗೆದಿರ್ದೆವು. ಇನ್ನಾವುದು ಬೆಸನೆಂದು ಬಿನ್ನಪಂಗೆಯ್ಯೆ ಮೇಘವರ್ಣನಿಂತೆಂದಂ : ಇಲ್ಲಿ ನೊಂದವರುಮಂ ವೃದ್ಧರುಮಂ ಸ್ತ್ರೀ ಬಾಲಕರುಮನುಯ್ದೊಂದು ದುರ್ಗಸ್ಥಾನದೊಳಿರಿಸಿ ಬಱಿಕ್ಕೆ ತಕ್ಕುದಂ ನೆಗೞ್ವಮೆಂದು ತನಗಿನ್ನಯಾಗತರುಂ ಚತುರುಪಧಾವಿಶುದ್ಧರುಂ ನಯಶಾಸ್ತ್ರವಿದಗ್ಧರುಮಪ್ಪ ಉದ್ದೀಪಿ, ಆದೀಪಿ, ಪ್ರದೀಪಿ, ಸಂದೀಪಿ, ಚಿರಂಜೀವಿ ಎಂಬ ಐವರ್ ಮಂತ್ರಿಗಳಂ ಬರಿಸಿ ಮೇಘವರ್ಣಂ ಈ ಪ್ರಘಟ್ಟನಕ್ಕೇಗೆಯ್ವಮೆಂದು ಪೇೞೆ ಮಂತ್ರಿಗಳಿಂತೆಂದರ್:

ನಿಮ್ಮೞಿ ನಿಮ್ಮುತ್ಸುಕತೆಯಿ-
ನೆಮ್ಮಂ ಬೆಸಗೊಳ್ವುದುಂ ಕರಂ ರಭಸದೆ ನಾ-
ವು ಮುನ್ನಮೆ ಬಿನ್ನವಿಸುವು-
ದುಮಮಾರ್ಗಮಿದಲ್ತು ನಾಡೆ ನೀತಿವಿರುದ್ಧಂ ೨೭೫

ತಿಳಿಸಿತು. ೨೭೪. ವ|| ಅಷ್ಟರಲ್ಲಿ ಸೂರ್ಯೋದಯವಾಗಲು ಮೇಘವರ್ಣನು ಎದ್ದು ಕಾಗೆಗಳ ಸೈನ್ಯದ ರಕ್ತಪ್ರವಾಹದಿಂದ ಕೆಂಪಾದ ಸಮರಾಂಗಣವನ್ನೂ ಗೂಗೆಗಳೊಡನೆ ಕಾದಾಡಿ ಮಡಿದ ವಾಯಸವೀರನಿಕಾಯವನ್ನೂ ನೊಂದು ಬಸವಳಿದ ವಾಯಸಪ್ರಧಾನರನ್ನೂ ಕಂಡು ಬೆರಗಾಗಿದ್ದ ವಾಯಸಾಧೀಶ್ವರನಲ್ಲಿಗೆ ಕೆಲವು ವಾಯಸಗಳು ಬಂದು ಬಿನ್ನವಿಸಿಕೊಂಡವು : ದೇವಾ ! ನಾವು ರಾತ್ರಿಯ ಯುದ್ಧಕ್ಕೆ ಅಶಕ್ತರು. ಅಲ್ಲದೆ, ನಮ್ಮ ಬಲ ಯಾವುದು ವೈರಿಬಲ ಯಾವುದು ಎಂದು ತಿಳಿಯದೆ ಸೋತೆವು. ಇನ್ನು ಮುಂದೆ ಏನಪ್ಪಣೆ ? ಆದಕ್ಕೆ ಮೇಘವರ್ಣನು ಹೀಗೆಂದನು : ಇಲ್ಲಿ ನೊಂದವರನ್ನೂ ವೃದ್ಧರನ್ನೂ ಸ್ತ್ರೀ ಬಾಲಕರನ್ನೂ ಒಯ್ದು ಒಂದು ದುರ್ಗದಲ್ಲಿರಿಸಿ ಬಳಿಕ ತಕ್ಕ ಕಾರ್ಯವನ್ನು ಮಾಡೋಣ ಎಂದು ತನಗಿಂತ ಹಿರಿಯರೂ ಚತುರುಪಧಾವಿಶುದ್ಧರೂ ನೀತಿಶಾಸ್ತ್ರವಿದರೂ ಆದ ಉದ್ದೀಪಿ, ಆದೀಪಿ, ಪ್ರದೀಪಿ, ಸಂದೀಪಿ, ಚಿರಂಜೀವಿ, ಎಂಬ ಐವರು ಮಂತ್ರಿಗಳನ್ನು ಬರಿಸಿಕೊಂಡು ಮೇಘವರ್ಣನು ಈ ಯುದ್ಧದಲ್ಲಿ ಏನು ಮಾಡೋಣವೆಂದು ಕೇಳಲು ಮಂತ್ರಿಗಳು ಹೀಗೆಂದರು : ೨೭೫. ದೇವಾ ! ನೀವು ಉತ್ಸಾಹದಿಂದ ನಮ್ಮನ್ನು ಕೇಳುವುದೂ ನಾವೂ ನೀವು ಕೇಳುವ ಮೊದಲೇ ಹೇಳುವುದೂ ಸರಿಯಾದ ಮಾರ್ಗವಲ್ಲ,

ಅದೆಂತೆನೆ : ವಾಕ್ಯ ॥ ಮಂತ್ರ ನಿಸ್ರಾವಃ ಕಾರ್ಯಂ ವಿನಾಶಯತಿ
ಸರ್ವದ್ವಾರೇಭ್ಯೋ ಮಂತ್ರೋ ರಕ್ಷಿತವ್ಯಃ ॥೧೪೨॥

ಟೀ॥ ಮಂತ್ರವು ಹೊಱಪಟ್ಟಲ್ಲಿ ಕಾರ್ಯವು ಕಿಡುವುದು; ಅದು ಕಾರಣಮದು ಎಲ್ಲಾ ಕಡೆಯಿಂದಲೂ ಗೋಪ್ಯವಾಗಿ ರಕ್ಷಿಸಲ್ಪಡತಕ್ಕುದು ಎಂಬ ನಯಮಂ ಪಿಡಿದರಸುಗಳಾಳೋಚನಕಾಲದೊಳ್ ನಿಸ್ತಂಭಮುಂ ನಿರ್ಗವಾಕ್ಷಮುಂ ನಿಶ್ಛಿದ್ರಭಿತ್ತಿಯುಂ ನಿರಾಶ್ರಯಮುಂ ಶುಕಶಾರಿಕಾದಿ ಶಕುನಿಕುಳವಿಕಳಮುಮಪ್ಪ ಮಂತ್ರಶಾಲೆಯೊಳ್ ಮಂತ್ರಿಗಳುಂ ತಾನುಂ ನಿಶ್ಚಿಂತಮಿರ್ದಾಳೋಚಿಸುವರಪ್ಪೆಂದಿಂತಪ್ಪವಸರದೊಳ್ ಮಂತಣಮುಚಿತಮಲ್ಲೆಂಬುದುಂ ಮೇಘವರ್ಣಂ ನಿಜಾನುಗತಮಪ್ಪ ವಾಯಸಸಮುದಾಯಮಂ ಪೋಗಲ್ವೇೞ್ದು ಬೞಕ್ಕೆ ಮಂತ್ರಿಮಂಡಲಕ್ಕಿಂತೆಂದಂ :

ಅಗಣಿತಮೆನಿಪ್ಪ ಮಚ್ಛೌ-
ರ್ಯಗರ್ವಮಂ ನಿಮ್ಮ ಮಂತ್ರಶಕ್ತಿಯನಿನಿಸಂ
ಬಗೆಯದರಿಮರ್ದನಂ ಕಾ-
ಗೆಗಳಂ ತವೆ ಕೊಂದನಿಲ್ಲಿಗಾವುದು ಕಜ್ಜಂ ೨೭೬

ಎಂಬುದುಂ ಮಂತ್ರಿಮಂಡಲಮುಖ್ಯನಪ್ಪ ಉದ್ದೀಪಿಯಿಂತೆಂದಂ : ನಿಮ್ಮದಿ,

ವಾಕ್ಯಂ ॥ ಬಲವತಾವಷ್ಟಬ್ಧಸ್ಯ ವಿದೇಶಗಮನಂ ತದನುಪ್ರವೇಶೋ ವಾ ॥೧೪೩॥

ಟೀ॥ ಬಲಿಷ್ಠನಾದ ಶತ್ರುವಿಂ ಪಿಡಿಯಲ್ಪಟ್ಟವನು ಆ ಶತ್ರುವನೊಳಪೊಕ್ಕು ಬಾೞ್ವುದು ಅಲ್ಲದಾಗಳ್ ವಿದೇಶಗಮನಂಗೆಯ್ವುದು ಎಂಬ ನಯಮಂ ಪಿಡಿದು ಕೌಶಿಕಾಧೀಶನೊಳ್ ಪೊಕ್ಕು ಬಾೞ್ವುದುಮಲ್ಲದಾಗಳ್ ವಿದೇಶಗಮನಂಗೆಯ್ವುದುಮಲ್ಲದೆ ನಾಮೀಯವಸ್ಥೆಯೊಳ್ ಪೆಱತು ಕಜ್ಜಮನಾಳೋಚಿಸಿ ನೆಱೆಯಲುಂ ನಿತ್ತರಿಸಲುಮಱಿಯೆವೆಂಬುದುಂ ಕೇಳ್ದು ಪ್ರದೀಪಿಯೆಂಬ ಮಂತ್ರಿಯಿಂತೆಂದಂ : ಈತಂ ಪೇೞ್ದ ತದನುಪ್ರವೇಶಕ್ಕಂ ವಿದೇಶಗಮನಕ್ಕಂ ದೋಷಮುಂಟದೆಂತೆನೆ:

ಇದು ನೀತಿವಿರುದ್ಧವಾದುದು. ವಾ॥ ಮಂತ್ರ ಬಹಿರಂಗವಾದಲ್ಲಿ ಕಾರ್ಯವು ಬಿಟ್ಟುಹೋಗುವುದು. ಅದರಿಂದ ಎಲ್ಲಾ ಕಡೆಯಿಂದಲೂ ಅದನ್ನು ಗೋಪ್ಯವಾಗಿ ರಕ್ಷಿಸತಕ್ಕದ್ದು, ವ॥ ಅರಸರು ಆಲೋಚನಕಾಲದಲ್ಲಿ ನಿಸ್ತಂಭವೂ ನಿರ್ಗವಾಕ್ಷವೂ ನಿಶ್ಛಿದ್ರಭಿತ್ತಿಯೂ, ನಿರಾಶ್ರಯವೂ, ಶುಕಶಾರಿಕಾದಿ ಶಕುನಿಕುಲವಿಕಲವೂ ಆದ ಮಂತ್ರಶಾಲೆಯಲ್ಲಿ ಮಂತ್ರಿಗಳೂ ತಾವೂ ನಿಶ್ಚಿಂತರಾಗಿದ್ದು ಆಲೋಚಿಸುವರು. ಅದರಿಂದ ಇಂಥ ಸಂದರ್ಭದಲ್ಲಿ ಮಂತ್ರಾಲೋಚನೆ ಉಚಿತವಲ್ಲ. ಅದಕ್ಕೆ ಮೇಘವರ್ಣನು ತನ್ನ ಪರಿವಾರದ ವಾಯಸಸಮುದಾಯವನ್ನು ಹೋಗಲು ಹೇಳಿ ಬಳಿಕ ಮಂತ್ರಿಮಂಡಲಕ್ಕೆ ಹೀಗೆಂದನು : ೨೭೬. ಅಗಾಧವಾದ ನನ್ನ ಶೌರ್ಯವನ್ನೂ ನಿಮ್ಮ ಮಂತ್ರಶಕ್ತಿಯನ್ನೂ ಬಗೆಯದೆ ನಮ್ಮ ವೈರಿ ಕಾಗೆಗಳನ್ನು ಕೊಂದನು. ಇದಕ್ಕೇನು ಉಪಾಯ ? ವ॥ ಆಗ ಮಂತ್ರಿಮಂಡಲದಲ್ಲಿ ಮುಖ್ಯನಾದ ಉದ್ದೀಪಿಯು ಹೀಗೆಂದನು : ದೇವಾ ! ವಾ॥ ಬಲಿಷ್ಠನಾದ ಶತ್ರುವಿನಿಂದ ಬಂಧಿತನಾದವನು ಆ ಶತ್ರುವಿನ ಒಳಹೊಕ್ಕು ಬಾಳಬೇಕು; ಅಲ್ಲದಿದ್ದಲ್ಲಿ ವಿದೇಶಗಮನ ಮಾಡತಕ್ಕದ್ದು. ವ॥ ನಾವು ಈ ಅವಸ್ಥೆಯಲ್ಲಿ ಬೇರೇನನ್ನೂ ಮಾಡಲರಿಯೆವು. ಆಗ ಪ್ರದೀಪಿಯೆಂಬ ಮಂತ್ರಿ ಹೀಗೆಂದನು: ಈತ ಹೇಳಿದ ತದನುಪ್ರವೇಶಕ್ಕೂ, ವಿದೇಶಗಮನಕ್ಕೂ ದೋಷವುಂಟು. ತದನುಪ್ರವೇಶಮಾಡಿದೆವಾದರೆ ಬದ್ಧಗೋಷ್ಠಿಯೂ

ತದನುಪ್ರವೇಶಂಗೈದಪ್ಪೊಡೆ ಬದ್ಧರೋಷಿಯುಂ ಯುದ್ಧಾಭಿಲಾಷಿಯುಮಕಾರಣದ್ವೇಷಿಯುಮಪ್ಪ ಪಗೆವನ ಮನೆಯಂ ಬಗೆಗೆಟ್ಟು ಪೊಕ್ಕಂದು ಸಾವಕ್ಕುಂ ದೋಃ ಸಂಗರಮಕ್ಕುಂ. ವಿದೇಶಗಮನಂಗೆಯ್ದೆವಪ್ಪೊಡೆ ಕೌಶಿಕಂಗಳೆಲ್ಲಿಯುಮೊಳವು. ಅಲ್ಲಿರ್ದುವು ನಮ್ಮ ಬಂದ ಕಾರಣಮಂ ಬೇಗಮಾರೈದು ಪರಿದರಿಮರ್ದನಂಗೆ ಪೇಟ್ವೊಡಾತನೀಯಂದದೊಳಿರುಳ್ ಬಂದು ಮುತ್ತದೆ ಮಾಣನದಱಿಂದಿದು ನಯವಲ್ಲ, ನಮ್ಮ ಬಲದೊಳ್ ಭೀತರಲ್ಲದ ದೂತರನಟ್ಟಿ ಕೌಶಿಕಂಗಳ ಬರವನಱಿದಾಗಳೆ ಪರೆದುಪೋಪಂ. ಅವು ಬಾರದ ಪಕ್ಷಮಿಲ್ಲಿರ್ದು ಸಹಾಯಾದಿ ಸಾಧನೋಪಾಯಂಗಳಂ ಮಾಡುತ್ತುಂ ದೇಶಕಾಲಂಗಳಂ ನೋಡುತ್ತಮಿರ್ದು ಬಟಿಕದರ್ಕೆ ತಕ್ಕುದಂ ನೆಗಳ್ವಮೆಂಬುದುಂ ಮೇಘವರ್ಣನಾದೀಪಿಯೆಂಬ ಮಂತ್ರಿಯನಿಂತೆಂದಂ ; ಈಯಪಾಯಕ್ಕುಪಾಯಮಾವುದುಮಂ ಕಂಡಿರಪ್ಪೊಡೆ ಪೇಟಿಮೆಂಬುದುಮಾತನಿಂತೆಂದಂ ; ಈ ಮಂತ್ರಿಗಳ್ ಪೇಳ್ದಂತೆ ಅರಿಮರ್ದನನಿನ್ನಪ್ಪೊಡಂ ಸಂತಮಿರ್ಪನಪ್ಪೊಡೀ ನಯಮಪ್ಪುದು. ಇರುಳ್ಕಾಳೆಗದೊಳ್ ಕೌಶಿಕಂಗಳೊಂದಪ್ಪೊಡಂ ಸತ್ತುವುಂ ನೊಂದುವುಮಿಲ್ಲಂ ಅರಿಮರ್ದನಂ ನಡುವಿರುಳ್ ಬಾರದೆ ಮಾಣಂ ನಾವಿರುಳ್ ಕಣ್ಗಾಣದ ಕುರುಡರಪ್ಪುದಱಿಂದುಲೂಕಂಗಳ್ ಚಂಚು ಚರಣಂಗಳ ಪಕ್ಷಂಗಳ ಘಾತದಿಂ ಶತಚೂರ್ಣಮಾಗಿ ಪೊಯ್ಯಲೋಡಿ ಪೋಗುವುದಲ್ಲದೆ ತಾಗಿ ತಳ್ತಿಱಿಯಲಱಿಯೆವದು ಕಾರಣದಿಂ,

ಶ್ಲೋ॥ ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾಃ
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ ॥೧೪೪॥

ಟೀ॥ ಕಾಳೆಗದಲ್ಲಿ ಕಾದಿ ಗೆಲ್ದೊಡೆ ಹಿರಿದಪ್ಪ ಲಕ್ಷ್ಮಿಯಹುದು ಸತ್ತನಾದರೆ ದೇವಸ್ತ್ರೀಯರು ಕೊಂಡುಪೋಪರು. ಕ್ಷಣಭಂಗುರವಪ್ಪ ಶರೀರಕ್ಕೆ ಕಾಳೆಗವಾಗಲಿ ಮರಣವಾಗಲಿ ಚಿಂತಿಸಲಾಗದು.

ಯುದ್ಧಾಭಿಲಾಷಿಯೂ ಅಕಾರಣದ್ವೇಷಿಯೂ ಆದ ವೈರಿಯ ಮನೆಯನ್ನು ತಿಳಿಯದೆ ಹೊಕ್ಕರೆ ಸಾವು ಸಿದ್ಧ ; ಅಥವಾ ಯುದ್ಧವಾಗುವುದು. ವಿದೇಶಗಮನ ಮಾಡಿದರೆ ಈ ಹಾಳು ಗೂಗೆಗಳು ಎಲ್ಲಿ ಹೋದರೂ ಇರುವುವು. ಅಲ್ಲಿರುವ ಗೂಗೆಗಳು ನಾವು ಬಂದ ಕಾರಣವನ್ನು ಬೇಗನೆ ತಿಳಿದು ನಮ್ಮ ವೈರಿಗೆ ತಿಳಿಸಿದಲ್ಲಿ ಆತನು ಇದೇ ರೀತಿಯಲ್ಲಿ ರಾತ್ರಿ ಬಂದು ಅಕ್ರಮಿಸದೆ ಬಿಡುವುದಿಲ್ಲ. ಅದರಿಂದ ಇದು ನೀತಿಯಲ್ಲ. ನಮ್ಮ ಬಲದಲ್ಲಿ ಧೈರ್ಯವಂತರಾದ ದೂತರನ್ನಟ್ಟಿ ಗೂಗೆಗಳ ಬರವನ್ನು ಅರಿತುಕೊಂಡು ಆಗಲೇ ಚೆದರಿ ಹೋಗೋಣ. ಅವು ಬಾರದ ಪಕ್ಷದಲ್ಲಿ ಇಲ್ಲಿಯೇ ಇದ್ದು ಸಹಾಯಾದಿ ಸಾಧನೋಪಾಯಗಳನ್ನು ಮಾಡಿಕೊಳ್ಳುತ್ತ ದೇಶಕಾಲಗಳನ್ನು ನೋಡುತ್ತಿದ್ದು ಬಳಿಕ ಅದಕ್ಕೆ ತಕ್ಕುದನ್ನು ಮಾಡೋಣ. ಅದಕ್ಕೆ ಮೇಘವರ್ಣನು ಆದೀಪಿ ಎಂಬ ಮಂತ್ರಿಯನ್ನು ಹೀಗೆಂದು ಕೇಳಿದನು: ಈ ಅಪಾಯಕ್ಕೆ ಏನಾದರೂ ಉಪಾಯ ಗೊತ್ತಿದ್ದರೆ ತಿಳಿಸಿರಿ ಎನ್ನಲು ಅವನು ಹೀಗೆಂದನು: ಈ ಮಂತ್ರಿಗಳು ಹೇಳಿದಂತೆ ವೈರಿಯು ಇನ್ನಾದರೂ ಸುಮ್ಮನಿರುವುದಾದರೆ ಈ ಉಪಾಯ ಸರಿಹೊಂದುವುದು. ರಾತ್ರಿಯುದ್ಧದಲ್ಲಿ ಗೂಗೆಗಳಲ್ಲಿ ಒಂದೂ ಸತ್ತೂ ನೊಂದೂ ಇಲ್ಲ. ಅರಿಮರ್ದನನು ಅರ್ಧರಾತ್ರಿಯ ಹೊತ್ತಿಗೆ ಬಾರದೆ ಇರನು. ನಾವು ರಾತ್ರಿ ಹೊತ್ತು ಕಣ್ಗಾಣದ ಕುರುಡರಾದುದರಿಂದ ಗೂಗೆಗಳ ಚಂಚುಚರಣ ಪಕ್ಷಗಳ ಘಾತದಿಂದ ನುಚ್ಚುನುರಿಯಾಗಿ ಹೋಗುವುದಲ್ಲದೆ ಹೋರಾಡಲಾರೆವು. ಅದರಿಂದ,
ಶ್ಲೋ॥ ಯುದ್ಧದಲ್ಲಿ ಕಾದಾಡಿ ಗೆದ್ದರೆ ಅಧಿಕವಾದ ಲಕ್ಷ್ಮಿಗೆ ಆಶ್ರಿತರಾಗುವರು ; ಸತ್ತರಾದರೆ

ಎಂಬೀ ನಯಮಂ ಪಿಡಿದು ಸಮಸ್ತವಾಯಸನಿಕಾಯಮಂ ನೆರಪಿಕೊಂಡು ದಿವಸಾಂಧನಪ್ಪರಿಮರ್ದನನಂ ನಮ್ಮ ತಂದೆಯಪ್ಪರವಿಂದಮಿತ್ರನ ಬಲದಿಂ ಕಾದಿ ಕೊಂದೆವಪ್ಪೊಡೆ ಸುಖದಿಂ ಬಾಳ್ವೆವೆಂದೊಡಾತನ ಮಾತು ತನ್ನ ಮನಕ್ಕೆ ಬಂದು ಮೇಘವರ್ಣಂ ಸಂದೀಪಿಯೆಂಬ ಮಂತ್ರಿಯಂ ನಿಮ್ಮಭಿಪ್ರಾಯಮಾವುದೆಂದು ಕೇಳ್ವುದುಮಾತನಿಂತೆಂದಂ : ಆದೀಪಿ ಪೇಳ್ದಂತೆ ಕಾದುವುದೆ ಕಜ್ಜಮಪ್ಪೊಡೆ ನಮ್ಮ ಬಲದೊಳ್ ಸೇನಾನಾಯಕಾದಿ ವೀರಾಗ್ರಣಿಗಳೆಲ್ಲಂ ಗೂಗೆಗಳ ಕೈಯೊಳಕಾರಣಂ ಸತ್ತರ್; ಕೆಲರ್ ತುಳಿಲಸಂದರಳಿಯೆ ನೊಂದರ್ ವಿತರ್ಕಂ ಕ್ಷಮರಲ್ಲದೆ ನಿಂದರ್, ಇಂತು ನಮ್ಮ ಬಲಂ ಕೀಲ್ಗಳೆದ ಜಂತ್ರದಂತೆ ಕಳಕುಳಮಾಗಿರ್ದಪ್ಪುದು. ಅಂತುಮಲ್ಲದೆ ಮೌಳಿಭೃತ್ಯಸುಹೃತ್ಸೇನಾಟವಿಕಬಲಂ ನಮಗಿಲ್ಲ, ಇಂತಪ್ಪ ದುಸ್ತರಾವಸ್ಥೆಯೊಳ್ ಕಾದುವುದು ಕಜ್ಜಮಲ್ಲ, ಅದೆಂತೆನೆ,

ಶ್ಲೋ॥ ಪುಷ್ಪೈರಪಿ ನ ಯೋದ್ಧವ್ಯಂ ಕಿಂ ಪುನರ್ನಿಶಿತೈಶ್ಶರೈಃ
ಯುದ್ಧಮಕ್ಷಯದೋಷಾಢ್ಯಂ ಪ್ರಧಾನಪುರುಷಕ್ಷಯಂ ॥೧೪೫॥

ಟೀ॥ ಪುಷ್ಪಂಗಳಿಂದೊಳಗಾಗಿ ಕಾದಲಾಗದು. ತೀಕ್ಷ್ಣಮಪ್ಪ ಶರಂಗಳಿಂದೆಂತೂ ಕಾದಲಾಗದು. ಕಾಳೆಗಮೆಂಬುದು ಕಿಡದ ದೋಷಮನುಳ್ಳುದು. ಪ್ರಧಾನಪುರುಷರಂ ಕಿಡಿಸುವುದು ಎಂಬೀ ನೀತಿಯುಂಟು. ಅದಲ್ಲದೆಯುಂ ಪ್ರಯಾಣಶಕುನದೊಳ್ ಉಟಿಯನೊಂದಂ ಕಂಡಂತೆ ಕಳಿಯ ತಡೆಯದೆ ಗರ ಪೊಡೆದಂತೆ ಮೇಲ್ವಾಯ್ವೆವಪ್ಪೊಡೆ ತಮ್ಮ ಮೇಲೆ ತಾವೆ ಮರಂಗಡಿದರೆಂಬಂತಕ್ಕುಂ. ಎಂತುಂ ಪೂರ್ವೋಕ್ತಮಿಂತೆಂಬುದಲ್ತೆ :

ದೇವಸ್ತ್ರೀಯರು ಕೊಂಡುಹೋಗುವರು. ಕ್ಷಣಭಂಗುರವಾದ ಈ ದೇಹಕ್ಕೆ ಕಾಳಗವಾಗಲಿ, ಮರಣವಾಗಲಿ ಅದಕ್ಕಾಗಿ ಚಿಂತಿಸಬಾರದು. ವ॥ ಈ ನೀತಿಯನ್ನು ಹಿಡಿದು ಸಮಸ್ತವಾಯಸ ನಿಕಾಯವನ್ನು ಸೇರಿಸಿಕೊಂಡು ಹಗಲುಗುರುಡನಾದ ಅರಿಮರ್ದನನನ್ನು ನಮ್ಮ ತಂದೆಯಾದ ಸೂರ್ಯನ ಬಲದಿಂದ ಕಾದಾಡಿ ಕೊಂದೆವಾದರೆ ಸುಖದಿಂದ ಬಾಳುವೆವು. ಆತನ ಮಾತು ತನ್ನ ಮನಸ್ಸಿಗೆ ಒಪ್ಪಿ ಮೇಘವರ್ಣನು ಸಂದೀಪಿಯೆಂಬ ಮಂತ್ರಿಯನ್ನು ಕುರಿತು ನಿಮ್ಮ ಅಭಿಪ್ರಾಯವು ಯಾವುದೆಂದು ಕೇಳಲು ಆತನು ಹೀಗೆಂದನು: ಆದೀಪಿ ಹೇಳಿದಂತೆ ಕಾದಾಡುವುದೇ ಕಾರ್ಯವಾದರೆ ನಮ್ಮ ಸೈನ್ಯದಲ್ಲಿ ಸೇನಾನಾಯಕಾದಿ ವೀರಾಗ್ರಣಿಗಳೆಲ್ಲರೂ ಗೂಗೆಗಳಿಂದಾಗಿ ಅಕಾರಣವಾಗಿ ಸತ್ತುಹೋದರು, ಕೆಲವರು ಶೂರಭಟರು ಅಳಿಯಲು ನೊಂದರು ; ಎಲ್ಲವನ್ನೂ ಸಹಿಸಿಕೊಂಡು ನಿಂತರು. ಈ ರೀತಿಯಲ್ಲಿ ನಮ್ಮ ಸೈನ್ಯವು ಕೀಲುಗಳಚಿದ ಯಂತ್ರದಂತೆ ಕಳಕುಳವಾಗಿರುವುದು, ಅಲ್ಲದೆ ಮೌಳಿಭೃತ್ಯಸುಹೃತ್ಸೇನಾಟವಿಕ ಬಲವು ನಮಗಿಲ್ಲ, ಇಂತಹ ದುಸ್ತರಾವಸ್ಥೆಯಲ್ಲಿ ಕಾದುವುದು ಕಾರ್ಯವಲ್ಲ ಹೇಗೆಂದರೆ ಶ್ಲೋ॥ ಪುಷ್ಪಗಳಿಂದ ಕಾದಾಡಲಾಗದು. ತೀಕ್ಷ್ಣವಾದ ಶರಗಳಿಂದ ಹೇಗೂ ಕಾದಾಡಲಾಗದು. ಯುದ್ಧವೆಂಬುದು ನಾಶವಾಗದ ದೋಷಗಳಿಂದ ಕೂಡಿದುದು; ಅದು ಪ್ರಧಾನಪುರುಷರನ್ನು ಕೆಡಿಸುವುದು. ವ॥ ಅಲ್ಲದೆ ಪ್ರಯಾಣಶಕುನದಲ್ಲಿ ಶಕುನಪಕ್ಷಿಯೊಂದನ್ನು ಕಂಡಂತೆ ನಿವಾರಿಸಿ ತಡೆಯದೆ ಗರಹೊಡೆದಂತೆ ಆಕ್ರಮಣ ಮಾಡಿದೆವಾದರೆ ತಮ್ಮ ಮೇಲೆ ತಾವೇ ಮರ ಕಡಿದುಕೊಂಡರೆಂಬಂತೆ ಆಗುವುದು.

ಶ್ಲೋ॥ ಕಿಂ ನ ಹಂತಿ ಸುತಂ ಮಿತ್ರಂ ಬಂಧುಮರ್ಥಶ್ರೀಯಮಂ ಪತಿಂ
ಸೇವ್ಯಮಾನೋ ಹಿ ದಂಡೇನ ಸಂದಿಗ್ಧ ವಿಜಯೋ ಯುಧಿ ॥೧೪೬॥

ಟೀ॥ ಕಾಳೆಗದಲ್ಲಿ ಗೆಲ್ವೆಹೆನೆಂಬ ಸಂದೇಗಮುಳ್ಳನಂ ತನ್ನ ಪುತ್ರರ್ ಮಿತ್ರರ್ ಬಂಧುಗಳ್ ಧನಸಂಪತ್ತುಮೊಡೆಯನುಮಿಂತಿವರೆಲ್ಲರನು ಕಿಡಿಸುವಂ.

ನಯವಿದನಲ್ಲಂ ಶಕ್ತಿ-
ತ್ರಯರಹಿತಂ ವ್ಯಸನಿ ವಿಗ್ರಹಾಸಕ್ತನನಿ-
ಶ್ಚಯಬುದ್ಧಿವಿರಕ್ತಪ್ರಕೃ-
ತಿಯನಿಪ್ಪರಿನೃಪನೊಳಿಳಿವುದುಟಿವುದು ನಯಮಂ ೨೭೭

ಸಮಬಲನೊಳಧಿಕಬಲನೊಳ್
ಸಮರಕ್ರೀಡಾಕ್ರಿಯಾಸಮರ್ಥನೊಳಧಿಕೋ-
ದ್ಯಮನೊಳ್ ಮಾಟ್ಪುದು ಸಂಧಿಯ-
ನಮೋಘಮಾತ್ಮೀಯ ಬುದ್ಧಿಯಂ ಬಗೆವ ನೃಪಂ ೨೭೮

ಮತ್ತಂ ಎಂತುಂ ಸುಭಾಷಿತಮಿಂತೆಂಬುದಲ್ತೆ :

ಶ್ಲೋ॥ ಪ್ರವೃದ್ಧಚಕ್ರಿಣಾಕ್ರಾಂತೋ ರಾಜ್ಞಾ ಬಲವತಾ ಬಲಃ
ಸಂಧಿಮೇವ ಹಿ ಕುರ್ವೀತ ಕೋಶದಂಡಾತ್ಮಭೂತಯೇ ॥೧೪೭॥

ಟೀ॥ ಪೆರ್ಚಿದ ರಾಜ್ಯವನುಳ್ಳ ಸಮರ್ಥನಹ ಅರಸಿನೊಡನೆ ಬಲಹೀನನಾಗಿರ್ದ ಅರಸು ತನ್ನ ಸೇನೆ ಭಂಡಾರ ಜೀವರಕ್ಷೆಗೋಸುಗ ಸಂಧಿಯನೆ ಮಾಡಿಕೊಂಬುದು. ಅದಱಿಂ, ದೇವಾ! ನಾವಾವುದಾನೊಂದುಪಾಯದೊಳರಿಮರ್ದನನೊಳ್ ಸಂಧಾನಮಂ ಮಾಡಿ ನಿಂದು ಕಾಲಮುಮಂ ಕಜ್ಜಮುಮಂ ಬಗೆದು ಬಟಿಕ್ಕುಜ್ಜುಗಂಗೆಯ್ವಮೆನೆ ಮೇಘವರ್ಣಂ ಪ್ರದೀಪಿಯ ಮಾತುಗಳ್ಗೆ ಕೋಪಂ ಪ್ರದೀಪಮಾಗೆ ಮನದೊಳ್ ಮುನಿದು ಎಂತುಂ ನೀನಪ್ಪೊಡೆ ಮಹಾಮಾತ್ಯನಾಗಿರ್ದಜ್ಞನಂತೆ ಕಾದಿದೊಡೆ ಸಾವಾದಪುದೆಂದೆನಗೆ ಭಯಂದೋಱಿ ನುಡಿವುದು ನಯಮುಂ ನೀತಿಯುಮಲ್ಲದೆಂತೆನೆ :

ಹೇಗೂ ಪೂರ್ವೋಕ್ತ ಹೀಗೆನ್ನುವುದಲ್ಲವೇ ? ಶ್ಲೋ॥ ಯುದ್ಧದಲ್ಲಿ ಗೆಲುವೆನೆಂಬ ಸಂದೇಹವುಳ್ಳವನು ತನ್ನ ಪುತ್ರ ಮಿತ್ರ ಬಂಧು ಧನಸಂಪತ್ತು ಒಡೆಯರೆಂಬ ಭೇದವಿಲ್ಲದೆ ಇವರೆಲ್ಲರನ್ನೂ ನಾಶಪಡಿಸುವನು. ೨೭೭. ನೀತಿಯನ್ನರಿಯದ ಶಕ್ತಿತ್ರಯರಹಿತನಾದ ವ್ಯಸನಿಯಾದ ವಿಗ್ರಹಾಸಕ್ತನಾದ ಅನಿಶ್ಚಯಬುದ್ಧಿಯ ವಿರಕ್ತ ಪ್ರಕೃತಿಯೆನಿಸುವ ವೈರಿರಾಜನೊಡನೆ ಯುದ್ಧಮಾಡಬೇಕು. ೨೭೮. ಸಮಬಲನಲ್ಲೂ ಅಧಿಕಬಲನಲ್ಲೂ ಸಮರಕ್ರೀಡಾಕ್ರಿಯಾ ಸಮರ್ಥನಲ್ಲೂ ಅಧಿಕೋದ್ಯಮನಲ್ಲೂ ಸಂಧಿಯನ್ನು ಮಾಡಿಕೊಳ್ಳಬೇಕು. ಶ್ಲೋ॥ ಚಕ್ರವರ್ತಿಯಾದ ಸಮರ್ಥನಾದ ರಾಜನೊಡನೆ ಬಲಹೀನನಾಗಿರುವ ಅರಸು ತನ್ನ ಸೇನೆ ಭಂಡಾರ ಜೀವಗಳ ರಕ್ಷಣೆಗಾಗಿ ಸಂಧಿಯನ್ನೇ ಮಾಡಿಕೊಳ್ಳತಕ್ಕದ್ದು. ವ॥ ಆದರಿಂದ ದೇವಾ! ನಾವು ಯಾವುದಾದರೂ ಒಂದು ಉಪಾಯದಿಂದ ಅರಿಮರ್ದನನೊಡನೆ ಸಂಧಿಮಾಡಿಕೊಂಡು ಕಾಲವನ್ನೂ ಕಾರ್ಯವನ್ನೂ ಸಾಧಿಸಿ ಉದ್ಯೋಗಿಸೋಣ ಎನ್ನಲು ಮೇಘವರ್ಣನು ಪ್ರದೀಪಿಯ ಮಾತುಗಳಿಗೆ ಕೋಪಪ್ರದೀಪವಾಗಲು ಮನಸ್ಸಿನಲ್ಲಿ ಕನಲಿ ನೀನು ಮಹಾಮಾತ್ಯನಾಗಿದ್ದೂ ಅಜ್ಞನಂತೆ

ಶ್ಲೋ ॥ ಧರ್ಮಃ ಪ್ರಾಗೇವ ಚಿಂತ್ಯಸ್ಸಚಿವಮತಿಗತಿಃ ಭಾವನೀಯಾ ಸ್ವಬುದ್ಧ್ಯಾ
ಜ್ಞೇಯಾ ಲೋಕಸ್ಯ ವೃತ್ತಿರ್ವದಚರನಯನೈರ್ಮಂಡಲಂ ಪ್ರೇಕ್ಷಣೀಯಂ
ಪ್ರಚ್ಛಾದ್ಯೌರಾಗದೋಷೌ ಮೃದುಪರುಷಗುಣೌ ಕಾಲಯೋಗೇನಯೋಜ್ಯಾ
ವಾತ್ಮಾ ಸಂರಕ್ಷಣೀಯೋ ರಣಶಿರಸಿ ಪುನಸ್ಸೋಽಪಿ ನಾಪೇಕ್ಷಣೀಯಃ॥೧೫೮॥

ಟೀ॥ ಧರ್ಮವು ಮೊದಲಲ್ಲಿ ವಿಚಾರಿಸಲ್ವೇಡಿರ್ಪುದು ; ತನ್ನ ಬುದ್ಧಿಯಿಂ ಮಂತ್ರಿಗಳ ಬುದ್ಧಿಯ ಹವಣಱಿವುದು ; ರಾಗದೋಷಂಗಳಂ ಮುಸುಂಕುವುದು ; ಮೃದುಕಠಿಣಗುಣಂಗಳಂ ಕಾಲೋಚಿತಮಾಗಿ ನಿಯೋಗಿಸುವುದು ; ದೇಶಕಾಲಂಗಳನು ಲೇಸಾಗಿ ಅಱಿವುದು ; ಬುದ್ಧಿವಂತರಪ್ಪ ಚಾರರೆಂಬ ಕಣ್ಗಳಿಂ ಪರಮಂಡಲಂ ನೋಡಿಸುವುದು ; ಉೞಿದ ಎಲ್ಲಾ ದೆಸೆಗಳಿಂ ತನ್ನಂ ತಾನು ಕಾದುಕೊಂಬುದು ಎಂಬುದು ರಾಜನೀತಿಯುಂಟದಱಿಂ ಕ್ಷತ್ರಿಯಂ ಕದನಕ್ಕಳ್ಕಲಾಗದು; ಸಮರಾಂಗಣದೊಳಳ್ಕಿದೆವಪ್ಪೊಡೆ,

ಶ್ಲೋ ॥ ಪ್ರಾಣದ್ರವಿಣ ಲೋಭೇನ ಯಃ ಕರೋತಿ ಯಶೋವಧಂ
ಸ ಪಾಪಃ ಕೀಲಕಾರ್ಥೇನ ದಹನ್ನಿವ ಸುರಾಲಯಂ ॥೧೫೯॥

ಟೀ॥ ಆವನೊರ್ವಂ ಪ್ರಾಣವಸ್ತುವೆಂಬಿವಱ ಲೋಭದಿಂ ಕೀರ್ತಿಯಂ ಕಿಡಿಸಿಕೊಂಡಿಹನೋ ಆ ಪಾಪಿಷ್ಠಂ ಕೀಲಿಂಗೆ ದೇವಾಲಯಮಂ ಸುಡುವನೋಪಾದಿ ಎಂಬೀ ಶ್ಲೋಕಾರ್ಥದಿಂ ರಣಮರಣ ಭೀತಿಯಿಂದಪಖ್ಯಾತಿಯಪ್ಪೋಘಮಕ್ಕುಮೆಂದಿರ್ದಪುದು. ಅದಲ್ಲದೆಯುಂ ಎನ್ನ ಸಮಸ್ತಬಲಮುಂ ಸತ್ತು ಕೆಟ್ಟುವಿಂತಸ್ತವಾದ ಕಾರಣದಿಂದೆನಗೆ ತೇಜೋಹಾನಿಯುಂ ಮನೋಗ್ಲಾನಿಯು ಮಾಗಿರ್ಪುದದಱಿಂದಾ ಗೂಗೆಗಳನಿಂದೆ ಕೊಂದು ಕಾಗೆಗಳನವಱ ಬಸಿಱಿಂ ತೆಗೆಯದಂದೆನ್ನ ಮನದಱಲುಂ ಪೋಗದೆಂದು ಶೋಕರಸಮುಂ ಕ್ರೋಧರಸಮುಪ್ಪೊಡವಳೆಯೆ ನುಡಿದ ಬಲಿಭುಕ್ಪತಿಯಂ ವಾಯಸಬಲ ಸಂಜೀವಿಯಪ್ಪ ಚಿರಂಜೀವಿ ಮಾರ್ಕೊಂಡು ದೇವಾ! ನೀವಿಂತತ್ಯಾತುರದಿಂ ಕೋಪಾತುರರುಮಾಗಿ ನುಡಿವುದು ನೀತಿಯಲ್ಲವೆಂತೆನೆ :

ಕಾದಾಡಿದರೆ ಸಾವಾಗುವುದು ಎಂದು ನನ್ನಲ್ಲಿ ಭಯ ಹುಟ್ಟಿಸಿ ನುಡಿಯುವುದು ನೀತಿಯಲ್ಲ. ಅದು ಹೇಗೆಂದರೆ, ಶ್ಲೋ॥ ಧರ್ಮವನ್ನು ಮೊತ್ತಮೊದಲು ವಿಚಾರಿಸತಕ್ಕದ್ದು. ತನ್ನ ಬುದ್ಧಿಯಿಂದ ಮಂತ್ರಿಗಳ ಬುದ್ಧಿಯ ಪ್ರಮಾಣವನ್ನು ತಿಳಿಯಬೇಕು. ಮುಸುಕಿದ ರಾಗ ದೋಷಗಳನ್ನೂ ಮೃದುಕಠಿನಗುಣಗಳನ್ನೂ ನಿವಾರಿಸತಕ್ಕದ್ದು. ದೇಶಕಾಲಗಳನ್ನು ಚೆನ್ನಾಗಿ ತಿಳಿದು ಬುದ್ಧಿವಂತರಾದ ಚಾರರೆಂಬ ಕಣ್ಣುಗಳಿಂದ ಪರಮಂಡಲದ ಮೇಲೆ ಸದಾ ಕಣ್ಣಿಟ್ಟಿರಬೇಕು. ಉಳಿದ ಇತರ ಕಡೆಗಳಿಂದ ತನ್ನನ್ನು ರಕ್ಷಿಸಿಕೊಳ್ಳತಕ್ಕದ್ದು. ಕ್ಷತ್ರಿಯನು ಕದನಕ್ಕೆ ಅಳಕೂದದು. ಯುದ್ಧರಂಗದಲ್ಲಿ ಹೆದರಿದೆವಾದರೆ, ಶ್ಲೋ॥ ಯಾವನೇ ಆಗಲಿ, ಪ್ರಾಣ ಐಶ್ವರ್ಯಗಳ ಲೋಭದಿಂದ ಕೀರ್ತಿಯನ್ನು ಕೆಡಿಸಿಕೊಂಡಿರುವನೋ ಆ ಪಾಪಿಷ್ಠನು ಕೀಲಿಗಾಗಿ ದೇವಾಲಯವನ್ನು ಸುಡುವವನಂತೆ ಮೂರ್ಖನೆನಿಸುವನು. ವ॥ ರಣಮರಣಭೀತಿಯಿಂದ ಅಪಖ್ಯಾತಿ ಬರುವುದು. ಅಲ್ಲದೆ, ನನ್ನ ಸಮಸ್ತಬಲವೂ ಸತ್ತು, ಕೆಟ್ಟು ಅಸ್ತವ್ಯಸ್ತವಾದ ಕಾರಣದಿಂದ ನನಗೆ ತೇಜೋಹಾನಿಯೂ ಮನೋಗ್ಲಾನಿಯೂ ಆಗಿರುವುದು. ಅದರಿಂದ ಗೂಗೆಗಳನ್ನು ಇಂದೇ ಕೊಂದು ಕಾಗೆಗಳನ್ನು ಅವುಗಳ ಹೊಟ್ಟೆಯಿಂದ ತೆಗೆಯದಿದ್ದಲ್ಲಿ ನನ್ನ ಮನಸ್ಸಿನ ದುಃಖ ಹೋಗದು ಎಂದು ನುಡಿದ ಬಲಿಭುಕ್ಪತಿಯನ್ನು ವಾಯಸಬಲ ಸಂಜೀವಿಯಾದ ಚಿರಂಜೀವಿ ತಡೆದು, ದೇವಾ! ನೀವು

ಶ್ಲೋ ॥ ರಾಮಾತ್ತರಸ್ಸೂರತರೋಸ್ತಿ ಕಶ್ಚಿತ್ ಪರಾಭವಂ ಸ್ತ್ರೀಹರಣಾತ್ತತೋನ್ಯತ್
ತಥಾಪಿ ರಾಮೋ ನ ಶುಶೋಷ ವಾರ್ಧಿಂ ಬಬಂಧ ಸೇತುಂ ವಿಜಯೀ ಸಹಿಷ್ಣುಃ ॥೧೫೦॥

ಟೀ॥ ರಾಮನಿಂ ಧೀರರುಮಾರುಮಿಲ್ಲ; ಸ್ತ್ರೀಹರಣದಿಂ ಪರಾಭವಮಾವುದುಮಿಲ್ಲ ಅಹಂಗಾದೊಡಂ ಶ್ರೀರಾಮಂ ಸಮುದ್ರಮಂ ಶೋಷಿಸಿದನಿಲ್ಲ, ಸೈರಣೆಯಂ ಮಾಡಿ ಸೇತುವಂ ಕಟ್ಟಿ ಲಂಕೆಯಂ ಕೊಂಡನಲ್ಲವೆ ತ್ವರಿತವ ಮಾಡಿದುದಿಲ್ಲ, ಎಂಬ ನೀತಿವಾಕ್ಯಮುಂಟು ಅದಱಿಂ, ನಿಮ್ಮಡಿ, ನೀವು ಸಹಿಷ್ಣುವಾಗಿ ಪಗೆಯಂ ಬಗೆಯೊಳೆ ಕಾದಿ ಕೊಲ್ವುದೆಂದು ಬಿನ್ನಪಂಗೆಯ್ವುದುಂ ಮೇಘವರ್ಣನಿಂತೆಂದಂ :

ಶ್ಲೋ ॥ ಅನ್ಯಥಾ ಭೂಷಣಂ ಪುಂಸಾಂ ಕ್ಷಮಾ ಲಜ್ಜೇವ ಯೋಷಿತಾಂ
ಪರಾಕ್ರಮಃ ಪರಿಭವೇ ವೈಯಾತ್ಯಂ ಸುರತೇಷ್ವಿವ ॥೧೫೧॥

ಟೀ॥ ಪುರುಷರ್ಗೆ ಉೞಿದ ವೇಳೆಯಲ್ಲಿ ಕ್ಷಮೆಯೇ ಭೂಷಣಂ ; ಪರಿಭವವಾದಲ್ಲಿ ಪರಾಕ್ರಮವಿರಬೇಕು. ಸ್ತ್ರೀಯರ್ಗೆ ಉೞಿದ ವೇಳೆಯಲ್ಲಿ ಲಜ್ಜೆಯೇ ಭೂಷಣಂ. ಸುರತದಲ್ಲಿ ದಿಟ್ಟತನವಿರಬೇಕು.

ಶ್ಲೋ॥ ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಂ
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥೧೫೨॥

ಟೀ॥ ನೀತಿಯಂ ಬಲ್ಲವರ್ ತಮ್ಮನಾದಾನುಂ ನಿಂದಿಸಲಿ ಮೇಣ್ ಸ್ತುತಿಸಲಿ ಐಶ್ವರ್ಯವುಂಟಾಗಲಿ ಮೇಣ್ ದರಿದ್ರನಾಗಲಿ ಆ ಕ್ಷಣದಲ್ಲಿ ಮರಣವಾಗಲಿ ಮೇಣ್ ಯುಗಪರ್ಯಂತಂ ಬದುಕಲಿ ವಿಚಕ್ಷಣರ್ ನ್ಯಾಯಮಂ ತಪ್ಪಿ ನಡೆಯರ್ ಎಂಬ ನೀತಿಗಳೊಳವಾದೊಡೇಂ ನೀಮಪ್ಪೊಡೆ ಶುಕ್ರ ಶಕ್ರಗುರು ಪರಾಶರ ಬಾಹುದಂತಿ ನಂದ ಕೌಣಪ ದಂತ ವಿಶಾಲಾಕ್ಷ ಕುಬೇರಾಭೀರ ಚಾಣಕ್ಯಾದಿ

ಹೀಗೆ ಅತ್ಯಾತುರರೂ ಕೋಪಾತುರರೂ ಆಗಿ ನುಡಿಯುವುದು ನೀತಿಯಲ್ಲ. ಶ್ಲೋ॥ ರಾಮನಿಗಿಂತ ಧೀರರು ಯಾರೂ ಇಲ್ಲ. ಸ್ತ್ರೀ ಅಪಹರಣಕ್ಕಿಂತ ಪರಾಭವ ಯಾವುದೂ ಇಲ್ಲ, ಹಾಗಾದರೂ ಶ್ರೀರಾಮ ಸಮುದ್ರವನ್ನು ಶೋಷಿಸಲಿಲ್ಲ ; ತಾಳ್ಮೆಯಿಂದ ಸೇತುವನ್ನು ಕಟ್ಟಿ ಲಂಕೆಯನ್ನು ಜಯಿಸಿದನಲ್ಲದೆ ತ್ವರಿತಗೊಳ್ಳಲಿಲ್ಲ ಎಂಬ ನೀತಿವಾಕ್ಯವುಂಟು. ಅದರಿಂದ, ನೀವೂ ತಾಳ್ಮೆಯಿಂದ ಹಗೆಯನ್ನು ಮನಸ್ಸಿನಲ್ಲೇ ಕಾದಾಡಿ ಗೆಲ್ಲತಕ್ಕದ್ದು ಎಂದು ಬಿನ್ನವಿಸಿದನು. ಅದಕ್ಕೆ ಮೇಘವರ್ಣನು ಹೀಗೆಂದನು : ಶ್ಲೋ॥ ಪುರುಷರಿಗೆ ಉಳಿದ ವೇಳೆಯಲ್ಲಿ ಕ್ಷಮೆಯೇ ಭೂಷಣ. ಪರಿಭವವಾದಲ್ಲಿ ಪರಾಕ್ರಮವೇ ಬೇಕು. ಸ್ತ್ರೀಯರಿಗೆ ಉಳಿದ ವೇಳೆಯಲ್ಲಿ ಲಜ್ಜೆಯೇ ಭೂಷಣ ; ಸುರತದಲ್ಲಿ ದಿಟ್ಟತನವಿರಬೇಕು. ಶ್ಲೋ॥ ನೀತಿಯನ್ನು ಬಲ್ಲವರು ತಮ್ಮನ್ನು ಯಾರಾದರೂ ನಿಂದಿಸಲಿ ಯಾ ಸ್ತುತಿಸಲಿ, ಐಶ್ವರ್ಯವುಂಟಾಗಲಿ ಯಾ ದರಿದ್ರನಾಗಲಿ, ಆ ಕ್ಷಣದಲ್ಲಿ ಮರಣವಾಗಲಿ ಯಾ ಯುಗಪರ್ಯಂತವಾಗಿ ಬದುಕಲಿ ಧೀರರಾದವರು ನ್ಯಾಯವನ್ನು ತಪ್ಪಿ ನಡೆಯರು. ಈ ಮೊದಲಾದ ನೀತಿಗಳಿರುವುವು ಆದರೇನು ? ನೀವಾದರೋ ಶುಕ್ರ ಶಕ್ರಗುರು ಪರಾಶರ ಬಾಹುದಂತಿ ನಂದ ಕೌಣಪ ದಂತ ವಿಶಾಲಾಕ್ಷ ಕುಬೇರ ಅಭೀರ ಚಾಣಕ್ಯ ಮೊದಲಾದ

ಪುರಾಣಾಚಾರ್ಯಕೃತ ನಯಶಾಸ್ತ್ರ ಪ್ರಯೋಗಪ್ರವೀಣರುಂ ಅಂತುಮಲ್ಲದೆ ದುಷ್ಟಪರಂಪರೆಯಿನಿಂತಪ್ಪ ವಿಷಮತರಮುಮತಿಸಂಕಟಮುಮಪ್ಪವಸರಕ್ಕೆ ಕರ್ತವ್ಯಮಾವುದೆನೆ ಮಂತ್ರಿಚೂಡಾಮಣಿ ಚಿರಂಜೀವಿಯಿಂತೆಂದಂ :

ನಯವಿದರಪ್ಪೀ ನಾಲ್ವರ
ನಯಮನಯಂ ದೇವ ನಿಮ್ಮ ಪೇಳ್ದುದೆ ಮಂತ್ರಂ
ನಿಯತಂ ತ್ವದೀಯಮಂತ್ರಂ
ನಯನಜ್ಞರನುಮತದಿನದುವೆ ದಲ್ ಪಂಚಾಂಗಂ ೨೭೯

ಅದೆಂತೆಂದೊಡೆ,

ವಾಕ್ಯಂ ॥ ಸೋಮದೇವ ನೀತಿ-ಕಾರ್ಯೋದ್ಯೋಗೋಪಾಯ, ಪುರುಷದ್ರವ್ಯಸಂಪತ್ತಿ, ದೇಶಕಾಲ ಪರಿಜ್ಞಾನ, ವಿಘ್ನಪ್ರತೀಕಾರ, ಕಾರ್ಯಸಿದ್ಧಿಯೆಂದಿಂತು ಮಂತ್ರಮೈದುಪ್ರಕಾರಮಾಗಿಹುದು ಎಂಬ ನೀತಿವಾಕ್ಯಮುಂಟಪ್ಪುದಱಿಂ ರಾಜ್ಯಂಗೆಯ್ವಾತಂಗೆ ಮಂತ್ರಮೆ ಮುಖ್ಯಮದೆಂತೆನೆ :

ಸಮದಾರಿರಾಜ ವಿಜಯೋ
ದ್ಯಮಕ್ಕೆ ಚತುರಂಗಬಲಮದೇವುದೋ ಸನ್ಮಂ
ತ್ರಮೆ ಸಾಲ್ಗುಂ ಪುಸಿಗುಮೆ ದೇ
ವ 'ಮಂತ್ರಮೂಲೋ ಹಿ ವಿಜಯ' ಎಂಬೀ ವಾಕ್ಯಂ ೨೮೦

ಅದಱಿಂ ಸಮಸ್ತ ವಸುಧಾ
ಸುದತೀಶಂ ಮಂತ್ರಮುಖ್ಯನಾದಂದುದ್ಧ
ನ್ಮದವದರಿರಾಜ ಮಧುಕರ
ಕದಂಬಮಂ ನಿಜಪದಾಂಬುಜಕ್ಕೆಱಗಿಸುವಂ ೨೮೧

ಅಂತುಮಲ್ಲದೆ ಸಮಸ್ತ ವಸುಧಾವಳಯಮೆಲ್ಲಮಂ ಬಾಯ್ಕೇಳಿಸುವ ಬಲ್ಲಾಳ್ತನದೊಳಂ ವಿಜಿಗೀಷುವೃತ್ತಿಯನೆತ್ತಿಕೊಳ್ಳನೆಂಬರಸಂ ಪ್ರಭುಮಂತ್ರೋತ್ಸಾಹಶಕ್ತಿತ್ರಯಸಂಪನ್ನನಪ್ಪುದದೆಂತೆನೆ :

ಪುರಾಣಾಚಾರ್ಯಕೃತ ನೀತಿಶಾಸ್ತ್ರ ಪ್ರಯೋಗ ಪ್ರವೀಣರೂ ಅಲ್ಲದೆ ದುಷ್ಟಪರಂಪರೆಯಿಂದ ಇಂತಹ ವಿಷಮತರವೂ ಅತಿಸಂಕಟಕರವೂ ಆದ ಸಂದರ್ಭದಲ್ಲಿ ಕರ್ತವ್ಯ ಯಾವುದು ಎನ್ನಲು ಮಂತ್ರಿಚೂಡಾಮಣಿ ಯಾದ ಚಿರಂಜೀವಿ ಹೀಗೆಂದನು : ೨೭೯. ನೀತಿಜ್ಞರಾಗಿರುವ ಈ ನಾಲ್ಕು ಜನ ಮಂತ್ರಿಗಳು ಹೇಳಿದ ನೀತಿಯು ನೀತಿಯಲ್ಲ. ದೇವಾ! ನೀವು ಹೇಳಿದುದೇ ನೀತಿ. ಅದೇ ನೀತಿಶಾಸ್ತ್ರದ ಪಂಚಾಂಗ. ಸೋಮದೇವ ನೀತಿಯ ಪ್ರಕಾರ ಕಾರ್ಯೋದ್ಯೋಗೋಪಾಯ, ಪುರುಷದ್ರವ್ಯ ಸಂಪತ್ತಿ, ದೇಶಕಾಲಪರಿಜ್ಞಾನ, ವಿಘ್ನಪ್ರತಿಕಾರ, ಕಾರ್ಯಸಿದ್ಧಿಯೆಂಬ ಮಂತ್ರಾಲೋಚನೆ ಎಂದ ಐದು ರೀತಿಯಾಗಿರುವುವು. ೨೮೦. ರಾಜ್ಯಭಾರ ಮಾಡುವವನಿಗೆ ಮಂತ್ರಾಲೋಚನೆಯೇ ಮುಖ್ಯವಾದುದು. ದರ್ಪಿಷ್ಠನಾದ ವೈರಿರಾಜನನ್ನು ಗೆಲ್ಲುವುದಕ್ಕೆ ಚತುರಂಗಬಲವೇನು ಮಾಡುವುದು. ಒಳ್ಳೆಯ ಮಂತ್ರಾಲೋಚನೆಯೇ ಸಾಕು. 'ಮಂತ್ರಮೂಲೋ ಹಿ ವಿಜಯ' ಎಂಬ ವಾಕ್ಯ ಸುಳ್ಳಾಗುವುದೇ ! ೨೮೧. ಆದರಿಂದ ರಾಜನಾದವನು ಮಂತ್ರಮುಖ್ಯನಾದಂದು ಅರಿರಾಜ ಮಧುಕರಸಮೂಹವನ್ನು ತನ್ನ ಪದಕಮಲಕ್ಕೆ ಎರಗಿಸುವನು. ವ॥ ಅಲ್ಲದೆ, ಸಮಸ್ತ ಪ್ರಪಂಚವನ್ನು ಆಜ್ಞಾವಶವರ್ತಿಯಾಗಿ ಮಾಡುವ ಪರಾಕ್ರಮಿಯೂ ಸರ್ವವಿಜಯನಾಗ

ಹರಿನೀಲವಜ್ರ ಮೌಕ್ತಿಕ
ಮರಕತ ಮಾಣಿಕ್ಯ ಕಾಂಚನಾಂಚಿತ ವಸ್ತೂ
ತ್ಕರಮುಂ ವರಕರಿಹರಿಭಟ
ಭರಮುಂ ಪ್ರಭುಶಕ್ತಿ ಭೂತಲೇಶಂಗೆಂದುಂ ೨೮೨

ಹಿತರರ್ಥಶಾಸ್ತ್ರಕುಶಲರ್
ಚತುರುಪಧಾಶುದ್ಧರೆನಿಪ ವರಸಚಿವರೊಳ
ನ್ವಿತಮಾಗೆ ಮಾಳ್ಪ ಕಾರ್ಯಂ
ಪತಿಗೆಂದುಂ ಮಂತ್ರಶಕ್ತಿ ಮನುಮುನಿಮತದಿಂ ೨೮೩

ಅಗಣಿತದೋರ್ಬಲದಿಂ ಸಂ
ಯುಗದೊಳ್ ಮಾಱಾಂತ ವೈರಿರಾಜನನೇನುಂ
ಬಗೆಯದುಱದಿಱಿವ ವಿಕ್ರಾಂ
ತಗುಣಮನುತ್ಸಾಹಶಕ್ತಿಯೆಂಬರ್ ವಿಬುಧರ್ ೨೮೪

ಎಸೆವೀ ಶಕ್ತಿತ್ರಯದೊಳ-
ಮಸದೃಶಬಲಮಂತ್ರಶಕ್ತಿ ಮಿಗಿಲೆಂದು ಮಂ
ತ್ರಸಹಾಯನಪ್ಪ ಭೂಪತಿ
ಗೆ ಸುಸಾಧ್ಯಂ ಬಗೆದ ಕಾರ್ಯಮೆನಿತೊಳವನಿತುಂ ೨೮೫

ಅದೆಂತೆನೆ : ಅಭಿಭವಿಸಿದನುತ್ಸಾಹ
ಪ್ರಭುಶಕ್ತಿಸಮೇತನೆನಿಪ ಶಕ್ರನನಮರ
ಪ್ರಭುಮಂತ್ರಿ ಮಂತ್ರಶಕ್ತಿ
ಪ್ರಭಾವದಿಂದದಱಿನಗ್ಗಳಂ ಮಂತ್ರಬಳಂ ೨೮೬

ನಿಯತಂ ಸಮ್ಯಙ್ಮಂತ್ರ
ಪ್ರಯೋಗಪಟುವೆನಿಪ ಭೂತಳಾಧೀಶ್ವರನ
ಪ್ರಿಯರಂ ಮರ್ದಿಸಿ ಧರೆಯಂ
ಜಯಲಕ್ಷ್ಮೀಧಾಮನಾಗಿ ಪರಿರಕ್ಷಿಸುಗುಂ ೨೮೭

ಬೇಕೆಂಬವನೂ ಪ್ರಭುಮಂತ್ರೋತ್ಸಾಹಶಕ್ತಿತ್ರಯಸಂಪನ್ನನಾಗಿರಬೇಕು. ಅವು ಯಾವುವೆಂದರೆ ೨೮೨. ಇಂದ್ರನೀಲ, ವಜ್ರ, ಮೌಕ್ತಿಕ, ಮರಕತ, ಮಾಣಿಕ್ಯ, ಕಾಂಚನಗಳೂ ಹಸ್ತಿ, ಅಶ್ವ, ಪದಾತಿಗಳೂ ರಾಜನಾದವನಿಗೆ ಪ್ರಭುಶಕ್ತಿಯೆನಿಸಿಕೊಳ್ಳುವುವು. ೨೮೩. ಹಿತರೂ ಅರ್ಥಶಾಸ್ತ್ರಕುಶಲರೂ ಚತುರುಪಧಾವಿರುದ್ಧರೆನಿಸಿದ ಶ್ರೇಷ್ಠ ಮಂತ್ರಿಗಳು ಮಾಡುವ ಕೆಲಸವು ರಾಜನಾದವನಿಗೆ ಮಂತ್ರಶಕ್ತಿಯೆನಿಸಿಕೊಳ್ಳುವುದು. ೨೮೪. ಅಗಣಿತವಾದ ಭುಜಬಲದಿಂದ ಎದುರಿಸಿದ ವೈರಿರಾಜನನ್ನು ಲಕ್ಷಿಸದೆ ಕೊಲ್ಲುವ ಪರಾಕ್ರಮವು ರಾಜನ ಉತ್ಸಾಹಶಕ್ತಿಯೆನಿಸಿಕೊಳ್ಳುವುದು. ೨೮೫. ಹೀಗೆ ಪ್ರಸಿದ್ಧವಾದ ಈ ಶಕ್ತಿತ್ರಯಗಳಲ್ಲಿ ಮಂತ್ರಶಕ್ತಿಯೇ ಅಸಾಧಾರಣವಾದುದು. ಮಂತ್ರಸಹಾಯವಿರುವ ರಾಜನಿಗೆ ಎಷ್ಟೇ ಅಶಕ್ಯವಾದ ಕಾರ್ಯಗಳಿದ್ದರೂ ಸಾಧ್ಯವಾಗುವುವು. ೨೮೬. ಉತ್ಸಾಹ ಪ್ರಭುಶಕ್ತಿಗಳಿಂದ ಕೂಡಿದ ದೇವೇಂದ್ರನಿಗಿಂತ ಮಂತ್ರಶಕ್ತಿ ಪ್ರಭಾವ ಸಿದ್ಧಿಸಿರುವ ಅವನ ಮಂತ್ರಿ ಅಗ್ಗಳನು. ಆದ್ದರಿಂದ ಮಂತ್ರಬಲವೇ ಬಲ. ೨೮೭. ಮಂತ್ರಪ್ರಯೋಗಪಟುವಾದ ಅರಸನು

ಅಮರಾಹಿತರಿಂ ದುರ್ಮಂ
ತ್ರಮರಕ್ಷಣಮೆನಿಪಯಜ್ಞಮುಳಿವಂತಟಿಗುಂ
ಸಮುದಾಹಿತರಿಂ ದುರ್ಮಂ
ತ್ರಮರಕ್ಷಣಮೆನಿಪ ನೃಪಬಳಂ ನಿರ್ವ್ಯಾಜಂ ೨೮೮

ಅದಱಿಂದರಸುಗೆಯ್ವಾತಂ ಮಂತ್ರಮಂ ಮಾಳಾಮಂತ್ರಮಾಗದಂತು ನೆಗಱಲೆವೇಳ್ಕುಮದೆಂತೆನೆ: ಮಂತ್ರಿಮಂಡಲದಾಪ್ತವ್ರಜದ ಧೂರ್ತವರ್ಗದ ಮದಪ್ರಲಾಪಸುಪ್ತಪ್ರಲಾಪಿತಂಗಳಿಂದಂ ಶುಕಶಾರಿಕಾದಿ ತಿರ್ಯಗ್ಯೋನಿಗಳಿಂದಂ ಮಂತ್ರ ಭೇದಕ್ಕೆ ಸಲ್ಗುಮಂತಾಗಲೀಯದೆ ಮಂತ್ರಮಂ ರಕ್ಷಿಸಲ್ವೇಳ್ಕುಮದೆಂತೆನೆ:

ವಿಪುಳಾರ್ಥ ಮಂತ್ರಮುಂ ಯಾ
ನಪಾತ್ರಮುಂ ಭಿನ್ನಮಾದೊಡಟೆವರ್ ವಸುಧಾ
ಧಿಪಕರ್ಣಧಾರರಿರ್ವರು
ಮಪರಿಮಿತಾತ್ಮೀಯಬಲಸಮೇತಂ ಕ್ಷಣದಿಂ ೨೮೯

ಎನೆ ಮೇಘವರ್ಣನಿಂತೆಂದಂ : ಅಂತಪ್ಪೊಡೆ ನೀಂ ಪೇಳ್ದಂದದೊಳರಸಂ ತಾನೆ ಮಂತ್ರಿಯಾಗಿ ಚಿಂತಿಸಿ ಮಱುಗಲ್ವೇಡಿತ್ತೆನೆ ಮತ್ತಂ ಚಿರಂಜೀವಿಯಿಂತೆಂದಂ : ನಾಂ ಮಂತ್ರಮನೆ ರಕ್ಷಿಪ್ಪುದೆಂದೆನಲ್ಲದೆ ಮಂತ್ರಿಗಳಾಗವೇಟ್ಕುಂದೆನಲ್ಲೆಂ. ನಿಮ್ಮಡಿ, ನೀವಿಂತು ವಿಪರೀತಗ್ರಹಣಂಗೆಯ್ದು ಶೂನ್ಯವಾದಿಗಳಾಗಿರ ಲಾರದು. ಆದೊಡಮೇನರಸುಗೆಯ್ವರುಂ ಕಾಮ ಕ್ರೋಧ ಲೋಭ ಮಾನ ಮದ ಹರ್ಷ ಪ್ರಮೋದಾಲಸ್ಯವಶದಿಂದೆಂತಪ್ಪ ಬುದ್ಧಿವಂತರುಂ ತಮ್ಮಂ ತಾವಱಿಯರ್. ಅದಱಿಂದೆನಿತು ಸಮರ್ಥನಾದೊಡಂ ಆಪ್ತರಪ್ಪ ಬುದ್ಧಿವಂತರೊಳಂ ಮಂತ್ರಿಗಳೊಳಮಾಲೋಚಿಸಿ ನೆಗಳಲೆವೇಳ್ಕುಮದೆಂತೆನೆ:

ವೈರಿಗಳನ್ನು ಮರ್ದಿಸುವನು. ೨೮೮. ದುರ್ಮಂತ್ರದಿಂದ ಕೂಡಿ ಅರಕ್ಷಕವಾಗಿರುವ ಯಜ್ಞವು ರಾಕ್ಷಸರಿಂದ ನಾಶವಾಗುವಂತೆ ದುರ್ಮಂತ್ರವುಳ್ಳ ಅರಕ್ಷಕವಾದ ನೃಪಬಲವು ವೈರಿಗಳಿಂದ ನಾಶವಾಗುವುದು. ವ|| ಅದರಿಂದ ರಾಜನು ಮಂತ್ರವನ್ನು ಮಾಲಾಮಂತ್ರವಾಗದಂತೆ ಆಚರಿಸಬೇಕು. ಮಂತ್ರಿಮಂಡಲದ ಆಪ್ತರಲ್ಲಿರುವ ದೂರ್ತವರ್ಗದಿಂದಲೂ ಮದಪ್ರಲಾಪ ಸುಪ್ತಪ್ರಲಾಪಿತಗಳಿಂದಲೂ ಶುಕಶಾರಿಕಾದಿ ತಿರ್ಯಗ್ಯೋನಿಗಳಿಂದಲೂ ಮಂತ್ರಾಲೋಚನೆಯು ಬಹಿರಂಗಗೊಳ್ಳುವುದು. ಹಾಗಾಗದಂತೆ ಮಂತ್ರವನ್ನು ರಕ್ಷಿಸಿಕೊಳ್ಳಬೇಕು. ೨೮೯. ವಿಪುಲವಾದ ಅರ್ಥದಿಂದ ಕೂಡಿದ ಮಂತ್ರವೂ ನೌಕೆಯೂ ಭಿನ್ನವಾದಂದು ವಸುಧಾಧಿಪನೂ ಕರ್ಣಧಾರನೂ ತಮ್ಮ ಅಪರಿಮಿತ ಆತ್ಮೀಯರ ಸಮೇತ ನಾಶಹೊಂದುವರು. ವ|| ಆಗ ಮೇಘವರ್ಣನು ಹೀಗೆಂದನು : ಹಾಗಾದರೆ ನೀನು ಹೇಳಿದಂತೆ ಅರಸನು ತಾನೇ ಮಂತ್ರಿಯಾಗಿ ಚಿಂತಿಸಿ ಮರುಗಬೇಕಾಗಿಲ್ಲವೇ ? ಅದಕ್ಕೆ ಚಿರಂಜೀವಿ ಹೀಗೆಂದನು : ನಾನು ಮಂತ್ರವನ್ನು ರಕ್ಷಿಸಬೇಕು ಎಂದೆನಲ್ಲದೆ ಮಂತ್ರಿಗಳಾಗಬೇಕು ಎನ್ನಲಿಲ್ಲ, ದೇವಾ ! ನೀವು ಹೀಗೆ ವಿಪರೀತಗ್ರಹಣ ಮಾಡಿ ಶೂನ್ಯವಾದಿಗಳಾಗಬಾರದು. ಆದರೇನು, ಅರಸರಾದವರು ಕಾಮ ಕ್ರೋಧ ಲೋಭ ಮಾನ ಮದ ಹರ್ಷ ಪ್ರಮೋದಾಲಸ್ಯವಶದಿಂದ ಎಂತಹ ಬುದ್ಧಿವಂತರೂ ತಮ್ಮನ್ನು ತಾವು ಅರಿತುಕೊಳ್ಳಲಾರರು. ಅದರಿಂದ ಎಂಥ ಸಮರ್ಥನಾದರೂ ಆಪ್ತರಾದ ಬುದ್ಧಿವಂತ

ಶ್ಲೋ ॥ ಅಸಹಾಯಸ್ಸಮರ್ಥೋಽಪಿ ತೇಜಸ್ವೀ ಕಿಂ ಕರಿಷ್ಯತಿ
ನಿವಾತ ಪತಿತೋ ವಹ್ನಿಸ್ಸ್ವಯಮೇವ ಪ್ರಶಾಮ್ಯತಿ ॥೧೫೩॥

ಟೀ॥ ತೇಜಸ್ಸುಳ್ಳ ಸಮರ್ಥನಾದೊಡಂ ಸಹಾಯವಿಲ್ಲದವನೇತರ್ಕುಂ ಪ್ರಯೋಜನಮಿಲ್ಲ, ಅದು ಹೇಗೆಂದೊಡೆ ಗಾಳಿಯಿಲ್ಲದಿಕ್ಕಿದ ಕಿಚ್ಚಿನಹಗೆ.

ಅಪಗತಸಹಾಯನೆನಿಸಿದ
ನೃಪನೆನಿತು ಸಮರ್ಥನಾದೊಡಂ ನಿಜತೇಜೋ-
ವಿಪುಳಜ್ವಳನಶಿಖಾವಳಿ-
ಗೆ ಪಡೆಯಲಾಱಂ ಸುವೃದ್ಧಿಯಂ ಭೂತಳದೊಳ್ ೨೯೦

ಅದಱೆಂದರಸುಗೆಯ್ವಾತಂ ಸಹಾಯಸಂಪನ್ನನುಂ ಪ್ರಭುಮಂತ್ರೋತ್ಸಾಹ ಶಕ್ತಿಯುಕ್ತನುಮಾಗಿ ನೆಗಱಲೆವೇೞ್ಕುಂ ಎಂತುಂ ವಿಜಿಗೀಷುವೃತ್ತಿಯನೆತ್ತಿಕೊಂಡು ನೆಗೞ್ವಂದು ಶತ್ರುಗಳ ಸಮಾವಸ್ಥೆ, ಯೋಗಕ್ಷೇಮಮುಮಂ ವಿಚಾರಿಸುವುದದೆಂತೆನೆ :

ಉದ್ಯೋಗಹೀನನಾಗಲು-
ಮುದ್ಯನ್ಮಿತ್ರಾರ್ತದುರ್ಗಬಲರಹಿತನಸ-
ದ್ವಿದ್ಯಾಪ್ರಿಯನೆನಿಪವನು-
ದ್ಭೇದ್ಯಂ ಶತ್ರುಗೆ ನಿರಂತರಂ ಭೂತಲದೊಳ್ ೨೯೧

ಅನುಪಮದುರ್ಗಬಲೋಪೇ-
ತನಾಗಿಯುಂ ವಿಪುಳಮಂತ್ರವಿಕ್ರಮ ಸಂಯು-
ಕ್ತನುಮಲ್ಲದಿರ್ಪವಂ ಪೀ-
ಡನೀಯನೀಡಿತ ನಯಾಗಮಜ್ಞರ ಮತದಿಂ ೨೯೨

ದುರ್ಗಗುಣಾನ್ವಿತಮೆನಿಸಿದ
ದುರ್ಗದ ಬಲಮುಳ್ಳೊಡಂ ಬಲೋಪೇತ ಸುಹೃ-
ದ್ವರ್ಗಬಲಾನ್ವಿತನಪನಯ-
ಮಾರ್ಗನೆನಿಪ್ಪವನೆ ಕರ್ಷಣೀಯನಮೋಘಂ ೨೯೩

ರಲ್ಲಿಯೂ ಮಂತ್ರಿಗಳಲ್ಲಿಯೂ ಸಮಾಲೋಚಿಸಿ ಕಾರ್ಯೋನ್ಮುಖರಾಗಬೇಕು. ಶ್ಲೋ॥ ತೇಜೋವಂತನಾಗಿದ್ದು ಸಮರ್ಥನಾದರೂ ಸಹಾಯವಿಲ್ಲದವನು ಗಾಳಿಯಿಲ್ಲದ ಕಿಚ್ಚಿನಂತೆ ಯಾವುದಕ್ಕೂ ಪ್ರಯೋಜನವಾಗಲಾರನು. ೨೯೦. ಅಸಹಾಯನಾದ ನೃಪನು ಎಷ್ಟೇ ಸಮರ್ಥನಾದರೂ ತನ್ನ ತೇಜೋಜ್ವಾಲೆಯ ಶಿಖಾವಳಿಗೆ ಅಭಿವೃದ್ಧಿಯನ್ನು ಪಡೆಯಲಾರನು. ವ॥ ಅದರಿಂದ ಅರಸನಾದವನು ಸಹಾಯಸಂಪನ್ನನೂ ಪ್ರಭುಮಂತ್ರೋತ್ಸಾಹ ಶಕ್ತಿಯುಕ್ತನೂ ಆಗಿರಬೇಕು. ಹೇಗಾದರೂ ಜಯಶಾಲಿಯಾಗಬೇಕೆಂಬ ಅಪೇಕ್ಷೆಯಿದ್ದಲ್ಲಿ ಶತ್ರುಗಳ ಸಮಾವಸ್ಥೆ, ಯೋಗಕ್ಷೇಮಗಳನ್ನೂ ವಿಚಾರಿಸಿಕೊಂಡಿರಬೇಕು. ಅದು ಹೇಗೆಂದರೆ, ೨೯೧. ಉದ್ಯೋಗಹೀನನಾದವನೂ, ಮಿತ್ರನಿಲ್ಲದವನೂ, ದುರ್ಗಬಲರಹಿತನೂ ಕೆಟ್ಟ ವಿದ್ಯೆಗಳಲ್ಲಿ ಮಗ್ನನಾದವನೂ ಶತ್ರುವಿಗೆ ನಿರಂತರವೂ ಭೇದ್ಯನಾಗುವನು. ೨೯೨. ಅಸಾಧಾರಣವಾದ ದುರ್ಗಬಲವುಳ್ಳವನಾದರೂ ವಿಪುಳಮಂತ್ರವಿಕ್ರಮಸಂಯುಕ್ತನಲ್ಲದವನು ಶ್ರೇಷ್ಠ ನೀತಿ ಶಾಸ್ತ್ರಜ್ಞರ ಪ್ರಕಾರ ಪೀಡನೀಯನೆನ್ನಿಸುವನು. ೨೯೩. ದುರ್ಗಗುಣಾನ್ವಿತವಾದ ದುರ್ಗಬಲವಿದ್ದರೂ ಬಲಶಾಲಿಗಳಾದ ಸುಹೃದ್ವರ್ಗಗಳಿಂದ ಕೂಡಿದ್ದರೂ ಕುನೀತಿಯಲ್ಲಿ

ಇಂತಪ್ಪ ಪಗೆಪರಂ ನಿರ್ಮೂಲಿಸುವುದು ಭೇದನಮೆಂಬುದಕ್ಕುಂ; ಹಸ್ತ್ಯಶ್ವರಥಪದಾತಿ ಬಲಕ್ಷಯಮಂ ಮಾಳ್ಪುದು ಪೀಡನಮೆಂಬುದಕ್ಕುಂ ಮೆತ್ತಮಿವನರಿದುಂ ದೇಶಕಾಲಬಲಮನರಿದುಂ ಪ್ರಯೋಗಿಸುವುದಂತಿರ್ಕೆ ನಾವೀಗಳ್ ಕೌಶಿಕಾಧೀಶ್ವರಂಗೆ ಶತ್ರುಗಳಾಗಿರ್ದು, ವಾಕ್ಯಂ॥ ದುರ್ಗಹೀನೋ ನರಪತಿಃ ವಾತಾಭ್ರಾವಯವೈಸ್ಸಮಃ ಟೀ॥ ದುರ್ಗಂಗಳಿಲ್ಲದರಸು ಗಾಳಿಯೊಡಗೂಡಿದ ಮೇಘಂಗಳಂತಗೆ ಎಂಬ ನೀತಿಯುಂಟಿದರಿಂದಾ ದುರ್ಗಂಗಳೆಂತಪ್ಪುವೆಂದೊಡೆ.

ಶ್ಲೋ॥ ದುರ್ಗಂ ಚತುರ್ವಿಧಂ ಪ್ರೋಕ್ತಮಾಪತ್ಸ್ವಾಶ್ರಯ ಕಾರಣಂ
ಜಾಲಕಂ ಪಾರ್ವತಂ ಚೈವ ಧಾನ್ವನಂ ವನಜಂ ತಥಾ ॥೧೫೪॥

ಟೀ॥ ಆಪತ್ತಿಗಾಶ್ರಯಮಾಗಿ ಜಲದುರ್ಗ ಗಿರಿದುರ್ಗ ಸ್ಥಳದುರ್ಗ ವನದುರ್ಗಮೆಂದಿಂತು ದುರ್ಗಂಗಳ್ ನಾಲ್ಕು ತೆಱನಕ್ಕುಂ. ಇಂತು ಚತುರ್ವಿಧಮಾಗಿಯುಮಷ್ಟವಿಧಮಕ್ಕುಮದೆಂತೆಂದೊಡೆ, ಉಭಯನದೀಸಂಗಮಮುಮಪ್ಪ ಮಧ್ಯಪ್ರದೇಶಮಂತರ್ದ್ವೀಪಮೆಂಬುದಕ್ಕುಂ. ಅಗಾಧಮಾದ ಬೃಹತ್ತಟಾಕಂಗಳಿಂ ಕರ್ಕಶ ಖರದಂಡಸಲಿಲಮೀನವಿರಾಜಿತ ಸರೋವರಪರಿವೃತಮಪ್ಪ ಭೂಪ್ರದೇಶಂ ಮಹಾಸ್ಥಳಮೆಂಬುದಕ್ಕುಮೀಯೆರಡುಂ ಜಲದುರ್ಗಭೇದಂಗಳ್. ಗರುಡಂಗಂ ಅಡರಲ್ಬಾರದ ಸಮುತ್ತುಂಗಶಿಖರಂಗಳ್ ನಾಲ್ಕುಂ ದೆಸೆಯೊಳಮಾಗಿ ಬಾಗಿಲೊಂದೆಯಾಗಿರ್ಪುದು ಗುಹ್ಯಾಖ್ಯಮೆಂಬುದಕ್ಕುಂ. ಆವ ದೆಸೆಯೊಳಂ ಬಟ್ಟೆಯಿಲ್ಲದೆ ಸಜೆವೀಟುಚ್ಚಮಪ್ಪ ಬೆಟ್ಟುಗಳ ನಡುವೆ ಕಿರಮಸಿದಪ್ಪ ಬಟ್ಟೆಯಾಗೇಱುವುದುಂ ಪ್ರಸ್ತರಮೆಂಬುದಕ್ಕುಂ. ಈಯೆರಡುಂ ಗಿರಿದುರ್ಗದ ಭೇದಂಗಳ್. ಪೊಱಗೆ ನೀರುಂ ಭೂರಿಭೂರುಹಸಂದೋಹಮುಂ ತೃಣಗುಲ್ಮಲತಾಸ್ತೋಮಮುಮಿಲ್ಲದೆ ಒಳಗೆ ತೃಣಕಾಷ್ಠ ಜಲಸಂಪೂರ್ಣಮಪ್ಪುದು ಉದಕಸ್ತಂಭಮೆಂಬುದಕ್ಕುಂ. ಪೊಱಗೆ ಕರಮುಪ್ಪುಮಪೇಯ ಮುಮಲ್ಪಜಲಮುಳ್ಳುದು ವೈರಣಿಯೆಂಬುದಕ್ಕುಂ. ಈಯೆರಡುಂ ಸ್ಥಲದುರ್ಗ ಭೇದಂಗಳ್.

ತೊಡಗಿರುವವನು ತಿಕ್ಕಾಟಕ್ಕೆ ಯೋಗ್ಯನಾಗುವನು. ವ॥ ಇಂತಹ ಹಗೆಗಳನ್ನು ನಿರ್ಮೂಲಿಸುವುದು ಭೇದನವೆನಿಸುವುದು. ಹಸ್ತ್ಯಶ್ವರಥ ಪದಾತಿ ಬಲಕ್ಷಯವನ್ನುಂಟು ಮಾಡುವುದು ಪೀಡನವೆನಿಸುವುದು. ಅಲ್ಲದೆ ಇವನ್ನು ತಿಳಿದುಕೊಂಡಿದ್ದೂ ದೇಶಕಾಲಬಲವನ್ನರಿತುಕೊಂಡೂ ಪ್ರಯೋಗಿಸುವುದು ಹಾಗಿರಲಿ. ನಾವು ಈಗ ಗೂಬೆಗಳ ರಾಜನಿಗೆ ಶತ್ರುಗಳಾಗಿದ್ದು, ವಾ॥ ದುರ್ಗಹೀನೋನರಪತಿಃ ವಾತಾಭ್ರಾವಯ ವೈಸ್ಸಮಃ, ದುರ್ಗಗಳಿಲ್ಲದ ಅರಸನು ಗಾಳಿಯೊಡಗೂಡಿದ ಮೋಡಗಳಿಗೆ ಸಮ ಎಂಬ ನೀತಿಯುಂಟು. ಶ್ಲೋ॥ ಆಪತ್ತಿಗೆ ಆಶ್ರಯವಾಗಿ ಜಲದುರ್ಗ, ಗಿರಿದುರ್ಗ, ಸ್ಥಳದುರ್ಗ, ವನದುರ್ಗವೆಂದು ನಾಲ್ಕು ರೀತಿಯ ದುರ್ಗಗಳಿವೆ. ವ॥ ಅವು ನಾಲ್ಕು ರೀತಿಯವಾಗಿದ್ದರೂ ಸೂಕ್ಷ್ಮವಾಗಿ ಎಂಟು ರೀತಿಯವಾಗಿರುವುವು. ವೆ॥ ಅವು ಹೇಗೆಂದರೆ, ಎರಡು ನದಿಗಳ ಸಂಗಮವಾದ ಮಧ್ಯಪ್ರದೇಶವು ಅಂತರ್ದ್ವೀಪವೆನಿಸುವುದು. ಅಗಾಧವಾದ ಬೃಹತ್ತಟಾಕಗಳಿಂದಲೂ ಕರ್ಕಶ ಸರೋವರಗಳಿಂದಲೂ ಪರಿವೃತವಾದ ಭೂಪ್ರದೇಶವು ಮಹಾಸ್ಥಳವೆನಿಸುವುದು. ಈ ಎರಡು ಜಲದುರ್ಗಭೇದಗಳೆನಿಸುವುವು. ಗರುಡನಿಗೂ ಏರಲಾಗದ ಉತ್ತುಂಗಶಿಖರಗಳು ನಾಲ್ಕು ದಿಕ್ಕುಗಳಲ್ಲಿದ್ದು ಒಂದೇ ಬಾಗಿಲು ಇದ್ದಲ್ಲಿ ಅದು ಗುಹ್ಯಾಖ್ಯವೆನಿಸುವುದು. ಯಾವ ದಿಕ್ಕಿನಲ್ಲಿಯೂ ದಾರಿಯಿಲ್ಲದೆ ಕಡಿದಾಗಿದ್ದು ಎತ್ತರವಾದ ಬೆಟ್ಟಗಳ ನಡುವೆ ಕಿರಿದಾದ ದಾರಿಯಲ್ಲಿ ಏರುವುದು ಪ್ರಸ್ತರವೆನಿಸುವುದು. ಈ ಎರಡೂ ಗಿರಿದುರ್ಗದ ಭೇದಗಳಾಗಿವೆ.

ಜಲಪರಿಪೂರ್ಣ ಜಲಾಶಯಮುಂ ದುರ್ದರಕರ್ದಮೋಪೇತಾಶೀತಮಪ್ಪುದು ಕರ್ದಮೋದಕ ಮೆಂಬುದಕ್ಕುಂ. ಅನೇಕತರುನಿಕರಪರಿವೃತಮುಂ ತೃಣಪಟಲಪ್ರಾವೃತಮುಮಪ್ಪುದು ಸ್ತಂಭನ ಗಹನಮೆಂಬುದಕ್ಕುಂ-ಈಯೆರಡುಂ ವನದುರ್ಗದ ಭೇದಂಗಳ್. ಇಂತಷ್ಟವಿಧಮಪ್ಪ ದುರ್ಗಂಗಳೊಳಂ ನಮ್ಮಾಶ್ರಯಿಸಿದ ದುರ್ಗಕ್ಕೆ ದುರ್ಗಗುಣಮಿಲ್ಲ, ಮಿತ್ರಗುಣಸಂಪನ್ನರಪ್ಪ ಪತತ್ರಿಸ್ತೋಮಂಗಳಿಲ್ಲಮಪ್ಪುದಱಿಂ ಮಿತ್ರಬಲಮಿಲ್ಲ. ನಮ್ಮ ಬಲಮೆಲ್ಲಂ ಕಳಕುಳಮಾದ ಕಾರಣದಿಂ ತಂತ್ರಬಲಮಿಲ್ಲ. ಕೌಶಿಕಂಗಳ್ ಬಂದು ಇರುಳ್ ಕಾದುವುದಱಿಂ ಕಾಲಬಲಮಿಲ್ಲ, ಇಂತೀ ಬಲಂಗಳೊಳೊಂದುಮಿಲ್ಲದ ಕಾರಣದಿಂ ನಿಮ್ಮದಿಗುತ್ಸಾಹಶಕ್ತಿ ಸಾಧಾರಣಂ. ಅದಱಿಂ ನಾವುಮುಚ್ಛೇದ್ಯಶತ್ರುಗಳಾಗಿರ್ದೆವೆಂದು ನುಡಿದ ಚಿರಂಜೀವಿಯ ಮಾತಂ ಮೇಘವರ್ಣಂ ಕೇಳ್ದು ಮೇಘಗರ್ಜನೆಯಿಂ ಗರ್ಜಿಸಿ ಬಟಿಕ್ಕಂತೆಂದಂ :

ಪಿರಿದಾಳಾಪದೊಳೇಂ ಸಂ-
ಗರದೊಳ್ ಭೀಕರಮೆನಿಪ್ಪ ಮದ್ಭುಜಬಲದಿಂ-
ದರಿಮರ್ದನನಂ ತವೆ ಕೊಂ-
ದರಿಮರ್ದನನೆಂಬ ಪೆಸರನಾಂ ತಳೆದಪ್ಪೆಂ ೨೯೪

ಎಂದು ನುಡಿದ ಮೇಘವರ್ಣನ ಮಾತಂ ಚಿರಂಜೀವಿ ಕೇಳ್ದು ಇಂತೆಂದಂ : ನಿಮ್ಮದಿ, ನೀಮರಿಮರ್ದನನೊಳ್ ಕಾದಿ ಗೆಲ್ವುದೊಂದುಂ ಸಂದೆಯಮಿಲ್ಲಂ. ಆದೊಡಾ ಗೂಗೆಗಳ್ ದಿವಸಾಂಧಂಗಳಾಗಿಯುಂ ನಮ್ಮೊಳ್ ಪಗೆಯುಂಟಾಗಿಯುಂ ಘೋರಾಂಧಕಾರದಿಂದತಿಸಂಕೀರ್ಣಮಪ್ಪ

ಹೊರಗೆ ನೀರೂ ದೊಡ್ಡ ದೊಡ್ಡ ಮರಗಳ ಗುಂಪುಗಳೂ ತೃಣಗುಲ್ಮಲತಾಸ್ತೋಮವೂ ಇಲ್ಲದೆ ಒಳಗೆ ತೃಣಕಾಷ್ಠ ಜಲಸಂಪೂರ್ಣವಾಗಿರುವುದು ಉದಕಸ್ತಂಭವೆನಿಸುವುದು: ಹೊರಗೆ ಉಪ್ಪಾಗಿಯೂ ಅಪೇಯವೂ ಅಲ್ಪ ಜಲವುಳ್ಳುದೂ ವೈರಿಣಿ ಎನಿಸುವುದು. ಈ ಎರಡು ಸ್ಥಲದುರ್ಗ ಭೇದಗಳಾಗಿರುವುವು. ಜಲಪರಿಪೂರ್ಣ ಜಲಾಶಯವೂ ಕೆಸರಿನಿಂದ ಕೂಡಿ ಅತಿ ಶೀತವಾಗಿಯೂ ಇರುವಂಥದು ಕರ್ದಮೋದಕವೆನಿಸುವುದು. ಅನೇಕ ತರುನಿಕರ ಪರಿವೃತವೂ ತೃಣಪಟಲ ಪ್ರಾವೃತವೂ ಆಗಿರುವುದು ಸ್ತಂಭನಗಹನ ವೆನಿಸುವುದು. ಈ ಎರಡೂ ವನದುರ್ಗದ ಭೇದಗಳಾಗಿರುವುವು. ಈ ರೀತಿಯಲ್ಲಿ ಎಂಟು ವಿಧವಾದ ದುರ್ಗಗಳಲ್ಲಿ ನಾವು ಆಶ್ರಯಿಸಿದ ದುರ್ಗಕ್ಕೆ ದುರ್ಗಗುಣವಿಲ್ಲ, ಮಿತ್ರಗುಣಸಂಪನ್ನರಾದ ಪಕ್ಷಿಬಲವಿಲ್ಲದುದರಿಂದ ಮಿತ್ರಬಲವಿಲ್ಲ. ನಮ್ಮ ಬಲವೆಲ್ಲವೂ ನುಚ್ಚುನೂರಾದುದರಿಂದ ತಂತ್ರಬಲವಿಲ್ಲ. ಗೂಬೆಗಳು ಬಂದು ರಾತ್ರಿಹೊತ್ತು ಕಾದುವುದರಿಂದ ಕಾಲಬಲವಿಲ್ಲ. ಹೀಗೆ ಈ ಬಲಗಳಲ್ಲಿ ಒಂದೂ ಇಲ್ಲದ ಕಾರಣದಿಂದ ನಿಮ್ಮ ಉತ್ಸಾಹಶಕ್ತಿ ಸಾಧಾರಣವಾಗಿದೆ. ಅದರಿಂದ ನಾವೂ ವಿನಾಶರಾಗುವ ಶತ್ರುಗಳಾಗಿದ್ದೇವೆ ಎಂದು ಹೇಳಿದ ಚಿರಂಜೀವಿಯ ಮಾತನ್ನು ಮೇಘವರ್ಣನು ಕೇಳಿ ಮೇಘಗರ್ಜನೆಯಿಂದ ಗರ್ಜಿಸಿ ಬಳಿಕ ಹೀಗೆಂದನು : ೨೯೪. ಹೆಚ್ಚು ಮಾತಿನಿಂದೇನು ಪ್ರಯೋಜನ? ಯುದ್ಧದಲ್ಲಿ ಭೀಕರವಾದ ನನ್ನ ಭುಜಬಲದಿಂದ ಅರಿಮರ್ದನನನ್ನು ಸಂಹರಿಸಿ ಅರಿಮರ್ದನನೆಂಬ ಹೆಸರನ್ನು ನಾನು ಧರಿಸುವೆನು. ವ|| ಆ ಮಾತನ್ನು ಕೇಳಿದ ಚಿರಂಜೀವಿ ಹೀಗೆಂದನು : ನೀವು ಅರಿಮರ್ದನನೊಡನೆ ಕಾದಾಡಿ ಗೆಲ್ಲುವುದರಲ್ಲಿ ಸಂದೇಹವಿಲ್ಲ, ಆದರೆ ಆ ಗೂಬೆಗಳು ಹಗಲುಗುರುಡರಾಗಿರುವುದರಿಂದಲೂ ನಮ್ಮೊಡನೆ ಹಗೆ ಕಟ್ಟಿಕೊಂಡಿರುವುದರಿಂದಲೂ

ಗುಹಾಗಹ್ವರಂಗಳೊಳ್ ಪೊಕ್ಕಿರ್ಪುವು. ಆದುಕಾರಣದಿಂದಾವ ಕಾಲಂಗಳನುಪಾಯಮಿಲ್ಲದೆ ಕಾದಿ ಕೊಲಲುಂ ಗೆಲಲುಂ ಬಾರದು. ಅಂತುಮಲ್ಲದೆ,

ಮತಿಹೀನರಪ್ಪ ಮನುಜರ್
ಪತಂಗವೃತ್ತಿಯನೆ ಕೊಂಡು ಕೊನೆಯುತ್ತಿರ್ಪರ್
ಸತತಮದೆಂತುಂ ವಿಬುಧ
ಪ್ರತತಿಗನಿಷ್ಟಂ ನಯಾಗಮಕ್ಕೆ ವಿರುಬ್ಧಂ ೨೯೫

ತಂತ್ರಾವಾಸನಿದಂ ಪರ-
ತಂತ್ರಪ್ರವಿಭೇದ ಪಶ್ವತಂತ್ರ ದಕ್ಷಂ
ಮಂತ್ರಜ್ಞಂ ವಿನಯಾನ್ವಿತ
ಮಂತ್ರಿಪ್ರಕರಂ ಸುಮಿತ್ರನಮಳಚರಿತ್ರಂ ೨೯೬

ವ್ಯಸನವಿದೂರಂ ನಯಶಾ-
ಲಿ ಸತ್ಯವಾಕ್ಯಂ ಕೃತಜ್ಞನಸ್ತಬ್ಧಂ ಕ್ಲೇ-
ಶಸಹಿಷ್ಣು ಸುತೇಜನಮಾ-
ತ್ಯಸುಮಂತ್ರಿಸಮೇತನಖಿಲವಿಜ್ಞಾನವಿದಂ ೨೯೭

ಕುಲಜಂ ಸೋತ್ಸಾಹಂ ಸ್ಥೂ-
ಲ ಲಕ್ಷನಭಿಮಾನಿ ಬುದ್ಧಿಮಂತಂ ಚತುರಂ
ಬಲಯುಕ್ತಂ ವಾಗ್ಮಿ ಕಲಾ-
ಕಲಿತಂ ಶರಣಾಗತೈಕರಕ್ಷಣದಕ್ಷಂ ೨೯೮

ವಿಪುಲತರಕೋಶನಕ್ರೂ-
ರಪರಿಜನಂ ದೇಶಕಾಲವೇದಿ ದೃಢಂ ನೀ-
ತಿಪರಂ ಕ್ಷಮಾನ್ವಿತಂ ಜಿತ-
ರಿಪುಷಡ್ವರ್ಗಂ ಪ್ರಭೂತನನುಪಮದುರ್ಗಂ ೨೯೯

ಘೋರಾಂಧಕಾರದಿಂದ ಅತ್ಯಂತ ಇಕ್ಕಟ್ಟಾದ ಗುಹಾಗಹ್ವರಗಳಲ್ಲಿ ಹೊಕ್ಕಿರುವುವು. ಅದರಿಂದ ಉಪಾಯವಿಲ್ಲದೆ ಅವುಗಳೊಡನೆ ಕಾದಾಡುವುದೂ ಕೊಲ್ಲುವುದೂ ಗೆಲ್ಲುವುದೂ ಸಾಧ್ಯವಿಲ್ಲ, ಅಲ್ಲದೆ, ೨೯೫. ಮತಿಹೀನರಾದ ಮನುಷ್ಯರು ಪತಂಗವೃತ್ತಿಯಿಂದ ಬಾಳುವರು. ಅದು ಬುದ್ಧಿವಂತರಾದವರಿಗೆ ಅನಿಷ್ಟಕರ; ನೀತಿಶಾಸ್ತ್ರಕ್ಕೆ ವಿರುದ್ಧವಾದುದು. ೨೯೬. ತಂತ್ರವನ್ನು ಬಲ್ಲವನೂ ಪರತಂತ್ರಗಳನ್ನು ಭೇದಿಸಬಲ್ಲವನೂ ದಕ್ಷನೂ ಮಂತ್ರಜ್ಞನೂ ವಿನಯಾನ್ವಿತ ಮಂತ್ರಿಗಳಿಂದ ಕೂಡಿದವನೂ ಸುಮಿತ್ರನೂ ಅಮಲಚರಿತ್ರನೂ ೨೯೭. ವ್ಯಸನದೂರನೂ ನಯಶಾಲಿಯೂ ಸತ್ಯವಾಕ್ಯನೂ ಕೃತಜ್ಞನೂ ಅಸ್ತಬ್ಧನೂ ಕ್ಲೇಶಸಹಿಷ್ಣುವೂ ಸುತೇಜನೂ ಅಮಾತ್ಯಸುಮಂತ್ರಿಸಮೇತನೂ ಅಖಿಲವಿಜ್ಞಾನವಿದನೂ ೨೯೮. ಕುಲಜನೂ ಉತ್ಸಾಹಶಾಲಿಯೂ ಅಭಿಮಾನಿಯೂ ಬುದ್ಧಿವಂತನೂ ಚತುರನೂ ಬಲಯುಕ್ತನೂ ವಾಗ್ಮಿಯೂ ಕಲಾವಿದನೂ ಶರಣಾಗತೈಕರಕ್ಷಣದಕ್ಷನೂ ೨೯೯. ಅತಿಶಯವಾದ ಕೋಶವುಳ್ಳವನೂ ಅಕ್ರೂರ ಪರಿಜನರಿಂದ ಕೂಡಿದವನೂ ದೇಶಕಾಲಜ್ಞನೂ ದೃಢಚಿತ್ತನೂ ನೀತಿಪರನೂ ಕ್ಷಮಾನ್ವಿತನೂ ಅರಿಷಡ್ವರ್ಗವನ್ನು ಗೆದ್ದವನೂ ಅನುಪಮದುರ್ಗನೂ

ಗುರುದೇವದ್ವಿಜಭಕ್ತಂ
ತರುಣವಯಸ್ಕಂ ಪರೇಂಗಿತಜ್ಞನುದಾರಂ
ಪರಿವಾರಕಲ್ಪವೃಕ್ಷಂ
ಪರದಾರವಿದೂರನಖಿಲಭುವನಾಧಾರಂ ೩೦೦

ಪ್ರಣತಾರಾತಿ ಧನುರ್ಗುಣ
ಕಿಣೀಕೃತೋದ್ವೃತ್ತಕೋಷ್ಠನನುಪಮಧೈರ್ಯಂ
ರಣಕೇಳೀಲೋಲಂ ವಾ-
ರಣವಾಜಿ ರಥಾಶ್ವ ಭಟಬಲಪ್ರಖ್ಯಾತಂ ೩೦೧

ಎನೆ ನೆಗಳ್ದ ನೃಪಂ ತನಗಹಿ-
ತನಾಗೆ ಮೈಮಱೆದು ನೆಗಳ್ವ ಭೂಪಂ ನಿಜಸೈ-
ನ್ಯನಿತಂಬಿನೀ ಜನಾಕ್ರಂ
ದನಮಂ ಕೇಳುತ್ತುಮಿರ್ಪನಿರುಳುಂ ಪಗಲುಂ ೩೦೨

ಅದಱಿಂ ಭೂಭುಜಂ ಸಮುತ್ಸುಕನಾಗಲಾಗದು. ಅದೆಂತೆನೆ : ಧರ್ಮಪುತ್ರಂ ಜೂದಾಡಿ ಮೇದಿನಿಯಂ ಸೋಲ್ತು ಸಹೋದರರ್ ಸಹಿತಮರಣ್ಯಮಂ ಪೊಕ್ಕೊಡೆ ಪುಣ್ಯವಿಹೀನರಾಗಿರ್ದರಂ ದ್ರೌಪದಿ ಕಂಡು ತಾನುಂ ವನವಾಸದಾಯಾಸಕ್ಕೆ ಬೇಸತ್ತು ನಿಜಪತಿಗಿಂತೆಂದಳ್ : ದೇವಾ, ನೀಂ ನಿನ್ನ ನನ್ನಿಯನೆ ಕಾವು ನಿನ್ನನುಜರ್ ಬನ್ನದ ಕೂೞನುಂಡರ್; ಪನ್ನೆರಡುವರ್ಷ ಬೇಡರಂತಡವಿಯೊಳ್ ನಾರಸೀರೆಯನುಟ್ಟು ಬೇರುಮಂ ಬಿಕ್ಕೆಯುಮಂ ತಿಂದು ಕಂದಿ ಕುಂದಿ ಪಂದೆಯ ಮನದಂತಳ್ಳಾಡುತಿರ್ದಪರ್. ಇವರಂ ಕೌರವರ್ಗೆ ತೊಡರ್ದು ಬಿಡು ಪಿಡಿದಿರದಿರೆಂದು ಮೂದಲಿಸಿ ನುಡಿದ ಪಾಂಚಾಲರಾಜತನೂಜೆಗೆ ಧರ್ಮರಾಜತನೂಜನಿಂತೆಂದಂ :

೩೦೦. ಗುರುದೇವ ದ್ವಿಜರ ಭಕ್ತನೂ ತರುಣವಯಸ್ಕನೂ ಪರೇಂಗಿತಜ್ಞನೂ ಉದಾರನೂ ಪರಿವಾರ ಕಲ್ಪವೃಕ್ಷನೂ ಪರದಾರವಿದೂರನೂ ಅಖಿಲಭುವನದ ಆಧಾರಸ್ವರೂಪನೂ ೩೦೧. ಅನುಪಮ ಧೈರ್ಯವಂತನೂ ರಣಕೇಳೀಲೋಲನೂ ವಾರಣವಾಜಿರಥ ಭಟಬಲದಿಂದ ಕೂಡಿದವನೂ ೩೦೨. ಆದ ರಾಜನು ತನಗೆ ಅಹಿತನಾಗಿರಲು ಮೈಮರೆತು ವರ್ತಿಸುವ ಭೂಪನು ತನ್ನ ಸೈನಿಕರ ಹೆಂಡಿರ ಆಕ್ರಂದನವನ್ನು ಹಗಲಿರುಳೂ ಕೇಳುತ್ತಿರುವನು. ವ|| ಆದರಿಂದ ರಾಜನು ಸಮುತ್ಸುಕನಾಗಿರಬಾರದು. ಹೇಗೆಂದರೆ, ಧರ್ಮರಾಯನು ಜೂಜಾಡಿ ಮೇದಿನಿಯನ್ನು ಸೋತು ಸಹೋದರರ ಸಹಿತ ಅರಣ್ಯವನ್ನು ಹೊಕ್ಕಲ್ಲಿ ಪುಣ್ಯವಿಹೀನರಾಗಿದ್ದ ಪಾಂಡವರನ್ನು ದ್ರೌಪದಿ ಕಂಡು ತಾನೂ ವನವಾಸದ ಆಯಾಸಕ್ಕೆ ಬೇಸತ್ತು ತನ್ನ ಪತಿಗೆ ಈರೀತಿ ಹೇಳಿದಳು: ದೇವಾ ! ನೀನು ನಿನ್ನ ಸತ್ಯವನ್ನೇ ಕಾಪಾಡಿ ನಿನ್ನ ಸಹೋದರರು ಬನ್ನದ ಕೂಳನ್ನುಂಡರು. ಹನ್ನೆರಡು ವರ್ಷ ಬೇಡರಂತೆ ಅಡವಿಯಲ್ಲಿ ನಾರಿನ ಬಟ್ಟೆಯನ್ನುಟ್ಟು ಬೇರನ್ನೂ ಭಿಕ್ಷೆಯನ್ನವನ್ನೂ ತಿಂಡು ಕಂದಿ ಕುಂದಿ ಹೇಡಿಯ ಮನಸ್ಸಿನಂತೆ ಅಲ್ಲಾಡುತ್ತಿರುವರು. ಇವರನ್ನು ಕೌರವರ ಮೇಲೆ ಹೋರಾಟಕ್ಕೆ, ಬಿಡು, ತಡೆದಿರಬೇಡ ಎಂದು ನುಡಿದ ಪಾಂಚಾಲರಾಜತನೂಜೆಗೆ ಧರ್ಮರಾಜನು ಹೀಗೆಂದನು:

ಶ್ಲೋ ॥ ಯಶೋಧಿಗಂತುಂ ಸುಖಲಿಪ್ಸಯಾ ವಾ
ಮನುಷ್ಯಸಂಖ್ಯಾಮತಿವರ್ತಿತುಂ ವಾ
ಮಹೋತ್ಸುಕಾನಾಮಭಿಯೋಗಜನ್ಮಾ
ಸಮುತ್ಸುಕೇವಾಂಕಮುಪೈತಿ ಲಕ್ಷ್ಮೀಃ ॥೧೫೫॥

ಟೀ॥ ಕೀರ್ತಿಯನ್ಪೆದಲೋಸ್ಕರಂ ಮೇಣ್ ಸುಖಂಬಡೆಯಲೋಸ್ಕರಂ ಮೇಣ್ ಸಾಮಾನ್ಯಜನಂಗಳನತಿಕ್ರಮಿಸಲೋಸ್ಕರಮಾಗಿ ಅಳಿಪಿಲ್ಲಡೆ ಉದ್ಯೋಗಂಗೆಯ್ವ ಮನುಷ್ಯರ ತೊಡೆಯ ಮೇಲೆ ಲಕ್ಷ್ಮಿ ನೆಲಸಿಹಳು, ಎಂಬೀ ನೀತಿಯನಜಾತಶತ್ರು ಪೇೞ್ದಂ. ಅಂತುಮಲ್ಲದೆಯುಂ.

ಸಮರಪ್ರಾರಂಭದೊಳ್ ಕೌಶಿಕ ಶಕುನಿಗಣಾಧೀಶನೊಳ್ಕಾದಿ ಗೆಲ್ವು
ದ್ಯಮಮೀಗಳ್ ಕೂಡದೆಂತುಂ ನಮಗೆ ಬಹುತರಾಳಾಪದಿಂ ಬರ್ಪುದೇಂ ದೇ
ವ ಮಹಾಶಾಸ್ತ್ರ ಪ್ರಾಜ್ಞರುಂಜ್ಞರುಮೆನಿಪ ಮುನೀಂದ್ರೋತ್ತಮರ್ ಪೇೞ್ವ ನೀತಿ
ಕ್ರಮದಿಂ ಷಾಡ್ಗುಣ್ಯಮಂ ಯೋಜಿಸುವುದೆ ಸುನಯಂ ಪ್ರಾಪ್ತಕಾಲಾನುರೂಪಂ ೩೦೩

ಎನಲಾ ಷಾಡ್ಗುಣ್ಯಮೆಂತೆಂದೊಡೆ : ಸಂಧಿ ವಿಗ್ರಹ ಯಾನಾಸನ ಸಂಶ್ರಯ ದ್ವೈಧೀಭಾವಮೆಂಬಾಱು ತೆಱನಾಗಿರ್ಕುಂ. ಅಲ್ಲಿ ಬಲವಂತನಪ್ಪ ಪಗೆವಂ ಮೇಲೆತ್ತಿ ಬಿರೆ ವಸ್ತುವಾಹನಂಗಳನಿತ್ತಾತನಂ ಸಂತೈಸುವುದು ಸಂಧಾನಮೆಂಬುದಕ್ಕುಂ. ವಿಜಿಗೀಷುಗಳಿರ್ವರುಂ ಪರಸ್ಪರಾಹಂಕಾರಂಗೆಯ್ವುದು ವಿಗ್ರಹಮೆಂಬುದಕ್ಕುಂ. ಶಕ್ತಿತ್ರಯಸಂಪನ್ನರಪ್ಪ ವಿಜಿಗೀಷುಗಳಿರ್ಬರುಂ ಮೇಲೆತ್ತಿ ಬರ್ಪುದು ಯಾನಮೆಂಬುದಕ್ಕುಂ, ಅರಿವಿಜಿಗೀಷುಗಳೊರ್ವರೊರ್ವರ ಮೇಲೆತ್ತಿಯೊತ್ತಲಾಱದೆ ನಿಲ್ವುದು ಆಸನಮೆಂಬುದಕ್ಕುಂ. ನಿಜಬಲಮಿಲ್ಲದೆ ಶತ್ರುವಿಜಿಗೀಷುವಾದೊಡಾಶ್ರಯಿಸುವುದು ಸಂಶ್ರಯಮೆಂಬುದಕ್ಕುಂ. ಬಲವಂತರಪ್ಪ

ಶ್ಲೋ॥ ಕೀರ್ತಿಯನ್ನು ಪಡೆಯಲೂ ಸುಖವನ್ನು ಹೊಂದಲೂ ಸಾಮಾನ್ಯಜನಗಳನ್ನು ಮೀರಲೂ ಉತ್ಸಾಹದಿಂದ ಉದ್ಯೋಗಶೀಲರಾದ ಮನುಷ್ಯರ ತೊಡೆಯ ಮೇಲೆ ಲಕ್ಷ್ಮಿ ನೆಲೆಸಿರುವಳು ಎಂಬ ನೀತಿಯನ್ನು ಅಜಾತಶತ್ರುವು ಹೇಳಿದನು. ಅಲ್ಲದೆ ೩೦೩. ಸಮರಪ್ರಾರಂಭದಲ್ಲಿ ಕೌಶಿಕರಾಜನೊಡನೆ ಕಾದಾಡಿ ಗೆಲ್ಲುವ ಉದ್ಯಮ ಈಗ ನಮಗೆ ಸಾಧ್ಯವಾಗದು. ಹೆಚ್ಚು ಮಾತಿನಿಂದ ಏನು ಪ್ರಯೋಜನ ? ಆದರಿಂದ ದೇವಾ, ಮಹಾಶಾಸ್ತ್ರಪ್ರಾಜ್ಞರಾದ ಮುನೀಂದ್ರೋತ್ತಮರು ಹೇಳಿದ ನೀತಿಕ್ರಮದಿಂದ ಷಾಡ್ಗುಣ್ಯವನ್ನು ಯೋಜಿಸುವುದೇ ನೀತಿಯಾಗಿರುವುದು. ವ॥ ಆ ಷಾಡ್ಗುಣ್ಯಗಳು ಯಾವುವು ಎಂದರೆ, ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀಭಾವ ಎಂಬ ಆರು ವಿಧವಾಗಿವೆ. ಬಲಶಾಲಿಯಾದ ಹಗೆಯು ಆಕ್ರಮಿಸಿ ಬರಲು ವಸ್ತುವಾಹನಾದಿಗಳನ್ನು ಕೊಟ್ಟು ಅವನನ್ನು ಸಂತೈಸುವುದು ಸಂಧಾನವೆನಿಸುವುದು. ವಿಜಯೇಚ್ಛುಗಳಿಬ್ಬರೂ ಪರಸ್ಪರ ಅಹಂಕಾರ ತೋರಿಸುವುದು ವಿಗ್ರಹವೆನಿಸುವುದು. ಶಕ್ತಿತ್ರಯಸಂಪನ್ನರಾದ ವಿಜಯಾಪೇಕ್ಷಿಗಳಿಬ್ಬರೂ ಪರಸ್ಪರ ಆಕ್ರಮಣ ಮಾಡುವುದು ಯಾನವೆನಿಸುವುದು. ವೈರಿರಾಜರು ಪರಸ್ಪರ ಆಕ್ರಮಣ ಮಾಡಿ ಮುಂದರಿಯಲಾರದೆ ನಿಲ್ಲುವುದು ಆಸನವೆನಿಸುವುದು. ತನ್ನಲ್ಲಿ ಬಲವಿಲ್ಲದೆ ಶತ್ರು ಜಯಿಸಿದಲ್ಲಿ ಅವನನ್ನು ಆಶ್ರಯಿಸುವುದು ಸಂಶ್ರಯವೆನಿಸುವುದು. ಬಲಶಾಲಿಗಳಾದ ಶತ್ರುಗಳ ನಡುವೆ ದುರ್ಬಲನಾದ ರಾಜನು ಆ ಶತ್ರುಗಳನ್ನು ವಾಙ್ಮಾತ್ರದಿಂದ ಅತಿ

ಶತ್ರುಗಳ ನಡುವೆ ದುರ್ಬಲನಪ್ಪ ನೃಪನಾ ರಿಪುಗಳಂ ವಾಚಿನ್ಮಾತ್ರದಿನತಿ ಸಂಧಾನಮಂಗೆಯ್ದು ತನ್ನ ಮನಮನೆನ್ನರುಮಱಿಯದಂತು ಕಾಕಾಕ್ಷಿಗೋಳಕನ್ಯಾಯದಿಂದಿರ್ಪುದು ದ್ವೈಧೀಭಾವಮೆಂಬುದಕ್ಕುಂ. ಇಂತು ಷಾಡ್ಗುಣ್ಯಾಭಿಪ್ರಾಯದೊಳೀಗಳಿನವಸರಕ್ಕೆ ಸಂದೀಪಿ ಪೇಟ್ದಂತೆ ಸಂಧಿಯಂ ಮಾಡವೇಟ್ಕುಂ. ಆ ಸಂಧಿ ಯಾವುವೆಂದೊಡೆ : ಸಂಪ್ರದಾನ ಕಪಾಲ ಉಪಹಾಸನ ಸಂತಾನ ಸಂಗತ ಉಪನ್ಯಾಸ ಪ್ರತೀಕಾರ ಸಂಯೋಗ ಪುರುಷಾಂತರ ಅದೃಷ್ಟಪುರುಷ ಅದುಷ್ಟ ಆತ್ಮಾಮಿಷ ಉಪಗ್ರಹ ಪರಿಕ್ರಮ ಅರಿಪರದೂಷಣ ಸ್ಕಂಧೋಪನಯಮೆಂದು ಷೋಡಶವಿಧಮಕ್ಕುಂ. ಅಲ್ಲಿ ದ್ರವ್ಯವಾಹನಮಂ ಕೊಟ್ಟು ಮನ್ನಿಪುದು ಸಂಪ್ರದಾನಮೆಂಬುದಕ್ಕುಂ. ಸಮಸಂಧಿ ಕಪಾಲವೆಂಬುದಕ್ಕುಂ. ಸಂಧಾನಂ ಉಪಹಾಸನಸಂಧಿಯೆಂಬುದಕ್ಕುಂ. ಕನ್ಯಾದಾನಪೂರ್ವಕಮಪ್ಪ ಸಂಧಿ ಸಂತಾನಮೆಂಬುದಕ್ಕುಂ. ಮಿತ್ರಭಾವದೊಳ್ ನೆಗಟ್ದ ಸಂಧಿ ಸಂಗತಮೆಂಬುದಕ್ಕುಂ. ಭೂಪಿಯುಪ್ಪೇಕಾರ್ಥಸಿದ್ಧಿಯನುದ್ದೇಶಂಗೆಯ್ದು ನಡೆವುದು ಉಪನ್ಯಾಸಸಂಧಿಯೆಂಬುದಕ್ಕುಂ. ಪರಸ್ಪರೋಪಕಾರಂಗೆಯ್ವುದು ಪ್ರತೀಕಾರ ಸಂಧಿಯೆಂಬುದಕ್ಕುಂ. ಅರಿವಿಜಿಗೀಷುಗಳೇಕಾರ್ಥಸಿದ್ಧಿಯಂ ಕುಱಿತು ನಡೆವ ಸಂಧಿ ಸಂಯೋಗಮೆಂಬುದಕ್ಕುಂ. ನಿನ್ನ ಸೇನಾನಾಯಕರಿಂದೆನ್ನ ಕಾರ್ಯಮಂ ಸಾಧಿಸಿದೊಡೆ ನುಡಿದ ಪಣಮಂ ಕುಡುವೆನೆಂಬುದು ಪುರುಷಾಂತರಸಂಧಿಯೆಂಬುದಕ್ಕುಂ. ಎನ್ನ ಕಾರ್ಯಮಂ ನಿನ್ನ ಬಲ್ಲ ಮಾಟ್ಕೆಯಿಂ ತೀರ್ಚಿದೊಡೆ ನೀನೆಂದುದು ಮಾಳ್ಪೆನೆಂಬುದು ಅದೃಷ್ಟಪುರುಷಸಂಧಿಯೆಂಬುದಕ್ಕುಂ. ಅರಿವಿಜಿಗೀಷುಗೆ ಭೂಮ್ಯೇಕಪ್ರದೇಶಮಂ ಕೊಟ್ಟು ಮಾಳ್ಪುದು ಅದುಷ್ಟಸಂಧಿಯೆಂಬುದಕ್ಕುಂ. ಶತ್ರುಸಮಸ್ತಬಲಂ

ಸಂಧಾನಮಾಡಿ ತನ್ನ ಮನಸ್ಸನ್ನು ಎಂಥವರೂ ಅರಿಯದಂತೆ ಕಾಕಾಕ್ಷಿಗೋಳಕ ನ್ಯಾಯದಿಂದ ಇರುವುದು ದ್ವೈಧೀಭಾವ ಎಂದೆನಿಸುವುದು. ಈ ರೀತಿಯಲ್ಲಿ ಷಾಡ್ಗುಣ್ಯಾಭಿಪ್ರಾಯದಲ್ಲಿ ಈ ಸಂದರ್ಭದಲ್ಲಿ ಸಂದೀಪಿ ಹೇಳಿದಂತೆ ಸಂಧಿಯನ್ನು ಮಾಡಿಕೊಳ್ಳಬೇಕು. ಆ ಸಂಧಿಗಳು ಸಂಪ್ರಧಾನ, ಕಪಾಲ, ಉಪಹಾಸನ, ಸಂತಾನ, ಸಂಗತ, ಉಪನ್ಯಾಸ, ಪ್ರತೀಕಾರ, ಸಂಯೋಗ, ಪುರುಷಾಂತರ, ಅದೃಷ್ಟ ಪುರುಷ, ಅದುಷ್ಟ, ಆತ್ಮಾಮಿಷ, ಉಪಗ್ರಹ, ಪರಿಕ್ರಮ, ಅರಿಪರದೂಷಣ, ಸ್ಕಂಧೋಪನಯ ಎಂದು ಹದಿನಾರು ವಿಧಗಳಾಗಿವೆ. ಅಲ್ಲಿ ದ್ರವ್ಯವಾಹನಗಳನ್ನು ಕೊಟ್ಟು ಮನ್ನಿಸುವುದು ಸಂಪ್ರದಾನವೆನಿಸುವುದು. ಸಮಸಂಧಿ ಕಪಾಲವೆನಿಸುವುದು. ಸಂಧಾನವು ಉಪಹಾಸನಸಂಧಿಯೆನಿಸುವುದು. ಕನ್ಯಾದಾನ ಪೂರ್ವಕವಾದ ಸಂಧಿಯು ಸಂತಾನವೆನಿಸುವುದು. ಮಿತ್ರಭಾವದಿಂದ ಮಾಡಿದ ಸಂಧಿಯು ಸಂಗತವೆನಿಸುವುದು. ಏಕಾರ್ಥಸಿದ್ಧಿಯನ್ನು ಉದ್ದೇಶಿಸಿ ನಡೆಯುವುದು ಉಪನ್ಯಾಸ ಸಂಧಿಯೆನಿಸುವುದು. ಪರಸ್ಪರ ಉಪಕಾರ ಮಾಡುವುದು ಪ್ರತೀಕಾರ ಸಂಧಿಯೆನಿಸುವುದು. ವಿಜಯಿಗಳೆನಿಸಿದ ವೈರಿಗಳು ಏಕಾರ್ಥಸಿದ್ಧಿಯನ್ನು ಮಾಡಿ ವರ್ತಿಸುವುದು ಸಂಯೋಗವೆನಿಸುವುದು. ನಿನ್ನ ಸೇನಾನಾಯಕರಿಂದ ನನ್ನ ಕಾರ್ಯವನ್ನು ಸಾಧಿಸಿದರೆ ಹೇಳಿದಷ್ಟು ಹಣವನ್ನು ಕೊಡುವೆನು ಎಂಬುದು ಪುರುಷಾಂತರಸಂಧಿಯೆನಿಸುವುದು. ನನ್ನ ಕಾರ್ಯವನ್ನು ನೀನು ತಿಳಿದ ರೀತಿಯಲ್ಲಿ ತೀರಿಸಿದರೆ ನೀನು ಹೇಳಿದುದನ್ನು ಮಾಡುವೆನು ಎಂಬುದು ಅದೃಷ್ಟ ಪುರುಷ ಸಂಧಿಯೆನಿಸುವುದು. ವಿಜಯಿಯಾದ ವೈರಿಗೆ ಭೂಮಿಯ ಒಂದು ಪ್ರದೇಶವನ್ನು ಕೊಟ್ಟು ಸಂಧಿಮಾಡಿಕೊಳ್ಳುವುದು ಅದುಷ್ಟಸಂಧಿ ಯೆನಿಸುವುದು. ಶತ್ರುಸಮಸ್ತಸೈನ್ಯಸಮೇತನಾದ ವಿಜಯಿಯನ್ನು ಕಾಣುವುದು

ಬೆರಸು ವಿಜಿಗೀಷುವಂ ಕಾಣ್ಬುದುಂ ಆತ್ಮಾಮಿಷಸಂಧಿಯೆಂಬುದಕ್ಕುಂ.ಸರ್ವಸ್ವಮಂ ತೆತ್ತು ಪ್ರಾಣರಕ್ಷಣಂಗೆಯ್ವುದು ಉಪಗ್ರಹಸಂಧಿಯೆಂಬುದಕ್ಕುಂ. ಭಂಡಾರಮನಕ್ಕೆ ಅದಱರ್ಧಮನಕ್ಕೆ ಕೊಟ್ಟು ದೇಶಪ್ರವೃತ್ತಿಯಂ ರಕ್ಷಿಸುವ ಸಂಧಿ ಪರಿಕ್ರಮಸಂಧಿಯೆಂಬುದಕ್ಕುಂ. ಸಾರಭೂಮಿಯಂ ಕುಡುವುದು ಸ್ಕಂಧೋಪನಯಸಂಧಿಯೆಂಬುದಕ್ಕುಂ. ಇಂತೀ ಪೇೞ್ದ ಪದಿನಾಱುಂ ಸಂಧಿ ವಾಚಸ್ಪತಿನೀತಿಯಲ್ಲಿರ್ಕುಂ ; ಸೋಮದೇವನೀತಿಯಲ್ಲಿರ್ಕುಂ. ಇವಱಲ್ಲಿ ನಾವಾವ ಸಂಧಿಯಂ ಪೊಣರ್ಚುವೊಡಮರಿಮರ್ದನನೊಡಂಬಡುವನಲ್ಲ. ಅದೆಂತೆನೆ :

ಜ್ಞಾತಿಬಹಿಷ್ಕೃತಂ ವ್ಯಸನಿ ದೈವಪರಂ ಶಿಶು ದೀರ್ಘರೋಷಿ ಸ
ತ್ಯೇತರನಸ್ಥಿರಂ ಸುರಗುರುದ್ವಿಜವೈರಿ ಬಹುದ್ವಿಷಂ ಭಯೋ
ಪೇತನಧಾರ್ಮಿಕಂ ವಿಕಳತಂತ್ರನನಿಶ್ಚಿತಮಂತ್ರನಾಗಳುಂ
ಭೀತಪರಿಗ್ರಹಂ ಕೃಪಣನಾತ್ಮಬಲವ್ಯಸನಾತಿ ವಿಹ್ವಲಂ ೩೦೪

ವಸುಹೀನಂ ದುಶ್ಶಿಕ್ಷಂ
ವ್ಯಸನಯುತಂ ದೇಶಕಾಲಬಲರಹಿತಂ ಭಾ-
ವಿಸೆ ದೈವಹೀನನವಿನೀ-
ತಸೈನ್ಯನನ್ಯಾಯಿಯೆನಿಪ ನರಪನೊಳೆಂದುಂ ೩೦೫

ವಿಜಿಗೀಷುಗಳಪ್ಪ ಮಹೀ-
ಭುಜರೆಂದುಂ ಸಂಧಿಮಾಡರದಱಿಂ ಬಲಿಭು-
ಗ್ವ್ರಜಮುಖ್ಯ ಕೇಳುಲೂಕ
ವ್ರಜಪರನೊಳ್ ನಮಗೆ ಸಂಧಿಯಾಗದಮೋಘಂ ೩೦೬

ಆತ್ಮಾಮಿಷಸಂಧಿಯೆನಿಸುವುದು. ಸರ್ವಸ್ವವನ್ನೂ ಕೊಟ್ಟು ಪ್ರಾಣರಕ್ಷಣೆಯನ್ನು ಮಾಡಿಕೊಳ್ಳುವುದು ಉಪಗ್ರಹಸಂಧಿಯೆನಿಸುವುದು. ಭಂಡಾರವನ್ನೋ ಅದರ ಅರ್ಧವನ್ನೋ ಕೊಟ್ಟು ದೇಶವನ್ನು ರಕ್ಷಿಸುವುದು ಪರಿಕ್ರಮಸಂಧಿಯೆನಿಸುವುದು. ಸಾರವತ್ತಾದ ಭೂಮಿಯನ್ನು ಕೊಡುವುದು ಅರಿಪರದೂಷಣಸಂಧಿಯೆನಿಸುವುದು. ಹೇಳಿದಷ್ಟು ದ್ರವ್ಯವನ್ನು ಕಂದಾಯವಾಗಿ ಕೊಡುವುದು ಸ್ಕಂಧೋಪನಯಸಂಧಿಯೆನಿಸುವುದು. ಈ ಹದಿನಾರು ವಿಧದ ಸಂಧಿಗಳು ವಾಚಸ್ಪತಿನೀತಿಯಲ್ಲಿವೆ ; ಸೋಮದೇವ ನೀತಿಯಲ್ಲಿವೆ. ಇವುಗಳಲ್ಲಿ ನಾವು ಯಾವ ಸಂಧಿಯನ್ನು ಕೈಗೊಂಡರೂ ಅರಿಮರ್ದನನು ಒಡಂಬಡುವವನಲ್ಲ. ೩೦೪. ದಾಯಾದಿಗಳಿಂದ ಬಹಿಷ್ಕೃತನೂ ವ್ಯಸನಿಯೂ ದೈವಪರನೂ ಶಿಶುಬದ್ಧಿಯವನೂ ಸದಾ ಕೋಪಿಯೂ ಅಸತ್ಯನೂ ಅಸ್ಥಿರನೂ ಸುರಗುರು ದ್ವಿಜವೈರಿಯೂ ಬಹುದ್ವೇಷಿಯೂ ಭಯಗ್ರಸ್ತನೂ ವಿಕಳತಂತ್ರನೂ ಅನಿಶ್ಚಿತಮಂತ್ರನೂ ಕೃಪಣನೂ ೩೦೫. ವಸುಹೀನನೂ ದುಶ್ಶಿಕ್ಷನೂ ದೇಶಕಾಲಬಲರಹಿತನೂ ಅವಿನೀತಸೈನ್ಯನೂ ಆದ ಅರಸನು ಎಂದೆಂದೂ ಅನ್ಯಾಯಿಯೆನಿಸುವನು. ೩೦೬. ವಿಜಯಾಕಾಂಕ್ಷೆಯುಳ್ಳ ರಾಜರೆಂದೂ ಸಂಧಿಗೆ ಒಪ್ಪುವುದಿಲ್ಲ. ಅದರಿಂದ ದೇವಾ, ಗೂಬೆರಾಜನೊಡನೆ ನಮಗೆ ಸಂಧಿಯಾಗುವುದು

ಅದಜೆಂ ಕೌಶಿಕಂಗಳ್ಗಂ ನಮಗಂ ದುರ್ಧರಮಪ್ಪ ವೈರಮುಂಟಾಗಿಯುಂ ನಾವೆಲ್ಲರುಂ ರಾತ್ರ್ಯಂಧರುಮವರೆಲ್ಲರುಂ ದಿವಾಂಧರುಮಪ್ಪುದಜೆಂ ಸಂಧಾನಮೆಂತುಮಾಗಲಜೆಯದೆಂದು ನುಡಿದ ಚಿರಂಜೀವಿಯ ಮಾತಂ ಕೇಳ್ದು ಮೇಘವರ್ಣನಿಂತೆಂದಂ :

ಆಸ್ತಾಂತಾವನ್ಮಂತ್ರ
ಪ್ರಸ್ತಾವನಮಾರ್ಯ ನಮಗಮಾ ಕೌಶಿಕಪ-
ತ್ರಿ ಸ್ತೋಮವಲ್ಲಭಂಗಂ
ಪ್ರಸ್ತುತಮತಿವೈರಮಾದ ತೆಜನೇಂ ಮೊದಲೊಳ್ ೩೦೭

ಎನೆ ಚಿರಂಜೀವಿಯಿಂತೆಂದಂ :

ಶ್ಲೋ॥ ಸಾಪತ್ನಂ ವಸ್ತುಜಂ ಸ್ತ್ರೀಜಂ ವಾಗ್ಜೂತಮಪರಾಧಜಂ
ವೈರಪ್ರಭೇದ ನಿಪುಣ್ಯೈಃ ವೈರಂ ಪಂಚವಿಧಂ ಸ್ಮೃತಂ ॥೧೫೬॥

ಟೀ॥ ಇರ್ವರ್ ಪೆಂಡಿರ ದೆಸೆಯಿಂದಾದುದು ವಸ್ತುವಿನ ದೆಸೆಯಿಂದಾದುದು ಸ್ತ್ರೀಯರ ದೆಸೆಯಿಂದಾದುದು ವಾಗ್ದೋಷದಿಂದಾದುದು ಅಪರಾಧದಿಂದಾದುದುಯೆಂದಿಂತು ವೈರಮೈದು ತೆಜನಾಗಿಹುದು. ಅದಜೊಳಗೆ,

ನಮಗಂ ಕೌಶಿಕಲಕ್ಷ್ಮೀ
ರಮಣಂಗಂ ವಚನದೋಷದಿಂ ಕಾಕವಿಹಂ
ಗಮಚಕ್ರವರ್ತಿ ಶತ್ರು
ತ್ವಮಾಯ್ತು ವಿಹಗಪ್ರಧಾನರೆಲ್ಲರುಮಜೆಯಲ್ ೩೦೮

ಅದು ಕಾರಣದಿಂ,

ಮೊದಲೊಳ್ ವೈರಂ ವಾಗ್ದೋ-
ಷದಿನಾದುದು ಕೌಶಿಕಾಧಿಪತಿಗಂ ನಮಗಂ
ತೊದಳಲ್ಲುಪೇಕ್ಷಿಸಿರೆ ಬಳೆ-
ದುಮ ಬಲೆಕೀ ತೆಜದೆ ಸಕಲಕಾಕಾಧೀಶಾ ೩೦೯

ಎನೆ, ಮೇಘವರ್ಣಂ ವಾಗ್ದೋಷಮಾವ ಕಾರಣದಿನಾದುದೆನೆ ಚಿರಂಜೀವಿ ಪೇಟ್ಟಂ : ಏನಾನುಮೊಂದು ನೆವದೊಳ್ ಸಕಲಶಕುನಿಕುಲಪ್ರಧಾನರೆಲ್ಲಂ ನೆರೆದು ತಮ್ಮೊಳಿಂತೆಂದರ್ :

ಸಾಧ್ಯವಿಲ್ಲ. ವ॥ ಅದರಿಂದ ಗೂಬೆಗಳಿಗೂ ನಮಗೂ ದುರ್ಧರವಾದ ವೈರವುಂಟಾಗಿರುವುದರಿಂದ ನಾವೆಲ್ಲರೂ ರಾತ್ರ್ಯಂಧರೂ, ಅವರೆಲ್ಲರೂ ದಿವಾಂಧರೂ ಆಗಿರುವುದರಿಂದ ಸಂಧಾನವಾಗುವುದು ಸಾಧ್ಯವಿಲ್ಲ. ಅದಕ್ಕೆ ಮೇಘವರ್ಣನು ಹೀಗೆಂದನು: ೩೦೭. ನಮಗೂ ಆ ಉಲೂಕರಾಜನಿಗೂ ಅತಿವೈರವಾದ ಮೂಲಕಾರಣವೇನು ? ವ॥ ಅದಕ್ಕೆ ಚಿರಂಜೀವಿ ಹೀಗೆಂದನು : ಶ್ಲೋ॥ ಇಬ್ಬರು ಹೆಂಡಿರ ದೆಸೆಯಿಂದಲೂ ವಸ್ತುವಿನಿಂದಲೂ ಸ್ತ್ರೀಯರ ದೆಸೆಯಿಂದಲೂ ವಾಗ್ದೋಷದ ಕಾರಣದಿಂದಲೂ ಅಪರಾಧದ ಕಾರಣದಿಂದಲೂ ವೈರವುಂಟಾಗುವುದು. ೩೦೮. ಪಕ್ಷಿಗಳಿಗೆಲ್ಲ ತಿಳಿದಂತೆ ನಮಗೂ ಗೂಬೆರಾಜನಿಗೂ ವಚನ ದೋಷದಿಂದ ಶತ್ರುತ್ವವುಂಟಾಯಿತು. ೩೦೯. ಅದನ್ನು ಉಪೇಕ್ಷಿಸಿದುದರಿಂದ ಅದು ಬೆಳೆದು ಬಲಿಯಿತು. ಅದಕ್ಕೆ ಮೇಘವರ್ಣನು ವ॥ ವಾಗ್ದೋಷವು ಯಾವ ಕಾರಣದಿಂದ ಆಯಿತು ಎನ್ನಲು ಚಿರಂಜೀವಿಯು ಹೇಳಿತು : ಏನೋ ಒಂದು ನೆವದಿಂದ

ವಿನತಾನಂದನನೆಂದುಮಿಂದುಧವಳಶ್ರೀಮತ್ಪಯೋವಾರ್ಧಿಯೊಳ್
ವಿನತಾನಂದನನಂ ಮುಕುಂದನನಮೋಘಶ್ರಾಯಿಯಂ ಭಕ್ತಿಯಿಂ-
ದೆನಸುಂ ಸೇವಿಸುತಿರ್ಪನಾರ್ಗಮಳಿದೆಯ್ದಲ್ ನಮ್ಮ ಕಜ್ಜಂಗಳಂ
ನೆನೆಯಂ ನಮ್ಮೊಳಗೋರ್ವನಂ ಗುಣಗಣೈಕಾಧಾರನಂ ಧೀರನಂ ೩೧೦

ಪ್ರವರವಿಹಂಗಮ ಕುಲ ಚ-
ಕ್ರವರ್ತಿಪಟ್ಟಕ್ಕೆ ಯೋಗ್ಯನಂ ಮಾಡಿ ಮಹೋ-
ತ್ಸವದಿಂ ಮಾಡುವುದಭಿಷೇ-
ಕವನುತ್ತಮ ಭಗಣ ವಿನುತ ಲಗ್ನೋದಯದೊಳ್ ೩೧೧

ಎಂದು ಪತತ್ರಿಪ್ರಧಾನರೆಲ್ಲಮಾಳೋಚಿಸಿ ಕೌಶಿಕವಿಹಂಗಮಕ್ಕೆ ವಿಹಂಗಮಕುಲ ಚಕ್ರವರ್ತಿತ್ವಮಂ ಮಾಳ್ಪಮೆಂದು ನಿಶ್ಚಯಿಸಿ ಪಟ್ಟಬದ್ಧೋತ್ಸವಯೋಗ್ಯಂಗಳಪ್ಪ ಮಂಗಳದ್ರವ್ಯಂಗಳಂ ತನ್ನಿಮೆಂದು ಪೇೞಲೊಡಂ,

ವರದಾ ಸಿಂಧು ಸರಸ್ವತೀ ರವಿಸುತಾ ಗೋದಾವರೀ ನರ್ಮದಾ
ಸರಯೂ ಭೋಗವತೀ ಕವೇರತನಯಾ ತಾಪೀ ಪಯೋಷ್ಣೀ ಸರಿ-
ದ್ವರಗಂಗಾಸಲಿಲಂಗಳಂ ಹಿಮಕರಸ್ವಚ್ಛಂಗಳಂ ತಂಪರಾ-
ದರದಿಂ ಹೇಮಘಟಂಗಳಿಂ ಕೆಲಬರುದ್ಯತ್ಪತ್ರಿಗೋತ್ರೋತ್ತಮರ್ ೩೧೨

ವಿನುತಶ್ವೇತಾತಪತ್ರಾವಳಿಯರುಣಮಣಿಪ್ರಸ್ಫುಟೋತ್ತುಂಗಸಿಂಹಾ-
ಸನಮಂ ಗಂಗಾತರಂಗೋಪಮ ಚಮರರುಹಸ್ತೋಮಮಂ ಶಂಖಮಂ ಪ್ರಾಂ-
ಜನಮಂ ನಾನಾಪ್ರಕಾರಧ್ವಜಸಮುದಯಮಂ ತೂರ್ಯಸಂದೋಹಮಂ ಚಂ-
ದನಮಂ ಪ್ರತಿಪ್ರಧಾನರ್ ಕೆಲರಧಿಕತರಾನಂದದಿಂ ತಂದರಾಗಳ್ ೩೧೩

ಎಲ್ಲ ಗೂಬೆಗಳೂ ಒಟ್ಟಿಗೆ ಸೇರಿ ಒಮ್ಮೆ ತಮ್ಮೊಳಗೆ ಹೀಗೆ ಮಾತನಾಡಿಕೊಂಡರು: ೩೧೦. ಗರುಡನು ಮುಕುಂದನನ್ನು ಕ್ಷೀರಸಾಗರದಲ್ಲಿ ಸೇವಿಸುತ್ತಿರುವನು. ಅಲ್ಲಿಗೆ ಹೋಗುವುದು ನಮಗಾರಿಗೂ ಸಾಧ್ಯವಿಲ್ಲ, ಅವನು ನಮ್ಮ ಕೆಲಸವನ್ನು ನೆನೆಯುವುದಿಲ್ಲ, ಆದರಿಂದ ನಮ್ಮಲ್ಲಿ ಒಬ್ಬನನ್ನು ೩೧೧. ವಿಹಂಗಮ ಕುಲಚಕ್ರವರ್ತಿಪದವಿಗೆ ಯೋಗ್ಯನಾದವನನ್ನು ಆರಿಸಿ ಅವನಿಗೆ ಶುಭಲಗ್ನದಲ್ಲಿ ಪಟ್ಟಾಭಿಷೇಕ ಮಾಡಬೇಕೆಂದು ಮಂಗಳದ್ರವ್ಯಗಳನ್ನು ತನ್ನಿ ಎಂದು ಹೇಳಿದ. ೩೧೨. ಆಗ ಹೇಮಘಟ್ಟಗಳಲ್ಲಿ ವರದಾ, ಸಿಂಧು, ಸರಸ್ವತೀ, ಯಮುನಾ, ಗೋದಾವರೀ, ನರ್ಮದಾ, ಸರಯೂ, ಭೋಗವತೀ, ಕಾವೇರೀ, ತಾಪೀ, ಪಯೋಷ್ಣೀ, ಗಂಗಾ ಮೊದಲಾದ ಶ್ರೇಷ್ಠ ಪವಿತ್ರನದಿಗಳ ಪುಣ್ಯೋದಕಗಳನ್ನು ತುಂಬಿ ತಂದರು. ೩೧೩. ಉತ್ತುಂಗ ಸಿಂಹಾಸನವನ್ನೂ ಗಂಗಾತರಂಗದಂತಹ ಚಾಮರಸಮೂಹವನ್ನೂ, ಶಂಖವನ್ನೂ, ಪ್ರಾಂಜನವನ್ನೂ, ಧ್ವಜಗಳನ್ನೂ, ತೂರ್ಯಗಳನ್ನೂ, ಚಂದನ ಮೊದಲಾದ ನಾನಾ ಪ್ರಕಾರದ ಮಂಗಳ

ಕುಂಕುಮಪಂಕಮಂ ದಧಿಯನುಜ್ಜ್ವಳದರ್ಪಣಮಂ ನವೀನದೂ-
ರ್ವಾಂಕುರಮಂ ಹಿಮಾಂಶುಧವಳಾಂಬರಮಂ ಮಧುವಂ ಮನೋಹರಾ-
ಳಂಕರಣಂಗಳಂ ವರಸಿತಾಕ್ಷತಮಂ ರಮಣೀಯಪುಷ್ಪ ಮು-
ತ್ತಂ ಕರಿದಾನಮಂ ನೆರಪಿದರ್ ಕೆಲಬರ್ ವಿಹಗಾಧಿನಾಯರ್ ೩೧೪

ಕಮನೀಯ ಗಂಧ ಬಂಧುರ
ನಮೇರು ಮಂದಾರ ಪಾರಿಜಾತಾದಿ ಸುರ-
ದ್ರುಮಕುಸುಮದಾಮಮಂ ಶಕು-
ನಿಮುಖ್ಯರಾದರದೆ ತಂದರಾಗಳ್ ಕೆಲಬರ್ ೩೧೫

ಇಂತು ರಾಜ್ಯಾಭಿಷೇಕಯೋಗ್ಯಂಗಳಪ್ಪ ನಾನಾಪ್ರಕಾರ ಮಂಗಳದ್ರವ್ಯಂಗಳಂ ನೆರಪಿ ಕೌಶಿಕ ವಿಹಂಗಮಕ್ಕೆ ಪಟ್ಟಂಗಟ್ಟಲಿರ್ದವಸರದೊಳ್ ರಾಮರಾಜ್ಯಾಭಿಷೇಕಮಂಟಪಕ್ಕೆ ಕೈಕೆ ಬರ್ಪಂತುಲೂಕ ರಾಜ್ಯಾಭಿಷೇಕಮಂಟಪಮಾಗಿರ್ದ ವಿಶಾಲಮಪ್ಪ ಆಲದ ಮರದ ಮೇಲೆ ಕಾಗೆ ಬಂದು ಪಾಯ್ದುಂ ದುಸ್ಸ್ವರದಿಂ ಕರೆವುದುಮದಂ ಕೇಳ್ದಂಡಜ ಪ್ರಧಾನರೋರೊರ್ವರ ಮೊಗಮಂ ನೋಡಿ ನಮ್ಮ ಮಾಳ್ಪ ಕಜ್ಜಮಪ್ಪೊಡೆ ಮಹಾಪ್ರಾರಂಭಮದರಿಂ ಶಕುನನಿಮಿತ್ತಂಗಳಂ ನೋಡಿ ಮಾಡಲ್ವೇಳ್ಕುಂ. ಈ ವಾಯಸಸ್ವರಂ ದುಸ್ಸ್ವರಮಾಗಿರ್ದುದಿದುವುಂ ಪತತ್ರಿಗೋತ್ರಮಪ್ಪುದರಿಂದಿದರ್ಕಱಿಪಲೆವೇಳ್ಕು ಮೆಂದು ಸಮೀಪಕ್ಕೆ ಕರೆದು ಕೌಶಿಕಪಟ್ಟಬದ್ಧಮಂ ಸುವಿಸ್ತರಂ ಪೇೞೆ ಕೇಳ್ದು ವಾಯಸಂ ಶಕುನಿ ಸಮೂಹಕ್ಕಿಂತೆಂದುದು :

ಶುಭಲಕ್ಷಣಂಗೆ ಸತತಂ
ಪ್ರಭುಮಂತ್ರೋತ್ಸಾಹಶಕ್ತಿಯುಕ್ತಂಗೆ ಖಗ-
ಪ್ರಭುತೆಯನೀವುದು ಮಾಡುವು-
ದಭಿಷೇಕಮನಲ್ಲದಂದು ಮಾಣ್ಬುದಮೋಘಂ ೩೧೬

ದ್ರವ್ಯಗಳನ್ನೂ ಸಿದ್ಧಪಡಿಸಿ ೩೧೪. ಕುಂಕುಮ, ದಧಿ, ದರ್ಪಣ, ದೂರ್ವೆ, ಧವಳಾಂಬರ, ಮಧು, ಸಿತಾಕ್ಷತೆ, ಮುಂತಾದ ಮನೋಹರ ಅಲಂಕರಣಸಾಮಗ್ರಿಗಳನ್ನು ತಂದರು. ೩೧೫. ಮಧುರ ಪರಿಮಳದಿಂದ ಕೂಡಿದ ನಮೇರು, ಮಂದಾರ, ಪಾರಿಜಾತಾದಿ ಪುಷ್ಪಮಾಲೆಗಳನ್ನು ತಂದರು. ವ|| ಹೀಗೆ ಅವರು ಕೌಶಿಕವಿಹಂಗಮಕ್ಕೆ ಪಟ್ಟಗಟ್ಟಬೇಕೆಂಬ ಸಂದರ್ಭದಲ್ಲಿ ರಾಮರಾಜ್ಯಾಭಿಷೇಕದ ಮಂಟಪಕ್ಕೆ ಕೈಕೆ ಬಂದಂತೆ ಗೂಗೆರಾಜನ ರಾಜ್ಯಾಭಿಷೇಕಮಂಟಪವಾಗಿದ್ದ ವಿಶಾಲವಾದ ಆಲದ ಮರದ ಮೇಲೆ ಕಾಗೆ ಬಂದು ಕರ್ಕಶಸ್ವರದಿಂದ ಕೂಗಿತು. ಅದನ್ನು ಕೇಳಿ ಪಕ್ಷಿ ಪ್ರಧಾನರು ಒಬ್ಬೊಬ್ಬರು ಒಬ್ಬೊಬ್ಬರ ಮುಖ ನೋಡಿ ನಾವು ಮಾಡುವ ಕಾರ್ಯವಾದರೋ ಮಹಾಪ್ರಾರಂಭ. ಅದರಿಂದ ಶಕುನ ನಿಮಿತ್ತಗಳನ್ನು ನೋಡಿ ಮಾಡಬೇಕು. ಈ ವಾಯಸಸ್ವರ ದುಸ್ವರವಾಗಿದೆ. ಇದೂ ಪಕ್ಷಿಜಾತಿಯಾದುದರಿಂದ ಇದಕ್ಕೆ ತಿಳಿಸಬೇಕು ಎಂದು ಹತ್ತಿರಕ್ಕೆ ಕರೆದು ಕೌಶಿಕಪಟ್ಟಾಭಿಷೇಕದ ವಿಚಾರವಾಗಿ ವಿವರವಾಗಿ ತಿಳಿಸಲು ಕಾಗೆಯು ಪಕ್ಷಿಗಳ ಸಮೂಹಕ್ಕೆ ಹೀಗೆ ಹೇಳಿತು : ೩೧೬. ಶುಭಲಕ್ಷಣವಾದ ಪ್ರಭು ಮಂತ್ರೋತ್ಸಾಹ ಶಕ್ತಿಯುಕ್ತನೂ

ಅಂತುಮಲ್ಲದೆ, ಸುರಾಸುರಭಾಸುರಚೂಡಾಮಣಿಮರೀಚಿಮಾಲಾಲಂಕೃತಚಾರುಚರಣನೆನಿಪ್ಪ ವನಜನಾಭಂಗೆ ವಾಹನಮಾಗಿರ್ದ ತಾರ್ಕ್ಷ್ಯಾನ್ವಯದ ಪಕ್ಷಿನಿಕಾಯಮುಂ ಸಕಳ ಜಗಜ್ಜನವಂದ್ಯನೆನಿಪ ವನಜಾಸನಂಗೆ ವಾಹನಮಾಗಿರ್ದ ರಾಜಹಂಸಾನ್ವಯದ ಹಂಸಸಮಾಜಮುಂ ದೇವಾಧಿದೇವನಪ್ಪ ಮಹಾದೇವನ ತನೂಭವನುಂ ತಾರಕವಿದಾರಕನುಮಾಗಿರ್ಪ ಕುಮಾರಂಗೆ ವಾಹನಮಾಗಿರ್ದ ಮಯೂರ ವಂಶದ ಮಯೂರಮಂಡಲಮುಂ ರಘುಕುಲತಿಲಕನಪ್ಪ ರಾಮನ ಮನೋನಯನವಲ್ಲಭೆಯನುಯ್ವ ರಾವಣಂಗೆ ಭಂಗಂಮಾಡಿದ ಜಟಾಯುವಂಶದ ಪಕ್ಷಿಪ್ರಧಾನರುಂ ಲೋಕೈಕನೇತ್ರನುಂ ಶತಪತ್ರಮಿತ್ರನುಮಪ್ಪ ಆದಿತ್ಯಂ ತಮಗೆ ಪರಮಮಿತ್ರನೆಂಬಹಂಕಾರದ ಚಕ್ರವಾಕಚಕ್ರಮುಂ ಸುರಾಸುರನಿಕಾಯಮೆಕ್ಕೆಕ್ಕೆಯಿಂ ಕಡೆವ ಪಾಲ್ಗಡಲೊಳಗೊಗೆದ ಸಿರಿಯೊಡನುದಯಿಸಿದ ಅಮೃತಕಳಾಭರನೆನಿಪ್ಪ ಚಂದನಕಿರಣಾಮೃತಮನೀಂಟಿ ತಣಿದಿರ್ಪ ಚಾರುಚಕೋರಾನ್ವಯದ ಪತಂಗಪುಂಗವರುಂ ಶ್ರವಣಮಾತ್ರದಿಂ ನಾನಾ ವಿಧದೋದುಗಳನೋದಬಲ್ಲ ಶುಕಶಾರಿಕಾಸಂಕುಳಮುಂ ಮಕರಕೇತನಮಹೀವಲ್ಲಭ ಮಹಾಪ್ರತೀಹಾರಪದವೀವಿರಾಜಮಾನಮೆನಿಪ್ಪ ಕೋಕಿಲಕುಲಮುಂ ದರ್ಶನಮಾತ್ರದಿಂ ಶುಭದಂಗಳೆನಿಪ್ಪ ಭಾರದ್ವಾಜರಾಜಿಗಳುಂ ಸಲಕ್ಷಣ ಸೌಂದರ್ಯ ಸ್ತ್ರೀಜನನೇತ್ರ ಚಾಂಚಲ್ಯೋಪಮೆಗೆ ಬಣ್ಣಿಸಲ್ ಯೋಗ್ಯಮಪ್ಪ ಖಂಜನಪುಂಜಮುಂ ರಾಜಕುಮಾರರಾರೋಗಿಸು ವಮೃತಾಹಾರ ಪರೀಕ್ಷಾಯೋಗ್ಯಂಗಳೆನಿಪ್ಪ ಜೀವಂಜೀವಕಸಮೂಹಮುಂ ಮಹಾಸಮುದ್ರಕ್ಕುಪದ್ರವಂ ಮಾಡಿದ ರೌದ್ರಾಟೋಪಪ್ರಕೋಪಮಪ್ಪ ಟಿಟ್ಟಿಭಪ್ರಕರಮುಂ ಸಕಲಶಕುನಿಗಣಂಗಳೊಳಗೆ ಸತ್ತ್ವದೊಳಂ ಸಾಹಸದೊಳಮಧಿಕಮಪ್ಪ ಭೇರುಂಡಮಂಡಳಿಯುಂ ಅಂಡಜಕುಲಪ್ರಸೂತಂಗಳಾಗಿಯುಂ

ಆದವನಿಗೆ ಪಕ್ಷಿ ಪ್ರಭುತ್ವವನ್ನು ನೀಡಬೇಕು. ವ॥ ಅಲ್ಲದೆ ವನಜನಾಭನಿಗೆ ವಾಹನನಾಗಿರುವ ಗರುಡನ ವಂಶದ ಪಕ್ಷಿಗಳೂ, ವನಜಾಸನನ ವಾಹನನಾಗಿರುವ ರಾಜಹಂಸಾನ್ವಯದ ಹಂಸ ಸಮಾಜವೂ, ದೇವಾಧಿದೇವನಾದ ಮಹಾದೇವನ ಮಗನಾದವನೂ ತಾರಕನನ್ನು ಸೀಳಿದವನೂ ಆದ ಕುಮಾರನಿಗೆ ವಾಹನವಾಗಿದ್ದ ಮಯೂರವಂಶದ ಮಯೂರ ಸಮೂಹವೂ, ರಘುಕುಲತಿಲಕನಾದ ರಾಮನ ಮನೋನಯನವಲ್ಲಭೆಯನ್ನು ಒಯ್ದು ರಾವಣನನ್ನು ಭಂಗಿಸಿದ ಜಟಾಯುವಂಶದ ಪಕ್ಷಿಪ್ರಧಾನರೂ, ಲೋಕೈಕನೇತ್ರನೂ ಕಮಲಸಖನೂ ಆದ ಆದಿತ್ಯನು ತಮ್ಮ ಪರಮಮಿತ್ರನೆಂಬ ಹೆಮ್ಮೆಯುಳ್ಳ ಚಕ್ರವಾಕ ಸಮೂಹವೂ, ಸುರಾಸುರ ಸಮೂಹವು ಕಡೆದ ಕ್ಷೀರಸಾಗರದಲ್ಲಿ ಲಕ್ಷ್ಮಿಯೊಡನೆ ಹುಟ್ಟಿದ ಅಮೃತಕಿರಣನಾದ ಚಂದ್ರನ ಬೆಳುದಿಂಗಳನ್ನು ಕುಡಿದು ತೃಪ್ತರಾದ ಸುಂದರ ಚಕೋರ ಶ್ರೇಷ್ಠರೂ, ಕೇಳಿದ ಕೂಡಲೇ ಸಮಸ್ತ ಶಾಸ್ತ್ರಗಳನ್ನೂ ಓದಬಲ್ಲ ಶುಕಶಾರಿಕಾ ಸಮೂಹವೂ ಮನ್ಮಥರಾಜನ ಮಹಾಪ್ರತೀಹಾರನ ಪದವಿಯಲ್ಲಿ ವಿರಾಜಿಸುವ ಕೋಗಿಲೆಗಳೂ, ದರ್ಶನಮಾತ್ರದಿಂದ ಶುಭವನ್ನುಂಟುಮಾಡುವ ಭಾರದ್ವಾಜ ಪಕ್ಷಿಗಳೂ, ಸುಂದರಿಯರ ಕಡೆಗಣ್ಣಿನ ಚಂಚಲತೆಗೆ ಹೋಲಿಕೆಗೆ ವರ್ಣನಾಯೋಗ್ಯವಾದ ಗವುಜಲ ಹಕ್ಕಿಗಳೂ, ರಾಜಕುಮಾರರು ಉಣ್ಣುವ ಅಮೃತಾಹಾರವನ್ನು ಪರೀಕ್ಷಿಸಲು ಯೋಗ್ಯತೆಯುಳ್ಳ ಜೀವಂಜೀವಕಸಮೂಹವೂ, ಮಹಾಸಮುದ್ರಕ್ಕೆ ಉಪದ್ರವವನ್ನು ಮಾಡಿದ ಟಿಟ್ಟಿಭಸಮೂಹವೂ, ಪಕ್ಷಿಪ್ರಪಂಚವಲ್ಲೇ ಪರಾಕ್ರಮದಲ್ಲಿಯೂ ಸಾಹಸದಲ್ಲಿಯೂ ಹೆಚ್ಚು ಎನಿಸಿದ ಭೇರುಂಡಗಳೂ, ಪಕ್ಷಿಪ್ರಪಂಚದಲ್ಲಿ ಹುಟ್ಟಿಯೂ ಸೂರ್ಯಪುತ್ರರೆಂಬ

ಮಾರ್ತಂಡತನೂಜರೆನಿಪ್ಪ ಮಹಿಮೆಗಾಸ್ಪದಮಾಗಿ ದೀರ್ಘಾಯುಗಳೆನಿಪ್ಪ ವಾಯಸ ಸಮುದಾಯಮುಂ ಖಾಂಡವವನಮನಗ್ನಿಯಸೂಡಿದ ಪಾಂಡವಂಗುಪಕರಿಸಿ ಪಾಂಡವೋಪಕಾರಿಗಳಾಗಿಯುಂ ಮೇದಿನಿಯ ಜನಕ್ಕೆ ಶುಭಾಶುಭಾದಿಕಾರ್ಯಂಗಳಂ ಸೂಚಿಸುತಿರ್ಪ ಪೋದಗೆಗಳುಂ ಕಿರಾತಂಗೆ ತನ್ನಸುವನಿತ್ತು ಜಸಂಬಡೆದ ಕಪೋತವಂಶದ ಕಪೋತವ್ರಾತಮುಮಿರ್ದಂತೆ

ದಿವಸಾಂಧಂಗಪಲಕ್ಷಣಂಗೆ ಕ್ರೂರಂಗೆ ವಿಪ್ರಾನ್ವಯಾ
ಧವನಪ್ಪಂಗತಿದುರ್ಮುಖಂಗೆಸೆವ ಸತ್ಯತ್ಯಾಗಶೌರ್ಯೋಚಿತ
ವ್ಯವಸಾಯೇತರನಪ್ಪವಂಗೆ ಧಿಷಣರ್ ನಿಮ್ಮಂದಿಗರ್ ತೊಟ್ಟನಿಂ-
ತವಿಚಾರಕ್ರಮದಿಂದಮೀವುದೆ ಖಗೋದ್ಯಚ್ಚಕ್ರವರ್ತಿತ್ವಮಂ ೩೧೭

ಅವಿವೇಕಂ ಕ್ಷುದ್ರನೆನಿ-
ಪ್ಪವನರಸಾದಂದು ಭೂತಳಕ್ಕೆಲ್ಲಮುಪ-
ದ್ರವಮಕ್ಕುಮೆಂಬರೆಲ್ಲಂ
ಪ್ರವರನಯಾಗಮವಿದಗ್ಧರಪ್ಪ ಮುನೀಶರ್ ೩೧೮

ಅದಲ್ಲದೆಯಂ,

ಶ್ಲೋ॥ ಕ್ಷುದ್ರಮರ್ಥಪತಿಂ ಪ್ರಾಪ್ಯ ನ ತದ್ವಿವದತಾಂ ಸುಖಂ ॥೧೫೭॥

ಟೀ॥ ಕ್ಷುದ್ರನಪ ಅರ್ಥಪತಿಯ ಕೂಡೆ ಪ್ರಸಂಗವ ಮಾಡುವಂಗೆ ಸೌಖ್ಯಮಿಲ್ಲ, ಎಂಬ ಕಥೆಯಂತಕ್ಕುಮೆನೆ ಶಕುನಿಸಮೂಹಮದೆಂತೆಂದು ಬೆಸೆಗೊಳೆ ವಾಯಸಂ ಪೇಳ್ಗುಂ :

೨. ಕಪಿಂಜರನುಂ ಮೊಲನುಂ ಪುಲಿಯುಂ

ದಕ್ಷಿಣದೇಶದೊಳೊಂದು ಮಹಾಟವಿಯಿರ್ಪುದು ಅದರೊಳೊಂದು ಮಾವಿರ್ಪುದು. ಆ ಮಹಾವೃಕ್ಷದ ಕೆಲದಲ್ಲಿರ್ದ ಮಲ್ಲಿಕಾವಲ್ಲರಿಯೆ ತನಗರಮನೆಯಾಗೆ ಚತುರಕನೆಂಬುದೊಂದು

ಮಹಿಮಾಸ್ಪದರೆನ್ನಿಸಿದ ದೀರ್ಘಾಯುಗಳಾದ ವಾಯಸಸಮುದಾಯವೂ, ಖಾಂಡವವನವನ್ನು ಸುಡಲು ಅರ್ಜುನನಿಗೆ ಉಪಕರಿಸಿ ಪಾಂಡವೋಪಕಾರಿಗಳಾಗಿಯೂ ಪ್ರಪಂಚದ ಜನರಿಗೆ ಶುಭಾಶುಭಾದಿ ಕಾರ್ಯಗಳನ್ನು ಸೂಚಿಸುತ್ತಿರುವ ಪೋದಗೆಗಳೂ, ಬೇಡನಿಗೆ ತನ್ನ ಪ್ರಾಣವನ್ನಿತ್ತು ಯಶಸ್ಸನ್ನು ಪಡೆದ ಕಪೋತಗಳೂ ಇರುತ್ತಿರಲು ೩೧೭. ದಿವಾಸಾಂಧನೂ ಅಪಲಕ್ಷಣನೂ ಸತತಕ್ರೂರನೂ ಬ್ರಾಹ್ಮಣವಂಶಕ್ಕೆ ಅಧಮನೂ ಅತಿದುರ್ಮುಖನೂ ಸತ್ಯತ್ಯಾಗ ಕಾರ್ಯೋಚಿತ ವ್ಯವಸಾಯೇತರನೂ ಆದ ಗೂಬೆರಾಜನಿಗೆ ನಿಮ್ಮಂತಹ ಬುದ್ಧಿವಂತರು ಇದ್ದಕ್ಕಿದ್ದಂತೆಯೇ ವಿಚಾರಮಾಡದೆ ಪಕ್ಷಿಗಳ ಚಕ್ರವರ್ತಿತ್ವವನ್ನು ನೀಡುವುದೇ ? ೩೧೮. ಅವಿವೇಕಿಯೂ ಕ್ಷುದ್ರನೂ ಆದವನೂ ಅರಸನಾದಂದು ಲೋಕಕ್ಕೆಲ್ಲ ಉಪದ್ರವವುಂಟಾಗುವುದು. ಅಲ್ಲದೆ, ಶ್ಲೋ॥ ಕ್ಷುದ್ರನಾದ ಒಡೆಯನೊಡನೆ ವ್ಯವಹರಿಸುವವನಿಗೆ ಸುಖವಿಲ್ಲ ಎಂಬ ಕಥೆಯಾದೀತು ಎನ್ನಲು ಪಕ್ಷಿಸಮೂಹವು ಅದೇನೆಂದು ಕೇಳಲು ಕಾಗೆ ಹೇಳಿತು : ವ॥ ದಕ್ಷಿಣ ದೇಶದಲ್ಲಿ ಒಂದು ಮಹಾ ಅರಣ್ಯವಿತ್ತು, ಅದರಲ್ಲಿ ಒಂದು ಮಾವಿನ ಮರವಿತ್ತು, ಆ ಮಹಾವೃಕ್ಷದ ಬಳಿಯಲ್ಲಿದ್ದ ಮಲ್ಲಿಗೆಯ ಬಳ್ಳಿಯೇ ತನಗೆ ಅರಮನೆಯಾಗಿರಲು ಚತುರಕನೆಂಬ ಒಂದು ಕಪಿಂಜರನಿತ್ತು, ಅದಕ್ಕೂ

ಕಪಿಂಜರನಿರ್ಕುಂ. ಆದರ್ಕಮೆನಗಂ ಮಿತ್ರತ್ವಂ ಸಲುತ್ತಿರಲೊಂದುದಿನ ಕಪಿಂಜರನಾಹಾರಾರ್ಥಂ ವಿಹರಿಸಲ್ಪೋಗಿ ತಡೆವುದುಂ ಅಲ್ಲಿಗೆ ಕಲಹಪ್ರಿಯನೆಂಬುದೊಂದು ಮೊಲಂ ಬಂದಾ ಪಕ್ಕಿಯ ಮನೆಯಂ ಪೊಕ್ಕಿರ್ಪುದುಂ ಕಿಱಿದಾನುಂ ಬೇಗಕ್ಕೆ ಕಪಿಂಜರಂ ಬಂದು ಕಂಡೆನ್ನ ಮನೆಯಂ ನೀನೇಕೆ, ಪೊಕ್ಕೆ, ಪೊಱಮಡೆನಲೊಡಂ ಎನ್ನ ಕೆಳೆಯನ ಕಜ್ಜದ ಕೇಡನಾಂ ಕಂಡದರ್ಕೆ ಮಧ್ಯಸ್ಥನಾಗಿ ನೀವಿರ್ವರುಮಿಲ್ಲಿರ್ದು ಬವರಂಗೆಯಲ್ವೇಡ ತಕ್ಕರ ಸಮೀಪಕ್ಕೆ ಪೋಗಿ ವಿಚಾರಂಗೆಯ್ದು ಅವರ್ ಪೇೞ್ದಂತೆ ಕೇಳಿಮನೆ ಶಶಕ ಪಿಂಜರಂಗಳಂತೆಗೆಯ್ವೆವೆಂದು ಪೋಪುದುಮೀ ಚೋದ್ಯಮಂ ನೋೞ್ಪೆನೆಂದಾನುಮವಱ ಪಿಂತಪಿಂತನೆ ಪೋದೆಂ. ಅನ್ನೆಗಮವು ಕಿಱಿದಂತರಮಂ ಪೋಗಿ ವಿಶಾಲಕರ್ಣನೆಂಬ ಶಾರ್ದೂಲಂ ಜಂಘಾಬಲಮಿಲ್ಲದೆ ತೊೞಲಲಾಱದೆ ಇನ್ನಾಹಾರಮನೆಂತು ಪಡೆವೆನೆಂದು ಚಿಂತಿಸಿ

ವಾಕ್ಯಂ ॥ ಅನಾಥಂ ಲಿಂಗಮುದ್ದಿಷ್ಟಂ ನ ಮೋಕ್ಷಾಯ ವಿಧೀಯತೇ ॥೧೫೮॥

ಟೀ॥ ಗುರುವಿಲ್ಲದಂಥ ಲಿಂಗಲಾಂಛನವು ಮೋಕ್ಷವ ಮಾಡದು.

ಎಂಬುದು ಶಾಸ್ತ್ರಾರ್ಥಮುಂಟು. ಆನುಮೀ ತೀರ್ಥದ ಸಮೀಪದೊಳ್ ತಾಪಸರೂಪಧಾರಿಯಾಗಿರ್ದು ಸಾರೆ ಬಂದುದೇನಾನುಂ ಪ್ರಾಣಿಗಳಂ ತಿಂದು ಕಾಲಮಂ ಕೞೆವೆನೆಂದು ತಪೋರೂಪಮಂ ಕೈಕೊಂಡಿರ್ದ ಶಾರ್ದೂಲಮಂ ಕಂಡು ಕಲಹಪ್ರಿಯನಿಂತೆಂದುದು : ನಾವೀ ದಿವ್ಯ ತಾಪಸನ ಮುಂದೆ ವಿಚಾರಂಗೆಯ್ವಂ ಬಾಯೆಂಬುದುಂ ಕಪಿಂಜರನದಱೊಡನಿಂತೆಂದಂ : 'ಎನಿತು ಪುಲಿ ನಿಯಮಸ್ಥನಾದೊಡಂ ಶ್ರಾವಕನಲ್ಲಂ' ಎಂಬ ನಾಣ್ನುಡಿಯುಂಟು, ಅದಱಿಂ ನಾವದಱ ಸಮೀಪಕ್ಕೆ ಪೋದೊಡೆ ಬಾಣಸಿನ ಮನೆಯನಱಸಿ ಮೊಲಂ ಪೊಕ್ಕಂತಕ್ಕುಮೆಂದೆರಡುಂ ನುಡಿವುದುಮದನಾ ವ್ಯಾಘ್ರತಾಪಸಂ ಕೇಳ್ದಿವೆಂತುಂ ನಂಬುವಂತೆ ಮಾೞ್ಪೆನೆಂದೊಂದೆ ಕಾಲೊಳ್ನಿಂದಾದಿತ್ಯಂ ಎತ್ತಲ್ ಪೋದನತ್ತಲೆ ಮುಖಮಾಗಿರ್ಪುದಂ ಕಂಡು ಚತುರಕನಿಂತೆಂದಂ : ಈ ಬಕವೇಷಿ ಸಮ್ಮಂ ಕಂಡು ವಿಕೃತವೇಷದಿಂ ನಿಂದಪನಿವನಂ ನಂಬಲ್ಬಾರದು.

ನನಗೂ ಮಿತ್ರತ್ವವುಂಟಾಯಿತು. ಒಂದು ದಿನ ಕಪಿಂಜರನು ಆಹಾರಕ್ಕಾಗಿ ಅಲೆದಾಡಿ ಬರುವುದು ತಡವಾಗಲು ಅಲ್ಲಿಗೆ ಕಲಹಪ್ರಿಯ ಎಂಬ ಒಂದು ಮೊಲವು ಬಂದು ಆ ಹಕ್ಕಿಯ ಮನೆಯನ್ನು ಹೊಕ್ಕಿರಲು ಸ್ವಲ್ಪ ಸಮಯದಲ್ಲೇ ಕಪಿಂಜರನು ಬಂದು ಕಂಡು ತನ್ನ ಮನೆಯನ್ನು ಏಕೆ ಹೊಕ್ಕೆ, ಹೊರಕ್ಕೆ ಹೋಗು ಎಂದಿತು. ನನ್ನ ಗೆಳೆಯನ ಕಾರ್ಯದ ಕೇಡನ್ನು ನಾನು ಕಂಡು ಅದಕ್ಕೆ ಮಧ್ಯಸ್ಥನಾಗಿ ನೀವಿಬ್ಬರೂ ಇಲ್ಲಿ ಜಗಳವಾಡುವುದು ತರವಲ್ಲ, ಯೋಗ್ಯರಾದವರ ಬಳಿಗೆ ಹೋಗಿ ವಿಚಾರಿಸಿ ಅವರು ಹೇಳಿದಂತೆ ಕೇಳಿ ಎಂದು ಹೇಳಿದೆ. ಅದಕ್ಕೆ ಮೊಲವೂ ಕಪಿಂಜರನೂ ಹಾಗೆಯೇ ಆಗಲಿ ಎಂದು ಹೋಗಲು ಈ ಚೋದ್ಯವನ್ನು ನೋಡುವೆನೆಂದು ನಾನೂ ಅವರ ಹಿಂದೆ ಹಿಂದೆಯೇ ಹೋದೆನು. ಅಷ್ಟರಲ್ಲಿ ಅವು ಸ್ವಲ್ಪ ದೂರ ಹೋದುವು. ವಿಶಾಲಕರ್ಣನೆಂಬ ಶಾರ್ದೂಲವು ಜಂಘಾಬಲವಿಲ್ಲದೆ ಅಲೆದಾಡಲಾರದೆ ಇನ್ನು ಆಹಾರವನ್ನು ಹೇಗೆ ಪಡೆಯಲಿ ಎಂದು ಚಿಂತಿಸುತ್ತಿತ್ತು. ವಾ॥ ಗುರುವಿಲ್ಲದ ಲಿಂಗಲಾಂಛನವು ಮೋಕ್ಷವನ್ನುಂಟುಮಾಡಲಾರದು. ವ॥ ನಾನೂ ಈ ತೀರ್ಥದ ಸಮೀಪದಲ್ಲಿ ತಾಪಸರೂಪಧಾರಿಯಾಗಿದ್ದು ಹತ್ತಿರ ಬಂದ ಯಾವುದಾದರೂ ಪ್ರಾಣಿಗಳನ್ನು ತಿಂದು ಕಾಲವನ್ನು ಕಳೆಯುವೆನೆಂದು ತಪೋರೂಪವನ್ನು ಕೈಕೊಂಡಿದ್ದ ಶಾರ್ದೂಲವನ್ನು ಕಂಡು ಕಲಹಪ್ರಿಯನು ಹೀಗೆಂದಿತು : ನಾವು ಈ

ಅದೆಂತೆನೆ,

ಶ್ಲೋ॥ ಬಾಲ ಚುಂಬಿತ ನಾರೀ ಚ ತೃಣಚೋರಶ್ಚ ಬ್ರಾಹ್ಮಣಃ ॥೧೫೯॥

ಎಂಬ ಕಥೆಯಂತಕ್ಕುಮೆನೆ ಶಶಕನದೆಂತೆನೆ ಕಪಿಂಜರಂ ಪೇೞ್ಗುಂ :

೩. ನಾರಾಯಣಭಟ್ಟನ ಕಥೆ

ಬೆಳೆದೊಱಗಿದ ಕಱವೆಯ ಕ-
ಯ್ಗಳಿನೊಪ್ಪುವ ತಿಳಿಗೊಳಂಗಳಿಂ ರಮ್ಯವನಾ-
ವಳಿಯಿಂ ಸೊಗಯಿಸುವುದು ಭೂ-
ತಳಮಂಡನಮೆನಿಸಿ ಮಳಯವಿಷಯಂ ಜಗದೊಳ್ ೩೧೯

ಆ ವಿಷಯದೊಳ್ ನಂಬಿನಾರಾಯಣಮೆಂಬ ಅಗ್ರಹಾರಮುಂಟು. ಅದಱೊಳ್ ನಾರಾಯಣಭಟ್ಟನೆಂಬನೋರ್ವ ಪಾರ್ವಂ ತೀರ್ಥಯಾತ್ರಾಪರನಾಗಿ ಗಂಗಾಸ್ನಾನಮುಮಂ ಕುರುಕ್ಷೇತ್ರದೊಳ್ ದಾನಮುಮಂ ಮಾಡುವೆನೆಂದು ವೇಣುದಂಡದೊಳ್ ನೇರಾಣೆಯ ಪೊನ್ನಂ ತೀವಿ ಪೆಱರಱಿಯದಂತಾಗಿ ಮಾಡಿಕೊಂಡಾರ್ಗಂ ಪೇೞದರ್ಧರಾತ್ರಿಯೊಳ್ ಮನೆಯಂ ಪೊಱಮಟ್ಟುತ್ತರಾಭಿಮುಖಮಾಗಿ ಬರ್ಪನ್ನಂ ಮತ್ತೊರ್ವಂ ಧೂರ್ತಶಿಖಾಮಣಿಯೆಂಬ ಪಾರ್ವಂ ಕಂಡೀತನ ಕೈಯೊಳೇನಾನುಂ ದ್ರವ್ಯಮಾಗದಿರದೆಂದು ಭಟ್ಟರೇ! ನೀವೆತ್ತಲ್ ಪೋಪಿರೆನೆ ಗಂಗಾಸ್ನಾನಂಗೆಯ್ಯಲ್

ದಿವ್ಯತಾಪಸನ ಮುಂದೆ ವಿಚಾರಿಸೋಣ, ಬಾ ಎನ್ನಲು ಕಪಿಂಜರನು ಅದರೊಡನೆ ಹೀಗೆಂದನು :"ಹುಲಿ ಎಷ್ಟು ನಿಯಮಸ್ಥನಾದರೂ ಶ್ರಾವಕನಾಗಲಾರದು" ಎಂಬ ನಾಣ್ಣುಡಿಯುಂಟು. ಅದರಿಂದ ನಾವು ಇದರ ಸಮೀಪಕ್ಕೆ ಹೋದರೆ ಅಡುಗೆಯ ಮನೆಯನ್ನು ಅರಸಿಕೊಂಡು ಹೊಲವು ಹೊಕ್ಕಂತಾಗುವುದು. ಅದನ್ನು ಆ ವ್ಯಾಘ್ರತಾಪಸನು ಕೇಳಿ ಇವು ಹೇಗಾದರೂ ನಂಬುವಂತೆ ಮಾಡುವೆನೆಂದು ಒಂದೇ ಕಾಲಲ್ಲಿ ನಿಂತು ಆದಿತ್ಯನು ಎತ್ತ ಕಡೆ ಹೋಗುವನೋ ಅತ್ತ ಕಡೆ ಮುಖಮಾಡಿಕೊಂಡಿರಲು ಕಂಡು ಚತುರಕನು ಹೀಗೆಂದನು : ಈ ಬಕವೇಷಿ ನಮ್ಮನ್ನು ಕಂಡು ವಿಕೃತವೇಷದಿಂದ ನಿಂದಿರುವನು. ಇವನನ್ನು ನಂಬಬಾರದು. ಅಲ್ಲದೆ, ಶ್ಲೋ॥ 'ಬಾಲ ಚುಂಬಿತ ನಾರೀಚ ತೃಣಚೋರಶ್ಚ ಬ್ರಾಹ್ಮಣಃ' ಎಂಬ ಕಥೆಯಂತಾದೀತು ಎನ್ನಲು ಮೊಲ ಅದೇನು ಎನ್ನಲು ಕಪಿಂಜರವು ಹೇಳಿತು : ೩೧೯. ಜಗತ್ತಿನಲ್ಲಿ ಮಲಯರಾಜ್ಯವು ಬೆಳೆದೊರಗಿದ ಕಳವೆಯ ಕಯ್ಗಳಿಂದಲೂ ತಿಳಿಗೊಳಗಳಿಂದಲೂ ರಮ್ಯ ವನಾವಳಿಗಳಿಂದಲೂ ಭೂತಳ ಮಂಡನವೆನಿಸಿ ಸೊಗಯಿಸುತ್ತಿತ್ತು. ವ॥ ಆ ರಾಜ್ಯದಲ್ಲಿ ನಂಬಿನಾರಾಯಣ ಎಂಬ ಅಗ್ರಹಾರವುಂಟು. ಅಲ್ಲಿ ನಾರಾಯಣಭಟ್ಟನೆಂಬ ಒಬ್ಬ ಬ್ರಾಹ್ಮಣನು ತೀರ್ಥಯಾತ್ರಾಪರನಾಗಿ ಗಂಗಾಸ್ನಾನವನ್ನೂ ಕುರುಕ್ಷೇತ್ರದಲ್ಲಿ ದಾನವನ್ನೂ ಮಾಡುವೆನೆಂದು ಬಿದಿರಿನ ದಂಡದಲ್ಲಿ ಅಪರಂಜಿ ಚಿನ್ನವನ್ನು ತುಂಬಿ ಬೇರೆಯವರಿಗೆ ತಿಳಿಯದಂತೆ ಬಚ್ಚಿಟ್ಟುಕೊಂಡು ಯಾರಿಗೂ ತಿಳಿಸದೆ ಅರ್ಧರಾತ್ರಿಯ ಹೊತ್ತು ಮನೆಯಿಂದ ಹೊರಟು ಉತ್ತರಾಭಿಮುಖವಾಗಿ ಬರುತ್ತಿದ್ದನು. ಮತ್ತೊಬ್ಬ ಧೂರ್ತಶಿಖಾಮಣಿಯೆಂಬ ಬ್ರಾಹ್ಮಣನು ಕಂಡು ಈತನ ಕೈಯಲ್ಲಿ ಏನಾದರೂ ದ್ರವ್ಯವಿರದೆ ಇರಲಿಕ್ಕಿಲ್ಲ ಎಂದು ಭಾವಿಸಿ, ಭಟ್ಟರೇ ನೀವು ಎತ್ತ ಹೋಗುವಿರಿ ಎನ್ನಲು ಗಂಗಾಸ್ನಾನ ಮಾಡಲು ಹೋಗುವೆನು ಎಂದನು. ನಾನೂ ಬರುವೆನು ಎನ್ನಲು

ಪೋದಪ್ಪೆನೆಂದೊಡಾನುಂ ಬಂದಪ್ಪೆನೆಂದೊಡಾ ಪಾರ್ವಂ ನೆರಂಬಡೆದೆನೆಂದು ಕರಮೊಳ್ಳಿತ್ತೆಂದು ಬನ್ನಿಮೆಂದು ಇರ್ವರುಮನೇಕದೇಶಂಗಳಂ ಕಳಿದು ಚಂಪಾನಗರಮನೆಯ್ದೆವಂದಾ ಪೊೞಲಂ ಪೊಕ್ಕುಮೊರ್ವ ಪಾರ್ವನ ಮನೆಗೆ ಬಂದು ಸಂಧ್ಯಾವಂದನಂಗೆಯ್ದುಂಡು ಕುಳ್ಳಿರ್ಪುದುಮಾ ಗೃಹಸ್ಥನ ಪೆಂಡತಿ ಮುಖದೊಳ್ ಸೆಱಂಗನಿಕ್ಕಿಕೊಂಡು ಮಗಂಗೆ ಮೊಲೆಯೂಡುವುದಂ ಕಂಡು ದೇಶಾಂತರಿಗರಿದೇನೆಂದು ಬೆಸಗೊಂಡೊಡಾ ಮನೆಯ ಪಾರ್ವನಿಂತೆಂದಂ : ಎನ್ನ ಪೆಂಡತಿ ಪತಿವ್ರತೆ ಪರಪುರುಷನ ಮುಖಾವಲೋಕನಂಗೆಯ್ಯಳದುಕಾರಣದಿಂದೀ ಶಿಶು ಗಂಡುಗೂಸಪ್ಪುದಱಿಂ ನೋಡಿದೊಡೆ ದೋಷಮೆಂದು ತನ್ನ ಮುಖಮಂ ಮುಚ್ಚಿಕೊಂಡು ಮೊಲೆಯೂಡಿದಪಳೆಂದು ಪೇೞ್ದುದುಂ ನಾರಾಯಣಭಟ್ಟಂ ವಿಸ್ಮಯಂಬಟ್ಟಿಂದಿನ ದಿವಸಮೀ ಚೋದ್ಯಮನಿಲ್ಲಿರ್ದು ನೋೞ್ಪೆನೆಂದಿರ್ಪನ್ನಮಾ ಮನೆಯ ಪಾರ್ವನರಮನೆಗೆ ಪೋಗಿ ಕಿಱಿದು ಪೊೞ್ತು ತವೆದಿರಲಾ ಜಾಱೆ ತನ್ನ ಮನೆಯ ಪಸುಗಾವ ಗೋವನಂ ಪಿಡಿದು ಸುರತಕ್ರೀಡೆಯಾಡುವುದಂ ನಾರಾಯಣಭಟ್ಟಂ ಕಂಡಾ ಪಾಣ್ಬೆಯ ಡಂಭತನಕ್ಕೆ ಬೆಱಗಾಗಿ ಮಱುದಿನಮರ್ಧರಾತ್ರಿಯೊಳೆರ್ದು ಪಯಣಂಬೋಗಿ ನಿಶಾವಸಾನಸಮಯಮಪ್ಪಾಗಳ್,

ಮದವದ್ವನ್ಯಗಜೇಂದ್ರದಾನಮಲಿನೋದ್ಯದ್ಭೃಂಗಸಂಘಾತಸಂ-
ಪದೆಯಂ ಬಾಲಮೃಣಾಳಜಾಲಕಲಸತ್ಸ್ವಾದುಪ್ರಪುಷ್ಪೋತ್ಕರ
ಚ್ಛದೆಯಂ ತೀರನವೀನಚೂತ ಕುಸುಮವ್ರಾತಾಸವೋನ್ಮತ್ತಷ-
ಟ್ಪದೆಯಂ ನರ್ಮದೆಯಂ ಮಹಾಹ್ರದೆಯನಾ ವಿಪ್ರಂ ಸಮಂತೆಯ್ದಿದಂ ೩.೨೦

ಆ ಬ್ರಾಹ್ಮಣನು ನನಗೊಬ್ಬ ಸಹಾಯಕನಾದನು ಒಳ್ಳೆಯದಾಯಿತು ಎಂದು ಭಾವಿಸಿ ಬನ್ನಿ ಎಂದನು. ಇಬ್ಬರೂ ಅನೇಕ ದೇಶಗಳನ್ನು ದಾಟಿ ಚಂಪಾನಗರವನ್ನು ಸೇರಿ ಆ ಪಟ್ಟಣದ ಒಬ್ಬ ಬ್ರಾಹ್ಮಣನ ಮನೆಗೆ ಬಂದು ಸಂಧ್ಯಾವಂದನೆಯನ್ನು ಮಾಡಿ ಉಂಡು ಕುಳಿತುಕೊಂಡಿದ್ದನು. ಆಗ ಆ ಗೃಹಸ್ಥನ ಹೆಂಡತಿ ಮುಖದ ಮೇಲೆ ಸೆರಗು ಹಾಕಿಕೊಂಡು ಮಗನಿಗೆ ಮೊಲೆಯೂಡುವುದನ್ನು ಕಂಡು ದೇಶಾಂತರಿಗರು ಇದೇನು ಎಂದು ಕೇಳಲು ಆ ಮನೆಯ ಬ್ರಾಹ್ಮಣನು ಹೀಗೆಂದನು. ನನ್ನ ಹೆಂಡತಿ ಪತಿವ್ರತೆ, ಪರಪುರುಷರ ಮುಖವನ್ನು ನೋಡಲಾರಳು. ಅದರಿಂದ ಈ ಶಿಶು ಗಂಡುಮಗುವಾದುದರಿಂದ ನೋಡಿದರೆ ದೋಷವೆಂದು ತನ್ನ ಮುಖವನ್ನು ಮುಚ್ಚಿಕೊಂಡು ಮೊಲೆಕೊಡುತ್ತಿರುವಳು ಎಂದು ಹೇಳಿದನು. ನಾರಾಯಣಭಟ್ಟನು ವಿಸ್ಮಿತನಾಗಿ ಇಂದು ಈ ಚೋದ್ಯವನ್ನು ಇಲ್ಲಿದ್ದು ನೋಡುವೆನು ಎಂದಿರಲು ಆ ಮನೆಯ ಬ್ರಾಹ್ಮಣನು ಅರಮನೆಗೆ ಹೋಗಿ ಸ್ವಲ್ಪ ಹೊತ್ತಾಗಲು ಆ ಜಾರೆ ತನ್ನ ಮನೆಯ ಹಸುಗಳನ್ನು ಕಾಯುವ ಗೋವಳನನ್ನು ಹಿಡಿದು ಸುರತಕ್ರೀಡೆಯಾಡುವುದನ್ನು ಕಂಡು ನಾರಾಯಣಭಟ್ಟನು ಆ ಹಾದರಗಿತ್ತಿಯ ಡಂಭತನಕ್ಕೆ ಬೆರಗಾಗಿ ಮರುದಿನ ಅರ್ಧರಾತ್ರಿಯಲ್ಲೆದ್ದು ಪ್ರಯಾಣಮಾಡಿ ಮುಂಜಾನೆಯ ಸಮಯವಾಗಲು ೩.೨೦. ಮದಿಸಿದ ಕಾಡಾನೆಗಳ ಮದಜಲಕ್ಕೆ ಮುತ್ತುವ ಭೃಂಗಗಳ ಸಮೂಹದಿಂದ ಸಂಪನ್ನಳಾಗಿಯೂ ಎಳೆಯ ತಾವರೆ ದಂಟಿನ ಸಮೂಹದಿಂದ ಶೋಭಿಸುವ ಮಧುರಮ್ಯ ಪುಷ್ಪಗಳಿಂದ ಕಾಂತಿಯುಕ್ತಳಾಗಿಯೂ ದಡದಲ್ಲಿಯ ಹೊಸಮಾವಿನ ಹೂವಿನ ಮಧುವಿನಿಂದ ಉನ್ಮತ್ತವಾದ ತುಂಬಿಗಳಿಂದ ಕೂಡಿದವಳೂ ಮಹಾಸರೋವರಗಳಿಂದ ಕೂಡಿದವಳೂ ಆದ ನರ್ಮದಾನದಿಯನ್ನು ಆ ವಿಪ್ರನು

ಅಂತೆಯ್ದುವಂದಾ ಮಹಾನದಿಯೊಳ್ ಸ್ನಾನಂಗೆಯ್ವೆಂದು ಭಟ್ಟಂ ನಿಲ್ವುದುಮಾ ಧೂರ್ತಶಿಖಾಮಣಿ ನಾರಾಯಣಭಟ್ಟಂಗೆ ನಂಬುಗೆಯನೆಂತು ಮಾಳ್ಪೆನೆಂದು ಚಿಂತಿಸುವ ಸಮಯದೊಳ್ ಪತ್ತಿ ಬಂದುದೊಂದು ಪುಲ್ಲಂ ಕಂಡು ಭಟ್ಟರ್ಗೆ ತೋಱಿ ನೋಡಿರೆ ! ಪಾಪ ಕರ್ಮನೆಂ, ಪರದ್ರವ್ಯಾಪಹರಣಂಗೆಯ್ದೆನೆನ್ನಂತು ನಿಕೃಷ್ಟನಾವನುಮಿಲ್ಲೆನೆ ಭಟ್ಟರೆಂದರಿದಂ ನೀವಱಿತು ತಂದುದಿಲ್ಲದೊಂದು ಪುಲ್ ತಲೆಯೊಳ್ ಪತ್ತಿ ಬಂದುದರ್ಕೇನುಂ ದೋಷಮಿಲ್ಲೆಂದೊಡಾ ಧೂರ್ತಂ ಮತ್ತಮಿಂತೆಂದಂ:

ಈ ಪುಲ್ಲದೆಂತು ಬಂದೊಡ-
ಮೇ ಪಡೆಮಾತೆನಗೆ ದೋಷಮುಕ್ಕುಮಮೋಘಂ
ಪಾಪಕ್ಕಂಜುವೆನದಱಿಂ-
ದೀ ಪುಲ್ಲಂ ಮತ್ತಮಲ್ಲಿ ಬಿಸುಟಾಂ ಬರ್ಪೆಂ ೩.೨೧

ಎಂದು ನೀವೀ ಮುಂದಣೂರೊಳೊಂದು ದಿವಸಮಿರಿಮೆಂದಾ ಪುಲ್ಲಂ ಪಿಡಿದು ಮಗುಳ್ದು ಕಿಱಿದಂತರಂ ಬಂದು ಪುಲ್ಲನಲ್ಲಿಯೆ ಬಿಸುಟು ಕಿಱಿದು ಪೊಳ್ತುಗಳೆದು ಮಗುಳ್ದಿರುಳರೆಜಾವ ಮಾದಾಗಳ್ ಭಟ್ಟನಿರ್ದೆಡೆಯನಱಸುತ್ತುಂ ಬಂದು ಕಂದು ಪಥಶ್ರಮದೊಳಂ ಕ್ಷುಧೆಯೊಳಂ ಕರಂ ಬಳಲ್ದೆನೆನೆ ನಾರಾಯಣಭಟ್ಟನಿಂತೆಂದಂ : ನೀವಿಂತಿರ್ದೊಡೆ ಪೊತ್ತುಪೋದಪುದು ಬಳಿಕ್ಕೆ ಭೈಕ್ಷಮನಿಕ್ಕುವರಿಲ್ಲ, ಈಗಳೆ ಪೋಗಿಮೆನೆ ಧೂರ್ತನೆಂದನೀ ಪೊಳ್ತು ಪೋದೊಡೆ ನಾಯ್ಗಳ್ ತಿಂಗುಮೆಂತು ಪೋಪೆನೆನೆ ಭಟ್ಟನಾ ದುಷ್ಟನಂ ಶಿಷ್ಯನೆಂದು ಬಗೆದು ತನ್ನ ಕಯ್ಯ ಪೊನ್ನ ಕೋಲಂ

ಸೇರಿದನು. ವ।। ಆ ಮಹಾನದಿಯಲ್ಲಿ ಸ್ನಾನಮಾಡಬೇಕೆಂದು ನಿಲ್ಲಲು ಆ ಧೂರ್ತಶಿಖಾಮಣಿಯು ನಾರಾಯಣಭಟ್ಟನಿಗೆ ನಂಬಿಕೆಯನ್ನು ಹೇಗೆ ಹುಟ್ಟಿಸಲಿ ಎಂದು ಚಿಂತಿಸುವ ಸಮಯದಲ್ಲಿ ಅಲ್ಲೇ ಹತ್ತಿರಕ್ಕೆ ಬಳಿದು ಬಂದ ಹುಲ್ಲನ್ನು ಕಂಡು ಭಟ್ಟನಿಗೆ ತೋರಿಸಿ, ನೋಡಿ, ನಾನು ಪಾಪಕರ್ಮಿ, ಪರದ್ರವ್ಯಾಪಹರಣ ಮಾಡಿದೆ. ನನ್ನಷ್ಟು ನಿಕೃಷ್ಟನು ಯಾರೂ ಇಲ್ಲ ಎನ್ನಲು ಭಟ್ಟರು ಹೀಗೆಂದರು : ಇದನ್ನು ನೀವು ಅರಿತು ತಂದುದಲ್ಲ ; ಇಲ್ಲಿ ಇದೊಂದು ಹುಲ್ಲ ತಲೆಯ ಮೇಲೆ ಏರಿ ಬಂದುದಕ್ಕೆ ಏನೂ ದೋಷವಿಲ್ಲ ಎನ್ನಲು ಆ ಧೂರ್ತನು ಮತ್ತೂ ಹೀಗೆಂದನು : ೩.೨೧. ಈ ಹುಲ್ಲು ನನ್ನ ಮೇಲೆ ಹೇಗೆ ಬಂದರೆ ತಾನೆ ಏನು, ನನಗೆ ದೋಷ ತಪ್ಪಿದುದಲ್ಲ, ಪಾಪಕ್ಕೆ ನಾನು ಅಂಜುವೆನು. ಅದರಿಂದ ಈ ಹುಲ್ಲನ್ನು ನಾನು ಮತ್ತೊಮ್ಮೆ ಅಲ್ಲಿಯೇ ಬಿಸುಟು ಬರುವೆನು, ವ।। ನೀವು ಈ ಮುಂದಿನ ಊರಿನಲ್ಲಿ ಒಂದು ದಿವಸ ಇರಿ ಎಂದು ಆ ಹುಲ್ಲನ್ನು ಹಿಡಿದು ಸ್ವಲ್ಪದೂರ ಬಂದು ಹುಲ್ಲನ್ನು ಅಲ್ಲಿಯೇ ಬಿಸುಟು ಸ್ವಲ್ಪ ಹೊತ್ತು ಬಿಟ್ಟು ಪುನಃ ರಾತ್ರಿ ಅರ್ಧಜಾವವಾದಾಗ ಭಟ್ಟರಿದ್ದ ಸ್ಥಳವನ್ನು ಅರಸುತ್ತ ಬಂದು ಕಂಡು ಮಾರ್ಗಾಯಾಸದಿಂದಲೂ ಹಸಿವೆಯಿಂದಲೂ ತುಂಬ ಬಳಲಿರುವೆನು ಎನಲು ನಾರಾಯಣಭಟ್ಟನು ಹೀಗೆಂದನು : ನೀವು ಹೀಗೆಯೇ ಇದ್ದರೆ ಹೊತ್ತು ಹೋಗುವುದು ; ಬಳಿಕ ಭಿಕ್ಷೆಯನ್ನು ಹಾಕುವವರಿಲ್ಲ ; ಈಗಲೇ ಹೋಗಿ. ಆದಕ್ಕೆ ಆ ಧೂರ್ತನು ಈ ಹೊತ್ತು ಹೋದರೆ ನಾಯಿಗಳು ಕಚ್ಚುವುವು ; ಹೇಗೆ ಹೋಗಲಿ ಎನ್ನಲು, ಭಟ್ಟನು ಆ ದುಷ್ಟನನ್ನು ಶಿಷ್ಯನೆಂದೇ ಬಗೆದು ತನ್ನ ಕಯ್ಯ ಹೊನ್ನಕೋಲನ್ನು ಹಿಡಿದುಕೊಂಡು ಹೋಗಿ

ಪಿಡಿದು ಪೋಗಿ ಕಿಡಿಸದೆ ಕೊಂಡು ಬೇಗಂ ಬಾ ಪೋಗೆಂಬುದುಮಂತೆಗೆಯ್ವೆನೆಂದಾ ಧೂರ್ತಶಿಖಾಮಣಿ ಸ್ವಾರ್ಥ ಸಿದ್ಧಿಯಂ ಮಾಡಿಕೊಂಡು ಸ್ವೇಚ್ಛೆಯೊಳೋಡಿಪೋದಂ. ಆ ಭಟ್ಟನಾತಂ ಬಂದಪನೆಂದಿರುಳೆಲ್ಲಂ ಜಾಗರಮಿರ್ದು ನೇಸಱ್ ಮೂಡೆ ನಾಡೆಯುಂ ಪೊೞ್ತಿರ್ದು ಎಂತುಂ ಬರವಂ ಕಾಣದೆ ಚಿಂತಾಕ್ರಾಂತನಾಗಿ ಕಿಱಿದುಬೇಗಮನಿರ್ದು. ವಾಕ್ಯಂ ।। ಶ್ರೇಯಾಂಸಿ ಬಹುವಿಘ್ನಾನಿ ಟೀ।। ನಲ್ಗೆ ತಡೆಗಳು ಪೇರಳವಾಗಿಪುವು-ಎಂಬುದುಂಟೆಂದರ್ಥದಬಿಲಂ ಪತ್ತುವಿಟ್ಟು ಮತ್ತಂ ಸತ್ತ್ವಾವಲಂಬಿಯಾಗಿ ಪೋಗಿ ತೀರ್ಥಸ್ನಾನಾರ್ಥಂ ಬರ್ಪನಮೊಂದು ಮಹಾರಣ್ಯದ ಪುಣ್ಯತೀರ್ಥದ ತಡಿಯೊಳೊಂದು ಮಹಾಕಾಯನಪ್ಪ ಬಕಂ ಶಕುನಿಗಳ್ಗೆ ಧರ್ಮವ್ಯಾಖ್ಯಾನಂಗೆಯ್ವುದಂ ಮತ್ಸ್ಯಂಗಳ್ ಮೊದಲಾಗಿ ಜಲಚರಂಗಳುಂ ವಿವಿಧವಿಹಂಗಂಗಳುಂ ಕೇಳ್ವುದಂ ಕಂಡು ಭಟ್ಟನೀ ಚೋದ್ಯಮಂ ನೋೞ್ಪೆನೆಂದು ಆದಱ ಕೆಲದೊಳ್ ಪರ್ವಿ ಕೊರ್ವಿ ಸುರ್ವುಗೊಂಡ ಮಾಧವಿಯ ಪೊದಱೊಳಡಂಗಿರ್ದು ನೋೞ್ಪುದುಂ ಕಿಱಿದುಂ ಬೇಗಕ್ಕೆ ಆ ಬಕಂ ವ್ಯಾಖ್ಯಾನಮುಂ ಮಾಣ್ದು ಇನ್ನಾಂ ನಿಯಮಂಗೆಯ್ವೆಂ ನೀವೆಲ್ಲ ಪೋಗಿಮೆನೆ ಪಕ್ಷಿಗಳೆಲ್ಲಂ ಒರ್ಮೆಯೆ ಪಾಱಿ ಪೋದವು. ಜಲಚರಂಗಳೊಂದೊಂದೆ ಪೋಪಾಗಳ್ ಪಿಂದುೞಿದ ಮತ್ಸ್ಯಮನೊಂದೊಂದಂ ಪಿಡಿದು ತಿಂದುದಂ ಭಟ್ಟಂ ಕಂಡು ಚೋದ್ಯಂಬಟ್ಟು ಅಲ್ಲಿಂ ತಳರ್ದು ಕೆಲವಾನುಂ ದಿವಸಕಂದುಜ್ಜಯಿನಿಯುಮನೆಯ್ದುವುದುಮಾ ಪೊಱವೊೞಲೊಳೊಂದು ನಂದನವನದೊಳಗೊರ್ವಂ ತಾಪಸರೂಪಧಾರಿಯಾಗಿ ತಪನತಾಪಕ್ಕೆ ಮೊಗಮನೊಡ್ಡಿ ನಾಲ್ಕುಂ ದೆಸೆಯೊಳಂ ಕಿಚ್ಚನೊಟ್ಟಿ ನಡುವೆ ನಿಂದಿರ್ದನಂ ಕಂಡು

ತಾಳು ಮಾಡದೆ ತೆಗೆದುಕೊಂಡು ಬಾ, ಹೋಗು ಎನ್ನಲು ಹಾಗೆಯೇ ಆಗಲಿ ಎಂದು ಆ ಧೂರ್ತಶಿಖಾಮಣಿ ಸ್ವಾರ್ಥಸಿದ್ಧಿಯನ್ನು ಮಾಡಿಕೊಂಡು ಸ್ವೇಚ್ಛೆಯಿಂದ ಓಡಿಹೋದನು. ಆ ಭಟ್ಟನು ಆತನು ಬರುತ್ತಾನೆ ಎಂದು ಆ ರಾತ್ರಿಯೆಲ್ಲ ಎಚ್ಚರವಾಗಿದ್ದು ಹೊತ್ತು ಮೂಡಿದ ಮೇಲೂ ಸ್ವಲ್ಪ ಕಾಲವಿದ್ದು ಎಷ್ಟು ಹೊತ್ತಾದರೂ ಅವನನ್ನು ಕಾಣದೆ ಚಿಂತಾಕ್ರಾಂತನಾದನು. ವಾ।। ಶ್ರೇಯಸ್ಸಿಗೆ ವಿಘ್ನಗಳು ಬಹಳ ಎಂದು ಹೇಳುತ್ತಾರೆ. ಹಣದ ದುಃಖವನ್ನು ಪರಿಹರಿಸಿಕೊಂಡು ಸತ್ತ್ವಾವಲಂಬಿಯಾಗಿ ಹೋಗಿ ತೀರ್ಥಸ್ನಾನಾರ್ಥವಾಗಿ ಬರುತ್ತಿದ್ದನು. ಅಲ್ಲಿ ಒಂದು ಮಹಾರಣ್ಯದ ಪುಣ್ಯತೀರ್ಥದ ತಡಿಯಲ್ಲಿ ಒಂದು ಮಹಾಕಾಯದ ಬಕನು ಶಕುನಿಗಳಿಗೆ ಧರ್ಮವ್ಯಾಖ್ಯಾನ ಮಾಡುತ್ತಿದ್ದುದನ್ನು ಮತ್ಸ್ಯಗಳು ಜಲಚರಗಳೂ ವಿವಿಧ ಪಕ್ಷಿಗಳೂ ಕೇಳುತ್ತಿದ್ದುದನ್ನು ಕಂಡು ಭಟ್ಟನು ಈ ಚೋದ್ಯವನ್ನು ನೋಡುವೆನೆಂದು ಅದರ ಕೆಲದಲ್ಲಿದ್ದ ಹಬ್ಬಿ ಕೊಬ್ಬಿ ಹುಲುಸಾಗಿ ಬೆಳೆದ ಮಾಧವಿಯ ಹೊದರಿನಲ್ಲಿ ಅಡಗಿದ್ದು ನೋಡುತ್ತಿದ್ದನು. ಸ್ವಲ್ಪ ಸಮಯದಲ್ಲಿ ಆ ಬಕನು ವ್ಯಾಖ್ಯಾನವನ್ನು ಮುಗಿಸಿ ಇನ್ನು ನಾನು ನಿಯಮವನ್ನು ಆಚರಿಸುವೆನು. ನೀವೆಲ್ಲರೂ ಹೋಗಿರಿ ಎನ್ನಲು ಹಕ್ಕಿಗಳೆಲ್ಲವೂ ಒಮ್ಮೆಗೆಯೇ ಹಾರಿಹೋದುವು. ಜಲಚರಗಳು ಒಂದೊಂದಾಗಿ ಹೋಗುವಾಗ ಹಿಂದೆ ಉಳಿದ ಮತ್ಸ್ಯಗಳನ್ನು ಒಂದೊಂದಾಗಿ ಹಿಡಿದು ತಿನ್ನುತ್ತಿದ್ದುದನ್ನು ಕಂಡು ಭಟ್ಟನು ಚೋದ್ಯಪಟ್ಟನು. ಅಲ್ಲಿಂದ ಹೊರಟು ಭಟ್ಟನು ಕೆಲವು ದಿವಸಗಳಲ್ಲಿ ಉಜ್ಜಯಿನಿಯನ್ನು ತಲುಪಿದನು. ಆ ನಗರದ ಹೊರಭಾಗದಲ್ಲಿ ಒಂದು ನಂದನವನದಲ್ಲಿ ಒಬ್ಬ ತಾಪಸರೂಪಧಾರಿಯಾಗಿ ಸೂರ್ಯನ ಬಿಸಿಲಿಗೆ ಮುಖವನ್ನೊಡ್ಡಿ ನಾಲ್ಕು ದಿಕ್ಕಿನಲ್ಲಿಯೂ ಕಿಚ್ಚನ್ನು ಒಟ್ಟಿ ನಡುವೆ

ಇದು ಕೌತುಕಮಾಗಲೆ ವೇ-
ಳ್ಪುದು ನೋಡುವೆನಿದುಮನೆಂದು ತದ್ವಿಪ್ರಂ ನಿ-
ಲ್ವುದು ಮಪರಗಿರಿಯನೆಯ್ದಿದ-
ನದಿತಿಪ್ರಿಯಪುತ್ರನಬ್ಜಮಿತ್ರಂ ಮಿತ್ರಂ ೩.೨೨

ಅಂತಾದಿತ್ಯನಪರಗಿರಿಯನ್ನೆಯ್ದುವುದುಂ ಕವಿದ ಕಟ್ತಲೆಯೊಳಾ ಕೃತಕ ತಾಪಸಂ ತಪಮಂ ಸಂಹರಿಸಿ ನಿಲ್ವುದುಂ ಮತ್ತಮೊರ್ವನುತ್ತರಸಾಧಕನಾತಂಗುಡಲುಂ ತುಡಲುಂ ಪೊದೆಯಲುಂ ತಂದುಕೊಟ್ಟು ಕನ್ನದ ಮುಟ್ಟುಗಳಂ ತಂದೆನೆಂದು ಪೇಳ್ವುದುಂ ಕರಂ ಲೇಸಾಯ್ತು ನಡೆಯೆಂದಿರ್ವರುಂ ಪೋಗಿ ರಾಜಭವನಮಂ ಪೊಕ್ಕು ಕನ್ನಮನಿಕ್ಕಿ ಭಂಡಾರಮಂ ಕಳ್ದು ಪೊಱಮಡುವಾಗಳ್ ಕಾಪಿನವರ್ ಕಂಡು ಕಳಕುಳಂಗೆಯ್ಯೆ ತಳಾಱರ್ ಕೇಳ್ದು ಪರಿತಂದು ಬಟ್ಟೆಗಳೆಲ್ಲಮಂ ಕಟ್ಟಿಮೆಂದು ಪೇಳ್ವುದುಮಾ ಕಳ್ಳರ್ ಕೇಳ್ದು ಪೊನ್ನ ಪೊಱೆಯೊಳೆ ಪೋಗಲಿಂಬಿಲ್ಲದೆ ನಂದನವನಕ್ಕೆ ಬಂದು ತನ್ನ ತಂದ ಪೊನ್ನ ಪುದಿಕೆಯುಮನುಟಿಯುಮಂ ಬಳಪಮುಮಂ ಅಲ್ಲಿ ಪಟ್ಟಿರ್ದ ಭಟ್ಟನ ಮುಂದೆ ತಂದಿಕ್ಕಿ ತನ್ನ ಮುನ್ನಿನ ತಪೋರೂಪದೊಳಿರ್ದಂ ಅನ್ನೆಗಂ ತಳಾಱರ್ ಪರಿತಂದು ನಿಮ್ಮಡಿ ನಿಮ್ಮತ್ತಲ್ ಪೆಱರ್ ಮಾನಸರ್ ಬಂದರೊಳರೆ ಪೇಟಿಮೆನ ತಸ್ಕರತಾಪಸನಾ ಮರದಡಿಯೊಳೊರ್ಬಂ ಬಂದಿರ್ಪನೆಂದು ಸನ್ನೆಯಿಂ ಪೇಳ್ವುದುಮವರ್ ಪರಿತಂದು ನೋಡಿ ಪಟ್ಟಿರ್ದ ಭಟ್ಟನ ಮುಂದಿರ್ದ ಭಂಡಾರದ ಪುದಿಕೆಗಳುಮಂ ಕನ್ನದ ಮುಟ್ಟುಗಳುಮಂ ಕಂಡವಂ ಕೊಂಡಾ ಪಾರ್ವನ ತಲೆಯೊಳಿಟ್ಟರಸಂಗೆ ತಂದೊಪ್ಪಿಸುವುದುಮರಸನಾ ಭಟ್ಟನಂ ನೆಟ್ಟನೆ ಕಳ್ಳನೆಂದೆ ಬಗೆದೀ ದುಷ್ಟಂಗೆ ತಕ್ಕುದಂ ಮಾಡಿಮೆನೆ ನಾರಾಯಣಭಟ್ಟನಿಂತೆಂದಂ :

ನಿಂತುಕೊಂಡಿರುವವನನ್ನು ಕಂಡನು. ೩.೨೨. ಇದು ಕೌತುಕವಾಗಿರಲೇ ಬೇಕು ಇದನ್ನೂ ನೋಡುವೆನು ಎಂದು ಆ ವಿಪ್ರನು ನಿಲ್ಲಲು ಸೂರ್ಯಸ್ತಮಾನವಾಯಿತು. ವ॥ ಆಗ ಕವಿದ ಕತ್ತಲೆಯಲ್ಲಿ ಆ ಕೃತಕತಾಪಸನು ತನ್ನ ತಪಸ್ಸನ್ನು ನಿಲ್ಲಿಸಲು ಮತ್ತೊಬ್ಬ ಉತ್ತರಸಾಧಕನು ಆತನಿಗೆ ಉಡಲೂ ತೊಡಲೂ ಹೊದೆಯಲೂ ತಂದುಕೊಟ್ಟು ಕನ್ನ ಹಾಕುವ ಸಾಧನಗಳನ್ನು ತಂದೆನೆಂದು ಹೇಳಿದನು. ಅದಕ್ಕೆ ಅವನು ಬಹಳ ಚೆನ್ನಾಯಿತು, ನಡೆ ಎಂದು ಇಬ್ಬರು ಹೋಗಿ ರಾಜಭವನವನ್ನು ಹೊಕ್ಕು ಕನ್ನವನ್ನು ಹಾಕಿ ಭಂಡಾರವನ್ನು ಕದ್ದು ಹೊರಹೊರಡಲು ಕಾವಲುಗಾರರು ಕಂಡು ಗಲಾಟೆ ಎಬ್ಬಿಸಿದರು. ತಳವಾರರು ಆ ರಾದ್ಧಾಂತವನ್ನು ಕೇಳಿ ಓಡಿಬಂದು ಬಟ್ಟೆಗಳನ್ನೆಲ್ಲ ಕಟ್ಟಿ ಎಂದು ಹೇಳಲು ಆ ಕಳ್ಳರು ಕೇಳಿ ಹೊನ್ನ ಹೊರೆಯನ್ನು ಏನು ಮಾಡುವುದೆಂದು ತೋಚದೆ ನಂದನವನಕ್ಕೆ ಬಂದು ತಾವು ತಂದ ಪೆಟ್ಟಿಗೆಯನ್ನೂ ಉಳಿಯನ್ನೂ ಬಳಪವನ್ನೂ ಅಲ್ಲಿ ಮಲಗಿದ್ದ ಭಟ್ಟನ ಮುಂದೆ ತಂದು ಹಾಕಿ ತನ್ನ ಮೊದಲಿನ ತಪೋರೂಪದಲ್ಲಿದ್ದನು. ಅಷ್ಟರಲ್ಲಿ ತಳವಾರರು ಓಡೋಡಿ ಬಂದು ಪೂಜ್ಯರೇ, ನಿಮ್ಮಲ್ಲಿಗೆ ಬೇರೆ ಯಾರಾದರೂ ಬಂದವರಿರುವರೇ ಹೇಳಿ ಎನ್ನಲು ಆ ಕಳ್ಳ ಋಷಿಯು ಆ ಮರದಡಿಯಲ್ಲಿ ಒಬ್ಬನು ಬಂದಿರುವನು ಎಂದು ಸನ್ನೆಯಿಂದ ಹೇಳಿದನು. ಅವರು ಓಡಿ ಬಂದು ನೋಡಿ ಮಲಗಿದ್ದ ಭಟ್ಟನ ಮುಂದಿದ್ದ ಭಂಡಾರದ ಪೆಟ್ಟಿಗೆಗಳನ್ನೂ ಕನ್ನ ಹಾಕುವ ಸಾಧನಗಳನ್ನೂ ಕಂಡು ಅವನ್ನು ಕದ್ದುಕೊಂಡು ಬಂದ ಆ ಹಾರುವನ ತಲೆಯ ಮೇಲೆ ಹೊರಿಸಿ ಅರಸನಿಗೆ ತಂದು ಒಪ್ಪಿಸಿದರು. ಅರಸನು ಆ ಭಟ್ಟನನ್ನು ನೇರವಾಗಿ ಕಳ್ಳನೆಂದೇ ಬಗೆದು ಈ ದುಷ್ಟನಿಗೆ ತಕ್ಕುದನ್ನು ಮಾಡಿ ಎನ್ನಲು ನಾರಾಯಣಭಟ್ಟನು ಹೀಗೆಂದನು ;

ಶ್ಲೋ॥ ಬಾಲ ಚುಂಬಿತನಾರೀ ಚ ತೃಣಚೋರಶ್ಚ ಬ್ರಾಹ್ಮಣಃ
ಧರ್ಮಂ ಕರೋತಿ ಶಕುನಿಃ ತಾಪಸೋ ನಾಸ್ತಿ ಸಂಶಯಃ ॥೧೬೦॥

ಎಂದೊಡರಸನದೆಂತೆಂದು ಬೆಸಗೊಳೆ ತತ್ಪ್ರಪಂಚಮನರಸಂಗೆ ಭಟ್ಟಂ ಸವಿಸ್ತರಂ ಪೇಳ್ವುದುಮರಸನಾ ಕೃತಕತಪೋಧಾರಿಯ ಗುಹೆಯಂ ಶೋಧಿಸೆ ಮುನ್ನ ತನ್ನ ಪೊಳಲೊಳ್ ಪೋದ ಪಲವು ವಸ್ತುಗಳಂ ಸನ್ನಂಗವೆರಸಿ ಕಂಡಾ ತಸ್ಕರತಪಸ್ವಿಗೆ ತಕ್ಕುದಂ ಮಾಡಿ ನಾರಾಯಣಭಟ್ಟಂಗೆ ಪಿರಿದಪ್ಪರ್ಥಮಂ ಕೊಟ್ಟು ಕಳುಪಿದಂ, ಅದು ಕಾರಣದಿಂ.

ಶ್ಲೋ॥ ಅತ್ಯಾಚಾರಮನಾಚಾರಮತಿನಿಂದ್ಯಮತಿಸ್ತುತಿಃ
ಅತಿಶೌಚಮಶೌಚಂ ವಾ ಷಡ್ವಿಧಂ ಧೂರ್ತಲಕ್ಷಣಂ ॥೧೬೧॥

ಟೀ॥ ಅತಿ ಆಚಾರಮುಂ ಅಂತೆ ಅತಿ ಅನಾಚಾರಮುಂ ಅತಿನಿಂದೆಯುಮತಿಸ್ತುತಿಯುಂ ಅತಿಶೌಚಮುಂ ಶೌಚಮಿಲ್ಲದಿರ್ಪುದುಂ ಈ ಆಱು ಗುಣಂಗಳುಂ ಧೂರ್ತಂಗೆ ಲಕ್ಷಣವು ಎಂಬುದು ನೀತಿಯುಂಟು. ಈ ಪುಲಿಯುಮತ್ಯಾಚಾರಮಾಗಿರ್ದುದು. ಇದಱ ಬಲೆಯೊಳ್ ಸಿಲ್ಕಲ್‌ವೇಡ ಪೆಱತೊಂದೆಡೆಗೆ ಪೋಪಂ ನಡೆಯೆನೆ ಮೊಲನಿಂತೆಂದುದು : ಇಂತಪ್ಪುಪಶಮಮನುಳ್ಳ ತಪಸ್ವಿ ನಮಗೆ ತಪ್ಪಲಱೆಯಂ, ಕಱೆಯಿಂ, ಗಳಪದಿರ್ ನಡೆಯೆನೆ ಕಪಿಂಜರನದರ್ಕಂಜಿ ನಿನಗಾದುಪಹತಿಯೆನಗಾದಪುದು ನಡೆಯೆಂಬೆರಡುಂ ಆ ಕಪಟತಾಪಸರೂಪಧಾರಿಯಪ್ಪ ದ್ವೀಪಿಯ ಸಮೀಪಕ್ಕೆ ಬಂದು ಪೊಡೆವಟ್ಟು ನಿಮ್ಮಡಿ ನಿಮ್ಮಲ್ಲಿ ವಿಚಾರಂಗೆಯ್ಯಲ್ ಬಂದೆವೆಮ್ಮಂ ವಿಚಾರಿಸಲ್ವೇಟ್ಕು

ಬಾಲ ಚುಂಬಿತ ನಾರೀ ಚ ತೃಣಚೋರಶ್ಚ ಬ್ರಾಹ್ಮಣಃ
ಧರ್ಮಂ ಕರೋತಿ ಶಕುನಿಃ ತಾಪಸೋ ನಾಸ್ತಿ ಸಂಶಯಃ ॥

ವ॥ ಅದಕ್ಕೆ ಅರಸನು ಅದೇನು ಎಂದು ವಿಚಾರಿಸಲು ಆ ಪ್ರಪಂಚವನ್ನೆಲ್ಲ ಭಟ್ಟನು ಸವಿವರವಾಗಿ ಹೇಳಲು ಅರಸನು ಆ ಕೃತಕತಪೋಧಾರಿಯ ಗುಹೆಯನ್ನು ಶೋಧಿಸಲು ಹಿಂದೆ ತನ್ನ ಪಟ್ಟಣದಲ್ಲಿ ಕಳುವಾದ ಹಲವು ವಸ್ತುಗಳನ್ನು ಕನ್ನ ಹಾಕುವ ಸಾಧನಗಳೊಡನೆ ಕಂಡು ಆ ಕಳ್ಳ ತಪಸ್ವಿಗೆ ತಕ್ಕುದನ್ನು ಮಾಡಿ ನಾರಾಯಣಭಟ್ಟನಿಗೆ ಅತಿಶಯ ಐಶ್ವರ್ಯವನ್ನು ಕೊಟ್ಟು ಕಳುಹಿಸಿದನು. ಆದರಿಂದ, ಶ್ಲೋ॥ ಅತ್ಯಾಚಾರವೆಸಗುವವನೂ, ಅನಾಚಾರದಲ್ಲಿ ನಿರತನಾಗಿರುವವನೂ, ಅತಿ ನಿಂದಿಸುವವನೂ, ಅತಿಸ್ತುತಿ ಮಾಡುವವನೂ, ಅತಿಶುಚಿಯಾಗಿರುವವನೂ ಈ ಆರು ವಿಧಗಳು ಧೂರ್ತರ ಲಕ್ಷಣಗಳಾಗಿವೆ ಎಂಬ ನೀತಿ ಇದೆ. ಈ ಹುಲಿಯೂ ಅತ್ಯಾಚಾರದಲ್ಲಿ ನಿರತವಾಗಿರುವುದು; ಇದರ ಬಲೆಗೆ ಸಿಕ್ಕಬೇಡ ; ಬೇರೊಂದು ಕಡೆಗೆ ಹೋಗೋಣ ನಡೆ ಎನ್ನಲು ಮೊಲವು ಹೀಗೆಂದಿತು: ಇಂತಹ ಉಪಶಮವುಳ್ಳ ತಪಸ್ವಿ ನಮಗೆ ಕೇಡನ್ನು ಮಾಡನು. ಅಂದಮೇಲೆ ಗಳಹಬೇಡ, ನಡೆಯೆನ್ನಲು ಕಪಿಂಜರನು ಅದಕ್ಕಂಜಿ ನಿನಗೆ ಆಗುವ ಕೇಡು ನನಗೂ ಸಂಭವಿಸುವುದು, ನಡೆ ಎಂದು ಎರಡೂ ಆ ಕಪಟ ತಾಪಸರೂಪಧಾರಿಯಾದ ದ್ವೀಪಿಯ ಸಮೀಪಕ್ಕೆ ಬಂದು ನಮಸ್ಕರಿಸಿದುವು. ಪೂಜ್ಯರೇ, ನಿಮ್ಮೊಡನೆ ವಿಚಾರಮಾಡಲು ಬಂದೆವು. ನಮ್ಮನ್ನು ವಿಚಾರಿಸಿಕೊಳ್ಳಬೇಕು ಎಂದು ಆಗ್ರಹಮಾಡಲು ನನ್ನ ನಿತ್ಯ ನಿಯಮಕ್ಕೆ ವಿಘ್ನಮಾಡದೆ ಬೇರೆಡೆಗೆ ಹೋಗಿ ಎನ್ನಲು ಅವುಗಳಿಗೆ ನಂಬಿಕೆ ಹುಟ್ಟಿತು. ಪೂಜ್ಯರೇ, ನೀವೇ ವಿಚಾರಿಸಿಕೊಳ್ಳಬೇಕು ಎಂದು ಪುನಃ ಬಿನ್ನಯಿಸಲು ದ್ವೀಪಿ ಅದಕ್ಕೆ ಒಪ್ಪಿ ಸಾವಧಾನವಾಗಿ

ವೆಂದಾಗ್ರಹಂಗೆಯ್ದೊಡೆ ಎನ್ನ ನಿತ್ಯನಿಯಮಕ್ಕೆ ವಿಘ್ನಂ ಮಾಡದೆ ಪೇಳತೊಂದೆಡೆಗೆ ಪೋಗಿಮೆಂಬುದುಮವರ್ಕೆ ನಂಬುಗೆ ಪುಟ್ಟೆ ನಿಮ್ಮಿಬ್ಬರ ನೀವೆ ವಿಚಾರಿಸಲ್ವೇಟ್ಟುಮೆನೆ ದ್ವೀಪಿಯದರ್ಕೊಡಂಬಟ್ಟು ಸಾವಧಾನವಾಗಿ ನಿಂದಿಂತೆಂದುದು : ಇಂದಿಂಗೊಂದು ತಿಂಗಳುಪವಾಸಂ ಗೆಯ್ದೆನಮ ಕಾರಣದಿಂ ಧಾತುಕ್ಷಯಮಾಗಿ ಕಿವಿ ಕೆತ್ತು ಕೇಳಲ್ ಬರ್ಪುದಿಲ್ಲ ಕರ್ಣೋಪಾಂತಮಂ ಸಾರ್ದು ಪಿರಿಯ ಸರದಿಂ ಪೇಳಿಮೆಂದೊಡೆ ಆ ಪ್ರಾಣಿಗಳೆರಡುಂ ಶ್ರವಣಸಮೀಪಸ್ಥಂಗಳಾಗಿ ತಮ್ಮ ಬಂದ ವೃತ್ತಾಂತಮೆಲ್ಲಮುಮಂ ಪೇಳೆ ಕೇಳ್ದನೇಕಪ್ರಕಾರದಿಂ ವಿಚಾರಿಸುತ್ತುಮಿರೆ ಶಶಕ ಪಿಂಜರಂಗಳೆರಡುಂ ಜವಂಗೆಟ್ಟು ಮೆಯ್ಮಱೆದಿರ್ದುದನಱಿದು ಪಿಡಿದು ತಿಂದುದು. ಅದಱಿಂ,

ಶ್ಲೋ॥ ಕ್ಷುದ್ರಮರ್ಥಪತಿಂ ಪ್ರಾಪ್ಯ ನ ತದ್ವಿವದತಾಂ ಸುಖಂ
ಉಭಾವೇವ ಕ್ಷಯಂ ಯಾತೌ ಯಥಾ ಶಶ ಕಪಿಂಜಲೌ ॥೧೬೨॥

ಟೀ॥ ಕ್ಷುದ್ರನಪ್ಪರ್ಥಪತಿಯನೆಯ್ದಿ ಕೂಡಿದವರ್ಗೆ ಸುಖಮಿಲ್ಲ, ಅದು ಹೇಗೆಂದೊಡೆ ಮೊಲನುಂ ಕಪಿಂಜಲನೆಂಬ ಹಕ್ಕಿಯುಂ ಕೇಡನೈದಿದ ಹಾಂಗೆ. ಎಂದಾ ಕಾಗೆ ಗೂಗೆಗೇಗೈಯ್ಯುಂ ರಾಜ್ಯಮಾಗದಂತೆ ಎನಿತಾನುಮುಪಕಥೆಗಳಂ ಪೇಳೆ ಕೇಳ್ದು,

ಶಕುನಿಗಣಮೆಲ್ಲಮಭಿಷೇ
ಕಕಾರ್ಯಮಂ ಮಾಣ್ದು ಪರೆದುಪೋದವು ನಿಜನೀ
ಡಕುಳಕ್ಕೆ ಕಾಗೆ ವಕ್ರಿಸೆ
ಸಕಳಪ್ರಾರಂಭಕಾರ್ಯಮಂ ಮಾಣದರಾರ್ ೩.೨೩

ಅಂತಾ ಶಕುನಿಸಮುದಾಯಂ ಪರೆದು ಪೋಪುದಂ ಕಂಡು ಕೋಪಾರುಣೀಭೂತಲೋಚನ ನುಳೂಕರಾಜಂ ಕಂಕಂಗೆ ಮುಳಿದಿಂತೆಂದಂ ಎನೆಲವೋ ! ನಿಮಗಂ ನಮಗಂ ಮುನ್ನಾದ ಪಗೆಯೊಂದುಮಿಲ್ಲಮೆನಗಾದ ರಾಜ್ಯಮಂ ಕಿಡಿಸಿದುದಲ್ಲದೆನ್ನುಮಂ ಕಿಡೆ ನುಡಿದೆ. ನಿನ್ನನೊರ್ವನಂ

ಹೀಗೆಂದಿತು : ಇಂದಿಗೆ ಒಂದು ತಿಂಗಳಿನಿಂದ ಉಪವಾಸವ್ರತದಲ್ಲಿರುವೆ ; ಅದರಿಂದ ಧಾತುಕ್ಷಯವಾಗಿ ಕಿವಿ ಕೇಳುವುದಿಲ್ಲ ; ಕಿವಿಯ ಹತ್ತಿರಕ್ಕೆ ಬಂದು ದೊಡ್ಡ ಸ್ವರದಿಂದ ಗಟ್ಟಿಯಾಗಿ ಹೇಳಿ ಎನ್ನಲು ಆ ಪ್ರಾಣಿಗಳೆರಡೂ ಕಿವಿಯ ಬಳಿಗೆ ಹೋಗಿ ತಾವು ಬಂದ ವೃತ್ತಾಂತವೆಲ್ಲವನ್ನೂ ಹೇಳಲು ಕೇಳಿ ಅನೇಕ ಬಗೆಯಿಂದ ವಿಚಾರಿಸುತ್ತಿರಲು ಮೊಲ ಕಪಿಂಜರಗಳೆರಡೂ ಶಕ್ತಿಗುಂದಿ ಮೆಯ್ಮರೆದಿದ್ದುದನ್ನು ತಿಳಿದು ಹಿಡಿದು ತಿಂದಿತು. ಅದರಿಂದ, ಶ್ಲೋ॥ ಮೊಲವೂ, ಕಪಿಂಜರನೆಂಬ ಹಕ್ಕಿಯೂ ಕೇಡನ್ನು ಹೊಂದಿದ ಹಾಗೆ ಕ್ಷುದ್ರನಾದ ಅರ್ಥಪತಿಯನ್ನು ಸೇರಿದವರಿಗೆ ಸುಖವಿಲ್ಲ. ಎಂದು ಆ ಕಾಗೆ ಏನು ಮಾಡಿದರೂ ಗೂಬೆಗೆ ರಾಜ್ಯವಾಗದಂತೆ ಅನೇಕ ಉಪಕಥೆಗಳನ್ನು ಹೇಳಲು ಕೇಳಿ ೩.೨೩. ಪಕ್ಷಿಸಮೂಹವೆಲ್ಲವೂ ಅಭಿಷೇಕಕಾರ್ಯವನ್ನು ಬಿಟ್ಟು ತಮ್ಮ ಗೂಡುಗಳಿಗೆ ಚೆದರಿ ಹೋದುವು. ಕಾಗೆಯು ವಕ್ರಿಸಲು ಸಕಲಪ್ರಾರಂಭಕಾರ್ಯವನ್ನೂ ನಿಲ್ಲಿಸಿ ಬಿಡದವರು ಯಾರಿದ್ದಾರೆ ? ವ॥ ಹಾಗೆ ಆ ಪಕ್ಷಿಸಮೂಹವು ಹಾರಿಹೋದುದನ್ನು ಕಂಡು ಕೋಪಾರುಣೀಭೂತಲೋಚನನಾದ ಉಲೂಕರಾಜನು ಕಾಗೆಯ ಮೇಲೆ ಕೋಪಿಸಿಕೊಂಡು ಹೀಗೆಂದನು: ಏನೆಲವೋ ! ನಿಮಗೂ ನಮಗೂ ಹಿಂದೆ ಆದ ಹಗೆ ಒಂದೂ ಇಲ್ಲ ; ಅಲ್ಲದ ನನಗಾದ ರಾಜ್ಯವನ್ನು ತಪ್ಪಿಸಿದೆ, ಅಲ್ಲದೆ ನನ್ನನ್ನೂ ನಿಂದಿಸಿದೆ. ನಿನ್ನೊಬ್ಬನನ್ನು ಕೊಂದೆನಾದರೆ ಮುಂದೆ

ಕೊಂದೆನಪ್ಪೊಡೆ ಮುಂದಪ್ಪ ಪಗೆಗಳ್ಗೆ ಕೊಂದಂತಕ್ಕುಮದಱಿಂದಿಲ್ಲಿ ನಿನ್ನಂ ಕೊಲ್ಲೆನೆಂದು ಮತ್ತಮಿಂತೆಂದಂ:

ಕುರುಕುಲಮಂ ಬಕಾರಿ ಭುಜಗವ್ರಜಮಂ ಭುಜಗಾರಿ ದಾನವೇ
ಶ್ವರಕುಲಮಂ ಮುರಾರಿ ಭುಜವಿಕ್ರಮದಿಂ ತವೆ ಕೊಂದ ಮಾೞ್ಕೆಯಿಂ
ದುರುತರ ಬಾಹುವಿಕ್ರಮದೆ ನಾಂ ತವೆ ಕೊಲ್ಲದೆ ಮಾಣೆನುಗ್ರಸಂ
ಗರಮುಖದಲ್ಲಿ ಕಾಕಬಳಮಂ ಕುಸುಮಾಯುಧವೈರಿ ಕಾವೊಡಂ ೩೨೪

ಎಂದುಳೂಕಾಧಿರಾಜನತಿಪ್ರತಿಜ್ಞೆಗೆಯ್ದು ನಿಜನಿವಾಸಕ್ಕೆ ಪೋದಂ. ಇತ್ತಲಾ ವಾಯಸಂ ಕೌಶಿಕಾಧೀಶ್ವರನ ಮಾತಿಂಗೆ ಭೀತನಾಗಿ ತನ್ನೊಳಿಂತೆಂದುದು :

ಶ್ಲೋ॥ ಹೇ ಜಿಹ್ವೇ ಮಧುರೇ ಸ್ನಿಗ್ಧೇ ಕಿಂ ಮಧುರಂ ನ ಭಾಷಸೇ
ಮಧುರಂ ವದ ಕಲ್ಯಾಣಿ ಲೋಕೋ ಹಿ ಮಧುರಪ್ರಿಯಃ ॥೧೬೩॥

ಟೀ॥ ಎಲೆ ನಯವಹಂತಹ ನಾಲಗೆಯೆ ನಿಷ್ಠುರವನೆಂದುಂ ನುಡಿಯದಿರು ; ಮಧುರವನೆ ನುಡಿ ; ಮಧುರವೆಂಬುದು ಸರ್ವಜನಪ್ರಿಯವಾಗಿಹುದು ಎಂದು ಮತ್ತಮಿಂತೆಂದುದು :

ಜಯಮಂ ಕೀರ್ತಿಯನಭಿವೃ-
ದ್ಧಿಯನೊಳ್ಪಂ ಕಾರ್ಯಸಿದ್ಧಿಯಂ ಸತ್ಫಲಮಂ
ಬಯಸುವ ಮನುಜಂ ಸತತಂ
ಪ್ರಿಯವನೆ ನುಡಿವುದು ವಿಪಕ್ಷಮಾಗಿರ್ಪವರೊಳ್ ೩೨೫

ಎಂಬ ನೀತಿಯಂ ಬಿಸುಟ್ಟು ಮಾತಱಿಯದೆ ನುಡಿದು ಎನ್ನ ಜಾತಿಗಮುತ್ಪಾತಕೇತುವಾದೆನೆಂದು ತನ್ನಂ ತಾನೆ ನಿಂದಿಸಿಕೊಂಡು ವಾಯಸಂ ಪೋದುದು. ಅಂದಿಂದಿತ್ತ ಕೌಶಿಕಂಗಳ್ಗಂ ನಮಗಂ ಪಗೆಯಾದುದೆಂದು ಚಿರಂಜೀವಿ ಪೇೞೆ ಮೇಘವರ್ಣನಿಂತೆಂದಂ ; ವಾಜಾತ್ರದಿಂ ಬಂದ

ಆಗುವ ಹಗೆಗೆ ಅಂಜಿ ಕೊಂದಂತಾಗುವುದು. ಅದರಿಂದ ಇಲ್ಲಿ ನಿನ್ನನ್ನು ಕೊಲ್ಲುವುದಿಲ್ಲ ಎಂದು ಮತ್ತೂ ಹೀಗೆಂದನು : ೩೨೪. ಕುರುಕುಲವನ್ನು ಬಕಾರಿ, ಸರ್ಪಕುಲವನ್ನು ಗರುಡ, ದಾನವೇಶ್ವರಕುಲವನ್ನು ಮುರಾರಿ ಭುಜವಿಕ್ರಮದಿಂದ ನಾಶ ಮಾಡಿದಂತೆ ಉರುತರ ಬಾಹುವಿಕ್ರಮದಿಂದ ಉಗ್ರಸಂಗರಮುಖದಲ್ಲಿ ನಾನು ಕಾಕಬಲವನ್ನು ಹರನು ಬಂದು ರಕ್ಷಿಸಿದರೂ ಕೊಂದಲ್ಲದೆ ಬಿಡೆನು! ವ॥ ಹೀಗೆ ಉಲೂಕಾಧಿಪತಿಯು ಅತಿಪ್ರತಿಜ್ಞೆಮಾಡಿ ನಿಜನಿವಾಸಕ್ಕೆ ಹೋದನು. ಇತ್ತ ಆ ವಾಯಸವು ಕೌಶಿಕಾಧೀಶ್ವರನ ಮಾತಿಗೆ ಭೀತನಾಗಿ ತನ್ನಲ್ಲೇ ಹೀಗೆಂದಿತು : ಶ್ಲೋ॥ ಎಲೈ ನಯವಾದ ನಾಲಗೆಯೇ ನಿಷ್ಠುರವಾದುದನ್ನು ಎಂದೂ ನುಡಿಯದಿರು, ಮಧುರವನ್ನೇ ನುಡಿ ; ಮಧುರವಚನ ಸರ್ವಜನಪ್ರಿಯವಾಗಿರುವುದು. ಅಲ್ಲದೆ ಮತ್ತೆ ಹೀಗೆಂದಿತು : ೩೨೫. ಜಯವನ್ನು ಕೀರ್ತಿಯನ್ನೂ ಅಭಿವೃದ್ಧಿಯನ್ನೂ ಒಳಿತನ್ನೂ ಕಾರ್ಯಸಿದ್ಧಿಯನ್ನೂ ಸತ್ಫಲವನ್ನೂ ಬಯಸುವ ಮನುಜನು ಸತತವಾಗಿ ವೈರಿಗಳಲ್ಲಿ ಪ್ರಿಯವನ್ನೇ ನುಡಿಯಬೇಕು ವ॥ ಎಂಬ ನೀತಿಯನ್ನು ಬಿಟ್ಟು ಮಾತನ್ನರಿಯದೆ ನುಡಿದು ತನ್ನ ಜಾತಿಗೇ ಉತ್ಪಾತಕೇತುವಾದೆನೆಂದು ತನ್ನನ್ನು ತಾನೇ ನಿಂದಿಸಿಕೊಂಡು ವಾಯಸವು ಹೋಯಿತು. ಅಂದಿನಿಂದ ಇಂದಿನವರೆಗೆ ಗೂಬೆಗಳಿಗೂ ನಮಗೂ ವೈರ ಸಂಭವಿಸಿತು ಎಂದು ಚಿರಂಜೀವಿ ಹೇಳಲು ಮೇಘವರ್ಣ

ವೈರಮನೆತ್ತಿಕೊಂಡು ಯುದ್ಧಂಗೆಯ್ದು ಕೊಂದಿಕ್ಕಿದರೆಂಬ ಕಥೆಗಳನೆಂದುಂ ಕೇಳ್ದಱಿಯೆನೆನೆ ಮತ್ತಂ ಚಿರಂಜೀವಿಯಿಂತೆಂದಂ :

ಕೇಳಹಿತದಿವಿಜವಲ್ಲಭ
ಲೀಳಂ ವಿಕ್ರಮನಿರಸ್ತಕಾಳಂ ದಿವಿಜಾ
ಭೀಳಂ ಮಥಿತಾಖಿಳ ದಿ
ಕ್ಪಾಳಂ ಶಿಶುಪಾಳನೆಂಬನೊರ್ವಂ ದನುಜಂ ೩.೨೬

ಅಂತಾತಂ ವಾಗ್ದೋಷದಿಂ ನಿಶ್ಶೇಷಜೀವಿತನಾದ ಕಥೆಯಂ ನಿಮ್ಮಡಿ ಕೇಳ್ದಱಿಯಿರಕ್ಕುಮೆಂದು ಪೇೞಲ್ ತಗುಳ್ದಂ :

೪. ಶಿಶುಪಾಲನ ಕಥೆ

ಧರ್ಮಪುತ್ರನಪ್ಪ ಯುಧಿಷ್ಠಿರಂ ಧರ್ಮಾರ್ಥಿಯುಂ ಯಶೋರ್ಥಿಯುಮಾಗಿ ರಾಜಸೂಯಯಾಗಂ ಮಾಡಲುದ್ಯೋಗಂಗೆಯ್ದು ನಾರಾಯಣಾದಿಗಳುಮಪ್ಪ ಯಾದವರುಮಂ ದುರ್ಯೋಧನಂ ಮೊದಲಾದನೇಕ ದೇಶಾಧೀಶ್ವರರುಮಪ್ಪ ರಾಜತನೂಜರುಮಂ ಶಿಶುಪಾಲಂ ಮೊದಲಾದ ದನುಜಸಮಾಜಮುಮಂ ವ್ಯಾಸ ಕಶ್ಯಪ ವಿಶ್ವಾಮಿತ್ರ ವಾಲ್ಮೀಕಿ ವಸಿಷ್ಠಾಗಸ್ತ್ಯ ಪರಾಶರಾದಿ ಮಹಾಮುನಿಸಮೂಹಮುಮಂ ಬಱೆಯಟ್ಟಿ ಬರಿಸಿ ಯಾಗಂಗೆಯ್ದು ತದನಂತರಂ ಭೀಮಾಗ್ರಜನಗ್ರಪೂಜೆಗಗ್ರೇಸರರಾರ್ ಪೇೞಿಮೆಂಬುದುಂ ಗಾಂಗೇಯಂ ಗಂಭೀರಧ್ವನಿಯಿನಿಂತೆಂದಂ:

(ಮಲ್ಲಿಕಾ ಮಾಲೆ)

ಉಗ್ರಸಂಗರರಂಗದೊಳ್ ಬಲವನ್ನಿಶಾಚರಮುಖ್ಯವೀ-
ರಾಗ್ರಗಣ್ಯರನಿಕ್ಕಿ ಭೂಚರಖೇಚರಾಖಿಲಲೋಕಪಾ-
ಲಾಗ್ರಗಾಮರ ಪೀಡೆಯಂ ಕಳೆದಿರ್ದ ವಿಷ್ಣುಗೆ ಭಕ್ತಿಯಿಂ
ದಗ್ರಪೂಜೆಯನೀವುದಬ್ಧಿಪರೀತ ಭೂತಳವಲ್ಲಭಾ ೩.೨೭

ಹೀಗೆಂದಿತು : ವಾಙ್ಮಾತ್ರದಿಂದ ಬಂದ ವೈರವನ್ನು ಸಾಧಿಸಿಕೊಂಡು ಯುದ್ಧಮಾಡಿ ಕೊಂದು ಹಾಕಿದರೆಂಬ ಕಥೆಗಳನ್ನು ಎಂದೂ ನಾನು ಕೇಳಿಲ್ಲ ಎನ್ನಲು ಮತ್ತೆ ಚಿರಂಜೀವಿ ಹೀಗೆಂದಿತು. ೩.೨೬. ಅಹಿತ ದಿವಿಜವಲ್ಲಭಲೀಲನೂ ವಿಕ್ರಮನಿರಸ್ತಕಾಳನೂ ದಿವಿಜಾಭೀಳನೂ ಮಥಿತಾಖಿಳ ದಿಕ್ಪಾಲನೂ ಆದ ಶಿಶುಪಾಲನೆಂಬೊಬ್ಬ ದನುಜನಿದ್ದನು. ವ|| ಹಾಗೆ ಆತನು ವಾಗ್ದೋಷದಿಂದ ಹತನಾದ ಕಥೆಯನ್ನು ಪೂಜ್ಯರು ಕೇಳಿರಲಿಕ್ಕಿಲ್ಲ ಎಂದು ಹೇಳಲು ತೊಡಗಿದನು : ವ|| ಧರ್ಮಪುತ್ರನಾದ ಯುಧಿಷ್ಠಿರನು ಧರ್ಮಾರ್ಥಿಯೂ ಯಶೋರ್ಥಿಯೂ ಆಗಿ ರಾಜಸೂಯಯಾಗ ಮಾಡಲು ಅಪೇಕ್ಷಿಸಿ ನಾರಾಯಣಾದಿಗಳಾದ ಯಾದವರನ್ನೂ ದುರ್ಯೋಧನ ಮೊದಲಾದ ಅನೇಕ ದೇಶಾಧೀಶ್ವರರಾದ ರಾಜಕುಮಾರರನ್ನೂ ಶಿಶುಪಾಲ ಮೊದಲಾದ ದನುಜಸಮೂಹವನ್ನೂ, ವ್ಯಾಸ, ಕಶ್ಯಪ, ವಿಶ್ವಾಮಿತ್ರ, ವಾಲ್ಮೀಕಿ, ವಸಿಷ್ಠ, ಅಗಸ್ತ್ಯ, ಪರಾಶರಾದಿ ಮಹಾಮುನಿ ಸಮೂಹವನ್ನೂ ದೂತರನ್ನಟ್ಟಿ ಕರೆಯಿಸಿ ಯಾಗವನ್ನು ಮಾಡಿ ಬಳಿಕ ಭೀಮಾಗ್ರಜನು ಅಗ್ರಪೂಜೆಗೆ ಅಗ್ರೇಸರರು ಯಾರು ಹೇಳಿರಿ ಎನ್ನಲು ಗಾಂಗೇಯನು ಗಂಭೀರ ಧ್ವನಿಯಿಂದ ಹೀಗೆಂದನು: ೩.೨೭. ಅಬ್ಧಿಪರೀತ ಭೂತಳವಲ್ಲಭ ! ಉಗ್ರಸಂಗರರಂಗದಲ್ಲಿ ಬಲಶಾಲಿಗಳಾದ ನಿಶಾಚರಮುಖ್ಯವೀರಾಗ್ರಗಣ್ಯರನ್ನು ಕೊಂದು ಭೂಚರ ಖೇಚರ ಅಖಿಲ ಲೋಕಪಾಲ

ಎಂದು ನುಡಿದ ಮಂದಾಕಿನೀನಂದನನ ಮಾತಿಂಗೆ ಯಮನಂದನನಾನಂದಮನಸ್ಕನಾಗಿ ದೇವಕೀನಂದನಂಗಗ್ರಪೂಜೆಯನೆತ್ತುವಾಗಳ್ ದಾನವಕುಲಚಕ್ರವರ್ತಿಯುಮಧರೀಕೃತದಿಕ್ಪಾಲನುಮಾಸನ್ನಕಾಲನುಮಪ್ಪ ಶಿಶುಪಾಲಂ ಕಂಡು ಕಡುಮುಳಿದು ಯುಧಿಷ್ಠಿರಂಗೆ ನಿಷ್ಠುರನಾಗಿ ಗಾಂಗೇಯನುಂ ನೋಯೆ ನುಡಿದು ಮಾಣದೆ ಬಾಣಾಸುರ ಕರಾಂತಕನುಮಂ ಬಾಯ್ಗೆವಂದಂತೆ ಭಂಗಿಸಿ ಪೆಂಡಿರಂ ಬಯ್ವಂತೆ ಬಯ್ವುದುಮನಂತನಂತಕನಂತೆ ಮುಳಿದು ದಿವಿಜಾಂತಕನಂ ಕೃತಾಂತಭವನಮಂ ಪೊಗಿಸಿದಂ.

ಅದಲ್ಲದೆಯುಮಸಾಧ್ಯಬಳರಪ್ಪ ದಾನವಮಾನವರೆನಿಬರಾನುಂ ವಾಕ್ಪಾರುಷ್ಯದಿಂ ಕೆಟ್ಟರೆಂದು ಚಿರಂಜೀವಿ ಪೇಳ್ವುದಂ ಕೇಳ್ದು ಮೇಘವರ್ಣಂ ನೀವಿಲ್ಲದುದನೇಕೆ ಪೇಳ್ವೆರಿದೆಲ್ಲಮನಾನಱಿದೆಂ : ಇನ್ನಾ ಕೌಶಿಕಾಧೀಶ್ವರನಂ ಸಾಧಿಸುವುಪಾಯಮುಮಂ ಅನ್ನೆವರಂ ನಮಗೆ ನಿಶ್ಚಿಂತಮಪ್ಪೆಡೆಯುಮುಂ ಚಿಂತಿಸಿಮೆನೆ ಚಿರಂಜೀವಿಯಿಂತೆಂದಂ

ಅರಿ ಬಲವಂತಂ ಮತಿಯೊಳ್
ಪಿರಿಯಂ ಸಾಧಿಸುವೊಡಱಿಯೆನೆಂಬವಸರದೊಳ್
ಪಿರಿದಾಳಾಪದೊಳೇನಪ-
ಸರಣಮೆ ಶರಣಂ ನಯಾಗಮಜ್ಞರ ಮತದಿಂ ೩.೨೮

ಎನೆ ಮೇಘವರ್ಣನಂತಪ್ಪೊಡೆ ನಾವಪಸರಣಂಗಯ್ವಮೆನೆ ಚಿರಂಜೀವಿಯಿಂತೆಂದಂ :

ಅಗ್ರಗಾಮಿಗಳ ಪೀಡೆಯನ್ನು ಕಳೆದ ವಿಷ್ಣುವಿಗೆ ಭಕ್ತಿಯಿಂದ ಅಗ್ರಪೂಜೆಯನ್ನು ಅರ್ಪಿಸು ಎಂದು ನುಡಿದ ಮಂದಾಕಿನೀನಂದನನ ಮಾತಿಗೆ ಯಮನಂದನನು ಆನಂದಮನಸ್ಕನಾಗಿ ದೇವಕೀನಂದನನಿಗೆ ಅಗ್ರಪೂಜೆಯನ್ನು ಅರ್ಪಿಸಿದನು. ಆಗ ದಾನವಕುಲ ಚಕ್ರವರ್ತಿಯೂ ದಿಕ್ಪಾಲಕರನ್ನು ಸೋಲಿಸಿದವನೂ ಆಸನ್ನಕಾಲನೂ ಆದ ಶಿಶುಪಾಲನು ಕಂಡು ಕ್ರೋಧಾಕ್ರಾಂತನಾಗಿ ಯುಧಿಷ್ಠಿರನಿಗೆ ನಿಷ್ಠುರವಾಗಿ ಗಾಂಗೇಯನಿಗೆ ನೋಯುವಂತೆ ನುಡಿದನು. ಅಲ್ಲದೆ, ವಿಷ್ಣುವನ್ನೂ ಬಾಯಿಗೆ ಬಂದಂತೆ ಭಂಗಿಸಿ ಹೆಂಡಿರನ್ನು ಬಯ್ಯುವಂತೆ ಬಯ್ಯಲು ಅನಂತನು ಅಂತಕನಂತೆ ಕೋಪಿಸಿ ದಿವಿಜಾಂತಕನನ್ನು ಯಮಪುರಕ್ಕೆ ಅಟ್ಟಿದನು. ಅಲ್ಲದೆ ಅಸಾಧ್ಯಬಲರಾದ ಎಷ್ಟೋ ಜನ ದಾನವ ಮಾನವರು ವಾಕ್ಪಾರುಷ್ಯದಿಂದ ಕೆಟ್ಟರು ಎಂದು ಚಿರಂಜೀವಿ ಹೇಳಿದುದನ್ನು ಕೇಳಿ ಮೇಘವರ್ಣನು ನೀವು ಇಲ್ಲದುದನ್ನು ಏಕೆ ಹೇಳುವಿರಿ ; ಇದೆಲ್ಲವನ್ನೂ ನಾನು ತಿಳಿದವನೇ. ಇನ್ನು ಆ ಕೌಶಿಕಾಧೀಶ್ವರನನ್ನು ಸಾಧಿಸುವ ಉಪಾಯವನ್ನೂ ಅಲ್ಲಿಯವರೆಗೆ ನಾವು ನಿಶ್ಚಿಂತರಾಗಿರುವ ಎಡೆಯನ್ನೂ ಯೋಚಿಸಿರಿ ಎನ್ನಲು ಚಿರಂಜೀವಿ ಹೀಗೆಂದನು : ೩.೨೮. ಶತ್ರು ಬಲಾಢ್ಯನು, ಬುದ್ಧಿಯಲ್ಲಿ ಹಿರಿಯನು, ಅವನೊಡನೆ ಸಾಧಿಸಲಾರೆವು. ಇಂಥ ಸಂದರ್ಭದಲ್ಲಿ ಹಿರಿಯ ಆಲಾಪದಿಂದ ಏನು ಪ್ರಯೋಜನ ; ನೀತಿಜ್ಞರ ಅಭಿಪ್ರಾಯದಂತೆ ಈಗ ಅಪಸರಣವೇ ಶರಣು ವ॥ ಎನ್ನಲು ಮೇಘವರ್ಣನು ಹಾಗಾದರೆ ನಾವು ಅಪಸರಣ ಮಾಡೋಣ ಎನ್ನಲು ಚಿರಂಜೀವಿ

ಚಾರುಮಯೂರಮಂ ಸಮದಚಾತಕವಾರಮನುದ್ಧಕೇತಕಾ-
ಧಾರಮನತ್ಯುದಾತ್ತಸುರಗೋಪಮನುದ್ಧದಶೇಷ ನೀಪಮಂ
ಭೂರಿಸುರೇಂದ್ರ ಚಾಪಮನಪಾಸ್ತಧರಾಧರತಾಪಮಂ ಗತಾಂ-
ಭೋರುಹಜಾಳಮಂ ಜಳದಕಾಳಮನಸ್ತಲಸನ್ಮರಾಳಮಂ ॥* ೩.೨೯

ವಾನರಬಲಸಹಿತಂ ತೇ-
ಜೋನಿಧಿ ದಶರಥತನೂಭವಂ ವಿಶದಯಶ-
ಶ್ರೀನಿಲಯಂ ವಿಜಿತಾರಿ ನೃ-
ಪಾನೀಕಂ ಋಷ್ಯಮೂಕನಗದೊಳ್ ಕಳೆದಂ ೩.೩೦

ಆದಱಿಂ ನಿಮ್ಮಡಿ ನೀವುಮಾ ಪರ್ವತಕ್ಕೆ ಸಕಲಕಾಕಬಲಂಬೆರಸು ಬಿಜಯಂಗೆಯ್ವುದು ಮಾನೆನ್ನ ಬಲ್ಲ ಮಾರ್ಗದಿಂದರಿಮರ್ದನನ ಬೀಡಂ ಪೊಕ್ಕು ಸಮಸ್ತಕಾರ್ಯಮುಮನಱಿದು ಬಂದ ಬೞಿಕ್ಕೆ ತಕ್ಕುದನಾಳೋಚಿಸಿ ನೆಗೞ್ವಮೆನೆ ಮೇಘವರ್ಣಂ ನೀಮೆಂಬುದಲ್ಲಮಪ್ಪುದು, ದೂತಕಾರ್ಯಕ್ಕೆ ನೀವೇ ಪೋದಲ್ಲಿ ಕಾರ್ಯಸಿದ್ಧಿಯುಪ್ಪುದೊಂದೆಸೆಯೊಳಿರ್ಕೆ ನೀಮುಂ ಕ್ಷೇಮದಿಂ ಬರ್ಪುದುಂ ಸಂದೆಯಮಪ್ಪುದಱಿಂ ಪೆಱರನಟ್ಟಮೆನೆ ಚಿರಂಜೀವಿ ನಿಮ್ಮಡಿ! ಸ್ವಾಮಿತನಕ್ಕೆ ತಕ್ಕುದಂ ಬೆಸಸಿದಿರ್; ಆದೊಡಮೆನ್ನಿಂದಪ್ಪೊಡೆ ಸಂಕಟಮುಮಧ್ವಾನಮುಮಪ್ಪ ಕಜ್ಜಂಗಳಂ ಕೇವಲಂ ದೂತಮಾತ್ರನಪ್ಪಾತಂ

ಹೀಗೆಂದನು : ೩.೨೯. ಸುಂದರವಾದ ನವಿಲುಗಳನ್ನೂ ಮದಭರಿತವಾದ ಚಾತಕವೃಂದದನ್ನೂ ಉತ್ತಮ ಕೇತಕಾಧಾರವನ್ನೂ ಉದಾತ್ತವಾದ ಇಂದ್ರಗೋಪವನ್ನೂ ಎತ್ತರವಾದ ಕದಂಬವೃಕ್ಷವನ್ನೂ ಸುಂದರವಾದ ಕಾಮನ ಬಿಲ್ಲನ್ನೂ ಬೆಟ್ಟದ ಹೋಗಲಾಡಿಸಿದ ತಾಪವನ್ನೂ ಹೋದ ತಾವರೆಗಳ ಸಮೂಹವನ್ನೂ ಹೊಳೆಯುವ ಹಂಸಗಳು ಅಸ್ತವ್ಯಸ್ತವಾದ ವರ್ಷಾಕಾಲವನ್ನು (?) ಹಿಂದೆ ೩.೩೦. ವಾನರಬಲಸಹಿತವಾಗಿ ತೇಜೋನಿಧಿಯಾದ ದಶರಥಕುಮಾರನು ಋಷ್ಯಮೂಕ ಪರ್ವತದಲ್ಲಿ ಕಾಲವನ್ನು ಕಳೆದನು. ವ॥ ಆದರಿಂದ ಪೂಜ್ಯರಾದ ನೀವೂ ಸಕಲ ಕಾಕಬಲ ಸಹಿತರಾಗಿ ಅಲ್ಲಿಗೆ ಬಿಜಯಮಾಡಬೇಕು. ನಾನು ನನಗೆ ತಿಳಿದ ಮಾರ್ಗದಿಂದ ಅರಿಮರ್ದನನ ಬೀಡನ್ನು ಹೊಕ್ಕು ಸಮಸ್ತಕಾರ್ಯವನ್ನು ತಿಳಿದುಕೊಂಡು ಬಂದ ಬಳಿಕ ಯೋಗ್ಯವಾದುದನ್ನು ಆಲೋಚಿಸಿ ಕೈಗೊಳ್ಳೋಣ ಎಂದಿತು. ಅದಕ್ಕೆ ಮೇಘವರ್ಣನು ನೀವು ಹೇಳುವದೆಲ್ಲ ಸರಿ. ಆದರೆ ದೂತಕಾರ್ಯಕ್ಕೆ ನೀವೇ ಹೋದರೆ ಕಾರ್ಯಸಿದ್ಧಿ ಯಾಗುವುದು ಹಾಗಿರಲಿ ; ನೀವೂ ಕ್ಷೇಮದಿಂದ ಬರುವುದು ಸಂದೇಹವಾದುದುರಿಂದ ಬೇರೆಯವರನ್ನು ಕಳುಹಿಸಿರಿ ಎನ್ನಲು ಚಿರಂಜೀವಿ ಪೂಜ್ಯರೇ, ಸ್ವಾಮಿತನಕ್ಕೆ ತಕ್ಕುದಾದುದನ್ನು ಹೇಳಿದಿರಿ. ಆದರೂ ನನಗೇ ಸಂಕಟಕರವೂ ಅಧ್ವಾನಮಯವೂ ಆದ ಕಾರ್ಯಗಳನ್ನು ಕೇವಲ ದೂತಮಾತ್ರನಾದವನು ಸಾಧಿಸಲೂ

* ಈ ಪದ್ಯವು ಸರಿಯಾಗಿ ಅನ್ವಯವಾಗದೆ ಎಲ್ಲಿಂದಲೋ ಬಂದು ಸೇರಿಕೊಂಡಹಾಗಿದೆ. ಇದನ್ನು ಪ್ರಕ್ಷಿಪ್ತ ಎಂದು ಪರಿಗಣಿಸಬಹುದು.

ಸಾಧಿಸಲುಂ ಭೇದಿಸಲುಂ ನಿರುತಮರಿಯಂ ಅದರಿಂ ಸತ್ತ್ವಮುಂ ದೃಢಮುಂ ಶೌರ್ಯಮುಂ ಧೈರ್ಯಮುಂ ಸ್ನೇಹಮುಂ ಮೋಹಮುಂ ಸಾಹಸಮುಂ ಸ್ಥೈರಣೆಯುಮುಳ್ಳರನಟ್ಟಲ್ವೇಳ್ಕುಮದೆಂತೆನೆ: ಚಿರಂತನಕಾರ್ಯಂಗಳೊಳಂ ಹನೂಮಂತನಂತಪ್ಪನಂ ದಶಾಸ್ಯಾಂತಕಂ ದೂತನಾಗಿ ಕಳಿಪಿದಂ. ಮುರಾಂತಕನಂತಪ್ಪನಂ ಯುಧಿಷ್ಠಿರಂ ದೂತಕಾರ್ಯಕ್ಕಟ್ಟಿದಂ ಅದುಕಾರಣದಿನಿಂತಪ್ಪ ವಿಷಮಕಾರ್ಯಮೆನ್ನಿಂದಲ್ಲದೆ ತೀರಲರಿಯದು. ನೀವಿಂತೆನ್ನ ದೆಸೆಗೆ ಚಿಂತಿಸದೆ ನಿಶ್ಚಿಂತರಾಗಿ ಪೋಗಿಮೆಂದೊಡಂತೆಗೆಯ್ವೆನೆಂದು ಸಮಸ್ತವಾಯಸಬಲಂಬೆರಸು,

ಸಮುದಾನೇಕಪಮಂ ಮಹಾಭಯದಮಂ ಪ್ರೋದ್ದಾಮ ಜಂಬೂ ಕದಂ-
ಬಮನಭ್ರಂಕಷಕೂಟಮಂ ತಪನಕಾಂತಾಶ್ಮಪ್ರಭಾಪಾಸ್ತ ಸಂ-
ತಮಸಸ್ತೋಮಮನೂರ್ಜಿತಂ ಜಿತಲಸನ್ಮೈನಾಕಮಂ ಋಷ್ಯಮೂ-
ಕಮನಾನಂದದಿನೆಯ್ದಿದಂ ಸಕಲ ಕಾಕಾನೀಕಲಕ್ಷ್ಮೀಶ್ವರಂ ೩೩೧

ಧ್ವಾಂಕ್ಷಬಲಂಬೆರಸರಿಜಯ
ಕಾಂಕ್ಷೆಯಿನಾತ್ಮೀಯಮಂತ್ರಿ ಪೇಳ್ದಂದದಿನಿ-
ರ್ದಂ ಕ್ಷೇಮದಿಂ ಪ್ರಚಂಡ ಬ-
ಲಂ ಕ್ಷಿತಿಭೃತ್ತಟದೊಳಖಿಳಕಾಕಾಧೀಶಂ ೩೩೨

ಅನ್ನೆಗಮಿತ್ತಲ್ ಚಿರಂಜೀವಿ ಮುನ್ನಮೆ ಕೌಶಿಕಬಲಚರಣ ನಖಚಂಚುಪಕ್ಷಘಾತದಿಂ ಸಂಪೂರ್ಣಮಾಗಿ ಕಾದಿ ಸತ್ತ ವಾಯಸಂಗಳ ರಕ್ತಕರ್ದಮಮಂ ತನ್ನ ಮೇಲೊಟ್ಟಿಕೊಂಡು ಮೂರ್ಛಾಗತನಂತಾಗಿ

ಭೇದಿಸಲೂ ಖಂಡಿತವಾಗಿಯೂ ತಿಳಿಯಲಾರನು. ಅದರಿಂದ ಸತ್ತ್ವವೂ ದೃಢವೂ ಶೌರ್ಯವೂ ಧೈರ್ಯವೂ ಸ್ನೇಹವೂ ಮೋಹವೂ ಸಾಹಸವೂ ಸ್ಥೈರಣೆಯೂ ಇರುವವರನ್ನು ದೌತ್ಯಕ್ಕೆ ಅಟ್ಟಬೇಕು. ಅದು ಹೇಗೆಂದರೆ, ಚಿರಂತನಕಾರ್ಯಗಳಲ್ಲಿ ಹನುಮಂತನಂಥವನನ್ನು ರಾಮನು ದೂತನನ್ನಾಗಿ ಕಳುಹಿಸಿದನು ; ಮುರಾಂತಕನಂಥವನನ್ನು ಯುಧಿಷ್ಠಿರನು ದೂತಕಾರ್ಯಕ್ಕಾಗಿ ಕಳುಹಿಸಿದನು. ಅದರಿಂದ ಇಂತಹ ವಿಷಮಕಾರ್ಯವು ನನ್ನಿಂದಲ್ಲದೆ ಸಾಧ್ಯವಾಗದು. ನೀವು ಹೀಗೆ ನನ್ನ ಬಗೆಗೆ ಚಿಂತಿಸದೆ ನಿಶ್ಚಿಂತರಾಗಿ ಹೋಗಿರಿ ಎನ್ನಲು ೩೩೧. ಸೊಕ್ಕಿದ ಆನೆಗಳಿಂದಲೂ, ಮಹಾ ಭಯಂಕರವೂ, ಎತ್ತರವಾದ ನೇರಿಳೆ ಕದಂಬವೃಕ್ಷಗಳಿಂದಲೂ, ಮುಗಿಲು ಮುದ್ದಿಡುವ ಶಿಖರಗಳಿಂದಲೂ, ಸೂರ್ಯನ ಕಿರಣಗಳಿಂದ ಹೋಗಲಾಡಿಸಿದ ಅಂಧಕಾರದಿಂದಲೂ ಮೈನಾಕಪರ್ವತವನ್ನೇ ಗೆದ್ದ ಋಷ್ಯಮೂಕ ಪರ್ವತಕ್ಕೆ ಸಮಸ್ತ ವಾಯಸಬಲದೊಡನೆ ಆ ಸಕಲ ಕಾಕಾನೀಕಲಕ್ಷ್ಮೀಶ್ವರನು ಆನಂದದಿಂದ ಹೊರಟನು. ೩೩೨. ಧ್ವಾಂಕ್ಷಬಲದೊಡನೆ ಶತ್ರುಜಯಾಕಾಂಕ್ಷೆಯಿಂದ ಆತ್ಮೀಯಮಂತ್ರಿಯಾದ ಚಿರಂಜೀವಿ ಹೇಳಿದಂತೆ ಪ್ರಚಂಡಬಲನಾದ ಕಾಕಾಧೀಶನು ಹೋಗಿ ಕ್ಷೇಮದಿಂದ ಇದ್ದನು. ವ|| ಅಷ್ಟರಲ್ಲಿ ಇತ್ತ ಚಿರಂಜೀವಿ ಮೊದಲೇ ಕೌಶಿಕಬಲ ಚರಣನಖಚಂಚುಪಕ್ಷಘಾತದಿಂದ ಸಂಪೂರ್ಣವಾಗಿ ಕಾದಾಡಿ ಸತ್ತ ವಾಯಸಗಳ ರಕ್ತದ ಕೆಸರನ್ನು ತನ್ನ ತಲೆ ಮೇಲೆ ಬಳಿದುಕೊಂಡು ಮೂರ್ಛಾಗತನಂತಾಗಿ ಮೇಘವರ್ಣನ

ಮೇಘವರ್ಣನ ರಾಜ್ಯಲಕ್ಷ್ಮೀವಿಲಾಸಭವನಮೆನಿಪ್ಪ ವಿಶಾಲ ವಟವಿಟಪಿಯ ಕೆಳಗೆ ಬಿಟ್ಟಿರ್ದಂ. ಅನ್ನೆಗಮಿತ್ತಲ್,

ಅರುಣೀಭೂತವಿಯತ್ತಳಂ ನವವಿಯೋಗೋದ್ವೇಗ ಸಂತಾಪಿತಾಂ–
ಗರಥಾಂಗಂ ಮುಕುಳೀಕೃತಾಂಬುಜವನಂ ಮಂದೀಕೃತಾಶೀತರ–
ಶ್ಮಿರಥಾಶ್ವಾಸ್ಯ ಸುಪೀತ ನೀರಧಿಜಲವ್ರಾತಂ ದಿನಾಂತಂ ಮನೋ–
ಹರಮಾಗಿರ್ದುದು ವಾಸಯಷ್ಟಿಗತ ಶುಂಭತ್ತಾಮ್ರಚೂಡವ್ರಜಂ ೩೩೩

ಅಂತೆಸೆವ ದಿವಸಾವಸಾನಸಮಯದೊಳ್ ದಿವಸಕರಂ ಪರಲೋಕ ಪ್ರಕಾಶನಾರ್ಥಂ ಪೋಪುದಂ ಕವಿದ ಕಟ್ಟಲೆಯಂ ಕಂಡರಿಮರ್ದನಂ ಮಂತ್ರಿಮಂಡಲಮುಮನುಲೂಕವ್ರಜಮುಮಂ ಬರಿಸಿ ಬಟೆಕ್ಕಿಂತೆಂದಂ : ನಿನ್ನೆ ನಮ್ಮ ಕಾದಿದ ಕೊಳುಗುಳದೊಳೇನಾನುಮುಟಿದ ಕಾಕಬಲಮುಮನಿಂದು ನಿರವಶೇಷಮಾಗಿ ಕೊಂದು ಬರ್ಪಂ ಬನ್ನಿಮೆಂದು ಪೊಱಮಟ್ಟು ಬಂದು ವಾಯಸನಿವಾಸಮಪ್ಪ ವಟವಿಟಪಿಯಂ ಸುತ್ತಿಮುತ್ತಿ ಕಾಕಬಲಮಂ ಕಾಣದುಲೂಕಂಗಳ್ ಬೊಬ್ಬಿಱಿದಾರ್ದು ನಿಜನಿವಾಸಕ್ಕೆ ಪೋಗಲಿರ್ದವಸರಮಂ ಚಿರಂಜೀವಿಯಱಿದು,

ಶ್ಲೋ॥ ಅನಾರಂಭೋ ಮನುಷ್ಯಾಣಾಂ ಪ್ರಥಮಂ ಬುದ್ಧಿಲಕ್ಷಣಂ
ಆರಬ್ಧಸ್ಯಾಂತಗಮನಂ ದ್ವಿತೀಯಂ ಬುದ್ಧಿಲಕ್ಷಣಂ ॥೧೭೪॥

ಟೀ॥ ಕೆಲಸವಂ ತೊಡಗದಿಹುದೆ ಮನುಷ್ಯರ ಬುದ್ಧಿಗೆ ಮೊದಲ ಕುಱುಹು. ಕೆಲಸವಂ ತೊಡಗಿದ ಬಟಿಕ ಅದಂ ಕೊನೆಮುಟ್ಟಿಸುವುದೇ ಎರಡನೆಯ ಕುಱುಹು. ಎಂಬ ನೀತಿಯುಂಟು. ಆದಱಿಂದೆನ್ನಿರವನಱಿಪುವೆನೆಂದು ಭಿನ್ನಸ್ವರದಿಂ ಸರಂಗೆಯ್ವುದುಮುಳೂಕಂಗಳ್ ಕೇಳ್ದು

ರಾಜ್ಯಲಕ್ಷ್ಮೀವಿಲಾಸಭವನವೆನಿಸಿದ ವಿಶಾಲವಟವೃಕ್ಷದ ಕೆಳಗೆ ಬಿದ್ದಿದ್ದನು. ೩೩೩. ಆಕಾಶಮಂಡಲ ಕೆಂಬಣ್ಣವನ್ನು ಹೊಂದಿತು. ಆಗ ತಾನೇ ಉಂಟಾದ ಅಗಲುವಿಕೆಯಿಂದ ಉಂಟಾದ ದುಃಖದಿಂದ ಚಕ್ರವಾಕಪಕ್ಷಿಗಳು ಸಂತಾಪವನ್ನು ಹೊಂದಿದುವು. ತಾವರೆಗಳೆಲ್ಲವೂ ಮೊಗ್ಗಾದುವು. ಸಮುದ್ರದ ನೀರನ್ನು ಚೆನ್ನಾಗಿ ಹೀರಿದುದರಿಂದ ಚಂದ್ರನ ರಥದ ಗತಿ ನಿಧಾನವಾಯಿತು. ಕೋಳಿಗಳ ಗುಂಪು ತಮ್ಮ ಗೂಡುಗಳಲ್ಲಿ ಸೇರಿಕೊಂಡುವು. ಹೀಗೆ ಸಂಜೆ ಮನೋಹರವಾಗಿತ್ತು. ವ॥ ಅಷ್ಟರಲ್ಲಿ ಸಂಜೆಯಾಗಲು ಸೂರ್ಯನು ಪರಲೋಕಪ್ರಕಾಶನಾರ್ಥವಾಗಿ ಹೋಗಲು ಕವಿದ ಕತ್ತಲೆಯನ್ನು ಕಂಡು ಅರಿಮರ್ದನನು ಮಂತ್ರಿಮಂಡಲವನ್ನೂ ಉಲೂಕವ್ರಜವನ್ನೂ ಕರೆಯಿಸಿಕೊಂಡು ಹೀಗೆಂದನು : ನಿನ್ನೆ ನಾವು ಕಾದಾಡಿದ ಯುದ್ಧರಂಗದಲ್ಲಿ ಏನಾದರೂ ಉಳಿದ ಕಾಕಬಲವನ್ನು ಇಂದು ನಿಶ್ಶೇಷವಾಗಿ ಕೊಂದು ಬರೋಣ, ಬನ್ನಿರಿ ಎಂದು ಹೊರಹೊರಟು ಬಂದು ವಾಯಸನಿವಾಸವಾದ ವಟವೃಕ್ಷವನ್ನು ಸುತ್ತಿ ಮುತ್ತಿ ಕಾಕಬಲವನ್ನು ಕಾಣದೆ ಉಲೂಕಗಳು ಬೊಬ್ಬಿರಿದು ನಿಜನಿವಾಸಕ್ಕೆ ಹೋಗುವ ಸಂದರ್ಭವನ್ನು ಚಿರಂಜೀವಿ ಅರಿತು, ಶ್ಲೋ॥ ಕೆಲಸವನ್ನು ತೊಡಗದಿರುವುದೇ ಮನುಷ್ಯರ ಬುದ್ಧಿಗೆ ಮೊದಲ ಕುರುಹು; ಕೆಲಸವನ್ನು ತೊಡಗಿದ ಬಳಿಕ ಅದನ್ನು ಕೊನೆಮುಟ್ಟಿಸುವುದೇ ಎರಡನೆಯ ಕುರುಹು ಎಂಬ ನೀತಿಯುಂಟು. ಅದರಿಂದ ನನ್ನ ಇರವನ್ನು ತಿಳಿಸುವೆನೆಂದು, ಭಿನ್ನಸ್ವರದಿಂದ ಕೂಗಲು ಉಲೂಕಗಳು ಕೇಳಿ ಕಾಕರುತವೆಂದು ಅರಿಮರ್ದನನಿಗೆ ತಿಳಿಸಲು ಆತನು

ಕಾಕರುತಮಪ್ಪುದೆಂದರಿಮರ್ದನಂಗಱಿಪುವುದುಮಾತಂ ಬಂದು ನೋಡಿ ರಕ್ತಸಿಕ್ತಶರೀರನಾಗಿ ಮುಕ್ತಜೀವನಾಗಿರ್ದ ಚಿರಂಜೀವಿಯಂ ಕಂಡು ನೀನಾರ್ಗೆನೆಂಬ ಪೆಸರಾತನೆಂದು ಕೌಶಿಕಾಧೀಶ್ವರಂ ಬೆಸಗೊಳೆ ಚಿರಂಜೀವಿಯಿಂತೆಂದಂ :

ಅಸಮ ಪರಾಕ್ರಮ ಪೆಱತೇಂ
ಪೆಸರೊಳ್ ಚಿರಂಜೀವಿಯೆಂ ಜಗದ್ವಿಶ್ರುತವಾ-
ಯಸ ಚಕ್ರವರ್ತಿ ಮಂತ್ರಿ-
ಪ್ರಸರಾಗ್ರೇಸರನೆನಖಿಳನಯಕೋವಿದನೆಂ . ೩೩೪

ಎಂಬುದುಂ ನಿನ್ನಂತಪ್ಪ ಮಂತ್ರಿಯಂ ಕಾಕಂಗಳೇಕೆ ಬಿಸುಟು ಪೋದುವೆನೆ ಚಿರಂಜೀವಿ ಪೇೞ್ಗುಂ : ನಿಮ್ಮಡಿ ! ನೀಂ ನಿನ್ನೆ ಬಂದೆಮ್ಮ ಬಲಮೆಲ್ಲಮಂ ಕೊಂದು ನಿಮ್ಮ ಬೀಡಿಂಗೆ ಬಿಜಯಂಗೆಯ್ವುದುಮೆಮ್ಮರಸಂ ಮಂತ್ರಿಗಳಂ ಬರಿಸಿ ಪೇೞಿಮಿನ್ನೇಗೆಯ್ವಮೆನೆ ಮಂತ್ರಿಗಳ್ ನಾಮಿಂದೆ ಸಕಲವಾಯಸಬಲಮೆಲ್ಲಮನೊಂದುಮಾಡಿ ಕೂಡಿಕೊಂಡರಿಮರ್ದನನೊಳ್ ಕಾದುವ ಮೆಂದೊಡಾನವಂದಿರಂ ಮಾರ್ಕೊಂಡು ಮತ್ತಮಿಂತೆಂದೆಂ : ಒಂದಾನುಮೊಂದು ಕಾಲದೊಳ್ ನಮ್ಮ ವಂಶದ ಕಾಗೆ ಕೌಶಿಕಂಗಳೊಳ್ ಪಗೆಗೊಂಡ ಕಾರಣದಿನುಳೂಕಂಗಳ್ ಕೊಂದುವಲ್ಲದೆ ಪೆಱತೊಂದು ಕಾರಣಮಿಲ್ಲ, ನಾಮವರೊಳ್ ಪಗೆಯನೆತ್ತಿಕೊಂದು ನಿಕ್ತಜಿಸಲಱಿಯೆವಮೞಿಂ ಸತ್ತು ಸ್ಥೈರಿಸಿದರೆಂಬುತ್ತಮಿಕೆಯಂ ಮಾಡಿಕೊಂಡು ಕೌಶಿಕಶಿಖಾಮಣಿಯಂ ಕಂಡು ಬಾೞ್ವುದೆಂತುಂ ಸಲ್ಗುಂ. ಅಲ್ಲದೆಯುಂ ಪೂರ್ವೋಕ್ತಮಿಂತೆಂಬುದಲ್ತೆ :

ಬಂದು ನೋಡಿ ರಕ್ತಸಿಕ್ತ ಶರೀರನಾಗಿ ಮುಕ್ತಜೀವನಾಗಿದ್ದ ಚಿರಂಜೀವಿಯನ್ನು ಕಂಡು ನೀನು ಯಾರು, ನಿನ್ನ ಹೆಸರೇನು ಎಂದು ಕೌಶಿಕಾಧೀಶ್ವರನು ವಿಚಾರಿಸಲು ಚಿರಂಜೀವಿ ಹೀಗೆಂದನು : ೩೩೪. ಅಸಮಪರಾಕ್ರಮ ! ಬೇರೆ ಏನಿದೆ ! ನನ್ನ ಹೆಸರು ಚಿರಂಜೀವಿ; ಅಖಿಲ ನೀತಿ ಕೋವಿದನಾಗಿರುವೆ. ಜಗದ್ವಿಶ್ರುತ ವಾಯಸಚಕ್ರವರ್ತಿ ಮಂತ್ರಿಪ್ರಸರಾಗ್ರೇಸರನಾಗಿರುವೆನು. ವ॥ ಅದಕ್ಕೆ ಅರಿಮರ್ದನನು ನಿನ್ನಂತಹ ಮಂತ್ರಿಯನ್ನು ಕಾಗೆಗಳು ಏಕೆ ಬಿಸುಟು ಹೋದುವು ಎಂದು ಕೇಳಲು ಚಿರಂಜೀವಿ ಹೀಗೆಂದನು : ಪೂಜ್ಯರೇ; ನೀವು ನಿನ್ನೆ ಬಂದು ನಮ್ಮ ಬಲವನ್ನೆಲ್ಲ ಕೊಂದು ನಿಮ್ಮ ಬೀಡಿಗೆ ಬಿಜಯಮಾಡಲು ನಮ್ಮ ಅರಸನು ಮಂತ್ರಿಗಳನ್ನು ಕರೆಯಿಸಿ, ಹೇಳಿ ಇನ್ನೇನು ಮಾಡಲಿ? ಎನ್ನಲು, ಮಂತ್ರಿಗಳು ನಾವು ಇಂದೇ ಸಕಲ ವಾಯಸಬಲವನ್ನೆಲ್ಲ ಒಂದು ಮಾಡಿ ಕೂಡಿಕೊಂಡು ಅರಿಮರ್ದನನೊಡನೆ ಕಾದಾಡೋಣವೆಂದನು. ಆಗ ನಾನು ಅವನ ಅಭಿಪ್ರಾಯವನ್ನು ಪ್ರತಿಭಟಿಸಿ ಪುನಃ ಹೀಗೆಂದೆನು: ಒಂದಾನೊಂದು ಕಾಲದಲ್ಲಿ ನಮ್ಮ ವಂಶದ ಕಾಗೆ ಕೌಶಿಕಗಳಲ್ಲಿ ಹಗೆಯುಂಟಾದ ಕಾರಣದಿಂದ ಉಲೂಕಗಳು ನಮ್ಮನ್ನು ಕೊಂದುವಲ್ಲದೆ ಬೇರೇನೂ ಕಾರಣವಿಲ್ಲ. ನಾವು ಅವರೊಡನೆ ಹಗೆ ಕಟ್ಟಿಕೊಂಡು ಬದುಕುವುದು ಸಾಧ್ಯವಿಲ್ಲ. ಅದರಿಂದ ಸತ್ತು ಸ್ಥೈರಿಸಿದರು ಎಂಬ ಉತ್ತಮಿಕೆಯನ್ನು ಮಾಡಿಕೊಂಡು ಕೌಶಿಕಶಿಖಾಮಣಿಯನ್ನು ಕಂಡು ಬಾಳುವುದು ಹೇಗಿದ್ದರೂ

ಶ್ಲೋ॥ ಬಲೀಯಸಾ ಹೀನಬಲೋ ವಿರೋಧಂ
ನ ಭೂತಿ ಕಾಮೋ ಮನಸಾಪಿ ಕುರ್ಯಾತ್
ತಥಾ ಚ ಕುರ್ವನ್ ನ ವಿಶೇಷತಂಗೋ
ದೀಪಾಂತರಂ ಪ್ರಾಪ್ಯ ಯಥಾ ವಿನಶ್ಯೇತ್ ॥೧೬೫॥

ಟೀ॥ ಬಲ್ಲಿದನೊಡನೆ ಬಡವಂ ಸ್ಪರ್ಧೆಯಂ ಮಾಡಲಾಗದು ಮಾಡಿದೊಡುರಿಯೊಳಗೆ ಪತಂಗದ ಪುಟು ಬಿರ್ದಹಗಹುದು ಎಂದೆನಿತಾನುಂ ತೆಱದಿಂ ಪೇೞಲೆನ್ನ ಮಂತ್ರಮೆ ರೋಷಗ್ರಹಾವೇಶದಂತಾಗೆ ಕೆರಳ್ದು ಕೋಪಾನಳ ಬಹಳ ಶಿಖಾಸ್ತೋಮಧೂಮಚ್ಛಾಯಾಪಟಳ ಪರಿವೃತನಾಗಿ ದಾವಾನಳಶಿಖಿಶಿಖಾನಿಕರಪರಿಷಿಕ್ತನೀಳಾಚಳವರ್ಣಂ ಮೇಘವರ್ಣಂ ಮುಳಿದೀ ಬೂತು ಪಗೆಯೊಳೊಡಂಬಟ್ಟು ಬಂದನಾಗಲ್ವೇೞ್ಕುಮಿವಂಗಂ ತಕ್ಕುದಂ ಮಾಡಿಮೆನೆ ಸಕಳಕಾಕಬಳಮೆನ್ನಂ ಮುಸುಱೆ ನಿಶಿತಾಶನಿಪ್ರತಿಮನಿಜಚಂಚೂಚರಣ ಪಕ್ಷಾಘಾತದಿಂದೆನಗಿನಿತವಸ್ಥೆಯಂ ಮಾಡಿ ಪೋದುವೆಂಬುದುಂ ಅರಿಮರ್ದನನದೆಲ್ಲಮಂ ಕೇಳ್ದಿಂತೆಂದಂ : ನಿನ್ನ ಪೇೞ್ದ ಬುದ್ಧಿ ಹಿತಮುಂ ಉಚಿತಮುಮಪ್ಪುದಾಗಿಯಮಲ್ಲದೊಡೇನಾಯ್ತು ನಿನಗಲ್ಲದ ಪರಿಭವಮಂ ಮಾಡಿದ ಪ್ರಭು ಪ್ರಭುಗುಣಕಲ್ಲದುದಂ ನೆಗೞ್ದನೆನೆ ಮತ್ತಂ ಚಿರಂಜೀವಿಯಿಂತೆಂದಂ :

ವಿನಯವಿಹೀನನಾತ್ಮಹಿತಕಾರ್ಯವಿದೂರನಕಾರಣಪ್ರಕೋ-
ಪನನತಿಮೂರ್ಖನರ್ಥಪರನಸ್ಥಿರನಿಷ್ಟಸುಹೃದ್ವಿರೋಧಿ ದು-
ರ್ಜನಪರಿವಾರನೆಂಬವನಿಪಂಗೆ ಹಿತೋಚಿತಮಪ್ಪ ಕಾರ್ಯಮಂ
ಘನತರಭಕ್ತಿಯಿಂ ನುಡಿದವಂ ಕಿಡುಗುಂ ಪರಮಾರ್ಥವೆಲ್ಲಿಯುಂ ೩೩೫

ನೀತಿಯೆನಿಸುವುದು. ಅಲ್ಲದೆ ಪೂರ್ವೋಕ್ತ ಹೀಗೆನ್ನುವುದಲ್ಲವೇ : ಶ್ಲೋ॥ ಬಲ್ಲಿದನೊಡನೆ ಬಡವನು ಸ್ಪರ್ಧೆಯನ್ನು ಹೂಡಬಾರದು. ಮಾಡಿದರೆ ಉರಿಯೊಳಗೆ ಪತಂಗದ ಹುಳು ಬಿದ್ದಂತಾಗುವುದು ಎಂದು ಎಷ್ಟೋ ರೀತಿಗಳಿಂದ ಹೇಳಲು ನನ್ನ ಬುದ್ಧಿವಾದವೇ ರೋಷ ಗ್ರಹಾವೇಶದಂತಾಗಲು ಕೆರಳಿ ಕೋಪಾನಳ ಬಹಳ ಶಿಖಾಸ್ತೋಮಧೂಮಚ್ಛಾಯಾ ಪಟಲಪರಿವೃತನಾಗಿ ದಾವಾನಳಶಿಖಿಶಿಖಾನಿಕರಪರಿಷಿಕ್ತ ನೀಳಾಚಳ ವರ್ಣನಾದ ಮೇಘವರ್ಣನು ಮುನಿಸಿನಿಂದ ಈ ದುಷ್ಟನು ಹಗೆಯೊಡನೆ ಒಪ್ಪಂದ ಮಾಡಿಕೊಂಡು ಬಂದಿರಬೇಕು : ಇವನಿಗೆ ತಕ್ಕುದನ್ನು ಮಾಡಿರಿ ಎನ್ನಲು ಸಕಲ ಕಾಕಬಲವು ನನ್ನನ್ನು ಮುತ್ತಿ ಮುಸುರಿ ನಿಶಿತಾಶನಿಪ್ರತಿಮ ನಿಜಚಂಚೂಚರಣ ಪಕ್ಷಾಘಾತದಿಂದ ನನಗೆ ಈ ಅವಸ್ಥೆಯನ್ನುಂಟುಮಾಡಿ ಹೋದವು ಎನ್ನಲು ಅರಿಮರ್ದನನು ಅದೆಲ್ಲವನ್ನೂ ಕೇಳಿ ಹೀಗೆಂದನು : ನೀನು ಹೇಳಿದ ಬುದ್ಧಿ ಹಿತಕರವೂ ಉಚಿತವೂ ಆಗದಿದ್ದರೇನಾಯಿತು; ನಿನಗೆ ಮಾಡಬಾರದ ಸೋಲನ್ನೂ ನೋವನ್ನೂ ಮಾಡಿದ ಪ್ರಭು ಪ್ರಭುಗುಣಕ್ಕೆ ಸಲ್ಲದುದನ್ನು ಮಾಡಿದನು ಎನ್ನಲು ಪುನಃ ಚಿರಂಜೀವಿ ಹೀಗೆಂದನು: ೩೩೫. ವಿನಯವಿಹೀನನೂ ಆತ್ಮಹಿತಕಾರ್ಯವಿದೂರನೂ ಅಕಾರಣ ಪ್ರಕೋಪನೂ ಅತಿಮೂರ್ಖನೂ ಅರ್ಥಪರನೂ ಅಸ್ಥಿರನೂ ಇಷ್ಟಸುಹೃದ್ವಿರೋಧಿಯೂ ದುರ್ಜನಪರಿವಾರನೂ ಆದ ಅವನಿಪನಿಗೆ ಹಿತೋಚಿತವಾದ ಕಾರ್ಯವನ್ನು ಘನತರ ಭಕ್ತಿಯಿಂದ ನುಡಿದವನು ಕೆಡುವನು. ಇದಕ್ಕೆ

ಅಂತುಮಲ್ಲದೆಯುಂ, ವಾಕ್ಯಂ ॥ ಶ್ರೇಯೋ ಮೂರ್ಖಸ್ಯ ನ ಬ್ರೂಯಾತ್ ಎಂಬ ಕಥೆಗಾನುದಾಹರಣಮಾದೆನೆಂದೊಡರಿಮರ್ದನನದೆಂತೆಂದು ಬೆಸಗೊಳ್ವುದುಂ, ಚಿರಂಜೀವಿಯಿಂತೆಂಬಂ:

೫. ಬುದ್ಧಿ ಪೇೞಿದ ಹಕ್ಕಿಯಂ ಕಪಿಯು ಕೊಂದ ಕಥೆ

ನವಕಾಶ್ಮೀರಪರಾಗರಾಗರುಚಿರಂ ವಿಧ್ವಸ್ತ ನೀರೇಜಷಂ
ಡವಿಳಾಸಂ ಶಿಶಿರಾಂಬು ಶೀಕರ ತೃಣಶ್ರೀಭಾಸುರಂ ಚಾರು ಕೈ
ರವಹಾರಂ ವರಸಿಂಧುವಾರಮಬಲಾಪೀನಸ್ತನಕ್ಷುಣ್ಣ ಸಾ
ರ ವಿಟೌಘಂ ಗುರುಶೀತಕಾಲವೆಸೆದತ್ತೆತ್ತಂ ಮಹೀಭಾಗದೊಳ್ ೩೩೬

ಅಂತೆಸೆವ ಶಿಶಿರಸಮಯದೊಳ್ ಆತ್ಮಹಿತೋಪದೇಶಾಗ್ರಹವಿಕಳಮಪ್ಪುದೊಂದು ಗೋಲಾಂಗೂಲಂ ಶೀತಕ್ಕಳ್ಕಿ ಸಿಡಿಮಿಡಿಗೊಳುತ್ತಿರ್ದು ಮಿಂಚುಬುಬುವಂ ಕಂಡುಮಿದು ಕೆಂಡಮೆಂದು ಬಗೆದದಱ ಮೇಲೆ ಪುಲ್ಲಂ ಪುಳ್ಳಿಯುಮನಿಕ್ಕಿ ಪೊಕ್ಕಳಮೂದುವುದುಂ ಸೂಚೀಮುಖನೆಂಬ ಪಕ್ಕಿ ಕಂಡು ಸಮೀಪಕ್ಕೆ ಬಂದೆಲೆ ಬಲೀಮುಖಾ! ನಿನ್ನ ಮೊಗಮುಂ ತಲೆಯುಂ ಬಾತುಪೋದಪುದು ಕಿಚ್ಚಲ್ಲ ಮಿಂಚುಂಬುಬು ನೀನಿದನೂದಿ ದೆಸೆಗೆಡಬೇಡೆಂದು ಒರೆದುಂ ಪೊೞ್ತು ವಾರಿಸುತಿರ್ಪುದುಮದಱ ಪೆಂಡತಿಯೆಂದಳೆಲೆ ಮರುಳೆ ! ನೀನೀ ಮರ್ಕಟಂಗೆ ಬುದ್ಧಿಯಂ ಪೇೞಲ್ವೇಡೇಕೆಂದೊಡೆನ್ನ ಕೆಳೆಯಪ್ಪ ಸೂಚೀಮುಖಿಯುಮೊಂದು ಮರ್ಕಟಂ ಮೞೆಗಳ್ಗೆ ಕಳವಳಿಸುತ್ತಿರೆ ಕರುಣಿಸಿಯಿಂತೆಂದಳ್:

ಶ್ಲೋ॥ ದ್ವಿಹಸ್ತೋಽಸ್ತಿ ದ್ವಿಪಾದೋಽಸ್ತಿ ದೃಶ್ಯತೇ ಪುರುಷಾಕೃತಿಃ
ಶೀತವಾತಪರಿಭ್ರಷ್ಟೋ ನಿಲಯಂ ನ ಕರೋತಿ ಕಿಂ ॥೧೬೬॥

ಸಂದೇಹವಿಲ್ಲ. ಅಲ್ಲದೆ ವಾ॥ ಶ್ರೇಯಸ್ಸನ್ನು ಮೂರ್ಖನಿಗೆ ಹೇಳಬಾರದು ಎಂಬ ಕಥೆಗೆ ನಾನು ಉದಾಹರಣೆಯಾದೆನು ಎನ್ನಲು ಅರಿಮರ್ದನನು ಅದೇನು ಎಂದು ವಿಚಾರಿಸಲು ಚಿರಂಜೀವಿ ಹೀಗೆಂದನು : ೩೩೬. ಕೇಸರಿಯ ಪರಾಗದ ಬಣ್ಣದಿಂದ ಮನೋಹರವಾಗಿಯೂ ಕಮಲಸಮೂಹದ ವೈಭವವನ್ನು ಹೋಗಲಾಡಿಸಿಯೂ ಇಬ್ಬನಿಗಳಿಂದ ಕೂಡಿದ ಹುಲ್ಲಿನ ಕಾಂತಿಯಿಂದಲೂ ಸುಂದರವಾದ ನೈದಿಲೆಗಳ ಹಾರದಿಂದಲೂ ಶ್ರೇಷ್ಠವಾದ ಚಿಕ್ಕ ಮರಗಳಿಂದಲೂ ಅಬಲೆಯರ ಪೀನಸ್ತನಗಳನ್ನು ಒತ್ತಿ ಆಲಂಗಿಸಿ ಸುಖಿಸುವ ವಿಟಸಮೂಹದಿಂದಲೂ ಎಲ್ಲೆಲ್ಲೂ ಚಳಿಗಾಲವು ಸೊಗಯಿಸಿತು. ವ॥ ಆ ಶಿಶಿರಸಮಯದಲ್ಲಿ ಆತ್ಮಹಿತೋಪದೇಶಾಗ್ರಹ ವಿಕಳವಾದ ಒಂದು ಗೋಲಾಂಗೂಲವು ಶೀತಕ್ಕೆ ಅಂಜಿ ಸಿಡಿಮಿಡಿಗೊಳ್ಳುತ್ತಿದ್ದು ಮಿಂಚುಹುಳವನ್ನು ಕಂಡು ಇದು ಕೆಂಡವೆಂದು ಬಗೆದು ಅದರ ಮೇಲೆ ಹುಲ್ಲನ್ನೂ ಕಟ್ಟಿಗೆಗಳನ್ನೂ ಹಾಕಿ ಒಂದೇ ಸಮನೆ ಊದುಹಲು ಸೂಚೀಮುಖನೆಂಬ ಹಕ್ಕಿ ಕಂಡು ಸಮೀಪಕ್ಕೆ ಬಂದು ಎಲೈ ಬಲೀಮುಖಾ! ನಿನ್ನ ತಲೆಯೂ ಮುಖವೂ ಬಾತುಹೋಗುವುವು ; ಅದು ಕಿಚ್ಚಲ್ಲ; ಮಿಂಚುಹುಳು. ನೀನು ಇದನ್ನು ಊದಿ ದೆಸೆಗೆಡಬೇಡ ಎಂದು ತುಂಬ ಹೊತ್ತಿನಿಂದ ನಿವಾರಿಸಲು ಪ್ರಯತ್ನಿಸುತ್ತಿರುವುದನ್ನು ಕಂಡು ಅದರ ಹೆಂಡತಿ ಹೀಗೆಂದಳು : ಎಲೈ ಮರುಳೇ! ನೀನು ಈ ಮರ್ಕಟನಿಗೆ ಬುದ್ಧಿಯನ್ನು ಹೇಳಬೇಡ; ನನ್ನ ಗೆಳತಿಯಾದ ಸೂಚೀಮುಖಿಯೂ ಒಂದು ಮರ್ಕಟವು ಮಳೆಗೆ ಅಂಜಿ

ಟೀ॥ ಎರಡು ಕೈಯೆರಡು ಕಾಲ್ಗಳುಂಟು. ಪುರುಷಾಕಾರಂ ಕಾಣಬರುತ್ತಿದೆ. ಚಳಿಗಾಳಿಯಿಂ ಸಿಡಿಮಿಡಿಗೊಳುತಿರ್ದು ಮನೆಯನೇಕೆ ಮಾದದು? ಎಂದು ಪಲವುಂ ಸೂಚೀ ಬುದ್ಧಿಯಂ ಪೇಳುತಿರ್ಪುದುಮಾ ಕಪಿ ಕುಪಿತನಾಗಿ.

ಶ್ಲೋ॥ ಸೂಚೀಮುಖೀ ದುರಾಚಾರೇ ಮೂರ್ಖೇ ಪಂಡಿತಮಾನಿನೀ
ಅಸಮರ್ಥೋ ಗೃಹಾರಂಭೇ ಸಮರ್ಥೋ ಗೃಹಭಂಜನೇ ॥೧೬೭॥

ಟೀ॥ ಎಲೆ ದುರಾಚಾರೆಯಹ ಮೂರ್ಖೆಯಹ ಪಂಡಿತಸ್ತ್ರೀಯಹ ಸೂಚೀಮುಖಿ ಸಮರ್ಥನಲ್ಲದೆಯಿರ್ದಾತಂ ಮನೆಯ ಮಾಡುವನು; ಸಮರ್ಥನಾಗಿರ್ದಾತಂ ಮುಱಿದು ಬಿಸುಡುವನು. ಎಂದಾ ಪಕ್ಕಿಯ ಗೂಡಂ ಕೋಡಂ ಮುಱಿದೀಡಾಡಿತ್ತು. ಅದಱಿಂ ನಿನಗಿದಱ ತೋಟಿ ಬೇಡ ಎಂಬುಂ. ವಾಕ್ಯಂ ॥ ಅವಿನೀತ ನರಾಣಾಂ ಹಿತವಾಕ್ಯಂ ನ ಭಾಷಯೇತ್ ॥ ಟೀ॥ ಅವಿನೀತರಾದ ಮನುಷ್ಯರ್ಗೆ ಹಿತವಂ ಪೇಳಲಾಗದು ಎಂಬುದು ನೀತಿಯುಂಟೆಂದಾ ಪಕ್ಕಿಯ ಪೆಂಡತಿ ನಾಡೆಯುಂ ಪೇಳೆ ಮೊಱೆವೆ ಸೂಚೀಮುಖಿಂ ಶಾಖಾಚರನನತ್ಯಾಗ್ರಹದಿಂ ಬಾರಿಸೆ ಕೋಪಗ್ರಹಗ್ರಸ್ತನಾಗಿ ಕಲುಷ ಕಂಪಿತಕಟಿಂ ಮರ್ಕಟನಾ ಪಕ್ಕಿಯಂ ಪಿಡಿದು ಕೊಂದಿಕ್ಕಿತ್ತು, ಅದಱಿಂ,

ಶ್ಲೋ॥ ಶ್ರೇಯೋ ಮೂರ್ಖಸ್ಯ ನ ಬ್ರೂಯಾತ್ ಸಹವಾಸಂ ಚ ವರ್ಜಯೇತ್
ಪಶ್ಯ ವಾನರಮೂರ್ಖೇಣ ವನೇ ಸೂಚೀಮುಖೋ ಹತಃ ॥೧೬೮॥

ಟೀ॥ ಮೂರ್ಖಂಗೆ ಹಿತವಂ ನುಡಿಯಲಾಗದು; ಆತನ ಕೂಡೆಯುಮಿರಲಾಗದು. ಅದೆಂತೆನೆ: ವಾನರ ಮೂರ್ಖಂಗೆ ಬುದ್ಧಿಯಂ ಪೇಳ್ದ ಸೂಚೀಮುಖಿಂ ವನದಲ್ಲಿ ಕೊಲಲ್ಪಟ್ಟಿತು. ಅಂತುಮಲ್ಲದೆಯುಂ,

ಶ್ಲೋ॥ ಶಕ್ಯೋ ವಾರಯಿತುಂ ಜಲೇನ ದಹನಚ್ಛತ್ರೇಣ ಸೂರ್ಯಪ್ರಭಾ
ವ್ಯಾಧಿರ್ವೈದ್ಯಕೃತೌಷಧೇನ ವಿವಿಧೈರ್ಮಂತ್ರಪ್ರಯೋಗೈರ್ವಿಷಂ ॥
ನಾಗೇಂದ್ರೋ ನಿಶಿತಾಂಕುಶೇನ ಸಮದೋ ದಂಡೇನ ಗೋಗರ್ದಭೋ
ಸರ್ವಸ್ಯೌಷಧಮಸ್ತಿ ಶಾಸ್ತ್ರವಿಹಿತಂ ಮೂರ್ಖಸ್ಯ ನಾಸ್ತ್ಯೌಷಧಂ ॥೧೬೯॥

ಕಳವಳಿಸುತ್ತಿರಲು ಕರುಣಿಸಿ ಹೀಗೆಂದಳು : ಶ್ಲೋ॥ ಎರಡು ಕೈ ಎರಡು ಕಾಲುಗಳುಂಟು; ಪುರುಷಾಕಾರ ಕಾಣಬರುತ್ತಿದೆ ; ಚಳಿಗಾಳಿಯಿಂದ ಸಿಡಿಮಿಡಿಗೊಂಡರೂ ಮನೆಯನ್ನೇಕೆ ಮಾಡುವುದಿಲ್ಲ ಎಂದು ಹಲವು ಬಾರಿ ಬುದ್ಧಿ ಹೇಳುತ್ತಿರಲು ಆ ಕಪಿ ಕುಪಿತನಾಗಿ ಶ್ಲೋ॥ ಎಲೈ, ದುರಾಚಾರೆಯೂ ಮೂರ್ಖೆಯೂ ಪಂಡಿತೆಯೂ ಆದ ಸೂಚೀಮುಖೀ! ಸಮರ್ಥನಲ್ಲದವನು ಮನೆಯನ್ನು ಮಾಡುವನು; ಸಮರ್ಥನಾದವನು ಮುರಿದು ಬಿಸಾಡುವನು ಎಂದು ಆ ಹಕ್ಕಿಯ ಗೂಡನ್ನೂ ಕೊಂಬೆಯನ್ನೂ ಮುರಿದು ಬಿಸಾಡಿತು. ಅದರಿಂದ ನಿನಗೆ ಇದರ ಚಿಂತೆ ಬೇಕಾಗಿಲ್ಲ, ಹೇಗೂ ವಾ॥ ಅವಿನೀತರಾದ ಮನುಷ್ಯರಿಗೆ ಹಿತವನ್ನು ಹೇಳಬಾರದು ಎಂಬ ನೀತಿಯುಂಟು. ಹೀಗೆ ಆ ಹಕ್ಕಿಯ ಹೆಂಡತಿ ಚೆನ್ನಾಗಿ ಹೇಳಲು ಸೂಚೀಮುಖಿ ಅದನ್ನು ಕೇಳದೆ ಶಾಖಾಚರನನ್ನು ಅತ್ಯಾಗ್ರಹದಿಂದ ಆಕ್ಷೇಪಿಸಲು ಕೋಪಗ್ರಹಗ್ರಸ್ತನಾಗಿ ಕಲುಷಕಂಪಿತಕಟಿನಾದ ಮರ್ಕಟನು ಆ ಹಕ್ಕಿಯನ್ನು ಹಿಡಿದು ಕೊಂದುಹಾಕಿತು. ಅದರಿಂದ, ಶ್ಲೋ॥ ಮೂರ್ಖನಿಗೆ ಹಿತವನ್ನು ನುಡಿಯಬಾರದು. ಆತನ ಸಂಗದಲ್ಲಿಯೂ ಇರಬಾರದು; ವಾನರ ಮೂರ್ಖನಿಗೆ ಬುದ್ಧಿಯನ್ನು ಹೇಳಿದ ಸೂಚೀಮುಖಿನು ವನದಲ್ಲಿ ಸತ್ತುಹೋಯಿತು. ಅಲ್ಲದೆ, ಉದಕದಿಂದ ಶ್ಲೋ॥ ಅಗ್ನಿಯನ್ನೂ ಕೊಡೆಯಿಂದ ಬಿಸಿಲನ್ನೂ ಔಷಧದಿಂದ ವ್ಯಾಧಿಯನ್ನೂ ಮಂತ್ರಪ್ರಯೋಗದಿಂದ ವಿಷವನ್ನೂ

ಟೀ॥ ಉದಕದಿಂದಗ್ನಿಯಂ ಸತ್ತಿಗೆಯಿಂ ಬಿಸಿಲಂ ಔಷಧದಿಂ ವ್ಯಾಧಿಯಂ ಮಂತ್ರ ಪ್ರಯೋಗದಿಂ ವಿಷಮಂ ಅಂಕುಶದಿಂದಾನೆಯಂ ದಡಿಯಿಂದೆತ್ತು ಕಱ್ತೆಗಳಂ ನಿಲಿಸಲ್‌ಬಹುದು. ಮತ್ತೆ ಎಲ್ಲದಕ್ಕಂ ಶಾಸ್ತ್ರವಿಹಿತಮಪ್ಪೌಷಧಮುಂಟು. ಮೂರ್ಖಂಗೌಷಧಮಿಲ್ಲ ಎಂಬುದುಂ ಅದೆಲ್ಲಮಂ ಕೇಳ್ದರಿಮರ್ದನಂ ತನ್ನನ್ವಯಾಗತ ಮಂತ್ರಿಗಳಪ್ಪ ರಕ್ತಾಕ್ಷ, ಕ್ರೂರಾಕ್ಷ, ಜಂಹಾಕ್ಷ, ದೃಪದಾಕ್ಷರೆಂಬ ನಾಲ್ವರ್ಮುಖ್ಯಮಂತ್ರಿಗಳಂ ಸಮೀಪಕ್ಕೆ ಕರೆದು ಪೇೞಿಮೀ ಚಿರಂಜೀವಿಗೇಗೆಯಲ್ತಕ್ಕುದೆನೆ ನಯಾಗಮದಕ್ಷಂ ರಕ್ತಾಕ್ಷನಿಂತೆಂದಂ:

ಒಡವೆಯನಿತ್ತುಂ ಸಂತತ
ಮೊಡಸುಂಡುಂ ಕೂಸುಗೊಟ್ಟುಮೆಂದುದನೆಂದುಂ
ಕಡುಗೂರ್ತುಮಹಿತಬಲಮಂ
ಕಿಡಿಸುವುದುಚಿತಂ ನೃಪಂಗೆ ಮನುಮುನಿಮತದಿಂ ೩೩೭.

ಅದಲ್ಲದೆಯುಂ ಪೂರ್ವೋಕ್ತಮಿಂತೆಂಬುದಲ್ತೆ :

ಶ್ಲೋ॥ ಹೀನಶ್ಶತ್ರುರ್ನಿಹಂತವ್ಯೋ ಯಾವನ್ನಬಲವಾನ್ ಭವೇತ್
ಸಂಜಾತಬಲ ಪೌಷ್ಕಲ್ಯಃ ಪಶ್ಚಾದ್ಭವತಿ ದುರ್ಜಯಃ ॥೧೭೦॥

ಟೀ॥ ಶತ್ರು ದುರ್ಬಲನಾಗಿರ್ದಲ್ಲಿಯೇ ಕಿಡಿಸಲ್ವೇೞ್ಕುಂ ಬಲಾಧಿಕನಾದ ಬೞಿಕ ಕಿಡಿಸಲ್ಬಾರದು. ಅದಱಿನೀತನಂ ಯಮನಿಕೇತನಕ್ಕಟ್ಟುವುದೇ ನಯಮೆನೆ ಕ್ರೂರಾಕ್ಷನಂ ಕರೆದು ನಿನ್ನಭಿಪ್ರಾಯಮಾವುದು ಪೇೞೆನೆ ಅವನೀತನಂ ಕೊಲ್ವುದೆ ನೀತಿಯೆನೆ ಜಂಹಾಕ್ಷನಂ ಬೆಸಗೊಳಲಾತನಿಂತೆಂದನೀ ಮಂತ್ರಿಗಳ್ ಪೇೞ್ದಂತೆ ಕದನದೊಳಿದಿರ್ಚಿದರಂ ಕೊಂದೊಡೊಂದುಂ ದೋಷಮಿಲ್ಲ, ಅದಲ್ಲದೆಯುಂ,

ಪುತ್ತೇಱಿದನಂ ಕೈದುವ
ನಿತ್ತನನೇರ್ಪೆತ್ತನಂ ರಣಾಂಗಣದೊಳ್ ಬೆ
ನ್ನಿತ್ತನನಿಱಿಯರಮೋಘಂ
ಮತ್ತೆನಿಸದೆ ತುಱಿಲಸಂದ ಜನಮಂ ಜಗದೊಳ್ ೩೩೮

ಅಂಕುಶದಿಂದ ಆನೆಯನ್ನೂ ದೊಣ್ಣೆಯಿಂದ ಎತ್ತು ಕತ್ತೆಗಳನ್ನೂ ನಿಲ್ಲಿಸಬಹುದು. ಎಲ್ಲದಕ್ಕೂ ಶಾಸ್ತ್ರ ಸಮ್ಮತವಾದ ಔಷಧಗಳಿವೆ ; ಮೂರ್ಖನಿಗೆ ಔಷಧವೇ ಇಲ್ಲ ಎನ್ನಲು ಅದೆಲ್ಲವನ್ನೂ ಕೇಳಿದ ಅರಿಮರ್ದನನು ತನ್ನ ವಂಶಾನುಗತರಾದ ಮಂತ್ರಿಗಳಾದ ರಕ್ತಾಕ್ಷ, ಕ್ರೂರಾಕ್ಷ, ಜಂಹಾಕ್ಷ, ದೃಪದಾಕ್ಷರೆಂಬ ನಾಲ್ವರು ಮುಖ್ಯಮಂತ್ರಿಗಳನ್ನು ಸಮೀಪಕ್ಕೆ ಕರೆದು ಹೇಳಿ ಈ ಚಿರಂಜೀವಿಗೆ ಏನು ಮಾಡತಕ್ಕದು ಎನ್ನಲು ನೀತಿಶಾಸ್ತ್ರದಕ್ಷನಾದ ರಕ್ತಾಕ್ಷನು ಹೀಗೆಂದನು: ೩೩೭. ಒಡವೆಗಳನ್ನೂ ಕೊಟ್ಟೂ ಸದಾ ಜತೆಯಲ್ಲಿ ಊಟ ಮಾಡಿಯೂ ಮಗಳನ್ನು ಕೊಟ್ಟೂ ಎಂದುದನ್ನು ಎಂದೂ ಅತ್ಯಂತ ಪ್ರೀತಿಸಿಯೂ ನೃಪನಾದವನು ಅಹಿತಬಲವನ್ನು ಮನುಮುನಿ ಮತಾನುಸಾರವಾಗಿ ನಾಶ ಮಾಡುವುದು ಉಚಿತವಾಗಿದೆ. ವ॥ ಅಲ್ಲದೆ ಪೂರ್ವೋಕ್ತ ಹೀಗೆ ಹೇಳುವುದಲ್ಲವೇ: ಶ್ಲೋ॥ ಶತ್ರು ದುರ್ಬಲನಾಗಿದ್ದಾಗಲೇ ನಾಶ ಮಾಡಬೇಕು; ಬಲಾಧಿಕನಾದ ಬಳಿಕ ನಾಶ ಮಾಡುವುದು ಸಾಧ್ಯವಾಗದು. ಆದರಿಂದ ಈತನನ್ನು ಯಮನಿಕೇತನಕ್ಕೆ ಅಟ್ಟುವುದೇ ನೀತಿ ಎನ್ನಲು ಕ್ರೂರಾಕ್ಷನನ್ನು ಕರೆದು ನಿನ್ನ ಅಭಿಪ್ರಾಯವೇನು ಎಂದು ಹೇಳು ಎನ್ನಲು ಅವನೂ ಈತನನ್ನು ಕೊಲ್ಲುವುದೇ ನೀತಿ ಎಂದು ಹೇಳಲು ಜಂಹಾಕ್ಷನನ್ನು ವಿಚಾರಿಸಲು ಆತನು ಹೀಗೆಂದನು : ಈ ಮಂತ್ರಿಗಳು ಹೇಳಿದಂತೆ ಕದನದಲ್ಲಿ ಎದುರಿಸಿದವರನ್ನು ಕೊಂದರೆ ಸ್ವಲ್ಪವೂ ದೋಷವಿಲ್ಲ. ೩೩೮. ಆದರೆ ಹುತ್ತವನ್ನು ಏರಿದವನನ್ನೂ ನಿರಾಯುಧನಾದವನನ್ನೂ

ಪುಲ್ಲಂ ಕರ್ಚಿದನಂ ತ
ಳ್ಳಿಲ್ಲದೆ ಮಱೆವೊಕ್ಕನಂ ಮಹಾಬ್ರಾಹ್ಮಣನಂ
ಕೊಲ್ಲರ್ ಪಾಪಕ್ಕಂಜುವ
ರೆಲ್ಲಂ ಸ್ತ್ರೀಬಾಲವೃದ್ಧಜನಮುಂ ಜಗದೊಳ್ ೩೩೯

ಆದಲ್ಲದೆಯುಂ, ಶ್ರೀರಾಮನಂ ಗುಣಂಗೊಂಡನೆಂಬನಿತಱೊಳೆ ರಾವಣಂ ವಿಭೀಷಣನನೆಂತು ಪರಿಹರಿಸಿದನಂತೆ ನಿಮ್ಮಡಿಯ ಗುಣ ಪ್ರಶಂಸೆಗೆಯ್ದನಿತಱೊಳೆ ವಾಯಸಂಗಳಿದರ್ಕಿನಿತ ವಸ್ಥೆಯನೆಯ್ದಿಸಿದುವದಱೆಂದಿದು ನಮ್ಮ ಕಯ್ಯೊಳ್ ವಧಪ್ರಾಪ್ತನಲ್ಲಮಲ್ಲದೆಯುಂ ಪೂರ್ವೋಕ್ತಮಿಂತೆಂಬುದಲ್ತೆ :

ಶ್ಲೋ॥ ಶ್ರೂಯತೇ ಹಿ ಕಪೋತೇನ ಶತ್ರುಶ್ಶರಣಾಗತಃ ॥೧೭೧॥

ಎಂಬ ಕಥೆಯಂ ಕೇಳ್ದಱೆಯಿರೆಂದೊಡರಿಮರ್ದನನದೆಂತೆನೆ ನಯಶಾಸ್ತ್ರದಕ್ಷಂ ಜಿಂಹಾಕ್ಷಂ ಪೇೞ್ಗುಂ :

೭. ಕಪೋತಂ ಕಿರಾತಂಗೆ ತನ್ನಸುವನಿತ್ತ ಕಥೆ

ಒರ್ವ ಶಬರ ಶಿಬಿರಾಧಿನಾಯಕಂ ಬೇಂಟೆವೋಗಿ ಪಕ್ಕಿಗಳನೆಲ್ಲಿಯುಂ ಪಡೆಯದೆ ಅಡವಿಯೊಳಿರ್ಪನ್ನೆಗಮಕಾಲಜಲಧರನಿರ್ಮುಕ್ತ ಘೋರಾಂಬುಧಾರಾಪಾತದಿಂ ನಾಂದತಿಪ್ರಚಂಡ ಪವನಹತಿಯಿಂದಾಕಂಪಿತಶರೀರನಾಗಿ ಬರುತ್ತುಂ,

ವಿವಿಧ ಪ್ರಕಾರಶಾಖಾ
ನಿವಹಮನುದ್ಯದ್ವಿಚಿತ್ರ ಪತ್ರಮನುದ್ಧಾ
ಮ ವಟಕ್ಷ್ಮಾಜಮಂ ಶಬ
ರವಲ್ಲಭಂ ಮೆಲ್ಲ ಮೆಲ್ಲನೆಯ್ದಿದನಾಗಳ್ ೩೪೦

ಗಾಯಗೊಂಡವನನ್ನೂ ರಣಾಂಗಣದಲ್ಲಿ ಬೆನ್ನುಗೊಟ್ಟು ಓಡುವವನನ್ನೂ ಭೃತ್ಯವರ್ಗವನ್ನು ಇರಿಯಬಾರದು. ೩೩೯. ಹುಲ್ಲನ್ನು ಕಚ್ಚಿದವನನ್ನೂ ಶರಣಾಗತನಾದವನನ್ನೂ ಮಹಾಬ್ರಾಹ್ಮಣನನ್ನೂ ಸ್ತ್ರೀಬಾಲವೃದ್ಧ ಜನರನ್ನೂ ಲೋಕದಲ್ಲಿ ಪಾಪಕ್ಕಂಜುವರೆಲ್ಲ ಕೊಲ್ಲರು. ವ॥ ಅಲ್ಲದೆ ಶ್ರೀರಾಮನನ್ನು ಗುಣಾನ್ವಿತನೆಂದ ಮಾತ್ರಕ್ಕೆ ರಾವಣನು ವಿಭೀಷಣನನ್ನು ಹೇಗೆ ಪರಿಹರಿಸಿದನೋ ಹಾಗೆ ನಿಮ್ಮನ್ನು ಪ್ರಶಂಸಿಸಿದನೆಂದ ಮಾತ್ರಕ್ಕೆ ವಾಯಸಗಳು ಇದಕ್ಕೆ ಈ ಅವಸ್ಥೆಯನ್ನುಂಟುಮಾಡಿದುವು. ಆದರಿಂದ ಇದು ನಮ್ಮ ಕೈಯಿಂದ ವಧಪ್ರಾಪ್ತನಲ್ಲ ; ಅಲ್ಲದೆ ಪೂರ್ವೋಕ್ತ ಹೀಗಿರುವದಲ್ಲವೇ: ಶ್ಲೋ॥ ಶ್ರೂಯತೇ ಹಿ ಕಪೋತೇನ ಶತ್ರುಶ್ಶರಣಮಾಗತಃ ಎಂಬ ಕಥೆಯನ್ನು ನೀವು ಕೇಳಿಲ್ಲ ಎನ್ನಲು ಅರಿಮರ್ದನನು ಅದೇನು ಎಂದು ಕೇಳಲು ನೀತಿಶಾಸ್ತ್ರ ದಕ್ಷನಾದ ಜಿಂಹಾಕ್ಷನು ಹೇಳುವನು: ವ॥ ಒಬ್ಬ ಶಬರಶಿಬಿರಾಧಿನಾಯಕನು ಬೇಟೆಗೆ ಹೋಗಿ ಹಕ್ಕಿಗಳನ್ನು ಎಲ್ಲಿಯೂ ಪಡೆಯಲಾರದೆ ಕಾಡಿನಲ್ಲಿರಲು ಅಷ್ಟರಲ್ಲಿ ಅಕಾಲಜಲಧರನಿರ್ಮುಕ್ತ ಘೋರಾಂಬುಧಾರಾಪಾತದಿಂದ ತೊಯ್ದು ಅತಿಪ್ರಚಂಡಪವನಹತಿಯಿಂದ ಅಕಂಪಿತಶರೀರನಾಗಿ ೩೪೦. ಒಂದು ಆಲದ

ಅಂತೆಯುವಂದು ಬೆಱೆತು ಬಬ್ಬಱಗಾದ ಕಯ್ಯಂ ಕಾಲುಮನುಡುಗಿ ಕುಸುಂಗಿ ಕುಳ್ಳಿರ್ದ ಕಿರಾತನನಾ ಮರದೊಳಿರ್ಪ ಕಪೋತಶಿಖಾಮಣಿ ಕಂಡು ಕರುಣಾರಸಾರ್ದ್ರಹೃದಯನಾಗಿ ಸಮೀಪದೊಳಿರ್ದ ತಾಪಸಾಶ್ರಮಕ್ಕೆ ಪೋಗಿ ಚಂಚೂಪುಟದಿನೊಂದು ಕೊಳ್ಳಿಯಂ ಕರ್ಚಿ ತಂದು ಪುಳಿಂದನ ಮುಂದಿಟ್ಟು ಪುಲ್ಲಂ ಪುಳ್ಳಿಯುಮಂ ತಂದಿಕ್ಕಿ ಕಿಚ್ಚನುರಿಪೆ ಸರ್ವಾಂಗಮಂ ಕಾಸಿಕೊಂಡು ಸಚೇತನನಾಗಿ ಬಾಹ್ಯಾಂತರಾಗ್ನಿಗಳೊಡಲನೊಡನೊಡನೆ ಸುಡೆ ಸೈರಿಸಲಾಱದಿಂತೆಂದಂ: ಎನಗಿನಿತುಮುಪಕಾರಂಗೆಯ್ದ ದೈವವೇ! ನೀನೆನ್ನ ಕ್ಷುದ್ಬಾಧೆಯಂ ಮಾಣಿಸಿ ಪ್ರಾಣಮಂ ರಕ್ಷಿಸಲ್ವೇಟ್ಕುಮನೆ ಕಪೋತಾಧಿರಾಜನಿನ್ನೇಗೆಯ್ವೆನೆಂದು,

ಅನಿಮಿತ್ತಂ ಗರುಡಂಗೆ ತನ್ನಸುವನಿತ್ತಂತಾದಿ ಜೀಮೂತವಾ-
ಹನ ವಿದ್ಯಾಧರಚಕ್ರವರ್ತಿತಿಳಕಂ ಶ್ರೀಲೀಲನಂ ಶಂಖಚೂ-
ಡನನುತ್ಸಾಹದೆ ಕಾದು ನಾಗನಿವಹಕ್ಕಾನಂದಮಂ ಮಾಡಿ ಜೀ-
ಯೆನೆ ವಾರಾಶಿಪರೀತಧಾತ್ರಿ ತಳೆದಂ ಲೋಕೋತ್ತರಂ ಕೀರ್ತಿಯಂ ೩೪೧

ಆದಱಿಂದೀ ಶರೀರಂ ಪರೋಪಕಾರಾರ್ಥಮಾಗಲ್ವೇಟ್ಕುಮೀತನುಂ ಪ್ರಾರ್ಥಿಸಿದನೆನಗಂ ಱೆಱತುಪಾಯಮಿಲ್ಲಮೀ ಶಬರಂಗೆನ್ನ ಶರೀರಮನೆ ಕುಡುವೆನೆಂದು ಕಪೋತಕುಲೋತ್ತಮಂ ಪರೋಪಕಾರಾರ್ಥಕ್ಕೆ ಚಿತ್ತಮಂ ಕೈಕೊಂಡು,

ದಶಮುಖನ ರೌದ್ರಕೋಪಾ-
ಗ್ನಿಶಿಖಾಳಿಗಿದಿರ್ಚಿದಾ ಜಟಾಯುವ ತೆಱದಿಂ
ವಿಶದಮತಿ ವಿಸ್ಫುರದ್ದಹ-
ನಶಿಖಾಳಿಗಿದಿರ್ಚಿದಂ ಕಪೋತಾಧೀಶಂ ೩೪೨

ಮರದ ಸಮೀಪಕ್ಕೆ ಬಂದನು. ವ|| ಹಾಗೆ ಆಯಾಸಗೊಂಡ ಕೈಯನ್ನೂ ಕಾಲನ್ನೂ ಮುದುಡಿ ಕುಳಿತುಕೊಂಡ ಕಿರಾತನನ್ನು ಆ ಮರದಲ್ಲಿದ್ದ ಕಪೋತಶಿಖಾಮಣಿ ಕಂಡು ಕರುಣಾರಸಾರ್ದ್ರಹೃದಯನಾಗಿ ಸಮೀಪದಲ್ಲಿದ್ದ ತಾಪಸಾಶ್ರಮಕ್ಕೆ ಕೂಡಲೇ ಹೋಗಿ ಚಂಚೂಪುಟದಿಂದ ಒಂದು ಕೊಳ್ಳಿಯನ್ನು ಕಚ್ಚಿಕೊಂಡು ಬಂದು ಬೇಡನ ಮುಂದೆ ಇಟ್ಟು ಹುಲ್ಲನ್ನೂ ಕಟ್ಟಿಗೆಯನ್ನು ತಂದು ಹಾಕಿ ಕಿಚ್ಚನ್ನು ಉರುಹಲು ಅವನು ಸರ್ವಾಂಗವನ್ನೂ ಕಾಯಿಸಿಕೊಂಡು ಸಚೇತನನಾಗಿ ಬಾಹ್ಯಾಂತರಾಗ್ನಿಗಳು ಒಡಲನ್ನು ಒಟ್ಟೊಟ್ಟಿಗೆ ಸುಡಲು ಸಹಿಸಲಾರದೆ ಹೀಗೆಂದನು : ನನಗೆ ಇಷ್ಟು ಉಪಕಾರ ಮಾಡಿದ ದೇವರೇ ! ನೀನು ನನ್ನ ಹಸಿವೆಯನ್ನು ನಿವಾರಿಸಿ ಪ್ರಾಣವನ್ನು ರಕ್ಷಿಸಬೇಕು ಎನ್ನಲು ಕಪೋತಾಧಿರಾಜನು ಇನ್ನೇನು ಮಾಡಲಿ ಎಂದು ೩೪೧. ಅನಿಮಿತ್ತವಾಗಿ ಗರುಡನಿಗೆ ತನ್ನ ಅಸುವನ್ನು ಇತ್ತು ಆ ಜೀಮೂತವಾಹನ ವಿದ್ಯಾಧರ ಚಕ್ರವರ್ತಿ ತಿಲಕನು ಶಂಖಚೂಡನನ್ನು ಸಂತೋಷದಿಂದ ಕಾಪಾಡಿ ನಾಗಗಳಿಗೆ ಆನಂದವನ್ನು ಮಾಡಿ ವಾರಾಶಿಪರೀತ ಧಾತ್ರಿಯವರೆಗೆ ಕೀರ್ತಿಯನ್ನು ಪಡೆದನು. ವ|| ಅದರಿಂದ ಈ ಶರೀರವಿರುವುದು ಪರೋಪಕಾರಕ್ಕಾಗಿ ; ಈತನು ಪ್ರಾರ್ಥಿಸಿದನು; ನನಗೂ ಬೇರೆ ಉಪಾಯವಿಲ್ಲ ; ಈ ಶಬರನಿಗೆ ನನ್ನ ಶರೀರವನ್ನೇ ಅರ್ಪಿಸುವೆನು ಎಂದು ಆ ಕಪೋತ ಕುಲೋತ್ತಮನು ಪರೋಪಕಾರವನ್ನು ದೃಢವಾಗಿ ನಿರ್ಧರಿಸಿ ೩೪೨. ದಶಶಿರನ ರೌದ್ರಕೋಪಾಗ್ನಿಶಿಖಾಳಿಯನ್ನು ಎದುರಿಸಿದ ಆ

ಅಂತಾ ಕಿರ್ಚಿನೊಳ್ ಪಾಯ್ದು ಸತ್ತ ಕಪೋತನಂ ಕಂಡು ಕಿರಾತಂ ತನ್ನುದರದಹನ ತಾಪಶಮನಮಂ ಮಾಡಿದಂ, ಅದಱಿಂ,

ಶ್ಲೋ॥ ಶ್ರೂಯತೇ ಹಿ ಕಪೋತೇನ ಶತ್ರುಶ್ಶರಣಮಾಗತಃ
ಜೀಮೂತೇನ ಯಥಾನ್ಯಾಯಂ ಸ್ವಮಾಂಸೈರಪಿ ತರ್ಪಿತಃ ॥೧೬೨॥

ಟೀ॥ ಮಱೆವೊಕ್ಕ ಶತ್ರುವಂ ಕಪೋತಂ ಸ್ವಶರೀರಮಾಂಸದಿಂದಲೇ ಆರಾಧಿಸಿತು. ಅದೆಂತೆಂದೊಡೆ ಜೀಮೂತವಾಹನಂ ಸ್ವಮಾಂಸದಿಂ ಗರುಡನನಾರಾಧಿಸಿದಂತೆ.

ಅಂತು ಕಪೋತಂ ಶರಣಾಗತನೆಂಬನಿತಱೊಳೆ ಕಿರಾತಂಗೆ ನೊದಲಾಗಿ ತನ್ನಸುವನಿತ್ತುದು. ಈತನುಂ ನಿಮ್ಮಡಿಯ ಗುಣಕೀರ್ತನಮೆ ಕಾರಣಮಾಗಿ ಕಾಗೆಯ ಕಯ್ಯೊಳ್ ಪರಾಭವಂಬೆತ್ತ ನಂತುಮಲ್ಲದೆ ತನ್ನಾಳ್ದನ ದೆಸೆಯೊಳ್ ಭೀತನುಮಪಮಾನಿತನುಮಾಗಿರ್ದನದಱಿಂದೀತನಂ ಕಾವುದೆ ನೀತಿಯುಂ ಧರ್ಮಮುಮೆಂಬುದುಮಂ ಕೇಳ್ದರಿಮರ್ದನಂ ದೃಪದಾಕ್ಷನೆಂಬ ಮಂತ್ರಿಯ ಮೊಗಮಂ ನೋಡಿ ನಿಮ್ಮ ಕಂಡ ನಯಮಾವುದು ಪೇಟಿಮೆನಲಾತನಿಂತೆಂದಂ : ಜಿಂಹಾಕ್ಷನೆಂದಂತೀ ವಾಯಸಂ ವಧಪ್ರಾಪ್ತನಲ್ಲನದಲ್ಲದೆಯುಂ,

ಶ್ಲೋ॥ ಶತ್ರೋರಪಿ ಹಿತಂ ಶ್ರೇಯೋ ವಿವದೇತೇ ಪರಸ್ಪರಂ ॥೧೬೩॥

ಎಂಬುದೊಂದು ಕಥೆಯುಂಟೆನೆ ಕೌಶಿಕಾಧೀಶ್ವರನದೆಂತೆನೆ ದೃಪದಾಕ್ಷಂ ಪೇೞ್ಗುಂ :

೭. ಬ್ರಹ್ಮರಾಕ್ಷಸನುಂ ತಸ್ಕರನುಂ

ಉಜ್ಜಯಿನಿಯೆಂಬ ಪೊೞಲೊಳ್ ಸುಬ್ರಹ್ಮಣ್ಯನೆಂಬ ಬ್ರಾಹ್ಮಣನಿರ್ಪಂ. ಆತಂಗೆರಡಾ ವನಾರುನುಂ ದಾನಂಗೊಟ್ಟೊಡವಂ ಕಳಲೆಂದೊರ್ಬ ಕಳ್ಳಂ ಬರುತ್ತಿರ್ದೆಡೆಯೊಳೊಂದು ನಿಡಿದಪ್ಪ

ಜಟಾಯುವಿನಂತೆ ಪ್ರಜ್ವಲಿಸುವ ಆ ಬೇಡನ ಬೆಂಕಿಗೆ ಬಿದ್ದನು. ವ॥ ಕಿಚ್ಚಿಗೆ ಬಿದ್ದು ಸತ್ತ ಆ ಕಪೋತನನ್ನು ಕಂಡು ಕಿರಾತನು ತನ್ನ ಉದರದಹನ ತಾಪಶಮನ ಮಾಡಿಕೊಂಡನು. ಅದರಿಂದ, ಶ್ಲೋ॥ ಜೀಮೂತವಾಹನನು ಸ್ವಮಾಂಸದಿಂದಲೇ ಗರುಡನನ್ನು ಆರಾಧಿಸಿದಂತೆ ಮರೆಹೊಕ್ಕ ಶತ್ರುವನ್ನು ಕಪೋತನು ಸ್ವಶರೀರ ಮಾಂಸದಿಂದಲೇ ಆರಾಧಿಸಿತು. ವ॥ ಹಾಗೆ ಆ ಕಪೋತವು ಶರಣಾಗತನೆಂಬಷ್ಟರಿಂದಲೇ ಕಿರಾತನಿಗೆ ತನ್ನ ಅಸುವನ್ನು ಅರ್ಪಿಸಿತು. ಈತನೂ ನಿಮ್ಮ ಗುಣಕೀರ್ತನವೇ ಕಾರಣವಾಗಿ ಕಾಗೆಯ ಕೈಯಿಂದ ಪರಾಭವ ಹೊಂದಿದನು. ಅಲ್ಲದೆ, ತನ್ನ ಪ್ರಭುವಿನ ಬಗೆಗೆ ಭೀತನೂ, ಅಪಮಾನಿತನೂ ಆಗಿರುವನು. ಅದರಿಂದ ಈತನನ್ನು ಕಾಪಾಡುವುದು ನೀತಿಯೂ ಧರ್ಮವೂ ಆಗಿರುವುದು ಎಂದನು. ಅದನ್ನು ಕೇಳಿ ಅರಿಮರ್ದನನು ದೃಪದಾಕ್ಷನೆಂಬ ಮಂತ್ರಿಯ ಮುಖವನ್ನು ನೋಡಿ ನೀವು ಕಂಡ ನೀತಿ ಯಾವುದೆಂಬುದನ್ನು ಹೇಳಿರಿ ಎನ್ನಲು ಅವನು ಹೀಗೆಂದನು : ಜಿಂಹಾಕ್ಷನೆಂದಂತೆ ಈ ವಾಯಸನು ವಧಪ್ರಾಪ್ತನಲ್ಲ, ಅಲ್ಲದೆ, ಶ್ಲೋ॥ ಶತ್ರೋರಪಿ ಹಿತಂ ಶ್ರೇಯೋ ವಿವದೇತೇ ಪರಸ್ಪರಂ ಎಂಬುದೊಂದು ಕಥೆಯುಂಟು ಎನ್ನಲು ಕೌಶಿಕಾಧೀಶ್ವರನು ಅದೇನು ಎನ್ನಲು ದೃಪದಾಕ್ಷನು ಹೇಳಿದನು : ವ॥ ಉಜ್ಜಯಿನಿಯೆಂಬ ನಗರದಲ್ಲಿ ಸುಬ್ರಹ್ಮಣ್ಯನೆಂಬ ಬ್ರಾಹ್ಮಣನಿದ್ದನು. ಆತನಿಗೆ ಯಾರೋ ಎರಡು ಗೋವುಗಳನ್ನು ದಾನ ಕೊಟ್ಟಿರಲು ಅವುಗಳನ್ನು ಕಳಬೇಕೆಂದು ಒಬ್ಬ ಕಳ್ಳನು ಬರುತ್ತಿದ್ದನು. ಎಡೆಯಲ್ಲಿ ಒಂದು ಎತ್ತರವಾದ ರೂಪವನ್ನು ಕಂಡು ನೀನು ಯಾರು ಎಂದು ವಿಚಾರಿಸಲು ನಾನು ಬ್ರಹ್ಮರಾಕ್ಷಸ, ನೀನು

ರೂಪಮಂ ಕಂಡು ನೀನಾರ್ಗೆಂದು ಬೆಸಗೊಂಡೊಡೆ, ಆ ಬ್ರಹ್ಮರಾಕ್ಷಸಂ ನೀನಾರೆಂದು ಕೇಳ್ವೊಡಾಂ ಕಳ್ಳನೆಂದೊಡೆಲ್ಲಿಗೆ ಪೋದಪ್ಪೆಯೆಂದು ಬೆಸಗೊಳ್ವುದುಂ ಸುಬ್ರಹ್ಮಣ್ಯಭಟ್ಟಂಗೆರಡಾವುಳ್ಳವಂ ಕಳಲ್ಪೋದಪ್ಪೆನೆಂಬುದುಂ ನಾನಾ ಬ್ರಾಹ್ಮಣನಂ ಪಿಡಿಯಲೆಂದು ಪೋಗಲಿರ್ದೆನದಱಿಂದೊಡನೆ ಪೋಪಂ ನಡೆಯೆಂದಿರ್ಬರುಂ ಬ್ರಾಹ್ಮಣನ ಮನೆಯಂ ನೆಯ್ದುವಂದು ಕಳ್ಳನಿಂತೆಂದಂ. ನಾನಾ ಪಶುವನುಯ್ವನ್ನೆವರಂ ನೀನುಸಿರದಿರೆನೆ ರಕ್ಕಸನಿಂತೆಂದಂ : ಪಶುವಂ ಬಿಡುವ ಪೊಡೆವ ಕಳಕಳಮಂ ಕೇಳ್ದು ಹಾರ್ವನೆಚ್ಚತ್ತೊಡೆನ್ನ ಕಾರ್ಯಂ ಕಿಡುಗುಂ. ಮುನ್ನಂ ನಾಂ ಪಿಡಿದಪೆಂ ಬಳಿಕ್ಕ ನೀಂ ಪಶುವಂ ಕೊಂಡುಪೋಗೆಂದೊಡೆ ಕಳ್ಳನೆಂದನಂತಪ್ಪೊಡೆ ಬ್ರಹ್ಮರಾಕ್ಷಸಂ ಪಿಡಿಯಲ್ ಬಂದಿರ್ದಪಂ ಬೇಗಮೇಳೆಂದು ಪೇಳ್ದಪೆಂ ನೋಡೆನೆ ಬ್ರಹ್ಮರಾಕ್ಷಸಂ ನಿನ್ನಿಂದೆ ಮುನ್ನಮೆ ನಾಂ ಪೇಳ್ದಪೆನೆಂದು ಹಾರ್ವನ ಪಕ್ಕೆಯ ಸಮೀಪಕ್ಕೆ ಬಂದೆಲೆ ಬ್ರಾಹ್ಮಣಾ! ನಿನ್ನ ಪಶುವಂ ಕಳ್ದುಕೊಂಡು ಪೋಗಲೆಂದೊರ್ವ ಕಳ್ಳಂ ಬಂದಿರ್ದಪಂ ಬೇಗಮೇಳೆನಲೊಡಂ ಕಳ್ಳಂ ಎಲೆ ಬ್ರಾಹ್ಮಣಾ! ನಿನ್ನಂ ಬ್ರಹ್ಮರಾಕ್ಷಸಂ ಪಿಡಿಯಲ್ಬಂದಿರ್ದಪಂ ಬೇಗಮೇಳೆಂಬುದುಮದಂ ಕೇಳ್ದು ಬ್ರಾಹ್ಮಣನೆಚ್ಚತ್ತದಾರೆಲವೋ ಎಂದದ್ದಱಿಸಿ ಬರಲೊಡಂ ತಸ್ಕರನುಂ ಬ್ರಹ್ಮರಾಕ್ಷಸನುಮೋಡಿ ಪೋದರ್, ಅದಱಿಂ,

ಶ್ಲೋ॥ ಶತ್ರೋರಪಿ ಹಿತಂಶ್ರೇಯೋ ವಿವದೇತೇ ಪರಸ್ಪರಂ
ಚೋರೇಣ ಜೀವಿತಂ ದತ್ತಂ ರಾಕ್ಷಸೇನ ತು ಗೋಯುಗಂ ॥೧೭೪॥

ಯಾರು ಎಂದ ಕೇಳಲು ನಾನು ಕಳ್ಳ ಎಂದು ಹೇಳಲು ಎಲ್ಲಿಗೆ ಹೋಗುವೆ ಎಂದು ವಿಚಾರಿಸಲು ಸುಬ್ರಹ್ಮಣ್ಯ ಭಟ್ಟನ ಬಳಿಯಲ್ಲಿ ಎರಡು ಗೋವುಗಳಿರುವುದರಿಂದ ಅವುಗಳನ್ನು ಕಳುವುದಕ್ಕೆ ಹೋಗುವೆನು ಎಂದನು. ನಾನು ಆ ಬ್ರಾಹ್ಮಣನನ್ನು ಹಿಡಿಯಲೆಂದು ಹೋಗಲಿದ್ದೇನೆ. ಅದರಿಂದ ಜತೆಯಲ್ಲಿಯೇ ಹೋಗೋಣ, ನಡೆ ಎಂದು ಇಬ್ಬರೂ ಬ್ರಾಹ್ಮಣನ ಮನೆಯನ್ನು ತಲುಪಿ ಕಳ್ಳನು ಹೀಗೆಂದನು : ನಾನು ಆ ಪಶುವನ್ನು ತೆಗೆದುಕೊಂಡು ಹೋಗುವವರೆಗೆ ನೀನು ಸುಮ್ಮನಿರು ಎನ್ನಲು ರಕ್ಕಸನು ಹೀಗೆಂದನು : ನೀನು ಆ ಪಶುವನ್ನು ಬಿಚ್ಚುವ, ಹೊಡೆಯುವ ಕಳಕಳವನ್ನು ಕೇಳಿ ಆ ಬ್ರಾಹ್ಮಣನೇನಾದರೂ ಎಚ್ಚತ್ತರೆ ನನ್ನ ಕಾರ್ಯವು ಕೆಡುವುದು ; ಮೊದಲು ನಾನು ಹಿಡಿಯುವೆ; ಬಳಿಕ ನೀನು ಹಸುಗಳನ್ನು ಕೊಂಡು ಹೋಗು ಎನ್ನಲು ಕಳ್ಳನು ಹೀಗೆಂದನು: ಹಾಗಾದರೆ ಬ್ರಹ್ಮರಾಕ್ಷಸನು ಹಿಡಿಯಲು ಬಂದಿರುವನು, ಬೇಗನೆ ಏಳು ಎಂದು ಹೇಳುವೆನು ನೋಡು ಎನ್ನಲು ಬ್ರಹ್ಮರಾಕ್ಷಸನು ನಿನಗಿಂತ ಮೊದಲು ನಾನು ಹೇಳುವೆನು ಎಂದು ಬ್ರಾಹ್ಮಣನ ಪಕ್ಕಕ್ಕೆ ಬಂದು ಎಲೆ ಬ್ರಾಹ್ಮಣಾ! ನಿನ್ನ ಹಸುವನ್ನು ಕದ್ದುಕೊಂಡು ಹೋಗಬೇಕೆಂದು ಒಬ್ಬ ಕಳ್ಳನು ಬಂದಿರುವನು; ಬೇಗನೇ ಏಳು ಎನ್ನಲು ಕಳ್ಳನು ಎಲೆ ಬ್ರಾಹ್ಮಣಾ! ನಿನ್ನನ್ನು ಬ್ರಹ್ಮರಾಕ್ಷಸನು ಹಿಡಿಯಬೇಕೆಂದು ಬಂದಿರುವನು ಬೇಗನೇ ಏಳು ಎನ್ನಲು ಅದನ್ನ ಕೇಳಿ ಬ್ರಾಹ್ಮಣನು ಎಚ್ಚತ್ತು ಅದಾರು ಎಲವೋ! ಎಂದು ಗದರಿಸಿ ಬರಲು ತಸ್ಕರನೂ ಬ್ರಹ್ಮರಾಕ್ಷಸನೂ ಓಡಿಹೋದರು. ಅದರಿಂದ, ಶ್ಲೋ॥ ಶತ್ರುಗಳಾಗಿದ್ದವರು ತಮ್ಮತಮ್ಮಲ್ಲೇ ಜಗಳ ಮಾಡಿದುದರಿಂದ

ಟೀ॥ ಶತ್ರುಗಳಾಗಿರ್ದವರ್ ತಮ್ಮೊಳ್ ವಿವಾದಂ ಮಾಡಿದ ದೆಸೆಯಿಂ ಕಳ್ಳನ ದೆಸೆಯಿಂ ಬ್ರಾಹ್ಮಣನ ಸಾವು ಉೞಿಯಲ್ಪಟ್ಟಿತು, ರಾಕ್ಷಸನಿಂ ಗೋವುಗಳೆರಡುಮುೞಿಯಲ್ಪಟ್ಟುವು ಅದು ಕಾರಣದಿಂ ವಿರೋಧಿವರ್ಗದೊಳೆನ್ನರುಮನಾದೊಡಂ ತನ್ನೊಳಗಿಡುವುದೆ ನಮಗುಚಿತವ ಕಾರ್ಯಂ. ಅಂತುಮಲ್ಲದೀತಂ ಮೇಘವರ್ಣನ ಪ್ರಧಾನನವರಿಂದಪಮಾನಿತನಾಗಿ ಬಂದಾತನಂ ಕೈಕೊಳ್ವುದೆ ನೀತಿಯುಂ ಖ್ಯಾತಿಯುಮದೆಂತೆನೆ ಕಮಲಾಸನನ ಕಯ್ಯೊಳಮರತ್ವಮಂ ಪಡೆದಮರಸಮಿತಿಯಂ ಕೋಟಲೆಗೊಳಿಪ ಹಿರಣ್ಯಾಕ್ಷನಂ ಪುಂಡರೀಕಾಕ್ಷಂ ಕೊಂದಾತನಗ್ರಸುತನಪ್ಪ ಪ್ರಹ್ಲಾದಂ ತನಗೆ ಭಕ್ತನೆಂಬನಿತಱಿಂ ಕಾದು ಆತಂಗೆ ವರದನಾದಂ. ಅದಱಿಂದೀ ಚಿರಂಜೀವಿಯಂ ಕಾವುದೆ ಧರ್ಮಂ. ಅದಲ್ಲದೆಯುಂ ಮಳಯಕೇತುವೆಂಬ ರಾಜತನೂಜನತಿತೇಜಿಷ್ಣನಾಗಿ ತನ್ನ ಮಂತ್ರಿ ಮುದ್ರಾರಾಕ್ಷಸಂಗೆ ತಥ್ಯಾಭಿಯೋಗಮಾದೊಡಂ ಮಿಥ್ಯಾಭಿಯೋಗಮೆಂದು ನಿಶ್ಚೈಸಿ ನಿರ್ವಿಚಾರದಿಂ ನಿರ್ದಾಟಿಸಿ ಕಳೆದೊಡಾತನಪಮಾನಿತನಾಗಿ ಪೋಗಿ ಚಂದ್ರಗುಪ್ತಂಗಾಪ್ತನಪ್ಪುದುಮಾ ಮಲಯಕೇತು ಮಂತ್ರಿಸಹಿತನಾಗಿ ಶತ್ರುಸಂಗ್ರಹಕ್ಕೆ ಬಂದಂ. ಅದಱಿಂ ಮೇಘವರ್ಣನುಮಿಂತಪ್ಪ ಮಂತ್ರಿಯನವಜ್ಞೆಗೆಯ್ದುಪೇಕ್ಷೆಯಿಂದಿರೆ ಕೆಟ್ಟಂ. ಅದರ್ಕೊಂದು ಸಂದೆಯಂ ಬೇಡ. ನಾವೀ ವಾಯಸಮಂತ್ರಿಯಂ ಕಾವುದೆ ನಯಂ. ಎಂದನೇಕ ಹೇತು ದೃಷ್ಟಾಂತಂಗಳಂ ತೋಱಿ ನುಡಿದ ದ್ರುಪದಾಕ್ಷನಂ ಕಟಾಕ್ಷಿಸಿ ಪತಿಹಿತಶಿಖಾಮಣಿಯಪ್ಪ ರಕ್ತಾಕ್ಷನಿಂತೆಂದಂ :

ಕಳ್ಳನಿಂದಾಗಿ ಬ್ರಾಹ್ಮಣನ ಸಾವು ನಿವಾರಿತವಾಯಿತು ; ರಾಕ್ಷಸನಿಂದಾಗಿ ಗೋವುಗಳೆರಡೂ ಉಳಿದವು. ಆದರಿಂದ ವಿರೋಧಿವರ್ಗದಲ್ಲಿ ಎಂಥವರನ್ನಾದರೂ ತನ್ನಲ್ಲಿ ಇಟ್ಟುಕೊಳ್ಳುವುದು ನಮಗೆ ಶ್ರೇಷ್ಠಕಾರ್ಯ. ಅಲ್ಲದೆ ಈತನು ಮೇಘವರ್ಣನ ಪ್ರಧಾನನು. ಅವರಿಂದ ಅಪಮಾನಿತನಾಗಿ ಬಂದ ಆತನನ್ನು ಕೈಕೊಳ್ಳುವುದೇ ನೀತಿಯೂ ಖ್ಯಾತಿಯೂ ಆಗಿದೆ. ಕಮಲಾಸನನ ಕೈಯಿಂದ ಅಮರತ್ವವನ್ನು ಪಡೆದ ಅಮರಸಮಿತಿಯನ್ನು ಕೋಟಲೆಗೊಳಿಸಿದ* ಹಿರಣ್ಯಾಕ್ಷನನ್ನು ಪುಂಡರೀಕಾಕ್ಷನು ಕೊಂದು ಆತನ ಅಗ್ರಸುತನಾದ ಪ್ರಹ್ಲಾದನು ತನ್ನ ಭಕ್ತನೆಂಬುದರಿಂದಾಗಿ ಅವನನ್ನು ಕಾಪಾಡಿ ಆತನಿಗೆ ವರದನಾದನು. ಆದರಿಂದ ಈ ಚಿರಂಜೀವಿಯನ್ನು ಕಾಪಾಡುವುದೇ ಧರ್ಮ. ಅವಲ್ಲದೆ ಮಲಯಕೇತು ಎಂಬ ರಾಜತನೂಜನು ಅತಿತೇಜಿಷ್ಣುನಾಗಿ ತನ್ನ ಮಂತ್ರಿ ಮುದ್ರಾರಾಕ್ಷಸನಿಗೆ ತಥ್ಯಾಭಿಯೋಗವಾದರೂ ಮಿಥ್ಯಾಭಿಯೋಗವೆಂದು ನಿಶ್ಚಯಿಸಿ ನಿರ್ವಿಚಾರದಿಂದ ನಿವಾರಿಸಲು ಆತನು ಅಪಮಾನಿತನಾಗಿ ಹೋಗಿ ಚಂದ್ರಗುಪ್ತನಿಗೆ ಆಪ್ತನಾದನು. ಆ ಮಲಯಕೇತು ಮಂತ್ರಿಸಹಿತನಾಗಿ ಶತ್ರು ಸಂಗ್ರಹಕ್ಕೆ ಬಂದನು. ಅದರಿಂದ ಮೇಘವರ್ಣನೂ ಇಂತಹ ಮಂತ್ರಿಯನ್ನು ಅವಜ್ಞೆ ಮಾಡಿ ಉಪೇಕ್ಷೆಯಿಂದ ಇದ್ದರೆ ಕೆಟ್ಟನು. ಅದರಲ್ಲಿ ಒಂದು ಸಂದೇಹ ಬೇಡ. ನಾವು ಈ ವಾಯಸಮಂತ್ರಿಯನ್ನು ಕಾಪಾಡುವುದೇ ನೀತಿ. ಹೀಗೆ ಅನೇಕ ದೃಷ್ಟಾಂತಗಳನ್ನು ತೋರಿಸಿ ಹೇಳಿದ ದ್ರುಪದಾಕ್ಷನನ್ನು ಕಟಾಕ್ಷಿಸಿ

---

* ಹಿರಣ್ಯಕಶಿಪು ಎಂದಾಗಬೇಕಿತ್ತು. ಹಿರಣ್ಯಾಕ್ಷನನ್ನು ವರಹಾವತಾರಧಾರಿಯಾಗಿ ಕೊಂದನು ; ಹಿರಣ್ಯಕಶಿಪುವನ್ನು ನೃಸಿಂಹಾವತಾರದಿಂದ ಸೀಳಿದನು.

ಶ್ಲೋ॥ ಉಪಕಾರಾಣಿ ವಾಕ್ಯಾನಿ ಶತ್ರೂಣಾಮುಪಲಕ್ಷಯೇತ್
ವ್ಯಾಧಾ ಮೃಗವಧಂ ಕರ್ತುಂ ಹೃದ್ಯಂ ಗಾಯಂತಿ ಸುಸ್ವರಂ ॥೧೭೫॥

ಟೀ॥ ಶತ್ರುಗಳ್ಗುಪಕಾರಮಪ್ಪ ವಾಕ್ಯಂಗಳನೆ ತೋಱುವುದು. ವ್ಯಾಧರ್ ಮೃಗವಧೆಯಂ ಮಾದಲೋಸುಗ ಸುಸ್ವರದಲ್ಲಿ ಹಾಡುವರ್ ಎಂಬ ನೀತಿಯಿಂ ನೀವೆಲ್ಲಂ ಕಪಟನಾಟಕ ಸೂತ್ರಧಾರನುಮಪ್ರಶಾಂತ ಹೃದಯನುಂ ಕ್ಷಮಾಧರನುಂ ಅತಿವಿಧಾನನುಂ ಮೇಘವರ್ಣನ ಪ್ರಧಾನನುಮಪ್ಪ ಚಿರಂಜೀವಿಯ ಕಪಟಮನಱಿಯದೆ ಮೃದುಮಧುರಾಲಾಪಂಗಳಂ ನಂಬಿ ಕೌಶಿಕಶಿಖಾಮಣಿಯ ಪ್ರಾಜ್ಯರಾಜ್ಯ ಮಹಾಮಹೀರುಹಕ್ಕೆ ದಾವಾಗ್ನಿಗಳಾದಿರದೇಕೆಂದೊಡೆ ಚಿರಂಜೀವಿ ಚಿರಂತನನುಂ ಬುದ್ಧಿವಂತನುಂ ಸ್ವಾಮಿಹಿತನುಮಪ್ಪುದಱಿನೆಂತುಂ ಸ್ವಾಮಿಗೆ ತಪ್ಪಲಱಿಯಂ. ಮತ್ತಮೀತನಿರ್ದಂದಂ ವತ್ಸರಾಜನೆಂಬ ರಾಜಪುತ್ರಂ ಶತ್ರುಸಂಗ್ರಹಕ್ಕೊಳಗಾದೊಡಾತನ ಮಂತ್ರಿ ಯೌಗಂಧರಾಯಣಂ ಪತಿಹಿತಾರ್ಥಂ ಯೋಗಾಚಾರನಾಗಿರ್ದಂತೆಯುಂ ಬಂಧುಸಂಬಂಧಮಪ್ಪ ಬದ್ಧವೈರಂ ಕಾರಣಮಾಗಿ ದುರ್ಯೋಧನನಂ ಸಾಧಿಸಲೆಂದಾರಾಧಿಸುತ್ತುಂ ಶಕುನಿಯೆಂತಿರ್ದನಂತೆಯುಂ ನಂದಂ ನಿಜನಂದನರಂ ಕೊಂದ ಪಗೆಯಂ ಬಗೆಗೊಳೆ ಸಾಧಿಸಲೆಂದು ಸಾಧುವೇಷದಿಂ ಭೇದಿಸಲಿರ್ದಂತೆಯುಂ ವಾಯಸಮಂತ್ರಿ ನಮಗಪಾಯಮಂ ಬಗೆದುಪಾಯದಿನಿರ್ದೊಡಿವೆಲ್ಲಂ ಸಹಜಮಲ್ಲ. ನಿಶ್ಚಯಂ ಕಾಗೆಗಳ್ಗೆ ಪಗೆಯಾಗಿರ್ದನೆಂದು ನಂಬಲ್ವೇಡಮೆಂದು ಪ್ರತ್ಯಕ್ಷಾನುಮಾನಂಗಳಿಂ ತತ್ತ್ವವಿದಂ ನುಡಿವಂತೆ ನುಡಿದ ನಿಜಮಹತ್ತರಂಗುತ್ತರಂಗೊಡಲೊಲ್ಲದಿರ್ದರಿಮರ್ದನಂಗೆ ಕ್ಷತ್ರಪ್ರತಿಪತ್ತಿಚಿತ್ತಮನೊತ್ತರಿಸೆ

ಪತಿಹಿತಶಿಖಾಮಣಿಯಾದ ರಕ್ತಾಕ್ಷನು ಹೀಗೆಂದನು : ಶ್ಲೋ॥ ಶತ್ರುಗಳಿಗೆ ಉಪಕಾರವಾದ ವಾಕ್ಯಗಳನ್ನೇ ತೋರಬೇಕು. ವ್ಯಾಧರು ಮೃಗವಧೆಯನ್ನು ಮಾಡಲಿಕ್ಕಾಗಿ ಸುಸ್ವರದಲ್ಲಿ ಹಾಡುವರು ಎಂಬ ನೀತಿಯಿದೆ. ನೀವೆಲ್ಲರೂ ಕಪಟನಾಟಕಸೂತ್ರಧಾರನೂ ಅಪ್ರಶಾಂತಹೃದಯನೂ ಕ್ಷಮಾಧಾರನೂ ಅತಿವಿಧಾನನೂ ಮೇಘವರ್ಣನ ಪ್ರಧಾನನೂ ಆದ ಚಿರಂಜೀವಿಯ ಕಪಟವನ್ನು ಅರಿಯದೆ ಮೃದು ಮಧುರಾಲಾಪಗಳನ್ನು ನಂಬಿ ಕೌಶಿಕಶಿಖಾಮಣಿಯ ಪ್ರಾಜ್ಯರಾಜ್ಯಮಹಾ ಮಹೀರುಹಕ್ಕೆ ದಾವಾಗ್ನಿಗಳಾದಿರಿ. ಚಿರಂಜೀವಿಯು ಚಿರಂತನನೂ ಬುದ್ಧಿವಂತನೂ ಸ್ವಾಮಿಹಿತನೂ ಆಗಿರುವುದರಿಂದ ಏನಾದರೂ ಸ್ವಾಮಿಗೆ ತಪ್ಪಲಾರನು. ಈತನಿರುವ ಹಾಗೆ ವತ್ಸರಾಜನೆಂಬ ರಾಜಪುತ್ರನು ಶತ್ರುಸಂಗ್ರಹಕ್ಕೆ ಒಳಗಾದಾಗ ಆತನ ಮಂತ್ರಿ ಯೌಗಂಧರಾಯಣನು ಪತಿಹಿತಕ್ಕಾಗಿ ಯೋಗಾಚಾರನಾಗಿದ್ದಂತೆಯೂ ಬಂಧು ಸಂಬಂಧವಾದ ಬದ್ಧವೈರದ ಕಾರಣದಿಂದ ದುರ್ಯೋಧನನನ್ನು ಸಾಧಿಸಬೇಕೆಂದು ಆರಾಧಿಸುತ್ತ ಶಕುನಿ ಹೇಗಿದ್ದನೋ ಹಾಗೆಯೂ ನಂದನು ನಿಜನಂದನರನ್ನು ಕೊಂದ ಹಗೆಯನ್ನು ಮನಸ್ಸಿನಲ್ಲೇ ಸಾಧಿಸುವೆನು ಎಂದು ಸಾಧುವೇಷದಿಂದ ಭೇದಿಸಲಿದ್ದಂತೆಯೂ ವಾಯಸಮಂತ್ರಿಯೂ ನಮಗೆ ಅಪಾಯಕರನು ಎಂಬುದನ್ನು ತಿಳಿದು ಉಪಾಯದಿಂದಿದ್ದರೆ ಇವೆಲ್ಲ ಸಹಜವಲ್ಲ. ನಿಶ್ಚಯವಾಗಿಯೂ ಕಾಗೆಗಳಿಗೆ ಹಗೆಯಾಗಿದ್ದನೆಂದು ನಂಬಬೇಡ ಎಂದು ಪ್ರತ್ಯಕ್ಷಾನುಮಾನಗಳಿಂದ ತತ್ತ್ವವಿದನು ನುಡಿಯುವಂತೆ ನುಡಿದ ನಿಜಮಹತ್ತರನಿಗೆ ಉತ್ತರಗೊಡದಿದ್ದ ಅರಿಮರ್ದನನಿಗೆ

ಶರಣಾಗತರಕ್ಷಣಮೇ
ನರಪಂಗೆ ವಿಶೇಷಲಕ್ಷಣಂ ನಿಶ್ಚಯಮೆಂ
ದರಿಮರ್ದನನಂತಾಗಳ್
ಚಿರಂಜೀವಿಯನೆತ್ತಿಮೆಂದು ತೊಟ್ಟನೆ ನುಡಿದಂ ೩೪೩

ಅಂತು ನುಡಿದಾ ಕೌಶಿಕಾಧೀಶ್ವರನ ಮಾತಂ ಕೇಳ್ದು ರಕ್ತಾಕ್ಷನಿಂತೆಂದಂ : ದೇವಾ! ನೀವಿಂತೀ ರಾಜಸವೃತ್ತಿಯಿಂದೀ ಚಿರಂಜೀವಿಯನೆತ್ತಿದಿರಪ್ಪೊಡೆ

ಶ್ಲೋ॥ ಶ್ರೂಯತೇ ಹಿ ಮೃತಂ ಸಿಂಹಂ ಘಾತಯಿತ್ವಾ ತದಸ್ಥಿಭಿಃ
ಕಾರಯಿತ್ವಾ ಚ ಸಪ್ರಾಣಂ ತೇನ ತುಂಗಭುಜೋ ಹತಃ ॥೧೭೬॥

ಟೀ॥ ಸತ್ತ ಸಿಂಹದ ಅಸ್ಥಿಗಳೊಂದುಗೂಡಿ ಆಕಾರಮಂ ಮಾಡಿ ಪ್ರಾಣಮಂ ಬರಿಸಿ ಆ ಸಿಂಹದಿಂ ತುಂಗಭುಜನೆಂಬರಸು ಕೊಲಲ್ಪಟ್ಟಂ ಎಂಬ ಕಥೆಯಂತಕ್ಕುಮೆನೆ ಕೌಶಿಕಾಧೀಶ್ವರನದೆಂತೆನೆ ಮಂತ್ರಿಚೂಡಾಮಣಿಯಪ್ಪ ರಕ್ತಾಕ್ಷನಿಂತೆಂದಂ :

೮. ತುಂಗಭುಜನ ಕಥೆ

ಅಂ. ಜಬಾಣಕಲ್ಪಗಣಿಕಾಗಣದಿಂ ವಿಟಕೋಟಿಯಿಂ ನವೋ
ತ್ತುಂಗಶಿವಾಲಯಪ್ರಕರದಿಂ ವರವಾಪಿಗಳಿಂ ಬೃಹತ್ತಟಾ
ಕಂಗಳಿನಿಕ್ಷು ಚೂತವನರಾಜಿಗಳಿಂದೆಸೆದಿರ್ಪ ರಮ್ಯಗೇ
ಹಂಗಳಿನಂಗದೇಶದ ಬೆಡಂಗು ಮನಂಗೊಳಿಕುಂ ಜನಂಗಳಂ ೩೪೪

ಅಂತಪ್ಪಂಗದೇಶದೊಳ್ ತುಂಗಭುಜನೆಂಬರಸನಿರ್ಪಂ. ಆತನಲ್ಲಿಗೆ ಯೋಗಸಿದ್ಧ ತಂತ್ರಸಿದ್ಧ ಮಂತ್ರಸಿದ್ಧರೆಂಬ ಮೂವರ್ ಸಿದ್ಧರ್ ಬಂದು ಚೋದ್ಯಮಪ್ಪ ವಿದ್ಯೆಗಳಂ ಬಲ್ಲೆವೆಂದೊಡರಸಂ ನೀಂ

ಕ್ಷತ್ರಪ್ರತಿಪತ್ತಿಚಿತ್ತವನ್ನು ಒತ್ತರಿಸಲು, ೩೪೩. ಶರಣಾಗತರಕ್ಷಣೆಯೇ ನರಪತಿಗೆ ವಿಶೇಷ ಲಕ್ಷಣ, ಇದು ನಿಶ್ಚಯ ಎಂದು ಅರಿಮರ್ದನನು ಚಿರಂಜೀವಿಯನ್ನು ಎತ್ತಿ ಎಂದು ಕೂಡಲೇ ಆಜ್ಞಾಪಿಸಿದನು. ವ॥ ಹಾಗೆ ನುಡಿದ ಆ ಕೌಶಿಕಾಧೀಶ್ವರನ ಮಾತನ್ನು ಕೇಳಿ ರಕ್ತಾಕ್ಷನು ಹೀಗೆಂದನು : ದೇವಾ! ನೀವು ಹೀಗೆ ಈ ರಾಜಸವೃತ್ತಿಯಿಂದ ಈ ಚಿರಂಜೀವಿಯನ್ನು ಎತ್ತಿದಿರಾದರೆ, ಶ್ಲೋ॥ ಸತ್ತ ಸಿಂಹದ ಅಸ್ಥಿಗಳನ್ನು ಒಂದುಗೂಡಿಸಿ ಆಕಾರವನ್ನು ಕೊಟ್ಟು ಪ್ರಾಣ ತುಂಬಿ ಆ ಸಿಂಹದಿಂದ ತುಂಗಭುಜನೆಂಬ ಅರಸು ಸತ್ತುಹೋದನು ಎಂಬ ಕಥೆಯಂತಾದೀತು. ಕೌಶಿಕಾಧೀಶ್ವರನು ಅದೇನು ಎಂದು ವಿಚಾರಿಸಲು ಮಂತ್ರಿಚೂಡಾಮಣಿಯಾದ ರಕ್ತಾಕ್ಷನು ಹೀಗೆಂದನು : ೩೪೪. ಕಾಮನ ಬಾಣಗಳಂತಿರುವ ಗಣಿಕೆಯರಿಂದಲೂ ವಿಟಕೋಟಿಯಿಂದಲೂ ಹೊಸದಾದ ಎತ್ತರವಾದ ಶಿವಾಲಯಗಳಿಂದಲೂ ಶ್ರೇಷ್ಠವಾದ ಬಾವಿಗಳಿಂದಲೂ ದೊಡ್ಡ ಸರೋವರಗಳಿಂದಲೂ ಕಬ್ಬು ಮಾವುಗಳ ತೋಟಗಳಿಂದಲೂ ಸುಂದರವಾದ ಮನೆಗಳಿಂದಲೂ ಅಂಗದೇಶದ ವೈಭವವು ಜನರ ಮನಸ್ಸನ್ನು ಆಕರ್ಷಿಸುತ್ತಿತ್ತು. ವ॥ ಹಾಗಿದ್ದ ಅಂಗದೇಶದಲ್ಲಿ ತುಂಗಭುಜನೆಂಬ ಅರಸನಿದ್ದನು. ಅರಸನಲ್ಲಿಗೆ ಯೋಗಸಿದ್ಧ ತಂತ್ರಸಿದ್ಧ ಮಂತ್ರಸಿದ್ಧರೆಂಬ ಮೂವರು ಸಿದ್ಧರು ಬಂದು ಚೋದ್ಯಕರವಾದ ವಿದ್ಯೆಗಳನ್ನು ನಾವು ಬಲ್ಲೆವು ಎನ್ನಲು ಅರಸನು ನೀವು ಬಲ್ಲ ವಿದ್ಯೆಗಳು

ಬಲ್ಲ ವಿದ್ಯೆಗಳಾವುವೆನೆ ಯೋಗಸಿದ್ಧನೆಂದಂ : ಎನಿತು ಕಾಲದಸ್ಥಿಸಮೂಹಂಗಳಿರ್ದೊಡಂ ಇವಿಂತಪ್ಪ ಪ್ರಾಣಿಗಳ ತಲ್ಲವೆಂದು ಸಹದೇವನಂತೆ ಪೇೞಲ್ ಬಲ್ಲೆನೆಂಬುದುಂ ತಂತ್ರಸಿದ್ಧನೆಂದಂ : ಆನೀತಂ ತೋಱಿದ ಸ್ಥಿತಿಗಳನಾ ಪ್ರಾಣಿಯ ಪೂರ್ವರೂಪಮಂ ಪೋಲೆ ವಿಶ್ವಕರ್ಮನಂತೆ ನಿರ್ಮಿಸಲ್ ಬಲ್ಲೆನೆಂಬುದುಂ ಮಂತ್ರಸಿದ್ಧಂ ಆನೀ ಸಾಧಕಂ ಸಲಕ್ಷಣಮಾಗಿ ಮಾಡಿದ ತಲ್ಲಾವಯವಕ್ಕೆ ದೇವನಂತೆ ಜೀವಮಂ ಪಡೆದುವುದರ್ಕೆ ಸತ್ತ್ವಮುಂ ದೃಢತ್ವಮುಮಪ್ಪಂತೆ ಮಾಡಿ ತೋಱಲ್ ಬಲ್ಲೆನೆಂದು ಬಿನ್ನಪಂಗೆಯ್ವೊಡರಸನವರಂ ಮನ್ನಿಸಿ ಬೞಿಕೊರ್ವ ವ್ಯಾಧಾಧಿಪನಂ ಬರಿಸಿ ಪಲಕಾಲದ ತಲ್ಲಂಗಳನೆಲ್ಲಿಯಾದೊಡಂ ಕೊಂಡು ಬಾ ಪೋಗೆಂದೊಡಾ ಕಿರಾತಕಂ ಪೋಗಿ ತನ್ನ ಪಳ್ಳಿಯ ಸಮೀಪದೊಳ್ ಪುರಾಣಕೂಪದೊಳಿರ್ದಸ್ಥಿಯನಾಯ್ದು ತಂದೊಪ್ಪಿಸಲೊಡಮರಸನಾ ಸಿದ್ಧರಂ ಬರಿಸಿ ತೋಱುವುದುಮವರೊಳ್ ಯೋಗಸಿದ್ಧನಿದು ಮಹಾಬಲವಂತನಪ್ಪ ಸಿಂಹದಸ್ಥಿಗಳೆಂದು ಪೇೞ್ವುದುಮರಸಂ ತಂತ್ರಸಿದ್ಧನ ಮೊಗಮಂ ನೋಡಿ ನೀನಿದಂ ಸಿಂಹದಾಕೃತಿಯಂ ಮಾಡೆಂಬುದುಮಾತನಂತೆಗೆಯ್ವೆನೆಂದವಂ ಕೊಂಡುಪೋಗಿ ಕಂಡವರ್ ಭಯಂಗೊಂಡೋಡುವಂತೆ ಭಯಂಕರಾಕಾರಮಪ್ಪ ಸಿಂಹಮಂ ಮಾಡಿ ನೋಡಲ್ ಬನ್ನಿಮೆಂದರಸನಂ ಕರೆವುದುಂ ಸಮಸ್ತ ಪರಿವಾರಂಬೆರಸು ಪೋಗಿ ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟು ಬೞಿಕ್ಕೆ ಮಂತ್ರಸಿದ್ಧನಂ ಕರೆದು ನೀನಿದಂ ಸಜೀವಂಗೆಯ್ಯೆಂಬುದುಮಾ ನೃಪನ ಮಂತ್ರಿಗಳೊಳೊರ್ವಂ ಬಿನ್ನಪಮೆಂದಿಂತೆಂದಂ: ದೇವಾ! ನೀವೀ ಸಿದ್ಧರ ವಿದ್ಯೆಯ ಮೈಮೆಯುಂ ನೋಡಲಿನಿತಂ ಮಾಡಿದಿರ್. ಇವರಿರ್ವರ ವಿದ್ಯೆಯೆಂತು

ಯಾವುವು ಎನ್ನಲು ಯೋಗಸಿದ್ಧನು ಹೀಗೆಂದನು : ಎಷ್ಟು ಕಾಲದ ಅಸ್ಥಿ ಸಮೂಹಗಳಿದ್ದರೂ ಇವು ಇಂತಹ ಪ್ರಾಣಿಯ ಮೂಳೆ ಎಂದು ಸಹದೇವನಂತೆ ಹೇಳಲು ಸಮರ್ಥ ಎನ್ನಲು ತಂತ್ರಸಿದ್ಧನು ಹೀಗೆಂದನು: ನಾನು, ಈತನು ಪೇಳಿದ ಅಸ್ಥಿಗಳಿಂದ ಆ ಪ್ರಾಣಿಯ ಪೂರ್ವರೂಪವನ್ನು ಹೋಲುವಂತೆ ವಿಶ್ವಕರ್ಮನಂತೆ ದೇಹವನ್ನು ನಿರ್ಮಿಸಬಲ್ಲೆ ಎನ್ನಲು ಮಂತ್ರಸಿದ್ಧನು ಹೀಗೆಂದನು : ನಾನು ಈ ಸಾಧಕನು ಸಲಕ್ಷಣವಾಗಿ ಮಾಡಿದ ಅವಯವಕ್ಕೆ ದೇವನಂತೆ ಜೀವವನ್ನು ಕೊಟ್ಟು ಅದಕ್ಕೆ ಸತ್ತ್ವವನ್ನೂ ದೃಢತ್ವವನ್ನೂ ಕೊಟ್ಟು ತೋರಿಸಬಲ್ಲೆ ಎಂದು ಬಿನ್ನವಿಸಲು ಅರಸನು ಅವರನ್ನು ಮನ್ನಿಸಿ ಬೇರೊಬ್ಬ ವ್ಯಾಧಾಧಿಪನನ್ನು ಕರೆಸಿ ಹಲವು ಕಾಲದ ಹಿಂದಿನ ಮೂಳೆಗಳನ್ನು ಎಲ್ಲಿಂದಾದರೂ ಕೊಂಡು ಬಾ, ಹೋಗು ಎನ್ನಲು ಆ ಕಿರಾತನು ಹೋಗಿ ತನ್ನ ಹಳ್ಳಿಯ ಸಮೀಪದ ಪುರಾಣ ಕೂಪದಲ್ಲಿದ್ದ ಅಸ್ಥಿಗಳನ್ನು ಆರಿಸಿ ತಂದೊಪ್ಪಿಸಿದನು. ಅರಸನು ಆ ಸಿದ್ಧರನ್ನು ಕರೆಸಿ ತೋರಿಸಲು ಅವರಲ್ಲಿ ಯೋಗಸಿದ್ಧನು ಇದು ಮಹಾಬಲಶಾಲಿಯಾದ ಸಿಂಹದ ಅಸ್ಥಿಗಳೆಂದು ಹೇಳಲು ಅರಸನು ತಂತ್ರಸಿದ್ಧನ ಮುಖವನ್ನು ನೋಡಿ ನೀನಿದನ್ನು ಸಿಂಹದಾಕೃತಿಯನ್ನಾಗಿ ಮಾಡು ಎನ್ನಲು ಅವನು ಹಾಗೆಯೇ ಆಗಲೆಂದು ಅವುಗಳನ್ನು ಕೊಂಡುಹೋಗಿ ಕಂಡವರು ಭಯಗೊಂಡು ಓಡುವಂತೆ ಭಯಂಕರ ಆಕಾರವಾದ ಸಿಂಹವನ್ನು ಮಾಡಿ ನೋಡಲು ಬನ್ನಿ ಎಂದು ಅರಸನನ್ನು ಕರೆದನು. ಅರಸನು ಸಮಸ್ತಪರಿವಾರ ಸಮೇತನಾಗಿ ಹೋಗಿ ದೀರ್ಘಕಾಲದವರೆಗೆ ನೋಡಿ ಆಶ್ಚರ್ಯಪಟ್ಟು ಬಳಿಕ ಮಂತ್ರಸಿದ್ಧನನ್ನು ಕರೆದು ನೀನು ಇದನ್ನು ಸಜೀವಗೊಳಿಸು ಎನ್ನಲು ಆ ರಾಜನ ಮಂತ್ರಿಗಳಲ್ಲೊಬ್ಬನು ಬಿನ್ನಹ ಮಾಡಿಕೊಂಡನು ; ದೇವಾ ! ನೀವು ಈ ಸಿದ್ಧರ ವಿದ್ಯೆಯ ಮಹಿಮೆಯನ್ನು ನೋಡಲು

ಸತ್ಯವಾದುದಂತೆ ಮಂತ್ರಸಿದ್ಧನ ವಿದ್ಯಂ ಸತ್ಯಮಪ್ಪುದರೊಳ್ ಸಂದೆಯಮಿಲ್ಲದರಿಂದೀ ಸಿಂಹಮಂ ಪ್ರಾಣಮಂ ಪಡೆಯಿಸಿ ನೋಟ್ಪ ವಿನೋದಮೆಂತುಂ ಬೇಡೆಂಬುದುಮರಸನೀ ಚೋದ್ಯಮಂ ನೋಟ್ಪಮುಸಿರದಿರಿಮೆನೆ ಮತ್ತೊರ್ವ ಮಂತ್ರಿಯಿಂತೆಂದಂ : ದೇವಾ! ನೀವಿಂತು ಅಸದಾಗ್ರಹಿಗಳಾಗಿ ಬೆಸಸಿದಿರ್, ಪಿರಿಯ ಮಂತ್ರಿ ಪೇಟ್ದಂತೆ

ಸಿಂಗಂ ಗಡ ! ಮತ್ತದು ತಂ-
ತ್ರಂಗಳೊಳಂ ದಿವ್ಯಮಪ್ಪ ಮಂತ್ರಂಗಳೊಳಂ
ತಾಂ ಗಡ ! ಸಂಭೂತಂ ಗಡಿ-
ದೇಂ ಗಡ ನಮ್ಮಳವೆ ಬಟಿಕೆ ನಿಲಲುಂ ಗೆಲಲುಂ ೩೪೫

ಅದರ್ಕೆನೆತ್ತುವುದು ಮಂತ್ರಮಲ್ಲ, ಇಂತಪ್ಪೆಡೆಗೊಂದು ಕಥೆಯುಂಟೆನೆ ಅರಸನದೆಂತೆನೆ ಮಂತ್ರಿ ಪೇಟ್ಗುಂ :

೯. ಸತ್ತ ಪುಲಿಯನೆತ್ತಿದ ಗಾರುಡಿಗನ ಕಥೆ

ಮುನ್ನಮೊರ್ವ ನಿರ್ಬುದ್ಧಿ ಗಾರುಡಿಗಂ ಗಾರುಡಮಂ ಕಲ್ತು ವಿದ್ಯಾಪ್ರತ್ಯಯಮಂ ನೋಡಲೆಂದು ಸರ್ಪದಷ್ಟನನರಸುತ್ತುಂ ಬರ್ಪಾತಂ ಅಡವಿಯೊಳೊಂದು ಪೊದರ್ಕೆಯೊಳ್ ಪುಲಿಯಂ ಪಾವು ಕೊಂಡು ಪ್ರಾಣವಿಯೋಗಮಾಗಲಿರ್ದುದಂ ಕಂಡು ಸರ್ಪದಷ್ಟನೆಂದರಿದೀ ಪ್ರಾಣಿಯಂ ಸಾಯಲೀಯೆನೆತ್ತಿದ ಪೆನೆಂದೊಡೊಡನೆಯವರ್ ಸತ್ತ ಪುಲಿಯನೆತ್ತುವುದಾವ ಬುದ್ಧಿ ಬೇಡೆಂಬುದಂ ಮಾಣದಾತನೆತ್ತುವುದುಮಾ ಪುಲಿ ಮುಂದಿರ್ದ ಗಾರುಡಿಗನಂ ತಿಂದುದು.

ಅದರ್ಕೆಂದಿದರ್ಕೆ ಪ್ರಾಣಮಂ ಪಡೆಯಲ್ವೇಟ್ಕುಮೆಂಬುದೊಂದಾಗ್ರಹಮಂ ದೇವರ್ ಮಾಣ್ಬುದೆನೆ ತುಂಗಭುಜನತಿಪ್ರಸಂಗದೊಳೇನುಮನುಸಿರದಿರಿಮೆಂದು ಮತ್ತಮಿಂತೆಂದಂ :

ಇಷ್ಟನ್ನು ಮಾಡಿದಿರಿ. ಇವರಿಬ್ಬರ ವಿದ್ಯೆ ಹೇಗೆ ಸತ್ಯವಾಯಿತೋ ಹಾಗೆ ಮಂತ್ರಸಿದ್ಧನ ವಿದ್ಯೆಯೂ ಸತ್ಯವಾಗುವುದರಲ್ಲಿ ಸಂದೇಹವಿಲ್ಲ. ಅದರಿಂದ ಈ ಸಿಂಹಕ್ಕೆ ಪ್ರಾಣ ಬರಿಸಿ ನೋಡುವ ವಿನೋದ ತರವಲ್ಲ. ಅರಸನು ಈ ಆಶ್ಚರ್ಯವನ್ನು ನೋಡೋಣ ಸುಮ್ಮನಿರಿ ಎನ್ನಲು ಮತ್ತೊಬ್ಬ ಮಂತ್ರಿಯು ಹೀಗೆಂದನು: ದೇವಾ ! ನೀವು ಹೀಗೆ ಅಸದಾಗ್ರಹಿಗಳಾಗಿ ಹೇಳಿದಿರಿ ; ಹಿರಿಯ ಮಂತ್ರಿ ಹೇಳಿದಂತೆ ೩೪೫. ಸಿಂಹವಲ್ಲವೆ, ಅದು ತಂತ್ರಮಂತ್ರಗಳಿಂದ ದಿವ್ಯ ಸಂಭೂತವಾದುದಲ್ಲವೇ; ಅದರ ಮುಂದೆ ನಿಲ್ಲಲೂ, ಅದನ್ನು ಗೆಲ್ಲಲೂ ನಮ್ಮಿಂದ ಸಾಧ್ಯವೇ ; ವ|| ಅದರಿಂದ ಅದಕ್ಕೆ ಜೀವ ಬರಿಸುವುದು ಯೋಗ್ಯವಲ್ಲ ; ಈ ಸಂದರ್ಭಕ್ಕೆ ಒಂದು ಕಥೆಯುಂಟು. ಅರಸನು ಅದೇನೆಂದು ಕೇಳಲು ಮಂತ್ರಿ ಹೇಳುವನು : ಹಿಂದೆ ಒಬ್ಬ ಬುದ್ಧಿಹೀನ ಗಾರುಡಿಗನು ಗಾರುಡವನ್ನು ಕಲಿತು ವಿದ್ಯಾಪ್ರತ್ಯಯವನ್ನು ನೋಡಲೆಂದು ಸರ್ಪದಷ್ಟನನ್ನು ಅರಸುತ್ತ ಬರುತ್ತ ಅಡವಿಯಲ್ಲಿ ಒಂದು ಪೊದೆಯಲ್ಲಿ ಹುಲಿಯನ್ನು ಹಾವು ಕಚ್ಚಿ ಸತ್ತುಹೋಗಲಿದ್ದುದನ್ನು ಕಂಡು ಸರ್ಪದಷ್ಟನೆಂದು ತಿಳಿದು ಈ ಪ್ರಾಣಿಯನ್ನು ಸಾಯಲು ಬಿಡುವುದಿಲ್ಲ ; ಬದುಕಿಸುವೆನು ಎನ್ನಲು ಅವರು ಸತ್ತ ಹುಲಿಯನ್ನು ಬದುಕಿಸುವುದು ಯಾವ ಬುದ್ಧಿ, ಬೇಡ ಎನ್ನಲು ಕೇಳದೆ ಆತನು ಅದನ್ನು ಬದುಕಿಸಲು ಆ ಹುಲಿ ಮುಂದೆ ಇದ್ದ ಗಾರುಡಿಗನನ್ನು ತಿಂದಿತು. ಆದರಿಂದ ಇದಕ್ಕೆ ಪ್ರಾಣವನ್ನು ತುಂಬಬೇಕು ಎಂಬ ಒಂದು ಆಗ್ರಹವನ್ನು ಪ್ರಭುಗಳು ಬಿಡಬೇಕು ಎನ್ನಲು ತುಂಗಭುಜನು

ಪೋಗುವುದು ಗಡತಿಕೋಪದೆ
ಕೆಂಗೋಲ್ಗೊಳ್ವುದು ಗಡಿಂದ್ರಜಾಲದ ಸಿಂಗಂ
ತಾಂ ಗಡ ! ಪರಿಗುಂ ಗಡ ! ಪಾ-
ಯ್ಗುಂ ಗಡ ! ತಿಂಗು ಗಡಮಾದೊಡೇಂ ನೋಬ್ಪೆವಿದಂ ೩೪೬

ಎಂದೆಂತಾನುಂ ಮಂತ್ರಿಗಳ ಮಾತಂ ಕೈಕೊಳ್ಳದೆ ಮಂತ್ರಸಿದ್ಧನಂ ಕರೆದು ಬೇಗಮಿದಱ ಪ್ರಾಣಮಂ ಪಡೆಯಿಮೆನಲಾತನಂತೆಗೆಯ್ವೆನೆಂದು ಮತ್ತಮಿಂತೆಂದಂ : ದೇವಾ ! ನೀವೀ ಸಿಂಹಮನಿಂದ್ರಜಾಲದ ಸಿಂಹಮೆಂದಪಹಾಸ್ಯಂಗೆಯ್ಯಲ್ವೇಡೆಂತಕ್ಕುಮೆಂದಱಿಯಲ್ ಬಾರದಾಂ ಮಂತ್ರಿಸುವನ್ನಂ ತಂತ್ರಮಂ ಬರಿಸಿ ಸನ್ನದ್ಧರಾಗಿರಿಮೆನಲರಸನಂತೆಗೆಯ್ವೆನೆಂದು ಮದಾಂಧಸಿಂಧುರಮನೇಱಿ ಚತುರಂಗಬಲಮನೊಂದು ಮಾಡಿಕೊಂಡು ನಿಂದಂ. ಅನ್ನೆಗಮಾ ಸಿದ್ಧಂ ಸಿಂಗಕ್ಕೆ ಪ್ರಾಣಮಂ ಪಡೆವುದುಂ ಮಹಾಪ್ರಳಯಕಾಲಾಂಭೋದನಿನದದಿಂ ಗಜಱಿ ಗರ್ಜಿಸಿ ಮಾಣದೆಣ್ದೆಸೆಯುಮಂ ನೋಡಿ ತುಂಗಭುಜನೇಱಿಮತ್ತುಂಗ ಮತ್ತಮಾತಗಮಂ ಕಂಡು ಕೆಂಗೋಲ್ಗೊಂಡು.

ತುಂಗಭುಜಂಬೆರಸವನ ಮ-
ತಂಗಜಮುಮನಾಂತು ನಿಂದ ಚತುರಂಗಮುಮಂ
ಸಿಂಗಂ ಕೊಂದುದು ದುರ್ಮಂ-
ತ್ರಂಗಳನೆಸಗಿದೊಡೆ ಕಿಡದನಾವನುಮೊಳನೇ ೩೪೭

ಅದಱಿಂದೀ ಚಿರಂಜೀವಿ ಶತವೃದ್ಧನುಂ ಶಸ್ತ್ರಹತನುಮೆಂದು ಬಗೆಯದ ಈತನನೆತ್ತಿಕೊಂಡೊಯ್ದು ನಮ್ಮೊಳಗಿಟ್ಟುಕೊಂಡೊಡಿಂತಪ್ಪನರ್ಥಮಕ್ಕುಮೆಂದು ನುಡಿದ ಮಂತ್ರಿಮುಖ್ಯನ ಮಾತಂ ಕೇಳ್ದರಿಮರ್ದನನಿಂತೆಂದಂ : ನಿನ್ನ ಪೇಳ್ದ ಮಾತಂ ಪೊಲ್ಲದೆನಲ್ ಬಾರದು. ಅರಸುಗೆಯ್ಯಾತಂ.

ಅತಿಪ್ರಸಂಗದಲ್ಲಿ ಏನನ್ನೂ ಹೇಳಬೇಡಿರಿ ಎಂದು ಹೀಗೆಂದನು : ೩೪೬. ಬಾಣಗಳು ಕೋಪ ಮಾತ್ರದಿಂದ ಹೋಗುವುವಲ್ಲವೇ ! ಇಂದ್ರಜಾಲದ ಸಿಂಹವು ಹರಿದು ಹಾಯುವುದಲ್ಲವೇ ; ತಿನ್ನುವುದಲ್ಲವೇ ; ಇದನ್ನು ನೋಡೋಣ ಎಂದು ಏನು ಮಾಡಿದರೂ ಮಂತ್ರಿಗಳ ಮಾತನ್ನು ತೆಗೆದುಕೊಳ್ಳದೆ ಮಂತ್ರಸಿದ್ಧನನ್ನು ಕರೆದು ಬೇಗನೆ ಇದಕ್ಕೆ ಪ್ರಾಣವನ್ನು ಬರಿಸು ಎನ್ನಲು ಆತನು ಹಾಗೆಯೇ ಆಗಲೆಂದು ಹೀಗೆಂದನು : ದೇವಾ ! ನೀವು ಈ ಸಿಂಹವನ್ನು ಇಂದ್ರಜಾಲದ ಸಿಂಹವೆಂದು ಅಪಹಾಸ್ಯ ಮಾಡಬೇಡಿರಿ ; ಏನಾಗುವುದೆಂದು ಹೇಳಲಾಗದು ; ನಾನು ಮಂತ್ರಿಸುವಷ್ಟರಲ್ಲಿ ತಂತ್ರಗಳನ್ನು ತರಿಸಿ ಸನ್ನದ್ಧರಾಗಿರಿ ಎನ್ನಲು ಅರಸನು ಹಾಗೆಯೇ ಆಗಲಿ ಎಂದು ಮದಾಂಧಗಂಧಸಿಂಧುರವನ್ನೇರಿ ಚತುರಂಗಬಲವನ್ನು ಕೂಡಿಕೊಂಡು ನಿಂತನು. ಅಷ್ಟರಲ್ಲಿ ಆ ಸಿದ್ಧನು ಸಿಂಹಕ್ಕೆ ಪ್ರಾಣವನ್ನು ಬರಿಸಲು ಅದು ಮಹಾಪ್ರಳಯಕಾಲಾಂಭೋದನಿನಾದದಿಂದ ಗದರಿಸಿ ಗರ್ಜಿಸಿ ಎಂಟು ದಿಕ್ಕುಗಳನ್ನೂ ನೋಡಿ ತುಂಗಭುಜನು ಏರಿದ ಉತ್ತುಂಗ ಮತ್ತ ಮಾತಂಗವನ್ನು ಕಂಡು ಬಾಣವನ್ನು ತಪ್ಪಿಸಿ ೩೪೭. ತುಂಗಭುಜನು ಸಹಿತ ಅವನ ಮತಂಗಜವನ್ನೂ ಪ್ರತಿಭಟಿಸಿ ನಿಂತ ಚತುರಂಗಬಲವನ್ನು ಸಿಂಹವು ಕೊಂದಿತು. ದುರ್ಮಂತ್ರಗಳನ್ನು ಮಾಡಿದರೆ ಕೆಡದವರು ಯಾರಾದರೂ ಇರುವರೇ ಆದರಿಂದ ಈ ಚಿರಂಜೀವಿ ಶತವೃದ್ಧನೂ ಶಸ್ತ್ರಹತನೂ ಎಂದು ಬಗೆಯದೆ ಈತನನ್ನು ಎತ್ತಿಕೊಂಡು ಒಯ್ದು ನಮ್ಮೊಡನೆ ಇಟ್ಟುಕೊಂಡಲ್ಲಿ ಇಂತಹ ಅನರ್ಥವಾಗುವುದು ಎಂದು ಹೇಳಿದ ಮುಖ್ಯಮಂತ್ರಿಯ ಮಾತನ್ನು ಕೇಳಿ ಅರಿಮರ್ದನನು

ಶರಣೆನೆ ಕಾವುದು ಬೇಡಿದೊ-
ದರದೀವುದು ತೊಡರೆ ಸೆಡೆಯದಿಱೆವುದು ಪುಸಿಯೊಳ್
ಪೊರೆಯದೆ ನಡೆವುದುದದಲ್ಲದೊ-
ದರಸು ಕಡಲ್ವೆರಸು ಪೊಡವಿಗರಸಾದಪನೆ ೩೪೮

ಅದಱಿಂದಿವಂ ನಮಗ ಶರಣಾಗತನೆಂದು ಪೋಗದೆ ನಿಂದನದಱಿಂದೆಂತುಂ ಕಾಯಲ್ವೇಳ್ಕು ದಿನ್ನೀಮುಸಿರದಿರಿಮೆಂದ ಕೌಶಿಕಾಧೀಶ್ವರನ ಮಾತೆಲ್ಲಮಂ ಕೇಳ್ದು ಚಿರಂಜೀವಿಯಿಂತೆಂದಂ :

ಗುಣನಿಧಿ ದೇವ ಕೌಶಿಕಶಿಖಾಮಣಿ ಬುದ್ಧಿವಿಹೀನ ನಿನ್ನನೆಂ
ವ್ರಣಗಣವೇದನಾವಿಕಳನೆಂ ಶತವೃದ್ಧನೆನೆನ್ನನುಯ್ವೊಡೇ-
ನಣಿಯರವಿಷ್ಟಮಪ್ಪುದೆನೆ ನೀಂ ಕರುಣಿಂಬೆಸಸಿತ್ತೊಡಿತ್ತೊಡಾ
ಕ್ಷಣದೊಳೆ ತೋಱುದೆಂ ಸಲೆ ಮದೀಯ ಮನೋಗತಮಪ್ಪ ಕಾರ್ಯಮಂ ೩೪೯

ಎಂದೊಡರಿಮರ್ದನನಿಂತೆಂದಂ :

ನಿನಗಾವುದಿಷ್ಟಮದನಿ-
ತ್ತೆನಮೋಘಂ ಬೇಡಿಕೊಳ್ವುದೆನಲೊಡಮಾ ಕಾ-
ಕನಿಕಾಯ ನಾಯಕಾಮಾ-
ತ್ಯನಿಕರಮುಖ್ಯಂ ಹಸಾದಮೆಂದಿಂತೆಂದಂ ೩೫೦

ದೇವಾ! ನಿನ್ನ ಸತ್ಯತ್ಯಾಗಪರಾಕ್ರಮಾದಿಗುಣವರ್ಣನಂಗೆಯ್ಯೆ ಮೇಘವರ್ಣನೆನಗಿನಿತಪತೆಯಂ ಮಾಡಿದನೀ ಪರಾಭವಮನಗ್ನಿಪ್ರವೇಶಂಗೆಯ್ದು ನೀಗಿ ಪತತ್ರಿಗೋತ್ರಾಧಿಪನಪ್ಪ ಭವದೀಯ ವಂಶದೊಳ್ ಪುಟ್ಟಿ,

ಹೀಗೆಂದನು : ನೀನು ಹೇಳಿದ ಮಾತು ತಪ್ಪು ಎಂದು ಹೇಳಲಾಗುವುದಿಲ್ಲ : ೩೪೮. ಅರಸುಗೈವಾತನು ಶರಣು ಎಂದರೆ ಕಾಪಾಡಬೇಕು; ಬೇಡಿದರೆ ನೀಡಬೇಕು; ತೊಂದರೆಯನ್ನು ಉಂಟುಮಾಡಿದರೆ ಹೆದರದೆ ಇರಿಯಬೇಕು ; ಹುಸಿತನವನ್ನು ರಕ್ಷಿಸದೆ ನಡೆಯಬೇಕು ; ಅಲ್ಲದಿದ್ದರೆ, ಕಡಲವರೆಗಿನ ಪೊಡವಿಗೆ ಅರಸನೆನಿಸುವನೇ ! ವ॥ ಅದರಿಂದ ಇವನು ನಮಗೆ ಶರಣಾಗತನೆಂದು ಹೋಗದೆ ನಿಂತನು ; ಅದರಿಂದ ಹೇಗೂ ಕಾಪಾದಲೇ ಬೇಕು ; ಇನ್ನು ನೀವು ಸುಮ್ಮನಿರಿ ಎಂದು ಹೇಳಿದ ಕೌಶಿಕಾಧೀಶ್ವರನ ಮಾತೆಲ್ಲವನ್ನೂ ಕೇಳಿ ಚಿರಂಜೀವಿ ಹೀಗೆಂದನು : ೩೪೯. ಗುಣನಿಧಿದೇವಾ! ಕೌಶಿಕಶಿಖಾಮಣಿ! ನಾನು ಬುದ್ಧಿವಿಹೀನನಾಗಿರುವೆನು; ವ್ರಣಗಣ ವೇದನಾವಿಕಳನಾಗಿರುವೆನು; ಶತವೃದ್ಧನಾಗಿರುವೆನು; ನನ್ನನ್ನು ನೀನು ತೆಗೆದುಕೊಂಡು ಹೋದರೆ ಅದೇನು ನಿನ್ನವರಿಗೆ ಇಷ್ಟವೆನಿಸೀತೇ ? ನೀನು ಕರುಣೆಯಿಂದ ನನಗೆ ದಯಪಾಲಿಸುವುದಾದರೆ ಆ ಕ್ಷಣದಲ್ಲೇ ನನ್ನ ಮನೋಗತ ಕಾರ್ಯವನ್ನು ತೋರಿಸುವೆನು. ವ॥ ಅದಕ್ಕೆ ಅರಿಮರ್ದನನು ಹೀಗೆಂದನು: ೩೫೦. ನಿನಗೇನು ಇಷ್ಟವೋ ಅದನ್ನು ತಪ್ಪದೆ ಕೊಟ್ಟೆನು; ಬೇಡಿಕೊಳ್ಳು ಎನ್ನಲು ಆ ಕಾಕನಿಕಾಯ ನಾಯಕಾಮಾತ್ಯನಿಕರಮುಖ್ಯನು ಪ್ರಸಾದವೆಂದು ಹೀಗೆಂದನು : ವ॥ ದೇವಾ! ನಿನ್ನ ಸತ್ಯ ತ್ಯಾಗದ ಪರಾಕ್ರಮಾದಿ ಗುಣಗಣವರ್ಣನೆಯನ್ನು ಮಾಡಲು ಮೇಘವರ್ಣನು ನನಗೆ ಇಂಥ ಅವಸ್ಥೆಯನ್ನು ಉಂಟುಮಾಡಿದನು. ಈ ಪರಾಭವವನ್ನು ಅಗ್ನಿಪ್ರವೇಶ ಮಾಡಿ ನೀಗಿಕೊಳ್ಳುವೆನು. ಬಳಿಕ ಪತತ್ರಿಗೋತ್ರಾಧಿಪನಾದ ಭವದೀಯವಂಶದಲ್ಲಿ ಹುಟ್ಟಿ

ಪವಮಾನ ಪ್ರಿಯನಂದನಂ ಫಣಿಪತಾಕಾನೀಕಮುಂ ಚಕ್ರಿ ದಾ-
ನವರಂ ಸಂಗರದಲ್ಲಿ ಕೊಂದ ತೆಱದಿಂದಾಭೀಳ ಕಾಕಾಳಿಯಂ
ತವೆ ಕೊಂದೀ ಧರೆ ಮೆಚ್ಚೆ ಮಟ್ಟಿಸುವೆನುಗ್ರಾಟೋಪಮಂ ಮೇಘವ-
ರ್ಣವಧೂಲೋಚನ ವಾರಿಧಾರೆಯೊಳಮುಸ್ತ್ಕೋಪದಾವಾಗ್ನಿಯಂ ೩೫೧

ಎಂದು ನುಡಿದ ಚಿರಂಜೀವಿಯ ಮಾತಂ ರಕ್ತಾಕ್ಷಂ ಕೇಳ್ದು ಮುಕ್ತೋಷ್ಣನಾಗಿ ಮತ್ತಮಿಂತೆಂದಂ: ಎಲೆ ವಾಯಸ ! ನಿನ್ನ ಮಾಯಾಪಾಶದೊಳರಿಮರ್ದನಂ ತೊಡರ್ದನದುವೆ ಸಾಲ್ಗುಮೆಂದಿರದಾಗಮಾನುಗತಮಲ್ಲದುದಂ ನುಡಿವೆಯಪ್ಪೆಯದೆಂತೆನೆ : ವಾಕ್ಯಂ ॥ ಸ್ವಯೋನಿಂ ಮೂಷಿಕಂ ಪ್ರಾಪ್ತಾ ಎಂಬ ಕಥೆಯಂ ಕೇಳ್ದಱಿವುದಿಲ್ಲಕ್ಕುಮೆಂದಾ ರಕ್ತಾಕ್ಷನಿಂತೆಂದಂ

೧೦. ಮುನಿಯುಂ ಇಲಿಯುಂ

ಭಾಸ್ವತ್ತೇಜಂ ಯಮ ನಿಯ-
ಮ ಸ್ವಾಧ್ಯಾಯಾದಿ ಕರ್ಮನಿಯತವ್ರತಸ-
ರ್ವಸ್ವನತಿಪ್ರಖ್ಯಾತ ತ-
ಪಸ್ವಿ ಯಶಶ್ಶಾಲಿಯಜ್ಞನೆಂಬಂ ಪೆಸರಿಂ ೩೫೨

ಮದನಾರಾತಿ ಶಿರಶ್ಶಿಖಾಮಣಿಯನಂಭೋಜನಾಕೃಷ್ಟ ಸಂ-
ಪದೆಯಂ ಶ್ರೀಸಗರಾನ್ವಯೋದ್ಧರಣ ಕಾರ್ಯಾಚಾರ್ಯೆಯಂ ಗೋತ್ರಭಿ-
ನ್ನದಮಾತಂಗ ಮದಾಂಬು ಸಂಗಮ ಕಷಾಯೀಭೂತೆಯಂ ಯಜ್ಞನೆ-
ಯ್ದಿದನುತ್ತುಂಗತರಂಗೆಯಂ ಶಫರಲೋಲಾಪಾಂಗೆಯಂ ಗಂಗೆಯಂ ೩೫೩

ಪವಮಾನಪ್ರಿಯನಂದನನು ಫಣಿಪತಾಕಾನೀಕವನ್ನೂ ಚಕ್ರಿಯು ದಾನವರನ್ನೂ ಸಂಗರದಲ್ಲಿ ಕೊಂದ ರೀತಿಯಲ್ಲಿ ಆಭೀಳ ಕಾಕಾಳಿಯನ್ನು ಚೆನ್ನಾಗಿ ಕೊಂದು ಈ ಧರೆ ಮೆಚ್ಚುವಂತೆ ಅವರ ಉಗ್ರಕೋಪಾಟೋಪವನ್ನು ಕುಗ್ಗಿಸುವೆನು; ಮೇಘವರ್ಣ ವಧೂಲೋಚನ ವಾರಿಧಾರೆಯಿಂದ ನನ್ನ ಕೋಪದಾವಾಗ್ನಿಯನ್ನು ನಂದಿಸುವೆನು. ಚಿರಂಜೀವಿಯ ಈ ಮಾತುಗಳನ್ನು ರಕ್ತಾಕ್ಷನು ಕೇಳಿ ಮುಕ್ತೋಷ್ಣನಾಗಿ ಹೀಗೆಂದನು : ಎಲೆ ವಾಯಸ! ನಿನ್ನ ಮಾಯಾಪಾಶದಲ್ಲಿ ಅರಿಮರ್ದನನು ಸಿಕ್ಕಿಕೊಂಡನು ; ಅಷ್ಟೇ ಸಾಕು. ಆಗಮಾನುಗತವಲ್ಲದುದನ್ನು ನೀನು ನುಡಿಯುತ್ತಿರುವೆ. ಹೇಗೆಂದರೆ, ವಾ॥ "ಸ್ವಯೋನಿಂ ಮೂಷಿಕಾ ಪ್ರಾಪ್ತಾ...." ಎಂಬ ಕಥೆಯನ್ನು ನೀನು ತಿಳಿದಿರಲಿಕ್ಕಿಲ್ಲ ಎಂದು ಆ ರಕ್ತಾಕ್ಷನು ಹೀಗೆಂದನು : ೩೫೨. ತೇಜಶ್ಶಾಲಿಯೂ ಯಮನಿಯಮ ಸ್ವಾಧ್ಯಾಯಾದಿ ಕರ್ಮನಿಯತ ವ್ರತಸರ್ವಸ್ವನೂ ಅತಿ ಪ್ರಖ್ಯಾತ ತಪಸ್ವಿಯೂ ಯಶಶ್ಶಾಲಿಯೂ ಆದ ಯಜ್ಞನೆಂಬ ಹೆಸರಿನ ಋಷಿ ಇದ್ದನು. ಆ ತಪೋಧನನು ಒಂದು ದಿನ ಮಂದಾಕಿನಿಯನ್ನು ಮೀಯಲೆಂದು ಹೊರಹೊರಟು ಗಂಗಾನದಿಗೆ ಬಂದನು. ೩೫೩. ಶಿವನ ಶಿರಸ್ಸಿನ ಚೂಡಾ ಮಣಿಯೂ ವಿಷ್ಣುವಿನಿಂದ ಆಕರ್ಷಿತಳಾದ ಸಂಪತ್ತುಳ್ಳವಳೂ, ಶ್ರೀ ಸಗರಚಕ್ರವರ್ತಿಯ ವಂಶೋದ್ಧಾರ ಕಾರ್ಯದ ಆಚಾರ್ಯೆಯೂ, ಐರಾವತದ ಮದಜಲದಿಂದ ಕೂಡಿ ಕಷಾಯೀಭೂತೆಯೂ ಉತ್ತುಂಗತರಂಗೆಯೂ ಮೀನುಗಳು ಆಡುವ ಕಡೆಗಣ್ಣುಳ್ಳವಳೂ ಆದ ಗಂಗೆಯನ್ನು ಯಜ್ಞನು

ಅಂತೆಯ್ದುವಂದಮರಾಪಗೆಯಂ ಮಿಂದು ಸುರಾಸುರ ಚೂಡಾಮಣಿ ಮರೀಚಿಮಾಲಾಲಂಕೃತ ಚಾರುಚರಣಾರವಿಂದನುಮುದಯಾಚಲ ಚಕ್ರವಾಳ ಚಕ್ರವರ್ತಿ ಚೂಡಾಮಣಿಯುಂ ತಮಃಪಟಲಪಾಟಲಾರಿಷ್ಟನುಂ ಬಿಸಜನಿತಂಬಿನೀ ಮನೋನಯನಾನಂದನನುಂ ಸಕಲ ಜಗದಟನ ಮಹಾಸೂತ್ರಧಾರನುಂ ತ್ರೈಲೋಕ್ಯದೀಪಕನುಂ ಪ್ರಿಯವಿಯೋಗವಿಧುರಚಕ್ರವಾಕ ಚಕ್ರಮನಃಪೀಡಾವಿಘಟನ ಚತುರನುಂ ಸೀರಪಾಣಿಪರಿಧಾನ ಶ್ಯಾಮಾಯಮಾನಶಿಶಿರ ಶೀಕರ ಮಹಾನೀಲಮಣಿಹಾರ ಯಮುನಾ ವಿಲಾಸಿನೀಜನಕನುಂ ನಿಜರಥತುರಗನಿಕರಖರಖುರಪುಟಹತವಿಭಿನ್ನಚಾಮೀಕರ ಮಹೀಧರಾಗ್ರಗ್ರಾವರಜಃ ಪಟಲಾಚ್ಛಾದಿತದಿಙ್ಮಂಡಲನುಂ ಆಖಂಡಲದಿಗಂಗನಾಮಣಿಕುಂಡಲನುಂ ಶತಮುಖಪಂಚಮುಖಾಷ್ಟಾಪದ ದಶರಥತನೂಭವಕುಳಾಗ್ರೇಸರನುಂ ತ್ರಯೀಮಯನುಂ ನಿತ್ಯೋದಯನುಮಪ್ಪ ಗಭಸ್ತಿಮಾಲಿಗರ್ಘ್ಯಮ ನೆತ್ತಿದ ಹಸ್ತಕಮಲದೊಳಂಬರದೊಳಾಡುವ ಪರ್ದಿನ ಬಾಯಿಂದಂ ಬಿರ್ದು ಬರ್ದುಂಕಿದೊಂದು ಪೆಣ್ಣಿಲಿಯಂ ಕಂಡದನಾದರಿಸಿ ನೋಯಲೀಯದೆ ಗುಂಡಿಗೆಯೊಳಿಕ್ಕಿ, ಬಚಿಕ್ಕೆ,

ಸ್ನಾನಜಪಹೋಮ ನಿಯಮ
ಧ್ಯಾನಾದಿಕ್ರಿಯೆಗಳೆಲ್ಲಮಂ ತೀರ್ಚಿ ನಿಜ-
ಸ್ಥಾನಕ್ಕುಯ್ದಂ ಯೋಗ ನಿ-
ಧಾನಂ ಪಿರಿದುಂ ಪ್ರಯತ್ನದಿಂ ಮೂಷಿಕೆಯಂ ೩೫೪

ಅಂತುಯ್ದು ಮುನೀಶ್ವರನದರ್ಕೆ ಪಿರಿದುಂ ಕರುಣಿಸಿ ಕೂರ್ಮೆ ಕೈಗಣ್ಮೆ ಮಾಣದೆ

(ಉಜ್ವಲ ವೃತ್ತಂ)

ಮುನ್ಯಧೀಶ್ವರನೀಶ್ವರಕಲ್ಪಂ ಸತ್ಯವಚೋನಿಳಯಂ ಜಗ-
ನ್ಮಾನ್ಯನಾಗಳೆ ಮೂಷಿಕೆಯಂ ನೀಂ ಕನ್ಯಕೆಯಾಗೆನೆ ವಿಸ್ಫುರ-
ತ್ಕನ್ಯಕಾಕೃತಿಯಂ ತಳೆದಿರ್ದಳ್ ತಾಂ ತ್ರಿದಿವಾಂಗನೆವೊಲವಳ್
ನಾನ್ಯಥಾಮುನಿಭಾಷಿತಮೆಂಬೀ ವಾಕ್ಯಮದೇಂ ಪುಸಿಯಕ್ಕುಮೇ ೩೫೫

ಅಂತು ದಿವ್ಯಕನ್ಯಕಾಕಾರಮಂ ತಾಳ್ದಿರ್ದ ಕನ್ಯಕೆಯಾದಿಲಿಯಂ ಕಂಡು ಪಿರಿದುಂ ಮೋಹದಿಂ ರಕ್ಷಿಸುತ್ತುಮಿರೆ ಕೆಲವಾನುಂ ದಿವಸಕ್ಕಾಕೆ ವಿವಾಹಯೋಗ್ಯೆಯಾಗಿರ್ದುದಂ ಯೋಗೀಂದ್ರಂ ಕಂಡಿನ್ನೇಗೆಯ್ವೆನೆಂದು ಚಿಂತಿಸಿ.

ಸೇರಿದನು. ವ|| ಆ ಅಮರಾಪಗೆಯನ್ನು ಮಿಂದು ಸೂರ್ಯನಿಗೆ ಅರ್ಘ್ಯವನ್ನು ಕೊಡಲು ಎತ್ತಿದ ಕರಕಮಲದಲ್ಲಿ ಆಕಾಶದಲ್ಲಿ ಹಾರಾಡುವ ಹದ್ದಿನ ಬಾಯಿಯಿಂದ ಬಿದ್ದು ಬದುಕಿದ ಒಂದು ಹೆಣ್ಣಿಲಿಯನ್ನು ಕಂಡು ಆದರಿಸಿ ನೋವಾಗದಂತೆ ತನ್ನ ಕಲಶಕ್ಕೆ ಹಾಕಿಕೊಂಡನು. ಬಳಿಕ ೩೫೪. ಸ್ನಾನ ಜಪ ಹೋಮ ನಿಯಮ ಧ್ಯಾನಾದಿಕ್ರಿಯೆಗಳನ್ನೆಲ್ಲ ತೀರಿಸಿ ಆ ಮೂಷಿಕೆಯನ್ನು ಹಿರಿಯ ಪ್ರಯತ್ನದಿಂದ ತನ್ನ ಸ್ಥಾನಕ್ಕೆ ತೆಗೆದುಕೊಂಡು ಹೋದನು. ವ|| ಮುನೀಶ್ವರನು ಅದರ ಬಗೆಗೆ ಅತಿಶಯವಾಗಿ ಕರುಣಿಸಿ ಪ್ರೀತಿಯುಂಟಾಗಲು ೩೫೫. ಮುನ್ಯಧೀಶ್ವರನೂ ಈಶ್ವರಕಲ್ಪನೂ ಸತ್ಯವಚೋನಿಳಯನೂ ಜಗನ್ಮಾನ್ಯನೂ ಆದ ಋಷಿಯು ಮೂಷಿಕೆಯನ್ನು ನೀನು ಕನ್ಯಕೆಯಾಗು ಎನ್ನಲು ತ್ರಿದಿವಾಂಗನೆಯಂತೆ ವಿಸ್ಫುರತ್ಕನ್ಯಕಾಕೃತಿಯನ್ನು ತಳೆದಳು. 'ನಾನ್ಯಥಾ ಮುನಿಭಾಷಿತಂ' ಎಂಬ ಮಾತು ಹುಸಿಯಾಗುವುದೇ ! ವ|| ಹಾಗೆ ದಿವ್ಯಕನ್ಯಕಾಕಾರವನ್ನು ತಾಳಿದ ಕನ್ಯಕೆಯಾದ ಇಲಿಯನ್ನು ಕಂಡು ಅತಿಮೋಹದಿಂದ ರಕ್ಷಿಸುತ್ತಿರಲು ಕೆಲವು ಕಾಲದಲ್ಲಿ ಅವಳು

ಶ್ಲೋ॥ ಪಿತೃಗೇಹೇ ತು ಯಾ ಕನ್ಯಾರಜಃ ಪಶ್ಯತ್ಯಸಂಸ್ಕೃತಾ
ಅಪರಸ್ಯತು ಸಾ ವೇಶ್ಯಾ ಜಘನ್ಯಾ ವೃಷಲೀ ಮತಾ ॥೧೭೭॥

ಟೀ॥ ತಂದೆಯ ಮನೆಯೊಳಿರ್ದ ಕನ್ಯಕೆ ಮದುವೆಯಾಗದೆ ಮುನ್ನವೆ ಮೈನೆಱೆದೊಡಾಕೆ ಸೂಳೆಯೋಪಾದಿಯಲ್ಲಿ ಒಕ್ಕಲಗಿತ್ತಿಯಿಂದಂ ಕಷ್ಟ. ಅದು ಕಾರಣದಿಂ ಕನ್ಯಕೆ ಪುಷ್ಪವತಿಯಾಗದನ್ನೆಗಂ ಕುಡಲ್ವೇಳ್ಪುದೆಂದು,

ಅನುರೂಪಂಗೆ ಕುಲೀನಂ-
ಗೆ ನಿಖಿಲವಿದ್ಯಾವಿದಂಗೆ ತೇಜೋನಿಳಯಂ-
ಗನವದ್ಯಾಚಾರಂಗೀ-
ವನಜಾಕ್ಷಿಯನೀವೆನೆಂದು ದಿವ್ಯಮುನೀಂದ್ರಂ ೩.೫೬

ಅಂತಾಕೆಯ ಮದುವೆಯಂ ಮಾಳ್ಪ ಕಜ್ಜಕುಜ್ಜುಗಮನೆತ್ತಿಕೊಂಡುಮೀಕೆಗೆ ವರನಪ್ಪೊಡೆ ಲೋಕೈಕನೇತ್ರನುಂ ಸಕಲಜಗತ್ಪವಿತ್ರನುಂ ಶತಪತ್ರಮಿತ್ರನುಮಧಿಕಪ್ರತಾಪನುಮಪ್ಪಾದಿತ್ಯ ನಾಗಲ್ವೇಳ್ಕುಮೆಂದು ನಿಶ್ಚಯಂಗೆಯ್ದು ಶುಭದಿನ ಶುಭಮುಹೂರ್ತಮಂ ಸಾಧಿಸಿಕೊಂಡು,

ಪರಿಣಯನಾರ್ಥಂ ಭಾಸುರ-
ಸುರಮುಕುಟನಿಘೃಷ್ಟಚರಣಕಮಲನನುದ್ಯ-
ದ್ವರದನನಾದಿತ್ಯನನಾ-
ದರದಿಂದಂ ನೆನೆದು ಬರಿಸಿದಂ ಮುನಿಮುಖ್ಯಂ ೩.೫೭

ಅಂತು ಬರಿಸೆ ಬಂದು,

(ಪೃಥ್ವೀವೃತ್ತಂ)

ಕನತ್ಕನಕರಂಜಿತಂ ನಿಜಕರಂ ಜಗನ್ಮಂಡನಂ
ವನೇಜಸಖನೇಕಚಕ್ರ ರಥನಸ್ತದೋಷೋದಯಂ
ಮನೋಹರತರಪ್ರಭಂ ಸುರವರಂ ತ್ರಿಲೋಕಸ್ತುತಂ
ಮುನೀಶ್ವರನ ಮುಂದೆ ನಿಂದನನಘಂ ದಿನಾಧೀಶ್ವರಂ ೩.೫೮

ವಿವಾಹಯೋಗ್ಯೆಯಾದುದನ್ನು ಯೋಗೀಂದ್ರನು ತಿಳಿದು ಇನ್ನೇನು ಮಾಡಲಿ ಎಂದು ಚಿಂತಿಸಿದನು. ತಂದೆಯ ಮನೆಯಲ್ಲಿದ್ದ ಕನ್ಯಕೆ ಮದುವೆಯಾಗುವ ಮೊದಲೇ ಮೈನೆರೆದರೆ ಆಕೆ ಸೂಳೆಯಂತೆ, ಒಕ್ಕಲಗಿತ್ತಿಗಿಂತಲೂ ಕಷ್ಟೆಯಾಗಿರುವಳು. ಅದರಿಂದ ಕನ್ಯಕೆಯು ಪುಷ್ಪವತಿಯಾಗುವಷ್ಟರಲ್ಲಿ ಮದುವೆಮಾಡಿಕೊಡಬೇಕು ಎಂದು ೩.೫೬. ಆ ದಿವ್ಯ ಮುನೀಂದ್ರನು ಅನುರೂಪನೂ ಕುಲೀನನೂ ನಿಖಿಲ ವಿದ್ಯಾವಿದನೂ ತೇಜೋನಿಳಯನೂ ಅನವದ್ಯಾಚಾರನೂ ಆದ ವರನಿಗೆ ಈ ವನಜಾಕ್ಷಿಯನ್ನು ಕೊಡುವೆನೆಂದು ನಿರ್ಧರಿಸಿದನು. ವ॥ ಹಾಗೆ ಆಕೆಯ ಮದುವೆಯನ್ನು ಮಾಡುವ ಕಾರ್ಯೋದ್ಯುಕ್ತನಾಗಿ ಈಕೆಗೆ ವರನಾಗುವುದಾದರೆ ಲೋಕೈಕನೇತ್ರನೂ ಸಕಲ ಜಗತ್ಪವಿತ್ರನೂ ಶತಪತ್ರಮಿತ್ರನೂ ಅಧಿಕಪ್ರತಾಪನೂ ಆದ ಆದಿತ್ಯನಾಗಬೇಕೆಂದು ನಿಶ್ಚಯಮಾಡಿ ಶುಭದಿನ ಶುಭಮುಹೂರ್ತವನ್ನು ಸಾಧಿಸಿದನು. ೩.೫೭. ಪರಿಣಯಕ್ಕಾಗಿ ಆದಿತ್ಯನನ್ನು ನೆನೆದು ಅವನು ಬರುವಂತೆ ಮಾಡಿದನು. ೩.೫೮. ಹೊಳೆಯುವ ಹೊಂಬಣ್ಣದ ಕಿರಣಗಳಿಂದ ಜಗತ್ತಿಗೆ ಅಲಂಕಾರಪ್ರಾಯನೂ ತಾವರೆಗಳ ಮಿತ್ರನೂ ಒಂದೇ ಚಕ್ರದ ರಥವುಳ್ಳವನೂ

ಅಂತು ತನ್ನ ಮುಂದೆ ಸನ್ನಿಹಿತನಾಗಿ ನಿಂದರವಿಂದಬಾಂಧವನ ಚರಣಸರಸೀರುಹಂಗಳಂ ಪರಮಭಕ್ತಿಯಿಂದರ್ಚಿಸಿ ವಿನಯವಿನಮಿತೋತ್ತಮಾಂಗನಾಗಿ ಮುನಿಪುಂಗವನಿಂತೆಂದಂ.

ವಿರಹಾಕ್ರಾಂತರಥಾಂಗಸಂಕುಲಮನಸ್ಸಂತಾಪವಿಚ್ಛೇದ ಭಾ
ಸುರ ತೇಜೋಧಿಕ ದೇವರಾಜ ವಿನತಶ್ರೀಪಾದಪಂಕೇಜ ಪಂ
ಕರುಹಶ್ರೀರಮಣೀಮನೋರಮಣ ಮಾದ್ಯದ್ಧ್ವಾಂತಮಾತಂಗ ಕೇ
ಸರಿ ಮಾರ್ತಂಡನೆ ನೀಂ ಪರಿಗ್ರಹಿಪುದೆನ್ನೀ ಕನ್ನೆಯಂ ಚೆನ್ನೆಯಂ ೩೫೯

ಎಂದು ಮುನಿನಾಥಂ ಬಿನ್ನಪಂಗೆಯ್ವುದುಂ ದಿನನಾಥನದು ಮೂಷಿಕೆಯಪ್ಪುದನಱಿದು ಕೇವಳಮೊಲ್ಲೆನೆಂದೊಡೆ ಮುನಿ ಮನಃಕ್ಷತಂಬಡುಗುಮೆಂದಿಂತೆಂದಂ : ಆಂ ಪ್ರತಾಪವಂತನೆಂದೆನ್ನಂ ಕರೆದು ನೀವೀ ಕನ್ನೆಯಂ ಕುಡಲ್ ಬಗೆದಿರ್. ಎನ್ನ ರಶ್ಮಿಯ ಪ್ರತಾಪಮಂ ಜೀಮೂತಂಗಳ್ ಮುಸುಕಲೀಯದೆ ಮುಸುಱಿಕೊಂಡೆನಗಮಧಿಕಂಗಳಾಗಿರ್ಕುಮವಱೆಂದವರ್ಕೆ ಕುಡುವುದೆಂದು ಪೇೞ್ದು ಪೋಪುದುಂ ಮುನಿರಾಜಂ ಮೇಘರಾಜನಂ ಬರಿಸಿ ನೀವಪ್ಪೊಡೆ ಮಹಾಪ್ರತಾಪಿಗಳದಱಿಂ ನಿಮ್ಮೊಳೊರ್ವರೀ ಕನ್ನೆಯಂ ಪರಿಗ್ರಹಿಸಿಮೆಂಬುದುಂ ಅಂಬುದಂಗಳ್ ನಿಮ್ಮಡಿ, ನೀವೆಮ್ಮಂ ಪ್ರತಾಪವಂತರೆಂದೆ ಬಗೆದಿರೆಮ್ಮನೊಂದು ಮುಹೂರ್ತಮಾತ್ರದಿಂ ಪವನಂ ಪ್ರಳಯಕ್ಕೆ ಪಾಱೆ ಬೀಸುವನದಱಿಂ ನಿಮ್ಮ ಸುತೆಗೆ ಮರುತನೆ ವರನಕ್ಕುಮಾತನಂ ಬರಿಸಿಮೆನಲೊಡನಾ ದಿವ್ಯಮುನಿ

ದೋಷಗಳಿಲ್ಲದವನೂ ಮನೋಹರವಾದ ಕಾಂತಿಯಿಂದ ಕೂಡಿದವನೂ ಸುರಶ್ರೇಷ್ಠನೂ ಮೂರುಲೋಕಗಳಿಂದ ಸ್ತುತನಾದವನೂ ಆದ ಪುಣ್ಯರೂಪಿ ದಿನಕರನು ಆ ಮುನೀಶ್ವರನ ಮುಂದೆ ಬಂದು ನಿಂತನು. ವ|| ಹಾಗೆ ತನ್ನ ಮುಂದೆ ಸನ್ನಿಹಿತನಾಗಿ ನಿಂತ ಅರವಿಂದಬಾಂಧವನ ಚರಣ ಸರಸೀರುಹಗಳನ್ನು ಪರಮ ಭಕ್ತಿಯಿಂದ ಅರ್ಚಿಸಿ ವಿನಯದಿಂದ ತಲೆಯನ್ನು ಬಾಗಿಸಿ ಮುನಿಶ್ರೇಷ್ಠನು ಹೀಗೆಂದನು: ೩೫೯. ವಿರಹದಿಂದ ಬೆಂದ ಚಕ್ರವಾಕಸಂಕುಲದ ಮನಸ್ಸಿನ ಬೇಗೆಯನ್ನು ನೀಗಿದವನೂ, ಹೊಳೆಯುವ ತೇಜಶ್ಶಾಲಿಯೂ, ದೇವೇಂದ್ರನು ನಮಸ್ಕರಿಸಿದ ಶ್ರೀಪಾದಕಮಲದ ಸೌಂದರ್ಯಕ್ಕೆ ಪತಿಯೂ ಕಗ್ಗತ್ತಲೆಯೆಂಬ ಮದ್ದಾನೆಗೆ ಸಿಂಹವೂ ಆಗಿರುವ ಮಾರ್ತಂಡನೇ! ನೀನು ನನ್ನ ಈ ಚೆನ್ನೆಯಾದ ಕನ್ಯೆಯನ್ನು ಪರಿಗ್ರಹಿಸಬೇಕು. ವ|| ಆಗ ದಿನನಾಥನು ಅದು ಮೂಷಿಕೆಯಾಗಿರುವುದನ್ನು ತಿಳಿದು ಒಲ್ಲೆನೆಂದರೆ ಮುನಿಯ ಮನಸ್ಸಿಗೆ ನೋವಾಗುವುದೆಂದು ಹೀಗೆಂದನು : ನಾನು ಪ್ರತಾಪಶಾಲಿಯೆಂದು ನನ್ನನ್ನು ಕರೆದು ನೀವು ಈ ಕನ್ಯೆಯನ್ನು ಕೊಡಲು ಇಷ್ಟಪಟ್ಟಿರಿ. ನನ್ನ ಕಿರಣಗಳನ್ನು ಮೋಡಗಳು ಮುತ್ತಿಕೊಂಡು ನನ್ನನ್ನೂ ಮೀರಿಸಿದ ಪ್ರತಾಪಶಾಲಿಗಳಾಗಿರುವುವು ; ಅವುಗಳಿಗೆ ನಿಮ್ಮ ಮಗಳನ್ನು ಕೊಡಬೇಕು ಎಂದು ಹೇಳಿ ಹೋದನು. ಮುನಿರಾಜನು ಮೇಘರಾಜನನ್ನು ಕರೆಯಿಸಿ ನೀವಾದರೋ ಮಹಾಪ್ರತಾಪಿಗಳು ಆದರಿಂದ ನಿಮ್ಮಲ್ಲಿ ಒಬ್ಬರು ಈ ಕನ್ಯೆಯನ್ನು ಪರಿಗ್ರಹಿಸಿರಿ ಎನ್ನಲು ಅಂಬುದಗಳು ಪೂಜ್ಯರೇ, ನೀವು ನಮ್ಮನ್ನು ಪ್ರತಾಪವಂತರೆಂದು ತಿಳಿದಿರಿ. ನಮ್ಮನ್ನು ಒಂದು ಕ್ಷಣಮಾತ್ರದಲ್ಲಿ ಪವನನು ಪ್ರಳಯಕ್ಕೆ ಹಾರಿಸಿಬಿಡುವನು. ಆದರಿಂದ ನಿಮ್ಮ ಸುತೆಗೆ ಮರುತನೇ ತಕ್ಕ ವರ ; ಆತನನ್ನು ಕರೆಯಿಸಿ ಎನ್ನಲು ಆ ದಿವ್ಯ ಮುನಿ ಹುತವಹಸಖನನ್ನು ಕರೆಸಿ ನೀನು

ಹುತವಹಸಖನಂ ಬರಿಸಿ ನೀನೀ ಕನ್ನೆಯಂ ವಿವಾಹಮಾಗಲ್ವೇಳ್ಕುಮೆನೆ ವಾಯುದೇವನೀ ತಪೋಧನನಪ್ಪೊಡೆ ಮಹಾನೈಷ್ಠಿಕಂ, ಮತ್ತಮೀತಂಗೀ ಕನ್ನೆಯೆಂತುಂ ಮಗಳಾಗಳೆಂದು ದಿವ್ಯಜ್ಞಾನದಿಂದಾಕೆ ಮೂಷಿಕೆಯಪ್ಪುದನಱಿದಿಂತೆಂದಂ : ನೀವೆನ್ನಂ ಪ್ರತಾಪಸಂಪನ್ನನೆಂದು ಬಗೆದಿರಾನುಂ ಕುಲಗಿರಿಗಳನಪ್ಪೊಡೆಂತುಂ ತೆರಳ್ಚಲಾಱೆನದಱಿಂದೆನಗಂ ನಗಂಗಳ್ ಪಿರಿಯವೆನೆ ಪರಮಯೋಗೀಂದ್ರನತಿ ಸಂತೋಷಂಗೆಯ್ದು

ಬರವೇಳ್ಪಟ್ಟುದನಿಂದ್ರಕೀಲ ಹಿಮವತ್ಕುತ್ಕೀಲ ವಿಂಧ್ಯಾವನೀ
ಧರ ಕೈಲಾಸಕುಭೃತ್ತ್ರಿಕೂಟಕುಧರ ಶ್ರೀಶೈಲ ಪೂರ್ವಾಪರಾ
ಪರ ಭೂಭೃನ್ಮಲಯಾದ್ರಿ ಕ್ರೌಂಚಶಿಖರಿ ಶ್ರೀಮನ್ಮಹಾಮೇರು ಮಂ
ದರ ಮೈನಾಕ ಮಹೀಧ್ರ ನೀಲ ನಿಷಧ ಕ್ಷೋಣೀಧ್ರಸಂದೋಹಮಂ ೩೬೦

ಅಂತು ಬೞಿಯಟ್ಟಲೊಡಂ ಗಿರಿರಾಜರ್ ನೆರೆದು ಬಂದು ನಿಮ್ಮಡಿ, ಬೆಸನಾವುದೆಂದು ಮುಂದೆ ನಿಲಲೊಡಂ ನೋಡಿ ನೀವಪ್ಪೊಡೆ ಪೆಂಪಿನೊಳಂ ಬಿಣ್ಪಿನೊಳಂ ಸಾಹಸದೊಳಂ ಮರುತಂಗೆ ಪಿರಿಯರದು ಕಾರಣದಿಂ ನಿಮ್ಮೊಳಗೊರ್ವರೀ ಕುಮಾರಿಗೆ ಸೌಂದರ್ಯರೂಪಧಾರಿಗೆ ವರರಾಗಿಮೆಂಬುದುಂ ನೀವೆಂದಂತೆ ಪವನನಿಂದಾವೆ ಬಲ್ಲಿದರಪ್ಪೊಡಮೆಮಗಂ ಉಂದುರಂಗಳ್ ಬಲ್ಲಿದುವೆಂದೊಡವರಂ ವಿಸರ್ಜಿಸಿ ಮುನಿಮುಖ್ಯಂ ಮೂಷಿಕಮುಖ್ಯನಂ ಬರಿಸಿ ನೀನೀ ಕನ್ಯೆಯಂ ಪರಿಗ್ರಹಿಸೆಂಬುದುಂ ಮೂಷಿಕನಿಂತೆಂದಂ : ನಿಮ್ಮಡಿ, ಬೆಸಸಿದೊಡೆಮ್ಮಿರ್ಪೆಡೆ ಬಿಲಂ ನಿಮ್ಮ ಕೂಸನೆಂತುಮಿರ್ಪಿಸುವೆನದಱಿಂ ನಿಶ್ಚಯಂ ನೀವೆನಗೆ ಕುಡುವ ಬಗೆಯುಳ್ಳೊಡೆಮ್ಮ ಜಾತಿ ಮಾಡಿ ಕುಡಿಮೆನೆ ಮುನಿ ಮುನಿಸಂ

ಈ ಕನ್ಯೆಯನ್ನು ವಿವಾಹವಾಗಬೇಕು ಎಂದನು. ಅದಕ್ಕೆ ವಾಯುದೇವನು ಈ ತಪೋಧನನಾದರೋ ಮಹಾನೈಷ್ಠಿಕನು ; ಈತನಿಗೆ ಈ ಕನ್ಯೆಯು ಹೇಗೆ ಮಗಳಾದಳು ಎಂದು ದಿವ್ಯಜ್ಞಾನದಿಂದ ಆಕೆ ಮೂಷಿಕೆಯಾಗಿದ್ದುದನ್ನು ತಿಳಿದು ಹೀಗೆಂದನು : ನೀವು ನನ್ನನ್ನು ಪ್ರತಾಪಸಂಪನ್ನನೆಂದು ಬಗೆದಿರಿ ; ನಾನು ಕುಲಗಿರಿಗಳನ್ನು ಏನು ಮಾಡಿದರೂ ಸೋಲಿಸಲಾರೆ ಅದರಿಂದ ನನಗಿಂತಲೂ ಪರ್ವತಗಳು ಹಿರಿಯುವು ಎಂದನು. ಪರಮಯೋಗೀಂದ್ರನು ಅತಿ ಸಂತೋಷವನ್ನು ತಾಳಿ ೩೬೦. ಇಂದ್ರ ಕೀಲ, ಹಿಮವಂತ, ವಿಂಧ್ಯ, ಕೈಲಾಸ, ಶ್ರೀಶೈಲ, ಮಲಯಾದ್ರಿ, ಕ್ರೌಂಚಶಿಖರಿ, ಮಹಾಮೇರು, ಮಂದರ, ಮೈನಾಕ, ನೀಲಪರ್ವತ ಮೊದಲಾದ ಪರ್ವತಗಳನ್ನು ಬರಹೇಳಿ ಕರೆಕಳುಹಿಸಿದನು. ವ।। ಹಾಗೆ ಕರೆಕಳುಹಿಸಲು ಗಿರಿರಾಜರು ಬಂದು ಪೂಜ್ಯರೇ ಏನಪ್ಪಣೆ ಎಂದು ಮುಂದೆ ನಿಲ್ಲಲು ನೋಡಿ ನೀವಾದರೋ ಹಿರಿಮೆಯಲ್ಲೂ ಗಾಂಭೀರ್ಯದಲ್ಲೂ ಸಾಹಸದಲ್ಲೂ ಮರುತನಿಗಿಂತಲೂ ಹಿರಿಯರಾದುದರಿಂದ ನಿಮ್ಮಲ್ಲಿ ಒಬ್ಬರು ಈ ಕುಮಾರಿಗೆ ವರರಾಗಿರಿ ಎಂದನು. ಅದಕ್ಕೆ ಅವರು ನೀವು ಹೇಳಿದ ಹಾಗೆ ಪವನನಿಗಿಂತಲೂ ನಾವೇ ಬಲ್ಲಿದರಾದರೆ ನಮಗಿಂತಲೂ ಹೆಗ್ಗಣಗಳು ಬಲಶಾಲಿಗಳಾಗಿವೆ ಎಂದರು. ಆಗ ಅವರನ್ನು ಬಿಟ್ಟು ಮುನಿಮುಖ್ಯನು ಮೂಷಿಕಮುಖ್ಯನನ್ನು ಕರೆಯಿಸಿ ನೀನು ಈ ಕನ್ಯೆಯನ್ನು ಪರಿಗ್ರಹಿಸು ಎಂದನು. ಅದಕ್ಕೆ ಮೂಷಿಕನು ಹೀಗೆಂದನು : ಪೂಜ್ಯರೇ, ನಾವಿರುವ ಎಡೆ ಬಿಲವಾಗಿದೆ. ನಿಮ್ಮ ಮಗಳನ್ನು ನಾನು ಅಲ್ಲಿ ಹೇಗೆ ಇಟ್ಟುಕೊಳ್ಳಲಿ. ಅದರಿಂದ ನಿಜವಾಗಿಯೂ ನಿಮ್ಮ ಮಗಳನ್ನು ನನಗೇ ಕೊಡಬೇಕೆಂಬ ಇಷ್ಟ ನಿಮಗಿದ್ದರೆ ನಮ್ಮ ಜಾತಿಯನ್ನಾಗಿ ಮಾಡಿಕೊಡಿರಿ

ಮೊಗಕ್ಕೆ ತಂದು ನಿಮಗೆ ಕೂಸಂ ಕುಡುವೆನೆಂಬುದಿದೆನ್ನ ದೋಷಮಲ್ಲದೆ ನಿನ್ನ ದೋಷಮಲ್ಲೆನೆ ಮೂಷಿಕಾಧೀಶಂ ರೋಷಾವೇಶದಿಂದಿಂತೆಂದಂ :

ಕೂಸಂ ಕೊಟ್ಟಪೆನೆಂಬೀ
ದೂಸಱಿ ನೀವಿಂತವಜ್ಞೆಗೆಯ್ಯುತ್ತೆನ್ನಂ
ಬೇಸರಪುನೆ ನುಡಿದಪಿರೀ
ದೋಸಮೆ ನೀಮಱಿದುಮಱಿಯಿರೆನ್ನುನ್ನತಿಯಂ ೩೬೧ .

ಅದೆಂತೆಂದೊಡೆ ಪಾಲ್ಗಡಲಂ ಸುರಾಸುರಸಮಿತಿ ಕಡೆವಂದಾಂ ಪುಟ್ಟಿದೆಂ. ಮೃಡನ ತನೂಜನಪ್ಪ ವಿಘ್ನೇಶ್ವರಂಗೆ ವಾಹನಮಂ ಮಾಡಿ ಕುಡೆ ಮಹಾಮಹಿಮೆಯಿಂದಹಿಭೂಷಣಂಗಗ್ರಗಣ್ಯನಾಗಿರ್ಪೆನಂತಪ್ಪೆನ್ನುತ್ಪತ್ತಿಸ್ಥಿತಿಯಂ ನಿಮ್ಮಡಿ ನೀವಱಿದುಮಱಿಯದಂತೆ ನಿರಾಕರಿಸುವುದುಚಿತಮಲ್ಲೆಂಬುದುಂ ಯಜ್ಞನೀ ಮೂಷಿಕಂ ಸಾಮಾನ್ಯನಲ್ಲಮಾದೊಡಮೀ ಕನ್ನೆಯನೆಂತು ಮೂಷಿಕೆಯಂ ಮಾಟ್ಪೆನೆಂಬುದುಮಾ ಮುನೀಶ್ವರನ ಶಿಷ್ಯಂ ನಿಮ್ಮಡಿ ನೀವಿಂತೇಕೆ ಬೆಸಸಿದಿರಿದಕ್ಕೊಂದು ಕಥೆಯುಂಟು ಕೇಳಿಮೆಂದಿಂತೆಂದಂ:

೧೨. ದುರ್ವಾಸನುಂ ನಾಯುಂ

ವಾಸವನಿವಾಸದಿಂ ಕೈ
ಲಾಸದಿನತಿ ಸೇವ್ಯಮಪ್ಪ ಋಷ್ಯಾಶ್ರಮದೊಳ್
ಭಾಸುರ ತಪಃಪ್ರಭಾಪ್ರವಿ
ಭಾಸಂ ದುರ್ವಾಸನೆಂಬ ಯತಿವರನಿರ್ಪಂ ೩೬೨

ಅಂತಾ ಯತಿನಾಯಕನೊಂದು ಸಾರಮೇಯಶಿಶುವಂ ಕಂಡು ಪ್ರೀತಿವಟ್ಟು ಸಡಪುತ್ತಿರ್ಪುದುಮದು ಗಂಡುನೆರೆದುಕೊಂಡು ತುಡುಗುಣಿಯಾಗಿ ಭಾಂಡಸಂಕರಂಗೆಯ್ಯುತ್ತಿರ್ಪುದುಮಾ

ಎನ್ನಲು ಮುನಿಯು ಮುನಿಸಿಕೊಂಡು, ನಿನಗೆ ಮಗಳನ್ನು ಕೊಡುವೆನು ಎಂಬುದು ನನ್ನ ದೋಷವಲ್ಲದೆ ನಿನ್ನ ದೋಷವಲ್ಲ ಎನ್ನಲು ಮೂಷಿಕಾಧೀಶನು ರೋಷಾವೇಶದಿಂದ ಹೀಗೆಂದನು : ೩೬೧. ಮಗಳನ್ನು ಕೊಡುತ್ತೇನೆ ಎಂಬ ಕಾರಣದಿಂದಲೇ ನೀವು ನನ್ನನ್ನು ಹೀಗೆ ಅವಜ್ಞೆಯಿಂದ ನೋಡಿ ನುಡಿಯುತ್ತಿರುವಿರಿ. ನೀವು ನನ್ನ ಉನ್ನತಿಯನ್ನು ಅಂತೂ ಅರಿಯಿರಿ. ವ|| ಹಾಲುಕಡಲನ್ನು ಸುರಾಸುರರು ಕಡೆಯುವಾಗ ನಾನು ಹುಟ್ಟಿದೆನು . ಮೃಡನ ಮಗನಾದ ವಿಘ್ನೇಶ್ವರನಿಗೆ ವಾಹನವನ್ನು ಮಾಡಿಕೊಡಲು ಮಹಾಮಹಿಮೆಯಿಂದ ಅಹಿಭೂಷಣನಿಗೂ ಅಗ್ರಗಣ್ಯನಾಗಿರುವೆನು. ಅಂತಹನ ಉತ್ಪತ್ತಿ ಸ್ಥಿತಿಯನ್ನು ನೀವು ಅರಿತೂ ಅರಿಯದವರಂತೆ ನಿರಾಕರಿಸುವುದು ಉಚಿತವಲ್ಲ ಎಂದನು. ಅದಕ್ಕೆ ಯಜ್ಞನು ಈ ಮೂಷಿಕನು ಸಾಮಾನ್ಯನಲ್ಲ; ಆದರೂ ಈ ಕನ್ಯೆಯನ್ನು ಹೇಗೆ ಮೂಷಿಕೆಯನ್ನಾಗಿ ಮಾಡಲಿ ಎನ್ನಲು ಆ ಮುನೀಶ್ವರನ ಶಿಷ್ಯರು ಪೂಜ್ಯರೇ, ನೀವು ಹೀಗೇಕೆ ಕೇಳಿದಿರಿ, ಇದಕ್ಕೊಂದು ಕಥೆಯುಂಟು ಕೇಳಿರಿ ಎಂದು ಹೀಗೆ ಹೇಳಿದನು : ೩೬೨. ಸ್ವರ್ಗಕ್ಕಿಂತಲೂ ಕೈಲಾಸಕ್ಕಿಂತಲೂ ಅತ್ಯಂತ ಸೇವ್ಯವಾದ ಋಷ್ಯಾಶ್ರಮದಲ್ಲಿ ತೇಜೋವಂತನಾದ ತಪಃಪ್ರಭೆಯಿಂದ ಹೊಳೆಯುವ ದುರ್ವಾಸನೆಂಬ ಯತಿವರನು ಇರುವನು ವ|| ಅವನು ಒಂದು ನಾಯಿಯ ಮರಿಯನ್ನು ಕಂಡು ಪ್ರೀತಿಪಟ್ಟು ಸಾಕುತ್ತಿದ್ದನು. ಅದು ಗಂಡುನೆರೆದುಕೊಂಡು ತುಡುಗುಣಿಯಾಗಿ ಭಾಂಡಸಂಕರ ಮಾಡುತ್ತಿರಲು ಆ ಋಷಿಸ್ತ್ರೀಯರು ಕೂಗಾಡಲು

ಋಷಿಸ್ತ್ರೀಯರ್ ಪುಯ್ಯಲಿಡೆ ದುರ್ವಾಸನಾ ಶ್ವಾನನಂ ಪರಿಹರಿಸಲಾಱದೆ ತರುಚರನಂ ಮಾಡುವುದುಮದು ಮಟ್ಟಮಿರಲಾಱದಾಶ್ರಮಂಗಳನತಿಕ್ರಮಿಸಿ ಪೊಕ್ಕು

ಸಾರಕಮಂಡಲೋದಕಮನೊಕ್ಕು ಸುರಾರ್ಚನೆಗೆಂದು ತಂದ ಮಂ
ದಾರದ ಪೂಗಳಂ ಕೆದಱೆ ಕರ್ಪಟಮಂ ಪಱಿದಿಕ್ಕಿ ಸೀೞ್ದು ವಿ
ಸ್ತಾರ ಮೃಗಾಜಿನಾಸ್ತರಣಮಂ ಕೊಡೆಯಂ ಮುಱಿದಿಕ್ಕಿ ಸೂಸಿ ನೀ
ವಾರದ ರಾಶಿಯಂ ಬಿಡದೆ ಕಾಡಿದುದಾ ಕಪಿ ತಾಪಸರ್ಕಳಂ ೩೬೩

ಅಂತಾ ಕೋಡಗಂ ಜಿಹೋಡಾಡಿ ಕಾಡುತಿರ್ಪುದುಮದಂ ಸಾಧುಮೃಗಮಂ ಮಾೞ್ಪೆನೆಂದಾ ತಾಪಸಂ ಹರಿಣನಂ ಮಾಡುವುದುಮದಾಹಾರಾರ್ಥಮಟವಿಗೆ ಪೋಪುದುಂ ಕ್ರೂರಮೃಗಂಗಳದಂ ಕಂಡು ಬೆಂಕೊಂಡೊಡೆ ಭಯಂಗೊಂಡು ಬರ್ಪುದುಂ ದುರ್ವಾಸಂ ದೂರದೊಳ್ ಕಂಡು ಕರುಣರಸಾರ್ದ್ರಹೃದಯನಾಗಿ ಬೇಗಮಿದಿರಂ ಪೋಗಿ ಕೈಕೊಂಡೀ ಪ್ರಾಣಿಗೆಂತು ಬೇಱೆ ನಿರ್ವಾಹಕಮೆಂದು ಚಿಂತಿಸಿ ಶ್ವಾಪದಂಗಳೊಳಗೆ ಬಲವಂತನಪ್ಪ ಪುಲಿಯಾಗೆಂಬುದುಮದು ಮಹಾಪ್ರಚಂಡನಪ್ಪ ಪುಂಡರೀಕನಾಗಿ ಕರಿಕಳಭಂಗಳಂ ಪೆಳಱೆ ಪಾಯ್ವುದುಂ ತ್ರಿಗಂಡಗಳಿತನಪ್ಪುದೊಂದು ಶುಂಡಾಲ ಯೂಥಾಧಿನಾಥಂ ಕಂಡು ಕಡುಮುಳಿದು ತಗುಳ್ವುದುಂ ಭೀತನಾಗಿ ನಿಲ್ಲದೋಡಿ ದ್ವೀಪಿ ತಾಪಸನ ಸಮೀಪಕ್ಕೆ ಪರಿತರ್ಪುದುಮದಱ ಬೆನ್ನಂ ಬಿಡದಡಸುತ್ತುಂ ಬರ್ಪ ವನಗಜಮಂ ಮುನಿನಾಥಂ ಕಂಡು ಕರಿಗಳ್ಗಮರಿದಪ್ಪ ಕೇಸರಿಯಾಗೆನಲೊಡಂ.

ದಾರುಣವಕ್ತ್ರನುಗ್ರನಖರಂ ವಿಕರಾಳಮಹೋಗ್ರದಂಷ್ಟ್ರನಾ
ಪೂರಿತ ಲೋಹಿತ ಪ್ರಕಟಭೀಕರನೇತ್ರನುದಗ್ರಮೂರ್ತಿ ಗಂ
ಭೀರನಿನಾದನುನ್ನಮಿತ ಚಂಚಲವಾಲಧಿ ತನ್ನೊಳೊಪ್ಪೆ ಕಂ
ಠೀರವನಾಯ್ತು ತೊಟ್ಟನೆ ಚಮೂರುಚರಂ ಮುನಿಮುಖ್ಯನಾಜ್ಞೆಯಿಂ ೩೬೪

ದುರ್ವಾಸನು ಆ ಶ್ವಾನವನ್ನು ಪರಿಹರಿಸಲಾಗದೆ ಮಂಗನನ್ನಾಗಿ ಮಾಡಲು ಅದು ಸುಮ್ಮನಿರಲಾರದೆ ಆ ಆಶ್ರಮಗಳನ್ನು ಅತಿಕ್ರಮಿಸಿ ಹೊಕ್ಕು ೩೬೩. ಸಾರಕಮಂಡಲೋದಕವನ್ನು ಚೆಲ್ಲಿ ಸುರಾರ್ಚನೆಗೆಂದು ತಂದ ಮಂದಾರದ ಹೂಗಳನ್ನು ಕೆದರಿ ಬಟ್ಟೆಗಳನ್ನು ಹರಿದು ಹಾಕಿ ಸೀಳಿ ಕೃಷ್ಣಾಜಿನದಿಂದ ಮಾಡಿದ ಕೊಡೆಯನ್ನು ಮುರಿದುಹಾಕಿ ಧಾನ್ಯದ ರಾಶಿಯನ್ನು ಬಿಡದೆ ಚೆಲ್ಲಿ ಆ ಕಪಿಯು ತಾಪಸರನ್ನು ಕಾಡಿತು. ವ|| ಹಾಗೆ ಆ ಕೋಡಗವು ಅನಾದರಮಾಡಿ ಕಾಡುತ್ತಿರಲು ಅದನ್ನು ಸಾಧುಮೃಗವನ್ನಾಗಿ ಮಾಡುವೆನೆಂದು ತಾಪಸನು ಅದನ್ನು ಹರಿಣವನ್ನಾಗಿ ಮಾಡಲು ಅದು ಆಹಾರಾರ್ಥವಾಗಿ ಅಡವಿಗೆ ಹೋಗಲು ಕ್ರೂರಮೃಗಗಳು ಅದನ್ನು ಕಂಡು ಬೆನ್ನಟ್ಟಿ ಬರಲು ಭಯಗೊಂಡು ಹಿಂದಿರುಗಲು ದುರ್ವಾಸನು ದೂರದಿಂದ ಕಂಡು ಕರುಣಾರಸಾರ್ದ್ರಹೃದಯನಾಗಿ ಬೇಗನೆ ಅದರ ಎದುರಾಗಿ ಈ ಪ್ರಾಣಿಗೆ ಬೇರೆ ದಾರಿ ಏನು ಎಂದು ಯೋಚಿಸಿ ಪ್ರಾಣಿಗಳಲ್ಲಿ ಬಲಶಾಲಿಯಾದ ಹುಲಿಯನ್ನಾಗಿ ಮಾಡಿದನು. ಆಗ ಅದು ಮಹಾಪ್ರಚಂಡನಾದ ಪುಂಡರೀಕನಾಗಿ ಕರಿಕಳಭಗಳನ್ನು ಹೆದರಿಸಿ ಹಾಯಲು ತ್ರಿಗಂಡಗಳಿತನಾದ ಯೂಥಾಧಿನಾಥನು ಕಂಡು ಕೋಪಾಕ್ರಾಂತನಾಗಿ ಎದುರಿಸಲು ಭೀತನಾಗಿ ಓಡಿ ತಾಪಸನ ಸಮೀಪಕ್ಕೆ ಬರಲು ಅದನ್ನು ಅಟ್ಟಿ ಬರುತ್ತಿದ್ದ ವನಗಜವನ್ನು ಮುನಿನಾಥನು ಕಂಡು ಕರಿಗಳಿಗೂ ಅಸಾಧ್ಯನಾದ ಕೇಸರಿಯಾಗು ಎಂದನು. ೩೬೪. ಆಗ ದಾರುಣಮುಖನೂ ಉಗ್ರನಖನೂ ಭಯಂಕರವೂ ಮಹಾಉಗ್ರವೂ ಆದ ಹಲ್ಲುಗಳುಳ್ಳವನೂ ಕೆಂಗಣ್ಣುಗಳಿಂದ

ಅಂತಾ ವ್ಯಾಘ್ರಂ ಸಿಂಹನಾಗಿ ಗಜವ್ರಜಂ ಮೊದಲಾದ ಮೃಗವ್ರಜಂಗಳೆಲ್ಲಮನಾಟಂದು ಕೊಂದು ಮಾಣದೆ ಪುಷ್ಪಫಲಪತ್ರಶಾಖಾನಿಮಿತ್ತಂ ವನಮಂ ತೊಳಲ್ವ ಮುನಿಕುಮಾರರಂ ಕೊಲ್ವುದುಮದಂ ಕಂಡು ದುರ್ವಾಸಂ ಮುಳಿದು,

ಶ್ಲೋ॥ ಶ್ವಾವಾನರೋ ಮೃಗಶ್ಚೈವ ವ್ಯಾಘ್ರ ಸಿಂಹೋ ಮಯಾ ಕೃತಃ
ಕೃತಘ್ನೋऽಪಿ ದುರಾಚಾರಿ ಪುನಶ್ಶ್ವೈವ ಭವಿಷ್ಯತಿ ॥೧೭೮॥

ಟೀ॥ ನಾನೀ ನಾಯಂ ಕಪಿ ಹರಿಣಂ ವ್ಯಾಘ್ರಂ ಸಿಂಹಮಾಗೆ ಮಾಡಿದೆಂ, ಕೃತಘ್ನನುಂ ದುರಾಚಾರಿಯುಮಪ್ಪಿದು ಮರಳಿ ನಾಯಿ ಅಕ್ಕುಂ. ಎಂದಿಂತಾ ತಪಸ್ವಿ ಸಿಂಹಮಂ ಮರಳಿ ಶ್ವಾನನಪ್ಪಂತು ಮಾದಿದಂ. ನಿಮ್ಮಡಿ ನೀವಿದುಕಾರಣದಿಂ ಮೂಷಿಕೆಯಂ ಕಾರುಣ್ಯದಿಂ ಕನ್ನೆಯಪ್ಪಂತು ಮಾಡಿದಿರಿದಱ ಪೂರ್ವಜನ್ಮಸಂಸ್ಕಾರಮಿನ್ನುಂ ಪಱೆಪಟ್ಟುದಿಲ್ಲದಱೆಂದೀಕೆಯಂ ಮೂಷಿಕೆಯಂ ಮಾಡಿ ಕುಡಿಮೆನೆ ತಪಸ್ವಿ ತಥಾಸ್ತು ಎಂದು,

ಶ್ಲೋ॥ ಸೂರ್ಯಂ ಭರ್ತಾರಮುತ್ಸೃಜ್ಯ ಪರ್ಜನ್ಯಂ ಮಾರುತಂ ಗಿರೀನ್
ಸ್ವಯೋನಿಂ ಮೂಷಿಕಾ ಪ್ರಾಪ್ತಾ ಸ್ವಾಂ ಯೋನಿಂ ನ ಪರಿತ್ಯಜೇತ್॥೧೭೯॥

ಟೀ॥ ಸೂರ್ಯನನ್ನೂ ಮೇಘನನ್ನೂ ಮಾರುತನನ್ನೂ ಗಿರಿಗಳನ್ನೂ ವರಿಸದೆ ಮೂಷಿಕೆಯು ತನ್ನ ಹುಟ್ಟನ್ನೆ ಹೊಂದಿದಳು. ಹುಟ್ಟನ್ನು ಬಿಡಲಾಗದು. ಅಂತಾ ಕನ್ನೆ ಮುನ್ನಿನಂತೆ ಮೂಷಿಕೆಯಾದಳ್. ಆದಱೆಂ ನಿನ್ನ ನಿತಗತನದಿಂ ಶತವಾರಂ ಹುತವಹನಂ ಪ್ರವೇಶಂಗೆಯ್ದೊಡಂ ನಿತಗನೆಯಾಗಿ ಪುಟ್ಟುವೆಯೆನೆ ಆ ಮಾತಿಂಗೆ ಚಿರಂಜೀವಿಯಿಂತೆಂದಂ : ನಿತಗನುಂ ಮತಿವಿಕಳನುಮಾಗಿ ಸತ್ತೊಡಂಹುಟ್ಟೆಯಕ್ಕುಂ ಸತ್ವಮುಂ ಬುದ್ಧಿಯುಂ ನಿಶ್ಚಯಾತ್ಮಕನುಮಾಗಿ,

ಕೂಡಿದವನೂ ಎತ್ತರವಾದ ಆಕಾರನೂ ಗಂಭೀರ ಧ್ವನಿಯುಳ್ಳವನೂ ಮೇಲಕ್ಕೂ ಕೆಳಕ್ಕೂ ಚಲಿತವಾಗುವ ಬಾಲವುಳ್ಳವನೂ ಆಗಿ ಶೋಭಿಸುವ ಕಂಠೀರವನಾಗಿ ಮುನಿಶ್ರೇಷ್ಠನ ಆಜ್ಞೆಯಿಂದ ಹುಲಿಯಾಗಿದ್ದವನು ಸಿಂಹವಾಗಿ ಪರಿವರ್ತಿತನಾದನು. ವ॥ ಹಾಗೆ ಆ ವ್ಯಾಘ್ರನು ಸಿಂಹನಾಗಿ ಗಜವ್ರಜ ಮೊದಲಾದ ಮೃಗವ್ರಜಗಳೆಲ್ಲವನ್ನೂ ಹಿಡಿದು ಕೊಂದು ಪುಷ್ಪಫಲ ಪತ್ರಶಾಖಾನಿಮಿತ್ತವಾಗಿ ವನದಲ್ಲಿ ಸಂಚರಿಸುವ ಮುನಿಕುಮಾರರನ್ನು ಕೊಲ್ಲಲು ಅದನ್ನು ಕಂಡು ದುರ್ವಾಸನು ಕೋಪಿಸಿ, ನಾನು ಈ ನಾಯಿಯನ್ನು ಕಪಿ, ಹರಿಣ, ವ್ಯಾಘ್ರ, ಸಿಂಹಗಳನ್ನಾಗಿ ಮಾಡಿದೆ. ಕೃತಘ್ನನೂ ದುರಾಚಾರಿಯೂ ಆದ ಇದು ಮರಳಿ ನಾಯಿಯೇ ಆಗುವುದು ಎಂದು ಹೀಗೆ ಆ ತಪಸ್ವಿ ಸಿಂಹವನ್ನು ಮರಳಿ ನಾಯಿಯನ್ನಾಗಿ ಮಾಡಿದನು. ಪೂಜ್ಯರೇ, ನೀವು ಈ ಕಾರಣದಿಂದ ಮೂಷಿಕೆಯನ್ನು ಕಾರುಣ್ಯದಿಂದ ಕನ್ಯೆಯನ್ನಾಗಿ ಮಾಡಿದಿರಿ. ಅದರ ಪೂರ್ವಜನ್ಮಸಂಸ್ಕಾರವಿನ್ನೂ ಹೋಗಿಲ್ಲ ಎಂಬುದನ್ನು ತಿಳಿದು ಈಕೆಯನ್ನು ಮೂಷಿಕೆಯನ್ನಾಗಿ ಮಾಡಿಕೊಡಿರಿ ಎನ್ನಲು ತಪಸ್ವಿ 'ತಥಾಸ್ತು' ಎಂದನು. ಶ್ಲೋ॥ ಸೂರ್ಯನನ್ನೂ ಮೇಘವನ್ನೂ ಮಾರುತನನ್ನೂ ಗಿರಿಗಳನ್ನೂ ವರಿಸದೆ ಮೂಷಿಕೆಯು ತನ್ನ ಹುಟ್ಟನ್ನೇ ಹೊಂದಿತು. ಹುಟ್ಟುಗುಣವನ್ನು ಎಂದಿಗೂ ಬಿಡುವುದು ಅಸಾಧ್ಯ. ಹಾಗೆ ಆ ಕನ್ಯೆ ಮೊದಲಿನಂತೆ ಮೂಷಿಕೆಯಾದಳು. ಅದರಿಂದ ನಿನ್ನ ನೀಚತನದಿಂದ ನೂರುವಾರ ಕಾಲ ಅಗ್ನಿಪ್ರವೇಶ ಮಾಡಿದರೂ ನೀಚನಾಗಿಯೇ ಹುಟ್ಟುವೆ ಎನ್ನಲು ಆ ಮಾತಿಗೆ ಚಿರಂಜೀವಿ ಹೀಗೆಂದನು : ನೀಚನೂ ಮತಿವಿಕಳನೂ ಆಗಿ ಸತ್ತರೆ ಹಾಗೆಯೇ ಆಗುವುದು.

ಮತಿವಿಕಳತೆಯಿಲ್ಲದೆಯುಂ
ಹುತವಹಯುತಮಾಗೆ ಬಗೆದ ಗತಿಯುಂ ಪಡೆಗುಂ
ಸತತಮದು 'ಯಾ ಮತಿಸ್ಸಾ
ಗತಿ' ಎಂಬ ಪುರಾಣವಾಕ್ಯಮೇಂ ತಪ್ಪುಗುಮೇ ೩೬೫

ಎನೆ ಜಿಂಹಾಕ್ಷನಿಂತೆಂದಂ :

ನಿನಗಿನಿತು ಬದ್ಧವೈರಂ
ಮನದೊಳ್ ಕಾಗೆಗಳ ದೆಸೆಯಿನುಳ್ಳೊಡೆ ಬಲಿಭು
ಗ್ವಿನುತಮತಿ ನೀನುಮಿನ್ನೆ
ಮ್ಮ ನಡುವೆ ಮದ್ಗೋತ್ರಮಾಗಿ ಸುಖಮಿರಲಾಗಾ ೩೬೬

ಎಂಬುದುಂ ಜಿಂಹಾಕ್ಷಂ ಚಿರಂಜೀವಿಯ ಕಾಯಕ್ಕೆ ಜೀವಂಬೊಯ್ದಂತೆಯುಂ ತನ್ನ ಮನಕ್ಕೆ ಬರೆಯುಂ ನುಡಿದುದರ್ಕೆ ಅರಿಮರ್ದನಂ ಸಂತೋಷಂಬಟ್ಟು ಚಿರಂಜೀವಿಯುಂ ನೋಯಲೀಯದುಪಾಯದಿಂ ತನ್ನಿರೆಂದುಳೂಕನಿಕರಕ್ಕೆ ಮಾರಿಯನಾಮಂತ್ರಿಸಿ ಕೊಂಡುಯ್ವಂತೆ ವಾಯಸಮಂತ್ರಿಯುಂ ನಿಜನಿವಾಸಕ್ಕೆ ಕೊಂಡೊಯ್ದು ನೀಂ ಮನೋಹರಮಪ್ಪೆಡೆಯೊಳಿರಿಮೆನೆ ಚಿರಂಜೀವಿ ಮಹಾಪ್ರಸಾದಮೆಂದಾತನ ರಾಜಧಾನಿಯಪ್ಪಂಜನಗಿರಿಯ ತಪ್ಪಲ ರಾಜಜಂಬೂವಟ ವಿಟಪಿ ಪ್ರದೇಶಂಗಳೊಳ್

ಸಮುದಪರಪುಷ್ಟಲೋಚನ
ಸಮಪ್ರಭಾರುಣಿತ ರಾಜಜಂಬೂಫಲಮಂ
ಕ್ರಮದಿಂ ಸೇವಿಸುತುಂ ಕಾ-
ಕಮಂತ್ರಿ ಕೌಶಿಕವಿನಾಶಮಂ ಚಿಂತಿಸುತುಂ ೩೬೭

೩೬೫. ಸತ್ವವೂ, ಬುದ್ಧಿಯೂ, ನಿಶ್ಚಯಾತ್ಮಕನೂ ಆಗಿ ಮತಿವಿಕಳತೆ ಇಲ್ಲದೆಯೂ ಅಗ್ನಿಪ್ರವೇಶವನ್ನೂ ಮಾಡಿದರೆ ಅಪೇಕ್ಷಿಸಿದ ಗತಿಯನ್ನು ಪಡೆಯುವುದು. 'ಯಾ ಮತಿಸ್ಸಾಗತಿ' ಎಂಬ ಪುರಾಣವಾಕ್ಯವೇನಾದರೂ ತಪ್ಪುವುದೇ ಎನ್ನಲು ಜಿಂಹಾಕ್ಷನು ಹೀಗೆಂದನು: ೩೬೬. ನಿನಗೆ ಕಾಗೆಗಳೊಡನೆ ಬದ್ಧವೈರವಿರುವುದಾದರೆ, ಬಲಿಭುಗ್ವಿನುತ ಮತಿ, ನೀನೂ ಇನ್ನು ಮುಂದೆ ನಮ್ಮ ನುಡುವೆ ನಮ್ಮ ಗೋತ್ರದವನಾಗಿ ಸುಖವಾಗಿರುವುದು ಸಾಧ್ಯವಿಲ್ಲವೇ ? ವ॥ ಜಿಂಹಾಕ್ಷನು ಬಿದ್ದ ಜೀವಿಯ ಕಾಯಕ್ಕೆ ಜೀವವನ್ನು ಹೊಯ್ದಂತೆಯೂ ತನ್ನ ಮನಸ್ಸಿಗೆ ಬಂದಂತೆಯೂ ನುಡಿದುದಕ್ಕೆ ಅರಿಮರ್ದನನು ಸಂತೋಷಪಟ್ಟು ಚಿರಂಜೀವಿಯನ್ನು ನೋಯಿಸದೆ ಉಪಾಯದಿಂದ ತನ್ನಿರಿ ಎಂದು ಉಳೂಕನಿಕರಕ್ಕೆ ಮಾರಿಯನ್ನು ಆಮಂತ್ರಿಸಿ ಕೊಂಡೊಯ್ಯುವಂತೆ ವಾಯಸಮಂತ್ರಿಯನ್ನು ನಿಜನಿವಾಸಕ್ಕೆ ಕೊಂಡೊಯ್ದು ನೀವು ಮನೋಹರವಾದ ಕಡೆಯಲ್ಲಿ ಇರಿ ಎನ್ನಲು ಚಿರಂಜೀವಿ ಮಹಾಪ್ರಸಾದವೆಂದು ಆತನ ರಾಜಧಾನಿಯಾದ ಅಂಜನಗಿರಿಯ ತಪ್ಪಲಿನ ರಾಜ ಜಂಬೂವಟವೃಕ್ಷ ಪ್ರದೇಶಗಳಲ್ಲಿ ೩೬೭. ಸೊಕ್ಕಿದ ಕೋಗಿಲೆಗಳ ಕಣ್ಣುಗಳಂತೆ ಕೆಂಪಾಗಿದ್ದ ಅರನೇರಳೆಯ ಹಣ್ಣುಗಳನ್ನು ಸೇವಿಸುತ್ತ ಕಾಕಮಂತ್ರಿ ಕೌಶಿಕವಿನಾಶವನ್ನು ಚಿಂತಿಸುತ್ತಿದ್ದನು.

ಅಂತು ಸುಖಮಿರ್ದು ಕೆಲವಾನುಂ ದಿವಸದೊಳ್ ಬಲಿಪುಷ್ಪಂ ಸಂಪುಷ್ಟನಾಗಿ ಬಟಿಕ್ಕೆ ಕೌಶಿಕಾಧೀಶ ನಿವಾಸಸ್ಥಾನಮುಮನುಳೂಕನಿಕರಸಂಕೇತಸ್ಥಾನಮುಮನಾರೈದು ತನ್ನೊಳ್ ತಾನೆ ಸಂತೋಷಂಬಟ್ಟಿಂತೆಂದಂ :

ಶ್ಲೋ|| ಆದಾನಸ್ಯ ಪ್ರದಾನಸ್ಯ ಕರ್ತವ್ಯ ಚ ಕರ್ಮಣಃ
ಕ್ಷಿಪ್ರಮಕ್ರಿಯಮಾಣಸ್ಯ ಕಾಲಃ ಪಿಬತಿ ತತ್ಫಲಂ ||೧೮೦||

ಟೀ|| ಕೊಂಬ ಕಾರ್ಯವನೂ ಕುಡುವ ಕಾರ್ಯವನೂ ಮಾಡುವ ಕಾರ್ಯವನೂ ಇವೆಲ್ಲವನ್ನೂ ಆ ಹೊತ್ತೇ ಮಾಡದಿರ್ದೊಡೆ ಕಾಲವಾ ಫಲವಂ ಕಿಡಿಸುವುದು ಎಂಬ ನೀತಿಯುಂಟದಱಿನೆನಗೆ ಕಾಲವಿಳಂಬನಂಗೆಯ್ವುದು ನಯಮಲ್ತೆಂದಾದಿತ್ಯೋದಯಮೆ ನಿಜಸ್ವಾಮಿಕಾರ್ಯೋದಯಮಾಗೆ ಆದಿತ್ಯನಪತ್ಯನಲ್ಲಿಂ ಪೊಱಮಟ್ಟು ಹಮ್ಮೆಯಂಬೋದವರ ಪ್ರಾಣಂ ಬರ್ಪಂತೆಯುಂ ಆರ್ತಂಗಾಪ್ತಂ ಬರ್ಪಂತೆಯುಂ ವಾಯುವೇಗದಿಂ ಬರ್ಪ ಚಿರಂಜೀವಿಯ ಬರವಂ ಮೇಘವರ್ಣಂ ಕರ್ಣಪರಂಪರೆಯಿನಱಿದಿದಿರಂ ಪೋಪುದುಮೆಯ್ದುವಂದ ಚಿರಂಜೀವಿಯಂ ಪರಮಾನಂದದಿಂ ಗಾಢಾಲಿಂಗನಂಗೆಯ್ವುದುಂ ಮಹಾಪ್ರಸಾದಮೆಂದಾತಂ ಪೊಡೆಮಟ್ಟು ಬಟಿಕ್ಕಿಂತೆಂದಂ : ದೇವಾ! ಶತ್ರುವಂ ನಿಶ್ಶೇಷಂ ಮಾಳ್ಪುಪಾಯಮಂ ಕರಮೊಳ್ಳಿತ್ತಾಗಿಯಱಿದು ಬಂದೆಂ ಪೆಱತಾಲೋಚನಕ್ಕೆಡೆಯಿಲ್ಲ, ತಡೆಯದೀಗಳೆ ಸಮಸ್ತವಾಯಸನಿಕಾಯಮಂ ಬರಿಸಿಮೆನೆ ಮೇಘವರ್ಣನಿಂತೆಂದಂ :

ಸಪ್ತಾಂಗಸಹಿತನಹಿತಂ
ಗುಪ್ತಚರಂ ಶೂರನವನೊಳಿಱಿಯದೆ ವಿಜಯ-
ಪ್ರಾಪ್ತಿ ನಮಗಪ್ಪುಪಾಯಮ-
ನಾಪ್ಯೋತ್ತಮ ಪೇಳೆಮೆಂದೊಡೆಂದಂ ಸಚಿವಂ ೩೬೮

ವ|| ಹಾಗೆ ಸುಖವಾಗಿದ್ದು ಕೆಲವು ದಿನಗಳಲ್ಲಿ ಆ ಬಲಿಪುಷ್ಪನು ಸಂಪುಷ್ಟನಾಗಿ ಬಳಿಕ ಕೌಶಿಕಾಧೀ ಶನಿವಾಸಸ್ಥಾನವನ್ನೂ ಉಳೂಕನಿಕರಸಂಕೇತಸ್ಥಾನವನ್ನೂ ವಿಚಾರಿಸಿ ತನ್ನಲ್ಲಿ ತಾನೇ ಸಂತೋಷಪಟ್ಟು ಹೀಗೆಂದುಕೊಂಡನು : ಶ್ಲೋ|| ಕೊಳ್ಳುವ ಕಾರ್ಯವನ್ನೂ ಕೊಡುವ ಕಾರ್ಯವನ್ನೂ ಮಾಡುವ ಕಾರ್ಯವನ್ನೂ ಆ ಹೊತ್ತೇ ಮಾಡದಿದ್ದಲ್ಲಿ ಕಾಲವು ಆ ಫಲವನ್ನು ಕೆಡಿಸುವುದು ಎಂಬ ನೀತಿಯುಂಟು. ಅದರಿಂದ ನಾನು ಕಾಲವಿಳಂಬ ಮಾಡುವುದು ನೀತಿಯಲ್ಲ ಎಂದು ಸೂರ್ಯೋದಯವೇ ತನ್ನ ಸ್ವಾಮಿಕಾರ್ಯೋದಯವೆಂಬಂತಾಗಲು ಆದಿತ್ಯನ ಅಪತ್ಯನು ಅಲ್ಲಿಂದ ಹೊರಟು ಮೂರ್ಛೆ ಹೋದವರ ಪ್ರಾಣ ಬಂದಂತೆಯೂ ಆರ್ತನಿಗೆ ಆಪ್ತ ಬಂದಂತೆಯೂ ವಾಯುವೇಗದಿಂದ ಬರುವ ಚಿರಂಜೀವಿಯ ಆಗಮನವನ್ನು ಮೇಘವರ್ಣನು ಕರ್ಣಪರಂಪರೆಯಿಂದ ತಿಳಿದು ಎದುರುಹೋಗಿ ಸುರಕ್ಷಿತವಾಗಿ ಬಂದ ಚಿರಂಜೀವಿಯನ್ನು ಪರಮಾನಂದದಿಂದ ಗಾಢಾಲಿಂಗನ ಮಾಡಲು ಮಹಾಪ್ರಸಾದವೆಂದು ಆತನು ನಮಸ್ಕರಿಸಿ ಬಳಿಕ ಹೀಗೆಂದನು: ದೇವಾ ! ಶತ್ರುವನ್ನು ನಿಶ್ಶೇಷಮಾಡುವ ಉಪಾಯವನ್ನು ಚೆನ್ನಾಗಿ ತಿಳಿದುಬಂದೆನು ; ಬೇರೆ ಆಲೋಚನೆಗೆ ಎಡೆಯಿಲ್ಲ ; ತಡಮಾಡದೆ ಈಗಲೇ ಸಮಸ್ತವಾಯಸನಿಕಾಯವನ್ನು ಕರೆಯಿಸಿರಿ ಎನ್ನಲು ಮೇಘವರ್ಣನು ಹೀಗೆಂದನು : ೩೬೮. ಸಪ್ತಾಂಗಸಹಿತನೂ ಶೂರನಾದ ಗುಪ್ತಚರನೂ ಆಗಿರುವ ವೈರಿಯನ್ನು ಇರಿಯದೆ ಜಯಿಸುವ ಉಪಾಯವನ್ನು

ರಿಪುವಂ ಗೆಲ್ವುದುಪಾಯಪೂರ್ವ ನಯದಿಂ ವಿಶ್ವಾಸದಿಂ ಸತ್ಸುಹೃ-
ದ್ಯುಪಜಾಪಕ್ರಿಯೆಯಿಂ ರಹಸ್ಯವಿಷಶಸ್ತ್ರಾಗ್ನಿಪ್ರಯೋಗಂಗಳಿಂ
ಕಪಟೋದ್ಯೋಗದಿನಾವಗಂ ಬಹುಮಹಾದೋಷಾವಹಂ ತಂತ್ರಬಂ-
ಧುಪರಿಧ್ವಂಸನಮಂತುಮಲ್ಲಿ ವಿಜಯಂ ಸಂದೇಹಮಿಂದ್ರಾದಿಗಂ ೩೬೯

ಅದು ಕಾರಣದಿಂ ತಾಂ ಕಾ-
ದದೆ ರಿಪುವಂ ಗೆಲ್ವದಖಿಳನಯಕೋವಿದನ-
ಭ್ಯುದಯಾರ್ಥಿಯಪ್ಪ ಪಾರ್ಥಿವ-
ನುದಗ್ರಬಲನಿಕರಪೂರ್ಣನಾದೊಡಮೊಂದುಂ ೩೭೦

ಅದಂತೆನೆ : ಬಲಿಯಂ ವಾಮನನಿಂದ್ರಂ
ಬಲನಂ ಚಾಣಕ್ಯನಧಿಕನಂದನಮಹೀಭೃ-
ತ್ಕುಲಮಂ ಗೆಲ್ದಂತರಿನೃಪ-
ಬಲಮನುಪಾಯದೊಳೆ ಗೆಲ್ವುದುತ್ತಮಪಕ್ಷಂ ೩೭೧

ಅದಱಿಂ ರಿಪುಗಪಾಯಮಂ ಮಾಡುವುಪಾಯಮೆನಿತುಮೊಳವವಂತಿರ್ಕೆ ನಮಗರಿಯಾಗಿರ್ದರಿಮರ್ದನನುಂ ತತ್ಪರಿವಾರಮನೊಂದೆ ಕೊಳ್ಳಿಯೊಳಿಂದೆ ಸುಟ್ಟಪೆಂ ಸುಮ್ಮನಿರದಲ್ಲಿಗೆ ತಕ್ಕ ಸಾಧನೋಪಾಯಂಗಳಂ ಬೇಗಂ ತರಿಸಿಮೆನೆ ಮೇಘವರ್ಣನಂತೆಗೆಯ್ವೆನೆಂದು ಪಡೆವಳರಂ ಕರೆದು ಪೇೞಲೊಡಮವಂದಿರ್ ಪೋಗಿ ಕೌಶಿಕಾಧೀಶ್ವರನ ಪುರಮನುರಿಪಲ್ ತಕ್ಕುವೆಲ್ಲಮಂ ಕೊಂಡು ತಡೆಯದಂಜನಗಿರಿಗೆ ನಡೆಯಿಮೆಂದು ಕಾಕನಿಕರಕ್ಕೆಲ್ಲಂ ಸಾಱುವುದುಂ,

ಆಪ್ತೋತ್ತಮನಾದ ನೀನು ಹೇಳು ಎನ್ನಲು ಸಚಿವನು ಹೀಗೆಂದನು : ೩೬೯. ವೈರಿಯನ್ನು ಉಪಾಯಪೂರ್ವಕವಾಗಿಯೂ ನೀತಿಯಿಂದಲೂ ವಿಶ್ವಾಸದಿಂದಲೂ ಸ್ನೇಹಿತನಾಗಿಯೂ ರಹಸ್ಯ ವಿಷಶಸ್ತ್ರಾಗ್ನಿ ಪ್ರಯೋಗಗಳಿಂದಲೂ ಕಪಟೋದ್ಯೋಗದಿಂದಲೂ ಗೆಲ್ಲಬೇಕು. ಅದರಿಂದ ಅಖಿಲನೀತಿಜ್ಞನಾದ ೩೭೦. ಅಭ್ಯುದಯಾರ್ಥಿಯಾದ ಕ್ಷತ್ರಿಯನು ಉದಗ್ರಬಲ ಪೂರ್ಣನಾಗಿದ್ದರೂ ಕಾದಾದುವ ರಿಪುವನ್ನು ಗೆಲ್ಲಬೇಕು. ೩೭೧. ಬಲಿಚಕ್ರವರ್ತಿಯನ್ನು ವಾಮನನೂ ಇಂದ್ರನು ಬಲನನ್ನೂ ಚಾಣಕ್ಯನು ನವನಂದರನ್ನೂ ಗೆದ್ದಂತೆ ಅರಿನೃಪ ಬಲವನ್ನು ಉಪಾಯದಿಂದ ಗೆಲ್ಲುವುದು ಯಾವಾಗಲೂ ಉತ್ತಮವಾದುದು. ವ|| ಅದರಿಂದ ರಿಪುವಿಗೆ ಅಪಾಯವನ್ನು ಮಾಡುವ ಉಪಾಯಗಳು ಎಷ್ಟೋ ಇವೆ. ಅವು ಹಾಗಿರಲಿ. ನಮ್ಮ ವೈರಿಯಾಗಿರುವ ಅರಿಮರ್ದನನನ್ನೂ ಅವನ ಪರಿವಾರವನ್ನೂ ಒಂದೇ ಕೊಳ್ಳಿಯಿಂದ ಇಂದೇ ಸುಟ್ಟು ಹಾಕುವೆನು. ಸುಮ್ಮನೆ ಕುಳಿತುಕೊಳ್ಳದೆ ತಕ್ಕ ಸಾಧನೋಪಾಯಗಳನ್ನು ಬೇಗನೆ ತರಿಸಿರಿ, ಮೇಘವರ್ಣನು ಹಾಗೆಯೇ ಮಾಡುವೆನೆಂದು ಸೈನಿಕರನ್ನು ಕರೆಯಿಸಿ ಹೇಳಲು ಅವರು ಹೋಗಿ ಕೌಶಿಕಾಧೀಶ್ವರನ ಪುರವನ್ನು ಉರಿಸಲು ತಕ್ಕುದಾದ ಎಲ್ಲವನ್ನೂ ಕೊಂಡು ತಡಮಾಡದೆ ಅಂಜನಗಿರಿಗೆ ನಡೆಯಿರಿ ಎಂದು

ಸಕಳಾಶಾಮುಖಚಕ್ರಮಂ ಮುಸುಕಿ ಚೇತೋವೇಗದಿಂ ರೌದ್ರ ಕೌ-
ಶಿಕ ಸೇನಾಜಯಕಾಂಕ್ಷೆಯಿಂ ರುಚಿರ ಚಂಚೂಪಾತ್ತ ಚಂಚತ್ಪಳಿಂ-
ಚಕತಾಳೋನ್ಮುಖ ಶುಷ್ಕ ಪತ್ರಪಟವೀರುದ್ಭಾಸ ಕಾರ್ಪಾಸ ತಂ
ತ್ರಕಜಾಲಂ ಬಲಿಭುಗ್ಬಲಂ ನಡೆದುದಂಭೋದಾಧ್ವದೊಳ್ ರಾಗದಿಂ ೩.೭೨

ಅಂತು ವಾಯಸಬಲಂ ಮಾಮಸಕಂ ಮಸಗಿ ಬಂದು ಕಾಳನೀಳಜಲಧರಂಗಳ್ ಕುಳಗಿರಿಯಂ ಮುತ್ತುವಂತರಿಮರ್ದನನ ಪುರವಾಗಿರ್ದಂಜನಗಿರಿಯಂ ಸುತ್ತಿಮುತ್ತಿ ತಂತಮ್ಮ ತಂದ ಪುಲ್ಲುಂ ಪುಳ್ಳಿಯುಂ ಮೊದಲಾದ ಕಸಂಗಳೆಲ್ಲಮಂ ಚಿರಂಜೀವಿ ತೋಱಿದ ಗಿರಿಗುಹಾದ್ವಾರಂಗಳೊಳಂ ತರುಕೋಟರಕುಟೀರಂಗಳೊಳಮಿಡಿದಿಡಿದು ತೀವಿ ಬಟಿಕ್ಕೆ ಕೊಳ್ಳಿಗಳನಲ್ಲಿಗಲ್ಲಿಗೆ ತಗುಳ್ಚುವುದುಂ ಶತಪತ್ರಮಿತ್ರಪುತ್ರಪತತ್ರಿಗೋತ್ರಪ್ರಧಾನಂಗೆ ಹುತವಹಸಖಂ ಸಹಾಯಮಾಗಿ ಸುಟಿಸುಟಿದು ತಗುಳೆ ಬೀಸಲೊಡಂ,

ಸಂದ ಪುರತ್ರಯಂ ವಿಷಮಲೋಚನಲೋಚನವಹ್ನಿಯಿಂ ಮರು-
ನ್ನಂದನನಿಂ ದಶಾಸ್ಯನಗರಂ ಕಪಿಕೇತನನಿಂದೆ ಸಂದ ಸಂ-
ಕ್ರಂದನನಂದನಂ ನಿಮಿಷಮಾತ್ರದಿನೊರ್ಮೆಯೆ ಬೆಂದ ಮಾಟ್ಕೆಯಿಂ
ಬೆಂದುದುಳೂಕರಾಜನಿಳಯಂ ಬಲಿಭುಕ್ಪತಿ ಮೇಘವರ್ಣನಿಂ ೩.೭೩

ಅಂತು ಬೇವುದುಮುಳೂಕಬಲಂಬೆರಸು ಅರಿಮರ್ದನಂ ಮೊದಲಾಗಿ ಪೇಟ್
ಪೆಸರಿಲ್ಲದಂತಾಗಿ ಪೋಗೆ ವಾಯಸಂಗಳತಿರಾಗದಿಂ ಭೋರೆಂದಾರುತ್ತುಂ ಬರೆ.

ಕಾಕನಿಕರಕ್ಕೆಲ್ಲ ಸಾರಿದನು. ೩.೭೨. ಸರ್ವ ದಿಗಂತಗಳನ್ನೂ ಮುಸುಕಿ ಮನೋವೇಗದಿಂದ ಭಯಂಕರವಾದ ಗೂಬೆಗಳ ಸೈನ್ಯವನ್ನು ಜಯಿಸುವ ಬಯಕೆಯಿಂದ ಹೊಳೆಯುವ ಭಯಂಕರವಾಗಿ ಮೇಲಕ್ಕೆದ್ದಿರುವ ತರಗೆಲೆ ಬಟ್ಟೆ ಪೊದರು ಹುಲ್ಲು ಹತ್ತಿಗಳಿಂದ ಕೂಡಿದ ತಂತ್ರಜಾಲವಾದ ಬಲಿಭುಗ್ಬಲವು ಆಕಾಶಮಾರ್ಗದಲ್ಲಿ ಉತ್ಸಾಹದಿಂದ ಸಾಗಿತು. ವ॥ ಹಾಗೆ ಆ ವಾಯಸಬಲವು ಮಹಾಸಾಮರ್ಥ್ಯದಿಂದ ಬಂದು ಕಾಳನೀಳ ಜಲಧರಗಳು ಕುಲಗಿರಿಯನ್ನು ಮುತ್ತುವಂತೆ ಅರಿಮರ್ದನನ ಪುರವಾಗಿದ್ದ ಅಂಜನಗಿರಿಯನ್ನು ಸುತ್ತಿಮುತ್ತಿ ತಾವೆಲ್ಲ ತಂದಿದ್ದ ಹುಲ್ಲನ್ನು ಸೌದೆಯನ್ನೂ ಕಸಗಳನ್ನೂ ಚಿರಂಜೀವಿ ತೋರಿಸಿದ ಗಿರಿ ಗುಹಾದ್ವಾರಗಳಲ್ಲಿಯೂ ತರುಕೋಟರ ಕುಟೀರಗಳಲ್ಲಿಯೂ ಇಡಿದಿಡಿದು ತುಂಬಿ ಬಳಿಕ ಕೊಳ್ಳಿಗಳನ್ನು ಅಲ್ಲಲ್ಲಿಗೆ ತಗುಲಿಸಲು ಶತಪುತ್ರಮಿತ್ರಪುತ್ರಪತತ್ರಿಗೋತ್ರಪ್ರಧಾನನಿಗೆ ಹುತವಹಸಖನೂ ಸಹಾಯನಾಗಿ ಸುಳಿಸುಳಿದು ಬೀಸತೊಡಗಿದನು. ೩.೭೩. ತ್ರಿಪುರಗಳು ವಿಷಮಲೋಚನನ ಲೋಚನವಹ್ನಿಯಿಂದಲೂ, ವಾಯುಪುತ್ರನಿಂದ ದಶಾಸ್ಯನಗರವೂ ಕಪಿಕೇತನನಿಂದ ಸಂಕ್ರಂದನನಂದನವೂ ನಿಮಿಷ ಮಾತ್ರದಲ್ಲಿ ಸುಟ್ಟುಹೋದ ರೀತಿಯಲ್ಲಿ ಬಲಿ ಭುಕ್ಪತಿ ಮೇಘವರ್ಣನಿಂದ ಉಳೂಕರಾಜನಿಲಯವು ಬೆಂದು ಹೋಯಿತು. ವ॥ ಹಾಗೆ ಉಳೂಕಬಲಸಹಿತ ಅರಿಮರ್ದನ ಮೊದಲಾದ ಎಲ್ಲ ಗೂಬೆಗಳೂ ಹೇಳ ಹೆಸರಿಲ್ಲದಂತಾಗಲು ವಾಯಸಗಳು ಅತ್ಯಂತ ಸಂತೋಷದಿಂದ ವಿಜೃಂಭಿಸಿ ಕೇಕೆಹಾಕುತ್ತ

ಬಳವದ್ವೈರಿ ಕ್ಷಮಾಪಾಲರನಧಿಕ ಭುಜಾಗರ್ವದಿಂ ಗೆಲ್ದ ಲಕ್ಷ್ಮೀ
ನಿಳಯಂ ಗಂಗಾತರಂಗೋಪಮ ಚಮರರುಹಶ್ರೇಣಿಯುಂ ಬೀಸೆ ಚಿತ್ರೋ-
ಜ್ವಳಕೇತುವ್ರಾತಮುಂ ದುಂದುಭಿರವಬಧಿರೀಭೂತದಿಙ್ಮಂಡಲಂ ಮಂ-
ಗಳಗೀತಂ ಪೊಣ್ಮೆ ಪೊಕ್ಕಂ ನಿಜಶಿಬಿರಮನುತ್ಸಾಹದಿಂ ಮೇಘವರ್ಣಂ ೩೭೪

ಅಂತು ಪೊಕ್ಕೊಡ್ಡೋಲಗಂಗೊಟ್ಟು ಕುಳ್ಳಿರ್ದು ಚಿರಂಜೀವಿಯ ಮೊಗಮನಾದರದಿಂ ನೋಡಿ

ಹಿತನೀತಂ ಮತಿವಂತನೀತನಧಿಕಂ ಕೂರ್ಪುಳ್ಳನೀತಂ ಗುಣಾ-
ನ್ವಿತನಿಂತೀತನನೆನಿಪ್ಪನಂ ಪೊರೆವುದುರ್ವೀಪಾಲಕಂ ಕೂರ್ಮೆಯಿಂ
ಹಿತನಲ್ಲಂ ಮತಿವಂತನಲ್ಲಮಧಿಕಂ ಕೂರ್ಪುಳ್ಳನಲ್ಲಂ ಗುಣಾ-
ನ್ವಿತನಂತಲ್ಲನೆನಿಪ್ಪನಂ ಪೊರೆಯವೇಡೇನಾದೊಡಂ ಭೂಭುಜಂ ೩೭೫

ಎಂದುಂ ಮಾಣದೆ ಚಿರಂಜೀವಿಯನರ್ಧಾಸನದೊಳ್ ಕುಳ್ಳಿರಿಸಿ ಬಳಿಕ್ಕಿಂತೆಂದಂ :

ಭವದೀಯೋತ್ತಮ ಮಂತ್ರದಿಂದುರುತರಾಸತ್ಸಾಮ್ರಾಜ್ಯ ರಾಜ್ಯಾಸ್ಪದಂ
ಧ್ರುವಮಾಯ್ತುದ್ಧತ ವೈರಿರಾಜನಿಚಯಂ ನಿರ್ಮೂಲಮಾಯ್ತೆಂದು ಕಾ-
ಕ ವಿಹಂಗಾಧಿಪನಿತ್ತನಾಪ್ತಸಚಿವಂಗಾನಂದದಿಂದರ್ಧರಾ-
ಜ್ಯವನೊಲ್ದೀಯದರಾರೋ ಭೂಭುವನದೊಳ್ ಸ್ವಾರ್ಥಕ್ಕೆ ಸರ್ವಸ್ವಮಂ ೩೭೬

ಅಂತು ಸಂತಸಂಬಡಿಸಿ ಚಿರಂಜೀವಿಗಿಂತೆಂದಂ :

ಶ್ಲೋ॥ ವರಮಗ್ನೌ ಪ್ರದೀಪ್ತೇ ತು ಪ್ರಾಣಾನಾಂ ಪರಿವರ್ಜನಂ
ನ ಚಾರಿ ಜನಸಂಸರ್ಗೇ ಮುಹೂರ್ತಮಪಿ ಸೇವನಂ ॥೧೮೧॥

ಟೀ॥ ಉರಿವ ಕಿರ್ಚಿನೊಳಗೆ ಬಿದ್ದು ಸಾವುದೆ ಲೇಸು, ಹಗೆಗಳನೊಂದು ಮಹೂರ್ತ ಮೋಲಗಿಸಲಾಗದು.

ಬಂದುವು. ೩೭೪. ಬಲವದ್ವೈರಿಭೂಪಾಲರನ್ನು ಅಧಿಕ ಭುಜಾಗರ್ವದಿಂದ ಗೆದ್ದ ಲಕ್ಷ್ಮೀ ನಿಲಯನಾದ ಮೇಘವರ್ಣನು ಗಂಗಾತರಂಗೋಪಮ ಚಾಮರಶ್ರೇಣಿಯೂ ಚಿತ್ರೋಜ್ಜ್ವಲ ಪತಾಕಾಪಂಕ್ತಿಯೂ ಬೀಸುತ್ತಿರಲು ದುಂದುಭಿರವದಿಂದ ಕಿವುಡಾದ ದಿಙ್ಮಂಡಲವು ಮಂಗಳ ಗೀತವನ್ನು ಹೊಮ್ಮಿಸಲು ಉತ್ಸಾಹದಿಂದ ತನ್ನ ಶಿಬಿರವನ್ನು ಪ್ರವೇಶಿಸಿದನು. ವ॥ ಹಾಗೆ ಹೊಕ್ಕು ಒಡ್ಡೋಲಗಗೊಟ್ಟು ಕುಳ್ಳಿರಲು ಚಿರಂಜೀವಿಯ ಮುಖವನ್ನು ಆದರದಿಂದ ನೋಡಿದನು. ೩೭೫. ಈತನು ಹಿತನು ಮತಿವಂತನು ಅಧಿಕ ಪ್ರೀತಿಯುಳ್ಳವನು ಗುಣಾನ್ವಿತನು ಇಂಥವನನ್ನು ಉರ್ವೀಪಾಲಕನು ಪ್ರೀತಿಯಿಂದ ಕಾಪಾಡಬೇಕು ಹಿತನಲ್ಲದವನನ್ನೂ ಮತಿವಂತನಲ್ಲದವನನ್ನೂ ಭೂಪಾಲನು ಏನಾದರೂ ಕಾಪಾಡಬಾರದು ಎಂದು ಯೋಚಿಸಿ ಚಿರಂಜೀವಿಯನ್ನು ಅರ್ಧಾಸನದಲ್ಲಿ ಕುಳ್ಳಿರಿಸಿ ಹೀಗೆಂದನು : ೩೭೬. ನಿನ್ನೊಂದು ಉತ್ತಮ ಮಂತ್ರೋಪಾಯದಿಂದ ನಮ್ಮೊಂದು ರಾಜ್ಯ ಶಾಶ್ವತವಾಯಿತು: ಉದ್ಧತವೈರಿರಾಜಸಮೂಹ ನಿರ್ಮೂಲವಾಯಿತು ಎಂದು ಕಾಕವಿಹಂಗಾಧಿಪನು ಆಪ್ತಸಚಿವನಿಗೆ ಆನಂದದಿಂದ ಅರ್ಧ ರಾಜ್ಯವನ್ನು ಇತ್ತನು. ಸ್ವಾರ್ಥಕ್ಕಾಗಿ ಭೂಭುವನದಲ್ಲಿ ತಮ್ಮ ಸರ್ವಸ್ವವನ್ನಾದರೂ ಕೊಡದವರು ಯಾರು ಇರುವರು? ವ॥ ಹೀಗೆ ಸಂತೋಷಪಡಿಸಿ ಚಿರಂಜೀವಿಗೆ ಹೀಗೆ ಹೇಳಿದನು : ಶ್ಲೋ॥ ಹಗೆಗಳೊಡನೆ ಮುಹೂರ್ತ ಕಾಲ ಓಲಗಿಸಿ ಬಾಳುವುದಕ್ಕಿಂತ ಉರಿಯುವ ಕಿಚ್ಚಿನಲ್ಲಿ ಬಿದ್ದು ಸಾಯುವುದೇ ಲೇಸು

ಎಂಬುದು ನೀತಿಯುಂಟು. ನೀವೆನಿತು ದಿವಸಂ ಶತ್ರುಸಂಸರ್ಗದಿನಾದುಪಸರ್ಗಮನೆಂತು ಸೈರಿಸಿದಿರ್, ಪೇೞಿಮೆನೆ ಚಿರಂಜೀವಿಯಿಂತೆಂದಂ : ದೇವಾ ! ನೀವೀಗಳ್ ಬೆಸಸಿದ ಸುಭಾಷಿತದರ್ಥಂ ತಪ್ಪದಾದೊಡಂ,

ಶ್ಲೋ॥ ಯದಪಸರತಿ ಮೇಷಃ ಕಾರಣಂ ತತ್ಪ್ರಹರ್ತುಂ
ಮೃಗಪತಿರಪಿ ಕೋಪಾತ್ ಸಂಕುಚತ್ಯುತ್ಪತಿಷ್ಣುಃ
ಹೃದಯನಿಹಿತವೈರಾ ಗೂಢಮಂತ್ರಪ್ರಚಾರಾಃ
ಕಿಮಪಿ ವಿಗಣಯಂತೋ ನೀತಿಮಂತಸ್ಸಹಂತೇ ॥೧೮೨॥

ಟೀ॥ ಗೂಢಮಂತ್ರವನುಳ್ಳ ಬುದ್ಧಿವಂತರುಗಳು ಕಾರ್ಯವಹನ್ನಬರ ಸೈರಿಸಿಕೊಂಡಿಹುದು. ಎಹಗೆಂದೊಡೆ ಮೇಷವು ಇಱಿಯಲೋಸುಕರ ಹಿಂದಣ್ಗೆ ಪೋಹ ಹಾಂಗೆಯೂ ಮತ್ತೆ ಸಿಂಹವು ಆನೆಯ ಕುಂಭಸ್ಥಲಮುಂ ವಿದಾರಿಸಲೋಸುಕರ ಸಂಕುಚಿತಶರೀರನಾಗುವ ಹಾಂಗೆಯೂ ಅದಲ್ಲದೆಯುಂ

ಶ್ಲೋ॥ ವಹೇದಮಿತ್ರಂ ಸ್ಕಂಧೇನ ಯಾವತ್ಕಾರ್ಯ ವಿನಿಶ್ಚಯಃ
ತತಃ ಪ್ರತ್ಯಾಗತೇ ಕಾಲೇ ಭಿಂದ್ಯಾದ್ಘಟಮಿವಾಂಭಸಃ ॥೧೮೩॥

ಟೀ॥ ತನ್ನ ಕಾರ್ಯಪಹನ್ನಬರ ಹಗೆಯನು ಹೆಗಲಲಾದರೂ ಹೊತ್ತುಕೊಂಡಿಹುದು. ಕಾರ್ಯ ಬರಲೊಡನೆ ಒಡೆದ ಕೊಡನ ಬಿಸುಡುವಹಗೆ ಬಿಟ್ಟು ಕಳೆವುದು. ಎಂಬ ನೀತಿಗಳೊಳವು.

ಅದಲ್ಲದೆಯುಂ,

ಸಿಂಗದ ಮುಱಿವುಂ ಮೇಷದ
ಪಿಂಗುಂ ನಯವಿದರ ವಿನಯಮಿಂತಿವು ಮೂಱುಂ
ಭಂಗಮೆನಿಸಲ್ಕೆ ಪಡೆಯವು
ಕಂಗೆಡಿಕುಂ ಭರದಿನಹಿತರಘಟಂ ಘುರದೊಳ್ ೩.೭೭

ಅದಲ್ಲದೆಯುಂ, ಶ್ಲೋ॥ ವಹತಾ ಕೃಷ್ಣಸರ್ಪೇಣ ಮಂಡೂಕೋ ವಿನಿಪಾತಿತಃ ಎಂಬ ಕಥೆಯುಂಟೆನೆ ಮೇಘವರ್ಣನದೆಂತೆನೆ ಚಿರಂಜೀವಿ ಪೇೞ್ಗುಂ :

ಎಂಬ ನೀತಿಯುಂಟು. ನೀವು ಇಷ್ಟು ದಿನಗಳವರೆಗೆ ಶತ್ರುಸಂಸರ್ಗದಿಂದ ಆದ ಉಪಸರ್ಗಗಳನ್ನು ಹೇಗೆ ಸೈರಿಸಿದಿರಿ ಹೇಳಿ ಎನ್ನಲು ಚಿರಂಜೀವಿ ಹೀಗೆಂದನು : ದೇವಾ! ನೀವು ಈಗ ಹೇಳಿದ ಸುಭಾಷಿತದ ಅರ್ಥ ತಪ್ಪಲ್ಲ. ಆದರೂ ಶ್ಲೋ॥ ಟಗರು ಇರಿಯಲಿಕ್ಕಾಗಿ ಹಿಂದಕ್ಕೆ ಸರಿಯುವ ಹಾಗೆಯೂ ಸಿಂಹವು ಆನೆಯ ಕುಂಭಸ್ಥಲವನ್ನು ವಿದಾರಿಸಲಿಕ್ಕಾಗಿ ಸಂಕುಚಿತಶರೀರನಾಗುವ ಹಾಗೆಯೂ ಗೂಢಮಂತ್ರವನ್ನುಳ್ಳ ಬುದ್ಧಿವಂತರು ಕಾರ್ಯವಾಗುವವರೆಗೆ ಸಹಿಸಿಕೊಂಡಿರಬೇಕು. ಅಲ್ಲದೆ, ಶ್ಲೋ॥ ತನ್ನ ಕಾರ್ಯವಾಗುವವರೆಗೆ ಹಗೆಯನ್ನು ಹೆಗಲಲ್ಲಾದರೂ ಹೊತ್ತುಕೊಂಡು ಇರಬೇಕು : ಕಾರ್ಯವಾದ ಮೇಲೆ ಒಡೆದ ಕೊಡವನ್ನು ಬಿಸುಡುವಂತೆ ಬಿಟ್ಟುಬಿಡಬೇಕು ಎಂಬ ನೀತಿಗಳುಂಟು. ಅಲ್ಲದೆ, ೩.೭೭. ಸಿಂಹದ ಸಂಕೋಚವೂ ಕುರಿಯ ಹಿಂಜರಿತವೂ ನೀತಿಜ್ಞರ ವಿನಯವೂ ಎಂದೂ ಭಂಗವಾಗುವುದಿಲ್ಲ. ಇವು ಯುದ್ಧದಲ್ಲಿ ವೈರಿಗಳ ಪರಾಕ್ರಮವನ್ನೇ ಕಂಗೆಡಿಸುವುವು. ಅಲ್ಲದೆ, ಶ್ಲೋ॥ ವಹತಾ ಕೃಷ್ಣಸರ್ಪೇಣ ಮಂಡೂಕೋ ವಿನಿಪಾತಿತಃ ಎಂಬ ಕಥೆಯುಂಟು ಎನ್ನಲು

ಕಪ್ಪೆಗಳಂ ಬೆನ್ನನೇಱಿಸಿಕೊಂಡ ಸರ್ಪನ ಕಥೆ

ದರ್ಪರಹಿತಂ ಜನಾಧಿಕ
ಕಾರ್ಪಣ್ಯಸಮೇತನೊಂದು ಗಹನಾಂತರದೊಳ್
ಸರ್ಪಂ ನಿಜಾಂಗನಾಯುತ
ನಿರ್ಪುದು ಕಪಟಪ್ರಪಂಚಪರಿಣತಚಿತ್ತಂ ೩.೭೮

ಆ ವೃದ್ಧೋರಗಂ ಸ್ವಾಹಾರಮನೆಲ್ಲಿಯುಂ ಪಡೆಯಲಾಱದೆ ಚಿಂತಿಸುತಿರ್ದು

(ಹರಿಣೀವೃತ್ತಂ)

ಶ್ಲೋ॥ ಅಭಿಮತ ಮಹಾಗ್ರಂಥಿ ಪ್ರಭೇದ ಪಟೀಯಸಿ
ಗುರುತರಗುಣಗ್ರಾಮಾಂಭೋಜ ಸ್ಫುಟೋಜ್ಜ್ವಲಾ
ವಿಪುಲವಿಲಸಲ್ಲಜ್ಜಾವಲ್ಲೀ ವಿದಾರ ಕುಠಾರಿಕಾ
ಜಠರಪಿಠರೀ ದುಷ್ಪೂರೇಯಂ ಕರೋತಿ ವಿಡಂಬನಾಂ ॥೧೮೪॥

ಟೀ॥ ಉದರಮೆಂಬ ಭಾಂಡವು ಅಭಿಮಾನಮೆಂಬ ಗಂಟನೊಡೆವುದರ್ಕೆ ಪಟುವಂತಹುದು. ಗುರುತ್ವವಹ ಗುಣಸಮೂಹಮೆಂಬ ಕಮಳವಂ ಕಿಡಿಸುವುದರ್ಕೆ ಬೆಳದಿಂಗಳೆನಿಸಿದಂತಹುದು. ಏನ ತುಂಬಿದೊಡಂ ತೃಪ್ತಿಯನೆಯ್ದದಾಗಿ ವಿಡಂಬನವ ಮಾಡುತ್ತಿಹುದು.

ಎಂಬುದದಱಿನಾಂ ದುರಭಿಮಾನಮಂ ಕೈಕೊಂಡಿರಲ್ ಪಸಿದು ಸಾವಾದಪ್ಪುದು. ಅವುಪಾಯದೊಳಮಾಹಾರಮಂ ಪಡೆವೆನೆಂದೆಂದೊಡನೊಂದುಪಾಯಮಂ ಚಿಂತಿಸಿ

ಮಂಡೂಕ ಬಹಳಮಂ ಖರ
ದಂಡೋತ್ಪಲಕುಮುದರಾಜಿರಂಜಿತಮಂ ಕಾ-
ರಂಡಕಳಹಂಸ ಷಟ್ಪದ
ಮಂಡಿತಮಂ ಕಂಡುದೊಂದು ಕೊಳನಂ ಸರ್ಪಂ ೩.೭೯

ಮೇಘವರ್ಣನು ಅದೇನು ಎನ್ನಲು ಚಿರಂಜೀವಿ ಹೇಳುವನು: ೩.೭೮. ಒಂದು ಕಾಡಿನಲ್ಲಿ ಕಪಟಪ್ರಪಂಚಪರಿಣತಚಿತ್ತನಾದ ಒಂದು ಸರ್ಪನು ಹೆಂಡತಿಯೊಡನೆ ವಾಸಿಸುತ್ತಿತ್ತು. ವ॥ ಆ ವೃದ್ಧೋರಗವು ಸ್ವಾಹಾರವನ್ನು ಎಲ್ಲಿಯೂ ಪಡೆಯದೆ ಚಿಂತಿಸುತ್ತಿತ್ತು. ಶ್ಲೋ॥ ಉದರವೆಂಬ ಭಾಂಡವು ಅಭಿಮಾನವೆಂಬ ಗಂಟನ್ನೊಡೆಯುವುದಕ್ಕೆ ಸಮರ್ಥವಾಗಿರುವುದು. ಗುರುತರವಾದ ಗುಣಸಮೂಹವೆಂಬ ಕಮಲವನ್ನು ಕೆಡಿಸುವುದಕ್ಕೆ ಬೆಳದಿಂಗಳಿನಂತೆ ಇರುವುದು. ಏನನ್ನು ತುಂಬಿದರೂ ತೃಪ್ತಿಯನ್ನು ಪಡೆಯದೆ ವಿಡಂಬನಮಾಡುತ್ತಿರುವುದು. ವ॥ ಆದರಿಂದ ನಾನು ದುರಭಿಮಾನವನ್ನು ಕೈಕೊಂಡಿದ್ದರೆ ಹಸಿದು ಸಾಯಬೇಕಾಗುವುದು ; ಯಾವುದಾದರೂ ಉಪಾಯದಿಂದ ಆಹಾರವನ್ನು ಪಡೆಯುವೆನೆಂದು ಒಂದು ಉಪಾಯವನ್ನು ಚಿಂತಿಸಿತು. ಹೀಗೆ ಸರ್ಪವು ೩.೭೯. ಬಹಳ ಕಪ್ಪೆಗಳಿಂದಲೂ ಕಮಲ ನೈದಿಲೆಗಳಿಂದಲೂ ಬಾತು ಹಂಸಗಳು ತುಂಬಿದ ಒಂದು

ಅಂತದಱ ಮೊಪಲೊಳ್ ಕೆಲವು ದಿವಸಂ ತಲೆಯಿಕ್ಕಿ ಪಟ್ಟಿರ್ದುದನೊಂದು ದರ್ದುರಂ ಕಂಡು ನೀರೊಳಿರ್ದದೇಂ ಭಾವಾ! ನೀನೀಗಳ್ ಪಲವು ದಿವಸಮಾಹಾರವಿರಹಿತನುಂ ನಿಜಪ್ರಭಾವ ಸಂಭಾವನಾಹೀನನುಮಾಗಿರ್ಪೆ ಇದೇಂ ಕಾರಣಮೆನೆ ಪನ್ನಗನೆನ್ನ ಮನೋರಥಾವಾಪ್ತಿಯಾಗಲ್ ಬಗೆದುದೆಂದು ಸಂತೋಷಂಬಟ್ಟಿಂತೆಂದುದು :

ಈ ಋಸಿವಳ್ಳಿಯೊಳಾನವಿ-
ಚಾರದೆ ಋಷಿಸುತನನೊರ್ವನಂ ಕೊಂದೊಡವಂ
ಕ್ರೂರತರ ವಿಷವಿಭೇದ್ಯಂ
ಧಾರಿಣಿಯೊಳ್ ಬಿರ್ದು ವಿಗತಜೀವಿತನಾದಂ ೩೮೦

ಅಂತು ಮರಣಪ್ರಾಪ್ತನಾದ ಕುಮಾರನಂ ಸನ್ನಿಧಾನಸ್ಥಿತನಾಗಿರ್ದೆನ್ನುಮನಾತನ ತಂದೆ ಕಂಡು

ಅನಿಶಂ ಭೇಕಾಳಿಗೆ ವಾ-
ಹನಮಾಗೆಂದೆನಗೆ ರೌದ್ರಶಾಪಮನಿತ್ತಂ
ಮುನಿಸಿಂ ತದ್ವಿಪ್ರಂ ನಂ-
ದನಮರಣಪ್ರಭವಶೋಕಪಾವಕತಪ್ತಂ ೩೮೧

ಆದು ಕಾರಣಂ ನಾಂ ನಿಮಗೆ ವಾಹನವಾಗಲ್ ಬಂದೆನೆಂದೊಡಾ ಕಪ್ಪೆ ಪರಿದು ತಮ್ಮರಸನಪ್ಪ ಜಲಪಾಲಂಗಱಿಪಿದೊಡಾತನೀ ಕೌತುಕವಂ ನೋಲ್ಪಂ ಬನ್ನಿಮೆಂದು ತನ್ನ ಸಮಸ್ತ ಪರಿವಾರಂ ಬೆರಸು ಬಂದಾ ಪನ್ನಗನಂ ಕಂಡು ತದ್ವೃತ್ತಾಂತಮಂ ಬೆಸಗೊಂಡೊಡಾತಂಗೆ ಸವಿಸ್ತರಂ ಪೇೞೆ ಕೇಳ್ದೊಡಂಬಟ್ಟುರಗಾರಿಯಂ ಹರಿಯೇಱುವಂತೆ ಸಮಸ್ತ ಹರಿನಿಕರಮೆನ್ನ ಬೆನ್ನನ್ನೇಱೆಕೊಂಡಾಡುತ್ತಿರಿಮೆನೆ ಜಲಪಾಲಂಗೆ ಪ್ರಮೋದಮಾಗೆ ರಾಗಿಸಿ ಪಲಕಾಲಕ್ಕೆನ್ನ ಪಗೆಯೊಳಗಾದಂ ಬನ್ನಿಮೆಂಬುದುಂ

ಕೊಳವನ್ನು ಕಂಡಿತು. ವ|| ಅಲ್ಲಿಗೆ ಹೋಗಿ ಅದರ ಬುಡದಲ್ಲಿ ಕೆಲವು ದಿವಸ ತಲೆಹಾಕಿ ಮಲಗಿರುವುದನ್ನು ಕಂಡು ಒಂದ ಕಪ್ಪೆಯು ಭಾವಾ ! ಯಾಕೆ ನೀನು ನೀರಲ್ಲಿದ್ದು ಹಲವು ದಿವಸಗಳಿಂದ ಆಹಾರವಿರಹಿತನೂ ನಿಜಪ್ರಭಾವಸಂಭಾವನಾಹೀನನೂ ಆಗಿರುವೆ, ಇದಕ್ಕೆ ಕಾರಣವೇನು ಎನ್ನಲು ಪನ್ನಗವು ತನ್ನ ಮನೋರಥಾವಾಪ್ತಿಯಾಗತೊಡಗಿತು ಎಂದು ಬಗೆದು ಸಂತೋಷಪಟ್ಟು ಹೀಗೆಂದಿತು: ೩೮೦. ಈ ಋಸಿವಳ್ಳಿಯಲ್ಲಿ ಅವಿಚಾರದಿಂದ ಋಷಿಸುತನೊಬ್ಬನನ್ನು ಕಚ್ಚಲು ಅವನು ಕ್ರೂರತರವಿಷವಿಭೇದ್ಯನಾಗಿ ಧಾರಿಣಿಯಲ್ಲಿ ಬಿದ್ದು ಸತ್ತನು. ವ|| ಹಾಗೆ ಮರಣಪ್ರಾಪ್ತನಾದ ಕುಮಾರನನ್ನೂ ಸನ್ನಿಧಾನಸ್ಥಿತನಾಗಿದ್ದ ನನ್ನನ್ನೂ ಆತನ ತಂದೆ ಕಂಡು ೩೮೧. ಕೋಪದಿಂದ ಭೇಕಗಳಿಗೆ ಯಾವಾಗಲೂ ವಾಹನವಾಗಿರು ಎಂದು ನನಗೆ ರೌದ್ರ ಶಾಪವನ್ನು ಕೊಟ್ಟನು. ಅದರಿಂದ ನಾನು ನಿಮಗೆ ವಾಹನನಾಗಲು ಬಂದೆ ಎಂದಿತು. ಆಗ ಆ ಕಪ್ಪೆಯು ಹೋಗಿ ತನ್ನ ಅರಸನಾದ ಜಲಪಾಲನಿಗೆ ತಿಳಿಸಲು ಆತನು ಈ ಕೌತುಕವನ್ನು ನೋಡೋಣ ಬನ್ನಿ ಎಂದು ತನ್ನ ಸಮಸ್ತ ಪರಿವಾರದೊಡನೆ ಬಂದು ಆ ಪನ್ನಗನನ್ನು ಕಂಡು ತದ್ವೃತ್ತಾಂತವನ್ನು ವಿಚಾರಿಸಲು ಅವನಿಗೆ ವಿವರವಾಗಿ ಹೇಳಲು ಕೇಳಿ ಗರುಡನನ್ನು ಶ್ರೀಹರಿಯೇರುವಂತೆ ಸಮಸ್ತ ಹರಿನಿಕರವೂ ನನ್ನ ಬೆನ್ನಮೇಲೆ ಏರಿಕೊಂಡು ಆಡುತ್ತಿರಿ ಎಂದಿತು. ಅದನ್ನು ಕೇಳಿ ಜಲಪಾಲನಿಗೆ ಪ್ರಮೋದವಾಗಲು ಸಂತೋಷದಿಂದ ಹಲವು ಕಾಲದ ಮೇಲೆ ನನ್ನ ಹಗೆ ಒಳಗಾದನು ಬನ್ನಿ ಎನ್ನಲು

ಜಹಾಯತರ್ವೆರಸು ಪರಿತಂದು ಮೃತ್ಯುವ ಬೆನ್ನನೇಱುವಂತಾ ಪನ್ನಗನ ಬೆನ್ನನೇಱುವುದುಮಾ ಅಹಿ ಮಂಡೂಕಂಗಳೆಲ್ಲಮುಮಂ ಪೊತ್ತು ಮಾಱುವ ಬಗೆಯಂ ಬಗೆದು,

ಒಂದೆಡೆಯೊಳ್ ಬೇಗಂ ಪರಿ-
ಮೊಂದೆಡೆಯೊಳ್ ಮಂದಗಮನದಿಂ ಪೋಗಿ ಮನಂ-
ಬಂದಂದದಿನಾ ದರ್ದುರ-
ನೆಂದಂದದಿನೆಂದುದಂದು ಸೂಕಳಸರ್ಪಂ ೩೮೨

ಪಗೆಯನುಪಾಯದಿ ತೀರ್ಚುವ
ಬಗೆಯಿಂದಾ ದರ್ದುರವ್ರಜಂಗಳನುಗ್ರೋ-
ರಗನೆಯ್ದೆ ಪೊತ್ತು ತೊಟಲ್ದುದು
ಜಗದೊಳ್ ನಿಜಕಾರ್ಯವಂತರೇನಂ ಮಾಡರ್ ೩೮೩

ಅಂತನೇಕ ಕಾಲಂ ವೃದ್ಧೋರಗನಾ ದರ್ದುರಂಗಳಂ ಪೊತ್ತು ತಿರುಗಿ ಬೇವಸಂಗೊಂಡೊಂದು ದಿವಸಂ ತನ್ನಿರ್ದ ಪುತ್ತಿಂಗೆವರ್ಪುದುಮದಱ ಪೆಂಡತಿ ಕಂಡೆಲೆ ವಲ್ಲಭ! ನೀವೀನಿಕೃಷ್ಟಮಪ್ಪ ಕಪ್ಪೆಗಳಂ ಪೊತ್ತು ಕಷ್ಟಂಬಟ್ಟು ಬಟೆಕ್ಕೆ ನಿಮ್ಮ ಸಾಧಿಸುವುದೇನೆಂಬುದುಮಾ ಪನ್ನಗನಿಂತೆಂದಂ :

ಶ್ಲೋ|| ಕಿಂ ನ ಜಾನಾಮ್ಯಹಂ ಭದ್ರೇ ಯದಾ ಬಧ್ನಾಮಿ ದರ್ದುರಂ
ಕಿಂಚಿತ್ಕಾಲ ಮಪೇಕ್ಷೇಹಂ ವ್ರತಾನ್ನಂ ಬ್ರಾಹ್ಮಣೋ ಯಥಾ ||೧೮೫||

ಟೀ|| ಎಲೆ ಸುಮುಖಿ ! ಕಪ್ಪೆಯಂ ಪಿಡಿವ ಕಾಲವಂ ನಾನಱಿಯೆನೆ ? ವ್ರತಾನ್ನಮಂ ಬಯಸಿ ವಿಪ್ರಂ ಕೆಲಕಾಲಮಿರ್ದಂತೆ ಕಾಲವನಪೇಕ್ಷಿಸಿಹೆನು. ಎಂಬುದುಮದೆಂತೆಂದುರಗಿ ಕೇಳ್ವುದುಮುರಗನಿಂತೆಂದಂ :

ಪರಿಜನರೊಂದಿಗೆ ಬಂದು ಮೃತ್ಯುವಿನ ಬೆನ್ನನ್ನೇರುವಂತೆ ಆ ಪನ್ನಗನ ಬೆನ್ನನ್ನೇರಲು ಆ ಅಹಿ ಮಂಡೂಕಗಳೆಲ್ಲವನ್ನೂ ಹೊತ್ತು ವಂಚಿಸುವ ಯೋಚನೆಯನ್ನು ಮಾಡಿ ೩೮೨. ಒಂದು ಕಡೆಗೆ ಬೇಗನೆ ಸರಿದು, ಇನ್ನೊಂದು ಕಡೆಗೆ ಮಂದಗಮನದಿಂದ ಹೋಗಿ ಮನಸ್ಸು ಬಂದಂತೆ ಆ ಕಪ್ಪೆ ಹೇಳಿದಂತೆ ಆ ಸರ್ಪವು ಕೇಳಿತು. ೩೮೩. ಹಗೆಯನ್ನು ಉಪಾಯದಿಂದ ತೀರಿಸುವ ಯೋಚನೆಯಿಂದ ಆ ಕಪ್ಪೆಗಳ ಹಿಂಡನ್ನು ಆ ಉಗ್ರೋರಗವು ಹೊತ್ತುಕೊಂಡು ತಿರುಗಿತು. ಜಗತ್ತಿನಲ್ಲಿ ನಿಜಕಾರ್ಯವಂತರು ಏನನ್ನು ತಾನೇ ಮಾಡಲಿಕ್ಕಿಲ್ಲ ! ವ|| ಹಾಗೆ ಬಹುಕಾಲ ವೃದ್ಧೋರಗವು ಆ ದರ್ದುರಗಳನ್ನು ಹೊತ್ತು ತಿರುಗಿ ಬೇಸರಗೊಂಡು ಒಂದು ದಿನ ತಾನಿದ್ದ ಹುತ್ತಕ್ಕೆ ಬರಲು ಅದರ ಹೆಂಡತಿ ಕಂಡು, ಎಲೈ ವಲ್ಲಭ ! ನೀವು ಈ ನಿಕೃಷ್ಟವಾದ ಕಪ್ಪೆಗಳನ್ನು ಹೊತ್ತು ಕಷ್ಟಪಟ್ಟು ಸಾಧಿಸುವುದೇನೆಂದು ಕೇಳಲು ಆ ಪನ್ನಗನು ಹೀಗೆಂದನು : ಶ್ಲೋ|| ಎಲೈ ಸುಮುಖಿ ! ಕಪ್ಪೆಯನ್ನು ಹಿಡಿಯುವ ಕಾಲವನ್ನು ನಾನರಿಯೆನೆ ? ವ್ರತಾನ್ನವನ್ನು ಬಯಸಿ ವಿಪ್ರನು ಕೆಲವು ಕಾಲದವರೆಗೆ ಕಾಯುವಂತೆ ನಾನು ಕಾಲಾಪೇಕ್ಷಿಯಾಗಿರುವೆನು ಎಂದು ಹೇಳಿದನು. ಆಗ ಅದೇನೆಂದು ಉರಗಿಯು

೧೪. ವಿಷ್ಣುಶರ್ಮನ ಕಥೆ

ಭುವನವಿಭೂಷಣಮೆನಿಸಿ-
ರ್ದ ವರ್ಧಮಾನಾಭಿಧಾನಪುರದೊಳ್ ವಿಲಸ-
ದ್ಭವನದೊಳಿರ್ಪಂ ವಿಪ್ರಂ
ವಿವೇಕನಿಧಿ ವಿಷ್ಣುಶರ್ಮನೆಂಬೊಳ್ವೆಸರಿಂ ೩೮೪

ಅಂತಾತನ ಪೆಂಡತಿ ದುರ್ಮತಿಯೆಂಬಳ್ ಕುಲಟೆ ಕಪಟಪಟುವಪ್ಪುದಱಿಂ ಪರಪುರುಷರಲ್ಲಿಯೇ ಆಸಕ್ತೆಯಾಗಿರ್ಪುದನಾ ಪಾರ್ವನವಳ ಚೇಷ್ಟಾಭಾವದಿಂದಱಿತು ನಿಶ್ಚೈಸುವೆನೆಂದೊಂದು ದಿವಸಂ ನೆರೆಯೂರ್ಗೆ ಪೋಗಿ ಬಂದಪೆಂ ನೀನ್ ಕರಂ ಬುದ್ಧಿವಂತೆಯಾಗಿರೆಂದು ಪೊಱಮಟ್ಟು ಪೋಗುವಂತೆ ಪೋಗಿ ಮಗುಟ್ಟು ಬಂದು ಆಕೆಯುಂ ವಂಚಿಸಿ ಮನೆಯೊಳಡಂಗಿರ್ದಂ ಅನ್ನೆಗಮವಳ್ ನೆರೆಮನೆಯ ಪಾದರಿಗನಂ ಬರಿಸುವುದುಮವಂ ಬಂದಾಕೆಯನನೇಕಸ್ತೋತ್ರ ಪ್ರಕಾರದಿಂ ಬಯ್ದು ಬಡಿದುಮೆನಗಿನಿತು ದಿವಸಮೇಕೆ ಬಱೆಯನಟ್ಟಿದೆಯಿಲ್ಲೆಂದು ಮುಳಿದೊಡಾ ಪಾಣ್ಬೆಯಿಂತೆಂದಳ್ :

ಮುನಿಯದಿರು ನಲ್ಲ ನೀನಿಂ-
ತೆನಗೆಲೆ ಸಲೆ ಗಂಡನಪ್ಪ ಷಂಡಂ ನಿಚ್ಚಂ
ಮನೆಸನಿಗೊಂಡಿರೆ ಬರಿಸ-
ಲ್ಕೆನಗಿಂಬಿಲ್ಲಾಗಿ ನಿನ್ನನಾಂ ನೆನೆದಿನಿಸುಂ ೩೮೫

ಮಱುಗುತ್ತುಂ ಚಿಂತಿಸುತುಂ
ಬೆಱಗಾದಂತಿರ್ದೆನಲ್ಲದಾನೋಪಳೆ ಮೆ-
ಯ್ಮರೆದಿರ್ದೆನಲ್ಲೆನೆಂದಡಿ-
ಗೆಱಗಿರ್ದಾ ಪಾಣ್ಬೆ ಪಾಣ್ಬನಂ ನಂಬಿಸಿದಳ್ ೩೮೬

ಕೇಳಲು ಉರಗವು ಹೀಗೆಂದಿತು : ೩೮೪. ಭುವನವಿಭೂಷಣವೆನಿಸಿದ್ದ ವರ್ಧಮಾನ ಎಂಬ ಹೆಸರಿನ ಪುರದಲ್ಲಿ ವಿಷ್ಣುಶರ್ಮನೆಂಬ ವಿವೇಕನಿಧಿಯಾದ ಬ್ರಾಹ್ಮಣನಿದ್ದನು. ವ|| ಅವನ ಹೆಂಡತಿ ಕುಲಟೆಯೂ ಕಪಟಪಟುವೂ ಆಗಿದ್ದುದರಿಂದ ಪರಪುರುಷರಲ್ಲಿಯೇ ಆಸಕ್ತೆಯಾಗಿರುವುದನ್ನು ಆ ಬ್ರಾಹ್ಮಣನು ಅವಳ ಚೇಷ್ಟಾಭಾವದಿಂದಲೇ ಅರಿತು ನಿಶ್ಚಯಿಸುವೆನು ಎಂದು ಒಂದು ದಿವಸ ನೆರೆಯೂರಿಗೆ ಹೋಗಿ ಬರುವೆನು; ನೀನು ಬುದ್ಧಿವಂತೆಯಾಗಿರು ಎಂದು ಹೊರಹೊರಟು ಹೋಗುವಂತೆ ಹೋಗಿ ಮರಳಿ ಬಂದು ಆಕೆಯನ್ನು ವಂಚಿಸಿ ಮನೆಯಲ್ಲಿ ಅಡಗಿಕೊಂಡನು. ಅಷ್ಟರಲ್ಲಿ ಅವಳು ನೆರೆಮನೆಯ ಹಾದರಿಗನನ್ನು ಬರಿಸಲು ಅವನು ಬಂದು ಆಕೆಯನ್ನು ಅನೇಕ ಸ್ತೋತ್ರ ಪ್ರಕಾರದಿಂದ ಬಯ್ದು ಬಡಿದು ನನ್ನನ್ನು ಇಷ್ಟು ದಿವಸ ಏಕೆ ಕರೆಕಳುಹಿಸಲಿಲ್ಲವೆಂದು ಕೋಪಿಸಲು ಆ ನೀಚೆ ಹೀಗೆಂದಳು : ೩೮೫. ನಲ್ಲ ! ನೀನು ಹೀಗೆ ನನ್ನ ಮೇಲೆ ಮುನಿಯಬೇಡ. ನನ್ನ ಗಂಡನಾದ ಷಂದನು ನಿತ್ಯವೂ ನನ್ನ ಮನೆಶನಿಯಾಗಿರಲು ನಿನ್ನನ್ನು ನಾನು ಕರೆಯಿಸಲು ಸಾಧ್ಯವಾಗಲಿಲ್ಲ. ೩೮೬. ನಿನ್ನನ್ನೇ ನಾನು ಚಿಂತಿಸುತ್ತ ಮರುಗುತ್ತ ಇದ್ದೆ ಎಂದು ಅವನ

ಅಂತು ಚಿತ್ತಂಬದೆದೆನ್ನಾಣ್ಮನ ಕಣ್ಗೊಡೆವಂತುಪಾಯಮಂ ಚಿಂತಿಸಿದೆಯಪ್ಪೊಡೆ ನಮ್ಮ ಮನಂ ಬಂದಂದದಿಂದ ಕ್ರೀಡಿಸುಪಮೆಂಬುದುಮಾ ಪಾಣ್ಬನೆಂದಂ : ಅಂತಪ್ಪೊಡೆ ನಮೂರ್ರ ಮುಂದಣ ಬಟ್ಟೆಯ ಬೆನಕಂ ಚಿಂತಿತಾರ್ಥಪ್ರದನೆಂಬರಲ್ಲಿಗೆ ನೀಂ ನಾಳೆ ಪೋಗಿ ಪೊಡೆವಟ್ಟು ಪರಕೆಯಂ ತೆಗೆದೆಯಪ್ಪೊಡೆ ನಿನ್ನ ಮನೋರಥ ಸಿದ್ಧಿಯಕ್ಕುಮೆಂದು ಪೇಳ್ವುದುಮವಳಂತೆಗೆಯ್ವೆನೆಂಬುದು ಮದೆಲ್ಲಮನಾ ಪಾರ್ವಂ ಕೇಳ್ದಿಂದೆ ಮೇಲ್ವಾಯ್ವೆನಪ್ಪೊಡೆ ಪುಷ್ಕರನೆನ್ನಂ ಕೊಂದಪನಾನೀಗಳ್ ಹೀನಸತ್ತ್ವನಾಗಿರ್ಪೆನದಱಿಂದೇನಾನುಮೊಂದುಪಾಯದಿಂ ಶಕ್ತಿಯಪ್ಪಂತು ಮಾಡಿಕೊಂಡು ಬೞಿಕ್ಕಿವರ್ಗೆ ತಕ್ಕುದಂ ಮಾೞ್ಪೆನೆಂದಾಗಳೆ ಪೋಗಿ ಚಿಂತಾಸಿದ್ಧಿವಿನಾಯಕನ ಪಿಂತೆ ಕುಳ್ಳಿರ್ಪುದುಮಾ ಜೋಡೆ ನೇಸರ್ಮೂಡಲೊಡಂ ವಿನಾಯಕನಲ್ಲಿಗೆ ಬಂದು ಗಂಧಾಕ್ಷತಧೂಪ ದೀಪಾದಿಗಳಿಂದರ್ಚಿಸಿ ತದನಂತರಂ.

(ರಥೋದ್ಧತೆ)

ಕ್ಷೀರಸಾರಘೃತಪೂರ ಮಂಡಕಾ
ಧಾರಖಂಡಯುತಲಡ್ಡುಕಾವಳೀ
ಪೂರಿಕಾದ್ಯಖಿಲಭಕ್ಷ್ಯ ರಾಶಿಯಿಂ
ಜಾರೆಯರ್ಚಿಸಿದಳಾ ಗಣೇಶನಂ ೩೮೭

ಷಟ್ಪದರಾಜಿಚುಂಬಿತ ಕಪೋಲಯುಗಂ ದ್ವಿರದಾನನಂ ಸುರ-
ದ್ವಿಟ್ಪುರಘಸ್ಮರಪ್ರಿಯಸುತಂ ಗಣನಾಥನಘೌಘವೇದನಾ-
ರುಟ್ಪಟಲಪ್ರಣಾಶದಹನಂ ಫಣಿನಾಯಕಭೂಷಣಂ ಮರು-
ದ್ರಾಟ್ಸ್ವಧುಮೌಳಿಲಾಲಿತಪದಂ ನಮಗೀಗೆ ಮನೋರಥಂಗಳಂ ೩೮೮

ಅಡಿಗಳಿಗೆರಗಿ ಆ ನೀಚೆ ಹಾದರಿಗನನ್ನು ನಂಬಿಸಿದಳು. ವ|| ಹಾಗೆ ದುಃಖಿಸುತ್ತ ನನ್ನ ಗಂಡನ ಕಣ್ಣೊಡೆಯುವ ಉಪಾಯವನ್ನು ಚಿಂತಿಸಿದರೆ ನಮ್ಮ ಮನಸ್ಸು ಬಂದಂತೆ ಕ್ರೀಡಿಸೋಣ ಎನ್ನಲು ಆ ಹಾದರಿಗನು ಹೀಗೆಂದನು : ಹಾಗಾದರೆ ನಮ್ಮೂರು ಮುಂದಿನ ಮಾರ್ಗದಲ್ಲಿರುವ ವಿನಾಯಕನು ಚಿಂತಿತಾರ್ಥಪ್ರದನೆಂದು ಪ್ರಸಿದ್ಧನಾಗಿರುವನು. ಅಲ್ಲಿಗೆ ನೀನು ನಾಳೆ ಹೋಗಿ ನಮಸ್ಕರಿಸಿ ಹರಕೆಯನ್ನು ಹೇಳಿಕೊಂಡರೆ ನಿನ್ನ ಮನೋರಥ ಸಿದ್ಧಿಯಾಗುವುದು ಎಂದು ಹೇಳಲು ಅವಳು ಹಾಗೆಯೇ ಮಾಡುವೆನು ಎಂದಳು. ಆ ಬ್ರಾಹ್ಮಣನು ಅದೆಲ್ಲವನ್ನೂ ಕೇಳಿ ಇಂದೇ ಮೇಲೆ ಹಾಯ್ದರೆ ಹಾದರಿಗನು ನನ್ನನ್ನು ಕೊಲ್ಲುವನು. ನಾನು ಅಸಮರ್ಥನಾಗಿರುವೆನು. ಅದರಿಂದ ಏನಾದರೂ ಒಂದು ಉಪಾಯದಿಂದ ಶಕ್ತನೆನಿಸಿ ಬಳಿಕ ಇವರಿಗೆ ತಕ್ಕುದನ್ನು ಮಾಡುವೆನು ಎಂದು ಆಗಲೇ ಹೋಗಿ ಚಿಂತಾಸಿದ್ಧಿ ವಿನಾಯಕನ ಹಿಂದೆ ಕುಳ್ಳಿರಲು ಆ ಜೋಡೆ ಸೂರ್ಯೋದಯವಾಗಲು ವಿನಾಯಕನಲ್ಲಿಗೆ ಬಂದು ಗಂಧಾಕ್ಷತಧೂಪದೀಪಾದಿಗಳಿಂದ ಅರ್ಚಿಸಿ ಬಳಿಕ ೩೮೭. ಕ್ಷೀರಸಾರ, ಘೃತಪೂರ, ಮಂಡಿಗೆ, ಲಡ್ಡುಗೆ, ಪೂರಿಗೆ ಮೊದಲಾದ ಅಖಿಲ ಭಕ್ಷ್ಯರಾಶಿ ಗಳಿಂದ ಆ ಜಾರೆ ಗಣೇಶನನ್ನು ಅರ್ಚಿಸಿದಳು. ೩೮೮. ತುಂಬಿಗಳ ಸಮೂಹದಿಂದ ಮುತ್ತಿಟ್ಟ ಕೆನ್ನೆಗಳನ್ನುಳ್ಳವನೂ ಆನೆಮುಖದವನೂ ತ್ರಿಪುರಾಸುರರನ್ನು ನಾಶಮಾಡಿದ ಶಿವನ ಪ್ರಿಯಸುತನೂ ಗಣನಾಥನೂ ಪಾಪಸಮೂಹದ ನೋವೆಂಬ ರೋಗಗಳನ್ನು ಪರಿಹರಿಸುವ ಅಗ್ನಿಯೂ ಫಣಿನಾಯಕಭೂಷಣನೂ ದೇವೇಂದ್ರನ ಕಿರೀಟವು ಆಡುತ್ತಿರುವ

ಎಂದು ತುತಿಯಿಸಿ ಪೊಡೆವಟ್ಟೆನ್ನ ಗಂಡನಂ ಕಣ್ಗಾಣದಂತು ಮಾಡಿದೊಡೆ ನಿನಗೆ ನಾಂ ಪೊನ್ನಪಟ್ಟಮಂ ಬೊಟ್ಟುಮನೀವೆನೆಂಬುದುಂ ಪ್ರತಿಮೆಯ ಪೆಱಗಿರ್ದ ಪಾರ್ವನಂತಪ್ಪೊಡೆ ನಿನ್ನ ಗಂಡಂಗೆ ತಲೆವೂಸಿ ಮೀಯಲೆಱೆದು ಷಡ್ರಸಾನ್ನಮನಿರ್ಪತ್ತೊಂದುದಿವಸಮಿಂಬಾಗಿಯುಣಲಿಕ್ಕಿದೆಯಪ್ಪೊಡೆಯಾತನ ಕಣ್ಪೊಡೆಗುಮೆಂಬುದುಂ ಪಾಱ್ಪೆ ನಂಬಿ ದೈವಂ ಸನ್ನಿಧಮಾಗಿರ್ದನ್ನೊಡನೆ ನುಡಿವುದಿನ್ನೆನಗೇನೆಂದು ಮನದೊಳ್ ಪಿರಿದು ಸಂತಸಂಬಡೆದು ಮನೆಗೆ ಪರಿತಂದು ನಾನಾವಿಧಭಕ್ಷ್ಯಭೋಜ್ಯಂಗಳುಮನನೇಕ ಫಲಪತ್ರಶಾಕಂಗಳುಮಂ ಸುಸ್ವಾದುಗಳಪ್ಪಂತಟ್ಟು ಪಾರ್ವಂ ಬರಲತ್ಯಾದರದಿಂ ಕಾಲ್ಗೆರಗಿ ಮೆಯ್ಯಂ ಕಯ್ಯಿನೊತ್ತಿ ಮೀಯಲೆಱೆದು ದಿವ್ಯಾಹಾರಂಗಳನುಣಲಿಕ್ಕಿ ಬೞಿಕ್ಕಿಂತೆಂದಳ್ : ಈಗಳ್ ಕೆಲವುದಿವಸದಿಂದಿತ್ತ ನಿಮ್ಮೊಡಲ್ ಬಡವಾಗುತ್ತುಂ ಬಂದಪುದು; ಶರೀರಂ ಸಮಂತಿರ್ಪಿನಂ ಸಂತತಮಿಂತೆ ಸ್ನಾನ ಭೋಜನಂಗೆಯ್ದು ನಿಶ್ಚಿಂತಮಿರಿಮೆಂಬುದುಂ ವಿಷ್ಣುಶರ್ಮಂ ದುರ್ಮತಿಯ ಕೂರ್ಮೆಗೆ ಸಂತೋಷಂಬಟ್ಟುಮಂತೆಗೆಯ್ವೆನೆಂಬುಮಮಾ ಸ್ಥಿತಿಯೊಳ್ ನಿಚ್ಚನಿಚ್ಚಂ ಸ್ನಾನಭೋಜನಂಗೆಯ್ಯುತ್ತಿರ್ದೊಂದು ದಿವಸಂ ಪಾರ್ವನಾ ಪಾಱ್ಪೆಗೆ ನಂಬುಗೆಯಂ ಪುಟ್ಟಿಸಲೆಂದು ಸಮೀಪಕ್ಕೆ ಕರೆದಿಂತೆಂದಂ :

ಪಟಲಂ ಕಣ್ಗೊಳ್ ಕವಿದುಂ
ಗುಟಮಂ ಮೊದಲಾಗಿ ಕಾಣೆನೆಂದೊಡೆ ಕುಲಟಾ
ಪಟು ರಾಗಿಸಿ ಮನದೊಳಗ
ಕ್ಕಟ ಮರ್ದಂ ಮಾಳ್ಪಮುಸಿರದಿರಿಮೆನೆ ಪಾರ್ವಂ ೩೮೯

ಪಾದಗಳುಳ್ಳವನೂ ಆದ ಗಣೇಶನು ನಮ್ಮ ಮನೋರಥಗಳನ್ನು ಈಡೇರಿಸಲಿ ವ।। ಎಂದು ಸ್ತುತಿಸಿ ನಮಸ್ಕರಿಸಿ ನನ್ನ ಗಂಡನನ್ನು ಕಣ್ಣಾಣದಂತೆ ಮಾಡಿದರೆ ನಿನಗೆ ನಾನು ಹೊನ್ನಪಟ್ಟವನ್ನೂ ಬೊಟ್ಟನ್ನೂ ಕೊಡುವೆನು ಎನ್ನಲು ಪ್ರತಿಮೆಯ ಹಿಂದಿದ್ದ ಬ್ರಾಹ್ಮಣನು ಹಾಗಾದರೆ ನಿನ್ನ ಗಂಡನ ತಲೆಗೆ ಎಣ್ಣೆ ಹಚ್ಚಿ ಮೀಯಿಸಿ ಷಡ್ರಸಾನ್ನವನ್ನು ಇಪ್ಪತ್ತೊಂಗು ದಿವಸಗಳವರೆಗೆ ತೃಪ್ತಿಯಾಗುವಷ್ಟು ತಿನ್ನಿಸಿದರೆ ಆತನ ಕಣ್ಣು ಒಡೆಯುವುದು ಎಂದನು. ಆ ಜೋಡೆಯು ಅದನ್ನು ನಂಬಿ ದೈವವು ಸಾಕ್ಷಾತ್ಕಾರವಾಗಿ ತನ್ನೊಡನೆ ನುಡಿಯಿತು ; ಇನ್ನು ನನಗೇನು ಎಂದು ಮನಸ್ಸಿನಲ್ಲೇ ಅತಿಶಯ ಸಂತಸತಾಳಿ ಮನೆಗೆ ಬಂದು ನಾನಾವಿಧ ಭಕ್ಷ್ಯಭೋಜ್ಯಗಳನ್ನೂ ಅನೇಕ ಫಲಪತ್ರಶಾಕಗಳನ್ನೂ ಸುಸ್ವಾದುವಾಗುವಂತೆ ಅಡುಗೆಮಾಡಿ ಬ್ರಾಹ್ಮಣನು ಬರಲು ಅತ್ಯಾದರದಿಂದ ಕಾಲಿಗೆ ಎರಗಿ ಮೆಯ್ಯನ್ನು ಕಯ್ಗಳಿಂದ ಒತ್ತಿ ಮೀಯಿಸಿ ದಿವ್ಯಾಹಾರಗಳನ್ನು ಬಡಿಸಿ ಹೀಗೆಂದಳು : ಈಗ ಕೆಲವು ದಿವಸಗಳಿಂದ ನಿಮ್ಮ ಒಡಲು ಬಡವಾಗುತ್ತಿರುವುದು. ಶರೀರವು ಸರಿಯಾಗುವವರೆಗೆ ಹೀಗೆ ಸದಾ ಸ್ನಾನಭೋಜನಗಳನ್ನು ಮಾಡಿ ನಿಶ್ಚಿಂತರಾಗಿರಿ ಎನ್ನಲು ವಿಷ್ಣುಶರ್ಮನು ದುರ್ಮತಿಯ ಪ್ರೀತಿಗೆ ಸಂತೋಷಪಟ್ಟು ಹಾಗೆಯೇ ಆಗಲಿ ಎನ್ನಲು ಹಾಗೆಯೇ ನಿತ್ಯನಿತ್ಯವೂ ಸ್ನಾನಭೋಜನಗಳನ್ನು ಮಾಡುತ್ತಿರಲು ಒಂದು ದಿನ ಆ ಬ್ರಾಹ್ಮಣನು ಆ ಜೋಡೆಗೆ ನಂಬಿಕೆಯನ್ನು ಹುಟ್ಟಿಸಲು ಸಮೀಪಕ್ಕೆ ಕರೆದು ಹೀಗೆಂದನು : ೩೮೯. ಕಣ್ಣಿನಲ್ಲಿ ಪೊರೆ ಕವಿದು ಉಂಗುಟವನ್ನೂ ಕಾಣಲಾರೆ ಎನ್ನಲು ಆ ಕುಲಟಾಪಟು ಮನಸ್ಸಿನಲ್ಲೇ ಸಂತೋಷಿಸಿ

ಅಂತೆಗೆಯ್ಕನೆಂದುಸಿರದಿರ್ದು ಮತ್ತಂ ಕೆಲವು ದಿವಸಕ್ಕಾತಂ ತನಗಳವುಂ ಮನೋಬಲಮುಮಾಗೆ ಪಗೆಯಂ ಕೊಲಲ್ಬಗೆದುಮೀಗಳ್ ನೀನಪ್ಪುದಂ ಕಾಣೆನೆಂದಿರ಼್ುದುಮಾ ಪಾಣ್ಬ ನಂಬಿ ನಿಮ್ಮ ಕಣ್ಗೊಳ್ಳಿದುವಕ್ಕೆಂದು ವಿನಾಯಕಂಗೆ ಪಟ್ಟಮಂ ಬೊಟ್ಟುಮಂ ಕೊಟ್ಟು ಪೊಡೆಮಟ್ಟುವಂದಪೆನೆಂದಾ ನೆವದೊಳೆ ಪರಕೆಯಂ ವಿನಾಯಕಂಗೆ ಕೊಟ್ಟುಬಂದು ಬೞಿಕ್ಕೆ ಪಾಣ್ಬನಂ ಬರಿಸಿ ಪಾರ್ವನಿರ್ದಂತಿರ್ಪರುಂ ಒದಗೊಂಡು ನಡುವಿರುಳವರ್ ನಾಟಕಂ ನಲಿದು ಮಱೆದೊಱಗಿರ್ದ ಸಮಯದೊಳಾ ಪಾಣ್ಬನಂ ಕೊಂದು ತನ್ನ ಬಗೆಯುಮಂ ಬಗೆದಂತೆ ತೀರ್ಚಿದಂ.

ಅಂತೆ ಆನುಮೆನ್ನ ಪಗೆಯುಮಂ ಬಗೆಯೊಳೆ ಸಾಧಿಸಲಿರ್ದಪೆಂ ನೀನುಸಿರದಿರೆಂದಾ ನಾಗಿಗೆ ನಾಗಂ ಪೇೞ್ದು ಮತ್ತಂ ಮಂಡೂಕಂಗಳಂ ಪೊತ್ತು ಮೆಲ್ಲಮೆಲ್ಲನೆ ತೊೞಲುತ್ತಮಿರೆ ಜಲಪಾಲನೆಂದನೇಂ ಗಡ ಭಾವಾ! ನೀನಿಂದು ಕರಂ ಮಂದಗಮನನೆಯಾದೆಯೆಂದೊಡೆ ವೃದ್ಧೋರಗನಿಂತೆಂದಂ : ದೇವಾ! ನಾಂ ಪಲವು ದಿವಸಮಾಹಾರಂಬಡೆಯದೆ ನಡೆಯಲಾರ್ತಪೆ ನಿಲ್ಲೆಂಬುದುಮಂತಪ್ಪೊಡಂ ನಿನ್ನ ಪಸಿವು ಕೆಟ್ಟು ಬಲಮಪ್ಪನ್ನವರಂ ಕಿಱುಕಿಱುಗಪ್ಪೆಗಳಂ ತಿನುತಿರೆನೆ ಮಹಾಪ್ರಸಾದಮಂತೆಗೆಯ್ವೆನೆಂದು ದಿವಸಗತಿಯಿಂ ಕಿಱುಗಪ್ಪೆಗಳೆಲ್ಲಮುಮಂ ಬಱಿದಾಗೆ ಮಾಡೆ ತನಗೆ ಸತ್ತ್ವಂ ಸಮನಿಸೆ ಪಿರಿಯ ಕಪ್ಪೆಗಳೆಲ್ಲಮಂ ಗತಿಗೆಟ್ಟವನೆಲ್ಲಮನೊಟ್ಟನೆ ಮಾಡಿ ಬೞಿಕ್ಕೆ ಜಲಪಾಲನುಮಂ ತಿಂದುದು, ಅದಱಿಂ,

ಶ್ಲೋ॥ ಸ್ಕಂಧೇನಾಪಿವಹೇಚ್ಛತ್ರುಂ ಕಾರ್ಯಸಾಧನ ಬುದ್ಧಿಮಾನ್
ವಹತಾ ಕೃಷ್ಣಸರ್ಪೇಣ ಮಂಡೂಕೋ ವಿನಿಪಾತಿತಃ ॥೧೮೬॥

ಮದ್ದನ್ನು ಮಾಡೋಣ ಸುಮ್ಮನಿರಿ ಎನ್ನಲು ಬ್ರಾಹ್ಮಣನು ವ॥ ಹಾಗೆಯೇ ಆಗಲಿ ಎಂದು ಸುಮ್ಮನಿದ್ದನು. ಕೆಲವು ದಿವಸಗಳಲ್ಲಿ ಆತನು ತನ್ನಲ್ಲಿದ್ದ ಸಾಮರ್ಥ್ಯವೂ ಮನೋಬಲವೂ ಅಧಿಕವಾದುದನ್ನು ಕಂಡು ಹಗೆಯನ್ನು ಕೊಲ್ಲಬೇಕೆಂದು ಬಗೆದು ಈಗ ನಿನ್ನನ್ನೂ ಕಾಣಲಾರೆ ಎನ್ನಲು ಆ ಜೋಡೆ ನಂಬಿ ನಿಮ್ಮ ಕಣ್ಣಿಗೆ ಒಳ್ಳೆಯದಾಗಲಿ ಎಂದು ವಿನಾಯಕನಿಗೆ ಪಟ್ಟವನ್ನೂ ಬೊಟ್ಟನ್ನೂ ಕೊಟ್ಟು ನಮಸ್ಕರಿಸಿ ಬರುವೆನು ಎಂದು ಆ ನೆಪದಿಂದ ಹರಕೆಯನ್ನು ವಿನಾಯಕನಿಗೆ ಅರ್ಪಿಸಿ ಬಂದು ಹಾದರಿಗನನ್ನು ಕರೆಯಿಸಿ ಬ್ರಾಹ್ಮಣನು ಇದ್ದಂತೆಯೇ ಜತೆಯಾಗಿ ನಡುರಾತ್ರಿಯಲ್ಲಿ ನಾಟಕನಲಿದು ಮರೆದೊರಗಿದ್ದ ಸಮಯದಲ್ಲಿ ಆ ನೀಚನನ್ನು ಕೊಂದು ತನ್ನ ಸಂಕಲ್ಪವನ್ನು ನೆರವೇರಿಸಿಕೊಂಡನು. ಹಾಗೆಯೇ, ನಾನೂ ನನ್ನ ಹಗೆಯನ್ನು ಅಂತರಂಗದಲ್ಲೇ ಸಾಧಿಸಲಿರುವೆನು ; ನೀನು ಸುಮ್ಮನಿರು ಎಂದು ಆ ನಾಗಿಗೆ ನಾಗನು ಹೇಳಿ ಪುನಃ ಮಂಡೂಕಗಳನ್ನು ಹೊತ್ತು ಮೆಲ್ಲ ಮೆಲ್ಲನೆ ತೊಳಲಾಡುತ್ತಿರಲು ಜಲಪಾಲನು ಹೀಗೆಂದನು : ಏನಯ್ಯಾ ಭಾವ ! ನೀನಿಂದು ತುಂಬ ಮಂದಗಮನನಾದೆ ಎನ್ನಲು ಅದಕ್ಕೆ ವೃದ್ಧೋರಗನು ಹೀಗೆಂದನು : ದೇವಾ ! ನಾನು ಹಲವು ದಿವಸಗಳಿಂದ ಆಹಾರ ಪಡೆಯದೆ ನಡೆಯಲೂ ಸಾಧ್ಯವಾಗುವುದಿಲ್ಲ ಎನ್ನಲು ಹಾಗಾದರೆ ನಿನ್ನ ಹಸಿವು ನೀಗುವಂತೆಯೂ ಬಲಬರುವಂತೆಯೂ ಕಿರುಗಪ್ಪೆಗಳನ್ನು ತಿನ್ನುತ್ತಿರು ಎನ್ನಲು ಮಹಾಪ್ರಸಾದ, ಹಾಗೆಯೇ ಆಗಲಿ ಎಂದು ದಿವಸಗತಿಯಿಂದ ಕಿರುಗಪ್ಪೆಗಳೆಲ್ಲವನ್ನೂ ಬರಿದಾಗುವಂತೆ ಮಾಡಿ ತನ್ನಲ್ಲಿ ಸತ್ತ್ವವುಂಟಾಗಲು ಹಿರಿಯ ಕಪ್ಪೆಗಳೆಲ್ಲವನ್ನೂ ತಿಂದು

ಎಂಬ ಕಥಾಪ್ರಪಂಚಮನರಿದೆನಪ್ಪುದರಿಂ ರಿಪುವನುಪಾಯದೊಳ್ ಕಿಡಿಸುವೆನೆಂದುಮವದಿರೇನೆಂದೊಡಂ ಸೈರಿಸಿಯವರ ಮನಕ್ಕೆ ವಿಶ್ವಾಸಂ ಪುಟ್ಟುವಂತೆ ನಡೆದು ಸ್ವಾರ್ಥಮಂ ಸಿದ್ಧಿಸಿದೆಂ. ಎಂತುಂ ಪೂರ್ವೋಕ್ತಮಿಂತೆಂಬುದಲ್ತೆ :

ಶ್ಲೋ|| ಶಸ್ತ್ರೈರ್ಹತಾಸ್ತು ರಿಪವೋ ನ ಹತಾ ಭವಂತಿ
ಪ್ರಜ್ಞಾಹತಾಸ್ತು ರಿಪವಃ ಸುಹತಾ ಭವಂತಿ
ಶಸ್ತ್ರಂ ನಿಹಂತಿ ಪುರುಷಸ್ಯ ಶರೀರಮೇಕಂ
ಪ್ರಜ್ಞಾಕುಲಂ ಸಹಬಲಂ ಸಹಸಾ ನಿಹಂತಿ ||೧೮೭||

ಟೀ|| ಕೈದುಗಳಿಂ ಗಾಯವಡೆದರ್ ಮರಳಿಯೆೞ್ವರ್ ಪುರುಷಬುದ್ಧಿಹತರ್ ಕೆಟ್ಟವರುಗಳೇ ಅದೆಹಗೆಂದೊಡೆ ಶಸ್ತ್ರಮೆಂಬುದು ಪುರುಷನ ಶರೀರಮೊಂದನೆ ಕಿಡಿಸುವುದು, ಪ್ರಜ್ಞೆಯೆಂಬುದು ಹಗೆಗಳಂ ವಂಶಸಹಿತಂ ಕಿಡಿಸುವುದು ಎಂಬುದು ಮತ್ತಂ,

ಶ್ಲೋ|| ಏಕಂ ನಿಹನ್ಯಾತ್ ಸಂದೇಹಃ ಕಾಂಡೋ ಮುಕ್ತೋ ಧನುಷ್ಮತಾ.
ಬುದ್ಧಿರ್ಬುದ್ಧಿಮತಾಂ ದೃಷ್ಟ್ವಾ ಹನ್ಯಾದ್ರಾಷ್ಟ್ರಂ ಸರಾಜಕಂ ||೧೮೮||

ಟೀ|| ಬಿಲ್ಗಾಱನೆಚ್ಚಂಬು ಒರ್ಬನ ಕೊಲ್ವುದೋ ಕೊಲ್ಲದೋ ಸಂದೇಹವು. ಬುದ್ಧಿವಂತರ ಮಂತ್ರವು ಅರಸುಸಹಿತವಾಗಿರ್ದ ರಾಜ್ಯವನ್ನೇ ಕಿಡಿಸುವುದು.

ಸುರರಾಜಪ್ರಿಯಮಂತ್ರಿಯಿಂತಖಿಳ ದೈತ್ಯಾಮಾತ್ಯರಂ ಗೆಲ್ದುವು
ಚ್ಚರಿಯಪ್ಪಂತಿರೆ ಸಾಹಸಾಂಕಗುಣನಂ ಶೌರ್ಯಾನ್ವಿತಂ ಗೆಲ್ದನಾ
ಸುರಮಪ್ಪಂತಿರೆ ಕಾಕಮಂತ್ರಿಯುಮುಳೂಕಾಮಾತ್ಯರಂ ಗೆಲ್ದನಂ
ತಿರೆ ವಿಶ್ವಾಸದಿ ಗೆಲ್ಗಸಾಧ್ಯನೃಪರಂ ವಿಧ್ವಸ್ತಸಾಮ್ರಾಜ್ಯಮಂ ೩೯೦

ಬಳಿಕ ಜಲಪಾಲನನ್ನೂ ತಿಂದಿತು. ಆದರಿಂದ ಶ್ಲೋ|| ಕಾರ್ಯಸಾಧನೆಯ ಬುದ್ಧಿಯುಳ್ಳ ಕೃಷ್ಣಸರ್ಪವು ಶತ್ರುಗಳನ್ನು ಭುಜದ ಮೇಲೆ ಹೊತ್ತು ಕೊಂಡು ಕೂಡ ಮಂಡೂಕಗಳನ್ನು ನಾಶಮಾಡಿತು ಎಂಬ ಕಥಾಪ್ರಪಂಚವನ್ನು ತಿಳಿದುಕೊಂಡೆನು. ಆದರಿಂದ ಶತ್ರುವನ್ನು ಉಪಾಯದಿಂದ ಕೆಡಿಸುವೆನು ಎಂದು ಅವರು ಏನೆಂದರೂ ಸಹಿಸಿಕೊಂಡು ಅವರ ಮನಸ್ಸಿಗೆ ವಿಶ್ವಾಸಹುಟ್ಟುವಂತೆ ನಡೆದು ಸ್ವಾರ್ಥವನ್ನು ಸಿದ್ಧಿಸಿದೆ. ಹೇಗೂ ಪೂರ್ವೋಕ್ತ ಹೀಗಿರುವುದಲ್ಲವೇ? : ಶ್ಲೋ|| ಆಯುಧಗಳಿಂದ ಗಾಯಗೊಂಡವರು ಮರಳಿಯೇಳುವರು; ಬುದ್ಧಿಹತರಾದ ಪುರುಷರು ಸರ್ವನಾಶ ಹೊಂದುವರು. ಶಸ್ತ್ರವೆಂಬುದು ಪುರುಷನ ಶರೀರವೊಂದನ್ನೇ ನಾಶಮಾಡುವುದು ; ಪ್ರಜ್ಞೆಯೆಂಬುದು ಹಗೆಗಳನ್ನು ವಂಶಸಹಿತ ನಿರ್ಮೂಲ ಮಾಡುವುದು. ಅಲ್ಲದೆ, ಶ್ಲೋ|| ಬಿಲ್ಲುಗಾರನು ಪ್ರಯೋಗಿಸಿದ ಬಾಣವು ಒಬ್ಬನನ್ನೂ ಕೊಲ್ಲುವುದೋ ಕೊಲ್ಲದೋ ಎಂಬುದರಲ್ಲಿ ಸಂದೇಹ ; ಬುದ್ಧಿವಂತರಾದವರ ಮಂತ್ರೋಪಾಯವು ರಾಜಸಹಿತವಾಗಿ ರಾಜ್ಯವನ್ನೇ ನಾಶಮಾಡುವುದು. ೩೯೦. ದೇವೇಂದ್ರನ ಮಂತ್ರಿಗಳು ಹೀಗೆ ರಾಕ್ಷಸರ ಮಂತ್ರಿಗಳನ್ನು ಗೆದ್ದು ಆಶ್ಚರ್ಯವಾಗುವಂತೆ ಇರಲು ಸಾಹಸಾಂಕಗುಣನನ್ನು ಶೌರ್ಯಾನ್ವಿತನು ಗೆದ್ದನು. ಭಯಂಕರವಾಗಿ ಹೋರಾಡಿ ಕಾಕಮಂತ್ರಿಯು ಗೂಬೆಗಳ ಅಮಾತ್ಯರನ್ನು ಗೆದ್ದನು. ಹಾಗಿರಲು ಅಸಾಧ್ಯರಾದವರನ್ನು

ಅಂತು ಗೆಲ್ದು ಮೇಘವರ್ಣಂ ಪ್ರಧಾನರ್ ಸಹಿತಂ ಸುಖಸಂಕಥಾವಿನೋದದಿಂದಿರ್ದಂ.

ಇದು ವಿನಮದಮರರಾಜಮೌಳಿಮಾಣಿಕ್ಯ ಮರೀಚಿಮಂಜರೀ ಪುಂಜರಂಜಿತ ಭಗವದ್ಭವಾನೀ ವಲ್ಲಭಚರಣ ಸರಸೀರುಹಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತಮಪ್ಪ ಪಂಚತಂತ್ರದೊಳ್ ವಿಶ್ವಾಸಪ್ರಕರಣ ವರ್ಣನಂ ತೃತೀಯ ತಂತ್ರಂ

ಸಮಾಪ್ತಂ

ಗೆದ್ದು ವಿದ್ವಜ್ಜನಕ್ಕೆ ಆಶ್ರಯವಾಗುವುದು. ಹಾಗೆ ಗೆದ್ದ ಮೇಘವರ್ಣನು ಪ್ರಧಾನರ ಸಹಿತ ಸುಖಸಂಕಥಾವಿನೋದದಲ್ಲಿದ್ದನು. ಇದು ವಿನಮದಮರರಾಜಮೌಳಿಮಾಣಿಕ್ಯ ಮರೀಚಿಮಂಜರೀಪುಂಜರಂಜಿತಭಗವದ್ಭವಾನೀವಲ್ಲಭಚರಣಸರಸೀರುಹಷಟ್ಚರಣನಾದ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತವಾದ ಪಂಚತಂತ್ರದಲ್ಲಿ ವಿಶ್ವಾಸಪ್ರಕರಣ ವರ್ಣನವೆಂಬ ತೃತೀಯ ತಂತ್ರವು ಸಮಾಪ್ತವಾದುದು.

ವಂಚನಾಪ್ರಕರಣಂ ಚತುರ್ಥತಂತ್ರಂ

ಶ್ರೀಯಂ ನಿರಂತರಂ ತನ-
ಗಾಯತ್ತಂ ಗೆಯ್ವ ನೃಪತಿ ಪರಕೃತ ವಿವಿಧಾ-
ಪಾಯಂಗಳ್ಗೊಳಗಾಗದೆ
ಮಾಯಾತ್ಮಕನಂತೆ ವಂಚಿಪುದು ನಿಪುಣತೆಯಿಂ ೩೯೧

ಅದು ಕಾರಣದಿಂ ನಯಕೋ-
ವಿದನಸಮಂ ದುರ್ಗಸಿಂಹವಿಭು ವಿರಚಿಸಿದಂ
ಮದರಹಿತಂ ಗುಣವಿಹಿತಂ
ಮುದದಿಂ ವಂಚನೆಯ ತಂತ್ರಮಂ ನೃಪಹಿತಮಂ ೩೯೨

ಅದೆಂತೆನೆ, ಶ್ಲೋ॥ ಪ್ರಾಪ್ತಮರ್ಥಂ ತು ಯೋ ಮೋಹಾದಾನೀತಂ ಪ್ರತಿಮುಂಚತಿ
ಸತತಂ ವಂಚ್ಯತೇ ಮೂಢೋ ಜಲಜಃ ಕಪಿನಾ ಯಥಾ ॥೧೮೯॥

ಟೀ॥ ಆವನಾನೊರ್ವಂ ಆದಂಥ ಅರ್ಥವನರಿಯದೆ ಬಿಟ್ಟಿಹನೊ ಆವನೆಲ್ಲರಿಂದಂ ವಂಚಿಸಿಕೊಳಲ್ಪಡುವನು. ಅದು ಹೇಗೆಂದೊಡೆ ಮೊಸಳೆಯನ್ನು ಕಪಿ ವಂಚಿಸಿದ ಹಾಂಗೆ. ಆ ಕಥಾಪ್ರಪಂಚಮೆಂತೆಂದೊಡೆ.

೧. ಮೊಸಳೆಯಂ ಕಪಿ ವಂಚಿಸಿದ ಕಥೆ

ತಿಲಕಾಶೋಕತಮಾಲಕೇಸರ ಕಪಿತ್ಥಾಶ್ವತ್ಥ ಪುನ್ನಾಗ ಭೃಂ-
ಗಲವಂಗಾರ್ಜುನಭೂರ್ಜಜಂಬು ಬದರೀ ಹಿಂತಾಲ ಜಂಬೀರಮಂ-
ಜುಲ ಕಾಂಜೀರ ಕರಂಜ ನಿಂಬ ವಟ ರಂಭಾ ಚೂತ ನಾರಂಗ ಸಂ-
ಕುಲದಿಂ ರಮ್ಯಮೆನಿಪ್ಪ ರಮ್ಯವನದೊಳ್ ನಾನಾಫಲಕೀರ್ಣದೊಳ್ ೩೯೩

ಮದರಹಿತನ ನಿಹಿತಹಿತಾ-
ಮದಧೂಳಿಪಯೋದ ನಿಪುಣ (?) ನಗಧರ ರಾಜ್ಯಾ-
ಸ್ಪದದೊಳ್ ಸುಖದಿಂದಿರ್ಪಂ
ಮುದಿತಮನಂ ಕೃಷ್ಣವದನನೆಂಬ ಕಪೀಂದ್ರಂ ೩೯೪

೩೯೧. ಸಿರಿವಂತನಾಗಬೇಕೆಂಬ ಅರಸನು ಬೇರೆಯವರಿಂದುಂಟಾಗುವ ವಿವಿಧ ಅಪಾಯಗಳಿಗೆ ಒಳಗಾಗದೆ ನಿಪುಣತೆಯಿಂದ ಮಾಯಾತ್ಮಕನಂತೆ ವಂಚಿಸಬೇಕು. ೩೯೨. ಆದರಿಂದ ನೀತಿಜ್ಞನೂ ಅಸಾಮಾನ್ಯನೂ ಎನಿಸಿದ ದುರ್ಗಸಿಂಹನೆಂಬ ವಿಭು ನೃಪರಿಗೆ ಹಿತವಾದ ವಂಚನೆಯ ತಂತ್ರವನ್ನು ವಿರಚಿಸಿದನು. ಅದೇನೆಂದರೆ ಶ್ಲೋ॥ ಯಾವನಾದರೂ ತನಗಾದ ಪ್ರಯೋಜನವನ್ನು ತಿಳಿಯದೆ ಬಿಡುವವನು ಮೊಸಳೆಯನ್ನು ಕಪಿ ವಂಚಿಸಿದ ಹಾಗೆ ಎಲ್ಲರಿಂದಲೂ ವಂಚಿತನಾಗುವನು. ಆ ಕಥಾಪ್ರಪಂಚವು ಹೀಗಿದೆ : ೩೯೩. ತಿಲಕ, ಅಶೋಕ, ಹೊಂಗೆ, ಕೇಸರ, ಬೇಲ, ಅರಳಿ, ಪುನ್ನಾಗ, ಭೃಂಗ, ಲವಂಗ, ಬಿಳಿ ಮತ್ತಿ, ಭೂರ್ಜ, ನೇರಿಳೆ, ಬದರಿ, ಈಚಲು, ಜಂಬೀರ, ಕಾಂಜೀರಕ, ಬಕುಳ, ನಿಂಬೆ, ಆಲ, ಬಾಳೆ, ಮಾವು, ಕಿತ್ತಿಳೆ ಮೊದಲಾದ ಮರಗಳು ಹಣ್ಣುಗಳಿಂದ ತುಂಬಿ ಸುಂದರವಾದ ಒಂದು ಕಾಡಿನಲ್ಲಿ ೩೯೪. ಕೃಷ್ಣವದನನೆಂಬ ಕಪೀಂದ್ರನು ಸುಖದಿಂದ ಇದ್ದನು.

ಆ ಬನದುತ್ತರದಿಗ್ಭಾಗದೊಳೊಂದು ವನಮುಂಟು. ಅಲ್ಲಿ

ಸಕಲಕಪಿಸಮಿತಿವೆರಸಿಂ
ತಕುಲಾಚಲಚಕ್ರಚಾರದಂಭೋಳಿ ಜಗ-
ತ್ಪ್ರಕಟೋದ್ಯನ್ಮಹಿಮನೆನಿಸು-
ವ ಕಕುದ್ವಲಿಯೆನಿಪ ಪೆಸರ ಬಲಿಮುಖನಿರ್ಪಂ ೩೯೫

ಅಂತಾ ಮರ್ಕಟಂಗಳೆರಡಕ್ಕುಂ ಏಕದ್ರವ್ಯಾಭಿಲಾಷೆಯಿಂ ಬದ್ಧವೈರಂ ಬಳೆದು ಕಕುದ್ವಲಿ ಮೇಲೆ ಬರೆ ಕದನಕ್ಕಳ್ಕಿ ಕೃಷ್ಣವದನನಾ ವನದ ಪಂಬಲಂ ಬಿಸುಟು ತನ್ನ ಯೂಥಮುಮಂ ಮಱೆದು ತಾನನಾಥನಾಗಿ ಪಾರಾವಾರಂಬೋಗಿ

ಸರಸಫಲಸ್ಫುರಿತೌದುಂ-
ಬರಮಂ ಶಾಖಾಶಿಖಾಗ್ರಚುಂಬಿತಹರಿವಂ-
ಬರಮಂ ಪತ್ರಚ್ಛನ್ನಾ-
ರ್ಕರಶ್ಮಿಯುಂ ಮುದದಿನಾ ಕಪೀಂದ್ರಂ ಕಂಡಂ ೩೯೬

ಅಂತು ಕಂಡದನಾಶ್ರಯಿಸಿ ತತ್ಫಲಂಗಳನಮೃತೋಪಮಂಗಳನಾರೋಗಿಸುತ್ತುಂ ಸುಖದಿನಿರ್ದೊಂದು ದಿವಸಂ ತನ್ನ ಕಯ್ಯಿಂದಂ ಬರ್ದುಂಕಿದ ಪಣ್ಣಂಭೋಧಿಮಧ್ಯದೊಳ್ ಬೀೞ್ವುದು ಮಲ್ಲಿ ಪೊಣ್ಮಿದ ಗಂಭೀರರವಮಂ ಕೇಳ್ದಾ ಚಪಲ ಕಪಿ ತನಗಮದೆ ವಿನೋದಮಾಗೆ ಮತ್ತಂ ಅತ್ತಿಯ ಪಣ್ಗಳನೀಡಾಡುತ್ತಿರ್ಪುದುಮಾ ಪಣ್ಗಳಂ ಕ್ರಕಚನೆಂಬುದೊಂದು ಮೊಸಳೆ ಪ್ರತಿದಿನಮೊಲ್ದು ಮೆಲ್ದು ಕೆಲವಾನುಂ ದಿನಕ್ಕವೆರಡರ್ಕಂ ನೇಹಮಾಗೆಯಾ ನೆಗಳ್ ತನ್ನ ಮನೆಯಂ ಮಱೆವಲ್ಲಿಯ

ವ॥ ಆ ವನದ ಉತ್ತರ ದಿಕ್ಕಿನಲ್ಲಿ ಇನ್ನೊಂದು ವನವಿತ್ತು. ೩೯೫. ಅಲ್ಲಿ ಸಕಲ ಕಪಿಸಮೂಹದಿಂದ ಕೂಡಿ ಶತ್ರುಗಳಾದ ಕುಲಾಚಲಗಳಲ್ಲಿ ಸಂಚರಿಸುವ ವಜ್ರಾಯುಧದಂತಿರುವ ಜಗತ್ತಿಗೆ ಪ್ರಕಟವಾಗುವ ಮಹಾಮಹಿಮನಾದ ಕಕುದ್ವಲಿ ಎಂಬ ಹೆಸರಿನ ಒಬ್ಬ ಬಲೀಮುಖನಿದ್ದನು. ವ॥ ಹಾಗೆ ಆ ಮರ್ಕಟಗಳೆರಡಕ್ಕೆ ಏಕದ್ರವ್ಯಾಭಿಲಾಷೆಯಿಂದ ವೈರ ಬೆಳೆದು ಕಕುದ್ವಲಿಯು ಮೇಲೆ ಬೀಳಲು ಕದನಕ್ಕೆ ಅಳುಕಿ ಕೃಷ್ಣವದನನು ಆ ವನದ ಹಂಬಲವನ್ನೇ ಬಿಟ್ಟು ತನ್ನ ಪರಿವಾರವನ್ನೂ ಮರೆತು ತಾನು ಅನಾಥನಾಗಿ ಸಮುದ್ರಕ್ಕೆ ಹೋಗಿ ೩೯೬. ರಸವತ್ತಾದ ಹಣ್ಣುಗಳಿಂದಲೂ ಆಕಾಶಕ್ಕೆ ಹಬ್ಬಿದ ಕೊಂಬೆಗಳಿಂದಲೂ ಸೂರ್ಯನ ಬೆಳಕನ್ನು ತಡೆಯಬಲ್ಲ ಎಲೆಗಳಿಂದಲೂ ಕೂಡಿದ ಒಂದು ಅತ್ತಿಯ ಮರವನ್ನು ಆ ಕಪೀಂದ್ರನು ಸಂತೋಷದಿಂದ ಕಂಡನು. ವ॥ ಅಲ್ಲಿ ಅನೇಕ ಫಲವೃಕ್ಷಗಳನ್ನು ಕಂಡು ಅವುಗಳನ್ನು ಆಶ್ರಯಿಸಿ ಆ ಹಣ್ಣುಗಳನ್ನು ತಿನ್ನುತ್ತಿದ್ದನು. ಹಾಗೆ ಸುಖದಿಂದಿದ್ದಾಗ ಒಂದು ದಿನ ತನ್ನ ಕಯ್ಯಿಂದ ಉದುರಿ ಒಂದು ಹಣ್ಣು ಕೆಳಗಿದ್ದ ಸಮುದ್ರದ ಮಧ್ಯದಲ್ಲಿ ಬೀಳಲು ಅಲ್ಲಿ ಉಂಟಾದ ಗಂಭೀರ ಶಬ್ದವನ್ನು ಕೇಳಿ ಆ ಕಪಿಯು ತನಗೆ ಅದು ವಿನೋದವಾಗಿ ಕಾಣಲು ಪುನಃ ಅತ್ತಿಯ ಹಣ್ಣುಗಳನ್ನು ಉದುರಿಸುತ್ತಿರಲು ಆ ಹಣ್ಣುಗಳನ್ನು ಕ್ರಕಚನೆಂಬ ಒಂದು ಮೊಸಳೆ ಪ್ರತಿದಿನವೂ ಪ್ರೀತಿಯಿಂದ ತಿಂದಿತು. ಕೆಲವೇ ದಿನಗಳಲ್ಲಿ ಅವೆರಡಕ್ಕೂ ಸ್ನೇಹವುಂಟಾಗಲು ಆ ಮೊಸಳೆ ತನ್ನ ಮನೆಯನ್ನು

ಸಂತಮಿರುತ್ತಿರೆ ಅದಂ ತಾಂ ಮನದೆಗೊಂಡು ಸುಕಥೆಯೆಂಬಳ್ ತನ್ನ ಗಂಡನಪ್ಪ ಕ್ರಕಚನಂ ಬರಿಸಿ ನೀನಿಂತಪ್ಪ ದುರ್ವ್ಯಸನಮಂ ಕಲ್ತೆಯೆಂದು ಬಾರಿಸಿ ಮತ್ತಮಿಂತೆಂದಳ್ : ತನಗೆ ವಾನರವ್ಯಾಧಿಯಾದುದರ್ಕೆ ಕೋಡಗದೆರ್ದೆಯುಂ ತಂದೀಯಲ್ವೇಳ್ಕುಮೆನಲಂತೆಗೆಯ್ವೆನೆಂದು

ಚಂಡಮಹಾಸೇನಂ ಕುಲ
ಮಂಡನನಂ ಸುತನನಳಿಯಲೊಡರಿಸಿದಂ ಭೂ-
ಮಂಡಲಮೆಲ್ಲಂ ಛೀ ಎನೆ
ಪೆಂಡಿರ್ಗಾಸಕ್ತರಾದರೇನಂ ಮಾಡರ್ ೩೯೭

ವನಿತಾಜನಕ್ಕೆ ಸೋಲ್ತೊಡೆ
ಜನದಪವಾದಮುಮನಾಪ್ತನಿವಹಮುಮಂ ಸ-
ಜ್ಜನದ ಗುರುಜನದ ಮುನಿಸುಮ-
ನಿನಿಸುಂ ಬಗೆದವನುಮೊಳನೆ ವಸುಧಾತಳದೊಳ್ ೩೯೮

ಅದಱಿಂದೆನಗೆ ಇದುವೆ ಕರ್ತವ್ಯಮೆಂದು ಬಂದತ್ತಿಯ ಮರದ ಮೊದಲೊಳಿರ್ಪುದಂ ಮುಂದಿಕ್ಕಿ ಬಳಿಕ್ಕೆ ಮುಖಮಂ ನೋಡಿ ನಿನ್ನನಿಂದು ಪಿರಿದು ಪೊೞ್ತು ಕಾಣದೆ ಚಿಂತಿಸುತಿರ್ದೆ ನೆಲ್ಲಿಗೆ ಪೋದಯೆನೆ ಕ್ರಕಚನೆಂದಂ : ನಿನ್ನ ಮಾಡ್ದ ಪರಮೋಪಕಾರಕ್ಕೆಂತು ಪೊೞ್ತು ನಿತ್ತರಿಸುವೆನೆಂದು ಚಿಂತಿಸಿ,

ಕಮಳಾಕರ ಸೌಭಾಗ್ಯಂ
ನಮೇರು ಮಂದಾರ ಪಾರಿಜಾತಾದಿ ಸುರ-
ದ್ರುಮಗಣರುಚಿರದಿನೆಸೆವುದು
ಸಮುದ್ರಮಧ್ಯದೊಳಗಿರ್ಪುದಂತರ್ದ್ವೀಪಂ ೩೯೯

ಮರೆತು ಅಲ್ಲಿಯೇ ಸಂತೋಷದಿಂದ ಇರುತ್ತಿರಲು ಅದನ್ನು ತಾನು ಮನಸ್ಸಿನಲ್ಲಿ ಎಣಿಸಿ ಸುಕಥೆ ಎಂಬವಳು ತನ್ನ ಗಂಡನಾದ ಕ್ರಕಚನನ್ನು ಕರೆಯಿಸಿ ನೀನು ಇಂತಹ ದುರ್ವ್ಯಸನವನ್ನು ಕಲಿತೆ ಎಂದು ಆಕ್ಷೇಪಿಸಿ ತನಗೆ ವಾನರವ್ಯಾಧಿಯಾಗಿದೆ ; ಇದಕ್ಕೊ ಕೋಡಗದ ಎದೆಯನ್ನು ತಂದುಕೊಡಬೇಕು ಎನ್ನಲು ಹಾಗೆಯೇ ಆಗಲಿ ಎಂದು ೩೯೭. ಆ ಚಂಡಮಹಾಸೇನನು ಜಗತ್ತೆಲ್ಲವೂ ಹೀಯಾಳಿಸುವಂತೆ ಕುಲಮಂಡನನಾದ ಮಗನನ್ನೇ ಅಳಿಯಲು ಉದ್ಯುಕ್ತನಾದನು. ಹೆಂಡಿರಿಗೆ ಆಸಕ್ತರಾದವರು ಏನನ್ನು ತಾನೇ ಮಾಡುವುದಿಲ್ಲ ! ೩೯೮. ವನಿತಾಜನಕ್ಕೆ ಸೋತಲ್ಲಿ ಜನದ ಅಪವಾದವನ್ನೂ ಆಪ್ತಸಮೂಹವನ್ನೂ ಸಜ್ಜನರ ಗುರುಜನರ ಕೋಪವನ್ನೂ ಸ್ವಲ್ಪವಾದರೂ ಎಣಿಸುವವನು ಪ್ರಪಂಚದಲ್ಲಿ ಯಾರಾದರೂ ಇರುವರೇ! ವ॥ ಎಂದು ಇದು ನನ್ನ ಕರ್ತವ್ಯ ಎಂದು ತಿಳಿದು ಅತ್ತಿಯ ಮರದ ಬುಡದಲ್ಲಿರಲು ಬಲೀಮುಖನು ಕಂಡು ದರಹಸಿತವದನನಾಗಿ ಬಂದು ಅತ್ತಿಯ ಹಣ್ಣುಗಳನ್ನು ಅದರ ಮುಂದೆ ಹಾಕಿ ಬಳಿಕ ಅದರ ಮುಖವನ್ನು ನೋಡಿ ನಿನ್ನನ್ನು ಇಂದು ಬಹಳ ಹೊತ್ತಿನಿಂದ ಕಾಣದೆ ಚಿಂತಿಸುತ್ತಿದ್ದೆ, ಎಲ್ಲಿಗೆ ಹೋದೆ ಎಂದು ಕೇಳಿದನು. ಅದಕ್ಕೆ ಕ್ರಕಚನು ನೀನು ಮಾಡಿದ ಪರಮೋಪಕಾರಕ್ಕೆ ಹೇಗೆ ಸಮಯ ಸಾಧಿಸಲೆಂದು ೩೯೯. ಸರೋವರದ ಸೌಭಾಗ್ಯದಿಂದಲೂ ಸುರಿಗೆ, ಮಂದಾರ, ಪಾರಿಜಾತ ಮೊದಲಾದ

ಆ ದ್ವೀಪದೊಳ್ ರೂಪವತಿಯರಪ್ಪ ವಾನರನಾರಿಯರಿರ್ವರ್ಗಂ ತನಗಂ ಸಖಿತ್ವಮುಂಟಪ್ಪುದಱಿಂದಿಲ್ಲಿಗೆ ಪೋಗಲ್ ತನ್ನ ಕಾಣಲೊಡಮಿದಿರಂ ಬಂದಿಂತೆಂದರ್ : ನಿನ್ನಂತಪ್ಪ ಸಹಾಯನಂ ಪಡೆದು ಪುರುಷರಂ ಪಡೆಯದೆ ತನ್ನ ಜನ್ಮಂ ಬಾಲಬ್ರಹ್ಮಚಾರಿಯ ಜನ್ಮದಂತೆ ಶೂನ್ಯಮಾಗಿ ಪೋದಪ್ಪುದೆಂದು ನೊಂದು ನುಡಿದರಂತುಮಲ್ಲದೆಯುಂ ಅನೇಕವಿಭವಸಂಪನ್ನೆಯರುಂ ಚೆನ್ನೆಯರುಮಾಗಿರ್ಪರಂತುಮಲ್ಲದಾ ದ್ವೀಪದ ಫಲಂಗಳೆಲ್ಲಂ ರಸಾಯನಂಗಳವಂ ತಿಂದವರ್ಗಾಗಳೆ ನರೆತೆರೆಯುಂ ಪೋಗಿ ನವಯೌವನರಪ್ಪರಪಱಿಂದೀಗಳೆ ನಿನ್ನನೆನ್ನ ಬೆನ್ನನೇಱಿಸಿಕೊಂಡುಯ್ವೆಂ ಕೇಳಾ ಮತ್ತಮಂತರ್ದ್ವೀಪಕ್ಕುಯ್ದು ವಾನರಕುಮಾರಿಯೊಳ್ ಕೂಡಿ ಕೃತಾರ್ಥನಪ್ಪೆನದಱಿಂ ಬೇಗಂ ಬಂದೆನ್ನ ಬೆನ್ನನೇಱೆನಲೊಡಂ ತಜ್ಜರದ್ವಾನರಂ ಹರ್ಷೋತ್ಕರ್ಷಚಿತ್ತನಾಗಿ ಆತ್ಮಗತದೊಳಿಂತೆಂದಂ:

ಪರಿಪಕ್ವ ಫಲಪ್ರಕರಂ
ಜರೆಯಂ ಕಿಡಿಸುವುದು ವಾನರೀಸಂದೋಹಂ
ಪುರುಷರನೆ ಬಯಸುವುದು ಗಡ
ಸರಾಗದಿಂ ಬಗೆವೊಡಿನ್ನವೇಂ ಸೈಪೊಳವೇ ೪೦೦

ಎಂದು ಕಪಿ ಕಾಮಾತುರನಾಗಿ ಮುಂತಪ್ಪಪಾಯಮನೊಂದುಮಂ ಬಗೆಯದೆ

ಮೊಸಳೆಯ ಬೆನ್ನನೇಱೆ ಕಪಿ ವಾರಿಧಿಯೊಳ್ ನಡೆಯುತ್ತುಮಲ್ಲಿ ಸಂ-
ಧಿಸಿ ಬಡದೊತ್ತಿ ಭೋರ್ಗರೆದು ತರ್ಪ ತರಂಗದ ಮೇಲೆ ಮೆಯ್ಯಗು-
ರ್ವಿಸಿ ಭರದಿಂ ಮನಂ ಬೆದಱೆ ಕಟ್ಟು [ಕಟಲ್ಬುದು] ಶಕ್ಯಮಲ್ಲದೊಂ-
ದೆಸಕದಿನಾವನುಂ ಪರಮದುಃಖಮನೆಯ್ದದೆ ಸೈತೆ ಪೋಕುಮೇ ೪೦೧

ದೇವವೃಕ್ಷಗಳ ಸಮೂಹದಿಂದಲೂ ಶೋಭಿಸುವ ಒಂದು ಅಂತರ್ದ್ವೀಪವು ಸಮುದ್ರಮಧ್ಯದಲ್ಲಿದೆ. ವ|| ಆ ದ್ವೀಪದಲ್ಲಿ ರೂಪವತಿಯರಾದ ವಾನರನಾರಿಯರಿಬ್ಬರಿಗೂ ತನಗೂ ಸಖಿತ್ವವುಂಟು. ಅದರಿಂದ ಅಲ್ಲಿಗೆ ಹೋಗಲು ನನ್ನನ್ನು ಸ್ವಾಗತಿಸಿ ಹೀಗೆಂದರು: ನಿನ್ನಂತಹ ಸ್ನೇಹಿತನನ್ನು ಪಡೆದು ಪುರುಷರನ್ನು ಪಡೆಯದೆ ತಮ್ಮ ಜನ್ಮವು ಬಾಲಬ್ರಹ್ಮಚಾರಿಯ ಜನ್ಮದಂತೆ ಶೂನ್ಯವಾಗಿ ಹೋಗುವುದು ಎಂದು ನೊಂದು ನುಡಿದರು : ಅಲ್ಲದೆ ಅವರು ಅನೇಕ ವೈಭವಸಂಪನ್ನೆಯರೂ ಚೆನ್ನೆಯರೂ ಆಗಿರುವರು. ಅಲ್ಲದೆ ಆ ದ್ವೀಪದಲ್ಲಿರುವ ಹಣ್ಣುಗಳೆಲ್ಲ ರಸಾಯನಗಳಾಗಿವೆ. ಅವುಗಳನ್ನು ತಿಂದವರಿಗೆ ಕೂಡಲೇ ನರೆತೆರೆಗಳೂ ಹೋಗಿ ನವಯೌವನ ಪ್ರಾಪ್ತವಾಗುವುದು. ಆದರಿಂದ ಈಗಲೇ ನಿನ್ನನ್ನು ನನ್ನ ಬೆನ್ನಿನ ಮೇಲೆ ಏರಿಸಿಕೊಂಡು ಹೋಗುವೆನು. ಬಳಿಕ ಅಂತರ್ದ್ವೀಪಕ್ಕೆ ನಿನ್ನನ್ನು ಕರೆದುಕೊಂಡು ಹೋಗಿ ವಾನರಕುಮಾರಿಯರೊಡನೆ ಕೂಡಿಸಿ ಕೃತಾರ್ಥನಾಗುವೆನು. ಅದರಿಂದ ಬೇಗನೆ ಬಂದು ನನ್ನ ಬೆನ್ನನ್ನು ಏರು ಎನ್ನಲು ಆ ಮುದಿಮಂಗನು ಹರ್ಷೋತ್ಕರ್ಷಚಿತ್ತನಾಗಿ ತನ್ನಲ್ಲೇ ಹೀಗೆಂದನು: ಪರಿಪಕ್ವಫಲಗಳು ವೃದ್ಧಾಪ್ಯವನ್ನು ಹೋಗಲಾಡಿಸುವುವು; ವಾನರೀಸಂದೋಹವು ಪುರುಷರನ್ನೇ ಬಯಸುವುದು ತಾನೇ. ಇದಕ್ಕಿಂತ ದೊಡ್ಡ ಭಾಗ್ಯವಿರುವುದೇ ವ|| ಎಂದು ಕಪಿ ಕಾಮಾತುರನಾಗಿ ಮುಂದೆ ಸಂಭವಿಸುವ ಅಪಾಯವಾವುದನ್ನೂ ಬಗೆಯದೆ ೪೦೧. ಮೊಸಳೆಯ ಬೆನ್ನನ್ನೇರಿ ಕಪಿಯು ಸಮುದ್ರದಲ್ಲಿ ಹೋಗುತ್ತಿರಲು ಅಲ್ಲಿ ಭೋರ್ಗರೆದು ಬರುವ ತರಂಗಗಳಲ್ಲಿ ಅಂಜಿ ಮನಸ್ಸಿನಲ್ಲೇ ಹೆದರಿತು. ಯಾವನಾದರೂ ಪರಮ ದುಃಖವನ್ನು ಅನುಭವಿಸದೆ

ಅಂತಾ ವಾನರಂ ಕೇದಗೆಯನೇಱಿದ ಕೋಡಗದಂತೆ ಗೂಡುಗೊಂಡು ಪಲ್ಲಂ ಗಿಡಿಗಿಱಿದು ಮೆಲ್ಲನೆ ಮೊಸಳೆಗಂತರ್ದ್ವೀಪಮಿಲ್ಲಿಗಮಿನ್ನೆನಿತು ದೂರಮುಂಟೆಂಬುದುಂ, ಶಿಂಶುಮಾರನೆಂದುದಾ ದ್ವೀಪಮಿಲ್ಲಿಗೆ ಸಮೀಪಮಪ್ಪುದಾಗಿಯುಮೀಗಳ್ ನಿನ್ನ ತಂಗಿಗೆ ವಾನರವ್ಯಾಧಿಯಾದುದರ್ಕೆ ಮರ್ಕಟಂಗಳೆರ್ದೆ ಮರ್ದೆಂದು ಪೇೞ್ದರದಂ ನಮಗೆ ಪಡೆಯಲ್ ಬಾರದುದಱಿಂ ನಿನ್ನ ತಂಗಿಯನಾರೈದು ಬೞಿಕಂತರ್ದ್ವೀಪಕ್ಕೀಗಳೆ ಪೋಗಲಕ್ಕುಮೆಂದು ಪೇೞ್ವುದುಂ ಕೃಷ್ಣವದನನೀ ಪಾತಕನುಪಾಯಮಂ ಬಗೆದು ನಂಬಿಸಿ ತಂದನೆಂದು ಚಿಂತಿಸಿ ತಾಂ ವಂಚನೋಪಾಯ ಕುಶಲನಪ್ಪುದಱಿಂ ಮೊಸಳೆಗಿಂತೆಂದುದೆಲೆ ಗಾವಿಲಾ ! 'ಕೋಡಗದೆರ್ದೆ ಕೊಂಬಿನ ಮೇಲೆ' ಎಂಬುದು ಪ್ರಸಿದ್ಧಮಿದಂ ನೀಂ ಮುನ್ನ ಕೇಳ್ದಱಿವುದಿಲ್ಲಕ್ಕುಮೆ ಮೇಣ್ 'ಹಿತ್ತಲ ಗಿಡು ಮರ್ದಲ್ಲ' ಎಂದೇೞಿದಂಗೆಯ್ದೆಯಕ್ಕುಮದಲ್ಲದಿಂದೀ ಹದನನೆನಗಲ್ಲಿಯೆ ಪೇೞ್ದೆಯಪ್ಪೊಡೆನ್ನೆರ್ದೆಯನಾಗಳೆ ಕೊಂಡುಬರ್ಪೆನಂತುಮಲ್ಲದೆನ್ನ ಪ್ರಾಣಮುಮೆನ್ನೊಡವುಟ್ಟಿದಳರ್ಥ್ವಾನದವಸರಕ್ಕಿಲ್ಲಪ್ಪೊಡೆ ಪಾೞ್ತಿಯೇನೆಂದು ಮಹಾಪ್ತರ್ಗಲ್ಲದೌಷಧದಾನಮಂ ಕುಡುವುದುತ್ತಮ ಪಕ್ಷಮೆಂಬುದುಂಟು ಎನ್ನತಂಗಿ ವ್ಯಾಧಿತೆ ಗಡಮದರ್ಕೌಷಧಮೆನ್ನಲ್ಲಿಯೆ ಉಂಟು ಗಡಿಂತಪ್ಪ ಸೈಪು ಸಮನಿಸಿತ್ತದಱಿಂ ಮರ್ದಂ ಕೊಂಡು ಇರ್ದ ಪೊೞ್ತಿರ್ದಂತೀಗಳೆ ಬಂದಪೆಂ ಮಗುೞ್ಚಿನೆ ಕ್ರಕಚನಿಂತೆಂದಂ : ಅಂತಪ್ಪೊಡೆ 'ಸುಹೃದ್ದರ್ಶನಮೌಷಧಂ' ಎಂಬುದುಂಟು. ಈಗಳಾಕೆಯನಾರೈದು ಪೋಪಮೆಂದೊಡಿದಾವ ಬುದ್ಧಿ ನೀಂ ಮರ್ದಂ ತರ್ಪೆಯೆಂಬಾಸೆಯಿಂ

ಸರಿಯಾಗುವನೆ! ವ।। ಹಾಗೆ ಆ ವಾನರನು ಕೇದಗೆಯನ್ನೇರಿದ ಕೋಡಗನಂತೆ ಗೂಡುಗೊಂಡು ಹಲ್ಲುಕಿರಿದು ಮೆಲ್ಲನೆ ಮೊಸಳೆಯೊಡನೆ ಅಂತರ್ದ್ವೀಪವು ಇಲ್ಲಿಂದ ಇನ್ನೆಷ್ಟು ದೂರವಿದೆ ಎನ್ನಲು ಆ ಮೊಸಳೆಯು ಹೇಳಿತು : ಆ ದ್ವೀಪವು ಇಲ್ಲಿಂದ ಸಮೀಪದಲ್ಲಿದ್ದರೂ ಈಗ ನಿನ್ನ ತಂಗಿಗೆ ವಾನರವ್ಯಾಧಿಯಾದುದಕ್ಕೆ ಮರ್ಕಟಗಳ ಎದೆ ಮದ್ದೆಂದು ಹೇಳಿದರು. ಅದನ್ನು ನಾವು ಪಡೆಯುವುದು ಕಷ್ಟಸಾಧ್ಯವಾದುದರಿಂದ ನಿನ್ನ ತಂಗಿಯನ್ನು ವಿಚಾರಿಸಿ ಬಳಿಕ ಅಂತರ್ದ್ವೀಪಕ್ಕೆ ಕೂಡಲೇ ಹೋಗಬಹುದು. ಕೃಷ್ಣವದನನು ಈ ಪಾತಕನ ಉಪಾಯವನ್ನು ತಿಳಿದು ನಂಬಿಸಿ ತನ್ನನ್ನು ಕರೆದುಕೊಂಡು ಬಂದನೆಂದು ಚಿಂತಿಸಿ ತಾನೂ ವಂಚನೋಪಾಯಕುಶಲನಾದುದರಿಂದ ಮೊಸಳೆಯೊಡನೆ ಹೀಗೆಂದಿತು: ಎಲೆ ಗಾವಿಲಾ ! 'ಕೋದಗದ ಎದೆ ಕೊಂಬಿನ ಮೇಲೆ' ಎಂಬುದು ಪ್ರಸಿದ್ಧ. ಇದನ್ನು ನೀನು ಕೇಳಿರಲಿಕ್ಕಿಲ್ಲ. ಅಲ್ಲದೆ, 'ಹಿತ್ತಲ ಗಿಡ ಮದ್ದಲ್ಲ' ಎಂದು ನಿರಾಕರಿಸಬಹುದು. ಅಲ್ಲದೆ ಇಂದು ನೀನು ಈ ವಿಷಯವನ್ನು ನನಗೆ ಅಲ್ಲಿಯೇ ಹೇಳಿದ್ದರೆ ನನ್ನ ಎದೆಯನ್ನು ಆಗಲೇ ತಂದುಬಿಡುತ್ತಿದ್ದೆ. ಅಲ್ಲದೆ ನನ್ನ ಪ್ರಾಣವೂ ಅರ್ಥವೂ ನನ್ನ ಒಡಹುಟ್ಟಿದವಳ ಕಷ್ಟಕ್ಕೆ ಆಗದ ಮೇಲೆ ಏನಿದ್ದು ಏನು ಪ್ರಯೋಜನ ! ಮಹಾಪ್ತರಿಗೆ ಅಲ್ಲದ ಔಷಧದಾನವನ್ನು ಕೊಡುವುದು ಉತ್ತಮ ಪಕ್ಷವೆನಿಸುವುದು. ನನ್ನ ತಂಗಿ ವ್ಯಾಧಿತೆಯಲ್ಲವೇ; ಅದಕ್ಕೆ ಔಷಧ ನನ್ನಲ್ಲಿಯೇ ಇದೆ; ಇಂತಹ ಪುಣ್ಯ ಸಂಭವಿಸಿದುದರಿಂದ ಮದ್ದನ್ನು ಕೊಂಡು ಕೂಡಲೇ ಬರುವೆನು; ಹಿಂದಿರುಗು. ಅದಕ್ಕೆ ಕ್ರಕಚನು, 'ಸುಹೃದ್ದರ್ಶನಮೌಷಧಂ' ಎಂದು ಹೇಳುವರು; ಈಗ ಆಕೆಯನ್ನು ವಿಚಾರಿಸಿಕೊಂಡು ಹೋಗೋಣ ಎಂದನು. ಅದಕ್ಕೆ ಕೃಷ್ಣವದನನು, ಅದು ಎಂಥ ಬುದ್ಧಿ? ನೀನು ಮದ್ದನ್ನು ತರುವೆ ಎಂಬ ಆಸೆಯಿಂದ ಅವಳು ಜೀವವನ್ನು

ಜೀವಮಂ ಪಿಡಿದಿರ್ಪಳ್ ನೀಂ ಬಱಿದೆ ಬಂದುದನಱಿದಾಗಳೆ ಮಱುಕಳಿಸಿ ಮನದಿಕ್ಕಿದಳಪ್ಪೊಡೆ ಬಳಿಕ್ಕಸಾಧ್ಯಮಕ್ಕುಂ. ಅಂತುಮಲ್ಲದೆಯುಂ

ಶ್ಲೋ॥ ಧರ್ಮಮರ್ಥಂಚ ಕಾಮಂ ಚ ತ್ರಿತಯಂ ಯೋಭಿವಾಂಛತಿ
ರಿಕ್ತಪಾಣಿರ್ನಗಚ್ಛೇತ್ತು ಗುರುಂ ನರಪತಿಂ ಸ್ತ್ರೀಯಂ ॥೧೯೦॥

ಟೀ॥ ಆವನೊರ್ವಂ ಧರ್ಮಾರ್ಥ ಕಾಮಮೆಂಬೀ ಮೂಱುಂ ನಿಶ್ಚೈಸುವನೋ ಆತಂ ಗುರುವಿನಲ್ಲಿಗೆ ಅರಸನಲ್ಲಿಗೆ ಸ್ತ್ರೀಯರಲ್ಲಿಗೆ ಬಱುಗೈಯ್ಯಲ್ಲಿ ಹೋಗಲಾಗದು ಎಂಬುದು ನೀತಿಯುಂಟು. ಸಾಧಾರಣಸಂಬಂಧಿಗಳಪ್ಪರಲ್ಲಿಗೆ ಬಱಿಗೈಯಿಂ ಪೋಗಲಾಗದೆಂಬರ್. ಅಂತುಮಲ್ಲದಾತುರೆಯಲ್ಲಿಗೌಷಧಮಿಲ್ಲದೆಂತು ಪೋಪುದು. ಅದಲ್ಲದೆಯುಂ ಎನ್ನೊರ್ವನೆರ್ದೆ ಮರ್ದಿಂಗೆ ನೆಱೆಗುಂ ನೆಱೆಯದಿರ್ಕುಮದನಱಿಯಲ್ಬಾರದು. ಎನ್ನ ಪರಿಗ್ರಹಂ ವಾನರಂಗಳ್ ವಿಹಾರಿಸಲ್ ಪೋಗುತ್ತುಂ ತಮ್ಮೆರ್ದೆಗಳನಲ್ಲಿಯೆ ಮಡಂಗಿ ಪೋಪುವು. ಅದೆಲ್ಲಮಂ ಕೊಂಡೀಗಳೆ ಮಗುಳ್ಬು ಬರ್ಪೆಂ ಬೇಗಂ ಮಗುೞೆನೆ ಶಿಂಶುಮಾರಂ ಮಾರುತವೇಗದಿಂ ಭೋರೆನೆ ಬಂದತ್ತಿಯ ಮರದ ಸಮೀಪಕ್ಕೆ ಸಾರಲೊಡಂ ಶಾಖಾಚರನದಱ ಶಿಖರಮಂ ಮೆಟ್ಟಿ ಮರದ ತುದಿಗೊಂಬಿಂಗೆ ಹಾಯ್ದು ತೂಱಲ್ಕೊಂಬನೇಱೆ ಪೆಱಗಂ ತೋಱಿಯೇಡಿಸಿಯಾಡುತ್ತಿರ್ಪುದುಮದಂ ಕ್ರಕಚಂ ಕಂಡು ಏಂ ಗಡ ಭಾವಾ! ನೀನಿದೇಂ ನಿಂದಲ್ಲಿ ಐೂೞಡಗತನಂಗೆಯ್ವುದುತಿರ್ಪೆ. ಅತ್ತ ನಿನ್ನ .ತಂಗಿಗವಸ್ಥೆ ಪಿರಿದು. ತಡೆಯದೆ ಬಂದು ನಿನ್ನೆರ್ದೆಯನಾಕೆಗೆ ಕೊಂಡು ಬಳಿಕ್ಕಾಗಳೆ ನಿನ್ನನಂತರ್ದ್ವೀಪಕುಯ್ವೆನಲ್ಲಿ ನೀನುಮಾ ವಾನರಸ್ತ್ರೀಯರೊಡಗೂಡಿ ಬಳಿಕ್ಕೀ ಮಾರ್ಗದಿಂ ಮೆಚ್ಚಿದಂತಾಡುತ್ತಿರು ಎನೆ ಕೃಷ್ಣವದನಂ ಪೇೞ್ಗುಂ:

ಹಿಡಿದಿರುವಳು; ನೀನು ಬರಿದೆ ಬಂದೆ ಎಂಬುದನ್ನು ತಿಳಿದ ಕೂಡಲೇ ಮರುಕಳಿಸಿ ಮನಸ್ಸಿನಲ್ಲಿ ಆ ಸಂಕಟವನ್ನು ಇಟ್ಟುಕೊಂಡಳೆಂದರೆ ಬಳಿಕ ಅಸಾಧ್ಯವಾದೀತು. ಅಲ್ಲದೆ, ಶ್ಲೋ॥ ಧರ್ಮ ಅರ್ಥ ಕಾಮ ಎಂಬ ಈ ಮೂರನ್ನು ಬಯಸುವವನು ಗುರುವಿನಲ್ಲಿಗೆ ಅರಸನಲ್ಲಿಗೆ ಸ್ತ್ರೀಯರಲ್ಲಿಗೆ ಬರಿಗೈಯಲ್ಲಿ ಹೋಗಬಾರದು ಎಂಬ ನೀತಿಯುಂಟು. ವ॥ ಸಾಧಾರಣ ಸಂಬಂಧಿಗಳಲ್ಲಿಗೂ ಬರಿಗೈಯ್ಯಿಂದ ಹೋಗಬಾರದು ಎನ್ನುವರು. ಅಲ್ಲದೆ, ಆತುರಳಾದವಳ ಬಳಿಗೆ ಔಷಧಿಯಿಲ್ಲದೆ ಹೇಗೆ ಹೋಗಲಿ ? ಅಲ್ಲದೆ, ನನ್ನೊಬ್ಬನ ಎದೆಯ ಮದ್ದಿಗೆ ಉಪಶಮನವಾದೀತೋ ಇಲ್ಲವೋ ಎಂದು ಹೇಳುವುದು ಅಸಾಧ್ಯ. ನನ್ನ ಕಷ್ಟವೇನೆಂದರೆ ವಾನರಗಳು ವಿಹರಿಸಲು ಹೋಗುವಾಗ ತಮ್ಮ ಎದೆಗಳನ್ನು ಅಲ್ಲಿಯೇ ಬಿಟ್ಟು ಹೋಗುವುವು. ಅವೆಲ್ಲವನ್ನೂ ಕೊಂಡು ಈಗಲೇ ಹಿಂದಿರುಗಿ ಬರುವೆ. ಬೇಗನೆ ಹಿಂದಿರುಗು. ಹೀಗೆನ್ನಲು ಮೊಸಳೆಯು ಮಾರುತವೇಗದಿಂದ ಕೂಡಲೆ ಬಂದು ಅತ್ತಿಯ ಮರದ ಸಮೀಪಕ್ಕೆ ಬರಲು ಶಾಖಾಚರನು ಅದರ ಶಿಖರವನ್ನು ಮೆಟ್ಟಿ ಮರದ ತುದಿಕೊಂಬೆಗೆ ಹಾರಿ ಹಿಂದಕ್ಕೆ ತೋರಿಸಿ ನಿಂದಿಸಿ ಆಡುತ್ತಿರಲು ಕ್ರಕಚನು ಕಂಡು, ಏನಯ್ಯಾ ಭಾವಾ ! ನೀನು ಇಲ್ಲಿ ನಿಂತು ಉದಾಸೀನಭಾವದಿಂದ ನುಡಿಯುತ್ತಿರುವೆ. ಅತ್ತ ನಿನ್ನ ತಂಗಿಯ ಅವಸ್ಥೆ ವಿಷಮವಾಗಿದೆ. ತಡಮಾಡದೆ ಬಂದು ನಿನ್ನ ಎದೆಯನ್ನು ಆಕೆಗೆ ಕೊಟ್ಟು ಬಳಿಕ ನಿನ್ನನ್ನು ಅಂತರ್ದ್ವೀಪಕ್ಕೆ ಕರೆದೊಯ್ಯುವೆನು. ಅಲ್ಲಿ ನೀನೂ ಆ ವಾನರಸ್ತ್ರೀಯರೊಡಗೂಡಿ ಬಳಿಕ ಇಲ್ಲಿಗೆ ಬಂದು ಮೆಚ್ಚಿದಂತೆ ಆಡುತ್ತಿರು ಎನ್ನಲು ಕೃಷ್ಣವದನನು ಹೀಗೆಂದನು:

ಕೋಡಗವೆರ್ದೆ ಮರ್ದೆಂದೆಲೆ
ಜಕೋಡಗ ನೀನೆನಗೆ ಪೇೞ್ದೆಯಾಗಳೆ ದೆಸೆಗೆ
ಟ್ಟೋಡಿತ್ತೆನ್ನೆರ್ದೆಯುಂ ನೀಂ
ಮಾಡ್ಕೆ ನಿನ್ನೆರ್ದೆಯಿನೆನ್ನ ತಂಗಿಗೆ ಮರ್ದಂ ೪೦೨

ಎಂಬುದುಂ ಜಲಚರನಿನನಿನಿತಱೊಳೊಳಗನಱೆದನಕ್ಕುಮಾದೊಡಮೇನಿನ್ನುಂ ನಂಬೆ ನುಡಿದು ನೋೞ್ಪೆನೆಂದು ಭಾವಾ! ನಿನ್ನೆರ್ದೆ ಕೆಟ್ಟೊಡೇನಾಯ್ತು ನಿನ್ನ ತಂಗಿಗೆ ಪೆಱತು ಪೆಱತು ಮರ್ದಂ ಮಾಡಲಕ್ಕುಮಲ್ಲದೀಗಳೆನ್ನ ಪ್ರಾಣಾಪ್ತನಪ್ಪ ನಿನ್ನಂ ನೋಡವೇೞ್ಕೆಂದುಮೆನ್ನ ಪೆಂಡತಿಯರುಮಾ ವಾನರಿಯರುಂ ನಿನ್ನ ಬರವನೆ ಪಾರುತಿರ್ಪರಲ್ಲಿಗೆ ಪೋಗಲ್ವೇೞ್ಕುಂ ಬೇಗಂ ಬಾಯೆನೆ ಬಲೀಮುಖನಿಂತೆಂದಂ:

ಭವದೀಯಾನೃತಮಂ ನಂ
ಬಿ ವಿಪತ್ತಿಯನೆಯ್ದಿ ಬೞ್ದಿನಿನ್ನಾಂ ಬರ಼್್ಪಂ
ದವಿವೇಕ ವಿಕಳ ಜಂಬುಕ
ನ ವಚನಮುಂ ನಂಬಿ ಸತ್ತ ಬೆಳ್ಗತ್ತೆಯವೊಲ್ ೪೦೩

ಎಂಬ ಬಲೀಮುಖನ ಮಾತಂ ಕೇಳ್ದು ಬೆಳ್ಗತ್ತೆಗೇನಾದುದೆನೆ ವಾನರನಿಂತೆಂದಂ :

ಶ್ಲೋ ॥ ಅಗತಶ್ಚ ಗತಶ್ಚೈವ ಯೋ ಗತ್ವಾ ಪುನರಾಗತಃ
ಅಕರ್ಣಹೃದಯೋ ಮೂರ್ಖಃ ಸ್ವಯಂ ತೇನ ಹತಃ ಖರಃ ॥೧೯೧॥

ಟೀ॥ ಕರ್ಣಹೃದಯವಿಲ್ಲದ ಮೂರ್ಖನಪ್ಪಾವುದಾನೊಂದು ಕತ್ತೆ ಬಂದು ಹೋದಂ ತಪ್ಪುದು. ಮತ್ತೆ ಬಂದು ತಾನೇ ಕೊಲಿಸಿಕೊಂಡಿತು ಎಂಬ ಕಥೆಯುಂಟದೆಂತೆನೆ :

೪೦೨. ಕೋಡಗದ ಎದೆ ಮದ್ದು ಎಂದು, ಎಲೆ ಕೋಡಗ ! ನೀನು ನನಗೆ ಆಗಲೇ ಹೇಳಿದೆಯಲ್ಲವೇ. ನನ್ನ ಎದೆ ದೆಸೆಗೆಟ್ಟು ಓಡಿತು. ನೀನು ನಿನ್ನ ಎದೆಯನ್ನು ನನ್ನ ತಂಗಿಗೆ ಮದ್ದುಮಾಡು, ವ॥ ಅದಕ್ಕೆ ಆ ಜಲಚರನು ಇವನು ಇಷ್ಟರಲ್ಲೇ ಗುಟ್ಟನ್ನು ಅರಿತನು. ಆದರೂ ಇನ್ನೂ ನಂಬುವಂತೆ ಹೇಳಿ ನೋಡುವೆನು ಎಂದು ಭಾವಾ! ನಿನ್ನ ಎದೆಯು ದೆಸೆಗೆಟ್ಟರೇನಾಯಿತು; ನಿನ್ನ ತಂಗಿಗೆ ಬೇರೇನಾದರೂ ಮದ್ದನ್ನು ಮಾಡಿದರಾಯಿತು. ಅಲ್ಲದೆ ಈಗ ನನ್ನ ಪ್ರಾಣಾಪ್ತನಾದ ನಿನ್ನನ್ನು ನೋಡಬೇಕೆಂದು ನನ್ನ ಹೆಂಡತಿಯರೂ ಆ ವಾನರಿಯರೂ ನಿನ್ನ ಬರವನ್ನೇ ನಿರೀಕ್ಷಿಸುತ್ತಿರುವರು. ಅಲ್ಲಿಗೆ ಹೋಗೋಣ ಬೇಗ ಬಾ ಎನ್ನಲು ಬಲೀಮುಖನು ಹೀಗೆಂದನು: ೪೦೩. ನಿನ್ನ ಸುಳ್ಳನ್ನು ನಂಬಿ ವಿಪತ್ತನ್ನು ಹೊಂದಿ ಬದುಕಿಕೊಂಡೆ; ಇನ್ನು ನಾನು ಬಂದರೆ ಅವಿವೇಕಿಯಾದ ಜಂಬುಕನ ಮಾತನ್ನು ಕೇಳಿ ಸತ್ತ ಬೆಳ್ಗತ್ತೆಯಂತಾದೀತು. ಅದನ್ನು ಕೇಳಿ ಬೆಳ್ಗತ್ತೆಗೆ ಏನಾಯಿತು ಎಂದು ವಿಚಾರಿಸಲು ವಾನರನು ಹೀಗೆಂದನು: ಶ್ಲೋ॥ ಕಿವಿ ಎದೆಗಳಿಲ್ಲದ ಮೂರ್ಖನಾದ ಕತ್ತೆಯೊಂದು ಬಂದು ಹೋದಂತಾಗುವುದು. ಅಲ್ಲದೆ ಅದು ತಾನೇ ಬಂದು ಕೊಲ್ಲಿಸಿಕೊಂಡಿತು ಎಂಬ

೨. ನರಿಯ ಮಾತಂ ನಂಬಿ ಸತ್ತ ಬೆಳ್ಗತ್ತೆಯ ಕಥೆ

ಅವಿರಳ ವಿಗಳಿತ ಮದಜಲ
ಲವ್ಯೋಗ್ರಕರಟೋಪಕರಟ ಮಥನಂ ಕಂಠೀ
ರವನಿರ್ಪುದು ನಾಮದಿನಮಿ
ತವಿಕ್ರಮಂ ಜ್ವರಗತಕ್ರಮಂ ಗಿರಿತಟದೊಳ್ ೪೦೪

ಅಂತಾ ಸಿಂಹಂ ಮಱುಗುತ್ತಂಬಟ್ಟು ಗೊಂಕರಕೞ್ತೆಯಂ ಬಯಸಿ ಬಾಯೊಱೆತು ತನಗನುಚರನಪ್ಪುದೊಂದು ನರಿಗೆ ಪೇೞ್ದುದುಮಿದಾವ ಗಹನಮೀಗಳೆ ತರ್ಪೆನೆಂದಾ ನರಿ ಪೋಗಿಯಗಸರ ಪೊೞೆಯೊಳಾಡುತಿರ್ಪ ಕೞ್ತೆಯಂ ಕಂಡು ಸಾರ್ದು ಭಾವಾ ! ನಿನ್ನೊಡಲ್ ಬಡವಾದುದೇಂ ಕಾರಣಮೆಂದೊಡೇನಂ ಪೇೞ್ವೆನೀಯಗಸನೂರ ಸೀರೆಯೆಲ್ಲಮನೆನ್ನ ಬೆನ್ನೊಳೊಟ್ಟಿಕೊಂಡು ಮತ್ತಲಿತ್ತಲುಮಾಹಾರಾರ್ಥಕೆ, ಪೋಗಲೀಯನದಱಿಂದೊಡಲುಂ ಬಡವಾದುದೆಂಬುದುಂ ಆ ಜಂಬುಕನಿಂತೆಂದಂ : ಎಲೆ ಪಾಪಕರ್ಮ ನಿನಗಿನಿತು ದುಃಖಮುಳ್ಳೊಡೆ ಮುನ್ನಮೆ ಎನಗಱಿಪಿದೆಯಿಲ್ಲ. ಎನ್ನ ತಂಗಿಯರಪ್ಪ ಗರ್ದಭೆಯರಿರ್ವರ್ ನಿನ್ನಂತೆ ಭಾರಾಕ್ರಾಂತೆಯಾಗಿರ್ದೆಳ್ಕಿ ಚಿಂತಿಸುತ್ತಿರ್ದೊಡವರನೊಡಗೊಂಡೆಯ್ದಿ ಎನ್ನಿರ್ಪ ಕಾಡಿನೊಳಿರಿಸೆ ನಿಶ್ಚಿಂತರಾಗಿರ್ದ ರಾಸಭೀವಿಲಾಸಿನಿಯರ್ ತಮಗೊರ್ವ ಪುರುಷನಂ ತರವೇೞ್ಕುಮೆಂದೆನ್ನಂ ತುತಿಸುತ್ತಿರ್ದಪರ್. ನಿನಗಂ ಮನೋರಥಸಿದ್ಧಿಯಕ್ಕುಂ. ಬೇಗಂ ಬಾಯೆನಲೊಡಂ.

ರಾಗಿಸಿ ರಾಸಭನಿರದತಿ
ವೇಗದಿನಾ ನರಿಯ ಪಿಂದುಪಿಂದನೆ ಬಂದಂ
ಮೇಗಪ್ಪಛಾಯೆಯುಮಂ ಕಡು
ರಾಗಿಗಳೇಂ ಕಂಡರೊಳರೆ ಭೂಮಂಡಲದೊಳ್ ೪೦೫

ಕಥೆಯುಂಟು. ಅದೇನೆಂದರೆ, ೪೦೪. ಸದಾ ಸುರಿಯುತ್ತಿರುವ ಮದಜಲದಿಂದ ಕೂಡಿದ ಆನೆಗಳನ್ನು ಸಂಹರಿಸಿದ ಅಮಿತವಿಕ್ರಮನೆಂಬ ಸಿಂಹವು ಒಂದು ಗಿರಿತಟದಲ್ಲಿ ರೋಗಗ್ರಸ್ತನಾಗಿ ವಾಸಮಾಡಿಕೊಂಡಿತ್ತು. ವ॥ ಆ ಸಿಂಹಕ್ಕೆ ಮರುಜ್ವರ ಬಂದು ಗೊಂಕರ ಕತ್ತೆಯನ್ನು ಬಯಸಿ ಬಾಯ್ನೀರಿಟ್ಟು ತನ್ನ ಅನುಚರನಾದ ಒಂದು ನರಿಗೆ ಹೇಳಿತು. ಆ ನರಿಯು ಇದು ಎಂಥ ಮಹಾಕಾರ್ಯ, ಈಗಲೇ ತರುವೆನು ಎಂದು ಹೇಳಿ ಹೋಗಿ ಆಗಸರ ಹೊಳೆಯಲ್ಲಿ ಆಡುತ್ತಿದ್ದ ಕತ್ತೆಯನ್ನು ಕಂಡು ಮೆಲ್ಲನೆ ಸಮೀಪಿಸಿ, ಭಾವಾ ! ನಿನ್ನ ಶರೀರವು ಬಡವಾಗಲು ಏನು ಕಾರಣ ಎಂದು ಕೇಳಿತು. ಆದಕ್ಕೆ ಕತ್ತೆಯು, ಏನನ್ನು ಹೇಳಲಿ, ಈ ಆಗಸನು ಊರ ಬಟ್ಟೆಗಳನ್ನೆಲ್ಲ ನನ್ನ ಬೆನ್ನ ಮೇಲೆ ಕಟ್ಟಿ ಅತ್ತಿತ್ತ ಆಹಾರಕ್ಕೂ ಹೋಗಲು ಬಿಡುವುದಿಲ್ಲ, ಅದರಿಂದ ಒಡಲು ಬಡವಾಗಿದೆ ಎಂದಿತು. ಅದಕ್ಕೆ ಆ ಜಂಬುಕನು, ಎಲೈ ಪಾಪಕರ್ಮ! ನಿನಗಿಷ್ಟು ದುಃಖವಾಗಿದ್ದರೆ ಮೊದಲೇ ನನಗೆ ಯಾಕೆ ತಿಳಿಸಲಿಲ್ಲ. ನನ್ನ ತಂಗಿಯಂದಿರಾದ ಇಬ್ಬರು ಗರ್ದಭೆಯರೂ ನಿನ್ನಂತೆ ಭಾರಕ್ರಾಂತೆಯರಾಗಿದ್ದು ಅಳುಕಿ ಚಿಂತಿಸುತ್ತಿರಲು ಅವರನ್ನು ಕರೆದುಕೊಂಡು ಹೋಗಿ ನಾನಿರುವ ಕಾಡಿನಲ್ಲಿ ಇಡಲು ನಿಶ್ಚಿಂತರಾಗಿರುವರು. ಆದರೆ ಆ ರಾಸಭವಿಲಾಸಿನಿಯರು ತಮಗೊಬ್ಬ ಪುರುಷನನ್ನು ತರಬೇಕು ಎಂದು ನನ್ನನ್ನು ಸ್ತುತಿಸುತ್ತಿರುವರು. ನಿನಗೂ ಮನೋರಥಸಿದ್ಧಿಯಾಗುವುದು; ಬೇಗನೆ ಬಾ ಎಂದಿತು. ೪೦೫. ರಾಸಭನು ಸಂತೋಷದಿಂದ ಅತಿವೇಗವಾಗಿ ಆ ನರಿಯ ಹಿಂದೆ ಹಿಂದೆಯೇ ಬಂದಿತು. ಮುಂದೆ

ಅಂತು ಪೋಪುದುಮಾ ನರಿ ಪರಿಯಿರ್ದ ಗುಹಾದ್ವಾರಮಂ ಗರ್ದಭೆಯರೊಳಗಿರ್ದರ್ ಪುಗೆನಲೊಡಂ ಪುಗುವ ಕಟ್ತೆಯಂ ಕಂಡು ಸಿಂಹಂ ಜವಂಗುಂದಿದ ಕಾರಣದಿಂ ಲಂಘನಾಸಕ್ತನಾಗಿ ಲಂಘಿಸಲಾಱದೆ ರಭಸಂಗೆಯ್ದುಮ್ರ್ಪುದುಂ ಕಟ್ತೆ ಬೆರ್ಚುತೋಡುತಿರ್ಪುದಂ ಕಂಡು ಸೃಗಾಲಂ ಕರಂ ಮುಳಿದು ಸಿಂಹನಲ್ಲಿಗೆ ಬಂದೇಂ ಗಡ ಕಟ್ತೆಯಂ ಮೊದಲಾಗಿ ಪಿಡಿಯಲಾರ್ತೆಯಿಲ್ಲ ನೀನೆಂತು ಬರ್ದಪೆಯೆಂದು ನುಡಿಯೆ ಹರಿ ಕರಮೆ ಸಿದ್ಧಿಗಾಗಿ ಗುಹೆಯಂ ಪೊಕ್ಕುದಂ ಕೊಲ್ವು ದಾವ ಗಹನಮೆಂದನವಧಾನದಿಂ ಪಾಯ್ದು ಕಾರಣದಿಂ ತಪ್ಪಿದುದು. ಇನ್ನದಂ ಕೊಂಡು ಬಾ ಕಂಡಾಗಳೆ ಬಿಡಾಲನಿಲಿಯಂ ಕೊಲ್ವಂತಶ್ರಮದೊಳೆ ಕೊಂದಪೆನೆಂದೊಡೆ ಮತ್ತೆ ನರಿ ಪರಿದಾ ಕಟ್ತೆಯಂ ಕಂಡೇಂ ಭಾವ ! ನೀಂ ಕಳ್ಳರಂ ಕಂಡ ಬೆಳ್ಳಾಳಂತೆ ಬೆದಱೆಯೆನಗಂ ಪೇೞದೆ ಪೆಱಗಂ ನೋಡದೋಡಿ ಬಂದೆಯದೇಂ ಕಾರಣಮೆನೆ ರಾಸಭನಿಂತೆಂದಂ : ಆ ಗುಹೆಯನಾಂ ಪುಗಲೊಡನೊಂದು ರೂಪು ಮೊಱೆದು ಪರಿತಂದು ಮೇಲ್ವಾಯಲೊಡಂ ಭಯಂಬಟು ಬಂದೆನೆನೆ ಸೃಗಾಲನೆಂದಂ : ಗಾಳುಗಳಪ್ಪ ಗರ್ದಭೆಯರ್ ವಿರೋಧಿಕಾಮಿಗಳಪ್ಪುದಱೆಂ ಕಾತರಿಸಿ ಮೇಲೆ ಮೇಲೆ ಬೀೞಲೊಡಂ ಬಂದೆ ನಿನ್ನ ಗಂಡುತನದ ಪುರುಳಂ ಕಂಡೆನ್ನ ತಂಗಿಯರ್ ಕರುಳಂ ಪಿಡಿದು ನಗೆಯೊಳ್ ಪೊರಳುತ್ತಮಿರ್ದರ್. ನೀನಂಜಲ್ವೇಡ. ಬಂದವಱೊಳ್ ಸುರತಸುಖವನನುಭವಿಸುತ್ತುಮಿರ್ದಪೆ ಬಾಯೆಂಬುದುಮಾ ಕಟ್ತೆ ಮಿೞ್ತುವಿನ ಬೆನ್ನೊಳ್ ಪೋಪಂತೆ ನರಿಯ ಬೆನ್ನೊಳ್ ಪೋಗಿ

ಸಂಭವಿಸುವ ಅಪಾಯವನ್ನು ಕಾಮಿಗಳು ಕಾಣಬಲ್ಲರೇ! ವ॥ ಹಾಗೆ ಹೋಗಲು ಆ ನರಿಯು ಸಿಂಹವಿದ್ದ ಗುಹಾದ್ವಾರವನ್ನು ತೋರಿಸಿ ಗರ್ದಭೆಯರು ಒಳಗಿರುವರು ; ಒಳಕ್ಕೆ ಹೋಗು ಎನ್ನಲು ಹೋಗುತ್ತಿದ್ದ ಕತ್ತೆಯನ್ನು ಕಂಡು ಸಿಂಹವು ಶಕ್ತಿಗುಂದಿದ ಕಾರಣದಿಂದ ಲಂಘನಾಸಕ್ತನಾಗಿಯೂ ಲಂಘಿಸಲಾರದೆ ರಭಸದಿಂದ ಬರುತ್ತಿರಲು ಕತ್ತೆಯು ಬೆದರಿ ಓಡುತ್ತಿರುವುದನ್ನು ಕಂಡು ನರಿಯು ಕೋಪಿಸಿ ಸಿಂಹದ ಬಳಿಗೆ ಬಂದು, ಏನಯ್ಯಾ ! ಕತ್ತೆಯನ್ನು ಹಿಡಿಯುವ ಸಾಮರ್ಥ್ಯ ನಿನ್ನಲ್ಲಿಲ್ಲ ; ನೀನು ಹೇಗೆ ಜೀವಿಸಬಲ್ಲೆ ಎಂದಿತು. ಸಿಂಹಕ್ಕೆ ತುಂಬ ಅವಮಾನವಾಗಿ ಗುಹೆಯನ್ನು ಹೊಕ್ಕ ಪ್ರಾಣಿಯನ್ನು ಕೊಲ್ಲುವುದು ಏನು ಮಹಾ ! ಅವಧಾನದಿಂದ ಹಾರಿದ ಕಾರಣ ಕತ್ತೆ ತಪ್ಪಿಸಿಕೊಂಡು ಹೋಯಿತು. ಇನ್ನೊಮ್ಮೆ ಅದನ್ನು ಕರೆದುಕೊಂಡು ಬಾ ; ನೋಡಿದ ಕೂಡಲೇ ಬೆಕ್ಕು ಇಲಿಯನ್ನು ಕೊಲ್ಲುವಂತೆ ನಿರಾಯಾಸವಾಗಿ ಕೊಲ್ಲುವೆನು ಎಂದಿತು. ಬಳಿಕ ನರಿಯು ಕತ್ತೆಯ ಬಳಿಗೆ ಹೋಗಿ ಏನಯ್ಯಾ ಭಾವ ! ನೀನು ಕಳ್ಳರನ್ನು ಕಂಡ ಹೇಡಿಯಂತೆ ಹೆದರಿ ನನಗೂ ಹೇಳದೆ ಹಿಂದಕ್ಕೆ ನೋಡದೆ ಓಡಿ ಬಂದೆಯೇಕೆ ಎಂದು ಕೇಳಿತು. ಅದಕ್ಕೆ ರಾಸಭನು ಆ ಗುಹೆಯನ್ನು ನಾನು ಪ್ರವೇಶಿಸಲು ಒಂದು ರೂಪವು ಆರ್ಭಟಿಸಿ ಮೇಲೆ ಹಾಯಬೇಕೆಂದು ಬರಲು ಭಯಪಟ್ಟು ಓಡಿಬಂದೆನು ಎಂದಿತು. ಅದಕ್ಕೆ ನರಿಯು, ಕಾತರರಾಗಿದ್ದ ಗರ್ದಭೆಯರು ವಿರೋಧಕಾಮಿಯರಾದುದರಿಂದ ಕಾತರಿಸಿ ಮೇಲೆ ಮೇಲೆ ಬೀಳಲು ನೀನು ಹೆದರಿ ಓಡಿ ಬಂದೆ ; ನಿನ್ನ ಗಂಡುತನದ ಪುರುಳನ್ನು ಕಂಡು ನನ್ನ ತಂಗಿಯರು ಕರುಳನ್ನು ಹಿಡಿದು ನಗೆಯಿಂದ ಹೊರಳುತ್ತಿದ್ದಾರೆ ; ನೀನು ಅಂಜಬೇಡ ; ಬಂದು ಅವರೊಡನೆ

ಸುರತಸುಖಕಾಂಕ್ಷೆಯಿಂ ರಾ-
ಗರಸಾಂಧಂ ರಾಸಭಂ ಮಹಾದ್ರಿಗುಹಾಭ್ಯಂ
ತರಮಂ ಪೊಕ್ಕುದು ಮನಸ್ಥ
ಶರಪರವಶನಪ್ಪ ದೇಹಿ ಪುಗದೆಡೆಯುಂಟೇ ೪೦೬

ಅಂತು ಪೊಕ್ಕುದನಾ ಸಿಂಹಂ ಪಾಯ್ದು ಗಂಟಲನೊಡೆಯೊತ್ತಿಕೊಂಡು ತಿನಲಿರ್ದುದಂ ನರಿ ಕಂಡೀ ಬೂತುವಿದೆಲ್ಲಮಂ ತಾನೆ ತಿಂಗುದೆಂತಜೆಯಲಕ್ಕುಂ ಬಟೆಕ್ಕೇಗೆಯ್ವೆನೀಗಳೆ ವಂಚಿಸಿಯೆನಗಪ್ಪನಿತಂ ಕಳೆದುಕೊಳ್ವೆನೆಂದು ಸಿಂಹದ ಸಮೀಪಕ್ಕೆ ಬಂದು ದೇವಾ! ನೀವೀಗಳ್ ಪಲವು ದೆವಸಂ ದೇವತಾರಾಧನಂಗೆಯ್ಯುದಿಲ್ಲಿಂದು ಇಷ್ಟದೇವತಾ ಸಮಾರಾಧನಂಗೆಯ್ದು ರಾಸಭಮಂ ವ್ಯಾಧಿನಿರ್ಹರಣಾರ್ಥಂ ದಿವ್ಯೌಷಧಮೆಂದು ಬಗೆದಾರೋಗಿಸಿಮೆಂಬುದುಂ, ಮೃಗೇಂದ್ರನಂತೆಗೆಯ್ವೆಂ ಆಂ ದೇವತಾನಮಸ್ಕಾರಂಗೆಯ್ದು ಬರ್ಪನ್ನೆವರಂ ನೀನಿದನಗಲದಿರೆಂಬುದುಂ ಮಹಾಪ್ರಸಾದಮೆಂದುಮಾ ಸಿಂಹಂ ಪೋಗಲೊಡಂ ಗರ್ದಭನೆರ್ದೆಯುಮಂ ಕಿವಿಯುಮಂ ತಿಂದು ತುಡುಗುಣಿತೊಟ್ಟೆನಂತೆ ಬಾಯಂ ತೊಡೆದುಕೊಂಡು ತಾನಲ್ಲದಂತಿರ್ಪುದುಮಾ ಮೃಗಾಧಿರಾಜಂ ಬಂದು ಈ ಗರ್ದಭನೆರ್ದೆಯುಂ ಕಿವಿಯುಮೆಲ್ಲಿರ್ದುವೆನೆ ಜಂಬುಕನಿಂತೆಂದುದು :

ಶ್ಲೋ॥ ಕುತೋಽರ್ಥಂ ಹೃದಯಂ ಕರ್ಣಃ ಕಾಮಾಂಧಸ್ಯ ಮೃಗಾಧಿಪ
ತದ್ಪೂರ್ವಪರಿನಷ್ಟೋಽಪಿ ಯೋಽಯಂ ಮೌರ್ಖ್ಯಾದಿಹಾಗತಃ ॥೧೯೨॥

ಟೀ॥ ಕಾಮಾಂಧನಪ್ಪವಂಗೆ ಕಾರ್ಯಮೆಂಬುದಿಲ್ಲ, ಹೃದಯವ್ವೂ ಕಿವಿಯೂ ಇಲ್ಲ, ಅದೆಲ್ಲಂ ಮುನ್ನವೆ ಕೆಟ್ಟಡೆಯುಂ ಮತ್ತೆಯುಂ ಮೂರ್ಖತನದೆ ಬಂದುದು. ಅಂತುಮಲ್ಲದೆ ನಿಮಗೇಂ ಮೂರ್ಖತನವೆಡೆಗೊಂಡುದಕ್ಕುಮದಲ್ಲದೆ ಕಟ್ಟಿ ನಿಮ್ಮ ಕಯ್ಯೊಳ್ ಮುನ್ನಂ ಬರ್ದುಂಕಿ ಪೋದುದು. ಮತ್ತೆನ್ನ ಮಾತಂ ನಂಬಿ ಬಂದು ಸಾವುದಾವಕಾರಣಂ. ದೇವಾ! ನೀವಿದಂ ವಿಚಾರಿಸುವುದಿಲ್ಲಕ್ಕು, ಸುರತಸುಖವನ್ನು ಅನುಭವಿಸುತ್ತಿರಬಹುದು; ಬಾ ಎನ್ನಲು ೪೦೬. ಆ ಕತ್ತೆಯು ಮೃತ್ಯುವಿನ ಹಿಂದೆ ಹೋಗುವಂತೆ ನರಿಯು ಹಿಂದೆ ಹೋಗಿ ಸುರತಸುಖಕಾಂಕ್ಷೆಯಿಂದ ರಾಗರಸಾಂಧನಾದ ಆ ರಾಸಭವು ಮಹಾದ್ರಿಗುಹಾಭ್ಯಂತರವನ್ನು ಹೊಕ್ಕಿತು. ಮನಸ್ಥ ಶರಪರವಶನಾದ ದೇಹಿಯು ಹೋಗದ ಎಡೆಯುಂಟೇ ! ವ॥ ಹಾಗೆ ಹೊಕ್ಕವನನ್ನು ಆ ಸಿಂಹವು ಮೇಲೆ ಬಿದ್ದು ಗಂಟಲನ್ನು ಒತ್ತಿಕೊಂಡು ತಿನ್ನಲಿದ್ದುದನ್ನು ನರಿಯು ಕಂಡು ಈ ಪ್ರಾಣಿ ಇದೆಲ್ಲವನ್ನೂ ತಾನೇ ತಿನ್ನುವುದೋ ಏನೋ ಎಂದು ಹೇಗೆ ತಿಳಿಯುವುದು ? ಬಳಿಕ ಏನು ಮಾಡಲಿ ? ಈಗಲೇ ವಂಚಿಸಿ ನನಗೆ ಬೇಕಾದಷ್ಟನ್ನು ತೆಗೆದುಕೊಳ್ಳುವೆನು ಎಂದು ಸಿಂಹದ ಸಮೀಪಕ್ಕೆ ಬಂದು, ದೇವಾ ! ನೀವು ಹಲವು ದಿವಸಗಳಿಂದ ದೇವತಾರಾಧನವನ್ನು ಮಾಡಿಲ್ಲ ; ಇಂದು ಇಷ್ಟದೇವತಾ ಸಮಾರಾಧನ ಮಾಡಿ ಕತ್ತೆಯನ್ನು ವ್ಯಾಧಿನಿವಾರಣಾರ್ಥವಾಗಿ ದಿವ್ಯೌಷಧವೆಂದು ತಿಳಿದು ಆರೋಗಿಸಿರಿ ಎನ್ನಲು ಮೃಗೇಂದ್ರನು ಹಾಗೆಯೇ ಆಗಲಿ ಎಂದು ನಾನು ದೇವತಾರಾಧನೆಯನ್ನು ಮಾಡಿ ಬರುವವರೆಗೆ ನೀನು ಇದನ್ನು ಬಿಟ್ಟಿರಬೇಡ ಎಂದಿತು. ಮಹಾಪ್ರಸಾದವೆಂದು ಆ ಸಿಂಹವು ಹೋದ ಕೂಡಲೇ ಕತ್ತೆಯ ಎದೆಯನ್ನು ಕಿವಿಗಳನ್ನೂ ತಿಂದು ಕಳ್ಳತೊತ್ತಿನಂತೆ ಬಾಯನ್ನು ಒರಸಿಕೊಂಡು ತಾನಲ್ಲವೆಂಬಂತೆ ಇರಲು ಆ ಮೃಗಾಧಿರಾಜನು ಬಂದು ಈ ಕತ್ತೆಯ ಎದೆಯೂ ಕಿವಿಗಳೂ ಎಲ್ಲಿಗೆ ಹೋದುವು ಎನ್ನಲು ನರಿಯು ಹೀಗೆಂದಿತು: ಶ್ಲೋ॥ ಕಾಮಾಂಧನಾದವನಿಗೆ ಕೆಲಸವೆಂಬುದಿಲ್ಲ ; ಹೃದಯವ್ವೂ ಕಿವಿಯೂ ಇಲ್ಲ. ಅವೆಲ್ಲ ಮೊದಲೇ ಕೆಟ್ಟರೂ ಪುನಃ

ಮೆಂದೊಡಾ ಸಿಂಹಮಿದಱ ಶರೀರಕ್ರಮಮಿಂತುಟೆಯಕ್ಕುಮೆಂದು ನಿಶ್ಚೈಸಿ ಸಂತೋಷಂಬಟ್ಟುದು. ಆನಾ ಬೆಳ್ಗಱ್ತೆಯಂತಲ್ಲೆಂ ಅಂತುಮಲ್ಲದೆಯುಂ,

ಶ್ಲೋ॥ ಫಲಾನ್ಯಮೃತಕಲ್ಪಾನಿ ತೃಪ್ತಿಂ ದಾಸ್ಯಂತಿ ಯಾನಿ ಮೇ
ತಾನಿ ಭದ್ರ ನರೋಚಂತೇ ತವಾಪ್ಯೌದುಂಬರಾಣಿ ಚ ॥೧೯೩॥

ಟೀ॥ ಆವುವು ಕೆಲವಮೃತಸಮಾನವಪ್ಪ ಪಳಂಗಳೆನಗೆ ತೃಪ್ತಿಯನೀವುವು ಇನ್ನಾ ಫಲಂಗಳ್ ನಿನಗೆ ಸೊಗಸುವವಲ್ಲವು ಎಂದು ಭಾವಾ! ನೀಂ ಬಂದ ಬಟ್ಟೆಯೊಳೆ ಬಿಜಯಂಗೆಯ್ಯಿಮೆನೆ ಮೊಸಳೆ ಮುಸುವಿಂದಂ ವಂಚಿಸಲ್ಪಟ್ಟು ಮನಂಗೆಟ್ಟು ಪೋಪುದುಂ ವಾನರನಿಂತೆಂದಂ :

ತನ್ನ ಬಗೆ ತೀರದನ್ನಂ
ಮುನ್ನಮೆ ಡಾಂಭಿಕನಾಗಿ ನುಡಿದನ ಬಗೆಯುಂ
ಬನ್ನಣಮೇಂ ತಾನುಂ ಕಿಡು-
ಗುನ್ನಿರುತಂ ಮರುತನಿರ್ದು ಕಾಯ್ದೊಡಮೆಂದುಂ ೪೦೭

ಅದಱಿಂದಂ ನೃಪನೀತಿಶಾಸ್ತ್ರ ನಿಪುಣಂ ತಾನಾರುಮಮಂ ನಂಬದಿ-
ರ್ಪುದು ಮತ್ತಂ ಮಿಗೆ ನಂಬಿ ಮಯ್ಮಱೆದಂ ಮೆಳ್ಪಟ್ಟುಂ ಭಯಂಬಟ್ಟು ಸಿ
ಲ್ಕಿದೊಡತ್ಯಂತ ಮನಸ್ಕನಾಗಿ ಸಲೆ ಬೇಗಂ ವಂಚಿಸಲ್ ಬಲ್ಲನ-
ಪ್ಪುದು ನಾರಾಯಣಸಂತನೇಕ ವಿಧದಿಂ ವಿದ್ವಜ್ಜನೈಕಾಶ್ರಯಂ ೪೦೮

ಇದು ವಿನಮದಮರರಾಜಮೌಳಿಮಾಣಿಕ್ಯಮಂಜರೀ ಪುಂಜರಂಜಿತ ಭಗವದ್ಭವಾನೀವಲ್ಲಭ ಚರಣ ಸರಸೀರುಹಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹವಿರಚಿತಮಪ್ಪ ಪಂಚತಂತ್ರದೊಳ್ ವಂಚನಾಪ್ರಕರಣವರ್ಣನಂ ಚತುರ್ಥಂಪ್ರಕರಣಂ ಸಮಾಪ್ತಂ.

ಮೂರ್ಖತನದಿಂದ ಬಂದಿತು. ವ॥ ಅಲ್ಲದೆ ನಿಮಗೇನು ಮೂರ್ಖತನ ಆವರಿಸಿರಬೇಕು. ಅಲ್ಲದೆ ಕತ್ತೆಯು ನಿಮ್ಮ ಕಯ್ಯಿಂದ ಮೊದಲು ಬದುಕಿ ಹೋಯಿತು ಮತ್ತೆ ನನ್ನ ಮಾತನ್ನು ನಂಬಿ ಬಂದು ಯಾಕೆ ಸಾಯಬೇಕಿತ್ತು. ದೇವಾ! ನೀವು ಇದನ್ನು ವಿಚಾರಿಸುವುದಿಲ್ಲ ಎನ್ನಲು ಆ ಸಿಂಹವು ಇದರ ಶರೀರಕ್ರಮವೇ ಹೀಗಿರಬೇಕು ಎಂದು ನಿಶ್ಚಯಿಸಿ ಸಂತೋಷಪಟ್ಟಿತು. ನಾನು ಆ ದಡ್ಡ ಕತ್ತೆಯಂತಲ್ಲ. ಅಲ್ಲದೆ ಶ್ಲೋ॥ ಅಮೃತಸಮಾನವಾದ ನನಗೆ ತೃಪ್ತಿಯನ್ನು ನೀಡುವ ಆ ಕೆಲವು ಫಲಗಳು ಇನ್ನು ನಿನಗೆ ರುಚಿಸುವುದಿಲ್ಲ ಎಂದು, ಭಾವಾ! ನೀವು ಬಂದ ದಾರಿಯಲ್ಲೇ ದಯಮಾಡಿಸಿರಿ ಎನ್ನಲು ಮೊಸಳೆ ಆ ಮುಸುವಿಂದ ವಂಚಿತವಾಗಿ ಮನಸ್ಸುಗೆಟ್ಟು ಹಿಂದಿರುಗಿತು. ಆಗ ವಾನರನು ಹೀಗೆಂದನು: ೪೦೭. ತನ್ನ ಹೃದಯಕ್ಕೆ ಅಸಾಧ್ಯವಾಗುವ ಮೊದಲೇ ಡಾಂಭಿಕನಾಗಿ ನುಡಿಯುವವನ ಮನಸ್ಸು ಒಳ್ಳೆಯದೇ? ಮರುತನು ಕಾಪಾಡಿದರೂ ಅವನು ಕೆಡುವುದು ಖಂಡಿತ. ೪೦೮. ಅದರಿಂದ, ನೃಪಶಾಸ್ತ್ರ ನಿಪುಣನಾದವನು ಯಾರನ್ನೂ ನಂಬದಿರಬೇಕು. ಅಲ್ಲದೆ, ನಂಬಿ ಮೆಯ್ಮರೆತು ಭ್ರಷ್ಟನಾಗಿ ಭಯಪಟ್ಟು ಸಿಕ್ಕಿ ಬಿದ್ದರೂ ಬೇಗನೆ ವಂಚಿಸಬಲ್ಲವನಾಗಿರಬೇಕು. ಇದು ವಿನಮದಮರರಾಜ ಮೌಳಿಮಾಣಿಕ್ಯ ಮಂಜರೀ ಪುಂಜರಂಜಿತವಾದ ಭಗವದ್ಭವಾನೀ ವಲ್ಲಭ ಚರಣ ಸರಸೀರುಹ ಷಟ್ಚರಣನಾದ ಶ್ರೀ ಮನ್ಮಹಾಸಂಧಿವಿಗ್ರಹಿ ದುರ್ಗಸಿಂಹ ವಿರಚಿತವಾದ ಪಂಚತಂತ್ರದಲ್ಲಿ ವಂಚನಾಪ್ರಕರಣ ವರ್ಣನ ಎಂಬ ಚತುರ್ಥ ಪ್ರಕರಣ ಸಮಾಪ್ತವಾದುದು.

ಮಿತ್ರಕಾರ್ಯ ಪ್ರಕರಣಂ ಪಂಚಮತಂತ್ರಂ

ಶ್ರೀವಲ್ಲಭನಾಗಿ ಸಮು-
ಸ್ತಾವನಿಯಂ ಕಾವ ನೃಪತಿ ತನಗಿನಿಸಂ ನಾ-
ನಾವಿಧ ನೀತಿಕ್ರಮ ಸಂ-
ಭಾವನೆಯಿಂದ ಮಿತ್ರರಾಗಿ ಮಾೞ್ಪುದು ಪಲರಂ ೪೦೯

ಅದು ಕಾರಣದಿಂ

ಮಿತ್ರಾಬ್ಜಿನೀಸರೋರುಹ
ಮಿತ್ರಂ ವಿರಚಿಸಿದನಖಿಲಬುಧನಿಧಿ ಮನುಚಾ-
ರಿತ್ರಂ ಗೌತಮಗೋತ್ರ ಪ-
ವಿತ್ರಂ ವಿಭು ಮಿತ್ರಕಾರ್ಯತಂತ್ರಮನಿಳೆಯೊಳ್ ೪೧೦

ಶ್ಲೋ॥ ಸಾಧವೋ ಮಂತ್ರಸಂಯೋಗಾದ್ಬುದ್ಧಿಮಂತ್ರಸ್ಸುಹೃಜ್ಜನಾಃ
ಸಾಧಯಂತ್ಯಾಶು ಕಾರ್ಯಾಣಿ ಕಾಕಕೂರ್ಮಮೃಗಾಖುವತ್ ॥೧೯೪॥

ಟೀ॥ ಬುದ್ಧಿವಂತರಾಗಿರ್ದವರ್ ಸಾಧುಗಳ ಸಂಸರ್ಗವನ್ನೇ ಮಾಡುವುದು. ಅದೆಂತೆಂದೊಡೆ ಕಾಗೆ ಆಮೆ ಸಾರಗ ಇಲಿಗಳ್ ಮಿತ್ರತ್ವವನೆಯ್ದಿದಹಗೆ. ಆ ಕಥಾಪ್ರಪಂಚಮೆಂತೆನೆ :

೧. ಕಾಗೆಯುಂ ಆಮೆಯುಂ ಸಾರಂಗಮುಂ ಇಲಿಯುಂ

ಸಕಲಮುನೀಂದ್ರಬೃಂದಾರಕವಂದ್ಯಮಾನ ಚಾರುಚರಿತನುಮುದಂಚಿತ ಗೋತ್ರಾಚಲ ಚಕ್ರವಾಳ ಚಕ್ರವರ್ತಿ ವಿಂಧ್ಯಮಹೀಧರದರ್ಪೋದ್ರೇಕಹರನುಂ ದೇವರಾಜ ಮಹಿಷಿ ವ್ಯಾಮೋಹ ನಹುಷ ಮಹೀವಲ್ಲಭ ಸಾಮ್ರಾಜ್ಯಸಾಮ್ರಾಜ್ಯಮಹೀರುಹದಾವಾನಲನುಂ ಜಠರಾನಲ ಶಿಖಾಕಲಾಪಭಸ್ಮೀಕೃತ ವಾತಾಪಿದಾನವಾಧೀಶ್ವರನುಂ ಲೋಪಾಮುದ್ರಾವಿಲೋಚನ ಮಧುಕರ ಪರೀಪೀತ

೪೦೯. ಲಕ್ಷ್ಮೀನಿವಾಸನಾಗಿ ಸಮಸ್ತಭೂಮಿಯನ್ನು ಕಾಪಾಡುವ ನೃಪತಿಯು ನಾನಾ ವಿಧವಾದ ನೀತಿಕ್ರಮಗಳಿಂದ ಹಲವರನ್ನು ಮಿತ್ರರನ್ನಾಗಿ ಮಾಡಿಕೊಳ್ಳಬೇಕು. ೪೧೦. ಅದರಿಂದ ಮಿತ್ರರೆಂಬ ಕಮಲಗಳಿಗೆ ಸೂರ್ಯನೂ ಅಖಿಲ ಬುಧನಿಧಿಯೂ, ಮನುಚಾರಿತ್ರನೂ ಗೌತಮಗೋತ್ರಪವಿತ್ರನೂ ಆದ ವಸುಭಾಗಭಟ್ಟನು ಮಿತ್ರಕಾರ್ಯತಂತ್ರವನ್ನು ವಿರಚಿಸಿದನು. ಶ್ಲೋ॥ ಕಾಗೆ, ಆಮೆ, ಸಾರಂಗ, ಇಲಿಗಳು ಮಿತ್ರತ್ವವನ್ನು ಹೊಂದಿದ ಹಾಗೆ ಬುದ್ಧಿವಂತರಾಗಿದ್ದವರು ಸಾಧುಸಂಸರ್ಗವನ್ನೇ ಮಾಡಬೇಕು. ಆ ಕಥಾಪ್ರಪಂಚವೇನೆಂದರೆ, ವ॥ ಸಕಲ ಮುನಿವೃಂದದಿಂದ ವಂದಿಸಿಕೊಳ್ಳುವ ಸುಂದರಚರಿತ್ರನೂ ಸುಂದರ ಕುಲಪರ್ವತ ಸಮೂಹಗಳ ಚಕ್ರವರ್ತಿಯಾದ ವಿಂಧ್ಯಪರ್ವತದ ದರ್ಪವನ್ನು ನಾಶಮಾಡಿದವನೂ ದೇವೇಂದ್ರನ ರಾಣಿಯಾದ ಶಚೀದೇವಿಯನ್ನು ಮೋಹಿಸಿದ ನಹುಷಚಕ್ರವರ್ತಿಯ ಸಾಮ್ರಾಜ್ಯವೃಕ್ಷಕ್ಕೆ ಕಾಳ್ಗಿಚ್ಚಾದವನೂ ಜಠರದ ಅಗ್ನಿಜ್ವಾಲಾಮಾಲೆಯಿಂದ ವಾತಾಪಿಯೆಂಬ ರಾಕ್ಷಸನನ್ನು ಭಸ್ಮಮಾಡಿದವನೂ ಲೋಪಾಮುದ್ರೆಯ ಕಣ್ಣೆಂಬ ತುಂಬಿಯಿಂದ ಮನೋಹರಮುಖ ಮಧುರಸವನ್ನು ಹೀರಲ್ಪಟ್ಟವನೂ ಉಪ್ಪುಕಡಲನ್ನು ಆ ಮುಕ್ಕುಳಿಸಿದವನೂ ಆದ ಅಗಸ್ತ್ಯ ಋಷಿಗೆ

ಮನೋಹರವದನಾರವಿಂದಮಧುರಸನುಂ ಗಂಡೂಷೀಕೃತಲವಣಾಬ್ಧಿಜಲನುಮೆನಿಪ್ಪಗಸ್ತ್ಯ ಮುನಿಗಾಶ್ರಯಮಾಗಿರ್ದ ದಕ್ಷಿಣದಿಗ್ಭಾಗದೊಳ್

ಅರುಣಮಣಿ ಶ್ರೀರುಚಿರಂ
ಹಿರಣ್ಮಯ ಭದ್ರಲಕ್ಷಣಂ ದಕ್ಷಿಣದಿ-
ಕ್ತರುಣೀಕಾಂಚಿಗೆ ಕಾಂಚೀ
ಪುರಿ ಮಣಿಯೆನಿಕುಂ ಮನೋಜ್ಞಗುಣ ಸಂಪೂರ್ಣಂ ೪೧೧

ಅಂತಾ ಪುರದ ಪೊಱವೊೞಲಂ ಬಳಸಿ ಬೆಳೆದನೇಕ ಭೂರುಹಸಂದೋಹದ ನಡುವದೊಂದು ದೇವಾಲಯಮುಂಟು. ಅದಱ ಗೋಪುರಾಂತರದೊಳ್ ಹಿರಣ್ಯರೋಮನೆಂಬ ಮೂಷಿಕಾಧೀಶ್ವರ ನಿರ್ಪಂ. ಅದಱೊಳ್ ಮಿತ್ರತ್ವಮಾಗಿ ಚಿತ್ರಗ್ರೀವನೆಂಬ ಕಪೋತರಾಜಂ ನಿಜಕಪೋತವ್ರಾತಸಮೇತಂ ಮೂಷಿಕಾಧಿರಾಜನಿರ್ಪ ಬಿಲದ ಸಮೀಪಕ್ಕೆ ಬಂದದಱೊಳ್ ಮಾತನಾಡಿಯುಮಾ ಪ್ರದೇಶದೊಳಾಡಿಯುಂ ಪೋಗುತ್ತಿರ್ಪುದನೊರ್ವ ಶಬರಂ ಕಂಡುಮಾ ವಿಹಂಗಚಯ ಮಾಡುವೆಡೆಯೊಳೆಲ್ಲಿಯುಂ ಬಲೆಯಂ ಹಾಸಿ ಬಲಿಹರಣಂಗೆಯ್ದಂತೆ ಕೂೞಂ ಸೂಸಿ ಪೋಪುದುಮದೆಲ್ಲಮಂ ಲಘುಪತನಕನೆಂಬ ವಾಯಸಂ ಕಂಡು ನಾನೀ ಚೋದ್ಯಮಂ ನೋೞ್ಪೆನೆಂದಾ ಮರದ ಮೇಲಿರ್ಪುದುಮಲ್ಲಿಗೆ ಚಿತ್ರಗ್ರೀವಂ ಸಪರಿಗ್ರಹಂ ಬಂದು ಪರಪಿರ್ದ ಕೂೞಂ ಕಂಡೆಱಗಲೊಡಮಾ ಬಲೆಯೊಳ್ ಕಪೋತಂಗಳಸಂಖ್ಯಾತಂ ಸಿಲ್ಕಿ ತಲೆಯುಮನೊಡಲುಮಂ ಬಡಿಬಡಿದು ಬೞಲುತಿರ್ಪುದುಮವಱೊಳಗೆ ಚಿರಂತನನುಂ ಬುದ್ಧಿವಂತನುಮಪ್ಪುದೊಂದು ಕಪೋತಂ ಪಕ್ಷಿಗಣಕ್ಕಿಂತೆಂದುದು :

ಆಶ್ರಯವಾಗಿದ್ದ ದಕ್ಷಿಣ ದಿಕ್ಕಿನಲ್ಲಿ ೪೧೧. ಕಾಂಚೀಪಟ್ಟಣವು ಮನೋಹರವಾದ ಗುಣಗಣಗಳಿಂದಲೂ ರತ್ನಕಾಂತಿಯಿಂದಲೂ ಚಿನ್ನದಿಂದ ಕೂಡಿ ಮಂಗಳಕರವಾಗಿಯೂ ದಕ್ಷಿಣದಿಕ್ತರುಣಿಯ ಕಾಂಚೀದಾಮಮಣಿಯಾಗಿಯೂ ಇತ್ತು. ವ॥ ಹಾಗೆ ಆ ಪುರದ ಹೊರಭಾಗವನ್ನು ಬಳಸಿ ಬೆಳೆದ ಅನೇಕ ವೃಕ್ಷಗಳಿಂದ ಕೂಡಿದ ತೋಪಿನ ನಡುವೆ ಒಂದು ದೇವಾಲಯವುಂಟು. ಅದರ ಗೋಪುರದೊಳಗೆ ಹಿರಣ್ಯರೋಮನೆಂಬ ಮೂಷಕಾಧೀಶ್ವರನಿದ್ದನು. ಅದರೊಡನೆ ಮಿತ್ರತ್ವ ಬೆಳೆದು ಚಿತ್ರಗ್ರೀವನೆಂಬ ಕಪೋತರಾಜನು ತನ್ನ ಪರಿವಾರಸಮೇತ ಮೂಷಕಾಧಿರಾಜನಿರುವ ಬಿಲದ ಸಮೀಪಕ್ಕೆ ಬಂದು ಅದರೊಡನೆ ಮಾತನಾಡಿಯೂ ಆ ಪ್ರದೇಶದಲ್ಲಿ ಆಡಿಯೂ ಹೋಗುತ್ತಿರುವುದನ್ನು ಒಬ್ಬ ಬೇಡನು ಕಂಡನು. ಆ ಪಕ್ಷಿಗಳು ಆಡುವ ಸ್ಥಳಗಳಲ್ಲೆಲ್ಲ ಬಲೆಯನ್ನು ಹಾಸಿ ಬಲಿಹರಣ ಮಾಡಿದಂತೆ ಕೂಳನ್ನು ಚೆಲ್ಲಿ ಆ ಬೇಡನು ಹೋಗಲು ಅದೆಲ್ಲವನ್ನೂ ಲಘುಪತನಕನೆಂಬ ಕಾಗೆಯು ಕಂಡು ನಾನು ಈ ಚೋದ್ಯವನ್ನು ನೋಡುವೆನು ಎಂದು ಆ ಮರದ ಮೇಲೆ ಕುಳಿತುಕೊಂಡಿತು. ಆಗ ಅಲ್ಲಿಗೆ ಚಿತ್ರಗ್ರೀವನು ಪರಿವಾರ ಸಮೇತನಾಗಿ ಬಂದು ಅಲ್ಲಿ ಹರಡಿದ್ದ ಕೂಳನ್ನು ಕಂಡು ಎರಗಲು ಆ ಬಲೆಯಲ್ಲಿ ಅಸಂಖ್ಯ ಕಪೋತಗಳು ಸಿಕ್ಕಿ ತಲೆಯನ್ನೂ ಒಡಲನ್ನೂ ಬಡಿಬಡಿದು ಬಳಲುತ್ತಿರಲು ಅವುಗಳಲ್ಲಿ ಚಿರಂತನನೂ ಬುದ್ಧಿವಂತನೂ ಆದ ಒಂದು ಕಪೋತನು ಪಕ್ಷಿಸಮೂಹಕ್ಕೆ ಹೀಗೆಂದಿತು: ಒಂದು ಕಾಡಿನ

ಕಾಂತಾರಾಂತದೊಳತಿವಿಸ್ತೀರ್ಣಮುಮತ್ಯುನ್ನತಮುಮತಿದೀರ್ಘಪೃಥುಸ್ಕಂಧಮುಮ ಪ್ಪುದೊಂದು ಮಹಾವಟವಿಟಪಿಯೊಳನೇಕ ವಿಹಗಕುಳಂಗಳಿರ್ಪುವು. ಅವಂ ಒರ್ವ ವ್ಯಾಧಂ ಕಂಡಾ ಮರನಂ ಬಲವಂದು ನೋಡಿ,

ರ॥ ಮರಮೆನಗಲ್ತಡರ್ವೊಡೆ
ರಾಮಾನುಚರಂಗಮರಿದುಮುದ್ದಾಮಮುಮೆಂ-
ದಾ ಮಾಯಿ ಕಿರಾತನತಿ-
ವ್ಯಾಮೋಹಿತನಾಗಿ ಪೋಗದಲ್ಲಿಯೆ ನಿಂದಂ ೪೧೨

ಅಂತು ನಿಂದೀ ಪಕ್ಷಿಗಳನೆಂತುಂ ಪಿಡಿವೆನೆಂದೊಂದುಪಾಯಮಂ ಬಗೆದು ಯಷ್ಟಿಯ ಬೀಜಮಂ ತಂದಾ ಮರದ ಮೊದಱೊಳ್ ಬಿತ್ತಿ ನೀರನೆಱೆದು ಪೋಪುದುಂ ಕೆಲವು ದಿವಸಕ್ಕಾ ಬಿಱ್ತು ಪತತ್ರಿಗೋತ್ರಕ್ಕಪಮೃತ್ಯು ಮೂಡುವಂತೆ ಮೂಡುವುದುಮಾ ವಿಹಂಗಸಮೂಹಕ್ಕೆಲ್ಲಂ ಕುಲವೃದ್ಧನುಂ ಬುದ್ಧಿವೃದ್ಧನುಮಪ್ಪುದೊಂದು ವಿಹಂಗಮಾ ಮೊಳೆಯೆಲ್ಲನಾಂ ಕಂಡಂಡಜಂಗಳ್ಗೆಲ್ಲಮಿಂತೆಂದುದು: ಎಮ್ಮಜ್ಜರಿಂತೊಟ್ಟಿಂದುವರಮೀ ಚೂಳದೊಳಿರ್ದೆವು. ಇದಱ ಮೊದಲೊಳ್ ಪುಲ್ಲುಂ ಮೊದಲಾಗಿ ಪುಟ್ಟಿಯಱಿಯವು. ಈ ಮೊಳೆಗಳಿಂದಮಗಪಾಯಮಾಗದೆ ಪೋಗದು ಉಪೇಕ್ಷಿಸಿದಿರಪ್ಪೊಡೆ.

ವಾಕ್ಯಂ॥ ನಖಚ್ಛೇದ್ಯಮತಿಕ್ರಾಂತಂ ಪರಶುನಾಪಿ ನ ಸಾಧ್ಯತೇ ॥೧೯೫॥

ಟೀ॥ ಉಗುರಿಂದಂ ಚಿವುಟಲಪ್ಪುದಂ ಕಯ್ ಮೀರಿದೊಡೆ ಕೊಡಲಿಯಿಂದಂಮುಂ ಕಡಿಯಲರಿದು ಎಂಬುದು ನೀತಿಯುಂಟಪ್ಪದಱಿಂ,

ಈ ಮೊಳೆ ಬೆಳೆದೊಡೆ ನಮಗ-
ಕ್ಷೇಮಕರಂ ಕರಮೆಯಕ್ಕುಮೀಗಳೆ ಕಳೆಯಿಂ
ನೀಮೆನೆ ವಿಹಗಸಮೂಹಮಿ-
ದೇಮಾತೆಂದುಜಿದೆ ವೃದ್ಧವಿಹಗನ ಮಾತಂ ॥೪೧೩॥

ನಡುವೆ ಅತ್ಯಂತ ವಿಶಾಲವೂ ಅತ್ಯುನ್ನತವೂ ಉದ್ದವೂ ತೋರವೂ ಆದ ಕೊಂಬೆಗಳಿಂದ ಕೂಡಿದುದೂ ಆದ ಒಂದು ಮಹಾವಟವೃಕ್ಷವಿತ್ತು. ಅದರಲ್ಲಿ ಅನೇಕ ಪಕ್ಷಿಗಳಿದ್ದುವು. ಅವುಗಳನ್ನು ಒಬ್ಬ ಬೇಡನು ಕಂಡು ಆ ಮರವನ್ನು ಸುತ್ತಿ ನೋಡಿ ೪೧೨. ಈ ಮರವನ್ನು ಏರಲು ನನಗಲ್ಲ, ಆ ರಾಮಾನುಚರನಿಗೂ ಅಸಾಧ್ಯ ಎಂದು ಅತಿವ್ಯಾಮೋಹಿತನಾಗಿ ಅಲ್ಲಿಯೇ ನಿಂತನು. ವ॥ ಹಾಗೆ ನಿಂತು ಈ ಪಕ್ಷಿಗಳನ್ನು ಹೇಗಾದರೂ ಹಿಡಿಯುವೆನು ಎಂದು ಒಂದು ಉಪಾಯವನ್ನು ಯೋಚಿಸಿ ಯಷ್ಟಿಯ ಬೀಜವನ್ನು ತಂದು ಆ ಮರದ ಬುಡದಲ್ಲಿ ಬಿತ್ತಿ ನೀರನ್ನೆರೆದು ಹೋದನು. ಕೆಲವು ದಿವಸಗಳಲ್ಲಿ ಆ ಬೀಜವು ಪಕ್ಷಿಸಮೂಹಕ್ಕೆ ಅಪಮೃತ್ಯು ಮೂಡುವಂತೆ ಹುಟ್ಟಿತು. ಆ ಹಕ್ಕಿಯು ಗುಂಪಿಗೆಲ್ಲ ಕುಲವೃದ್ಧನೂ ಬುದ್ಧಿವೃದ್ಧನೂ ಆದೊಂದು ಹಕ್ಕಿ ಆ ಮೊಳಕೆಯನ್ನು ಕಂಡು ಹಕ್ಕಿಗಳಿಗೆ ಹೀಗೆಂದಿತು. ನಮ್ಮ ಅಜ್ಜನ ಕಾಲದಿಂದ ಇಲ್ಲಿಯವರೆಗೆ ನಾವು ಈ ಮರದಲ್ಲಿದ್ದೆವು. ಇದರ ಬುಡದಲ್ಲಿ ಹುಲ್ಲು ಎಂದು ಹುಟ್ಟಿರಲಿಲ್ಲ. ಈ ಮೊಳಕೆಗಳಿಂದ ನಮಗೆ ಅಪಾಯವಾಗದೆ ಹೋಗದು. ಉಪೇಕ್ಷಿಸದಿರಿ. ವಾ॥ 'ನಖಚ್ಛೇದ್ಯಮತಿಕ್ರಾಂತಂ ಪರಶುನಾಪಿ ನ ಸಾಧ್ಯತೇ' ಉಗುರಿನಿಂದ ಚಿವುಟಲಾಗುವುದನ್ನು ಕೈಮೀರಿದಮೇಲೆ ಕೊಡಲಿಯಿಂದಲೂ ಕಡಿಯಲು ಅಸಾಧ್ಯ - ಎಂಬ ನೀತಿಯುಂಟು. ೪೧೩. ಆದರಿಂದ ಈ ಮೊಳಕೆ ಬೆಳೆದರೆ ನಮಗೆ ಕ್ಷೇಮಕರವಲ್ಲ.

ಅಂತವಜ್ಞೆಯಂ ಮಾಡಿ ಪಕ್ಕಿಗಳೆಲ್ಲಮಿರೆ ಕೆಲವು ದಿವಸಕ್ಕಾ ಬಳ್ಳಿ ಬೆಳೆದು ಮರನನಡರ್ದು ತುದಿಗೊಂಬುವರಂ ನಿಮಿರ್ದು ಪರ್ವಿ ಪರಿವೇಷ್ಟಿಸಿಕೊಂಡಿರ್ಪುದುಮಾ ವ್ಯಾಧಂ ಬಂದು ಬಳ್ಳಿಯಂ ಪಿಡಿದು ಮರನನಡರ್ದು ತದ್ವಟವಿಟಪಾಗ್ರದೊಳೆಲ್ಲಂ ಬಲೆಯಂ ಪಾಸಿ ಪೋದಂ. ಇತ್ತಲಾದಿತ್ಯನಪರಗಿರಿಯನೆಯ್ದಲೊಡಂ ಪತತ್ರಿಗೋತ್ರಂಗಳೆಲ್ಲಂ ಬಂದಲ್ಲಿ ಪಾಯ್ದು ಬಲೆಯೊಳ್ ಸಿಲ್ಕಿ ತಲೆಯನೊಡಲುಮಂ ಬಡಿಬಡಿದು ಬೇಸತ್ತು ಮಾಣ್ದು ಬೞಿಕ್ಕೆ ವೃದ್ಧಪಕ್ಷಿಗಿಂತೆಂದವು:

ಕೇಳಜ್ಜ ನಿನ್ನ ಮಾತಂ
ಕೇಳದೆ ಕಡುಗಾಳುತನದೆ ಸಿಲ್ಕಿದೆವೆಮಗೇಂ
ಬಾಳಲ್ಕುಪಾಯಮುಳ್ಳೊಡೆ
ಪೇೞಿಂ ನೀಮೆನೆ ಖಗೇಂದ್ರನಂದಿಂತೆಂದಂ ೪೧೪

ಅಂತಪ್ಪೊಡೆ ನೀಮೆಲ್ಲಮಸುವೋದಂತುಸಿರನೊಳದೆಗೆದು ಮಿಸುಕದಿರ್ಪುದುಮಾ ಬೇಡಂ ಬಂದು ಕಂಡಿವೆಲ್ಲಂ ಮುನ್ನವೆ ಸತ್ತುವೆಂದು ಸಂತಸಂಬಟ್ಟು ಬಲೆಯಂ ಬಿಡಿಸಿ ನೆಲಕ್ಕೀಡಾಡುವುದುಂ ಮೆಲ್ಲನೆ ಪಾಯ್ದು ಪಕ್ಕಿಗಳೆಲ್ಲಮನಿಕ್ಕುವನ್ನಂ ನಮ್ಮಲ್ಲಿ ಯಾರುಂ ಮಿಸುಕದಿರ್ಪುದುಂ ಬೞಿಕ್ಕೆ ಪುಳಿಂದಂ ಮರಮನಿೞಿವವಸರಮನಾನಱಿದು ಪದಿರಿಕ್ಕಲೊಡಂ ಪವನಜವದಿಂ ಗಗನಕ್ಕೆ ನೆಗೆದು ಪೋಗಿಮೆನೆ ವಿಹಂಗಮಮೆಲ್ಲಮಂತೆಗೆಯ್ವುವಂದಿರ್ಪುದುಮವಂ ಬಂದು ಮರನನಡರ್ದೇಱಿ ಮುನ್ನಮೆ ಸತ್ತಂತಿರ್ದ ಪಕ್ಕಿಗಳೆಲ್ಲಮಂ ಕಂಡು ಬೆಕ್ಕಸಂಬಟ್ಟೆಲ್ಲಂ ಸತ್ತುಪೋದುವೆಂದು ಬಲೆಯಂ ಬಿಡಿಸಿ ನೆಲಕ್ಕೀಡಾಡಲಾ

ಅದರಿಂದ ಈಗಲೇ ನಾಶಮಾಡಿ ಎನ್ನಲು ಆ ಹಕ್ಕಿಗಳೆಲ್ಲ ಇದೇನು ಮಾತು ಎಂದು ಆ ಮುದಿಹಕ್ಕಿಯ ಮಾತನ್ನು ಅಲಕ್ಷಿಸಿದವು. ವ।। ಕೆಲವು ದಿವಸಗಳಲ್ಲಿ ಆ ಬಳ್ಳಿ ಬೆಳೆದು ಮರವನ್ನೇರಿ ತುದಿಕೊಂಬೆಯವರೆಗೂ ನಿಮಿರಿ ಹಬ್ಬಿ ಸುತ್ತಿಕೊಳ್ಳಲು ಆ ಬೇಡನು ಬಂದು ಬಳ್ಳಿಯನ್ನು ಹಿಡಿದು ಮರವನ್ನೇರಿ ಆ ಆಲದ ಮರದ ತುದಿಗೆಲ್ಲ ಬಲೆ ಬೀಸಿ ಹೋದನು. ಇತ್ತ ಸಂಜೆಯಾಗಲು ಹಕ್ಕಿಗಳೆಲ್ಲ ಹಾರಿ ಬಂದು ಹಾಯ್ದು ಬಲೆಯಲ್ಲಿ ಸಿಕ್ಕಿ ತಪ್ಪಿಸಿಕೊಳ್ಳಲಾರದೆ ತಲೆಯನ್ನು ಒಡಲನ್ನು ಬಡಿಬಡಿದು ಬಳಲಿ ಬಳಿಕ ಮುದಿಹಕ್ಕಿಯೊಡನೆ ಹೀಗೆಂದುವು : ೪೧೪. "ಅಜ್ಜ ಕೇಳು, ನಿನ್ನ ಮಾತನ್ನು ಕೇಳದೆ ಮೂರ್ಖತನದಿಂದ ಸಿಕ್ಕಿಬಿದ್ದೆವು. ನಮಗೇನಾದರೂ ಬಾಳುವ ಉಪಾಯವಿದ್ದರೆ ಹೇಳಿರಿ" ಎನ್ನಲು ಆ ಮುದಿಹಕ್ಕಿ ಹೀಗೆಂದಿತು : ವ।। ಹಾಗಾದರೆ ನೀವೆಲ್ಲ ಅಸು ಹೋದಂತೆ ಉಸಿರನ್ನು ಒಳಕ್ಕೆ ತೆಗೆದುಕೊಂಡು ಮಿಸುಕದೆ ಇರುವುದನ್ನು ಕಂಡು ಆ ಬೇಡನು ಬಂದು ಕಂಡು ಇವೆಲ್ಲವೂ ಮೊದಲೇ ಸತ್ತುವು ಎಂದು ಸಂತಸಪಟ್ಟು ಬಲೆಯನ್ನು ಬಿಡಿಸಿ ನೆಲಕ್ಕೆ ಈಡಾಡುವನು. ಅವನು ಮೆಲ್ಲನೆ ಹಾಯ್ದು ಹಕ್ಕಿಗಳನ್ನೆಲ್ಲವನ್ನೂ ಹಾಕುವವರೆಗೆ ನಮ್ಮಲ್ಲಿ ಯಾರೂ ಮಿಸುಕಾಡದಿರಬೇಕು. ಬಳಿಕ ಬೇಡನು ಮರವನ್ನು ಇಳಿಯುವ ಸಂದರ್ಭವನ್ನು ನಾನು ತಿಳಿದು ಶ್ಲೇಷೆಯಿಂದ ಸೂಚಿಸಿದ ಕೂಡಲೇ ನೀವು ವಾಯುವೇಗದಿಂದ ಗಗನಕ್ಕೆ ಹಾರಿಹೋಗಿರಿ. ಹೀಗೆ ಹೇಳಲು ಹಕ್ಕಿಗಳೆಲ್ಲ ಹಾಗೆಯೇ ಮಾಡುವುವು ಎಂದು ಹೇಳಿದುವು. ಬೇಡನು ಬಂದು ಮರವನ್ನು ಏರಿ ಮೊದಲೇ ಸತ್ತುಹೋದಂತೆ ಇದ್ದ ಹಕ್ಕಿಗಳೆಲ್ಲವನ್ನೂ ಕಂಡು ಆಶ್ಚರ್ಯಪಟ್ಟು ಎಲ್ಲವೂ ಸತ್ತುಹೋದುವು ಎಂದು ಬಲೆಯನ್ನು ಬಿಡಿಸಿ ನೆಲಕ್ಕೆ

ಪಕ್ಕಿಗಳೆಲ್ಲಂ ವೃದ್ಧವಿಹಂಗಂ ಪೇಟ್ಟ ಬುದ್ಧಿಯೊಳ್ ನೆಗಟ್ಟು ಬರ್ದುಂಕಿದುವು. ಅದಟಿಂ ನೀವುಮೆನ್ನ ಪೇಟ್ಟಿಗೆಯ್ವಿರಪ್ಪೊಡೆ ನಾವೀ ಪಾಶಸಹಿತಂ ಪೋಪುದೆ ಕಜ್ಜಂ.

(ಮದನನಾಯಕವೃತ್ತಂ)

ಎನೆ ಕಪೋತಕುಲಮಾಗಳೆ ಮೇಗ
ಣ್ಗನಿತುಮೊರ್ಮೊದಲೆ ಪಾಱಲೊಡಂ ತೊ
ಟ್ಟನೆ ವನೇಚರಖಳಂ ಪರಿತಂದಾ
ಯೆನಗಿದೊಂದತಿಕುತೂಹಳಮೆಂದಂ ೪೧೫

ಎಂದು ತನ್ನೊಡ್ಡಿದ ಬಲೆವೆರಸಂಬರದೊಳ್ ಪಾಱುವ ಕಪೋತವ್ರಾತಮಂ ಕಿರಾತಂ ಕಂಡು ಕಿಱಿದಂತರಮವಱ ಬೆನ್ನೊಳ್ ಪರಿದು ಬಳಿಕ್ಕಂ ಚಿಂತಿಸಿ ನಿಂದು ತನ್ನೊಳಿಂತೆಂದಂ :

ಒರ್ವನೆ ಸತ್ಪುರುಷಂ ಸಕ
ಲೋರ್ವಿಯುಮಂ ಕಾವನೇಕಮುಖದಿಂದೆನೆ ಸಾ
ಸಿರ್ವರಿರದೇಕಮುಖದಿಂ
ನಿರ್ವಹಿಪಂದವರ್ಗಸಾಧ್ಯಮಪ್ಪುದುಮುಂಟೇ ೪೧೬

(ದ್ರುತವಿಲಂಬಿತವೃತ್ತಂ)

ಎಂದು ಮತ್ತಂ,

ಪಡೆಯೆ ಪೋದ ಬಡಸೂಳೆ ತನ್ನ ಕ
ನ್ನಡಿಯುಮಂ ಕಿಡಿಸಿ ಬಂದಳೆಂಬ ನಾ
ಣ್ನುಡಿಯುಮಾಯ್ತನಗೆ ಪೋಯ್ತು ಪಾಶಮಾ
ವೆಡೆಯೊಳೆಯ್ದಿದಪೆನೀ ಖಗಂಗಳಂ ೪೧೭

ಎಂದು ಕಿರಾತಂ ಬೇಸತ್ತು ಬೆಚ್ಚನೆ ಸುಯ್ದು ಬಿದಿಯಂ ಬಯ್ದು ತನ್ನ ಮನೆಗೆ ಮಗುಳ್ದಂ. ಅನ್ನೆಗಮಾ ಕಪೋತಂಗಳಿನ್ನೇಗೆಯ್ವೆಮೆನೆ ಚಿತ್ರಗ್ರೀವನಿಂತೆಂದಂ : ಎನ್ನ ಮಿತ್ರನಪ್ಪ ಮೂಷಕದಿಂದಲ್ಲದೀ

ಈಡಾಡಲು ಆ ಹಕ್ಕಿಗಳೆಲ್ಲವೂ ಆ ಮುದಿಹಕ್ಕಿ ಹೇಳಿದ ಬುದ್ಧಿಯಿಂದ ಬದುಕಿದವು. ಅದರಿಂದ ನೀವೂ ನಾನು ಹೇಳಿದ ಹಾಗೆ ಮಾಡುವಿರಾದರೆ ನಾವು ಈ ಪಾಶಸಹಿತವಾಗಿ ಹೋಗುವುದೇ ಕರ್ತವ್ಯ ಎಂದಿತು. ೪೧೫. ಆ ಪಾರಿವಾಳಗಳ ಹಿಂಡು ಕೂಡಲೇ ಮೇಲಕ್ಕೆ ಹಾರಲು ಬೇಡನು ಬಂದು ಅತ್ಯಂತ ಕುತೂಹಲ ಹೊಂದಿದನು. ತಾನು ಒಡ್ಡಿದ ಬಲೆಯೊಡನೆ ಆಕಾಶದಲ್ಲಿ ಹಾರುವ ಪಾರಿವಾಳಗಳ ಹಿಂಡನ್ನು ಬೇಡನು ಕಂಡು ಸ್ವಲ್ಪ ದೂರ ಹೋಗಿ ಬಳಿಕ ಚಿಂತಿಸಿ ತನ್ನಲ್ಲೇ ಹೀಗೆಂದುಕೊಂಡನು : ೪೧೬. ಒಬ್ಬನೇ ಸತ್ಪುರುಷನು ಸಕಲಲೋಕವನ್ನು ಕಾಪಾಡುವನು. ಸಾವಿರಾರು ಜನರಿಲ್ಲದೆ ಏಕಮುಖದಿಂದ ನಿರ್ವಹಿಸುವಾಗ ಅವರಿಗೆ ಅಸಾಧ್ಯವಾದುದು ಉಂಟೇ ! ೪೧೭. ಹಡೆಯಲು ಹೋದ ಬಡಸೂಳೆ ತನ್ನ ಕನ್ನಡಿಯನ್ನೂ ಕೆಡಿಸಿ ಬಂದಳು ಎಂಬ ನಾಣ್ಣುಡಿಯಂತೆ ನನಗಾಯಿತು! ನನ್ನ ಪಾಶವೂ ಹೋಯಿತು. ಈ ಹಕ್ಕಿಗಳನ್ನು ಇನ್ನೆಲ್ಲಿ ಕಾಣಲಿ ಎಂದು ಬೇಡನು ಬೇಸತ್ತು ನಿಟ್ಟುಸಿರಿಟ್ಟು ವಿಧಿಯನ್ನು ಬಯ್ದು ತನ್ನ ಮನೆಗೆ ಹಿಂದಿರುಗಿದನು. ಅಷ್ಟರಲ್ಲಿ ಆ ಪಾರಿವಾಳಗಳು ಇನ್ನೇನು ಮಾಡಲಿ ಎನ್ನಲು ಚಿತ್ರಗ್ರೀವನು ಹೀಗೆಂದನು : ನನ್ನ ಮಿತ್ರನಾದ

ಪಾಶಬಂಧನಂ ಪರಿ ಪಡದು. ಅಲ್ಲಿಗೆ ಪೋಪಂ, ಬನ್ನಿಮೆಂದು ಹಿರಣ್ಯರೋಮನಿರ್ದಲ್ಲಿಗೆ ಬಂದು ಬಿಲದ್ವಾರದೊಳ್ ನಿಂದು ತನ್ನ ಪೆಸರೊಳ್ ಕರೆಯಲೊಡಂ ಮಿತ್ರನ ಸರಮನುಂದುರಂ ಕೇಳ್ದು ಪರಿತಂದು ನೋಡಿ ಬಲೆಯೊಳ್ ಸಿಲ್ಕಿರ್ದನಂ ಕಂದು ನಿನಗಿನಿತಪತೆಯೇ ಕಾರಣದಿನಾದುದೆನೆ ಕಪೋತಾಧೀಶನಿಂತೆಂದಂ :

ನಿರುತಂ ನೀನಿರ್ದಲ್ಲಿಗೆ
ಬರೆ ಧರೆಯೊಳ್ ಕಲಸಿ ಪರೆದ ಕೂೞಂ ಕಂಡಾ
ನಿರದೆ ಬುಭುಕ್ಷಿತನೆಂ ಭೋ
ಗ್ಗರೆಯುತ್ತುಂ ಪಾಯ್ದೆನಡೆಯೆ ಸಪರಿಗ್ರಹನೆಂ ೪೧೮

ಪೆಱತೇಂ ಮುನಿ ವಿಷಯವಿಷ
ಕ್ಕೆಱಗಿಯೆ ಸಂಸಾರಪಾಶದೊಳ್ ಸಿಲ್ಕುವವೋಲ್
ತೆಱನಱಿಯದಾನುಮಾಮಿಷ
ಕೆಱಗಿ ಮಹಾಪಾಶಬಂಧದೊಳ್ ಸಿಲ್ಕಿರ್ದೆಂ ೪೧೯

ಎನೆ ಹಿರಣ್ಯರೋಮನಿಂತೆಂದಂ : ನೀನಪ್ಪೊಡೆ ಕರಂ ಬುದ್ಧಿವಂತಂ. ಇಂತಪ್ಪ ಶಂಕಾಸ್ಥಾನಕ್ಕೆ ಭೋಂಕನೆ ಪಾಯ್ದು ಪೊಲ್ಲಗೆಯ್ದೆಯೆನೆ ಚಿತ್ರಗ್ರೀವನಿಂತೆಂದಂ :

ಎಂತಪ್ಪ ಬುದ್ಧಿವಂತನು
ಮಂ ತತ್ಕ್ಷಣದಿಂ ಭವಾಂತರಾರ್ಜಿತಕರ್ಮಂ
ತಾಂ ತಡೆಯದೂಡದಿರದಿ
ನ್ನೆಂತುಂಟೆ ಸಿದ್ಧಾಂತಮಾವ ಜೀವಿಗಮೆಂತುಂ ೪೨೦

ಶ್ಲೋ|| ಯಸ್ಯ ಯದ್ಭವಿತವ್ಯಂ ಹಿ ತದ್ಭವತ್ಯೇವ ನಾನ್ಯಥಾ
ನೀಯತೇ ತೇನ ಮಾರ್ಗೇಣ ಸ್ವಯಂ ವಾ ತತ್ರ ಗಚ್ಛತಿ ||೧೯೬||

ಮೂಷಿಕನಿಂದಲ್ಲದೆ ಈ ಪಾಶಬಂಧನವನ್ನು ಬಿಡಿಸಲಾಗದು. ಅಲ್ಲಿಗೆ ಹೋಗೋಣ, ಬನ್ನಿರಿ ಎಂದು ಹಿರಣ್ಯರೋಮನಿದ್ದನಲ್ಲಿಗೆ ಬಂದು ಬಿಲದ್ವಾರದಲ್ಲಿ ನಿಂತಿತು ; ಅವನ ಹೆಸರು ಕೇಳಿ ಕರೆಯಿತು. ಮಿತ್ರನ ಸ್ವರವನ್ನು ಆ ಇಲಿಯು ಕೇಳಿ ಬಂದು ನೋಡಿ ಬಲೆಯಲ್ಲಿ ಸಿಕ್ಕಿರುವವನನ್ನು ಕಂಡು ನಿನಗೆ ಇಂಥ ಅವಸ್ಥೆ ಯಾವ ಕಾರಣದಿಂದ ಆಯಿತು ಎಂದು ಕೇಳಿತು. ಆಗ ಪಾರಿವಾಳಗಳ ಒಡೆಯನು ಹೀಗೆಂದನು : ೪೧೮. ಎಂದಿನಂತೆ ನೀನಿದ್ದಲ್ಲಿಗೆ ಬರುತ್ತಿದ್ದಾಗ ಭೂಮಿಯ ಮೇಲೆ ಕಲಸಿ ಹರಡಿದ ಕೂಳನ್ನು ಕಂಡು ನಾನು ಹಸಿವೆಯಿಂದ ಎರಗಿದೆ ; ಬಂಧನಕ್ಕೆ ಗುರಿಯಾದೆ. ೪೧೯. ಮುನಿಯಾದವನು ಇಂದ್ರಿಯ ವಿಷಯಗಳಿಗೆ ಎರಗಿ ಸಂಸಾರಪಾಶದಲ್ಲಿ ಸಿಲುಕುವ ಹಾಗೆ ನಾನೂ ತಿಳಿಯದೆ ಆಹಾರಕ್ಕೆರಗಿ ಮಹಾಪಾಶಬಂಧನದಲ್ಲಿ ಸಿಲುಕಿದೆ. ವ|| ಹೀಗೆನ್ನಲು ಹಿರಣ್ಯರೋಮನು ಹೇಳಿದನು : ನೀನಾದರೋ ಬಹಳ ಬುದ್ಧಿವಂತ. ಇಂಥ ಸಂದೇಹ ಸ್ಥಾನಕ್ಕೆ ಹೋಗಿ ಕೆಟ್ಟದನ್ನು ಮಾಡಿದೆ. ಆಗ ಚಿತ್ರಗ್ರೀವನು ಹೀಗೆಂದನು : ೪೨೦. ಎಂಥ ಬುದ್ಧಿವಂತನನ್ನೂ ಜನ್ಮಾಂತರದಲ್ಲಿ ಗಳಿಸಿದ ಕರ್ಮವು ತಾನು ತಡೆಯದೆ ತಿನ್ನಿಸದೆ ಬಿಡದು. ಯಾವ ಜೀವಿಗಾದರೂ ಅದೇ ಸಿದ್ಧಾಂತ ತಾನೇ. ಶ್ಲೋ|| ಯಾರಿಗೆ ಏನಾಗಬೇಕೆಂದಿರುವುದೋ ಅದು ಆಗದೇ ಇರದು. ಅದಲ್ಲದಿದ್ದಲ್ಲಿ ಪೂರ್ವಾರ್ಜಿತದುಷ್ಕೃತದಿಂದ ತಾನೇ ಕಲ್ಪಿಸಿದಲ್ಲಿಗೆ ಹೋಗುವನು ಎಂಬ

ಟೀ॥ ಆವನೊರ್ವಂಗಾವುದಾನೊಂದಪಂತಹುದು. ಅದಾದಲ್ಲದೆ ಮಾಣದು. ಅದಲ್ಲದೊಡೆ ಪೂರ್ವಾರ್ಜಿತ ದುಷ್ಕೃತದಿಂ ಕಲ್ಪಿಸಿದಲ್ಲಿಗೆ ತಾನೆಯಾದರೂ ತೋಹನು ಎಂಬುಕ್ತಿಯುಂಟು. ಆವ ಜೀವಕ್ಕಂ ಜನ್ಮಾಂತರಕರ್ಮಮೆ ಕಾರಣಮಾಗಿ ಪೋಕುಂ. ಇದುಂ ವಿಧಿವಿಹಿತಂ. ಆನೇಗೆಯ್ವೆನೆಂದೊಡೆ ನೀನೆಂದುದೊಂದು ಸಂದೆಯಮಿಲ್ಲೆಂದುಂದುರನಿಂತೆಂದುದು :

ಶ್ಲೋ॥ ಗಜಭುಜಂಗವಿಹಂಗಮಬಂಧನಂ ಶಶಿದಿವಾಕರಯೋರ್ಗ್ರಹಪೀಡನಂ
ಮತಿಮತಾಂಚ ವಿಲೋಕ್ಯಂ ದರಿದ್ರತಾಂ ವಿಧಿರಹೋ ಬಲವಾನಿತಿ ಮೇ ಮತಿಃ ॥೧೯೭॥

ಟೀ॥ ಆನೆ ಹಾವು ಹಕ್ಕಿಗಳ್ಗೆ ಬಂಧನಮುಂ ಚಂದ್ರ ಸೂರ್ಯರ್ಗೆ ಗ್ರಹಣಮುಂ ಮಹಾಪುರುಷರ್ಗೆ ದಾರಿದ್ರ್ಯಮುಂ ಇವು ವಿಧಿವಶದಂತಹುವು. ಅದು ಕಾರಣದಿಂ ವಿಧಿಯೆ ಬಲಾಢ್ಯಂ. ಎಂದಿಂತಾ ಮೂಷಕಂ ಸುಭಾಷಿತಮಂ ಪೇಳ್ದು ಬಟೆಕದಜ ಪಾಶಮಂ ಕದಿಯಲೊಡಜೆಸೆ ಕಪೋತಾಧೀಶನೆನ್ನ ಹಾಶಮಂ ಬಟೆಕ್ಕೆ ಬಿಡಿಸು ; ಮುನ್ನಂ ಪರಿಗ್ರಹದ ಪಾಶಮಂ ಮೋಕ್ಷಂಗೆಯ್ಯೆಂಬುದುಂ ಹಿರಣ್ಯರೋಮನಿಂತೆಂದಂ :

ಶ್ಲೋ॥ ಆಪತ್ಕಾಲೇ ಧನಂ ರಕ್ಷೇದ್ದಾರಾನ್ ರಕ್ಷೇದ್ಧನೈರಪಿ
ಆತ್ಮಾನಂ ಸರ್ವದಾ ರಕ್ಷೇತ್ ದಾರೈರಪಿ ಧನೈರಪಿ ॥೧೯೮॥

ಟೀ॥ ಆಪತ್ಕಾಲಕ್ಕೆ ಧನಮಂ ರಕ್ಷಿಸುವುದು. ಅರ್ಥದಿಂದಂ ಪರಿಗ್ರಹಮಂ ರಕ್ಷಿಸುವುದು. ಪರಿಗ್ರಹದಿಂದಂ ಅರ್ಥದಿಂದಂ ತನ್ನಂ ತಾನೆ ರಕ್ಷಿಸಿಕೊಂಬುದು. ಎಂಬುದು ನೀತಿಯುಂಟು. ನೀನುಳ್ದೊಡೆ ಪರಿಗ್ರಹಮಂ ಪಡೆದುಕೊಳಲಕ್ಕುಂ ಎನಲಾತಂಗೆ ಚಿತ್ರಗ್ರೀವನಿಂತೆಂದಂ :

ಪರಮಾರ್ಥಂ ನೃಪನಾಶ್ರಿತ
ಭರಣಂ ತಾನೆನಿಪ ಲಕ್ಷಣದ ಗುಣದಿಂದಂ
ಪರಿಪೂರ್ಣನಪ್ಪುದಾಗದ
ನರಸು ಕರಂ ವಿರಸಮಟೆವ ಪೊರಸಂ ಪೋಲ್ಕುಂ ೪೨೧

ಉಕ್ತಿ ಇದೆ. ವ॥ ಯಾವ ಜೀವಕ್ಕೂ ಜನ್ಮಾಂತರ ಕರ್ಮವೇ ಕಾರಣವಾಗಿದೆ. ಅದರಿಂದ ಪುರುಷನು ಸುಖದುಃಖಾನುಭವವನ್ನು ಹೊಂದುವನು. ಬಳಿಕ ದೈವವೇ ಕಾರಣವಾಗಿ ಹೋಗುವನು. ಇದೂ ವಿಧಿವಿಹಿತ. ನಾನು ಏನು ಮಾಡುವೆನೆಂದರೆ ನೀನು ಹೇಳಿದ ಒಂದೂ ಸಂದೇಹವಿಲ್ಲ ಎಂದ ಇಲಿಯು ಹೀಗೆಂದಿತು : ಶ್ಲೋ॥ ಆನೆ ಹಾವು ಹಕ್ಕಿಗಳಿಗೆ ಬಂಧನವೂ ಚಂದ್ರಸೂರ್ಯರಿಗೆ ಗ್ರಹಣವೂ ಮಹಾಪುರುಷರಿಗೆ ದಾರಿದ್ರ್ಯವೂ ವಿಧಿವಶದಿಂದ ಸಂಭವಿಸುವುವು. ಅದರಿಂದ ವಿಧಿಯೇ ಬಲಾಢ್ಯನು. ವ॥ ಹೀಗೆ ಆ ಮೂಷಿಕವು ಸುಭಾಷಿತವನ್ನು ಹೇಳಿ ಬಳಿಕ ಅದರ ಪಾಶವನ್ನು ಕಡಿಯತೊಡಗಲು ಪಾರಿವಾಳಗಳ ಒಡೆಯನು, ತನ್ನ ಪಾಶವನ್ನು ಬಳಿಕ ಬಿಡಿಸು ; ಮೊದಲು ತನ್ನ ಪರಿವಾರದ ಪಾಶವನ್ನು ಬಿಡಿಸು ಎನ್ನಲು ಹಿರಣ್ಯರೋಮನು ಹೀಗೆಂದನು : ಶ್ಲೋ॥ ಆಪತ್ಕಾಲಕ್ಕಾಗಿ ಧನವನ್ನು ರಕ್ಷಿಸಬೇಕು. ಧನದಿಂದ ಕುಟುಂಬವನ್ನು ರಕ್ಷಿಸಬೇಕು. ಕುಟುಂಬದಿಂದಲೂ ಧನದಿಂದಲೂ ತನ್ನನ್ನು ತಾನೇ ಮೊದಲು ರಕ್ಷಿಸಿಕೊಳ್ಳತಕ್ಕದ್ದು ಎಂಬ ನೀತಿಯುಂಟು. ವ॥ ನೀನುಳಿದರೆ ಕುಟುಂಬವನ್ನು ಪಡೆದುಕೊಳ್ಳಬಹುದು ಎನ್ನಲು ಚಿತ್ರಗ್ರೀವನು ಹೀಗೆಂದನು: ೪೨೧. ನೃಪನು ಆಶ್ರಿತಭರಣನೆಂಬ ಲಕ್ಷಣದ ಗುಣದಿಂದ ಪರಿಪೂರ್ಣನಾಗ ಬೇಕು. ಹೀಗಿಲ್ಲದ ಅರಸನು ವಿರಸನಾಗುವನು. ಅವನು ಸತ್ತ ಪಾರಿವಾಳದಂತಾಗುವನು.

ಅದಲ್ಲದೆಯುಂ,

ಶ್ಲೋ|| ಅರ್ಥಿತ ವಿಭವಸ್ತ್ಯಾಗಃ ಸ್ವಾತಂತ್ರ್ಯಮುಚಿತಜ್ಞತಾ
ಏತತ್ಪಂಚಗುಣೋಪೇತಂ ಆಶ್ರಯಂತೀಶ್ವರಂ ಬುಧಾಃ ||೧೯೯||

ಟೀ|| ಅರ್ಥಿತ್ವಂ ಐಶ್ವರ್ಯಂ ತ್ಯಾಗಂ ಸ್ವಾತಂತ್ರ್ಯಂ ಉಚಿತಜ್ಞತೆ ಈ ಐದು ಗುಣಂಗಳಿಲ್ಲ ದರಸನನಾಶ್ರೈಸಲಾಗದು. ಅದಜೆಂ ಪರಿಜನಕ್ಕೆಡಜಾದೊಡೆ ಪೊರೆವುದುಂ ಪಡೆದುದಂ ಪಚ್ಚುಕುಡುವುದುಂ ತೊಡರ್ಪಾಗೆ ಬಿಡಿಸುವುದುಂ ಬಲ್ಲಿದರ್ಕೊಲೆ ಕಾವುದುಂ ದೋಷಕ್ಕೆ ಸೈರಿಸುವುದುಂ ಕ್ಲೇಶಮನಱಿವುದುಂ ಮೊದಲಾಗಿ ಮತ್ತಮುತ್ತಮಗುಣಂಗಳೊಳವು. ಅದು ಕಾರಣದಿಂದೀಯವಸ್ಥೆಯೊಳ್ ನೀವಿರ್ದಂತೆನ್ನನೆ ಮುನ್ನಂ ಕಾದುಕೊಂಡೆನಪ್ಪೊಡೆ ಕಷ್ಟನೆಯಪ್ಪೆಂ ಅದೆಂತೆನೆ :

ಪರಿಜನ ಜನಪದಭೃತಿ ಧ
ರ್ಮರಕ್ಷಣಂ ಸ್ವಪ್ರಯತ್ನಮೆಂಬಿದನಾತ್ಮಂ
ಭರಿಯಾಗಿ ಬಿಸುಟ ನರಪತಿ
ಪರಿಹೃತ ಧರ್ಮಾರ್ಥಕಾಮ ಮೋಕ್ಷನೆಯಕ್ಕುಂ ೪೨೨

ಎಂಬುದುಂ ಹಿರಣ್ಯರೋಮನಿಷ್ಟನ ಧೈರ್ಯಕ್ಕೆ ಸಂತುಷ್ಟನಾಗಿ ನಿನಗೆ ಸಂತೋಷಮನೀಗಳೆ ಮಾಟ್ಪೆನೆಂದಾಗಳೆ ಪೋಗಿ ತನ್ನ ಪರಿಜನಮೆಲ್ಲಮಂ ನೆರಪಿಕೊಂಡು ಬಂದಾ ಪಾಶಮಂ ನಿಶ್ಶೇಷ ಮಾಗಿ ಕಡಿದು ಕಳೆಯಲೊಡಂ ಚಿತ್ರಗ್ರೀವಂ ಕೃತಾರ್ಥನಾದೆನೆಂದು ಮಿತ್ರಂಗೆ ಪೊಡೆವಟ್ಟು ಪಾಶಮುಕ್ತನಾದ ಜೀವನಂತೂರ್ಧ್ವಗತಿಗೆ ಸಂದಂ.

ಇತ್ತಂ ಹಿರಣ್ಯರೋಮನಾ ಪಕ್ಷಿಗಳಂ ಕಾದ ಪುಣ್ಯದ ಫಲವೆನಿತಾದೊಡಂ ತನ್ನ ಮುನ್ನಿನ ದುಷ್ಕೃತವನನುಭವಿಸಿದಲ್ಲದೆ ಪೋಗದೆಂಬುದನಱಿಪುವಂತಧಃಪತನಮಪ್ಪ ಬಿಲನಂ ಪೊಕ್ಕುದು. ಅಂತದೆಲ್ಲಮನಲ್ಲಿ ಮರನ ಮೇಲಿರ್ದ ವಾಯಸಂ ಕಂಡು ವಿಸ್ಮಯಂಬಟ್ಟಾತ್ಮಗತದೊಳಿಂತೆಂದಂ :

ಅಲ್ಲದೆ, ಶ್ಲೋ|| ಅರ್ಥಿತ್ವ, ಐಶ್ವರ್ಯ, ತ್ಯಾಗ, ಸ್ವಾತಂತ್ರ್ಯ, ಉಚಿತಜ್ಞತೆ - ಈ ಐದು ಗುಣಗಳಿಲ್ಲದ ರಾಜನನ್ನು ಆಶ್ರಯಿಸಬಾರದು. ವ|| ಅದರಿಂದ ಪರಿವಾರಕ್ಕೆ ಅಪಾಯವೊದಗಲು ಅವರನ್ನು ರಕ್ಷಿಸಬೇಕು ; ಪಡೆದುದರಲ್ಲಿ ಹಂಚಿಕೊಡಬೇಕು; ಅಪಾಯ ಬಂದಲ್ಲಿ ಬಿಡಿಸಬೇಕು ; ಬಲಶಾಲಿಗಳಾದವರು ಕೊಲ್ಲಲು ಬರಲು ಅವರನ್ನು ಕಾಪಾಡಬೇಕು ; ದೋಷವನ್ನು ಸಹಿಸಿ ಕ್ಲೇಶವನ್ನು ಅರಿತುಕೊಳ್ಳಬೇಕು. ಈ ಮೊದಲಾದ ಇನ್ನೂ ಉತ್ತಮಗುಣಗಳಿವೆ. ಅದರಿಂದ ಈ ಅವಸ್ಥೆಯಲ್ಲಿ ನೀವು ಇದ್ದಂತೆ ನನ್ನನ್ನು ಮೊದಲೇ ರಕ್ಷಿಸಿಕೊಂಡೆನಾದರೆ ಕಷ್ಟನಾಗುವೆನು. ಹೇಗೆಂದರೆ, ೪೨೨. ಪರಿಜನರನ್ನೂ ಜನಪದರನ್ನೂ ಕಾಪಾಡುವ ಧರ್ಮರಕ್ಷಣೆ, ಸ್ವಪ್ರಯತ್ನಗಳನ್ನು ಸ್ವೇಚ್ಛೆಯಿಂದ ಬಿಡುವ ಅರಸನು ಧರ್ಮಾರ್ಥ ಕಾಮಮೋಕ್ಷಗಳಿಂದ ದೂರನಾಗುತ್ತಾನೆ. ಹಿರಣ್ಯರೋಮನು ಮಿತ್ರನ ಧೈರ್ಯಕ್ಕೆ ಸಂತುಷ್ಟನಾದನು. ನಿನಗೆ ಸಂತೋಷವನ್ನು ಈಗಲೇ ಉಂಟುಮಾಡುವೆನೆಂದು ಆಗಲೇ ಹೋಗಿ ತನ್ನ ಪರಿವಾರವೆಲ್ಲವನ್ನೂ ಕೂಡಿಕೊಂಡು ಬಂದು ಪಾಶವನ್ನು ನಿಶ್ಶೇಷವಾಗಿ ಕಡಿದುಬಿಟ್ಟನು. ಚಿತ್ರಗ್ರೀವನು ಕೃತಾರ್ಥನಾದೆನೆಂದು ಮಿತ್ರನಿಗೆ ನಮಸ್ಕರಿಸಿ ಪಾಶಮುಕ್ತನಾದ ಜೀವನಂತೆ ಮೇಲಕ್ಕೆ ಹಾರಿದನು. ಇತ್ತ ಹಿರಣ್ಯರೋಮನು ಆ ಪಕ್ಷಿಗಳನ್ನು ಕಾಪಾಡಿದ ಪುಣ್ಯದ ಫಲವು ಎಷ್ಟೇ ಆದರೂ ತನ್ನ ಹಿಂದಿನ ಪಾಪವನ್ನು ಅನುಭವಿಸಿದ ಹೊರತು

ಶ್ಲೋ॥ ಅಧನಂ ಖಲು ಜೀವಧನಂ ಹೇಮಾರ್ಥಧನಂ ಮಹಾಧನಂ ಧಾನ್ಯಂ
ಅತಿಧನಮೇತತ್ಸುಂದರ ವಿದ್ಯಾಶೀಲಂ ತಪಶ್ಚ ಮಿತ್ರಂ ಚ ॥೨೦೦॥

ಟೀ॥ ಜೀವಧನಂ ಧನವಲ್ಲ ಸುವರ್ಣಮಯಾಭರಣಂಗಳರ್ಥಧನಂ. ಧಾನ್ಯಂ ಮಹಾಧನಂ, ಸುವಿದ್ಯೆ ಸುಶೀಲಂ ತಪಸ್ಸು ಮಿತ್ರತ್ವಮೆಂಬಿವೆ ಸರ್ವಧನಾಧಿಕಂಗಳ್ ಎಂಬೀ ನೀತಿವಿದರ ಮಾತೇಕೆ ತಪ್ಪುಗುಂ. ಈ ಮೂಷಕಂ ಕೇವಲಂ ಜೀವಮಾತ್ರಮಲ್ಲ, ಇದು ಮಹಾಪುರುಷನದಱಿಂದಾನುಮೀತನೊಳೇತೆಱದಿಂ ಪ್ರೀತಿಯನೆ ಮಾಡಿಕೊಳ್ವೆನೆಂದಾತ್ಮಗತದೊಳ್ ಬಗೆದು ಹಿರಣ್ಯರೋಮನಿರ್ದ ಬಿಲದ್ವಾರಕ್ಕೆ ಬಂದು ನೋಡೆ ಕರೆವ ಕಾಗೆಯಂ ಕಂಡು ನೀನಾರೆಂದು ಕೇಳಲ್ ಕಾಗೆ ಪೇೞ್ಗುಂ :

ಮಿತ್ರವ್ಯಸನತ್ರಾಣ ಪ
ವಿತ್ರೀಕೃತಗಾತ್ರನಪ್ಪ ನಿನ್ನಂ ಕಂಡಾ
ಮಿತ್ರವಿಹೀನನೆನೀಗಳ್
ಮಿತ್ರತ್ವಕ್ಕಾಸೆಪಟ್ಟು ಬಂದೆಂ ನಿನ್ನೊಳ್ ೪೨೩

ಎಂಬುದುಂ ಮೂಷಕನಿಂತೆಂದುದು : ನೀಂ ಧ್ವಾಂಕ್ಷನೆಯಪ್ಪುದಱಿಂದತ್ಯಂತ ಮಾಂಸಭಕ್ಷಣಕಾಂಕ್ಷಿತನುಂ ಸ್ವಭಾವಚಪಲನುಮಾಗಿರ್ಪೆಯದು ಕಾರಣದಿಂ ಮಿತ್ರಪಾತ್ರಗುಣ ಸಮೇತನಲ್ಲೆನೆ ಲಘುಪತನಕನೆಂದು : ಇಂತಪ್ಪೊಡೆ ಮಿತ್ರಗುಣಂಗಳೆನ್ನವು ಸತ್ಪಾತ್ರವೆನ್ನವೆಂಬುದುಂ ಹಿರಣ್ಯರೋಮನಿಂತೆಂದಂ :

ಶ್ಲೋ ॥ ಸ್ವಚ್ಛತಾ ತ್ಯಾಗಿತಾ ಶೌರ್ಯಂ ಸಮಾನಸುಖದುಃಖಿತಾ
ಅನುರಾಗಶ್ಚ ದಾಕ್ಷಿಣ್ಯಂ ಸತ್ಯಂ ಶೌಚಂ ಸುಹೃದ್ಗುಣಾಃ ॥೨೦೧॥

ಹೋಗುವುದಿಲ್ಲ ಎಂಬುದನ್ನು ತಿಳಿಸುವಂತೆ ಅಧಃಪತನವಾದ ಬಿಲವನ್ನು ಹೊಕ್ಕನು. ಹಾಗೆ ಅದೆಲ್ಲವನ್ನೂ ಅಲ್ಲಿ ಮರದ ಮೇಲಿದ್ದ ಕಾಗೆಯು ಕಂಡು ಆಶ್ಚರ್ಯಪಟ್ಟು ತನ್ನಲ್ಲೇ ಹೀಗೆ ಹೇಳಿಕೊಂಡಿತು : ಶ್ಲೋ॥ ಪ್ರಾಣಧನವು ಧನವಲ್ಲ, ಸುವರ್ಣಮಯವಾದ ಆಭರಣಗಳು ಅರ್ಥಧನ, ಧಾನ್ಯವು ಮಹಾಧನ, ಒಳ್ಳೆಯ ವಿದ್ಯೆ, ಒಳ್ಳೆಯ ಶೀಲ, ತಪಸ್ಸು, ಮಿತ್ರತ್ವ ಎಂಬಿವೇ ಸರ್ವಧನಕ್ಕೂ ಮಿಗಿಲು ಎನಿಸಿದುವು ಎಂಬ ಈ ನೀತಿಜ್ಞರ ಮಾತು ಏಕೆ ತಪ್ಪುವುದು. ವ॥ ಈ ಇಲಿಯು ಕೇವಲ ಪ್ರಾಣಿಯಷ್ಟೇ ಅಲ್ಲ, ಇದೊಂದು ಮಹಾಪುರುಷ. ಅದರಿಂದ ನಾನೂ ಈತನೊಡನೆ ಏನಾದರೂ ಮಾಡಿ ಪ್ರೀತಿಯನ್ನು ಸಂಪಾದಿಸುವೆನು ಎಂದು ಮನಸ್ಸಿನಲ್ಲಿಯೇ ತಿಳಿದು ಹಿರಣ್ಯರೋಮನಿದ್ದ ಬಿಲದ್ವಾರಕ್ಕೆ ಬಂದು ನೋಡಿ ಕರೆಯುವ ಕಾಗೆಯನ್ನು ಕಂಡು ನೀನು ಯಾರು ಎಂದು ಕೇಳಲು ಕಾಗೆಯು ಹೇಳಿತು : ೪೨೩. ಮಿತ್ರನ ಚಿಂತೆಗೆ ತ್ರಾಣರೂಪನಾದ ಪವಿತ್ರಗಾತ್ರನಾದ ನಿನ್ನನ್ನು ಕಂಡು ಮಿತ್ರವಿಹೀನನಾದ ನಾನು ಈಗ ನಿನ್ನ ಮಿತ್ರತ್ವಕ್ಕೆ ಆಸೆಪಟ್ಟು ನಿನ್ನಲ್ಲಿಗೆ ಬಂದೆನು. ವ॥ ಆಗ ಮೂಷಕ ಹೀಗೆಂದಿತು : ನೀನು ಕಾಗೆಯಾದುದರಿಂದ ಅತ್ಯಂತ ಮಾಂಸಭಕ್ಷಣಕಾಂಕ್ಷಿತನೂ ಸ್ವಭಾವಚಪಲನೂ ಆಗಿರುವೆ. ಅದರಿಂದ ಮಿತ್ರನಾಗುವುದಕ್ಕೆ ಬೇಕಾದ ಗುಣಗಳಿಂದ ಕೂಡಿಲ್ಲ. ಆಗ ಲಘುಪತನಕನು ಹೀಗೆಂದನು : ಹಾಗಾದರೆ ಮಿತ್ರಗುಣಗಳು ಯಾವುವು, ಸತ್ಪಾತ್ರ ಎಂದರೆ ಏನು ಎಂದು ಕೇಳಲು ಹಿರಣ್ಯರೋಮನು ಹೀಗೆಂದನು : ಶ್ಲೋ॥ ಸ್ವಚ್ಛತೆ, ತ್ಯಾಗ, ಶೌರ್ಯ, ಸಮಾನವಾದ ಸುಖದುಃಖ, ಸ್ನೇಹ,

ಟೀ॥ ಸ್ವಚ್ಛತನಂ ತ್ಯಾಗಂ ಶೌರ್ಯಂ ಸಮಾನವಹ ಸುಖದುಃಖಂ ಸ್ನೇಹಂ ದಾಕ್ಷಿಣ್ಯಂ ಸತ್ಯಂ ಶೌಚಮೆಂಬಿವು ಮಿತ್ರಗುಣಂಗಳ್. ಮತ್ತಂ,

ಶ್ಲೋ॥ ಶೀಲಂ ಮಹಾನುರಾಗಶ್ಚ ಸಂಕ್ಷಿಪ್ತಂ ಮಿತ್ರಲಕ್ಷಣಂ
ಯಸ್ಮಿನ್ನೇತದ್ದ್ವಿತಂ ಮಿತ್ರಂ ತತ್ರಾತ್ಮಾನಂ ವಿನಿಕ್ಷಿಪೇತ್ ॥೨೦೨॥

ಟೀ॥ ಶೀಲಂ ಮಹಾಸ್ನೇಹಂ ಇವು ಮೊದಲಾದ ಮಿತ್ರಲಕ್ಷಣಂಗಳಾವನಲ್ಲಿಯುಂಟು ಆ ಮಿತ್ರನಲ್ಲಿ ತಾನಿಹುದು. ಅದಲ್ಲದೆಯುಂ.

ಕುಲಜಂ ಸತ್ವಾಢ್ಯಂ ನಿ-
ಶ್ಚಲವಚನನಭಿಮಾನಿ ಗುಣಿ ತಿತಿಕ್ಷಾನ್ವಿತನಿ-
ರ್ಮಲಚರಿತನೆರಡನಜೆಯಂ
ಬಲಯುತನಜೆವುಳ್ಳನೆನಿಪನಪ್ಪುದು ಕೆಳೆಯಂ ೪೨೪

ಎಂದಿಂತು ಪೂರ್ವೋಕ್ತಲಕ್ಷಣಂಗಳನುಂದುರಂ ಪೇಱ್ದುದುಂ : ವಕ್ರಾಕ್ಷನಿಂತೆಂದಂ : ನೀನೆಂದಂತೆ ನಾಂ ಕಾಕಕುಲಪ್ರಸೂತನಾಗಿಯುಮಜ್ಞಾನಕರ್ಮದೊಳ್ ನಡೆವನಲ್ಲಮದಱೆಂದೆನ್ನ ಮಿತ್ರತ್ವಮಂ ಕೈಕೊಳ್ವುದುಚಿತಮೆಂದೆಂತೆಂದೊಡೆ ಕೇಳೆಂದು ಲಘುಪತನಕಂ ಪೇಱ್ಗುಂ :

ಶ್ಲೋ॥ ಕರ್ತವ್ಯಾನಿಚ ಮಿತ್ರಾಣಿ ದುರ್ಬಲಾನಿ ಬಲಾನಿ ವಾ
ಹಸ್ತಿಯೂಥಂ ವನೇ ಬದ್ಧಂ ಮೂಷಕೈಸ್ತವಿಮುಚ್ಯತೇ ॥೨೦೩॥

ಟೀ॥ ಬಲಹೀನನಾಗಲಿ ಬಲವಂತನಾಗಲಿ ಮಿತ್ರನೇ ಬೇಕು. ಅದೆಹಗೆಂದೊಡೆ ವನದಲ್ಲಿ ಕಟ್ಟಿರ್ದಾನೆಯನಿಲಿ ಬಿಟ್ಟಹಗೆ ಎಂಬ ಕಥೆಯಂ ಕೇಳ್ದಱೆವುದಿಲ್ಲಕ್ಕುಮೆನೆ ಮೂಷಕನದೆಂತೆನೆ ಲಘುಪತನಕಂ ಪೇಱ್ಗುಂ :

೨. ವನದಲ್ಲಿ ಕಟ್ಟುಬಿದ್ದಿರ್ದ ಆನೆಯಂ ಇಲಿ ಬಿಡಿಸಿದ ಕಥೆ

ಒಂದುಕಾಲದೊಳ್ ಸಕಲಮಹೀತಲದೊಳಕಾಲವೃಷ್ಟಿ ತಗುಳ್ದು ಅತಿ ಪ್ರಬಲಜಲಪ್ರವಾಹಂ ಬೆಳ್ಳಂಗೆಡೆದು ಪರಿತರ್ಪ ಪೆರ್ಬಳ್ಳದೊಳ್ ಪರಿದಪ್ಪ ತೆಪ್ಪದ ಮೇಲೆ ತೇಂಕುತ್ತುಂ ಪಲವಿಲಿಗಳ್ವೆರಸು

ದಾಕ್ಷಿಣ್ಯ, ಸತ್ಯ, ಶೌಚ - ಎಂಬಿವುಗಳು ಮಿತ್ರಗುಣಗಳು. ಅಲ್ಲದೆ, ಶ್ಲೋ॥ ಶೀಲ ಮಹಾಸ್ನೇಹಗಳೆಂಬ ಮಿತ್ರಲಕ್ಷಣಗಳಿರುವ ಮಿತ್ರನಲ್ಲಿ ಮಿತ್ರತ್ವವಿರುವುದು. ಅದಲ್ಲದೆ, ೪೨೪. ಕುಲಜನೂ ಪರಾಕ್ರಮಿಯೂ, ನಿಶ್ಚಲವಚನನೂ, ಅಭಿಮಾನಿಯೂ, ಗುಣಿಯೂ, ಸಹಿಷ್ಣುವೂ, ನಿರ್ಮಲಚರಿತನೂ, ಏಕಮನಸ್ಕನೂ, ಬಲಶಾಲಿಯೂ, ಜ್ಞಾನಿಯೂ ಆದವನು ಗೆಳೆಯನೆನ್ನಿಸುವನು. ವ॥ ಹೀಗೆ ಪೂರ್ವೋಕ್ತ ಲಕ್ಷಣಗಳನ್ನು ಇಲಿಯು ಹೇಳಲು ಕಾಗೆಯು ಹೇಳಿತು : ನೀನು ಹೇಳಿದಂತೆ ನಾನು ಕಾಗೆಗಳ ಕುಲದಲ್ಲಿ ಹುಟ್ಟಿದವನಾದರೂ ಅಜ್ಞಾನಕರ್ಮದಲ್ಲಿ ನಡೆಯುವವನಲ್ಲವಾದುದರಿಂದ ನನ್ನ ಗೆಳೆತನವನ್ನು ಸ್ವೀಕರಿಸುವುದು ಉಚಿತ. ಹೇಗೆಂದರೆ, ಶ್ಲೋ॥ ಬಲಹೀನನಾಗಲಿ ಬಲವಂತನಾಗಲಿ ಮಿತ್ರನೇ ಬೇಕು. ಕಾಡಿನಲ್ಲಿ ಕಟ್ಟಿದ್ದ ಆನೆಯನ್ನು ಇಲಿಯು ಬಿಡಿಸಿದ ಹಾಗೆ ಎಂಬ ಕಥೆಯನ್ನು ನೀನು ಕೇಳಿರಲಿಕ್ಕಿಲ್ಲ ಎನ್ನಲು ಮೂಷಕನು ಅದೇನು ಎಂದು ಕೇಳಲು ಲಘುಪತನಕನು ಹೇಳಿತು: ಒಂದು ಕಾಲದಲ್ಲಿ ಪ್ರಪಂಚದಲ್ಲೆಲ್ಲ ಅಕಾಲವೃಷ್ಟಿ ತಗುಲಿ ಅತ್ಯಂತ ಪ್ರಬಲವಾದ ಜಲಪ್ರವಾಹವು ಒಂದೇ ಸಮನೆ ತುಂಬಿ ಹರಿದು ಬರುವ ಒಂದು ದೊಡ್ಡ ಹಳ್ಳದಲ್ಲಿ ದೊಡ್ಡ ತೆಪ್ಪದ ಮೇಲೆ ತೇಲಾಡುತ್ತ ಹಲವು ಇಲಿಗಳೊಂದಿಗೆ ಇದ್ದಕ್ಕಿದ್ದಂತೆ ಬಲುದಲೆಯ

ಚಿಕ್ಕನೆ ಬಲುದಲೆಯನೆಂಬ ಮೂಷಕಂ ಬರುತ್ತಿರ್ದು ವನಕರಿಗಳ್ ನೀರ್ಗೆ ಬರ್ಪುದಂ ಕಂಡು ಯೂಥಾಧಿಪಂಗಿಂತೆಂದುದು :

ವನಗಜಯೂಥಾಧೀಶ್ವರ
ಪೊನಲೊಳ್ ಪರಿಕರಸಮೇತಮಾಂ ಪೋದಪೆನಿಂ
ಬಿನೊಳಿಲ್ಲ ಕಾಯಲಾರ್ಪೊಡೆ
ನಿನಗಾನುಪಕರಿಸಲಾರ್ಪೆನೊಂದವಸರದೊಳ್ ೪೨೫

ಎಂದು ನುಡಿವ ಸರಮನಾ ಕರೀಂದ್ರ ಕೇಳ್ದು ಮೂಷಕಂಗಳೇಱಿದ ತೆಪ್ಪಮಂ ತಡಿಗೆ ಸಾರ್ಚಲೊಡಂ ಮೂಷಕರಾಜಂ ಗಜರಾಜಂಗೆ ಪೊಡೆವಟ್ಟು ನಿನಗೇನಾನುಮಧ್ವಾನಮಾದಾಗಳೆನ್ನಂ ನೆನೆಯೆಂದು ಪೇೞ್ದು ಪೋಪುದುಂ ಕೆಲವು ದಿವಸಕ್ಕಾ ಗಜಂ ದಠಕ್ಕೆ ಕಂಭಕ್ಕೊಳಗಾಗಿ ಕಟ್ಟುವಟ್ಟು ತನ್ನಂ ನೆನೆಯಲೊಡಂ ಮೂಷಕಂ ನಿಜಪರಿವಾರಪರಿವೃತನಾಗಿ ಬಂದು ಗಜಯೂಥನಾಥನ ಬಂಧನಮೋಕ್ಷಮಪ್ಪಂತು ಪಾಶಮುಂ ಕಡಿಕಂಡಂಗೆಯ್ದು ಪ್ರತ್ಯುಪಕಾರಮಂ ಮಾಡಿ ಮಿತ್ರಗುಣಮಂ ಮೆಱೆದುದು. ಅದು ಕಾರಣದಿಂದಾನುಂ ನಿನಗೇನಾನುಮೊಂದವಸರದೊಳುಪಕರಿಸಲಾರ್ಪೆನೆನ್ನ ನವಜ್ಞೆಗೆಯ್ವುದುಚಿತಮಲ್ಲೆಂತುಂ ಸಮಸ್ತ ಪುರುಷಾರ್ಥಕ್ಕೆಲ್ಲಂ ಮಿತ್ರನುತ್ತರಸಾಧಕನಪಱಿಂದೆನಗೆ ಮಿತ್ರತ್ವಮನಿತ್ತೊಡಲ್ಲದೆ ಪೋಗೆನೆಂದು ಕಾಗೆ ಕಟ್ಟಾಯಮಂ ನುಡಿಯೆ ಕೇಳ್ದು ಹಿರಣ್ಯರೋಮನಿಂತೆಂದಂ: ನೀನಿನಿತು ಪರಿಚ್ಛೇದಂಗೆಯ್ದಿರೆಯುಂ ಪ್ರಾರ್ಥಿಸೆಯುಂ ಮಿತ್ರತ್ವಮನೀಯಲ್ವೇಡಿದೊಡಮಿನ್ನೆನ್ನ ಕೆಳೆಯುಂ ನನ್ನ ಪಗೆಯುಂ ನಿನ್ನದಾಗಿಯೆ ನೆಗಟಲ್ವೇೞ್ಕುಮೆನೆ ವಾಯಸನಿದಲ್ತು ನೀನೇನಂ ಪೇೞ್ದೊಡಮದೆನಗೆ

ಎಂಬ ಮೂಷಕನು ಬರುತ್ತಿದ್ದು ಕಾಡಾನೆಗಳು ನೀರಿಗಾಗಿ ಬರುವುದನ್ನು ಕಂಡು ಅವುಗಳ ಒಡೆಯನೊಡನೆ ಹೀಗೆಂದಿತು : ೪೨೫. ವನಗಜಯೂಥಾಧೀಶ್ವರ ! ಪ್ರವಾಹದಲ್ಲಿ ನಾನು ಪರಿವಾರ ಸಮೇತನಾಗಿ ಕೊಚ್ಚಿಕೊಂಡು ಹೋಗುತ್ತಿದ್ದೇನೆ. ಆಧಾರವಿಲ್ಲ. ರಕ್ಷಿಸಲು ಸಾಧ್ಯವಾಗುವುದಾದರೆ ನಿನಗೆ ನಾನು ಎಂದಾದರೂ ಒಂದು ಸಂದರ್ಭದಲ್ಲಿ ಉಪಕಾರ ಮಾಡಬಲ್ಲೆ ವ।। ಹೀಗೆ ನುಡಿದ ಸ್ವರವನ್ನು ಆ ಕರೀಂದ್ರನು ಕೇಳಿ ಇಲಿಗಳು ಏರಿದ್ದ ತೆಪ್ಪವನ್ನು ದಡಕ್ಕೆ ಸೇರಿಸಲು ಮೂಷಕರಾಜನು ಗಜರಾಜನಿಗೆ ನಮಸ್ಕರಿಸಿ ನಿನಗೇನಾದರೂ ಕಷ್ಟಬಂದಾಗ ನನ್ನನ್ನು ನೆನೆಯೆಂದು ಹೇಳಿ ಹೋಯಿತು. ಕೆಲವು ದಿವಸಗಳಲ್ಲಿ ಆ ಆನೆಯು ಬಂಧನಕ್ಕೆ ಒಳಗಾಗಿ ಕಟ್ಟಲ್ಪಟ್ಟು ತನ್ನನ್ನು ನೆನೆಯಲು ಮೂಷಕನು ತನ್ನ ಪರಿವಾರ ಪರಿವೃತನಾಗಿ ಬಂದು ಆನೆಗಳ ಒಡೆಯನ ಬಂಧಮೋಕ್ಷವಾಗುವಂತೆ ಪಾಶವನ್ನು ತುಂಡುತುಂಡಾಗಿ ಮಾಡಿ ಪ್ರತ್ಯುಪಕಾರವನ್ನು ಗೈದು ಮಿತ್ರಗುಣವನ್ನು ಮೆರೆಯಿತು. ಅದರಿಂದ ನಾನೂ ನಿನಗೆ ಒಂದಲ್ಲ ಒಂದು ಸಂದರ್ಭದಲ್ಲಿ ಉಪಕರಿಸಬಲ್ಲೆ ; ನನ್ನನ್ನು ತಿರಸ್ಕರಿಸುವುದು ಉಚಿತವಲ್ಲ, ಹೇಗಿದ್ದರೂ ಸಮಸ್ತ ಪುರುಷಾರ್ಥಗಳಿಗೂ ಗೆಳೆಯನು ಕಾರಣ ಸಾಧನನಾಗಿರುವನು. ಅದರಿಂದ ನನಗೆ ನಿನ್ನ ಗೆಳೆತನವನ್ನು ನೀಡಿದ ಹೊರತು ಹೋಗಲಾರೆ ಎಂದು ಕಾಗೆಯು ಕಡ್ಡಾಯವಾಗಿ ಹೇಳಲು ಕೇಳಿ ಹಿರಣ್ಯರೋಮನು ಹೀಗೆಂದನು : ನೀನು ಇಷ್ಟು ನಿರ್ಧಾರ ಮಾಡಿದ್ದರೂ ಪ್ರಾರ್ಥಿಸಿದರೂ ಇನ್ನು ಮುಂದೆ ನನ್ನ ಸ್ನೇಹವೂ ವೈರವೂ ನಿನ್ನದಾಗಿಯೇ ಆಚರಿಸಬೇಕು ಎನ್ನಲು ಕಾಗೆಯು ಹಾಗಲ್ಲ, ನೀನೇನು ಹೇಳಿದರೂ ಅದನ್ನು ನಾನು ಗುರುವಚನವೆಂದು ತಿಳಿದು ಸ್ವೀಕರಿಸಿ ನಡೆಯುವೆನು

ಗುರುವಚನಮಾಗಿ ಕೈಕೊಂಡು ನಡೆವೆನೆನಲೊಡಂ ಹಿರಣ್ಯರೋಮಂ ಬಿಲದಿಂ ಪೊಱಮಡಲೊಡಂ ವಾಯಸಂ ರಾಗರಸಮಯನಾಗಿ ಪಣ್ಬಳಂಗಳಂ ಮುಂದಿಟ್ಟು ಪೊಡಮಡಲೊಡಂ ಉಂದುರಂ ಸಂತುಷ್ಟನಾಗಿ ಪರಸ್ಪರ ಮಿತ್ರ ಪ್ರತಿಪತ್ತಿಯೆಲ್ಲಮಂ ನೆಱೆಯೆ ಮಾಡಿ ಪಿರಿದು ಪೊಟ್ತು ಸಂಭಾಷಣಂಗೆಯ್ದು ತದನಂತರಂ ತಂತಮ್ಮ ನಿವಾಸಂಗಳ್ಗೆ ಪೋಗಿ ಕೆಲವಾನು ದಿವಸಕ್ಕೆ ಲಘುಪತನಕಂ ಹಿರಣ್ಯರೋಮನಿರ್ದಲ್ಲಿಗೆ ಬಂದಿಂತೆಂದುದು : ಈ ಬನಂ ಲುಬ್ಧಕಜನಜನಿತೋಪದ್ರವಮಾಯ್ತಿನ್ನಿಲ್ಲಿರ ಬಾರದು. ನದೀತೀರದೊಳನೇಕ ಭೋಗಚಾರು ಫಲಬಹಳಮಪ್ಪ ತರುವರಂಗಳೊಳವು. ಆ ನದಿಯ ಮಡುವಿನೊಳ್ ಮಂಥರಕನೆಂಬ ಕೂರ್ಮನಿರ್ಪುದದರ್ಕಮೆನಗಂ ಪಿರಿದಂ ಮಿತ್ರತ್ವ ಮುಂಟಪ್ಪುದಱಿಂದಲ್ಲಿಗೆ ಪೋದಪ್ಪೆನೆಂದೊಡೆ ಮೂಷಕನಿಂತೆಂದುದು : ಕರಮೊಳ್ಳಿತ್ತು ಈ ಮಠದ ಗೊರವನ ನಡುವೆಯೊಳಕಾರಣದಿಂದಿಲ್ಲಿ ವಿರಕ್ತನಾಗಿರ್ದಪೆನೆನ್ನಂ ನಿನ್ನ ಪೋಪ ತಾಣಕ್ಕುಯ್, ನೀನೇ ಕಾಕಿಯಾಗಿ ಪೋಪುದುಚಿತಮಲ್ಲಮದೆಂತೆನೆ :

ಶ್ಲೋ॥ ಏಕಪುಂಸಾ ನ ಗಂತವ್ಯಂ ಅಹಿನಾ ಕಾಕ ಕಾರಣಾತ್
ದಷ್ಟಸ್ಸಂಜೀವಿತೋ ವಿಪ್ರಃ ಕರ್ಕಟಸ್ಯ ಪ್ರಸಾದತಃ ॥೨೦೪॥

ಟೀ॥ ಒರ್ಬನೆ ಪುರುಷನೆಲ್ಲಿಗುಂ ಪೋಗಲಾಗದು. ಅದೆಪಗೆಂದೊಡೆ ಕಾಗೆಯ ಬಯಕೆಯ ನಿಮಿತ್ತಮಾಗಿ ಹಾವು ಕಚ್ಚಿದ ಬ್ರಾಹ್ಮಣನು ಮರಳಿಯೇಡಿಯಿಂದೆ ಜೀವಿಸಿದನು ಎಂಬ ಕಥೆಯಂ ಕೇಳ್ದಱಿವುದಿಲ್ಲಕ್ಕುಮೆನೆ ವಾಯಸನದೆಂತೆನೆ ಹಿರಣ್ಯರೋಮಂ ಪೇಟ್ದುಂ :

ಎನ್ನಲು ಹಿರಣ್ಯರೋಮನು ಬಿಲದಿಂದ ಹೊರಹೊರಡಲು ಕಾಗೆಯು ಪ್ರೀತಿಯಿಂದ ಹಣ್ಣು ಹಂಪಲನ್ನು ಎದುರಿಟ್ಟು ನಮಸ್ಕರಿಸಲು ಇಲಿಯು ಸಂತುಷ್ಟನಾಗಿ ಪರಸ್ಪರ ಮಿತ್ರೋಪಚಾರವೆಲ್ಲವನ್ನೂ ಪೂರ್ಣವಾಗಿ ಮಾಡಿ ತುಂಬ ಹೊತ್ತಿನವರೆಗೆ ಮಾತಾಡಿ ಬಳಿಕ ತಮ್ಮ ತಮ್ಮ ನಿವಾಸಗಳಿಗೆ ಹೋದುವು. ಕೆಲವು ದಿನಗಳ ಮೇಲೆ ಲಘುಪತನಕನು ಹಿರಣ್ಯರೋಮನಿದ್ದಲ್ಲಿಗೆ ಬಂದು ಹೀಗೆಂದಿತು : ಈ ಕಾಡಿಗೆ ಬೇಡರಿಂದ ಉಪದ್ರವವುಂಟು; ಇನ್ನು ಇಲ್ಲಿ ಇರಬಾರದು. ನದೀತೀರದಲ್ಲಿ ಸುಖಸುಂದರಕರವಾದ ಫಲಭರಿತವಾದ ಉತ್ತಮವೃಕ್ಷಗಳಿವೆ. ಆ ನದಿಯ ಮಡುವಿನಲ್ಲಿ ಮಂಥರಕನೆಂಬ ಕೂರ್ಮನಿದ್ದಾನೆ ; ಅವನಿಗೂ ನನಗೂ ಅತಿಶಯವಾದ ಸ್ನೇಹವಿದೆ. ಅದರಿಂದ ಅಲ್ಲಿಗೆ ಹೋಗುವೆನು ಎನ್ನಲು ಮೂಷಕನು ಹೀಗೆಂದಿತು : ಬಹಳ ಒಳ್ಳೆಯದಾಯಿತು. ಈ ಮಠದ ಸಂನ್ಯಾಸಿಯು ಮಧ್ಯದಲ್ಲಿ ಇರುವ ಕಾರಣದಿಂದ ನಾನು ಇಲ್ಲಿ ವಿರಕ್ತನಾಗಿದ್ದೇನೆ. ನೀನು ಹೋಗುವ ಸ್ಥಳಕ್ಕೆ ನನ್ನನ್ನೂ ಕರೆದುಕೊಂಡು ಹೋಗು. ನೀನು ಏಕಾಕಿಯಾಗಿ ಹೋಗುವುದು ಉಚಿತವಲ್ಲ. ಹೇಗೆಂದರೆ, ಶ್ಲೋ॥ ಒಬ್ಬನೇ ಪುರುಷನು ಎಲ್ಲಿಗೂ ಹೋಗಬಾರದು. ಹೇಗೆಂದರೆ ಕಾಗೆಯು ಬಯಕೆಯ ಕಾರಣಕ್ಕಾಗಿ ಹಾವು ಕಚ್ಚಿದ ಬ್ರಾಹ್ಮಣನು ಮರಳಿ ಏಡಿಯಿಂದ ಜೀವಿಸಿದನು. ಎಂಬ ಕಥೆಯನ್ನು ನೀನು ತಿಳಿದಿರಲಿಕ್ಕಿಲ್ಲ ಎನ್ನಲು ಕಾಗೆಯು ಅದೇನು ಎಂದು ಕೇಳಲು

೩. ಬ್ರಾಹ್ಮಣನುಂ ಏಡಿಯುಂ

ಚಂಪಾಪುರದೊಳೊರ್ವ ಪಾರ್ವಂ ತೀರ್ಥಯಾತ್ರಾನಿಮಿತ್ತಂ ಬರುತ್ತಿರ್ಪೆಡೆಯೊಳ್ ಜಲವಿಕಳಮಾಗಿರ್ದ ಜಲಾಶಯದೊಳ್ ಶಿಶುಕುಳೀರಂ ನೀರಂ ಪಡೆಯದೆ ಮಲುಮಲನೆ ಮಱುಗುತ್ತಿರ್ದುದಂ ಕಂಡು ಕರುಣಿಸಿ ಗುಂಡಿಗೆಯೊಳಿಕ್ಕಿಕೊಂಡದನೆಲ್ಲಿಯುಂ ಬಿಡದೆ ರಕ್ಷಿಸುತ್ತುಂ ತೀರ್ಥಂಗಳೆಲ್ಲಮಂ ಮಿಂದು ಕುರುಕ್ಷೇತ್ರದೊಳ್ ಬರುತ್ತುಂ ಬೞಲ್ದು ಅರಣ್ಯದೊಳತಿಶೀತಳಚ್ಛಾಯೋಪೇತಮಪ್ಪ ಮರದಡಿಯೊಳ್ ಪಟ್ಟು ಗುಂದಿಗೆಯುಂ ಕೆಲದೊಳಿಟ್ಟು ಮಱೆದೊಱಗಿದಂ.

ಆ ಮರದ ಮೇಲಿರ್ಪುದೊಂದು ವಾಯಸಂ ಕಂಡು ತದ್ವಿಟಪಿ ಕೋಟರ ಕುಟೀರಾಂತರದೊಳಿರ್ಪುದೊಂದು ಸರ್ಪಂ ತನಗೆ ಮಿತ್ರನಪ್ಪ ಕಾರಣದಿನದಱ ಸಮೀಪಕ್ಕೆಯ್ತಂದು ಈ ಮರದೊಳ್ ಪಟ್ಟಿರ್ದ ಪಾರ್ವನ ಕಣ್ಣಂ ಬಯಸಿದೆನೆಂಬುದುಮಿದಾವ ಗಹನಂ ನಿನ್ನ ಬಯಕೆಯನೀಗಳೆ ತೀರ್ಚುವೆನೆಂದು ಪಟ್ಟಿರ್ದ ಪಾರ್ವನಂ ಪಿಡಿವುದುಂ ವಿಷಪ್ರಭಾವದಿಂದಾಕ್ಷಣದೊಳಾತಂ ಗತಜೀವಿತನಾಗಲೊಡಂ ಕಾಗೆ ರಾಗಿಸಿ ಬಂದು ಪಾರ್ವನ ಮೇಲೆ ಪಾಯ್ವುದುಂ ಕರ್ಕಟಕಂ ಕಂಡು ಕಾಗೆಯಿನಕಾರಣಮಾಗಿ ತನ್ನಾಳ್ದಂಗೆ ಮರಣವಾದುದನಱಿದೇಗೆಯ್ಯಲುಮಱಿಯದೆ ಮಱುಗುತ್ತಿರ್ಪುದುಂ ವಾಯಸಂ ಸ್ವಭಾವಚಪಲನಪ್ಪುದಱಿಂ ಕೆಲದೊಳಿರ್ದ ಗುಂಡಿಗೆಯ ನೀರಂ ಕಂಡಲ್ಲಿ ಮುಸುಡಂ ನೀಡುವುದುಂ ಪಗೆ ದೊರೆಕೊಂಡುದೆಂದದಱ ಗಂಟಲಂ ಪಿಡಿದು ಬಿಡದಿರ್ಪುದುಂ ಕಾಗೆ ಪೋಗಲ್ ಪಡೆಯದೆ ಕೂಗಿಡುವುದುಮಾ ಸರಮನುರಗಂ ಕೇಳ್ದು ಕಾಗೆಯಂ ಕಂಠಮಂ ಕತ್ತರಿಸುತ್ತಿರ್ದ ಕರ್ಕಟಮಂ ಕಂಡಿದೇನೆಂದು ಬೆಸಗೊಳ್ವುದುಂ ಕರ್ಕಟಕನಿಂತೆಂದಂ :

ಹಿರಣ್ಯರೋಮನು ಹೇಳಿದನು: ಚಂಪಾಪುರದಲ್ಲೊಬ್ಬ ಬ್ರಾಹ್ಮಣನು ತೀರ್ಥಯಾತ್ರೆಗಾಗಿ ಬರುತ್ತಿದ್ದಾಗ ಒಂದು ಕಡೆ ಜಲವಿಕಳವಾಗಿದ್ದ ಜಲಾಶಯದಲ್ಲಿ ಮರಿಏಡಿಯೊಂದು ನೀರಿಲ್ಲದೆ ಮಲುಮಲನೆ ಕುದಿಯುತ್ತಿದ್ದುದನ್ನು ಕಂಡು ಕರುಣಿಸಿ ತನ್ನ ಕಮಂಡಲದಲ್ಲಿ ಇಟ್ಟುಕೊಂಡು ಅದನ್ನು ಎಲ್ಲಿಯೂ ಬಿಡದೆ ರಕ್ಷಿಸುತ್ತ ತೀರ್ಥಗಳನ್ನೆಲ್ಲ ಮಿಂದು ಕುರುಕ್ಷೇತ್ರಕ್ಕೆ ಬರಲು ಬಳಲಿ ಕಾಡಿನಲ್ಲಿ ತುಂಬ ತಂಪಾದ ನೆರಳಿನಿಂದ ಕೂಡಿದ ಒಂದ ಮರದ ಅಡಿಯಲ್ಲಿ ಮಲಗಿ ಕಮಂದಲವನ್ನು ಬಳಿಯಲ್ಲಿಟ್ಟು ಮೈಮರೆತು ನಿದ್ರಿಸಿದನು. ಆ ದುರದ ಮೇಲಿದ್ದ ಒಂದು ಕಾಗೆಯು ಇದನ್ನು ಕಂಡು ಆ ಮರದ ಪೊಟ್ಟರೆಯಲ್ಲಿದ್ದೊಂದು ಸರ್ಪವು ತನಗೆ ಮಿತ್ರನಾದುದರಿಂದ ಅದರ ಬಳಿಗೆ ಬಂದು ಈ ಮರದ ಬುಡದಲ್ಲಿ ಮಲಗಿದ್ದ ಬ್ರಾಹ್ಮಣನ ಕಣ್ಣನ್ನು ಬಯಸಿದೆನೆನ್ನಲು ಅದೇನು ಮಹಾ, ನಿನ್ನ ಬಯಕೆಯನ್ನು ಈಗಲೇ ತೀರಿಸುವೆನೆಂದು ಮಲಗಿದ್ದ ಬ್ರಾಹ್ಮಣನನ್ನು ಹಿಡಿಯಲು ವಿಷಪ್ರಭಾವದಿಂದ ಆ ಕ್ಷಣವೇ ಆತನು ತೀರಿಹೋಗಲು ಕಾಗೆಯು ಸಂತೋಷದಿಂದ ಬಂದು ಬ್ರಾಹ್ಮಣನ ಮೇಲೆ ಹಾರಲು ಏಡಿಯು ಕಂಡು ಕಾಗೆಯಿಂದ ಅಕಾರಣವಾಗಿ ತನ್ನ ಒಡೆಯನು ತೀರಿದುದನ್ನು ತಿಳಿದು ಏನು ಮಾಡಲೂ ತಿಳಿಯದೆ ದುಃಖಿಸುತ್ತಿತ್ತು. ಕಾಗೆಯು ಸ್ವಭಾವಚಪಲನಾದುದರಿಂದ ಪಕ್ಕದಲ್ಲಿದ್ದ ಕಮಂಡಲದ ನೀರನ್ನು ಕಂಡು ಅದಕ್ಕೆ ಮುಸುಡನ್ನು ಹಾಕಲು ವೈರಿ ಸಿಕ್ಕಿತು ಎಂದು ಅದರ ಗಂಟಲನ್ನು ಕಚ್ಚಿ ಬಿಡದಿರಲು ಕಾಗೆಯು ಹೋಗಲಾರದೆ ಕೂಗುತ್ತಿರಲು ಆ ಸ್ವರವನ್ನು ಸರ್ಪವು ಕೇಳಿ ಕಾಗೆಯ ಕೊರಳನ್ನು ಕತ್ತರಿಸುತ್ತಿದ್ದ ಕರ್ಕಟಕವನ್ನು ಕಂಡು

ನೀನೆನ್ನಾಳ್ದನನೀ ರವಿ
ಸೂನುವ ಕಾರಣದೆ ಕೊಂದೆಯೆದಱಿಂದಂ ನೋ-
ಡಾನುಮಿದಂ ಕೊಂದಪೆನೆ-
ತ್ತಾನುಂ ನೀನೆನ್ನ ಪತಿಯನೆತ್ತುವೊಡಿನ್ನುಂ ೪೨೬

ಕೊಲ್ಲೆನೆನೆ ಪನ್ನಗಂ ತ-
ಳ್ಪಿಲ್ಲದೆ ವಿಪ್ರಂಗೆ ನಿರ್ವಿಷಂಗೆಯ್ಯಲೊಡಂ
ಕೊಲ್ಲದೆ ವಾಯಸಮುಮನಂ-
ತಲ್ಲಿ ಕುಳೀರಂ ಕೃತಜ್ಞಗುಣಗಂಭೀರಂ ೪೨೭

ಅಂತು ಕುಳೀರನುಮಹಿಯುಮ-
ನಂತಗುಣರ್ ಮಿತ್ರಕಾರ್ಯತತ್ಪರರಾದರ್
ತಂತಮ್ಮ ಮಿತ್ರರುಂ ತಾ-
ವಿಂತು ಮಹಾಪುರುಷಚರಿತರಾದರ್ ನಿರುತಂ ೪೨೮

ಅದು ಕಾರಣದಿಂದೇಕಾಕಿಯಾಗಿ ಪೋಗದೆನ್ನುಮನುಯ್ಯೆನಲಂತೆಗೆಯ್ವೆನೆಂದು ಲಘುಪತನಕಂ ಹಿರಣ್ಯರೋಮನಂ ನೋಯಲೀಯದೆ ಚಂಚೂಪುಟದಿಂದೌಂಕಿ ತಂದು ಮಂಥರಕನಿರ್ದ ಮಡುವಿನ ತಡಿಯೊಳಿರಿಸಿ ಬೞಿಕೆ ಮಂಥರಕನಂ ಕರೆವುದುಂ ಮಿತ್ರನ ಸರಮನಱಿದು ಜಲದಿಂ ಪೊಱಮಟ್ಟು ಕೂರ್ಮಂಗೆ ಕೂರ್ಮೆ ಕೈಗಣ್ಮೆ ಕಾಗೆಗಭ್ಯಾಗತ ಪ್ರತಿಪತ್ತಿಯೆಲ್ಲಮಂ ನೆಱೆಯೆ ಮಾಡಿ ತದನಂತರಂ ಕೆಲದೊಳಿರ್ದ ಇಲಿಯೆಂ ಕಂಡೀ ಮಹಾಪುರುಷಂ ನಿನ್ನನಗಲದಿರ್ಪ ಕಾರಣಮೇನೆಂದು ಕೇಳೆ ಲಘುಪತನಕನಿಂತೆಂದಂ :

ಈ ಮೂಷಕನಪ್ಪೊಡೆ ಗುಣ-
ಧಾಮಂ ನಾಮದೆ ಹಿರಣ್ಯರೋಮಂ ಪೆಱತೇಂ
ಸಾಮಾನ್ಯನಲ್ಲದೇವೇ-
ೞ್ಪೇಮಾತೇನಱಿಸಿ ಕಾಣೆನಿನ್ನುಂ ಮುನ್ನುಂ ೪೨೯

ಇದೇನು ಎಂದು ಕೇಳಲು ಏಡಿಯು ಹೇಳಿತು : ೪೨೬. ನೀನು ನನ್ನ ಒಡೆಯನನ್ನು ಈ ಕಾಗೆಯ ಕಾರಣದಿಂದ ಕೊಂದೆ. ಅದರಿಂದ ನಾನು ಇದನ್ನು ಕೊಲ್ಲುವೆನು. ಹೇಗಿದ್ದರೂ ನೀನು ನನ್ನ ಒಡೆಯನನ್ನು ಬದುಕಿಸುವುದಾದರೆ ಕೊಲ್ಲುವುದಿಲ್ಲ ಎನ್ನಲು ೪೨೭. ಸರ್ಪವು ತಡಮಾಡದೆ ವಿಪ್ರನನ್ನು ನಿರ್ವಿಷನನ್ನಾಗಿ ಮಾಡಲು ಏಡಿಯು ಕಾಗೆಯನ್ನೂ ಕೊಲ್ಲದೆ ಕೃತಜ್ಞ ಗುಣಗಂಭೀರನಾಗಿದ್ದನು. ೪೨೮. ಹಾಗೆ ಏಡಿಯೂ ಸರ್ಪವೂ ಅನಂತಗುಣರಾಗಿ ಮಿತ್ರಕಾರ್ಯ ತತ್ಪರರಾದರು. ತಮ್ಮ ತಮ್ಮ ಗೆಳೆಯರು ಯಾವಾಗಲೂ ಹೀಗೆ ಮಹಾಪುರುಷ ಚರಿತರಾದರು. ವ|| ಅದರಿಂದ ಏಕಾಕಿಯಾಗಿ ಹೋಗದೆ ನನ್ನನ್ನೂ ಕರೆದೊಯ್ಯು ಎನ್ನಲು ಲಘುಪತನಕನು ಹಿರಣ್ಯರೋಮನಿಗೆ ನೋವಾಗದಂತೆ ಕೊಕ್ಕಿನಿಂದ ಒತ್ತಿ ಹಿಡಿದು ತಂದು ಮಂಥರಕನಿದ್ದ ಮಡುವಿನ ದಡದಲ್ಲಿಟ್ಟು ಬಳಿಕ ಮಂಥರಕನನ್ನು ಕರೆದನು. ಮಿತ್ರನ ಸ್ವರವನ್ನು ತಿಳಿದು ನೀರಿನಿಂದ ಹೊರಕ್ಕೆ ಬಂದು ಪ್ರೀತಿಗೆ ಪ್ರೀತಿ ಸೇರಲು ಕಾಗೆಗೆ ಅಭ್ಯಾಗತ ಸತ್ಕಾರವೆಲ್ಲವನ್ನೂ ಮಾಡಿ ಬಳಿಕ ಪಕ್ಕದಲ್ಲಿದ್ದ ಇಲಿಯನ್ನು ಕಂಡು ಈ ಮಹಾಪುರುಷನು ನಿನ್ನನ್ನು ಅಗಲದೆ ಇರುವ ಕಾರಣವೇನೆಂದು ಕೇಳಲು ಲಘುಪತನಕನು ಹೀಗೆಂದನು : ೪೨೯. ಈ ಮೂಷಕನು ಗುಣಕ್ಕೆ ನೆಲೆಮನೆ ; ಹೆಸರು ಹಿರಣ್ಯರೋಮ ; ಇನ್ನೇನು ;

ಕೇವಲಜೀವಿಯದಲ್ಲಿದು
ಭಾವಿಪ್ಪೊಡೆ ಸುಹೃದ್ಗುಣಾನ್ವಿತಂ ಮಿಗೆ ಚಿತ್ರ-
ಗ್ರೀವನ ಸೆಱೆಯಂ ಬಿಡಿಸಿದ-
ನೇವೊಗೞ್ವೆನೀ ಸುವರ್ಣರೋಮನ ಗುಣಮಂ ೪೩೦

ಇಂತಪ್ಪ ಮಹಾಪುರುಷನಪ್ಪುದಱಿಂದಾನುಮೀತನೊಳ್ ಮಿತ್ರತ್ವಮಂ ಪಡೆದೆಂ. ಈಗಳ್ನಿನ್ನಲ್ಲಿಗೆ ಬರುತುಮಿರ್ದು ತನಗೆ ಪೇೞ್ವೊಡೆನಗಿಲ್ಲಿ ಮನೋದುಃಖಂ ಪಿರಿದೆನ್ನುಮನುಯ್ಯೆಂಬುದುಂ ತಂದೆನೆಂಬುದುಮದನೆಲ್ಲಮಂ ಸವಿಸ್ತರಂ ಕೇಳ್ದು ಮಂಥರಂ ಹಿರಣ್ಯರೋಮನನೆಂದಂ : ನಿನಗಲ್ಲಿ ಮನೋದುಃಖವೇಂ ನಿಮಿತ್ತದಿನಾದುದೆನೆ ಮೂಷಕನಿಂತೆಂದನಾ ಮುನ್ನಿನ ಭವದೊಳ್ ಗೊರವನಾಗಿ ಕಾಂಚೀಪುರದೊಳ್ ತಿರಿದು ಪಲವು ಕಾಲಂ ಬನ್ನಂಬಟ್ಟು ಪೊನ್ನಂ ಪಡೆದೇತರ್ಕಂ ಕುಡದೆ ಮಡಗಿದೊಡೆನ್ನ ಶಿಷ್ಯಂ ಬಿಟ್ಟಕಣ್ಣನೆಂಬಂ ಗೊರವಂ ನಿಮ್ಮಡಿ! ನಿಮಗೆ ಸಂಸಾರಂ ಸ್ವಸ್ಥಮಲ್ಲೀಯರ್ಥಮಂ ಮದಂಗಿ ನಿರರ್ಥಕಂ ಕಿಡದೆ ಈಶ್ವರಾಯತನಮಂ ಮಾಡಿಸಿಮಲ್ಲದಿರ್ದೊಡನಾಥಜನಕ್ಕೇನಾನುಮಂ ದಾನಂಗುಡಿಮೆಂದೊಡಾನಿಂತೆಂದೆಂ : ಎಂತಾನುಂ ಪಡೆದ ಧನಮನಸದ್ವ್ಯಯಂಗೆಯ್ದೊಡೆ ಬಡತನಮಕ್ಕುಂ. ಬೞಿಕ್ಕೇಗೆಯ್ವೆನೆಂದೊಡಾ ಗೊರವಂ ಮತ್ತಮಿಂತೆಂದಂ :

ಬಡತನವಾದಂದಿಂಗೆಂ-
ದೊಡವೆಗಳಂ ಮಡಗಬೇಡಡೆಂತೆನೆ ಪುಣ್ಯಂ
ಕಿಡೆ ಮಡಗಿದೊಡವೆ ಕಿಡುಗುಂ
ಕಿಡದಲ್ತೆ ಪರಾರ್ಥಮಾಗಿ ಕೊಟ್ಟವರರ್ಥಂ ೪೩೧

ಸಾಮಾನ್ಯನಲ್ಲ; ಏನುಹೇಳಿದೆ ; ಇಂದೂ ಹಿಂದೆಯೂ ಮಾತನ್ನು ಹುಡುಕಿದರೂ ಸಿಕ್ಕದು. ೪೩೦. ಇದು ಬರಿಯ ಪ್ರಾಣಿಯಲ್ಲ ಪರೀಕ್ಷಿಸಿದಲ್ಲಿ ಸ್ನೇಹಗುಣದಿಂದ ಕೂಡಿದವನು. ಚಿತ್ರಗ್ರೀವನನ್ನು ಸೆರೆಯಿಂದ ಬಿಡಿಸಿದವನು. ಈ ಹಿರಣ್ಯರೋಮನ ಗುಣವನ್ನು ಏನೆಂದು ಹೊಗಳುವೆನು ! ವ|| ಇಂತಹ ಮಹಾಪುರುಷನಾಗಿರುವುದರಿಂದಲೇ ನಾನು ಈತನಲ್ಲಿ ಮಿತ್ರತ್ವವನ್ನು ಪಡೆದೆನು. ಈಗ ನಿನ್ನಲ್ಲಿಗೆ ಬರುತ್ತಿರುವುದನ್ನು ಇವನಿಗೆ ಹೇಳಿದಾಗ ಇಲ್ಲಿ ಮನೋದುಃಖವು ಬಹಳವಾಗಿದೆ; ನನ್ನನ್ನೂ ನೀನು ಹೋಗುವಲ್ಲಿಗೆ ಕರೆದುಕೊಂಡು ಹೋಗು ಎನ್ನಲು ಇಲ್ಲಿಗೆ ತಂದೆನು ಎನ್ನಲು ಅದನ್ನೆಲ್ಲ ವಿವರವಾಗಿ ಕೇಳಿ ಮಂಥರನು ಹಿರಣ್ಯರೋಮನಿಗೆ ಹೀಗೆ ಹೇಳಿದನು: ನಿನಗೆ ಅಲ್ಲಿ ಯಾವುದರಿಂದ ಮನೋದುಃಖ ಉಂಟಾಯಿತು ಎನ್ನಲು ಮೂಷಕನು ಹೀಗೆಂದನು : ನಾನು ಹಿಂದಿನ ಜನ್ಮದಲ್ಲಿ ಸಂನ್ಯಾಸಿಯಾಗಿ ಕಾಂಚೀಪುರದಲ್ಲಿ ಭಿಕ್ಷಾಟನೆ ಮಾಡಿ ಹಲವು ಕಾಲ ಕಷ್ಟಪಟ್ಟು ಹೊನ್ನನ್ನು ಗಳಿಸಿ ಅದನ್ನು ಯಾವುದಕ್ಕೂ ವಿನಿಯೋಗಿಸದೆ ಬಚ್ಚಿಡಲು ನನ್ನ ಶಿಷ್ಯನಾಗಿದ್ದ ಬಿಟ್ಟಕಣ್ಣನೆಂಬ ಸಂನ್ಯಾಸಿಯು ಸ್ವಾಮೀ! ನಿಮಗೆ ಸಂಸಾರವು ಸುಖವಲ್ಲ. ಈ ಹೊನ್ನನ್ನು ಬಚ್ಚಿಟ್ಟು ವ್ಯರ್ಥಗೊಳಿಸದೆ ದೇವಾಲಯವನ್ನು ಕಟ್ಟಿಸಿರಿ ; ಅಲ್ಲದಿದ್ದರೆ ಅನಾಥಜನಕ್ಕೆ ಏನಾದರೂ ದಾನಮಾಡಿರಿ ಎನ್ನಲು ನಾನು ಹೀಗೆಂದೆನು : ಹೇಗಿದ್ದರೂ ಸಂಪಾದಿಸಿದ ಹೊನ್ನನ್ನು ಅಪವ್ಯಯಮಾಡಿದಲ್ಲಿ ಬಡತನವುಂಟಾಗುವುದು. ಬಳಿಕ ಏನು ಮಾಡಲಿ ಎನ್ನಲು ಆ ಸಂನ್ಯಾಸಿಯು ಮತ್ತೂ ಹೀಗೆಂದನು : ೪೩೧. ಬಡತನ ಬಂದಾಗ ಒಡವೆಗಳನ್ನು ಬಚ್ಚಿಡಬೇಡ. ಏಕೆಂದರೆ ಪುಣ್ಯವು ಹಿಂಗಲು ಬಚ್ಚಿಟ್ಟ ಒಡವೆ ನಾಶವಾಗುವುದು.

ಶ್ಲೋ॥ ಧರ್ಮಾರ್ಥಂ ಕ್ಷೀಣಕೋಶಸ್ಯ ಕೃಶತ್ವಮತಿಶೋಭತೇ
ಸುರೈಃ ಪೀತಾವಶೇಷಸ್ಯ ರೇಖಾ ಹಿಮರುಚೇರಿವ ॥೨೦೫॥

ಟೀ॥ ಧರ್ಮನಿಮಿತ್ತಮಾಗಿ ಧನಹೀನನಾದಾತಂಗೆ ಬಡತನವಾದೊಡಂ ಒಪ್ಪುವನು : ಅದೆಹಗೆಂದೊಡೆ ದೇವರ್ಕಳ್ ಪಾನಮಾಡಿ ಮಿಕ್ಕ ಚಂದ್ರನ ಕಳೆಯಹಗೆ ಎಂಬುದು ಯುಕ್ತಿಯುಂಟು. ಧನಮಂ ಧರ್ಮನಿಮಿತ್ತಮಿತ್ತೊಡಾ ಬಡತನಮುಂ ತಪದಿಂ ಕ್ಷಪಿಯಿಸಿದ ಶರೀರಮುಂ ಲೋಕದೊಳ್ ಭೂಷಣಮಲ್ಲದೆಲ್ಲಿಯುಮಿಲ್ಲಂ. ನೀವಿಂತು ಮೋಹಿತರಾದಂದು ಮೋಹಿತನಾದ ನರಿಯಂತಕ್ಕುಮೆಂಬುದುಮದೆಂತೆನೆ ಬಟ್ಟಕಣ್ಣನಿಂತೆಂದು ಪೇೞ್ಗುಂ :

೪. ಅತಿ ಲೋಭಿಯಾದ ನರಿಯ ಕಥೆ

ಒರ್ವ ವನಚರಂ ಮಹಾವನದೊಳ್ ವನದಂತಿಯಂ ಕಂಡ ನಿಮಿತ್ತಂ ಕೊಂದು ನಿಂದಿರ್ಪಿನಮೊಂದು ಮಹಾಹಿ ತೊಟ್ಟಗೆ ಬರೆ ಪುಲುವಟ್ಟೆಯೊಳ್ ತೊಲಗಲಿಂಬಿಲ್ಲದೆ ಬಿಲ್ಲಂ ಕೊಂಡು ವಿಷದೂಷಿತಮಪ್ಪಂಬಂ ತೊಟ್ಟಸುವುದುಂ ನಟ್ಟ ಕೋಲ್ವೆರಸೆಚ್ಚ ಬೇಡನಂ ಬೇಗದಿಂದಜಗರಂ ಕೊಲ್ವುದುಂ ತತ್ಕ್ಷಣದೊಳವನುಮಹಿಯುಮಲ್ಲಿಯೆ ಬಿರ್ದು ಸಾವುದುಂ ಮತ್ತಲ್ಲಿಗತಿಲೌಲ್ಯನೆಂಬುದೊಂದು ಜಂಬುಕಂ ಪಲವುಂ ದಿವಸಮಾಹಾರಂಬಡೆಯದೆ ಅಡವಿಯೊಳಾಹಾರಕ್ಕೆ ತೊಲಲುತ್ತೆ ಬಂದಾ ಶವತ್ರಯಮಂ ಕಂಡಾನಂದಮಯನಾಗಿ ಇಂದಿವನಿಂದೆ ತಿಂದೆನಾದೊಡೆ ಮತ್ತಂ ಪಸಿದು ಸಾವಂತಕ್ಕುಮದಲ್ಲದೆಯುಂ,

ಶ್ಲೋ॥ ಅನ್ಯಾಯವ್ಯಯಶೀಲಶ್ಚ ಹ್ಯನಾಥಕಲಹಪ್ರಿಯಃ
ಆತುರಸ್ಸರ್ವಭಕ್ಷೀ ಚ ನರಶ್ಶೀಘ್ರಂ ವಿನಶ್ಯತಿ ॥೨೦೬॥

ಬೇರೆಯವರಿಗೆ ಉಪಯೋಗಕ್ಕಾಗಿ ಕೊಟ್ಟವರ ಐಶ್ವರ್ಯವು ಕೆಡುವುದಿಲ್ಲವಲ್ಲವೇ. ಶ್ಲೋ॥ ಧರ್ಮಕ್ಕಾಗಿ ಬಡವನಾದವನಿಗೆ ಬಡತನ ಬಂದರೂ ಅವನು ಶೋಭಿಸುವನು. ಅದು ಹೇಗೆಂದರೆ ದೇವತೆಗಳು ಕುಡಿದು ಬಿಟ್ಟ ಬೆಳದಿಂಗಳಿನ ಹಾಗೆ ! ಎಂಬ ಯುಕ್ತಿಯುಂಟು. ವ॥ ಧನವನ್ನು ಧರ್ಮೋದ್ದೇಶಕ್ಕಾಗಿ ವಿನಿಯೋಗಿಸಿದಲ್ಲಿ ಬಡತನವೂ ತಪಸ್ಸಿನಿಂದ ಕಳೆದ ದೇಹವೂ ಲೋಕದಲ್ಲಿ ಭೂಷಣವಾಗುವುದಲ್ಲದೆ ಬೇರೆಯಿಲ್ಲ. ನೀವು ಹೀಗೆ ಮೋಹಿತರಾದಲ್ಲಿ ಮೋಹಿತವಾದ ನರಿಯ ಹಾಗೆ ಆಗುವುದು ಎನ್ನಲು ಅದೇನು ಎಂದು ಕೇಳಲು ಬಿಟ್ಟ ಕಣ್ಣನು ಹೀಗೆಂದನು : ಒಬ್ಬ ಬೇಡನು ಒಂದು ದೊಡ್ಡ ಕಾಡಿನಲ್ಲಿ ಕಾಡಾನೆಯನ್ನು ಕಂಡ ಕಾರಣ ಕೊಂದು ನಿಂತಿರಲು ಒಂದು ದೊಡ್ಡ ಸರ್ಪವು ಕೂಡಲೇ ಬರಲು ಹುಲ್ಲುದಾರಿಯಲ್ಲಿ ಹೋಗಲು ಎಡೆ ಇಲ್ಲದೆ ಬಿಲ್ಲನ್ನು ಕೊಂಡು ವಿಷದೂಷಿತವಾದ ಬಾಣವನ್ನು ಬಿಡಲು ನಟ್ಟ ಬಾಣಸಹಿತವಾಗಿ ಬೇಡನನ್ನು ಬೇಗನೆ ಸರ್ಪವು ಕೊಲ್ಲಲು ಆ ಕ್ಷಣದಲ್ಲಿ ಅವನೂ ಸರ್ಪವೂ ಅಲ್ಲಿಯೇ ಬಿದ್ದು ಸಾಯಲು ಅಲ್ಲಿಗೆ ಅತಿಲೌಲ್ಯನೆಂಬ ಒಂದು ನರಿಯು ಹಲವು ದಿವಸಗಳಿಂದ ಆಹಾರ ಕಾಣದೆ ಅಡವಿಯಲ್ಲಿ ಆಹಾರಕ್ಕಾಗಿ ತೊಳಲಾಡುತ್ತ ಬಂದಿತು. ಅಲ್ಲಿ ಆ ಮೂರು ಹೆಣಗಳನ್ನು ಕಂಡು ಆನಂದಮಯವಾಗಿ ಇವತ್ತೇ ಇವನ್ನು ತಿಂದೆನಾದರೆ ಬಳಿಕ ಹಸಿದು ಸಾಯುವಂತಾಗುವುದು. ಅದಲ್ಲದೆ, ಶ್ಲೋ॥ ಅಳತೆಯಿಲ್ಲದೆ ವ್ಯಯ ಮಾಡುವವನೂ ಸಹಾಯವಿಲ್ಲದೆ ಕಲಹಪ್ರಿಯನಾಗಿರುವವನೂ ಆತುರನಾಗಿ ಸರ್ವವನ್ನು ಭಕ್ಷಿಸುವವನೂ ಬೇಗನೆ ನಾಶವಾಗುವರು, ಎಂಬ

ಟೀ॥ ಆಯವಿಲ್ಲದೆ ಬೀಯವ ಮಾಡುವನುಂ ಸಹಾಯವಿಲ್ಲದೆ ಕಲಹಪ್ರಿಯನಾಗಿರುವನುಂ ಆತುರನಾಗಿ ಸರ್ವಮಂ ಭಕ್ಷಿಸುವನುಂ ಶೀಘ್ರವಾಗಿ ಕಿಡುವರ್ ಎಂಬೀ ನೀತಿಯುಂಟದುಮಲ್ಲದೆ, ವಾಕ್ಯಂ ॥ ಸಂಗ್ರಹೀ ನೋವಸೀದತಿ ಟೀ॥ ಕೂಡಿಟ್ಟವನು ಬದುಕಿಕೊಳ್ಳುವನು ಎಂಬ ಸುಭಾಷಿತಮುಂಟದಱಿಂದೆನಗೆ ಸಂಗ್ರಹಮಾಗಿರ್ಕುಮನ್ನೆಗಮೇನಾನುಮಂ ತಿಂಬೆನೆಂದು ಕೆಲನಂ ಶಬರಸಮೀಪದೊಳಿರ್ದ ಧನುವಂ ಕಂಡು.

ಶ್ಲೋ॥ ಷಣ್ಮಾಸಂ ತು ಭವೇನ್ನಾಗಃ ಚಾತುರ್ಮಾಸಂ ತು ಪನ್ನಗಃ
ದ್ವಿಮಾಸಂತು ನರಶ್ಚೈವ ಅದ್ಯಭಕ್ಷ್ಯೋ ಧನುರ್ಗುಣಃ ॥೨೦೭॥

ಟೀ॥ ಆನೆ ಆಱು ತಿಂಗಳ ಗ್ರಾಸ ಹೆಬ್ಬಾವು ನಾಲ್ಕು ತಿಂಗಳ ಗ್ರಾಸ ಮನುಷ್ಯನೆರಡು ತಿಂಗಳ ಗ್ರಾಸ ಈಗಿನ ವೇಳೆಗೆ ಬಿಲ್ಲಿನ ಹೆದೆಯೇ ಭಕ್ಷಿಸಲ್ತಕ್ಕುದು. ಅಂತು ಸಂವತ್ಸರಾಂತಗ್ರಾಸಮಂ ನೆಱೆದುಕೊಂಡಿರ್ಪೆನೆಂದು ಇಂದಿಂಗೀ ಬಿಲ್ಲ ಹೆದೆಯೆ ಸಾಲ್ಗುಮೆಂದುಮದಂ ಕಡಿವುದುಮದು ಪರಿಯಲೊಡಂ ಬಿಲ್ಲ ಕೊಪ್ಪು ತಾಳಿಗೆಯಂ ಚುರ್ಚಿ ನೆತ್ತಿಯೊಳ್ ಮೂಡುವುದುಮಾ ನರಿ ಬಿಱುವರಿದು ಸತ್ತುದು. ಅದಱಿಂದತಿಲೋಭಂ ಬೇಡೆಂದೆನಿತಾನುಂ ತೆಱದಿಂ ಬಿಟ್ಟಕಣ್ಣಂ ಬುದ್ಧಿವೇೞ್ದೊಡೆಂತುಂ ಕೈಕೊಳ್ಳದಾ ಪುರದ ಪೊಱವೊೞಲೊಳಗಿರ್ಪ ಮಠದೊಳ್ ಪೊನ್ನಂ ಪೂಣ್ಚಿ ಪಲವುಕಾಲಮಿರ್ದು ಕುತ್ತಂಬಟ್ಟಾರ್ತಧ್ಯಾನದಿಂ ಸತ್ತು ಹಿರಣ್ಯವರ್ಣದ ಮೂಷಕನಾಗಿ ಪುಟ್ಟಿ ಮತ್ತಂ ಪೊನ್ನಂ ಕಾದಿರ್ದೆನಿರ್ಪುದುಂ ಎನ್ನ ಶಿಷ್ಯಂ ಬಿಟ್ಟಕಣ್ಣಂ ಪೊನ್ನಿರ್ದೆಡೆಯನಱಿಯದೊಡಲಕುಟ್ಟುತ್ತುಂ ಮಠಮಂ ಪತ್ತುವಿಡದೆ ಪಿರಿಯದೊಂದು ಕರಕೆಯ ಕೂೞಂ ತಂದು ತಾನೊಂದು ಭಾಗಮನುಂಡು ಮಿಕ್ಕುದಂ ಭಿಕ್ಷಾಪಾತ್ರದೊಳ್ ಕಟ್ಟಿರ್ದುದನಾನುಂ ಪರಿಗ್ರಹಮುಮಾ ಕೂೞನನುದಿನಂ ತಿಂದು

ನೀತಿಯುಂಟು. ವಾ॥ ಅಲ್ಲದೆ 'ಸಂಗ್ರಹೀನೋವಸೀದತಿ' - ಕೂಡಿಟ್ಟವನು ಬಾಳುವನು - ಎಂಬ ಸುಭಾಷಿತವೂ ಉಂಟು. ಅದರಿಂದ ನನಗೆ ಸಂಗ್ರಹವಾಗಿದೆ ; ಯಾವಾಗ ಬೇಕಾದರೂ ಏನನ್ನಾದರೂ ತಿನ್ನುವೆನು ಎಂದು ಪಕ್ಕದಲ್ಲಿ ಬೇಡನ ಸಮೀಪದಲ್ಲಿದ್ದ ಬಿಲ್ಲನ್ನು ಕಂಡು, ಶ್ಲೋ॥ ಆನೆ ಆರುತಿಂಗಳ ಆಹಾರ, ಸರ್ಪವು ನಾಲ್ಕು ತಿಂಗಳ ಆಹಾರ, ಮನುಷ್ಯನು ಎರಡು ತಿಂಗಳ ಆಹಾರ. ಸದ್ಯಕ್ಕೆ ಇಲ್ಲಿಯ ಹೆದೆಯೇ ಆಹಾರ. ವ॥ ಹಾಗೆ ವರ್ಷವಿಡೀ ಬೇಕಾಗುವ ಆಹಾರವನ್ನು ತುಂಬಿಕೊಳ್ಳುವೆನೆಂದು ಇಂದಿಗೆ ಈ ಬಿಲ್ಲಿನ ಹೆದೆಯೇ ಸಾಕು ಎಂದು ಅದನ್ನು ಕಚ್ಚಲು ಅದು ಹರಿದುಹೋಗಲು ಬಿಲ್ಲಿನ ಕೊಪ್ಪು ಗಂಟಲನ್ನು ಚುಚ್ಚಿ ನೆತ್ತಿಯಲ್ಲಿ ಮೂಡಿ ಆ ನರಿ ನೋವಿನಿಂದ ಸತ್ತುಹೋಯಿತು. ಅದರಿಂದ ಅತಿಲೋಭವು ಬೇಡ ಎಂದು ಎಷ್ಟೋ ರೀತಿಯಿಂದ ಬಿಟ್ಟಕಣ್ಣನು ಬುದ್ಧಿ ಹೇಳಲು ಹೇಗೂ ಅದನ್ನು ತೆಗೆದುಕೊಳ್ಳದೆ ಆ ಪುರದ ಹೊರಭಾಗದಲ್ಲಿದ್ದ ಮಠದಲ್ಲಿ ಹೊನ್ನನ್ನು ಹೂತು ಹಲವು ಕಾಲದವರೆಗೆ ಇದ್ದು ರೋಗಗ್ರಸ್ತನಾಗಿ ಹಣದ ಚಿಂತೆಯಿಂದಲೇ ಸತ್ತು ಹಿರಣ್ಯವರ್ಣದ ಮೂಷಕನಾಗಿ ಹುಟ್ಟಿ ಮತ್ತೂ ಹೊನ್ನನ್ನು ಕಾದುಕೊಂಡಿದ್ದೆನು. ಆಗ ನನ್ನ ಶಿಷ್ಯನಾದ ಬಿಟ್ಟಕಣ್ಣನು ಹೊನ್ನು ಇದ್ದ ಎಡೆಯನ್ನು ತಿಳಿಯದೆ ದುಃಖಿಸುತ್ತ ಮಠವನ್ನು ಸೇರದ ದೊಡ್ಡದೊಂದು ಕಮಂಡಲದ ಅನ್ನವನ್ನು ತಂದು ತಾನೊಂದು ಭಾಗವನ್ನು ಉಂಡು ಉಳಿದುದನ್ನು ಭಿಕ್ಷಾಪಾತ್ರೆಯಲ್ಲಿ ಕಟ್ಟಿದುದನ್ನು ನಾನೂ ಪರಿವಾರವೂ ಅನುದಿನವೂ ತಿಂದು

ನಿಶ್ಚಿಂತಮಿರುತ್ತಿರೆ ಪಲವುಕಾಲಕ್ಕಲ್ಲಿಗೆ ಬೃಹಸ್ಪತಿಯೆಂಬ ಗೊರವಂ ಬರೆಬಿಟ್ಟಕಣ್ಣನಾತಂಗೆ ಪಟ್ಟಿರಲೆಡೆಗೊಟ್ಟು ಇರುಳಪ್ಪಾಗಳ್ ನಿಮ್ಮಡಿಗಳೆತ್ತಲ್ ಪೋಪಿರೆಂಬುದುಂ ಬೃಹಸ್ಪತಿ ವಾಚಸ್ಪತಿಯಂತೆ ಸಮಸ್ತತೀರ್ಥಪ್ರಭಾವಂಗಳಂ ಪೇೞುತ್ತಿರಲದಂ ಬಿಟ್ಟಕಣ್ಣಂ ಸಾವಧಾನವಾಗಿ ಕೇಳ್ದುದರ್ಕೆ ಚಿತ್ತಪಲ್ಲಟಮಾಗಿ ತನ್ನ ಮಡಗಿದ ಕೂೞಂ ನಾಂ ತಿಂಬುವನೆಂದು ಸುಯ್ಯುತ್ತಿರೆ ಬೃಹಸ್ಪತಿ ತನ್ನ ಮಾತುಗಳನಾತಂ ಕಿವುಂಡುಗೇಳ್ವುದುಮಾ ಗೊರವಂ ಬಿಟ್ಟಕಣ್ಣಂಗಿಂತೆಂದಂ :

ಶ್ಲೋ॥ ಅನಕ್ಷಿತಾ ಚ ಪ್ರಿಯಪೂರ್ವನಾಶನಂ ವಿವಾದನಂ ದುಶ್ಚರಿತಾನುಕೀರ್ತನಂ
ಕಥಾಪ್ರಸಂಗೋ ನ ಚ ನಾಮವಿಸ್ಮಯೋ ವಿರಕ್ತಭಾವಸ್ಯ ಜನಸ್ಯಲಕ್ಷಣಂ॥೨೦೮॥

ಟೀ॥ ನೋಡದೆಯಿರುಹವ್ವುಂ ಪ್ರೀತಿಪೂರ್ವಕವಪ್ಪುತಮುದ ಕಿಡಿಸುವಹವ್ವುಂ ವಿವಾದಮಂ ಮಾಡುಹವ್ವುಂ ನುಡಿಯದಿರುಹವ್ವುಂ ವಿಸ್ಮಯವಿಲ್ಲದಿರುಹವ್ವುಂ ಇಂತಿಹವ್ವು ಸ್ನೇಹವಿಲ್ಲದ ಜನದ ಲಕ್ಷಣವೆಂದಱಿವುದು - ಎಂಬುಕ್ತಿಯುಂಟು. ತೀರ್ಥಂಗಳ ಪೆಸರಂ ಪೇೞಿಮೆಂದು ಬೆಸಗೊಳ್ವುದೆತ್ತಲೀಗಳಾಂ ಪೇೞುತಿರ್ದೆಡೆಯೊಳುದಾಸೀನಂಗೆಯ್ದು ಹೂಂಕೊಳದಿರ್ಪ ಕಾರಣಮೇನೆನೆ ಬಿಟ್ಟಕಣ್ಣನಿಂತೆಂದಂ : ಆಂ ಮಾತಂ ಕೇಳದಿರ್ದೆನಲ್ಲೆನದೆಂತೆಂದೊಡೆ ಎನ್ನ ಭಿಕ್ಷದ ಕೂೞನೊಂದು ಮೂಷಕಂ ನಿಚ್ಚಲುಂ ಬಂದು ತಿಂದು ಕಾಡುತಿರ್ಪುದದಱ ಕಾಟಕ್ಕೆ ಮಠಮಂ ಬಿಟ್ಟು ಪೋಪ ಚಿತ್ತನಾಗಿ ಚಿಂತಿಸುತ್ತಿರ್ದೆನೆನೆ ಬೃಹಸ್ಪತಿ ನಕ್ಕು "ಕೆಱೆಗೆ ಮುನಿದು ಮಂಡೂಕಂ ಪೊಱಗಿರ್ದುದು" ಎಂಬಂತೆ ಇಲಿಯ ಕಾಟಕ್ಕಾಱದೆ ಮಠಮಂ ಬಿಸುಟು ಪೋಗಲೇಂ. ಒಂದು ಬೆಕ್ಕಂ ತಂದಿಟ್ಟೊಡದರ್ಕೆ ತಕ್ಕ ಪ್ರತೀಕಾರಮನದು ಮಾಳ್ಪುದೆಂದೊಡಾ ಮೂಷಕಂ ಬೆಕ್ಕಿಗಳವಲ್ತು ನೋಡೆ ಪೊನ್ನ ಬಣ್ಣದ

ನಿಶ್ಚಿಂತವಾಗಿರಲು ಅನೇಕ ಕಾಲದ ಮೇಲೆ ಅಲ್ಲಿಗೆ ಬೃಹಸ್ಪತಿ ಎಂಬ ಸಂನ್ಯಾಸಿಯು ಬರಲು ಬಿಟ್ಟಕಣ್ಣನು ಅವನಿಗೆ ಮಲಗಲು ಆಶ್ರಯ ಕೊಟ್ಟನು. ರಾತ್ರಿಯಾದಾಗ ಸ್ವಾಮಿ! ನೀವು ಎತ್ತ ಹೋಗುವಿರಿ ಎಂದು ಕೇಳಲು ಬೃಹಸ್ಪತಿಯು ವಾಚಸ್ಪತಿಯಂತೆ ಸಮಸ್ತ ತೀರ್ಥಕ್ಷೇತ್ರಗಳ ಪ್ರಭಾವಗಳನ್ನು ಹೇಳುತ್ತಿದ್ದನು. ಅದನ್ನು ಬಿಟ್ಟಕಣ್ಣನು ಸಾವಧಾನವಾಗಿ ಕೇಳಿದುದರಿಂದ ಚಿತ್ತಪಲ್ಲಟವಾಗಿ ತಾನು ಇಟ್ಟ ಅನ್ನವನ್ನು ನಾನು ತಿನ್ನುವುದನ್ನು ಕಂಡು ನಿಟ್ಟುಸಿರಿದಲು ಬೃಹಸ್ಪತಿಯು ತನ್ನ ಮಾತುಗಳನ್ನು ಲಕ್ಷಿಸದೆ ಇರಲು ಆ ಸಂನ್ಯಾಸಿಯು ಬಿಟ್ಟಕಣ್ಣನಿಗೆ ಹೀಗೆಂದನು : ಶ್ಲೋ॥ ನೋಡದೆ ಇರುವಿಕೆಯೂ ಪ್ರೀತಿಪೂರ್ವಕವಾದುದನ್ನು ಕೆಡಿಸುವುದೂ ಜಗಳಾಡುವುದೂ ಮಾತನಾಡದಿರುವುದೂ ವಿಸ್ಮಯ ಪಡದಿರುವುದೂ ಇವು ಸ್ನೇಹವಿಲ್ಲದ ಜನರ ಲಕ್ಷಣ ಎಂದು ತಿಳಿಯಬೇಕು ಎಂಬ ಉಕ್ತಿಯುಂಟು. ವ॥ ತೀರ್ಥಗಳ ಹೆಸರನ್ನು ಹೇಳಿ ಎಂದು ಕೇಳಿಕೊಳ್ಳುವುದೆತ್ತ, ಈಗ ನಾನು ಹೇಳುತ್ತಿರುವಾಗ ಉದಾಸೀನನಾಗಿ ಹೂಂಕೊಳ್ಳದಿರುವ ಕಾರಣವೇನು ಎನ್ನಲು ಬಿಟ್ಟಕಣ್ಣನು ಹೇಳಿದನು : ನಾನು ಮಾತನ್ನು ಕೇಳದೆ ಇರಲಿಲ್ಲ. ಹೇಗೆಂದರೆ ನನ್ನ ಭಿಕ್ಷೆಯ ಕಾಳನ್ನು ಒಂದು ಮೂಷಕವು ನಿತ್ಯವೂ ಬಂದು ತಿಂದು ಕಾಡುತ್ತಿತ್ತು ; ಅದರ ಕಾಟಕ್ಕೆ ಮಠವನ್ನು ಬಿಟ್ಟು ಹೋಗುವ ಮನಸ್ಸುಳ್ಳವನಾಗಿ ಚಿಂತಿಸುತ್ತಿದ್ದೆ. ಬೃಹಸ್ಪತಿಯು ನಕ್ಕು 'ಕೆರೆಗೆ ಮುನಿದು ಮಂಡೂಕವು ಹೊರಗಿದ್ದಿತು' ಎಂಬಂತೆ ಇಲಿಯ ಕಾಟಕ್ಕೆ ಮಠವನ್ನು ಬಿಟ್ಟುಹೋಗುವುದೇನು ! ಒಂದು ಬೆಕ್ಕನ್ನು ಸಾಕಲು ಅದಕ್ಕೆ ತಕ್ಕ ಪ್ರತೀಕಾರವನ್ನು ಅದು ಮಾಡುವುದು ಎನ್ನಲು, ಆ ಮೂಷಕವು ಬೆಕ್ಕಿಗೆ ಅಸಾಧ್ಯ. ನೋಡಲು ಚಿನ್ನದ ಬಣ್ಣದ ರೋಮವೂ ಗುರುಗುಂಜಿಯ ಬಣ್ಣದ

ಮೆಯ್ನವಿರುಂ ಗುರುಗುಂಜಿಯ ಬಣ್ಣದಂತಿರ್ಪ ಕಣ್ಣುಂ ಕೊಣಕೋಲಂತಪ್ಪ ಬಾಲಮುಂ ಬೆರಸು ಬಿಲದೊಳ್ ಪೊಕ್ಕು ಪುಲಿಯಂತೆ ಗರ್ಜಿಸುತ್ತುಮಿರ್ಪುದೇಗೆಯ್ವೆನೆಂದೊಡೆ ಬೃಹಸ್ಪತಿಯಿಂತೆಂದಂ : ಅಂತಪ್ಪೊಡದು ಕಪ್ಪೆಯ ಕಥೆಯಂತಾಗದಿರದೆನೆ ಬಿಟ್ಟಕಣ್ಣನದೆಂತೆನೆ ಬೃಹಸ್ಪತಿ ಪೇಳ್ಗುಂ :

೫. ಕಪ್ಪೆಯ ಕಥೆ

ಅವಂತಿದೇಶದೊಳ್ ಕಾಂಚೀಪುರವೆಂಬ ಪೊಳಲುಂಟದೆಂತೆನೆ,

ಕರಮೊಪ್ಪುವ ಪೂಗೊಳದಿಂ
ಪಿರಿದೊಪ್ಪುವ ದೇವಕುಳದಿನೆಸೆವಂಗಡಿಯಿಂ
ನೆರೆದೊಪ್ಪುವ ಜನಪಥದಿಂ
ಸುರಪುರದವೊಲಿರ್ಪ ಕಾಂಚಿಪುರವರಮೆಸೆಗುಂ ೪೩೨

ಮತ್ತಮಾ ಪುರಪ್ರಾಂತದೊಳ್,

ನೞಿದಿರ್ದೇರಿಯ ನೇರಿತಪ್ಪೆಡೆಗಳೊಳ್ ನೀರ್ಪಟ್ಟು ಶೋಭಾವಹ-
ಕ್ಕೆಱೆವಟ್ಟುಜ್ಜ್ವಲಮಪ್ಪ ದೇವಕುಳದಿಂದಚ್ಛಾಂಬುವಿಂದಂಬುಜ-
ಕೆಱಗುತ್ತಿರ್ಪಳಿಮಾಲೆಯಿಂ ಖಗಗಣೋದ್ಯಲ್ಲೀಲೆಯಿಂದೆತ್ತಮಾ
ಕೆಱೆ ರಯ್ಯಂ ನೞೆ ನೋೞ್ಪೊಡಾವ ತೆಱದಿಂ ಕಾಂಚೀಪುರೋಪಭಾಗದೊಳ್ ೪೩೩

ಅಂತೊಪ್ಪುವ ಕೆಱೆಯೊಳ್ ಪಲವುಂ ಕಪ್ಪೆಗಳ್ ಟರಟರೆಂಬ ಶಬ್ದದೊಳ್ ಕರೆಯುತ್ತ ಮಿರ್ಪುದುಮೊಂದು ಪಿರಿದಪ್ಪ ಕಲ್ಲನೇಱಿರ್ದಲ್ಲಿಂ ತೊಲಗದೆ ಟರಟರೆಂದು ಕರೆಯುತ್ತಿರ್ಪುದನೊರ್ವ ಪಾರ್ವಂ ಕೆಲವು ದಿವಸಂ ಕೇಳುತ್ತಮಿರ್ದುಮಿದೇನೆಂದು ವಿಸ್ಮಯಂಬಟ್ಟುಮದಂ ನೋಡಲೆಂದು

ಕಣ್ಣು ಕೊಣಕೋಲಿನ ಹಾಗೆ ಇರುವ ಬಾಲವೂ ಇದ್ದು ಬಿಲದೊಳಕ್ಕೆ ಹೋಗಿ ಹುಲಿಯಂತೆ ಗರ್ಜಿಸುತ್ತಲೂ ಇರುವುದು ಏನು ಮಾಡಲಿ ಎನ್ನಲು ಬೃಹಸ್ಪತಿಯು ಹೀಗೆಂದನು : ಹಾಗಾದರೆ ಅದು ಕಪ್ಪೆಯ ಕಥೆಯಂತೆ ಆಗದಿರದು ಎನ್ನಲು ಬಿಟ್ಟಕಣ್ಣನು ಅದೇನು ಎನ್ನಲು ಬೃಹಸ್ಪತಿಯು ಹೇಳಿದನು: ಅವಂತಿದೇಶದಲ್ಲಿ ಕಾಂಚೀಪುರವೆಂಬ ಪಟ್ಟಣವುಂಟು. ಅದು ಹೇಗಿರುವುದೆಂದರೆ, ೪೩೨. ಚೆನ್ನಾಗಿ ಶೋಭಿಸುವ ಹೂಗೊಳದಿಂದಲೂ ಅತಿಶಯವಾಗಿ ಶೋಭಿಸುವ ದೇವಾಲಯದಿಂದಲೂ ಶೋಭಿಸುವ ಅಂಗಡಿಗಳಿಂದಲೂ ತುಂಬಿ ಕಾಣುವ ಜನರ ಮಾರ್ಗಗಳಿಂದಲೂ ಸುರಪುರವೆಂಬಂತೆ ಕಾಂಚೀಪುರವು ಸೊಗಯಿಸುತ್ತಿತ್ತು. ವ|| ಆ ಪುರಪ್ರಾಂತದಲ್ಲಿ ೪೩೩. ಏರಿ ಏರಿಗಳಲ್ಲಿ ನೇರವಾಗಿ ತುಂಬಿದ್ದು ಅದರ ಸೌಂದರ್ಯವನ್ನು ಬಯಸಿ ಶೋಭಾಯಮಾನವಾದ ದೇವಾಲಯದಿಂದಲೂ ಸ್ವಚ್ಛಜಲದಿಂದಲೂ ತಾವರೆಗಳಿಗೆ ಎರಗುತ್ತಿರುವ ತುಂಬಿಗಳ ಹಿಂಡಿನಿಂದಲೂ ಆಟವಾಡುವ ಪಕ್ಷಿಸಮೂಹದಿಂದಲೂ ಆ ಕೆರೆಯು ಯಾವ ರೀತಿಯಿಂದ ನೋಡಿದರೂ ಕಾಂಚೀಪುರದಲ್ಲಿ ರಮ್ಯವಾಗಿತ್ತು. ವ|| ಆ ಕೆರೆಯಲ್ಲಿ ಹಲವು ಕಪ್ಪೆಗಳು ಟರಟರೆಂಬ ಶಬ್ದದಿಂದ ಕೂಗುತ್ತಿರಲು ಅದೊಂದು ಹಿರಿಯ ಕಲ್ಲನ್ನು ಏರಿ ಅಲ್ಲಿಂದ ತೊಲಗದೆ ಟರಟರೆಂದು ಕೂಗುತ್ತಿರುವುದನ್ನು ಒಬ್ಬ ಬ್ರಾಹ್ಮಣನು ಕೆಲವು ದಿವಸಗಳವರೆಗೆ ಕೇಳುತ್ತಿದ್ದು ಇದೇನೆಂದು ಆಶ್ಚರ್ಯಪಟ್ಟು ಅದನ್ನು ಕಾಣಬೇಕೆಂದು ಬರಲು ಆತನ ಆಗಮನವನ್ನು

ಬರ್ಪುದುಮಾತನ ಬರವಂ ಕಂಡು ಕೆಲದ ದರ್ದುರಂಗಳೆಲ್ಲಂ ಪರೆದೋಡೆಯವಱೊಳಗೊಂದು ಸ್ಥೂಲದರ್ದುರಂ ತನ್ನಿರ್ದೆಡೆಯಿಂದೇಗೆಯ್ದುಂ ಪೋಗದಿರಲಿದೇನಾನುಮೊಂದು ಚೋದ್ಯಮಾಗಲೆವೇೞ್ಕುಮೆಂದಾ ಪಾರ್ವನಾ ಕಪ್ಪೆಯ ಕಾಲಂ ಪಿಡಿದೀಡಾಡಿ ಕಳೆದು ಬೞಿಕ್ಕೆ ಕಲ್ಲಂ ನೂಂಕಿಯದಱ ಕೆಳಗಿರ್ದ ಪೊನ್ನಂ ಕೊಂಡು ಪೋದಂ. ಅದಱಿಂದೇನಾನುಮೊಂದು ಕಾರ್ಯಮಾಗಲೇವೇೞ್ಕುಮೆಂದಾ ಗೊರವರುಮೆನ್ನ ಮಡಗಿರ್ದ ಪೊನ್ನಂ ಕೊಂಡುಪೋದರ್. ಮತ್ತಮಾಯೆಡೆಯಂ ಪತ್ತುವಿಡಲಾಱದಲ್ಲಿಯೆ ಪರಿಭವಂಬಟ್ಟು ಚಿಂತಿಸುತಿರ್ದೆನ್ನಂ ಕಂಡೀತನೇತರ್ಕಂ ಕ್ಷಮನಲ್ಲವೆಂದೆನ್ನ ಪರಿಗ್ರಹಂ ಪರೆದು ಪೋದವು. ಆಂ ಬೞಿಕ್ಕೆ

ಶ್ಲೋ॥ ಅಜ್ಞಾತಂ ಜೀವಿತಂ ಶೂನ್ಯಂ ದೇಶಶ್ಶೂನ್ಯೋಹ್ಯಬಾಂಧವಃ
ಅಪುತ್ರಸ್ಯ ಗೃಹಂ ಶೂನ್ಯಂ ಸರ್ವಶೂನ್ಯಾ ದರಿದ್ರತಾ ॥೨೦೯॥

ಟೀ॥ ಅಱಿವಿಲ್ಲದೊಡೆ ಜೀವಿತವೂ ಬಂಧುಗಳಿಲ್ಲದ ದೇಶವೂ ಮಕ್ಕಳಿಲ್ಲದ ಮನೆಯೂ ಬಡತನವಾಗಿಹವೂ ಪ್ರಯೋಜನವಿಲ್ಲವೆಂದಱಿವುದು ಎಂಬ ಶ್ಲೋಕಾರ್ಥಮೆನ್ನೊಳ್ ಸನ್ನಿದಮಾಮದದುಕಾರಣದಿಂದರ್ಥಮಂ ಕೋಳ್ಪಟ್ಟು ಬಂದೆನೆಂದು ಪೇೞ್ವುದುಂ ಸುವರ್ಣರೋಮನ ಮಾತೆಲ್ಲಮಂ ಕಚ್ಛಪಂ ಕೇಳ್ದಿಂತೆಂದುದು :

ಪಡೆದುಣ್ಣದುಡದೆ ದಾನಂ
ಗುಡದತಿಲೋಭದೊಳಮೆಯ್ದೆ ಮನುಜರ್ ಧನಮಂ
ಮಡಗಿಟ್ಟು ಕೆಟ್ಟರಂ ಕೇ-
ಳ್ದೊಡವರ್ಗೇನೊಂದು ತೆಱದಿನದು ವಿಧಿವಿಹಿತಂ ೪೩೪

ಅದಱಿಂ ನಿನ್ನರ್ಥದೊಳಾದಱಲಂ ಪತ್ತುವಿಟ್ಟು ಪರಿಣಮಿಸಿರ್ಪುದದೆಂತೆನೆ :

ಶ್ಲೋ॥ ಉದಯೇ ಸವಿತಾ ರಕ್ತೋರಕ್ತಶ್ಚಾಸ್ತಮಯೇ ತಥಾ
ಸಂಪತ್ತೌ ಚ. ವಿಪತ್ತೌ ಚ ಮಹತಾಮೇಕರೂಪತಾ ॥೨೧೦॥

ಕಂಡು ಅಕ್ಕಪಕ್ಕದ ಕಪ್ಪೆಗಳೆಲ್ಲ ಚೆದರಿ ಓಡಿದುವು. ಅವುಗಳಲ್ಲಿ ಒಂದು ದಪ್ಪಕಪ್ಪೆಯು ತಾನಿದ್ದ ಸ್ಥಳದಿಂದ ಏನು ಮಾಡಿದರೂ ಹೋಗದಿರಲು ಇದರಲ್ಲೇನೋ ರಹಸ್ಯವಿರಬೇಕೆಂದು ಆ ಬ್ರಾಹ್ಮಣನು ಆ ಕಪ್ಪೆಯ ಕಾಲನ್ನು ಹಿಡಿದು ಬಿಸುಟು ಬಳಿಕ ಕಲ್ಲನ್ನು ನೂಕಿ ಅದರ ಕೆಳಭಾಗದಲ್ಲಿದ್ದ ಹೊನ್ನನ್ನು ಕೊಂಡುಹೋದನು. ಅದರಂತೆ ಏನೋ ಒಂದು ಕಾರ್ಯವಿರಲೇಬೇಕು ಎಂದು ಆ ಸಂನ್ಯಾಸಿಗಳೂ ನಾನಿಟ್ಟ ಹೊನ್ನನ್ನು ಕೊಂಡುಹೋದರು. ಮತ್ತೂ ಆ ಸ್ಥಳವನ್ನು ಬಿಡಲಾರದೆ ಅಲ್ಲಿಯೇ ಸೋತು ಚಿಂತಿಸುತ್ತಿದ್ದ ನನ್ನನ್ನು ಕಂಡು ಈತನು ಯಾವುದಕ್ಕೂ ಶಕ್ತನಲ್ಲ ಎಂದು ನನ್ನ ಪರಿವಾರವೆಲ್ಲ ಚೆದರಿ ಹೋದುವು. ನಾನು ಬಳಿಕ ಶ್ಲೋ॥ ತಿಳಿವಳಿಕೆ ಇಲ್ಲದ ಜೀವನವೂ ಬಂಧುಗಳಿಲ್ಲದ ದೇಶವೂ ಮಕ್ಕಳಿಲ್ಲದ ಮನೆಯೂ ಬಡತನವೂ ಪ್ರಯೋಜನವಿಲ್ಲ ಎಂದು ತಿಳಿಯಬೇಕು ಎಂಬ ಶ್ಲೋಕಾರ್ಥವು ನನ್ನಲ್ಲಿ ಸಮೀಪವಾಯಿತು. ವ॥ ಅದರಿಂದ ಹಣವನ್ನು ಒಪ್ಪಿಸಿ ಬಂದೆ ಎಂದು ಹೇಳಲು ಸುವರ್ಣರೋಮನ ಮಾತೆಲ್ಲವನ್ನೂ ಆಮೆಯು ಕೇಳಿ ಹೀಗೆಂದಿತು: ೪೩೪. ಸಾಕಷ್ಟಿದ್ದೂ ಉಣ್ಣದೆ ಉಡದೆ ದಾನಮಾಡದೆ ಅತಿಲೋಭದಿಂದ ಮನುಷ್ಯರು ಧನವನ್ನು ಬಚ್ಚಿಟ್ಟು ಕೆಟ್ಟುಹೋದವರನ್ನು ಕೇಳಿದರೆ ಅವರಿಗೆ ಒಂದಲ್ಲ ಒಂದು ರೀತಿಯಿಂದ ಅದು ವಿಧಿವಿಹಿತವಾಗಿದೆ. ವ॥ ಅದರಿಂದ ನಿನ್ನ ಹೊನ್ನಿನಿಂದ ಆದ ದುಃಖವನ್ನು ದೂರಮಾಡಿ ಇರು ; ಹೇಗೆಂದರೆ, ಶ್ಲೋ॥ ಮಹಾಪುರುಷರು ಸಂಪತ್ತನ್ನೂ ವಿಪತ್ತನ್ನೂ

ಟೀ॥ ಮಹಾಪುರುಷರ್ ಸಂಪತ್ತನೂ ವಿಪತ್ತನೂ ಸಮನಾಗಿ ಕಾಣ್ಬರ್, ಅದು ಹೇಗೆಂದೊಡೆ ಸೂರ್ಯನು ಉದಯಾಸ್ತಮಯ ಕಾಲದಲ್ಲಿ ಒಂದೇ ಮರ್ಯಾದೆ ಕೆಂಪು ಕುಂದದ ಹಾಂಗೆ ಎಂದಱಿವುದೆಂದುಮದಲ್ಲದೆಯುಂ,

ಶ್ಲೋ॥ ಮೃತಂ ವಾ ಯದಿ ವಾ ನಷ್ಟಂ ಯೋತೀತಮನುಶೋಚತಿ
ದುಃಖಾದ್ದುಃಖಮವಾಪ್ನೋತಿ ದ್ವಾವನರ್ಥೌ ಪ್ರಪದ್ಯತೇ ॥೨೧೧॥

ಟೀ॥ ಆವನಾನೋರ್ವಂ ಮುನ್ನ ಸತ್ತವರನಾದೊಡಂ ಮುನ್ನ ಕೆಟ್ಟವರನಾದೊಡಂ ಶೋಕಿಸಿಹನು ಅವನು ಮರಳಿ ದುಃಖವನೆಯ್ದುವನು ಆತಂಗೆಂದುಂ ಸುಖವಿಲ್ಲ, ಎಂಬೀ ಶ್ಲೋಕಾರ್ಥಮಂ ಬಗೆವುದು. ಮತ್ತಂ ಪರಿಗ್ರಹಮುಂ ಪತ್ತುವಿಟ್ಟು ಪೋಪುದುಮದೆಲ್ಲಿಯುಮುಂಟದೆಂತೆನೆ :

ಶ್ಲೋ॥ ವೃಕ್ಷಂ ಕ್ಷೀಣಫಲಂ ತ್ಯಜಂತಿ ವಿಹಗಾ ದಗ್ಧಂವನಂ ಶ್ವಾಪದಾಃ
ಮಾಲಾಂ ಪರ್ಯುಷಿತಾಂ ತ್ಯಜಂತ್ಯಳಿಗಣಾಃ ಶುಷ್ಕಂ ಸರಸ್ಸಾರಸಾಃ
ನಿರ್ದ್ರವ್ಯಂ ಪುರುಷಂ ತ್ಯಜಂತಿ ಗಣಿಕಾಃ ದುಷ್ಟಂ ನೃಪಂ ಮಂತ್ರಿಣಃ
ಸರ್ವಃ ಕಾರ್ಯವಶಾಜ್ಜನೋನುರಮತೇ ಕಃ ಕಸ್ಯ ಕೋ ವಲ್ಲಭಃ ॥೨೧೨॥

ಟೀ॥ ಫಲಹೀನಮಾದ ವೃಕ್ಷಮನು ಪಕ್ಕಿಗಳ್ ಬಿಡುವುವು. ಬೆಂದಡವಿಯನು ಮೃಗಂಗಳ್ ಬಿಡುವುವು. ಬಾಡಿದ ಪುಷ್ಪಂಗಳನು ತುಂಬಿಗಳ್ ಬಿಡುವುವು. ಬತ್ತಿದ ಕೆಱೆಯನು ಹಂಸೆಗಳ್ ಬಿಡುವುವು. ಧನಮಿಲ್ಲದ ಪುರುಷನನು ಗಣಿಕೆಯರು ಬಿಡುವರು. ದುಷ್ಟನಹ ಒಡೆಯನನು ಮಂತ್ರಿಗಳ್ ಬಿಡುವರು. ಎಲ್ಲರೂ ಕಾರ್ಯವಶದಿಂದಹರಲ್ಲದ ಆರಿಗಾರೂ ಪ್ರಿಯರಲ್ಲ, ಎಂಬೀ ಶ್ಲೋಕಾರ್ಥದಂತೆ ಸ್ವಾರ್ಥಪರರಲ್ಲದೆ ಪರಾರ್ಥಪರರಾರುಮಿಲ್ಲ, ಆವ ಜೀವಕ್ಕಮಾಪತ್ತಿನೊಳ್ ತನಗೆ ತಾನಲ್ಲದೆ ಆರುಮಿಲ್ಲೆಂಬುದು ನಿಶ್ಚಯಮೆಂದಱಿವುದು. ಅದಂತಿರ್ಕೆ ನೀಂ ನಿನ್ನ ನೆಲೆಯಂ ಪತ್ತುವಿಟ್ಟು ಬಂದೆನೆಂಬುಬ್ಬೇಗಂ ಬೇಡದಂತೆನೆ :

ಸಮಾನವಾಗಿ ಕಾಣುವರು. ಹೇಗೆಂದರೆ, ಸೂರ್ಯನು ಉದಯಾಸ್ತಮಾನ ಕಾಲಗಳಲ್ಲಿ ಒಂದೇ ರೀತಿಯಲ್ಲಿ ಕೆಂಪು ಕುಂದದ ಹಾಗೆ ಇರುತ್ತಾನೆ ಎಂದ ತಿಳಿಯಬೇಕು. ಅಲ್ಲದೆ, ಶ್ಲೋ॥ ಯಾರಾದರೂ ಹಿಂದೆ ಸತ್ತವರಿಗಾಗಿಯೂ ಹಿಂದೆ ಕೆಟ್ಟವರಿಗಾಗಿಯೂ ಅಳುವವನು ಪುನಃ ದುಃಖಿತನಾಗುವನು. ಆತನಿಗೆ ಎಂದೆಂದಿಗೂ ಸುಖವಿಲ್ಲ ಎಂಬ ಶ್ಲೋಕಾರ್ಥವನ್ನು ಭಾವಿಸು. ಮತ್ತೆ ಪರಿವಾರವೆಲ್ಲ ಬಿಟ್ಟುಹೋಗುವುದು ಎಲ್ಲ ಕಡೆಯಲ್ಲಿಯೂ ಉಂಟು. ಹೇಗೆಂದರೆ, ಶ್ಲೋ॥ ಫಲಹೀನವಾದ ವೃಕ್ಷವನ್ನು ಪಕ್ಷಿಗಳು ಬಿಡುವುವು. ಬೆಂದ ಅಡವಿಯನ್ನು ಮೃಗಗಳು ಬಿಡುವುವು. ಬಾಡಿದ ಪುಷ್ಪಗಳನ್ನು ತುಂಬಿಗಳು ಬಿಡುವುವು. ಬತ್ತಿದ ಕೆರೆಯನ್ನು ಹಂಸಗಳು ಬಿಡುವುವು. ಧನವಿಲ್ಲದ ಪುರುಷನನ್ನು ಗಣಿಕೆಯರು ಬಿಡುವರು. ದುಷ್ಟನಾದ ಒಡೆಯನನ್ನು ಮಂತ್ರಿಗಳು ಬಿಡುವರು. ಎಲ್ಲರೂ ಕಾರ್ಯವಶರಾಗಿ ಇದ್ದಾರಲ್ಲದೆ ಯಾರಿಗೂ ಯಾರೂ ಪ್ರಿಯರಲ್ಲ ಎಂಬ ಈ ಶ್ಲೋಕಾರ್ಥದಂತೆ ಸ್ವಾರ್ಥಪರರಲ್ಲದೆ ಪರಾರ್ಥಪರರು ಯಾರೂ ಇಲ್ಲ. ವ॥ ಯಾವ ಜೀವಕ್ಕಾದರೂ ಆಪತ್ತಿನಲ್ಲಿ ತನಗೆ ತಾನೇ ಅಲ್ಲದೆ ಯಾರೂ ಇರುವುದಿಲ್ಲ, ಇದು ನಿಶ್ಚಯ ಎಂದು ತಿಳಿಯಬೇಕು. ಅದು ಹಾಗಿರಲಿ ನೀನು ನಿನ್ನ

ಶ್ಲೋ॥ ಕೋತಿ ಭಾರಸ್ಸಮರ್ಥಾನಾಂ ಕಿಂ ದೂರಂ ವ್ಯವಸಾಯಿನಾಂ
ಕೋ ವಿದೇಶಸ್ಸಮರ್ಥಾನಾಂ ಕಃ ಪರಃ ಪ್ರಿಯವಾದಿನಾಂ ॥೨೧೩॥

ಟೀ॥ ಸಮರ್ಥನಪ್ಪ ಪುರುಷಂಗೆ ಆವುದೂ ಅರಿದಲ್ಲ, ವ್ಯವಸಾಯಶೀಲಂಗೆ ದೂರಮೆಂಬುದಿಲ್ಲ. ವಿದ್ವಾಂಸರಿಗೆಲ್ಲಾ ದೇಶವು ತನ್ನಮ. ಪ್ರಿಯವ ನುಡಿಯ ಬಲ್ಲವಂಗೆ ಎಲ್ಲವರೂ ತನ್ನವರು ಎಂಬುಕ್ತಿಗಳೊಳವು. ಆದಱಿಂ ಲಘುಪತನಕನೊಡನಿಲ್ಲಿಗೆ ಬಂದು ಕರಮೊಳ್ಳಿತ್ತುಗೆಯ್ದೆ, ನಾವೆಲ್ಲಮೊಂದೆಡೆಯೊಳಿರೆ ತೀರದುದಿಲ್ಲ, ನಿಶ್ಚಿಂತಮಿರೆಂದು ಕೂರ್ಮಂ ಕೂರ್ಮೆಯಪ್ಪ ಮಾತುಗಳಂ ನುಡಿದು ಹಿರಣ್ಯರೋಮನ ಮನದೊಳಾದ ವಿಷಾದಮಂ ಕಳೆಯೆ ವಾಯಸನದರ್ಕೆ ಸಂತಸಂಬಟ್ಟು ಬಳಿಕ್ಕೆ ಕಚ್ಛಪಮೂಷಕ ಕಾಕಂಗಳೊಂದಾಗಿ ಪಲಕಾಲಂ ಸುಖದಿನಿರ್ದೊಂದು ದಿವಸಮಾ ಮಿತ್ರತ್ರಯಂ ಮಡುವಿನ ತಡಿಯೊಳೇನಾನುಮಂ ನುಡಿಯುತ್ತಿರ್ಪಿನಂ ಅಲ್ಲಿಗೆ ಚಿತ್ರಾಂಗನೆಂಬ ಸಾರಂಗಂ ಭೋರೆನೆ ಬಂದು ನೀರಂ ಕುಡಿಯಲಣ್ಮದೆ ಪೆಮ್ಪಳಿಸಿ ಪಿಱಗಂ ನೋಡಿ ನಡುಗುತ್ತುಂ ನಿಂದುದಂ ಕಚ್ಛಪಾದಿಗಳ್ ಕಂಡುಮಿದೇಂ ಕಾರಣಮೆಂದು ತಮ್ಮೊಳ್ ನುಡಿವಲ್ಲಿ ವಾಯಸನದಱ ಚೇಷ್ಟೆಯನಱಿದಾರಾನುಮಂ ಕಾಣದೆ ಬಳಿಕ್ಕಂ ಸಾರಂಗಕ್ಕೆಂದುದೇಂ ಗಡಾ! ನೀನಿಂತೇಕೆ ಭಯಾಕುಲನಾಗಿರ್ಪೆ ಎನೆ ಚಿತ್ರಾಂಗನಿಂತೆಂದಂ: ಇಂದು ನೇಸರ್ಮೂಡುವ್ವಮಂ ಬೇಡರೆನ್ನಂ ತಗುಳ್ದು ಬೆನ್ನಂಬಿಡದಟ್ಟುತ್ತುಂ ಬರೆ ಬಱಲ್ದು ನೀರ್ಗಾಸೆವಟ್ಟು ಬಂದೆನೆಂದು ಪೇಳ್ವುದುಮದೆಲ್ಲಮಂ ಕೇಳ್ದು ಕಾಕನಿಲ್ಲಿ ಭಯಮಿಲ್ಲ ನೀನಿಲ್ಲಿ ನಿರಾಕುಳಂ ನೀರ್ಗುಡಿಯೆನೆ ಸಾರಂಗಂ ನೀರಂ ಕುಡಿದು ಬಳಿಕ್ಕವಱ ಸಮೀಪಕ್ಕೆ ಬಂದಿಂತೆಂದುದು :

ಸ್ಥಳವನ್ನು ಬಿಟ್ಟು ಬಂದೆ ಎಂಬ ಉದ್ವೇಗ ಬೇಡ. ಹೇಗೆಂದರೆ, ಶ್ಲೋ॥ ಸಮರ್ಥನಾದ ಪುರುಷನಿಗೆ ಯಾವುದೂ ಅಸಾಧ್ಯವಲ್ಲ. ವ್ಯವಸಾಯಶೂರನಾದವನಿಗೆ ದೂರವೆಂಬುದಿಲ್ಲ. ವಿದ್ವಾಂಸರಾದವರಿಗೆ ಎಲ್ಲ ದೇಶವೂ ತನ್ನದು. ಪ್ರಿಯವನ್ನು ನುಡಿಯಬಲ್ಲವನಿಗೆ ಎಲ್ಲರೂ ತನ್ನವರು ಎಂಬ ಉಕ್ತಿಗಳುಂಟು. ವ॥ ಆದರಿಂದ ಲಘುಪತನಕನೊಡನೆ ಇಲ್ಲಿಗೆ ಬಂದು ಬಹಳ ಒಳ್ಳೆಯದನ್ನು ಮಾಡಿದೆ. ನಾವೆಲ್ಲರೂ ಒಂದು ಕಡೆಯಲ್ಲಿರಲು ಸಾಧ್ಯವಾಗದುದು ಯಾವುದೂ ಇಲ್ಲ, ನಿಶ್ಚಿಂತವಾಗಿರು ಎಂದು ಆಮೆಯು ಪ್ರಿಯವಾದ ಮಾತುಗಳನ್ನು ಹೇಳಿ ಹಿರಣ್ಯರೋಮನ ಮನಸ್ಸಿನಲ್ಲಾದ ದುಃಖವನ್ನು ನಿವಾರಿಸಿತು. ಅದಕ್ಕೆ ಕಾಗೆಯು ಸಂತೋಷಪಟ್ಟಿತು. ಬಳಿಕ ಆ ಆಮೆಯೂ ಕಾಗೆಯೂ ಮೂಷಕನೂ ಒಟ್ಟಿಗೆ ಅನೇಕ ಕಾಲ ಸುಖದಿಂದ ಇರುತ್ತಿರಲು ಒಂದು ದಿವಸ ಆ ಮೂವರು ಗೆಳೆಯರು ಮಡುವಿನ ದಡದಲ್ಲಿ ಏನೋ ಮಾತನಾಡುತ್ತಿರಲು ಅಲ್ಲಿಗೆ ಚಿತ್ರಾಂಗನೆಂಬ ಸಾರಂಗವು ಇದ್ದಕ್ಕಿದ್ದಂತೆ ಬಂದು ನೀರನ್ನು ಕುಡಿಯಲಾಗದೆ ಗಾಬರಿಯಿಂದ ಹಿಂದಕ್ಕೆ ನೋಡಿ ನಡುಗುತ್ತ ನಿಂತಿರುವುದನ್ನು ಆಮೆ ಮೊದಲಾದವು ನೋಡಿ ಇದೇನು ಕಾರಣವಿರಬಹುದು ಎಂದು ಮಾತನಾಡಿಕೊಳ್ಳಲು ಕಾಗೆಯು ಅದರ ಚೇಷ್ಟೆಯನ್ನು ತಿಳಿದು ಯಾರೋ ಬೆನ್ನಟ್ಟಿ ಬರಲು ಭಯಗ್ರಸ್ತನಾಗಿರಬೇಕು ಎಂದಿತು. ಅಲ್ಲಿಂದ ಹೋಗಿ ನಾಲ್ಕು ದಿಕ್ಕುಗಳನ್ನೂ ವಿಚಾರಿಸಿ ಬಂದು ಯಾರನ್ನೂ ಕಾಣದೆ ಬಳಿಕ ಸಾರಂಗಕ್ಕೆ ಹೇಳಿತು : ಏನಯ್ಯಾ ! ಇಂದು ನೀನೇಕೆ ಭಯಗ್ರಸ್ತನಾಗಿರುವೆ ? ಆಗ ಚಿತ್ರಾಂಗನು ನುಡಿದನು : ಇಂದು ಬೆಳಗಾಗಲು ಬೇಡರು ನನ್ನನ್ನು ಬೆನ್ನಟ್ಟಿ ಬರಲು ಬಳಲಿ ನೀರು ಕುಡಿಯಬೇಕೆಂಬ ಆಸೆಯಿಂದ ಬಂದೆನು. ಆಗ ಕಾಗೆಯು ಇಲ್ಲಿ ಭಯವಿಲ್ಲ ; ನೀನು ಇಲ್ಲಿ ನಿಶ್ಚಿಂತೆಯಿಂದ ನೀರು ಕುಡಿ ಎನ್ನಲು ಸಾರಂಗವು

ಶ್ಲೋ॥ ಜನಿತಾ ಚೋಪನೇತಾ ಚ ಯಶ್ಚ ವಿದ್ಯಾಂ ಪ್ರಯಚ್ಛತಿ
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥೨೧೪॥

ಟೀ॥ ಪುಟ್ಟಿಸಿದವನುಂ ಉಪನಯನವ ಮಾಡಿದವನುಂ ವಿದ್ಯೆಯನಱಿಪಿದವನುಂ ಅನ್ನವನಿಕ್ಕಿದವನುಂ ಭಯದಲ್ಲಿ ರಕ್ಷಿಸಿದವನುಂ ಇಂತೈವರುಂ ತಂದೆಗಳೆಂದಱಿವುದು ಎಂಬೀ ನೀತಿ ಶಾಸ್ತ್ರಾರ್ಥಮುಂಟು. ನೀಮೆನಗೆ ನಯಮಂ ನುಡಿದು ಭಯಮಂ ಕಳೆದೆನಗೆ ನೀವೇ ಗುರುಸ್ಥಾನಮುಂ ಪರಮಮಿತ್ರರುಮಾಗಿರ್ದಿರ್. ನಿಮ್ಮನಗಲ್ದು ಪೋಗೆನೆಂಬುದುಂ ಕಾಕ ಮೂಷಕ ಕಚ್ಛಪಂಗಳಾ ಲೋಚನಂಗೆಯ್ದು ಬಳಿಕ್ಕಿಂತೆಂದವು :

ಶ್ಲೋ॥ ದಾರ ಸಂಪತ್ತಿ ಸಂಬದ್ಧೌ ತಥಾ ವಂಶಕ್ರಮಾಗತಃ
ರಕ್ಷಿತೋ ವ್ಯಸನೇಭ್ಯಸ್ತ್ವ ಮಿತ್ರಂ ಜ್ಞೇಯಂ ಚತುರ್ವಿಧಂ ॥೨೧೫॥

ಟೀ॥ ಪೆಂಡತಿಯ ಸೊಮ್ಮಿನವನುಂ ಐಶ್ವರ್ಯದ ಪೊದ್ದಿಗೆಯವನುಂ ಪೂರ್ವತೊಡಗಿ ಬಂದವನುಂ ವ್ಯಸನದಲ್ಲಿ ರಕ್ಷಿಸಿದವನುಂ ಇಂತೀ ನಾಲ್ವರುಂ ಮಿತ್ರರೆಂದಱಿವುದು ಎಂಬ ನೀತಿ ಶಾಸ್ತ್ರಾಭಿಪ್ರಾಯದೊಳೀತಂ ವ್ಯಸನದೆಡೆಯೊಳ್ ರಕ್ಷಿಸಿಕೊಳಲ್ಪಟ್ಟನಪ್ಪುದಱಿಂ ಮಿತ್ರತ್ವಕ್ಕೆ ತಕ್ಕುದು, ಸಾಧುಮೃಗಂ ಯೋಗ್ಯಸ್ಥಾನಮೆಂದು ಮಿತ್ರತ್ವಮಂ ಮಾಡಿ ಮಿತ್ರಚತುಷ್ಟಯಂ ಕೆಲವು ಕಾಲಂ ಸುಖದೊಳಿರ್ದೊಂದು ದಿವಸಂ ಚಿತ್ರಾಂಗನಾಹಾರಾರ್ಥಮಡವಿಯೊಳ್ ಪೋಗಿ ತೊಳಲುತ್ತುಂ ವ್ಯಾಧರೊಡ್ಡಿದ ಬಲೆಯೊಳ್ ಸಿಲ್ಕಿರ್ದುದಂ ಲಘುಪತನಕಂ ಕಂಡು ಕಚ್ಛಪ ಹಿರಣ್ಯರೋಮಂಗಳ್ಗೆ ಅಱಿಪಿದೊಡವೆರಡುಂ ಕಾಗೆಯ ಪಿಂತನೆ ಬೇಗಂ ಬಂದು ಪಾಶಬದ್ಧನಾಗಿರ್ದ ಚಿತ್ರಾಂಗನಂ ಕಂಡಿಂತೆಂದವು: ನೀನಪ್ಪೊಡೆ ಬುದ್ಧಿವಂತಂ, ಇಂತಪ್ಪೆಡೆಗೆಂತು ಬಂದು ಸಿಲ್ಕಿದೆಯೆಂದೊಡೆ ಚಿತ್ರಾಂಗನಿಂತೆಂದಂ :

ನೀರನ್ನು ಕುಡಿದು ಬಳಿಕ ಅದರ ಸಮೀಪಕ್ಕೆ ಬಂದು ಹೀಗೆಂದಿತು ; ಹುಟ್ಟಿಸಿದವನೂ ಉಪನಯನವನ್ನು ಮಾಡಿದವನೂ ವಿದ್ಯೆಯನ್ನು ತಿಳಿಸಿದವನೂ ಅನ್ನಹಾಕಿದವನೂ ಭಯದಲ್ಲಿ ರಕ್ಷಿಸಿದವನೂ ಈ ಐವರೂ ತಂದೆ ಎಂದ ಭಾವಿಸಬೇಕು ಎಂಬ ನೀತಿಶಾಸ್ತ್ರವಿದೆ. ವ॥ ನೀವು ನನಗೆ ನೀತಿಯನ್ನು ಹೇಳಿ ಭಯವನ್ನು ಪರಹರಿಸಿದುದರಿಂದ ನೀವೇ ನನ್ನ ಗುರುವೂ ಪರಿಮಮಿತ್ರರೂ ಆಗಿರುವಿರಿ. ನಿಮ್ಮನ್ನು ಬಿಟ್ಟು ಹೋಗಲಾರೆ ಎನ್ನಲು ಕಾಗೆ ಇಲಿ ಆಮೆಗಳು ಆಲೋಚಿಸಿ ಹೀಗೆಂದುವು: ಶ್ಲೋ॥ ಹೆಂಡತಿಯ ಸಂಬಂಧದವನೂ, ಐಶ್ವರ್ಯವಂತನೂ, ಪೂರ್ವದಿಂದ ಬಂದವನೂ ದುಃಖದಲ್ಲಿ ರಕ್ಷಿಸಿದವನೂ ಈ ನಾಲ್ವರೂ ಮಿತ್ರರೆಂದು ತಿಳಿಯಬೇಕು ಎಂಬ ನೀತಿಶಾಸ್ತ್ರದ ಅಭಿಪ್ರಾಯ ಪ್ರಕಾರ ಆಪತ್ತಿನಲ್ಲಿ ರಕ್ಷಿತನಾದುದರಿಂದ ಮಿತ್ರತ್ವಕ್ಕೆ ಯೋಗ್ಯನು. ವ॥ ಸಾಧುಪ್ರಾಣಿಯು ಯೋಗ್ಯಸ್ಥಾನವೆಂದು ಗೆಳೆತನವನ್ನು ಮಾಡಿ ನಾಲ್ವರು ಗೆಳೆಯರೂ ಕೆಲವು ಕಾಲ ಸುಖವಾಗಿದ್ದುವು. ಒಂದು ದಿವಸ ಚಿತ್ರಾಂಗನು ಆಹಾರಕ್ಕಾಗಿ ಅಡವಿಗೆ ಹೋಗಿ ಸಂಚರಿಸುತ್ತಿರಲು ಬೇಡರೊಡ್ಡಿದ ಬಲೆಯಲ್ಲಿ ಸಿಕ್ಕಿದುದನ್ನು ಲಘುಪತನಕನು ಕಂಡು ಆಮೆ ಹಿರಣ್ಯರೋಮಗಳಿಗೆ ತಿಳಿಸಲು ಅವೆರಡೂ ಕಾಗೆಯ ಹಿಂದೆಯೇ ಬೇಗನೆ ಬಂದು ಪಾಶಕ್ಕೆ ಸಿಕ್ಕಿದ್ದ ಚಿತ್ರಾಂಗನನ್ನು ಕಂಡು ಹೀಗೆಂದುವು ; ನೀನಾದರೋ ಬುದ್ಧಿವಂತ. ಇಂತಹ ಕಡೆಗೆ ಹೇಗೆ ಬಂದು ಸಿಲುಕಿಕೊಂಡೆ ಎನ್ನಲು ಚಿತ್ರಾಂಗನು ಹೇಳಿದನು : ಶ್ಲೋ॥ ರಾವಣನು ಸೀತೆಯನ್ನು ಒಯ್ಯುವಾಗ

ಶ್ಲೋ॥ ಪೌಲಸ್ತ್ಯಃ ಕಥಮನ್ಯದಾರಹರಣೇ ದೋಷಂ ನ ವಿಜ್ಞಾತವಾನ್
ಕಾಕುತ್ಸ್ಥೇನ ಹೇಮಕಾಂತಿಹರಿಣಸ್ಯಾಸಂಭವೋ ಲಕ್ಷಿತಃ
ಅಕ್ಷ್ಯಾಣಾಂ ನ ಯುಧಿಷ್ಠಿರೇಣ ವಿಷಮೋ ದೃಷ್ಟೋ ವಿಪಾಕಃ ಕಥಂ
ಪ್ರತ್ಯಾಸನ್ನವಿಪತ್ತಿ ಮೂಢಮನಸಾಂ ಪ್ರಾಯೋ ಮತಿಃ ಕ್ಷೀಯತೇ॥೨೧೬॥

ಟೀ॥ ರಾವಣಂ ಸೀತೆಯನುಯ್ವಲ್ಲಿ ದೋಷಮೆಂಬುದನಱಿದುದಿಲ್ಲ, ಶ್ರೀರಾಮಂ ಮಾಯಾಮೃಗವನಿಸುವಲ್ಲಿ ಕೃತಕಮೃಗಮೆಂದಱಿದುದಿಲ್ಲ, ಧರ್ಮಸುತಂ ದ್ಯೂತದಲ್ಲಿ ತನಗೆ ಕೇಡೆಂಬುದನಱಿದುದಿಲ್ಲ. ವಿಪತ್ತು ಬಹ ಕಾಲಕ್ಕೆಂತಪರುಂ ಮತಿಗಿಡುವರ್. ಅದಲ್ಲದೆಯುಂ,

ಮುಂದಿನ ಜನ್ಮದೊಳೇನೊಂ
ದನ್ನೆರಪಿದನವನೆ ಭೋಗಿಸಲ್ ಪುಟ್ಟುವನಾ
ತನ್ನಿರುತಮದಱಿನಿಂತಿದ
ನೆನ್ನನುಮಪಹರಿಸಲಱಿಯನಿನ್ನೆನ್ನಳವೇ ॥೪೩೫॥

ಎಂದು ಸಾರಂಗಂ ಸಂಸಾರಸ್ವರೂಪನಿರೂಪಣಂಗೆಯ್ವಾ ಬಲೆಯನೊಡ್ಡಿದ ವ್ಯಾಧಂ ಬಾರದನ್ನೆಗಮೆನ್ನ ಬಂಧನಮಂ ಮೋಕ್ಷಂಗೆಯಿಮೆನೆ ಹಿರಣ್ಯರೋಮಂ ಪಾಶಮಂ ಪಱಿಯೆ ಕಡಿವುದುಮಾ ಸಮಯಕಾ ಲುಬ್ಧಕಂ ಬರ್ಪುದುಮವನಂ ಕಂಡು ಕಾಗೆ ಮರದ ಮೇಗಣ್ಗೆ ಪೋದುದು. ಇಲಿಯುಂ ಕೆಲದೊಳಿರ್ದ ಬಿಲನಂ ಪೊಕ್ಕುದು. ಮೃಗಮೋಡಿಪೋದುದು. ಕಚ್ಛಪಂ ಪೋಗಲಿಂಬಿಲ್ಲದೆ ಸಂಕುಚಿತಮಾಗಿರ್ಪುದುಮಾ ವ್ಯಾಧಂ ಬಂದು ಕಂಡು ಖಂಡಮಾಗಿರ್ದ ಬಲೆಯಂ ಕಂಡು ಬೆಱಗಾಗಿ ಪೆಱತೇನುಮಂ ಕಾಣದೆ ಕೆಲದೊಳಿರ್ದ ಕಚ್ಛಪನಂ ಕಂಡುಮಿದನಾದೊಡಮುಯ್ವೆನೆಂದು ಕೊಂಡು ಪೋದಂ. ಇತ್ತ ಚಿತ್ರಾಂಗನುಂ ಲಘುಪತನಕನುಂ ಹಿರಣ್ಯರೋಮನುಮೊಂದೆಡೆಗೆ ಬಂದು ಮಂಥರನಂ ವ್ಯಾಧನುಯ್ದನೆಂದು ಮಿತ್ರವಿಯೋಗದಿಂ ಕಿಱಿದುಂಬೇಗಂ ದುಃಖಿತರಾಗಿರ್ದೇಗೆಯ್ವೆಮೆನೆ ಚಿತ್ರಾಂಗನಿಂತೆಂದಂ :

ದೋಷವನ್ನು ತಿಳಿಯಲಿಲ್ಲ, ಶ್ರೀರಾಮನು ಮಾಯಾಮೃಗವನ್ನು ಬಾಣ ಪ್ರಯೋಗಿಸಿ ಹಿಡಿಯುವಾಗ ಕೃತಕಮೃಗವೆಂದು ತಿಳಿಯಲಿಲ್ಲ, ಧರ್ಮರಾಯನು ಜೂಜಿನಿಂದ ತನಗೆ ಕೇಡು ಎಂಬುದನ್ನು ತಿಳಿಯಲಿಲ್ಲ. ವಿಪತ್ತು ಬರುವ ಕಾಲಕ್ಕೆ ಎಂಥವರೂ ಬುದ್ಧಿಹೀನರಾಗುವರು ! ಅಲ್ಲದೆ, ೪೩೫. ಹಿಂದಿನ ಜನ್ಮದಲ್ಲಿ ಆತ್ಮನು ಏನನ್ನು ಕೂಡಿಟ್ಟನೋ ಅದನ್ನೇ ಅನುಭವಿಸಲು ನಿಶ್ಚಯವಾಗಿಯೂ ಹುಟ್ಟುವನು. ಅದರಿಂದ ಇದನ್ನು ಯಾರೂ ಪರಿಹರಿಸಲಾರರು. ಇನ್ನು ನನ್ನಿಂದ ಸಾಧ್ಯವೇ ವ॥ ಎಂದು ಸಾರಂಗವು ಸಂಸಾರ ಸ್ವರೂಪ ನಿರೂಪಣೆಯನ್ನು ಮಾಡಿ ಆ ಬಲೆಯನ್ನು ಒಡ್ಡಿದ ಬೇಡನು ಬರುವಷ್ಟರಲ್ಲಿ ನನ್ನ ಬಂಧಮೋಕ್ಷವನ್ನು ಮಾಡಿರಿ ಎನ್ನಲು ಹಿರಣ್ಯರೋಮನು ಪಾಶವನ್ನು ಹರಿಯಿತು. ಆ ಸಮಯಕ್ಕೆ ಆ ಬೇಡನು ಬರಲು ಅವನನ್ನು ಕಂಡು ಕಾಗೆ ಮರದ ಮೇಲಕ್ಕೆ ಹಾರಿತು. ಇಲಿಯೂ ಪಕ್ಕದಲ್ಲಿದ್ದ ಬಿಲವನ್ನು ಸೇರಿಕೊಂಡಿತು. ಮೃಗವು ಓಡಿಹೋಯಿತು. ಆಮೆಯು ಮಾತ್ರ ಹೋಗಲು ಎಡೆಯಿಲ್ಲದೆ ದೇಹವನ್ನು ಸಂಕೋಚಗೊಳಿಸಿಕೊಂಡಿರಲು ಬೇಡನು ಬಂದು ಕಂಡು ತುಂಡಾಗಿದ್ದ ಬಲೆಯನ್ನು ಕಂಡು ಬೆರಗಾಗಿ ಬೇರೆ ಏನನ್ನೂ ಕಾಣದೆ ಪಕ್ಕದಲ್ಲಿದ್ದ ಆಮೆಯನ್ನು ಕಂಡು ಇದನ್ನಾದರೂ ಒಯ್ಯುವೆನೆಂದು ಕೊಂಡುಹೋದನು. ಇತ್ತ ಚಿತ್ರಾಂಗನೂ ಲಘುಪತನಕನೂ ಹಿರಣ್ಯರೋಮನೂ ಒಂದು ಕಡೆಗೆ ಬಂದು ಮಂಥರನನ್ನು ಬೇಡನು ಒಯ್ದನು ಎಂದು ಮಿತ್ರವಿಯೋಗದಿಂದ ಕೆಲವು ಸಮಯ

ಆಂ ಕಾರಣಮಾಗಿರೆ ನಿ
ಶ್ಶಂಕಮನಂ ಬಂದು ಸಿಲ್ಕಿದಂ ಕೆಳೆಯಂ ಪೊಂ
ಗಿ ಕೂರ್ಮೆನಾಡುದಾಗದೊ
ಡಾಂ ಕಷ್ಟನೆ ಅದಱೆನಾತನಾದುದನಪ್ಪೆಂ ೪೩೬

ಎನೆ ಹಿರಣ್ಯರೋಮಂ ನಿನಗಿದುವೆ ತಕ್ಕುದಾದೊಡಮೇನಲ್ಲಿಗುಪಾಯಮಂ ನಾಂ ಬಲ್ಲೆಂ. ಲಘುಪತನಕನುಂ ನೀನುಂ ವ್ಯಾಧನಿಂ ಮುನ್ನಮೆ ಮುಂದೆ ಪೋಗಿ ತೊಱೆಯ ತಡಿಯೊಳ್ ನೀಂ ಕೃತಕಮೃತನಾಗಿರ್ಪುದು ನಿನ್ನ ಮೇಲೆ ಲಘುಪತನಕಂ ಪಾಯ್ದಾಡುತ್ತುಮಿರೆ ನಿಮ್ಮನಾ ವ್ಯಾಧಂ ಕಂಡು ಮಂಥರನನೀಡಾಡಿ ಪರಿತರ್ಪನಾಗಳೆ ಲಘುಪತನಕಂ ಪೋಗಿ ಮಂಥರನಂ ನೀರಂ ಪುಗಲ್ವೇೞ್ದು ನೀನುಮವಂಗೆ ದೂರಮಾಗಿ ಪೋಪುದೆನೆ ವಾಯಸನಿದು ಕಜ್ಜಮೆಂದೆರಡುಂ ಪೊಳೆಗೆ ಸಮೀಪಮಾಗಿ ಪೋಗಿ ಸಮಕಟ್ಟು ಬಂದಂದದೊಳ್ ಪಟ್ಟಿರ್ಪುದುಮಾ ಲುಬ್ಧಕಂ ಕಂಡಿದೊಂದು ಮೃಗಂ ಸತ್ತಿರ್ದಪುದೆಂದತಿ ಲುಬ್ಧಮನಸ್ಕನಾಗಿ ರಾಗಿಸಿ ಬಲೆಯುಮಂ ಮಂಥರನುಮಂ ನೆಲಕ್ಕಿಟ್ಟು ಪೋಪುದುಮಾತನ ಬರವಂ ಕಂಡು ಕಾಕಂ ಕಚ್ಛಪನಲ್ಲಿಗೆವಂದು ಬೇಗಂ ಮಡುವಿಂಗೆ ಪುಗೆಂಬುದುಮಂ ಅಂತೆಗೆಯ್ವೆನೆಂದುಮದು ಕಡುವೇಗಂ ಮಡುವಂ ಪೊಕ್ಕುದು. ಇತ್ತಂ ಚಿತ್ರಾಂಗನುಮೆರ್ದೋಡಿ ಪೋಯ್ತು. ಅದೆಲ್ಲಮನಾ ಕಿರಾತಂ ಕಂಡಿದೇನಾನುಮೊಂದುತ್ಪಾತಮಾಗಲೆವೇೞ್ಕುಮೆಂದು ಭೀತನಾಗಿ ಬಲೆಯಂ ಬಿಸುಟು ಕರುಳ್ ಪಱಿಯಲೋಡಿದಂ. ಲಘುಪತನಕಂ ಹಿರಣ್ಯರೋಮನನೊಡಗೊಂಡು ಕಚ್ಛಪನಲ್ಲಿಗೆ ಬಂದು ಚಿತ್ರಾಂಗನಂ ಬರಿಸಿ ಬೞಿಕ್ಕೆ ಮಂಥರನಂ ಕರೆವುದುಮದು ಮಡುವಿಂ

ದುಃಖಿತರಾಗಿದ್ದು ಏನು ಮಾಡೋಣ ಎನ್ನಲು ಚಿತ್ರಾಂಗನು ಹೇಳಿದನು : ೪೩೬. ನಾನು ಕಾರಣನಾಗಿ ನಿಸ್ಸಂದಿಗ್ಧಚಿತ್ತನಾದ ಗೆಳೆಯನು ಬಂದು ಸಿಕ್ಕಿಹಾಕಿಕೊಂಡನು. ಹೋಗಿ ಆಮೆಗೆ ಏನಾಯಿತೋ ನಾನು ಹಾಗೆಯೇ ಆಗದಿದ್ದಲ್ಲಿ ನಾನು ನೀಚನಲ್ಲವೇ. ಅದರಿಂದ ಅವನಿಗಾದ ಗತಿ ನನಗಾಗಲಿ. ವ|| ಹಿರಣ್ಯರೋಮನು ನಿನಗೆ ಇದು ಯೋಗ್ಯವಾದರೂ ಇದಕ್ಕೆ ಉಪಾಯವನ್ನು ನಾನು ಬಲ್ಲೆ, ಲಘುಪತನಕನೂ ನೀನೂ ಬೇಡನಿಗಿಂತ ಮೊದಲು ಮುಂದೆ ಹೋಗಿ ನದಿಯ ದಡವಲ್ಲಿ ನೀನು ಕೃತಕಮೃತನಾಗಿರಲು ನಿನ್ನ ಮೇಲೆ ಲಘುಪತನಕನು ಹಾರಾಡಲಿ. ನಿಮ್ಮನ್ನು ಆ ಬೇಡನು ಕಂಡು ಮಂಥರನನ್ನು ಬಿಸುಟು ಅಲ್ಲಿಗೆ ಬರುವನು. ಆಗಲೇ ಲಘುಪತನಕನು ಹೋಗಿ ಮಂಥರನಿಗೆ ನೀರಿಗೆ ಹೋಗಲು ತಿಳಿಸಿ ನೀನೂ ಅವನಿಂದ ದೂರವಾಗು. ಕಾಗೆಯು ಇದೇ ಕಾರ್ಯ ಎಂದು ಎರಡೂ ಹೊಳೆಯ ಸಮೀಪಕ್ಕೆ ಹೋಗಿ ವ್ಯವಸ್ಥೆ ಮಾಡಿದಂತೆ ಮಲಗಿರಲು ಬೇಡನು ಕಂಡು ಇದೊಂದು ಜಿಂಕೆ ಸತ್ತಿದೆ ಎಂದು ಅತ್ಯಂತ ಮೋಹಿತನಾಗಿ ಪ್ರೀತಿಯಿಂದ ಬಲೆಯನ್ನೂ ಮಂಥರನನ್ನೂ ನೆಲಕ್ಕಿಳಿಸಿ ಹೋದನು. ಆತನ ಆಗಮನವನ್ನು ಕಂಡು ಕಾಗೆಯು ಆಮೆಯಲ್ಲಿಗೆ ಬಂದು ಬೇಗನೆ ಮಡುವನ್ನು ಸೇರಿಕೋ ಎನ್ನಲು ಹಾಗೆಯೇ ಮಾಡುವೆನೆಂದು ಅದು ಬಹುಬೇಗನೆ ಮಡುವನ್ನು ಸೇರಿಕೊಂಡಿತು. ಇತ್ತ ಚಿತ್ರಾಂಗನು ಎದ್ದು ಓಡಿಹೋಯಿತು. ಅದೆಲ್ಲವನ್ನೂ ಆ ಬೇಡನು ಕಂಡು ಇದೇನೋ ಒಂದು ಉತ್ಪಾತವಿರಬೇಕೆಂದು ಹೆದರಿ ಬಲೆಯನ್ನು ಬಿಟ್ಟು ಕರುಳು ಹರಿಯುವಂತೆ ಓಡಿದನು.

ಪೊಜಮಟ್ಟು ಬಂದೊಂದೊಂದಱ ಕಾಲ ಮೇಲೆ ಬಿರ್ದಾನಂದಾಶ್ರುಗಳನಿಕ್ಕಿ ನಮಗೆಯೊರ್ಮೆ ದುಷ್ಕರ್ಮದ ಫಲದಿಂದಪಮೃತ್ಯು ಸಮನಿಸಿ ಬಂದು ನಮ್ಮ ಪುಣ್ಯಫಲದಿಂ ಬರ್ದುಂಕಿದೆವೆಂದು ನುಡಿದಿಂತು ಬೞಿಕ್ಕೆ ಮಂಥರನಿಂತೆಂದಂ:

ಕುಲಮುಂ ಚಲಮುಂ ಪೆಂಪುಂ
ಕಲಿತನಮುಂ ಖ್ಯಾತಿಯುಂ ವಿಭೂತಿಯುಮಱಿವುಂ
ಸಲೆ ನೆಲಸಿದವರ ಕೂಟಂ
ಪಲತೆಱದಿಂ ಫಲವನೀವುದವರ್ಗರಿದುಂಟೇ ೪೩೭

ಪರಮಾರ್ಥಂ ಪುರುಷಾರ್ಥಮುಳ್ಳ ಮನುಜಂ ಮಿತ್ರಂ ಧನಂ ಧಾತ್ರಿ ಕಿಂ-
ಕರರೆಂಬಂಕದ ವಸ್ತುವಂ ಪಡೆಗೆ ತಾನೀ ನಾಲ್ಕಱೊಳ್ ರತ್ನಮೊಂ-
ದೆರಡಿಲ್ಲಾದೊಡಮೇನನೂನಗುಣನಂ ಸನ್ಮಿತ್ರನಂ ಮಾೞ್ಪುದಾ-
ದರದಿಂದಂ ಬೞಿಕಾತನಿಂ ಸಮನಿಕುಂ ಧರ್ಮಾರ್ಥಕಾಮತ್ರಯಂ ೪೩೮

(ರಥೋದ್ಧತಾ ವೃತ್ತಂ)

ದಾನಶೂರನಪವಾದಭೀರು ವಿ-
ಜ್ಞಾನಮೂರ್ತಿ ಭುವನೈಕವತ್ಸಲಂ
ಮಾನನೀಯಗುಣನೆಂಬ ಪೆಂಪಿನು-
ದ್ದಾನಿಯುಂ ತಳೆದ ದುರ್ಗನನ್ನರಾರ್ ೪೩೯

ಲಘುಪತನಕನು ಹಿರಣ್ಯರೋಮನೊಡನೆ ಆಮೆಯಲ್ಲಿಗೆ ಬಂದು ಜಿಂಕೆಯನ್ನು ಬರಿಸಿ ಬಳಿಕ ಮಂಥರನನ್ನು ಕರೆಯಲು ಅದು ಮಡುವಿನಿಂದ ಹೊರಬಂದು ಒಂದೊಂದರ ಕಾಲ ಮೇಲೆ ಬಿದ್ದು ಆನಂದಾಶ್ರುವನ್ನು ಸುರಿಸಿ ನಮಗೆ ಒಮ್ಮೆ ದುಷ್ಕರ್ಮದ ಫಲದಿಂದ ಅಪಮೃತ್ಯು ಉಂಟಾಗಿ ನಮ್ಮ ಪುಣ್ಯಫಲದಿಂದಾಗಿ ಬದುಕಿಕೊಂಡೆವು ಎಂದು ನುಡಿದುವು. ಆಗ ಮಂಥರನು ಹೀಗೆಂದನು: ೪೩೭. ಕುಲವೂ ಚಲವೂ ಹಿರಿಮೆಯೂ ಪರಾಕ್ರಮವೂ ಖ್ಯಾತಿಯೂ ಐಶ್ವರ್ಯವೂ ತಿಳಿವಳಿಕೆಯೂ ಸೇರಿದವರ ಗುಂಪು ಹಲವು ರೀತಿಯ ಫಲವನ್ನುಂಟುಮಾಡುವುದು. ಅವರಿಗೆ ಅಸಾಧ್ಯವಾದುದುಂಟೇ! ೪೩೮. ಪರಮ ಪುರುಷಾರ್ಥವನ್ನು ಪಡೆಯ ಬೇಕೆಂದಿರುವ ಮನುಷ್ಯನು ಮಿತ್ರ, ಧನ, ಧಾತ್ರಿ, ಸೇವಕರು ಎಂಬ ಶ್ರೇಷ್ಠ ವಸ್ತುಗಳನ್ನು ಪಡೆಯಲಿ. ಈ ನಾಲ್ಕರಲ್ಲಿ ಒಂದೆರಡು ರತ್ನಗಳಿಲ್ಲದಿದ್ದಲ್ಲಿ, ಏನು ಮಹಾ. ಸಜ್ಜನನಾದ ಸನ್ಮಿತ್ರನನ್ನು ಪ್ರೀತಿಯಿಂದ ಮಾಡಿಕೊಳ್ಳಬೇಕು. ಬಳಿಕ ಆತನಿಂದ ಧರ್ಮ, ಅರ್ಥ, ಕಾಮಗಳೆಂಬ ಇತರ ಪುರುಷಾರ್ಥಗಳು ಲಭಿಸುವುವು. ೪೩೯. ದಾನಶೂರನೂ ಅಪವಾದಕ್ಕೆ ಹೆದರುವವನೂ ವಿಜ್ಞಾನಮೂರ್ತಿಯೂ ಸಮಸ್ತ ಪ್ರಪಂಚದ ಪ್ರೀತಿಗೆ ಪಾತ್ರನಾದವನೂ ಗೌರವಾರ್ಹಗುಣಗಳಿಂದ ಕೂಡಿದನನೂ ಆದ

ಪ್ರಿಯಹಿತವಚನಂ ದಾನಂ
ದಯೆ ದೀನಜನಾಭಿರಕ್ಷಣಂ ಸಜ್ಜನಚಾ-
ಶ್ರಯಮೆಂಬಿವೊಂದಿ ಸಲೆ ವಸು-
ಧೆಯೊಳಗೆ ಸತ್ಪುರುಷನೆನಿಸಿ ಮೆಱೆವಂ ದುರ್ಗಂ ೪೪೦

ನ್ಯಾಯಪರಾರ್ಥನೀಯನಭಿಮಾನಧನಂ ಸುಜನಪ್ರಿಯಂ ನಿಜಾ-
ನ್ವಾಯ ಸರೋಜಷಂಡ ದಿನಪಂ ವಿಬುಧಸ್ತುತವೃತ್ತನಾಶ್ರಿತ-
ರ್ಗಾಯ ಪರೋಪಕಾರವನೆ ಮಾಡುಗುಮಾಪರದಿಂ 'ಪರೋಪಕಾ
ರಾಯ ಸತಾಂ ವಿಭೂತಿ' ಯೆನಿಕುಂ ಗುಣಿ ದುರ್ಗನಶೇಷಧಾತ್ರಿಯೊಳ್ ೪೪೧

ವಿಮಲಶ್ರೀಶ ಸರಸ್ವತೀನಿಳಯ ಕೀರ್ತಿಶ್ರೀವಧೂಕಾಂತ ಗೌ-
ತಮಗೋತ್ರಾಂಬುಜಮಿತ್ರ. . . . . ನಿನ್ನನ್ನರಂ ಕಂಡೆನಿ-
ಲ್ಲ ಮಹೀವಲ್ಲಭಸಂಧಿವಿಗ್ರಹಿಗಳಂ ಸದ್ವೃತ್ತರಂ ಸದ್ಗುಣೋ
ತ್ತಮರಂ ಪಾಲಿತ ಸತ್ಕವೀಂದ್ರ ವಿಬುಧವ್ರಾತೇಶ್ವರಂ ಸ್ವಚ್ಛರಂ ೪೪೨

ವಿಶ್ವಜನಾಳಿಗೆ ಭವದೀ-
ಯಸ್ವಂ ಕರತಳಗತಸ್ವಮನ್ಯಸ್ವಂ ಬ್ರಾ-
ಹ್ಮಸ್ವಂ ರಾಜಸ್ವಂ ದೇ-
ವಸ್ವಂ ಕೀರ್ತಿಸ್ವ ದುರ್ಗ ವಿಶ್ವಾವನಿಯೊಳ್ ೪೪೩

ಹಿರಿಮೆಯ ಶ್ರೇಷ್ಠತೆಯನ್ನು ಹೊಂದಿದ ದುರ್ಗಸಿಂಹನಂಥವರು ಯಾರಿರುವರು ! ೪೪೦. ಪ್ರಿಯಹಿತ ವಚನ ದಾನ ದಯೆ ದೀನಜನರ ರಕ್ಷಣೆ ಸಜ್ಜನರ ಆಶ್ರಯ ಎಂಬ ಇವು ಸೇರಿ ಜಗತ್ತಿನಲ್ಲಿ ದುರ್ಗಸಿಂಹನು ಸತ್ಪುರುಷನಾಗಿ ಮೆರೆಯುವನು. ೪೪೧. ನ್ಯಾಯಪರನೂ ಅಭಿಮಾನಧನನೂ ಸಜ್ಜನಪ್ರಿಯನೂ ತನ್ನ ವಂಶವೆಂಬ ಕಮಲಗಳಿಗೆ ಸೂರ್ಯನೂ ವಿದ್ವಾಂಸರಿಂದ ಸ್ತುತನಾದವನೂ ಆಶ್ರಿತರಿಗೆ ಲಾಭ ಪರೋಪಕಾರವನ್ನು ಮಾಡುವವನೂ, 'ಪರೋಪಕಾರಾಯ ಸತಾಂ ವಿಭೂತಿ'ಯೂ ಆದ ದುರ್ಗಸಿಂಹನು ಸಮಸ್ತ ಧಾತ್ರಿಯಲ್ಲಿ ಗುಣಿ ಎನಿಸಿದ್ದನು. ೪೪೨. ಶುದ್ಧ ಐಶ್ವರ್ಯಕ್ಕೆ ಒಡೆಯನೂ ಸರಸ್ವತೀ ನಿಲಯನೂ ಕೀರ್ತಿಲಕ್ಷ್ಮೀಕಾಂತನೂ ಗೌತಮ ಗೋತ್ರನೂ..... ಮಹೀವಲ್ಲಭನೂ ಸಂಧಿವಿಗ್ರಹಿಯೂ ಸದ್ವೃತ್ತನೂ ಸದ್ಗುಣೋತ್ತಮನೂ ಸತ್ಕವಿಗಳನ್ನೂ ವಿದ್ವಾಂಸರನ್ನೂ ಪಾಲಿಸಿದ ಪ್ರಭುವೂ ಶುದ್ಧನೂ ಆದ ನಿನ್ನಂತಹವರನ್ನು ನಾನು ಕಂಡಿಲ್ಲ. ೪೪೩. ಲೋಕಕ್ಕೆ ನಿನ್ನ ಆಸ್ತಿಯು ಕೈಗೆ ಬಂದ ಆಸ್ತಿಯಾಗಿದೆ. ಪ್ರಪಂಚದಲ್ಲಿ ಬ್ರಾಹ್ಮಣರ

ದುರ್ಗಾಧಿನಾಥ ನಿಯತ ನಿ-
ಸರ್ಗಪ್ರೀತಿಯಿನಭೀಷ್ಟಮಂ ಸಕಲಸುಹೃ-
ದ್ವರ್ಗಂ ಬೆರಸನುಭವಿಸುಗೆ
ದುರ್ಗಂ ವರ್ಗತ್ರಯಪ್ರಕೃಷ್ಟೋದಯಮಂ ೪೪೪

ಪತಿಹಿತನಂಜನಾತನಯನಾ ಪವನಾತ್ಮಜನಿಂ ಖಗೇಶ್ವರಂ
ಪತಿಹಿತನಾ ಮರುತ್ತನಯನಿಂ ಖಗರಾಜನಿನರ್ಕನಂದನಂ
ಪತಿಹಿತನಾ ಮರುತ್ತನಯನಿಂ ಖಗರಾಜನಿನರ್ಕಜಾತನಿಂ
ಪತಿಹಿತನೀತನೆಂದು ಪೊಗಟ್ಗುಂ ಸಲೆ ದುರ್ಗನನುರ್ವರಾಜನಂ ೪೪೫

ಅತಿಸಂಪನ್ನತೆವೆತ್ತ ಸದ್ಗ್ರಹನಿವಾಸಸ್ಥಾನಮಾದ ಪ್ರಜಾ-
ಪತಿಸಂವತ್ಸರ ಚೈತ್ರಮಾಸ ಸಿತಪಕ್ಷದ್ವಾದಶೀ ತಾರಕಾ-
ಪತಿವಾರಂ ಬರೆ ಪಂಚತಂತ್ರಮಸೆದತ್ತೀ ಧಾತ್ರಿಯೊಳ್ ದುರ್ಗನಿ-
ರ್ಮಿತಮುದ್ಯತ್ಕವಿಶೇಖರ ಪ್ರಮದಲೀಲಾಪುಷ್ಪಿತಾಮ್ರದ್ರುಮಂ ೪೪೬

ಆಸ್ತಿ, ದೇವರ ಆಸ್ತಿ, ರಾಜನ ಆಸ್ತಿ, ಕೀರ್ತಿಯ ಆಸ್ತಿಗಳು ಇತರರ ಆಸ್ತಿಗಳಾಗಿವೆ. ೪೪೪. ದುರ್ಗಕ್ಕೆ ಒಡೆಯನಾದ ದುರ್ಗಸಿಂಹನು ನಿಯತವಾದ ಸಹಜಪ್ರೀತಿಯಿಂದ ತನ್ನ ಅಪೇಕ್ಷೆಯನ್ನೂ ವರ್ಗತ್ರಯದ ಅಭಿವೃದ್ಧಿಯನ್ನೂ ಸಕಲ ಸ್ನೇಹಿತರೊಡನೆ ಅನುಭವಿಸಲಿ. ೪೪೫. ಆಂಜನೇಯನು ಪತಿಹಿತನೆಂದೂ, ಆಂಜನೇಯನಿಗಿಂತ ಗರುಡನು ಪತಿಹಿತನೆಂದೂ, ಆಂಜನೇಯನಿಗಿಂತ, ಗರುಡನಿಗಿಂತ ಕರ್ಣನು ಪತಿಹಿತನೆಂದೂ, ಆಂಜನೇಯ, ಗರುಡ, ಕರ್ಣರಿಗಿಂತ ಈತನು ಅಧಿಕ ಪತಿಹಿತನೆಂದೂ ದುರ್ಗಸಿಂಹನನ್ನು ಲೋಕದ ಜನರು ಹೊಗಳುವರು. ೪೪೬. ಅತ್ಯಂತ ಸಂಪನ್ನತೆಯಿಂದ ಕೂಡಿದ ಒಳ್ಳೆಯ ಗ್ರಹಗಳಿಗೆ ಆವಾಸಸ್ಥಾನವಾದ ಪ್ರಜಾಪತಿ ಸಂವತ್ಸರದ ಚೈತ್ರಮಾಸ ಶುಕ್ಲಪಕ್ಷ ಸೋಮವಾರದಂದು ಶ್ರೇಷ್ಠಕವಿಗಳ ಸಂತೋಷ ಪ್ರೋತ್ಸಾಹಗಳಿಂದ ಹೂ ಬಿಟ್ಟ ಮಾವಿನ ಮರದಂಥ ಈ ಪಂಚತಂತ್ರವು ಈ ಲೋಕದಲ್ಲಿ ದುರ್ಗಸಿಂಹನಿಂದ ರಚಿತವಾಗಿ ಶೋಭಿಸಿತು.

॥ ಫಲಶ್ರುತಿ ॥

ಪದವಱೆ ಕೊಳ್ಗೆ ಧಾತ್ರಿ ಪಿರಿದುಂ ಬೆಳೆಗುರ್ವರೆಯಂ ಧರಾಧಿಪರ್
ಮುದದೆ ಸಧರ್ಮದಿಂದೆ ಪರಿಪಾಲಿಸುತಿರ್ಕೆ ಸಮಸ್ತವೇದ ಶಾ-
ಸ್ತ್ರದ ವಿಧಿಯಿಂದಿಳಾಮರಜನಂ ಸುರಪೂಜೆಯನೊಲ್ದು ಮಾೞ್ಕೆ ಸಂ-
ಪದದೊಳನೂನರಕ್ಕೆ ಪರದರ್ ಸಲೆ ಧಾರ್ಮಿಕರಕ್ಕೆ ಪಾದಜರ್ ೪೪೭

ವಿಪುಳಶ್ರೀಸುಖಮಕ್ಕೆ ಜೀವನಿವಹಕ್ಕೆಲ್ಲಂ ಕುಲಸ್ತ್ರೀಜನ-
ಕ್ಕುಪಮಾತೀತ ಪತಿವ್ರತಾಗುಣದಿಂದೊಪ್ಪಕ್ಕೆ ವಾಗ್ದೇವಿ ಕೂ-
ರ್ತು ಪಯೋಜಾಸನನಂತೆ ಮಾೞ್ಕೆ ಕಳೆಯೊಳ್ ವಿದ್ವಜ್ಜನಾನೀಕಮಂ
ನೃಪಗೋಬ್ರಾಹ್ಮಣ ಶಾಂತಿಯಕ್ಕೆ ನೆಗೞ್ಗೆ ಕಾವ್ಯಂ ಧರಾಚಕ್ರದೊಳ್ ೪೪೮

ಇದು ವಿನಮದಮರರಾಜ ಮೌಳಿ ಮಾಣಿಕ್ಯಮಂಜರೀ ಪುಂಜರಂಜಿತ ಭಗವದ್ಭವಾನೀವಲ್ಲಭ ಚರಣ ಸರಸೀರುಹ ಷಟ್ಚರಣಂ ಶ್ರೀಮನ್ಮಹಾಸಂಧಿವಿಗ್ರಹಿ ದುರ್ಗಸಿಂಹ ವಿರಚಿತಮಪ್ಪ ಪಂಚತಂತ್ರದೊಳ್

ಮಿತ್ರಕಾರ್ಯ ಪ್ರಕರಣಂ ಪಂಚಮತಂತ್ರಂ ಸಮಾಪ್ತಂ

ಫಲಶ್ರುತಿ

೪೪೭. ಸಕಾಲದಲ್ಲಿ ಮಳೆಯಾಗಲಿ, ಭೂಮಿಯು ಸಮೃದ್ಧಿಯಾಗಿ ಬೆಳೆಯಲಿ. ಲೋಕವನ್ನು ರಾಜರು ಸುಖದಿಂದ ಧರ್ಮಿಷ್ಠರಾಗಿ ಪರಿಪಾಲಿಸುತ್ತಿರಲಿ. ಸಮಸ್ತ ವೇದಶಾಸ್ತ್ರಗಳ ವಿಧಿಯಂತೆ ಬ್ರಾಹ್ಮಣರು ಪ್ರೀತಿಯಿಂದ ದೇವತಾರ್ಚನೆಯನ್ನು ಮಾಡಲಿ. ವರ್ತಕರು ಸಂಪತ್ತಿನಲ್ಲಿ ಸಮೃದ್ಧಿಯನ್ನು ಹೊಂದಲಿ. ಶೂದ್ರರು ಧಾರ್ಮಿಕ ಮನೋಭಾವನೆಯನ್ನು ತಾಳಲಿ. ೪೪೮. ಪ್ರಾಣಿವರ್ಗಕ್ಕೆಲ್ಲ ಅತಿಶಯ ಐಶ್ವರ್ಯದ ಸುಖವುಂಟಾಗಲಿ. ಸ್ತ್ರೀಯರಿಗೆ ಅಸಾಧಾರಣವಾದ ಪತಿವ್ರತಾಗುಣದಿಂದ ಚೆಲುವು ಮೂಡಲಿ. ಸರಸ್ವತಿ ಪ್ರೀತಿಯಿಂದ ವಿದ್ವಾಂಸರನ್ನು ತೇಜಸ್ಸಿನಿಂದ ಬ್ರಹ್ಮನಂತೆ ಮಾಡಲಿ. ರಾಜ, ಗೋವು, ಬ್ರಾಹ್ಮಣರಿಗೆ ಶಾಂತಿಯುಂಟಾಗಲಿ, ಈ ಕಾವ್ಯವು ಪ್ರಪಂಚ ಪ್ರಸಿದ್ಧಿಯನ್ನು ಪಡೆಯಲಿ. ಇದು ವಿನಮದಮರರಾಜ ಮೌಳಿ ಮಾಣಿಕ್ಯ ಮಂಜರೀ ಪುಂಜರಂಜಿತವಾದ ಭಗವದ್ಭವಾನೀವಲ್ಲಭ ಚರಣ ಸರಸೀರುಹ ಷಟ್ಚರಣನಾದ ಶ್ರೀಮನ್ಮಹಾಸಂಧಿ ವಿಗ್ರಹಿದುರ್ಗಸಿಂಹ ವಿರಚಿತವಾದ ಪಂಚತಂತ್ರದಲ್ಲಿ ಮಿತ್ರಕಾರ್ಯ ಪ್ರಕರಣ ಎಂಬ ಐದನೆಯ ತಂತ್ರವು ಸಮಾಪ್ತವಾದುದು.

ಶಬ್ದಕೋಶ

ಅ

ಅಕರಣ-ಗಣಕ, ಲೆಕ್ಕಪತ್ರದ ಅಧಿಕಾರಿ
ಅಕೂಪಾರ-ಸಮುದ್ರ
ಅಕ್ಷಜ-ಇಂದ್ರಿಯಜ್ಞಾನ
ಅಕ್ಷಮಾಲೆ - ಜಪಸರ
ಅಕ್ಷೂಣ-ಬಲಿಷ್ಠ
ಅಗಿದು-ಹೆದರಿ
ಅಗ್ರಜನ್ಮ-ಬ್ರಾಹ್ಮಣ
ಅಜಾತಶತ್ರು-ಧರ್ಮರಾಯ
ಅಂಜನ-ಕಾಡಿಗೆ
ಅಡಗು-ಮಾಂಸ
ಅಧ್ವಾನ-ಕಷ್ಟ
ಅನವದ್ಯ-ದೋಷರಹಿತ, ನಿಷ್ಕಲಂಕ
ಅನವಧಾನ-ಎಚ್ಚರಿಕೆಯಿಲ್ಲದಿರುವಿಕೆ
ಅನಾಗತವೇದಿ-ಭವಿಷ್ಯಜ್ಞ
ಅನಾರತಂ-ಯಾವಾಗಲೂ
ಅನಿಮಿಷಚಾಪ-ಕಾಮನಬಿಲ್ಲು
ಅನಿಮಿಷಸಪತ್ನ-ದೇವತೆಗಳ ಶತ್ರು, ಮೀನುಗಳ ವೈರಿ
ಅನುಜೀವಿ-ಅನುಸರಿಸಿ ಜೀವಿಸುವವನು
ಅನುಪ್ರವೇಶ-ಕೂಡಿ ಬಾಳುವುದು
ಅನೇಕಪ-ಆನೆ
ಅಂತರೀಪ-ದ್ವೀಪ
ಅಂತರ್ವತ್ನಿ-ಗರ್ಭಿಣಿ
ಅಂತರ್ವಾಂಶಿಕ-ವ್ಯಾಯಾಮಶಾಲಾಧ್ಯಕ್ಷ
ಅನ್ಯಸ್ವಂ-ಇತರರ ಆಸ್ತಿ
ಅಪಚಾರಣ-ದುರ್ಮಾರ್ಗ
ಅಪನಯ-ಅನೀತಿ
ಅಪಸರಣ-ಓಡಿಹೋಗುವುದು, ಹಿಂಜರಿಯುವುದು
ಅಪಾಮಾರ್ಗ-ಉತ್ತರಣೆ
ಅಪಾಸ್ತ-ರಹಿತ
ಅಭಿಭವಿಸು-ಸೋಲಿಸು
ಅಭಿಯೋಗ-ತಾಳ್ಮೆ
ಅಭ್ರಂಕಷ-ಆಕಾಶವನ್ನು ಮುಟ್ಟುವ
ಅಂಭಃಕುಂಭಿ-ನೀರಾನೆ
ಅಂಸ-ಭುಜ
ಅರಮಕ್ಕಳ್-ಅರಸನ ಮಕ್ಕಳು
ಅರಾತಿ-ವೈರಿ
ಅರ್ಕ-ಎಕ್ಕೆ, ಸೂರ್ಯ
ಅರ್ಕಮಹಂ-ಸೂರ್ಯನಿಗೆ ಸಂಬಂಧಿಸಿದ ಹಬ್ಬ
ಅರ್ಜುನ-ಮತ್ತಿಮರ
ಅರಿತ-ಬುದ್ಧಿ, ತಿಳಿವಳಿಕೆ
ಅಲಗೆಗಟ್ಟು-ಪಣ ತೊಡು
ಅವಕುಟ್ಟು-ಕಿರಿಕಿರಿಯಾಗು
ಅವತಂಸ-ಆಭರಣ
ಅವತೆ-ಅವಸ್ಥೆ
ಅವಸರ-ಸಂದರ್ಭ
ಅಶನಿ-ಸಿಡಿಲು, ವಜ್ರಾಯುಧ
ಅಸದಾಗ್ರಹಿ-ಕೆಟ್ಟದ್ದರಲ್ಲಿ ಆಸಕ್ತ
ಅಸುಹೃತ್-ವೈರಿ
ಅಸೃಕ್-ರಕ್ತ
ಅಳುರ್ಕೆ-ವ್ಯಾಪಕತೆ, ವಿಸ್ತಾರ
ಅೞಿಗಜ್ಜ-ದುಷ್ಕಾರ್ಯ
ಅೞಿಗಣ್ಣರ್-ಕೆಟ್ಟಕಣ್ಣಿನವರು
ಅೞಿವಗೆ-ಕೆಟ್ಟಬುದ್ಧಿ

ಆ

ಆಕೇಶಗ್ರಹಣಾಂತಂ-ಬಲಾತ್ಕಾರವಾಗಿ
ಆಖಂಡಲ-ಇಂದ್ರ
ಆಖು-ಇಲಿ
ಆಟಿಸು-ಅಪೇಕ್ಷಿಸು
ಆತ್ತ-ಆವರಿಸಿದ
ಆತ್ಮಂಭರಿ-ತನ್ನನ್ನು ತಾನು ಸಾಕಿಕೊಳ್ಳುವವನು

ಆದಂ-ವಿಶೇಷವಾಗಿ, ಚೆನ್ನಾಗಿ
ಆಭೀಳ-ಭಯಂಕರ
ಆಮಿಷ-ಮಾಂಸ, ಆಸೆ
ಆಮ್ನಾಯ-ವೇದ
ಆಯತನ-ಮನೆ
ಆಯತ್ತಂಗೆಯ್-ಅಧೀನಮಾಡು
ಆರಯ್-ವಿಚಾರಿಸು
ಆರಾವ-ಶಬ್ದ
ಆರ್ಪು-ಸಾಮರ್ಥ್ಯ
ಆಸನ್ನ ವಿನಿಪಾತ-ಸದ್ಯದಲ್ಲಿಯೇ ನಾಶ ಹೊಂದುವ
ಆಸುರಂ ಮಸಗು-ಅತಿಶಯವಾಗಿ ರೇಗು
ಆಹಿತಾಗ್ನಿ-ನಿತ್ಯೋಪಾಸನೆಗಾಗಿ ಅಗ್ನಿಯನ್ನು ಇಟ್ಟಿರುವವನು, ಆಹಿತಾನಲ ಐತಾಳ
ಆಳವಾಡು-ಮೋಸಮಾಡು
ಆಳ್ತನ-ಪೌರುಷ

ಇ

ಇಂದೀವರ-ಕನ್ನೈದಿಲೆ
ಇಂದ್ರದಂತಿ-ಐರಾವತ
ಇನ್ನನೆಂ-ಇಂಥವನಾಗಿದ್ದೇನೆ
ಇಂಬು-ಆಶ್ರಯ, ಹಿತ, ಅವಕಾಶ, ಮನೋಹರ
ಇರ್ಕುಳಿಗೊಳ್-ಆಕರ್ಷಿಸು, ಸಿಕ್ಕಿಸಿಕೊಳ್ಳು
ಇರ್ಬಗಿ-ಎರಡುಭಾಗ
ಇಱುಂಬು-ಇಕ್ಕಟ್ಟಾದ ಎಡೆ

ಈ

ಈಡಾಡು-ಬಿಸುಡು
ಈಯೊರ್ಮೆ-ಇದೊಂದು ಸಾರಿ

ಉ

ಉಕ್ಕೈವ-ಮೋಸ
ಉಂಗುಟ-ಅಂಗುಷ್ಠ, ಕೈಕಾಲುಗಳ ಹೆಬ್ಬೆರಳು
ಉತ್ಕರ-ಸಮೂಹ
ಉತ್ಪತಸ-ಜಯ
ಉತ್ಪನ್ನಮತಿ-ಬುದ್ಧಿವಂತ
ಉತ್ಪಾಟಿತ-ಕಿತ್ತ
ಉದ್ದಾನಿ-ಶ್ರೇಷ್ಠ, ಶ್ರೇಷ್ಠದಾನಿ
ಉದ್ಧೂತ-ಮೇಲಕ್ಕೆದ್ದ
ಉಂದುರ-ಇಲಿ
ಉನ್ನಮಿತ-ಎದ್ದುಬೀಳುವ
ಉದ್ಭಾಸಿ-ಕಾಂತಿಯುಕ್ತ
ಉದ್ವತ್-ಶ್ರೇಷ್ಠ
ಉಪಕಂಠ-ತಪ್ಪಲು
ಉಪಜಾಪ-ಭೇದೋಪಾಯ
ಉಪಶಮ-ಶಾಂತಿ
ಉಪಸರ್ಗ-ಹಿಂಸೆ
ಉಪಾತ್ತ-ಸಂಪಾದಿಸಿದ
ಉಪಾಸ್ತಿ-ಸೇವೆ
ಉಪಾಸ್ಯಮಾನ-ಅಭ್ಯಾಸಮಾಡುತ್ತಿರುವ
ಉಪೇತ-ಕೂಡಿದ
ಉಪೇಶ್ವರ-ಉಪಪತಿ, ಮಿಂಡ
ಉಪ್ಪಯಣ-ಪ್ರಯಾಣಿಸುವುದನ್ನು ನಿಲ್ಲಿಸುವುದು, ತಂಗುವಿಕೆ
ಉಮ್ಮಾರ್ಗ-ವಿರುದ್ಧಮಾರ್ಗ
ಉರ್ವರಾಜನಂ-ಭೂಮಿಯ ಜನ
ಉರದೆ-ಉಪೇಕ್ಷಿಸಿ
ಉೞೆ - (?)

ಋ

ಋಕ್ಷ-ಕರಡಿ

ಎ

ಎಚ್ಚು-ಹಚ್ಚು, ಲೇಪಿಸು
ಎಡೆವೊತ್ತು-ಅಕಾಲ
ಎನ್ನನುಂ-ಎಂಥವನೂ
ಎನ್ನರ್-ಎಂಥವರು
ಎನ್ನರುಂ-ಎಂಥವರೂ
ಎಱವಟ್ಟು-ಆಶ್ರಯ
ಎಸಕ-ಕಾರ್ಯ

ಏ

ಏಡಿಸು-ಹಾಸ್ಯಮಾಡು
ಏಳಿದಂಗೆಯ್-ಉದಾಸೀನ ಮಾಡು

ಒ

ಒಡನೆಯವರ್-ಜತೆಯವರು
ಒಡರಿಕುಂ-ಉಂಟುಮಾಡುವುದು

ಒಡರಿಸು-ಪ್ರಾರಂಭಿಸು
ಒನಕೆವಾಡು-ಬತ್ತ ಕುಟ್ಟುವಾಗ ಹೇಳುವ ಹಾಡು

ಓ

ಓಪಳ್-ಪ್ರಿಯೆ
ಓವರಿ-ಕೋಣೆ

ಔ

ಔದುಂಬರ-ಅತ್ತಿ

ಕ

ಕಕುದ-ಶಿಖರ, ಗೂಳಿಯ ಹಿಣಿಲು
ಕಚ್ಛಪ-ಆಮೆ
ಕಟಕ-ಸೈನ್ಯ
ಕಟ್ಟುವಂಜರ-ನಾಗವೇದಿಕೆ
ಕಟ್ಟೇಕಾಂತ-ಅತ್ಯಂತ ಏಕಾಂತ
ಕಡುಗಾಳುತನ-ತುಂಬು ಮೋಸ
ಕಡೆಸಲ್ಲು-ಸಾಧ್ಯವಾಗು
ಕಂಡದಿಂಡೆ-ಮಾಂಸಖಂಡ
ಕತಿಪಯ-ಕೆಲವು
ಕಥಕ-ಒಂಟಿ
ಕದಂಬ-ಕಡವೆಮರ
ಕನತ್ಕನಕ-ಹೊಳೆಯುವ ಚಿನ್ನ
ಕಂಧರ-ಕುತ್ತಿಗೆ
ಕಪಿಂಜರ-ಚಾತಕಪಕ್ಷಿ ?
ಕಪೋಲ-ಕೆನ್ನೆ
ಕರಕ-ಕಮಂಡಲ
ಕರಂಜ-ಹುನಗಲು ಮರ
ಕರಟ-ಗಂಡಸ್ಥಲ, ಕಪೋಲ
ಕರಟಿ-ಆನೆ
ಕರವಾಳ-ಕತ್ತಿ
ಕರವೀರ-ಕಣಗಿಲೆ
ಕರಿಕರೇಣು-ಆನೆಯ ಮರಿ
ಕರ್ಕಟಕ-ಏಡಿ
ಕರ್ಕರ-ಪಾರಿವಾಳ
ಕರ್ಣಧಾರ-ಹಡಗಿನ ಚಾಲಕ
ಕರ್ಣಿಕಾರ-ಬೆಟ್ಟದಾವರೆ
ಕರ್ಣೇಜಪ-ಚಾಡಿಕೋರ
ಕರ್ತರಿ-ಕತ್ತರಿ
ಕರ್ಪಟ-ಬಟ್ಟೆ
ಕಲ್ಲಸರ-ಕಠಿಣಧ್ವನಿ
ಕವರ್ದುಕೊಳ್-ವಶಪಡಿಸಿಕೊಳ್ಳು
ಕವಳಿಗೆ-ಕಡತದ ಕಟ್ಟು
ಕಳಕುಳ-ಅಸ್ತವ್ಯಸ್ತ
ಕಳಭ-ಆನೆಯ ಮರಿ
ಕಳಿಂಚ-ಮೋಸ
ಕಳಿಂದಕನ್ಯಕಾ-ಕಾಳಿಂದಿ, ಯಮುನಾ ನದಿ
ಕಾಂಚಿ-ಒಡ್ಯಾಣ, ನಡುಪಟ್ಟಿ
ಕಾದ್ರವೇಯ-ಹಾವನ್ನು ಕೊಂದವನು, ಗರುಡ
ಕಾಮಾ-ಲಕ್ಷ್ಮೀ
ಕಾರಂಡ-ಬಾತುಕೋಳಿ
ಕಿಣೀಕೃತ-ಜಿಡ್ಡುಗಟ್ಟಿದ
ಕುತ್ಕೀಲ-ಬೆಟ್ಟ
ಕುಂದ-ಮೊಲ್ಲೆ
ಕುನುಂಗು-ಕುಗ್ಗು
ಕುಬ್ಬತ್-ಪರ್ವತ
ಕುಮುದ-ನೈದಿಲೆ
ಕುರವಕ-ಮದರಂಗಿ
ಕುಲಟೆ-ಜಾರೆ
ಕುಲಿಶ-ವಜ್ರಾಯುಧ
ಕುಳೀರ-ಏಡಿ
ಕೂರ್ಪವರ್-ಪ್ರೀತಿಪಾತ್ರರು
ಕೂಜ-ವಸ್ತ್ರದ ಹೇನು
ಕೃತಾಂತ-ಯಮ
ಕೃಷ್ಣಮಾರ್ಗ-ಅಗ್ನಿ
ಕೆಂಗೋಲ್-ಕೆಂಪಾದ ಬಾಣ
ಕೆಲೆ-ಗುಟುರುಹಾಕು
ಕೈಗಣ್ಮು-ಹೆಚ್ಚಾಗು
ಕೊಣಕು-ಧೀಂಕಿಡು, ಹಾರು
ಕೊರಪುಳ್ಳಿ-ಒರಟುಸೌದೆ
ಕೊಟಂಗು-ಗೊರಸು

ಕೋಲ್-ಬಾಣ
ಕೌಶಿಕ-ಗೂಬೆ
ಕ್ಷಮಾಧರ-ಪರ್ವತ
ಕ್ಷೀಣಧಾತರ್-ನಿಶ್ಶಕ್ತರು
ಕ್ಷುಪ-ಪೊದರು
ಕ್ಷುರಭಾಂಡ-ಕ್ಷೌರದ ಪೆಟ್ಟಿಗೆ
ಕ್ಷೋಣೀಧ್ರ-ಬೆಟ್ಟ

ಖ

ಖಂಜನ-ಗವುಜಿಗ ಹಕ್ಕಿ
ಖಡ್ಗಸಹಾಯ-ಯುದ್ಧಸಹಾಯ
ಖಡ್ಗಿ-ಖಡ್ಗಮೃಗ
ಖದಿರ-ಕಾಚು
ಖರ-ಕ್ರೂರ ; ಕತ್ತೆ
ಖರದಂಡ-ತಾವರೆ
ಖರ್ವಡ-ಸಣ್ಣ ಕೋಟೆಯಿರುವ ಊರು
ಖಲ್ವಾಯಿತ -(?)
ಖುರ-ಗೊರಸು
ಖೇಡ-ಎತ್ತರವಾದ ಕೋಟೆಯಿಂದ ಕೂಡಿದ ಊರು

ಗ

ಗಂಡಮಂಡಲ-ಆನೆಯ ಕಪೋಲ
ಗಂಡೂಷ-ಬಾಯಿ ಮುಕ್ಕಳಿಸುವುದು
ಗಭಸ್ತಿಮಾಲಿ-ಸೂರ್ಯ
ಗರ್ದಭೆ-ಹೆಣ್ಣುಕತ್ತೆ
ಗರ್ಬ-ಗರ್ವ
ಗವಾಧಿಪ-ಎತ್ತು
ಗವಾಶನ-ಬೇಡ
ಗಹ್ವರ-ಗುಹೆ
ಗಟಪು-ಹರಟು
ಗಾವಸಿಂಗ-ಗ್ರಾಮಸಿಂಹ, ನಾಯಿ
ಗಾಳು-ಮೋಸ
ಗಾಳುಗುಂಟಣಿ-ಕೆಟ್ಟ ಜಾರೆ
ಗುಂಡಿಗೆ-ಕಮಂಡಲ
ಗುಂಡು-ಸಮೂಹ, ಗುಂಪು
ಗುಣ್ಬು-ಆಳ
ಗೊಂಕರಗಜ್ಜೆ-ಒಂದು ಜಾತಿಯ ಹೇಸರಕತ್ತೆ
ಗೊರವ-ಸನ್ಯಾಸಿ
ಗೋತ್ರಭಿತ್-ಇಂದ್ರ
ಗೋಮಾಯು-ನರಿ
ಗೋಲಾಂಗೂಲ-ಕೋತಿ
ಗೋಷ್ಠಾಗಾರ-ಹಟ್ಟಿ

ಘ

ಘಸ್ಮರ-ನಾಶಪಡಿಸಿದ
ಘಾಸ-ಹುಲ್ಲು

ಚ

ಚಕ್ರವಾಳ-ಪರ್ವತ ಪಂಕ್ತಿ
ಚಕ್ರಿ-ವಿಷ್ಣು
ಚಕ್ಷುಃಶ್ರುತಿ-ಹಾವು
ಚಂಚು-ಕೊಕ್ಕು
ಚತುರುಪಧಾವಿಶುದ್ಧ-ಧರ್ಮ, ಅರ್ಥ, ಕಾಮ, ಮೋಕ್ಷಗಳ ದೃಷ್ಟಿಯಿಂದ ಶುದ್ಧನಾದವನು
ಚಾಟುಕಾರ-ಸಲಿಗೆ
ಚಾಮೀಕರ-ಚಿನ್ನ
ಚಮೂರ-ಹುಲಿ
ಚಮೂರು-ಒಂದು ಜಾತಿಯ ಜಿಂಕೆ
ಚಷಕ-ಬಟ್ಟಲು, ತಟ್ಟೆ
ಚಿರಂಜೀವಿ-ಕಾಗೆ
ಚೂಚುಕ-ತುದಿ
ಚೂಡಾಪೀಡ-ತಲೆಯ ಆಭರಣ
ಚೌವಟ್ಟ-ಚತುಷ್ಪಥ, ನಾಲ್ಕು ದಾರಿ ಕೂಡುವ ಸ್ಥಳ

ಛ

ಛಾಗಲ-ಆಡು
ಛಾಂದಸ-ವೇದಜ್ಞ

ಜ

ಜಗುನೆ-ಯಮುನಾನದಿ
ಜಯನಶಾಲೆ-ಆಯುಧಶಾಲೆ

ಜರಠ್-ಮುದಿ
ಜವ-ವೇಗ, ಯಮ
ಜಾತಿಬಧಿರ-ಹುಟ್ಟುಕಿವುಡ
ಜೀಮೂತ-ಮೋಡ
ಜೀವಂಜೀವ-ಚಕೋರ
ಜೋಡಾಡು-ವ್ಯಭಿಚಾರಿಸು
ಜೋಡೆ-ಜಾರೆ

ಝ

ಝಷ-ಮೀನು

ತ

ತಕ್ಕೂರ್ಮೆ-ಸಹಜ ಪ್ರೀತಿ ?
ತನ್ನಪ್ಪುದು-ತಾನಾಗುವುದು
ತಪನ-ಸೂರ್ಯ
ತಪನಕಾಂತಾಶ್ಮ-ಸೂರ್ಯಕಾಂತ ಶಿಲೆ
ತಮಾಲ-ಹೊಂಗೆ
ತರಕ್ಷು-ಹುಲಿ
ತರಳಸ್ಫಾಟಿಕ-ಹೊಳೆಯುವ ಸ್ಫಟಿಕ, ಶುದ್ಧಸ್ಫಟಿಕ
ತರುಶಿಫೆ-ಮರದ ಬೀಳಲು
ತಜಿಸಂದು-ನಿಶ್ಚಯಿಸಿ
ತವಿಲ್-ನಾಶ
ತವಿಸು-ವ್ಯಯಿಸು
ತಾಪಿ-ತಪತೀನದಿ
ತಾಪಿಂಛ-ತಮಾಲ, ಹೊಂಗೆ
ತಾಮ್ರಚೂಡ-ಕೋಳಿ
ತಾರ್ಮುಟ್ಟು-ಅಸ್ತವ್ಯಸ್ತ
ತಾರ್ಕ್ಷ್ಯ-ಗರುಡ
ತಿಗ್ಮ-ತೀಕ್ಷ್ಣ
ತಿಣ್ಪು-ಆಧಿಕ್ಯ
ತಿತಿಕ್ಷಾನ್ವಿತ-ಸಹಿಷ್ಣು
ತಿಲಕ-ಕ್ಷುರಕ, ಘೇನಿಲ; ಸುಂದರ ಪುಷ್ಪಗಳನ್ನು ಬಿಡುವ ಒಂದು ಜಾತಿಯ ಮರ
ತುಡುಗಣಿ-ಕದ್ದು ತಿನ್ನುವುದು
ತುರುಷ್ಕ-ಸಾಂಬ್ರಾಣಿ ಮರ
ತುಟಿಸಂದರ್-ಶಕ್ತಿಗುಂದಿದವರು
ತುಳಿಲಾಳ್-ಪರಾಕ್ರಮಿ
ತೃಣಗ್ರಾಹಿ-ಹುಲ್ಲು ತಿನ್ನುವವನು
ತೊಲೆ-ತಕ್ಕಡಿ
ತ್ರಯೀಮಯ-ವೇದಸ್ವರೂಪ
ತ್ರಿಸಂಧ್ಯ-ಬೆಳಗ್ಗೆ ಮಧ್ಯಾಹ್ನ ಸಂಜೆ ಹೂಬಿಡುವ ಮರ(?)

ದ

ದಕ್ಕು-ದಸಿ, ಬಿದಿರಿನ ತುಂಡು
ದರ್ದುರ-ಕಪ್ಪೆ
ದಾವ-ಕಾಡುಗಿಚ್ಚು
ದಿನಾಂತ-ಸಂಜೆ
ದಿವಸಕೃತ್-ಸೂರ್ಯ
ದಿವಿಜಾಶಾ-ಪೂರ್ವದಿಕ್ಕು
ದುರ್ಧರ-ಧರಿಸಲು ಅಸಾಧ್ಯವಾದ, ಅತಿಶಯವಾದ
ದುಷ್ಪೂರೇಯ-ತುಂಬಲಾಗದುದು
ದೂದವಿ-ದೂತಿ
ದೂಸರು-ಕಾರಣ
ದೋರ್-ತೋಳು, ಬಾಹು
ದ್ವೀಪಿ-ಹುಲಿ
ದ್ರೋಣಾಮುಖ-ಜಲಸ್ಥಲಮಾರ್ಗಗಳನ್ನುಳ್ಳ ಊರು

ಧ

ಧರಾಧರ-ಪರ್ವತ
ಧರಾಧರಧರ-ಕೃಷ್ಣ
ಧರ್ಮಾಧಿಕರಣ-ನ್ಯಾಯಾಧಿಪತಿ
ಧವಲಪಕ್ಷ-ಹಂಸ
ಧೀಷಣ-ಬುದ್ಧಿವಂತ
ಧ್ವಸ್ತ-ನಾಶಪಡಿಸಿದವನು
ಧ್ವಾಂತ-ಕತ್ತಲೆ
ಧ್ರುವ-ಸ್ಥಿರ, ಶಾಶ್ವತ

ನ

ನಕುಲ-ಮುಂಗುಸಿ
ನಕ್ರ-ಮೊಸಳೆ
ನಖರಶಾಲಿ-ಉಗುರುಳ್ಳವನು
ನಂದ್ಯಾವರ್ತ-ನಂದಿಬಟ್ಟಲು
ನಮೇರು-ಸುರಹೊನ್ನೆ
ನಯಶಾಸ್ತ್ರ-ನೀತಿಶಾಸ್ತ್ರ
ನವಿರ್-ಕೂದಲು
ನಾಗಸಂಘ-ಆನೆಗಳ ಗುಂಪು
ನಾಗಿ-ಹೆಣ್ಣುಹಾವು
ನಾಭೇಯ-ನಾಭಿಯಲ್ಲಿ ಹುಟ್ಟಿದವ, ಬ್ರಹ್ಮ
ನಾವಿದ-ಕ್ಷೌರಿಕ
ನಿಕಾಯ-ಸಮೂಹ
ನಿಕುರುಂಬ-ಸಮೂಹ
ನಿಘೃಷ್ಟ-ಉಜ್ಜಿದ
ನಿಚುಳ-ತೊರೆಗಣಗಿಲೆ ಮರ
ನಿಚ್ಚ-ನಿತ್ಯ
ನಿಚ್ಚಟಗಲಿ-ಸಹಜಶೂರ
ನಿಚ್ಚಲವಕ್ಕಿ-ಗೂಬೆ
ನಿಜಮಹತ್ತರ-ತನ್ನ ಮಂತ್ರಿ
ನಿತಂಬ-ತಪ್ಪಲು
ನಿತ್ತರಿಸು-ದಾಟು
ನಿದಾಘ-ಬೇಸಗೆ
ನಿಭ-ಸಮಾನ
ನಿಮಿರ್ಚು-ವ್ಯಾಪಿಸು
ನಿರಾಕುಳ-ಬಾಧೆಯಿಲ್ಲದ
ನಿರ್ಘಾತ-ಹೊಡೆತ
ನಿರ್ಘೋಷ-ದೊಡ್ಡ ಶಬ್ದ
ನಿರ್ಝರ್-ಹರಿಯುವ, ಸುರಿಯುವ
ನಿರ್ವಾತ-ಗಾಳಿಯಿಂದ ರಕ್ಷಿಸಿದುದು
ನಿಸ್ತಂಭ-ಕಂಬವಿಲ್ಲದಿರುವಿಕೆ
ನಿಸ್ರಾವ-ಹೊರಚೆಲ್ಲುವಿಕೆ
ನಿಳಿಂಪ-ದೇವತೆ
ನಿಳಿಂಪ ಭೂಪ ಮನೋಜಂ-(?)
ನೀಪ-ಕದಂಬವೃಕ್ಷ
ನೀರ್ಮಾನಸ-ನೀರು ಮನುಷ್ಯ
ನೀವಾರ-ಕಾಡುಬತ್ತ
ನೆಗಟ್ಟ್-ಮೊಸಳೆ
ನೆಗಟ್ತೆ-ಕೀರ್ತಿ
ನೇರಾಣೆ-ಒಂದು ಜಾತಿಯ ಚಿನ್ನ
ನ್ಯಗ್ಭೂತ-ಕೀಳುಮಾಡಿದ
ನ್ಯಗ್ರೋಧ-ಆಲ
ನ್ಯಸ್ತ-ಇಟ್ಟ

ಪ

ಪಚ್ಚಡಿಕೆ-ಹೊದಿಕೆ
ಪಂಚಾನನ-ಸಿಂಹ
ಪಟಲ-ಪರೆ
ಪಡಿಯರ-ಪ್ರತೀಹಾರಿ, ದ್ವಾರಪಾಲಕ
ಪಡೆವಳ-ಸೇನಾಧಿಪತಿ
ಪತಂಗ-ಪಕ್ಷಿ
ಪತತ್ರಿ-ಪಕ್ಷಿ
ಪತ್ತುವಿಡು-ಬಿಟ್ಟುಹೋಗು, ದೂರವಾಗು
ಪದವಳೆ-ಹದಮಳೆ
ಪದಿರಿಕ್ಕು-ವ್ಯಂಗ್ಯವಾಗಿ ಕೂಗು,
ಶ್ಲೇಷೆಯಿಂದ ಮಾತಾಡು
ಪಂದೆ-ಹೇಡಿ
ಪಯಸ್ವಿನಾವು-ಕರೆಯುವ ಹಸು
ಪಯೋಷ್ಣಿ-ನರ್ಮದಾನದಿ
ಪರದ-ವ್ಯಾಪಾರಿ
ಪರಿಕ್ಷಿಪ್ತ-ಸುತ್ತುವರಿದ, ಬಳಸಿದ
ಪರಿಗ್ರಹ-ಪರಿವಾರ
ಪರಿಚ್ಛೇದ-ಕತ್ತರಿಸುವುದು
ಪರಿಧಾನ-ಉತ್ತರೀಯ
ಪರಿಯುಷ್ಟಿ-ಶುಶ್ರೂಷೆ
ಪರಿವೃಢ-ಶ್ರೇಷ್ಠ
ಪರ್ಚು-ಕಿವಿಮಾತು
ಪರ್ಬ-ಹಬ್ಬ
ಪಸದನ-ಪ್ರಸಾಧನ, ಅಲಂಕಾರ
ಪಸಯಿಸು-ವಾಸಮಾಡು

ಪಸಾಯಿತ-ಪ್ರಸಾದಿತ, ಆಪ್ತ
ಪಟ್ಟಿ-ಪಾಸಿಗೆ
ಪಾಟಲ-ಕೆಂಪುಬಣ್ಣ
ಪಾಟಲಿ-ಪಾದರಿ
ಪಾಟಲಿತ-ಕೆಂಪಾದ
ಪಾಣ್ಬ-ವ್ಯಭಿಚಾರಿ
ಪಾದಜ-ಶೂದ್ರ
ಪಾನಭೂರಂಗ-ಪಾನಭೂಮಿ
ಪಾಲಾಶ-ಮುತ್ತುಗ
ಪಾಸ-ಪಾಶ, ಹಗ್ಗ
ಪಾಳಿ-ಕ್ರಮ
ಪಠರೀ-ಮಡಕೆ
ಪಿಶಿತ-ಮಾಂಸ
ಪಿಶುಣ-ಚಾಡಿ, ಚಾಡಿಕೋರ
ಪುಡಿಕೆ-ಪೆಟ್ಟಿಗೆ
ಪುಂಡರೀಕ-ಹುಲಿ, ಬೆಳ್ದಾವರೆ
ಪುದುವಿನೊಳ್-ಜೊತೆಯಾಗಿ
ಪುನ್ನಾಗ-ಸುರಹೊನ್ನೆ
ಪುಂಶ್ಚಲಿ-ಗಂಡುಬೀರಿ
ಪುಂಸ್ಕೇಸರಿ-ನರಸಿಂಹ
ಪುರಂದರ-ಇಂದ್ರ
ಪುಷ್ಕರ-ಜಾರ
ಪುಳಿಂದ-ಬೇಡ
ಪುಱುವಗೆ-ಕೆಟ್ಟ ಯೋಚನೆ
ಪೃಥು-ದೊಡ್ಡ
ಪೆಪ್ಪಳಿಸು-ಹೆದರು
ಪೆಱಗು-ಹಿಂಭಾಗ
ಪೆಱಿದೆಗೆ-ಹಿಮ್ಮೆಟ್ಟು
ಪೆಳಱು-ಹೆದರು
ಪೇಳಿಗೆ-ಪೆಟ್ಟಿಗೆ, ಬುಟ್ಟಿ
ಪೊಡರ್ಪು-ಕಾಂತಿ
ಪೊರಸು-ಕಾಡು ಪಾರಿವಾಳ
ಪೊಱಮಡು-ಹೊರ ಹೊರಡು
ಪೊಲಂಬು-ದಾರಿ
ಪೊಲ್ಲಗೆಯ್-ಕೆಡುಕುಮಾಡು
ಪೊಲ್ಲಮೆ-ನೀಚತನ, ಹೊಲಸು, ಕೇಡು
ಪೊಸಂಬ-ಹೊಸಬ
ಪೋರಿ-ಹೋರಿ
ಪೋರ್ಕುಳಿ-ಹೋರಾಟ
ಪ್ರಕೃಷ್ಟ-ಅತಿಶಯ
ಪ್ರತತಿ-ಸಮೂಹ
ಪ್ರತಿಪತ್ತಿ-ಗೌರವ, ಜ್ಞಾನ
ಪ್ರತ್ಯರ್ಥಿ-ಪ್ರತಿವಾದಿ
ಪ್ರವರ-ಶ್ರೇಷ್ಠ
ಪ್ರಾವೃಟ್-ಮಳೆಗಾಲ
ಪ್ರೋತ್ಕಲಿತ-ಕಲಕಿದ
ಪ್ಲಕ್ಷ-ಬಸರಿಮರ
ಪ್ಲುಷ್ಟ-ಸುಟ್ಟ

ಬ

ಬಧಿರಿತ-ಕಿವುಡಾದ
ಬಡವು-ದುರ್ಬಲ
ಬಂಧೂಕ-ಬಂದುಗೆ, ಕೆಂಪು ಹೂ ಬಿಡುವ ಒಂದು ಜಾತಿಯ ಮರ
ಬಲವೈರಿ-ಇಂದ್ರ
ಬಲಿಪುಷ್ಟ-ಕಾಗೆ
ಬಲಿಭುಕ್-ಕಾಗೆ
ಬಹುದ್ವಿಷ-ಅನೇಕ ಶತ್ರುಗಳುಳ್ಳವನು
ಬಳಾರಿ-ಮಹಾಕಾಳಿ
ಬಳ್ಳು-ನರಿ
ಬಱೆಯಟ್ಟು-ಕರೆಕಳುಹಿಸು
ಬಾಣಸ-ಅಡುಗೆ
ಬಾಯ್ಕೋಳಿಸು-ವಶಪಡಿಸು, ಜಯಿಸು
ಬಾರ್ತೆ-ಪ್ರಯೋಜನ, ಲಾಭ
ಬಾಜೆ-ಸರದಿ
ಬಾೞ್ತೆ-ಪ್ರಯೋಜನ, ಲಾಭ
ಬಿಕ್ಕೆ-ಭಿಕ್ಷೆ
ಬಿಣ್ಪು-ಭಾರ
ಬಿನ್ನಣಿಗ-ವಿಜ್ಞಾನಿ, ಕುಶಲಿ
ಬಿಲ್ಲ ಬಿನ್ನಣಿ-ಧನುರ್ವಿಜ್ಞಾನಿ
ಬಿಲ್ಲುಂಬೆಱಗು-ಆಶ್ಚರ್ಯ

ಬಿಜ್ಜು-ಬೀಜ
ಬೀಯ-ವ್ಯಯ
ಬೀಸರ-ನಾಶ
ಬುಭುಕ್ಷಿತ-ಹಸಿದವನು
ಬೂತ-ಭೂತ
ಬೆಲ್ಲಮಾತು-ಬೆಲ್ಲದಂಥ ಮಾತು
ಬೆಲ್ಲವೊತ್ತ-ಮುಖಸ್ತುತಿ ಮಾಡಿ ಕಾರ್ಯ ಸಾಧಿಸುವವನು
ಬೆಸನ-ಕಾರ್ಯ
ಬೆಳ್ಳ-ದಡ್ಡ
ಬೆಳ್ಪಾಳ್-ಪಡ್ಡ, ಹೇಡಿ
ಬೊಜಗ-ವಿಟ
ಬ್ರಹ್ಮಸ್ವಂ-ಬ್ರಾಹ್ಮಣನಿಗೆ ಸೇರಿದ ವಸ್ತು

ಭ

ಭಗಣ-ನಕ್ಷತ್ರ
ಭಣಿತೆ-ಹೇಳಿಕೆ
ಭಲ್ಲೂಕ-ಕರಡಿ
ಭಿದು-ಕುಂಭಸ್ಥಳ
ಭೀರು-ಹೆದರುವವನು
ಭೇಕ-ಕಪ್ಪೆ
ಭೈಕ್ಷ-ಭಿಕ್ಷೆ
ಭ್ರಾಜಿಷ್ಣು-ಪ್ರಕಾಶಮಾನ

ಮ

ಮಕ್ಷಿಕಾ-ಸೊಳ್ಳೆ, ನೊಣ
ಮಖ-ಯಜ್ಞ
ಮಟ್ಟವಿರು-ಸುಮ್ಮನಿರು
ಮಡಂಬ-ಗಡಿನಾಡು
ಮತ್ಕುಣ-ತಿಗಣೆ
ಮನೆವಾಳಿದಮ್ಮ-ಗೃಹಸ್ಥಧರ್ಮ
ಮನೆಸನಿಗೊಂಡಿರು-ದುನೆಯನ್ನು ಶನಿಯಂತೆ ಬಿಟ್ಟುಹೋಗದಿರು
ಮಂತಣ-ಮಂತ್ರಾಲೋಚನೆ
ಮಂದುರ-ಕುದುರೆಯ ಲಾಯ
ಮರದುಱುಗಲ್-ಮರದ ತೋಪು
ಮರುತ-ದೇವತೆ
ಮಱುಗುತ್ತ-ಮರುಕಳಿಸಿದ ರೋಗ
ಮಸ್ತಿಷ್ಕ-ಮೆದುಳು
ಮಹಾಹಿ-ದೊಡ್ಡಹಾವು
ಮಹಿಭೃತ್-ರಾಜ
ಮಹೀಧ್ರ-ಬೆಟ್ಟ
ಮಟ್ಟೆಸು-ಅಡಗಿಸು, ಕುಗ್ಗಿಸು
ಮಾತುಲಂಗ-ಮಾದಳ
ಮಾತ್ರಾಭಾಂಡ-ಹಣದ ಪೆಟ್ಟಿಗೆ
ಮಾದ್ಯತ್-ಮದಿಸಿದ, ಸೊಕ್ಕಿದ
ಮಾಧ್ವೀಕ-ವಧುವಿಗೆ ಸಂಬಂಧಿಸಿದ
ಮಾಯಿ-ಮೋಸಿಗ
ಮಾರ್ಕೊಳ್ಳು-ಎದುರಿಸು
ಮಾರ್ಬಟ್ಟೆ-ಬೇರೆ ದಾರಿ
ಮಾಲಾಮಂತ್ರ-ದುರ್ಮಂತ್ರ
ಮುಚುಕುಂದ-ನಿತ್ಯಮಲ್ಲಿಗೆ
ಮುಜಿವು-ಸಂಕೋಚ
ಮುಸು-ಕಪ್ಪುಮುಖದ ಕಪಿ
ಮೃಗಧೂರ್ತ-ಪ್ರಾಣಿಗಳಲ್ಲಿ ದುಷ್ಟ, ದವನಕ ಎಂಬ ನರಿ
ಮೃಗಯಾ-ಬೇಟೆ
ಮೆಳ್ಪಡು-ಹೆದರು
ಮೇಕು-ಸ್ಪರ್ಧೆ
ಮೇಚಕ-ಪಚ್ಚೆ
ಮೊಱೆ-ಕ್ರಮ, ಸಂಬಂಧ
ಮೌರ್ವೀ-ಬಿಲ್ಲಿನ ಹಗ್ಗ

ಯ

ಯಕ್ಷೇಶ್ವರ-ಕುಬೇರ
ಯದ್ಭವಿಷ್ಯ-ಬಂದದ್ದು ಬರಲಿ ಎಂಬವನು
ಯಷ್ಟಿ-ದೊಣ್ಣೆ
ಯಾದಶ್ಚರ-ಜಲಚರ
ಯಾನಪಾತ್ರ-ನೌಕೆ
ಯೂಥ-ಸಮೂಹ

ರ

ರಥಾಂಗ-ಚಕ್ರವಾಕಪಕ್ಷಿ
ರಂಭೆ-ಬಾಳೆ

ರಯ್ಯ-ರಮ್ಯ
ರವಿಸುತಾ-ಯಮುನಾನದಿ
ರಾಗರಸ-ಕಾಮ
ರಾಜಜಂಬೂ-ಆರನೇರಿಳೆ
ರಾತ್ರಿಂಚರ-ಗೂಬೆ
ರಾಸಭೀ-ಹೆಣ್ಣುಕತ್ತೆ
ರುಟ್-ರೋಗ
ರುರು-ಬಿಳಿಯ ಪಟ್ಟೆಗಳುಳ್ಳ ಸಾರಂಗ
ರುಸಿವಳ್ಳಿ-ಋಷಿಗಳ ಹಳ್ಳಿ
ಱೋಡಾಡು-ಹಿಂಸಿಸು

ಲ

ಲಕುಟ-ದೊಣ್ಣೆ
ಲುಬ್ಧ-ಜಿಪುಣ
ಲೋಹಿತ-ರಕ್ತ
ಲೌಲ್ಯ-ದುರಾಶೆ

ವ

ವಕುಳ-ಬಕುಳ
ವಟವಿಟಪಿ-ಆಲದ ಮರ
ವಜ್ರಾಯತ-ವಜ್ರದ ಹಾಗಿರುವ
ವಹಿತ್ರ-ಹಡಗು, ದೋಣಿ, ತೆಪ್ಪ
ವಾಃಕಣಿಕಾ-ನೀರಿನ ಹನಿ
ವಾನರೀ-ಹೆಣ್ಣುಕೋತಿ
ವಾನೇಚರ-ಬೇಡ
ವಾರ-ಸಮೂಹ
ವಾಸಯಷ್ಟಿ-ಹಕ್ಕಿಗಳು ಕುಳಿತುಕೊಳ್ಳುವ ಕೋಲು
ವಿಕರಾಳ-ಅತಿ ಭಯಂಕರ
ವಿಕಳ-ಶೂನ್ಯ
ವಿಗ್ರಹ-ಯುದ್ಧ
ವಿಜಿಗೀಷು-ಜಯಾಪೇಕ್ಷಿ
ವಿತಾನ-ಮೇಲ್ಕಟ್ಟು
ವಿತ್ರಸ್ತ-ನಾಶಮಾಡಿದ
ವಿದಳಿತ-ಅರಳಿದ
ವಿದ್ರಾವಣ-ಸೀಳಿದವನು, ನಾಶಮಾಡಿದವನು
ವಿಧ್ವಸ್ತ-ನಾಶಪಡಿಸಿದ
ವಿನಿರ್ಜಿತ-ಗೆದ್ದ
ವಿಪಶ್ಚಿತ್-ವಿದ್ವಾಂಸ
ವಿಷಾಣ-ಕೊಂಬು
ವಿಸಟಂಬರಿ-ಅಲೆದಾಡು
ವಿಹಾಯಸರಿದಂಬು-ಆಕಾಶಗಂಗೆಯ ನೀರು
ವೀರುಧ-ಪೊದರು
ವೃಕ-ತೋಳ
ವೃಂದಾರಕ-ಸಮೂಹ
ವೇಹಾರ-ವ್ಯವಹಾರ
ವ್ಯವಹಿತ-ತಡೆದ
ವ್ಯಾಕೀರ್ಣ-ತುಂಬಿರುವುದು

ಶ

ಶಕುನಿ-ಪಕ್ಷಿ
ಶಕ್ತಿಧರ-ಸ್ಕಂದ, ಕುಮಾರಸ್ವಾಮಿ
ಶತಧೃತಿ-ಬ್ರಹ್ಮ
ಶತಪತ್ರ-ತಾವರೆ
ಶಫರ-ಮೀನು
ಶಬ-ಶವ
ಶಮಿ-ಬನ್ನಿ
ಶಂಬಾಯುಧ-ಇಂದ್ರ
ಶರಾಸನ-ಬಿಲ್ಲು
ಶರ್ಕರಾ-ಮುಳ್ಳು
ಶಲ್ಯ-ಮೂಳೆ
ಶಲ್ಯಕ-ಮುಳ್ಳುಹಂದಿ
ಶಶ-ಮೊಲ
ಶಾಕ್ವರ-ಗೂಳಿ
ಶಾರದನೀರದ-ಶರತ್ಕಾಲದ ಮೋಡ
ಶಾರ್ದೂಲ-ಹುಲಿ
ಶಿಂಶುಮಾರ-ಮೊಸಳೆ
ಶುಂಡಾಲ-ಆನೆ
ಶೌಚ-ಸದಾಚಾರ
ಶ್ವಾಪದ-ಪ್ರಾಣಿ
ಶ್ಯೇನ-ಗಿಡುಗ

ಷ

ಷಟ್ಚರಣ-ತುಂಬಿ
ಷಂಡ-ಸಮೂಹ
ಷಾಡ್ಗುಣ್ಯ-ಸಂಧಿ ವಿಗ್ರಹ ಯಾನ ಆಸನ ಸಂಶ್ರಯ ದ್ವೈಧೀಭಾವ ಎಂಬ ಆರು ಗುಣಗಳು

ಸ

ಸಂಕ್ರಂದನ-ಇಂದ್ರ
ಸಂಗತಿ-ಸಹವಾಸ
ಸಜ್ಜುಕ-ಎಳೆಯ, ಹೊಸ
ಸಟಾಜಾಳ-ಕೇಸರಗಳ ಸಮೂಹ
ಸತ್ತ್ವ-ಹಿಟ್ಟು, ಶಕ್ತಿ, ಸತ್ತ್ವಗುಣ
ಸತ್ತುಗ-ಹುರಿಹಿಟ್ಟು
ಸದ್ಗ್ರಹ-ಒಳ್ಳೆಯ ಗ್ರಹ, ಶುಭಗ್ರಹ
ಸದಾಗ್ರಹ-ಒಳ್ಳೆಯ ವಿಷಯದಲ್ಲಿ ಹಟ
ಸಂತಮಿರು-ಸಮಾಧಾನದಿಂದಿರು
ಸಂತಂಬರು-ಸುಖವಾಗಿ ಬರು
ಸನ್ನಂಗ-ಕದ್ದ ವಸ್ತು (?)
ಸಪ್ತಸಪ್ತಿ-ಸೂರ್ಯ
ಸಭಾಜನ-ಸಹಭಾಗ
ಸಮಕಟ್ಟು-ವ್ಯವಸ್ಥೆ
ಸಮದ-ಸೊಕ್ಕಿದ
ಸಮಂತು-ಪೂರ್ಣವಾಗಿ
ಸಮಯಬಾಹ್ಯ-ಜಾತಿಯ ಹೊರಗು
ಸಂಯುಗ-ಯುದ್ಧ
ಸಂವರಣೆ-ಅಡಗುವಿಕೆ
ಸವಣ-ಜೈನ ಸಂನ್ಯಾಸಿ
ಸಾಮಜ-ಆನೆ
ಸಾಮಜಘಟೆ-ಆನೆಗಳ ಹಿಂಡು
ಸಾರಭಾಂಡ-ವಸ್ತು ಸಮೂಹ
ಸಾರಮೇಯ-ನಾಯಿ
ಸಿತ-ಸಕ್ಕರೆ, ಬಿಳಿಯ
ಸಿತಗತನ-ವ್ಯಭಿಚಾರ
ಸಿತಗಳ್-ವ್ಯಭಿಚಾರಿಣಿ
ಸಿದ್ದಿಗೆ-ಚರ್ಮದ ಚೀಲ
ಸಿಂಧುರಘಟೆ-ಆನೆಗಳ ಹಿಂಡು
ಸಿಂಧುವಾರ-ಸಣ್ಣಜಾತಿಯ ಒಂದು ಮರ (?)
ಸೀರಪಾಣಿ-ಬಲರಾಮ
ಸೀಱುಂಬುಳಾಡು-ಸೀರುವಂತೆ ಚೆಲ್ಲು
ಸುಗಂಡ-ಬಹಳ ಬಲಿಷ್ಠ
ಸುಪ್ತಪ್ರಲಾಪ-ಕನವರಿಕೆ
ಸುಯ್ದಾನ-ಸಂರಕ್ಷಣೆ
ಸುರದ್ವಿಟ್-ಅಸುರ
ಸುರಾಜೀವರಜಃ -(?)
ಸೂಕರ-ಹಂದಿ
ಸೂಕಳ್-ತುಂಟು
ಸೂಳುಗಾಳೆ-ಕಾಲವನ್ನು ಸೂಚಿಸುವ ಕಹಳೆ
ಸೃಗಾಲ-ನರಿ
ಸೈತು-ಸಮಾಧಾನ
ಸೋವತ-ಆಹಾರ
ಸ್ವರು-ಸಿಡಿಲು, ಬಾಣ
ಸ್ಫಾರ-ಘನ
ಸ್ಥಿತಿಸಾರ-ಸ್ಥಿರಬುದ್ಧಿಯವನು
ಸ್ರುಕ್-ಹವಿಸ್ಸನ್ನು ಅರ್ಪಿಸುವ ಸೌಟು
ಸ್ಮೈರ-ಮುಗುಳ್ನಗೆ

ಹ

ಹಮ್ಮಿದೆ-ಮೂರ್ಛೆ
ಹರಿ-ಸಿಂಹ, ಕಪ್ಪೆ, ವಿಷ್ಣು
ಹಲ್ಲಣ-ಜೀನು
ಹ್ರದ-ಮಡು

ಅನುಬಂಧ

ನರಿಯ ಕಥೆ

ಅಡವಿ[1][ಯೊಳ್] ಒಂದುನರಿಯಾಹಾರಂಬಡೆಯದೆ ಬರಬರುತ್ತೆ ಒಂದು ಸತ್ತ ಎತ್ತಂ ಕಂಡು ಸಡಗರಿಸಿ ಅದರ ಪೃಷ್ಠನಾಳದಿನೊಡಲೊಳಪೊಕ್ಕು, ತಿನುತಿರ್ಪನ್ನೆವರಂ ನಿರ್ದ್ರವಮಪ್ಪುದೇ ಕಾರಣಮಾಗಿ ಕಡುಬಿಸಿಲಿಂಗೆ ತಟ್ಟಾರಿದ ಚರ್ಮದಿಂ ಪೃಷ್ಠದ್ವಾರಂ ಮುಚ್ಚಲಾ ಜಂಬುಕಂ ತನಗೆಲ್ಲಿಯುಂ ಪೋಗಲಿಂಬಿಲ್ಲದೆ ಚಿಂತಾಕ್ರಾಂತನಾಗಿರಲನಿತರ್ಕೆ ಆವೂರ ಅಂತ್ಯಜರ್ ಸಾರಮೇಯಂಗಳಿನೆಯ್ತಂದು ಸತ್ತಿರ್ದಡ್ವಾಹನಂ ಕಂಡದಱ ಪೊಡೆಯಂ ಡಾಣೆಯಿಂ ಪೊಯ್ಯಲ್ಕೆ, ಯಾಕ್ರೋಷ್ಟು ನಿರ್ವೇದಂಗೊಂಡೊಂದುಪಾಯಮಂ ಕಂಡು, ಎಲವೊ ಮ್ಲೇಚ್ಛರುಗಳಿರಾ ! ಬ್ರಾಹ್ಮಣೋತ್ತಮನಪ್ಪ ನಾವೊಂದು ಶಾಪನಿವಾರಣಾರ್ಥವಾಗಿ ಗೋವಿನ ಜಠರಮಂ ಪೊಕ್ಕಿರ್ದೆವು. ನೀವೀ ಪಶುವಿನ ಪೃಷ್ಠಕುಷ್ಣೋದಕಮಂ ತಂದೆರೆದು ದೂರಂ ಪೋಗಿಮೆನಲಾ ಶ್ವಪಚಕರ್ ಬೆದರಿಯಾ ಗೋವಿನ ಪೃಷ್ಠಭಾಗಕ್ಕೆ ಕಾಯ್ದನೀರಂ ತಂದೆಱೆದು, ಎಲೈ ಸ್ವಾಮೀ, ನಿಪತ್ತಂ ಪೋ[2][ಗಿಮ]ನಲಾ ಸೃಗಾಲಂ, ಎಲೆ ಅಂತ್ಯಜರುಗಳಿರಾ, ನಾವು ಪೊಸಬಾಂಛನಧಾರಿಗಳಪ್ಪುದರಿಂ ನಿಮ್ಮೊಡನಿರ್ಪ ಜಾಯಿಲಂಗಳ್ ಕಂಡು ತಗುಳ್ದು ಬಂದೆಮ್ಮಂ ಕಡಿದುವಾದೊಡಾಂದೋಷಂ ನಿಮಗಪ್ಪುದಾಗಿಯಾ ಕುಕ್ಕುರಂಗಳಂ ಕಟ್ಟಿರ್ದ ಪಾಶಿನ ನೇಣಂ ನಿಮ್ಮ ಕರ್ಣದ್ವಾರದೊಳ್ ಬಂಧಿಸಿಕೊಳ್ಳಿಮೆನಲಾ ಕುನ್ನಿಗಳಂ ತಮ್ಮ ಶ್ರೋತ್ರನಾಳದೊಳ್ ತೊಡರ್ಚಿಕೊಂಬುದುಂ, ಬಳ್ಳ ಎತ್ತಿನುದರದಿಂ ಪೊಱಮಟ್ಟು ಓಡುವುದುಂ, ಶ್ವಾನಂಗಳ್ ಕಂಡು ತೂನುತ್ತಿರಲಾ ಚಂಡಾಲರ್ ತಮ್ಮ ಕಿವಿಗಳ್ ಪಱಿಗುಮೆಂದು ಪಿಂದಕ್ಕೆ ತೆಗೆವುದ ಪೊತ್ತಾಗಲ್ ಬಳ್ಳುವತ್ತಂ ಪೋಗಿ ಗುಹ್ವಮಂ ಪೊಕ್ಕುದು.

ಅಡವಿಯಲ್ಲಿ ಒಂದು ನರಿ ಆಹಾರವನ್ನು ಪಡೆಯದೆ ಅಡ್ಡಾಡುತ್ತಿರಲು ಒಂದು ಸತ್ತ ಎತ್ತನ್ನು ಕಂಡು ಸಡಗರಿಸಿ ಅದರ ಪೃಷ್ಠನಾಳದ ಮೂಲಕ ಒಳಹೊಕ್ಕು ತಿನ್ನತೊಡಗಿತು. ಬೇಸಗೆಯ ಕಡುಬಿಸಿಲಿಗೆ ಆ ಎತ್ತಿನ ಚರ್ಮ ನಿರ್ದ್ರವವಾಗಲು ಒಣಗಿದ ಚರ್ಮದಿಂದ ಅದರ ಪೃಷ್ಠದ್ವಾರವು ಮುಚ್ಚಿಹೋಯಿತು. ಆ ಜಂಬುಕವು ತನಗೆ ಎಲ್ಲಿಯೂ ಹೋಗಲು ದಾರಿಕಾಣದೆ ಚಿಂತಾಕ್ರಾಂತನಾಗಿರಲು ಅಷ್ಟರಲ್ಲಿ ಆ ಊರಿನ ಅಂತ್ಯಜರು ನಾಯಿಗಳೊಡನೆ ಅಲ್ಲಿಗೆ ಬಂದರು. ಆ ಸತ್ತ ಎತ್ತನ್ನು ಕಂಡು ಅದರ ಉಬ್ಬಿದ ಹೊಟ್ಟೆಗೆ ತಮ್ಮ ದೊಣ್ಣೆಯಿದ ಬಡಿದರು. ಒಳಗಿದ್ದ ನರಿಯು ನಿವೇದಗೊಂಡು ಒಂದು ಉಪಾಯವನ್ನು ಮಾಡಿತು. “ಎಲವೋ ಮ್ಲೇಚ್ಛರುಗಳಿರಾ ! ಬ್ರಾಹ್ಮಣೋತ್ತಮನಾದ ನಾವು ಒಂದು ಶಾಪನಿವಾರಣಾರ್ಥವಾಗಿ ಈ ಗೋವಿನ ಜಠರವನ್ನು ಹೊಕ್ಕಿರುವೆವು. ನೀವು ಈ ಪಶುವಿನ ಪೃಷ್ಠಕ್ಕೆ ಉಷ್ಣೋದಕವನ್ನು ತಂದು ಎರೆದು ದೂರ ತೊಲಗಿರಿ” ಎಂದಿತು. ಆ ಶ್ವಪಚಕರು ಹೆದರಿ ಆ ಗೋವಿನ ಪೃಷ್ಠಭಾಗಕ್ಕೆ ಕಾದ ನೀರನ್ನು ತಂದೆರೆದು, “ಎಲೆ ಸ್ವಾಮೀ, ನೀವು ಅತ್ತ ಹೋಗಿರಿ”

---

೧. ಯಲ್ಲಿ (ಕ.ಕಾ.)

೨. ಗೆ (ಕ.ಕಾ.)

ಎಂದರು. ಆ ಸೃಗಾಲವು, "ಎಲೆ ಅಂತ್ಯಜರುಗಳಿರಾ ! ನಾವು ಹೊಸಲಾಂಛನಧಾರಿಗಳಾಗಿರುವುದರಿಂದ ನಿಮ್ಮೊಡನೆ ಇರುವ ನಾಯಿಗಳು ನಮ್ಮನ್ನು ಕಂಡು ಓಡಿಸಿಕೊಂಡು ಬಂದು ಕಚ್ಚಿದರೆ ಆ ದೋಷ ನಿಮಗೆ ; ಆ ನಾಯಿಗಳನ್ನು ಕಟ್ಟಿದ ಹಗ್ಗವನ್ನು ನಿಮ್ಮ ಕರ್ಣದ್ವಾರದಲ್ಲಿ ಬಂಧಿಸಿಕೊಳ್ಳಿರಿ" ಎಂದಿತು. ಅವರೆಲ್ಲ ಹಾಗೆಯೇ ಮಾಡಲು, ಆ ಬಳ್ಳು ಎತ್ತಿನ ಉದರದಿಂದ ಹೊರ ಹೊರಟು ಓಡಲು, ಶ್ವಾನಗಳು ನರಿಯನ್ನು ಕಂಡು ಹಗ್ಗವನ್ನು ಎಳೆದಾಡಲು, ಚಂಡಾಲರು ತಮ್ಮ ಕಿವಿಗಳು ಹರಿಯುವುವು ಎಂದು ಹಿಂದೆ ತೆಗೆಯುವುದೇ ಹೊತ್ತಾಗಲು ನರಿಯು ಅತ್ತ ಓಡಿ ಗುಡ್ಡವನ್ನು ಸೇರಿತು.*

---

* ಈ ಕಥೆ ಒಂದು ಪ್ರತಿಯಲ್ಲಿ ಮಾತ್ರವಿದೆಯೆಂದೂ, ಅದೂ ಪ್ರಕ್ಷಿಪ್ತವಿರಬಹುದೆಂದೂ (ಖ,ಗ) ಪ್ರತಿಗಳಲ್ಲಿಲ್ಲದುದರಿಂದಲೂ, ಈ ವಾಕ್ಯಸರಣಿಯ ರೀತಿಯಿಂದಲೂ ಇದರ ಸಂಪಾದಕರು ಸೂಚಿಸಿದ್ದಾರೆ. ಶ್ರೀ ಎನ್. ಅನಂತರಂಗಾಚಾರ್ ಸಂಪಾದಿಸಿದ ಗ್ರಂಥದಲ್ಲಿ ಬೇರೊಂದು ಕಥೆಯನ್ನು ಕೊಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸವಾಗಿ
ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು
ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ
ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ
ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ
ಸಂತೋಷವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು
ಅವರ ಕೈಗೆ ತಲುಪುವಂತೆ ಮಾಡುವುದೇ
ಪುಸ್ತಕೋದ್ಯಮದ ಪ್ರಾಥಮಿಕ ಆಶಯ.
ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ,
ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ
ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹುವೇಗವಾಗಿ ಸಾಗುತ್ತಿರುವ
ಪ್ರಕಾಶಕರ ನಡುವ ಕನ್ನಡ ಸರಸ್ವತಿಯ ಆರಾಧನೆ
ಮಾಡುತ್ತಿದ್ದೇವೆಂದು ಭಾವಿಸುವುದರ ಜೊತೆಗೆ
ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದೇ
ಜೀವಂತಿಕೆಯ ಲಕ್ಷಣ ಎಂದು ಕನ್ನಡ ಸಾಹಿತ್ಯ ಪರಿಷತ್ತು
ಪರಿಗಣಿಸಿದೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೆಲೆ: ರೂ. ೧೮೦/-